Reg. No. B 1270

Monday, January 4th, 1926.

ವರ್ಷ ೧೦.

ಸಂಚಿಕೆ ೧೪.

ಕಾನಡಾವೃತ್ತ.

THE KANARA NEWS.

ಪತ್ರದ ವರ್ಗಣಿ.

ಕುಮುಟೆಯಲ್ಲಿ ಆಗಾವು ರೂಪಾಯಿ 2-4-0.

ಮನೆಯಾರ್ಡರಿಯಿಂದ ರೂ. 3-0-0.

ವ್ಹಿ. ಪಿ. ಅಂಚೆವೆಚ್ಚ ಸೇರಿ ರೂಪಾಯಿ 3-2-0.

ಬಿಡಿ ಸಂಚಿಕೆಗೆ 0-1-0.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಜಾಹಿರಾತುಗಳ ದರ

ಕನ್ನಡ, ಇಂಗ್ಲಿಷ ಸ್ಮಾಲ ಪ್ಯಾಯಿಕ (೧೫ ಎಮ್ ಅಗಲ) ೮ ಸಾಲುಗಳವರೆಗೆ ರೂ. 1-0-0 ೮ ನಂತ್ರ ಪ್ರತಿಸಾಲಿಗೆ 0-2-0. ತಿಂಗಳ ಸಾಲು ಎಷ್ಟು ಕೊಡ್ಡದಿರುವದೋ ಆ ಮಾನದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.

ಬಾಕಿ ಜಾಹಿರಾತುಗಳ ಬಗ್ಗೆ ಪತ್ರವ್ಯವಹಾರ ಮಾಡಿದ ಪಕ್ಷಕ್ಕೆ ತಿಳಿಸಲ್ಪಡುವದು.

(ಕುಮುಟಾ—ಕಾನಡಾವೃತ್ತ ಸೋಮವಾರ, ತಾರೀಖು ೪ ಮಾಹೆ ಜನವರಿ ಸನ್ ೧೯೨೬ ನೇ ಇಸವಿ)

हिंदुस्थानांतील रहिवाशांस ज्याप्रमाणें हिंदुस्थानची हवा त्याप्रमाणेंच हें औषध हिंदुस्थानांतील लोकास ज्यास्त फायदेशीर आहे.

द्राक्षासव- दीड रतलची किंमत २ रुपये;

रामबाण औषधें —

सर्दि घालविणारें,
भूक वाढविणारें;
शोच्यास साफ करणारें,
झोंप आणणारें,
शक्ति देणारें,
तेजस्वीपणा आणणारें,

— विश्वास रुचिकर

कॅटलॉग मागवा,

झंडुफार्मास्युटिकलवर्क्स लिमिटेड,
मुंबई नं. १२

एजट— मेसर्स पंडित आणी कंपनी,
तीर्थहळ्ळी.

Notice.

We hereby beg to inform all of our esteemed customers that Mr. Padmanabh Gopal Kamat of Ankola is our Canvassing Agent for the District of North Kanara and that none of our other Agents are given power to book orders in the said area. Further we beg to add that our prices are nett and no discounts are allowed on them.

P. P. KUMARAN,
Proprietor,
For The West Coast Weaving Establishment
CANNANORE.

ಬೇಕಾದ ಚಿನ್ನಾಭರಣಗಳು ನಮಗೆ ಆರ್ಡರ ಕೊಟ್ಟಲ್ಲಿ ಯೋಗ್ಯ ಮುದ್ದತ್ತಿನಲ್ಲಿ ಕೊಡುವೆವು.

R. S. KASARGOD, B. A.

Jewellers, KUMTA.

ಆರ್. ಎಸ್. ಕಾಸರಗೋಡ, ಬಿ ಎ.,
ರತ್ನಾಭರಣ ವ್ಯಾಪಾರಿ, ಕುಮುಟಾ.



'ಕಾನಡಾವೃತ್ತ'ದ ಚಂದಾದಾರರಿಗೆ
ಬರೇ ಒಂದು ತಿಂಗಳ ತನಕ.

ನಮ್ಮ ಮೋಡರ್ನ ರೆಗ್ಯುಲೇಟರ ವಾಲ ಕ್ಲಾಕ (ಗೋಡೆಯ ಗಡಿಯಾರ) ಮತ್ತು ೧೫ ಕರೆಟ ನಕಲಿ ಬಂಗಾರದ ಕೈ ಗಡಿಯಾರ ಇವೆರಡಕ್ಕೂ ಕೂಡಿ ಕಿಮ್ಮತ್ತು ಬರೇ ರೂ ೧೦! ಎರಡಕ್ಕೂ ೫ ವರ್ಷದ ಗೆರೆಂಟಿ!

ಪ್ರತ್ಯೇಕವಾಗಿ ಬೇಕಾದ್ದಲ್ಲಿ, ಗೋಡೆ ಗಡಿಯಾರಕ್ಕೆ ರೂ ೫. ಕೈ ಗಡಿಯಾರಕ್ಕೆ ರೂ. ೭.

ತ್ವರೆ ಮಾಡಿ ಈ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ!

CAPTAIN WATCH CO., P. B. 265, MADRAS.





ಅನುಮಾನವೇಕೆ—— ?　　ಓದಿ ಖಾತ್ರಿಮಾಡಿಕೊಳ್ಳಿ!

ಅಭಿಪ್ರಾಯಗಳು.

ನಿಮ್ಮ "ಟಿಕ್ ಟಾಕ್" ಗೋಡೆಯ ಗಡಿಯಾರವ ಬಹು ಉಪಯುಕ್ತವಿದ್ದು, ಬೆಲೆಯೂ ಅತಿ ಅಗ್ಗವಾಗಿರುವದು. ಆದ ಕಾರಣ ನನ್ನ ಮಿತ್ರನೊಬ್ಬನಿಗೆ ಇನ್ನೊಂದು ಕೊಡುವರೆ ನನಗೆ ಇನ್ನೊಂದು ಗಡಿಯಾರವನ್ನು ಕಳಿಸಿರಿ.
ಶಾಮರಾವ ಜಂಗ ಬಹಾದ್ದೂರ ಸಾಹೇಬ.

ನಿಮ್ಮ "ಟಿಕ್ ಟಾಕ್" ಗಡಿಯಾರದ ವಿಷಯ ನೀವು ಬರೆದ ಪತ್ರ ಮತ್ತು ಮಾಹಿತಿಯು ಬಗ್ಗೆ ಉಪಕಾರಿಯಾಗಿರುವೆನು. ಅದು ಉತ್ತಮ ರೀತಿಯಿಂದ ನಡೆಯುತ್ತಿರುವದು.
ಖಾನ್ ಮೋಹನ ಮುಕರ್ಜಿ,
ಡಿ ಸ್ಟಡಿಸ್ಟ್ರಿಕ್ಟ, ರಾಜಕೋಟ.

ನಿಮ್ಮ "ಟಿಕ್ ಟಾಕ್" ಗಡಿಯಾರವನ್ನು ನೋಡಿ ಬಹಳ ಸಂತೋಷವಾಯಿತು. ನನಗೆ ಇನ್ನು ೫ ಗಡಿಯಾರಗಳನ್ನು ಕಳಿಸಿರಿ. ಅವು ತಲ್ಪಿದ ಕೂಡಲೆ, ಹೆಚ್ಚಿನ ಆರ್ಡರಗಳನ್ನು ಕಳಿಸುವೆನು.
ರಘುನಂದನ ಪ್ರಸಾದ, ಅಲಿ ಬ್ಯಾಲಿ, ಮುಕ್ತಾರ.

ನಿಮ್ಮ "ಟಿಕ್ ಟಾಕ್" ಗಡಿಯಾರದಿಂದ ನಮಗೆ ಬಹಳೇ ಸಮಾಧಾನವಾಗಿದೆ. ಇನ್ನು ೩೬ ಗಡಿಯಾರಗಳ ಬಗ್ಗೆ ಬೇಗನೇ ಆರ್ಡರ ಕಳಿಸಿಕೊಡುತ್ತೇವೆ.
ಬನೆಸ್ಟಿ ಎಂಡ್ ಕಂಪನಿ, ಸೋಲಾಪುರ.

ಬೆಲೆ ಬರೇ ಮೂರು ರೂಪಾಯಿ. ವಿಲಂಬವಿಲ್ಲದೆ ತರಿಸಿಕೊಳ್ಳಿ.

ಪತ್ತೆ:- PETER WATCH ...

ಸುಗಂಧ ತಾಂಬೂಲೀ ಜರ್ದಾ!

ಉತ್ತಮ ತಂಬಾಕ ತಕ್ಕೊಂಡು ಅದಕ್ಕೆ ತಾಂಬೂಲ ಪದಾರ್ಥಗಳ ಮತ್ತು ಮುಖರಂಜನ ಔಷಧೀ ವನಸ್ಪತಿಗಳ ಅರ್ಕದ ಒಗರ್ಣೇ ಕೊಟ್ಟು ಈ ತಾಂಬೂಲೀ ಜರ್ದಾ ತಯಾರ ಮಾಡಿರುತ್ತದೆ ಇದು ತಿನ್ನಲಿಕ್ಕೆ ಕಡಕ ಇದ್ದು ಸುವಾಸಿಕವಿರುತ್ತದೆ ಇದರ ಸೇವನೆಯಿಂದ ಬಾಯಿಯ ಹೊಲಸು, ಹಲ್ಲು ಬೇನೆ, ಹುಳ ಇವು ನಾಶವಾಗಿ ಹಲ್ಲುಗಳು ಒಳ್ಳೇ ಗಟ್ಟಿಯಾಗುತ್ತವೆ ಇದರ ಸೇವನೆಯಿಂದ ದಮ್ಮು, ಕಸ ಮುಂತಾದ ವಿಕಾರಗಳುಂಟಾಗುವ ಭೀತಿಯು ಏನೂ ಇಲ್ಲ. ಅದ್ದರಿಂದ ತಂಬಾಕ ಸೇವಿಸುವ ರಸಿಕರು ಅವಶ್ಯವಾಗಿ ಅನುಭವ ತಕ್ಕೊಳ್ಳಬೇಕ ೧ ಪುಡಿಗೆ ೪೦. ರೂ. ೦-೦-೬, ೨೫ಕ್ಕೆ ೦-೯-೦, ೧೦೦ಕ್ಕೆ ರೂ. ೨-೦-೦, ೫೦೦ಕ್ಕೆ ರೂ. ೮-೦-೦, ೧೦೦೦ಕ್ಕೆ ರೂ ೧೫-೦-೦, ಟಪಾಲು, ಪೆಕಿಂಗ ವಗೈರೆ ಖರ್ಚು ಪ್ರತ್ಯೇಕ ಬೀಳುವದು ವಿಶೇಷ ಮಾಹಿತಿ ಬಗ್ಗೆ ಕೆಳಗಿನ ಪತ್ತೆಯ ಮೇಲೆ ಪತ್ರವ್ಯವಹಾರ ಮಾಡಿದರೆ ಜರೂರ ಉತರ ಕೊಡಲ್ಪಡುವದು.

ಪತ್ತೆ:— ಎಸ್, ಬಿ. ಕದಂ,

ಬೀಡಿ ಮತ್ತು ತಂಬಾಕು ಜರ್ದಾ ದುಕಾನ

ಮು: ಶ್ರೋ ಸಿಪ್ಪಾಣಿ. ಜಿ ಬೆಳಗಾಂವ

ಸುಲಭ ಕ್ರಯ! ಸುಲಭ ಕ್ರಯ!!

ಡಾಕ್ಟರ ಜೀ. ಬೀ. ಯುವರ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿ

(Registered Trade Mark)

ಗಳು ಇದನ್ನು ಉಪಯೋಗಿಸಿ, ಸಾವಿರಾರ ಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪಿನಸಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುತವೆ, ಶರೀರದಲ್ಲಿ ಹುಟ್ಟಿದ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನು ಹೆಚ್ಚು ಮಾಡುತ್ತದೆ ಮೂರು ಚಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವದು. ಇದನ್ನ ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಗೆ ಪ್ಯಾಕೆಟ ಉಚಿತ.

ಬುದ್ದಿ ಒಂದಕ್ಕೆ ಕ್ರಯ ರೂ ೦-೪-೦, ವ್ಹಿ. ಪಿ ಖರ್ಚ ಡಜನ್ ೧ ಕ್ಕೆ ರೂ. ೨-೮-೦. ವ್ಹಿ. ಪಿ. ೦-೮-೦ ದಯಮಾಡಿ ನಿಮ್ಮ ಹೆಸರನ್ನೂ ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ —ಗುರು.ಬಸವ ಅಂಡ್ ಕಂಪನಿ ಲಿಮಿಟೆಡ್ ಪ್ರೋ ಬಾ ೫೧೦, ಪಾರ್ಕಟೌನ, ಮದರಾಸ

ಕಿರ್ಲೋಸ್ಕರ ಕಬ್ಬಿನ ಗಾಣಗಳು.

(ಎರಡು ಎತ್ತುಗಳಿಂದ ನಾಲ್ಕು ಎತ್ತುಗಳ ವರೆಗೆ)

ನಮ್ಮ ಕಾರ್ಖಾನೆಯಲ್ಲಿ ತಯಾರಾಗುವ

(೧) ಕಿರ್ಲೋಸ್ಕರ ನಂ. ೫, (೨) ಕಿಸಾನ, (೩) ಕಮಾಲ ಗಾಣಗಳಲ್ಲಿ

ಕಮಾಲ ಗಾಣ

ಇದು ಎಲ್ಲಕ್ಕೂ ಮೇಲಾಗಿದ್ದರುತ್ತದೆ ಇದು ತೀರ ಹೊಸದು. ೧೦೦ಕ್ಕೆ ೭೨ ರಂತೆ ರಸ ಹಿಂಡುತ್ತದೆ ಒಂದು ತಾಸಿಗೆ ೩೦೦ ಪೌಂಡ ಕಬ್ಬನ್ನು ಅಡುತ್ತದೆ. ಬಿಡಿ ಭಾಗಗಳು ಕಾರ್ಖಾನೆಯಲ್ಲಿ ಬೇಡಿದಾಗ ದೊರೆಯುತ್ತವೆ, ಹೆಚ್ಚಿನ ಸಂಗತಿಯ ಬಗ್ಗೆ ಇಂದೇ ತಿಳಿದುಕೊಳ್ಳಿ.

ಕಿರ್ಲೋಸ್ಕರ ವಾರ್ತೆ

ಇದೊಂದು ಕನ್ನಡ ಮಾಸಪತ್ರಿಕೆಯು ಕರ್ನಾಟಕ ತರುಣರ ಉನ್ನತಿಯೇ ಇದರ ಧ್ಯೇಯವು. ವಾರ್ಷಿಕ ಚಂದಾ ಹಣ ಒಂದೇ ೧| ರೂ.

ಮಾದರಿ ಸಂಚಿಕೆಯು ಪುಕ್ಕಟವಾಗಿ ದೊರೆಯುವದು.

ಕಿರ್ಲೋಸ್ಕರ ಬಂಧು ಲಿಮಿಟೆಡ್; { ಕಿರ್ಲೋಸ್ಕರವಾಡಿ; ಜಿಲ್ಲಾ ಸಾತಾರಾ.

ವಿಶೇಷ] ಅನುಭವಸಿದ್ಧ [ಪಥ್ಯವಿಲ್ಲ.

ವನೌಷಧಿಮೂಲಿಕೆಗಳು

ವಾಯುದುಮ್ಮಾನ (ನ್ಯೂಮೋನಿಯಾ) ವಾಂತಿ ಭ್ರಾಂತಿ (ಕಾಲೆರಾ) ಅರ್ಧಾಂಗವಾಯು (ಪೆರಾಲಿಸಿಸ್) ಮುಂತಾದ ಸಾಧಾರಣ ನಾಯಿ ಕಡಿತ, ಸರ್ಪದ ವಿಷ ಹೊಟ್ಟೆಯಲ್ಲಿ ಕ್ರಿಮಿ ವಿಷಜಾತಿದ್ದು (ಕೈಮಸಗು) ವಗೈರೆ ರೋಗಗಳಿಗೆ ಒಂದೇ ಒಂದು ಮೂಲಿಕೆಯಿಂದ ಖಾತ್ರಿಯಾಗಿ ತೀವ್ರ ಗುಣಬರುವದು. ಇವು ಬಹುಕಾಲದಿಂದ ಅನುಭವ ತಕ್ಕೊಂಡು ಹಾಗು ಪ್ರತಿನಿತ್ಯ ಉಪಯೋಗಿಸಿ ಒಳಿಕೆಯಲ್ಲಿದ್ದು ಸಿಗದಾಗುವ ಔಷಧಿಗಳ ತಾಜಾ ಮೂಲಿಕೆಗಳು! ಒಮ್ಮೆ ತರಿಸಿ ಅನುಭವ ತಕ್ಕೊಂಡರೆ ಖಾತ್ರಿಯಾದೀತು. ಕಾಲೆರಾ ಔಷಧಿಗಳ ದ್ರಾವಕ (Tincture) ಸಹ ಅಗಾವು ಸೂಚಿಸಿದರೆ ಕಳುಹುವೆವು.

ವಾಯುದುಮ್ಮಾನದ ಬಗ್ಗೆ ಔಷಧ ಮೂಲಿಕೆ ತೊಲಿ ೧ ಕ್ಕೆ ೦-೨-೦.

ಕಾಲೆರಾದ ಬಗ್ಗೆ " " " ೦ ೨ ೦

ಅರ್ಧಾಂಗ ವಾಯುವಿನ ಬಗ್ಗೆ

೧ ಇಸಮಿಗೆ ಸಾಲುವಷ್ಟು ॥ ಸೇರು ... ... ೧ ೮-೧.

ಪ್ರತ್ಯಕ್ಷ ತಿಳಿಸಬೇಕು.

ನಾಯಿ ಕಡಿತದ ಬಗ್ಗೆ ೦-೪-೦

ಸರ್ಪಸುತ್ತಿನ ಬಗ್ಗೆ ೦ ೨ ೦

ಹೊಟ್ಟೆಯಲ್ಲಿ ಕ್ರಿಮಿ ಔಷಧ ಬಿದ ಬಗ್ಗೆ ತೊಲೆ ೧೦ ಕ್ಕೆ ೬-೮-೦.

ರಕ್ತಶುದ್ಧಿ ವ ಮಲಶೋಧನೆ ಬಗ್ಗೆ ಮೂಲಿಕೆ ರಾತ್ತಲ ಕ್ಕೆ ೧-೦ ೦

ಮೋರಾವಳಾ (ನೆಲ್ಲಿಕಾಯಿ ಗುಳಂಬ)

ರಾತ್ತಲ ೧ ಕ್ಕೆ ೧-೦ ೦

ರಾತುಗಳಲ್ಲಿ ದಾಖ ಅದಕ್ಕೂ ಹೆಚ್ಚು ತರಿಸಿಕೊಳ್ಳುವರಿಗೆ ಕಡಿಮೆ ದರದಿಂದ ಕಳಿಸಲ್ಪಡುವದು. ಟಪಾಲ ಖರ್ಚ ಪ್ರತ್ಯೇಕ. ವಿಶೇಷ ಮಾಹಿತಿ ಪತ್ರ ದ್ವಾರಾ. ಅನುಪಾನಪತ್ರ ಔಷಧಿ ಸಂಗಡ

ಎನ್. ಜಿ. ಹೆಗಡೆ, ಮಾಸ್ತೇರಿ,

ಪೋಸ್ಟ — ಬಂಕಿಕೋಡ್ಲ ಜಿ ಉತ್ತರ ಕಾನಡಾ

ಅಮೃತಾಂಜನ.

ಇದರ ಉಪಯೋಗದಿಂದ, ವಾತವೇದನೆ, ಉಳುಕು ಇತ್ಯಾದಿ ವ್ಯಾಧಿಗಳಮೇಲೆ, ರಾಮಬಾಣದಂತಾಗಿರುವದು. ಕಳೆದ ೨೫ ವರ್ಷಗಳಿಂದ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗುತ್ತದೆ ಲಕ್ಷಗಟ್ಟಲೆ ಕುಟುಂಬಗಳು ಅಮೃತಾಂಜನವನ್ನು ಉಪಯೋಗಿಸುತ್ತಿರುವವು. ಅದರಿಂದ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಬೇಗು, ಸಂಧಿವಾತ ಮೊದಲಾದ ಎಷ್ಟೋ ವ್ಯಾಧಿಗಳಮೇಲೆ ಇದು ಗುಣಕಾರಿಯೆಂದು ಅರಿಯದವರು ಇದರ ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು. ಕಿಮ್ಮತು ೧೦ ಆಣೆ. ವ್ಹಿ. ಪಿ. ಖರ್ಚ ಬೇರೆ.

ಅಮೃತಾಂಜನ ಡಿಪೋ, ಫೋರ್ಟ, ಮುಂಬಯಿ

Printed and Published by Krishnarao Keshav Shenvi (Editor) at his Star of Kanara Press Kumta.

Reg. No. B 1270 — Monday, January 4th, 1926.

ವರ್ಷ ೧೦. — ಸಂಚಿಕೆ ೧೪.

ಕಾನಡಾವೃತ್ತ.

THE KANARA NEWS.

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ವರ್ಗಣಿ.

ಕುಮಟೆಯಲ್ಲಿ ಅಗಾವು ರೂಪಾಯಿ 2-4-0.
ಹೊರಗಿನವರಿಂದ ರೂ. 3-0-0.
ವ್ಹಿ. ಪಿ. ಅಂಚೆವೆಚ್ಚ ಸೇರಿ ರೂಪಾಯಿ 3-2-0.
ಬಿಡಿ ಸಂಚಿಕೆಗೆ 0-1-0.

ಜಾಹಿರಾತುಗಳ ದರ
ಪ್ರತಿ ಸಾಲಿಗೆ ರೂ. 1-0-
0-2-0.

-(ಕುಮಟಾ—ಕಾನಡಾವೃತ್ತ ಸೋಮವಾರ, ತಾರೀಖು ೪ ಮಾಹೆ ಜನವರಿ ಸನ್ ೧೯೨೬ ನೇ ಇಸವಿ.)-

हिंदुस्थानांतील राहिवासांस ज्याप्रमाणें हिंदुस्थानची हवा त्याप्रमाणेंच हें औषध हिंदुस्थानांतील लोकास ज्यास्त फायदेशीर आहे.

द्राक्षासव- तीव रतलची किंमत २ रुपये;

रामबाण औषध

सर्दि घालविणारें,
भूक वाढविणारें;
श्वासोच्छ्वास साफ करणारें,
झोंप आणणारें,
शक्ति देणारें,
तेजस्वीपणा आणणारें,

विश्वास ठेवण्यास योग्य

मंडुफार्मास्युटिकलवर्क्स लिमिटेड,
मुंबई नं. १३

एजंट— मेसर्स पंडित आणी कंपनी, तीर्थहळ्ळी.

ಬೇಕಾದ ಚಿನ್ನಾಭರಣಗಳು ನಮಗೆ ಆರ್ಡರ ಕೊಟ್ಟಲ್ಲಿ ಯೋಗ್ಯ ಮುದ್ದತ್ತಿನಲ್ಲಿ ಕೊಡುವೆವು.

R. S. KASARGOD. *B. A.*

Jewellers, KUMTA.

ಆರ್. ಎಸ್. ಕಾಸರಗೋಡ, ಬಿ. ಎ.,
ರತ್ನಾಭರಣ ವ್ಯಾಪಾರಿ, ಕುಮಟಾ.



'ಕಾನಡಾವೃತ್ತ'ದ ಚಂದಾದಾರರಿಗೆ
ಬರೇ ಒಂದು ತಿಂಗಳ ತನಕ.

ಪ್ರತ್ಯೇಕವಾಗಿ ಬೇಕಾದ್ದಲ್ಲಿ, ಗೋಡೆ ಗಡಿಯಾರಕ್ಕೆ ರೂ. ೫. ಕೈ ಗಡಿಯಾರಕ್ಕೆ ರೂ. ೭.

CAPTAIN WATCH CO., P. B. 265, MADRAS.

Notice.

We hereby beg to inform all of our esteemed customers that Mr. Padmanabh Gopal Kamat of Ankola is our Canvassing Agent for the District of North Kanara and that none of our other Agents are given power to book orders in the said area. Further we beg to add that our prices are nett and no discounts are allowed on them.

P. P. KUMARAN,
Proprietor,
For The West Coast Weaving Establishment.
CANNANORE.

ಅನುಮಾನವೇಕೆ——?



ಓದಿ ಖಾತ್ರಿಮಾಡಿಕೊಳ್ಳಿ!

ಬೆಲೆ ಬರೇ ಮೂರು ರೂಪಾಯಿ. ವಿಲಂಬವಿಲ್ಲದೆ ತರಿಸಿಕೊಳ್ಳಿ.

PETER

ಗೌರೀಹುಣ್ಣಿಮೆಯಿಂದ ೪ನೇ ವರ್ಷ ಪ್ರಾರಂಭ
ಸಚಿತ್ರ | ಜಯಕರ್ನಾಟಕ [ಮಾಸಪತ್ರಿಕೆ]

ಸಂಪಾದಕ- ಆಲೂರ ವೆಂಕಟರಾಯರು.

ಇದರಲ್ಲಿ ವಾಙ್ಮಯಾತ್ಮಕ ಸಾಹಿತ್ಯ ಧಾರ್ಮಿಕ ಸಾಮಾಜಿಕ ಐತಿಹಾಸಿಕ ಆರ್ಥಿಕ ಇತ್ಯಾದಿ ವಿಷಯಗಳು ಇರುವವು. ಪ್ರಪಂಚ ಪರಿಚಯ ಜನಪ್ರಿಯ ಸಾಹಿತ್ಯ [illegible] ಪ್ರತಿ ಸಂಚಿಕೆಯಲ್ಲಿ ಸುಂದರ ಚಿತ್ರಗಳೂ ಇರುತ್ತವೆ. [illegible] ಆಕಾರದ ೩೦ ಪುಟಗಳು ವರ್ಗಣಿ ರೂ ೫-೮-೦

ಕಾರ್ಯದರ್ಶಿ ಜಯಕರ್ನಾಟಕ, ಧಾರವಾಡ.

ಎಲ್ಲಾ ನೋವುಗಳಿಗೆ ದಿವ್ಯೌಷಧ

ವಾತಹಾರಿ ತೈಲ.

ಕ್ರಯ ೪ ತೊಲೆ ಬಾಟ್ಲಿ ೧ ಕ್ಕೆ ೦-[illegible]- ಕುಂಕುಮ ಸುವಾಸಿಕ ಕಾಬೂಲಿ [illegible] ಡಬ್ಬಿ ೧ ಕ್ಕೆ ೧-೮-೧ ಹಿಂಗಿನ ಅರ್ಕ [illegible] ಬಾಟ್ಲಿ ೧ ಕ್ಕೆ ೦-೮-೦ ರಕ್ತಶುದ್ಧಿಕರ ಧಾತುಪೌಷ್ಟಿಕ, ಶಕ್ತಿವರ್ಧಕ [illegible] ಯ ಡಬ್ಬಿ ೧ ಕ್ಕೆ ೧-೯-೦, ೧ ತೊಲೆಯ [illegible] ನ ಡಬಿಗಳು ಡಜನ್ ೧ ಕ್ಕೆ [illegible] ಹಾಕುವ ಸುವಾಸಿಕ ಪುಸ್ತಕರಾಜ ತೈಲ [illegible] ಯ ಬಾಟ್ಲಿ ೧ ಕ್ಕೆ ೦-೧೨-೦ [illegible] ಕೊಲೆ ೧ ಕ್ಕೆ ೦-೮- ಇವಲ್ಲದೆ, ನೀಲಗಿರಿ ತೈಲ, ಎಲ್ಲಾ ತರದ ಕುಂಕುಮ ಊದಬತ್ತಿಗಳು ಯೋಗ್ಯ ಕಿಂಮತಿಗೆ ಸಿಗುವವು. ಟಪಾಲ ಖರ್ಚು ಪ್ರತ್ಯೇಕ.

ಕೆರೇಕರ ಕಾಬೂಲೀ ಹಿಂಗಿನ ದುಕಾನ.

ಜವಳಿಬಜಾರ, ಕಾರವಾರ

ರಾಗದ ಪೆಟ್ಟಿಗೆಗಳು.

ತಬಲೆ ಜೋಡಿ ಇತ್ಯಾದಿ ಗಾಯನ ಸಾಮಾನು.

೧ ರಾಗದ ಕೈಪೆಟ್ಟಿಗೆ ಕಿಂ ೩೦, ೪೦, ೬೦, ೭೫, ೧೦೦.

೨ ಕಾಲು ಪೆಟ್ಟಿಗೆ ಕಿಂ ೬೫, ೭೫, ೧೨೦, ೧೪೦.

೩. ತಬಲೆ ಜೋಡಿ ಕಿಂ. ೧೬, ೧೮, ೨೦, ೨೫.

೪ ಹಾರ್ಮೋನಿಯಮ ಗ್ರಾಡ (ಮರಾಠಿ) ಕಿಂ ೧॥,

ತಬಲೆ ಗ್ರಾಡ ಕಿಂ, ೧೨ ಆ.

ವಿಶೇಷ ಮಾಹಿತಿಬಗ್ಗೆ ನಮ್ಮ ಮರಾಠಿ ಕ್ಯಾಟಲಾಗ ಪುಕ್ಕಟೆ ಕೊಡುವೆವು.

ಪತ್ರವ್ಯವಹಾರ ಮರಾಠಿಯಿಂದ ಇಲ್ಲವೆ ಇಂಗ್ರಜಿಯಿಂದ ಮಾಡಬೇಕು.

ಪತ್ತೆ:- **ಗೋಪಾಳ ಸಖಾರಾಮ ಮಾ ಕಂಪನಿ,** ವಿಠ್ಠಲವಾಡಿ ಎದುರಿಗ **೩೩೬ ಕಾಳಬಾದೇವಿ, ಮುಂಬಯಿ,**

ಟಿ. ಎಸ್. ಮೋಟರ ಸರ್ವಿಸ, ಶಿವಮೊಗ್ಗಾ

ಕಳೆದ ೪-೫ ವರ್ಷಗಳಿಂದ ನಾವು ಶಿವಮೊಗ್ಗಾ-ತೀರ್ಥಹಳ್ಳಿ-ಆಗುಂಬೆ, ಶಿವಮೊಗ್ಗಾ-ಸಾಗರ-ತಾಳಗುಪ್ಪ, ಶಿವಮೊಗ್ಗಾ-ಹರಿಹರ-ದಾವಣಗೆರೆ, ಶಿವಮೊಗ್ಗಾ-ಹೊನ್ನಾಳಿ, ಶಿವಮೊಗ್ಗಾ-ಕಳಸ, ಸಾಗರ-ಸೊರಬ-ಶಿರಾಳಕೊಪ್ಪ, ಸಾಗರ-ತೀರ್ಥಹಳ್ಳಿ, ಸಾಗರ-ಕಳಸ ಈ ಲೈನುಗಳ ಮೇಲೆ ನಮ್ಮ ರೆಗ್ಯುಲರ್ ಮೋಟರ ಸರ್ವಿಸನ್ನು ನಡೆಸಿ ಕೊಡುತ್ತಿದ್ದಲ್ಲದೆ ದಕ್ಷಿಣ ಕನ್ನಡ ಜಿಲ್ಹೆಯ ಕಾರ್ಕಳ, ಉಡುಪಿ, ಕುಂದಾಪುರ, ಮಂಗಳೂರ [illegible] ಈ ಕಡೆಗೆ " ಕಾರ್ಕಳ ಮೋಟರ ಸರ್ವಿಸಿನ " ವಿದ್ಯಮಾನವೂ, ಬಳ್ಳಾರಿ ಜಿಲ್ಹೆಯ [illegible] " ಲಕ್ಷ್ಮೀ ಮೋಟರ ಸರ್ವಿಸಿನ " ವಿದ್ಯಮಾನವೂ ಪ್ರಯಾಣಿಕರ ಎಲ್ಲ ಸೌಕರ್ಯಗಳ [illegible] ಮಾಡಿರುತ್ತೇವೆ.

ಉತ್ತರ ಕನ್ನಡ ಜಿಲ್ಹೆಯ ಪ್ರಯಾಣಿಕರು ಜೋಗ (Gersoppa Falls), ಶಿವಮೊಗ್ಗಾ [illegible] ಹರಿಹರ ಮುಂತಾದ ಕ್ಷೇತ್ರ ಸ್ಥಳಗಳಿಗೆ ಪ್ರಯಾಣ ಬೆಳೆಸಲು ಅನುಕೂಲವಾಗಬೇಕೆಂದು ಶಿವಮೊಗ್ಗಾ, ಸಾಗರ, ಜೋಗ, ಸಿದ್ದಾಪುರ, ಶಿರಸಿ, ಕುಮಟಾ ಈ ಲೈನಿನಲ್ಲಿ ಮೋಟರ ಸರ್ವಿಸ [illegible] ಪ್ರಾರಂಭಿಸಿದ್ದೇವೆ.

ಕಾಲಕ್ರಮಗಳು.

ಸಾಗರದಿಂದ ಹೊರಡುವದು—	ಬೆಳಿಗ್ಗಿನ ೭ ಘಂಟೆಗೆ.
ಶಿರಸಿಗೆ ಸೇರುವದು—	,, ೧೦ ,,
ಶಿರಸಿಯಿಂದ ಬಿಡುವದು ಶಿವಮೊಗ್ಗಾ ಕಡೆಗೆ—	ಮಧ್ಯಾಹ್ನ ೧ ,,
ಸಾಗರಕ್ಕೆ ಸೇರುವದು (ಸಿದ್ದಾಪುರ ಮಾರ್ಗವಾಗಿ)—	ಸಾಯಂಕಾಲ ೬ ,,
ಸಾಗರದಿಂದ ಶಿರಸಿ ಕಡೆಗೆ ಹೊರಡುವದು—	ಬೆಳಿಗ್ಗಿನ ೭ ,,
ಸಿದ್ದಾಪುರದ ಮೇಲಾಗಿ ಶಿರಸಿಗೆ ಸೇರುವದು—	,, ೧೧ ,,
ಶಿರಸಿಯಿಂದ ಕುಮಟೆಗೆ ಹೊರಡುವದು—	ಮಧ್ಯಾಹ್ನ ೨ ,,
ಕುಮಟೆಗೆ ಸೇರುವದು—	ಸಾಯಂಕಾಲ ೫ ,,

N. B. — ಈ ವೇಳೆಯ ಲೈನುಗಳ ವಿನಹ ಶಿರಶಿಯಿಂದ ಹುಬ್ಬಳ್ಳಿಗೆ ಪ್ರತ್ಯೇಕ ಒಂದು ಸರ್ವಿಸ ಪ್ರಾರಂಭಿಸುವ ಯೋಚನೆ ನಡೆದಿರುತ್ತದೆ. [ಸರ್ವರೂ] ಅಭಿಮಾನವಿಟ್ಟು ಪ್ರೋತ್ಸಾಹಿಸಬೇಕಾಗಿ ವಿನಂತಿ.

SHIMOGA, 22—11—1924 } **M. MANJAPPA.** PROPRIETOR.

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕೆಟಗಳು ಮತ್ತು ಸುವರ್ಣಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು.

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ.

ಈ ಮದ್ದು ಮಹೌಷಧಿಯಾಗಿದ್ದು ಬಹಳ ಸಿಹಿಯಾಗಿಯೂ ರುಚಿಕರವಾಗಿಯೂ ಇರುತ್ತದೆ. ಈ ಮಧುವ ಸೇವನದಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ಪ್ರಕೋಪದಿಂದಾದ ಬೇನೆಯು ಹೋಗುವದು. ೬೦ ೭೦ ವರ್ಷದ ಮುದುಕರು ಕೂಡ [illegible] ತರುಣರಂತೆ ಪ್ರವರ್ಧಮಾನವಾಗುವರು. (ನಿಜವಾಗಿ ಒಂದೇ ಸಲದಲ್ಲಿ ಅನುಭವಕ್ಕೆ ಬರುವದು) ಜನನೇಂದ್ರಿಯದೊಳಗಿನ ಶಕ್ತಿಯು ಹೋಗಿ ಪ್ರಾಪ್ತವಾದ ನಪುಂಸಕತ್ವವು ಇಲ್ಲದಂತಾಗುವದು. ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ ಧಾತು, [illegible] ಒಂದಾಗುವದು — ಪರಮಾ ಮುಂತಾದ ಕಾರಣದಿಂದ ದೂಷಿತವಾದ ಶರೀರವು ನಿರ್ದೋಷವಾಗುವದು. ಮೂರೇ ದಿವಸದಲ್ಲಿ ಗುಣಬರುವದು. ತರುಣ ಸ್ತ್ರೀಪುರುಷರು ಈ ದ್ರಾಕ್ಷಾರ್ಕ ಮಧುವ ಸೇವನ್ನ ಮಾಡಿ ಇದರೊಳಗಿನ ಗುಣ ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ, ಉದರರೋಗ ಮುಂತಾದ ರೋಗಗಳು ನಾಶವಾಗುವವು. [illegible] ದಿವಸದಲ್ಲಿ ಮೂರಾವರ್ತಿ ಊಟಮಾಡಿದರೂ ಅನ್ನ ಪಚನವಾಗಿ ಹಸಿವೆ ಚೆನ್ನಾಗಿ ಆಗುತ್ತದೆ. ಇದರ ಅನುಭವವು ಮೊದಲನೇ ದಿವಸವೇ ಬರುವದು. ಶೌಚ ಸಾಫ ಆಗುವದು. ಮೈಯಲ್ಲಿ ಎಷ್ಟೇ ದಿವಸದ ಕಾವು ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ಔಷಧಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ. ಹೊಸದೇನೆ ಇದ್ದರೆ ೧೦ ದಿವಸ ಸಾಲುವ ಒಂದು ಬಾಟಲಿಯಿಂದ ಗುಣಬರುವದು. ಹಳೇ ರೋಗ ಇದ್ದರೆ ೩ ಬಾಟಲಿಯಿಂದ ಗುಣವಾಗುವದು. ಒಂದು ಬಾಟ್ಲಿಯ ಕಿಮ್ಮತ್ತು ೧| ರೂಪಾಯಿ. ಮೂರು ಬಾಟಲಿಯ ಕಿಮ್ಮತ್ತು ೩-[illegible]-೦ ಮೂರು ಬಾಟಲಿಗಳನ್ನು ಒಂದೇ ಪಾರ್ಸಲಿನಲ್ಲಿ ಕಳಿಸುವೆವು. ಅಂದರೆ ಟಪಾಲಖರ್ಚು ಹೆಚ್ಚು ಬೀಳುವದಿಲ್ಲ. ಆದರೆ [illegible] ಕಿಮ್ಮತ್ತು ೧೨-೦-೦ ಮತ್ತು ೧ ಬಾಟಲಿ ಪುಕ್ಕಟೆ ಸಿಗುವದು. ಟಪಾಲ ಖರ್ಚು ಬೇರೆ ಬೀಳುವದು. ಏಜಂಟರ ಕಡೆಯಿಂದ ೧ ಬಾಟ್ಲಿಗೆ ೧-[illegible]-೦ ೩ ಬಾಟ್ಲಿಗೆ ೩-೦-೦ [illegible] ೧೩-೦-೦

ಮ್ಯಾನೇಜರ— ದ್ರಾಕ್ಷಾರ್ಕಮಧು ಆಫೀಸ, ಪೋ. ಚಿಪ್ಪಾಣಿ, ಜಿ. ಬೆಳಗಾಂವ

ನಾಲ್ವತ್ತನೇ ರಾಷ್ಟ್ರೀಯ ಮಹಾಸಭೆಯ ಕಾನಪುರದ ಅಧಿವೇಶನ.

ಅಧ್ಯಕ್ಷರ ಭಾಷಣ.

೪೦ನೇ ರಾಷ್ಟ್ರೀಯ ಮಹಾಸಭೆಯ ಅಧ್ಯಕ್ಷರಾದ ಸೌ| ಸರೋಜಿನಿ ದೇವಿಯವರು ಸಭಾಪತಿಗಳಾಗಿ ಮಾಡಿದ ಭಾಷಣದ ಸಾರಾಂಶ -

ಗೆಳೆಯರೇ,

ನೀವೆಲ್ಲರೂ ಅರ್ಪಿಸಿದ ಅಪೂರ್ವ ಮಾನಸ್ಥಾನವನ್ನು ಸ್ವೀಕರಿಸುವಾಗ, ನನ್ನ ಮನೋಭೂಮಿಯಲ್ಲಿ ಎಷ್ಟೋ ನಾನಾವಿಧ ಭಾವನೆಗಳನ್ನು ಹೇಗೆ ವರ್ಣಿಸಲಿ? ಈ ಸ್ಥಾನವು ರಾಷ್ಟ್ರಪುರುಷನ ಅತ್ಯಂತ ಸತ್ಕಾರಸ್ಥಾನವಿದ್ದಂತೆಯೇ ಜವಾಬುದಾರಿಯದೂ ಇದೆ. ಭಾರತೀಯ ಹಾಗು ಭಾರತೀಯೇತರ ಲೋಕೋತ್ತರ ಪುರುಷರು ಈ ಸ್ಥಾನವನ್ನಲಂಕರಿಸಿ ಉತ್ಕೃಷ್ಟವಾದ ರಾಷ್ಟ್ರಸೇವೆಯನ್ನು ಜರಗಿಸಿರುವರು. ನಾನೇನು ಅಷ್ಟು ದೊಡ್ಡ ರಾಷ್ಟ್ರಸೇವೆಯನ್ನು ನೆರವೇರಿಸಲಿಲ್ಲ. ತಾವು ಪೂರ್ವಪರಂಪರೆಯನ್ನನುಲಕ್ಷಿಸಿ ಸ್ತ್ರೀಸಮಾಜದಲ್ಲಿರುವ ಆದರವನ್ನು ವ್ಯಕ್ತಪಡಿಸಲು ಈ ಅಗ್ರಸ್ಥಾನವನ್ನಿತ್ತು ನನ್ನನ್ನು ಸತ್ಕರಿಸಿರುವಿರಿ. ಪುರಾಣಸ್ತ್ರೀಯರಂತೆ ನಾನೇನು ವೀರಸ್ತ್ರೀಯಲ್ಲ. ಅಷ್ಟು ಜ್ಞಾನತನವು ನನ್ನಲ್ಲಿಲ್ಲ, ಅಷ್ಟು ತ್ಯಾಗವಾಗಲಿ, ನಿಷ್ಠೆಯಾಗಲಿ ನನ್ನಲ್ಲಿರುವದಿಲ್ಲ. ಸೀತಾದೇವಿಯು ವನವಾಸವನ್ನು ಸಹಿಸಿದಷ್ಟು, ಸಾವಿತ್ರಿ ದೇವಿಯು ಯಮಲೋಕ ಮಾರ್ಗಕ್ರಮವನ್ನು ಮಾಡಿದಷ್ಟು ಅಚಲ ನಿಷ್ಠೆಯು ನನ್ನಲ್ಲಿರುವದಿಲ್ಲವಾದರೂ, ಉತ್ಸಾಹದಿಂದ ನನ್ನಲ್ಲಿರುವ ವಿಶ್ವಾಸಬಲದಿಂದ ನನಗೊಪ್ಪಿಸಿದ ಮಹಾಕಾರ್ಯವನ್ನು ನಿರ್ವಹಿಸಲುದ್ಯುಕ್ತಳಾಗಿರುವೆನು.

ವಿಭೂತಿಸ್ಮರಣ.

ಸುರೇಂದ್ರನಾಥ ಬಾನರ್ಜಿಯವರು ದೇಶದೊಳಗಿನ ಪ್ರಜೆಗಳ ಕಷ್ಟಗಳಿಂದ ಸಂತಾಪಗೊಂಡು ೪೦-೫೦ ವರುಷಗಳ ತನಕ ಇಡೀ ಭಾರತ ಖಂಡದಲ್ಲಿ ಸಿಂಹಗರ್ಜನೆಯನ್ನು ನಡಿಸಿ ರಾಷ್ಟ್ರಪುರುಷನನ್ನು ಎಚ್ಚರಗೊಳಿಸಿ ಸ್ವರ್ಗಸ್ಥರಾದರು. ದಕ್ಷಿಣ ದೇಶದ ವಿದ್ವನ್ಮಣಿಗಳಾದ ರಾಮಕೃಷ್ಣ ಭಂಡಾರಕರರವರು ಪುರಾತನ ಸಂಸ್ಕೃತ ವಿದ್ಯೆಯ ಪುನರುದ್ಧಾರ ಕಾರ್ಯವನ್ನು ನಿಷ್ಠೆಯಿಂದಲೂ, ನಿಶ್ಚಯದಿಂದಲೂ ನಡಿಸಿ ವೈಕುಂಠವಾಸಿಗಳಾದರು. ದೇಶಬಂಧು ಚಿತ್ತರಂಜನ ದಾಸರು ಶ್ರೇಷ್ಠ ಧ್ಯೇಯವಾದಿಗಳು. ಭರತ ಭೂಮಾತೆಯ ಸ್ವಾತಂತ್ರ್ಯಕ್ಕಾಗಿ ವೈಷ್ಣವ ಭಕ್ತನಂತೆ ತನ್ಮಯರಾಗಿದ್ದರು. ಎಡೆಬಿಡದೆ ಸಾಹಸದಿಂದ ಶತ್ರುವಿನೊಡನೆ ಹೋರಾಡಿ ಸ್ವದೇಶಬಾಂಧವರಿಗಾಗಿ ಕೈಸೋತಾಗಲೇ ವೀರಬಂಧುಗಳ ಅಂತರ್ಧಾನ ಹೊಂದಿದರು.

ನಮ್ಮ ಮೇಲೆ ನಾಲ್ಕೂ ಕಡೆಯಿಂದ ವಿಪತ್ತು ಬಂದೊದಗಿರುವವು. ಅವನ್ನು ಪರಿಹರಿಸಲು ನಾವು ಯಾವ ಉಪಾಯಯೋಜನೆ ಮಾಡಬೇಕು? ನಮ್ಮ ನೈಸರ್ಗಿಕ ಸ್ವಾತಂತ್ರ್ಯ ಹಕ್ಕುಗಳನ್ನು ದಬ್ಬಿಹಾಕುವ ಕಾನೂನುಗಳಿಗೆ ನಾವು ಹೇಗೆ ಎದುರಾಗಬೇಕು? ನಮ್ಮ ನೈತಿಕ ಹಾಗೂ ಭೌತಿಕ ಸಂಸ್ಕೃತಿಯು ಅಪಹಾರವಾಗದಂತೆ, ಸಾಮ್ರಾಜ್ಯವಾದಿಗಳು ನಿಷ್ಠುರತನದಿಂದ ಹುಟ್ಟುಹಾಕಿರುವಂತೆ ನಡಿಸಿರುವ ಕುಯುಕ್ತಿಗಳನ್ನು ನಿರರ್ಥಕಗೊಳಿಸುವ ಉಪಾಯವೇನು? ಭೌತಿಕ ಹಾಗು ಬೌದ್ಧಿಕ ಪಾರತಂತ್ರ್ಯದಿಂದುಂಟಾದ ಪರಿಸ್ಥಿತಿಯಲ್ಲಿ ನಮ್ಮನ್ನು ಸುಲಿಯಲು ಸಿದ್ಧರಾಗಿರುವ ಪರಸ್ಥರಿಗೆ ಅಡಿಯಾಗುವ ಬಗೆ ಹೇಗೆ? ಸಮಾಜದೊಳಗಿನ ದುಷ್ಟ ಪರಂಪರೆಗಳ ಮೇಲೊದಗಿದ ವಿಪತ್ತನ್ನು ಹೇಗೆ ಪರಿಹರಿಸುವದು? ನಮ್ಮ ಅಧಃಪಾತಕ್ಕೆ ಹೇಗೆ ತಡೆ ಹಾಕುವದು? ನಮ್ಮನಮ್ಮೊಳಗಿನ ಅಂತಸ್ಥ ಕಲಹಗಳಿಂದುಂಟಾದ ವಿಪತ್ತನ್ನು ನಿವಾರಿಸುವ ಉಪಾಯವೇನು?

ಮಹಾತ್ಮರ ತ್ಯಾಗಸಂದೇಶ

ಮಹಾತ್ಮಾ ಗಾಂಧಿಯವರು ನಿರೂಪಿಸಿದ ತ್ಯಾಗಸಂದೇಶದಲ್ಲಿ ಈ ಪ್ರಶ್ನೆಗಳಿಗೆ ಉತ್ತರಗಳು ದೊರಕುವವು. ರಾಷ್ಟ್ರವಿಮೋಚನ ಮಾರ್ಗಗಳನ್ನು ಕಲಿಸಲು ಮಹಾತ್ಮರು ಮಾಡಿದ ಯತ್ನಗಳು ನಿರರ್ಥಕವಾದವು. ಯಾಕೆ? ನಮ್ಮ ಹಿರಿಯರಲ್ಲಿದ್ದ ನಿಷ್ಠೆಯಿಂದ ನಾವು ಚಲಿತರಾಗಿರುವೆವು. ಉಚ್ಚ ಅಸಿಧಾರಾವ್ರತಕ್ಕೆ ತಕ್ಕಂತೆ ಕೆಲವು ಕಾಲ ನಾವು ನಡೆದುಕೊಂಡಾಗ್ಯೂ, ಅದನ್ನು ನಿಷ್ಠೆಯಿಂದ ಮುಂದರಿಸುವದು ನಮ್ಮಿಂದಾಗಲಿಲ್ಲ. ಇತಿಹಾಸಕಾರರು ಮುಂದೇನೂ ನಿರ್ಣಯ ಕೊಡಲಿ, ಅಹಿಂಸಾಪ್ರಧಾನ ಅಸಹಕಾರಯೋಗವು ಇಡೀ ಭರತಖಂಡದ ಮೇಲೆ ಬಿರುಗಾಳಿಯಂತೆ ರಭಸದಿಂದ ಬೀಸಿ, ರಾಷ್ಟ್ರಜೀವನದ ಬುಡಬೇರುಗಳನ್ನೆಲ್ಲ ಅಲುಗಿಸಿ, ನಮ್ಮ ಪಾರಮಾರ್ಥಿಕ ವಿಚಾರವನ್ನು ಅರಳಿಸಿಬಿಟ್ಟಿತು

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ.

ಕಾಮಿನಿಯಾ ತೈಲ. ರಿಜಿಸ್ಟರ್ಡ

ಮೃದುವಾದ, ಗುಂಗುರು ಗುಂಗುರಾಗಿರುವ ನೀಲಿಮೆಯಿಂದ ನಿಬಿಡವಾದ ಕೇಶದ ಮಹತ್ವವನ್ನು ಯಾವ ನಾರಿಯು ತಾನೇ ಮನ್ನಿಸಲೊಲ್ಲಳು? ಇಂಥಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿಕೊಡತಕ್ಕ ಉಪಕರಣವಾದರೋ,

ಕಾಮಿನಿಯಾ ಆಯಿಲ್ (ರಿಜಿಸ್ಟರ್ಡ)

ಈ ಆಯಿಲ್ ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತದೆಯೋ ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ. ಈ ಆಯಿಲ್ ತೊಡೆದುಕೊಳ್ಳುತಲೇ ತಲೆಶೂಲೆಯ ಬೇನೆಯು ತಟ್ಟನೆ ಮಾಯವಾಗಿ ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನು ತೊಡೆದು ತೊಡಗಿದ ಬಳಿಕ ಎಂದಿಗೂ ಉದುರಿ ಬಿದ್ದು ಹೋಗಲಾರವು, ಅಲ್ಲದೆ, ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮನೋಹರವೂ ಆಗಿರುತ್ತದೆ.

ಕೀಳು ತರದ ಎಣ್ಣೆಗಳನ್ನು ಕೊಂಡುಕೊಂಡು ತಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡಿಕೊಳ್ಳುವದಕ್ಕಿಂತ ಒಂದೇ ಒಂದು ಬಾರಿ "ಕಾಮಿನಿಯಾ ಆಯಿಲ್" ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯು ಶ್ರೇಷ್ಠತೆಯ ದೆಸೆಯಿಂದ ನಮಗೆ ೩ನೂರ ಪ್ರದರ್ಶನದಲ್ಲಿ "ಸರ್ಟಿಫಿಕೇಟ ಆಫ್ ಮೆರಿಟ" ಅಥವಾ ಯೋಗ್ಯತಾಪತ್ರವೂ ಅನೇಕ ಸಾವಿರಾರು ಗೃಹಸ್ಥರು ಉಪಯೋಗಿಸಿದ ಮಾನಪತ್ರಗಳೂ ದೊರೆತಿ.

ಕ್ರಯ. — ಸೀಸೆಗೆ ರೂಪಾಯಿ 1-0-0, ಸೀಸೆ ೩ಕ್ಕೆ ರೂಪಾಯಿ 2-10 0 ವ್ಹಿ. ಪಿ ಖರ್ಚ 0-14-0

ಅತಿ ಮನೋಹರವಾದ ಸುರಭಿಯು !

ಒಟ್ಟೋ-ದಿಲ್ ಬಹಾರ್ !! (ರಿಜಿಸ್ಟರ್ಡ.)

ಈ ಸುಗಂಧದ್ರವ್ಯವು ಮಧುರ, ಕೋಮಲ, ಚಿರಸ್ಥಾಯಿ ಮತ್ತು ಅತ್ಯುತ್ತಮವು ಆಗ್ಗಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧಮಾಡಿದೆ. ಇದರಲ್ಲಿ ಮದಿರೆಯ (ಆಲ್ಕೋಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈ ವಸ್ತ್ರದಲ್ಲಿ ಅಥವಾ ಅಂಗಿಯಲ್ಲಿ ಈ ದ್ರವ್ಯದ ಕೆಲವು ತೊಟ್ಟುಗಳನು ಚಿಮುಕಿಸಿದರೆ ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ, ಈ ಒಟ್ಟೋ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ ಮನಸ್ಸನ್ನು ತನ್ನ ಕಡೆಯಿಂದ ಸೆಳೆಕೊಳ್ಳುವದು. ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ

ಸಣ್ಣ ಸೀಸೆ 1 ಕ್ಕೆ 0 8 0; 1 ಡ್ರಾಮಿನ (ಮಿಡಿಯಂ) ಸೀಸೆ 1 ಕ್ಕೆ 0 12 0; ½ ಔನ್ಸಿನ ದೊಡ್ಡ ಸೀಸೆ 1 ಕ್ಕೆ 2 0 0. ಅಂಚೆಯ ವೆಚ್ಚ ಬೇರೆ 0 4 0

ಒಟ್ಟೋ-ದಿಲ್ ಬಹಾರ್ ಪರಿಮಳ ಕಾರ್ಡುಗಳು ಡಜನ್ 1 ಕ್ಕೆ 0 12 0.

Address: **The Anglo Indian Drug & Chemical Co.**

16, Market, **BOMBAY 2**

೪೦ನೇ ರಾಷ್ಟ್ರೀಯ ಮಹಾಸಭೆಯ ಅಧ್ಯಕ್ಷರಾದ

ಶ್ರೀ ಸರೋಜಿನಿ ನಾಯುಡುರವರು.

ಕರ್ನಾಟಕವೃತ್ತ.

ಮಿತಿ ಕ್ರೋಧನ ಸಂ। ಪುಷ್ಯ ಶು ೧ ಸೋಮವಾರ

ರಾಷ್ಟ್ರನಿರ್ಧಾರ.

— ಕಾನ್ಪುರ —

ಕಾನ್ಪುರದ ಟಿಳಕ ನಗರದಲ್ಲಿ ಕೂಡಿದ ರಾಷ್ಟ್ರೀಯ ಮಹಾಸಭೆಯ ಅಧಿವೇಶನದ ವೃತ್ತಾಂತವನ್ನು ವಿಶೇಷ ವಿಸ್ತಾರವಾಗಿ ನಾವು ವಾಚಕರಿಗೆ ಅರ್ಪಿಸಿರುವೆವು. ವೃತ್ತಾಂತದ ವಾಚನದಿಂದ ರಾಷ್ಟ್ರಪುರುಷನು ಕೈಕೊಂಡ ಕಾರ್ಯದ ಹಾಗು ದೋರಣದ ಅರಿವು ವಾಚಕರಿಗುಂಟಾಗುವದು. ಮಹಾತ್ಮರ ಪ್ರವೇಶದಿಂದ ರಾಷ್ಟ್ರೀಯ ಸಭೆಯ ರಾಜಕಾರಣದೊಳಗಿನ ಬಾಹ್ಯತಳತನವು ನಷ್ಟವಾಗಿ ಶ್ರೀಯು ಪ್ರಾದುರ್ಭೂತವಾಗಿದೆ. ಮಹಾಸಭೆಯ ಕಾರ್ಯಗಳು ವಿಶೇಷ ದಕ್ಷತೆಯಿಂದ ಯಂತ್ರದಂತೆ ಸುಸೂತ್ರವಾಗಿ ನಡೆಯುತ್ತಿವೆ. ಶನಿವಾರಕ್ಕೆ ಅಧಿವೇಶನವು ಪ್ರಾರಂಭವಾಗಿ ಸೋಮವಾರಕ್ಕೇ ಅಧಿವೇಶನವು ಸಮಾಪ್ತಿಗೈದಿತು. ಲೋಕನಾಯಕರೆಲ್ಲರೂ ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯ ಕಾರ್ಯವನ್ನು ನಿರ್ವಹಿಸಿ, ತಮ್ಮ ತಮ್ಮ ಕಾರ್ಯಗಳಿಗೆ ತೆರಳಿದರು.

ಕಾನ್ಪುರದಲ್ಲಿ ಕೂಡಿದ ರಾಷ್ಟ್ರೀಯ ಸಭೆಯ ಕಾರ್ಯವನ್ನು ಪರ್ಯಾಲೋಚಿಸಿದರೆ, ರಾಷ್ಟ್ರಪುರುಷನ ವಿಚಾರಣೆಯ ನಿರ್ಧಾರವು ಮಾರ್ಮಿಕವಾಗಿ ಹೊಳೆಯುವದು. ದಕ್ಷಿಣ ಆಫ್ರಿಕೆಯೊಳಗಿನ ನೇಟಿವ್ ಬಾಂಧವರಿಗೆ ರಾಷ್ಟ್ರಪುರುಷನು ಹೆಂಬಲವನ್ನೀಯುವ ನಿರ್ಧಾರ ಮಾಡಿರುವನು. ವಿಚಾರ ಮಾಡದೆ ಬಂಗಾಲದೊಳಗಿನ ದೇಶಸೇವಕರನ್ನು ಬಂದಿವಾಸದಲ್ಲಿಟ್ಟ ದಣಿನದವನ್ನು ಅವನು ನಿಷೇಧಿಸಿರುವನು. ಗುರುದ್ವಾರದ ಆಡಳಿತೆಯ ಪ್ರಶ್ನೆಯ ಉತ್ಕರ್ಷವಾದ ಮೇಲೆ ಅವರಿಗೆ ಸ್ವಾತಂತ್ರ್ಯಕ್ಕಾಗಿ ಸೆರೆಮನೆಗೆ ಹೋದ ಶೂರ ಅಕಾಲಿಗಳನ್ನು ಇನ್ನೂ ಬಂಧನದಲ್ಲಿಟ್ಟದ್ದು ಹೇಯವಾಗದೆಂದು ಹೇಳಿರುವನು. ಭಾರತೀಯರನ್ನು ಬ್ರಹ್ಮದೇಶದೊಳಗಿಂದ ಹೊರದಬ್ಬುವ ಆಲೋಚನೆಯಿಂದ ಕೈಕೊಂಡ ಕಾಯಿದೆಯನ್ನು ಮನ್ನಿಸಬಾರದೆಂದು ಸರ್ವಾಧಿಪತಿಗಳಿಗೆ ಸಾರಿ ಹೇಳಿರುವನು. ಪಾಟನಾ ಪಟ್ಟಣದಲ್ಲಿ ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯವರು ಮಂಜೂರು ಮಾಡಿದಂತೆ, ಪ್ರತಿ ಮಾಸಕ್ಕೆ ೪ ಆಣೆ ಅಥವಾ ೨೦೦೦ ಗಜ ನೂಲನ್ನು ಕೊಡುವವರು ರಾಷ್ಟ್ರೀಯ ಸಭೆಯ ಮತದಾರರಲ್ಲಿ ದಾಖಲಾಗಲು ಅರ್ಹರೆಂದು ನಿರ್ಣಯಿಸಿರುವನು. ರಾಷ್ಟ್ರೀಯ ಸಭೆಯ ಕಾರ್ಯ ಸಮಾರಂಭಗಳಲ್ಲಿ ಖಾದಿಯನ್ನೇ ಧರಿಸಬೇಕೆಂದೂ ರಾಷ್ಟ್ರಪುರುಷನ ಆಜ್ಞೆಯನ್ನು ಹೊರಡಿಸಿರುವನು.

ಮುಂದಿನ ಕಾರ್ಯಕ್ರಮವೇನೆಂದು ವಾಚಕರು ಪ್ರಶ್ನಿಸುವರು. ಅದಕ್ಕೆ ರಾಷ್ಟ್ರಪುರುಷನು ಉತ್ತರವನ್ನಿತ್ತಿರುವನು. ಪಂಡಿತ ಮೋತಿಲಾಲರವರು ಮಹಾಸಭೆಯಲ್ಲಿ ಸೂಚಿಸಿದ ಠರಾವು ರಾಷ್ಟ್ರಪುರುಷನ ಮುಂದಿನ ಕಾರ್ಯಕ್ರಮವನ್ನು ಸೂಚಿಸುತ್ತದೆ. ಮೋತಿಲಾಲರ ಠರಾವು ವಿಸ್ತೃತವಿದ್ದು, ಅದನ್ನು ಬೇರೊಂದೆಡೆಗೆ ವಿಸ್ತಾರಪೂರ್ವಕವಾಗಿ ಕೊಟ್ಟಿರುವೆವು. ಆರ್ಥಿಕ ಹಾಗು ಔದ್ಯೋಗಿಕ ಸಾಧನಗಳಿಂದ ರಾಷ್ಟ್ರಪುರುಷನು ಬಲಪಡುವಂತೆ ಪಂಡಿತ ಮೋತಿಲಾಲರವರು ಮೊಟ್ಟಮೊದಲು ಯೋಜಿಸಿರುವರು. ದೇಶಬಂಧುಗಳ ಗ್ರಾಮಸಂಘಟನೆಯೂ ಈ ಠರಾವಿನಲ್ಲಿ ನಿರೂಪಿಸಲ್ಪಟ್ಟಿದೆ. ಪರದೇಶಗಳಲ್ಲಿ ದೇಶದೊಳಗಿನ ವೃತ್ತಾಂತಗಳನ್ನರುಹುವ ವಾರ್ತಾಪ್ರಸಾರ ಕಾರ್ಯವು ಎರಡನೇ ಕಲಮಿನಲ್ಲಿ ಒಳಗೊಂಡಿದೆ. ಮೂರನೇ ಕಲಮಿನಲ್ಲಿ ಸರಕಾರಕ್ಕೆ ಎಚ್ಚರಿಕೆ ಕೊಡಲ್ಪಟ್ಟಿದೆ. ವರಿಷ್ಠ ಕಾಯಿದೆ ಕೌನ್ಸಿಲಿನೊಳಗಿನ ಸ್ವರಾಜ್ಯ—ಸ್ವತಂತ್ರ ಪಕ್ಷದವರು ಕೈಕೊಂಡ ನಿರ್ಣಯವು ಸ್ವಾಭಿಮಾನದಿಂದ ರಾಷ್ಟ್ರಪುರುಷನು ಬೇಡಬಹುದಾದ ಕನಿಷ್ಠ ಬೇಡಿಕೆಯು. ಇದಕ್ಕೆ ಸರಕಾರವು ಯೋಗ್ಯ ಉತ್ತರವನ್ನು ಕೊಟ್ಟು, — ರಾಜಿಯೋಪಚಾರಕ್ಕೆ ಬರದಿದ್ದರೆ, ರಾಷ್ಟ್ರೀಯ ಸಭೆಯವರು, ಅಂದರೆ, ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯವರು ನೇಮಿಸುವ ಸ್ಪೆಶಲ್ ಕಮಿಟಿಯ ಹೇಳಿಕೆಯಂತೆ, ಕೌನ್ಸಿಲು ಸಭಾಸದರು ಕೌನ್ಸಿಲುಗಳ ಕಡೆಗೆ ಬೆನ್ನು ತಿರುವಿ ರಾಷ್ಟ್ರಸಂವರ್ಧನದ ಉಪಾಯಯೋಜನೆ ಮಾಡಬೇಕು. ಸಂಕ್ಷಿಪ್ತವಾಗಿ ಹೇಳಬೇಕಾದರೆ, ಕಾಯಿದೆ ಭಂಗದ ತಯಾರಿಯಿಂದ ಸ್ವರಾಜ್ಯ ಪ್ರಾಪ್ತಿಯ ಕಾರ್ಯಕ್ಕೆ ಪ್ರಾರಂಭಿಸಬೇಕು, ಇದೇ ಈ ಅಧಿವೇಶನದೊಳಗಣ ಮುಖ್ಯ ಠರಾವು.

ಹಿಂದುಸ್ಥಾನ ಸರಕಾರದ ಹಾಗು ಸಾಮ್ರಾಜ್ಯ ಸರಕಾರದ ಪರಂಪರೆಯನ್ನನುಲಕ್ಷಿಸಿದರೆ, ರಾಷ್ಟ್ರಪುರುಷನಿಗೆ ಅನುಕೂಲ ಉತ್ತರ ದೊರಕೀತೆಂದು ಯಾರೂ ಹೇಳಲಾರರು. ಅದರೂ, ಕೌರವ—ಪಾಂಡವರ ಯುದ್ಧವಾಗುವ ಮುಂಚೆ ಶ್ರೀಕೃಷ್ಣ ದೇವರು ಶಿಷ್ಟಾಯಿಗೆ ಹೋದಂತೆ, ನಮ್ಮ ರಾಷ್ಟ್ರಪುರುಷನು ಶಿಷ್ಟಾಯಿಯ ಕೊನೆಯ ಮಾರ್ಗವನ್ನು ಸೂಚಿಸಿರುವನು. ಶ್ರೀಕೃಷ್ಣ ಪರಮಾತ್ಮನು ಅರ್ಧರಾಜ್ಯ ಬೇಡ, — ೫ ಗ್ರಾಮಗಳನ್ನು ಕೊಡಿರಿ, — ಎಂದು ಬೇಡಿದರೂ, ದುರ್ಯೋಧನಾದಿ ಕೌರವರು, ಆತನ ಬಿನ್ನಹವು ಪಾಂಡವರ ದೌರ್ಬಲ್ಯದ ದ್ಯೋತಕವೆಂದು ಶ್ರೀಕೃಷ್ಣ ಪರಮಾತ್ಮನನ್ನು ಧಿಕ್ಕರಿಸಿ, ಅನರ್ಥಗಳಿಗೀಡಾದರು. ರಾಷ್ಟ್ರಪುರುಷನು ಸೌ। ಸರೋಜಿನಿ ದೇವಿಯವರನ್ನು ಸಂಧಾನಕ್ಕಾಗಿ ಆಳರಸರೆಡೆಗೆ ಕಳುಹಿರುವನು. ವರ್ತಮಾನ ವೈಭವದ ಗರ್ವದಿಂದ ಆಳರಸರು ಉಬ್ಬಿಹೋಗದೆ, ಸ್ವಾಭಿಮಾನದಿಂದಲೂ,

ಬಂಧುಭಾವದಿಂದಲೂ ನೀಡಿದ ಸಾಮೋಪಚಾರದ ಕೈಯನ್ನು ಆಳರಸರು ಮನ್ನಿಸಿದರೆ, ಆಳರಸರಿಗೂ ಕ್ಷೇಮವಿದೆ; ರಾಷ್ಟ್ರಪುರುಷನಿಗೂ ಕ್ಷೇಮವಿದೆ; ಸಾಮ್ರಾಜ್ಯಕ್ಕೂ ಕ್ಷೇಮವೇ. ಸರ್ವ ಪರಿಯಿಂದಲೂ ಕ್ಷೇಮಕರವಾದ ಈ ಮಾರ್ಗವನ್ನು ಆಳರಸರು ಧಿಕ್ಕರಿಸಿದರೆ, ನಿರುಪಾಯದಿಂದ ರಾಷ್ಟ್ರಪುರುಷನು ಎಷ್ಟೆಷ್ಟು ಸಮಸ್ತ ಕಷ್ಟಗಳಿಗೂ ಇದಿರಾಗುವನು. ಸೌ। ಸರೋಜಿನಿ ದೇವಿಯವರು ಆಜ್ಞಾಪಿಸಿದಂತೆ, ರಾಷ್ಟ್ರಪುರುಷನು ಪರಮಾವಧಿಯ ಸ್ವಾರ್ಥತ್ಯಾಗ ಮಾಡುವನು, ಆತ್ಮಕ್ಲೇಶಗಳನ್ನು ಸಹಿಸುವನು; ಪ್ರಾಣಾರ್ಪಣ ಮಾಡಲು ಸಿದ್ಧನಾಗುವನು, ಹರಿಶ್ಚಂದ್ರ ಮಹಾರಾಜರನ್ನು ಸ್ಮರಿಸಿ, ಸತ್ವಪರೀಕ್ಷೆಗೆ ಸಜ್ಜನಾಗುವನು. ಆಗ ಬ್ರಿಟಿಶ ಸಾಮ್ರಾಜ್ಯಪ್ರೇಮವು ಆತನಲ್ಲಿರಲಿಕ್ಕಿಲ್ಲ. ಶಾ। ರಹಮಾನ್‌ರವರು ನುಡಿದಂತೆ, ಸಾಮ್ರಾಜ್ಯವನ್ನು ನಷ್ಟಪಡಿಸಿ, ಭೂತಲದ ಮೇಲಿನ ಕಲಂಕವನ್ನು ಆತನು ಹೋಗಲಾಡಿಸಲುದ್ಯುಕ್ತನಾಗುವನು. ಇಷ್ಟು ಪ್ರಚಂಡ ರಾಷ್ಟ್ರನಿರ್ಧಾರವು ಕಾನಪುರದಲ್ಲಿ ಕೈಕೊಳ್ಳಲಾಗಿದೆ. ರಾಷ್ಟ್ರೀಯ ಸಭಾಭಿಮಾನಿಗಳೆಲ್ಲರೂ ರಾಷ್ಟ್ರನಿರ್ಧಾರವನ್ನು ಕೃತಿಯಲ್ಲಿ ರೂಪಾಂತರಿಸಿ, ರಾಷ್ಟ್ರಪುರುಷನ ಬಂಧವಿಮೋಚನ ಕಾರ್ಯಕ್ಕೆ ಶಕ್ತಿಮೀರಿ ನೆರವಾಗಬೇಕೆಂದು ನಾವು ಆಗ್ರಹಪೂರ್ವಕ ಬಿನ್ನೈಸುವೆವು.

ಸ್ಥಾನಿಕ ವೃತ್ತಾಂತ.

ಕುಮಟಾ—ನಿನ್ನೆ ರಾತ್ರಿ ಅಕಲ್ಪಿತವಾಗಿ ಚಲೋ ಮಳೆ ಸುರಿಯಿತು. ಅಡಿಕೆಯ ಆವಕ ವಿಶೇಷವಿಲ್ಲ. ದರವೂ ಇಳಿದದೆ.

ಇಲ್ಲಿ ಜನವರಿ ೨೩ನೇ ತಾರೀಖಿನಿಂದ ಸೆಶನ್ಸ ಕೋರ್ಟು ಕೂಡುವದಿದೆ. ಆ ಕುರಿತು ಎಸೆಸರ ಯಾನೆ ಪಂಚರ ಯಾದಿಯು ತಯಾರಿ ನಡೆದಿದೆ.

ಇಲ್ಲಿ ತಾರಿ ಸಂಕಕ್ಕೆ ೩-೩ ಫೂಟ ಹರಳತೆಯ ೮ ಗಂಡಿಗಳ ಬದಲು, ೨೦ ಗಂಡಿಗಳನ್ನಿಡಬೇಕೆಂಬ ತಿದ್ದುಪಡಿಯಾಗಿರುವದಾಗಿ ತಿಳಿಯುತ್ತದೆ. ಸಂಕ ಮುರಿದು ಹೋಗದಂತೆ ಹೊಳೆ ನೀರು ಸುಸೂತ್ರವಾಗಿ ಸಾಗಿ ಹೋಗುವಂತೆ, ವ್ಯವಸ್ಥೆಯಾದರೆ ತೀರಿತು.

ಶ್ರೀ ಗೋಕರ್ಣ ಕ್ಷೇತ್ರದೊಳಗಿನ ಶ್ರೀವೆಂಕಟರಮಣ ದೇವಾಲಯದಲ್ಲಿ ಮಾರ್ಗಶೀರ್ಷ ವದ್ಯ ೧೩ರ ರವಿವಾರದಿಂದ ಕೀರ್ತನ ಸಪ್ತಾಹಕ್ಕೆ ಪ್ರಾರಂಭವಾಗಿ ಶನಿವಾರಕ್ಕೆ ಮಂಗಲವಾಯಿತು. ವೇ। ಕಟ್ಟಿಗೆ ಮಹಾಬಲೇಶ್ವರ ಭಟ್ಟ, ಪುಣೆಯ 'ಮುಮುಕ್ಷು' ಪತ್ರಿಕೆಯ ಸಂಪಾದಕರಾದ, ಭಗವದ್ಭಕ್ತ ಪರಾಯಣರಾದ ಲಕ್ಷ್ಮಣ ರಾಮಚಂದ್ರ ಪಾಂಗಾರಕರ, ನಾರಾಯಣ ಪಾಂಡುರಂಗ ಪೈ, ಶ್ರೀರಾಮಾನಂದ ಸರಸ್ವತೀ ಸ್ವಾಮಿ, ಶ್ರೀ। ಅಂಬೇಕರ, ಅನಂತನಯ ಹುರೇ, ವೇ। ಜಯರಾಮಭಟ್ಟ, ಕೆರೆ ಪಾಠಶಾಲೆಯ ಇವರು ಅನುಕ್ರಮವಾಗಿ ಕೀರ್ತನೆಗಳನ್ನು ಮಾಡಿದರು. ಶ್ರೀ। ಪಾಂಗಾರಕರರ ಕೀರ್ತನೆಯು ಬಹಳ ಚಿತ್ತವೇಧಕವಾಯಿತು. ನಿತ್ಯವೂ ಕೀರ್ತನೆ ಕೇಳಲು ಬಹಳ ಜನಸಮುದಾಯವು ಕೂಡುತ್ತಿತ್ತು. ಮುಂದಿನ ವರುಷ ಭೂಮಂಡಳದಲ್ಲೆಲ್ಲ ಕಲಹ-ಸಂಕೋಚಗಳು ನೀಗಿಕೊಂಡು ಸಮಸ್ತರಲ್ಲಿಯೂ ಪರಮಾತ್ಮನ ಭಕ್ತಿಯು ಅಭಿವೃದ್ಧಿಗೈಯಲೆಂದು ಶ್ರೀದೇವರ ಪ್ರಾರ್ಥನೆಯಾಗಿ ಸಪ್ತಾಹ ಮಂಗಲೋತ್ಸವವು ಸಮಾಪ್ತಿಯಾಯಿತು.

ಶ್ರೀ ಗೋಕರ್ಣ ಕ್ಷೇತ್ರದ ಶ್ರೀ ಜೀವೋತ್ತಮ ಮಠದಲ್ಲಿ ಮುಕುಟ ದ್ವಾದಶಿಯ ಮಹೋತ್ಸವವು ಶ್ರೀ ಹನುಮಸನ್ನಿಧಿಯ ವಿದ್ಯಮಾನ ವಿಜೃಂಭಣೆಯಿಂದ ನೆರವೇರಿತು. ಕುಮಟೆಯ ವಿ। ಅನಂತ ವಿಠ್ಠಲ ಪ್ರಭುರವರು "ಪ್ರಲ್ಹಾದ ಚರಿತ್ರ" ಯನ್ನು ನಿರೂಪಿಸಿದರು.

ಸಾಭಾರ ಸ್ವೀಕಾರ

ಸಾರಸ್ವತ—ಹೇಮಂತ ಸಂಖ್ಯಾ, ಸಂಪಾದಕರು ಶ್ರೀ। ವ್ಹಿ. ಎಸ್. ರಾವ & ಮ. ಕೃ. ಮುಲ್ಕಿ ವಾಮನ ಕುಡುವ ಪ್ರಕಾಶಕ— ಶ್ರೀ। ಮುಲ್ಕಿ ವಾಮನ ಕುಡುವ, ಸಾರಸ್ವತ ಕಾರ್ಯಾಲಯ, ಉಡುಪಿ. ಬೆಲೆ ರೂ. ೦-೮-೦

ಸುವಾಸಿನಿ—ಮಾಸಪತ್ರಿಕೆ. ಸಂಪಾದಕ ಮತ್ತು ಪ್ರಕಾಶಕ— ಶ್ರೀ। ಬಿ. ವಿಠ್ಠಲರಾವ, ಸರಸ್ವತೀ ಮುದ್ರಣಾಲಯ, ಮಂಗಳೂರು. ವಾರ್ಷಿಕ ಚಂದಾ ರೂ. ೩-೦-೦

ಹೊನ್ನಾವರ—ಚಳಿ ಕಡಿಮೆ, ಮೈಲಿ ಬೇನೆಯು ಊರಲ್ಲಿ ವಿಶೇಷವಿದೆ. ಮೈಲಿ ಬೇನೆಯ ಶಾಂತ್ಯರ್ಥ ಇಲ್ಲಿಯ ಗೌಡ ಸಾರಸ್ವತ ಬ್ರಾಹ್ಮಣವೃಂದದ ಸಂಗತ ಭಜಕರು ಭಜನ ಸಪ್ತಾಹವನ್ನು ಸಾಂಗಗೊಳಿಸಿದರು, ಕಳೆದ ಶುಕ್ರವಾರಕ್ಕೆ ಮಂಗಳೋತ್ಸವವಾಯಿತು. ಭಜಕರು, ಕರಡಿ-ಭೂತ ವೇಷಗಳೊಡನೆ, ಬಾಣ-ಬಿರುಸು, ವಾದ್ಯಗಳೊಡನೆ ಕೇರಿ-ಕೇರಿಗಳಲ್ಲಿ ಭಜನೆ ಮಾಡಿದರು. ಇಂಥ ಡಂಭಾಚಾರವು ಅಸಹ್ಯವು. ಪರಮಾತ್ಮನ ಸ್ಮರಣೆಯು ಅದಷ್ಟು ನಮ್ರಭಾವದಿಂದಲೂ, ಭಕ್ತಿಯಿಂದಲೂ ನಡೆಯತಕ್ಕದ್ದು. ಅಂದರೆ ಮಾತ್ರ ಪರಮಾತ್ಮನು ಪ್ರಸನ್ನನಾಗುವನು; ಊರಿಗೂ ಸುಖವಾದೀತು.

ಚೆಂಡಿಯ—ಚಳಿ ಬೀಳಲಾರಂಭಿಸಿದೆ. ಮೈಲಿ, ಜ್ವರ ಇತ್ಯಾದಿ ಬೇನೆಗಳಿವೆ. ಬೇಸಾಯಗಾರರು ಕಾರ ಗದ್ದೆಗಳ ಸಾಗುವಳಿಯಲ್ಲಿ ತೊಡಗಿರುವರು.

ಇಲ್ಲಿಯ ಟಪಾಲು ಕೋಡಾರದ ಒಂದು ಅಂಗಡಿಯಲ್ಲಿದೆ. ಕೆಲಸ ಮಾಡುವ ಹೊತ್ತು ಬೆಳಗಿನ ೧೧ ಘಂಟೆಯಿಂದ ೨ ಘಂಟೆಯ ವರೆಗೆ. ಇದು ವೇಳಾಪತ್ರಕದೊಳಗಿನ ಟ್ಯಾಮು. ಟಪಾಲ ಮಾಸ್ತರರು ಬಂದದ್ದೇ ಟಪಾಲ ಆಫೀಸು ತೆರೆಯುವ ವೇಳೆ; ಹೋದದ್ದೇ ಮುಚ್ಚುವ ವೇಳೆ. ಆಗ ಅವುದಲ್ಲಿಯ ಜನರು ಕಾರ್ಡು-ಕವ್ಹರು ಬೇಕಾದರೆ, ಬಹಳ ಕಾದುಕೊಳ್ಳಬೇಕಾಗುತ್ತದೆ. ಈ ಪ್ರಕಾರದಿಂದ ಟಪಾಲ ಬಟವಡೆಯೂ ಸರಿಯಾಗಿ ಸಾಗುವದಿಲ್ಲ. ಸದ್ಯಕ್ಕೆ ರಾ। ರಘುನಾಥ ಸಗುಣ ಶೇಣವಿ, ಚೆಂಡಿಯ ಇವರಿಗೆ ಬಂದ ೨ ಪಾರ್ಸಲುಗಳು ಬೇರೆಯವರಿಗೆ ಬಟವಡೆಯಾದವು; ರಿಜಿಸ್ಟರಿಯಾದರೂ ಬೇರೆಯವರಿಗೆ ದೊರಕಿದ ಬಗೆ ಹೇಗೆ? ಹೀಗೆ ಟಪಾಲ ಕೆಲಸ ಮನಸ್ವೀ ನಡೆಸುವ ಟಪಾಲ ಮಾಸ್ತರರ ಯೋಗ್ಯ ವಿಚಾರವನ್ನು ವರಿಷ್ಠಾಧಿಕಾರಿಗಳು ಕೈಕೊಳ್ಳಬೇಕು.

ಕಡವಾಡ—ಇಲ್ಲಿ ಒಂದು ಖೂನಿಯಾಗಿ ೧೦-೨೦ ದಿನಗಳಾದವು. ಪೋಲೀಸ ತಪಾಸು ನಡೆದಿದೆ.

ಶಿರಸಿ—ಇಲ್ಲಿಯ ರಾ। ಸದಾಶಿವರಾವ [illegible] ಪಾಟೀಲ, ಗವರ್ನಮೆಂಟ ಪ್ಲೀಡರ ಇವರಿಗೆ ನೂತನ ಸಂವತ್ಸರದಲ್ಲಿ 'ರಾವಸಾಹೇಬ' ಎಂಬ ಬಿರುದು ದೊರಕಿರುವದು.

ತಪ್ಪಬೇಡಿರಿ ! ಈ ಸಂಧಿಯನ್ನು ಹೋಗಲಾಡಿಸಬೇಡಿರಿ !!

ದಿ ಓರಿಯೆಂಟಲ ಮೆಜಿಕಲ ಕಂಪನಿಯ

ಜಗತ್ಪ್ರಸಿದ್ಧ, ಅದ್ಭುತ ಜಾದೂ ಪ್ರಯೋಗಗಳನ್ನು

ನೋಡಲು ಮರೆಯಬೇಡಿರಿ !

ಹೊನ್ನಾವರ ಮುಕ್ಕಾಮಿನಲ್ಲಿ

ಜನವರಿ ತಾರೀಖು ೯ನೇಯಿಂದ ಪ್ರಾರಂಭ !

ಟೀಪ್ರು.—ವಿಶೇಷ ಮಾಹಿತಿ ಹಸ್ತಪತ್ರಿಕೆಯಲ್ಲಿ.

THE

INDIA PROVIDENT COMPANY LTD:

ESTABLISHED 1910.

Dividend declared 1912 — 30 per cent.

Dividend declared 1922 — 30 per cent.

Dividend declared previous year 15-20 per cent.

The Safest office for Life Insurance of the poor Premium Re. 1 or As. 8 per mensem.

Apply at once to-

PADMANABH GOPAL KAMAT,

Agent, ANKOLA. N. Kanara

ಧರ್ಮಸಂರಕ್ಷಕ ವೀರ ಅಕಾಲಿಗಳ ಪೀಡನೆಯ ತಿರಸ್ಕಾರ.

ರಾಷ್ಟ್ರೀಯ ಸಭೆಯ ಅಧಿವೇಶನ

(ಆನೇ ಪಾನಿನಿಂದ ಮುಂದರಿಸಿದ್ದು)

ಯುರೋಪಿಯನ್‌ರಿಗೆ ಇತರರನ್ನು ಸರಿಯ ನೋಡುವದಿದ್ದರೆ, ಸಾಮ್ರಾಜ್ಯವು ಶೀಘ್ರವೇ ಅಂತ್ಯವಾದರೆ ಭೂಲಕ್ಷ್ಮಿ ಕಲ್ಯಾಣವಾದೀತು ಮಹಾತ್ಮರಿಗೆ ಕೆಲವು ತಿಂಗಳು ನನ್ನೊಡನೆ ದಕ್ಷಿಣ ಆಫ್ರಿಕೆಗೆ ಹೋಗಗೊಡಿರಿ ಅಂದರೆ ನಮ್ಮ ಸಮಸ್ತ ಕಷ್ಟಗಳೂ ನಿವಾರಣವಾಗುವವು. ಮಹಾತ್ಮರು ನಮ್ಮ ಸಂಕಷ್ಟಗಳನ್ನೆಲ್ಲ ಅರಿತಿರುವರು ನೀವು ಬ್ರಿಟಿಶ ಸಾಮ್ರಾಜ್ಯಕ್ಕೆ ಅಧೀನವಾಗಿರುವದರಿಂದಲೇ ನಮ್ಮ ಮೇಲೆ ಈ ಕಷ್ಟಗಳು ಬಂದೊದಗಿವೆ ನಿಮ್ಮ ಹತ್ತರ ಹಡಗು ಪಡೆಗಳಿದ್ದರೆ ಸ್ವೈನಿಕರಿದ್ದರೆ ನಾವು ಹೀಗೆ [illegible] ಕಾಗುತ್ತಿರಲಿಲ್ಲ ಬ್ರಿಟಿಶರಿಗೆ ಈ ಪರಿಯಿಂದ ಬಂದ [illegible] ದಹಿಸಿದರೆ ಭೂತಲದಲ್ಲೆಲ್ಲ ದೊಡ್ಡ ಕೆಲ [illegible] ತ್ತಿತ್ತು ಸರ್ವಾಧಿಪತಿಗಳು ಸಾವರ್‌ಬೀನು [illegible] ದಕ್ಷಿಣ ಆಫ್ರಿಕೆಯ ಕಾಯಿದೆಯು [illegible] ಯು ಕೊಟ್ಟ ಅಧಿಕಾರವನ್ನುಪಯೋಗಿಸಿ [illegible] ನ್ನು ರದ್ದು ಪಡಿಸಲು ಎಚ್ಚರಿಕೆಯ [illegible] ಕಾದಾಟಕ್ಕೆ ಸಿದ್ಧರಾಗಿರುವೆವು ನಾವು ಹಿಂಜರಿಯೆವು ನೀವು ನಮಗೆ ಬೆಂಬಲವಿತ್ತು ಕೇಳಬೇಕಾದ್ದೇನಂದರೆ ಹುಡುಗರೇ ಮುಂದಾಗಿರಿ ದಕ್ಷಿಣ ಆಫ್ರಿಕೆಯ [illegible] ದಿರಿ ನಿಮ್ಮ ಬೆನ್ನಿಗೆ ನಾನಿರುವೆನು [illegible] ಕರಿಂದಲೂ ನಾವು ನಿಮಗೆ ಬೆಂಬಲ [illegible] ಅಂದರೆ, ನೀವು ಮುಂದಾಗಿ ಹೋರಾಡ [illegible] ಗೌರವವನ್ನು ಕಾಪಾಡುವೆವು ಡಾ॥ ರಹಮಾನ್‌ರವರ ಭಾಷಣವಾದ ಬಳಿಕ [illegible] ರವಿವಾರದ ರಾಷ್ಟ್ರೀಯ ಸಭೆಯ ಜಾಹೀರ ಕಾರ್ಯಕ್ರಮವು ಮುಗಿಯಿತು

ರವಿವಾರದ ಹಕೀಕತು

ಬಂಗಾಲದ ದಬ್ಬಾಳಿಕೆಯ ಕಾನೂನಿನ ನಿಷೇಧ

ರವಿವಾರಕ್ಕೆ ರಾಷ್ಟ್ರೀಯ ಸಭೆಯು ಸರಿಯಾಗಿ ೧೨॥ ಘಂಟೆಗೆ ಸೇರಿತು ಸಭಿಕರ ಸಂದಣಿಯು ವಿಶೇಷವಿತ್ತು ಸರಕಾರಕ್ಕೆ ಮುಂಜಾಗ್ರತೆಯನ್ನೀಯುವ ಠರಾವು ಇಂದು ಚರ್ಚೆಯಾಗುವದಿತ್ತು ಪಂಡಿತ ಮದನಮೋಹನ ಮಾಲವೀಯರು ಇಂದು ಕಾಶೀ ಕ್ಷೇತ್ರದಿಂದ ಅಧಿವೇಶನಕ್ಕಾಗಿ ಬಂದಿದ್ದರು ಮೊಟ್ಟಮೊದಲು ಬಂಗಾಲದ ಬೆರಿಸ್ಟರ ಸೇನಗುಪ್ತರವರು ಅಲ್ಲಿಯ ದಬ್ಬಾಳಿಕೆಯ ಕಾನೂನಿನ ನಿಷೇಧ ಮಾಡುವ ಠರಾವನ್ನು ಸೂಚಿಸಿದರು

೧೯೨೫ನೇ ಇಸ್ವಿಯ ಕಾಯಿದೆಯು ಮೂರ ವರ್ಷಗಳವನ್ನು, ಬಂಗಾಲ ಆರ್ಡಿನನ್ಸ [illegible] ದಬ್ಬಾಳಿಕೆಯ ಕಾನೂನನ್ನೂ ರಾಷ್ಟ್ರೀಯ ಸಭೆಯು ನಿಷೇಧಿಸಿ, ಈ ಕಾನೂನುಗಳನ್ನಾಧರಿಸಿ ದೇಶಾಭಿಮಾನಿ ಬಂಗಾಲಿಗಳಿಗೆ ವಿಚಾರಮಾಡದೆ ಆರೋಪ ಹೇಳದೆ ಸೆರೆಹಾಕಿದ ಬಗ್ಗೆ ತಿರಸ್ಕಾರವನ್ನೂ ವ್ಯಕ್ತಪಡಿಸುತ್ತದೆ, ಇನ್ನೂ ಅವರನ್ನು ಸೆರೆಯಲ್ಲಿಡುವದೂ, ಬಂಗಾಲದ ಹೊರಗೆ ಸ್ಥಾನಾಂತರ ಮಾಡುವದೂ ಗರ್ಹಣೀಯವೆಂದು ರಾಷ್ಟ್ರೀಯ ಸಭೆಯ ಅಭಿಪ್ರಾಯವಿದೆ ಬೆರಿಸ್ಟರ ಸೇನಗುಪ್ತರವರು ನುಡಿದದ್ದೇನಂದರೆ.— “ಬ್ರಿಟಿಶ ರಾಜ್ಯವನ್ನು ಬುಡಮೇಲಾಗಿ ಕೆಡಹಬೇಕೆಂಬ ಒಳಸಂಚು ಮಾಡಿದರೆಂಬ ಸಂಶಯದ ಗ್ರಹಿಕೆಯ ಮೇಲೆ ೧೫೦ ಮಂದಿಗಳಿಗೆ ಸೆರೆಹಿಡಿಯಲಾಗಿದ ೧ ವರ್ಷವಾದರೂ ವ್ಯಕ್ತಿಶಃ ಆರೋಪವೇನೆಂದು ತಿಳಿಯಲಿಲ್ಲ ವಿಚಾರವೂ ಆಗುವದಿಲ್ಲ ೧೫೦ ಮಂದಿ ದೇಶಾಭಿಮಾನಿಗಳು ಸೆರೆಮನೆಯಲ್ಲಿ ನರಳುತ್ತಿರುವರು ಸಾಕ್ಷಿಗಾರರಿಗೂ ಪಂಚರಿಗೂ ಅತ್ಯಾಚಾರಿಗಳು ಬೆದರಿಸುತ್ತಾರೆಂದು ಸರಕಾರದ ಹೇಳಿಕೆ ಇದು ಅಚ್ಚ ಅಸತ್ಯವು ಮಿ॥ ಡೇಯುವರ ಖೂನಿಯಾಯಿತು, ಈ ೫ ವರುಷಗಳಲ್ಲಿ ಯುರೋಪಿಯನ್‌ರ ಖೂನಿಯಾದದ್ದು ಇದೊಂದೇ ಸಲ ಆರೋಪಿಗಳು ಅಪರಾಧಿಗಳೆಂದು ನಿರ್ಣಯ ಕೊಟ್ಟ ಪಂಚರು ಹಿಂದೀಯರೇ, ಸಾಕ್ಷಿಗಾರರೂ ಹಿಂದೀಯರೇ ಇದರ ಮೇಲಿಂದ ಸರೆಹಿಡಿದ ದೇಶಬಾಂಧವರಿಗೆ ಪ್ರತಿಕೂಲವಾಗಿ ಪುರಾವೆಯು ದೊರೆಯಲಿಲ್ಲೆಂದು ಸ್ಪಷ್ಟವಾಗುತ್ತದೆ ಅಪರಾಧಿಗಳನ್ನು ದಂಡಿಸುವದಕ್ಕಾಗಿ ಕಾನೂನಿನ ಅಭಾವವಾಗಿಲ್ಲ ಆದರೆ ಸ್ವರಾಜ್ಯ ಪಕ್ಷವನ್ನೂ ರಾಷ್ಟ್ರೀಯ ಸಭೆಯನ್ನೂ ಪ್ರತಿಬಂಧಿಸಲು ಆಳರಸರು ಬಯಸುತ್ತಿರುವರು ಬಂಗಾಲ ಸರಕಾರವು ಕಾನೂನಿನಂತೆ [illegible] ಭತ್ತೆಯನ್ನು ಕೂಡ ಕೊಡದೆ ದಹಿಸುತ್ತಿದೆ ಇತ್ಯಾದಿ ನುಡಿದು ಸ್ವಸ್ಥಾನಾಪನ್ನರಾದ ಬಳಿಕ ಬೆರಿಸ್ಟರ ಜಯಕರರವರೂ ಡಾ॥ ಸತ್ಯಪಾಲರವರೂ ಇದಕ್ಕೆ ಅನುಮೋದಿಸಿದರು ಬೆರಿಸ್ಟರ ಜಯಕರರವರು ಈ ಠರಾವನ್ನು ಅನುಮೋದಿಸುವಾಗ ನುಡಿದದ್ದೇನಂದರೆ — ದಬ್ಬಾಳಿಕೆಯ ಕಾನೂನು ಮಂಜೂರಾಗಬೇಕಾದರೆ ಯುರೋಪಿಯನ್‌ರು ಗಡಿಬಿಡಿಯನ್ನೆಬ್ಬಿಸುವರು ಅವರಿಗೆ ಅಂಕೆಯಲ್ಲಿಟ್ಟುಕೊಳ್ಳುವದು ಕಠಿಣವಾದೀತು ಡಾ॥ ಕನರ್ನಲ [illegible] ವರು ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ಬಡಬಡಿಸಿದರು ಯುರೋಪಿಯನ್‌ರು ಕಾಯಿದೆಯನ್ನು ಉಲ್ಲಂಘಿಸುವದಾದರೆ ಆ ಕಾರಣದಿಂದ ಬಂಧನದಲ್ಲಿ ಇಡಬೇಕಾಗಿದೆ ನಿರಪರಾಧಿ ದೇಶಾಭಿಮಾನಿಗಳಿಗಲ್ಲ ಡಾ॥ ಅನಸಾರಿಯವರೂ ಶ್ರೀ ಪುರುಷೋತ್ತಮ ದಾಸ ಟಂಡನ್‌ರವರೂ ಅನುಮೋದಿಸಿದ ಬಳಿಕ ಠರಾವು ಮಂಜೂರಾಯಿತು

ಗುರುದ್ವಾರ ಪ್ರಶ್ನೆ

[illegible] ರವರು ಗುರುದ್ವಾರಗಳ ಸ್ವಾತಂತ್ರ್ಯಕ್ಕಾಗಿ ಸೆಣಸಿದ ಅಕಾಲಿ ಕೈದಿಗಳನ್ನು ಒಮ್ಮೆಲೇ [illegible] ಸರಕಾರ ಪಡಕೊಳ್ಳದೆ ಬಿಡುಗಡೆ ಮಾಡಬೇಕಾ [illegible] ಸಿದರು [illegible] ಈ [illegible] ದನ್ನು [illegible] ನುಡಿದರು [illegible] [illegible] ಶಿಸ್ತಿನಿಂದ [illegible] ಪ್ರದರ್ಶಿಸಿದ ನಿಷ್ಕ್ರಿಯ ಪ್ರತಿಕಾರವನ್ನು ಬೋಧಿಸುವ [illegible] ಅಕಾಲಿಗಳ ಕಾರ್ಯಕ್ರಮ [illegible] ರವರು ಡಾ॥ [illegible] ಅನುಮೋದಿಸಿದರು [illegible] ೩೦ [illegible] ಮಂದಿಗಳನ್ನು ಕಾರಾಗೃಹಕ್ಕೆ ಕಳುಹಿದ ವರ ೧೦೦ ಮಂದಿಗಳ ಪ್ರಾಣಹರಣ ಮಾಡಿದರು ೧೫ ಲಕ್ಷ ರೂಪಾಯಿಗಳ ದಂಡ ತೆರೋಣಾಯಿತು ಇಂಥವರು ಬಿಡುಗಡೆಯ [illegible] ಕರಾರುಗಳನ್ನೀಯ [illegible] ” ಇತ್ಯಾದಿ ಪಂಡಿತ [illegible] ಶರ್ಮಾರವರು ನುಡಿದು ಠರಾವನ್ನು ಅನುಮೋದಿಸಿದರು ಇಸ್ಪಿಕ್ಸರು ಬೆಂಬಲವನ್ನಿತ್ತ ಬಳಿಕ [illegible] ಸರದಾರ ಮಂಗಲಸಿಂಗರವರು ರಾಷ್ಟ್ರೀಯ ಸಭೆಯ ಆಭಾರವನ್ನೆಣಿಸಿದರು ಹಿಂದೂ ಮಹಾಸಭೆಯವರು ತಮ್ಮ ತಮ್ಮೊಳಗೆ ಒಡೆದಾಡದಿದ್ದರೆ ಜೈಲುಗಳಲ್ಲಿ ವಿಜಯ ಸಂಪಾದಿಸಲು ೩ ವರ್ಷ ತಗಲುತ್ತಿರಲಿಲ್ಲವಾಗಿಯೂ ಮಂಗಲಸಿಂಗರವರು ಉದ್ಗರಿಸಿದರು. ಠರಾವು ಮಂಜೂರಾಯಿತು

ಬ್ರಹ್ಮದೇಶದ ಅಪರಾಧಿಗಳಿಗೆ ಹೊರತಳ್ಳುವ ಬಗ್ಗೆ ಬ್ರಹ್ಮದೇಶಕ್ಕೆ ಹೋಗುವ ಸಮುದ್ರ ಪ್ರಯಾಣಿಕರ ಮೇಲೆ ಕರ ಹೇರುವ ಕಾನೂನುಗಳು ನಾಗರಿಕರ ಸ್ವಾತಂತ್ರ್ಯವಿಘಾತಕವೆಂದೂ, ಇದರಿಂದ ಹಿಂದೀಯರನ್ನು ಸರಕಾರವು ಹೊರತಳ್ಳಬಯಸುತ್ತದೆಂದೂ ರಾಷ್ಟ್ರೀಯ ಸಭೆಯು ಸಮಝಿಸಿ, ಸರ್ವಾಧಿಪತಿಗಳು ಈ ಕಾಯಿದೆಗೆ ಸಮ್ಮತಿಯನ್ನೀಯಬಾರದೆಂದೂ ರಾಷ್ಟ್ರೀಯ ಸಭೆಯ ಅಭಿಪ್ರಾಯವನ್ನು ಸಮರ್ಪಿಸಿತು. ಈ ಠರಾವನ್ನು ಸೂಚಿಸುವಾಗ ಮದ್ರಾಸದ ಶ್ರೀ॥ ಪ್ರಕಾಶಂರವರು ನುಡಿದದ್ದೇನಂದರೆ.— ಬ್ರಹ್ಮದೇಶದಲ್ಲಿ ಹೋಗುವವರ ಮೇಲೆ ೫ ರೂಪಾಯಿ ಕರ ವಸ್ತ್ರಲ್ಪಡುತ್ತದೆ ಈ ಕಾಯಿದೆಯಿಂದ ಬ್ರಹ್ಮದೇಶದಲ್ಲಿ ಬ್ರಿಟಿಶರಿಗೆ ಪ್ರಜೆಗಳನ್ನು ಸುಲಿಯಲು ಅನುಕೂಲವಾಗುವದೆಂದರು ಈ ಠರಾವಿಗೆ ಶ್ರೀ॥ ಹಳದರ, ಬಾನರ್ಜಿ ಅಬ್ದುಲ್ ಸತಾರವಾಲಿ, ಮದನಹಿತ, ಇತ್ಯಾದಿ ಬ್ರಹ್ಮದೇಶಸ್ಥರು ಅನುಮೋದಿಸಿದ ಬಳಿಕ, ಠರಾವು ಮಂಜೂರಾಯಿತು

ಖಾದಿಯ ಠರಾವು

ರಾಷ್ಟ್ರೀಯ ಸಭೆಯ ಮತಾಧಿಕಾರದ ಠರಾವನ್ನು ಡಾ॥ ಸತ್ಯಪಾಲರವರು ಸೂಚಿಸಿದರು ಪಾಟಣಾ ಪಟ್ಟಣದಲ್ಲಿ ನಿರ್ಣಯವಾದ ಮತಾಧಿಕಾರವನ್ನು ರಾಷ್ಟ್ರೀಯ ಸಭೆಯು ನಿರ್ಣಯಿಸಿತು ಅಖಿಲ ಭಾರತೀಯ ನೂಲುವ ಸಂಘಕ್ಕೆ ರಾಷ್ಟ್ರೀಯ ಸಭೆಯು ಮನ್ನಣೆಯನ್ನಿತ್ತಿತು ಡಾ॥ ಸತ್ಯಪಾಲರವರು ಈ ಠರಾವಿನ ಅರ್ಥವನ್ನು ವಿಸ್ತಾರವಾಗಿ ವಿವರಿಸಿದ ಬಳಿಕ ಮದ್ರಾಸಿನ ಗಿರಣಿ ಸಾವುಕಾರರಾದ ಶ್ರೀ॥ ಸಿ ವ್ಹಿ ವೆಂಕಟರಮಣ ಅಯ್ಯಂಗಾರರವರು ಅನುಮೋದಿಸುವಾಗ ನುಡಿದದ್ದೇನಂದರೆ.— ಅರವೆ ಗಿರಣಿಗಳ ಮೇಲೆ ಹೇರಿದ ಅಬಕಾರಿ ತೆರಿಗೆಯನ್ನು ತೆತ್ತೊಗೆಯಲು ಪ್ರಜೆಗಳೇ ಕಾರಣರು ಇದರಿಂದ ೩ ಕೋಟಿ ರೂಪಾಯಿಗಳು ಗಿರಣಿಗಳಿಗೆ ಉಳಿದಿವೆ ಈ ರಕಮಿನ ಅಲ್ಪಾಂಶವನ್ನಾದರೂ ಖಾದಿಯ ಪ್ರಸಾರಕ್ಕೆ ಖರ್ಚು ಮಾಡುವದು ನಮ್ಮ ಕರ್ತವ್ಯವು ಗಿರಣಿಗಳಲ್ಲಿ ಹುಟ್ಟುವ ಅರವೆಯು ಸಮಸ್ತ ಪ್ರಜೆಗಳ ನಿರ್ವಾಹಕ್ಕೆ ಸಾಲದು ಕೊಯಿಮತ್ತೂರ ಜಿಲ್ಲೆಯಲ್ಲಿ ಬರಬಿದ್ದಾಗ ನಾನಿದ್ದ ನಿರಾಶ್ರಿತರಿಗೆ ಖಾದಿಯ ಯೋಜನೆಯಿಂದ ಬಹಳ ಸಹಾಯವಾಯಿತು ಸರಕಾರದ ಯೋಜನೆಯು ಅಷ್ಟು ಲಾಭಕರವಲ್ಲ ಈ ಠರಾವಿಗೆ ಮೌ॥ ಹಜರತ್ ಮೋಹಾನಿಯವರು ವಿರೋಧಿಸಿದರು ಮೌ॥ ಮಹಮ್ಮದ ಅಲ್ಲಿಯವರು ಆಕ್ಷೇಪಕರ ತರ್ಕಗಳನ್ನು ಖಂಡಿಸಿದ ಬಳಿಕ, ಠರಾವು ಬಹುಮತದಿಂದ ಮಂಜೂರಾಯಿತು

ಅಮೇರಿಕೆಯ ರಾಯಭಾರಿ!

ಬಳಿಕ ಅಧ್ಯಕ್ಷರಾದ ಪಂ॥ ಮೋತೀಲಾಲರ ಬೇನಿಯಾಪಿಕರು ಅಮೇರಿಕೆಯ ಪೇನಸ್ಲೀವಿಯಾ ವಿಶ್ವವಿದ್ಯಾಲಯದ ಪ್ರೊ॥ ಹೋಮ್ಸರವರ ಪರಿಚಯವನ್ನು ಸಭಿಕರಿಗೆ ಮಾಡಿಕೊಡುವಾಗ, ಅವರಿಗೆ ಅಮೇರಿಕೆಯ ರಾಯಭಾರಿಗಳೆಂದು ಸಂಬೋಧಿಸಿದರು ಪ್ರೊ॥ ಹೋಮ್ಸರವರು ಗಾಂಧಿ ಟೊಪ್ಪಿಗೆಯನ್ನು ಹಾಕಿಕೊಂಡು, ವಕ್ತೃತ್ವಪೀಠವನ್ನೇರಿ ನುಡಿದದ್ದೇನಂದರೆ — ‘ನಾನೇನು ಸರಕಾರಿ ರಾಯಭಾರಿಯಲ್ಲ ‘ಕ್ವೇಕರ್ಸ’ ಎಂಬ ಅಮೇರಿಕೆಯೊಳಗಿನ ಗೆಳೆಯರ ಗುಂಪಿನವನು, ಶಾಂತಿಕಾರ ಪಕ್ಷದವನು ಅಮೇರಿಕೆಯವರು ಸ್ನೇಹಭಾವದಿಂದ ಮಹಾತ್ಮರ ಕಾರ್ಯವನ್ನು ನಿರೀಕ್ಷಿಸುತ್ತಿರುವರು ಮಹಾತ್ಮರು ದಕ್ಷಿಣ ಆಫ್ರಿಕದವರೆಂದು ಡಾ॥ ರಹಮಾನ್‌ರವರು ನುಡಿದರು ಭೂತಲದವರೆಂದು ನಾನು ಹೇಳಬಾರದೇನು? ಮಹಾತ್ಮರಿಗೆ ನಿಮ್ಮಂತೆ ನಾನೂ ಆದರಭಾವದಿಂದ ವಂದಿಸುತ್ತೇನೆ ಪಾಶ್ಚಾತ್ಯರು ಆಧಿಭೌತಿಕ ಸಂಪತ್ತು ಹಾಗು ಅಧಿಕಾರಸಂಪಾದನೆಗಳ ದಾರಿಗೆ ಬಿದ್ದು, ಅನರ್ಥ ಮಾಡಿರುವರು. ಇದರಿಂದ ಕ್ಷೇಮವಿಲ್ಲ ಅದರಿಂದ ನಾವು ನಿಮ್ಮ ದೇವದೂತನೋಪಾದಿಯಲ್ಲಿರುವ ಮಹಾತ್ಮರ ಕಡೆಗೆ ದೃಷ್ಟಿಯಿತ್ತಿರುವೆವು” ಇತ್ಯಾದಿ ಹೇಳಿ ಸ್ವಸ್ಥಾನಾಪನ್ನರಾದರು ಇಷ್ಟಾಗಲಿಕ್ಕೆ ೫॥ ಬಡೆದವು

ರಾಷ್ಟ್ರನಿರ್ಧಾರದ ತೀರ್ಮಾನ

ಪಂಡಿತ ಮೋತೀಲಾಲರವರು ರಾಷ್ಟ್ರನಿರ್ಧಾರದ [illegible] ರ್ಮಾನವನ್ನು ಸೂಚಿಸಿದರು ಈ ಠರಾವು ವಿಸ್ತೃತವಿದ್ದ ಸ್ವರಾಜ್ಯ ಪಕ್ಷದಲ್ಲಿಯೂ, ರಾಷ್ಟ್ರೀಯ ಸಭೆಯಲ್ಲಿಯೂ ಈ ಕುರಿತು ಬಹಳ ಚರ್ಚೆಯಾಗಿ, ಕೊನೆಗೆ ಈ ತೀರ್ಮಾನವು ನಿರ್ಧರಿಸಲಾಯಿತು —

ತಾ॥ ೨೩ ನೇ ೧೯೨೮ನೇ ಪಾಟಣಾ ಪಟ್ಟಣದಲ್ಲಿ ಸೇರಿದ ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯ ಠರಾವನ್ನು ಈ ರಾಷ್ಟ್ರೀಯ ಸಭೆಯು ಮನ್ನಿಸಿ, ರಾಷ್ಟ್ರಹಿತಪೋಷಕವಾದ ಕಾರ್ಯಕ್ರಮವನ್ನು ಕೈಕೊಳ್ಳಲು ರಾಷ್ಟ್ರೀಯ ಸಭೆಗೆ ಅಧಿಕಾರವನ್ನಿತ್ತು ರಾಷ್ಟ್ರಸಂಸ್ಥೆಗಳನ್ನೂ, ರಾಷ್ಟ್ರೀಯರನ್ನೂ ಆ ಕಾರ್ಯಕ್ಕೆ ವಹಿಸುತ್ತವೆ ಕಾಯಿದೆಭಂಗದ ಮೇಲಿನ ನಿಷ್ಠೆಯನ್ನು ರಾಷ್ಟ್ರೀಯ ಸಭೆಯು ಪುನಃ ಜಾಹೀರುಪಡಿಸಿ, ಅದರ ಆಶ್ರಯದಿಂದಲೇ ರಾಷ್ಟ್ರಾಧಿಕಾರವು ಪ್ರಾಪ್ತವಾಗುವದೆಂತಲೂ, ರಾಷ್ಟ್ರಗೌರವದ ಪಾಲನವಾಗುವದೆಂದೂ ರಾಷ್ಟ್ರೀಯಸಭೆಯ ಅಭಿಪ್ರಾಯವಿದ್ದರೂ ರಾಷ್ಟ್ರವು ಕಾಯಿದೆಭಂಗಕ್ಕೆ ಈಗಲೇ ಸಿದ್ಧವಿಲ್ಲದ ಮೂಲಕ ನಿರ್ಧರಿಸುವದೇನಂದರೆ:—

ಸಾವಿರೋಪಚಾರದ ರಾಷ್ಟ್ರನಿರ್ಧಾರ; ಸರಕಾರಕ್ಕೆ ಮುಂಜಾಗ್ರತೆ.

ಸಮಸ್ತ ರಾಜಕಾರಣವನ್ನು ಸ್ವಾವಲಂಬನ ಉಪಾಯದಿಂದ ದೇಶಕ್ಕೆ ಹಿತವಾಗುವಂತೆ, ದೇಶಕ್ಕೆ ಅಹಿತವಾದ ಸರಕಾರದ ಚಳವಳಿಗಳಿಗೆ ಇದಿರಾಗುವಂತೆ ರಾಜಕಾರಣವನ್ನು ನಡಿಸಬೇಕು

ಅದಕ್ಕಾಗಿ ರಾಷ್ಟ್ರೀಯ ಸಭೆಯು ಈ ಕೆಳಗಿನ ಕಾರ್ಯಕ್ರಮವನ್ನು ಕೈಕೊಂಡಿರುತ್ತದೆ —

ಪ್ರಜೆಗಳಿಗೆ ರಾಜಕೀಯ ಹಕ್ಕುಗಳನ್ನು ತಿಳಿಸಿಹೇಳಿ, ಅವನ್ನು ಸಂಪಾದಿಸಲು ಅವಶ್ಯವುಳ್ಳ ಸಾಮರ್ಥ್ಯಸಂಪಾದನಕ್ಕಾಗಿ ಕೈರಾಟಿಯ ಪ್ರಸಾರ, ಖಾದಿಯ ಪ್ರಸಾರ, ಸಾಮಾಜಿಕ ಐಕ್ಯ, ಅಸ್ಪೃಶ್ಯತಾನಿವಾರಣ, ದೀನ ಸಮಾಜದವರ ಉದ್ಧಾರ, ಮದ್ಯಪಾನ, ಹಾಗು ಅಫೀಮು ಸೇವನ ವ್ಯಸನಗಳ ನಿವಾರಣೆ, ಇತ್ಯಾದಿ ವಿಧಾಯಕ ಕಾರ್ಯಕ್ರಮದಿಂದಲೂ, ಗ್ರಾಮಸಂಘಟನೆ, ಸ್ಥಾನಿಕ ಸಂಸ್ಥೆಗಳಲ್ಲಿ ಪ್ರವೇಶ, ರಾಷ್ಟ್ರೀಯ ಶಿಕ್ಷಣ, ಬೇಸಾಯ ಹಾಗು ಔದ್ಯೋಗಿಕ ಕೂಲಿಕಾರರ ಸಂಘಟನೆ ಸಾವುಕಾರ ಹಾಗು ಕೂಲಿದಾರರು, ಒಕ್ಕಲು ಹಾಗು ಒಡೆಯರೊಳಗಿನ ಐಕ್ಯವೃದ್ಧಿ ಇತ್ಯಾದಿ ರಾಷ್ಟ್ರೀಯ ಸ್ವಕ್ಷಣಾರ್ಥಿಕ ಔದ್ಯೋಗಿಕ, ವ್ಯಾಪಾರವಿಷಯಕ ಕಾರ್ಯಗಳನ್ನು ರಾಷ್ಟ್ರೀಯ ಸಭೆಯು ದೇಶದಲ್ಲಿ ಪುರಸ್ಕರಿಸಬೇಕು

ಪರದೇಶಗಳಲ್ಲಿ ದೇಶದೊಳಗಿನ ವಿಶ್ವಸನೀಯ ಹಕೀಕತನ್ನು ಪ್ರಸಾರ ಮಾಡುವ ಕಾರ್ಯವನ್ನು ರಾಷ್ಟ್ರೀಯ ಸಭೆಯು ಕೈಕೊಳ್ಳಬೇಕು

ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ತಾ ೧೮ ೨ ೧೯೨೪ರ ಸೇಗೆ ಸ್ವರಾಜ್ಯ ಹಾಗು ಸ್ವತಂತ್ರ ಪಕ್ಷದವರು ಮಾಡಿಕೊಂಡ ಠರಾವನ್ನು ಈ ರಾಷ್ಟ್ರೀಯ ಸಭೆಯು ಮನ್ನಿಸಿ, ಜಾಹೀರಪಡಿಸುವದೇನಂದರೆ —

ಈ ಠರಾವಿನ ಮೇಲೆ ಸರಕಾರಕ್ಕೆ ತನ್ನ ನಿರ್ಣಯವನ್ನು ಫೆಬ್ರುವರಿ ಅಂತ್ಯದೊಳಗೆ ಜಾಹೀರುಪಡಿಸಲು ಸ್ವರಾಜ್ಯ ಪಕ್ಷದವರು ನಿಮಂತ್ರಿಸಬೇಕು ಹಾಗೆ ಜಾಹೀರಪಡಿಸದಿದ್ದಲ್ಲಿ, ಅಥವಾ ಸ್ಪೆಶಲ್ ಕಮಿಟಿಯವರು, (ಅಂದರೆ, ರಾಷ್ಟ್ರೀಯ ಸಭೆಯ ವರ್ಕಿಂಗ ಕಮಿಟಿ ಮತ್ತು ಅಖಿಲ ಭಾರತೀಯ ಕಾಂಗ್ರೆಸ ಕಮಿಟಿಯವರು ನೇಮಿಸಬಹುದಾದ ಇತರ ಸಭಾಸದರು) ಜಾಹೀರಾದ ಸರಕಾರಿ ನಿರ್ಣಯವು ಅಸಮಾಧಾನಕರವೆಂದು ನಿರ್ಧರಿಸಿದ್ದಲ್ಲಿ, ಈ ಮುಂಚಿನಂತೆ ಕಾಯಿದೆ ಕೌನ್ಸಿಲುಗಳಲ್ಲಿ ಕೆಲಸ ಮಾಡಲಾರೆವೆಂದು ಸ್ವರಾಜ್ಯ ಪಕ್ಷದವರು ಸರಕಾರಕ್ಕೆ ತಿಳಿಸಬೇಕು, ಪರ್ಯಾಸನಕರ ಹೇರುವ ತೆರಿಗೆಯ ಕಾಯಿದೆಯನ್ನು ಒಮ್ಮೆಲೇ ಹಿತ್ತೊಗೆಯಬೇಕು, ಮತ್ತು ಸ್ಪೆಶಲ್ ಕಮಿಟಿಯವರ ಹೇಳಿಕೆಯಂತೆ ನಡಕೊಳ್ಳಲು ಸಿದ್ಧರಾಗಿರಬೇಕು ಪ್ರಾಂತಿಕ ಕಾಯಿದೆ ಕೌನ್ಸಿಲಿನೊಳಗಿನ ಸ್ವರಾಜ್ಯ ಪಕ್ಷದ ಸಭಾಸದರೂ, ಹಾಗೆಯೇ ಸಿದ್ಧರಾಗಿರಬೇಕು. ಸ್ಪೆಶಲ್ ಕಮಿಟಿಯವರು ಅಖಿಲ ಭಾರತೀಯ ಕಾಂಗ್ರೆಸ ಕಮಿಟಿಯ ಸಭೆಸೇರಿಸಿ ದೇಶದಲ್ಲೆಲ್ಲ ನಡಿಸುವ ಮುಂದಿನ ಕಾರ್ಯಕ್ರಮವನ್ನು ನಿರ್ಧರಿಸಬೇಕು ಮುಂದಿನ ಇಲೆಕ್ಷನಿನ ಜಾಹೀರನಾಮೆಯನ್ನು ನಿರ್ಧರಿಸಬೇಕು. ಸರಕಾರದ ಅನುಗ್ರಹದಿಂದ ಯಾವದೇ ಅಧಿಕಾರಸ್ಥಾನವನ್ನು ಪಡೆಯಬಾರದೆಂಬ ತತ್ವದ ಭಂಗವಾಗಬಾರದು ವರಿಷ್ಠ ಕಾಯಿದೆ ಕೌನ್ಸಿಲಿಗೂ, ಪ್ರಾಂತಿಕ ಕಾಯಿದೆ ಕೌನ್ಸಿಲುಗಳಿಗೂ ಪ್ರತಿನಿಧಿಗಳನ್ನು ನೇಮಿಸಲು ಪ್ರಾಂತಿಕ ಕಾಂಗ್ರೆಸ ಕಮಿಟಿಗಳಿಗೆ ರಾಷ್ಟ್ರೀಯ ಸಭೆಯು ಅಧಿಕಾರವನ್ನೀಯುತ್ತದೆ ಕಾಯಿದೆ ಕೌನ್ಸಿಲುಗಳೊಳಗಿನ ಸಭಾಸದರು ಗೈರಹಾಜರ ಬಿದ್ದು, ತಮ್ಮ ಆಸನವು ನಷ್ಟವಾಗದಂತೆ ಕಾಯಿದೆ ಕೌನ್ಸಿಲುಗಳಿಗೆ ಹಾಜರಿಯನ್ನೀಯಬೇಕು. ಪ್ರಾಂತಿಕ ಜಮಾಬಂದೀನ ಪತ್ರಿಕೆಯನ್ನೂ, ಹೊಸ ತೆರಿಗೆಯ ಸೂಚನೆಗಳನ್ನೂ ವಿಚಾರಿಸುವ ಅಧಿವೇಶನದಲ್ಲಿ ತಪ್ಪದೆ ಹಾಜರಾಗಿ, ಅವನ್ನು ಹಿತ್ತೊಗೆಯಬೇಕು ವಿಶೇಷ ಪ್ರಸಂಗಗಳಲ್ಲಿಯೂ, ಅನಪೇಕ್ಷಿತ ಪ್ರಸಂಗಗಳಲ್ಲಿಯೂ ಸ್ವರಾಜ್ಯ ಪಕ್ಷದ ಸಭಾಸದರು ಕಾಯಿದೆ ಕೌನ್ಸಿಲುಗಳಲ್ಲಿ ಹಾಜರಿರತಕ್ಕದ್ದು ಸರಕಾರದ ನಿರ್ಣಯವು ಸ್ಪೆಶಲ್ ಕಮಿಟಿಯವರಿಗೆ ಸಮಾಧಾನಕರವಿದ್ದಲ್ಲಿ, ಸ್ಪೆಶಲ್ ಕಮಿಟಿಯವರು ಅಖಿಲ ಭಾರತೀಯ ಕಾಂಗ್ರೆಸ ಕಮಿಟಿಯ ಸಭೆಯನ್ನು ಸೇರಿಸಬೇಕು ಅಖಿಲ ಭಾರತೀಯ ಕಾಂಗ್ರೆಸ ಕಮಿಟಿಯವರಿಗೆ ಸ್ಪೆಶಲ್ ಕಮಿಟಿಯ ನಿರ್ಣಯವನ್ನು ಮನ್ನಿಸುವ ಅಧಿಕಾರವಿದೆ, ತಿರಸ್ಕರಿಸುವ ಅಧಿಕಾರವೂ ಇದೆ, ಮುಂದಿನ ಕಾರ್ಯಕ್ರಮವನ್ನು ನಿರ್ಧರಿಸುವ ಅಧಿಕಾರವೂ ಇದೆ ಅಖಿಲ ಭಾರತೀಯ ಕಾಂಗ್ರೆಸ ಕಮಿಟಿಯು ಈ ಕುರಿತು ಸದ್ಯಕ್ಕೆ ಆವಶ್ಯಕವುಳ್ಳ ನಿಧಿಯನ್ನು ಕೂಡಿಸಬೇಕಾಗಿದೂ, ಇನ್ನೂ ಅವಶ್ಯವಿದ್ದರೆ, ಕಾಂಗ್ರೆಸ ಕಾರ್ಯಕಾರಿ ಮಂಡಳದವರು ಪ್ರಜೆಗಳಿಂದ ಎತ್ತುವಳಿ ಮಾಡಬೇಕಾಗಿಯೂ ರಾಷ್ಟ್ರೀಯ ಸಭೆಯು ನಿರ್ಧರಿಸಿದೆ

ಸ್ಪೆಶಲ್ ಕಮಿಟಿಯವರು

[೧ ಮಹಾತ್ಮಾ ಗಾಂಧಿ ೨ ಮೌ॥ ಅಬುಲ್ ಕಲಾಮ ಆಝಾದ ೩ ಪಂಡಿತ ಮೋತಿಲಾಲ ನೇಹರು ೪ ಶ್ರೀ॥ ಶ್ರೀನಿವಾಸ ಅಯ್ಯಂಗಾರ ೫ ಲಾಲಾ ಲಜಪತರಾಯ ೬ ಮೌ॥ ಮಹಮ್ಮದ ಅಲ್ಲಿ ೭ ಬೆರಿಸ್ಟರ ಸೇನಗುಪ್ತ ೮ ಬೆರಿಸ್ಟರ ಅಭ್ಯಂಕರ ೯ ಜಮನಾದಾಸ ಮೆಹತಾ ೧೦ ಡಾ॥ ಎಮ್ ಏ ಅನ್ಸಾರಿ, ೧೧ ಶ್ರೀ॥ ರಂಗಸ್ವಾಮಿ ಅಯ್ಯಂಗಾರ, ೧೨ ಪಂಡಿತ ಕೇ ಸಂತಾನಂ ೧೩ ರೇವಾಶಂಕರ ಜಗಜೀವನ, ೧೪ ಬಾಬು ರಾಜೇಂದ್ರ ಪ್ರಸಾದ ೧೫ ಶ್ರೀ॥ ಸಾತ್ಕೊರಿಪತಿ ರೊಯ್ ೧೬ ಕಿರಣಶಂಕರ ರೋಯ್ ೧೭ ಟಿ ಸಿ ಗೋಸ್ವಾಮಿ, ೧೮ ವಹೀದ ಅಲ್ಲಿ ೧೯ ಜವಾಹಿರಲಾಲ ನೆಹರು, ೨೦ ಗೋವಿಂದ ವಲ್ಲಭ ಪಂತ ೨೧ ಮೌ॥ ಶೌಕತ ಅಲ್ಲಿ ೨೨ ಪಂಡಿತ ಮದನ ಮೋಹನ ಮಾಲವೀಯ, ೨೩ ಲಾಲಾ ದನಿಚಂದ, ೨೪ ಡಾ॥ ಸತ್ಯಪಾಲ, ೨೫ ಸರದಾರ ಮಂಗಲಸಿಂಗ ೨೬ ಆಗಾ ಸಫದಾರ, ೨೭ ಎಸ್ ಸತ್ಯಮೂರ್ತಿ, ೨೮ ಆರ್ ಕೇ ಷಣ್ಮುಖಂ ಚೆಟ್ಟಿ, ೨೯ ಡಾ॥ ವರದರಾಜುಲು ನಾಯುಡು ೩೦ ಗೋಪಾಲಕೃಷ್ಣಯ್ಯಾ ೩೧ ಮಹಮ್ಮದ ಶಫೀ ೩೨ ವ್ರಜಕಿಶೋರ ಪ್ರಸಾದ ೩೩ ಬಾಬು ಶಿವನಸಿಂಗ ೩೪ ಶ್ರೀ॥ ಫೂಕನ್ ೩೫ ಬೆರಿಸ್ಟರ ಜಯಕರ ೩೬ ಶ್ರೀ ನ॰ ಚಿ॰ ಕೇಳಕರ, ೩೭ ಶ್ರೀ॥ ದಾಮೋದರಪಂತ ಗೋಖಲೇ ೩೮-೩೯ ದನಜಿತ ೪೦ ಎಮ್ ಎಸ್ ಅಣೆ ೪೧ ಶೇಟ ಗೋವಿಂದದಾಸ, ೪೨ ಡಾ॥ ಮುಂಜೆ ೪೩ ಹಕೀಮ ಅಜಮಲಖಾನ ೪೪ ಶ್ರೀ॥ ವಲ್ಲಭಭಾಯಿ ಪಟೇಲ, ೪೫ ಶ್ರೀ॥ ಶ್ರೀನಿವಾಸರಾವ ಕೌಜಲಗಿ, ೪೬ ಶ್ರೀ॥ ಕೃಷ್ಣ ನಾಯರ್ ೪೭ ಡಾ॥ ಚೊಯಿತ್ರಾಮ, ೪೮ ಶ್ರೀ॥ ಬಿ ದಾಸ ಸ್ಪೆಶಲ್ ಕಮಿಟಿಯ ನೇಮಣೂಕಿಯು ಠರಾವಿನ ದಿನ ಸೇರಿದ ಅಖಿಲ ಭಾರತೀಯ ಕಾಂಗ್ರೆಸ ಕಮಿಟಿಯಿಂದಾಯಿತು]

ಪಂಡಿತ ಮಾಲವೀಯರ ಉಪಸೂಚನೆ

ಪಂಡಿತ ಮೋತಿಲಾಲ ನೆಹರೂರವರು ಈ ಠರಾವನ್ನು ಹಿಂದೀ ಭಾಷೆಯಿಂದ ತಿಳಿಸಿಹೇಳಿದ ಬಳಿಕ ಪಂಡಿತ ಮದನಮೋಹನ ಮಾಲವೀಯರವರು ಇದಕ್ಕೆ ಉಪಸೂಚನೆಯನ್ನು ಸೂಚಿಸಿದರು ಮಾಲವೀಯರ ಉಪಸೂಚನೆಯಲ್ಲಿ ಕಾಯಿದೆಭಂಗದ ನಿರ್ದೇಶವಿದ್ದಿಲ್ಲ ಕಾಯಿದೆ ಕೌನ್ಸಿಲುಗಳೊಳಗಿಂದ ಹೊರಬರಬೇಕೆಂಬ ನಿಯಮವಿದ್ದಿಲ್ಲ, ಸರಕಾರದೊಡನೆ ಸಹಕಾರ ಅಸಹಕಾರಗಳ ಉಪಾಯದಿಂದ ಸ್ವರಾಜ್ಯಸಂಪಾದನ ಮಾಡಲು ಕಾಯಿದೆ ಕೌನ್ಸಿಲುಗಳನ್ನು ಉಪಯೋಗಿಸಿಕೊಳ್ಳಬೇಕೆಂದೂ, ವರಿಷ್ಠ ಕಾಯಿದೆ ಕೌನ್ಸಿಲಿನವರು ಸಪ್ಟಂಬರದಲ್ಲಿ ಕೈಕೊಂಡ ನಿರ್ಣಯವನ್ನೂ ರಾಷ್ಟ್ರೀಯ ಸಭೆಯವರು ಕೈಕೊಳ್ಳಬೇಕೆಂದೂ, ಅಖಿಲ ಭಾರತೀಯ ಕಾಂಗ್ರೆಸ ಕಮಿಟಿಯವರಿಗೆ ಸರಕಾರಿ ಉತ್ತರವು ಸರಿದೋರದಿದ್ದಲ್ಲಿ ಮೇ ತಿಂಗಳಿನಲ್ಲಿ ರಾಷ್ಟ್ರೀಯ ಸಭೆಯ ವಿಶೇಷ ಅಧಿವೇಶನವನ್ನು ಸೇರಿಸಬೇಕೆಂದೂ ಪಂಡಿತ ಮಾಲವೀಯರವರು ಉಪಸೂಚನೆ ಮಾಡಿದರು ಸಮಯವು ಮೀರಿಹೋದದ್ದರಿಂದ ಮಾಲವೀಯರವರು ತಮ್ಮ ಉಪಸೂಚನೆಯನ್ನು ಪ್ರಸ್ತಾಪಿಸಿ, ಈ ಕುರಿತು ಸವಿಸ್ತರ ಭಾಷಣವನ್ನು ಮರುದಿನ ಮಾಡುವದಾಗಿ ಹೇಳಿ, ಸ್ವಸ್ಥಾನಾಪನ್ನರಾದರು

ಸೋಮವಾರದ ಹಕೀಕತು.

ಸೋಮವಾರವು ರಾಷ್ಟ್ರೀಯ ಸಭೆಯ ಅಧಿವೇಶನದ ಕೊನೆಯ ದಿನ ಮಹತ್ವದ ಠರಾವಿನ ಮೇಲೆ ಲೋಕನಾಯಕರ ಭಾಷಣಗಳಾಗುವದರಿಂದ ಸಭಿಕರು ದಟ್ಟಾಗಿ ನೆರೆದಿದ್ದರು ಸೋಮವಾರವು ಮಹಾತ್ಮರ ಮೌನವ್ರತದ ದಿನವಾದ್ದರಿಂದ, ಮಹಾತ್ಮರು ಅಂದು ಸಭೆಗೆ ಚಿತ್ತೈಸಿದ್ದಿಲ್ಲ ಸರಿಯಾಗಿ ೧೨॥ ಘಂಟೆಗೆ ಅಧಿವೇಶನ ಕಾರ್ಯಕ್ಕೆ ಪ್ರಾರಂಭವಾಯಿತು ಸಯ್ಯದ ಮಹೀದ ಹುಸ್ಸೇನವರು ಠರಾವು ಅವ್ಯಯವೆಂದು ಉಪಸೂಚನೆಯನ್ನು ಸೂಚಿಸಿದರು ಕಾಯಿದೆಭಂಗಕ್ಕೆ ರಾಷ್ಟ್ರವು ತಯಾರಿರುವದೆಂದೂ, ಸ್ಪೆಶಲ್ ಕಮಿಟಿಯವರಿಗೆ ಸರಕಾರಿ ಉತ್ತರವು ಸಮಾಧಾನಕರವೆಂದು ತೋರದಿದ್ದಲ್ಲಿ, ಕಾಯಿದೆಭಂಗವನ್ನು ಪುರಸ್ಕರಿಸಬೇಕೆಂದೂ ಅವರು ಹೇಳಿದರು ಈ ಉಪಸೂಚನೆಗೆ ಅನುಮೋದನವನ್ನೀಯುವಾಗ, ಲೋಕನಾಯಕರೇ ಹಿಂಜರಿಯುತ್ತಾರೆಂದು ಶ್ರೀ॥ ಪಂಚಾಯತ ದಾರದವರು ನುಡಿದರು ಶ್ರೀ॥ ಸಾಂಬಮೂರ್ತಿಯವರು ಇನ್ನೊಂದು ಉಪಸೂಚನೆಯನ್ನು ಸೂಚಿಸಿ, ಕಾಯಿದೆಭಂಗವನ್ನು ಸಾರುವ ಅಧಿಕಾರವು ಸ್ಪೆಶಲ್ ಕಮಿಟಿಯವರಿಗಿರಬಾರದೆಂದು ಹೇಳಿ, ಅಲ್ಲಲ್ಲಿ ಮದ್ಯಪಾನೋಚ್ಚಾಟನ ಮುಂತಾದ ಸ್ಥಳಿಕ ಸಂಕಟಗಳ ನಿವಾರಣಕ್ಕಾಗಿ ಕಾಯಿದೆಭಂಗದ ಉಪಾಯಯೋಜನ ಮಾಡಬೇಕೆಂದೂ, ಇಂಥ ಕಾದಾಟಗಳಿಂದಲೇ ಸ್ವಾತಂತ್ರ್ಯ ಸಂಗ್ರಾಮವನ್ನು ನಡಿಸಬೇಕೆಂದೂ ಅವರು ಪ್ರತಿಪಾದಿಸಿದರು ಲಲ್ಲು ಶ್ರೀಕೃಷ್ಣದಾಸರವರು ಮತ್ತೊಂದು ಉಪಸೂಚನೆಯನ್ನು ಸೂಚಿಸಿದರು ಸರಕಾರದ ಉತ್ತರವು ಅಸಮಾಧಾನಕರವಿದ್ದಲ್ಲಿ, ಸ್ವರಾಜ್ಯ ಪಕ್ಷದವರು ತಮ್ಮ ತಮ್ಮ ಅಧಿಕಾರಸ್ಥಾನಗಳನ್ನು ತ್ಯಜಿಸಬೇಕೆಂದು ಅವರು ಸೂಚಿಸಿದ್ದರು ಇವೆಲ್ಲ ಉಪಸೂಚನೆಗಳಾದ ಬಳಿಕ, ಪಂಡಿತ ಮಾಲವೀಯರವರು ತಮ್ಮ ಉಪಸೂಚನೆಯನ್ನು ಪ್ರತಿಪಾದಿಸಿದರು

ಪಂಡಿತ ಮಾಲವೀಯರವರ ಭಾಷಣ

ಪಂಡಿತ ಮಾಲವೀಯರವರು ನುಡಿದದ್ದೇನಂದರೆ — ಪಂಡಿತ ಮೋತಿಲಾಲರವರ ಠರಾವು ಮೀಸಲು ಅಲ್ಲ, ಮುಂಜಾವೂ ಅಲ್ಲ ಅದನ್ನು ಮಂಜೂರುಮಾಡಿ ಲೋಕದಲ್ಲಿ ಅಪಕೀರ್ತಿ ಪಡೆಯಬೇಡಿರಿ ಈ ಠರಾವಿನಂತೆ ನಡಕೊಳ್ಳಲು ಸ್ವರಾಜ್ಯ ಪಕ್ಷದವರಿಂದ ಆಗದ ಮಾತು ಜಗದ ಕಾರ್ಯವನ್ನು ಕೈಕೊಂಡು ಲೋಕದಲ್ಲಿ ನಗೆಗೇಡಾಗಬೇಡಿ ಮಹಾತ್ಮರ ವಚನ ನೋಡಿರಿ! (ಮಂಟಪದಲ್ಲಿ "ಪ್ರಾಮಾಣಿಕರಾಗಿರಿ," ಎಂಬ ಪಟ ತೋರಿಸಿ,) ಪ್ರಾಮಾಣಿಕರಾಗಿರಿ, ಅಸಹಯೋಗವು ಗೆಲ್ಲಲಿಲ್ಲ ಬಳಿಕ, ಸ್ವರಾಜ್ಯಪಕ್ಷದವರು ಕೌನ್ಸಿಲುಗಳಲ್ಲಿ ಸುಸಂಗತವಾಗಿ ಅಡ್ಡಗಟ್ಟಲು ಕೌನ್ಸಿಲು ಪ್ರವೇಶವನ್ನು ಕೈಕೊಂಡರು ಈ ಕಾರ್ಯಕ್ರಮವೂ ಫಲಿಸಲಿಲ್ಲ, ಅದೆಂದೂ ಫಲಿಸದು. ನಿಜವಾಗಿ, ಪ್ರತಿಯೋಗಿ ಸಹಕಾರಿತೆಯು ಆಚರಣೆಯಾಯಿತು ಇದನ್ನು ನೋಡಿ, ಅನೇಕರಿಗೆ ವಿನೋದವಾಯಿತು ಮೋತಿಲಾಲರವರು ನನ್ನ ಬಂಧುಗಳೆಂದು ನಾನು ತಿಳಿಯುತ್ತೇನೆ ಅವರ ಧೋರಣವು ನಿಷ್ಫಲವಾಯಿತೆಂದು ತಿಳಿಸಲು ನನಗೆ ವ್ಯಸನವಾಗುತ್ತದೆ ಶ್ರೀ॥ ವಿಠ್ಠಲಭಾಯಿ ಪಟೇಲರವರೂ, ಪಂಡಿತ ಮೋತಿಲಾಲ ನೆಹರೂರವರೂ ಅಧಿಕಾರಸ್ಥಾನಗಳನ್ನು ಸ್ವೀಕರಿಸಿ, ಪ್ರತಿಯೋಗಿ ಸಹಕಾರಿಗಳಾಗಿರುವರು ಪಂಡಿತ ಮೋತಿಲಾಲರವರು ತಮ್ಮ ಸ್ಕೀನ ಕಮಿಟಿಯಿಂದ ಬಹಳ ದೇಶಹಿತವಾಗುವದೆಂದು ತಿಳಿಯುತ್ತಾರೆ, ನನಗೇನು ಹಾಗೆ ತೋರುವದಿಲ್ಲ ಆದರೂ, ಅವರು ಅಧಿಕಾರಸ್ವೀಕಾರ ಮಾಡಿದ್ದು ನನಗೆ ಸಂತೋಷ ದೇಶಾಭಿಮಾನಿಗಳು ದಿವಾಣರಾದರೆ, ದೊಡ್ಡ ದೊಡ್ಡ ಅಧಿಕಾರಸ್ಥಾನಗಳನ್ನು ಪಡಕೊಂಡರೆ, ದೇಶಹಿತವಾಗುವದೆಂದು ನನ್ನ ತಿಳುವಳಿಕೆಯಿದೆ ಲೋಕಮಾನ್ಯರಷ್ಟು ತೀಕ್ಷ್ಣಬುದ್ಧಿಯ ಲೋಕನಾಯಕರನ್ನು ನಾನರಿಯೆ ಲೋ

ಪ್ರತಿಯೋಗಿ ಸಹಕಾರಿತೆಯ ಹೊಸ ಧೋರಣವು ತಿರಸ್ಕರಿಸಲ್ಪಟ್ಟಿತು.

ಲೋಕಮಾನ್ಯರೇ ಪ್ರತಿಯೋಗಿಸಹಕಾರದ ಧುರಂಧರರು ಎಂಬುದು ಬರಿಯಿಂದ ಸರಕಾರವನ್ನು ಸ್ವಾಧೀನಪಡಿಸಿಕೊಂಡು, ದೇಶ ಹಿತಸಾಧಿಸುವ ಕಲ್ಪನೆಯು ಅವರದಿತ್ತು. ಸ್ವರಾಜ್ಯ ಪಕ್ಷದವರು ಸರಕಾರದ ಅಂತಃಸ್ಥಿತಿಯ [illegible] ವರಷ್ಟೇ, ಹೊರತು, ಅವನ್ನು [illegible] ಉಪಯೋಗಿಸುವದಿಲ್ಲ. ಕಾಯಿದೆ ಬಂಗದ ನಿರ್ಣಯವನ್ನು ಪಂಡಿತ ಮೋತಿಲಾಲರು ತಮ್ಮ [illegible] ಮಾಡುವ ಅವಶ್ಯಕತೆ ಯೇನು? ಕಾಯಿದೆಭಂಗದ [illegible] ಕಾಯಿದೆಭಂಗಕ್ಕೆ [illegible] ರುಜರು [illegible] ಸಮಯ [illegible] ಗಿನ ಸಮಸ್ತ ಪಕ್ಷಗಳೂ [illegible] ಕಾಯಿದೆಭಂಗವನ್ನು ಕೈಕೊಳ್ಳುವದು [illegible] ರಾಷ್ಟ್ರೀಯ ಸಭೆಯಲ್ಲಿ ಇವನ್ನು ಸಮಸ್ತ ಪಕ್ಷ [illegible] ಲ್ಲ ಮುಸಲ್ಮಾನರೂ ದೊಡ್ಡ [illegible] ಇಲ್ಲಿ ಕಾಣುವದಿಲ್ಲ [illegible] ಆಗೇಕರು ರಾಷ್ಟ್ರೀಯ ಸಭೆಯ [illegible] ಪಕ್ಷವು ಮುಂದಿನ ಇಲೆಕ್ಷನ್ [illegible] ತ್ರವು ತನ್ನ ಪ್ರತಿಜ್ಞೆಗಳನ್ನು [illegible] ರು ಹೊಸ ಪ್ರತಿಜ್ಞೆ [illegible] ಸೂಚನೆಯ [illegible] ಇದಲ್ಲಿ [illegible] ರಾಷ್ಟ್ರೀಯ [illegible] ದು ಮುಂದಿನ [illegible] ದು ನಾನು [illegible] ಮಾಲವೀಯರವರು, ಸ್ವತಂತ್ರ [illegible] ಜಯಕರರವರು ಅವೆ ವಿಚಾರಗಳನ್ನು ಪ್ರದರ್ಶಿಸಿ ಠರಾವನ್ನು ಅನುಮೋದಿಸಿದರು. ಪ್ರತಿಯೋಗಿ ಸಹಕಾರದ ಪ್ರಚಾರ ಕಾರ್ಯ ನಡಿಸ ಬೇಕಾದ್ದು ಮುಂತಾದ ಕಾರ್ಯ [illegible] ದೆ ಕೌನ್ಸಿಲಿನಲ್ಲಿ ಸ್ವರಾಜ್ಯ ಪಕ್ಷದ ಧ್ಯೇಯದಿಂದ ಸಂಪಾದಿಸಿದ ಯಶಸ್ಸನ್ನು ತ್ಯಜಿಸಿದ [illegible] ಕೇಳಕರರವರೂ ಡಾ। ಮುಂಜೆಯವರೂ [illegible] ಹಿಂಬಾಲಿಸಿರುವದಾಗಿ ಚೆನ್ಸ್ವರ ಜಿಪ ಕರರವರು ಹೇಳಿದರು. ಪಂಡಿತ ಮೋತಿಲಾಲರ ಮೂಲ ಠರಾವನ್ನು ಅನುಮೋದಿಸುವಾಗ, ಟಿ. ಸೇನಗುಪ್ತರು ನುಡಿದದ್ದೇನಂದರೆ— ಪಂಡಿತ ಮೋತಿಲಾಲರ ಠರಾವು ಮಂಜೂರಾದರೆ ಇನ್ನೊಂದು ವರುಷದಲ್ಲಿ ಬಂಗಾಲವು ಕಾಯಿದೆಭಂಗಕ್ಕೆ ತಯಾರಾಗುವದು. ಚೆನ್ಸ್ವರ ಜಿಪ ಕರರವರು [illegible] ಸಹಕಾರಿತೆಯು ಸರಕಾರದ ಸಹಕಾರ ಪ್ರವೃತ್ತಿಯ ಆಧಾರದ ಮೇಲೆ ನಿರ್ಧಾರವಾದದ್ದು. ಚೆನ್ಸ್ವರ ಅಭ್ಯಂಕರರವರು ಲೋಕಮಾನ್ಯರ ತತ್ವಗಳ ವಿರುದ್ಧ ಪ್ರತಿಯೋಗಿ ಸಹಕಾರಿತೆಯು ಇದ್ದರೂ, ಪ್ರತಿಯೋಗಿ ಸಹಕಾರಿತೆಯ ಸಾಮುಕರಣ ಮಾಡಿ, ಸರಕಾರಿ ಅಧಿಕಾರವನ್ನು ಸಗಳನ್ನು ಪಡೆಯುವದು ಲೋಕಮಾನ್ಯರ ವಚನಗಳ ಸತ್ಯಾರ್ಥವೆಂದರು. ವಿ। ಪಿ। ಮಾಧವರಾವ ಪಂಡಿತ ಮಾಲವೀಯರವರಿಗೆ 'ಅಂತ್ಯವಿಡಿಸಿರಿ ಯಾ ತಿದ್ದಿರಿ,' ಎಂಬ ದೇಶಬಂಧುಗಳ ವಚನದ ಪಟ ತೋರಿಸಿ, ಮೂಲ ಠರಾವನ್ನು ಅನುಮೋದಿಸಿದರು. ಗಾಂಧಿ ರಾಜಕಾರಣಕ್ಕೆ ಮೋತಿಲಾಲರ ಠರಾವು ವಿರೋಧಕವೆಂದು ಹೇಳಿ ಠರಾವನ್ನು ವಿರೋಧಿಸಿದರು.

ಕಟ್ಟುಚ್ಛಲ ಮಾಡಬೇಡಿ!

ಬಳಿಕ, ಲಾಲಾ ಲಜಪತರಾಯರು ಮೂಲ ಠರಾವನ್ನು ಅನುಮೋದಿಸಿದರು. ಅವರು ನುಡಿದದ್ದೇನಂದರೆ —ನಾವೆಲ್ಲರೂ ಈಗ ಕಗ್ಗತ್ತಲೆಯಲ್ಲಿದ್ದೇವೆ. ಸಹಕಾರಿಗಳೂ ಗೆಲ್ಲಲಿಲ್ಲ, ಮುಂದೆ ಗೆಲ್ಲುವ ಆಶೆಯೂ ಇಲ್ಲ. ಅಸಹಯೋಗವನ್ನು ನಾವೇ ಸಮುಸ್ಯೆಗಳಲ್ಲಿ ಮುಳುಗಿಸಿರುವೆವು. ಅದನ್ನೀಗ ಪುನಃ ಮೇಲಕ್ಕೆತ್ತುವದು ಅಸಾಧ್ಯ. ಇಂಥ ಪ್ರಸಕ್ತಿಯಲ್ಲಿ ರಾಷ್ಟ್ರೋದ್ಧಾರದ ಮಾರ್ಗಶೋಧಕ್ಕಾಗಿ ನಾವು ಕೈಹಾಕುತ್ತಿದ್ದೇವೆ. ಅಸಹಯೋಗವನ್ನು ಬಿಡಬೇಕೆಂದು ನಾವು ಕೇಳಿಕೊಳ್ಳುತ್ತೇವೆ, ಆದರೆ, ನಮ್ಮ ಈ ಭ್ರಾಂತಿಕ ದೇಹಕ್ಕೆ ಆ ಸಾಮರ್ಥ್ಯವಿಂಗ ಇರುವದಿಲ್ಲ. ಆದರಿಂದ ನಮಗೆ ತಿಳಿಯದೆ, ನಾವು ಸಹಕಾರದ ಕಡೆಗೆ ಹೋಗುತ್ತಿದ್ದೇವೆ. ಕಟ್ಟುಚ್ಛಲ ಮಾಡಬೇಡಿ! ಸರಕಾರದೊಡನೆ ನಾವು ಸಹಕಾರ ಮಾಡಲಾರೆವು. ಯಾಕೆ? ಸಂಧಾನಕ್ಕಾಗಿ ನಾವು ಕೂತುಕೊಂಡರೆ ತನಗೆ ನಾವು ಸಂಪೂರ್ಣವಾಗಿ ಶರಣಾಗತರಾಗಬೇಕೆಂದು ಸರಕಾರವು ಹೇಳುತ್ತದೆ; ಸಂಪೂರ್ಣವಾಗಿ ಶರಣಾಗತರಾದರೆ, ನಮ್ಮಲ್ಲಿ ಚೈತನ್ಯವೇ ಇಲ್ಲವೆಂದು ಹೇಳಿ, ನಮಗೆ ತಿರಸ್ಕರಿಸುತ್ತದೆ. ಆದರಿಂದ ಸರಕಾರದ ಸೇವೆಯನ್ನು ಎಷ್ಟರಮಟ್ಟಿಗೆ ಅಂಗೀಕರಿಸಬೇಕೆಂಬುದನ್ನು ರಾಜಕೀಯ ಪಕ್ಷವು ಒಂದಿರಬೇಕೆಂದು ನನ್ನ ಹೇಳಿಕೆ. ಇದೆ. ಪಂಡಿತ ಮಾಲವೀಯ [illegible] ಮುಂತಾದವರಂಥ ದೇಶಾಭಿಮಾನಿಗಳು ಅಲ್ಪ ಕಾಲದ ವರೆಗೆ ಕೂಡ ಸರಕಾರ ಸೇವೆಯನ್ನು ನಡಿಸಲಾರರು. ಕಾಯಿದೆಭಂಗದ ಮಾ[illegible] ಎಳೆ ಪ್ರಾಯದವರು ಮನೋರಾಜ್ಯದಲ್ಲಿ ತೇಲಾಡುವರು. ಕಾಯಿದೆಭಂಗಕ್ಕೆ ನೀವು ಸಿದ್ಧರಿದ್ದಲ್ಲಿ ಲೋಕಸಭೆ [illegible] ಒತ್ತಟ್ಟಿಗೆ ಬಿಟ್ಟು, ನೀವು ಯಾಕೆ ಕಾಯಿದೆಭಂಗವನ್ನು ಕೈಕೊಳ್ಳಲಿಲ್ಲ? ಸರಿ ಬೀಳುವದು [illegible] ಆದರೆ, ಸೋತ್ತನ್ನು ಜಪ್ತು ಮಾಡಿಕೊ[illegible] ಸ್ಥಾನಗಳನ್ನು ಕಳಕೊಳ್ಳುವದೂ ಕಾ[illegible] ಕಾಯಿದೆಭಂಗವು ನಮ್ಮ ಕೊನೆಯ ಶಸ್ತ್ರವೆಂದು ಪಂಡಿತ ಮೋತಿಲಾಲರು ನಮೂದಿಸಿದ್ದು ಯ ಥೋಚಿತ [illegible] ಬಹಿಷ್ಕಾರ ಮಾಡುವದು ರಾಷ್ಟ್ರೀಯ [illegible] ಪಂಡಿತ ಮೋತೀಲಾಲರವರು [illegible] ತಮ್ಮ ಅಧಿಕಾರಸ್ಥಾನಗಳನ್ನು [illegible] ವದು ಉಚಿತವಲ್ಲ. ಒಲ್ಲಾ ಶ್ರೀಕೃಷ್ಣ [illegible] ರವರು ತಮ್ಮ ಉಪಸೂಚನೆಯನ್ನು ಹಿಂತೆಗೆದುಕೊಳ್ಳಬೇಕೆಂಬ ನನ್ನ ವಿಜ್ಞಾಪನೆ ಇದೆ. ಇತ್ಯಾದಿ ನುಡಿದ ಬಳಿಕ ಶ್ರೀ [illegible] ರವರು ಮೂಲ ಠರಾವನ್ನು, ಡಾ। ಮುಂಜೆಯವರು ಪಂಡಿತ ಮಾಲವೀಯರವರ ಉಪಸೂಚನೆಯನ್ನು ಅನುಮೋದಿಸಿದರು. ೬ ಘಂಟೆಯ ವರೆಗೆ ಚರ್ಚೆಯಾದ ಬಳಿಕ, ಪಂಡಿತ ಮೋತಿಲಾಲರವರು ಆಕ್ಷೇಪಗಳಿಗೆ ತಮ್ಮ ಉತ್ತರವನ್ನಿತ್ತರು: ಲೋಕಮಾನ್ಯರ ವಚನಗಳು ೧೯೧೯ನೇ ಇಸ್ವಿಯ ಪರಿಸ್ಥಿತಿಗೆ ಸಂಬಂಧಿಸಿದ್ದವೆಂತಲೂ, ಅವನ್ನು ಈಗ ಉಲ್ಲೇಖಿಸಿ, ಸಮರ್ಥಿಸುವದು ಹಾಸ್ಯಾಸ್ಪದವೆಂದೂ ಪಂಡಿತ ಮೋತಿಲಾಲರು ನುಡಿದು ಸ್ವರಾಜ್ಯ ಪಕ್ಷದವರಿಗೆ ಕೌನ್ಸಿಲುಗಳಲ್ಲಿ ಬಹುಮತ ದೊರೆತದರಿಂದ ಪ್ರತಿಜ್ಞಾಪಾಲನ ಮಾಡುವದು ಕಠಿಣವಾಯಿತೆಂದೂ ನುಡಿದರು. ಸ್ವರಾಜ್ಯ ಪಕ್ಷದವರು ರಾಷ್ಟ್ರೀಯ ಸಭೆಯವರಿಗ್ದು ಅವರಿಗೆ ರಾಷ್ಟ್ರೀಯ ಸಭೆಯನ್ನು ಸ್ವಾಧೀನಪಡಿಸುವದು ಉಚಿತವೆಂದರು. ಪಂಡಿತ ಮಾಲವೀಯರವರು ಕೇವಲ ಬಿಟ್ಟಾನೆ ಮಾಡಿದರು. ಕೆಲ ಹೊತ್ತಿನ ವರೆಗೆ ಪಂಡಿತ ಮೋತಿಲಾಲರವರಿಗೂ, ಪಂಡಿತ ಮಾಲವೀಯರವರಿಗೂ ಸಣ್ಣ ವಾಗ್ವಾದವಾಯಿತು. ಮುಂಜೆಯವರೂ, ಶ್ರೀಕೃಷ್ಣ ಲಲ್ಲಾರವರೂ ತಮ್ಮ ತಮ್ಮ ಉಪಸೂಚನೆಗಳನ್ನು ಹಿಂತೆಗೆದುಕೊಂಡರು. ಸ್ವಾಮಿ ಗೋವಿಂದಾನಂದರವರ ಉಪಸೂಚನೆಯೂ ಬಿದ್ದುಹೋಯಿತು; ಪಂಡಿತ ಮಾಲವೀಯರವರ ಉಪಸೂಚನೆಯೂ ಬಿದ್ದುಹೋಯಿತು. ಪಂಡಿತ ಮೋತಿಲಾಲರವರ ಮೂಲ ಠರಾವು ಪ್ರಚಂಡ ಬಹುಮತದಿಂದ ಮಂಜೂರಾಯಿತು.

ಬಳಿಕ, ಅಖಿಲ ಭಾರತೀಯ ಕಾಂಗ್ರೆಸ ಕಮಿಟಿ, ಕಾರ್ಯಕಾರಿ ಕಮಿಟಿ ಹಾಗು ರಾಷ್ಟ್ರೀಯ ಸಭೆಗಳಲ್ಲಿ ಹಿಂದುಸ್ಥಾನಿ ಭಾಷೆಯನ್ನು ಸಾಮಾನ್ಯವಾಗಿ ಉಪಯೋಗಿಸಬೇಕಾಗಿಯೂ, ಹಿಂದುಸ್ಥಾನಿ ಭಾಷೆಯ ಜ್ಞಾನವಿಲ್ಲದಿದ್ದಲ್ಲಿ ಇಂಗ್ಲಿಷನ್ನಾಗಲಿ, ದೇಶೀ ಭಾಷೆಯನ್ನಾಗಲಿ ಉಪಯೋಗಿಸಬಹುದೆಂದೂ, ಪ್ರಾಂತಿಕ ಕಾಂಗ್ರೆಸ ಕಮಿಟಿಗಳ ಕಾರ್ಯಕ್ರಮವನ್ನು ಪ್ರಾಂತಿಕ ಭಾಷೆಯಿಂದ ನಡಿಸಬೇಕೆಂದೂ, ಹಿಂದುಸ್ಥಾನಿ ಭಾಷೆಯಿಂದಲೂ ನಡಿಸಬಹುದೆಂದೂ ತೀರ್ಮಾನವು ಮಂಜೂರಾಯಿತು. ಪರದೇಶದೊಳಗಿನ ಹಿಂದೀ ದೇಶಬಾಂಧವರ ಹಿತಾಹಿತಗಳನ್ನು ಕಾಯುವದಕ್ಕೆ, ದೇಶದಲ್ಲಿ ಅವರ ಸ್ಥಿತಿ-ಗತಿಗಳನ್ನು ತಿಳಿಸಲಿಕ್ಕೆ, ಪರದೇಶ ಖಾತೆಯೊಂದು ನಿರ್ಮಾಣವಾಗಬೇಕಾಗಿಯೂ ತೀರ್ಮಾನವಾಯಿತು; ಎರಡೂ ಠರಾವುಗಳನ್ನು ಅಧ್ಯಕ್ಷರೇ ಸೂಚಿಸಿ ಮಂಜೂರು ಮಾಡಿಕೊಂಡರು. ಡಾ। ಅನ್ಸಾರಿ, ಶ್ರೀ ರಂಗಸ್ವಾಮಿ ಅಯ್ಯಂಗಾರ, ಪಂಡಿತ ಕೇ. ಸಂತಾನಂರವರು ಕಾರ್ಯದರ್ಶಿಗಳಾಗಿ ನೇಮಿಸಲ್ಪಟ್ಟರು. ಕೋಶಪಾಲಕರೂ, ಲೆಖ್ಖ-ಪರೀಕ್ಷಕರೂ ಮೊದಲಿನವರೇ ಇರಬೇಕೆಂದು ಗೊತ್ತಾಯಿತು. ಅಖಿಲ ಭಾರತೀಯ ಕಾಂಗ್ರೆಸ ಕಮಿಟಿಯ ರಿಪೋರ್ಟ ಹಾಗು ಜಮಾಖರ್ಚ ಪತ್ರಕಗಳು ಮಂಜೂರಾದವು. ಡಾ। ಮುರಾರಿಲಾಲರವರು ಪ್ರತಿನಿಧಿ-ಪ್ರೇಕ್ಷಕರ ಆಭಾರ ಮನ್ನಿಸಿದರು. ಶ್ರೀ ಶ್ರೀನಿವಾಸ ಅಯ್ಯಂಗಾರರವರು ಸ್ವಾಗತ ಕಮಿಟಿಯವರ ಉಪಕಾರ ಮನ್ನಿಸಿದರು. ಬಳಿಕ, ಅಧ್ಯಕ್ಷರು ಸಮಾರೋಪ ಮಾಡುವಾಗ ನುಡಿದದ್ದೇನಂದರೆ.— "ಈ ೩ ದಿನಗಳಲ್ಲಿ ಸ್ವಾತಂತ್ರ್ಯಕ್ಕೆ ಅಥವಾ ಸಾವಿಗೆ ನೀವು ತಯಾರಿರುವಿರಾಗಿ ಆಗಿಂದಾಗ ಪ್ರತಿಜ್ಞೆ ಮಾಡಿರುವಿರಿ. ಪ್ರತಿಜ್ಞೆಯನ್ನು ಪಾಲಿಸಬಿದ್ದರೆ, ನೀವು ಪುರುಷರಾಗುವಿರಿ, ನಾನು ಖರೇ ರಾಷ್ಟ್ರಧ್ವಜವನ್ನು ಮುಂದೆ ಒಯ್ಯುವವಳು. ಸಮಸ್ತ ಸಾಮರ್ಥ್ಯದಿಂದ ನನ್ನಂಥ ಹೆಂಗಸಿಗೆ ವಹಿಸಿದ ಸ್ವಾತಂತ್ರ್ಯಧ್ವಜವನ್ನು ನಾನು ಹೀಗೆಯೇ ನಡಿಸುವೆನು; ನಾನು ಅದನ್ನೆಂದೂ ಕೆಳಗಿಳಿಸಗೊಡಲಾರೆನೆಂದು ನಿಮಗೆ ನಿಶ್ಚಯಪೂರ್ವಕವಾಗಿ ಹೇಳುತ್ತೇನೆ" ಇಷ್ಟು ಹೇಳಿ, ಸೌ। ಸರೋಜಿನಿ ದೇವಿಯವರು ರಾಷ್ಟ್ರೀಯ ಸಭೆಯನ್ನು ವಿಸರ್ಜನ ಮಾಡಿದರು.

ಮಾರನೇ ದಿನ ಅಖಿಲ ಭಾರತೀಯ ಕಾಂಗ್ರೆಸ ಕಮಿಟಿಯು ಸೇರಿ, ಮಹಾತ್ಮಾ ಗಾಂಧಿ, ಮೌ। ಅಬುಲ್ ಕಲಮ ಆಝಾದ, ಪಂಡಿತ ಮೋತಿಲಾಲ ನೆಹರೂ, ಶ್ರೀ ಶ್ರೀನಿವಾಸ ಅಯ್ಯಂಗಾರ, ಲಾಲಾ ಲಜಪತರಾಯ, ಮೌ। ಮಹಮ್ಮದ ಅಲ್ಲಿ, ಬೆರಿಸ್ಟರ ಸೇನಗುಪ್ತ, ಅಭ್ಯಂಕರ, ಜಮುನಾದಾಸ ಮೆಹತಾರವರಿಗೆ ಕಾರ್ಯಕಾರಿ ಮಂಡಳದ ಸಭಾಸದರಾಗಿ ನೇಮಿಸಿತು. ಸ್ಪೇಶಲ್ ಕಮಿಟಿಯವರ ನೇಮಣೂಕಿಯಾಯಿತು.

धातु क्षीणता व कमजोरपणा यांसाठी

मदन मंजरी गोळ्या. (रजिस्टर्ड.)

या दिव्य गोळ्या रक्त व वीर्य सुधारून त्यांची चांगली वाढ करतात. पचन शक्ति सुधरून परसाकडे साफ होते. त्याचप्रमाणें प्रत्येक प्रकारची अशक्तता दूर होऊन शरीर तेजदार व बळवान होतें. कि. ४० गोळ्यांच्या डबीस रु १.

रमण विलासिनी गोळ्या. रात्री फक्त १ गोळी दुधाबरोबर खाल्यानें इच्छेप्रमाणें वीर्यस्तंभन होते. कि डबीस रु. १

नपुंसकत्वारी घृत. हा लेप पुरुषाच्या गुह्यभागावर लावला असता सर्व रोग नाश पाऊन खरें पुरुषत्व प्राप्त होतें. किं. डबीस रु. १.

कुमठा एजंट — माधव सोतप्पा शेणवी बेलेकेरी.

राजवैद्य नारायणजी केशवजी वैद्य:—१९३, काळबादेवी रोड मुंबई . २

ಸುಪ್ರಸಿದ್ಧವಾದದ್ದು! ಅನುಭವಸಿದ್ಧವಾದದ್ದು!!
ಮೂರು ದಿವಸಗಳಲ್ಲಿ ಗುಣಪಡಿಸದಿದ್ದರೆ
ಔಷಧಿಯ ಕ್ರಯ ವಾಪಸು
ವೀರ್ಯಶಕ್ತಿ, ರಕ್ತವೃದ್ಧಿ, ಧಾತುಪುಷ್ಟಿ, ಮನೋಲ್ಲಾಸ, ಪರಮಾನಂದ ಮೊದಲಾದ ಸುಖಜೀವನಕ್ಕೆ ಬೇಕಾದ ಆರೋಗ್ಯದಾಯಿನಿ
[ಆವಿಷ್ಕಾರ] ಅಗಸ್ತ್ಯ [ಸೂಚಿತ ಶಾಸ್ತ್ರ.
ಮನ್ಮಥಚಿಂತಾಮಣಿಲೇಹ
ರಿಜಿಸ್ಟರ ಆದದ್ದು
ಅಬಾಲವೃದ್ಧ ಸ್ತ್ರೀಪುರುಷರ ಅನೇಕ ರೋಗಗಳಲ್ಲಿ ಗುಣಕಾರಿಯಾದದ್ದು ಮೇಹಸಿರಾವಿದ್ದವರಿಗೂ, ನಿದ್ರೆ ಇಲ್ಲದವರಿಗೂ, ಸ್ವಪ್ನೇಂದ್ರಿಯವಾದವ ಯುವಕರಿಗೂ ಪ್ಲಾನಿ ಮುಪ್ಪಾನಿಗಳಿಗೂ ಉಪಯೋಗವುಳ್ಳ ಪರಮಾನಂದ ಔಷಧಿ
ಸೇರು ನಾಲ್ವತ್ತೊಂದು ದಿವಸಕ್ಕೆ ಸೇವಿಸಬಹುದು
1 ಸೇರು ಡಬ್ಬಿ ಒಂದಕ್ಕೆ 3—0—0
½ ಸೇರು ಡಬ್ಬಿ ಒಂದಕ್ಕೆ 1—9—0
ವ್ಹಿ. ಪಿ. ಖರ್ಚು ಪ್ರತ್ಯೇಕ. ವಿಶೇಷ ಮಾಹಿತಿ ಬರೆಕೊಳ್ಳಿರಿ.
ಪತ್ತೆ- ದೇವಣ್ಣ ನಾರಾಯಣ ಸೇಟ್,
ಸರಾಫ್, ಗೋರಿಕಾಡು, ಮಂಗಳೂರು,(ದ. ಕ)

ದರ ಕಡಿಮೆ ಮಾಡಿರುವೆವು! ಸುಸಂಧಿ!!
ನಮ್ಮ
ಸುಪ್ರಸಿದ್ಧ
ಇಂಗ್ಲಿಷ ಮೋಡ
ಸಾಯಕಲ
ವೆಲಿಂಗ್ಟನ
ಸಾಯಕಲ ಮತ್ತು ಮೋಟಾರ ಕಂಪನಿ, ಹೊರ್ನಬೀ ರೋಡ, ಮುಂಬಯಿ ನಂಬರ ೧.
ಅರ್ಸೆನಲ ರೋಡ, ಪುಣೆ.

ರೋಗದಿಂದ ಪರಳ ಬೇರಿ!
ನಮ್ಮಲ್ಲಿ ದಂತು ಇಲಾಜು, ಪಿತ್ತ ಇಲಾಜು ಎಲ್ಲ ತರದ ಜ್ವರ, ಜ್ವರಗಡ್ಡೆ, ಛಳಿಜ್ವರ, ಕಾಮಿಲೆ ದಮ್ಮು, ಕೆಮ್ಮು, ಕಫ, ಅಗ್ನಿಮಾಂದ್ಯ, ಶೂಲಬದ್ಧಕೋಷ್ಠ, ಮೂಳವ್ಯಾಧಿ, ನರ, ವಾತ, ಅತಿಸಾರ, ಪ್ರದರ, ಗರ್ಭಾಶಯದ ಎಲ್ಲ ರೋಗ, ಪ್ರಮೇಹ, ಉಪದಂಶ (ಗರ್ಮಿ) ಧಾಲಗ್ರಹ, ಕುಷ್ಠ, ಗಜಕರ್ಣಗಳಿಗೆ ಖಂಡಿತ ಗುಣ ಬರುವ ಜರ್ಮನ, ಅಮೇರಿಕನ, ಫ್ರೆಂಚ ಇಂಗ್ಲಿಷ ಪ್ರತ್ಯು ಮಿಶಿ ಪೇಟಂಟ ಔಷಧಗಳು ಬಹಳ ಅಗ್ಗವಾಗಿ ಸಿಗುವವು.
ಇದಲ್ಲದೆ ಎಲ್ಲ ತರದ ಸ್ಟೇಶನರಿ, ಪರಫ್ಯೂಮರಿ ಸ್ನಾನದ ಸಾಬೂನು, ಹಲ್ಲಿನ ಪ್ರಶ್, ಸುವಾಸಿತ ಎಣ್ಣೆ, ಬೇರಿಸ ಮೊದಲಾದ ಬಂತಿಗಳು, ಸವಲತಿನ ದರದಿಂದ ಸಿಗುವವು. ನಮ್ಮಲ್ಲಿಲ್ಲದ ಜಿನಸಿ ಅವಶ್ಯವಿರುವ ಸಾಮಾನು ಬೇರೆ ದೇಶದಿಂದ ತರಿಸಿಕೊಡುತ್ತೇವೆ.
ಎಸ್ ಎಲ್ ಧಾರಕಪ್ಪ ಮತ್ತು ಬ್ರದರ,
ಸಿರಸಿ.

"ಲೋಕರಹಸ್ಯ"
ಈ ಕನ್ನಡ ಮಾಸ ಪತ್ರಿಕೆಯಲ್ಲಿ ವ್ಯಾಪಾರಸ್ಥರಿಗೆ ವ್ಯಾಪಾರದ ವಿಚಾರ, ರೈತರಿಗೆ ಕೃಷಿಯ ಅಭ್ಯುದಯ ಮಾರ್ಗಗಳು, ಸ್ತ್ರೀಯರಿಗೆ ಗೃಹಕೃತ್ಯದ ವಿಚಾರಗಳು, ಬಡವರಿಗೆ ಹಣ ಸಂಪಾದನೆಯ ಸುಲಭ ಮಾರ್ಗಗಳು, ರಸಿಕರಿಗೆ ವಿನೋದ ವಿಚಾರಗಳು, ಪ್ರತಿಯೊಬ್ಬರಿಗೂ ಬೇಕಾದ ರಹಸ್ಯ ವಿಚಾರಗಳು, ವೈದ್ಯ ಭಾಗಗಳು ಜ್ಯೋತಿಷ್ಯ, ಕಾನೂನು, ವೇದಾಂತ, ಕಾದಂಬರಿಗಳು, ಗೋಪಾಲನೆ, ಕೈಗಾರಿಕೆಗಳು, ವೃತ್ತಾಂತಗಳೇ ಮುಂತಾದ ವಿಷಯಗಳೆಲ್ಲವೂ ಪ್ರಕಟವಾಗುತ್ತವೆ. ಪತ್ರಿಕೆಯು ಪ್ರತಿಯೊಂದು ಪುಟದಲ್ಲೂ ಅಮೂಲ್ಯವಾದ ಗೂಢ ವಿಚಾರಗಳಿಂದ ತುಳುಕುತ್ತಿವೆ. ಪ್ರತಿ ಮಾಸದಲ್ಲೂ ೬೦ ಪುಟಗಳಿಗೆ ಕಡಿಮೆಯಿಲ್ಲದೆ ವಿಷಯಗಳಿರುತ್ತವೆ.
ವಾರ್ಷಿಕ ಚಂದಾ ಅಂಚೆ ವೆಚ್ಚ ಸೇರಿ
ರೂ. ೧—೦—೦. ಮಾತ್ರ.
ಮಾದರಿ ಸಂಚಿಕೆಗೆ ಕ್ರಯ ೦—೫—೦
ಮಾದರಿ ಸಂಚಿಕೆಗಳನ್ನು ಪುಕ್ಕಟೆಯಾಗಿ ಕೊಡುವದಿಲ್ಲ.
ಹಾಕಿದ ಹಣವನ್ನು ನಷ್ಟ ಮಾಡದೆ, ಹಾಕಿದ ರೂಪಾಯಿ ಅಷ್ಟಕ್ಕಿಷ್ಟು ಹಾಗೆಯೇ ತಿಂಗಳಿಗೆ ೧೦೦ ರೂ.ಗಿಂತ ಹೆಚ್ಚಾಗಿಯೇ ಹಣ ಸಂಪಾದಿಸ ಮಾಡುವ ರೀತಿಯನ್ನು ತಿಳಿಯುವ ಬಗ್ಗೆ ಒಂದಾಣೆ ಸ್ಟಾಂಪು ಸಮೇತ ಕೆಳಗಿನ ವಿಳಾಸಕ್ಕೆ ಬರೆಯಿರಿ.
ಮೆನೇಜರ್,
"ಲೋಕರಹಸ್ಯ"
ವೀರರಾಜೇಂದ್ರ, ಪೇಟೆ, ಕೊಡಗು

"ಚಾಟಾನೂಗಾ" ಕಬ್ಬಿನ ಗಾಣ!
ಜಗತ್ತಿನಲ್ಲಿ ಸರ್ವೋತ್ಕೃಷ್ಟವೆಂದೇ ಇದು ಇಷ್ಟು ಪ್ರಖ್ಯಾತಿ ಹೊಂದಿತು!


ನಂ ೧೨, ರೂ. ೧೪೫
,, ೧೩, ರೂ ೧೮೫
,, ೩೫, ರೂ ೧೫೦.
,, ೩೬, ರೂ ೩೧೮.
ನ್ಯಾಲು ಮುಂಬಯು ರೇಲ್ವೆ ಸ್ಟೇಶನ್ನಿನ ವರೆಗೆ ಕಂಡು ಕೊಡಲ್ಪಡುವವು
ಇವರ ರೋಲುಗಳು ಶುದ್ಧ ಕಬ್ಬಿಣದಿಂದ ಮಾಡಿದ್ದಿರುತ್ತವೆ. ಕಬ್ಬಿನೊಳಗಿನ ಹನಿ ಹನಿ ರಸವನ್ನು ಕೂಡ ಹಿಂಡಿ ತೆಗೆಯುವ ವ್ಯವಸ್ಥೆ ಮಾಡಬಹುದಿದೆ. ಗಾಣದ ಎರಡೂ ಬದಿಗಳ ಯಾವದೇ ಬದಿಯಿಂದ ಕಬ್ಬು ಕೊಡಬಹುದಿದೆ
ಆರ್ಡರಿನ ಸಂಗಡ ½ ಹಣವನ್ನು ಮುಂಗಡವಾಗಿ ಕಳಿಸಬೇಕು.
ಕ್ಯಾಟಲಾಗು "ಡಬ್ಲ್ಯು ೧೧೨" ಪುಕ್ಕಟೆ!
ಮೆಕ್‌ಬೆಥ ಬ್ರದರ್ಸ ಮತ್ತು ಕಂಪನಿ, ಲಿಮಿಟೆಡ್.
ಕೋಡಾಕ ಹೌಸ, ಹೊರ್ನಬಿ ರೋಡ ಮುಂಬಯಿ.


ವಿಜಂಟರು ಬೇಕು! ಏಜಂಟರು ಬೇಕು!!
ನಮ್ಮಲ್ಲಿ
ಅತಿ ಮನೋಹರವಾದ
ತೀರ ಕಟ್ಟಿಗೆಯ
ದೇವರ ಮಂಟಪಗಳೂ,
ಹಂಗಸರ ಸೌಭಾಗ್ಯವತಿ ಪೆಟ್ಟಿಗೆಗಳೂ, ಡಿಕ್ಕನೇರಿ ಪೆಟ್ಟಿಗೆಗಳೂ, ಆಫೀಸ ಬಾಕ್ಸಗಳೂ, ಡ್ರೆಸಿಂಗ ಟೇಬಲಗಳೂ ಮುಂತಾದ ಹಲವಾರು ತರದ ಮನೇ ಸಾಮಾನು ಸಿಗುತ್ತವೆ.
ನಮ್ಮ ವಿಳಾಸ.—
ದಿ ನೊರ್ಥ ಕೆನರಾ ಟ್ರೇಡಿಂಗ ಕಂಪನಿ,
ಕಾಜಿ ಭುವನ,
ಕಾರವಾರ.

ಸುಗಂಧಿ ತಾಂಬೂಲೀ ಜರ್ದಾ

ಉತ್ತಮ ತಂಬಾಕ ತಕ್ಕೊಂಡು ಅದಕ್ಕೆ ತಾಂಬೂಲ ಪದಾರ್ಥಗಳ ಮತ್ತು ಮುಖರಂಜನ ಔಷಧೀ ವನಸ್ಪತಿಗಳ ಅರ್ಕದ ಬಗಣೀಕೊಟ್ಟ ಈ ತಾಂಬೂಲೀ ಜರ್ದಾ ತಯಾರ ಮಾಡಿರ್ತದೆ ಇದು ತಿನ್ನಲಿಕ್ಕೆ ಕಡಕ ಇದ್ದು ಸುವಾಸಿಕವಿರ್ತದೆ ಇದರ ಸೇವನೆಯಿಂದ ಬಾಯಿಯ ಹೊಲಸು ಹಲ್ಲ ನೋವು ... ಹುಳ ಇವು ನಾಶವಾಗಿ ಹಲ್ಲುಗಳು ಬಹಳ ಗಟ್ಟಿಯಾಗುತ್ತವೆ ಇದರ ... ವನೆಯಿಂದ ದ... ಕಫ ಮುಂತಾದ ... ರೋಗ ... ಂಟಾಗ ... ಏನೂ ಇಲ್ಲ ... ಕರು ... ಅನುಭವ ... ಗ ಪ್ರತಿಗೆ ... ರೂ ೩೦೦ ... ಕ್ಕೆ ರೂ ... ರೂ ೧೫೦೦ ... ಪ್ರತ್ಯೇಕ ... ವಿಶೇಷ ... ಳಗಿನ ಪತ್ತೆಯು ... ದರೆ ಜರೂರ ಉತ್ತರ ...

ಪತ್ತೆ ಎಸ್. ಬಿ. ಕೆ...

ಬೀಡಿ ಮತ್ತು ...

ಮು ಪೋ ...

ಸುಲಭ ಕ್ರಯ! ಸುಲಭ ಕ್ರಯ!

ಡಾಕ್ಟರ ಜೀ ಟೀ. ಯವರ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪೀನಸಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಹೇಳಲ್ಪಟ್ಟ ೯೩ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಬಂದು ಚಿಟಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಜನರು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ವಖದರಿ ... ಪ್ರಕ್ಯಾಟ ಕಳಿಂಲಾದೀಕು

... ಬುಡ್ಡಿ ಒಂದಕ್ಕೆ ಕ್ರಯ ರೂ ೦-೪-೦ ವ್ಹಿ. ಪಿ ೪ ಆಣೆ ಡಜನ್ ೧ ಕ್ಕೆ ರೂ ೩-೮-೦. ವ್ಹಿ ಪಿ. ೦-೮-೦ ... ಮಾಡಿ ನಿಮ್ಮ ಹೆಸರನ್ನೂ ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ

... ಬಸವ ಅಂಡ್ ಕಂಪನಿ ಲಿಮಿಟೆಡ್ ಪೋ. ಬಾ. ೫೧೦, ಪೋರ್ಕಟೌನ, ಮದರಾಸ

ಕಿರ್ಲೋಸ್ಕರ ಕಬ್ಬಿನ ಗಾಣಗಳು.

(ಎರಡು ಎತ್ತುಗಳಿಂದ ನಾಲ್ಕು ಎತ್ತುಗಳ ವರೆಗೆ)

ನಮ್ಮ ಕಾರ್ಖಾನೆಯಲ್ಲಿ ತಯಾರಾಗುವ

(೧) ಕಿರ್ಲೋಸ್ಕರ ನಂ ೫, (೨) ಕಿಸಾನ, (೩) ಕಮಾಲ ಗಾಣಗಳಲ್ಲಿ

ಕಮಾಲ ಗಾಣ

ಇದು ಎಲ್ಲಕ್ಕೂ ಮೇಲಾದದ್ದಿರುತ್ತದೆ ಇದು ತೀರ ಹೊಸದು ೧೦೦ಕ್ಕೆ ೭೨ ರಂತೆ ರಸ ... ಒಂದು ತಾಸಿಗೆ ೧೫೦೦ ಪೌಂಡ ಕಬ್ಬನ್ನು ಅಡುತ್ತದೆ ಬಿಡಿ ಭಾಗಗಳು ಕಾ... ಲ್ಲಿ ಬೇಡಿದಾಗ ದೊರೆಯುತ್ತವೆ ಹೆಚ್ಚಿನ ಸಂಗತಿಯ ಬಗ್ಗೆ ಇಂದೇ ತಿ... ಕೊಳ್ಳಿ

ಕಿರ್ಲೋಸ್ಕರ ವಾರ್ತೆ

ಇದೊಂದು ಕನ್ನಡ ಮಾಸಪತ್ರಿಕೆಯು ಕರ್ನಾಟಕ ತರುಣರ ಉನ್ನತಿಯೇ ಇದರ ಧ್ಯೇಯವು ವಾರ್ಷಿಕ ಚಂದಾ ಕೇವಲ ಒಂದೇ ೧ ರೂ ಮಾದರಿ ಸಂಚಿಕೆಯು ಪುಕ್ಕಟವಾಗಿ ದೊರೆಯುವದು

ಕಿರ್ಲೋಸ್ಕರ ಬಂಧು ಲಿಮಿಟೆಡ್; { ಕಿರ್ಲೋಸ್ಕರವಾಡಿ ಜಿಲ್ಲಾ ಸಾತಾರಾ

ವಿಶೇಷ] ಅನುಭವಸಿದ್ಧ [

ವನೌಷಧಿಮೂಲಿಕೆಗಳು

ವಾಯು ಉದ್ಮನ (ನಿಮೋನಿಯಾ) ಮಂತ್ರಿ ಪ್ಲಾಂತಿ (ಕಾಲರಾ) ಅರ್ಧಾಂಗವಾಯು ... ಹುಚ್ಚುನಾಯಿ ನರಿ ಕಡತ ... ಹೊಟ್ಟೆಯಲ್ಲಿ ಕ್ರಿಮಿ ವಿಷಬಾಧೆ (ಕೈವ ಗು ...) ವಗೈರೆ ರೋಗಗಳಿಗೆ ಒಂದು ಒಂದು ಮೂಲಿಕೆಯಿಂದ ಮಾತ್ರೆಯಾಗಿ ತೀವ್ರ ಗುಣಬರುವದು ಇವು ಬಹುಕಾಲದಿಂದ ಅನುಭವ ತಕ್ಕೊಂಡ ... ಪ್ರತಿನಿತ್ಯ ಉಕಪೆಗೆ ಬರುತ್ತಲಿದ್ದು ... ಔಷಧಿಗಳ ರಾಜಾ ಮೂಲಿಕೆಗಳು ... ಅನುಭವ ತಕ್ಕೊಂಡು ... ಔಷಧಿಗಳ ಪ್ರಾಪಕ ... ಸೂಚಿಸಿದರೆ ಕಳುಹುವೆವು

ವಾಯು ಉದ್ಮನದ ಬಗ್ಗೆ ಔಷಧಿ ಮೂಲಿಕೆ ತೊಲೆ ೧ ಕ್ಕೆ ೦-೩-೦

ಕಾಲರಾದ ಬಗ್ಗೆ	೦-೩-೦
ಅರ್ಧಾಂಗ ವಾಯುವಿನ ಬಗ್ಗೆ	
೧ ಇಸವಿಗೆ ... ಷ್ಟು ... ರು	... ೧

ಪ್ರಕೃತಿ ಕಳಿಸಬೇಕು

ನಾಯಿ ಕಡತದ ಬಗ್ಗೆ	೦-೪-೦
ಸರ್ಪಸುತ್ತಿನ ಬಗ್ಗೆ	೦-೩-೦

ಹೊಟ್ಟೆಯಲ್ಲಿ ಕ್ರಿಮಿ ಔಷಧಿ ಬಗ್ಗೆ ತೊಲೆ ೧೦ ಕ್ಕೆ ೦-೮-೦

ರಕ್ತಶುದ್ಧಿ ಮಲಶೋಧನೆ ಬಗ್ಗೆ ಮೂಲಿಕೆ ರಾತ್ಲ ೧ ಕ್ಕೆ ೧-೦-೦

ಮೋರಾವಳಾ (ನೆಲ್ಲಿಕಾಯಿ ಮುರಬ್ಬ) ರಾತ್ಲ ೧ ಕ್ಕೆ ೧-೦-೦

ರಾತುಗಟ್ಲೆ ಯಾ ಅದಕ್ಕೂ ಹೆಚ್ಚು ತರಿಸಿಕೊಳುವವರಿಗೆ ಕಡಿಮೆ ದರದಿಂದ ಕಳಿಸಲ್ಪಡುವದು ಟಪಾಲ ಖರ್ಚು ಪ್ರತ್ಯೇಕ ವಿಶೇಷ ಮಾಹಿತಿ ಪತ್ರದ್ವಾರಾ ಅನುಪಾನಪತ್ರ ಔಷಧೀ ಸಂಗಡ

ಎಸ್. ಜಿ. ಹೆಗಡೆ, ಮಾಸ್ತೇರಿ,

ಪೋಸ್ಟ—ಬಂಕಿಕೋಡ್ಲ ಜಿ ಉತ್ತರ ಕಾನಡಾ

ಅಮೃತಾಂಜನ.

ಇದರ ಉಪಯೋಗದಿಂದ, ವಾತವೇದನೆ, ಉಳುಕು ಇತ್ಯಾದಿ ವ್ಯಾಧಿಗಳಮೇಲೆ, ರಾಮಬಾಣದಂತಾಗಿರುವದು. ಕಳೆದ ೩೫ ವರ್ಷಗಳಿಂದ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗುತ್ತದೆ ಲಕ್ಷಗಟ್ಟಲೆ ಕುಟುಂಬಗಳು ಅಮೃತಾಂಜನವನ್ನು ಉಪಯೋಗಿಸುತ್ತಿರುವವು ಆದದರಿಂದ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಬೀಗು, ಸಂಧಿವಾತ ಮೊದಲಾದ ಎಷ್ಟೋ ವ್ಯಾಧಿಗಳ ಮೇಲೆ ಇದು ಗುಣಕಾರಿಯೆಂದು ಅರಿಯತಕ್ಕವರು ಇದರ ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು ಕಿಮ್ಮತ್ತು ೧೦ ಆಣೆ ವ್ಹಿ ಪಿ ಖರ್ಚು ಬೇರೆ

ಅಮೃತಾಂಜನ ಡಿಪೊ, ಫೋರ್ಟ, ಮುಂಬಯಿ.

Printed and Published by Krishna ao Keshav Shenvi (Editor) at his Star of Kanara Press Kumta.

Reg. No. B 1270 — Monday, January 11th, 1928.

ವರ್ಷ ೧೦. — ಸಂಚಿಕೆ ೧೫.

ಕಾನಡಾವೃತ್ತ.

THE KANARA NEWS.

ಪತ್ರದ ದರಗಳು.
ಕುಟೆಯಲ್ಲಿ ಊರಾವು ರೂಪಾಯಿ 2-4-0.
ಅಂಚೆಯಿಂದ ರೂ 3-0-0
ಬಿ ಅಂಚೆವೆಚ್ಚ ಸೇರಿ ರೂಪಾಯಿ 3-2-0.
ಬಿ ಸಂಚಿಕೆಗೆ 0-1-0.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಜಾಹಿರಾತುಗಳ ದರ
ಕನ್ನಡ, ಇಂಗ್ಲಿಷ ಮ್ಯಾಟ್ರಿಕ್ (೧೫ ಏಜ್ ಅಕ್ಷರ) ಆ ಸಾಲುಗಳವರೆಗೆ ರೂ 1-0- ಆ ಪಂಕ್ತಿ ಪ್ರತಿಸಾರಿಗೆ 0-2-0. ತಿಂಗಳ ಸಾಲು ಎಷ್ಟು ಹೊತ್ತಿರುವವರೋ ಆ ಮಾಸದಿಂದ ಆಧ್ಯಸಾಲುಗಳು ಹಾಕಿ ಯಲ್ಪಡುವವು
ಜಾಹಿರಾತುಗಳ ಬಗ್ಗೆ ಪತ್ರವ್ಯವಹಾರ ಯಾ ಸಮಕ್ಷ ತಿಳಿಸಲ್ಪಡುವದು

(ಕುಮಟಾ—ಕಾನಡಾವೃತ್ತ, ಸೋಮವಾರ, ತಾರೀಖು ೧೧ ಮಾಹೆ ಜನವರಿ ಸನ್ ೧೯೨೮ ನೇ ಇಸವಿ.)

हिंदुस्थानातील रहिवाशांस ज्याप्रमाणे दुस्थानची हवा त्याप्रमाणेंच हें औषध हिं स्थान.तील लोकास ज्यास्त फायदेशीर आहे

द्राक्षासव- पौष्टिक रसायनी किंमत २ रुपये,

रामबाण गैरगुणें
सर्दि घालविणारें,
भूक वाढविणारें,
श्वांच्यास साफ करणारें
झोंप आणणारें,
शक्ति देणारें,
तेजस्वीपणा आणणारें

पिण्यास रुचिकर
कृपाटवाग मागवा,
बेंगॉल फार्मास्युटिकल वर्क्स लिमिटेड,
मुंबई नं. १२
एजट— मेसर्स पंडित आणि कंपनी,
तीर्थहळ्ळी

Notice.

We hereby beg to inform all our esteemed customers that Padmanabh Gopal Kamat of ...kola is our Canvassing Agent ... the District of North Kanara ... that none of our other Agents ... given power to book orders ... the said area. Further we ... to add that our prices are ... and no discounts are allowed ...hem.

P. P. KUMARAN,
Proprietor,
The West Coast Weaving Establishment
CANNANORE

ಬೇಕಾದ ಚಿನ್ನಾಭರಣಗಳು ನಮಗೆ ಆರ್ಡರ
ಕೊಟ್ಟಲ್ಲಿ ಯೋಗ್ಯ ಮುದ್ದತ್ತಿನಲ್ಲಿ ಕೊಡುವೆವು.

R. S. KASARGOD. B.A.

Jewellers, KUMTA.

ಆರ್. ಎಸ್. ಕಾಸರಗೋಡ, ಬಿ ಎ,
ರತ್ನಾಭರಣ ವ್ಯಾಪಾರಿ, ಕುಮಟಾ.

'ಕಾನಡಾವೃತ್ತ'ದ ಚಂದಾದಾರರಿಗೆ
ಬರೇ ಒಂದು ತಿಂಗಳ ತನಕ.

ಎಸ್ಸ ನೇವರ್ ರೆಗ್ಯುಲೇಟರ ಪೊಲ ಲೆಸ್ಟರ (ಗೋಡೆಯ ಗಡಿಯಾರ) ... ಬಂಗಾರದ ಕೈ ಗಡಿಯಾರ ... ರೂ ೧೧ ... ವರ್ಷದ ಗ್ಯಾರಂಟಿ!

ಪ್ರತ್ಯೇಕವಾಗಿ ಬೇಕಾದ್ದಲ್ಲಿ, ಗೋಡೆ ಗಡಿಯಾರಕ್ಕೆ ರೂ ೫ ಕೈ ಗಡಿಯಾರಕ್ಕೆ ರೂ ೬

ತ್ವರೆ ಮಾಡಿ ಈ ದರಗಿನ ವಿಳಾಸಕ್ಕೆ ಬರಕೊಳ್ಳಿರಿ!



CAPTAIN WATCH CO., P. B. 265, MADRAS.

ಅನುಮಾನವೇಕೆ——? — ಓದಿ ಖಾತ್ರಿಮಾಡಿಕೊಳ್ಳಿ!

ಅಭಿಪ್ರಾಯಗಳು

ನಿಮ್ಮ ಟಿಕ್ ಟಾಕ್ ಗಡಿಯಾರ ... ಅತಿ ಅಗ್ಗವಾಗಿರುವದು ... ನನ್ನ ಮಿತ್ರರೊಬ್ಬರಿಗೆ ... ನನಗೆ ... ಇದ್ದು.

ನಿಮ್ಮ ಟಿಕ್ ಟಾಕ್ ಗಡಿಯಾರದ ವಿಷಯ ... ಹಾಗು ... ವೆನು. ... ನಡೆಯುತ್ತಿದೆ.

ಖಾಸ್ಸಾ ಮೋಹನ ಮುಖರ್ಜಿ,
ಡಾ ಮುನ್ಸಿಪಾಲಿಟಿ, ರಾಜಪುರ



ನಿಮ್ಮ 'ಟಿಕ್ ಟಾಕ್' ಗಡಿಯಾರವನ್ನು ನೋಡಿ ಬಹಳ ಸಂತೋಷವಾಯಿತು ... ಗಡಿಯಾರಗಳನ್ನು ... ಕಳಿಸು ವೆನು

ರಘುನಂದನ ಪ್ರಸಾದ, ಅಬಾ ಜೈಲರ ಬಸ್ಸಾರ.

ನಿಮ್ಮ ಟಿಕ್ ಟಾಕ್ ಗಡಿಯಾರದಿಂದ ನಮಗೆ ಬಹಳೇ ಸಮಾಧಾನವಾಗಿದೆ. ... ಗಡಿಯಾರಗಳ ಬಗ್ಗೆ ... ಕಳಿಸಿಕೊಡ ಬೇಕಾಗಿ ... ಸಿಕ್ಕಿದವು.

ಬಸವಿ ... ಕಂಪನಿ, ...

ಬೆಲೆ ಬರೇ ಮೂರು ರೂಪಾಯಿ. ವಿಲಂಬವಿಲ್ಲದೆ ತರಿಸಿಕೊಳ್ಳಿ:
ಪತ್ತೆ - PETER WATCH CO., P B 87 MADRAS

ಗಾಂಧೀಜಯಂತಿಯಿಂದ ೪ನೇ ವರ್ಷ ಪ್ರಾರಂಭ

ಸಚಿತ್ರ ಜಯಕರ್ನಾಟಕ [ಮಾಸಪತ್ರಿಕೆ]

ಸಂಪಾದಕ— ಆಲೂರ ವೆಂಕಟರಾಯ ರು

ಅದರಲ್ಲಿ ವಾಙ್ಮಯಾತ್ಮಕ ಸಾಹಿತ್ಯ, ಧಾರ್ಮಿಕ ಸಾಮಾಜಿಕ ಐತಿಹಾಸಿಕ ಆರ್ಥಿಕ ಇತ್ಯಾದಿ ವಿಷಯಗಳು ಬರುವವು. ಪ್ರಪಂಚ ಪರಿಚಯ, [illegible] ಕಾಲಕಾರಿಗಳು [illegible] ಪ್ರತಿ ಸಂಚಿಕೆಯಲ್ಲಿ ಸುಂದರ ಚಿತ್ರಗಳೂ ಬರುತ್ತವೆ. ವಾರ್ಷಿಕ [illegible] ಆಕಾರದ ೩೦ ಪುಟಗಳು ವರ್ಗಣಿ. ರೂ ೫-೮-೦

ಕಾರ್ಯನಿರ್ವಾಹಕ ಜಯ ಕರ್ನಾಟಕ, ಧಾರವಾಡ.

ಎಲ್ಲಾ ನೋವುಗಳಿಗೆ ದಿವ್ಯೌಷಧ

ವಾತಹಾರಿ ತೈಲ.

ಕ್ರಯ. ೫ ತೊಲೆ ಬಾಟಲಿ ೧ಕ್ಕೆ ೦—೧೦— [illegible] ಸುವಾಸಿಕ [illegible] ೧ಕ್ಕೆ ೧—೮— [illegible] ಬಾಟ್ಲಿ ೧ಕ್ಕೆ ೦— [illegible] ಧಾತು ಪೌಷ್ಟಿಕ, ಶಕ್ತಿವರ್ಧಕ [illegible] ಯ ಡಬ್ಬಿ ೧ಕ್ಕೆ ೧—೪— [illegible] ಗಳು [illegible] ೧ಕ್ಕೆ ೩—೦ [illegible] ಸುವಾಸಿಕ [illegible] ಯ ಬಾಟ್ಲಿ ೧ಕ್ಕೆ ೦—೧— [illegible] ೧ಕ್ಕೆ ೦—೮— [illegible] ಎಲ್ಲಾ ತರದ [illegible] ದುತಿಗೆ ಸಿಗುವವು [illegible]

ಕೆರೆ(ಕರ [illegible]

[illegible], ಕುಮಟಾ

ರಾಗದ ಪೆಟ್ಟಿಗೆಗಳು.

ತಬಲೆ ಜೋಡಿ ಇತ್ಯಾದಿ ಗಾಯನ ಸಾಮಾನು.

೧ ರಾಗದ ಕೈಪೆಟ್ಟಿಗೆ ಕಿಂ ೩೦, ೪೦, ೬೦, ೭೫, ೧೦೦.

೨ „ ಕಾಲು ಪೆಟ್ಟಿಗೆ ಕಿಂ ೩೫, ೭೫, ೧೨೦, ೧೪೦.

೩. ತಬಲೆ ಜೋಡಿ ಕಿಂ. ೧೬, ೧೮, ೨೦, ೩೫.

೪. ಹಾರ್ಮೋನಿಯಮ ಗೈಡ (ಮರಾಠಿ) ಕಿಂ. ೧॥, ತಬಲೆ ಗೈಡ ಕಿಂ ೧॥ ೪

ವಿಶೇಷ ಮಾಹಿತಿಗೆ ನಮ್ಮ ಮರಾಠಿ ಕ್ಯಾಟಲಾಗ ಪುಕ್ಕಟೆ ಕೊಡುವೆವು.

ಪತ್ರವ್ಯವಹಾರ ಮರಾಠಿಯಿಂದ ಇಲ್ಲವೆ ಇಂಗ್ರಜಿಯಿಂದ ಮಾಡಬೇಕು.

ಪತ್ತೆ:- **ಗೋಪಾಳ ಸಖಾರಾಮ** ಮತ್ತು **ಕಂಪನಿ, ವಿಠ್ಠಲವಾಡಿ ಎದುರಿಗ ೩೩೬ ಕಾಳಬಾದೇವಿ, ಮುಂಬಯಿ**

ಟಿ. ಎಸ್. ಮೋಟರ ಸರ್ವಿಸ, ಶಿವಮೊಗ್ಗಾ

[illegible] ವರ್ಷಗಳಿಂದ ನಾವು ಶಿವಮೊಗ್ಗಾ—ತೀರ್ಥಹಳ್ಳಿ—ಆಗುಂಬೆ, ಶಿವಮೊಗ್ಗಾ—ಸಾಗರ—[illegible], ಶಿವಮೊಗ್ಗಾ—ಹರಿಹರ—ದಾವಣಗೆರೆ, ಶಿವಮೊಗ್ಗಾ—ತಳಗುಪ್ಪಾ(?), ಸಾಗರ—ಸೊರಬ—ಶಿರಾಳಕೊಪ್ಪ, ಸಾಗರ—ತೀರ್ಥಹಳ್ಳಿ, ಸಾಗರ—ತಳೂರಕಟ್ಟೆ ಈ ಲೈನುಗಳ ಮೇಲೆ ನಮ್ಮ ರೆಗ್ಯುಲರ್ ಮೋಟರ ಸರ್ವಿಸನ್ನು [illegible] ದಕ್ಷಿಣ ಕನ್ನಡ ಜಿಲ್ಹೆಯ ಕಾರ್ಕಳ, ಉಡುಪಿ, ಕುಂದಾಪುರ, ಮಂಗಳೂರ [illegible] " ಕಾರ್ಕಳ ಮೋಟರ ಸರ್ವಿಸಿನ " ವಿದ್ಯಮಾನವೂ, ಬಳ್ಳಾರಿ ಜಿಲ್ಹೆಯ [illegible] " ಲಕ್ಷ್ಮೀ ಮೋಟರ ಸರ್ವಿಸಿನ " ವಿದ್ಯಮಾನವೂ ಪ್ರಯಾಣಿಕರ ಎಲ್ಲ ಸೌಕರ್ಯಗಳ [illegible]

ಉತ್ತರ ಕನ್ನಡ ಜಿಲ್ಹೆಯ ಪ್ರಯಾಣಿಕರು ಜೋಗ (Gersoppa Falls), ಶಿವಮೊಗ್ಗಾ [illegible] ಸ್ಥಳಗಳಿಗೆ ಪ್ರಯಾಣ ಬೆಳೆಸಲು ಅನುಕೂಲವಾಗಬೇಕೆಂದು [illegible] ಜೋಗ, [illegible], ಕುಮಟಾ ಈ ಲೈನಿನಲ್ಲಿ ಮೋಟರ ಸರ್ವಿಸ [illegible]

ಕಾಲಕ್ರಮಗಳು.

[illegible] ಹೊರಡುವದು—	... .	ಬೆಳಿಗ್ಗಿನ ೭ ಘಂಟೆಗೆ.
[illegible] —	.. .. .. „	೧೦ „
[illegible] ಶಿವಮೊಗ್ಗಾ [illegible]—		ಮಧ್ಯಾಹ್ನ ೧ „
[illegible] ([illegible])—		ಸಾಯಂಕಾಲ ೬ „
[illegible]—	.. ..	ಬೆಳಿಗ್ಗಿನ ೬ „
[illegible] ಹೊರಡುವದು—	. „	೧೧ „
[illegible] —	..	ಮಧ್ಯಾಹ್ನ ೩ „
[illegible] ಸೇರುವದು—	.. ..	ಸಾಯಂಕಾಲ ೫ „

N. B. [illegible] ಹುಬ್ಬಳ್ಳಿಗೆ ಸ್ಪೆಶಲ್ ಬಂದು ಸರ್ವಿಸ [illegible] ಪ್ರೋತ್ಸಾಹಿಸಬೇಕಾಗಿ ವಿನಂತಿ

SHIMOGA 2[illegible]—1—1926 } M MANJAPPA. PROPRIETOR

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕೇಟುಗಳು ಮತ್ತು ಸುವರ್ಣಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು.

ರಕ್ತಶುದ್ಧಿ [illegible] ಧಾತುವೃದ್ಧಿ ಕಾರಕ

ಈ ಮಧುವು ಮಹೌಷಧಿಯಾಗಿದ್ದು ಬಹಳ [illegible] ರುಚಿಕರವಾಗಿಯೂ ಇರುತದೆ. [illegible] ಬೇನೆಯು ಹೋಗುವದು [illegible] ಪ್ರವರ್ತಮಾನವಾಗುವದು. (ನಿಜವಾಗಿ [illegible] ಅನುಭವಕ್ಕೆ ಬರುವದು.) ಜ್ಞಾನೇಂದ್ರಿಯಗಳ ಶಕ್ತಿಯು [illegible] ಪೂರ್ವದಲ್ಲಿ ಅಧಮ ಶಕ್ತಿಗೆ ಹೋಗುವ [illegible] ಶರೀರವು ನಿರೋಗವಾಗುವದು. [illegible] ದಿವಸದಲ್ಲಿ ಗುಣಬರುವದು. ತರುಣ ಸ್ತ್ರೀಪುರುಷರು ಈ ದ್ರಾಕ್ಷಾರ್ಕ ಮಧುವ ಸೇವನಮಾಡಿ ಅದರೊಳಗಿನ ಗುಣ ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ, ಉದರರೋಗ ದಮ್ಮು ಇವುಗಳು ನಾಶವಾಗುವವು [illegible] ದಿವಸದಲ್ಲಿ ಪುನರಾವರ್ತಿ ಉಪಯೋಗಮಾಡಿದರೂ ಅನ್ನ [illegible] ಹಸಿವೆ ಚನ್ನಾಗಿ ಆಗುತದೆ. ಇದರ ಅನುಭವವು ಮೊದಲನೇ ದಿವಸವೇ ಬರುವದು. [illegible] ದೃಷ್ಟಿಯಲ್ಲಿ ಎಷ್ಟೋ ದಿವಸದ [illegible] ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ಔಷಧಕ್ಕೆ ಪಥ್ಯವಿಲ್ಲ ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ [illegible] ಇದ್ದರೆ ೧೦ ದಿವಸ ಸಾಕು [illegible] ಒಂದು ಬಾಟಲಿಯಿಂದ ಗುಣಬರುವದು. [illegible] ಬಾಟಲಿಯಿಂದ ಗುಣಬರುವದು ಒಂದು ಬಾಟ್ಲಿಯ ಕಿಮ್ಮತ್ತು ೧। ರೂಪಾಯಿ ಮೂರು ಬಾಟಲಿಯ ಕಿಮ್ಮತ್ತು ೩—೦ ಮೂರು ಬಾಟಲಿಗಳನ್ನು ಒಂದೇ ಸಾರ್ಸಲಿನಲ್ಲಿ ಕಳಿಸುವೆವು. ಅಂದರೆ [illegible] ಬೀಳುವದಿಲ್ಲ ತನಕ ಬಾಟಲಿಗಳ ಕಿಮ್ಮತ್ತು ೧೩—೦—೦ ಮತ್ತು ೧ ಬಾಟಲಿ ಪುಕ್ಕಟೆ [illegible] ಖರ್ಚ ಬೇರೆ ಬೀಳುವದು. ವಿಶಂಟರ [illegible] ೧ ಬಾಟ್ಲಿಗೆ ೧—೦ ೬ ಬಾಟ್ಲಿಗೆ ೩—೦—೦ [illegible] ೧೩—೧—೦

ಮ್ಯಾನೇಜರ— ದ್ರಾಕ್ಷಾರ್ಕಮಧು ಆಫೀಸ, ಪ್ರೋ. ನಿಪ್ಪಾಣಿ, ಜಿ. ಬೆಳಗಾಂವ

ವಿವಿಧ ಸಂಗ್ರಹ.

ರೋಗ, ಹಿಡಿದರೆ, ಬಾಯಿ ತೆರೆಯುತ್ತದೆ

ಆಸ್ಟ್ರೇಲಿಯಾ ದೇಶವು ನಮ್ಮ ಬ್ರಿಟಿಶ ಸಾಮ್ರಾಜ್ಯದೊಳಗಿನದು. ಅಲ್ಲಿ ಕೆಲವು ಭಾರತೀಯರು ವಾಸಿಸುತ್ತಿರುವರು. ಅವರಿಗೆ ಅಲ್ಲಿಯ ಫೆಡರಲ್ ಪಾರ್ಲಿಮೆಂಟಿನ ಮತಾಧಿಕಾರವಿತ್ತು. ಅದನ್ನು ಅಲ್ಲಿಯ ಬ್ರಿಟಿಶರು ೧೯೦೨ನೇ ಇಸ್ವಿಯಲ್ಲಿ 'ಇಲೆಕ್ಟೋರಲ್ ಎಕ್ಟ್' ಎಂಬ ಕಾಯಿದೆಯನ್ನು ಮಾಡಿ ಅಪಹರಿಸಿದರು. ಈ ಕುರಿತು ದೊಡ್ಡ ಕಲ್ಲೋಲವಾಯಿತು. ೧೯೦೧ ವರುಷಗಳ ಹಿಂದೆ ಇಂಗ್ಲಂಡದಲ್ಲಿ ಸಾಮ್ರಾಜ್ಯ ಪರಿಷತ್ತು ಸೇರಿತ್ತು. ಆ ಸಭೆಗೆ ಆಸ್ಟ್ರೇಲಿಯಾ ದೇಶದ ಕಡೆಯಿಂದ ಅಲ್ಲಿಯ ಮುಖ್ಯ ಪ್ರಧಾನರಾದ ಮಿ। ಹ್ಯೂಜೆಸ್‌ರವರು ಬಂದಿದ್ದರು. ಆ ಕುರಿತು ಚರ್ಚೆ ನಡೆದಾಗಲು, ಮತಾಧಿಕಾರವನ್ನು ತಿರುಗಿ ಹಿಂತಿರುಗಿ ಕೊಡಬೇಕೆಂದು ಅವರು ವಚನವನ್ನಿತ್ತಿದ್ದರು. ಕೆಲವರ್ಷಗಳ ಹಿಂದೆ ನೇಕ ನಾಮದಾರ ಶಾಸ್ತ್ರಿಗಳು ಆಸ್ಟ್ರೇಲಿಯಾ ದೇಶಕ್ಕೆ ಹೋಗಿದ್ದರು. ಆಗಲೂ ಇದೇ ಕಾರಣ ನಡೆಯಿತು "ವಚನೇ ಕಿಂ ದರಿದ್ರತಾ" ಎಂಬಂತೆ, ಪುನಃ ನಾಮದಾರ ಶಾಸ್ತ್ರಿಗಳಿಗೂ ಮುಖ್ಯ ಪ್ರಧಾನರಾಗಿರುವ ಮಿ। ಬ್ರೂಸರವರು ಮತಾಧಿಕಾರವನ್ನು ಒದಗಿಸುವ ವಚನವನ್ನಿತ್ತರು ಇಷ್ಟಾದರೂ, ವಚನವು ಆಚಾರದಲ್ಲಿ ಪರಿಣಮಿಸಲಿಲ್ಲ. ಅಲ್ಲಿ ಬೇಟುಮನ್ ಎಂಬ ವಕೀಲರಿರುವರು, ಅವರಿಗೆ ಈ ರೀತಿ ಸಾಮಾಜಿಕ ಭಾರತೀಯರ ಮೇಲೆ ಉಪಕಾರ ಮಾಡ ವಬೇಕೆಂದು ಎನಿಸಿತು ೧೯೦೨ನೇ ಇಸ್ವಿಯಲ್ಲಿ ನಿರ್ಮಾಣ ಹೊಂದಿದ ಇಲೆಕ್ಟೋರಲ್‌ಎಕ್ಟ ಎಂಬ ಕಾಯಿದೆಯನ್ನು ಅವರು ಸೂಕ್ಷ್ಮವಾಗಿ ಪರ್ಯಾಲೋಚಿಸಿ, ಅದು ಆಸ್ಟ್ರೇಲಿಯಾ ದೇಶದ ರಾಜ್ಯಘಟನೆಗೆ ವಿರೋಧವಾದದ್ದೆಂದು ಅಭಿಪ್ರಾಯಪಟ್ಟರು. ಈ ಕುರಿತು ಬಹು ಪ್ರಯಾಸದಿಂದ ಮಿಟ್ಟಾ ಬುಲೋಶ್ ಎಂಬ ಭಾರತೀಯನನ್ನು ಸಂಪಾದಿಸಿ, ಆತನ ಕಡೆಯಿಂದ ಮತದಾರ ಪತ್ರಿಕೆಯಲ್ಲಿ ಆತನ ಹೆಸರನ್ನು ದಾಖಲ ಮಾಡಲು ಪೋಲೀಸ ಮೆಜಿಸ್ಟ್ರೇಟ ಕೋರ್ಟಿನಲ್ಲಿ ಅರ್ಜಿ ದಾಖಲ ಮಾಡಿಸಿದರು ಮಿ। ಬೇಟುಮನ್‌ರವರು ಒಬ್ಬರೇ ಒಂದು ಕಡೆಗೆ, ಉಳಿದ ವಕೀಲರೆಲ್ಲ ಇನ್ನೊಂದು ಕಡೆಗೆ, ಹೀಗಾದರೂ ಎಣೆಗೊಂಡದೆ ಪ್ರಯಾಸಪಟ್ಟದಕ್ಕೆ ಮಿ। ಬೇಟುಮನ್‌ರವರು ವಿಜಯಶ್ರೀವಿಭೂಷಿತರಾದರು. ಕೂಡಲೆ, ಆಸ್ಟ್ರೇಲಿಯಾ ಸರಕಾರದವರು ಹೈಕೋರ್ಟಿಗೆ ಅಪೀಲು ಮಾಡಿದರು ಹೈಕೋರ್ಟಿನೊಳಗಿನ ವಕೀಲರು ಮಿ। ಬೇಟುಮನ್‌ರವರಿಗೆ ಮರುಳು ಹಿಡಿದಿದೆಂದು ಹೀಯಾಳಿಸಿದರಂತೆ! ಆದರೂ, ಮಿ। ಬೇಟುಮನ್‌ರವರು ಎದೆಗುಂದಲಿಲ್ಲ. ವಿಚಾರಕ್ಕೆ ೨-೩ ದಿನಗಳಿದ್ದಾಗ ಸರಕಾರಿ ವಕೀಲರು ಮಿ। ಬೇಟುಮನ್‌ರವರ ಭೆಟ್ಟಿಪಡೆದು ಅಪೀಲನ್ನು ಹಿಂತೆಗೆದುಕೊಳ್ಳುತ್ತೇವೆಂದು ಹೇಳಿದರು ಆಗ ಮಿ। ಬೇಟುಮನ್‌ರವರು ಹೇಳಿದ್ದೇನೆಂದರೆ— ಮಿಟ್ಟಾ ಬುಲೋಶ್ ಇವನೊಬ್ಬನಿಗಾಗಿ ಈ ಯತ್ನ ನಡೆದಿರುವದಿಲ್ಲ ಆಸ್ಟ್ರೇಲಿಯಾದಲ್ಲಿ ವಾಸಿಸುವ ಸಮಸ್ತ ಭಾರತೀಯರಿಗೂ ಈ ಹಕ್ಕು ದೊರಕಬೇಕು" ಅದಕ್ಕೆ ಅಲ್ಲಿಯ ಸರಕಾರಿ ವಕೀಲರು ಒಪ್ಪಿಕೊಂಡು ಮಿ। ಬೇಟುಮನ್‌ರವರು ತಯಾರಿಸಿದ ಕಾಯಿದೆಯನ್ನು ಸರಕಾರದ ಕಡೆಯಿಂದ ಮಂಡಿಸುವದಾಗಿ ಹೇಳಿದರು ಈ ಕಾಯಿದೆಗೆ ಕಾಯಿದೆವಿಧಾಯಕ 'ಸೀನೇಟ' ಹಾಗು 'ಹೌಸ ಅಫ್ ರಿಪ್ರೆಝೆಂಟೇಟಿವ್ಸ' ಸಭೆಗಳಲ್ಲಿ ಅನುಕೂಲಮತ ದೊರಕಬೇಕು. ಮಿ। ಬೇಟುಮನ್‌ರವರು ಬಹಳ ಪ್ರಯತ್ನ ಮಾಡಿದರು ಹೀಗೆ ಅಧಿಕಾರ ಹೊಂದಿದ ಭಾರತೀಯರ ಹಕ್ಕು ಮಿ। ಬೇಟುಮನ್‌ರವರ ಕಾಯಿದೆಯ ಕೃಪೆಯಿಂದ ಉದ್ಧರಿಸಲ್ಪಟ್ಟಿತು. ಮಿ। ಬೇಟುಮನ್‌ರವರು ಸದ್ಯಕ್ಕೆ ಹಿಂದುಸ್ಥಾನಕ್ಕೆ ಬಂದಿರುವರು. ಅವರು ದಿಲ್ಲಿಯಲ್ಲಿದ್ದಾಗ 'ಕ್ರಾನಿಕಲ್' ಪತ್ರಿಕೆಯ ಪ್ರತಿನಿಧಿಗಳು ಅವರ ಕಡೆಯಿಂದ ಮಾಹಿತಿ ಪಡೆದುಕೊಂಡು ಈ ಹಕೀಕತನ್ನು ಪ್ರಕಟಿಸಿರುವರು

***

ಕಾನಪುರದ ಸ್ವದೇಶಿ ಪ್ರದರ್ಶನ.

ಕಾನಪುರದಲ್ಲಿ ರಾಷ್ಟ್ರೀಯ ಸಭೆಯೊಡನೆ ಸೇರಿದ ಸ್ವದೇಶಿ ಪ್ರದರ್ಶನವು ಬಹಳ ಚಿತ್ತವೇಧಕವಿತ್ತು. ಮಹಾತ್ಮರು ಪ್ರದರ್ಶನವನ್ನು ತೆರೆದಂದಿನಿಂದ ಸಾವಿರಾರು ಪ್ರೇಕ್ಷಕರು ನಿತ್ಯವೂ ತಂಡತಂಡವಾಗಿ ಹೋಗುತ್ತಿದ್ದರು. ಅದರಾದ್ದ ಸಮುಯಕ್ಕಂತು ಪ್ರೇಕ್ಷಕರ ದೊಡ್ಡ ಸಾಗರವೇ ಸಾಗಿತು! ಖಾದಿಯ ವಿಭಾಗದಲ್ಲಿ ಸಮಸ್ತ ಪ್ರಾಂತಗಳೊಳಗಿನ ಖಾದಿಯ ಭಾಂಡಾರ ಹಾಗು ಕೈಯಿಂಟಿ ಸಂಘಗಳೂ ಇದ್ದವು ಮಹಾತ್ಮರ ಸಾಬರಮತಿ ಆಶ್ರಮದಲ್ಲಿಯೂ, ಡಾ। ರೋಯ್‌ರವರ ಖಾದಿಪ್ರತಿಷ್ಠಾನದಲ್ಲಿಯೂ ಹತ್ತಿ ಹಿಂಜುವ ಕ್ರಿಯೆಯಿಂದ ಖಾದಿ ತಯಾರಾಗುವ ವರೆಗಿನ ಸಮಸ್ತ ಪ್ರಯೋಗಗಳು ಪ್ರಯೋಗ ತೋರಿಸಲ್ಪಡುತ್ತವೆ ಮಹಾತ್ಮರ ಹಾಗು ಡಾ। ರೋಯ್‌ರವರ ನಾಲು ನೋಡಿ, ಆನಂದವಾಗುತ್ತದೆ ಹಾಕ್ಕುದಲ್ಲಿ ಕದಾದ ಒಂದು ಅರಿವೆಯನ್ನು ನೋಡಿ, ಪ್ರೇಕ್ಷಕರು ಚಕಿತರಾದರು; ಅತಿಸೂಕ್ಷ್ಮ

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ.

ಕಾಮಿನಿಯಾ ತೈಲ. ರಿಜಿಸ್ಟರ್ಡ

ದಟ್ಟವಾದ, ನೀಳವಾದ, ಗುಂಗುರು ಗುಂಗುರಾಗಿರುವ ಸಿರಿಯಿಂದ ನಿಬಿಡವಾದ ಕೇಶದ ಮಂದವನ್ನು ಯಾವ ಸ್ತ್ರೀಯು ತಾನೇ ಬಯಸಲೊಲ್ಲಳು? ಅಂಥಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾವದೋ.

ಕಾಮಿನಿಯಾ ಆಯಿಲ್ (ರಿಜಿಸ್ಟರ್ಡ)

ಈ ಆಯಿಲ್ ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತದೆಯೋ ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ ಈ ಆಯಿಲ್ ಹಚ್ಚಿಕೊಳ್ಳುವದರಿಂದ ಮಸ್ತಕದ ಬೇನೆಯು ಬೇಗನೆ ನಿಂತು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ ಕೂದಲುಗಳು ಅವುಗಳ ತಳದ ಬೇರುಗಳಿಂದ ಗಟ್ಟಿಯಾಗಿ ಬಿದ್ದು ಹೋಗಲಾರವು, ಅಷ್ಟೇ ಅಲ್ಲ ದಟ್ಟವಾಗಿ ಬೆಳೆದು ಸಮೃದ್ಧವಾಗುವವು, ಇದರ ಸುಗಂಧವಂತೂ ಮಧುರವಾದ ವಾಸನೆಯುಳ್ಳದ್ದಾಗಿರುತ್ತದೆ.

ಕೀಳು ತರದ ಎಣ್ಣೆಗಳನ್ನು ಕೊಂಡುಕೊಂಡು ತಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡಿಕೊಳ್ಳುವದಕ್ಕಿಂತ ಒಂದೇ ಒಂದು ಬಾರಿ "ಕಾಮಿನಿಯಾ ಆಯಿಲ್" ಉಪಯೋಗಿಸಿ ಪರೀಕ್ಷಿಸಿರಿ ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ನಮಗೆ ವ್ಯಾಪಾರ ಪ್ರದರ್ಶನದಲ್ಲಿ "ಸರ್ಟಿಫಿಕೇಟ ಅಫ್ ಮೆರಿಟ" ಅಥವಾ ಯೋಗ್ಯತಾಪತ್ರವೂ ಅಲ್ಲದೆ ಸಾವಿರಾರು ಗೃಹಸ್ಥರು ಉತ್ತಮೋತ್ತಮವಾದ ಮಾನಪತ್ರಗಳನ್ನು ಕೊಟ್ಟಿರುವರು.

ಕ್ರಯ:— ಸೀಸೆಗೆ ರೂಪಾಯಿ 1-0-0, ಸೀಸೆ 3ಕ್ಕೆ ರೂಪಾಯಿ 2-10-0 ವ್ಹಿ. ಪಿ. ಖರ್ಚು 0-14-0.

ಅತಿ ಮನೋರಂಜಕವಾದ ಸುರಭಿಯು!

ಒಟ್ಟೋ-ದಿಲ್ ಬಹಾರ್ !! (ರಿಜಿಸ್ಟರ್ಡ.)

ಈ ಸುಗಂಧದ್ರವ್ಯವು ಮಧುರ, ಕೋಮಲ, ಚಿರಸ್ಥಾಯಿ ಮತ್ತು ಅತ್ಯುತ್ತಮವಾದ ಆನೇಕ ಪುಷ್ಪಗಳ ಅಯ್ದು ತೆಗೆದ ಸೌಗಂಧಿಕ ಅಂಶಗಳಿಂದ ಸಿದ್ಧವಾದುದು. ಇದರಲ್ಲಿ ಮದಿರೆಯ (ಅಲ್ಕೊಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈ ವಸ್ತ್ರದಲ್ಲಿ ಅಥವಾ ಅಂಗಿಯಲ್ಲಿ ಈ ದ್ರವ್ಯದ ಕೆಲವು ಹನಿಗಳನ್ನು ಹಾಕಿದರೆ ನಿಮ್ಮ ಮನಸ್ಸು ಸ್ವಸ್ಥವಾದೊಂದು ಭಾವನೆಯು ಆವರಿಸುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೆ ಇರಲಿ, ಈ ಒಟ್ಟೋ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ವಿಶೇಷ ಮನಸ್ಸನ್ನು ಸೆಳೆಯುವದು. ಒಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ

ಸಣ್ಣ ಸೀಸೆ 1 ಕ್ಕೆ 0 8 0; 1 ಡ್ರಾಮಿನ (ಮಿಡಿಯಂ) ಸೀಸೆ 1 ಕ್ಕೆ 0 12 0; ½ ಔನ್ಸಿನ ದೊಡ್ಡ ಸೀಸೆ 1 ಕ್ಕೆ 2 0 0. ಅಂಚೆಯ ವೆಚ್ಚ ಬೇರೆ 0 4 0

ಒಟ್ಟೋ-ದಿಲ್ ಬಹಾರ್ ಪರಿಮಳ ಕಾರ್ಡುಗಳು ಡಜನ್ 1 ಕ್ಕೆ 0 12 0.

Address: **The Anglo Indian Drug & Chemical Co,**
16, Market, **BOMBAY 2**

ಪ್ರಸಿದ್ಧವಾದ ತುಲಮುಲದ ನೆನಪೂ ಆಯಿತು. ಈ ಅರಿವೆಯು ೩೬ ಇಂಚು ಅಗಲ, ೯। ಗಜ ಉದ್ದವಾಗಿದ್ದು, ತೂಕವು ಬರೇ ಅರ್ಧ ತೊಲೆ!! ಇದರ ನೂಲಿನ ನಂಬರು ೨೯೦ !!! ಇದರ ಹೊರತು, ೩॥ ಮಣ ನೂಲಿನ ಒಂದು ಚೆಂಡು ರಾಟಿಯಿದೆ. ೧೦ ಸಾವಿರ ಮಂದಿ ಖಾದಿಭಕ್ತರು ೫॥ ತಾಸಿನಲ್ಲಿ ನೂತ ನೂಲಿದು! ಮಹಾತ್ಮರು ಸ್ವಹಸ್ತದಿಂದ ಶಕ್ತಿಯ ರಕ್ಷೆಯಲ್ಲಿದ್ದಾಗ ತಯಾರವಾಗಿದ ಮೆಟ್ಟಿನ ಜೋಡು ಒಂದು ಇದೆ. ಇದನ್ನು ನೋಡಿ, ಮಹಾತ್ಮರಂಥ ಲೋಕೋತ್ತರ ಪುರುಷರು ಪರಮಾತ್ಮ ಸೇವೆಗಾಗಿ ಆತನ ಪಾದಾರವಿಂದಗಳಿಗೆ ಸಮರ್ಪಿಸಲು ಈ ಮೆಟ್ಟಿನ ಜೋಡನ್ನು ತಯಾರಿಸಿದರೋ! ಎಂದು ಪ್ರೇಕ್ಷಕರನೇಕರು ಮನಸ್ಸಿನಲ್ಲಿಯೇ ಅಂದುಕೊಂಡರೇನಾಶ್ಚರ್ಯ! ಚಿತ್ರಶಾಲೆಯ ವಿಭಾಗದಲ್ಲಿ ಅಹಮದಾಬಾದ, ಲಾಹೋರ, ಹೈದರಾಬಾದ, ಮುಲ್ತಾನ ಕಡೆಗಳೊಳಗಿನ ಚಿತ್ರವಿಚಿತ್ರ ಕೆಲಸಗಳನ್ನು ನೋಡಬಹುದು. ಕಾನಪುರದ ಚರ್ಮದ ವಸ್ತುಗಳು, ಶಾಂತಿಕ್ಷೇತ್ರದಲ್ಲಿ ತಯಾರಾಗುವ ಫೋಟೋಗಳು ಇತ್ಯಾದಿ ಶೃಂಗಾರಿಕಗಳನ್ನು ಇದೇ ಭಾಗದಲ್ಲಿ ನೋಡಬಹುದು. ಇದೇ ವಿಭಾಗದಲ್ಲಿ ಕಿಲೋಸ್ಕರರ ಹಿಂದುಗಳ ಪಂಪುಗಳೂ ಕಾಣಬರುತ್ತವೆ. ಪಂಪಿನ ಪ್ರಭಾವಗಳ ಸತತವಾಗಿ ಈ ಪಂಪುಗಳು ನಡೆಯುವವು. ಈ ಪಂಪುಗಳಿಂದ ಪ್ರತ್ಯಕ್ಷ ಅಲ್ಲಿ ನೀರು ತೆಗೆದು ತೋರಿಸಲಾಗುತ್ತಿತ್ತು. ಬೆಲೆಯು ೧೫-೨೦ ರೂಪಾಯಿಗಳಿಂದ ಹೆಚ್ಚು. ಕಿಲೋಸ್ಕರ ಪಂಪಿನ ನಾಗಪುರದ ಏಜೆಂಟರು ಶ್ರೀ ಏಸ್ ಜೆ. ಕಾನಿಟಕರ ಬಿ. ಎ, ಎಂಬವರು, ಉಚ್ಚ ಶ್ರೇಣಿ ಪಡೆದಂಥ ಇವರು ವ್ಯಾಪಾರ ವರ್ಗದಲ್ಲಿ ಸೇರಿ ಬಿ. ಎ. ಮುಂತಾದ ವಿಶ್ವವಿದ್ಯಾಲಯದ ಪದವೀಧರರಿಗೆ ಮಾರ್ಗದರ್ಶಕರಾಗಿರುವರು. ಮುಂಬಯಿಯ ಶ್ರೀ ಧುರಂಧರರ ಪ್ರಸಿದ್ಧ ಚಿತ್ರಗಳನ್ನು ಇದೇ ವಿಭಾಗದಲ್ಲಿ ನೋಡಿ, ಮನಸ್ಸು ಉಲ್ಲಸಿತವಾಗುತ್ತದೆ. ಮಹಾತ್ಮರ ಶಸ್ತ್ರಕ್ರಿಯೆ, ಲೋಕಮಾನ್ಯರ ಸ್ವರ್ಗಾರೋಹಣದ ಪ್ರವರ್ತತರಾರಿದೆ. ಚಿತ್ರಗಳು ಅತ್ಯಂತ ಚಿತ್ತವೇಧಕವಿವೆ.

***

ಬ್ರಿಟಿಶ ವ್ಯಾಪಾರದ ಅಂಕಿಗಳು.

ಸದ್ಯಕ್ಕೆ ಬ್ರಿಟಿಶ ದೇಶದೊಳಗಿನ ಅರಿವೆಯ ರಫ್ತಿನ ಪ್ರಮಾಣವು ಬಹಳ ಕುಗ್ಗಿದೆ. ಮೆಂಚೆಸ್ಟರದ ವರ್ತಕರಿಗೆ, ಪರ್ಯಾಯದಿಂದ ಬ್ರಿಟಿಶ ರಾಷ್ಟ್ರಕ್ಕೆ ಕೇವಲ ಹಾನಿ; ಮಹಾಯುದ್ಧ ಪೂರ್ವದಲ್ಲಿ ಇದ್ದ ಉನ್ನತಾವಸ್ಥೆಯು ಈಗ ಇಳಿಇಳಿದು ಬಂದಿದೆ. ಅಂಕಿಗಳನ್ನು ನೋಡಿರಿ! ಜಗತ್ತಿನಲ್ಲಿರುವ ಶೇಕಡಾ ೪೦ ರಷ್ಟು ನೂಲುವ ಗಿರಣಿಗಳು ಇಂಗ್ಲಂಡದಲ್ಲಿದ್ದವು; ಶೇಕಡಾ ೨೪ ಅಮೇರಿಕೆಯಲ್ಲಿ; ಶೇಕಡಾ ೮ ಜರ್ಮನಿಯಲ್ಲಿ, ಶೇಕಡಾ ೫ ಫ್ರಾನ್ಸದಲ್ಲಿ; ಉಳಿದ ೨೩ ಬಾಕಿ ದೇಶಗಳಲ್ಲಿ; ಹೀಗೆ ಪಾಲುಗಳಿದ್ದವು. ಉಗಿಯಂತ್ರಗಳ ಮೇಲೆ ನಡೆಯುವ ಮಗ್ಗಗಳ ಪ್ರಮಾಣವು ಇಂಗ್ಲಂಡ, ಅಮೇರಿಕಾ ದೇಶಗಳಲ್ಲಿ ೪೯ ಹಾಗು ೨೪ ಇದ್ದರೆ, ಜರ್ಮನಿ-ಫ್ರಾನ್ಸ ದೇಶಗಳಲ್ಲಿ ಶೇಕಡಾ ೬-೭ರಷ್ಟು ಇತ್ತು. ೧೯೧೩ರಿಂದ ನಂತರ ಜಗತ್ತಿನಲ್ಲಿ ೧ ಕೋಟಿ ೯೦ ಲಕ್ಷ ನೂಲುವ ಯಂತ್ರಗಳು ಹೆಚ್ಚು ಹಚ್ಚಲ್ಪಟ್ಟವು. ೯೦ ಲಕ್ಷ ಯಂತ್ರಗಳು ಏಶಿಯಾ ಖಂಡದಲ್ಲಿ; ೩೦ ಲಕ್ಷ ಅಮೇರಿಕೆಯಲ್ಲಿ; ೨೦ ಲಕ್ಷ ಇಂಗ್ಲಂಡದಲ್ಲಿ; ಇತರ ಕಡೆಗಳಲ್ಲಿ ೧೦ ಲಕ್ಷ; ಹೀಗೆ ಹೆಚ್ಚಿದವು. ಈ ಮಾನದಿಂದ ೧೯೧೩-೧೪ ಹಾಗು ೧೯೨೪-೨೫ ಈ ಸಾಲುಗಳಲ್ಲಿ ಗಿರಣಿಗಳಲ್ಲಿ ತಯಾರಾದ ಹತ್ತಿಯ ಗಂಟುಗಳ ವಿಚಾರ ಮಾಡಿರಿ!

	೧೯೧೩-೧೪.	೧೯೨೪-೨೫.
ಯುನೈಟೆಡ್ ಕಿಂಗಡಮ್ (ಇಂಗ್ಲಂಡ, ಸ್ಕಾಟ್ಲಂಡ, ಐರ್ಲಂಡ ಮತ್ತು ವೇಲ್ಸ)	೪೨೩೪೦೦೦	೩೨೩೫೦೦೦.
ಯುರೋಪದೊಳಗಿನ ಇತರ ದೇಶಗಳು	೩೯೧೪೦೦೦	೬೫೩೧೦೦೦.
ಅಮೇರಿಕಾ	೫೩೧೯೦೦೦	೬೬೯೨೦೦೦.
ಏಶಿಯಾ	೩೩೬೫೦೦೦	೬೨೩೮೦೦೦.
ಇತರ	೯೫೬೦೦೦	೧೦೪೩.

ಈ ೧೨ ವರುಷಗಳ ಅವಧಿಯಲ್ಲಿ ಪ್ರಗತಿಯಾದದ್ದು ಅಮೇರಿಕಾ ಹಾಗು ಏಶಿಯಾ ಖಂಡಗಳಲ್ಲಿ ಮಾತ್ರ; ಪರಾಗತಿಯಾದದ್ದು ಯುನೈಟೆಡ್ ಕಿಂಗಡಮ್ ಎಂಬ ಬ್ರಿಟಿಶ ರಾಷ್ಟ್ರದಲ್ಲಿ ಹಾಗು ಯುರೋಪಖಂಡದಲ್ಲಿ. ಹೀಗೆ ಸ್ಥಿತಿಯಾದರೂ, ಮಹಾಯುದ್ಧದ ಸಮಯ ಅರಿವೆಯ ಬೆಲೆಯು ವಿಪರೀತ ಹೋದ್ದರಿಂದ ಬ್ರಿಟಿಶ ವರ್ತಕರಿಗೆ ಅಷ್ಟು ಹಾನಿಯಾಗಲಿಲ್ಲ. ಯುದ್ಧಪೂರ್ವದಲ್ಲಿ ಇಂಗ್ಲಂಡದಲ್ಲಿ ತಯಾರಾಗುವ ಶೇಕಡಾ ೮೦ ರಷ್ಟು ಅರಿವೆಯು ರಫ್ತಾಗುತ್ತಿತ್ತು. ಈಗ ಈ ಪ್ರಮಾಣವು ಶೇಕಡಾ ೬೫ಕ್ಕೆ ಬಂದಿದೆ. ಚೀನ, ಹಿಂದುಸ್ಥಾನ, ಮುಂತಾದ ಪೌರ್ವಾತ್ಯ ದೇಶಗಳಲ್ಲಿಯೂ, ತುರ್ಕಸ್ಥಾನ, ಇರಾಣ ಮೊದಲಾದ ಭೂಮಧ್ಯ ಸಮುದ್ರದೊಳಗಿನ ದೇಶಗಳಲ್ಲಿಯೂ ಬ್ರಿಟಿಶ ಅರಿವೆಯ ರಫ್ತಿನ ಪ್ರಮಾಣವು ಅರ್ಧಕ್ಕೆ ಬಂದು ಮುಟ್ಟಿದೆ. ೧೨ ವರ್ಷಗಳಲ್ಲಿ ಆದ ಬ್ರಿಟಿಶ ಅರಿವೆಯ ವ್ಯಾಪಾರದ ಪ್ರಗತಿಯಿದು. ಈ ಕುರಿತು, ಮೆಂಚೆಸ್ಟರದೊಳಗಿನ ವಿಶ್ವವಿದ್ಯಾಲಯದ ವ್ಯಾಪಾರಿ ತಜ್ಞರಾದ ಪ್ರೊಫೆಸರ ಜಿ. ಡಬ್ಲ್ಯು. ಡೇನಿಯಲ್ಸರವರು ನುಡಿಯುವದೇನಂದರೆ:— ೧೯೧೦ನೇ ಸಾಲಿಗಿಂತ ೧೯೨೪ನೇ ಸಾಲಿನಲ್ಲಿ ಹಿಂದುಸ್ಥಾನದ ಗಿರಣಿಗಳಲ್ಲಿಯ ೮೦ ಕೋಟಿ ಗಜ ಅರಿವೆಯು ಹೆಚ್ಚು ತಯಾರಾಯಿತು. ಜಪಾನದವರೂ ಹಿಂದುಸ್ಥಾನದ ಪೇಟೆಯಲ್ಲಿ ಸುಗ್ರಾಹ ತ್ರಿವರು. ಬ್ರಿಟಿಶ ಅರಿವೆ ಕಟ್ಟ ಹೀಗಾಗಿ, ಬ್ರಿಟಿಶ ಅರಿವೆಯು ಪಾರಾಟಕ್ಕೆ ಕಡಿಮೆ ಬಿದ್ದಿದೆ. ಬ್ರಿಟಿಶ ಅರಿವೆಯ ಬೆಲೆಯು ದಿನ ಹೋದ ಹಾಗೆ ಏರುತ್ತ ನಡೆದಿದೆ. ಆದರಿಂದ ಅರಿವೆಯ ಪಾರಾಟವು ಕಡಿಮೆಯಾಗುವದು. ಹೀಗೆ ಬ್ರಿಟಿಶ ವ್ಯಾಪಾರದ ಸ್ಥಿತಿಯಾಗಿದೆ.

***

ಈ ಪ್ರಕಾರ ಕೇಳಿರಿ!

ಕಾನಪುರದಲ್ಲಿ 'ಮೆಮೋರಿಯಲ್ ಗಾರ್ಡನ್' ಎಂಬದೊಂದು ಉಪವನವಿದೆ. ಈ ಉಪವನದಲ್ಲಿ ಬಾಗಿಲದ ಇದಿರಿಗೆ ಒಂದು ಪಾಟಿ ಹಚ್ಚಿರುವರು. "ಹಿಂದೀಯರು ಉಪವನದಲ್ಲಿ ಸೇರಬೇಕಾದರೆ, ಮೊಟ್ಟಮೊದಲು ಕಾಮಿಟದಾರರಿಂದ ಅಪ್ಪಣೆ ಪಡೆಯಬೇಕು." ಯಾಕೆ ಹೀಗೆ? — ಹಿಂದಸ್ಥಾನದ ಹೊರತು, ಇತರ ಎಲ್ಲ ದೇಶದವರಿಗೆ ಬೇಕಾದಾಗ, ಹಿಂದುಸ್ಥಾನದೊಳಗಿನ ಕಾನಪುರದಲ್ಲಿಯ ಉಪವನದಲ್ಲಿ ಸೇರಲು ಏನೊಂದು ಪ್ರತಿಬಂಧವಿಲ್ಲ. ಈ ಉಪವನಕ್ಕೆ ಮಧ್ಯ ಪ್ರಾಂತಿಕ ಕೌನ್ಸಿಲಿನ ಸಭಾಸದರಾದ ಶ್ರೀ ಗೋಸ್ವಾಮಿ, ರಿಮಾಲ ಚಮನಲಾಲ, ಪ್ರಾಂತಿಕ ಕಾಯಿದೆ ಕೌನ್ಸಿಲುಗಳ ಸಭಾಸದರಾದ ಪಾ। ಬಿಧನ ರಾಯ್, ನಿರ್ಮಲಚಂದ್ರ ಚಂದರ್, ನಲಿನಿರಂಜನ ಸರಕಾರ ಮೊದಲಾದ ಮಹಾನುಭಾವರು ತಿರುಗಾಡಲಿಕ್ಕೆ ಹೋಗಿದ್ದರು. ಈ ನೋಟೀಸನ್ನು ಓದಿ, ಶ್ರೀ ಗೋಸ್ವಾಮಿ ಮುಂತಾದವರಿಗೆ ಬಹಳ ಸಂತಾಪವಾಯಿತು; ಮತ್ತು ಈ ನೋಟೀಸನ್ನು ಉಲ್ಲಂಘಿಸುವ ನಿರ್ಧಾರ ಮಾಡಿ ಅವರು ಒಮ್ಮೆಲೇ ಉಪವನದಲ್ಲಿ ಸೇರಿದರು. ಕೆಲ ಹೊತ್ತಿನ ಬಳಿಕ, ಒಬ್ಬ ಯುರೋಪಿಯನ್ನನು ಉಪವನದಲ್ಲಿ ಬಂದನು. ಹಿಂದೀಯರು ಒಳಸೇರಿದ್ದು ಆತನಿಗೆ ಸೇರಲಿಲ್ಲ. ಕೂಡಲೆ, ಆತನು ಕಾವಲುಗಾರನಿಗೆ ಹೇಳಿದನು. ಕಾವಲುಗಾರನು ತಡಮಾಡದೆ ಶ್ರೀ ಗೋಸ್ವಾಮಿ ಮೊದಲಾದವರು ಒಳಗಿರುವಾಗಲೇ ಬಾಗಿಲು ಮುಚ್ಚಿದನು. ಕೆಲ ಹೊತ್ತಿನ ಬಳಿಕ, ಬಾಗಿಲು ತೆರೆಯಲಾಯಿತು. ಶ್ರೀ ಗೋಸ್ವಾಮಿಯವರು ಈ ನೋಟೀಸನ್ನು ಉಲ್ಲಂಘಿಸಬೇಕೆಂದು, ಹಾಗು ಅಪ್ಪಣೆ ಪಡೆಯದೆ, ಉಪವನದಲ್ಲಿ ಸೇರಬೇಕೆಂದು ಟಿಪ್ಪಣೆ ಬರೆದು, ಕಾವಲುಗಾರನ ಹತ್ತರ ಕೊಟ್ಟು ಹೊರಟುಹೋದರು. ಇನ್ನೂ ಅದಿಗೆ ಆತನ ಮೇಲೆ ಇಲಾಖೆ ನಡೆದದ್ದು ಜಾಹೀರಾಗಲಿಲ್ಲ. ಹಿಂದುಸ್ಥಾನದಲ್ಲಿ ಹಿಂದೀಯರ ಹಣದಿಂದ ನಿರ್ಮಿಸಿದ ಉಪವನದಲ್ಲಿ ಹಿಂದೀಯರಿಗೆ ಸೇರಲು ಪ್ರತಿಬಂಧವಾದ ಬಳಿಕ, ಇದಕ್ಕೂ ಹೆಚ್ಚು ಅನ್ಯಾಯವೇನಾಗಬೇಕು?

ಜಾಹೀರ ವಿನಂತಿ,

ಧೋರಿಸ್ಟ ಕಮೀಟಿಯ ಸಭಾಸದರಾದ ಶ್ರೀ ಮುಂಜುನಾಥ ದೇವರ ಭಟ್ಟ ಕಟೀಲ, ಎಲ್. ಎಲ್. ಬಿ. ಯವರು ಹೊನ್ನಾವರದಿಂದ ಬರೆದು ತಿಳಿಸುವದೇನಂದರೆ:—

ಮುಂಬಯಿ ಸರಕಾರವು ನೇಮಿಸಿದ ಪಶುಪಾಲನನಿವಾರಣ ಮಂಡಳವು ನಮ್ಮ ಜಿಲ್ಲೆಗೆ ಈ ತಿಂಗಳಲ್ಲಿ ಬರುವದಿತ್ತು. ಆದರೆ, ಕೆಲವು ಸಭಾಸದರ ಕಾರ್ಯಬಾಹುಲ್ಯದ ಮೂಲಕ ಅದು ಬೇಗನೆ ಬರಲಿಲ್ಲ. ಈ ಜಿಲ್ಲೆಯಲ್ಲಿ ಮಾರ್ಚ ತಿಂಗಳ ಕೊನೆಗೆ ಅಥವಾ ಎಪ್ರಿಲ ತಿಂಗಳ ಆದಿಯಲ್ಲಿ ಮಂಡಳವು ಪ್ರವಾಸಕ್ಕಾಗಿ ಬರಬಹುದು. ಪಶುವ್ಯಕ್ತಿಯ ಬೇಸಾಯಗಾರರು ಈ ಕುರಿತು ವಿಚಾರಿಸಬೇಕಾಗಿದೆ, ಕಷ್ಟದಿಂದ ತಮಗೆ ಒದಗುವ ಕಷ್ಟಗಳನ್ನೆಲ್ಲ ಮಂಡಳಕ್ಕರುಹಬೇಕು. ತಮಗೆ ಬೇಕಾದ ಅನುಕೂಲ್ಯಗಳ ಹಾಗು ಒದಗುವ ಸಂಕಟಪರಂಪರೆಗಳ ಯಾದಿಯನ್ನು ತಯಾರಿಸಿ, ಅದರ ಒಂದು ಪ್ರತಿಯನ್ನು ನಮ್ಮ ಕಡೆಗೆ ಮುಂಚಿತವಾಗಿ ಕಳಿಸಬೇಕು; ಇನ್ನೊಂದು ಪ್ರತಿಯನ್ನು ಮಂಡಳವು ಪ್ರವಾಸ ಮಾಡುವಾಗ ಮಂಡಳಕ್ಕೆ ಸಾದರಪಡಿಸಬೇಕು. ಮಂಡಳವು ಯಾವ ಯಾವ ಗ್ರಾಮದಲ್ಲಿ ಬಂದರೆ, ಪಶುಮಾಲೀಕರ ಪ್ರತ್ಯಕ್ಷ ಮಾಹಿತಿಯು ದೊರಕಬಹುದೆಂಬುದನ್ನು ಆಲೋಚಿಸಿ, ಅಲ್ಲಲ್ಲಿಯ ಜನರು ತಮಗೆ ತಿಳಿಸಬೇಕು. ಈ ಕುರಿತು ಸಮಸ್ತ ಪ್ರಕಾರದ ಮಾಹಿತಿಯನ್ನು ಸಂಗ್ರಹಿಸಿ, ಮಂಡಳಕ್ಕೆ ಸಾದರಪಡಿಸಬೇಕು.

ದರ ಕಡಿಮೆ ಮಾಡಿರುವೆವು! ಸುಸಂಧಿ!!

ನಮ್ಮ
ಸುಪ್ರಸಿದ್ಧ
ಇಂಗ್ಲಿಷ ಮೋಡ
ಸಾಯಕಲ
ವೆಲಿಂಗ್ಟನ
ಸಾಯಕಲ ಮತ್ತು ಮೋಟಾರ
ಕಂಪನಿ, ಹೋರ್ನಬೀ ರೋಡ,
ಮುಂಬಯಿ ನಂಬರ ೧
ಅರ್ಸೆನಲ ರೋಡ, ಪುಣೆ.

THE
INDIA PROVIDENT COMPANY LTD:
ESTABLISHED 1910.

Dividend declared 1912 — 20 per cent.
Dividend declared 1922 — 30 per cent.
Dividerd declared previous year 15-20 per cent.

The Safest office for Life Insurance of the poor. Premium Re. 1 or As. 8 per mensem.

Apply at once to:-

PADMANABH GOPAL KAMAT,
Agent, ANKOLA N. Kanara.

NOTICE.

The President, District Local Board, Kanara, hereby notifies to the Public residing within the limits of Municipalities and Local Boards in this District that the District Local Board, Kanara, which is declared to be the Local Authority under the Bombay Primary Education Act, IV of 1923, is authorised by Government of Bombay to take charge and control of primary Education and to take steps for the formation of the school Board under their order No. 2272 F. dated 18th December 1925, received through the Collector of Kanara, under his Nos. 579, daed 18th December 1925 and 31st December 1925. All the primary schools now managed by the Government school authorities and also by the 6 Municipalities in the District will come under the control of this Local Authority as none of the Municipalities in this District are declared to be local authorities under the primary Education Act, with effect from 1st March 1926, by which time the school Board is to be formed by this Local Authority.

2 The School Board shall consist of 12 members, to be elected on 22nd February 1926, by this Local Authority and not more than 4 members are to be nominated by Government.

(a) Out of the 12 elective members 9 seats are reserved for members showing the special interests of the public as shown below:-

These members shall not necessarily be members of the Local Authority.

	No. of seats.
1. Persons experienced in Education.	1
2. Women.	1
3. Representatives of minorities.	
(a) Mahomedens	1
(b) Christians.	1
4. Representatives of backward classes.	2
5. " Depressed classes	1
6. " Municipalities which are not local authorities	2
	9

Those who wish to be elected as members of the School Board on behalf of the 1st five special interests mentioned above are requested to send in their written applications so as to reach the undersigned by 5 p. m. of 23rd January 1926, the Local Associations in respect of the above 5 special interests, if any, in the District are also requested to suggest suitable candidates for seats reserved for them together with the applications of the candidates. The application of the candidate should contain information for which special interest he stands for election and an account of his qualifications. Each applicant shall produce evidence that he is eligible for election under rule 13 of the Bombay Primary Education Rules, 1924.

(b) One representative of the Karwar Municipality and one of the Sirsi Municipality shall be elected by the Local Authority according to the District Local Board resolution No. 40, dated 21st November 1925. The President of each Municipality is therefore requested to recommend the names of not less than 2 representatives by 23rd January 1926.

(c) The remaining 3 seats are open to the public of general interests. Members of any of the special interests who are members of the Local Authority but may not have been elected to represent any of these special classes are not excluded from election as general members of the School Board. Those who wish to stand for election for these 3 general seats should also send in written applications so as to reach the undersigned by 23rd January 1926, 5 p. m. giving full information as to their pualifications, mentioning the general interests they represent and shall also produce evidence as to their eligibility for election under rule 13 of the Primary Education Rules.

Karwar 2nd Jan. 1926 } L. S. BIJUR, C. O. — **V. R. Coelho,** *President D. L. B. Kanara.*

ಜಾಹೀರ ನೋಟೀಸು.

ಯಾವತ್ತೂ ಜನರಿಗೆ ಈ ನೋಟೀಸ ಮೂಲಕ ತಿಳಿಸುವದೇನಂದರೆ:—

ಈ ಕೆಳಗೆ ಸಹಿಮಾಡುವ ರಾಮರಾವ ಶ್ಯಾಮರಾವ ವಾಗಳೇ ಎಂಬ ನನ್ನ ಅಣ್ಣನಾದ ಗಣಪತ್ತ ಶ್ಯಾಮರಾವ ಇವನ ವಿಧವೆ ಕಾಂತಾಬಾಯಿ ಕೋಂ ಗಣಪತ್ತರಾವ ಇವಳು ೧೯೨೫ನೇ ಇಸವಿಯಲ್ಲಿ ಹೊನ್ನಾವರದಲ್ಲಿ ವ್ಯಾಜ್ಯಪಟ್ಟು ಅವಳ ಸ್ತ್ರೀಧನದ ಬಾಬ್ತು ಮಂಕಿ ಗ್ರಾಮದ ಕೆಲವು ಆಸ್ತಿಯು ಹೊನ್ನಾವರ ಕೋರ್ಟಿನ ನಂಬ್ರ ೧೯೨-೧೯೨೫ನೇದರಲ್ಲಿ ರಾಮರಾವ ಸಾಂತಯ್ಯಾ ಪೆಡ್ನೇಕರ ವಕೀಲ ಇವರು ಅವಳ ಸಾಲದ ಬಗ್ಗೆ ಜಪ್ತುಮಾಡಿಸಿರುತ್ತಾರೆ. ಸದ್ರಿ ದಾವೆಯಲ್ಲಿ ಜಪ್ತಾದ ಹೊನ್ನಾವರ ಗ್ರಾಮದ ಆಸ್ತಿಯು ನನ್ನ ದ ಅವಳ ವಳಗೆ ಇದ ರಿಜಿಸ್ಟ್ರ ದಸ್ತೇವಜು ಮೂಲಕ ನನ್ನ ಕ್ರಯದ ವಹಿವಾಟದಾಗಿರುತ್ತದೆ. ಅವಳಿಗೆ ನನ್ನಿಂದ ಥಸ್ತ ಕ್ರಯದ ಅರ್ಧ ರೂಪಾಯಿ ೪೦೦ (ನಾಲ್ಕು ನೂರು ರೂಪಾಯಿ) ಮಾತ್ರ ಸಲ್ಲತಕ್ಕದ್ದಿತ್ತು. ಆ ೪೦೦ ರೂಪಾಯಿ ಹಕ್ಕು ನನಗೆ ಅವಳ ಆರುವಾಯ ಅವಳ ರಿವ್ಹರ್ಸನರ ವಾರಿಸದಾರ ನಾತೆಯಿಂದ ನನಗೆ ಬಂದಿರುತ್ತದೆ. ಆದ್ದರಿಂದ ಸದ್ರಿ ಕಾಂತಾಬಾಯಿಯಂವ ಯಾರಿಗಾದರೂ ಸಾಲಗಳು ಸಲ್ಲತಕ್ಕದ್ದು ಇದ್ದಲ್ಲಿ, ಆ ಸಾಲಗಳ ಧನಕೋ ಇವರು ಆ ಸಾಲಗಳ ವ.ರಿತು ಈ ನೋಟೀಸು ಜಾಹೀರ ಆದ ತಾರೀಕಿನಿಂದ ೧ ತಿಂಗಳ ವಳಗೆ ದಿವಾಣೀ ಕೋರ್ಟಿನಲ್ಲಿ ದಾವೆಗಳು ತಂದು ಸಾಬೀತ ಮಾಡಿ ಹುಕುಮನಾಮೆಗಳು ಪಡದು ಸದ್ರಿ ಕಾಂತಾಬಾಯಿ ಸ್ತ್ರೀಧನದ ಆಸ್ತಿ ಬಾಬ್ತದಾರಿಯಿಂದ ವಸೂಲ ಮಾಡಿಕೊಳ್ಳಬೇಕು. ಹೊರ್ತು ಆ ಸಾಲಗಳು ನನಗೆ ಯಾ ನನ್ನ ಇತರ ಆಸ್ತಿಗೆ ಯಾವ ವಿಧದಿಂದಲೂ ಬಾಧಿಸುವಂತಾದ್ದಲ್ಲಾ. ಸದ್ರಿ ಮುದ್ದತ್ತಿನೊಳಗೆ ಅವರು ಮೇಲಿನಂತೆ ಇಲಾಜು ಮಾಡದೇ ಇದ್ದರೆ, ಆ ಸಾಲಗಳು ಕೇಳುವ ಹಕ್ಕು ಕಳಕೊಂಡವರಾಗಿ ತಿಳಿಯತಕ್ಕದ್ದು.

ಮುಂಬೈ, ತಾರೀಖು 4th Jannary 1926. } RAMRAO SHAMRAO WAGLE.

ಗೌ|ಸಾ|ಬ್ರಾ|ಸೆಕ್ಯುಲರ ಕೌನ್ಸಿಲ, ಮುಂಬಯಿ.

ತಾ. ೧-೧೧-೨೫ನೇಯ ದಿವಸ ಕೂಡಿದ ಕೌನ್ಸಿಲ ಅಸಾಧಾರಣ ಸಭೆಯಲ್ಲಿ ನೇಮಿಸಿದ ಸ್ಪೆಶಲ್ ಕಮಿಟಿಯ ಮಂಬರರು ತಯಾರ ಮಾಡಿದ ಕೌನ್ಸಿಲ ನಿಯಮಗಳ ಪ್ರತಿಗಳು ಕಾರವಾರ-ಅಂಕೋಲಾ-ಕುಮಟಾ-ಹೊನ್ನಾವರ ಶಾಖೆಗಳ ಪ್ರತಿನಿಧಿಯರ ಬಳಿಯಲ್ಲಿ ಇಟ್ಟಿರುವವು. ಈ ನಿಯಮಗಳನ್ನು ತಾ. ೨೮-೨-೨೬ ರವಿವಾರ ದಿವಸ ಕೂಡುವ ಕೌನ್ಸಿಲ ಅಸಾಧಾರಣ ಸಭೆಯ ಮುಂದೆ ಮಂಜೂರಿಗಾಗಿ ಇಡತಕ್ಕದ್ದಿರುವವು. ಆದಕಾರಣ ಕೌನ್ಸಿಲ ಎಲ್ಲಾ ಸಭಾಸದರು ಈ ನಿಯಮಗಳನ್ನು ಚನ್ನಾಗಿ ಪರೀಕ್ಷಿಸಿ ಅವುಗಳಲ್ಲಿ ಮಾಡತಕ್ಕಂಥ ಯೋಗ್ಯ ದುರುಸ್ತಿಗಳನ್ನು, ತಮ್ಮ ಸೂಚನೆಗಳನ್ನು ತಾ. ೧೦-೨-೨೬ರೊಳಗಾಗಿ ಸಂಸ್ಥೆಯ ಕಚೇರಿಗೆ ಕಳುಹಿಸಿಕೊಡಬೇಕಾಗಿ ಸವಿನಯ ವಿನಂತಿಯಿರುವದು.

c/o ಸಾರಸ್ವತ ಬ್ಯಾಂಕ್ ಸಮಾಜಗೃಹ, ಗಿರಗಾಂವ, ಮುಂಬಯಿ ತಾ. ೪-೧-೨೬ } ಕೃಷ್ಣ ಪದ್ಮನಾಭ ಪ್ರಭು. ಮುರ್ಡೇಶ್ವರ ಕಾರ್ಯದ. ಚಿಟಣೀಸ.

ಕಾನಡಾವೃತ್ತ.

ಮಿತಿ ಕ್ಷಯ ಸಂ. ಪುಷ್ಯ [illegible] ಸೋಮವಾರ.

ಮುಂದಿನ ಹೋರಾಟ.

ಲಾಲಾ ಲಜಪತರಾಯರ ವಿಚಾರಗಳು.

ಕಾನಪುರದ ರಾಷ್ಟ್ರೀಯ ಸಭೆಯ ಅಧಿವೇಶನದ ಹಕೀಕತನ್ನು ಆರಂಭಿಸುವಾಗ, ರಾಷ್ಟ್ರಪಿತಾಮರದ ಪಂಡಿತ ಮೋತಿಲಾಲರ [illegible] ಪ್ರಮುಖವಾಗಿ ಉಲ್ಲೇಖಿಸುವೆವು. ಕಾನಪುರದ ಅಧಿವೇಶನದ ಪ್ರಾಣವದು. ಈ ಠರಾವಿನ ಮರ್ಮವನ್ನು, ಸಂಪೂರ್ಣ ಅರ್ಥವನ್ನು ನಾವು ತಿಳಕೊಳ್ಳುವದು ಅವಶ್ಯವು. ರಾಷ್ಟ್ರೀಯ ಸಭಾಮಂಟಪದಲ್ಲಿ ಪಂಡಿತ ಮೋತಿಲಾಲರಿಗೆ ಬೆಂಬಲವನ್ನಿತ್ತು [illegible] ರು ಮಾಡಿದ ಉಪನ್ಯಾಸವು ಈ ಠರಾವಿನ ಮಹತ್ವವನ್ನೂ, ಈಗಿನ ರಾಷ್ಟ್ರಸೇವೆಯ ಸ್ಥಿತಿಯನ್ನು ಸುಲಭವಾಗಿ ಬೋಧಿಸುತ್ತದೆ. ಅದನ್ನೇ ಇಂದಿಗೆ ನಿರೂಪಿಸಲಿಚ್ಛಿಸುವೆವು.

ಲಜಪತರಾಯರು ಕೆಳಗಿನಂತೆ ಅಮರವಾಗಿ ಹೊಟ್ಟಮೊದಲು ಅಭಿವಚನವನ್ನಿತ್ತರು. ಸರಕಾರದೊಡನೆ ಸಹಕಾರ ಮಾಡುವದು ನಮಗೀಗ ಅಸಹ್ಯವಾಗಿದೆ. ಅಸಹಕಾರ ಪಾತ್ರತೆಯು ನಮ್ಮಲ್ಲಿದ ಹಾಗೆ, ಈವರೆಗೆ ಶತ್ರುಸಾಧಿಸಾರಂತೆ ಸರಕಾರದೊಡನೆ ಸಹಕಾರ ಮಾಡಿದರೂ ನಮ್ಮ ಗತಿಯೇನಾಯಿತು? ಜಾಲಿಯನ್‌ವಾಲಾಬಾಗ ಕೊಲೆ, ವಿಲಾಪದ ವಚನಭಂಗ. ಬೇಕಾದಷ್ಟು ಸ್ವಾರ್ಥತ್ಯಾಗದಿಂದ ನಾವು ರಾಜನಿಷ್ಠೆಯನ್ನು ಪ್ರದರ್ಶಿಸಿದೆವು. ಬ್ರಿಟಿಶ ರಾಷ್ಟ್ರದೊಡನೆ ಸ್ನೇಹಭಾವದಿಂದ ಉಳಕೊಳ್ಳಲಿಕ್ಕೂ ಯತ್ನವಮಾಡಿದೆವು. ಆದರೆ, ಎಲ್ಲವೂ ವಿಫಲವಾಯಿತು. ರಾಜ್ಯಭಾರದ ಪದ್ಧತಿಯನ್ನು ಬದಲಿಸಿ ತಮ್ಮ ಅಧಿಕಾರವನ್ನೂ, ಪ್ರಾಬಲ್ಯವನ್ನೂ ಕಳಕೊಳ್ಳಲು ಬ್ರಿಟಿಶರು ಎಂದೂ ತಯಾರಿಲ್ಲ. [ಇಂಥ ಸ್ಥಿತಿಯಲ್ಲಿ ನಾವು ಅಸಹಯೋಗವನ್ನಾಶ್ರಯಿಸಿದೆವು. ಆಗ ನಮ್ಮ ಸಾಮರ್ಥ್ಯವೆಷ್ಟು? ಸರಕಾರದ ಸಾಮರ್ಥ್ಯವೆಷ್ಟು? ಎಂಬುದನ್ನು ನಾವು ಸ್ಪಷ್ಟವಾಗಿ ವಿಚಾರಿಸಲಿಲ್ಲ. ಅಸಹಯೋಗವು ಸರಕಾರದ ಅತ್ಯಾಚಾರಕ್ಕೆ ಪ್ರತ್ಯುತ್ತರವಾದರೂ, ಸರಕಾರದ ಕುತಂತ್ರಗಳಿಗೆ ಅಸಹಯೋಗದಿಂದ ಇದಿರಾಗ ಬರಲಾರದು. ನಮ್ಮೊಳಗೆ ಅಂತಃಕಲಹಗಳನ್ನೆಬ್ಬಿಸಿ ಸ್ವಾರ್ಥ ಸಾಧಿಸುವ ಸರಕಾರಕ್ಕಿದಿರಾಗುವದು ಅಸಹಯೋಗಕ್ಕೆ ಸಾಧ್ಯವಲ್ಲ. ಇಂಥ ಪ್ರಸಕ್ತಿಯಲ್ಲಿ ನಾವು ನಿರಾಧಾರಿಗಳಾಗಿದ್ದೇವೆ. ಏನು ಮಾಡಬೇಕೆಂಬುದು ತೋಚುವದಿಲ್ಲ. ಯಾವ ಮಾರ್ಗವನ್ನಾಕ್ರಮಿಸಿದರೆ, ನಮ್ಮ ರಾಷ್ಟ್ರಕಾರ್ಯಭಾಗವಾದೀತೆಂಬ ವಿಚಾರ ಸೂಚಿಸದೆ ನಾನು ಕಳೆದ ೨ ವರ್ಷಗಳಿಂದ ಸುಮ್ಮನೆ ಕಳೆಯಬೇಕಾಯಿತು. ಆದರೆ, ಪಂಡಿತ ಮೋತಿಲಾಲರವರ ನಿರ್ಧಾರವು ರಾಷ್ಟ್ರಕ್ಕೆ ಈ ಕಾಲಕ್ಕೆ ಅದಷ್ಟು ಸ್ಪಷ್ಟವಾದ ದಾರಿಯನ್ನು ತೋರಿಸಿರುವದೆಂದು ನನ್ನ ಅಭಿಮತವಾಗಿದೆ

ಲಜಪತರಾಯರು ಇಷ್ಟು ಪ್ರಸ್ತಾವನೆ ಮಾಡಿ ರಾಷ್ಟ್ರನಿರ್ಧಾರದ ಠರಾವಿನ ಮರ್ಮವನ್ನು ತಿಳಿಸಿದರು. ಕಾಯಿದೆಭಂಗವೇ ರಾಷ್ಟ್ರವಿಮೋಚನದ ಯಶಸ್ವಿಯ ಉಪಾಯವಾದರೂ, ಅದನ್ನು ಕೈಕೊಳ್ಳುವದು, ಕೊನೆಗೆ; ಸರ್ವ ಉಪಾಯಗಳು ನಿರರ್ಥಕ ಹೊಂದಿದ ಬಳಿಕ. ಕಾಯಿದೆಭಂಗಕ್ಕೆ ನಾವು ಇಂದಿಗೆ ತಯಾರಿಲ್ಲೆಂದು ರಾಷ್ಟ್ರೀಯ ಸಭೆಯು ನಮೂದಿಸಿ, ಕಾಯಿದೆಭಂಗದ ಕಾಲಕ್ಕೆ ರಾಷ್ಟ್ರದಲ್ಲಿ ಪಸರಿಸಿದ ಹುದುಗಿಟ್ಟ ಬಲಗಳನ್ನೆಲ್ಲ ಕೇಳುತ್ತಾಕಿದೆ. ದೇಶದೊಳಗಿನ ಅಶಾಂತಿಯ ಕಾರಣದಿಂದ ಈಗ ನಾವು ಕಾಯಿದೆಭಂಗದಿಂದ ಬಹಳ ಹಿಂಜರಿದಿರುವವಾಗಿ ಲಜಪತರಾಯರು ಉದ್ಗರಿಸಿದರು. ಲಜಪತರಾಯರು ರಾಷ್ಟ್ರವಿಮೋಚನಕ್ಕಾಗಿ ೧೯೨೧-೨೨ನೇ ವರುಷಗಳಲ್ಲಿ ಸೆರೆಮನೆಯನ್ನು ಸೇರಿದ ದೇಶಬಾಂಧವರ ಕಷ್ಟಸ್ಥಿತಿಯನ್ನರಿತು, ಇಂಥವರು ಪುನಃ ಸೆರೆಮನೆಯನ್ನು ಸೇರಲು ತಯಾರಾಗದಾಗಲಿ, ಹೊಸಬರು ಸದ್ಯಕ್ಕೆ ದೊರಕುವದಾಗಲಿ ಅಸಾಧ್ಯ ಮಾತೆಂದು ಹೇಳಿ, ಕಾಯಿದೆ ಭಂಗದ ಧ್ಯೇಯವನ್ನಿಟ್ಟುಕೊಂಡು ರಾಷ್ಟ್ರದಲ್ಲಿ ಪೂರ್ವತಯಾರಿಯನ್ನು ಮಾಡುವದೇ ಪ್ರಸ್ತುತದ ರಾಷ್ಟ್ರಸೇವೆಯಾಗಿರುವದೆಂದರು.

ರಾಷ್ಟ್ರೀಯ ಸಭೆಯು ಕಾಯಿದೆ ಕೌನ್ಸಿಲುಗಳ ರಾಜಕಾರಣದ ಸೂತ್ರಗಳನ್ನು ಕೈಕೊಂಡಿದ್ದು ಮಹಾದೊಡ್ಡ ಕಾರ್ಯವಾಗಿರುವದೆಂದು ಲಜಪತರಾಯರು ನುಡಿದರು. ಕೌನ್ಸಿಲು ರಾಜಕಾರಣದಿಂದ ರಾಷ್ಟ್ರಪುರುಷನ ರೋಗ ಪರಿಹಾರವಾಗುವದು ಸಾಧ್ಯವಿಲ್ಲವೆಂಬ ಮಾತು ಲಜಪತರಾಯರಿಗೂ ಒಪ್ಪಿಗೆ. ಆದರೆ, ರೋಗವು ಬೆಳೆಯದಂತೆ ಕೌನ್ಸಿಲುಗಳಲ್ಲಿ ಸರಕಾರಕ್ಕೆ ಅಡ್ಡಗಟ್ಟಲು ಬೇಕಷ್ಟು ಇಂಬಿರುವದೆಂದು ಲಜಪತರಾಯರ ನಂಬಿಗೆಯಿದೆ. ಇನ್ನೊಂದು ವಿಶೇಷವೇನೆಂದರೆ, ಕೌನ್ಸಿಲು ಪ್ರವೇಶಕರು ಈಗಿನಂತೆ ಕೌನ್ಸಿಲುಗಳಲ್ಲಿಯೇ ಮಗ್ನರಾಗಿರದೆ, ಕೌನ್ಸಿಲು ರಾಜಕಾರಣಕ್ಕೆ ಅತ್ಯವಶ್ಯವಾದ ಪ್ರಜಾಶಿಕ್ಷಣವನ್ನು ಕೊಡುವದಕ್ಕಾಗಿ ರಾಷ್ಟ್ರೀಯ ಸಭೆಯ ಹೇಳಿಕೆಯಂತೆ ಕೆಲಸ ಮಾಡಲು ಸಿದ್ಧರಾಗಿರುವರು. ಇದು ನಿಜವಾಗಿ ವಿಶೇಷ ಅಭಿನಂದನೀಯ ಸಂಗತಿಯು. ಕೌನ್ಸಿಲು ಪ್ರತಿನಿಧಿಗಳು ಪ್ರಜಾಶಿಕ್ಷಣ ಕಾರ್ಯವನ್ನು ಕೈಕೊಂಡರೆ, ಅವರ ಮಾತುಗಳಿಗೆ ಕೌನ್ಸಿಲಿನಲ್ಲಿ ಸರಕಾರವು ಕಿವಿಗೊಡದಿರಲಾರದು.

ಕೊನೆಗೆ ಲಜಪತರಾಯರು ಸರಕಾರಿ ಅಧಿಕಾರಸ್ಥಾನಗಳ ಸ್ವೀಕಾರದ ಕುರಿತು ನಾಲ್ಕು ಮಾತಾಡಿದರು. ಸರಕಾರದ ಸೇವೆಯನ್ನು ಸ್ವೀಕರಿಸದೆ, ದೇಶಸೇವೆ ಮಾಡುವ ಪುರುಷರು ರಾಷ್ಟ್ರದಲ್ಲಿರಬೇಕೆಂದು ಲಜಪತರಾಯರ ಹೇಳಿಕೆಯಿದೆ. ಸರಕಾರಿ ಸೇವೆಯನ್ನು ಸ್ವಾಭಿಮಾನ ಪೂರ್ವಕವಾಗಿ ನಡಿಸಲು ನಮಗೆಂದೂ ಸರಕಾರವು ನಿಮಂತ್ರಿಸುವದಿಲ್ಲೆಂದು ಲಜಪತರಾಯರ ಅಂಬೋಣ; ಈ ವರ್ಷವಾದರೂ ನಿಮಂತ್ರಿಸುವ ಲಕ್ಷಣ ತೋರುವದಿಲ್ಲ. ಇಂಥ ಪ್ರಸಕ್ತಿಯಲ್ಲಿ ಶ್ರೀ ಜಯಕರ-ಕೇಳಕರರವರು ಸೂಚಿಸಿದ ಉಪಸೂಚನೆಯನ್ನು ನಾವು ಮನ್ನಿಸಲಾರೆವೆಂದು ನುಡಿದರು. ಸರಕಾರಕ್ಕೆ ಸಹಕಾರವು ಬೇಡ; ಸರಕಾರಕ್ಕೆ ನಾವು ಹಿಡಮುರಿಗೆ ಕಟ್ಟಿಕೊಂಡು, ಸಂಪೂರ್ಣವಾಗಿ ಶರಣುಹೋದರೇನೇ ಸರಕಾರದ ಸಮಾಧಾನವಾಗುವದು. ಹೀಗೆ ಸಂಪೂರ್ಣವಾಗಿ ಸಮಾಧಾನವಾಗುವದು ಯಾವದೇ ರಾಷ್ಟ್ರಸೇವಕನಿಗೆ ಶಕ್ಯವಿಲ್ಲೆಂದು ಲಜಪತರಾಯರು ನುಡಿದು, ಪಂಡಿತ ಮೋತಿಲಾಲರ ಠರಾವಿಗೆ ಬೆಂಬಲವನ್ನಿತ್ತರು. ಸಭಿಕರಿಗೆಲ್ಲ ಮೂಲ ಠರಾವನ್ನೇ ಮಂಜೂರ ಮಾಡಬೇಕಾಗಿಯೂ, ಉಪಸೂಚಕರಿಗೆ ಉಪಸೂಚನೆಗಳನ್ನು ಹಿಂತೆಗೆದುಕೊಳ್ಳಬೇಕಾಗಿಯೂ ಲಜಪತರಾಯರು ಹೃತ್ಪೂರ್ವಕವಾಗಿ ಬೋಧಿಸಿದರು.

ಮುಂದಿನ ಕಾರ್ಯಕ್ರಮವನ್ನು ಕೈಕೊಳ್ಳುವದಾಗಲಿ, ಪುರಸ್ಕರಿಸುವದಾಗಲಿ ಕಷ್ಟಕರವಾಗಿದ್ದಾಗ, ರಾಜಕಾರಣ ಸ್ಥಿತಿಯು ಸ್ಪಷ್ಟವಾಗಿ ತೋರದಿರುವಾಗ ರಾಷ್ಟ್ರನಿರ್ಧಾರದ ಠರಾವು ತರ್ಕಶಾಸ್ತ್ರಶುದ್ಧವಿರುವದಿಲ್ಲೆಂದು ಆಕ್ಷೇಪಿಸುವದು ಅಯೋಗ್ಯವು; ರಾಷ್ಟ್ರಹಾನಿಕರವು. ಪ್ರಪಂಚವು ತರ್ಕಶಾಸ್ತ್ರ ಶುದ್ಧವಾಗಿ ನಡೆಯುವದಿಲ್ಲ. ಅನೇಕ ಪ್ರಶ್ನೆಗಳ ವಿಚಾರದಿಂದ ರಾಷ್ಟ್ರವಿಮೋಚನದಂಥ ಮಹಾಕಾರ್ಯದ ಮಾರ್ಗಕ್ರಮಣವನ್ನು ರಾಷ್ಟ್ರಸೇವಕರು ನಿರ್ಣಯಿಸಬೇಕಾಗಿದೆ. ದೇಶಸೇವಕರು ದೀರ್ಘ ವಿಚಾರದಿಂದ ನಿರ್ಣಯಿಸಿದ ಮಾರ್ಗದ ಗುಣದೋಷ ವಿಚಾರದಲ್ಲಿ ನಾವು ಹೊತ್ತು ಕಳೆಯದೆ, ಅದನ್ನು ಶಿರಸಾ ವಹಿಸಿಕೊಂಡು, ಅನರಂತ ಶಕ್ತಿ ಮೀರಿ ದುಡಿದು ಮಹಾಕಾರ್ಯಗಳಲ್ಲಿ ರಾಷ್ಟ್ರಸೇವಕರಿಗೆ ನೆರವಾಗಬೇಕೆಂದು ನಾವು ದೇಶಬಾಂಧವರಿಗೆಲ್ಲ ಅಂತಃಕರಣಪೂರ್ವಕವಾಗಿ ವಿಜ್ಞಾಪಿಸುವೆವು.

ಸ್ಫುಟ ಸೂಚನೆಗಳು.

೧. ಮಹಾತ್ಮರು ಏಗಂತ ಕೀರ್ತಿಯನ್ನು ಹೊಂದುತ್ತಿರುವರೆಂದು ತಿಳಿಸಲು ಅತ್ಯಂತ ಸಂತೋಷವಾಗುತ್ತದೆ. ಕಳೆದ ಡಿಸೆಂಬರದ ನಾತಾಳದ ಹಬ್ಬದ ಸಮಯದಲ್ಲಿ ಯುರೋಪಿಯನ್‌ರೂ, ಅಮೇರಿಕೆಯವರೂ ಹಿಂದುಸ್ಥಾನಕ್ಕೆ ಬಂದಿರುವರು. ಅಮೇರಿಕೆಯಲ್ಲಿ ಮಹಾತ್ಮರ ಖ್ಯಾತಿ ವಿಶೇಷವಾಗಿದೆಯೆಂದು ನ್ಯೂಯಾರ್ಕದ ವಿಖ್ಯಾತ ಪಾದ್ರಿ ಸಾಹೇಬರಾದ ಡಾ| ಚಾರ್ಲಸ್ ಜೆಫರಸನ್‌ರವರೂ, ವಾಯವ್ಯ ವಿಶ್ವವಿದ್ಯಾಲಯದಲ್ಲಿ ಸಮಾಜಶಾಸ್ತ್ರ ಹಾಗು ಇತಿಹಾಸ ವಿಷಯಗಳ ಅಧ್ಯಾಪಕರಾದ ಪ್ರೊ| ಆರ್ಥರ ಟೊಡ್‌ರವರೂ ಪ್ರದರ್ಶಿಸಿದ ವಿಚಾರಗಳ ಮೇಲಿಂದ ಸ್ಫುಟವಾಗುತ್ತದೆ. ಡಾ| ಜೆಫರಸನ್‌ರವರು ರಾಷ್ಟ್ರ-ರಾಷ್ಟ್ರಗಳೊಳಗೆ ಶಾಂತಿಯನ್ನು ನೆಲಸುವದಕ್ಕಾಗಿ ಯತ್ನಮಾಡುವ ಪುರುಷರು. ಇವರು ಅನ್ಯದೇಶದ(?) ... "ಈ ರಾಷ್ಟ್ರದ ಇಬ್ಬರು ಪುರುಷರು ಅಮೇರಿಕೆಯಲ್ಲಿ ಹೆಸರಾದವರಿರುವರು; ಒಬ್ಬರು ಮಹಾತ್ಮರು; ಇನ್ನೊಬ್ಬರು ಟಾಗೋರರು. ಇವರೀರ್ವರೂ ನನಗೆ ಪೂಜ್ಯರು. ಗಾಂಧಿಯವರ ಸರಳತನ, ನಿಷ್ಕಪಟ ಸ್ವಭಾವ, ಸಾಹಸ ಇವೆಲ್ಲವುಗಳಿಂದ ಗಾಂಧಿಯವರು ಅಮೇರಿಕೆಯವರಿಗೆ ಬಹು ಪ್ರಿಯರಾಗಿರುವರು. ಗಾಂಧಿಯವರ ಕಲ್ಪನೆಗಳೂ, ಉಪಾಯಗಳೂ ಅಮೇರಿಕೆಯವರಿಗೆ ಸಂಪೂರ್ಣವಾಗಿ ಮನ್ನವಿರುವವೆಂದಲ್ಲ. ಹೀಗೆ ಆಗದು; ಮತಭೇದವು ಇದ್ದೇ ಇದೆ. ಗಾಂಧಿಯವರು ಕ್ರೈಸ್ತ ಮತದವರೆಂದು ಅನಿಸಿಕೊಳ್ಳುವದಿಲ್ಲ, ಆದರೆ, ಅವರ ಶಾಂತ ಸ್ವಭಾವದಿಂದ ನಿಜವಾದ ಕ್ರೈಸ್ತವೃತ್ತಿಯು ಅವರಲ್ಲಿ ಸ್ಫುಟವಾಗಿ ನನಗೆ ಕಾಣುತ್ತದೆ. ಟಾಗೋರರವರ ಮಧುರವಾದ ಭಾಷಣದಿಂದಲೂ, ಮನೋಹರವಾದ ಕವಿತೆಯನ್ನು ಮರ್ಮಭೇದಕವಾಗಿ ಪಠಿಸುವ ಶೈಲಿಯಿಂದಲೂ ಅಮೇರಿಕೆಯೊಳಗಿನ ರಸಿಕರು ಟಾಗೋರರವರಿಗೆ ಪ್ರಶಂಸುತ್ತಿರುವರು. ಹಿಂದುಸ್ಥಾನದಲ್ಲಿ ನಡೆಯುವ ಸ್ವಾತಂತ್ರ್ಯಾಂದೋಲನವನ್ನು ಅಮೇರಿಕೆಯವರು ದಿಟ್ಟಿಸಿ ನೋಡುತ್ತಿರುವರು. ಭಾರತೀಯರು ಮುಂದೆ ಉನ್ನತಿ ಹೊಂದುವರೆಂದು ಅವರು ನಂಬುತ್ತಾರೆ. ಭೂತಲದ ಮೇಲೆ ಉಂಟಾಗುವ ಹೊಸ ಸಂಸ್ಕೃತಿಗೆ ಭಾರತೀಯರು ಬಹುಮಟ್ಟಿಗೆ ಕಾರಣರಾಗುವರೆಂದು ಅಮೇರಿಕೆಯವರ ದೃಢ ಶ್ರದ್ಧೆಯಿದೆ. ಭಾರತೀಯರ ಸಹಾಯದಿಂದ ಸಂಸ್ಕೃತಿಯು ಶ್ರೇಷ್ಠವಾಗುವದೆಂದೂ ಅಮೇರಿಕೆಯವರ ಶ್ರದ್ಧೆಯಿದೆ." ಪ್ರೊ| ಟೊಡ್‌ರವರು ಕನಿಷ್ಠರ ಅಭಿಪ್ರಾಯವನ್ನು ಇನ್ನೂ ಪ್ರಕಟಿಸಿಲ್ಲ. ರವಿವಾರದಲ್ಲಿ ಹೋಗಿ ಮಹಾತ್ಮರೊಡನೆ ಮಿಶ್ರ ಸಮಯದ ವರೆಗೆ ಮಾತುಕಥೆ ನಡಿಸಿ ಬಯಸುತ್ತೀವಾಗಿ ಹೇಳಿದರು. ಮಹಾತ್ಮರ ಅಹಿಂಸಾತತ್ವ, ಶಾಂತಿಮಯ ವಿಧಾಯಕ ಚಳವಳಿಯಲ್ಲಿ ಅಮೇರಿಕೆಯವರು ವಿಶೇಷ ಆಸಕ್ತಿಯನ್ನು ಪ್ರದರ್ಶಿಸುತ್ತಿರುವರೆಂದು ಪ್ರೊ| ಟೊಡ್‌ರವರು ಉದ್ಗರಿಸಿದರು. ಅಮೇರಿಕೆಯವರ ಉದ್ಗಾರಗಳ ಮೇಲಿಂದ ಮಹಾತ್ಮರ ದರ್ಶನ ಆಕಾಂಕ್ಷೆಯೂ, ಮಹಾತ್ಮರ ಅಸಹಕಾರದ ಶಾಸ್ತ್ರ, ಕಲ್ಯಾಣಕರ ಸಾಮರ್ಥ್ಯವೂ ಒಮ್ಮೆಲೇ ದೃಗ್ಗೋಚರವಾಗುತ್ತವೆ. ಪ್ರೊ| ಟೊಡ್‌ರವರು ಲಾಲಾ ಲಜಪತರಾಯ ಹಾಗು ಪಂಡಿತ ಮೋತಿಲಾಲ ನೆಹರೂರವರೊಡನೆ ಸಂಭಾಷಣ ಮಾಡುವವರಿರುವರಾಗಿಯೂ ತಿಳಿಯುತ್ತದೆ. ಇಂಥ ಲೋಕೋತ್ತರ ಪುರುಷರೊಡನೆ ಬ್ರಿಟಿಶ ಅಧಿಕಾರಿಗಳು ಇನ್ನೂ ಭಾರತೀಯ ರಾಜ್ಯಘಟನೆಯ ಕುರಿತು ಆಲೋಚನೆ ಮಾಡದೆ, ಸ್ವೇಚ್ಛೆಯಿಂದ ನಡೆಯುವದರಿಂದ ಬ್ರಿಟಿಶ ಸಾಮ್ರಾಜ್ಯಕ್ಕೂ, ಭೂತಲಕ್ಕೂ ಬಹುಮಟ್ಟಿಗೆ ಹಾನಿಯಾಗುತ್ತದೆಂದು ನಾವಾಗಿ ಹೇಳಬೇಕೇನು?

---

೨. ಮೋಸಲ್ ಪ್ರಕರಣವು ಇನ್ನೂ ಸಮಾಧಾನಕರವಾಗಿ ನಿರ್ಣಯ ಹೊಂದಲಿಲ್ಲ. ಲಂಡನದಲ್ಲಿ ಮುಖ್ಯ ಪ್ರಧಾನರಾದ ಮಿ| ಬೋಲ್ಡವಿನ್‌ರವರಿಗೂ, ತುರ್ಕಸ್ಥಾನದ ರಾಯಭಾರಿಗಳಿಗೂ ಗುಪ್ತ ಆಲೋಚನೆಯಾದ ಹಕೀಕತವು ಪ್ರಸಿದ್ಧವಾಗಿದೆ. ಬ್ರಿಟಿಶರ ಕೇಳಿಕೆಯೇನು? ತುರ್ಕರ ಪ್ರತ್ಯುತ್ತರವೇನು? ಎಂಬದು ಇನ್ನೂ ತಿಳಿಯುವದಿಲ್ಲ. ಈಗಿನ ಮಟ್ಟಿಗೆ ನಡೆದ ಹಕೀಕತಿನ ಮೇಲಿಂದ ತುರ್ಕರು ಹಟದಿಂದ ವಾದಲಿಕ್ಕೆ ನಿರಾಕರಿಸಿದ್ದಾರೆಂಬ ನಿಶ್ಚಯದ ಸುದ್ದಿಯೊಂದು ಜಾಹೀರಾಗಿದೆ. ತುರ್ಕೀ ರಾಯಭಾರಿಗಳು ಬ್ರಿಟಿಶರ ಕುತಂತ್ರಗಳಿಗೆ ಮೋಸ ಹೋಗುವದಿಲ್ಲೆಂಬುದು ಇವರ ಮೇಲಿಂದ ಸ್ಪಷ್ಟವಾಗುವದು. ಮೋಸಲ್ ಪ್ರಕರಣವು ಸಮಾಧಾನಕರವಾಗಿ ನಿರ್ಣಯ ಹೊಂದದಿದ್ದರೆ ರಶಿಯಾ, ತುರ್ಕಸ್ಥಾನ, ಫ್ರಾನ್ಸ, ಇಟಾಲಿ, ಇಂಗ್ಲಂಡ ಈ ದೇಶಗಳೊಳಗೆ ಬಹು ವಿಷಮತೆಯು ಸಂಭವವಾಗುವ ಭೀತಿಯಿದೆ. ತುರ್ಕಸ್ಥಾನ ಹಾಗು ರಶಿಯಾ ದೇಶಗಳಲ್ಲಿ ಸಖ್ಯಕ್ಕೆ ಅದ ಕರಾರಾಯಿತು, ತುರ್ಕರು ರಶಿಯಾ ದೇಶದ ಗೆಳೆತನವನ್ನು ಸಂಪಾದಿಸಿರುವರು. ಬ್ರಿಟಿಶರು, ಇಟಾಲಿಗೂ, ತುರ್ಕರಿಗೂ ಸ್ವಾರ್ಥ ಬುದ್ಧಿಯಿಂದ ಪ್ರದೇಶದ ವಿಷಯವಾದ ದ್ವೇಷವನ್ನು ಸ್ಥಾಪಿಸಿ, ಇಟಾಲಿಗೆ ಸ್ವಾರ್ಥ ಬುದ್ಧಿಯನ್ನು ಹುಟ್ಟಿಸಿಕೊಡುವ ಕಠಿನ ಮೇಲೆ ಗುಪ್ತ ಸಂಧಾನ ಮಾಡಿರುವರಾಗಿ ಆಧಾರ ಸುದ್ದಿ ಹಬ್ಬಿದೆ. ಬ್ರಿಟಿಶ ಪ್ರಧಾನ ಮಂತ್ರಿಮಂಡಳದೊಳಗಿನ ಮಿ| ಚೆಂಬರಲೇನರವರಿಗೂ, ಇಟಾಲಿಯ ನಿರಂಕುಶ ಪ್ರಭುಗಳಾದ ಎಸ್. ಮುಸೋಲಿನಿಯವರಿಗೂ ಕಳೆದ ನಾತಾಳದ ಹಬ್ಬದಲ್ಲಿ ಗುಪ್ತ ಸಂಭಾಷಣ ನಡೆಯಿತು. ಸಂಭಾಷಣವು ೯ ತಾಸಿನ ವರೆಗೆ ನಡೆಯಿತಂತೆ. ಇತ್ತ ಫ್ರಾನ್ಸ ದೇಶವು ಸಿಟ್ಟಿಗೆದ್ದಿರುವದಿಲ್ಲ. ಮೊರೊಕ್ಕೊದಲ್ಲಿ ರಿಫ್‌ರ ಅಧಿಪತಿಯಾದ ಅಬ್ದುಲ್ ಕರೀಮನೊಡನೆ ಹೂಡಿದ ಯುದ್ಧವು ಇನ್ನೂ ಯಶಸ್ವಿಯಾಗಿ ಪರಿಣಮಿಸಲಿಲ್ಲ. ಸಿರಿಯಾ ದೇಶದಲ್ಲಿ ಡ್ರೂಸರು ಬಂಡಾಯವನ್ನೆಬ್ಬಿಸಿ ಗೊಂದಲವನ್ನೆಬ್ಬಿಸಿರುವರು, ಅವನ್ನೂ ಮುರಿದು, ಸಿರಿಯಾ ದೇಶವನ್ನು ಪ್ರಶಾಂತಗೊಳಿಸುವ ದೊಡ್ಡ ದೊಡ್ಡ ಆದಕ್ಕ ಫ್ರೆಂಚರ ಮೇಲೆ ಬಂದೊದಗಿದೆ. ಬ್ರಿಟಿಶರೂ, ಮುಸೋಲಿನಿಯವರೂ ಒಕ್ಕಟ್ಟಾಗಿ ಇಟಾಲಿಯು ಪ್ರಬಲವಾದರೆ, ಮೊರೊಕ್ಕೊ-ಸಿರಿಯಾಗಳೊಳಗಿನ ತಮ್ಮ ಪ್ರತಿಷ್ಠೆಯನ್ನು ಕಾಪಾಡುವದಕ್ಕಾಗಿ, ಇಟಾಲಿಯ ಪ್ರಾಬಲ್ಯವನ್ನು ಮುರಿಯುವದಕ್ಕಾಗಿ ಫ್ರೆಂಚರು ತುರ್ಕಸ್ಥಾನಕ್ಕೆ ನೆರವಾಗುವರೆಂದು ಸ್ಪಷ್ಟ ನಿರೀಕ್ಷಣೆಯು ಮೇಲಿಂದ ಹೇಳಬೇಕಾಗುತ್ತದೆ; ಪ್ರತ್ಯಕ್ಷವಾಗಿ ನೆರವಾಗಬರದಿದ್ದರೆ, ಅಪ್ರತ್ಯಕ್ಷವಾಗಿ ನೆರವಾಗುವರು. ಇಟಾಲಿಯು ಬಲಿಷ್ಠವಾದರೆ, ಫ್ರೆಂಚರ ಪ್ರಾಬಲ್ಯವು ಮೊರೊಕ್ಕೊ-ಸಿರಿಯಾಗಳಲ್ಲಿ ಕುಗ್ಗಿದ ಲೆಕ್ಕವೇ. ಇವೆಲ್ಲ ಪಾಶ್ಚಾತ್ಯ ರಾಜಕಾರಣದೊಳಗಿನ ತಂತುಗಳು. ಅಂತು ಮೋಸಲ್ ಪ್ರಕರಣದಲ್ಲಿ ತುರ್ಕರಿಗಿರುವ ಬೆಂಬಲ ನೋಡಿದರೆ, ತುರ್ಕಸ್ಥಾನದಲ್ಲಿ ಈಗ ರಾಜ್ಯಭಾರ ನಡಿಸುವ ಮುಸ್ತಾಫಾ ಕೆಮಾಲ ಪಾಶಾರವರ ಸಾಹಸದ ವಿಚಾರ ಮಾಡಿದರೆ, ಬ್ರಿಟಿಶರು ಮೋಸಲ್ ಪ್ರದೇಶದ ಮುರಾಶೆಗೆ ಬಲಿಬೀಳದಿರುವದು ಸಮಸ್ತ ಪ್ರಕಾರದಿಂದಲೂ ಶ್ರೇಯಸ್ಕರವು. ಸ್ವಾರ್ಥಪರಾಯಣರಾದ ಕುತಂತ್ರಿ ಬುದ್ಧಿಗಳ ಆಲೋಚನೆಯು ನಿಲ್ಲುವದೆಂದು ಯಾರು ಹೇಳಬೇಕು?

---

೩. ಎಲ್ಲರಿಗೂ ಐಕ್ಯ ಬೇಕು. ನಮ್ಮ ನೇಮಸ್ತರಿಗೂ ಬೇಕು; ಸ್ವತಂತ್ರರಿಗೂ ಬೇಕು. ಕಳೆದ ತಿಂಗಳಲ್ಲಿ ಕಲಕತ್ತೆಯಲ್ಲಿ ಸೇರಿದ ನೇಮಸ್ತ ಪರಿಷತ್ತಿನ ಅಧ್ಯಕ್ಷರಾದ ಸರ್ ಮೋರೋಪಂತ ಜೋಶಿಯವರು ಐಕ್ಯದ ಪ್ರೀತಿ ಇಂತು ಸಮಸ್ತ ಪಕ್ಷದವರೂ ಐಕ್ಯರಾಗಬೇಕೆಂದು ಅಧ್ಯಕ್ಷಸ್ಥಾನದಿಂದ ಬೋಧಿಸಿದರು. ಇದೇ ಸಮಯ ಸ್ವತಂತ್ರರು ನೇಮಸ್ತರೊಡನೆ ಐಕ್ಯಯೋಜನೆಯ ಮಾತುಕಥೆ ನಡಿಸುವದು ವಿಹಿತವೆಂದು ಕೋರಿ, ಸ್ವತಂತ್ರ ಪಕ್ಷದ ಶ್ರೀ| ಬಿಪಿನಚಂದ್ರಪಾಲರವರು ತಮ್ಮ ನಾಯಕರಾದ ಶ್ರೀ| ಬಿ. ಚಕ್ರವರ್ತಿಯವರ ಮನೆಯಲ್ಲಿ ಇತ್ತಿಟ್ಟಿನ ಪ್ರಮುಖರ ಕೂಟವನ್ನು ಸೇರಿಸಿದರು. ಮೊದಲಿಗೆ ಸ್ವರಾಜ್ಯದ ಯೋಜನೆಯು ಇತ್ತಿಟ್ಟವರಿಗೆ ಅವಶ್ಯವಿದೆ; ಆದರೂ, ಅವರಂತೆ ರಾಜ್ಯಭಾರವನ್ನು ನಡಿಸಲು ನಾವು ಬದ್ಧರಿದ್ದೇವೆಂದು ನೇಮಸ್ತರ ಆಗ್ರಹ; ಅದೊಂದು ಅವರ ಪಕ್ಷದ ತತ್ವವೆಂತಲೂ ಅವರ ಹೇಳಿಕೆ. ಮೊಟ್ಟಮೊದಲಿಗೆ ಸ್ವರಾಜ್ಯ ಪಕ್ಷದವರು ಸಹ ಇಷ್ಟು ಅಧಿಕಾರದ ಹಿತಾಯಬಲ್ಲರೆಂದು ಯಾರಿಗೂ ತಿಳಿಯಲಾರದು. "ನ ದಹತಿ ರವಿಸ್ತಾದೃಶ್ ಯಾದೃಶ್ ವಾಲುಕಾನಿಕರಃ" ಬಿಸಿಲು ಕಾವದ ಅನಿಸಾದ ಸೂರ್ಯನಾರಾಯಣನ ತಾಪಕ್ಕಿಂತ, ಅದರಿಂದ ಉಷ್ಣತೆಯನ್ನು ಪಡೆದ ಉಸುಕಿನ ತಾಪವೇ ಮಿಗಿಲಾದದ್ದು. ಸ್ವತಂತ್ರರಿಗೆ ಸ್ವರಾಜ್ಯ ಪಕ್ಷದ ವಿನಾಶಕ ಧೋರಣವು ಮಾನ್ಯವಿಲ್ಲ; ಆದರೆ, ಅದನ್ನು ಅಪ್ಪಗಳೆಯಲಿಕ್ಕೂ ಅವರು ಒಪ್ಪುವದಿಲ್ಲ. ಹೀಗೆ ಅವರೊಳಗೂ ತತ್ವಭೇದಕ್ಕಿಂತ ದುರಾಗ್ರಹವೇ ತಲೆದೋರಿದ್ದರಿಂದ ಪರಿಷತ್ತು ವಿಫಲವಾಯಿತು; ಅದಕ್ಕಾಗಿ, ನೇಮಸ್ತರಿಗೂ ಐಕ್ಯ ಬೇಕು; ಸ್ವತಂತ್ರರಿಗೂ ಐಕ್ಯ ಬೇಕು. ಐಕ್ಯದ ಕೂಟವು ಗೂಡಿಲ್ಲೆಂದು ಸಮಸ್ತರಿಗೂ ಶ್ರದ್ಧೆ. ಆದರೆ, ನಾವು ಹೇಳಿದಂತೆ ಸ್ವಪಕ್ಷ ತತ್ವಗಳನ್ನು ಎಲ್ಲರೂ ಮಾನ್ಯ ಮಾಡಿದರೆ, ತಮ್ಮ ಪ್ರತಿಷ್ಠೆಯು ಶಾಶ್ವತವಾಗಿ ಬಾಳಿದರೆ, ಐಕ್ಯರಾಗಲಿಕ್ಕೆ ಸ್ವತಂತ್ರರೂ ತಯಾರು! ನೇಮಸ್ತರೂ ತಯಾರು!!

---

೪. ಸದ್ಯಕ್ಕೆ ಮುಂಬಯಿಯ ಮ್ಯುನಿಸಿಪಾಲಿಟಿಯಲ್ಲಿ ಮದ್ಯಪಾನದ ಕುರಿತು ಕೆಲವು ಚರ್ಚೆಯಾಗಿತ್ತು. ಮ್ಯುನಿಸಿಪಾಲಿಟಿಯ ವಿದ್ಯಮಾನ ನಡೆಯುವ ಉತ್ಸವ-ಭೋಜನಾದಿ ಸತ್ಕಾರ ಸಮಾರಂಭಗಳಲ್ಲಿ ಮದ್ಯಸೇವನವನ್ನು ಮಾಡಬಾರದೆಂದು ಕೆಲ ಸಭಾಸದರು ಪ್ರತಿಪಾದಿಸಿದ್ದರು. ಅದರಾವ ತಿರಸ್ಕರಿಸಲ್ಪಟ್ಟಿತು. ಇದೇ ಸಮಯ ವಿಲಾಯತಿಯಲ್ಲಿ ನಡೆದ ಒಂದು ಹಕೀಕತನ್ನು ನಿವೇದಿಸುವದು ಸಮಯೋಚಿತವು. ಬ್ರಿಟಿಶ ರಾಷ್ಟ್ರದ ಸ್ಕಾಟ್ಲಂಡ ದೇಶದಲ್ಲಿ ಅಬರ್ಡೀನ ಎಂಬದೊಂದು ದೊಡ್ಡ ಪಟ್ಟಣವಿದೆ. ಇಲ್ಲಿ ಟೌನ್ ಕೌನ್ಸಿಲ್ ಎಂಬ ಮ್ಯುನಿಸಿಪಾಲಿಟಿಯಿದೆ. ಅದರ ಡಿಸೆಂಬರ ತಿಂಗಳಿನ ೧೫ನೇ ತಾರೀಖಿನಿಂದ

ಮದ್ಯವನ್ನು ಮ್ಯುನಿಸಿಪಾಲಿಟಿಯು ವಿದ್ಯಮಾನ ನಡೆಯುವ ಸಮಾರಂಭಗಳಲ್ಲಿ ಪೂರ್ವ್ಯಕಬಾರವಾಗಿ ದರಾಯಿಸಿರುವರು. ಹಿಂದೂ-ಮುಸಲ್ಮಾನರಿಗೆ ಮದ್ಯಪಾನವು ಧರ್ಮದಿಂದಲೇ ನಿಷಿದ್ಧವಿದೆ. ಹೀಗಿರಲು, ಹಿಂದೂ-ಮುಸಲ್ಮಾನರ ಪ್ರಾಬಲ್ಯವಿದ್ದ ಹಿಂದುಸ್ಥಾನದಲ್ಲಿ ಮದ್ಯಪಾನಕ್ಕೆ ತಕರಾರಿನ ಯತ್ನಗಳು ವಿಫಲವಾಗುವದೂ, ಮದ್ಯಸೇವಕ ಪಾಶ್ಚಾತ್ಯರಲ್ಲಿ ಕಡೆ ಬೀರುವದೂ ನಮ್ಮ ಪಾರತಂತ್ರ್ಯದಿಂದು ಬಂದ ಮನೋವೃತ್ತಿಯು ಲಕ್ಷಣವಲ್ಲವೇ?

---

೫. "ಮುಂಬಯಿ ಕ್ರಾನಿಕಲ್" ಪತ್ರಿಕೆಯು ಸಂಪಾದಕರಾಗಿದ್ದ, ಹಿ ದಮಾಕೆಯು ನಿಸ್ಸಂಕ ಸೇವಕರಾಗಿದ್ದ ಮಿ ಬೆಂಜಾಮಿನ್ ಗಾಯ್ ಹಾರ್ನಿಮ ನ್‌ರವರು ಸಿಂಹಳ ದ್ವೀಪಕ್ಕೆ ಹೋಗಿದ್ದಿರುವರೆಂಬ ವರ್ತಮಾನ ಸ್ಮರಣೀಯ. ಅತ್ಯಂತ ಸಂತೋಷವಾಗುತ್ತದೆ. ಮಿ। ಹಾರ್ನಿಮನ್‌ರವರು ಸ್ವಾತಂತ್ರ್ಯ ಸಂಗ್ರಾಮದೊಳಗಿನ ವೀರರು. ರೌಲೆಟ್ ಆಕ್ಟ ಪ್ರಕರಣದಲ್ಲಿ ಅವರು ಮಾಡಿದ ಲೋಕಸೇವೆಯೂ ಸತ್ಯಾಗ್ರಹ ಸಂಗ್ರಾಮದಲ್ಲಿ ಹಗಲಿ ರಾತ್ರಿ ಪವಿತ್ರವಾದ ಹಕೀಕತೂ ನಿಮ್ಮ ಸಂಭವಿಸಿದವಲ್ಲ, ಮಿ। ಹಾರ್ನಿಮನ್‌ರವರು ಹೇಳಿದ ಕೂಡಲೆ, ಸನವಾಗುತ್ತದೆ. ಹಿಂದುಸ್ಥಾನದ ವಿರಹಕಾರಣವು ಮಿ। ಹಾರ್ನಿಮನ್‌ರವರಿಗೆ ಅಸಹ್ಯವಾಗಿದೆ. ಅವರ ಮೇಲೆ ಆರೋಪವಾವುದು? ಯಾವುದಕ್ಕಾಗಿ ಅವರಿಗೆ ಹದ್ದುಪಾರು ಮಾಡಲಾಯಿತು? ಈಗಲೂ ಅವರಿಗೆ ಪ್ರಿಯ ಹಿಂದುಸ್ಥಾನಕ್ಕೆ ಯಾಕೆ ಬರಗೊಡುವದಿಲ್ಲ? ಎಂಬೀ ಪ್ರಶ್ನೆಗಳನ್ನು ಸರಕಾರಕ್ಕೆ ಪುನಃ ಪುನಃ ಕೇಳಿದರೂ, ಸರಕಾರವು ಮೂಕವೃತ್ತಿಯನ್ನೇ ತಾಳಿ ಮಿ। ಹಾರ್ನಿಮನ್‌ರವರಿಗೆ ಪ್ರತಿಬಂಧಿಸುತ್ತದೆ. ಯುದ್ಧಕಾಲದಲ್ಲಿ ಜನರ ಹೊಂದಿದ ಪಾಸ್‌ಪೋರ್ಟ ಯಾನ ಪ್ರಯಾಣದ ಅಪ್ಪಣೆಯನ್ನು ಪಡೆಯುವ ಶಾಸ್ತ್ರವಿಧಿಯಿಂದ ಮಿ। ಹಾರ್ನಿಮನ್‌ರವರನ್ನು ಸರಕಾರವು ಹಿಂದುಸ್ಥಾನಕ್ಕೆ ಬರಗೊಡುವದಿಲ್ಲ. ಪಾಸ್‌ಪೋರ್ಟ ಬೇಡವಷ್ಟೆ, ಸಾಮ್ರಾಜ್ಯ ಸರಕಾರವು ಹಿಂದುಸ್ಥಾನ ಸರಕಾರದ ಮೇಲೆ, ಹಿಂದುಸ್ಥಾನ ಸರಕಾರವು ಮುಂಬಯಿ ಸರಕಾರದ ಮೇಲೆ, ಹೀಗೆ ಹವಾಲೆ ಹಾಕಿ ಈ ವರೆಗೆ ಅವರನ್ನು [illegible] ಮಿ। ಹಾರ್ನಿಮನ್‌ರವರು ಸಿಂಹಳದ್ವೀಪಕ್ಕೆ ಬಂದ ಹಿಂದುಸ್ಥಾನ ಸರಕಾರದ ಸತ್ತಾಧಿಕಾರಿಗಳನ್ನು ಪಡೆದಿರುವರು ಹಿಂದವಾಸಿಗರು, ಮಿ। ಹಾರ್ನಿಮನ್‌ರವರಿಗೂ ವಿರಹಕಾರಣವು ಅಸಹ್ಯವಾಗಿದೆ, ವಿರಹ ವೇದನೆಯಿಂದ ಕಾತರರೂ ಬೆಂದು ವೆ ಜಾಗರೂಕರು ಈ ಸನುಯ ಹಿಂದುಸ್ಥಾನವನ್ನು ಸೇರಲು, ಹಿಂದುಸ್ಥಾನ ಸರಕಾರವು, ಮಿ। ಹಾರ್ನಿಮನ್‌ರವರಂಥ ಪರೋಪಕಾರಿಗಳಿಗೆ ಅಪ್ಪಣೆಯನ್ನೀಯುವದಿಲ್ಲವೇಕೆ? ಶಸ್ತ್ರರು, ಅಧಮರು, ದೇಶದ್ರೋಹಿಗಳು ಹಿಂದುಸ್ಥಾನಕ್ಕೆ ಬರಲು ಪಾಸಪೋರ್ಟ ಕಾಯಿದೆಯು ಅಡ್ಡಿಯಾಗದಿರುವಾಗ, ಮಿ। ಹಾರ್ನಿಮನ್‌ರವರಂಥ ಲೋಕೋಪಕಾರಿ ಪ್ರಶಸ್ತರಿಗೆ ಆತಂಕವಾಗುವದು ಬ್ರಿಟಿಶ ರಾಜ್ಯದ ಮೇಲಿನ ಶಾಶ್ವತವಾದ ಕಲಂಕವು. ಅದನ್ನು ಹೋಗಲಾಡಿಸಿರೆಂದು ಮುಂಬಯಿಯ ಕಾರ್ಪೊರೇಶನ್, ಪೆಟಿಟ್, ಬೆರಿಸ್ಟರ ಜಿನ್ನಾರವರಂಥ ಲೋಕಾಗ್ರಣಿಗಳು ಆಗ್ರಹ ಮಾಡುತ್ತಿರುವರು. ಸರಕಾರದ ಉತ್ತರವೇನಿರುವದು?

ಸ್ಥಾನಿಕ ವೃತ್ತಾಂತ.

ಕುಮಟಾ— ಚಳಿ ವಿಶೇಷ. ಘಟ್ಟದಮೇಲಿಂದ ಅಕ್ಕಿ, ರಾಗಿ, ಮೆಣಸುಗಳ ಆಮದಾಗುತ್ತಿದೆ.

ಕಳೆದ ೮-೧೦ ದಿನಗಳ ಹಿಂದೆ ಮಿರ್ಜಾನದಲ್ಲಿ ಒಂದು ಹುಲಿಯನ್ನು ಅಲ್ಲಿ ಬೇಸಾಯಗಾರರು ಸಾಹಸ ಮಾಡಿ ಕೊಂದರು.

ಶ್ರೀ ಗೋಕರ್ಣಕ್ಷೇತ್ರದಲ್ಲಿ ವೇ। ಗಾಯತ್ರಿ ಸದಾಶಿವ ಭಟ್ಟರಲ್ಲಿ ಸುಮಾರು ೪ ಸಾವಿರ ರೂಪಾಯಿಗಳ ಸೊತ್ತು ಕಳುವಾಯಿತು. ಆರೋಪಿಯು ಪೋಲೀಸರ ಮುಂದೆ ಒಪ್ಪಿಕೊಂಡನು. ಮೆಜಿಸ್ಟ್ರೇಟರಲ್ಲಿಯೂ ಒಪ್ಪಿಕೊಂಡನು. ಪ್ರಸ್ತುತ ವಿಷಯದೊಳಗಿದ್ದ ಮೂಲಕ ಅನರ್ಥವೊದಗಿ ತಂದು ಆತನ ಕೇಸಿಗೆ ಆರೋಪಿಯು ಮೊನ್ನೆಯಿಂದ ಇಲ್ಲಿ ನಡೆಯುತ್ತಿರುವದು.

ಇಲ್ಲಿಯ ಗುರ್ಜರ ಸಮಾಜದವರ ಶ್ರೀ ಬಾಲಕೃಷ್ಣ ದೇವರನ್ನು ಶ್ರೀ ಕ್ಷೇತ್ರ ಗೋಕುಲಕ್ಕೆ ಒಯ್ಯಿಸುವ ಯೋಜನೆಯನ್ನು ಸಮಾಜದ ಬಹು ಸಂಖ್ಯಾತರು ತೀವ್ರವಾಗಿ ವಿರೋಧಿಸಿದರು. [illegible] ದೇವರ ಸಾನ್ನಿಧ್ಯತ್ವ ಇಲ್ಲಿಯೇ ಇರುವದು ಗುರ್ಜರ ಸಮಾಜಕ್ಕೆ ಶ್ರೀ [illegible] ಕೃಷ್ಣನು [illegible] ದೃಷ್ಟಿಯಿಂದ ಅನುಗ್ರಹಿಸಲಿ.

ಹೊನ್ನಾವರದಲ್ಲಿ ಶ್ರೀ ರಾಮಚಂದ್ರ ಶ್ರೀಮದ್ದೀಕ್ಷಿತ ಸ್ವಾಮಿಯವರು ಬಂದಿರುವರು. ಶ್ರೀ ಸ್ವಾಮಿಗಳವರು ಕಳೆದ ಗುರುವಾರ ಸಾಯಂಕಾಲ ೫ ಘಂಟೆಗೆ ಧರ್ಮ ವಿಷಯದ ಮೇಲೆ ವಿಸ್ತೃತವಾದ ಉಪನ್ಯಾಸವಿತ್ತರು. ಧರ್ಮವೆಂದರೆ ಶ್ರೇಯಸ್ಸಾಧನವೆಂತಲೂ, ಶ್ರೇಯಸ್ಸು ಕರ್ಮಗಳಿಂದ ಸಂಪಾದಿಸತಕ್ಕದ್ದೆಂದೂ ಕರ್ಮಗಳಲ್ಲಿ ಕಾಮ್ಯ ನಿತ್ಯ ನೈಮಿತ್ತಿಕ ಹೀಗೆ ಮೂರು ಪ್ರಕಾರಗಳಿರುವವೆಂದೂ, ಉಪಾಸನೆ, ಜಪ ತಪ ಮೊದಲಾದ ಕರ್ಮಾಚರಣೆಗಳನ್ನು ಮಾಡುವದು ಕಾಮ್ಯ ಕರ್ಮಗಳೆಂತಲೂ ಪಕ್ಕಾಗಿ ಅಂತಹ ಕಾರ್ಯದ ಆಪ್ತವಾಗದಂತೆ ಆಚರಿಸುವ ಸಂಧ್ಯಾವಂದನಾದಿ ಕರ್ಮಗಳಿಗೆ ನಿತ್ಯಕರ್ಮವೆಂದೂ, ನಿತ್ಯ ಕರ್ಮಗಳನ್ನು ಆಚರಿಸದೆ ತಪ್ಪಿದಲ್ಲಿ ಪ್ರಾಯಶ್ಚಿತ್ತ ಕರ್ಮಗಳನ್ನು ಕೈಕೊಳ್ಳಬೇಕು. ನೈಮಿತ್ತಿಕ ಕರ್ಮಗಳೆಂದು ಶ್ರೀ ಸ್ವಾಮಿಗಳವರು ಪೂರ್ವಪಕ್ಷ-ಉತ್ತರ ಪಕ್ಷಗಳಿಂದ ಸವಿಸ್ತಾರವಾಗಿ ಬೋಧಿಸಿದರು. ಯಾಗಾದಿ ಉದ್ದಿಷ್ಟ ವೈದಿಕ ಕರ್ಮಗಳು ಹೇರಳವಾಗಿರುವದರಿಂದ ಶಾಸ್ತ್ರಗಳಿಂದ ಯಾಗಾದಿಗಳ ನಿರ್ಣಯವಾಗದಿದ್ದಲ್ಲಿಯೂ, ಆಚಾರ್ಯ ವಿದ್ಯಾಕೋಟಿಗೆ ಸಿದ್ಧ ಪ್ರತಿಪಾದನೆ ಇವೆಲ್ಲ ಪ್ರತಿಪಾದಿಸಿ ಮಾನವರಿಗೆ ಮೋಕ್ಷ ಸಾಧಕವಾಗಿರುವದಾಗಿ ಹೇಳಿ, ಧರ್ಮಪಂಕ್ತಿ ನಿತ್ಯ, ನೈಮಿತ್ತಿಕ, ಕಾಮ್ಯ ಕರ್ಮಗಳನ್ನು ಆಚರಿಸಿ ಶ್ರೇಯಸ್ಸನ್ನು ಪಡೆಯಬೇಕೆಂದು ಬೋಧಿಸಿದರು. ಒಂದು ಆಕ್ಷೇಪವನ್ನು ನಿರಸನ ಮಾಡಿದರು. ಕಲಿಯುಗದಲ್ಲಿ ಮಾನವನಿಗೆ ಧರ್ಮಶಾಸ್ತ್ರದಲ್ಲಿ ವಿವರಿಸಿದಂತೆ, ಬ್ರಹ್ಮಚರ್ಯ, ಗಾರ್ಹಸ್ಥ್ಯ, ವಾನಪ್ರಸ್ಥ, ಸನ್ಯಾಸ ಆಶ್ರಮಗಳನ್ನು ಪಾಲಿಸುವದು ಸಾಧ್ಯವಿಲ್ಲದಿದ್ದಾಗ್ಯೂ, ಆ ದೃಷ್ಟಿಯಿಂದ ವಿಚಾರಿಸಿದರೆ, ಬ್ರಹ್ಮಚಾರಿಯಾಗಿಸಿಕೊಳ್ಳಲಿಕ್ಕೆ ಈಗ ಯಾರೂ ಮುಂದಾಗದಿದ್ದರೂ, ಬ್ರಹ್ಮಚಾರಿಯಾಗದಿದ್ದರೆ, ಮುಂದಿನ ಆಶ್ರಮಗಳ ಪಾತ್ರತೆಯನ್ನು ಪಡೆಯಲು ಸಾಧ್ಯವಿಲ್ಲೆಂದೂ ಅನೇಕರು ವಾದಿಸಬಹುದು. ಶ್ರೀ ಸ್ವಾಮಿಯವರು ಉತ್ತರಿಸಿದ್ದೇನೆಂದರೆ— ಈಗಿನ ಕಾಲದಲ್ಲಿ ಆಯುಷ್ಯ ಮಾನವು ಕುಗ್ಗಿರುವದರಿಂದ ಶಾಸ್ತ್ರದಲ್ಲಿ ವಿಧಿಸಿದಂತೆ ಆಶ್ರಮಗಳನ್ನು ಪರಿಪಾಲಿಸುವದು ಅಸಾಧ್ಯವಿದ್ದರೂ, ಯಥಾಶಕ್ತಿ ಕರ್ಮವನ್ನು ಶಕ್ತಿಮೀರಿ ಆಚರಿಸಬೇಕಾಗಿಯೂ, ನಿಷಿದ್ಧ ಕರ್ಮಗಳನ್ನು ತ್ಯಜಿಸಬೇಕಾಗಿಯೂ ಶ್ರೀಗಳು ಬೋಧಿಸಿ, ಮಾನವಜನ್ಮವನ್ನು ಧರ್ಮಮಾರ್ಗಕ್ಕೆ ಪ್ರವರ್ತಿಸಿಕೊಳ್ಳಬೇಕೆಂದು ಹೇಳಿದರು. ಮೈಸೂರಿನ ಮಹಾರಾಜಾ ಕಾಲೇಜಿನ ಮಹಾವಿದ್ವಾನ್ ಹಾಗು ವ್ಯಾಕರಣದ ಅಧ್ಯಾಪಕರಾದ ಶ್ರೀ। ಶಾ। ಶೇಷಸುಬ್ರಹ್ಮಣ್ಯ ಶಾಸ್ತ್ರಿಗಳು ಶ್ರೀಗಳ ಉಪನ್ಯಾಸದ ಅನುವಾದವನ್ನೇ ಸ್ವಲ್ಪದರಲ್ಲಿ ಸಭಿಕರ ಅಪೇಕ್ಷೆಯಂತೆ ಸುಲಭವಾಗಿ ತಿಳಿಸಿದರು. ಪ್ರಾಣಿಹಿಂಸೆಯ ಮೇಲಿನ ಒಂದು ಆಕ್ಷೇಪಕ್ಕೆ ಅವರು ಉತ್ತರ ಕೊಡುವಾಗ ನುಡಿದದ್ದೇನಂದರೆ:—ಜಲದಿಂದ ಜೀವಿಸುವ ಸಮಸ್ತ ವಸ್ತುಗಳಿಗೆ ಪ್ರಾಣಿಯೆಂದು ಸಂಬೋಧಿಸುತ್ತಾರೆಂದೂ, ವನಸ್ಪತಿಗಳ ಸಂಹಾರವೂ ಧರ್ಮಶಾಸ್ತ್ರದಂತೆ ಪ್ರಾಣಿಹಿಂಸೆಯೇ ಆಗಿರುವದೆಂದೂ, ಅದನ್ನು ಮಾನವನು ಆಚರಿಸಲೇಬೇಕಾಗಿರುವದರಿಂದ ಯಜ್ಞದ ಬಗ್ಗೆಯೂ ಹಾಗೆಯೇ ನಮ್ಮ ವಿಚಾರವನ್ನಿಡಬೇಕೆಂದರು. ಯಜ್ಞಾಧಿಕಾರ ಪ್ರಾಪ್ತವಾದ ಮನುಷ್ಯನ ಧರ್ಮಕರ್ತವ್ಯವು ಪ್ರಾಣಿಹಿಂಸೆಯು ಹೊರತು ಸಾಗದ ಮೂಲಕ, ಪ್ರಾಣಿಹಿಂಸೆಯ ಆಕ್ಷೇಪವನ್ನು ತರಲಾಗದೆಂದೂ, ಯಜ್ಞಾಧಿಕಾರವಿಲ್ಲದ ಯಾರಿಗೂ ಪ್ರಾಣಿಹಿಂಸೆಯನ್ನಾಚರಿಸುವದು ಧರ್ಮನಿಷಿದ್ಧವೆಂದೂ ಶ್ರೀ। ಶೇಷಸುಬ್ರಹ್ಮಣ್ಯ ಶಾಸ್ತ್ರಿಗಳು ವಿಶದವಾಗಿ ವಿವರಿಸಿ, ಧರ್ಮರಹಸ್ಯವನ್ನು ಗುರುಮುಖದಿಂದ ಸಂಪಾದಿಸಬೇಕಾದ್ದರಿಂದ ಶ್ರೀ। ಗುರುಗಳ ಸೇವೆ ಮಾಡಿ, ಧರ್ಮದ ಮರ್ಮವನ್ನರಿತುಕೊಂಡು ಸಮುಸ್ತರೂ ನಡೆಯಬೇಕಾಗಬೇಕೆಂದು ಶ್ರೀ। ಶಾಸ್ತ್ರಿಗಳು ಬೋಧಿಸಿದರು. ಈ ಪ್ರವಚನಕ್ಕಾಗಿ ಆ। ಕಲೆಕ್ಟರ ಮಿ। ಭಿಡೇ, ಸಬಜಜ್ಜ ಮಿ। ಚಿನವಾಳಗುಂದ ಇತ್ಯಾದಿ ಅಧಿಕಾರಿಗಳೂ ಚಿತ್ತೈಸಿದ್ದರು. ಶ್ರೀ ಸ್ವಾಮಿಗಳು ಮೊಲ್ಬಂದ ಮುಹಾನ ಭಾವರಿಗೆ ಉಪಮಗರೆಯನ್ನಿತ್ತು ಆಶೀರ್ವದಿಸಿದರು. ಈ ಹೊತ್ತು ಹೆಗಡೆ ಮುಕ್ಕಾಮಿನಲ್ಲಿ ಶ್ರೀ ಶಾಂತಿಕಾ ಪರಮೇಶ್ವರೀ ದೇವರ ರಥೋತ್ಸವವು ಜರಗುವದಿದೆ.

ಶ್ರೀಮಾಲಸಿದ್ಧೇಶ್ವರ ಪ್ರಾಸಾದಿಕ ನಾಟಕಮಂಡಳಿ,ಹಲಗೇರಿಯವರು ಇಲ್ಲಿ ಬಂದಿರುವರು. ನಾಳೆ ಮಂಗಳವಾರಕ್ಕೆ ಶ್ರೀ ಬಾಲಕೃಷ್ಣ ಲೀಲಾ ಪ್ರಯೋಗವು ಇಡಲ್ಪಟ್ಟಿದೆ.

ಸಾಭಾರ ಸ್ವೀಕಾರ

ಜಯಕರ್ನಾಟಕ— ಪುಷ್ಯ ಮಾಸದ ಸಂಚಿಕೆ ಸಂಪಾದಕ ಮತ್ತು ಪ್ರಕಾಶಕ—ಶ್ರೀ। ಆಲೂರ ವೆಂಕಟರಾಯರು, ಧಾರವಾಡ. ವಾ. ವ ರೂ ೫-೮-೦.

ರಂಗಭೂಮಿ—ಶ್ರೀ ದತ್ತಾತ್ರೇಯ ಕರ್ನಾಟಕ ಸಂಗೀತ ನಾಟಕ ಮಂಡಳಿ ಗದಗ, ಇವರ ಆಶ್ರಯದಲ್ಲಿ ಹೊರಡುವ ಮಾಸಪತ್ರಿಕೆ ಸಂಚಿಕೆ ೫ ಸಂಪಾದಕ— ಶ್ರೀ। ಅ ನ್ಯ ಭಾರದ್ವಾಜ ಬಸವನಗುಡಿ, ಬೆಂಗಳೂರು. ವಾರ್ಷಿಕ ವರ್ಗಣಿ ರೂ. ೩-೦-೦

ಆಯುರ್ವೇದ— ನೂತನ ಮಾಸಪತ್ರಿಕೆ ಪ್ರಥಮ ಸಂಚಿಕೆ ಸಂಪಾದಕರು— ವಿದ್ವಾನ್ ಬಿ. ಸೂರ್ಯನಾರಾಯಣ ಶಾಸ್ತ್ರಿ, ಆಯುರ್ವೇದ ಭೂಷಣ, ಸಾಹಿತ್ಯ ವಿದ್ವಾನ್, ಕಾವ್ಯತೀರ್ಥ, ಚಿಕಿತ್ಸಕ, ಶ್ರೀ ಭೂಪೇಂದ್ರ ಆಯುರ್ವೇದ ವೈದ್ಯಶಾಲಾ, ತೀರ್ಥಹಳ್ಳಿ. ಪ್ರಕಾಶಕರು- ಜೀ ರಘುಪತಿರಾವ್ ಪ್ರಿಂಟರ್, ತೀರ್ಥಹಳ್ಳಿ ವಾರ್ಷಿಕ ವರ್ಗಣಿ ರೂಪಾಯಿ ೩-೦-೦ ಮಾತ್ರ

ಇತರ— ೧೯೩೬ನೇ ಇಸ್ವಿಯ ಕೆಲೆಂಡರು ಅಮೃತಾಂಜನ ಡಿಪೋ, ಫೋರ್ಟ, ಮುಂಬಯಿ

ಬಿನ್ನಗೆ—ರಾ। ವಿಷ್ಣು ರಘುನಾಥ ಕಾಮತ ಇವರು ಗ್ರಹಣಕಾಲವನ್ನು ನೋಡಿದ ಕಾಲಾವಧಿ ಬರೆದು ತಿಳಿಸುವದೇನಂದರೆ— ಕರ್ಣಾಟಕ ಮಾಡಿರುವ ಎಂಬ ಸಾಕ್ಷ್ಯಗಳ ಗ್ರಂಥದಂತೆ, ಸೂರ್ಯಗ್ರಹಣದ ಕಾರವಾರ ಊರಿನ ಸ್ಥಾನಿಕ ವೇಳೆಗಳು ಯಾವವೆಂದರೆ: ಸ್ಪರ್ಶ ಘಂಟೆ ೧೦-೩೯ ಮಿನಿಟು, ಪರಮ ಗ್ರಾಸ ಘಂಟೆ ೧೧-೫೦ ಮಿನಿಟ, ಮೋಕ್ಷ ಘಂಟೆ ೧೩-೫೬; ಪರಮ ಅಂಶ ೩-೫೬; ಶೇಷ ಅಂಶ ೬-೫೫ ಸಮಯವು ಸ್ಟಾಂಡರ್ಡ ಟೈಮಿನಂತೆ ಕೊಟ್ಟಿರುತ್ತದೆ. ಮುಂಚಿನ ದಿನ ಸೂರ್ಯಾಸ್ತ ಸಮಯಕ್ಕೆ ಸೂರ್ಯನನ್ನು ನೋಡಿ ಗಡಿಯಾರವನ್ನು ೬ ಘಂಟೆ, ೩೧ ಮಿನಿಟು ಮಾಡಬೇಕು. ಅಥವಾ ತಂತಿ ಆಫೀಸುಗಳ ಗಡಿಯಾರದ ಮೇಲಿಂದ ಹೊತ್ತು ಹಚ್ಚಿಕೊಳ್ಳಬೇಕು. ಅಂದರೆ ಮೇಲೆ ಕೊಟ್ಟ ಟೈಮಿಗೆ ಸರಿಯಾಗಿ ಸ್ಪರ್ಶ-ಮಧ್ಯ ಮೋಕ್ಷಗಳಾದದ್ದು ಕಂಡುಬರುವದು. ಕಾರವಾರದ ಟೈಮು ಹೆಚ್ಚು ಕಡಿಮೆ ಇದೇ ಜಿಲ್ಲೆಯಲ್ಲಿ ಹಿಡಿ

...ಬಹುದಾದ್ದರಿಂದ ಜಿಲ್ಹೆಯವರೆಲ್ಲರೂ ಪ್ರತ್ಯಕ್ಷ ಅನುಭವ ಪಡೆಯಬಹುದು.

ಹೊನ್ನಾವರ— ಸಾರಸ್ವತ ಧರ್ಮಶಾಲೆಯ ... ವದೇನಂದರೆ:— ಇಲ್ಲಿಯ ಶ್ರೀ ಗೋಪಾಲಕೃಷ್ಣ ದೇವರ ರಥೋತ್ಸವದ ಸಮಯ ಇಲ್ಲಿಯ ಗೌಡ ... ಕುಲ ಜಾತಿಯವರ ಕಡೆಯಿಂದ ಶ್ರೀದೇವರ ಪಲ್ಲಕ್ಕಿಯನ್ನು ಹೊರಿಸಿ ಮೆರವಣಿಗೆಯನ್ನು ನಮ್ಮ ಸಮಾಜದವರು ...ಗಾರದಿಂದ ಸಾಗಿಸಿದರು. ಈ ಪ್ರಕಾರವು ಶ್ರೀದೇವಸ್ಥಾನದ ...ಗಳಿಗೂ ಧರ್ಮದರ್ಶಿಗಳಿಗೂ ಪಟ್ಟಪರಿಗೂ ನ್ಯಾಯವಾಗುವದೇನು? ನಮ್ಮ ಸಮಾಜಕ್ಕೆ ಉಚಿತವಾಗಿರುವದೇನು?

ವೃತ್ತಸಾರ.

— ಮುಂದಿನ ವರುಷ ರಾಷ್ಟ್ರೀಯ ಸಭೆಯು ಅಸ್ಸಾಮದಲ್ಲಿ ಸೇರುವದು.

— ವೈಶ್ಯಪರಿಷತ್ತಿನ ಪ್ರಥಮ ಅಧಿವೇಶನವು ಗೋವಾ ಪ್ರಾಂತದ ಧಾರಗಳದಲ್ಲಿ ಉತ್ಸಾಹದಿಂದ ನೆರವೇರಿತು. ... ನಾ ಬ ಪಡತರೆಯವರು ಅಧ್ಯಕ್ಷರಾಗಿದ್ದರು.

— ಕಳೆದ ... ತಾರೀಖಿನ ರಾತ್ರಿ ಬೆಳ್ಗಾಮದಲ್ಲಿ ಭೂಕಂಪವಾಗಿ ೩ ಸೆಕೆಂಡುಗಳ ವರೆಗೆ ಹತ್ತಿತು. ಮನೆಯೊಳಗಿನ ಸಾಮಾನುಗಳು ಅಲುಗಿದವು. ಜನರು ಭಯದಿಂದ ಮನೆಯ ಹೊರಕ್ಕೆ ಓಡಿದರು.

— ಡಿಸೆಂಬರ ೩೦ನೇ ತಾರೀಖಿಗೆ ಇಂಗ್ಲೆಂಡದಲ್ಲಿ ದೊಡ್ಡ ಬಿರುಗಾಳಿ ಬೀಸಿ ... ಪ್ರದೇಶದಲ್ಲಿ ಬಹಳ ಹಾನಿ. ಗಿರಣಿಯ ಒಂದು ಭಾಗವು ಬಿದ್ದು ೭ ಮಂದಿಗಳು ಗಾಯಪಟ್ಟರು. ಒಬ್ಬನು ಮೃತಪಟ್ಟನು. ನದಿಗಳು ಉಕ್ಕೇರಿ ಬಹಳ ಹಾನಿ. ಫ್ರಾನ್ಸದೇಶದಲ್ಲಿಯೂ ಬಿರುಗಾಳಿ ಹಾಗು ಮಳೆ. ಸೀನ ನದಿಯು ಉಕ್ಕೇರಿತು. ಉಗಿಬಂಡಿಯು ಜಲಮಯವಾಯಿತು. ಒಂದು ಮನೆ ಕುಸಿದು ಬಿದ್ದು ಒಬ್ಬನು ಮೃತಪಟ್ಟನು ಮೂವರು ಗಾಯಹೊಂದಿದರು. ಲಕ್ಷಾವಧಿ ರೂಪಾಯಿಗಳ ಹಾನಿ. ... ಎಂಬ ನದಿಗೆ ೨೦ ಫೂಟು ನೀರು ಉಕ್ಕೇರಿ ಒಂದು ... ದರಿಯಲ್ಲಿ ನೀರು ತುಂಬಿಕೊಂಡದ್ದರಿಂದ ಅಲ್ಲಿ ಕೆಲಸ ಮಾಡುವ ೨೦ ಸಾವಿರ ಮಂದಿಗಳು ನಿರಾಶ್ರಿತರಾಗಿರುವರು. ಬೆಲ್ಜಿಯಮದಲ್ಲಿಯೂ, ಹಾಲಂಡ ದೇಶದಲ್ಲಿಯೂ ಇದೇ ಗತಿ.

— ಕಲಕತ್ತೆಯ ದೊಡ್ಡ ಜಮೀನದಾರರಾದ, ನಟೋರ ಮಹಾರಾಜರವರು ತಮ್ಮ ಮೋಟಾರ ಗಾಡಿಯಿಂದ ಇಳಿದು ಕೆಲವು ಹೆಜ್ಜೆ ಹೋಗುವಷ್ಟರಲ್ಲಿ ಥಟ್ಟನೆ ಹಿಂದಿನಿಂದ ಒಂದು ಮೋಟಾರು ಬಂದು ಅವರಿಗೆ ನೂಕಿಬಿಟ್ಟಿತು. ಮಹಾರಾಜರಿಗೆ ಗಾಯಗಳಾಗಿ, ಆ ಗಾಯಗಳಿಂದಲೇ ಮಹಾರಾಜರು ಮೃತಹೊಂದಿದರು.

— ವರ್ತಮಾನ ಸಂಸ್ಥಾನದ ಅಧಿಪತಿಗಳು ತಮ್ಮ ಸಂಸ್ಥಾನದೊಳಗಿನ ಚಹಾ-ಕಾಫಿ ದುಕಾನುಗಳನ್ನು ಮುಚ್ಚಲು ಆಜ್ಞಾಪತ್ರವನ್ನು ಹೊರಡಿಸಿರುವರು. ಈ ಅಂಗಡಿಗಳ ಮೂಲಕ ಪ್ರಜೆಗಳ ಆರೋಗ್ಯ ಕೆಡುತ್ತದೆಂದು ಮಹಾರಾಜರ ಅಭಿಪ್ರಾಯ. ಅಭಿನಂದನೀಯ! ಅನುಕರಣೀಯ!

— ಶ್ರೀ ದ್ವಾರಕಾ ಕ್ಷೇತ್ರದಲ್ಲಿ ಆದ್ಯ ಶ್ರೀ ಶಂಕರಾಚಾರ್ಯರ ಮೂರ್ತಿಯ ಪ್ರಾಣಪ್ರತಿಷ್ಠೆಯ ಮಹೋತ್ಸವವು ಇದೇ ಬರುವ ಮಾಘ ವ| ೧೪ ರಿಂದ ಫಾಲ್ಗುಣ ಶು| ೩ ರ ವರೆಗೆ ನಡೆಯುವದಿದೆ. ಇದೇ ಸಮಯ ಸನಾತನ ಧರ್ಮಸಭೆ ಹಾಗು ಹಿಂದೂ ಮಹಾಸಭೆಗಳ ಅಧಿವೇಶನಗಳು ಜರುಗಲಿಕ್ಕಿವೆ. ಉತ್ಸವಕ್ಕೆ ಬರೋಡೆಯ ಮಹಾರಾಜ, ದರ್ಭಾಂಗಾ ಮಹಾರಾಜ ಇತ್ಯಾದಿ ದೊಡ್ಡ ದೊಡ್ಡ ಸನಾತನ ಧರ್ಮಾಭಿಮಾನಿಗಳು ಚಿತ್ತೈಸುವರು.

— ದಕ್ಷಿಣ ಮಲಬಾರದ ಒಂದು ಗ್ರಾಮದಲ್ಲಿ ದರೋಡೆಖೋರರು ಹಿಲಾಲು ಹಚ್ಚಿಕೊಂಡು ಸಂಭ್ರಮದಿಂದ ದರೋಡೆ ಮಾಡಿದರು. ಪೋಲೀಸರು ಎಲ್ಲಿದ್ದರು?

— ಸರ್ವಾಧಿಪತಿಗಳ ಸಹಧರ್ಮಚಾರಿಣಿಯರಾದ ಲೇಡಿ ವಿಲಿಂಗ್ಡನವರು ಅಸ್ವಸ್ಥರಿದ್ದರು; ಈಗ ಅವರು ಸ್ವಸ್ಥರಾಗಿರುವರು. ಈ ಕುರಿತು ಮೊಂಘೀರದ ದೊಡ್ಡ ಜಮೀನದಾರರಾದ ರಘುನಂದನ ಪ್ರಸಾದಸಿಂಗರವರಿಗೆ ಬಹಳ ಸಂತೋಷವಾಯಿತು. ಕಾರಣ, ೧೫ ಸಾವಿರ ರೂಪಾಯಿಗಳನ್ನು ದೊರೆಸಾಹೇಬರಿಗೆ ಕಳುಹಿ, ದಾನಧರ್ಮ ಮಾಡಹೇಳಿದರು. ಏನು ಮರುಳು!

— ಮೊರೊಕ್ಕೊದೊಳಗಿನ ರಿಫ್ ಪ್ರದೇಶದಲ್ಲಿ ಭಯಂಕರ ಮಳೆ, ಅದರಿಂದ ಸ್ಪೇನದವರು ಅಲ್ಲಿಂದ ಹಿಂದೆಗೆಯಬೇಕಾಯಿತು.

— ರಿಫ್‌ರು ೫೦ ಮಂದಿ ಫ್ರೆಂಚರನ್ನು, ೩೦೦ ಮಂದಿ ಸ್ಪೇನದವರನ್ನು ಸೆರೆಹಿಡಿದಿರುವರು. ಅವರಲ್ಲೊಬ್ಬ ಸಾರ್ಜಂಟನು ಸುರಂಗ ತೆಗೆದು ಸೆರೆಮನೆಯೊಳಗಿಂದ ಪಾರಾದನು. ಕಾವಲುಗಾರ ಪೋಲೀಸರು ಮಲಗಿದ್ದರೇನು?

— ನೀಲಗಿರಿಯ ಜಿಲ್ಹಾ ಬೋರ್ಡಿನವರು ತಮ್ಮ ಕಕ್ಷೆಯೊಳಗಿನ ೫೦೦ಕ್ಕೆ ಮಿಕ್ಕಿ ಜನಸಂಖ್ಯೆಯುಳ್ಳ ಗ್ರಾಮಗಳಲ್ಲಿ ಪ್ರಾಥಮಿಕ ಶಾಲೆಗಳನ್ನು ತೆರೆದಿರುವರು.

— ಟಪಾಲು ಚೀಟಿ, ಕಾರ್ಡ ಇತ್ಯಾದಿಗಳು ಈಗ ನಾಸಿಕದಲ್ಲಿ ಅಚ್ಚಾಗುತ್ತಿವೆ.

— ಸರ್ವಾಧಿಪತಿಗಳು ಮದ್ರಾಸ ಪ್ರಾಂತದಲ್ಲಿ ಸಂಚಾರ ಮಾಡುತ್ತಿರುವರು; ಅಲ್ಲಿಯ ಕೀರ್ತಿಯವರು ಹೊಸದಾಗಿ ಉಗಿಬಂಡಿಯ ಕಾರ್ಖಾನೆಯನ್ನು ರಚಿಸಲುದ್ಯುಕ್ತರಾಗಿರುವರು. ಆ ಕಾರ್ಖಾನೆಗೆ ೧೫ ಲಕ್ಷ ರೂಪಾಯಿ ಖರ್ಚು ತಗಲುವದೆಂದೂ, ಅದನ್ನು ಸರಕಾರದವರು ತೆರಬೇಕೆಂದೂ ಉಗಿಬಂಡಿಯವರ ಆಗ್ರಹ. ಒಟ್ಟು ಹಿಂದೂಸ್ಥಾನದ ಅನುಕೂಲಕ್ಕಾಗಿ ಒದಗುವ ಹೊಸ ಅವಶ್ಯ ನೋಡಿರಿ!

— ಹಿಂದೂ ಧರ್ಮದಾಯ ಕಾಯಿದೆಯನ್ನು ರದ್ದುಪಡಿಸಬೇಕಾಗಿ ಮದ್ರಾಸಿನ ಶ್ರೀ ಸತ್ಯಮೂರ್ತಿಯವರು ಮದ್ರಾಸ ಕಾಯಿದೆ ಕೌನ್ಸಿಲಿನಲ್ಲಿ ಒಂದು ಕಾಯಿದೆಯನ್ನು ಸೂಚಿಸಲಿರುವರು.

— ಮದ್ರಾಸ ಪ್ರಾಂತದ ನೇಗಪಟ್ಟಣದಲ್ಲಿ ಸದ್ಯಕ್ಕೆ ಅಕಸ್ಮಾತ್ತಾಗಿ ೬೦೦ ಕಂಚಿನ ಮೂರ್ತಿಗಳು ದೊರಕಿವೆ. ಕೀರ್ತನ ಎದುರಿಗೆ ನಿತ್ಯಕೃತ್ಯದಂತೆ ಒಬ್ಬಳು ಮಣ್ಣು ಅಗೆಯುತ್ತಿದ್ದಳು. ಕುದಾರಿಯು ಒಂದು ಧಾತುವಿನ ವಸ್ತುವಿಗೆ ಅಪ್ಪಳಿಸಿದಂತೆ ತೋರಿತು; ಮತ್ತೂ ಅಗೆಯಲು, ತರತರದ ಆಕಾರದ ಮೂರ್ತಿಗಳು ದೊರಕಿದವು. ಇವನ್ನು ಅಲ್ಲಿಯ ಅಧಿಕಾರಿಗಳು ಸ್ವಾಧೀನಪಡಿಸಿಕೊಂಡಿರುವರು.

— ಮುಂಬಯಿ ಮ್ಯುನಿಸಿಪಾಲಿಟಿಯವರಿಗೂ, ಮುಂಬಯಿ ಸರಕಾರಕ್ಕೂ ಮ್ಯುನಿಸಿಪಾಲಿಟಿ ಹದ್ದಿನೊಳಗಿನ ಪ್ರಾಥಮಿಕ ಶಿಕ್ಷಣದ ಖರ್ಚಿನ ಕುರಿತು ದೊಡ್ಡದೊಂದು ವಾದವಾಗಿತ್ತು. ಸರಕಾರವು ಕಾಯಿದೆಯಂತೆ ಕೊಡತಕ್ಕ ಅನುದಾನವನ್ನು ಅಲ್ಲಗಳೆಯುತ್ತದೆಂದು ಮ್ಯುನಿಸಿಪಾಲಿಟಿಯವರು ದಾವೆ ಹೂಡುವ ತಯಾರಿ ಮಾಡಿದ್ದರು. ಅಷ್ಟರಲ್ಲಿ ಸರಕಾರವು ಈ ಕುರಿತು ಪುನರಾಲೋಚನೆ ಮಾಡುತ್ತೇವಾಗಿ ತಿಳಿಸಿರುವರು. ಬೆಂಕಿಯಲ್ಲಿ ಹಾಕಿದ ಹೊರತು ಕಬ್ಬಿಣವು ಮಣಿಯುವದಿಲ್ಲ!

— ಜಿ. ಆಯ್. ಪಿ. ಉಗಿಬಂಡಿ ಕಂಪನಿಯವರು ತಾ. ೧-೪-೧೯೩೭ರಿಂದ ಉಗಿಬಂಡಿಯ ಪ್ರಯಾಣ ದರಗಳನ್ನು ತಗ್ಗಿಸುವ ನಿರ್ಧಾರ ಮಾಡಿರುವರು.

— ಮುಂಬಯಿ ಕಾಯಿದೆ ಕೌನ್ಸಿಲಿನ ಅಧಿವೇಶನವು ಮುಂಬಯಿಯ ನಗರಭವನದಲ್ಲಿ ತಾ. ೨೨-೨-೧೯೩೭ ನೇಗೆ ಸೇರುವದು.

— ಕಲ್ಯಾ-ಅಂಬರನಾಥ ಉಗಿಬಂಡಿಯು ಹೋಗುವಾಗ ಪಟಿಯಾಲಾ ಮಹಾರಾಜರ ಅರಮನೆಯ ಹತ್ತಿರ ಹೆಂಗಸರು ಕುಳಿತುಕೊಂಡ ಒಂದು ಮೋಟಾರ ಲಾರಿಯು ಉಗಿಬಂಡಿಗೆ ಅಪ್ಪಳಿಸಿ, ೩ ಮಂದಿ ಹೆಂಗಸರು ಅಲ್ಲಿಂದಲ್ಲೇ ಮಡಿದರು, ಒಬ್ಬರು ಚಿಕಿತ್ಸಾಲಯದಲ್ಲಿ ಮಡಿದರು ಇನ್ನೊಬ್ಬರು ಪ್ರಾಣಾಂತ್ಯಸ್ಥಿತಿಯಲ್ಲಿರುವರು. ಅಂತು ಮೋಟಾರದಲ್ಲಿದ್ದ ೫ ಮಂದಿ ಹೆಂಗಸರ ಅವಸ್ಥೆಯಿದು! ಉಗಿಬಂಡಿಯ ದಾರಿಯ ಮೇಲೆ ಪ್ರಯಾಣಿಕರ ಸೌಕರ್ಯಕ್ಕಾಗಿ ಬಾಗಿಲುಗಳನ್ನಿಟ್ಟು ಕಾವಲುಗಾರನನ್ನಿಟ್ಟಿದ್ದಾರೆ. ಈ ಮಾರ್ಗವನ್ನು ಉಗಿಬಂಡಿಯು ಹಾಯುವ ಸಮಯದಲ್ಲಿ ಮುಚ್ಚುತ್ತಾರೆ. ಮೇಲ್ಕಂಡ ಮೋಟಾರ ಲಾರಿಯು ದಾಟುವ ಸಮಯ ಒಂದು ಬದಿಯ ಬಾಗಿಲು ಮುಚ್ಚಿತ್ತು. ಅದನ್ನು ನೋಡದೆ ಮೋಟಾರು ಮುಂದರಿಯಿತು; ಹಿಂದಿನ ಬಾಗಿಲನ್ನು ತಪ್ಪಿಸಿದ್ದರಲ್ಲಿ ಉಗಿಬಂಡಿಯು ಬಂದೇ ಬಂತು; ಮತ್ತು ಅನರ್ಥವು ಸಂಭವಿಸಿತು. ಈಶ್ವರೇಚ್ಛೆ!

— ಕಾಠೇವಾಡದೊಳಗಿನ ಪಾಲಿಟಾನಾ ಸಂಸ್ಥಾನದಲ್ಲಿ ಶತ್ರುಂಜಯ ಪರ್ವತವಿದೆ. ಈ ಪರ್ವತದಮೇಲೆ ಜೈನ ದೇವಾಲಯಗಳಿವೆ. ಯಾತ್ರಿಕರ ಕಡೆಯಿಂದ ಈ ಸಂಸ್ಥಾನಕ್ಕೆ ೧೫ ಸಾವಿರ ರೂಪಾಯಿಗಳು ಕರ ತೆರಿಗೆಯ ರೂಪದಲ್ಲಿ ವಸೂಲಾಗುತ್ತಿದ್ದವು. ಈ ಕರವು ಆನಂದಜೀ ಕಲ್ಯಾಣಜೀ ಧರ್ಮಾರ್ಥ ಸಂಸ್ಥೆಯವರು ಜೈನ ಸಮಾಜದ ಪರವಾಗಿ ಕೊಡುತ್ತಿದ್ದರು. ಈಗ ತೆರಿಗೆಯ ದರವನ್ನು ೧ ಲಕ್ಷ, ೫೦ ಸಾವಿರ ತೆರಬೇಕಾಗಿದೆಯೂ, ಅಲ್ಲದಿದ್ದರೆ, ಯಾತ್ರಿಕ ಜೈನರ ಕಡೆಯಿಂದ ತಲೆಗೆ ರೂಪಾಯಿ ೨ರಂತೆ ವಸೂಲಿಯಾಗುವದೆಂದೂ ಪಾಲಿಟಾನಾ ಮಹಾರಾಜರು ಫರ್ಮಾನು ಹೊರಡಿಸಿರುವರು. ಈ ಕುರಿತು ಅಹಮದಾಬಾದದಲ್ಲಿ ಜೈನರ ದೊಡ್ಡದೊಂದು ಸಭೆಯಾಗಿ, ಪರಂಪರೆಯಂತೆ ನಡೆದುಬಂದ ಹಕ್ಕನ್ನು ಅಪಹರಿಸಿದಂತೆ ಬ್ರಿಟಿಶ ಸರಕಾರಕ್ಕೆ ಮಧ್ಯಸ್ಥಿಕೆ ಮಾಡಲು ಬಿನ್ನೈಸಲಾಗಿದೆ.

— ಮಹಮ್ಮದ ಪೈಗಂಬರರ ಸಮಾಧಿಗೆ ಇಬ್ನಸೌದರವರು ಹಾನಿ ಮಾಡಿರುವರೆಂಬುದೊಂದು ಸುಳ್ಳು ಸುದ್ದಿ. ಈ ಸುದ್ದಿ ನಿರಾಧಾರವಾದದ್ದೆಂದು ಜಿದ್ದಾದಿಂದ ಬಂದ ತಂತಿಯ ವರ್ತಮಾನದಿಂದ ತಿಳಿಯುತ್ತದೆ.

— ಬಿಝಂಟ ಅಧ್ಯಕ್ಷರು ಪ್ರತಿಯೋಗಿ ಸಹಕಾರಿತೆಯ ಪುರಸ್ಕರ್ತರಾದ ಶ್ರೀ ಜಯಕರ-ಕೇಳಕರರವರಿಗೆ ಅಭಿನಂದಿಸಿರುವರು. ಅಧ್ಯಕ್ಷರು ಪ್ರತಿಯೋಗಿ ಸಹಕಾರಿಗಳೊಡನೆ ಚಳವಳಿ ಮಾಡುವ ಅಭಿವಚನವನ್ನಿತ್ತಿರುವರು,

— ಕಾನಪುರದಲ್ಲಿ ರಾಷ್ಟ್ರೀಯ ಸಭೆಯ ಅಧಿವೇಶನದ ಸಮಯ ಅಕಾಲಿಗಳ ಧರ್ಮಪ್ರಸಾರ ಕಾರ್ಯವು ತೀವ್ರದಿಂದ ನಡೆಯಿತು. ಅಕಾಲಿಗಳ 'ದಿವಾನ' ಎಂಬ ಧರ್ಮಸಭೆಯಲ್ಲಿ ಸಿಖ ಧರ್ಮದ ಮೇಲೆ ಉಪನ್ಯಾಸಗಳಾದವು. ಸಾವಿರಾರು ಸಿಖರೂ, ಹಿಂದೂ-ಮುಸಲ್ಮಾನರೂ ಈ ಸಭೆಗಳಿಗೆ ಚಿತ್ತೈಸುತ್ತಿದ್ದರು. 'ಗುರುಕಾಲಂಗರ' ಎಂಬ ಅವರ ಅಡಿಗೆ ಮನೆಯಲ್ಲಿ ಸಕಲರಿಗೂ ಉಚಿತವಾಗಿ ಅನ್ನ ಸಿಗುತ್ತಿತ್ತು.

— ಮುಂಬಯಿಯ ಪೋಲೀಸ ಕಮೀಶನರರಾದ ಮಿ| ಕೆಲಿಯವರು ಬೆಂಗಳೂರು ದಂಗೆಗಳಲ್ಲಿ ಸಮೀಪದ್ದ ಬಗ್ಗೆ ಇನ್ಸಪೆಕ್ಟರ ಸ್ಮಿಥಿಯವರನ್ನು, ಜಮಾದಾರ ಬಾಬು ಸಾಬರನ್ನು ಪುರಸ್ಕೃತ ಮಾಡಿರುವರು.

— ಕಾಮಗಾರ ಪಕ್ಷದ ಸಭಾಸದರಾದ ಮಿ| ಬ್ರಾಕ್ವೇ ಕಾರ್ ಮೊದಲಾದವರು ಬಂಗಾಲದ ದಬ್ಬಾಳಿಕೆಯ ಕಾಯಿದೆಯನ್ನು ರದ್ದು ಮಾಡಬೇಕಾಗಿಯೂ, ರಾಜಕೀಯ ಅಪರಾಧದ ಮೂಲಕ ಸೆರೆಹಿಡಿದ ಸಮಸ್ತರಿಗೂ ಬಿಡುಗಡೆ ಮಾಡಬೇಕಾಗಿಯೂ, ಪ್ರಾತಿನಿಧಿಕ ಪರಿಷತ್ತನ್ನು ಸೇರಿಸಿ, ಬ್ರಿಟಿಶ ಸರಕಾರದವರೂ, ಹಿಂದುಸ್ಥಾನದೊಳಗಿನ ರಾಷ್ಟ್ರೀಯ ಪಕ್ಷದವರೂ ಲೋಕಸತ್ತಾತ್ಮಕ ರಾಜ್ಯಘಟನೆಯ ಕುರಿತು ಆಲೋಚನೆ ಮಾಡಬೇಕಾಗಿಯೂ ಬ್ರಿಟಿಶ ರಾಷ್ಟ್ರಕ್ಕೆ ವಿನಂತಿ ಮಾಡಿಕೊಂಡಿರುವರು.

— ವಿಜಾಪುರ ಜಿಲ್ಲೆಯ ಭುಳಚೇರ, ತಿರನಾಳ, ಕಾಕೋಳ್ಳಿ ಗ್ರಾಮಗಳಲ್ಲಿ ಶ್ರೀ|| ಮಹಿಮಾಳಯ್ಯಾ ಸ್ವಾಮಿ ಝುಳಕಿಮಠದ ಉಪದೇಶದಂತೆ, ಅಲ್ಲಿಯವರು ಪ್ರಾಣಿಹಿಂಸೆ ಮಾಡಬಾರದೆಂದು ನಿರ್ಧರಿಸಿರುವರು. ಭುಳಚೇರ, ತಿರನಾಳ ಗ್ರಾಮಗಳು ಭೀಮಾ ನದಿಯ ದಂಡೆಯ ಮೇಲಿದ್ದು, ಮೀನಿನಿಂದ ಅನೇಕರು ಜೀವಿಸುತ್ತಿದ್ದರು. ಅದನ್ನೂ ತ್ಯಜಿಸಲು ನಿರ್ಧಾರವಾಗಿದೆ.

ಮಹಾತ್ಮರ ಆತ್ಮಚರಿತ್ರೆ.

(೩) ಬಾಲವಿವಾಹ

ಈ ಅಧ್ಯಾಯವನ್ನು ಬರೆಯುವ ಪ್ರಸಂಗ ಬಾರದಿದ್ದರೆ, ಬಹಳ ಒಳ್ಳೆಯದಾಗುತ್ತಿತ್ತು. ಈ ಆತ್ಮಚರಿತ್ರೆಯನ್ನು ಮುಗಿಸುವ ವರೆಗೆ ಇಂಥ ಅನೇಕ ಅಸಹ್ಯ ಪ್ರಸಂಗಗಳನ್ನು ಸಹಿಸಬೇಕಾಗುವದು. ನಾನು ಸತ್ಯವಂತನೆನಿಸಿಕೊಳ್ಳುತ್ತೇನೆ. ಆದ್ದರಿಂದ ಇಂಥ ಸಂಗತಿಗಳನ್ನು ನಾನು ಹೇಳಲೇಬೇಕು. ನಾನು ೧೩ ವರ್ಷ ಪ್ರಾಯದವನಿರುವಾಗಲೇ ನನ್ನ ಮದುವೆಯಾಯಿತು; ಇದು ತೀರ ಕೋಟಲೆಯ ಮಾತು. ಅದೇ ಪ್ರಾಯದ ಚಿಕ್ಕ ಬಾಲಕರನ್ನು ನಾನು ಈಗ ನೋಡುತ್ತಿದ್ದರೆ, ನನ್ನ ಮದುವೆಯು ಸ್ಮರಣವಾದರೆ, ನನ್ನ ಆಗಿನ ಸ್ಥಿತಿ ನೋಡಿ ಕನಿಕರ ಹುಟ್ಟುತ್ತದೆ. ನನ್ನ ಸ್ಥಿತಿಯೊಳಗೆ ಅವರು ಸಿಲುಕದಿದ್ದ ಬಗ್ಗೆ ಅವರಿಗೆ ಅಭಿನಂದಿಸುವದುಚಿತವೆನಿಸುತ್ತದೆ. ಈ ವಿವಾಹವು ತೀರ ಚಿಕ್ಕ ಪ್ರಾಯದಲ್ಲಾಯಿತು; ಇದನ್ನು ಸಮರ್ಥಿಸಲು ಯಾವ ನೈತಿಕ ಕಾರಣವೂ ಇರುವದಿಲ್ಲ.

ವಾಚಕರು ತಪ್ಪು ಗ್ರಹಿಕೆ ಮಾಡಿಕೊಳ್ಳಬಾರದು. ನನ್ನ ಮದುವೆಯು ವಾಙ್ನಿಶ್ಚಯದ ಹಕೀಕತ್ತು ನಾನು ಬರೆದದ್ದಲ್ಲ. ನಾನು ಬರೆದದ್ದು ನನ್ನ ಮದುವೆಯ ಹಕೀಕತ್ತು. ಕಾಠೇವಾಡದಲ್ಲಿ ಎರಡು ಪ್ರತ್ಯೇಕ ವಿಧಿಗಳಿವೆ. ನಿಶ್ಚಯತಾಂಬೂಲ ಹಾಗು ಮದುವೆ. ನಿಶ್ಚಯತಾಂಬೂಲವೆಂದರೆ, ವಧೂ–ವರರ ತಂದೆ-ತಾಯಿಗಳೊಳಗೆ ಮದುವೆಯ ಕುರಿತು ಆಗುವ ವಾಗ್ದಾನ. ಅದನ್ನು ಅತಿಕ್ರಮಿಸಬಹುದು. ಅಂದರೆ, ಹುಡುಗನ ನಿಧನದಿಂದ ಹುಡುಗಿಗೆ ವೈಧವ್ಯವು ಪ್ರಾಪ್ತವಾಗುವದಿಲ್ಲ. ಆ ಕರಾರು ತಂದೆ-ತಾಯಿಗಳೊಳಗಿನದು. ಅದಕ್ಕೆ ಹುಡುಗರು ಸೇರುವದಿಲ್ಲ. ನಿಶ್ಚಯತಾಂಬೂಲದ ಸುದ್ದಿ ಮಕ್ಕಳಿಗೆ ಹೇಳಬೇಕೆಂದಿಲ್ಲ. ನನ್ನ ಕುರಿತು ಅನುಕ್ರಮವಾಗಿ ಮೂರು ಸರತಿ ನಿಶ್ಚಯತಾಂಬೂಲವಾಗಿತ್ತು. ಯಾವಾಗ ಆಗಿತ್ತು, ನನಗೇನು ಗೊತ್ತಿಲ್ಲ. ನನ್ನ ಬಗ್ಗೆ ನಿಶ್ಚಯಿಸಿದ ಇಬ್ಬರು ಹುಡುಗಿಯರು ಒಬ್ಬರ ಹಿಂದೊಬ್ಬರು ಮೃತಪಟ್ಟರೆಂದು ನನಗೆ ಹೇಳಲಾಯಿತು. ಮೂರನೆ ಸರತಿ ನಿಶ್ಚಯವಾಗಿರಬೇಕೆಂದು ನನ್ನ ಊಹೆ. ಮೂರನೇ ನಿಶ್ಚಯವು ನನ್ನ ೭ನೇ ವರ್ಷ ಪ್ರಾಯದಲ್ಲಿ ಸಂಭವಿಸಿದ ನೆನಪು ತೋರುತ್ತದೆ; ಆದರೆ, ಆ ಕುರಿತು ನನಗೆ ತಿಳಿಸಿದ ನೆನಪಾಗುವದಿಲ್ಲ. ಈ ಅಧ್ಯಾಯದಲ್ಲಿ ನನ್ನ ಮದುವೆಯ ಸುದ್ದಿಯನ್ನು ನಾನು ಆರಂಭಿಸುತ್ತೇನೆ. ಈ ಹಕೀಕತ್ತು ನನಗೆ ಚಲೋ ನೆನಪಿದೆ.

ನಾವು ಮೂವರು ಅಣ್ಣ-ತಮ್ಮಂದಿರೆಂಬುದು ನಿಮಗೆ ನೆನಪಿನಲ್ಲಿರಬಹುದಷ್ಟೇ. ಹಿರೇಯವನ ಮದುವೆಯು ಮೊದಲೇ ಆಗಿತ್ತು. ನನಗಿಂತ ೨–೩ ವರ್ಷ ಹಿರಿಯನಾಗಿದ್ದ ನನ್ನ ಎರಡನೇ ಅಣ್ಣನಿಗೂ, ೧ ವರ್ಷದಿಂದ ಹಿರಿಯನಾದ ಚಿಗಪ್ಪನ ಮಗನಿಗೂ, ನನಗೂ ಒಂದೇ ಸಮಯದಲ್ಲಿ ವಿವಾಹ ಮಾಡಬೇಕೆಂದು ನಮ್ಮ ಹಿರಿಯರ ನಿರ್ಧಾರವಾಯಿತು. ಈ ನಿರ್ಣಯ ಮಾಡುವಾಗ ನಮ್ಮ ಕಲ್ಯಾಣದ ವಿಚಾರ ಮಾಡಲಿಲ್ಲ; ನಮ್ಮ ಇಚ್ಛೆಯನ್ನು ಕೇಳುವದಿಲ್ಲ, ಅದೊಂದು ಅವರ ಅನುಕೂಲತೆಯ ಮತ್ತು ಮಿತವ್ಯಯದಿಂದ ಮಾಡತಕ್ಕ ಕೆಲಸವಾಗಿತ್ತು.

ಹಿಂದೂ ಮದುವೆ.

ಹಿಂದೂ ಧರ್ಮದಲ್ಲಿ ಮದುವೆಯೆಂದರೆ ಚೇಷ್ಟೆಯಲ್ಲ. ವಧೂ-ವರರ ತಂದೆ-ತಾಯಿಗಳಿಗೆ ಇದರಿಂದ ಸರ್ವನಾಶವಾದ ಅನೇಕ ಉದಾಹರಣೆಗಳಿವೆ. ಇತ್ತಟ್ಟಿನವರೂ ಧನವನ್ನೂ, ಸಮಯವನ್ನೂ ಅಪವ್ಯಯ ಮಾಡುತ್ತಾರೆ. ವಿಧವಿಧದ ಉಡಿಗೆ-ತೊಡಿಗೆಗಳನ್ನೂ, ಆಭರಣಗಳನ್ನೂ ತಯಾರಿಸಲಿಕ್ಕೆ ಅನೇಕ ತಿಂಗಳು ಹಿಡಿಯುತ್ತವೆ. ವಿವಿಧ ಪ್ರಕಾರದ ಪಕ್ವಾನ್ನಗಳಿಂದ ಶ್ರೇಷ್ಠತೆ ಪಡೆಯಲಿಕ್ಕೆ ಇತ್ತಟ್ಟಿನವರಲ್ಲಿಯೂ ಪೈಪೋಟಿ ನಡೆಯುತ್ತದೆ. ಹುಡುಗಿಯರು ಸ್ವರವಿರಲಿ, ವಿರಸವಿರಲಿ, ಹೆಂಗಸರು ದನಿ ಬೀಳುವ ವರೆಗೆ ಹಾಡಿ ಪ್ರಕೃತಿ ಹಾಳುಮಾಡಿಕೊಂಡು ನೆರೆಹೊರೆಯವರಿಗೂ ಸುಖ ಕೊಡುವದಿಲ್ಲ. ನೆರೆಹೊರೆಯವರಾದರೂ ಈ ಗದ್ದಲ ಹಾಗು ಗೊಂದಲವನ್ನು ಸುಮ್ಮಗೆ ಸಹಿಸುತ್ತಾರೆ; ಎಂಜಲು ಎಲೆಗಳಿಂದ ಉಂಟಾದ ಹೊಲಸನ್ನೂ, ಹೊಲಸು ವಾಸನೆಯನ್ನೂ ಸಹಿಸುತ್ತಾರೆ. ಯಾಕೆ? ಅದರಂತೆಯೇ ತಾವೂ ನಡೆಸಿಕೊಳ್ಳುವ ದಿನಗಳು ಬಂದಾವೆಂದು ಅವರಿಗೂ ಅನಿಸುತ್ತದೆ.

ಇವೆಲ್ಲ ಉಪದ್ರವವನ್ನು ಮೂರು ಸಲ ಅನುಭವಿಸುವದಕ್ಕಿಂತ ಒಮ್ಮೆಗೇ ಸಾಗಿಸುವದು ವಿಶೇಷ ಅನುಕೂಲವೆಂದು ನನ್ನ ಹಿರಿಯರಿಗೆ ಅನಿಸಿತು. ಖರ್ಚು ಕಡಿಮೆ; ಸಂಭ್ರಮ ವಿಶೇಷ! ಮೂರಾವರ್ತಿ ಖರ್ಚು ಮಾಡುವ ಬದಲು, ಒಮ್ಮೆಗೇ ಬೇಕಷ್ಟು ಖರ್ಚು ಮಾಡಬಹುದು. ನನ್ನ ತಂದೆಯವರಿಗೂ, ಚಿಗಪ್ಪನವರಿಗೂ ಆಗ ಪ್ರಾಯ. ಮದುವೆಯಾಗುವ ಮಕ್ಕಳು ನಾವೇ. ಆದ್ದರಿಂದ ಆನಂದ ಪ್ರಸಂಗವನ್ನು ಅನುಭವಿಸುವ ಇಚ್ಛೆಯು ಅವರಿಗಿರಬೇಕು. ಇವೆಲ್ಲ ವಿಚಾರದಿಂದ ಮೂರೂ ಮದುವೆಗಳಾಗಬೇಕೆಂದು ನಿಶ್ಚಯವಾಯಿತು; ಅದಕ್ಕಾಗಿ ಕೆಲವು ತಿಂಗಳುಗಳಿಂದ ಮದುವೆಯ ತಯಾರಿಯೂ ನಡೆಯಿತು. ಈ ತಯಾರಿಯ ಮೇಲಿಂದಲೇ ನಮ್ಮ ಮದುವೆಯಾಗಲಿಕ್ಕಿದೆಂದು ನನ್ನ ಗ್ರಹಿಕೆಯಾಯಿತು. ಆಗ ನನಗೆ ಮದುವೆ, ಕಲ್ಪನೆಯೇ ಇರಲಿಲ್ಲ; ಮದುವೆಯೆಂದರೆ, ಮನೋಹರವಾದ ಉಡುಪುಗಳನ್ನು ಧರಿಸುವ ಯೋಗವು; ವಾದ್ಯಗಳ ಘೋಷ ಕೇಳುವ ಯೋಗವು. ಮೆರವಣಿಗೆಯ ಸಂಭ್ರಮವು. ರುಚಿಕರವಾದ ಪಕ್ವಾನ್ನಗಳ ಸೇವನ ಕಾರಣವು; ಆದರೂ ಒಬ್ಬ ಹೊಸ ಹುಡುಗಿಯನ್ನು ಪಡೆಯುವದು. ವಿಷಯವಾಸನೆಯು ಹುಟ್ಟಿದ್ದು ಆ ಬಳಿಕ. ವಿಷಯಲಾಲಸೆಯು ಕ್ರಮವಾಗಿ ಹೇಗೆ ವ್ಯಾಪ್ತವಾಯಿತೆಂದು ನಾನು ಹೇಳಬಲ್ಲೆ; ಆದರೆ, ಅದನ್ನು ನಾನು ಹೇಳಬಯಸುವದಿಲ್ಲ. ಆ ವಿಷಯ ವಾಚಕರು ಅತ್ತರತೆಯನ್ನು ತೋರೆಯಬೇಕು. ಅದೊಂದು ನಾಚಿಕೆಗೇಡಿತನದ ವಿಷಯವು. ಅದನ್ನು ನಾನು ಹಾಗೆಯೇ ಬಿಟ್ಟುಬಿಡುತ್ತೇನೆ. ಆದರೂ, ಕೆಲವು ಸಂಗತಿಗಳು ನಮೂದಿಸತಕ್ಕಂಥವಿವೆ. ಅವನ್ನು ಮುಂದೆ ಹೇಳುವೆನು. ಈ ಸಂಗತಿಗಳಿಗೂ, ನನ್ನ ಈ ಆತ್ಮಚರಿತ್ರೆಯ ಕಥಾ ತಂತುವಿಗೂ ವಿಶೇಷ ಸಂಬಂಧವಿರುವದಿಲ್ಲ.

ಹೀಗೆ ನನಗೂ, ನನ್ನ ಅಣ್ಣನಿಗೂ ರಾಜಕೋಟದಿಂದ ಪೋರಬಂದರಕ್ಕೆ ಒಯ್ದರು. ನಮ್ಮ ಮೈಗೆ ಅರಿಸಿನವನ್ನು ಹಚ್ಚಿದರು; ಇನ್ನೂ ಅನೇಕ ಪೂರ್ವ ತಯಾರಿಯ ವಿಧಿಗಳೂ ನಡೆದವು ಅವನ್ನು ಕೇಳಿದರೆ, ನಿಮಗೆ ವಿನೋದವಾಗುವದು, ಆದರೆ, ಅವನ್ನೆಲ್ಲ ನಾನು ಬರೆಯುವದಿಲ್ಲ.

ಒಂದು ಅನಪೇಕ್ಷಿತ ವಿಘ್ನ.

ನನ್ನ ತಂದೆಯವರು ದಿವಾನರಿದ್ದರೂ, ನೌಕರರಲ್ಲವೇ? ಠಾಕೂರ ಸಾಹೇಬರ ವಿಶೇಷ ಅನುಗ್ರಹವು ಇದ್ದದರಿಂದ ಅವರು ಬಹಳ ಪರತಂತ್ರರಾಗಿದ್ದರು. ಠಾಕೂರ ಸಾಹೇಬರು ಅವರಿಗೆ ಮುಂಚೆಯಾಗಿ ಹೋಗಗೊಡಲಿಲ್ಲ. ಮತ್ತು ಅವರಿಗೆ ಹೋಗಗೊಡುವಾಗ, ಅವರಿಗಾಗಿ ಮುದ್ದಾಮು ಟಪಾಲು ಬಂಡಿಗಳ ವ್ಯವಸ್ಥೆ ಮಾಡಿದರು. ಇದರಿಂದ ಪ್ರಯಾಣದ ಅವಧಿಯು ೨ ದಿನಗಳಿಂದ ಕಡಿಮೆಯಾಗುತ್ತಿತ್ತು. ಆದರೆ?— ಈ ಸಂಕೇತವು ಇನ್ನೊಂದಿತ್ತು. ಪೋರಬಂದರವು ರಾಜಕೋಟದಿಂದ ೧೨೦ ಮೈಲು ದೂರವಿದೆ. ಅಂದರೆ, ಚಕ್ಕಡಿಯಿಂದ ೫ ದಿನಗಳ ಪ್ರಯಾಣ. ಈ ಪ್ರಯಾಣವನ್ನು ನನ್ನ ತಂದೆಯವರು ೩ ದಿನಗಳಲ್ಲಿ ಸಾಗಿಸಿದರು. ಆದರೆ, ಗಾಡಿಯು ೩ನೇ ಮುಕ್ಕಾಮು ಮಾಡುವಾಗ ಧಕ್ಕನೆ ಕವಚಿಬಿದ್ದು ತಂದೆಯವರಿಗೆ ವಿಶೇಷ ಪೆಟ್ಟುಗಳಾದವು. ಆದ್ದರಿಂದ ಅವರು ಮೈತುಂಬ ಪಟ್ಟಿಗಳನ್ನು ಹಚ್ಚಿಕೊಂಡು ಮನೆಗೆ ಬಂದರು. ಈ ಸಂಭ್ರಮದೊಳಗಿನ ಅರ್ಧ ಉತ್ಸಾಹವು ನಷ್ಟವಾಯಿತು. ಅವರದೂ ನಷ್ಟವಾಯಿತು; ನಮ್ಮದೂ ನಷ್ಟವಾಯಿತು. ಆದರೂ, ಸಮಾರಂಭವನ್ನು ಸಾಗಿಸಲೇಬೇಕಾಗಿತ್ತು. ಮದುವೆಯ ಮುಹೂರ್ತಗಳನ್ನು ಬದಲಿಸುವದಾಗಲಿಲ್ಲ. ನಾನು ಹುಡುಗ ಬುದ್ಧಿಯವನು; ಮದುವೆಯ ಸಂಭ್ರಮದ ಉಪಭೋಗ ಲಾಲಸೆಯಿಂದ ನನ್ನ ತಂದೆಯವರ ಮೇಲಿನ ಆಪತ್ತನ್ನು ನಾನು ಮರೆತುಬಿಟ್ಟೆನು.

ಮಹಾತ್ಮರ ಪಿತೃಭಕ್ತಿ.

ತಾಯಿ-ತಂದೆಗಳ ಮೇಲೆ ನನಗೆ ಬಹಳ ಭಕ್ತಿ; ಅದರಂತೆಯೇ ಶಾರೀರಿಕ ಸುಖದ ಲಾಲಸೆಯೂ ಇತ್ತು. ತಾಯಿ-ತಂದೆಗಳ ಸೇವೆಗಾಗಿ ಸಮಸ್ತ ಪ್ರಕಾರದ ಭೋಗಗಳನ್ನೂ, ಸುಖವನ್ನೂ ತ್ಯಜಿಸಬೇಕೆಂಬ ಬುದ್ಧಿ ಮಾತನ್ನು ನಾನು ಕಲಿಯಬೇಕಾಗಿತ್ತು. ಉಪಭೋಗ ಲಾಲಸೆಗಾಗಿ ಶಿಕ್ಷೆ ಮಾಡುವ ಸಂಕೇತದಿಂದಲೋ ಏನೋ, ಒಂದು ಸಂಗತಿಯು ಸಂಭವಿಸಿತು. (ಈ ಸಂಗತಿಯನ್ನು ಮುಂದೆ ಹೇಳುವೆನು.) ಅದು ಈಗಲೂ ನನಗೆ ಮನೋವ್ಯಥೆಯನ್ನುಂಟುಮಾಡುತ್ತದೆ. ನಿಷ್ಕುಲಾನಂದ ಕವಿಗಳು ನುಡಿದಂತೆ, ಆಶೆಯ ತ್ಯಾಗವಾಗದಿದ್ದಾಗ ಆ ಬೇರೆ ಬೇರೆ ತ್ಯಾಗವು ಯಾವಾಗಲೂ ಕ್ಷಣಿಕವಿದೆ; ನೀವು ಬೇಕಾದಷ್ಟು ಯತ್ನ ಮಾಡಿರಿ. ಈ ಹಾಡನ್ನು ನಾನು ಹಾಡಿದಾಗ ಅಥವಾ ಯಾರಾದರೂ ಹಾಡಿದ್ದನ್ನು ಕೇಳಿದಾಗ, ಆಕಸ್ಮಿಕವಾಗಿ ಸಂಭವಿಸಿದ ಈ ದುಃಖಕರವಾದ ಸಂಗತಿಯು ಒಮ್ಮೆಲೇ ಜ್ಞಾಪಕಕ್ಕೆ ಬಂದು ನನಗೆ ನಾಚಿಕೆಯಾಗುತ್ತದೆ.

ಮದುವೆಯ ಹಕೀಕತ್ತು.

— ನೇಮಸ್ತ ಪ್ರಮುಖರಾದ ಶ್ರೀ| ಚಿಂತಾಮಣಿಯವರ ಮೊಂಟೆಗ್ಯೂ ಸ್ವರಾಜ್ಯವನ್ನು ಪ್ರಜೆಗಳು ಸ್ವೀಕರಿಸಿ ನಡೆಯಬೇಕೆಂದು ಉಪದೇಶ ಮಾಡುವದಕ್ಕಾಗಿ ತಮ್ಮ "ಲೀಡರ" ಪತ್ರಿಕೆಯ ಸಂಪಾದಕತ್ವವನ್ನು ತ್ಯಜಿಸಿರುವರು. ಮೊಂಟೆಗ್ಯೂ ಸ್ವರಾಜ್ಯದಲ್ಲಿ ಸೇರಿ ದಿವಾನಪದವಿಯನ್ನು ಸ್ವೀಕರಿಸಿ, ಸ್ವಾಭಿಮಾನ ಕಾಯ್ದುಕೊಂಡು ಅಧಿಕಾರ ನಡಿಸಲಿಕ್ಕಾಗುವದಿಲ್ಲವೆಂದು ರಾಜೀನಾಮೆಯನ್ನಿತ್ತ ಪ ಕಾಶ್ಮೀರಿಯವರು ಇವರೇ! ಹೊತ್ತಿಗೊಂದು ರೂಪ ನೋಡಿರಿ ದಾಯಿತು

— ಜರ್ಮನಿಯ ರಾಜಧಾನಿಯಾದ ಬರ್ಲಿನದ ಒಂದು ಓಣಿಯಲ್ಲಿ ಗ್ಯಾಸಿಗೆ ಬೆಂಕಿ ಹತ್ತಿ ದೊಡ್ಡದೊಂದು ಸ್ಫೋಟವಾಯಿತು. ಮೋಟಾರು ಬಂಡಿಯು ಈ ಸ್ಫೋಟದಿಂದ ಸಿಟ್ಟಿ ಚೂರು ಚೂರಾಯಿತು. ೨೫ ಕಟ್ಟಡಗಳಿಂದ

ಒಂದು ಮನೆಗೂ ಬೆಂಕಿ ಹಚ್ಚಿದನು. ೪೨ ಮಂದಿಗಳನ್ನು ಹೊರಗೆ ತೆಗೆಯಲು ೯ ಮಂದಿಗಳು ಮೃತರಾಗಿದ್ದರು; ೨೦ ಮಂದಿಗೆಗೆ ಘಾಯವಾಗಿತ್ತು.

— ಸ್ಪೇನದ ಬಳಿ ಕೆನೇರಿಯ ದ್ವೀಪಗಳಲ್ಲಿ ದೊಡ್ಡದೊಂದು ಸೊಂಟರಗಾಳಿ ಬೀಸಿ ನೂರಾರು ಮನೆಗಳು ನೆಲಸಮ ಮಾಡವು ಬಹಳ ಮಳೆ ಸುರಿದು ಬೀದಿಗಳಲ್ಲೆಲ್ಲ ನೀರೇ ನೀರು!

— ನಮ್ಮ ಮುಂಬಯಿ ಇಲಾಖೆಯ ಅಧಿಪತಿಗಳಾದ ಸರ ಲೆಸ್ಲೀವಿಲ್ಸನರವರು ಬ್ರಾಹ್ಮಣೇತರ ದಿವಾಣರಾದ ನಾ| ಜಾಧವರವರಿಗೆ ಪರ್ಣಕ ಪ್ರಾಂತದಲ್ಲಿ ಬ್ರಾಹ್ಮಣೇತರ ವ್ರಜನನ್ನೂರಲು ದುರಾಲೋಚನೆ ಹೇಳಿದರಾಗಿ ನಾ| ಜಾಧವರವರೇ ಜಾಹೀರು ಪಡಿಸಿರುವರು. ಈ ಕುರಿತು ಸಭ್ಯಸ್ಥತಿಯನ್ನರುಹಲು ಪ್ರಾಂತಾಧಿಪರಿಗೆ ಪ್ರಶ್ನಿಸಿದರೆ, ಪ್ರಾಂತಾಧಿಪರು ಬಾಯಲ್ಲಿ ಅವಲು ಹಾಕಿಕೊಂಡಿರುವರು.

— ಧಾರವಾಡದ ಮುನಿಸಿಪಾಲಿಟಿಯವರು ತಮ್ಮ ಹದ್ದಿನೊಳಗಿಂದ ಸರೆಯ ಅಂಗಡಿಗಳನ್ನು ಕಿತ್ತಿ'ದಂತಹ ಪವಾರಟು ಮಾಡಲು ಪ್ರಾಂತಿಕ ಸರಕಾರಕ್ಕೆ ಬಿನ್ನೈಸಿಕೊಂಡಿರುವರು. ಕ್ಲಬ್‌ಗಳು ಹಾಗು ಕ್ಲಬ್ಬುಗಳ ಮೇಲಿನ ಸುಂಕವನ್ನು ರದ್ದು ಪಡಿಸುವ ವಿಚಾರ ಮಾಡಲು ಒಂದು ಮಂಡಳವು ನೇಮಿಸಲ್ಪಟ್ಟಿರುವರು.

— ಬೈಲಹೊಂಗಲದಲ್ಲಿ ಒಬ್ಬರ ಕಾರಿಗೆ ಬೆಂಕಿ ಹತ್ತಿ ೧೨ ಗುಡಿಸಲುಗಳು ಸುಟ್ಟು ಹೋದವು. ಮೂರು ಜಾನುವಾರು ಬೆಂದವು.

— ಪೃಥೆಯ ಬಳಿ ಖಿಲ್ಲಿಯಲ್ಲಿ ಸ್ವಸ್ವಾಮಿ ಕೆಲ ಪಾ. ಶಸ್ತ್ರಾಸ್ತ್ರಗಳನ್ನಿಡುವ ಉಗ್ರಾಣವಿದೆ. ಇದನ್ನು ಕಾಯಲು ಪಹರೆಯವನ್ನಿಟ್ಟಿನನ್ನು ಪಠಾಣರು ಕೊಂದರಲ್ಲದೆ ಎಳೆದೊಯ್ದರು. ಆತನು ಮಡಿದನು. ಇನ್ನೊಬ್ಬನಿದ್ದನು. ಆತನಿಗೆ ಎಳೆದು ಎಲ್ಲಿ ಹಾಕಿದರೋ ಏನೋ! ಶಸ್ತ್ರ ಕೋಠಿಯ ಬೀಗ ಮುರಿದು ಬಂದೂಕುಗಳನ್ನು ಕದ್ದುಕೊಂಡು ಪಲಾಯನ ಮಾಡಿದರು.

— ನಿಜಾಮ ರಾಜ್ಯಕ್ಕೆ ಸೇರಿದ ಉಸ್ಮಾನಾಬಾದ ಗ್ರಾಮದಲ್ಲಿ ಶ್ರೀ ವೆಂಕಟಪ್ಪನವರ ದೇಶಮುಖರೆಂಬವರು ಒಂದು ದೊಡ್ಡ ವಿದ್ಯಾಸಂಸ್ಥೆಯನ್ನೇರ್ಪಡಿಸಿರುವರು ಈ ಕಾಲೇಜಿಗೆ ವರ್ಷಕ್ಕೆ ೩...೪ ಲಕ್ಷ ವೆಚ್ಚ ಮಾಡುತ್ತಿರುವರು. ಇದರ ಉತ್ಪನ್ನಕ್ಕೆ ಇಷ್ಟರ ಮಟ್ಟಿಗೆ ಇರುವದು ಅಂಥ ಬಿಡಾಯಿಗೆದಂತ ಇನಾಮು ಭೂಮಿಯಲ್ಲಿ ಇದ್ದಷ್ಟು ಕಡಿಮೆ.

— ವರಿಷ್ಠ ಸ್ಟೇಟ್ ಕೌನ್ಸಿಲಿನ ಅಧಿವೇಶನದಲ್ಲಿ ಬೆರಿಸ್ಟರ ಜಿನ್ನಾರವರು ನ್ಯಾಯಾಧಿಕಾರವನ್ನು ಅಮಲಬಜಾವಣೆ ಅಧಿಕಾರಿಗಳಿಂದ ಸಳೆಕೊಳ್ಳಬೇಕೆಂಬ ಠರಾವನ್ನು ಸೂಚಿಸಲಿರುವರು

— ಶ್ರೀ ದ್ವಾರಕಾಕ್ಷೇತ್ರದಲ್ಲಿ ಶ್ರೀಶಾರದಾಪೀಠದ ಶ್ರೀ ಪ. ಬ್ರ. ಜಗದ್ಗುರು ಶ್ರೀ ಶಂಕರಾಚಾರ್ಯ ಸಚ್ಚಿದಾನಂದ ಮಹಾರಾಜರವರು ಶಿವರಾತ್ರಿಯ ಸಮಯ ಮಹಾರುದ್ರ ಯಾಗ ಮಾಡುವವರಿದ್ದಾರೆ ಈ ಉತ್ಸವಕ್ಕೆ ಎಲ್ಲೆಡೆಯಿಂದ ಸಂಸ್ಥಾನಿಕರೂ ಶ್ರೀಮಂತರೂ ಬರಲಿರುವರು.

— ರಂಗೂನಿನಲ್ಲಿ ಚೀನ ವರ್ತಕರ ಉಗ್ರಾಣಕ್ಕೆ ಬೆಂಕಿ ಹಚ್ಚಿ ೩೦೦೦೦ ರೂಪಾಯಿಗಳ ನಷ್ಟ!

ಫೊರೆಸ್ಟ ಕಮಿಟಿ.

ಕಾನಡಾ ಜಿಲ್ಲೆಯೊಳಗಿನ ಟೂರು.

ಫೊರೆಸ್ಟ ಕಮಿಟಿಯ ಸಭಾಸದರು ಮಾನವೇಕ ಜಿಲ್ಲೆಯೊಳಗಿನ ಸಂಚಾರ ಮುಗಿಸಿ, ಕಾನಡಾ ಜಿಲ್ಲೆಯ ಮಾಲಕ್ಷಿರಕ್ಕೆ ಹೋದರು. ಅಲ್ಲಿಂದ ವೆ ನೋರ ಎಂಬ ಗ್ರಾಮವು ೧೧ ಮೈಲು ದೂರವಿದೆ. ಅಲ್ಲಿ ಸರಕಾರಿ ಬಂಗಲೆಯಲ್ಲಿ ಕಮಿಟಿಯು ಸೇರಿ ಸಾಕ್ಷಿಸಂಗ್ರಹ ಮಾಡಿತು. ಶ್ರೀ ದೀಕ್ಷಿತ ಹರಿ ಎಂಬವರು ಒಳ್ಳೆ ಕುಶಲವಾಗಿ ರೈತರ ದೂರುಗಳನ್ನು ಸಭಿಕರಿಗೆ ತಿಳಿಸಿದರು. ಅದ್ದ ತಿಷ್ಟ ಸವಾಲುಗಳಿಗೆಲ್ಲ ಸಮಾಧಾನಕರವಾದ ಉತ್ತರಗಳನ್ನಿತ್ತರು. ಇಲ್ಲಿ ಹೊಲಗಳಿಗೆ ಕಿಗೇಳ ದರೆ ಸೊಪ್ಪಿನ ಗೊಬ್ಬರ ಉಪಯೋಗವಾಗುವದಿಲ್ಲ. ಸಗಣಿ ಗೊಬ್ಬರವನ್ನೇ ಇಲ್ಲಿ ಉಪಯೋಗಿಸುತ್ತಾರೆ ಈ ಗೊಬ್ಬರಕ್ಕೆ ಅವಶ್ಯವಳ್ಳ ಸಾಮಗ್ರಿಗಳನ್ನು ಅಡವಿಯೊಳಗಿಂದ ಪೂರೈಸಿಕೊಳ್ಳಲು ಬಹಳ ತೊಂದರೆ. ೬ ಇಂಚ ಸುತ್ತಳತೆಯುಳ್ಳ ಕಟ್ಟಿಗೆಯನ್ನು ಕಡಿದು, ತೀರಿದ ಕಾಷ್ಠಗಳಿಂದ ಕಂಟ್ರಾಕ್ಟರರು ಬಿಡ್ಡಲಾಗದು. ಅವನ್ನೆಲ್ಲ ರೈತರು ತಂದು ಬೂದಿ ಗೊಬ್ಬರವನ್ನು ಮಾಡಿಕೊಳ್ಳಬೇಕು ಗೋಮಾಳದ ಮಾನೆ ಮೇಲ್ತ ಕ್ಷೇತ್ರದೊಳಗಿನ ಗಿಡಗಳನ್ನು ಜಂಗಲ ಖಾತೆಯ ನೇಮಣೂಕಿಯಿಂದ ಕಡಿದು ತರಲು ರೈತರಿಗೆ ಅಧಿಕಾರವಿದೆ ಇತ್ತಲಾಗಿ ಕಡಿದ ಕೂಪುಗಳೊಳಗಿನ ಕಟ್ಟಿಗೆಯನ್ನು ಅಲ್ಲಲ್ಲೇ ಸಂಗ್ರಹಿಸಿ, ಕೂಪುಗಳಲ್ಲೇ ಸುಡಬೇಕೆಂಬದು, ಹೀಗೆ ಸುಟ್ಟ ಸ್ಥಳದಲ್ಲಿ ತೇಗಿನ ಸಸಿಗಳನ್ನು ಹಚ್ಚಬೇಕೆಂಬದು ಖಾತೆಯ ನೇಮವಾಗಿದೆ. ಇದರಿಂದ ಗೊಬ್ಬರಕ್ಕೆ ಕಟ್ಟಿಗೆ ದೊರಕುವದು ದುರ್ಲಭವಾಗಿದೆ. ಗೋಮಾಳದ ಸ್ಥಳ ಇಲ್ಲಿ ಇರುವದಿಲ್ಲ. ಹುಲ್ಲನ್ನು ಸರಕಾರವು ಮಾರಾಟ ಮಾಡುವದಿಲ್ಲ. ಅಡವಿಗಳಲ್ಲಿ ಹುಲ್ಲು ಬೇಕಷ್ಟು ಬೆಳೆಯುತ್ತದೆ. ದನಗಳು ಪುಷ್ಕಳವಾಗಿ ಹುಲ್ಲು ಮೇಯಬಹುದು, ಬಹಳ ಅನುಕೂಲವಾಗುತ್ತದೆ. ಮಳೆಗಾಲದಲ್ಲಿ ಸರಕಾರಿ ಅಡವಿಯೊಳಗೆ ದನಗಳನ್ನು ಮೇಯಿಸುವ ಉಪಯೋಗ ಮಾಡಿಕೊಳ್ಳಬಹುದಾದರೆ, ರೈತರು ಆ ಬಗ್ಗೆ ಪ್ರತ್ಯೇಕ ಫೀ ತೆರಬೇಕು ಇಲ್ಲದಿದ್ದರೆ, ರೈತರಿಗೆ ಗುರಿಯಾಗಬೇಕು ಉರುವಲ ಕಟ್ಟಿಗೆ, ಇಮಾರತು ಕಟ್ಟಿಗೆ, ಕಾಡು ಮೃಗಗಳ ಹಾವಳಿ, ಅಡವಿಗಳ ವಿಸ್ತಾರ ಇತ್ಯಾದಿ ದೂರುಗಳನ್ನು ಶ್ರೀ ದೀಕ್ಷಿತ ಹರಿಯವರು ಹೇಳಿದರು ಇಲ್ಲಿಯ ಸುಪ್ರಸಿದ್ಧ ಶ್ರೀಮಂತ ಕಂಟ್ರಾಕ್ಟರರಾದ ಅಮೀರ ಸಾಹೇಬರು ನಿರ್ದಾಕ್ಷಿಣ್ಯದಿಂದ ಕಾಡಿನ ಖಾತೆಯ ದೂರುಗಳನ್ನು ವಿವರಿಸಿದರು. ಇಲ್ಲಿಯ ಅಮೀರ ಸಾಹೇಬರು ಪ್ರತಿಷ್ಠಿತ ಜವಿನದಾರ, ದೊಡ್ಡ ಕಂಟ್ರಾಕ್ಟರರು ಮಾರನೇ ದಿನ ಕಮಿಟಿಯವರು ಕಿಂಸೊ ಗ್ರಾಮಕ್ಕೆ ಹೋದರು. ಅಲ್ಲಿಯ, ಒಕ್ಕಲಿಗರು ಜಂಗಲ ಖಾತೆಯ ದೂರುಗಳನ್ನು ಸಾದ್ಯಂತವಾಗಿ ನಿವೇದಿಸಿದರು. ಜಂಗಲ ಕೆಲಸಕ್ಕಾಗಿ ಜಂಗಲ ಖಾತೆಯವರು ತಮಗೆ ಬಿಟ್ಟಿಗೆ ಹಿಡಿದು ಯೋಗ್ಯ ಕೂಲಿಯನ್ನು ಸಹ ಕೊಡದೆ ದಣಿಸುತ್ತಾರೆಂದು ಒಕ್ಕಲಿಗರು ದೂರಿಕೊಂಡರು ಬಳಿಕ, ಕಮಿಟಿಯವರು ಮನಯ ಪಟ್ಟಣಕ್ಕೆ ಹೋದರು. ಮನಯ ಅಟ್ಟಣದವರು ತಮ್ಮ ದೂರುಗಳನ್ನೆಲ್ಲ ಛಾಪಿಸಿ ಕಮಿಟಿಯವರಿಗೆ ಸಾದರ ಮಾಡಿದರು. ಅಧ್ಯಕ್ಷರಾದ ಎ| ಎಡಿ ಹಾಗು ಶ್ರೀ| ಕರ್ಕ ಮಾಸ್ತೆಲ್ಲಿಯವರು ಇಲ್ಲಿಯ ತೋಟಗಳನ್ನು ನೋಡಹೋಗಿದ್ದರು. ಬಾಳೆ, ವೀಳ್ಯದೆಲೆಗಳ ತೋಟಗಳೇ ವಿಶೇಷ. ಈ ತೋಟಗಳಿಗೆ ಜಂಗಲದೊಳಗಿನ ಸಾಮಗ್ರಿ ಬೇಕು. ಬೇಲಿಗೆ ಬಿದುರು ಬೇಕು, ಮುಳ್ಳು ಬೇಕು. ಬಾಳೆ ಗಿಡಗಳಿಗೆ ಆಸರ ಬಳಿಕ, ಕೊನೆಯ ಒಜ್ಜೆಯಿಂದ ಗಿಡಗಳು ಬಗ್ಗಿ ಬೀಳದಂತೆ ಮಾಡಲು ಕವೆಗಳು ಬೇಕು. ವೀಳ್ಯದೆಲೆ ಬಳ್ಳಿಗೆ ಚಪ್ಪರ ಹಾಕಲು ಸೋಗು ಹಾಗು ಕಿರಿಬಿದುರು ಬೇಕು. ಇವುಗಳ ಬೆಲೆಯನ್ನು ಜಂಗಲ ಖಾತೆಯವರು ಹೆಚ್ಚಿಸಿರುವರು. ಉರುವಲ ಕಟ್ಟಿಗೆಯನ್ನು ದೊರಕಿಸಿಕೊಳ್ಳುವದು ಬಹಳ ಕಠಿಣ. ಈ ಮೂಲಕ ಕಬ್ಬಿನ ಬೇಸಾಯವು ಒಮ್ಮೆಲೆ ನಿಂತುಹೋಗಿದೆ. ಉರುವಲ ಕಟ್ಟಿಗೆಯನ್ನು ಕಂಟ್ರಾಕ್ಟರರಿಂದ ಇಲ್ಲವೆ ಡಿಪೋಗಳಿಂದ ಕೊಂಡುಕೊಳ್ಳಬೇಕು. ಕಲ್ಯಾಣ ಊರಿನ ಕೆಲವು ರೈತರು ಫೊರೆಸ್ಟ ಖಾತೆಯವರ ಮೇಲೆ ಲಂಚತಿನ್ನುವ ಆರೋಪ ಹೊರಿಸಿದ್ದರು. ಈ ಕುರಿತು ಪ್ರತ್ಯಕ್ಷ ಮಾತುಕತೆಯಾಗಲು ಆ ಸಮಯ ಅನುಕೂಲವಾಗಲಿಲ್ಲ. ಮುಂದೆ ವಿಚಾರವಾಗುವದು. ಮನಯಿಯಿಂದ ಮುಂದೆ ಕಮಿಟಿಯವರು ಕಾರವಾರ ಜಿಲ್ಲೆಯ ಕರ್ಜತ್ ಮುಕ್ಕಾಮಿಗೆ ಹೋದರು. ಅಲ್ಲಿಯ ದೂರುಗಳೂ, ಕಾನಡಾ ಜಿಲ್ಲೆಯೊಳಗಿನ ದೂರುಗಳೂ ಸಾಮಾನ್ಯವಾಗಿ ಒಂದೇ.

ಎ| ಎಡಿ ಸಾಹೇಬರು ಪ್ರತಿ ಒಂದು ಜಿಲ್ಲೆಯೊಳಗಿನ ಪ್ರವಾಸ ಮುಗಿದ ನಂತರ ಆ ಆ ಜಿಲ್ಲೆಯ ಮಟ್ಟಿಗೆ ತಮ್ಮ ಅಭಿಪ್ರಾಯವನ್ನು ಬರೆದು ಕಮಿಟಿಯ ಇತರ ಮೆಂಬರರಿಗೆ ಹಂಚುವ ಪ್ರಘಾತವನ್ನಿಟ್ಟಿರುವರು.

ದಿ ಮೈಸೂರ ಅಗ್ರಿಕಲ್ಚರಲ್.
ಡೈರಿ ಫಾರ್ಮ ಕಂಪನಿ, ಲಿಮಿಟೆಡ್.

೧೯೧೩ ನೇ ಇಸವಿಯ ಕಂಪನಿಗಳ ರೆಗ್ಯುಲೇಶನ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ. ಸದ್ರಿ ಕಂಪನಿಯಲ್ಲಿ ನಾವು, ಕಾರವಾರ ಡಿಸ್ಟ್ರಿಕ್ಟದೊಳಗಿನ ಕುಮಟಾ, ಅಂಕೋಲಾ, ಕಾರವಾರ ತಾಲೂಕುಗಳ ಬಗ್ಗೆ ಸದ್ರಿ ಕಂಪನಿಯ ಕರ್ಫನಿಂದ ಇನಸ್ಪೆಕ್ಟರನಾಗಿದ್ದು, ಈ ಬಗ್ಗೆ ಮೇಲೆ ವಿದಿತಪಟ್ಟ ಕಂಪನಿಯಿಂದ ಅಧಿಕಾರಪಟ್ಟವನಾಗಿರುತ್ತೇನೆ. ಈ ಇನಸ್ಪೆಕ್ಟರನಾಗಿ ಕೆಲವು ಸಬ್ ಏಜಂಟರುಗಳನ್ನು ಸಹ ನೇಮಿಸಿ, ಕಂಪನಿಯು ಪ್ರೋಗ್ರೆಸ್ ಆಗುತ್ತಾ ಇದೆ. ಈ ಮೂಲಕ ತಿಳಿಯಪಡಿಸುವದೇನಂದರೆ,- ಸರ್ವ ಜನರೂ ಈ ಕಂಪನಿಯ ಶರ್ತಗಳನ್ನು ವಿಮರ್ಶಿಸಿ ನೋಡಿ, ಇದರಿಂದಾಗುವ ಹಿತವನ್ನು ಪಡಕೊಳ್ಳುವದಲ್ಲದೆ, ಕಂಪನಿಯನ್ನೂ ಊರ್ಜಿತಾವಸ್ಥೆಗೆ ತರಬೇಕಾಗಿ ವಿನಂತಿ ಸದ್ರಿ ಶೇರುಗಳನ್ನು ಪಡೆಯುವವರ ಬಗ್ಗೆ ನಾನು ಹಾಲೀ ಕುಮಟಾ ಗುಡಿಗಾರ ಪೇಟೆಯಲ್ಲಿ ನನ್ನ ಹೆಡ್ ಕ್ವಾರ್ಟರ್ಸನ್ನು ಸ್ಥಾಪಿಸಿರುತ್ತೇನೆ, ಹಿಂದೆ ಈ ಸಲುವಾಗಿ ಕಾನಡಾ ಧುರೀಣದಲ್ಲಿ ಡಿಸ್ಟ್ರಿಕ್ಟ ಏಜಂಟರವರಿಂದಾ ಮಾಹಿತಿಯು ಕೊಡಲ್ಪಟ್ಟಿರುತ್ತದೆ

ಕಾರವಾರ, ಅಂಕೋಲಾ ತಾಲೂಕುಗಳಲ್ಲಿ ಸಬ್ ಏಜಂಟ ಜಾಗ ಖಾಲಿ ಇರುತ್ತದೆ. ಸದ್ರಿ ಜಾಗಕ್ಕೆ ದರ ತಿಂಗಳಿಗೆ ೩೦ ರೂಪಾಯಿ ಪಗಾರ ಇರುತ್ತದೆ. ಅಪೇಕ್ಷೆಯುಳ್ಳವರು ಈ ಕೆಳಗಿನ ವಿಳಾಸಕ್ಕೆ ಪತ್ರದ್ವಾರವಾಗಲಿ, ಸಮಕ್ಷಮವಾಗಲಿ ಭೆಟ್ಟಿ ಆದಲ್ಲಿ ಸರ್ವವೂ ತಿಳಿಯಬರುವದು.

R. V. HEGDE,
Taluk Inspector,
Kumta, Ankola, Karwar,
A. D. F. CO., LTD. *Mysore.*
Head Office - **KUMTA.**

THE

INDIA PROVIDENT COMPANY LTD:

ESTABLISHED 1910.

Dividend declared 1912 — 20 per cent.
Dividend declared 1922 — 30 per cent.
Dividend declared previous year 15-20 per cent.

The Safest office for Life Insurance of the poor Premium Re 1 or As 8 per mensem.

Apply at once to:-

PADMANABH GOPAL KAMAT,
Agent, ANKOLA. N. Kanara.

ಮಹಾತ್ಮರ ಆತ್ಮಚರಿತ್ರೆ.

(೫) ಹೈಸ್ಕೂಲಿನಲ್ಲಿ.

ಮದುವೆಯಾದಾಗ ನಾನು ಹೈಸ್ಕೂಲಿನಲ್ಲಿ ಕಲಿಯುತ್ತಿದ್ದೆನು. ನಾವು ಮೂವರು ಅಣ್ಣತಮ್ಮಂದಿರೂ ಒಂದೇ ಶಾಲೆಯಲ್ಲಿ ಕಲಿಯುತ್ತಿದ್ದೆವು. ಹಿರೇ ಅಣ್ಣನು ಮೇಲಿನ ವರ್ಗದಲ್ಲಿ ಕಲಿಯುತ್ತಿದ್ದನು. ನನ್ನೊಡನೆ ಮದುವೆಯಾದ ಚಿಕ್ಕ ಅಣ್ಣನು ನನಗಿಂತ ೧ ವರ್ಗ ಮೇಲಾಗಿ ಕಲಿಯುತ್ತಿದ್ದನು. ಮದುವೆಯಿಂದ ನಮ್ಮಿಬ್ಬರದೂ ೧ ವರುಷ ಹಾಳಾಯಿತು. ಚಿಕ್ಕ ಅಣ್ಣನಿಗಂತು ಇದರಿಂದ ಬಹಳ ಕೆಡಕಾಯಿತು. ಆತನು ವಿದ್ಯಾಭ್ಯಾಸವನ್ನೇ ಬಿಟ್ಟುಬಿಟ್ಟನು. ಆವನಂತೆಯೇ ಎಷ್ಟು ಮಂದಿ ತರುಣರ ಗತಿಯಾಗುತ್ತದೆಯೋ ಭಗವಂತನೇ ಬಲ್ಲ. ಈಗೀನ ಹಿಂದೂ ಸಮಾಜದಲ್ಲಿ ಮಾತ್ರ ವಿದ್ಯಾಭ್ಯಾಸಕ್ಕೆ ಮದುವೆಯಿಂದ ತಡೆಬೀಳುವದಿಲ್ಲ.

ನನ್ನ ವಿದ್ಯಾಭ್ಯಾಸವು ಮುಂದರಿಯಿತು. ಹೈಸ್ಕೂಲಿನಲ್ಲಿದ್ದಾಗ ನಾನು ದಡ್ಡ ಹುಡುಗನೆಂದು ತಿಳಿಯಲ್ಪಡುತ್ತಿದ್ದಿಲ್ಲ. ಶಿಕ್ಷಕರಿಗೆ ನನ್ನ ಮೇಲೆ ನಿರಂತರವಾದ ಪ್ರೀತಿ ಇತ್ತು. ಪ್ರತಿ ವರುಷ ವಿದ್ಯಾರ್ಥಿಗಳ ಪ್ರಗತಿ ಹಾಗು ಶೀಲಗಳ ಕುರಿತು ತಾಯಿ-ತಂದೆಗಳಿಗೆ ಪತ್ರಿಕೆಗಳು ಕಳಿಸಲ್ಪಡುತ್ತಿದ್ದವು. ನನ್ನ ವಿಷಯ ಕೆಟ್ಟ ಅಭಿಪ್ರಾಯವು ಎಂದೂ ನಮೂದಾಗಲಿಲ್ಲ. ಎರಡನೇ ಇಯತ್ತೆಯಲ್ಲಿ ತೇರ್ಗಡೆಯಾದ ಬಳಿಕ, ನಾನು ಇನಾಮುಗಳನ್ನೂ ಪಡೆಯುತ್ತಿದ್ದೆನು. ೫ ಹಾಗು ೬ನೇ ಇಯತ್ತೆಗಳಲ್ಲಿದ್ದಾಗ ನನಗೆ ಅನುಕ್ರಮವು ೪ ಹಾಗು ೧೦ ರೂಪಾಯಿಗಳ ಶಿಷ್ಯವೃತ್ತಿಗಳು ದೊರಕಿದವು. ನನ್ನ ಯೋಗ್ಯತೆಯಿಂದ ಈ ಶಿಷ್ಯವೃತ್ತಿಗಳು ದೊರಕಿದವೆಂದು ನಾನು ಹೇಳಲಾರೆ. ಕೇವಲ ದೈವಬಲದಿಂದಲೇ ನಾನು ಇವನ್ನು ಸಂಪಾದಿಸಿದ್ದೆನು. ಯಾಕಂದರೆ, ಈ ಶಿಷ್ಯವೃತ್ತಿಗಳು ಎಲ್ಲ ವಿದ್ಯಾರ್ಥಿಗಳಿಗೆ ದೊರಕುವಂಥವಾಗಿರಲಿಲ್ಲ, ಕಾಠೇವಾಡದ ಸೋರಟ ಭಾಗದೊಳಗಿನ ಮೇಲ್ತರಗತಿಯ ವಿದ್ಯಾರ್ಥಿಗಳಿಗಾಗಿ ಕಾದಿಟ್ಟಿದ್ದರು. ಆ ಕಾಲಕ್ಕೆ ವರ್ಗದಲ್ಲಿ ೪೦-೫೦ ಹುಡುಗರಿದ್ದರು. ಅವರಲ್ಲಿ ಈ ಭಾಗದ ಹೆಚ್ಚು ವಿದ್ಯಾರ್ಥಿಗಳಿರಲಿಲ್ಲ.

ನಾನೇನು ದೊಡ್ಡ ಜಾಣ ಹುಡುಗನಿದ್ದೆನೆಂದು ನನಗನಿಸಿದ್ದಿಲ್ಲ. ಇನಾಮಗಳಾಗಲಿ, ಶಿಷ್ಯವೃತ್ತಿಗಳಾಗಲಿ ದೊರೆತಾಗ ನನಗೆ ಆಶ್ಚರ್ಯವಾಗುತ್ತಿತ್ತು. ಆದರೆ, ನನ್ನ ಶೀಲವನ್ನು ಮಾತ್ರ ಬಹಳ ಎಚ್ಚರಿಕೆಯಿಂದ ನಾನು ಜೋಪಾನ ಮಾಡಿದೆನು. ತೀರ ಚಿಕ್ಕದಾದ ಕಲಂಕ ಬಂದರೂ, ನಾನು ಅಳುತ್ತಿದ್ದೆನು. ಶಿಕ್ಷಕರು ಸಿಟ್ಟುಮಾಡುವಂಥ ಯಾವದೇ ಕೃತ್ಯವು ನನಗೆ ಅಸಹ್ಯವಾಗುತ್ತಿತ್ತು. ಒಮ್ಮೆ ನನಗೆ ಪೆಟ್ಟು ತಿಂದ ನೆನಪು ಆಗುತ್ತದೆ. ಪೆಟ್ಟು ತಿನ್ನುವಂಥ ಕೆಲಸವಾದ್ದರಿಂದ ಅದು ನನಗೆ ವಿಶೇಷವೆನಿಸಲಿಲ್ಲ. ನಾನು ಮುರಗಾರನೆ ಮರುಗಿದೆನು; ಈ ಸಂಗತಿಯು ನಾನು ಮೊದಲನೇ ಯಾ ಎರಡನೇ ವರ್ಗದಲ್ಲಿದ್ದಾಗ ಸಂಭವಿಸಿತು. ನಾನು ೭ನೇ ಇಯತ್ತೆಯಲ್ಲಿದ್ದಾಗ ಒದಗಿದ ಇನ್ನೊಂದು ಸಂಗತಿಯು ನೆನಪಾಗುತ್ತದೆ. ದೋರಾಬಜಿ ಎದಲಜಿ ಗಿಮಿಯೆಂಬುವರು ಆಗ ಮುಖ್ಯಾಧ್ಯಾಪಕರಿದ್ದರು. ಅವರ ಶಿಸ್ತು ಬಹಳ ಕಠಿಣ; ಆದರೆ, ಅವರು ಕ್ರಮದಂತೆ ಕೆಲಸ ಮಾಡುತ್ತಿದ್ದರು; ಹಾಗು ಕಲಿಸಲಿಕ್ಕೂ ಒಳ್ಳೇ ಶಿಕ್ಷಕರಿದ್ದರು. ಹೀಗಾಗಿ ಹುಡುಗರಿಗೆ ಅವರು ಪ್ರಿಯರಾಗಿದ್ದರು. ಮೇಲಿನ ವರ್ಗದ ಹುಡುಗರೆಲ್ಲರೂ ಕ್ರಿಕೆಟ್ ಹಾಗು ಗರಡೀ ಸಾಧಕಗಳನ್ನು ಕಲಿಯಬೇಕೆಂದು ಅವರ ಕಟ್ಟಪ್ಪಣೆ. ನನಗೆ ಯಾವದೂ ಸೇರುತ್ತಿದ್ದಿಲ್ಲ. ಕ್ರಿಕೆಟ್, ಫೂಟಬಾಲದಂಥ ಆಟಗಳಿಂದ ವ್ಯಾಯಾಮವನ್ನೆಲ್ಲರೂ ಕೊಳ್ಳಬೇಕೆಂದು ಒತ್ತಾಯವಾಗುವ ತನಕ ನಾನು ಆ ಆಟಗಳಲ್ಲಿ ಸೇರಲಿಲ್ಲ. ನನ್ನ ದಾಕ್ಷಿಣ್ಯಸ್ವಭಾವದ ಮೂಲಕ ನಾನು ಅಲಿಪ್ತನಾಗಿದ್ದೆ. ಇದು ತಪ್ಪೆಂದು ಈಗ ನನಗೆ ತೋರುತ್ತದೆ. ಶಿಕ್ಷಣಕ್ಕೂ ವ್ಯಾಯಾಮಕ್ಕೂ ಸಂಬಂಧವೇನಿಲ್ಲೆಂಬ ವಿಚಾರವು ಆಗ ನನ್ನಲ್ಲಿತ್ತು. ಶಾರೀರಿಕ ಶಿಕ್ಷಣವೂ ಮಾನಸಿಕ ಶಿಕ್ಷಣದಂತೆಯೇ ಅಭ್ಯಾಸಕ್ರಮದಲ್ಲಿ ಸೇರಬೇಕೆಂದು ಈಗ ನಾನು ತಿಳಿಯುತ್ತೇನೆ.

ವ್ಯಾಯಾಮವನ್ನು ಕೊಳ್ಳದಿದ್ದದರಿಂದ ನನಗೇನು ಕೆಡಕಾಗಲಿಲ್ಲ. ಯಾಕಂದರೆ ಬೈಲು ಪ್ರದೇಶದಲ್ಲಿ ದೂರ ತಿರುಗಾಡಿದರೆ, ಹಿತವಾಗುತ್ತದೆಂದು ನಾನು ಪುಸ್ತಕಗಳಲ್ಲಿ ಓದಿದ್ದೆನು. ಈ ಅಭಿಪ್ರಾಯದಂತೆ ನಾನು ದೂರ ಅಡ್ಡಾಡುವ ಕ್ರಮವನ್ನಿಟ್ಟಿದ್ದೆನು. ಈಗಲೂ ಅದೇ ಕ್ರಮವಿದೆ. ಈ ತಿರುಗಾಟದಿಂದ ನನ್ನ ಶರೀರವು ಸಾಮಾನ್ಯವಾಗಿ ದೃಢವಾಯಿತೆಂದು ಹೇಳಬಹುದು.

ಮಹಾತ್ಮರ ಪಿತೃಸೇವೆ

ಜಿಮ್ನ್ಯಾಸ್ಟಿಕ್ ಯಾನೆ ಗರಡೀಸಾಧಕವು ನನಗೆ ಸೇರುತ್ತಿದ್ದಿಲ್ಲ. ಕಾರಣವೇನು? ನನ್ನ ತಂದೆಯವರಿಗೆ ಬಾಧಿಸಿದ್ದರಿಂದ ನಾನು ತೀರ ಜಾಗರೂಕತೆಯಿಂದ ಸೇವೆ ಮಾಡುತ್ತಿದ್ದೆನು. ಶಾಲೆ ಬಿಟ್ಟ ಕೂಡಲೆ ನಾನು ಮನೆಗೆ ಹೋಗಿ ನನ್ನ ತಂದೆಯವರ ಚಾಕರಿ ಮಾಡುತ್ತಿದ್ದೆನು. ಒತ್ತಾಯದ ವ್ಯಾಯಾಮದ ನಿಯಮವು ಈ ಪಿತೃಸೇವೆಗೆ ಅಡ್ಡಿಯಾಯಿತು. ನಾನು ಮುಖ್ಯಾಧ್ಯಾಪಕ ಗಿಮಿಯವರಿಗೆ ತಂದೆಯವರ ಚಾಕರಿಗಾಗಿ ಜಿಮ್ನ್ಯಾಸ್ಟಿಕ್‌ದೊಳಗಿಂದ ನನ್ನನ್ನು ಬಿಡುಗಡೆ ಮಾಡಬೇಕೆಂದು ಬೇಡಿಕೊಂಡೆ, ಆದರೆ, ಅವರು ಅದಕ್ಕೆ ಕಿವಿಗೊಡಲಿಲ್ಲ. ಶನಿವಾರಕ್ಕೆ ಬೆಳಗಿನ ಶಾಲೆ. ಜಿಮ್ನ್ಯಾಸ್ಟಿಕ್ಕಿಗಾಗಿ ನಾವು ಸಾಯಂಕಾಲ ೪ ಘಂಟೆಗೆ ಮನೆಯಿಂದ ಶಾಲೆಗೆ ಹೋಗಬೇಕಾಗಿತ್ತು. ನನ್ನೊಡನೆ ಗಡಿಯಾರವಿದ್ದಿಲ್ಲ. ಮೋಡಗಳಿಂದ ನಾನು ಮೋಸ ಹೋದೆನು. ಒಮ್ಮೆ ಶನಿವಾರ ನಾನು ಶಾಲೆಗೆ ಹೋಗಿ ನೋಡಲು, ಹುಡುಗರೆಲ್ಲರೂ ಹೊರಟು ಹೋಗಿದ್ದರು. ಮಾರನೇ ದಿನ ಗಿಮಿಯವರು ಹಾಜರಿ ಪಟ್ಟಿಯನ್ನು ತಪಾಸ ಮಾಡಿದರು. ನನ್ನ ಹೆಸರ ಮುಂದೆ ಗೈರಹಾಜರಿಯ ಚಿನ್ಹವಿತ್ತು. ಗೈರಹಾಜರಿಯ ಕಾರಣ ಕೇಳಲು, ನಾನು ಇದ್ದ ಹಕೀಕತವನ್ನು ಹೇಳಿದೆನು. ನನ್ನನ್ನು ಅವರು ನಂಬದೆ, ಒಂದೋ, ಎರಡೋ ಆಣೆಗಳ (ಎಷ್ಟೆಂದು ಈಗ ನನ್ನ ಜ್ಞಾಪಕದಲ್ಲಿಲ್ಲ) ದಂಡ ವಿಧಿಸಿದರು, ಸುಳ್ಳು ಹೇಳಿದೆನೆಂದು ನನಗೆ ಶಿಕ್ಷೆ! ಇದರಿಂದ ನನಗೆ ವಿಪರೀತ ವ್ಯಸನವಾಯಿತು. ನನ್ನ ನಿರ್ದೋಷತನವನ್ನು ಸಿದ್ಧ ಮಾಡುವ ಬಗೆ ಹೇಗೆ? ಏನೂ ಉಪಾಯ ತೋರಲಿಲ್ಲ. ಬಹಳ ವೇದನೆಗೊಂಡು ನಾನು ಮರುಗಿದೆನು. ಸತ್ಯವಂತನು ಜಾಗ್ರತೆಯಿಂದಿರಬೇಕೆಂದು ಆಗ ನನಗೆ ಹೊಳೆಯಿತು. ಶಾಲೆಯಲ್ಲಿ ಅಜಾಗ್ರತೆಯಾದದ್ದು ಇದೇ ಮೊದಲನೇಸಲ, ಕಡೆಯ ಬಾರಿಯಾದರೂ ಅದೇ. ಕೊನೆಗೆ ಈ ದಂಡವನ್ನು ಮಾಫ ಮಾಡಿಕೊಂಡ ನೆನಪು ಕಾಣುತ್ತದೆ.

ಒತ್ತಾಯದ ವ್ಯಾಯಾಮ ಕ್ರಮದೊಳಗಿಂದ ನನಗೆ ಮಾಫಿ ಸಿಕ್ಕಿತು, ನನ್ನ ತಂದೆಯವರು ಶಾಲೆ ಬಿಟ್ಟ ಬಳಿಕ ತಮ್ಮ ಕೆಲಸಕ್ಕಾಗಿ ಮನೆಯಲ್ಲಿ ನನ್ನ ಅಗತ್ಯವಿದೆಂದು ಮುಖ್ಯಾಧ್ಯಾಪಕರಿಗೆ ಸ್ವತಃ ಬರೆದಿದ್ದರು. ತಾತ್ಪರ್ಯದಿಂದ ವ್ಯಾಯಾಮದ ಮಟ್ಟಿಗೆ ನನಗೆ ಕೆಡಕಾಗಲಿಲ್ಲ, ಆದರೆ, ಇನ್ನೊಂದು ವಿಷಯದಲ್ಲಿ ಉಪೇಕ್ಷೆ ಮಾಡಿದ ಫಲವನ್ನು ನಾನು ಈಗಲೂ ಅನುಭವಿಸುತ್ತಿದ್ದೇನೆ. ನನಗೆ ಯಾರು ಹೇಳಿದರೋ ಏನೋ, ಚಲೋ ಬರಹವಿರುವದು ಶಿಕ್ಷಣದ ಆವಶ್ಯಕ ಅಂಗವೆಂದು ನಾನು ತಿಳಿದಿದ್ದಿಲ್ಲ, ಇಂಗ್ಲಂಡಕ್ಕೆ ಹೋಗುವ ತನಕ ತಿಳಿಯಲಿಲ್ಲ. ಬಳಿಕ ವಿಶೇಷವಾಗಿ ದಕ್ಷಿಣ ಆಫ್ರಿಕೆಯಲ್ಲಿ ಅಲ್ಲಿಯ ವಕೀಲರೂ, ತರುಣರೂ ಬರೆಯುವ ಮನೋಹರವಾದ ಬರಹ ನೋಡಿ ನನಗೆ ನಾಚಿಕೆಯೆನಿಸಿತು. ಮತ್ತು ಹಿಂದೆ ಉಪೇಕ್ಷೆ ಮಾಡಿದ ಬಗ್ಗೆ ಪಶ್ಚಾತ್ತಾಪವಾಯಿತು. ಕೆಟ್ಟ ಬರಹವು ಅಪೂರ್ಣ ಶಿಕ್ಷಣದ ಲಕ್ಷಣವೆಂದು ನನ್ನ ತಿಳುವಳಿಕೆಯಾಯಿತು. ನನ್ನ ಬರಹವನ್ನು ತಿದ್ದಲು ನಾನು ಆ ಬಳಿಕ ಯತ್ನ ಮಾಡಿದೆನು. ಆದರೆ ಸಮಯವು ಮೀರಿ ಹೋಗಿತ್ತು. ಚಿಕ್ಕಂದಿನಲ್ಲಿ ಮಾಡಿದ ಉಪೇಕ್ಷೆಯನ್ನು ನಾನೆಂದಿಗೂ ತಿದ್ದಲಾರೆ. ನನ್ನ ಉದಾಹರಣೆಯ ಮೇಲಿಂದ ಪ್ರತಿಯೊಬ್ಬ ಹರೆಯದ ಗಂಡಸರೂ, ಹೆಂಗಸರೂ ಮುಂಜಾಗ್ರತೆಯನ್ನು ಪಡೆದು ಚಲೋ ಬರಹವು ಶಿಕ್ಷಣದ ಅಂಗವೆಂದು ತಿಳಿದುಕೊಳ್ಳಲಿ. ಮೊಟ್ಟಮೊದಲು ಹುಡುಗರಿಗೆ ಡ್ರಾಯಿಂಗ ಯಾನೆ ಚಿತ್ರಕಲೆಯನ್ನು ಕಲಿಸಬೇಕೆಂದು ಈಗ ನನ್ನ ಅಭಿಪ್ರಾಯವಾಗಿದೆ. ಮೊಟ್ಟಮೊದಲು, ಬಾಲಕರು ನಿರೀಕ್ಷಣೆಯ ಮೇಲಿಂದ ಭಿನ್ನ ಭಿನ್ನ ವಸ್ತು, ಪಕ್ಷಿಗಳ ಗುರುತು ಹಿಡಿಯುವಂತೆ ಅಕ್ಷರಗಳ ಗುರುತು ಹಿಡಿಯಕಲಿಯಲಿ. ವಸ್ತುಗಳ ಚಿತ್ರ ತೆಗೆಯಕಲಿತ ಬಳಿಕ, ಬರಹ ಕಲಿಯಹತ್ತಲಿ. ಆಗ ಆತನು ಅಂದವಾದ ಬರಹ ಬರೆಯುವನು.

ಶಾಲೆಯೊಳಗಿನ ಇನ್ನೆರಡು ಸಂಗತಿಗಳನ್ನು ನಮೂದಿಸಬಹುದು. ಮದುವೆಯ ಮೂಲಕ ೧ ವರ್ಷ ನಾನು ಹಿಂದೆ ಬಿದ್ದೆ. ಆ ಅಭ್ಯಾಸವನ್ನು ತುಂಬಿತಂದು ಮುಂದಿನ ವರ್ಗಕ್ಕೆ ಹೋಗಬೇಕೆಂದು ನನ್ನ ಶಿಕ್ಷಕರ ಹೇಳಿಕೆಯಿತ್ತು. ಹೀಗೆ ಪ್ರಯತ್ನ ಮಾಡುವ ವಿದ್ಯಾರ್ಥಿಗಳಿಗೆ ಶಿಕ್ಷಕರು ಅನುಕೂಲ್ಯ ಮಾಡಿಕೊಡುತ್ತಾರೆ. ಅದರಿಂದ ೩ನೇ ಇಯತ್ತೆಯಲ್ಲಿ ನಾನು ೬ ತಿಂಗಳೇ ಇದ್ದೆನು. ಪರೀಕ್ಷೆಯಾದ ಬಳಿಕ, ನಾನು ೪ನೇ ಇಯತ್ತೆಗೆ ಹೋದೆನು. ಪರೀಕ್ಷೆ ಮುಗಿದ ಕೂಡಲೆ ನಮಗೆ ಬೇಸಿಗೆ ಕಾಲದ ಸೂಟಿ ದೊರಕುತ್ತಿತ್ತು. ೪ನೇ ಇಯತ್ತೆಯಿಂದ ಬಹುತರ ಎಲ್ಲ ವಿಷಯಗಳನ್ನು ಕಲಿಸುವದು ಇಂಗ್ಲಿಷ ಭಾಷೆಯಿಂದ. ನಾನು ದಿಗಿಲುಬಿದ್ದೆ. ಭೂಮಿತಿಯು ಹೊಸ ವಿಷಯವು. ಈ ವಿಷಯದಲ್ಲಿ ನನಗೆ ವಿಶೇಷ ಗತಿಯಿದ್ದಿಲ್ಲ. ಮತ್ತು ಇಂಗ್ಲಿಷ ಭಾಷೆಯ ಮೂಲಕ ಆ ವಿಷಯಗ್ರಹಣವು ಮತ್ತೂ ಕಠಿಣವಾಯಿತು. ಶಿಕ್ಷಕರು ಈ ವಿಷಯವನ್ನು ಬಹಳ ವಿವರದಿಂದ ಕಲಿಸುತ್ತಿದ್ದರು, ಆದರೆ, ಅದನ್ನು ನನ್ನಿಂದ ಗ್ರಹಿಸಲಾಗಲಿಲ್ಲ. ಒಂದು ವರುಷದಲ್ಲಿ ಎರಡು ವರುಷಗಳ ಅಭ್ಯಾಸವನ್ನು ಒತ್ತಿಕಟ್ಟಿದ್ದು ದುರಾಶೆಯಾಯಿತೆಂದು ನನಗೆ ಆಗಾಗ್ಗೆ ಅನಿಸಿ, ಎದೆ ಹಾರುತ್ತಿತ್ತು. ಮೂರನೇ ಇಯತ್ತೆಗೆ ಹಿಂತಿರುಗಬೇಕೆಂದೂ ಅನಿಸುತ್ತಿತ್ತು. ಆದರೆ, ಇದರಿಂದ ನನಗಂತು ನಾಚಿಕೆಗೇಡಾಗುತ್ತಿತ್ತು. ಆದರೆ ನನ್ನೊಡನೆ ನನ್ನ ಪ್ರಯತ್ನದ ಮೇಲೆ ನಂಬಿಗೆಯನ್ನಿಟ್ಟು ನನಗೆ ಮುಂದಿನ ಇಯತ್ತೆಯಲ್ಲಿ ಹಾಕಲು ಶಿಫಾರಸು ಮಾಡಿದ ಶಿಕ್ಷಕರಿಗೂ ನಾಚಿಕೆಗೇಡು. ಈ ಭಯದಿಂದ ನಾನು ನನ್ನ ಸ್ಥಾನವನ್ನೇ ಘಟ್ಟಹಿಡಿದೆನು. ಯೂಕ್ಲಿಡನ ೧೩ನೇ ಪ್ರಮೇಯದವರೆಗೆ ಬಹಳ ಪ್ರಯತ್ನದಿಂದ ಕಲಿಯಲು ಈ ವಿಷಯವು ತೀರ ಸುಲಭವಿದೆಂದು ನನಗೆ ಥಟ್ಟನೆ ಹೊಳೆಯಿತು. ಬರೇ ಬುದ್ಧಿಶಕ್ತಿಯ ಸಾಮಾನ್ಯ ವಿಚಾರದಿಂದ ತಿಳಿಯಬಹುದಾದ ವಿಷಯವು ಎಂದೂ ಕಠಿಣವಾಗಲಾರದು; ಅಂದಿನಿಂದ ಭೂಮಿತಿಯು ನನಗೆ ಸುಲಭವಾಗಿ ತಿಳಿಯಿತು ಹಾಗು ಮನಸ್ಸಿಗೆ ಆಲ್ಹಾದವೂ ಆಗತ್ತಿತ್ತು.

ಆದರೆ, ಸಂಸ್ಕೃತ ವಿದ್ಯಾಭ್ಯಾಸವು ಮತ್ತೂ ಕಠಿಣವಾಗಿತ್ತು. ಭೂಮಿತಿಯಲ್ಲಿ ಸ್ಮರಣಶಕ್ತಿಯು ಉಪಯೋಗವಿದ್ದಿಲ್ಲ. ಆದೇ ಸಂಸ್ಕೃತದಲ್ಲಿ ಪ್ರತಿಯೊಂದನ್ನೂ ಬಾಯಿಪಾಠ ಮಾಡಬೇಕೆಂದು ನನ್ನ ಕಲ್ಪನೆಯಾಗಿತ್ತು. ಈ ವಿಷಯವೂ ೪ನೇ ಇಯತ್ತೆಯಿಂದ ಪ್ರಾರಂಭವಾಗಿತ್ತು. ೬ನೇ ಇಯತ್ತೆಯಲ್ಲಿ ಕಾಲಿಟ್ಟ ಕೂಡಲೇ ನಾನು ಸಂಸ್ಕೃತವನ್ನು ಬಿಟ್ಟೇಬಿಟ್ಟೆನು. ಸಂಸ್ಕೃತ ಶಿಕ್ಷಕರು ಬಹಳ ಪೀಡಕೊಟ್ಟು ದಣಿಸುವವರೆಂದು ನನ್ನ ಕಲ್ಪನೆಯಾಯಿತು, ಹುಡುಗರ ತಲೆಯಲ್ಲಿ ಒತ್ತೊತ್ತಿ ತುಂಬುತ್ತಾರೆಂದೂ ನನ್ನ ಕಲ್ಪನೆಯಾಯಿತು. ಸಂಸ್ಕೃತ ಹಾಗು ಪರ್ಶಿಯನ್ ಶಿಕ್ಷಕರೊಳಗೆ ಒಂದು ಪ್ರಕಾರದ ಪೈಪೋಟಿ ನಡೆದಿತ್ತು. ಪರ್ಶಿಯನ್ ಶಿಕ್ಷಕರು ಸೌಮ್ಯಸ್ವಭಾವದವರು, ಮಿತಿಯಾಗಿ ಪಾಠಕೊಡುತ್ತಿದ್ದರು. ಪರ್ಶಿಯನ್ ಭಾಷೆಯು ಬಹಳ ಸುಲಭವೆಂದೂ, ಕಲಿಸುವ ಶಿಕ್ಷಕರೂ ಸುಸ್ವಭಾವದವರೂ, ವಿಚಾರವಂತರೂ ಎಂದೂ ವಿದ್ಯಾರ್ಥಿಗಳು ಪರಸ್ಪರ ಮಾತಾಡುತ್ತಿದ್ದರು. ಸುಲಭಕ್ಕೆ ನಾನು ಮೋಹಪಟ್ಟೆ. ಮತ್ತು ಒಂದು ದಿನ ಪರ್ಶಿಯನ್ ವರ್ಗದಲ್ಲಿ ಕೂತುಕೊಂಡೆ. ಸಂಸ್ಕೃತ ಶಿಕ್ಷಕರಿಗೆ ಬಹಳ ವ್ಯಸನವಾಯಿತು. ಅವರು ನನಗೆ ಒತ್ತಟ್ಟಿಗೆ ಕರೆದು ಉದ್ಗರಿಸಿದ್ದೇನಂದರೆ:—"ನೀನು ವೈಷ್ಣವ ಕುಲದ

ವನೆಂದು ಹೇಗೆ ಹೇಳಿ ? ನಿಮ್ಮ ಧರ್ಮಭಾಷೆಯನ್ನು ನೀನು ಕಲಿಯುವಿರಲ್ಲ? ಗತಚ್ಛ ಕಾಲಗಳಲ್ಲಿ ನನ್ನ ಮನೆ ಯಾಕೆ ಕೇಳಿಕೊಳ್ಳುವದಿಲ್ಲ? ನಿಮಗೆಲ್ಲ ವಿದ್ಯಾರ್ಥಿಗಳಿಗೆ ಸಂಸ್ಕೃತಭಾಷೆಯನ್ನು ಶರಣಾಗತಿಯ ಯುಕ್ತಿಯಿಂದ ಕಲಿಸಬೇಕೆಂದು ನನ್ನ ಮನೀಷೆಯಿದೆ. ಮುಂದೆ ಕಲಿತ ಹಾಗೆ ಸಂಸ್ಕೃತ ಭಾಷೆಯಲ್ಲಿ ಶಾಸ್ತ್ರಕವಾಗಿ ಮನಸ್ಸಿಗೆ ಆಹ್ಲಾದವನ್ನುಂಟು ಮಾಡುವ ವಿಷಯಗಳ ಜ್ಞಾನವಾಗುವದು. ನೀನು ಎಷ್ಟುಗುಂಡಬಾರದು. ಬಾ ಪುನಃ ಸಂಸ್ಕೃತ ವರ್ಗದಲ್ಲಿ ಕೂತುಕೊ. ” ಇದರಿಂದ ನನಗೆ ಬಹಳ ನಾಚಿಕೆಯಾಯಿತು. ಶಿಕ್ಷಕರ ಮಮತೆಯನ್ನು ನನ್ನಿಂದ ತಾತ್ಸಾರ ಮಾಡುವದಾಗಲಿಲ್ಲ. ಇಂದಿಗೆ ಕೃಷ್ಣಶಂಕರ ಪಂಡ್ಯರವರ ಹೆಸರನ್ನು ಕೃತಜ್ಞತಾ ಬುದ್ಧಿಯಿಂದ ಸ್ಮರಿಸುತ್ತೇನೆ. ಆ ಕಾಲಕ್ಕೆ ಸಂಗ್ರಹಿಸಿದಷ್ಟು ಅಲ್ಪ ಸ್ವಲ್ಪ ಸಂಸ್ಕೃತ ಜ್ಞಾನವನ್ನು ನಾನು ಸಂಪಾದಿಸದಿದ್ದಲ್ಲಿ ನಮ್ಮ ಧರ್ಮಶಾಸ್ತ್ರಗಳನ್ನು ಯಾವದೇ ಪ್ರಕಾರದ ಅಭ್ಯಾಸದಿಂದ ಮನನ ಮಾಡಲು ನನಗೆ ಕಠಿಣವಾಗುತ್ತಿತ್ತು. ವಿಶೇಷ ಸಂಸ್ಕೃತ ಜ್ಞಾನವನ್ನು ಆ ಸಮಯ ಸಂಪಾದಿಸಲು ನನಗೆ ಕೂಡದಿದ್ದ ಬಗ್ಗೆ ನಾನು ಈಗಲೂ ಮರುಗುತ್ತೇನೆ. ಸನಾತನ ಬಾಲಬಾಲಿಕೆಯರು ಸಂಸ್ಕೃತ ಭಾಷೆಯ ಜ್ಞಾನವನ್ನು ತುಂಬಾ ಪಡೆಯಬೇಕಾಗಿ ನನ್ನ ಮತವಾಗಿದೆ.

ಉಚ್ಚ ಶಿಕ್ಷಣದ ಅಭ್ಯಾಸಕ್ರಮದಲ್ಲಿ ಹಿಂದೀ, ಸಂಸ್ಕೃತ, ಪರ್ಶಿಯನ್, ಅರಬಿ ಮತ್ತು ಇಂಗ್ಲಿಷ, ಇಷ್ಟು ಭಾಷೆಗಳನ್ನು ಕಲಿಸುವ ಏರ್ಪಾಡಾಗಬೇಕೆಂದು ಈಗ ನನ್ನ ಅಭಿಮತವಾಗಿದೆ. ದೇಶೀ ಭಾಷೆಯ ಜ್ಞಾನವಂತೂ ಆಗಲೇಬೇಕು. ಇದೊಂದು ದೊಡ್ಡ ಹೊರೆಯೆಂದು ಯಾರೂ ಹೆದರಲಾಗದು. ನಮ್ಮ ಶಿಕ್ಷಣಕ್ರಮವನ್ನು ಪದ್ಧತಿಯಿಂದ ಪುನರ್ಘಟಿಸಿ ಹುಡುಗರಿಗೆ ವಿಷಯಗಳನ್ನು ಪರಭಾಷೆಯಿಂದ ಗ್ರಹಣಮಾಡುವ ಆಯಾಸವನ್ನು ತಪ್ಪಿಸಿದರೆ, ಇವೆಲ್ಲ ಭಾಷೆಗಳನ್ನು ಕಲಿಯುವದಕ್ಕೆ ಯಾರಿಗೂ ಬಿಜ್ಜದಾಗಲಾರದು. ಏಕೆ?— ಅದೊಂದು ಆನಂದವಾಗುವದು. ಒಂದು ಭಾಷೆಯನ್ನು ಶಾಸ್ತ್ರಶುದ್ಧವಾಗಿ ಕಲಿತರೆ, ಇತರ ಭಾಷೆಗಳನ್ನು ಕಲಿಯಲು ಸುಲಭವಾಗುತ್ತದೆ.

ನಿಜವಾಗಿ ಹೇಳಬೇಕಾದರೆ, ಹಿಂದೀ, ಗುಜರಾಥಿ ಹಾಗು ಸಂಸ್ಕೃತ ಈ ಮೂರು ಭಾಷೆಗಳು ಒಂದು ಭಾಷೆಯೆಂದು ಹೇಳಬಹುದು; ಮತ್ತು ಪರ್ಶಿಯನ್ ಹಾಗು ಅರಬಿ ಈ ಎರಡು ಭಾಷೆಗಳು ಇನ್ನೊಂದೆಂದು ಹೇಳಬಹುದು. ಅರಬಿ ಹಾಗು ಯುರೋಪಿ ಭಾಷೆಗಳೂ, ಪರ್ಶಿಯನ್ ಹಾಗು ಸಂಸ್ಕೃತ ಭಾಷೆಗಳೂ ಭಿನ್ನ ಭಿನ್ನವಾಗಿ ತೋರಿದಾಗ್ಯೂ, ಪರ್ಶಿಯನ್ ಹಾಗು ಅರಬಿ ಭಾಷೆಗಳು ಇಸ್ಲಾಮು ಧರ್ಮದೊಡನೆ ಅಭಿವೃದ್ಧಿ ಹೊಂದಿದ್ದರಿಂದ ಈ ಭಾಷೆಗಳೊಳಗೆ ಅನ್ಯೋನ್ಯ ಸಂಬಂಧವಿದೆ. ಉರ್ದು ಭಾಷೆಯು ಭಿನ್ನ ಭಾಷೆಯೆಂದು ನಾನು ಎಣಿಸಲ್ಲ. ಯಾಕೆಂದರೆ, ಉರ್ದು ಭಾಷೆಯ ವ್ಯಾಕರಣವು, ಹಿಂದೀ ಭಾಷೆಯ ವ್ಯಾಕರಣವು ಒಂದೇ ಮತ್ತು ಅದರ ಶಬ್ದಗಳು ಮುಖ್ಯವಾಗಿ ಪರ್ಶಿಯನ್ ಹಾಗು ಅರಬಿ ಭಾಷೆಯೊಳಗಿನವೇ. ಉರ್ದು ಭಾಷೆಯ ಚಲೋ ಜ್ಞಾನವಾಗಬೇಕಾದರೆ, ಪರ್ಶಿಯನ್ ಹಾಗು ಅರಬಿ ಭಾಷೆಗಳನ್ನು ಕಲಿಯಬೇಕು. ಅದರಂತೆ ಗುಜರಾಥಿ, ಹಿಂದೀ, ಬಂಗಾಲಿ ಅಥವಾ ಮರಾಠಿ ಈ ಭಾಷೆಗಳ ಚಲೋ ಜ್ಞಾನವಾಗಬೇಕಾದರೆ, ಸಂಸ್ಕೃತ ಭಾಷೆಯ ಜ್ಞಾನವಾಗಬೇಕು.

— ಬಾಯಿಬಿಡದ ಪರೋಪಕಾರದ ಶ್ರೀ॥ ಹರದರ ಧರಣಪ್ಪನಾಗಪ್ಪರೆಂಬ ದೈವಜ್ಞರು ಪ್ರತಿವರುಷ ನೂರಾರು ರೂಪಾಯಿಗಳ ದಾನಧರ್ಮ ಮಾಡುತ್ತಿರುವರು ಸದ್ಯಕ್ಕೆ ೧೦ ಸಾವಿರ ರೂಪಾಯಿಗಳ ನಿಧಿಯನ್ನು ಬ್ಯಾಂಕಿನ ಸ್ವಾಧೀನ ಪಡಿಸಿ, ಈ ಸಂಗ್ರಹದ ಬಡ್ಡಿಯ ಉತ್ಪನ್ನದಿಂದ ಧಾರ್ಮಿಕ ಸಂಸ್ಥೆಗಳಿಗೆ ಸಹಾಯವನ್ನೀಯಬೇಕಾಗಿ ಬರೆದು ವ್ಯವಸ್ಥೆಯ ನಿಶ್ಚಿತ ಪತ್ರವನ್ನು ಕಾಯಿದೆಯಂತೆ ಒಂದು ಮಾಡಿರುವರು. ಧರ್ಮನಿಷ್ಠ ಗೃಹಸ್ಥರೊಳಗೆ ಇವರೇ ಧನ್ಯ !

“ಚಾಟಾನೂಗಾ” ಕಬ್ಬಿನ ಗಾಣ!

ಜಗತ್ತಿನಲ್ಲಿ ಸರ್ವೋತ್ಕೃಷ್ಟವೆಂದೇ ಇದು ಇಷ್ಟು ಪ್ರಖ್ಯಾತಿ ಹೊಂದಿತು!



ಇದರ ರೋಲುಗಳು ಶುದ್ಧ ಕಬ್ಬಿಣದಿಂದ ಮಾಡಿದ್ದಿರುವವು, ಕಬ್ಬಿನೊಳಗಿನ ಹನಿ ಹನಿ ರಸವನ್ನೂ ಕೂಡ ಹಿಂಡಿ ತೆಗೆಯುವ ವ್ಯವಸ್ಥೆ ಮಾಡಲಾಗಿರುತ್ತದೆ. ಗಾಣದ ಎರಡೂ ಬದಿಗಳ ಯಾವದೇ ಬದಿಯಿಂದ ಕಬ್ಬು ಕೊಡಬಹುದು.

ನಂ ೧೨, ರೂ. ೧೪೫
,, ೧೩, ರೂ. ೧೭೫
,, ೩೩, ರೂ. ೧೯೦
,, ೫೬, ರೂ. ೨೪೫

ಸ್ಟಾಕು ಮುಂಬಯಿ ರೇಲ್ವೆ ಸ್ಟೇಶನ್ನಿನ ವರೆಗೆ ತಂದು ಕೊಡಲ್ಪಡುವವು.

ಆರ್ಡರಿನ ಸಂಗಡ ೨೫% ಹಣವನ್ನು ಡಿಪೋಜಿಟ್ಟಾಗಿ ಕಳಿಸಬೇಕು.

ಕ್ಯಾಟಲಾಗು “ಡಬ್ಲ್ಯು ೧೧೧” ಪುಕ್ಕಟೆ!

ಮೆಕ್‌ಬೆಥ ಬ್ರದರ್ಸ ಮತ್ತು ಕಂಪನಿ, ಲಿಮಿಟೆಡ್.

ಕೋಡಾಕ ಹೌಸ, ಹೊರ್ನಬಿ ರೋಡ, ಮುಂಬಯಿ.



ಏಜಂಟರು ಬೇಕು! ಏಜಂಟರು ಬೇಕು!!

ನಮ್ಮಲ್ಲಿ

ಅತಿ ಮನೋಹರವಾದ

ಶೀಶೆ ಕಟ್ಟಿಗೆಯ

ದೇವರ ಮಂಟಪಗಳೂ,

ಹೆಂಗಸರ ಸೌಭಾಗ್ಯದ ಪೆಟ್ಟಿಗೆಗಳೂ, ಡಿಕ್ಸನರೀ ಪೆಟ್ಟಿಗೆಗಳೂ, ಆಫೀಸ ಬಾಕ್ಸಗಳೂ, ಡ್ರೆಸಿಂಗ ಟೇಬಲಗಳೂ ಹಾಗೂ ಬಗೆಬಗೆಯ ಮನೇ ಸಾಮಾನು ಸಿಗುತ್ತದೆ.

ನಮ್ಮ ವಿಳಾಸ:—

ದಿ ನೋರ್ಥ ಕೆನರಾ ಟ್ರೇಡಿಂಗ ಕಂಪನಿ;

ಶಾಂತಿ ಭುವನ,

ಕಾರವಾರ.

धातु क्षीणता व कमजोरपणा यासाठीं

मदन मंजरी गोळ्या. (रजिस्टर्ड.)

या दिव्य गोळ्या रक्त व वीर्य सुधारून त्याची चांगली वाढ करितात पचन शक्ति सुधारून परसाकडे साफ होते. त्याचप्रमाणें प्रत्येक प्रकारची अशक्तता दूर होऊन शरीर तेजदार व बळवान होतें. किं. ४० गोळ्यांच्या डबीस रु. १.

रमण विलासिनी गोळ्या. रात्रौ फक्त १ गोळी दुधाबरोबर खाल्यानें इच्छेप्रमाणें वीर्यस्तंभन होते. किं डबीस रु. १

नपुंसकत्वारी घृत. हा लेप पुरुषाच्या गुह्यभागावर लावला असतां सर्व रोग नाश पाऊन खरें पुरुषत्व प्राप्त होतें. किं. डबीस रु. १.

कुमठा एजट — माधव सांतप्पा शेणवी शेकेकेरी.

राजवैद्य नारायणजी केशवजी औषधः— १९३ कालबादेवी रोड मुंबई २

ಸುಗಂಧಿ ತಾಂಬೂಲೀ ಜರ್ದಾ

ಉತ್ತಮ ತಂಬಾಕ ತಕ್ಕೊಂಡು ಅದಕ್ಕೆ ತಾಂಬೂಲ ಪದಾರ್ಥಗಳ ಮತ್ತು ಮುಖರಂಜನ ಔಷಧೀ ವನಸ್ಪತಿಗಳ ಅರ್ಕದ ಬಗಣೀ ಕೊಟ್ಟು ಈ ತಾಂಬೂಲೀ ಜರ್ದಾ ತಯಾರ ಮಾಡಿರುತ್ತದೆ ಇದು ತಿನ್ನಲಿಕ್ಕೆ ಕಡಕ ಇದ್ದು ಸುವಾಸಿಕವಿರುತ್ತದೆ ಇದರ ಸೇವನೆಯಿಂದ ಬಾಯಿಯ ಹೊಲಸು, ಹಲ್ಲು ವೇದನೆ ಮುಂತಾದವು ನಾಶವಾಗಿ ಹಲ್ಲುಗಳು ಒಳ್ಳೇ ಗಟ್ಟಿಯಾಗುತ್ತವೆ ಇದರ ಸೇವನೆಯಿಂದ ದಮ್ಮು, ಕಫ ಮುಂತಾದ ವಿಕಾರಗಳು ಉಂಟಾಗುವ ಭೀತಿಯು ಎಳ್ಳಷ್ಟು ಇಲ್ಲ ಆದ್ದರಿಂದ ತಂಬಾಕ ಸೇವಿಸುವ ರಸಿಕರು ಅವಶ್ಯವಾಗಿ ಅನುಭವ ತಕ್ಕೊಳ್ಳಬೇಕು ೧ ಪುಡಿಗೆ ಕಿಂ ರೂ. ೦-೦-೬, ೨೫ಕ್ಕೆ ೦-೯-೦, ೧೦೦ಕ್ಕೆ ರೂ ೨-೦-೦, ೫೦೦ಕ್ಕೆ ರೂ ೮-೦-೦, ೧೦೦೦ಕ್ಕೆ ರೂ ೧೫-೦-೦, ಟಪಾಲ, ಪೆಕಿಂಗ ವಗೈರೆ ಖರ್ಚು ಪ್ರತ್ಯೇಕ ಬೀಳುವದು. ವಿಶೇಷ ಮಾಹಿತಿ ಬಗ್ಗೆ ಕೆಳಗಿನ ಪತ್ತೆಯ ಮೇಲೆ ಪತ್ರವ್ಯವಹಾರ ಮಾಡಿದರೆ ಜರೂರ ಉತ್ತರ ಕೊಡಲ್ಪಡುವದು

ಪತ್ತೆ.- ಎಸ್. ಬಿ. ಕದಂ,
ಬೀಡಿ ಮತ್ತು ತಂಬಾಕು ಜರ್ದಾ ದುಕಾನ,
ಮು ಪೋ ನಿಪ್ಪಾಣಿ, ಜಿ ಬೆಳಗಾಂವ

ವಿಶೇಷ] ಅನುಭವಸಿದ್ಧ [ಪಥ್ಯವಿಲ್ಲ

ವನೌಷಧಿಮೂಲಿಕೆಗಳು

ವಾಯುದುಮ್ಮಾನ (ನಿಮೋನಿಯಾ) ವಾಂತಿ ಭ್ರಾಂತಿ (ಕಾಲರಾ) ಅರ್ಧಾಂಗವಾಯು (ಪೆರಾಲಿಸಿಸ್) ಹುಚ್ಚು ವ ಸಾದಾ ನಾಯಿ ಕಡಿತ, ಸರ್ಪಸುತ್ತು ಹೊಟ್ಟೆಯಲ್ಲಿ ಕೃತ್ರಿಮ ವಿಷ ಹಾಕಿದ್ದು (ಕೈಮದ್ದು) ವಗೈರೆ ರೋಗಗಳಿಗೆ ಒಂದೆ ಒಂದು ಮೂಲಿಕೆಯಿಂದ ಖಾತ್ರಿಯಾಗಿ ತೀವ್ರ ಗುಣಬರುವದು ಇವು ಬಹುಕಾಲದಿಂದ ಅನುಭವ ತಕ್ಕೊಂಡು ಹಾಗು ಪ್ರತಿನಿತ್ಯ ಈಕಡೆಗೆ ಬಳಕೆಯಲ್ಲಿದ್ದು ಖರ್ಚಾಗುವ ಔಷಧಿಗಳ ತಾಜಾ ಮೂಲಿಕೆಗಳು! ಒಮ್ಮೆ ತರಿಸಿ ಅನುಭವ ತಕ್ಕೊಂಡರೆ ಖಾತ್ರಿಯಾದೀತು, ಕಾಲರಾ ಔಷಧಿಗಳ ದ್ರಾವಕ (Tincture) ಸಹ ಆಗಾವು ಸೂಚಿಸಿದರೆ ಕಳುಹುವೆವು

ವಾಯುದುಮ್ಮಾನದ ಬಗ್ಗೆ ಔಷಧ ಮೂಲಿಕೆ ತೊಲೆ ೧ಕ್ಕೆ	೦-೨-೦
ಕಾಲರಾದ ಬಗ್ಗೆ " " "	೦ ೨ ೦
ಅರ್ಧಾಂಗ ವಾಯುವಿನಬಗ್ಗೆ ೧ ಇಸಮಿಗೆ ಕಾಲುಪಾವು ಸೇರು ...	೧ ೮-೦
ಪ್ರಕೃತಿ ತಿಳಿಸಬೇಕು	
ನಾಯಿ ಕಡಿತದಬಗ್ಗೆ	೦-೪-೦
ಸರ್ಪಸುತ್ತಿನ ಬಗ್ಗೆ	೦ ೨ ೦
ಹೊಟ್ಟೆಯಲ್ಲಿ ಕೃತ್ರಿಮ ಔಷಧ ಬಿದ್ದ ಬಗ್ಗೆ ತೊಲೆ ೧೦ ಕ್ಕೆ	೦-೮-೦
ರಕ್ತಶುದ್ಧಿ ವ ಮಲಶೋಧನೆ ಬಗ್ಗೆ ಮೂಲಿಕೆ ರಾತ್ತಲು ಕ್ಕೆ	೧-೦-೦
ಮೋರಾವಳಾ (ನೆಲ್ಲಿಕಾಯಿ ಗುಳಂಬ) ರಾತ್ತಲು ೧ ಕ್ಕೆ	೧-೦-೦

೧೦ ರಾತ್ತಲುಗಳಿಗಿಂತ ಅದಕ್ಕೂ ಹೆಚ್ಚು ತರಿಸಿಕೊಳ್ಳುವವರಿಗೆ ಕಡಿಮೆ ದರದಿಂದ ಕಳಿಸಲ್ಪಡುವದು. ಟಪಾಲ ಖರ್ಚು ಪ್ರತ್ಯೇಕ. ವಿಶೇಷ ಮಾಹಿತಿ ಪತ್ರ ವ್ಯಾರಾ. ಅನುಪಾನಪತ್ರ ಔಷಧೀ ಸಂಗಡ.

ಎನ್. ಜಿ. ಹೆಗಡೆ, ಮಾಸ್ತೇರಿ,
ಪೋಸ್ಟ—ಬಂಕಿಕೊಡ್ಲ. ತಾ. ಉತ್ತರ ಕಾನಡಾ

ಸುಲಭ ಕ್ರಯ! ಸುಲಭ ಕ್ರಯ!!

ಡಾಕ್ಟರ ಜೀ ಬೀ. ಯವರ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪಿನಶಿ, ಒಂಟಿತಲೆಶೂಲೆ, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ಸಕಲ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತ್ತದೆ, ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವದು. ಇನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಪಟ್ಟಿ ಕೇಸೆ ಪುಕ್ಕಟೆ ಕಳಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ ೦-೪-೦, ವ್ಹಿ ಪಿ ೪ ಆಣೆ ಡಜನ್ ೧ಕ್ಕೆ ರೂ. ೨-೮-೦. ವ್ಹಿ. ಪಿ. ೦-೮-
ದಯಮಾಡಿ ನಿಮ್ಮ ಹೆಸರನ್ನೂ ಅಡ್ರೆಸನ್ನು ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ—ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪೋ ಬಾ. ೫೧೦, ಪಾರ್ಕಟೌನ, ಮದರಾಸು

ಕಿರ್ಲೋಸ್ಕರ ಕಬ್ಬಿನ ಗಾಣಗಳು.

(ಎರಡು ಎತ್ತುಗಳಿಂದ ನಾಲ್ಕು ಎತ್ತುಗಳ ವರೆಗೆ)

ನಮ್ಮ ಕಾರಖಾನೆಯಲ್ಲಿ ತಯಾರಾಗುವ
(೧) ಕಿರ್ಲೋಸ್ಕರ ನಂ. ೫, (೨) ಕಿಸಾನ, (೩) ಕಮಾಲ ಗಾಣಗಳಲ್ಲಿ

ಕಮಾಲ ಗಾಣ

ಇದು ಎಲ್ಲಕ್ಕೂ ಮೇಲಾದದ್ದಿರುತ್ತದೆ. ಇದು ತೀರ ಹೊಸದು. ೧೦೦ಕ್ಕೆ ೭೨ ರಂತೆ ರಸ ಹಿಂಡುತ್ತದೆ ಒಂದು ತಾಸಿಗೆ ೧೨೦೦ ಪೌಂಡ ಕಬ್ಬನ್ನು ಅರೆಯುತ್ತದೆ. ಬಿಡಿ ಭಾಗಗಳು ಕಾರ್ಖಾನೆಯಲ್ಲಿ ಬೇಡಿದಾಗ ದೊರೆಯುತ್ತವೆ, ಪೆಟ್ಟಿನ ಸಂಗತಿಯು ಬೇಗ್ಗ ಇಂದೇ ತಿಳಿದುಕೊಳ್ಳಿ

ಕಿರ್ಲೋಸ್ಕರ ವಾರ್ತೆ

ಇದೊಂದು ಕನ್ನಡ ಮಾಸಪತ್ರಿಕೆಯು ಕರ್ನಾಟಕ ತರುಣರ ಉನ್ನತಿಯೇ ಇದರ ಧ್ಯೇಯವು. ವಾರ್ಷಿಕ ಚಂದಾ ಹಣ ಒಂದೇ ೧ ರೂ.
ಮಾದರಿ ಸಂಚಿಕೆಯು ಪುಕ್ಕಟವಾಗಿ ದೊರೆಯುವದು

ಕಿರ್ಲೋಸ್ಕರ ಬಂಧು ಲಿಮಿಟೆಡ್; { ಕಿರ್ಲೋಸ್ಕರವಾಡಿ ಜಿಲ್ಲಾ ಸಾತಾರಾ.

ಅಮೃತಾಂಜನ.

ಅದರ ಉಪಯೋಗದಿಂದ, ವಾತವೇದನೆ, ಉಳುಕು ಇತ್ಯಾದಿ ವ್ಯಾಧಿಗಳ ಮೇಲೆ, ರಾಮಬಾಣದಂತಾಗಿರುವದು, ಕಳೆದ ೩೫ ವರ್ಷಗಳಿಂದ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗುತ್ತದೆ. ಲಕ್ಷಗಟ್ಟಲೆ ಕುಟುಂಬಗಳು ಅಮೃತಾಂಜನವನ್ನು ಉಪಯೋಗಿಸುತ್ತಿರುವರು. ಅದರಿಂದ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಬಾವು, ಸಂಧಿವಾತ ಮುಂತಾದ ಎಷ್ಟೋ ವ್ಯಾಧಿಗಳ ಮೇಲೆ ಇದು ಗುಣಕಾರಿಯೆಂದು ಅರಿಯುವವರು ಅದರ ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು. ಕಿಮ್ಮತ್ತು ೧೦ ಆಣೆ ವ್ಹಿ. ಪಿ. ಖರ್ಚು ಬೇರೆ.

ಅಮೃತಾಂಜನ ಡಿಪೋ, ಫೋರ್ಟ, ಮುಂಬಯಿ.

Printed and Published by Krishnarao Keshav Shenvi (Editor) at his Star of Kanara Press Kumta.

Reg. No. B. 1270. Monday, February 1 st, 1926.

ವರ್ಷ ೧೦.

ಕಾನಡಾವೃತ್ತ.

THE KANARA NEWS.

ಸಂಚಿಕೆ ೧೮.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः।
इति महति विरोधे वर्तमाने समाने नृपतिजनपदानां दुर्लभः कार्यकर्ता॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಪತ್ರದ ವರ್ಗಣಿ

ಮುಂಗಡವಾಗಿ ಅಗಾವು

ರೂಪಾಯಿ 2-4-0.

ವರ್ಷಾಖೇರಿಯಿಂದ

ರೂ. 3-0-0.

ಅಂಚೆವೆಚ್ಚ ಸೇರಿ

ರೂಪಾಯಿ 3-2-0.

ಬಿಡಿ ಸಂಚಿಕೆಗೆ 0-1-0.

ಜಾಹಿರಾತುಗಳ ದರ

ಕನ್ನಡ, ಇಂಗ್ಲಿಷ ಪ್ರಾಯಿಕ ಟೈಪಿನ (೧೫ ಎಮ್ ಅಗಲ) ೮ ಸಾಲುಗಳವರೆಗೆ ರೂ. 1-0-

ಆ ನಂತರ ಪ್ರತಿಸಾಲಿಗೆ 0-2-0.

ತಿಂಗಳ ಸಾಲು ಎಷ್ಟು ದೊಡ್ಡದಿರುವದೋ ಆ ಮಾನದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು

ಖಾಸ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು.

(ಕುಮಟಾ—ಕಾನಡಾವೃತ್ತ ಸೋಮವಾರ, ತಾರೀಖು ೧ ಮಾಹೆ ಫೆಬ್ರುವರಿ ಸನ್ ೧೯೨೬ ನೇ ಇಸವಿ)

हिंदुस्थानांतील रहिवाशांस ज्याप्रमाणे हिंदुस्थानची हवा त्याप्रमाणेंच हें औषध हिंदुस्थानांतील लोकांस ज्यास्त फायदेशीर आहे

द्राक्षासव-

दीड रत्तलची किंमत २ रुपये;

रामबाण औषधें

सर्दि घालविणारें,
भूक वाढविणारें,
शौच्यास साफ करणारें,
झोंपे आणणारें,
शक्ति देणारें,
तेजस्वीपणा आणणारें,

पिण्यास रुचिकर

क्याटलाग मागवा,

अंडु फार्मास्युटिकल वर्क्स लिमिटेड,

मुंबई नं: १३

एजंट— मेसर्स पंडित आणी कंपनी,

तीर्थहळ्ळी.

ದರ ಕಡಿಮೆ ಮಾಡಿರುವೆವು!

ಸುಸಂಧಿ!

ನಮ್ಮ

ಸುಪ್ರಸಿದ್ಧ

ಇಂಗ್ಲಿಷ ಮೋಡ

ಸಾಯಕಲ

ವೆಲಿಂಗ್ಟನ

ಸಾಯಕಲ ಮತ್ತು ಮೋಟಾರ ಕಂಪನಿ, ಹೊರ್ನಬೀ ರೋಡ, ಮುಂಬಯಿ ನಂಬರ ೧.

ಆರ್ಸೆನಲ ರೋಡ, ಪುಣೆ.

ಬೇಕಾದ ಚಿನ್ನಾಭರಣಗಳು ನಮಗೆ ಆರ್ಡರ ಕೊಟ್ಟಲ್ಲಿ ಯೋಗ್ಯ ಮುದ್ದತ್ತಿನಲ್ಲಿ ಕೊಡುವೆವು.

R. S. KASARGOD. B. A.

Jewellers, KUMTA.

ಆರ್. ಎಸ್. ಕಾಸರಗೋಡ, ಬಿ.ಏ.

ರತ್ನಾಬರಣ ವ್ಯಾಪಾರಿ, ಕುಮಟಾ.



'ಕಾನಡಾವೃತ್ತ'ದ ಚಂದಾದಾರರಿಗೆ

ಬರೇ ಒಂದು ತಿಂಗಳ ತನಕ.

ನಮ್ಮ ವೆ-ಟರ್ನ ರೆಗ್ಯುಲೇಟರ ವ್ಹಾಲ ಕ್ಲಾಕ (ಗೋಡೆಯ ಗಡಿಯಾರ) ಮತ್ತು ೧೮ ಕರೆಟ ಸಕಲಿ ಬಂಗಾರದ ಕೈ ಗಡಿಯಾರ ಇವೆರಡಕ್ಕೂ ಕ.ಮಿ ಕಿಮ್ಮತ್ತು ಬರೇ ರೂ ೧೦! ಎರಡಕ್ಕೂ ೫ ವರ್ಷ ಗ್ಯಾರಂಟಿ!

ಪ್ರತ್ಯೇಕವಾಗಿ ಬೇಕಾದ್ದಲ್ಲಿ, ಗೋಡೆ ಗಡಿಯಾರಕ್ಕೆ ರೂ. ೫ ಕೈ ಗಡಿಯಾರಕ್ಕೆ ರೂ. ೭.

ತ್ವರೆ ಮಾಡಿ ಈ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ!

CAPTAIN WATCH CO., P. B. 265, MADRAS.



ಅನುಮಾನವೇಕೆ—— ?

ಓದಿ ಖಾತ್ರಿಮಾಡಿಕೊಳ್ಳಿ.

ಅಭಿಪ್ರಾಯಗಳು,

ನಿಮ್ಮ "ಟಿಕ್ ಟಾಕ್" ಗೋಡೆಯ ಗಡಿಯಾರವು ಬಹು ಉತ್ತಮ ಸ್ಥಿತಿಯಲ್ಲಿದೆ, ಬೆಲೆಯೂ ಅತಿ ಅಗ್ಗವಾಗಿರುವದು. ಇದೇ ಕಾರಣ ನನ್ನ ಮಿತ್ರನೊಬ್ಬನಿಗೆ ಅನುಕೂಲ ಕೊಡುವರೆ ನನಗೆ ಇನ್ನೊಂದು ಗಡಿಯಾರವನ್ನು ಕಳಿಸಿರಿ [illegible]

ನಿಮ್ಮ "ಟಿಕ್ ಟಾಕ್" ಗಡಿಯಾರದ ವಿಷಯ ನೀವು ಬರೆದ ಪತ್ರ ಮತ್ತು ಮಾಹಿತಿಯ ಬಗ್ಗೆ ಉಪಕಾರಿಯಾಗಿರುವೆನು. ಅದು ಉತ್ತಮ ರೀತಿಯಿಂದ ನಡೆಯುತ್ತಿರುವದು

ಮಾತ್ರಾ ಮೋಹನ ಮುಖರ್ಜೀ,

ಬಿ. ಮುಜನ್ಸೆ (ಟಿ), ರಾಜಶಾಹಿ.

ನಿಮ್ಮ "ಟಿಕ್ ಟಾಕ್" ಗಡಿಯಾರವನ್ನು ನೋಡಿ ಬಹಳ ಸಂತೋಷವಾಯಿತು. ನನಗೆ ಇನ್ನು ೫ ಗಡಿಯಾರಗಳನ್ನು ಕಳಿಸಿರಿ. ಇವು ಕಳ್ಳಿದ ಕೂಡಲೆ, ಹಣದ ಆರ್ಡರಗಳನ್ನು ಕಳಿಸುವೆನು

ರಘುನಂದನ ಪ್ರಸಾದ, ಅರ್ಥ ಜ್ವೆಲರ, ಬಸ್ತಾರ.

ನಿಮ್ಮ "ಟಿಕ್ ಟಾಕ್" ಗಡಿಯಾರದಿಂದ ನಮಗೆ ಬಹಳೇ ಸಮಾಧಾನವಾಗಿದೆ ಇನ್ನು ೩೬ ಗಡಿಯಾರಗಳ ಬಗ್ಗೆ ಬೇಗನೇ ಆರ್ಡರ ಕಳಿಸಿಕೊಡುತ್ತಿದ್ದೇವೆ. [illegible]

ಬನೆಟ್ಟಿ ಎಂಡ್ ಕಂಪನಿ, ಸೋಲಾಪೂರ

ಬೆಲೆ ಬರೇ ಮೂರು ರೂಪಾಯಿ ವಿಲಂಬವಿಲ್ಲದೆ ತರಿಸಿಕೊಳ್ಳಿ:

PETER WATCH CO. P. B. 47 MADRAS.

ಗೌರೀಹುಣ್ಣಿವೆಯಿಂದ ೪ನೇ ವರ್ಷ ಪ್ರಾರಂಭ

ಸಚಿತ್ರ|ಜಯಕರ್ನಾಟಕ[ಮಾಸಪತ್ರಿಕೆ

ಸಂಪಾದಕ- ಆಲೂರ ವೆಂಕಟರಾಯರು

ಇದರಲ್ಲಿ ವಾಙ್ಮಯಾತ್ಮಕ ಸಾಹಿತ್ಯ, ಧಾರ್ಮಿಕ ಸಾಮಾಜಿಕ ರಾಜಕೀಯ ಆರ್ಥಿಕ ಇತ್ಯಾದಿ ವಿಷಯಗಳು ಬರುವವು. ಸ್ವತಂತ್ರ ಕಥೆಯು, ಜೀವನಚರಿತ್ರೆ ನಾಟಕಾದಿಗಳು ಕೊಡಲ್ಪಡುವವು. ಪ್ರತಿ ಸಂಚಿಕೆಯಲ್ಲಿ ಸುಂದರ ಚಿತ್ರಗಳೂ ಇರುತ್ತವೆ. ನೋಡರ್ ರಿಪ್ರ್ [illegible] ಆಕಾರದ ೩೦ [illegible] ಪುಟಗಳು ವರ್ಗಣಿ ರೂ ೫ ೮-೦

ಕಾರ್ಯನಿರ್ವಾಹಕ [illegible] ಜಯಕರ್ನಾಟಕ, ಧಾರವಾಡ.

ಎಲ್ಲಾ ರೋಗಗಳಿಗೆ ದಿವ್ಯೌಷಧ

ವಾತಹಾರಿ ತೈಲ.

ತ್ರಯ [illegible] ಬಾಟ್ಲಿ [illegible] ಕಂಡಿ ಸುವಾಸಿಕ ಕಾಪೂರಿ [illegible] ದಪ್ಪ ೧ ಕ್ಕೆ ೧—೮—೦ ಹಿಂಗಿನ [illegible] ಶಿಯ ಬಾಟ್ಲಿ ೧ ಕ್ಕೆ ೦—೬—೦ ರಕ್ತಶುದ್ಧಿ [illegible] ಧಾತು ಪೌಷ್ಟಿಕ, ಶಕ್ತಿವರ್ಧಕ [illegible] ಯ ದಪ್ಪ ೧ ಕ್ಕೆ ೧—೪—೦, ೧ ತೊಲೆಯ [illegible] ವ ಬಟಿಗಳು ಡಜನ್ ೧ ಕ್ಕೆ [illegible] ತಾಂಬೂಲ ಸುವಾಸಿಕ ಮನಶರಾಬ ತೈಲ [illegible] ಯ ಬಾಟ್ಲಿ ೧ ಕ್ಕೆ ೦—೧೬— [illegible] ಸೋಪಿ ೧ ಕ್ಕೆ ೦—೮—. ಇದಲ್ಲದೆ, ನೀಲಗಿರಿ ತೈಲ, ಎಲ್ಲಾ ತರದ ಆಯುರ್ವೇದಿಕ ಔಷಧಿಗಳ [illegible] ಮಕಿಗೆ ಸಿಗುವವು [illegible]

ಕೆರೀಕರ ಕಾಪೂರೀ ಹಿಂಗಿನ ದುಕಾನ್.

ಜವಳಿಬಾಜಾರ, ಕುಮಟಾ.

ರಾಗದ ಪೆಟ್ಟಿಗೆಗಳು.

ತಬಲೆ ಜೋಡಿ ಇತ್ಯಾದಿ ಗಾಯನ ಸಾಮಾನು.

೧. ರಾಗದ ಕೈಪೆಟ್ಟಿಗೆ ಕಿಂ. ೩೦, ೪೦, ೬೦, ೭೫, ೧೦೦.

೨. ಕಾಲು ಪೆಟ್ಟಿಗೆ ಕಿಂ. ೬೫, ೭೫, ೧೨೦, ೧೪೦.

೩. ತಬಲೆ ಜೋಡಿ ಕಿಂ. ೧೩, ೧೮, ೨೦, ೨೫.

೪. ಹಾರ್ಮೋನಿಯಮ ಗ್ಯಾಡ (ಪ.ರಾಣಿ) ಕಿಂ. ೧॥,

ತಬಲೆ ಗ್ಯಾಡ ಕಿಂ. ೧೨ ೮.

ವಿಶೇಷ ಮಾಹಿತಿಗೆ ನಮ್ಮ ಮರಾಠಿ ಕ್ಯಾಟಲಾಗ ಧುಕ್ಕಟ ಕೊಡುವೆವು.

ಪತ್ರವ್ಯವಹಾರ ಮರಾಠಿಯಿಂದ ಇಲ್ಲವೆ ಇಂಗ್ರಜಿಯಿಂದ ಮಾಡಬೇಕು.

ಪತ್ತೆ:-ಗೋಪಾಳ ಸಖಾರಾಮ ವ ಕಂಪನಿ, ವಿಠ್ಠಲವಾಡಿ ಎದುರಿಗ ೩೩೬ ಕಾಳಬಾದೇವಿ, ಮುಂಬಯಿ

ಟಿ. ಎಸ್. ಮೋಟರ ಸರ್ವೀಸ, ಶಿವಮೊಗ್ಗಾ



ಕಳೆದ ೬-೫ ವರ್ಷಗಳಿಂದ ನಾವು ಶಿವಮೊಗ್ಗಾ-ತೀರ್ಥಹಳ್ಳಿ-ಆಗುಂಬೆ, ಶಿವಮೊಗ್ಗಾ-ಸಾಗರ [illegible], ಶಿವಮೊಗ್ಗಾ-ಹರಿಹರ-ದುಗ್ಗಾವತಿ, ಶಿವಮೊಗ್ಗಾ-ಕಳಸೂರಕಟ್ಟೆ, ಸಾಗರ-ಸೊರಬ-ಶಿರಾ [illegible], ಸಾಗರ-ತೀರ್ಥಹಳ್ಳಿ, ಸಾಗರ-ಕಳಸೂರಕಟ್ಟೆ ಈ ಲೈನುಗಳ ಮೇಲೆ ನಮ್ಮ ರೆಗ್ಯುಲರ್ ಮೋಟರ [illegible] ದಕ್ಷಿಣ ಕನ್ನಡ ಜಿಲ್ಹೆಯ ಕಾರ್ಕಳ, ಉಡುಪಿ, ಕುಂದಾಪುರ, ಮಂಗಳೂರ [illegible] ಈ ಕಡೆಗೆ "ಕಾರ್ಕಳ ಮೋಟರ ಸರ್ವೀಸಿನ" ವಿದ್ಯಮಾನವೂ, ಬಳ್ಳಾರಿ ಜಿಲ್ಹೆಯ [illegible] "[illegible] ಮೋಟರ ಸರ್ವೀಸಿನ" ವಿದ್ಯಮಾನವೂ ಪ್ರಯಾಣಿಕರ ಎಲ್ಲ ಸೌಕರ್ಯಗಳ [illegible]

ಉತ್ತರ ಕನ್ನಡ ಜಿಲ್ಹೆಯ ಪ್ರಯಾಣಿಕರು ಜೋಗ (Gersoppa Falls), ಶಿವಮೊಗ್ಗಾ [illegible] ಸ್ಥಳಗಳಿಗೆ ಪ್ರಯಾಣ ಬೆಳೆಸಲು ಅನುಕೂಲವಾಗಬೇಕೆಂದು ಶಿವಮೊಗ್ಗಾ, ಸಾಗರ, ಜೋಗ, ಸಿದ್ದಾಪುರ, ಶಿರ್ಸಿ, ಕುಮಟಾ ಈ ಲೈನಿನಲ್ಲಿ ಮೋಟರ ಸರ್ವೀಸ ಪ್ರಾ [illegible]

ಕಾಲಕ್ರಮಗಳು.

[illegible] ಹೊರಡುವದು—	ಬೆಳಗ್ಗಿನ ೭ ಘಂಟೆಗೆ.
ಶಿರ್ಸಿಗೆ [illegible]	„ ೧೦ „
ಶಿರ್ಸಿ [illegible] ಶಿವಮೊಗ್ಗಾ ಕಡೆಗೆ—	ಮಧ್ಯಾಹ್ನ ೧ „
ಸಾಗರಕ್ಕೆ [illegible] (ಸಿದ್ದಾಪುರ ಮಾರ್ಗವಾಗಿ)—	ಸಾಯಂಕಾಲ ೬ „
ಸಾಗರದಿಂದ ಶಿರ್ಸಿ ಕಡೆಗೆ ಹೊರಡುವದು—	ಬೆಳಗ್ಗಿನ ೬ „
ಸಿದ್ದಾಪುರದ ಮೇಲಾಗಿ ಶಿರ್ಸಿಗೆ ಸೇರುವದು—	„ ೧೧ „
ಶಿರ್ಸಿಯಿಂದ ಕುಮಟೆಗೆ ಹೊರಡುವದು—	ಮಧ್ಯಾಹ್ನ ೨ „
ಕುಮಟೆಗೆ ಸೇರುವದು—	ಸಾಯಂಕಾಲ ೫ „

N. B.— ಈ ಮೇಲಿನ ಲೈನುಗಳ ವಿನಹ ಶಿರಸಿಯಿಂದ ಹುಬ್ಬಳ್ಳಿಗೆ ಪ್ರತ್ಯೇಕ ಹೊಂದು ಸರ್ವೀಸ ಪ್ರಾರಂಭಿಸುವ ಯೋಜನೆ ಸಹಾ ಇರುತ್ತದೆ. ಸರ್ವರೂ ಅಭಿಮಾನವಿಟ್ಟು ಪ್ರೋತ್ಸಾಹಿಸಬೇಕಾಗಿ ವಿನಂತಿ.

SHIMOGA,
22—11—1924.

M. MANJAPPA.
PROPRIETOR.

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕಿಟಗಳು ಮತ್ತು ಸುವರ್ಣಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು.

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ

ಈ ದಿವ್ಯ ಮಹೌಷಧಿಯಾಗಿದ್ದು ಬಹಳ ಸವಿಯಾಗಿಯೂ ರುಚಿಕರವಾಗಿಯೂ ಇರುತ್ತದೆ. ಈ [illegible] ವಾತ, ಪಿತ್ತ, ಕಫ ಈ ತ್ರಿದೋಷಗಳ [illegible] ಬೇನೆಯು [illegible] ಕರುಳು ತರುಣರಂತೆ ಪ್ರಬಲರಾಗುವರು. ([illegible]) ಜನನೇಂದ್ರಿಯದೊಳಗಿನ [illegible] ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ [illegible] ಹಿಂದಾಗುವದು — [illegible] ನಿರ್ದೋಷವಾಗುವದು. [illegible] ದಿವಸದಲ್ಲಿ ಗುಣಹತ್ತುವದು. ಕರುಣ ಸ್ತ್ರೀಪುರುಷರು ಈ ದ್ರಾಕ್ಷಾರ್ಕ ಮಧುವ ಸೇವನ ಮಾಡಿ [illegible] ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ, ಉದರರೋಗ ದಮ್ಮು ಇವುಗಳು ನಾಶವಾಗುವವು. [illegible] ದಿವಸದಲ್ಲಿ [illegible] ಊಟಮಾಡಿದರೂ ಅನ್ನ ಪಚನವಾಗಿ ಹಸಿವೆ ಚನ್ನಾಗಿ ಆಗುತ್ತದೆ. ಇದರ ಅನುಭವವು ಮೊದಲನೇ ದಿವಸವೇ ಬರುವದು. ಶೌಚ ಸಾಫ ಆಗುವದು. ಮೈಯಲ್ಲಿ ಎಷ್ಟೋ ದಿವಸದ [illegible] ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ವಿಷಯಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ. [illegible] ಇದ್ದರೆ ೧೦ ದಿವಸ ಸಾಲುವ ಒಂದು ಬಾಟಲಿಯಿಂದ ಗುಣಹತ್ತುವದು. ಹಳೇ ರೋಗ ಇದ್ದರೆ ೩ ಬಾಟಲಿಯಿಂದ ಗುಣಹತ್ತುವದು. ಒಂದು ಬಾಟ್ಲಿಯ ಕಿಮ್ಮತ್ತು ೧॥ ರೂಪಾಯಿ ಮೂರು ಬಾಟಲಿಯ ಕಿಮ್ಮತ್ತು ೪—೦—೦ ಮೂರು ಬಾಟಲಿಗಳನ್ನು ಒಂದೇ ಪಾರ್ಸಲಿನಲ್ಲಿ ಕಳಿಸುವೆವು. ಅಂದರೆ [illegible] ಬೀಳುವದಿಲ್ಲ ಐದರ ಬಾಟಲಿಗಳ ಕಿಮ್ಮತ್ತು ೧೩—೦—೦ ಮತ್ತು ೧ ಬಾಟಲಿ ಪುಕ್ಕಟ ಸಿಗುವದು. [illegible] ಬೇರೆ ಬೀಳುವದು. ಪೋಸ್ಟ ಖರ್ಚು ೧ ಬಾಟ್ಲಿಗೆ ೧—೦—೦ ೩ ಬಾಟ್ಲಿಗೆ ೩—೦—೦ [illegible] ೧೩—೧—೦

ಮ್ಯಾನೇಜರ— ದ್ರಾಕ್ಷಾರ್ಕಮಧು ಆಫೀಸ ಪೋ. ಸಿಬ್ನಾಳ ಜಿ ಬೆಳಗಾಂವ

ಶ್ರೀ ಗೋಕರ್ಣ ಕ್ಷೇತ್ರದೊಳಗಿನ

ಬ್ರಹ್ಮಚರ್ಯಾಶ್ರಮ.

ಆಶ್ರಮ ದರ್ಶನ.

ಶ್ರೀ ಗೋವಿಂದಾಚಾರ್ಯ ಗುರುಕುಲ, ಮೈಸೂರ ವಿಶ್ವ ವಿದ್ಯಾಲಯ ಚೀಫ ಇಂಜನಿಯರ ಶ್ರೀ ಭರುಚ್ಚರು, ನಾನು ಮತ್ತು ನಾನು ಹೀಗೆ ನಾಲ್ಕು ಜನರು ಹೋದ ವೃತ್ತಿ ದರ್ಶನ ಆಶ್ರಮವನ್ನು ಸಂದರ್ಶಿಸುವ ಇಚ್ಛೆಯಿಂದ ಮುಂಜಾನೆ ೯ ಘಂಟೆಗೆ ಹೋದೆವು. ಸಮುದ್ರರಾಜನ ತಟದ ಗಂಭೀರ ಧ್ವನಿಯು ನಿರಂತರ ಕಿವಿಗೆ ಕೇಳು ವಂತೆ ಹಾಗೂ ಸಮುದ್ರರಾಜನ ವಿಶಾಲವಾದ ನೀಲಜಲ ಸಾಮ್ರಾಜ್ಯವು ಸತತವೂ ದೃಷ್ಟಿಗೋಚರವಾಗುವಂತೆ ಈ ಆಶ್ರಮವು ಸಮುದ್ರದಿಂದ ನೂರಾರು ಅಡಿಗಳಷ್ಟೇ ದೂರ ವಾಗಿರುವದು. ಗೋಕರ್ಣ ಕ್ಷೇತ್ರದಿಂದ ಇದು ಒಂದು ಮೈಲಿನಷ್ಟು ಅಂತರದ ಮೇಲಿರುವದು ಆಶ್ರಮದಲ್ಲಿ ಹೋದ ಕೂಡಲೇ ಎಡಬದಿಗೆ ಉತ್ತಮ ತುಲಸಿಯ ಸಾಲ ಗಳು ಹಚ್ಚಲ್ಪಟ್ಟಿರುವವು. ಬಲಗಡೆಗೆ ಸ್ವಲ್ಪ ಕಂದಮೂ ಲಾದಿಗಳ ಕೃಷಿ ಕಾರ್ಯವು ನಡೆದಿರುವಂತೆ ತೋರಿತು. ಆಶ್ರಮದ ಮಧ್ಯಕ್ಕೆ ಹೋಗಲಾಗಿ ಅಲ್ಲಿ ಒಂದು ಚಿಕ್ಕ ಸುಂದರವಾದ ಕಟ್ಟಡವು. ಅಲ್ಲಿ ಮುಖ್ಯವಾಯು ಸುಳಿದಾ ಡಲಿಕ್ಕೆ ಪೂರ್ಣ ಸ್ವಾತಂತ್ರ್ಯವು ನೆಲ ಕಟ್ಟು ಆತ್ರಕಡೆಗೆ ನ ಬದ್ಧತಿಯಂತೆ ತಿಕ್ಕಿ ತಿಕ್ಕಿ ಮಿಂಚುವಂತೆ ಮಾಡಿದ್ದು. ಅಲ್ಲಿ ಮೂವತ್ತರ ನೂರಾರು ವಿದ್ಯಾರ್ಥಿಗಳು ವ್ಯಸ್ತವಾಗಿ ಕೂತುಕೊಳ್ಳಬಹುದು. ಸುತ್ತುಮುತ್ತು ನಾಲ್ಕಡಿಯ ಕಟ್ಟೆಯು. ಆ ಕಟ್ಟೆಯ ಮೇಲೆ ಬ್ರಹ್ಮಚಾರಿಗಳಿಂದಲೂ ತಪೋಬಲದಿಂದಲೂ ವಿದ್ವತ್ತೆಯಿಂದಲೂ ತೇಜಸ್ವಿಯಾದ ಮಧ್ಯ ವಯಸ್ಸಿನ ಒಂದು ಮೂರ್ತಿಯು ಕುಳಿತಿತ್ತು. ಒಂದು ಲಂಗೋಟಿ ಮೈಮೇಲೆ ಒಂದು ಶಾಟಿಯು ವಲ್ಲಿ ಇ ವೈದೀಯರ ವೇಷ. ಆ ದಿನ ಸಂಕ್ರಮಣದ ಕರಿ ಇರುವದ ರಿಂದ ಅನಾಧ್ಯಾಯವಿತ್ತು ಆದಕಾರಣ ವಿದ್ಯಾರ್ಥಿಗಳಿರಲಿಲ್ಲ. ನಾವು ಹೋಗಿ ನಮಸ್ಕಾರ ಮಾಡಿ ಕುಳಿತುಕೊಂಡೆವು. ಭೆಟ್ಟಿಯಾದುದಕ್ಕೆ ಪರಸ್ಪರಾನಂದ ವ್ಯಕ್ತವಾಯಿತು. ಆ ಮೇಲೆ ಆಶ್ರಮದ ಎಲ್ಲ ವಿಷಯಗಳನ್ನು ನಾವು ಕೇಳ ಲಾಗಿ ಶ್ರೀ ಗಜಾನನ ಕರ್ಣಾ ಕ್ಯವರಾಕರು ಶಾಂತ ರೀತಿ ಯಿಂದ ಗಂಭೀರ ಧ್ವನಿಯಿಂದ ಸಂಸ್ಥೆಯ ಇತಿಹಾಸವ ನ್ನೂ ಅಲ್ಲಿಯ ದಿನಚರ್ಯವನ್ನೂ ಹೇಳಿದರು.

ಶಿಕ್ಷಣದ ಧೋರಣವು.

ಸದ್ಯಕ್ಕೆ ಆಶ್ರಮದಲ್ಲಿ ಚಿಕ್ಕ ದೊಡ್ಡವುಗಳನ್ನು ಕೂಡಿ ಸಿ ೫೦ ಬಾಳುಗಳಿರುವವು. ೪-೫ ಸಾವಿರ ರೂಪಾಯಿ ವೆಚ್ಚ ಮಾಡಿ ಕಲ್ಲು ಗಚ್ಚಿನಿಂದ ಶಾಸ್ತ್ರೀಯ ಪದ್ಧತಿಗನುಸಾ ರವಾಗಿ ಒಂದು ಗೋಶಾಲೆಯು ಕಟ್ಟಲ್ಪಟ್ಟಿರುವದು. ಗೋ ಮೂತ್ರ ವಗೈರೆ ಎಲ್ಲ ಹರಿಗಿಸಿ ಒಂದು ಕುಂಡದಲ್ಲಿ ಬೀಳುವಂತೆ ವ್ಯವಸ್ಥೆಯು. ಆಕಳುಗಳಿಗೆ ಬೇಕಾದಾಗ ನೀರು ದೊರೆಯುವಂತೆ ಏರ್ಪಾಟು ಗೋಶಾಲೆಯ ಸುತ್ತ ಲೂ ವಿದ್ಯಾರ್ಥಿಗಳೂ ಸ್ವತಃ ಗುರುಗಳೂ ಇರುವರು. ಸಣ್ಣ ದೊಡ್ಡ ವಿದ್ಯಾರ್ಥಿಗಳು ಗುರುಗಳು ಗ.ರ.ಗಳ ಮನೆಯವರು ಹೀಗೆ ಎಲ್ಲ ಕೂಡಿ ೧೦-೧೫ ಜನರಿರುವರು ಗೋಸೇವೆ ಹಾಗೂ ಕೃಷಿ ಇವು ಅಲ್ಲಿಯ ಮಹತ್ವದ ವಿಷಯಗಳಿರುವವು. ಸ್ವಾವಲಂಬನ, ವಿದ್ಯೆ, ಸ್ವಾತಂತ್ರ್ಯ ಮುಂತಾದವನ್ನು ದೊರಕಿಸಿ ಕೊಡಬೇಕೆಂಬುದೇ ಅಲ್ಲಿಯ ಶಿಕ್ಷಣದ ಧೋರಣವು. ಸದ್ವಿದ್ಯೆ ಸದಾಚರಣ ಇವು ಪ್ರಧಾನ ವಾದವುಗಳು. ಶರೀರ ನಿರ್ಮಾಣದ ಸಲುವಾಗಿ ಕೃಷಿ, ಲೋಕವ್ಯವಹಾರಕ್ಕಾಗಿ ಗಣಿತಾದಿ ವಿಷಯ, ವೈದಿಕ ಜ್ಞಾನ ಹೊಂದುವದಕ್ಕಾಗಿ ವೇದಶಾಸ್ತ್ರ, ಆಧ್ಯಾತ್ಮಾನುಭೂತಿ ಸಾಧನವಾದ ಯೋಗಶಾಸ್ತ್ರ ಇವೆಲ್ಲ ಯಥಾಧಿಕಾರವಾಗಿ ಕಲಿಸಲ್ಪಡುತ್ತಿರುವವು. ಸಮಾವರ್ತನವಾಗುವವರೆಗೆ ವಿದ್ಯಾರ್ಥಿಯು ಎರಡನೇ ಯಾವ ವಿಚಾರವನ್ನು ಮಾಡದೆ ಕೇವಲ ವಿದ್ಯಾರ್ಜನೆಯನ್ನು ಮಾಡಬೇಕು. ಎಂದು ದೃ ಢವಾದ ಮತವು ಅವರು ಪ್ರಸ್ತುತ ವಿದ್ಯಾಭ್ಯಾಸಕ್ಕೆ ಮಹತ್ವ ಕೊಡುವದಿಲ್ಲ. ಬುದ್ಧಿಯು ಸಂಸ್ಕೃತವಾಗಬೇ ಕು ಜಾಗೃತವಾಗಬೇಕು. ಅದರಲ್ಲಿ ಉದ್ಭವನ ಶಕ್ತಿ (*originality*) ಯುಟಾಗಬೇಕು. ಎಂದು ಅವರ ಪ್ರಯತ್ನವು.

ದಿನಚರ್ಯೆ,

ಗುರು ಶಿಷ್ಯರು ಪ್ರಾತಃಕಾಲದಲ್ಲಿ ನಾಲ್ಕುವರೆ ಗಂಟೆಗೆ ಎದ್ದು ಮೋರೆ ತೊಳೆದು ದೇವರಸ್ಮರಣೆಮಾಡಿ ಪ್ರಾತರ್ವಿ ಧಿಗಳನ್ನೂ ಸ್ನಾನವನ್ನೂ ಹೋಮವನ್ನೂ ಯೋಗಸಾಧನ ವನ್ನೂ ಮಾಡಿ ಸಾಡೆಕ್ಕೆ ೮|| ವರೆಗೆ ಕೂಡುತ್ತಾರೆ. ಆ ಮೇಲೆ ಗೋಸೇವೆ ಹಾಗೂ ಗಂಜಿಯ ಅಲ್ಪಾಹಾರ ಪುನಃ ೧೧|| ವರೆಗೆ ಪಾಠವು. ಆ ಮೇಲೆ ಮಾಧುಕರಿ ಬೇಡಿ ಬರು ವರು. ಭೋಜನಾದಿಗಳನ್ನು ತೀರಿಸಿ ೪ ರ ವರೆಗೆ ಪಾಠ ಮುಂದೆ ಕೃಷಿಕರ್ಮ ಹಾಗೂ ಖೇಲ. ಸಾಯಂಕಾಲ ಸಂಧ್ಯಾದಿಗಳನ್ನು ಮಾಡಿ ಭೋಜನ. ಆ ಮೇಲೆ ಪುರಾಣ ಕಥಾತ್ರಯ ದೇವಸ್ತುತಿ ಮುಂತಾದವುಗಳ ಚರ್ಚೆ. ಭಜ ನಾ ನಂತರ ೯|| ಘಂಟೆಗೆ ಶಯನ. ಹೀಗೆ ಇಲ್ಲಿಯ ಶಿಕ್ಷ

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ.

ಕಾಮಿನಿಯಾ ತೈಲ. ರಿಜಿಸ್ಟರ್ಡ

ನಯವಾದ ಗುಂಗುರು ಗುಂಗುರಾದ ನೀಳವಾದ ದಟ್ಟವಾದ ಕೇಶವ ನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು? ಅಂತಹ ಕೇಶರಾಶಿಯನ್ನು ಸ್ತ್ರೀಯ ರಿಗೆ ಒದಗಿಸಿ ಕೊಡಲಾದ ಉಪಕರಣವಾದರೋ,

ಕಾಮಿನಿಯಾ ಆಯಿಲ್ (ರಿಜಿಸ್ಟರ್ಡ)

ಈ ಆಯಿಲ್ ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತದೆಯೋ ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ. ಈ ಆಯಿಲ್ ಹಚ್ಚಿಕೊಳ್ಳುವದರಿಂದ ಮಸ್ತಕದ ಬೇನೆಯು ತಗ್ಗಿ ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನು ಹಚ್ಚಿದ ತರುವಾಯ ಎಂದಿಗೂ ಉದುರಿ ಬಿದ್ದು ಹೋಗಲಾರವು, ದಪ್ಪ, ಉದ್ದ ವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುತ್ತದೆ.

ಕೀಳು ತರದ ಎಣ್ಣೆಗಳನ್ನು ಕೊಂಡುಕೊಂಡು ತಮ್ಮ ಹಣವನ್ನೂ ಕೂದಲನ್ನೂ ಹಾಳುಮಾಡಿಕೊಳ್ಳುವದಕ್ಕಿಂತ ಒಂದೇಯೊಂದು ಬಾರಿ "ಕಾಮಿನಿಯಾ ಆಯಿಲ್" ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ನಮಗೆ ಪ್ರದರ್ಶನದಲ್ಲಿ "ಸರ್ಟಿಫಿಕೇಟ ಆಫ್ ಮೆರಿಟ" ಅಥವಾ ಯೋಗ್ಯತಾಪತ್ರವೂ ಇತರ ಸಾವಿರಾರು ಗೃಹಸ್ಥರು ಉತ್ತಮೋತ್ತಮವಾದ ಮಾನಪತ್ರಗಳೂ ದೊರೆತಿವೆ.

ಕ್ರಯ:— ಸೀಸೆಗೆ ರೂಪಾಯಿ 1-0-0, ಸೀಸೆ 3 ಕ್ಕೆ ರೂಪಾಯಿ 2-10 0 ವ್ಹಿ. ಪಿ. ಖರ್ಚು 0-14-0.

ಅತಿ ಮನೋಹರವಾದ ಸುಗಂಧಿಯು!

ಒಟ್ಟೋ-ದಿಲ್ ಬಹಾರ್ !! (ರಿಜಿಸ್ಟರ್ಡ.)

ಈ ಸುಗಂಧದ್ರವ್ಯವು ಮಧುರ, ಕೋಮಲ, ಚಿರಸ್ಥಾಯಿ ಮತ್ತು ಅತ್ಯುತ್ತಮವು ಜನ್ಮಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧಮಾಡುತ್ತ ಇದರಲ್ಲಿ ಸುವಿರೆಯ (ಆಲ್ಕೊಹೋಲ) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈ ವಸ್ತ್ರದಲ್ಲಿ ಅಥವಾ ಅಂಗಿಯಲ್ಲಿ ಈ ದ್ರವ್ಯದ ಕೆಲವು ಹನಿಗಳನು ಚಿಮುಕಿಸಿ ದರೆ ನಿಮ್ಮ ಸುತ್ತಲು ಸ್ವರ್ಗೀಯವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ, ಈ ಒಟ್ಟೋದಿಲ್ ಬಹಾ ರಿನ ಗಂಧವು ಅವೆಲ್ಲವುಗಳನ್ನು ಮೀರಿ ಮನಸ್ಸನ್ನು ತನ್ನ ಕಡೆಯಿಂದ ಸೆಳಕೊಳ್ಳುವದು. ಒಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ

ಸಣ್ಣ ಸೀಸೆ 1 ಕ್ಕೆ 0 8 0; 1 ಡ್ರಾಮಿನ (ಮಿಡಿಯಂ) ಸೀಸೆ 1 ಕ್ಕೆ 0 12 0; ½ ಔನ್ಸಿನ ದೊಡ್ಡ ಸೀಸೆ 1 ಕ್ಕೆ 2 0 0. ಅಂಚೆಯ ವೆಚ್ಚ ಬೇರೆ 0 4 0

ಒಟ್ಟೋ-ದಿಲ್ ಬಹಾರ್ ಪರಿಮಳ ಕಾರ್ಡುಗಳು ಡಜನ್ 1 ಕ್ಕೆ 0 12 0.

Address: **The Anglo Indian Drug & Chemical Co.**

16, Market, **BOMBAY 2.**

ತ ಕಾರ್ಯಕ್ರಮವಿರುವದು. ಹೊಸದಾಗಿ ಬರುವದು ೧೨ ವರ್ಷದ ಒಳಗಿನ ವಿದ್ಯಾರ್ಥಿಗಳು ಇದ್ದರೆ ಬಹು ಉತ್ತಮ. ಅವಶ್ಯವಿಲ್ಲದೆ ವಿದ್ಯಾರ್ಥಿಗಳು ಗೃಹಾದಿಗಳ ಕಡೆಗೆ ಹೋಗಕೂಡದು. ಆಶ್ರಮ ಬಿಟ್ಟು ಅತಿಥಿ ಸುಶೀಲರಾಗಬೇಕು. ದೇಹಾರೋಗ್ಯದ ಸಲುವಾಗಿಯೂ, ಬುದ್ಧಿಯ ತೀಕ್ಷ್ಣತೆಯು ಬೆಳೆಯಬೇಕಾಗಿಯೂ ಬೆಳಗ್ಗೆ ಹಾಲು, ಬ್ರಾಹ್ಮೀ ಘೃತ ಮುಂತಾದ ವನಸ್ಪತಿಗಳ ಸೇವನ, ಸೂರ್ಯನಮಸ್ಕಾರ, ಗೋರಸಪಾನ, ಮುಂತಾದವುಗಳು ಅವಶ್ಯವಿರುವವು.

ಸ್ವತಃ ದೈವರಾತರು.

ಇದುವರೆಗೆ ೩೦೦೦೦ ರೂಪಾಯಿಯಷ್ಟು ಈ ಸಂಸ್ಥೆಯ ಬಗ್ಗೆ ವೆಚ್ಚ ಮಾಡಿದ್ದರೂ, ಇದರ ಇಷ್ಟು ಎಲ್ಲವೂ ಭಿಕ್ಷೆಗಾಗಿ ಹೋಗಿಲ್ಲ. ಕೀರ್ತನದಿಂದ ಪುಸ್ತಕ, ತೀರ್ಥಸ್ಥಳ, ಉತ್ಸವ ಉಪನ್ಯಾಸಗಳು, ದಕ್ಷಿಣೆ ದಾನಗಳು ಇವರು. ಗೋಕರ್ಣವೇ ಅವರ ಮೂಲಸ್ಥಾನವು, ಅನ್ನಭಾವಿಯು. ೧೨ ವರ್ಷದವರಿದ್ದಾಗ ಅವರ ಲಗ್ನವು ನಿಶ್ಚಯಿಸಲ್ಪಟ್ಟಿತು. ಮದುವೆಯ ದಿನ ಲಗ್ನವಾಗುವದರಿಂದ ಜ್ಞಾನಾಭಿಲಾಷೆಯು ಅತ್ಯಂತ ತೀವ್ರವಿರುವದರಿಂದ ಇವರು ಮನೆಬಿಟ್ಟು ಜ್ಞಾನಾರ್ಜನಕ್ಕಾಗಿ ಕಾಶಿಗೆ ಹೊರಟು ಹೋದರು. ಅಲ್ಲಿ ಹಾಗೂ ಮತ್ತು ನಾಲ್ಕೈದು ಕಡೆಗೆ ಬೇರೆ ಬೇರೆ ಗುರುಗಳ ಕಡೆಗೆ ಬೇರೆ ಬೇರೆ ವಿದ್ಯೆಗಳನ್ನು ಅವರು ಸಂಪಾದಿಸಿದರು. ವೇದಾಂತ, ನ್ಯಾಯ, ವ್ಯಾಕರಣ, ಯೋಗ ಇವುಗಳಲ್ಲಿ ಪಾರಂಗತರಾದವರು. ಅವರು ಸಂಸ್ಕೃತ, ಕನ್ನಡ, ಹಿಂದೀ, ತಮಿಳು ಇಷ್ಟು ಭಾಷೆಗಳಲ್ಲಿ ಉತ್ತಮ ವ್ಯಾಖ್ಯಾನ ಮಾಡಬಲ್ಲರು. ಇಲ್ಲಿ ಅವರು ಮಾಡಿದ ವ್ಯವಸ್ಥೆ, ಗೋವುಗಳ ಬಗ್ಗೆ ಇಟ್ಟ ಕಾಳಜಿ ಮುಂತಾದವುಗಳನ್ನು ನೋಡಿದರೆ, ವಿದ್ಯೆ ಹಾಗೂ ಸಂಘಟನಾಶಕ್ತಿ ಇವೆರಡೂ ಇವರಲ್ಲಿ ಏಕಕಾಲಕ್ಕೆ ವಾಸ ಮಾಡುತ್ತಿರುವಂತೆ ತೋರುತ್ತವೆ. ಈಗ ಅವರು ಗೃಹಸ್ಥಾಶ್ರಮಿಗಳೂ, ಅಗ್ನಿಹೋತ್ರಿಗಳೂ ಇರುವರು ಸಪ್ತಶೀಲದ, ತನ್ನ ಜಾತಿ ರಾತು ಕೊಡದೆ, ಶಾಂತ ರೀತಿಯಿಂದ ವರಮಾತ್ರನಲ್ಲಿಯೂ, ತನ್ನ ಕಾರ್ಯದಲ್ಲಿಯೂ ನಿಷ್ಠೆಯುಳ್ಳವರಾಗಿ ಇವರು ಕಾರ್ಯವನ್ನು ನಡೆಸುತ್ತಾರೆಂದು ಹೇಳಬಹುದು. ಹೊಸ ವಿದ್ಯಾರ್ಥಿಗಳು ತಮ್ಮ ಆಶ್ರಯಕ್ಕೆ ಬಂದರೆ ತಮಗೆ ಪುತ್ರೋತ್ಸವದಷ್ಟೇ ಆನಂದವಾಗುವದೆಂದು ಅವರು ಹೇಳಿದರು. ಒಳ್ಳೇ ವಿದ್ಯಾರ್ಥಿಗಳು ತಮ್ಮನ್ನು ಬಿಟ್ಟು ಹೋದರೆ ಪುತ್ರಶೋಕದಷ್ಟು ದುಃಖವಾದರೂ ಆಗುವದು! ಗೋಸೇವೆ ಹಾಗೂ ಸ್ವಾವಲಂಬನ ಇವೆ ಶ್ರೀ. ದೈವರಾತರ ಮೂಲ ಮಂತ್ರಗಳು. ಕೃಷಿ, ಗೋಸೇವೆ ಇವೆರಡೂ ಅಲ್ಲಿ ಇದ್ದೇ ಇರುವವು. ಈಗ ಅವರು ಕರೇ ಹತ್ತಿಯ ಗಿಡಗಳನ್ನು ಹಚ್ಚಲಾರಂಭಿಸಿದ್ದಾರೆ. ಇಡೀ ಆಶ್ರಮದವರಿಗೆ ಬೇಕಾದಷ್ಟು ಅನ್ನ-ವಸ್ತ್ರವನ್ನು ಅಲ್ಲಿಯೇ ಉತ್ಪನ್ನ ಮಾಡಬೇಕೆಂದು ಅವರ ಮಹತ್ವಾಕಾಂಕ್ಷೆಯಿರುವದು. ಹೀಗಾದರೆ ಸಂಪೂರ್ಣ ಸ್ವಾವಲಂಬನವಾಗುವದು.

(ಕರ್ಮವೀರದೊಳಗಿಂದ)

— ಬಿಹಾರ ಪ್ರಾಂತಿಕ ಸರಕಾರದವರು ಮಾಲಗಾಡಿ ಹಳ್ಳಿ ಗುಳಿಜಾರಬಾಗದಲ್ಲಿ ಬೆಂಕಿಪೆಟ್ಟಿಗೆಯ ಕಾರಖಾನೆಯನ್ನು ತೆಗೆಯುವ ನಿರ್ಧಾರ ಮಾಡಿರುವರು.

— ವಿಳಗಾವಿಯ ಸರಕಾರಿ ಕೋಶದೊಳಗಿಂದ ೬.೭ ಸಾವಿರ ರೂಪಾಯಿಗಳ ಹಂಚಿಕೆ ಮಾಡಿ ಧಾರವಾಡ ಭಟ್ಟಿಯವರು ಕರ್ನಾಟಕ ಪ್ರಾಂತದ ಆಕೋಲೆಯಲ್ಲಿ ಇಟ್ಟಿರುವರೆಂಬ ಒಂದು ಬಾತ್ಮಿ.

— ಕಾಂತಿಲಾಲ ಮಗನಲಾಲ ಎಂಬೊಬ್ಬ ಪದವೀಧರ ತರುಣರೊಬ್ಬರು ರಾಗದ ಪೆಟ್ಟಿಗೆಯನ್ನು ಕಳವು ಮಾಡಿದ ಆರೋಪದ ಮೇಲೆ ಆಗಸಪುರಿಯಲ್ಲಿ ಅವರ ಮೇಲೆ ಖಟ್ಲೆಯಾಗಿ, ವಿಚಾರ ನಡೆದಿತ್ತು. ಒಂದು ದಿನ ಸಳಕ ಕ್ಕಾಗಿ ಬಾವಿಗೆ ಹೋದಾಗ, ಆತನು ಬಾವಿಯಲ್ಲೇ ಹಾರಿ ಕೊಂಡು ಮರಣಪಟ್ಟನು.

ವಿವಿಧ ಸಂಗ್ರಹ.

ಶ್ರೀಮಂತ ಸಯಾಜೀರಾವ ಗಾಯಕವಾಡರವರ ಸುವರ್ಣ ಜ್ಯುಬಿಲಿ ಮಹೋತ್ಸವ

ಬಡೋದೆಯ ಶ್ರೀಮಂತ ಸಯಾಜೀರಾವ ಗಾಯಕವಾಡ ಮಹಾರಾಜರವರು ಪಟ್ಟಾಭಿಷಿಕ್ತರಾಗಿ ೫೦ ವರುಷಗಳಾದವು ಆ ಕುರಿತು ಬಡೋದೆಯ ರಾಜ್ಯದಲ್ಲಿ ಸಮಸ್ತ ಪ್ರಜೆಗಳು ಸುವರ್ಣ ಜ್ಯುಬಿಲಿ ಮಹೋತ್ಸವವನ್ನು ಸಡಗರದಿಂದ ನೆರವೇರಿಸಿದರು. ಮಹಾರಾಜರಿಗೆ ಮಾನಪತ್ರಗಳನ್ನಿತ್ತು ಪ್ರಜೆಗಳು ಸತ್ಕರಿಸಿದರು. ಶ್ರೀಮನ್ಮಹಾರಾಜರವರ ಆ ಸಮಯದ ವಿಶೇಷ ಪ್ರತಿನಿಧಿಕ ಅಧಿಕಾರಗಳನ್ನು ಪ್ರಜೆಗಳಿಗಿತ್ತು ಮಹೋತ್ಸವವನ್ನು ಚಿರಸ್ಮರಣೀಯವನ್ನಾಗಿ ಮಾಡುವರೆಂದು ಅನೇಕರು ಗ್ರಹಿಸಿದ್ದರು. ಅಷ್ಟು ದೊಡ್ಡ ದಾನವು ಒದಗಿಸಲಿಲ್ಲ. ಕೆಲವು ಕೈದಿಗಳು ಬಂಧಮುಕ್ತರಾದರು. ೩ ಲಕ್ಷ ರೂಪಾಯಿ ತೆರಿಗೆಯ ಸೂಟು ದೊರಕಿತು. ರಾಜ್ಯದಲ್ಲೆಲ್ಲ ಟೆಲಿಫೋನದ ವ್ಯವಸ್ಥೆಯಾಯಿತು. ಹತ್ತಿಯ ಮೇಲಿರುವ ಜಕಾತ ಸುಂಕವು ತಡಕಡಿ ಮಾಡಲ್ಪಟ್ಟಿತು. ಮಹಾರಾಜರವರು ಈ ಮಹೋತ್ಸವದ ಸಮಯ ಕೀರ್ತಿಮಂದಿರ ಕಟ್ಟಿ ಸ್ಥಾಪಿತ ಮಾಡಿದರು. ಭೂತಲದೊಳಗಿನ ಕೀರ್ತಿವಂತ ಪುರುಷರ ಸಂಸ್ಮರಣೆ ನೆನಗುವಂತೆ ಕೀರ್ತಿಮಂದಿರದಲ್ಲಿ ವ್ಯವಸ್ಥೆಯಾಗುವದು. ಕೀರ್ತಿವಂತರ ಸ್ಮರಣೆಯಿಂದ ಪ್ರಜೆಗಳಿಗೆ ಕೀರ್ತಿಯ ಕಾರಣಗಳನ್ನು ಕೈಕೊಳ್ಳಲು ಸ್ಫೂರ್ತಿದಾಯಕವಾಗುವದು. ಇದೊಂದು ಈ ಮಹೋತ್ಸವದ ವಿಶೇಷವು.

* * *

ಶ್ರೀಮಂತ ಸಯಾಜಿರಾಯರ ಲೋಕಸಂಗ್ರಹ

ಮಹಾರಾಜರು ಸಿಂಹಾಸನವನ್ನೇರಿದ 1 ದಿನದಲ್ಲೆಲ್ಲ ಅಂತಃಕಲಹದಲ್ಲಿದ್ದ ಒಂದು ಪ್ರಕಾರದ ಅವ್ಯವಸ್ಥೆ ನಡೆದಿತ್ತು. ಅಂದಲ್ಲಿ ಮಹಾರಾಜರು ಅಂದಿಗೆ ಸ್ವತಃ ಸ್ಥಿತಿಯನ್ನು ನೆಲೆಗೊಳಿಸಿ ಪ್ರಜೆಗಳನ್ನೆಲ್ಲ ಸುಸಂಸ್ಕೃತ ಮಾಡಿದರು. ಮಹಾರಾಜರು ವಿದ್ಯಾದಾನದ ಪುರಸ್ಕರ್ತರು. ರಾಜ್ಯದಲ್ಲೆಲ್ಲ ಪ್ರಾಥಮಿಕ ಶಿಕ್ಷಣವು ಉಚಿತವಾಗಿದೆಯು. ಉತ್ತಮೋತ್ತಮ ಗುಣವಂತ ಮಹಾರಾಜರ ವ್ಯವಸ್ಥೆಯಾಗದೆ ಸಮ್ಮಾನಿಸಿದ ಬ್ರಿಟಿಶರೂ ಈ ವ್ಯವಸ್ಥೆಯನ್ನು ಅನುಕರಿಸಬಹುದು. ಮಹಾರಾಜರ ವಾಚನಾಲಯದ ವ್ಯವಸ್ಥೆ ಮುಂತ ಅನ್ನ ಅಪೂರ್ವವಿದೆ. ೫೦ ಮಂದಿಗಳಿದ್ದ ಹಳ್ಳಿಯಲ್ಲಿ ಒಂದು ವಾಚನಾಲಯವು ಸ್ಥಾಪಿಸಲ್ಪಟ್ಟಿದೆ. ಮಹಾರಾಜರು ದಿವಾಣಿ ಹಾಗು ಫೌಜದಾರಿ ಅಧಿಕಾರಗಳನ್ನು ವಿಂಗಡಿಸಿ, ನ್ಯಾಯದಾನದ ಪವಿತ್ರತೆಯನ್ನು ಉಳಿಸಿರುವರು. ಮಹಾರಾಜರು ಅಸ್ಪೃಶ್ಯರ ಉದ್ಧಾರಕ್ಕಾಗಿ ಅನೇಕ ಸಾಧನೆಗಳನ್ನು ಕೈಕೊಂಡಿರುವರು. ಇವೆಲ್ಲ ಪ್ರಜಾನುರಂಜನ ಯೋಜನೆಗಳಿಂದ ಮಹಾರಾಜರವರು ರಾಜ್ಯದಲ್ಲಿ ಲೋಕಪ್ರಿಯರಾಗಿರುವರು.

* * *

ಮಹಾರಾಜರ ದೈವಬಲ.

ಮಹಾರಾಜರ ಪೂರ್ವಚರಿತ್ರೆಯನ್ನು, ಈಗಿನ ವೈಭವವನ್ನು ವಿಚಾರಿಸಿದರೆ, ದೈವಬಲದಿಂದ ಬಂದಂತ ಅಪೂರ್ವ ದೈವಚಮತ್ಕಾರದ ನೆನಪಾಗುವದು. ೧೮೭೦ನೇ ಇಸ್ವಿಯಲ್ಲಿ ಬಡೋದೆಯ ಮಹಾರಾಜರವರು ಅನಪೇಕ್ಷಿತವಾಗಿ ಕಾಲಾಧೀನರಾದರು. ಖಂಡೇರಾಯರಿಗೆ ಸಂತತಿಯಿರಲಿಲ್ಲ. ಖಂಡೇರಾಯರ ತಮ್ಮನಾದ ಅವರ ಸಹೋದರರಾದ ಮಲ್ಹಾರರಾಯರು ಸಿಂಹಾಸನವನ್ನೇರಿದರು. ಮಲ್ಹಾರರಾಯರ ಕಾರಕೀರ್ದಿಯು ಬಹಳ ಕಷ್ಟಮಯವಾಯಿತು. ಅಲ್ಲಿನ ಬ್ರಿಟಿಶ ರೆಸಿಡೆಂಟರಾಗಿದ್ದ ಕರ್ನಲ್ ಫ್ರೇಯರರವರಿಗೂ, ಮಲ್ಹಾರರಾಯರಿಗೂ ತಂಟೆ ಬೆಳೆಯಿತು. ಕರ್ನಲ್ ಫ್ರೇಯರರವರು ವಿಷಪ್ರಯೋಗದಿಂದ ಮೃತರಾದರು. ವಿಷಪ್ರಯೋಗವು ಮಹಾರಾಜರ ಪ್ರೇರಣೆಯಿಂದ ಒದಗಿತೆಂದು ಲೋಕದಲ್ಲಿ ಸುದ್ದಿ ಹಬ್ಬಿತ್ತು. ಬ್ರಿಟಿಶ ಅಧಿಕಾರಿಗಳು ಈ ಕುರಿತು ಚೌಕಶಿ ಮಂಡಳವನ್ನು ಕೂಡಲೆ ನೇಮಿಸಿದರು. ಮೂವರು ಇಂಗ್ಲಿಷರು, ಮೂವರು ಭಾರತೀಯರು ಈ ಮಂಡಳದಲ್ಲಿ ಸೇರಿದ್ದರು. ಮಹಾರಾಜರು ದೋಷಿಗಳೆಂದು ಇಂಗ್ಲಿಷ ಸಭಾಸದರ ನಿರ್ಣಯವಾಯಿತು, ಮಹಾರಾಜರು ನಿರಪರಾಧಿಗಳೆಂದು ಭಾರತೀಯರ ಅಭಿಪ್ರಾಯವಾಯಿತು. ಆದರೂ, ಹಿಂದುಸ್ಥಾನ ಸರಕಾರದವರು ಮಲ್ಹಾರರಾಯರ ಮೇಲೆ ಹಿಂದಿನ ಕಾರಕೀರ್ದಿಯ ಅಪಕೃತ್ಯಗಳಿಗೆ ದಂಡನೆಯೆಂದು ಮಲ್ಹಾರರಾಯರನ್ನು ಪದಚ್ಯುತ ಮಾಡಿದರು. ಖಂಡೇರಾಯರ ವಿಧವೆಯಾದ ಮಹಾರಾಣಿಯವರಿಗೆ ಬ್ರಿಟಿಶ ಸರಕಾರದವರು ದತ್ತಕ ಕೊಂಡು ಉತ್ತರಾಧಿಕಾರಿಯನ್ನಾಗಿ ನೇಮಿಸಲು ಆಜ್ಞಾಪಿಸಿದರು. ಮಹಾರಾಣಿ ಜಮನಾಬಾಯಿಯವರು ದತ್ತಕ ಪುತ್ರನನ್ನು ಶೋಧಿಸ ತೊಡಗಿದ ಹಕೀಕತು ನಿಜವಾಗಿ ಕೌತುಕಪ್ರೇರಣೆಯುಂಟಾಗಲಿ. ಬಡೋದೆ ಸಂಸ್ಥಾನದ ಸಂಸ್ಥಾಪಕರು ಪಿಲಾಜಿರಾವ ಗಾಯಕವಾಡರವರು. ಕಾಶೀರಾಯರು ಅವರ ಮೂರನೇ ಮಗಂದಿರು. ಕಾಶೀರಾಯರಿಗೆ ಮೂವ ಮಗಂದಿರಿದ್ದರು. ಗೋಪಾಳ, ದಾದಾ ಹಾಗು ಸಂಪತ್. ಗೋಪಾಳನ ಪ್ರಾಯ ೧೨ ವರುಷ, ದಾದಾನು ೧೦ ವರ್ಷದವನು; ಸಂಪತನು ೮ ವರ್ಷದವನು. ಕಾಶೀರಾಯರು ತಮ್ಮ ಮಕ್ಕಳೊಡನೆ ಪೂರ್ವ ಖಾನದೇಶದ ಕವಳಾನಾ ಗ್ರಾಮದಲ್ಲಿ ಒಕ್ಕಲುತನ ನಡೆಸಿಕೊಂಡು ಜೀವಿಸುತ್ತಿದ್ದರು. ೧೮೭೫ನೇ ಇಸ್ವಿಯಲ್ಲಿ ಮಹಾರಾಣಿ ಜಮುನಾಬಾಯಿಯವರು ಕಾಶೀರಾಯರಿಗೂ, ತಮ್ಮ ಮಕ್ಕಳನ್ನು ಇರುವ ಸವಿಸ್ತರ ಸಂಬಂಧವನ್ನು ನೆನಿಸಿ, ಮೂವರ ಮಕ್ಕಳಿಗೂ ಅಲ್ಲಿಗೆ ಕರೆಸಿಕೊಂಡರು. ದತ್ತಕ ನಿಮಂತ್ರಣವಾಯಿತು? ಎಂಬುದು ಯಾರಿಗೂ ತಿಳಿಯಲಿಲ್ಲ, ಮೂವರು ಹುಡುಗರಿಗೂ ಬಡೋದೆಗೆ ಒಯ್ದರು. ಮಹಾರಾಣಿಯವರು ಮೂವರು ಹುಡುಗರಿಗೂ ಒಂದೇ ಪ್ರಶ್ನೆಯನ್ನು ಕೇಳಿದರು. ಗೋಪಾಳನಿಗೆ ನೋಡಿದ ಕೂಡಲೆ, ಮಹಾರಾಣಿಯವರಿಗೆ ಆನಂದವುಕ್ಕೇರಿತು. ಮಹಾರಾಣಿಯವರು ಹುಡುಗರಿಗೆ ಕೇಳಿದ ಪ್ರಶ್ನೆ ಯಾವದು: “ನೀನು ಇಲ್ಲಿ ಯಾಕೆ ಬಂದಿರುವಿ?” ಸಂಪತನು ದಿಗಿಲುಬಿದ್ದನು. ಮುಗುಳುನಗೆ ಮಾಡಿದನು, ಥೈಲಿಗೆಯಲ್ಲಿ ಗಾಬರಿಬಿಟ್ಟು ಅತ್ತುಬಿಟ್ಟನು, ದಾದಾನಿಗೆ ಕೇಳಲು, ‘ತನ್ನ ಅಪ್ಪರು ಇಲ್ಲಿ ತನಗೆ ತಂದರು; ಅದರಿಂದ ತಾನು ಇಲ್ಲಿ ಬಂದೆನ.’ ಗೋಪಾಳನಿಗೆ ಈ ಪ್ರಶ್ನೆ ಕೇಳಲಾಯಿತು. ಗೋಪಾಳನು ಈ ಕುರಿತು ಏನು ವಿಚಾರ ಮಾಡದೆ ಧಾಳಿನಿಂದ ನುಡಿದಿದ್ದೇನೆಂದರೆ— “ಬಡೋದೆಯ ಮಹಾರಾಜನಾಗಲಿಕ್ಕೆ ನಾನು ಇಲ್ಲಿ ಬಂದಿರುವೆನು” ಇದನ್ನು ಕೇಳಿದೊಡನೆ ಮಹಾರಾಣಿಯವರಿಗೆ ಪರಮಾನಂದವಾಯಿತು. ಗೋಪಾಳನನ್ನು ಆಪ್ತಿ ಕೊಂಡ ಮುದ್ದಿಟ್ಟರು. ಬಳಿಕ ಗೋಪಾಳನ ದತ್ತಕವಿಧಾನವಾಗಿ “ಸಯಾಜಿರಾವ ಗಾಯಕವಾಡ” ಎಂಬ ನಾಮಕರಣವಾಗಿ ಪಟ್ಟವನ್ನೇರಿದರು. ಒಕ್ಕಲತನದ ಪಾವಟಿಗೆಯ ಮೇಲಿಂದ ಒಮ್ಮೆಲೆ ಮಹಾರಾಜರ ಸಿಂಹಾಸನವನ್ನೇರಿದರು ದೈವಯೋಗ ಬಲವಲ್ಲದೆ ಮತ್ತೇನು?

* * *

ಬ್ರಹ್ಮದೇಶದ ಸ್ಥಿತಿ

ಬ್ರಹ್ಮದೇಶದಲ್ಲಿ ಸದ್ಯಕ್ಕೆ ಹಿಂದೂ ಪರಿಷತ್ತಿನ ಅಧಿವೇಶನವಾಯಿತು. ಲಾಲಾ ಲಜಪತರಾಯರು ಅಧ್ಯಕ್ಷರಿದ್ದರು. ೧೯೦೭ ನೇ ಇಸ್ವಿಯಲ್ಲಿ ಬ್ರಹ್ಮದೇಶಕ್ಕೆ ಮಂಡಾಲೆಯ ಪಟ್ಟಣಕ್ಕೆ ಲಜಪತರಾಯರು ಸರಕಾರಿ ಕೈದಿಯಾಗಿ ಹೋಗಿದ್ದರು, ಅವರೇ ಲಜಪತರಾಯರು ಈಗ ಈ ಸಾರೆಯಾಗಿ ಹಿಂದೂ ಪ್ರಜೆಗಳ ನಾಯಕರಾಗಿ, ಸಡಗರದಿಂದ, ವಿಜಯಭಾವದಿಂದ ಮಂಡಾಲೇ ಪಟ್ಟಣಕ್ಕೆ ಬಂದಿಳಿದರು. ಬ್ರಹ್ಮದೇಶದಲ್ಲಿ ಲಜಪತರಾಯರ ಆಗಮನವು ಅವಿಸ್ಮರಣೀಯವಾದವು. ಹಿಂದುಸ್ಥಾನದೊಳಗಿನ ಬೇರೆ ಬೇರೆ ಪ್ರಾಂತಗಳೊಳಗಿಂದ ಹೋಗಿ ಒಳಕೊಂಡ ಲಕ್ಷ ಹಿಂದವಾಸಿಯರು ಅಲ್ಲಿರುವರು. ಪೂರ್ವ ಕಾಲ ಹಿಂದೂ ಜನರು ಅಲ್ಲಿ ೩ ಸಾವಿರ ವರ್ಷಗಳಿಂದ ವಾಸ

ತ್ರ ಬಂದಿದ್ದಾರೆ. ಅವರು ಬೌದ್ಧರೆಂದು ಹೇಳಿಸಿಕೊಂಡರೂ, ಜನಿವಾರವನ್ನು ಧರಿಸುತ್ತಾರೆ; ಮುಮುಕ್ಷುಮುಂಜಿ ಇತ್ಯಾದಿ ವಿಧಿಗಳನ್ನು ಹಿಂದೂಗಳಂತೆ ಆಚರಿಸುತ್ತಾರೆ, ಹಿಂದೂ ಪರಿಷತ್ತಿನಲ್ಲಿ ಹಿಂದೀ ಭಾಷೆಯ ಪ್ರಚಾರ, ಸಂಸ್ಕೃತಾಭ್ಯಾಸ, ರಾಮಾಯಣ, ಮಹಾಭಾರತ ಹಾಗು ಭಗವದ್ಗೀತೆಗಳ ವಿದ್ಯಾದಾನ ಧರ್ಮಶಿಕ್ಷಣ ಪ್ರಸಾರ, ಅನಾಥಾಲಯಗಳ ಸ್ಥಾಪನೆ, ಅಸ್ಪೃಶ್ಯೋದ್ಧಾರ, ಸ್ವದೇಶೀ ಕೈಗಾರಿಕೆಗಳಿಗೆ ಉತ್ತೇಜನ, ಖಾದಿಯ ಪ್ರಸಾರ, ಇತ್ಯಾದಿ ಠರಾವುಗಳಾದುವು. ಬ್ರಹ್ಮದೇಶದಲ್ಲಿ ಮುಸಲ್ಮಾನರೂ ಇರುವರು. ಅಲ್ಲಿ ಅವರು ಅಲ್ಪಸಂಖ್ಯಾತರು ಆದರೂ, ಅಲ್ಲಿ ಅವರಿಗೆ ಪ್ರತ್ಯೇಕ ಪ್ರತಿನಿಧಿತ್ವ ಬೇಕಾಗಿರುವದಿಲ್ಲ. ಹಿಂದೂಗಳ ಬಹುಮತವಿದ್ದ ಮತದಾರ ಸಂಘಗಳೊಳಗಿಂದ ಮುಸಲ್ಮಾನರೂ ಆರಿಸಲ್ಪಡುತ್ತಾರೆ; ಮುಸಲ್ಮಾನರೂ ಹಿಂದೂಗಳಿಗೆ ಸಹಾಯ ಮಾಡುತ್ತಾರೆ. ಈ ಕೋಟಿ ಕೋಟಿ ಹಿಂದೂಮುಸಲ್ಮಾನರ ಐಕ್ಯಾಭಿಮಾನಿಯು ಸಂತೋಷಪಡತಕ್ಕದ್ದು. ಹಿಂದೂಮುಸಲ್ಮಾನರೊಳಗೆ ಎಂದೂ ಐಕ್ಯವಾಗದೆಂದು ಸಾರಿಹೇಳುವ ಪ್ರಾಜ್ಞಶಿಖಾಮಣಿಗಳು ಇದರಿಂದ ತಕ್ಕ ಬೋಧ ಪಡೆಯಬಹುದು.

***

ಆರ್ಯ ಸಮಾಜದ ಮೇಲಿನ ಪ್ರತಿಬಂಧವು ಪರಿಹಾರವಾಯಿತು.

ಮಲಬಾರ ಪ್ರಾಂತದಲ್ಲಿ ಅಸ್ಪೃಶ್ಯರ ಪ್ರಶ್ನೆಯು ಉಗ್ರ ಸ್ವರೂಪವನ್ನು ಧರಿಸಿತ್ತು. ಆರ್ಯಸಮಾಜದವರು ಪ್ರಾಯಶ್ಚಿತ್ತ ವಿಧಿಯನ್ನಿತ್ತರೂ, ಅಸ್ಪೃಶ್ಯರ ಅಸ್ಪೃಶ್ಯತೆಯು ಅಷ್ಟರಿಂದ ಉಳಿಯುತ್ತಿತ್ತೆಂದು ಡಿಸ್ಟ್ರಿಕ್ಟ ಮೆಜಿಸ್ಟ್ರೇಟರು ಕಲ್ಲಿಕೋಟೆಯೊಳಗಿನ ರಥೋತ್ಸವದ ಸಮಯ ಸಾರ್ವಜನಿಕ ಮಾರ್ಗದ ಮೇಲೆ ಆರ್ಯಸಮಾಜದ ದೀಕ್ಷೆಕೊಂಡ ಅಸ್ಪೃಶ್ಯರಿಗೆ ಅಪ್ಪಣೆಗೊಡಲಿಲ್ಲ. ಈ ಕುರಿತು ಆರ್ಯಸಮಾಜದವರಿಗೂ, ಡಿ. ಮೆಜಿಸ್ಟ್ರೇಟರಿಗೂ ದೊಡ್ಡ ವಾದವುಂಟಾಗಿ, ಇದೇ ಭರತಖಂಡದಲ್ಲಿ ಕಲ್ಲೀಲವರ್ತ್ತ ಸ್ವಕ್ಕೆ ಈ ಕುರಿತು ಮೆಜಿಸ್ಟ್ರೇಟ ಕೋರ್ಟಿನಲ್ಲಿ ಒಂದು ಫಿರ್ಯಾದು ದಾಖಲಾಗಿ ಆರ್ಯಸಮಾಜದವರಿಗೆ ಅನುಕೂಲವಾಗಿ ನಿರ್ಣಯವಾಗಿದೆ. ಟಿ. ಸಿ. ಶಂಕರನ್ ಎಂಬುವರು 'ತಿಯ್ಯಾ' ಎಂಬ ಅಸ್ಪೃಶ್ಯ ಜಾತಿಯವರು. ಇವರು ಆರ್ಯಸಮಾಜದ ದೀಕ್ಷೆಯನ್ನು ಪಡೆದವರು. ಶ್ರೀ ಲಕ್ಷ್ಮೀನಾರಾಯಣ ದೇವಾಲಯದ ಗರುಡಗಂಬದ ವರೆಗೆ ಅವರು ಸೇರಿಕೊಂಡರೆಂದು ಶ್ರೀ ದೇವಸ್ಥಾನದವರು ಅವರ ಮೇಲೆ ಮೆಜಿಸ್ಟ್ರೇಟ ಕೋರ್ಟಿನಲ್ಲಿ ಫಿರ್ಯಾದನ್ನು ದಾಖಲಮಾಡಿಸಿದರು. ತಿಯ್ಯಾ ಜಾತಿಯವರು ಗರುಡಗಂಬದ ವರೆಗೆ ಹೋಗಲಿಕ್ಕೆ ಅಧಿಕಾರವಿಲ್ಲೆಂದು ಶ್ರೀ ದೇವಸ್ಥಾನದವರ ಹೇಳಿಕೆಯು ಪುರಾವೆಯಿಂದ ಸಿದ್ಧವಾಯಿತು. ಆರ್ಯ ಸಮಾಜದವರಿಗೂ ಈ ಪ್ರತಿಬಂಧವಿರುವದೇನು? ಎಂಬ ಪ್ರಶ್ನೆಗೆ ಸಮರ್ಪಕ ಪುರಾವೆಯನ್ನು ಫಿರ್ಯಾದಿ ಪಕ್ಷದವರು ಕೊಡಲಿಲ್ಲ. ಆದ್ದರಿಂದ ಈ ಖಟ್ಲೆಯು ಆರೋಪಿಗೆ ಅನುಕೂಲವಾಗಿ ಪರಿಣಮಿಸಿತು. ಆರೋಪಿ ಶಂಕರನ್‌ರು ಆರ್ಯಸಮಾಜಕ್ಕೆ ಸೇರಿದವರಾದ್ದರಿಂದ ಅವರಿಗೆ ಈ ಪ್ರತಿಬಂಧದ ಬಾಧಕವಿರುವದಿಲ್ಲವೆಂದು ಅವರು ಗೃಹಿಸಿದ ಅಪಕ್ಷಕ್ಕಾಗಿ ಹೋಗಿರುವರೆಂದು ಡಿ. ಮೆಜಿಸ್ಟ್ರೇಟರು ಆರೋಪಿಗೆ ಅನುಕೂಲವಾದ ತೀರ್ಮಾನವನ್ನು ಕೊಟ್ಟು ಶಂಕರನ್‌ರಿಗೆ ಬಿಡುಗಡೆ ಮಾಡಿರುವರು. "ಯಾವ ದೇವರ ಗುಡಿಯವರಾದರೂ ನಿಬಂಧನೆಗೊಳ್ಳಬೇಕು." ಈ ನಿರ್ಣಯದಿಂದ ಅಸ್ಪೃಶ್ಯರಿಗೆ ಜೀವನ ಪಡೆಯಲು ಆರ್ಯ ಸಮಾಜದವರಿಗೆ ಹುರುಪು ಉಂಟಾಗುವದು; ಅಸ್ಪೃಶ್ಯರಿಗೂ ಆರ್ಯ ಸಮಾಜದ ಪತಿತೋದ್ಧಾರ ಸಾಮರ್ಥ್ಯವು ತಿಳಿಯುವದು.

***

ವರ್ಣದ್ವೇಷ.

ವಿಲಾಯತಿಯ "ಮೆಂಚೆಸ್ಟರ ಗಾರ್ಡಿಯನ್" ಪತ್ರಿಕೆಯ ಲೇಖಕರೊಳಗಿನ ಒಬ್ಬರು ಕಪ್ಪು ಜನರ ಕೌನ್ಸಿರ್ ಯಾಣ್ ಮ್ಯುನಿಸಿಪಾಲಿಟಿಯ ಸಭೆಯಲ್ಲಿ ನಡೆದ ಚರ್ಚೆಯನ್ನು ನಿವೇದಿಸಿರುವರು. ಅಲ್ಲಿ ಒಬ್ಬ ಸ್ತ್ರೀಯು ರೋಗದ ವೈದ್ಯರಾಗಿ ಭರತಖಂಡದ ಮಾ| ಡ್ಯೂ. ಬಿ. ಫರ್ನಾಂಡೀಸರವರು ಆರಿಸಲ್ಪಟ್ಟಿರುವರು. ಆದರೆ ಮ್ಯುನಿಸಿಪಾಲಿಟಿಯಲ್ಲಿ ಮಾಡಿದ ಅಸಿಸ್ಟಂಟ ಮೆಡಿಕಲ್ ಆಫೀಸರ ಹುದ್ದೆಗೆ ನೇಮಿಸುವ ಕುರಿತು ಕಳೆದ ತಿಂಗಳಲ್ಲಿ ಮ್ಯುನಿಸಿಪಲ್ ಸಭೆಯಲ್ಲಿ ದೊಡ್ಡದೊಂದು ವಾದವೆದ್ದು, ಕೊನೆಗೆ ಮಾ| ಫರ್ನಾಂಡೀಸರಿಗೆ ಪ್ರತಿಕೂಲವಾದ ನಿರ್ಣಯವಾಗಿರುವದು. ೧ ವರುಷದ ಹಿಂದೆ ಇದೇ ಕುರಿತು ಇದೇ ಮ್ಯುನಿಸಿಪಾಲಿಟಿಯಲ್ಲಿ ಚರ್ಚೆ ಆಗಿ, ೧ ವರುಷದ ವರೆಗೆ ಮಾ| ಫರ್ನಾಂಡೀಸರವರಿಗೆ ತಾತ್ಪೂರ್ತಿಕವಾಗಿ ಅವರ ಜಾಗೆಯ ಅಧಿಕಾರವಿರುವದೆಂದೂ ಈ ಅಧಿಕಾರವನ್ನು ನಡೆಸಿಕೊಂಡು ಬರಬೇಕಾಗಿ ನಿರ್ಣಯವಾಗಿತ್ತು; ಈಗಲೂ ಮಾ| ಫರ್ನಾಂಡೀಸರವರಿಗೆ ಆ ಮೆಡಿಕಲ್ ಆಫೀಸರನ್ನಾಗಿ ನೇಮಿಸಲು ಮ್ಯುನಿಸಿಪಾಲಿಟಿಯವರು ತಯಾರಾಗಿದ್ದಿಲ್ಲ. ಕಳೆದ ತಿಂಗಳಲ್ಲಿ ಬಹಳ ಚರ್ಚೆ ನಡೆದು ಕೊನೆಗೆ ಈ ಅಸಿಸ್ಟಂಟ ಮೆಡಿಕಲ್ ಆಫೀಸರ ಹುದ್ದೆಗಾಗಿ ಅರ್ಜಿಗಳನ್ನು ಕರೆಸಬೇಕೆಂದು ನಿರ್ಣಯವಾಗಿ, ಅದರಂತೆ ಜಾಹೀರಾತು ಕೊಡಬೇಕೆಂದು ಇತ್ಯರ್ಥವಾಯಿತು. ಮ್ಯುನಿಸಿಪಾಲಿಟಿಯ ಆರೋಗ್ಯ ಖಾತೆಯ ಅಧ್ಯಕ್ಷರು ಮಾ| ಮೂರಹೌಸ ಎಂಬುವರು. ಇವರು ಈ ಅಧಿಕಾರಕ್ಕೆ ನೇಮಿಸಲ್ಪಡುವವರು ಪುರುಷರೇ ಆಗಿರಬೇಕೆಂದೂ ಯೋಗ್ಯತೆಯಿರಬೇಕೆಂದೂ ಹೇಳಿ, ಮಾ| ಫರ್ನಾಂಡೀಸರಿಗೆ ಅಂಥ ಯೋಗ್ಯತೆಯಿಲ್ಲೆಂದು ಧ್ವನಿಪಾರ್ಶ್ವದಿಂದ ಈ ಆಲೋಚನೆಯಾಗುವದಿಲ್ಲೆಂದು ಹೇಳಿದರು. "ಮಾ| ಫರ್ನಾಂಡೀಸರವರು ಸಾರ್ವಭೌಮ ಪ್ರಜೆಗಳು, ಬ್ರಿಟಿಶ ಸಾಮ್ರಾಜ್ಯದ ನಾಗರಿಕರು; ಸ್ವಪರಾಕ್ರಮದಿಂದ ವೈದ್ಯಕ್ರಮರಾಗಿರುವರು. ಇವರಿಗೇ ಇನ್ನೆರಡು ವರುಷಗಳ ವರೆಗೆ ಈ ಅಧಿಕಾರ ನಡೆಸಗೊಡಬೇಕು, ಕಳೆದ ವರುಷದಲ್ಲಿ ಇವರು ಅಪಾತ್ರರೆಂದು ಹೇಳುವಂಥ ಯಾವದೇ ಸಂಗತಿಯು ಘಟಿಸಲಿಲ್ಲ." ಇತ್ಯಾದಿ ಪ್ರತಿಪಾದನೆ ಮಾಡಿ ಮ್ಯುನಿಸಿಪಲ್ ಮೆಂಬರರಾದ ಎಲ್ಡರಮನ್ ಫ್ರೆಂಟಿನ್ ಹಾಗು ಈ ಸ್ತ್ರೀಯರವರು ವಾದಿಸಿ, ಮಾ| ಮೂರಹೌಸರವರು ಜಾಹೀರಾತು ಕೊಟ್ಟು ಅರ್ಜಿ ತರಿಸಿ ಹೊಸ ನೇಮಣೂಕಿ ಮಾಡಬೇಕೆಂಬ ಠರಾವಿಗೆ ವಿರೋಧಿಸಿದರು. ಎಲ್ಡರಮನ್ ಮಿ. ಜೋಶಿಯವರು ಎಲ್ಡರಮನ್ ಫ್ರೆಂಟಿನ್‌ರವರಿಗೆ ಅನುಮೋದಿಸುವಾಗ, ಮಾ| ಫರ್ನಾಂಡೀಸರವರು ಏನು ತಪ್ಪು ಮಾಡಿರುವರೆಂದು ಕಮೀಟಿಯವರಿಗೆ ಸವಾಲು ಹಾಕಿದರು. ಚಿಕಿತ್ಸೆಯಲ್ಲಿ ಕೆಲವು ತಪ್ಪುಗಳಾದವೆಂದು ಕೆಲವರು ಗುಣಗುಟ್ಟಿದರು. ಆರೋಗ್ಯ ಖಾತೆಯ ಅಧ್ಯಕ್ಷರಾಗಿದ್ದ ಮಾ| ಮೂರಹೌಸರವರೇ ತಪ್ಪು ಮಾಡಿಲ್ಲವೇನೆಂದು ಎಲ್ಡರಮನ್ ಮಿ. ಜೋಶಿಯವರು ಕೇಳಿಬಿಟ್ಟರು. ಮನುಷ್ಯರು ಸ್ಖಲಿತ ಪಡೆಯಲು; ಮೂರಹೌಸರವರು ಹೀಗೆ ಅಂದರು:— "ನೀವು ಪಡೆಯಲು ಯೋಗ್ಯವೇ, ನಾನು ಚಿಕಿತ್ಸೆಯಲ್ಲಿ ಬಹಳ ಬಹಳ ತಪ್ಪು ಮಾಡಿದ್ದೇನೆ." ಹೀಗೆಲ್ಲ ಪ್ರತಿವಾದನೆಯಾದರೂ, ಕೊನೆಗೆ ಎಲ್ಡರಮನ್ ಫ್ರೆಂಟಿನ್‌ರವರ ಉಪಸೂಚನೆಯು ಬಿದ್ದು ಹೋಗಿ, ಮಾ| ಮೂರಹೌಸರವರ ಠರಾವು ಮಂಜೂರಾಯಿತು. ಅಷ್ಟಾಗಿ, ಮಾ| ಮೂರಹೌಸರಿಗೆ ವರ್ಣದ್ವೇಷದ ಸ್ಪರ್ಶವಿಲ್ಲ ಎಷ್ಟು ನಿರ್ಮಲ, ನಿಷ್ಕಪಟ ವೃತ್ತಿಯವರು !!

ದಿ ಮೈಸೂರ ಅಗ್ರಿಕಲ್ಚರಲ್ ಡೈರಿ ಫಾರ್ಮ ಕಂಪನಿ, ಲಿಮಿಟೆಡ್.

೧೯೧೩ ನೇ ಇಸವಿಯ ಕಂಪನಿಗಳ ರೆಗ್ಯುಲೇಶನ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ. ಸದ್ರಿ ಕಂಪನಿಯಲ್ಲಿ ನಾನು, ಕಾರವಾರ ಡಿಸ್ಟ್ರಿಕ್ಟದೊಳಗಿನ ಕುಮಟಾ, ಅಂಕೋಲಾ, ಕಾರವಾರ ತಾಲೂಕುಗಳ ಬಗ್ಗೆ ಸದ್ರಿ ಕಂಪನಿಯ ತರ್ಫೆನಿಂದ ಇನಸ್ಪೆಕ್ಟರನಾಗಿದ್ದು, ಈ ಬಗ್ಗೆ ಮೇಲೆ ವಿವರಿಸಿದ ಕಂಪನಿಯಿಂದ ಅಧಿಕಾರಪತ್ರವನ್ನು ಹೊಂದಿದ್ದೇನೆ. ಈ ಇನಸ್ಪೆಕ್ಟರನಾಗಿ ಕೆಲವು ಸಬ್ ಏಜಂಟರುಗಳನ್ನು ನೇಮಿಸಿ, ಕಂಪನಿಯು ಪ್ರೋಗ್ರೆಸ್ ಆಗುತ್ತ ಇದೆ. ಈ ಮೂಲಕ ತಿಳಿಸುವದೇನೆಂದರೆ,- ಸರ್ವ ಜನರೂ ಈ ಕಂಪನಿಯ ಕಾಗದಗಳನ್ನು ವಿಮರ್ಶಿಸಿ ನೋಡಿ, ಇದರಿಂದಾಗುವ ಹಿತವನ್ನು ಪಡಕೊಳ್ಳುವದಲ್ಲದೆ, ಕಂಪನಿಯನ್ನೂ ಊರ್ಜಿತಾವಸ್ಥೆಗೆ ತರಬೇಕಾಗಿ ವಿನಂತಿ. ಸದ್ರಿ ಶೇರ್ಸುಗಳನ್ನು ಪಡೆಸುವವರ ಬಗ್ಗೆ ನಾನು ಹಾಲೀ ಕುಮಟಾ ಗುಡಿಗಾರ ಪೇಟೆಯಲ್ಲಿ ನನ್ನ ಹೆಡ್ ಕ್ವಾರ್ಟರ್ಸನ್ನು ಸ್ಥಾಪಿಸಿದ್ದೇನೆ. ಹಿಂದೆ ಈ ಸಲುವಾಗಿ ಕಾರವಾರ ಧಾರಣದಲ್ಲಿ ಡಿಸ್ಟ್ರಿಕ್ಟ ಏಜಂಟರಿಂದಾ ನಮೂನೆಯು ಕೊಡಲ್ಪಟ್ಟಿರುತ್ತದೆ.

ಕಾರವಾರ ಅಂಕೋಲಾ ತಾಲೂಕುಗಳಲ್ಲಿ ಸಬ್ ಏಜಂಟ ಜಾಗೆ ಖಾಲಿ ಇರುತ್ತದೆ. ಸದ್ರಿ ಜಾಗೆಗೆ ದರ ತಿಂಗಳಿಗೆ ೩೦ ರೂಪಾಯಿ ಪಗಾರ ಇರುತ್ತದೆ. ಅಪೇಕ್ಷಿಸುವವರು ಈ ಕೆಳಗಿನ ವಿಳಾಸಕ್ಕೆ ಪತ್ರದ್ವಾರವಾಗಲಿ, ಸಮಕ್ಷಮವಾಗಲಿ ಭೆಟ್ಟಿ ಆದಲ್ಲಿ ಸರ್ವವೂ ತಿಳಿಯಬಹುದು.

R. V. HEGDE,
Taluk Inspector,
Kumta, Ankola, Karwar,
A. D. F. CO., LTD. *Mysore.*
Head Office - **KUMTA.**

THE

INDIA PROVIDENT COMPANY LTD:

ESTABLISHED 1910.

Dividend declared 1912	20 per cent.
Dividend declared 1922	30 per cent.

Dividend declared previous year 15-20 per cent

The Safest office for Life Insurance of the poor. Premium Re. 1 or As. 8 per mensem.

Apply at once to:-

PADMANABH GOPAL KAMAT,
Agent, ANKOLA. N. Kanara.

ಕಾನಡಾವೃತ್ತ.

ಮಿತಿ ಶ್ರೀಧನ ಸಂ। ಮಾಘ ಶು। ೯ನೆ, ಸೋಮವಾರ.

ಯುದ್ಧತಂತ್ರಗಳು.

ಜಗತ್ತಿನಲ್ಲಿ ರಣದೇವತೆಯನ್ನು ಸಮಾಧಿಗೊಳಿಸಿ ಶಾಂತಿದೇವಿಯ ಅಧಿಕಾರವನ್ನು ಪುನಃ ಪ್ರಸ್ಥಾಪಿಸುವದಕ್ಕಾಗಿ ರಾಷ್ಟ್ರಸಂಘದ ಅವತಾರವಾಯಿತು. ರಾಷ್ಟ್ರಸಂಘದ ಕಾರ್ಯಸ್ವರೂಪವನ್ನು ನಾವೆಲ್ಲರೂ ಅರಿತದ್ದೇ ಸತ್ಯ. ಕ್ಕೆ ಇದೇ ರಾಷ್ಟ್ರಸಂಘದವರು ಶಸ್ತ್ರಸನ್ಯಾಸ ಪರಿಷತ್ತನ್ನು ಸೇರಿಸಿ, ಸಮಸ್ತ ರಾಷ್ಟ್ರಗಳೊಳಗಿನ ಸೈನ್ಯಖರ್ಚನ್ನೂ, ಸೈನ್ಯ ಬಲವನ್ನೂ ತಗ್ಗಿಸುವ ಆಲೋಚನೆ ಮಾಡಲಿರುವರು. ಇಂಥ ಪರಿಷತ್ತುಗಳು ಬಹುತರವಾಗಿ ಸ್ವಿಝರ್ಲಂಡ ದೇಶದಲ್ಲಿ ಜರುಗುತ್ತವೆ. ಸ್ವಿಝರ್ಲಂಡ ದೇಶದಲ್ಲಿ ಈ ಪರಿಷತ್ತು ಸೇರುವದಾದರೆ, ರಶಿಯಾ ದೇಶದವರು ತಮ್ಮ ಪ್ರತಿನಿಧಿಗಳನ್ನು ಅಲ್ಲಿಗೆ ಕಳಿಸಬಾರದೆಂದು ಈ ಪರಿಷತ್ತಿಗೆ ಹೇಳಿರುವರು. ಸ್ವಿಝರ್ಲಂಡದಲ್ಲಿ ರಶಿಯಾ ದೇಶದ ನಾಗರಿಕರಿಗೆ ಪ್ರತಿಬಂಧವಿದ್ದ ಮೂಲಕ ಆ ರಾಷ್ಟ್ರವು ಮುನಿದಿರುವದೆಂದು ಹೇಳುತ್ತಾರೆ. ಅದೇನೂ ಇರಲಿ ಶಸ್ತ್ರಸನ್ಯಾಸವಾದರೆ, ಹಿಂಸಾವಾದಿಗಳಾದ ಪಾಶ್ಚಾತ್ಯರು ಅಹಿಂಸಾವಾದಿ ಪೌರ್ವಾತ್ಯರಲ್ಲಿ ಸೇರಿಕೊಂಡರೆ, ನಮಗೆ ಆನಂದವೇ; ಭೂತಲಕ್ಕೂ ಸುಖವೇ!

ಆದರೆ, ಸನ್ಯಾಸದೀಕ್ಷೆಯು ಕಪಟವರಿ ಮಾಡುವ ಪಾಶ್ಚಾತ್ಯರು ಇನ್ನೂ ಸನ್ಯಾಸಿಮಾತ್ರರಾಗಲಿಲ್ಲೆಂದು ನಾವು ಹೇಳಬೇಕಾಗಿದೆ. ಸಾಂಸಾರಿಕ ತಾಪತ್ರಯಗಳ ಕಷ್ಟದಿಂದ ಬಳಲುತ್ತಿರುವಾಗ ಮಾನವರು ವೈರಾಗ್ಯಪರರಾಗುವಂತೆ, ನಮ್ಮ ಪಾಶ್ಚಾತ್ಯ ರಾಷ್ಟ್ರಗಳು ಶಾಂತಿ, ಸನ್ಯಾಸ, ಸಮಾಧಾನ, ಇತ್ಯಾದಿ ಸದ್ಗುಣಗಳ ಪ್ರಶಂಸೆ ಮಾಡುತ್ತಿರುವರು. ಯುರೋಪಿಯನ್ ರಾಜಕಾರಣದೊಳಗಿನ [illegible] ಸಲವನ್ನು ನಾವು ಈ ಮೊದಲೇ ಚರ್ಚಿಸಿ, ಸ್ವಾರ್ಥಪರಾಯಣರಾಗಿ ಬ್ರಿಟಿಶರು ರಾಷ್ಟ್ರಸಂಘವನ್ನು ಮುಂದೆ ಮಾಡಿ ತುರ್ಕರನ್ನು ಸುಲಿಯುವ ದುರಾಲೋಚನೆಯ ತಂತ್ರಗಳನ್ನು ಹೇಳಿ, ಅದರಿಂದುಂಟಾದ ಪರಿಸ್ಥಿತಿಯನ್ನು ಬಣ್ಣಿಸಿ, ರಣದೇವತೆಯ ಆವಾಹನದ ತಯಾರಿಯನ್ನು ನಿವೇದಿಸಿರುವೆವು. ನಮ್ಮ ಏಶಿಯಾ ಖಂಡದಲ್ಲೂ ರಣದೇವಿಯ ಸಂಚಾರದ ತಂತ್ರಗಳು ದೃಗ್ಗೋಚರವಾಗಹತ್ತಿವೆ. ರಶಿಯಾ ದೇಶದವರಿಗೂ, ಬ್ರಿಟಿಶರಿಗೂ ಯುದ್ಧವಾಗುವ ದುಶ್ಚಿಹ್ನಗಳು ಆಗಾಗಲೇ ತೋರಿಸಿರುತ್ತವೆ. ಕಲ್ಲಪ್ಪ ಗುಂಡಪ್ಪ ಕೂಡಿ ಮೆಣಸಪ್ಪನ ಹುಡಿ ಮಾಡುವಂತೆ, ಅಫಘಾಣಿಸ್ಥಾನದ ಅಮೀರ ಸಾಹೇಬರಿಗೆ ಒಂದು ಬದಿಯಿಂದ ಬ್ರಿಟಿಶರು, ಇನ್ನೊಂದು ಬದಿಯಿಂದ ರಶಿಯನ್ನರು ಒತ್ತುತ್ತಿರುವರು. ರಶಿಯಾ ದೇಶವು ಪುನಃ ಹಿಂದುಸ್ಥಾನದ ಮೇಲೆ ಕಣ್ಣಿಟ್ಟಿರುವದೋ ಏನೋ!

ತುರ್ಕಸ್ಥಾನ ಹಾಗು ರಶಿಯಾ ದೇಶಗಳೊಳಗೆ ಸಖ್ಯಕ್ಕಾದ ತಹನಾಮೆಯಿಂದ ರಶಿಯಾ ದೇಶಕ್ಕೆ ಏಶಿಯಾ ಖಂಡದಲ್ಲಿ ಕೈಕಾಲು ಚಾಚಲು ಬಹಳ ಅನುಕೂಲವಾಗಿದೆ. ಇರಾಣ ದೇಶದೊಡನೆಯೂ ರಶಿಯಾ ಸರಕಾರವು ಸ್ನೇಹ ಬೆಳಿಸಿ, ದೇಶವನ್ನು ತನಗೆ ಅನುಕೂಲವಾಗಿ ಪರಿಣಮಿಸಿಕೊಳ್ಳಲು ಒದಗಾಡುತ್ತಿದೆ. ಇರಾಣ ದೇಶದಲ್ಲಿ 'ಕಾಜರ' ಮನೆತನದ ಅರಸರು ಪದಚ್ಯುತರಾಗಿ, ಪೆಹಲವಿ ಮನೆತನದ ಯಃಕಶ್ಚಿತ್ ಸಿಪಾಯಿಗಳಾದ ರೇಝಾಖಾನರವರು ಸಿಂಹಾಸನವನ್ನೇರಿದ್ದು ಸಮಸ್ತರಿಗೂ ವಿದಿತವಿದೆ. ರೇಝಾಖಾನರವರು ಇರಾಣ ದೇಶದಲ್ಲಿ ಲೋಕಸಂಗ್ರಹವನ್ನು ಮಾಡಲು ಬಹಳ ಶ್ರಮಿಸುತ್ತಿರುವರು. ಇರಾಣ ದೇಶವು ತಮ್ಮ ಪಟ್ಟಾಧಿಕಾರದಿಂದ ದೊಡ್ಡದೊಂದು ರಾಷ್ಟ್ರವೆಂದು ಖ್ಯಾತಿಗೊಳ್ಳಬೇಕೆಂಬ ಅವರಿಗೆ ಇಚ್ಛೆಯಿದೆ. ರಶಿಯಾ ದೇಶದವರು ರೇಝಾಖಾನರ ಒಲಿಸಿಕೊಳ್ಳುವದಕ್ಕೆ ಅವರ ರಾಯಭಾರಿಗಳಿಗೆ ಮಾಸ್ಕೋ ಪಟ್ಟಣದಲ್ಲಿ ವಿಶೇಷ ಸನ್ಮಾನದಿಂದ ನಡಿಸಿಕೊಳ್ಳುತ್ತಿರುವರು. ರೇಝಾಖಾನರ ಮಹತ್ವಾಕಾಂಕ್ಷೆಯಿಂದ ರಶಿಯಾ ದೇಶವು ಧನ್ಯವೆನಿಸಿಕೊಳ್ಳುತ್ತದೆಂದು ತೋರಿಸಲು, ಉತ್ತರದ ದಿಕ್ಕಿನ ಕ್ಯಾಸ್ಪಿಯನ್ ಸಮುದ್ರದ ಪೇಲಿನ 'ಪಿಕ' ಎಂಬ ಆಮಾರತು ಕಟ್ಟಿಗೆಯ ಗಿಡಗಳನ್ನು ಉಚಿತವಾಗಿ ಇರಾಣ ದೇಶದ ಅರಸರ ಅನುಗ್ರಹದಿಂದ ಪಡಕೊಂಡಿರುವದು. ಈ ಕುರಿತು ಸರಕಾರಿ ಪ್ರಕಟಣೆಯೂ ಜಾಹೀರಾಗಿದೆ. ಇರಾಣದೇಶವೂ, ರಶಿಯಾದೇಶವೂ ಕೂಡಿ ಮುಂದೆ ನಡಕೊಳ್ಳುವ ಪೂರ್ವ ಚಿನ್ಹವಿದು! ರೇಝಾಖಾನರವರು ದೇಶದಲ್ಲೆಲ್ಲ ಉಗಿಬಂಡಿಗಳನ್ನು ರಚಿಸಿ ತಮ್ಮ ಪ್ರಾಬಲ್ಯವನ್ನು ಸ್ಥಿರಗೊಳಿಸಲುದ್ಯುಕ್ತರಾಗಿರುವರು. ೪-೫ ವರುಷಗಳಲ್ಲಿ ಉಗಿಬಂಡಿಯ ಕಾರ್ಯಕ್ರಮವು ಸಂಪೂರ್ಣವಾಗಿ ನೆರವೇರಿದರೆ, ರಶಿಯಾ ದೇಶದ ಸಾನ್ನಿಧ್ಯವು ನಮ್ಮ ಅರಬೀ ಸಮುದ್ರದಲ್ಲಿ ಇಳಿದರೆಯೋ, ಅಷ್ಟು ನೆರೆಹೊರೆಯಲ್ಲಿ ರಶಿಯನ್ನರು ಬ್ರಿಟಿಶರಿಗೆ ಇದಿರಾಗುವರು.

ಇತ್ತ ಅಫಘಾಣಿಸ್ಥಾನದ ಬದಿಗೂ ರಶಿಯನ್ನರು ಸುಮ್ಮನೆ ಕೂತುಕೊಳ್ಳಲಿಲ್ಲ. ಆ ಕಡೆಯಿಂದಲೂ ಅಫಘಾಣಿಸ್ಥಾನವನ್ನು ಒತ್ತಿ ಅಪ್ರತ್ಯಕ್ಷವಾಗಿ ಬ್ರಿಟಿಶರಿಗೂ ಒತ್ತುತ್ತಿರುವರು. ಒಕ್ಸಸ್ ನದಿಮುಖದಲ್ಲಿ ಒಂದು ಚಿಕ್ಕ ದ್ವೀಪವಿದೆ. ಆ ದ್ವೀಪವು ತಮ್ಮದೆಂದು ರಶಿಯಾ ದೇಶದವರು, ತಮ್ಮದೆಂದು ಅಮೀರ ಸಾಹೇಬರು ಪರಂಪರೆಯಿಂದ ವಾದಿಸುತ್ತಿರುವರು. ಇತ್ತ ಈ ದ್ವೀಪವು ಅಮೀರ ಸಾಹೇಬರ ಸ್ವಾಧೀನದಲ್ಲಿತ್ತು. ಸದ್ಯಕ್ಕೆ ರಶಿಯಾ ದೇಶದವರು ಅಲ್ಲಿ ಸಾಗಿಹೋಗಿ ದ್ವೀಪಾಧಿಕಾರಿಯ ಕೊಲೆ ಮಾಡಿ, ಅದನ್ನು ತಮ್ಮ ಕೈವಶ ಮಾಡಿಕೊಂಡರು. ಅಮೀರರು ರೇಗಿಗೆದ್ದು, ತಮ್ಮ ವಿಮಾನ ಖಾತೆಯೊಳಗಿನ ರಶಿಯಾ ದೇಶದ ನಾಗರಿಕ ನೌಕರರನ್ನೆಲ್ಲ ಪದಭ್ರಷ್ಟಮಾಡಿ, ತಮ್ಮ ಸೇಡು ತೀರಿಸಿಕೊಂಡರು. ಇದಲ್ಲದೆ, ಅಫಘಾಣಿಸ್ಥಾನದ ಉತ್ತರ ಮೇರೆಯ ವರೆಗೆ 'ಬುಖಾರಾ ಸಮರಕಂದ' ಉಗಿಬಂಡಿಯು ನಡೆಯುತ್ತಿದ್ದು, ಅದರಿಂದ ಅಫಘಾಣಿಸ್ಥಾನದ ಉತ್ತರ ಬದಿಯು ಸರಕೆಲ್ಲ ರಶಿಯಾ ದೇಶಕ್ಕೆ ಸಾಗಿಹೋಗುತ್ತದೆ. ಹಿಂದುಸ್ಥಾನದ ಬದಿಯಿಂದಲೂ ಬ್ರಿಟಿಶರು ಅಫಘಾಣಿಸ್ಥಾನದಲ್ಲಿ ಚಂಚುಪ್ರವೇಶ ಮಾಡಲು ಪ್ರಾರಂಭಿಸಿರುವರು. 'ಖೈಬರ' ಉಗಿಬಂಡಿಯಿಂದ ಅಫಘಾಣಿಸ್ಥಾನದಲ್ಲಿ ಬ್ರಿಟಿಶರ ಪ್ರಸ್ಥಾಪನೆಯಾಗುತ್ತಲಿದೆ. ಬ್ರಿಟಿಶರ ಹಾಗು ರಶಿಯನ್ನರ ದುರಾಶೆಯಲ್ಲಿ ತ್ರಯಸ್ಥರಾದ ಮೆಣಸಪ್ಪ ಅಮೀರ ಸಾಹೇಬರ ಪುಡಿಯಾಗುತ್ತಲಿವೆ.

ಇತ್ತ ಜಪಾನ ದೇಶಕ್ಕೂ ನಮ್ಮ ಬ್ರಿಟಿಶರಿಗೂ ವಿತುಷ್ಟವಾಗಲಿಕ್ಕಿದೆ! ಹಿಂದುಸ್ಥಾನದಿಂದ ಜಪಾನದಲ್ಲಿ ಆಮದಾಗುವ 'ಪಿಗ್ ಆಯರ್ನ' ಯಾನೆ ಕಬ್ಬಿಣದ ಕಂಬಿಗಳ ಮೇಲೆ ಜಪಾನದವರು ೭ ಪಟ್ಟು ಸುಂಕವನ್ನೇರಿಸಿರುವರು. ಹಿಂದುಸ್ಥಾನ ಸರಕಾರದವರು ಜಪಾನದಿಂದ ಆಮದಾಗುವ ಅರಿವೆ-ಅಂಚಡಿಗಳ ಮೇಲೆ ಸುಂಕವನ್ನೇರಿಸಿ ಇದಕ್ಕೆ ಪ್ರತ್ಯುತ್ತರವನ್ನೀಯಬೇಕಾಗಿ ಬ್ರಿಟಿಶರ ಹೇಳಿಕೆಯಿದೆ. ಇದೇನು ಭಾರತೀಯರ ಹಿತಕ್ಕಾಗಿ ಎಬ್ಬಿಸಿದ ಹುಯಿಲಿಯಲ್ಲ. ಜಪಾನ ದೇಶದ ಅರಿವೆಯ ಆಮದಿಗೆ ಪುಟ ದೊರಕುವದೆಂದು, ದೀರ್ಘ ವಿಚಾರದಿಂದ ಸ್ವಾರ್ಥಪರಾಯಣ ಬ್ರಿಟಿಶರು ಜಪಾನ ದೇಶದ ಮೇಲೆ ಭಾರತೀಯರ ಪಕ್ಷಪಾತಿಯಾಗಿ ಹುಬ್ಬುಗಂಟಿಕ್ಕುತ್ತಿರುವರು. ಚೀನ ದೇಶದೊಳಗಿನ ಬ್ರಿಟಿಶರ ವ್ಯಾಪಾರವು ರಶಿಯಾ ದೇಶದವರ ಸ್ವಾಧೀನವಾಗುತ್ತಿರುವಾಗ, ಈ ಹೊಳಿಗೆ ವಿಶೇಷ ಪ್ರಾಧಾನ್ಯ ದೊರೆತು, ಬ್ರಿಟಿಶ-ಜಪಾನರೊಳಗೆ ವಿತುಷ್ಟವಾದರೆ, ಏಶಿಯಾ ಖಂಡದೊಳಗಿನ ವಾತಾವರಣವು ಮತ್ತೂ ಪ್ರಕ್ಷುಬ್ಧವಾಗುವದು.

ಈ ವಿವರಣೆಯಿಂದ ಶಸ್ತ್ರಸನ್ಯಾಸದೀಕ್ಷೆಯನ್ನು ಪಡೆಯಲಿಚ್ಛಿಸುವ ಪಾಶ್ಚಾತ್ಯ ಶಾಂತಿಬ್ರಹ್ಮರ ಕುತಂತ್ರಗಳ ನಿಜರೂಪವು ಪ್ರಕಟವಾಗಹತ್ತಿದೆ. ಎಲ್ಲರಿಗೂ ಶಾಂತಿ ಬೇಕು; ಸೈನ್ಯ ಖರ್ಚು ಬೇಡ; ಸೈನ್ಯ ಬಲಬೇಡ; ದುರ್ಬ-

ಬರಿಗೂ, ಸಕಲರಿಗೂ ಶಾಂತತೆಯಿಂದಲೂ, ಅಂತರಂಗದಿಂದಲೂ, ಕಾರಸ್ಥಾನಗಳಿಂದಲೂ, ಶಿವಿ ವಡಾಕ.ಗಳಿಂದಲೂ, ಪರರನ್ನು ವಂಚಿಸಿ, ಸ್ವಸಾಮ್ರಾಜ್ಯವನ್ನೂ, ಸ್ವಾರ್ಥಸಂರಕ್ಷಣೆಯನ್ನೂ ಬೆಳೆಸುವ ಸುಲಭ ಉಪಾಯ ಬೇಕು. ಯುದ್ಧದ ಜಯವಾಸ ಗೆದೆಯಿಂದ ಯುದ್ಧ ದ್ಯಸ್ತ್ರಿಯ ಪ್ರಸಂಗಗಳೂ, ಅಧಿಕಾರವೂ, ದ್ರವ್ಯವೂ ಬೇಕು. ಕೃಷ್ಣಸನ್ಯಾಸದ ವೇದಾಂತವಾಗಲಿ, ಶಾಂತಿ ವಾದವಾಗಲಿ, ವೈರಾಗ್ಯದ ದ್ಯೋತಕವೆಂದು ನಾವು ಎಣಿಸಿ, ಪಾಶ್ಚಾತ್ಯರಿಗೆ ಪಶ್ಚಾತ್ತಾಪವಾಗಿದೆಂದು ಗ್ರಹಿಸಿದರೆ, ಅದೊಂದು ದೊಡ್ಡ ತಪ್ಪುವಂಚನೆಯಾಗುವದು. ಪಶ್ಚಿಮಕ್ಕೆ ಯಾರಿಗೂ ಯುದ್ಧ ಬೇಡ. ಕಾರಣವೇನು! ಯುದ್ಧದಿಂದ ಕಷ್ಟಗಳೊದಗುತ್ತವೆ; ಖರ್ಚು ವಿಶೇಷ ತಗಲುತ್ತದೆ; ಪ್ರಜೆಗಳಲ್ಲಿಯೂ ಅಸಂತೋಷವುಂಟಾಗುತ್ತದೆ. ಆದರಿಂದ ಶಾಂತಿಮಂತ್ರಗಳನ್ನು ಪಾಶ್ಚಾತ್ಯರು ಬಾಯಿಯಿಂದ ಹಾಡುತ್ತಿರುವರು. ಸಂಕ್ಷಿಪ್ತವಾಗಿ ಹೇಳಬೇಕಾದರೆ, ಸಾಂಸಾರಿಕ ಕಷ್ಟಗಳ ಗೊಡವೆಯಿಲ್ಲದ, ಸಾಂಸಾರಿಕ ಸುಖಗಳ ಸನ್ಯಾಸವು ನಮ್ಮ ಪಾಶ್ಚಾತ್ಯರಿಗೆ ಬೇಕಾಗಿರುವದು. ಅದೆಂದಾದರೂ ಸಾಧ್ಯವೇ! ಒಂದಾನೊಂದು ದಿನ ಬಾಯಿಯ ಕಾರಸ್ಥಾನಗಳು ಸ್ಫೋಟವಾಗಿ, ರುದ್ರದೇವಿಯು ತನ್ನ ಭಯಂಕರ ಅವತಾರವನ್ನು ಭೂಮಂಡಲದಲ್ಲೆಲ್ಲ ಪ್ರಕಟಿಸಿ ಅನರ್ಥ ಪರಂಪರೆಯನ್ನುಂಟು ಮಾಡದಿರದು.

ಸ್ಫುಟ ಸೂಚನೆಗಳು.

೧. ಪೋಲಂಡ್ ಯುಕ್ತಿಯು ಮತ್ತೆ ಬಿಗಿಯಾಗುತ್ತ ನಡೆದಿದೆ. ಪೋಲರು ಯುಗೋಸ್ಲಾವಿಯಾ ರಾಷ್ಟ್ರದೊಡನೆ ಸ್ನೇಹ ಬೆಳೆಸಿರುವರು. ಕಳೆದ ಡಿಸೆಂಬರ ತಿಂಗಳಿನ ಕೊನೆಯ ವಾರದಲ್ಲಿ ಪೋಲರ ಪ್ರತಿನಿಧಿಗಳಾದ ಮುಸ್ಸಿಯೇಯವರು ಪ್ಯಾರಿಸದಿಂದ ಬಂಗಾಲ ರಾಜ್ಯಕ್ಕೆ ಹೋಗುವಾಗ, ಬೆಲ್‌ಗ್ರೇಡದಲ್ಲಿ ಇಳಿದು, ಅಲ್ಲಿಯ ರಾಜಕಾರಣ ಧುರಂಧರರೊಡನೆ ಗೌಪ್ಯವಿಂದ ಮಾತುಕತೆ ನಡೆಸಿದರು. ಯುಗೋಸ್ಲಾವಿಯಾ ರಾಷ್ಟ್ರವು ಪೋಲೆಂಡಿನೊಡನೆ ಮಾಡಿದ ಕರಾರು ಮೊದಲು ಅಲ್ಲಿಗೇ ಬಂದಿದೆ. ಇತ್ತೀಚೆಗೆ ಮಂಚೂರಿಯಾಗಿ ಪೋಲರಿಗೆ ಬಂಟತನಕ್ಕೆ ನೆರವಾಗಲು ಯುಗೋಸ್ಲಾವಿಯಾ ರಾಷ್ಟ್ರವು ಬದ್ಧಕಂಕಣವಾಗಿರುವದು. ಬಲ್ಗೇರಿಯಾ ದೇಶದೊಡನೆಯೂ ಪೋಲರು ಹಿಂದಿನ ಕರಾರುಗಳನ್ನು ವಿಸ್ತರಿಸಿದ್ದರು. ಆದರೆ, ಬ್ರಿಟಿಶ ಮುತ್ಸದ್ದಿಗಳ ದುರಾಲೋಚನೆಗೆ ಬಲಿಬಿದ್ದು ಕರಾರುಗಳನ್ನು ಅವರು ಮುರಿದರು. ಪೋಲರಿಗೆ ನೆರೆಯ ಯುಗೋಸ್ಲಾವಿಯಾದವರು ಗೆಳೆಯರಾದರೆ, ನೆರೆಯ ಬಲ್ಗೇರಿಯಾ ದೇಶವೂ, ಗ್ರೀಕ ದೇಶವೂ ಶತ್ರುಗಳಾಗಿರುವರು. ಬಾಲ್ಕನ್ ಪ್ರದೇಶದ ಸ್ಥಿತಿಯಿದು.

೨. ಹಿಂದೂಸ್ಥಾನದಲ್ಲಿ ಪೋಲಂಡ್ ಪ್ರಕರಣದ ಕುರಿತು ಪ್ರಶ್ನೆ ಯುದ್ಧಸಿದ್ಧತೆಯು ಪ್ರಾರಂಭವಾಗಿದ್ದರೂ, ರಾಜಕಾರಣಿಗಳೂ, ಸೈನ್ಯಾಧಿಕಾರಿಗಳೂ ತಮ್ಮ ತಮ್ಮಲ್ಲಿಯೇ ಗುಪ್ತ ಆಲೋಚನೆಗಳನ್ನು ನಡೆಸುತ್ತಿರುವರು. ಡಿಸೆಂಬರ ತಿಂಗಳಿನ ಕೊನೆಯ ವಾರದಲ್ಲಿ ಯುದ್ಧಕೊಳ್ಳುವ ಸಭೆಸೇರಿತ್ತು. ಪ್ರಾಂತಿಕ ಕಾರ್ಯಕರ್ತರು ಸಭೆಯನ್ನುದ್ದೇಶಿಸಿದ್ದರು. ಪೋಲಂಡ್ ಪ್ರದೇಶದ ಕುರಿತು ಸಂಬಂಧಪಟ್ಟ ಹಿಂದೂಸ್ಥಾನದ ಪ್ರತಿನಿಧಿಗಳಾದ ಜನರಲ್ ಬೇರೆ ಬೇರೆ ಅಧಿಕಾರಿಗಳೂ ಹಾಜರಿದ್ದರು. ಈ ಸಭೆಯು ತೀರ ಗುಪ್ತವಾಗಿದ್ದರೂ, ಪೋಲಂಡ್ ಪ್ರಶ್ನೆಯ ಕುರಿತು ಸೈನ್ಯ ತಯಾರಿಯ ಆಲೋಚನೆಯಾಗಿರಬಹುದೆಂದು ಬಲ್ಲವರು ತರ್ಕಿಸುತ್ತಾರೆ. ಬ್ರಿಟಿಶರೊಡನೆ ಸಹಕಾರವಿರುವದರಿಂದ ಈ ಪ್ರಶ್ನೆಯನ್ನು ನಿರ್ಣಯಿಸಿಕೊಳ್ಳಲಿಕ್ಕೆ ಪೋಲರು ತಯಾರಿದ್ದಾರೆ. ಆದರೆ, ರಾಷ್ಟ್ರಸಂಘದವರು ಈ ಸುಲಭ ಕೆಲಸವನ್ನು ಮಾಡಗೊಡಲು ಒಪ್ಪುವರೇ, ಪುನಃ ಇದೇ ಪ್ರಶ್ನೆಯನ್ನು ವಿಚಾರಿಸ ತೊಡಗಿದರೆ ಪೂರ್ತಿ, ತಿರುಗಿ ಒಪ್ಪಂದದ ಮಾತುಗಳು ನಿಲ್ಲುವವೆಂದು ಅಲ್ಲಿಯ ಮುತ್ಸದ್ದಿಗಳ ಅಭಿಪ್ರಾಯವಿದೆ. ಹಿಂದೂಸ್ಥಾನದೊಳಗಿನ ಪ್ರಜಾ ಪ್ರತಿನಿಧಿ ಸಭೆಯು ಪೋಲರನ್ನು ಸೇರಿಸಿಕೊಂಡು, ಆಗಲೋ ಈಗಲೋ ರಾಷ್ಟ್ರಸಂಘದ ಪ್ರತಿನಿಧಿಯು ಹೇಳಿಕೆಯನ್ನು ಕೇಳಿ ಕಲಹಕ್ಕೆ ಮುಂದಾಗಿ ಅನುಮತಿಸುವದು. ಆದರೂ ಪೋಲರು ಸ್ವಾರ್ಥವನ್ನು ತೊರೆಯಲಿ ತ್ಯಾಗಲಿ, ಪೋಲಂಡ್ ಪ್ರದೇಶದ ನಿರ್ಣಯವನ್ನು ಶಾಂತಿಯಿಂದ ರಾಷ್ಟ್ರದವರ ದುರಾಲೋಚನೆಯಿಂತಕ್ಕೆ ಒಪ್ಪಿಕೊಂಡು ಹಿಂಸಾ ಅಹಿಂಸೆಗಳೆರಡರಿಂದಲೂ ಗಲಿ ಜಯಸಾಧಿಸಿ. ಈ ವಿಷಯ ಹಿಂದೆ.

೩. ಶ್ರೀ| ಜಯಕರ-ಕೇಳಕರರವರ ಪ್ರತಿಯೋಗಿ ಸಹಕಾರಿತೆಯು ಕುರಿತು ವಿಶೇಷ ಬೆಳವಣಿಗೆ. ಶ್ರೀ| ಜಯಕರರವರ ಸ್ವಾರ್ಥಿಕ ಕಾರ್ಯದ ಕೌನ್ಸಿಲಿನೊಳಗಿನ ಅಧಿಕಾರಾಪೇಕ್ಷಿತ ಬಿರುದಾವಳಿಗಳೇ ಕೇಳಿಕರ ಪಕ್ಷದವರು ಯಾರೂ ನಿಲ್ಲಲಿಲ್ಲ. ಸ್ವರಾಜ್ಯಪಕ್ಷದ ತರ್ಫೆನಿಂದ ಡಾ| ಗೋಪಾಳರಾವ ದೇಶಮುಖರವರೂ, ನೇಮುಸ್ತರ ತರ್ಫೆನಿಂದ ಡಾ| ರಘುನಾಥರಾವ ಪರಾಂಜಪೆಯವರೂ ಉಮೇದವಾರರಾಗಿ ನಿಂತರೆ, ಪ್ರತಿಯೋಗಿ ಸಹಕಾರಿಯು ಪುಣೆಸ್ಥಾನದ ಮರಾಠಿ ಪ್ರಮುಖ ದೈನಿಕದ "ಕೇಸರಿ" ಪತ್ರಿಕೆಯು ಪ್ರತಿಯೋಗಿ ಸಹಕಾರಿಗಳ ಸ್ವಾಭಾವಿಕ ಸಹಾಯವನ್ನು ಬೋಧಿಸಿದೆ. ಹಿಂದೆ ಅಸಹಯೋಗಿಗಳು ಕೌನ್ಸಿಲು ಬಹಿಷ್ಕಾರವನ್ನು ಆಶ್ರಯಿಸಿ, ಕೌನ್ಸಿಲು ಪ್ರವೇಶವನ್ನು ಅಂಗೀಕರಿಸಲು ಮುಂದಾದರೆ ದೊರೆ ಧಿಸಿದಾಗ ಹಳದ "ಕೇಸರಿ" ಪತ್ರಿಕೆಯೇ ಆಗ ಮತ ಪ್ರವಾಹವನ್ನು ಬದಲಿಸುವ ಕೆಲಸವು ನಿಜವಾಗಿ ಕೊಡಬೇಕೆಯಷ್ಟು "ಕೇಸರಿ" ಯು ಕೊಟ್ಟ ಕಾರಣ ವಂತೂ ತೀರ ಹಾಸ್ಯಾಸ್ಪದವಿದೆ; ಅಪ್ರಯೋಜಕವಿದೆ. ದೇಶಮುಖ-ಪರಾಂಜಪೆಯವರ ಕಾದಾಟದಲ್ಲಿ ದೇಶಮುಖರು ವಿಜಯಿಯಾದರೆ ಪ್ರತಿಯೋಗಿ ಸಹಕಾರಿಗಳ ಅವಮಾನವೆಂದು 'ಕೇಸರಿ' ಯು ಅಂದುಕೊಂಡಿದೆ! ಪ್ರತಿಯೋಗಿ ಸಹಕಾರಿಗಳ ಉಮೇದವಾರರ ಅಭಾವದಲ್ಲಿ 'ಕೇಸರಿ'ಯು ತನ್ನ ನಿರ್ಧಾರವಿಂದ ದೆಂದು ಯಾರೂ ಹೇಳುವರು; ಯಾಕೆಂದರೆ, ಈ ಕಾದಾಟದಲ್ಲಿ ಹಿಟ್ಟರು ಯ.ತಸ್ವಿಯಾಗುವದೇ ಕೂ ನಿಜ. ಡಾ| ಗೋಪಾಳರಾಯರು ಜಯಸಿದರೆ ಪ್ರತಿಯೋಗಿ ಸಹಕಾರಿಗಳ ಸೋಲೆಂದರೆ, ಡಾ| ಪರಾಂಜಪೆಯವರು ಗೆದ್ದರೆ, ಪ್ರತಿಯೋಗಿ ಸಹಕಾರಿಗಳು ಗೆಲ್ಲುತ್ತಾರೆಂದು 'ಕೇಸರಿ' ಯ ಅಂದೋಣವಿದು ವದೆಯು! ಪರಾಂಜಪೆಯವರು ಗೆದ್ದರೆ, ಮೇಯುಕ್ತರು ಗೆದ್ದರು; ರಾಷ್ಟ್ರೀಯ ಸಭೆಯವರು ಸೋತರು. ಯಾಕೆಂದರೆ, ಡಾ| ಗೋಪಾಳರಾಯರು ಪ್ರತಿಯೋಗಿ ಸಹಕಾರಿಗಳಲ್ಲವಿದ್ದರೂ, ರಾಷ್ಟ್ರೀಯ ಸಭೆಯ ಅನುಯಾಯಿಗಳೇ; ಪ್ರತಿಯೋಗಿ ಸಹಕಾರಿಗಳಾದರೂ ರಾಷ್ಟ್ರೀಯ ಸಭಾನುಯಾಯಿಗಳು. ರಾಷ್ಟ್ರೀಯ ಸಭೆಯ ಪ್ರತಿಷ್ಠೆಯು ಕುಗ್ಗಿದರೆ, ಪ್ರತಿಯೋಗಿ, ಸಹಕಾರಿಗಳ ಪ್ರತಿಷ್ಠೆಯು ಕುಗ್ಗಿದಂತಾಗುವದೆಂದು 'ಕೇಸರಿ'ಗೆ ಯಾಕೆ ತಿಳಿಯುವದಿಲ್ಲ? ಅಥವಾ ತಿಳಿದರೂ, 'ನೆಹರೂ ರಿಪೋರ್ಟ' (ಪ್ರತಿಯೋಗಿ ಸಹಕಾರಿಗಳಲ್ಲವ ಸ್ವರಾಜ್ಯ ಪಕ್ಷದವರೇ ಕೇಳಿದಂಥ ಇಷ್ಟ ಹೆಚ್ಚಿದ.!) ದವರ ದ್ವೇಷಭಾವದಿಂದ 'ಕೇಸರಿ'ಯು ಈ ಮಾರ್ಗವನ್ನು ಅವಲಂಬಿಸಿರುವದೇನು? ಪ್ರತಿಯೋಗಿ ಸಹಕಾರಿಗಳ ಪ್ರಮುಖರಾದ ಶ್ರೀ| ಜಯಕರರವರೇ ಗಾಳಿಯವರು 'ಕೇಸರಿ'ಯು ಈ ವಿಧಾನಗಳನ್ನು ನಿಷೇಧಿಸಿ, ಈ ರೀತಿ ಉದ್ದೇಶ ಮಾಡುವದು ಅಪ್ರಯೋಜಕವೆಂದು ಬರೆದಿದ್ದು ನಮಗೆ ತಿಳಿದಿದೆ. ವಿಶ್ವವಿದ್ಯಾಲಯದ ಮತದಾರರು ಸ್ವತಂತ್ರ ವಿಚಾರದವರು, 'ಕೇಸರಿ' ಪತ್ರಿಕೆಯ ಮಾತಿನಂತೆ ನಡೆಯಲಾರರೆಂದು ನಾವು ನೆರೆ ನಂಬಿರುವೆವು.

೪. ರಾಜಕೀಯ ಅಪರಾಧಗಳ ಮೂಲಕ ವಿದೇಶವಾಗದೆ ಬೇರೆ ದೇಶದಲ್ಲಿ ನರಳುವವರಿಗೆ ಹಿಂದುಸ್ಥಾನ ಸರಕಾರವು ಬಿನ್‌ಶರ್ತ ಬಿಡುಗಡೆ ಮಾಡದೆ ಬೇರೆಯದೂ, ಈ ಕಾಲ ಹಸ್ತಾಂತರ ಮಾಡಿದವರಿಗೂ ಪುನಃ ಸ್ವದೇಶಕ್ಕೆ ಬರಗೊಡದೇನೆಂದೂ ವರಿಷ್ಠ ಶಾಸನ ಕೌನ್ಸಿಲಿನಲ್ಲಿ ಶ್ರೀ| ಗೋಸ್ವಾಮಿ ಹಾಗು ಮಿ| ಅ ಹಮ್ಮದ ಸಭೆಯ ಸಂಬಂಧಿ ನಿರ್ಣಯ ಮಂಡಿಸಿದರು. ಈ ಠರಾವುಗಳನ್ನು ಸರಕಾರದ ತರ್ಫೆನಿಂದ ಸರ್ ಅಲೆಕ್ಝಾಂಡರ ಮುಡಿಮನ್‌ರವರು ವಿರೋಧಿಸಿದರು. "ವ್ಯಕ್ತಿಗಳ ವಿಚಾರ ಮಾತ್ರ ಇದಿದ್ದರೆ, ಕೊಡತೆಯಾಗಲಿ; ನಾವು ವಿಚಾರ ಮಾಡುತ್ತೇವೆ. ಆದರೆ ಸಾಮಾನ್ಯ ನಾಗರಿಕರ ಭದ್ರತೆಯನ್ನು ಕುಗ್ಗಿಸುವಂಥ ನಿರ್ಣಯಗಳನ್ನು ನಾವು ಸ್ವೀಕರಿಸಲಾರೆವು," ಎಂದು ಹೇಳಿ ಮುಡಿಮನ್‌ರವರು ವಾದಿಸಿದರು; ಇದರಿಂದ, ಠರಾವು ಮಂಜೂರಾಯಿತು. ಆದರೆ, ಸರಕಾರವು ತನ್ನ ನಾಗರಿಕರಿಗೆ ಕಾಯಿದೆಯಿಂದ ದಂಡಿಸುವದನ್ನು ಬಿಟ್ಟು, ವಿಚಾರವಿಲ್ಲದೆ ಸೆರೆಯಲ್ಲಿಡುವದೂ, ಆ ಕುರಿತು ಪ್ರಶಂಸೆಯಾದಾಗ ವ್ಯಕ್ತಿಗಳ ಸೂಚನೆಯಲ್ಲಿ ವಿಚಾರ ಮಾಡುತ್ತೇವೆಂದು ಹೇಳುವದೂ ವಿಚಾರ ಸರಕಾರಕ್ಕೆ ಅನುಚಿತವು; ಅದರ, ಈ ಪರಂಪರೆಯು ಅಧರಕರ ರಾಜ್ಯಪದ್ಧತಿಗೆ ಅನುರೋಧವಾಗಿರುವದರಿಂದ ಈ ಕುರಿತು ವಿಶೇಷ ನಿಷೇಧಿಸಿ ಪ್ರಯೋಜನವಿಲ್ಲ. ವರಿಷ್ಠ ಶಾಸನ ಕೌನ್ಸಿಲಿನ ತೀರ್ಮಾನಗಳಿಗೆ ಸರಕಾರವು ಎಷ್ಟು ಮಾನ್ಯತೆ ಕೊಡುತ್ತದೆಂಬದು ಮಾತ್ರ ಇಂಥ ಉದಾಹರಣೆಗಳಿಂದ ಸ್ಪಷ್ಟವಾಗುತ್ತದೆ.

೫. ಪ್ರಾಂತಾಧಿಪತಿಗಳಾಗಿದ್ದ ಸರ್ ಜೋಸೆಫ ಲೆಮ್ಯುರವರು ದೊಡ್ಡ ದೊಡ್ಡ ಜಾಹೀರನಾಮೆಗಳನ್ನು ಪ್ರಕಟಿಸಿ ಮುಂಬಯಿಪುರಿಯನ್ನು ವಿಸ್ತರಿಸಿ ಅಭಿರಾಮ ಪಟ್ಟಣವನ್ನು ರಚಿಸುವೆನೆಂದಾಗಿಯೂ, ಈ ಯೋಜನೆಯಿಂದ ಸರಕಾರಕ್ಕೆ ಲಾಭವಾಗುವದಾಗಿಯೂ, ಪ್ರಜೆಗಳಿಗೂ ಹಿತವಾಗುವದಾಗಿಯೂ ಕಪಟ ನಾಟಕ ನಡಿಸಿ, ಕೋಟ್ಯಾವಧಿ ರೂಪಾಯಿಗಳ ಹೊರೆಯನ್ನು

ಕ್ಕಾಂತಾಧಿಪರ ಕಾರ್ಯಕರ್ತೃ ವ್ಯಾಗಿದರೂ, ಯೋಜನೆ ರು ಗಿರುವ ಸುಚಿನ್ಹಗಳು ಕಾಣುವದಿಲ್ಲ. ಈ ವರೆಗೆ [illegible] ಸರಕಾರಕ್ಕೆ, ಅಂದರೆ, ಪ್ರಜೆಗಳಿಗೆ [illegible] ಲಾಭವಿಲ್ಲ; ಈ ಯೋಜನೆಯ ಅಂದಾಜು ಮೊಟ್ಟಮೊದಲು ಸರ್ ಜಾರ್ಜ ಬುಚಾನನ್‌ರವರಿಂದ ಮಾಡಲ್ಪಟ್ಟಿತು. ಮೂಲ ಅಂದಾಜು ೩ ಕೋಟಿ, ೬೭ ಲಕ್ಷ ೬೧ ಸಾವಿರದ್ದಿತ್ತು. ಈ ಅಂದಾಜಿನಂತೆ ೨॥ ಕೋಟಿ ಘನ ಗಜ ಮಣ್ಣು ತುಂಬಬೇಕಾಗಿತ್ತು. ಪ್ರತಿದಿನಕ್ಕೆ ೧೫ ತಾಸಿನಂತೆ, ವರುಷದಲ್ಲಿ ೧೭೦ ದಿನ ಮಣ್ಣು ತುಂಬಹತ್ತಿದರೆ, ೫ ವರುಷದಲ್ಲಿ ಮುಂಬಾಪುರಿಯು ವಿಸ್ತಾರವಾಗುವದೆಂದು ಸರ್ ಜಾರ್ಜ ಬುಚಾನನ್‌ರವರ ಅಂದಾಜು; ಆದರೆ ಮುತ್ತಾಯದ ಅಂದಾಜು ಮಾಡಿದರು. ೩ ಕೋಟಿ ಘನ ಗಜ ಮಣ್ಣು ತುಂಬಬೇಕಾಗುವದೆಂದೂ, ೬ ವರುಷಗಳು ತಗಲುವವೆಂದೂ, ೮ ಮಾನದಿಂದ [illegible] ಬೆಳೆಯುವದೆಂದೂ ಅಂದಾಜು ಮಾಡಿದರು. ಮುಂಬಾಪುರಿಯ ವಿಸ್ತಾರ ಖಾತೆಯು ಸಿವಾರ್ಡ [illegible] ನಂತರ, ಯೋಜನೆಯ [illegible] ಅಂದಾಜು ಬಿಟ್ಟು, ಸ್ವಸ್ಥ [illegible] ಗಳಿಗೆ ಶುರುವಾಯಿತು. ಆಗ ೭ ಕೋಟಿ, ೬ ಲಕ್ಷ ೪೩ ಸಾವಿರ ರೂಪಾಯಿಗಳು ತಗಲುವವೆಂದು [illegible] ಅಂಕೆ ಕಿಬ್ಬವಾಯಿತು. ಇದೊಂದು [illegible] ನಮುಂತನ ಜಾಲವೆಂದು ಯೋಜನೆಯ ಸ್ವರೂಪ ಬಲ್ಲವರು ಈ ಕುರಿತ ಚರ್ಚೆ ಮಾಡಿ, ಇದೊಂದು ಬಿಳಿ ಆನೆಯೆಂದು ಸಂಬೋಧಿಸಿದರೂ, ನಮ್ಮ ಮುಂಬಯಿ ಸರಕಾರದವರು ಅದಕ್ಕೆ ಲಕ್ಷ್ಯಗೊಡದೆ ಯೋಜನೆಯನ್ನು ಮುಂದುವರಿಸಹತ್ತಿದರು. ಪ್ರಜೆಗಳ ವಿರೋಧವು ಜೋರಿನಿಂದ ನಡೆಯಲು, ಒಂದು ಚಿಕ್ಕ ಕಮಿಟಿ ಮುಂದಲವು ನೇಮಿಸಲ್ಪಟ್ಟಿತು. ಈ ಮಂಡಳದ ಮೂರು ಸಭಾಸದರು ಇದರಿಂದ ನಷ್ಟವಾಗುವದೆಂದು ಅಭಿಪ್ರಾಯಪಟ್ಟಾಗ್ಯೂ, ಕೆಲ ಮಟ್ಟಿಗೆ ಹಿಡಿದ ಕೆಲಸವನ್ನು ಮುಗಿಸಹೇಳಿದರು. ಇದೇ ಯೋಜನೆಯನ್ನು ಮುಗಿಸುವದಾದರೆ, ಇನ್ನು ೨೦ ವರ್ಷಗಳು ಬೇಕೆಂದೂ, ಅದಕ್ಕೆ ೧೧ ಕೋಟಿ ರೂಪಾಯಿಗಳು ತಗಲುವವೆಂದೂ, ಇದ್ದಾಗಿಯೂ ಸರಕಾರಕ್ಕೆ ನಷ್ಟವಾಗುವದೆಂದೂ ತ್ರಿಕೂಟದವರ ಅಭಿಪ್ರಾಯವಾಗಿದೆ. ಆದೇ ಸಭಾಸದರಾದ ಶ್ರೀ [illegible] ಕುಞರದವರ. ಇದೇ ಯೋಜನೆಯನ್ನೇ ಈಗಿಂದೀಗ ಅಲ್ಲಿಂದಲ್ಲೇ ನಿಲ್ಲಿಸಿ ಬೇಕೆಂದೂ, ಇಷ್ಟು ಅಪವ್ಯಯದಿಂದ ಈ ಯೋಜನೆಯನ್ನು ಕೈಕೊಂಡ ಅಧಿಕಾರಿಗಳ ನಡತೆಯ ಕುರಿತು ಚೌಕಸಿಯಾಗಬೇಕೆಂದೂ ಅವರ ಅಭಿಪ್ರಾಯವಾಗಿದೆ. ಈ ವರದಿಯನ್ನು ಸರಕಾರವು ಇನ್ನೂ ಪ್ರಕಟಿಸಿರುವದಿಲ್ಲ "ಮುಂಬಯಿ ಕ್ರಾನಿಕಲ್" ಪತ್ರಿಕೆಯ ಸಾಹಸಿಗ ಸಂಪಾದಕರಾದ ಮಿ| ಹೊರ್ನಿಮನ್‌ರವರು, ಸರಕಾರವು ಕೈಕೊಂಡ ಈ ಅನಿಷ್ಟ ಯೋಜನೆಯ ಸ್ವರೂಪವನ್ನು ಅರುಹಿ, ಲೋಕದುರ್ಭಾಗ್ಯತೆ ಪಾಂಡಿತ್ಯ ಮುಂದಾಗಿ ಪ್ರಕಟಿಸಿ, ಲೋಕಸೇವೆ ಮಾಡಿದ ಬಗ್ಗೆ ನಾವೆಲ್ಲರೂ ಅವರಿಗೆ ಕೃತಜ್ಞತಾಪೂರ್ವಕವಾಗಿ ಅಭಿನಂದಿಸುವೆವು. 'ಮುಂಬಯಿ ಕ್ರಾನಿಕಲ್' ಪತ್ರಿಕೆಯಲ್ಲಿ ಈ ರಿಪೋರ್ಟ ಪ್ರಸಿದ್ಧವಾದ್ದರಿಂದ ಇತರ ಪತ್ರಿಕಾಕಾರರೂ ನಮ್ಮ ಪ್ರಾಂತಿಕ ಸರಕಾರವು ದಿಗಿಲು ಬಿದ್ದಿವೆ, ಮುಂತಾದ ಚಮತ್ಕಾರಗಳು ಸಂಭವಿಸಿರುವವು!

---

೩. ಇಲ್ಲಿಯ ನಾಗರಿಕರಾದ ಡಾ| ರಾಮರಾವ ಪಾಂಡ್ಯ ಸಭಾಗ, ಕುಳಿಗದ್ದೆ ಎಲ್. ಸಿ. ಪಿ. ಎಸ್. ಇವರು ಮುಂಬಯಿಯಲ್ಲಿ ಕಳೆದ ಶನಿವಾರ ಮಧ್ಯರಾತ್ರಿಯ ಸಮಯ ಕ್ಷಯರೋಗದ ವಿಕಾರದಿಂದ ದೇಹಾವಸಾನ ಹೊಂದಿದರೆಂದು ತಿಳಿಸಲು ಅತ್ಯಂತ ವ್ಯಸನವಾಗುತ್ತದೆ. ವೈಕುಂಠವಾಸಿಗಳು ಇಲ್ಲಿಯ ಶ್ರೀಮಂತ ಕುಳಿಗದ್ದೆ ಕುಟುಂಬದವರಿದ್ದಾಗ್ಯೂ, ಬಾಲಗತಿಯಿಂದ ಪ್ರಾಪ್ತವಾದ ಬಡತನದಲ್ಲಿ ಕೇವಲ ಸ್ವಪರಾಕ್ರಮದಿಂದಲೂ, ಸುಶೀಲಭಾವದಿಂದಲೂ ಮುಂಬಯಿ ಸರಕಾರದ ಪರೋಪಕಾರಿಗಳ ಸಹಾಯದಿಂದ, ಶಿಕ್ಷಣವನ್ನು ಎಲ್ ಸಿ ಪಿ.ಎಸ್. ಎಂಬ ವೈದ್ಯಕೀಯ ಪರೀಕ್ಷೆಯವರೆಗೆ ನಡಿಸಿ-ಮೊದಲನೇ ವರ್ಗದಲ್ಲಿ ತೇರ್ಗಡೆಹೊಂದಿದರು. ಬಳಿಕ, ಅಲ್ಲಿಯ ಜೆ. ಜೇ. ಆಸ್ಪತ್ರೆಯಲ್ಲಿ ಕೆಲವು ಕಾಲ ರಿಜಿಸ್ಟ್ರಾರರಾಗಿಯೂ, ಅಲ್ಲಿನ ವೈದ್ಯಶಾಲೆಯ ಶಿಕ್ಷಕರಾಗಿಯೂ ಕೆಲಸ ಮಾಡಿ, ತಮ್ಮ ವೈದ್ಯಶಾಸ್ತ್ರದ ನೈಪುಣ್ಯವನ್ನು ಪ್ರದರ್ಶಿಸಿ, ಅಲ್ಲಿಯ ಶಿಕ್ಷಕರ ಪ್ರೀತಿಯನ್ನು, ಪ್ರಶಂಸೆಯನ್ನೂ ಸಂಪಾದಿಸಿದ್ದರು. ಬಳಿಕ, ವೈದ್ಯರಾಗಿ ಒಂದು ಸ್ವತಂತ್ರ ಚಿಕಿತ್ಸಾಲಯವನ್ನು ಸ್ಥಾಪಿಸಿ, ಮುಂಬಯಿಯಲ್ಲಿ ಕೀರ್ತಿಯನ್ನೂ ದ್ರವ್ಯವನ್ನೂ ಸಂಪಾದಿಸಹತ್ತಿದ್ದರು. ವೈಕುಂಠವಾಸಿಗಳ ವಯಸ್ಸು ಬರೇ ೩೮ ವರುಷ. ಇಷ್ಟು ಅಲ್ಪಾವಧಿಯಲ್ಲಿ ಅವರು ಸಂಗ್ರಹಿಸಿದ ವೈದ್ಯಶಾಸ್ತ್ರದ ನೈಪುಣ್ಯವನ್ನು, ಪ್ರಶಂಸೆಯನ್ನೂ, ಲೋಕಸಂಗ್ರಹವನ್ನೂ ನೋಡಿ, ಅವರ ಇಷ್ಟಮಿತ್ರರು ಆನಂದಪಡುತ್ತಿರುವ ಸಮಯದಲ್ಲಿ, ಕ್ಷಯರೋಗದ ರೂಪದಿಂದ ನಿರ್ದಯ ಕಾಲನು ಬಂದದ್ದು ಕೇವಲ ದೈವಸಂಕಲ್ಪವೇ. ವೈವಾಹಿಕರು ವಿವಾಹವಾಗಿ ೨ ತಿಂಗಳು ಸಾಂಸಾರಿಕ ಸೌಖ್ಯವನ್ನು ಅನುಭವಿಸುತ್ತಿರುವಾಗ, ಇಷ್ಟೇ ಮೃತ್ಯುವಿನ ಆಪತ್ತು ಎದ್ದು ಬರುತ್ತಿರುವಾಗ ಇದೇ ಗಾಣವು ಮುರಿದಷ್ಟು ಶೋಚನೀಯವಾಗಿದೆ. ಧೈರ್ಯದಿಂದ ಪ್ರಯತ್ನದಿಂದ ಸಂಪಾದಿಸಿದ ಕೀರ್ತಿಯ ಸಹವಾಸದಲ್ಲಿ ಮಗ್ನರಾಗಿ, ಕಮಲಕಂದಿನ ಸುಖಾನುಭವದ ಕಲ್ಪನಾ ಸೃಷ್ಟಿಯನ್ನು ರಚಿಸಿ, ಆನಂದ ಸಾಗರದಲ್ಲಿ ತೇಲಾಡುತ್ತಿರುವಾಗ, ಅನಪೇಕ್ಷಿತವಾಗಿ ಗಜೇಂದ್ರನು ಬಂದು ಕಮಲಾಲಿಂಗಿತವಾದ ಭ್ರಮರವನ್ನು ಕಿತ್ತುಹಾಕಿದ ಸಮಯ, ಕವಿಶ್ರೇಷ್ಠನು ಉದ್ಗರಿಸಿದಂತೆ, ನಮ್ಮವರೂ "ಹಾ ಹಂತ ಹಂತ ನಲಿನೀಂ ಗಜ ಉಜ್ಜಹಾರ" ಎಂದು ಹಳಹಳಿಸುತ್ತಿದ್ದರು. ಮುಂಬಯಿಯೊಳಗಿನ ಸ್ಥಳಿಕ ಜನರಿಗೂ, ಸ್ವಜಾತಿಬಾಂಧವರಿಗೂ ಇವರೊಂದು ಪ್ರೇಮಪಾತ್ರರಾಗಿದ್ದರು. ವೈಕುಂಠವಾಸಿಗಳ ಮುಪ್ಪಿನ ತಂದೆಯವರು ಅಪಾರ ಶೋಕಸಾಗರದಲ್ಲಿ ಮುಳುಗುವದು ಸಹಜವು. ಮುದಿಪ್ರಾಯದಲ್ಲಿ ದಶರಥನಿಗಾದ ಶ್ರೀರಾಮನ ವಿಯೋಗ ಶೋಕವೇ ಅವರ ತಂದೆಯವರದಾಗಿದೆಂದು ಹೇಳಿದರೆ, ಅತಿಶಯೋಕ್ತಿಯಾಗದು. ಬಡತನದಿಂದ ಎದ್ದೇಳುವ ಸಮಯ ಪಶ್ಚಾತ್ತಾಪವು ಒದಗಿ ಬಂದಿದೆ. ಆಪ್ತೇಷ್ಟಮಿತ್ರರೆಲ್ಲರೂ ಅಗಾಧ ಕಾಲ ಚಕ್ರದ ಗತಿಯನ್ನು ಆಲೋಚಿಸಿ, ವಿಚಾರದಿಂದ ದುಃಖವನ್ನು ಸಮಾಧಾನಪಡಿಸಿಕೊಳ್ಳಬೇಕು. ವಿಧಿಘಟನೆಗೆ ಯಾರ ದೇನು ಹಾಯು!

ಸ್ಥಾನಿಕ ವೃತ್ತಾಂತ.

ಕುಮಟಾ—[illegible] ಸರ್ಕಾರದಲ್ಲಿ [illegible] ಆತಂಕ.

ಇಲ್ಲಿಯ ಸರ್ಕಾರಿ ಶಾಲೆಗಳಲ್ಲಿ [illegible] ಬೋರ್ಡಿನ ಎಜುಕೇಶನ ಕಮಿಟಿಯ [illegible] ದಿಂದ [illegible] ವಾಗಿದೆ. ಸರಕಾರದ ಕಡೆಯಿಂದ ಮಿ| ಕೆ. [illegible] ಬೋರ್ಡ ಕಡೆಯಿಂದ ಮಿ| [illegible] ಹಾಗು [illegible] ಯವರ ಕೆಲಸ ನಡೆಸುತ್ತಿರುವರು. ಮಿ| [illegible] ಧರ್ಮಾಂಕೀರ, ಮಿ| [illegible] ವಿ [illegible], ಮಿ| [illegible] ಗೋಸ್ವಾಮಿ, ಇವರು ಎಲ್ಲರಿಗಾಗಿ ನೆ [illegible] ಹೊಂದಿರುವರು. [illegible] ಸಾಕ್ಷಿಗಳು [illegible]. [illegible] ಎಂಬವನು ಈ ಬಿಲ್ಡಿಂಗಿನ [illegible] ತಿಳಿಯುತ್ತಿದೆ. [illegible] ವಿಶೇಷ [illegible] ಸಾಧನ. ಆದರೆ, ಸರಕಾರಿ [illegible] ಸಾಕ್ಷಿಗಾರರಲ್ಲಿ [illegible]; [illegible] ಮಿ| [illegible] [illegible] ಸಾಕ್ಷಿಗಾರರಾದ [illegible] ಬಂದಿದ್ದರೆಂದು ಸಾಕ್ಷಿಗಾರ [illegible]. [illegible] ವಿಚಾರವು ಇನ್ನೂ ನಡೆದಿರುತ್ತದೆ.

ಶ್ರೀ ಗೋಕರ್ಣ ಕ್ಷೇತ್ರದಲ್ಲಿ [illegible] ಯ [illegible] ದೀಪೋತ್ಸವ [illegible] ಹಾಗು [illegible] ಪ್ರಮುಖರ [illegible] ಪ್ರತಿಬಂಧ [illegible] ಗಳನ್ನು [illegible] ಮಾಡಿರುವರು.

ಇಲ್ಲಿ [illegible] ಮೆಡಿಕಲ್ [illegible] ಒಂದಿಷ್ಟು, ನಿನ್ನೆ [illegible] ಪ್ರಯೋಗಗಳನ್ನಾಡಿ [illegible] ಹಾಗು ಸ್ತ್ರೀ [illegible] ಸಂಗೀತ ನಾಟಕ ಮಂಡ ಆದರಗುಂಟಿ ಎಂಬ ಹೊಸ ಸಂಗೀತ ನಾಟಕಯೊಂದರ [illegible] ಪ್ರಯೋಗಗಳನ್ನಾರಂಭಿಸಿದರು.

ಸಾಭಾರ ಸ್ವೀಕಾರ.

ಆಯುರ್ವೇದ— [illegible] ತೃತೀಯ ಸಂಚಿಕೆ. ಸಂಪಾದಕರು— ವಿದ್ಯಾನಿಧಿ. [illegible] ಶಾಸ್ತ್ರಿ, ಆಯುರ್ವೇದ ಭೂಷಣ, [illegible] ನ್, [illegible], ಚಿಕಿತ್ಸಕ, ಶ್ರೀ [illegible] ವೇದ ವೈದ್ಯಶಾಲಾ, [illegible]. ಪ್ರಕಾಶಕರು [illegible] ಪ್ರೆಸ್, [illegible] ವಾ. ಕ. [illegible] ಮಾತ್ರ.

ಹೊನ್ನಾವರ—ಇಲ್ಲಿ [illegible] ತಿಂಗಳಿನ [illegible] ದ ವೈಲಿಯ ಬೇನೆ ವಿಶೇಷ. [illegible] ಗಳಲ್ಲಿ [illegible] ದಿಂದ ಜನರು ಬಳಲುತ್ತಿರುವರು. [illegible] ಸಮ್ಮತ [illegible] ಇದೆ. [illegible] ವಾಗಿ [illegible] ಬೇನೆಯ [illegible] ತಿಂಗಳಿಗೆ [illegible] ಒಂದು [illegible] ಒಂದು ಕಡೆಗೆ [illegible] ಬೇರೆಬೇರೆಗಳಲ್ಲಿ, [illegible] ಗಳಲ್ಲಿ, [illegible] ಸಂಚರಿಸುತ್ತಿದ್ದಾರೆ. [illegible] ಶ್ರೀ [illegible] ನಲ್ಲಿ [illegible]. [illegible] ನಿಯಂತ್ರಿಸುವದು [illegible] ಗೆ [illegible]. [illegible] ಸಹಾಯಿಸುವರಿಗೆ [illegible] ಮಾಡಿಯಿತು; [illegible] ಮಾರರಿಗೆ ತಿಳಿಸಲಾಯಿತು; ಇಷ್ಟು ಆದಾಗಿಯೂ

[illegible]

ಜನರಲ್ ಕಾನ್‌ಸ್ಟಿಟ್ಯುಎನ್ಸಿ.

[illegible]

ಹೆಂಗಸರು.

[illegible]

ಮುಸಲ್ಮಾನರು.

[illegible]

ಕ್ರಿಶ್ಚನರು.

[illegible]

ಹಿಂದುಳಿದ ವರ್ಗದವರು.

[illegible]

ಅಸ್ಪೃಶ್ಯರು.

[illegible]

೧೫ ಸ್ಕೂಲ ಬೋರ್ಡ್ ನಡಿಗೆ ಉಮೇದವಾರರಾಗಿ ನಿಂತವರ ಹೆಸರುಗಳು.

[illegible]

ವೃತ್ತಸಾರ.

[illegible]

ಮಹಾತ್ಮರ ಆತ್ಮಚರಿತ್ರ.

(೬) ಕಷ್ಟಪ್ರಸಂಗ.

ಹೈಸ್ಕೂಲಿನಲ್ಲಿ ನನಗೆ ಸಲಿಗೆಯ ಹೆಚ್ಚು ಮಿತ್ರರಿರಲಿಲ್ಲ. ಸಲಿಗೆಯ ಮಿತ್ರರೆಂದು ಹೇಳಿಕೊಳ್ಳಲರ್ಹರಾದವರು ಇಬ್ಬರಿದ್ದರು ಅವರು ಬೇರೆ ಬೇರೆ ಕಾಲದಲ್ಲಿ ಇಬ್ಬರ ಗೆಳೆತನವು ಬಹುಕಾಲ ಬಾಳಲಿಲ್ಲ ಆದರೂ, ಆ ಗೆಳೆಯರಿಗೆ ನಾನೆಂದೂ ತ್ಯಜಿಸಲಿಲ್ಲ ಎರಡನೇಯ ಮನುಷ್ಯನೊಡನೆ ನಾನು ಗೆಳೆತನ ಸಂಪಾದಿಸಿದೆನೆಂದು ಆತನ ನನ್ನನ್ನು ತ್ಯಜಿಸಿದನು ಎರಡನೇ ಗೆಳೆತನವು ನನ್ನ ಜೀವನದೊಳಗಿನ ಒಂದು ಕಷ್ಟಕರ ಪ್ರಸಂಗವೆಂದು ನನ್ನ ಗ್ರಹಿಕೆಯಾಗಿದೆ ಈ ಗೆಳೆತನವು ಬಹುಕಾಲ ಬಾಳಿತು ಸಮಾಜಸಂಸ್ಕಾರಕ ಪ್ರವೃತ್ತಿಯಿಂದ ಈ ಗೆಳೆತನವುಂಟಾಯಿತು ಈತನೂ ನನ್ನ ಹಿರಿ ಅಣ್ಣನೂ ಒಂದೇ ವರ್ಗದಲ್ಲಿದ್ದರು ಮೊದಲು ಈತನು ನನ್ನ ಹಿರಿ ಅಣ್ಣನ ಗೆಳೆಯನಿದ್ದನು ಆತನ ದೋಷಗಳನ್ನೆಲ್ಲ ನಾನು ಅರಿತಿದ್ದೆ ಆದರೆ, ಆತನು ನಂಬಿಗಸ್ತ ಗೆಳೆಯನೆಂದು ನಾನು ಎಣಿಸಿದೆ ಕೆಟ್ಟ ಸಹವಾಸದಲ್ಲಿ ಬಿದ್ದೆನೆಂದು ತಾಯಿಯೂ ಹಿರೇ ಅಣ್ಣನೂ, ಹೆಂಡತಿಯೂ ನನಗೆ ಮುಂಜಾಗ್ರತೆಯ ಸೂಚನೆಯಿತ್ತರು ಹೆಂಡತಿಯ ಮುಂಜಾಗ್ರತೆಯನ್ನು ಕೇಳುವ ಗಂಡನ ದೊಡ್ಡಸ್ತನವೆಲ್ಲಿಯದು? ಆದರೆ, ತಾಯಿಯ ಮಾತನ್ನು ನಾನು ಮೀರಲಾರೆ ಮತ್ತು ಹಿರೇ ಅಣ್ಣನ ಮಾತನ್ನು ಪಾಲಿಸಲು ನಾನು ಬದ್ಧನಾಗಿದ್ದೆ ಆದರೆ, ನಾನು ಹೇಳಿಕೊಂಡಿದ್ದೇನೆಂದರೆ— "ನೀವು ಹೇಳುವ ದುರ್ಗುಣಗಳೆಲ್ಲ ಆತನಲ್ಲಿರುವವೆಂದು ನಾನರಿತಿದ್ದೇನೆ ಆದರೆ ಆತನಲ್ಲಿರುವ ಸದ್ಗುಣಗಳು ನಿಮಗೆ ಗೊತ್ತಿಲ್ಲ ಆತನನ್ನು ಸುಧಾರಿಸುವದಕ್ಕಾಗಿಯೇ ನಾನು ಆತನ ಜೊತೆಯನ್ನು ಹಿಡಿದಿದ್ದೇನೆ ಆತನಿಗೆ ನನ್ನನ್ನು ಕೆಡಿಸಲು ಸಾಧ್ಯವಿಲ್ಲ ಆತನು ತನ್ನ ನಡತೆಯನ್ನು ಸುಧಾರಿಸಿದರೆ, ಉತ್ಕೃಷ್ಟ ಪುರುಷನಾಗುವನು ನನಗಾಗಿ ನೀವು ಚಿಂತಿಸಬಾರದೆಂದು ನಾನು ನಿಮ್ಮೊಡನೆ ಹೇಳಿಕೊಳ್ಳುತ್ತೇನೆ" ಇದರಿಂದ ಅವರ ಸಮಾಧಾನವಾಯಿತೆಂದು ನನಗೆನಿಸುವದಿಲ್ಲ ಆದರೆ ನನ್ನ ಹಠಕ್ಕಾಗಿ ಅವರು ಮನ್ನಣೆಯನ್ನಿತ್ತು ನನ್ನ ಇಚ್ಛೆಯಂತೆ ನನಗೆ ವರ್ತಿಸಗೊಟ್ಟರು.

ನನ್ನ ಅಂದಾಜು ಗುಂಡಿಸ್ಪತೆಂದು ಆ ಬಳಿಕ ನನಗೆ ತಿಳಿದು ಬಂತು ಸುಧಾರಕನು ಬಹಳ ಮುಂದೆ ಹೋಗಬಾರದು ಸುಧಾರಿಸಲಿಚ್ಛಿಸುವ ಮನುಷ್ಯನೊಡನೆ ಆತನು ಬಹಳ ಸಲಿಗೆ ಮಾಡಲಾರನು ಅಂತಃಕರಣಗಳ ಏಕೀಕರಣವೇ ನಿಜವಾದ ಗೆಳೆತನವು ಇಂಥ ಸ್ನೇಹಭಾವವು ಭೂತಲದಲ್ಲಿ ದೊರಕುವದು ಅಪರೂಪ ಸಮಾನ ಶೀಲರೊಳಗೆ ಮಾತ್ರ ಗೆಳೆತನವು ಶೋಭಿಸುತ್ತದೆ ಹಾಗು ಬಾಳುತ್ತದೆ ಗೆಳೆಯರು ಪರಸ್ಪರ ತಮ್ಮ ತಮ್ಮಗೆ ನಾನಾ ಗುಣಗಳ ಪರಿಣಾಮ ನಡಿಸುತ್ತಾರೆ ಆದ್ದರಿಂದ ಗೆಳೆಯರು ಪರಸ್ಪರ ಸುಧಾರಿಸಲು ಅವಕಾಶವಿರುವದಿಲ್ಲ ಸಲಿಗೆಯನ್ನು ಎಲ್ಲರೂ ತ್ಯಜಿಸಬೇಕೆಂದು ನನ್ನ ಅಭಿಮತವಾಗಿದೆ ಮಾನವನು ಸದ್ಗುಣಕ್ಕಿಂತ ದುರ್ಗುಣಗಳನ್ನೇ ಸುಲಭವಾಗಿ ಗ್ರಹಿಸುತ್ತಾನೆ ಪರಮಾತ್ಮನೊಡನೆ ಸ್ನೇಹಭಾವ ಬೆಳೆಸಲಿಚ್ಛಿಸುವವನು ಒಬ್ಬಂಟಿಗನಿರಬೇಕು ಅಥವಾ ಇಡೀ ಭೂತಲದವರ್ನ್ನೇ ಸ್ನೇಹಭಾವದಿಂದ ನಡಿಸಿಕೊಳ್ಳಬೇಕು ನನ್ನ ಗ್ರಹಿಕೆಯು ತಪ್ಪಾಗಿರಬಹುದು ಆದರೆ, ಉತ್ಕಟ ಸ್ನೇಹಭಾವವನ್ನು ಬೆಳೆಸುವ ನನ್ನ ಯತ್ನಗಳೆಲ್ಲ ನಿರರ್ಥಕವಾಗಿರುವವೆಂದು ನಾನು ನಮೂದಿಸಬೇಕಾಗಿದೆ

ಈ ಗೆಳೆಯನ ಜೊತೆ ಸಿಕ್ಕಿದಾಗ ರಾಜಕೋಟದಲ್ಲೆಲ್ಲ ಸುಧಾರಣೆಯು ಕಾಲಿಟ್ಟಿಲ್ಲವೆದ್ದಿತ್ತು ನಮ್ಮ ಅನೇಕ ಶಿಕ್ಷಕರು ಗುಪ್ತವಾಗಿ ಮಾಂಸವನ್ನೂ, ಮದ್ಯವನ್ನೂ ಸೇವಿಸುತಾರೆಂದು ಈ ಗೆಳೆಯನು ನನಗೆ ಸುದ್ದಿ ಹೇಳಿದನು ಈ ವರ್ಗಕ್ಕೆ ಮನ್ನವಲಂಬಿಸುವ ರಾಜಕೋಟದೊಳಗಿನ ಕೆಲವು ದೊಡ್ಡವರ ಹೆಸರುಗಳನ್ನು ಆತನು ಹೇಳಿದನು ಇವರೊಳಗೆ ಕೆಲವು ಹೈಸ್ಕೂಲ ವಿದ್ಯಾರ್ಥಿಗಳೂ ಸೇರಿರುವರೆಂದು ನನಗೆ ಹೇಳಲಾಗುತ್ತಿತ್ತು ಇದನ್ನು ಕೇಳಿ ನನಗೆ ಅಶ್ಚರ್ಯವೂ ವ್ಯಸನವೂ ಆಯಿತು ಗೆಳೆಯನಿಗೆ ಇದರ ಕಾರಣವನ್ನು ಕೇಳಲು, ಆತನು ಹೇಳಿದ್ದೇನೆಂದರೆ — "ನಾವು ದುರ್ಬಲ ಮಂದಿಗಳು ಯಾಕೆ? — ನಾವು ಮಾಂಸಭಕ್ಷಕರಲ್ಲ ಇಂಗ್ಲಿಷರು ಮಾಂಸಭಕ್ಷಕರಾದ್ದರಿಂದ ನಮ್ಮನ್ನು ಅವರು ಆಳುತ್ತಾರೆ ನೋಡು! ನಾನು ಎಷ್ಟು ಗಟ್ಟಿಗನು ಬಹಳ ಜೋರು ಎಡೆಬಿಡದೆ ಓಡಬಲ್ಲೆನು ಯಾಕೆ ಬಲ್ಲೆಯೇನ? ನಾನು ಮಾಂಸವನ್ನು ತಿನ್ನುತ್ತೇನೆ ಮಾಂಸಭಕ್ಷಕರಿಗೆ ಬಾವು ಅಥವಾ ಕುರುಗಳಾಗುವದಿಲ್ಲ ಮತ್ತು ಒಮ್ಮೆ ಆದರೂ, ಬೇಗನೇ ಮಾಯವಾಗುತ್ತವೆ ಮಾಂಸ ತಿನ್ನುವ ನಮ್ಮ ಶಿಕ್ಷಕರೂ, ಇತರ ದೊಡ್ಡ ಮನುಷ್ಯರಲ್ಲ ಅದರಿಂದಾಗುವ ಲಾಭಗಳನ್ನು ಅವರು ಅರಿತಿರುವರು ನೀವೂ ಅದರಂತೆಯೇ ನಡೆಕೊಳ್ಳಬೇಕು ಯತ್ನಮಾಡಿ ನೋಡಬಹುದಲ್ಲವೇ? ಒಮ್ಮೆ ಯತ್ನಮಾಡಿ ಅದರಿಂದ ಪ್ರಾಪ್ತವಾಗುವ ಸಾಮರ್ಥ್ಯವನ್ನು ನೋಡು" ಈ ಪ್ರತಿಪಾದನೆಯು ಒಂದೇ ಸಲ ಒದಗಿಬಂದಿಲ್ಲ ಆಗಿಂದಾಗ ಆ ಗೆಳೆಯನು ಹೇಳುತ್ತಿರುವ ಉದ್ದುದ್ದವಾದ, ವಿಸ್ತಾರಪೂರ್ವಕವಾದ ಪ್ರತಿಪಾದನೆಯ ಮರ್ಮಭಾಗವಿದು ನನ್ನ ಹಿರಿ ಅಣ್ಣನು ಈ ಮೊದಲೇ ಪತಿತನಾಗಿದ್ದನು ಆದ್ದರಿಂದ ಆತನ ಗೆಳೆಯನ ತರ್ಕವನ್ನೇ ಎತ್ತಿಹಿಡಿದನು ನೋಡಲಾಗಿ ನನ್ನ ಹಿರಿಅಣ್ಣ ಹಾಗು ಗೆಳೆಯನ ಜೊತೆಗೆ ನಾನು ತೆಳ್ಳಗೆನೇ ಇದ್ದೆ ಅವರಿಬ್ಬರೂ ಗಟ್ಟಿಗರು ಅದಕ್ಕೂ ಹೆಚ್ಚಾಗಿ ಸಾಹಸಿಗರು ಈ ಗೆಳೆಯನ ಪರಾಕ್ರಮಗಳಿಗೆ ನಾನು ಮೋಹಪಟ್ಟೆ ಆತನು ಬಹುದೂರ ಬಹು ಚಪಲವಾಗಿ ಓಡುತ್ತಿದ್ದನು, ಜಿಗಿದಾಟ (ಎತ್ತರ ಹಾಗು ಉದ್ದನ್ನ) ದಲ್ಲಿ ಆತನು ಪ್ರವೀಣನಾಗಿದ್ದನು ಆತನಿಗೆ ಎಷ್ಟು ಕಾಯಿಕ ದಂಡನೆ ವಿಧಿಸಿದರೂ ಆತನು ಸಹಿಸುತ್ತಿದ್ದನು ಮತ್ತು ತನ್ನಲ್ಲಿರದ ಗುಣಗಳನ್ನು ಪರರಲ್ಲಿ ನೋಡಿದಾಗ ಯಾವಾಗಲೂ ಮಾನವನು ದಿಗಿಲು ಬೀಳುವಂತೆಯೇ, ನಾನೂ ಈ ಗೆಳೆಯನ ಪರಾಕ್ರಮಗಳಿಗೆ ಬೆರಗಾದೆನು ಇದರಿಂದ ಆತನಂತೆ ನಾನೂ ಆಗಬೇಕೆಂಬ ತೀವ್ರ ಆಸೆಯು ನನ್ನಲ್ಲುಂಟಾಯಿತು ನನಗೆ ಹಾರಲಿಕ್ಕೂ ಬರುತ್ತಿರಲಿಲ್ಲ, ಓಡಲಿಕ್ಕೂ ಬರುತ್ತಿದ್ದಿಲ್ಲ ಈ ಗೆಳೆಯನಂತೆ ನಾನೂ ಯಾಕೆ ಬಲಿಷ್ಠನಾಗಬಾರದು?

ನಾನು ಪುಕ್ಕನ ಕಳ್ಳರು, ಪಿಶಾಚಿಗಳು, ಸರ್ಪಗಳು, ಇವುಗಳ ಭೀತಿ ನನಗೆ ಆಗಿಂದಾಗ ಅನಿಸುತ್ತಿತ್ತು ರಾತ್ರಿ ಸಮಯದಲ್ಲಿ ಮನೆಯ ಹೊರಗೆ ಹೋಗಲು ನನಗೆ ಬಹಳ ಅಂಜಿಕೆಯಾಗುತ್ತಿತ್ತು ಮಬ್ಬಿನೊಡನೆ ನಾನು ಹೆದರುತ್ತಿದ್ದೆನು ಕತ್ತಲೆಯಲ್ಲಿ ಮಲಗಿಕೊಳ್ಳುವದಂತು ಅಸಾಧ್ಯವೇ ಒಂದು ಬದಿಯಿಂದ ಕಳ್ಳರು, ಇನ್ನೊಂದು ಬದಿಯಿಂದ ದೆವ್ವಗಳು ಮತ್ತೊಂದು ಬದಿಯಿಂದ ಸರ್ಪಗಳು ಬಂದಂತೆ ನನಗೆ ಭಾಸವಾಗುತ್ತಿತ್ತು ಕೋಣೆಯಲ್ಲಿ ದೀಪವನ್ನಿಟ್ಟುಕೊಳ್ಳದೆ ನನ್ನಿಂದ ಮಲಗುವದಾಗುತ್ತಿರಲಿಲ್ಲ ನನ್ನ ಹೆಂಡತಿಯು ಮಾತ್ರ ಪ್ರೌಢ ವಯಸ್ಕಳಾಗಿದ್ದಳು ಅವಳು ನನ್ನ ಜೊತೆಗೆ ಮಲಗುತ್ತಿದ್ದಳು, ಅವಳಿಗೆ ನನ್ನ ಈ ಭೀತಿಯನ್ನು ನಾನು ಹೇಳುವದು ಹೇಗೆ? ನನಗಿಂತ ಅವಳಿಗೆ ಹೆಚ್ಚು ಧೈರ್ಯವಿತ್ತು ಇದನ್ನು ನೋಡಿ ನನಗೆ ನಾಚಿಕೆಯಾಯಿತು ಅವಳು ಹಾವುಗಳಿಗೂ ಹೆದರುತ್ತಿದ್ದಿಲ್ಲ, ದೆವ್ವಗಳಿಗೂ ಬೆದರುತ್ತಿದ್ದಿಲ್ಲ ಅವಳು ಕತ್ತಲೆಯಲ್ಲಿ ಬೇಕಾದಲ್ಲಿ ಹೋಗಬಲ್ಲವಳಾಗಿದ್ದಳು ಗೆಳೆಯನಿಗೆ ಇವೆಲ್ಲ ನನ್ನ ಸ್ವಭಾವದೋಷಗಳು ಗೊತ್ತಿದ್ದವು "ನನ್ನ ಕೈಯಲ್ಲಿ ಜೀವಂತ ಸರ್ಪಗಳನ್ನು ನಾನು ಹಿಡಿಯುತ್ತೇನೆ, ಕಳ್ಳರಿಗೆ ಅರಿದಾಗುತ್ತೇನೆ, ದೆವ್ವಗಳಿರುವವೆಂದು ನಾನು ತಿಳಿಯುವದಿಲ್ಲ," ಎಂದು ನನ್ನ ಗೆಳೆಯನು ನನಗೆ ಹೇಳುತ್ತಿದ್ದನು ಇದೆಲ್ಲದರ ಕಾರಣವು ಮಾಂಸಭಕ್ಷಣವೆಂದೂ ಆತನು ನನಗೆ ಹೇಳುತ್ತಿದ್ದನು.

ಆ ಕಾಲಕ್ಕೆ ನರ್ಮದ ಕವಿಯ ಒಂದು ಲಾವಣಿಯು ವಿದ್ಯಾರ್ಥಿಗಳಲ್ಲಿ ಪ್ರಚಾರವಾಗಿತ್ತು. ಅದೇನೆಂದರೆ:— ನೋಡಿರಿ, ಕಸುವುಳ್ಳ ಇಂಗ್ಲಿಷಮನ್ನನು ದುರ್ಬಲ ದೇಶೀಯರ ಮೇಲೆ ಅಧಿಕಾರ ನಡಿಸುತ್ತಾನೆ. ಕಾರಣವೇನು? ಮಾಂಸಭಕ್ಷಕನಾದ್ದರಿಂದ ಆತನು ಐದು ಮೊಳ ಎತ್ತರವಿದ್ದಾನೆ

ಇದರಿಂದ ನನ್ನ ಮೇಲೆ ಯೋಗ್ಯ ಪರಿಣಾಮವಾಯಿತು. ನಾನು ಸೋತೆನು ಮಾಂಸಭಕ್ಷಣವು ಒಳಿತಾಗಿರುವದೆಂದೂ, ಅದರಿಂದ ನನಗೆ ಕಸುವೂ, ಸಾಹಸವೂ ಉಂಟಾಗುವದೆಂದೂ, ಇಡೀ ದೇಶವು ಮಾಂಸವನ್ನು ಭಕ್ಷಿಸುತ್ತಿದ್ದರೆ, ಇಂಗ್ಲಿಷರನ್ನು ಹಿಮ್ಮೆಟ್ಟಬಹುದೆಂದೂ ನನ್ನಲ್ಲಿ ಕಲ್ಪನೆಯುಂಟಾಗಹತ್ತಿತು

ಅಷ್ಟರ ಬಳಿಕ, ಮಾಂಸಭಕ್ಷಣಪ್ರಾರಂಭಕ್ಕಾಗಿ ಒಂದು ದಿನ ನಿಶ್ಚಯವಾಯಿತು. ಹೊಸ ಸುಧಾರಣೆಗಾಗಿ ದಿನ ನಿಶ್ಚಯವಾಗುವ ಕಾರಣವೇನೆಂದು ಅನೇಕರಿಗೆ ತಿಳಿಯದು. ಗಾಂಧಿಯವರು ವೈಷ್ಣವರು, ನನ್ನ ತಾಯಿತಂದೆಯವರು ಅವರೊಳಗೂ ಕಟ್ಟಾ ವೈಷ್ಣವರಾಗಿದ್ದರು. ಹವೇಲಿಗೆ ನಿತ್ಯವೂ ಅವರು ತಪ್ಪದೆ ಹೋಗುತ್ತಿದ್ದರು ಮನೆತನದವರು ಸ್ವಂತ ದೇವಾಲಯಗಳನ್ನೂ ಕಟ್ಟಿಸಿದರು ಜೈನ ಧರ್ಮದವರು ಗುಜರಾಥದಲ್ಲಿಯೇ ಹೆಚ್ಚು ಆದರಿಂದ ಆ ಧರ್ಮದ ಪ್ರಾಬಲ್ಯವು ಪ್ರತಿಯೊಂದು ಕಡೆಯಲ್ಲಿ ಸಮಸ್ತ ಪ್ರಸಂಗಗಳಲ್ಲಿ ದೃಗ್ಗೋಚರವಾಗುತ್ತದೆ. ಗುಜರಾಥದೊಳಗಿನ ಜೈನ ಹಾಗು ವೈಷ್ಣವರಲ್ಲಿ ಮಾಂಸಭಕ್ಷಣಕ್ಕಿರುವಷ್ಟು ವಿರೋಧವೂ, ಅಸಹ್ಯತನವೂ ದೇಶಪರದೇಶಗಳಲ್ಲಿ ಇನ್ನೆಲ್ಲಿಯೂ ಕಂಡುಬರುವದಿಲ್ಲ. ಈ ಸಂಸ್ಕಾರಗಳಲ್ಲಿ ನಾನು ಹುಟ್ಟಿ ಬೆಳೆದಿದ್ದೆನು. ತಾಯಿತಂದೆಗಳ ಮೇಲೆ ನನ್ನ ಭಕ್ತಿಯು ಬಹಳ. ನಾನು ಮಾಂಸ ತಿನ್ನಲಾರಂಭಿಸಿದೆನೆಂದು ತಿಳಿದ ಕೂಡಲೆ, ಅವರು ಕೊರಗಿ ಸಾಯುವರೆಂದು ನಾನು ಅರಿತಿದ್ದೆ. ಖುದ್ದ ಪ್ರಾಮಾಣಿಕವಾಗಿ, ಅಥವಾ ನಿರುಪಾಯವಾಗಿ ನಾನು ಸತ್ಯಪ್ರಿಯನಾಗಿದ್ದೆನ . ಮಾಂಸ ತಿನ್ನಲಾರಂಭಿಸಿದರೆ, ತಾಯಿತಂದೆಗಳಿಗೆ ವಂಚನೆ ಮಾಡುವ ಪ್ರಸಂಗವಿತ್ತೆಂದು ನಾನು ತಿಳಿದಿದ್ದಿಲ್ಲವೆಂದು ಹೇಳಲಾರೆ ಆದರೆ, ಸುಧಾರಣೆಯ ಮೇಲೆ ನನ್ನ ಕಟಾಕ್ಷವಿತ್ತು, ಬಾಯಿ ಸವಿಮಾಡಿಕೊಳ್ಳುವ ಪ್ರಶ್ನೆಯಾಗಿದ್ದಿಲ್ಲ ಅದಕ್ಕೆ ವಿಶೇಷ ತರದ ರುಚಿಯಿರುವದೆಂದು ನನ್ನ ತಿಳುವಳಿಕೆಗೆ ಬಂದಿದ್ದಿಲ್ಲ. ಕಸುವುಳ್ಳವನಾಗಬೇಕು, ಸಾಹಸಿಗನಾಗಬೇಕು, ನನ್ನ ದೇಶಬಾಂಧವರೂ ಹಾಗೆಯೇ ಆಗಬೇಕು, ಮತ್ತು ಇಂಗ್ಲಿಷರಿಗೆ ಸೋಲಿಸಿ ಹಿಂದುಸ್ಥಾನವನ್ನು ಸ್ವಾತಂತ್ರ್ಯದಿಂದ ವಿಮೋಚಿಸಬೇಕು, ಎಂಬುದೇ ನನ್ನ ಆಶೆ 'ಸ್ವರಾಜ್ಯ' ಶಬ್ದವನ್ನು ಆಗ ನಾನು ಕೇಳಿದ್ದಿಲ್ಲ ಸುಧಾರಣೆಯು ಹುಚ್ಚು ತಲೆಗೇರಿತ್ತು, ಅಷ್ಟು ನಾನು ನಿರ್ಧರಿಸಿದ್ದೆ

ತ್ವರೆಮಾಡಿರಿ ! ತ್ವರೆಮಾಡಿರಿ !

ಸಂಗೀತ

ಉಜ್ವಲ ನಿಜ ರಾಜನಿ

ಅಥವಾ

(ರಾಕ್ಷಸೀ ಮಹತ್ವಾಕಾಂಕ್ಷೆ)

ಎಂಬ ಚರಿತ್ರ ಕನ್ನಡ ನಾಟಕವು

ಅಚ್ಚಿನಲ್ಲಿದೆ!

ಅಂಕ ೧—೭.

ಅಲ್ಪಾವಧಿಯಲ್ಲಿಯೇ ವಿಕ್ರಯಕ್ಕೆ ಸಿಗುವದು

ವಿಳಾಸ.—

ವ್ಯವಸ್ಥಾಪಕ—ಶ್ರೀದತ್ತ ಮುದ್ರಣಾಲಯ

ಕುಮಟಾ, ಉ. ಕಾನಡ

ತ್ವರೆಮಾಡಿರಿ! ತ್ವರೆಮಾಡಿರಿ!!

ಬಿಗಳ್ಗೀ ರಾಮಕೃಷ್ಣ ತಿಮ್ಮಣ್ಣ ಪಂಡಿತರವರಿಂದ ಗುಣಿಸಿ ಪರಿಶೋಧಿಸಲ್ಪಟ್ಟ

ಕ್ಷಯ ಸಂವತ್ಸರದ

ಪಂಚಾಂಗಗಳು

ಮಾರಾಟಕ್ಕೆ ಸಿದ್ಧವಾಗಿರುತ್ತವೆ.

೧೦ ಕ್ಕೆ ರೂ. ೧೩-೮-೦ ೫೦ ಕ್ಕೆ ರೂ ೬-೮-೦

೧೫ ಕ್ಕೆ ರೂ. ೩ ೮-೦ ೧ ಕ್ಕೆ ರೂ. ೦-೩-೦

ಪತ್ತೆ.— ಮೆನೇಜರ,

"ಸ್ಟಾರ ಆಫ್ ಕೆನರಾ" ಪ್ರೆಸ್ ಕಾರವಾರ

"ಲೋಕರಹಸ್ಯ"

ಈ ಕನ್ನಡ ಮಾಸ ಪತ್ರಿಕೆಯಲ್ಲಿ ವ್ಯಾಪಾರಸ್ಥರಿಗೆ ವ್ಯಾಪಾರದ ವಿಚಾರ, ರೈತರಿಗೆ ಕೃಷಿಯ ಅತ್ಯುತ್ತಮ ಉಪಾಯಗಳು, ಸ್ತ್ರೀಯರಿಗೆ ಗೃಹಕೃತ್ಯದ ವಿಚಾರಗಳು, ಬಡವರಿಗೆ ಹಣ ಸಂಪಾದನೆಯ ಸುಲಭ ಉಪಾಯಗಳು, ರಸಿಕರಿಗೆ ವಿನೋದ ವಿಚಾರಗಳು, ಪ್ರತಿಯೊಬ್ಬರಿಗೂ ಬೇಕಾದ ರಾಜಕೀಯ ವಿಚಾರಗಳು, ವೈದ್ಯ ಭಾಗಗಳು, ಜ್ಯೋತಿಷ್ಯ, ಕಾಯದೆ, ವೇದಾಂತ, ಕಾದಂಬರಿಗಳು, ಗೋಪಾಲನೆ, ಶೃಂಗಾರಿಕೆಗಳು, ಮಂತ್ರತಂತ್ರಗಳೇ ಮುಂತಾದ ವಿಷಯಗಳೆಲ್ಲವೂ ಪ್ರಕಟವಾಗುತ್ತವೆ ಪತ್ರಿಕೆಯು ಪ್ರತಿಯೊಂದು ಪುಟದಲ್ಲೂ ಅಮೂಲ್ಯವಾದ ಗೂಢ ವಿಚಾರಗಳಿಂದ ತುಂಬಿ ತುಳುಕುತ್ತಿದೆ ಪ್ರತಿ ಮಾಸದಲ್ಲೂ ೬೦ ಪುಟಗಳಿಗೆ ಕಡಿಮೆಯಿಲ್ಲದೆ ವಿಷಯಗಳಿರುತ್ತವೆ ವಾರ್ಷಿಕ ಚಂದಾ ಅಂಚೆ ವೆಚ್ಚ ಸಹಿತ ರೂ ೩—೦—೦. ಮಾದರಿ ಸಂಚಿಕೆಗೆ ಕ್ರಯ ೦—೫—೦ ಮಾದರಿ ಸಂಚಿಕೆಗಳನ್ನು ಪುಕ್ಕಟೆಯಾಗಿ ಕೊಡುವದಿಲ್ಲ

ಹಾಕಿದ ಹಣವನ್ನು ನಷ್ಟ ಮಾಡದೆ ಹಾಕಿದ ರೂಪಾಯಿ ಇದ್ದಕ್ಕಿದ್ದ ಹಾಗೆಯೇ ತಿಂಗಳಿಗೆ ೧೦೦ ರೂ. ಗಿಂತ ಹೆಚ್ಚಾಗಿಯೇ ಹಣ ಸಂಪಾದನೆ ಮಾಡುವ ರೀತಿಯನ್ನು ತಿಳಿಯುವ ಬಗ್ಗೆ ಒಂದಾಣೆ ಸ್ಟಾಂಪು ಹಚ್ಚಿದ ಕೆಳಗಿನ ವಿಳಾಸಕ್ಕೆ ಬರೆಯಿರಿ

ಮೆನೇಜರ್,

"ಲೋಕರಹಸ್ಯ"

ವೀರರಾಜೇಂದ್ರ ಪೇಟೆ ಕೊಡಗ

ರೋಗದಿಂದ ನರಳಬೇಡಿರಿ!

ನಮ್ಮಲ್ಲಿ; ಬಂಗಿ ತುರಿಕಜ್ಜಿ, ಬಿಳಿ ತುರಿಕಜ್ಜಿ, ಎಲ್ಲ ತರದ ಜ್ವರ, ಜ್ವರಗಡ್ಡೆ, ಚಳಿಜ್ವರ, ಕಾಮಿಲೆ, ಕೆಮ್ಮು, ದಮ್ಮು, ಕಫ, ಅಗ್ನಿಮಾಂದ್ಯ, ಮೂಲವ್ಯಾಧಿ, ಮೂಲವ್ಯಾಧಿ, ನರ, ವಾತ, ಹರಿದಾಡ, ಪ್ರದರ, ಗರ್ಭಾಶಯದ ಎಲ್ಲ ರೋಗ, ಪ್ರಮೇಹ, ಉಪದಂಶ (ಗರ್ಮಿ) ಬಾಲಗ್ರಹ, ಕುಷ್ಠ, ಗಂಡಮಾಲೆಗಳಿಗೆ ತಕ್ಷಣ ಗುಣ ಬರುವ ಜರ್ಮನ, ಅಮೇರಿಕನ, ಫ್ರೆಂಚ ಇಂಗ್ಲಿಷ ಮತ್ತು ದೇಶಿ ಪೇಟಂಟ ಔಷಧಗಳು ಬಹಳ ಅಗ್ಗವಾಗಿ ಸಿಗುವವು.

ಇನ್ನೂ ಎಲ್ಲ ತರದ ಸೆಂಟ ಸೆರಿ, ಪರಪ್ಯೂಮರಿ ಸ್ಟೇಶನರಿ ಸಾಮಾನು, ಹಲ್ಲ ನೋವಿನ ಬ್ರಶ, ಸುವರ್ಣ ಕ, ಮೋಹಕ ಮೋಟಾರ ಬಂಡಿಗಳು, ಸಟ್ಟಲಗಳ ಪರದಿಂದ ಸಿಗುವವು ನಮ್ಮಲ್ಲಿಲ್ಲದ ನಿಮಗೆ ಅವಶ್ಯವಿರುವ ಸಾಮಾನು ಬೇರೆ ದೇಶದಿಂದ ತರಿಸಿಕೊಡಲಾದೀತು

ಎಸ್ ಎಲ್ ಧಾಕಪ್ಪನವರ ಬ್ರದರ್ಸ್,

ಶಿರಸಿ.

"ಚಾಟಾನೂಗಾ" ಕಬ್ಬಿನ ಗಾಣ!

ಜಗತ್ತಿನಲ್ಲಿ ಸರ್ವೋತ್ಕೃಷ್ಟವೆಂದೇ ಇದು ಇಷ್ಟು ಪ್ರಖ್ಯಾತಿ ಹೊಂದಿತು!



ನಂ ೧೩, ರೂ ೧೪೪

,, ೧೨, ರೂ. ೧೬೫

,, ೩೨, ರೂ. ೧೯೦

,, ೩೩, ರೂ. ೫೦.

ಸಾಲುಗಳು ಮುಂಬಯಿ ರೇಲ್ವೆ ಸ್ಟೇಶನ್ನಿನ ವರೆಗೆ ತಂದು ಕೊಡಲ್ಪಡುವವು.

ಇದರ ರೋಲರುಗಳು ಶುದ್ಧ ಕಬ್ಬಿಣದಿಂದ ಮಾಡಿದ್ದಿರುತ್ತವೆ, ಕಬ್ಬಿನೊಳಗಿನ ಹನಿ ಹನಿ ರಸವನ್ನು ಕೂಡ ಹಿಂಡಿ ತೆಗೆಯುವ ವ್ಯವಸ್ಥೆ ಮಾಡಲ್ಪಟ್ಟಿರುತ್ತದೆ. ಗಾಣವ ಎರಡೂ ಬದಿಗಳ ಯಾವದೇ ಬದಿಯಿಂದ ಕಬ್ಬು ಕೊಡಲ್ಪಡುತ್ತದೆ.

ಆರ್ಡರಿನ ಸಂಗಡ ೩ ಹಣವನ್ನು ಮುಂಚಿತವಾಗಿ ಕಳಿಸಬೇಕು.

ಕ್ಯಾಟಲಾಗು "ಡಬ್ಲ್ಯು ೧೧೩" ಪುಕ್ಕಟೆ!

ಮೆಕ್‌ಬೆಥ ಬ್ರದರ್ಸ ಮತ್ತು ಕಂಪನಿ, ಲಿಮಿಟೆಡ್.

ಕೋಡಾಕ ಹೌಸ, ಹೊರ್ನಬಿ ರೋಡ, ಮುಂಬಯಿ.

ಏಜಂಟರು ಬೇಕು! ಏಜಂಟರು ಬೇಕು!!



ನಮ್ಮಲ್ಲಿ

ಅತಿ ಮನೋಹರವಾದ

ತೇಗ ಕಟ್ಟಿಗೆಯ

ದೇವರ ಮಂಟಪಗಳೂ,

ಹೆಂಗಸರ ಸೌಭಾಗ್ಯದ ಪೆಟ್ಟಿಗೆಗಳೂ, ಡ್ರೆಸ್ಸಿಂಗ ಪೆಟ್ಟಿಗೆಗಳೂ, ಆಫೀಸ ಬಾಕ್ಸಗಳೂ, ರೋಕಿಂಗ ಖುರ್ಚಿಗಳೂ ಹಾಗೂ ಯಾವತ್ತೂ ತರದ ಮನೇ ಸಾಮಾನು ಸಿಗುತ್ತದೆ

ನಮ್ಮ ವಿಳಾಸ:—

ದಿ ನೊರ್ಥ ಕೆನರಾ ಟ್ರೇಡಿಂಗ ಕಂಪನಿ,

ಶಾಂತಿ ಭುವನ,

ಕಾರವಾರ.

धातू क्षीणता व कमजोरपणा यांसाठीं

मदन मंजरी गोळ्या. (रजिस्टर्ड)

या दिव्य गोळ्या रक्त व वीर्य सुधारून त्याची चांगली वाढ करतात पचन शक्ति सुधरून परसाकडे साफ होते. त्याचप्रमाणें प्रत्येक प्रकारची अशक्तता दूर होऊन शरीर तेजदार व बळवान होतें. किं ४० गोळ्यांच्या डबीस रु. १.

रमण विलासिनी गोळ्या. रात्रौ फक्त १ गोळी दुधाबरोबर खाल्यानें इच्छेप्रमाणें वीर्यस्तंभन होते. किं डबीस रु. १

नपुंसकत्वारी घृत. हा लेप पुरुषाच्या गुह्यभागावर लावला असतां सर्व रोग नाश पाऊन खरें पुरुषत्व प्राप्त होतें. कि. डबीस रु. १.

कुमठा,एजंट — माधव लोलप्पा शेणवी वेलेकेरी.

राजवैद्य नारायणजी केशवजी मॅनेः— १९१ काळबादेवी रोड मुंबई २

ಸುಗಂಧಿ ತಾಂಬೂಲೀ ಜರ್ದಾ

ಉತ್ತಮ ತಂಬಾಕ ತಕ್ಕೊಂಡು ಅದಕ್ಕೆ ತಾಂಬೂಲ ಪದಾರ್ಥಗಳ ಮತ್ತು ಮುಖರಂಜನ ಔಷಧೀ ವನಸ್ಪತಿಗಳ ಅರ್ಕದ ಒಗರೇಕೊಟ್ಟು ಈ ತಾಂಬೂಲೀ ಜರ್ದಾ ತಯಾರ ಮಾಡಿರುತ್ತದೆ. ಇದು ತಿನ್ನಲಿಕ್ಕೆ ಕಡಕವಿದ್ದು ಸುವಾಸಿಕವಿರುತ್ತದೆ ಇದರ ಸೇವನೆಯಿಂದ ಬಾಯಿಯು ಹೊಲಸು, ಹಲ್ಲು ಬೇನೆ, ಹುಳ ಇವು ನಾಶವಾಗಿ ಹಲ್ಲುಗಳು ಒಳ್ಳೇ ಗಟ್ಟಿಯಾಗುತ್ತವೆ. ಇದರ ಸೇವನೆಯಿಂದ ದಮ್ಮು, ಕಫ ಮುಂತಾದ ವಿಕಾರಗಳುಂಟಾಗುವ ಭೀತಿಯು ವಿನಾ ಇಲ್ಲ. ಅಸ್ತರಿಂದ ತಂಬಾಕ ಸೇವಿಸುವ ರಸಿಕರು ಅವಶ್ಯವಾಗಿ ಅನುಭವ ತಕೊಳ್ಳಬೇಕ ೧ ಪುಡಿಗೆ ಕಿಂ. ರೂ. ೦-೦-೬, ೨೫ಕ್ಕೆ ೦-೯-೦, ೧೦೦ಕ್ಕೆ ರೂ ೨-೦-೦, ೫೦೦ಕ್ಕೆ ರೂ. ೮-೦-೦, ೧೦೦೦ಕ್ಕೆ ರೂ ೧೫-೦-೦. ಟಪಾಲ, ಪೆಕಿಂಗ ವಗೈರೆ ಖರ್ಚು ಪ್ರತ್ಯೇಕ ಬೀಳುವದು. ವಿಶೇಷ ಮಾಹಿತಿ ಬಗ್ಗೆ ಕೆಳಗಿನ ಪತ್ತೆಯ ಮೇಲೆ ಪತ್ರವ್ಯವಹಾರ ನಡಿಸಿದರೆ ಜರೂರ ಉತ್ತರ ಕೊಡಲ್ಪಡುವದು

ಪತ್ತೆ:- ಎಸ್. ಬಿ. ಕದಂ,

ಬೀಡಿ ಮತ್ತು ತಂಬಾಕು ಜರ್ದಾ ದುಕಾನ

ಮು॥ ಪೋ. ನಿಪ್ಪಾಣಿ, ಜಿ ಬೆಳಗಾಂವ

ವಿಶೇಷ] ಅನುಭವಸಿದ್ಧ [ಪ್ರಸಿದ್ಧ.

ವನೌಷಧಿಮೂಲಿಕೆಗಳು

ವಾಯುದುಮ್ಮನ (ನಿಮೋನಿಯಾ) ವಾಂತಿ ಭ್ರಾಂತಿ (ಕೊಲೆರಾ) ಅರ್ಧಾಂಗವಾಯು (ಪೆರಾಲೆಸಿಸ್) ಹುಚ್ಚು ನಾಯಿ ನರಿ ಕಡಿತ, ಸರ್ಪಸುತ್ತು ಕೊಟ್ಟ, ಜಾಲ್ತಿ ಕೃತ್ರಿಮ ವಿಷಹಾಕಿದ್ದು (ಕೈಮದ್ದು) ವಗೈರೆ ರೋಗಗಳಿಗೆ ಒಂದೆ ಒಂದು ಮೂಲಿಕೆ ಯಿಂದ ಖಾತ್ರಿಯಾಗಿ ತೀವ್ರ ಗುಣಬರುವದು. ಇವು ಬಹುಕಾಲದಿಂದ ಅನುಭವ ತಕ್ಕೊಂಡು ಜಾಗ ಪ್ರತಿಷ್ಠಿತ್ತ ಜಕಡಗೆ ಬಳಕೆಯಲ್ಲಿದ್ದು ಖಿದಾಗುವ ಔಷಧಿಗಳ ತಾಜಾ ಮೂಲಿಕೆಗಳು! ಒಮ್ಮೆ ತರಿಸಿ ಅನುಭವ ತಕ್ಕೊಂಡರೆ ಖಾತ್ರಿಯಾದೀತು. ಕೊಲೆರಾ ಔಷಧಿಗಳ ದ್ರಾವಕ (Tincture) ಸಹ ಅಗಾವು ಸೂಚಿಸಿದರೆ ಕಳಿಸುವೆವು.

ವಾಯುದುಮ್ಮನದ ಒಕ್ಕೆ ಔಷಧಿ ಮೂಲಿಕೆ ತೊಲೆ ೧ಕ್ಕೆ ೦-೨-೦.
ಕೊಲೆರಾದ ಒಕ್ಕೆ " " ೦ ೨ ೦
ಅರ್ಧಾಂಗ ವಾಯುವಿನಬಗ್ಗೆ ೧ ಇಸವಿಗೆ ಸಾಕುವಷ್ಟು ಬೇರು ೧ ೮-೦
ಪ್ರತ್ಯೇಕ ತಿಳಿಸಲಿಕ್ಕು.
ನಾಯಿ ಕಡತದಬಗ್ಗೆ ... ... ೦-೪-೦.
ಸರ್ಪಸುತ್ತಿನ ಬಗ್ಗೆ ೦ ೨ ೦
ಹೊಟ್ಟಿಯಲ್ಲಿ ಕೃತ್ರಿಮ ಔಷಧಿ ಬಿದಬಗ್ಗೆ ತೊಲೆ ೧೦ ಕ್ಕೆ ೦-೮-೦
ರಕ್ತಶುದ್ಧಿ ವ ಮಂಶೋಧನೆ ಬಗ್ಗೆ ಮೂಲಿಕೆ ರಾತ್ತ್ಲ ಕ್ಕೆ ೧-೦-೦
ಮೋರಾಪಳಾ (ನೆಲ್ಲಿಕಾಯಿ ಮುರಂಬ) ರಾತ್ತ್ಲ ೧ ಕ್ಕೆ ೧-೦-೦

ರಾತುಗಟ್ಟಲೆ ಯಾ ಅದಕ್ಕೂ ಹೆಚ್ಚು ತರಿಸಿಕೊಳ್ಳು ವವರಿಗೆ ಕಡಿಮೆ ದರದಿಂದ ಕಳಿಸಲ್ಪಡುವದು ಟಪಾಲ ಖರ್ಚು ಪ್ರತ್ಯೇಕ. ವಿಶೇಷ ಮಾಹಿತಿ ಪತ್ರ ದ್ವಾರಾ. ಅನುಪಾನಪತ್ರ ಔಷಧೀ ಸಂಗಡ.

ಎನ್. ಜಿ. ಹೆಗಡೆ, ಮಾಸ್ತೇರಿ,

ಪೋಸ್ಟ—ಬಂಕಿಕೊಡ್ಲ. ಜಿ. ಉತ್ತರ ಕಾನಡಾ

ಸುಲಭ ಕ್ರಯ! ಸುಲಭ ಕ್ರಯ!!

ಡಾಕ್ಟರ ಜೀ. ಬೀ. ಯಾವರ

ಸುಗಂಧ ನಶ್ಯದ ಪುಡಿ.

(Registered Trade Mark.)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪಿನಸಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಗಾಗಿ ಪುಕ್ಕಟೆ ಕಳಿಸಲಾರೆವು.

ಬುಡ್ಡಿ ಒಂದಕ್ಕೆ ಕ್ರಯ ರೂ ೦-೪-೦. ವ್ಹಿ. ಪಿ ೪ ಅಣೆ ಡಜನ್ ೧ ಕ್ಕೆ ರೂ. ೨-೮-೦. ವ್ಹಿ. ಪಿ. ೦-೮-೦ ದಯವಿಟ್ಟು ನಿಮ್ಮ ಹೆಸರನ್ನೂ ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

—ಗುಡ್‌ಲಕ್ ಸನ್ ಅಂಡ್ ಕಂಪನಿ ಲಿಮಿಟೆಡ್ ಪೋ. ಬಾ. ೫೧೦, ಪಾರ್ಕಟೌನ್, ಮದರಾ

ಕಿರ್ಲೋಸ್ಕರ ಕಬ್ಬಿನ ಗಾಣಗಳು.

(ಎರಡು ಎತ್ತುಗಳಿಂದ ನಾಲ್ಕು ಎತ್ತುಗಳ ವರೆಗೆ)

ನಮ್ಮ ಕಾರಖಾನೆಯಲ್ಲಿ ತಯಾರಾಗುವ

(೧) ಕಿರ್ಲೋಸ್ಕರ ನಂ ೫, (೨) ಕಿಸಾನ,(೩) ಕಮಾಲ ಗಾಣಗಳಲ್ಲಿ

ಕಮಾಲ ಗಾಣ

ಇದು ಎಲ್ಲಕ್ಕೂ ಮೇಲಾದದ್ದಿರುತ್ತದೆ ಇದು ತೀರ ಹೊಸದು ೧೦೦ಕ್ಕೆ ೭೨ ರಸ ಹಿಂಡುತ್ತದೆ. ಒಂದು ತಾಸಿಗೆ ೧೫೦೦ ಪೌಂಡ ಕಬ್ಬನ್ನು ಅಡುತ್ತದೆ. ಬಿಡಿ ಭಾಗಗಳು ಕಾರಖಾನೆಯಲ್ಲಿ ಬೇಡಿದಾಗ ದೊರೆಯುತ್ತವೆ, ಹೆಚ್ಚಿನ ಸಂಗತಿಯ ಬಗ್ಗೆ ಇಂದೇ ತಿಳಿದುಕೊಳ್ಳಿ

ಕಿರ್ಲೋಸ್ಕರ ವಾರ್ತೆ

ಇದೊಂದು ಕನ್ನಡ ಮಾಸಪತ್ರಿಕೆಯು ಕರ್ನಾಟಕ ತರುಣರ ಉನ್ನತಿಯೇ ಇದರ ಧ್ಯೇಯವು. ವಾರ್ಷಿಕ ಚಂದಾ ಹಣ ಒಂದೇ ೧। ರೂ.

ಮಾದರಿ ಪ್ರತಿಯು ಪುಕ್ಕಟವಾಗಿ ದೊರೆಯುವದು.

ಕಿರ್ಲೋಸ್ಕರ ಬಂಧು ಲಿಮಿಟೆಡ್, { ಕಿರ್ಲೋಸ್ಕರವಾಡಿ ಜಿಲ್ಲಾ ಸಾತಾರಾ.

ಅಮೃತಾಂಜನ.



ಇದರ ಉಪಯೋಗದಿಂದ, ವಾತವೇದನೆ, ಉಳುಕು ಇತ್ಯಾದಿಗಳಮೇಲೆ, ರಾಮಬಾಣದಂತಾಗಿರುವದು. ಕಳೆದ ೩೫ ವರ್ಷಗಳಿಂದ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗುತದೆ. ಲಕ್ಷಗಟ್ಟಲೆ ಜನಗಳು ಅಮೃತಾಂಜನವನು ಉಪಯೋಗಿಸುತ್ತಿರುವದೆ. ಅದರ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಜೀಗು, ಸಂಧಿವಾತ ಮೊದಲಾದ ಎಷ್ಟೋ ವ್ಯಾಧಿಗಳಮೇಲೆ ಇದು ಗುಣಕಾರಿಯೆಂದು ಅರಿಯಬರುವದು ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು. ಕಿಮ್ಮತು ೧೦ ವ್ಹಿ. ಪಿ. ಖರ್ಚು ಬೇರೆ.

ಅಮೃತಾಂಜನ ಡಿಪೋ, ಫೋರ್ಟ್, ಮುಂಬಯಿ

Printed and Published by Krishnarao Keshav Shenvi (Editor) at his Star of Kanara Press Kumta.

ವರ್ಷ ೧೦.

ಕಾನಡಾವೃತ್ತ.

THE KANARA NEWS.

ಸಂಚಿಕೆ ೧೯.

ಪತ್ರದ ವರ್ಗಣಿ.

ಮುಂಗಡವಾಗಿ ಆಗ್ಗಾವು

ರೂಪಾಯಿ 2-4-0.

ಪೋಸ್ಟಾರ್ಡರಿಯಿಂದ

ರೂ. 3-0-0.

ವಿ. ಪಿ. ಅಂಚೆವೆಚ್ಚ ಸೇರಿ

ರೂಪಾಯಿ 3-2-0.

ಬಿಡಿ ಸಂಚಿಕೆಗೆ 0-1-0.

[illegible]

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಜಾಹೀರಾತುಗಳ ದರ

[illegible]

(೧೦ ಎಣ್‌ ಅವ.)

[illegible] ರೂ. 1-0-

[illegible] 0-4-0.

[illegible]

(ಕುಮಠಾ—ಕಾನಡಾವೃತ್ತ ಸೋಮವಾರ, ತಾರೀಖು ೮ ಮಾಹೆ ಫೇಬ್ರುವರಿ ಸನ್ ೧೯೩೬ ನೇ ಇಸವಿ)

हिंदुस्थानांतील, [illegible] ज्यामध्ये हिंदुस्थानची हवा [illegible] हे औषध हिंदुस्थानातील लोकांस ज्यास्त फायदेशीर आहे.

द्राक्षासव- [illegible] किंमत २ रुपये;

रामबाण औषधे —

सर्दि [illegible],

[illegible],

[illegible] साफ करणारे,

[illegible],

[illegible] देणारे,

[illegible],

— [illegible]

[illegible]

[illegible] फार्मास्युटिकल वर्क्स लिमिटेड,

मुंबई नं: १२

[illegible]— मेसर्स पंडित आणी कंपनी,

तीर्थहळ्ळी.

ಬೇಕಾದ ಚಿನ್ನಾಭರಣಗಳು ನಮಗೆ ಆರ್ಡರ ಕೊಟ್ಟಲ್ಲಿ ಯೋಗ್ಯ ಮುದ್ದತ್ತಿನಲ್ಲಿ ಕೊಡುವೆವು.

R. S. KASARGOD. B. A.

Jewellers, KUMTA.

ಆರ್. ಎಸ್. ಕಾಸರಗೋಡ, ಬಿ. ಎ.,

ರತ್ನಾಭರಣ ವ್ಯಾಪಾರಿ, ಕುಮಟಾ.

ಯಾವದೇ ಆಕಾರದ / ನಕ್ಷೆಯ / ನಂಬರಿನ } ಗಡಿಯಾರವನ್ನು

ಬರೇ ೭ ರೂಪಾಯಿಗಳಿಗೆ ಕೊಡುತ್ತೇವೆ.

ಮೂಲ ಬೆಲೆ ರೂಪಾಯಿ ೧೪; ಅರ್ಧ ಬೆಲೆ ರೂಪಾಯಿ ೭;



[illegible]

ಅಲ್ಪವೇ ಇವೆ; ಈಗಲೇ ಬರೆಯಿರಿ.

ಪತ್ತೆ:— **Swan House: P B 602 P T Madras**

ದರ ಕಡಿಮೆ ಮಾಡಿರುವೆವು ! ಸುಸಂಧಿ!

ನಮ್ಮ

ಸುಪ್ರಸಿದ್ಧ

ಇಂಗ್ಲಿಷ ಮೋಡ

ಸಾಯಕಲ

ವೆಲಿಂಗ್ಟನ

ಸಾಯಿಕಲ ಮತ್ತು ಮೋಟಾರ ಕಂಪನಿ, ಹೊರ್ನಬೀ ರೋಡ, ಮುಂಬಯಿ ನಂಬರ ೧.

ಅರ್ಸೆನಲ ರೋಡ, ಪುಣೆ.

ಅತ್ಯಲ್ಪವಿವೆ! ಉಚಿತ!

ಕೇವಲ ಉಚಿತ! ಉಚಿತ! ಕೇವಲ ಉಚಿತ!!



[illegible]

ಬರೇ ರೂಪಾಯಿ ೫.

CAPTAIN WATCH CO., P. B. 265, MADRAS.

೧೯೩೩ನೇ ಜನವರಿಯಿಂದ ೪ನೇ ವರ್ಷ ಪ್ರಾರಂಭ

ಸಚಿತ್ರ | **ಜಯಕರ್ನಾಟಕ** | ಮಾಸಪತ್ರಿಕೆ

ಸಂಪಾದಕ- ಆಲೂರ ವೆಂಕಟರಾಯರು

ಇದರಲ್ಲಿ ವಾಙ್ಮಯಾತ್ಮಕ ಸಾಹಿತ್ಯ, ಧಾರ್ಮಿಕ ಸಾಮಾಜಿಕ ಐತಿಹಾಸಿಕ ಆರ್ಥಿಕ ಇತ್ಯಾದಿ ವಿಷಯಗಳು ಬರುವವು. ಪ್ರಪಂಚ ಪರಿಚಯ, ಜೀವನಚರಿತ್ರೆ ಮುಂತಾದವುಗಳು ಕೊಡಲ್ಪಡುವವು. ಪ್ರತಿ ಸಂಚಿಕೆಯಲ್ಲಿ ಸುಂದರ ಚಿತ್ರಗಳೂ ಬರುತ್ತವೆ. ಮೊದಲ ಕಿತ್ತು ೩೦ ಪುಟಗಳು. ವರ್ಗಣಿ. ರೂ. ೫-೮-೦

ಕಾರ್ಯದರ್ಶಿ ಜಯಕರ್ನಾಟಕ ಧಾರವಾಡ.

ಎಲ್ಲಾ ನೋವುಗಳಿಗೆ ದಿವ್ಯೌಷಧ

ವಾತಹಾರಿ ತೈಲ.

ತ್ರಯ್ಯ ತೊಲೆ ಬಾಟ್ಲಿ ೧ಕ್ಕೆ ೦—೧೨—೦ ಊಂಚಿ ಸುವಾಸಿಕ ಕಾಬೂಲಿ ಹಿಂಗು ೧೦ ತೊಲೆ ಡಬ್ಬಿ ೧ಕ್ಕೆ ೧—೮—೦. ಹಿಂಗಿನ ಅರ್ಕ . . . . ಬಾಟ್ಲಿ ೧ಕ್ಕೆ ೦—೮—೦. ರಕ್ತಶುದ್ಧಿಕಾರಕ ಧಾತು ಪೌಷ್ಟಿಕ, ಶಕ್ತಿವರ್ಧಕ ಹಲವಾ ೨೦ ತೊಲೆಯ ಡಬ್ಬಿ ೧ಕ್ಕೆ ೧—೪—೦. ೧ ತೊಲೆಯ ಹಿಂಗಿನ ಡಬ್ಬಿಗಳು ಡಜನ್ ೧ಕ್ಕೆ ೨—೦—೦. ತಲೆಗೆ ಹಾಕುವ ಸುವಾಸಿಕ ಮಕರಂದ ತೈಲ ೫ ತೊಲೆಯ ಬಾಟ್ಲಿ ೧ಕ್ಕೆ ೦—೧೨—೦. ಹುಳದ ಪುಡಿ ತೊಲೆ ೧ಕ್ಕೆ ೦—೮—. ಇದಲ್ಲದೆ, ನೀಲಗಿರಿ ತೈಲ, ಎಲ್ಲಾ ತರದ ಊಂಚಿ ಊದಬತ್ತಿಗಳು ಯೋಗ್ಯ ಕಿಮ್ಮತಿಗೆ ಸಿಗುವವು. ಟಪಾಲ ಖರ್ಚು ಪ್ರತ್ಯೇಕ

ಕರೀಕರ ಕಾಬೂಲೀ ಹಿಂಗಿನ ದುಕಾನ,

ಜವಳಿಬಾಜಾರ, ಕುಮಟಾ.

ರಾಗದ ಪೆಟ್ಟಿಗೆಗಳು.

ತಬಲೆ ಜೋಡಿ ಇತ್ಯಾದಿ ಗಾಯನ ಸಾಮಾನು.

೧ ರಾಗದ ಕೈಪೆಟ್ಟಿಗೆ ಕಿಂ. ೩೦, ೪೦, ೬೦, ೭೫, ೧೦೦.

೨ ಕಾಲು ಪೆಟ್ಟಿಗೆ ಕಿಂ. ೬೫, ೭೫, ೧೨೦, ೧೪೦.

೩. ತಬಲೆ ಜೋಡಿ ಕಿಂ. ೧೬, ೧೮, ೨೦, ೨೫.

೪. ಹಾರ್ಮೋನಿಯಮ ಗ್ಯಾಡ (ಮರಾಠಿ) ಕಿಂ. ೧॥,

ತಬಲೆ ಗ್ಯಾಡ ಕಿಂ. ೧॥ ೮.

ವಿಶೇಷ ಮಾಹಿತಿಬಗ್ಗೆ ನಮ್ಮ ಮರಾಠಿ ಕ್ಯಾಟಲಾಗ ಪುಕ್ಕಟೆ ಕೊಡುವೆವು.

ಪತ್ರವ್ಯವಹಾರ ಮರಾಠಿಯಿಂದ ಇಲ್ಲವೆ ಇಂಗ್ರಜಿಯಿಂದ ಮಾಡತಕ್ಕದ್ದು.

ಪತ್ತೆ:- **ಗೋಪಾಳ ಸಖಾರಾಮ** ಆಣಿ **ಕಂಪನಿ, ವಿಠ್ಠಲವಾಡಿ ಎದುರಿಗೆ ೩೫೬ ಕಾಳಬಾದೇವಿ, ಮುಂಬಯಿ**

ಟಿ. ಎಸ್. ಮೋಟರ ಸರ್ವಿಸ, ಶಿವಮೊಗ್ಗಾ.

ಗೇರಸಪ್ಪಾ ಜೋಗಿಗೆ ರೆಗ್ಯೂಲರ್ ಸರ್ವೀಸ್



ಶಿವರಾತ್ರಿಯ ಸಮಯದಲ್ಲಿ ಗೋಕರ್ಣಕ್ಕೆ ಸ್ಪೆಶಲ್ ಲಾರಿಗಳು.

(೧) ಹುಬ್ಬಳ್ಳಿ- ಯಲ್ಲಾಪುರ- **ಅಂಕೋಲಾ- ಕಾರವಾರ** (೨

ಹುಬ್ಬಳ್ಳಿ- ಮುಂಡಗೋಡ- ಶಿರ್ಸಿ- **ಕುಮಟಾ- ಹೊನ್ನಾವರ- ಭಟ್ಕ**

( ) ಕುಮಟಾ- ಶಿರ್ಸಿ- ಸಿದ್ದಾಪುರ- **ಗೇರಸಪ್ಪಾ- ಜೋಗ (Gerapp**

Falls)ಸಾಗರ ಶಿವಮೊಗ್ಗಾ—ಈ ಲೈನುಗಳಲ್ಲಿ ರೆಗ್ಯೂಲರ್ ಸರ್ವೀಸ ನಡೆಯುತ್ತದೆ

ಪ್ರಯಾಣಿಕರಿಗೆ ಉಪಯೋಗವಾಗುವಂತೆ ಎಲ್ಲಾ ಸ್ಟೇಶನ್ನುಗಳಲ್ಲೂ ವ್ಯವಸ್ಥಾ ಏರ್ಪಾಡು ಮಾಡಿದೆ.

ಹೆಚ್ಚಿನ ಮಾಹಿತಿಯನ್ನು ಆಫೀಸಿನಲ್ಲಿ ತಿಳಿದುಕೊಳ್ಳಬಹುದು

THE

INDIA PROVIDENT COMPANY LTD.

ESTABLISHED 1910.

Dividend declared 1912 20 per cent.

Dividend declared 1922 30 per cent.

Dividend declared previous year 15-20 per cent.

The Safest office for Life Insurance of the poor Premium Re. 1 As. 8 per mensem.

Apply at once to -

PADMANABH GOPAL KAMAT,

Agent, ANKOLA N. Kana

ಸರಕಾರದಲ್ಲಿ ರಜಿಸ್ಟ ಆದಂಥ

ಅನೇಕ ಸರ್ಟಿಫಿಕಿಟಗಳು ಮತ್ತು ಸುವರ್ಣಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು.

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ.

ಈ ಮಧುವು ಮಹೌಷಧಿಯಾಗಿದ್ದು ಬಹಳ ಸೀದಾಗಿಯೂ ರುಚಿಕರವಾಗಿಯೂ ಇರುತದೆ. ಈ ಮಧುವಿನ ಸೇವನದಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ವಿಕೃತಿಯಿಂದಾದ ಬೇನೆಯು ಹೋಗುವದು. ೬೦ ೭೦ ವರ್ಷದ ಮುದುಕರ ಶರೀರದಲ್ಲಿ ಕೂಡ ತರುಣರಂತೆ ಪ್ರವರ್ಧಮಾನವಾಗುವದು. (ನಿಜವಾಗಿ ಒಂದೇ ಸಪ್ತಕದಲ್ಲಿ ಅನುಭವಕ್ಕೆ ಬರುವದು) ಜನನೇಂದ್ರಿಯದೊಳಗಿನ ಶಕ್ತಿಯು ಹೋದ ವ್ಯಾಕ್ತಿ ಸಪ್ತಾಂಶಕಸ್ತವೆ ಇಲ್ಲದಂತಾಗುವದು. ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ ಧಾತು ಒಂದಾಗುವದು — ಪರಮಾ ಹಾಗೂ ಕಾನಿಂದ ದೊಷಿಕವಾದ ಕೇರಿ ನಿರ್ದೋಷವಾಗುವದು. ಕೆಲವೇ ದಿವಸದಲ್ಲಿ ಗುಣಬರುವದು. ತರುಣ ಸ್ತ್ರೀಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಇದರೊಳಗಿನ ಗುಣ ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ, ಉದರರೋಗ ದಮ್ಮು ಇವುಗಳು ನಾಶವಾಗುವವು. ದಿವಸದಲ್ಲಿ ಮೂರಾವರ್ತಿ ಊಟಮಾಡಿದರೂ ಅನ್ನ ಪಚನವಾಗಿ ಹಸಿವೆ ಜಾಸ್ತಿಯಾಗುತ್ತದೆ. ಇದರ ಫಲವು ಮೊದಲನೇ ದಿವಸದೇ ಬರುವದು. ಶೌಚ ಸಾಫ ಆಗುವದು. ಮೈಯಲ್ಲಿ ಎಷ್ಟೋ ದಿವಸದ ಜ್ವರ ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ಔಷಧಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ. ಹೊಸಬೇನೆ ಇದ್ದರೆ ೧೦ ದಿವಸ ಸಾಲುವ ಒಂದು ಬಾಟಲಿಯಿಂದ ಗುಣಬರುವದು. ಹಳೇ ರೋಗ ಇದ್ದರೆ ೩ ಬಾಟಲಿಯಿಂದ ಗುಣಬರುವದು. ಒಂದು ಬಾಟ್ಲಿಯ ಕಿಮ್ಮತ್ತು ೧॥ ರೂಪಾಯಿ ಮೂರು ಬಾಟಲಿಯ ಕಿಮ್ಮತ್ತು ೪—೦—೦ ಮೂರು ಬಾಟಲಿಗಳನ್ನು ಒಂದೇ ಪಾರ್ಸಲಿನಲ್ಲಿ ಕಳಿಸುವೆವು. ಅಂದರೆ ಟಪಾಲಖರ್ಚು ಹೆಚ್ಚು ಬೀಳುವದಿಲ್ಲ. ಇನ್ನು ಬಾಟಲಿಗಳ ಕಿಮ್ಮತ್ತು ೧೨—೦—೦ ಮತ್ತು ೧ ಬಾಟಲಿ ಪುಕ್ಕಟೆ ಸಿಗುವದು. ಟಪಾಲಖರ್ಚು ಬೇರೆ ಬೀಳುವದು. ಏಜಂಟರ ಕಡೆಯಿಂದ ೧ ಬಾಟ್ಲಿಗೆ ೧—೮—೦ ೩ ಬಾಟ್ಲಿಗೆ ೪—೦—೦; ಹನ್ನೆರಡಕ್ಕೆ ೧೨—೦—೦

ವ್ಯವಸ್ಥಾಪಕ— ದ್ರಾಕ್ಷಾರ್ಕಮಧು ಆಫೀಸ, ಪ್ರೋ. ನಿಪ್ಪಾಣಿ ಜಿ ಬೆಳಗಾಂವ

ಮಹಾಯುದ್ಧದಿಂದೊದಗಿದ ನಷ್ಟ.

ಮಹಾಯುದ್ಧದ ಕುರಿತು ಮಿ। ಬೋಜ ಎಂಬವರು ಒಂದು ದೊಡ್ಡ ಗ್ರಂಥವನ್ನು ಬರೆದಿರುವರು. ಈ ಗ್ರಂಥದಲ್ಲಿ ಮಿ। ಬೋಜರವರು ಮಹಾಯುದ್ಧದಿಂದ ಒದಗಿದ ನಷ್ಟವನ್ನು ಅಂಕಿಗಳಿಂದ ವಿವರಿಸಿರುವರು. ಮಿತ್ರರಾಷ್ಟ್ರಗಳಲ್ಲಿ ಈ ಯುದ್ಧದ ಕಾಲಕ್ಕೆ ೬೯,೩೮,೫೧೯ ಮಂದಿಗಳು ಮೃತರಾದರು. ೩೪, ೩೩, ೭೪೦ ಮಂದಿಗಳು ಭಯಂಕರ ಘಾಯಪಟ್ಟರು; ೮೫, ೧೬,೪೯೭ ಮಂದಿಗಳಿಗೆ ಅಲ್ಪ ಸ್ವಲ್ಪ ಘಾಯಗಳಾದವು. ೪೬,೫೩,೫೬೩ ಮಂದಿಗಳ ಪತ್ತೆಯಿಲ್ಲ. ಶತ್ರು ರಾಷ್ಟ್ರಗಳಲ್ಲಿ ೩೦,೪೦,೨೯೩ ಮಂದಿಗಳು ಮೃತರಾದರು; ೨೮,೫೭,೭೩೨ ಮಂದಿಗಳು ಭಯಂಕರ ಘಾಯಪಟ್ಟರು; ೫೪,೮೫ ೫೪೩, ಮಂದಿಗಳಿಗೆ ಅಲ್ಪ ಸ್ವಲ್ಪ ಘಾಯಗಳಾಗಿವೆ, ೧೩,೩೦೦, ೭೮ ಮಂದಿಗಳ ಪತ್ತೆಯಿಲ್ಲ. ಒಟ್ಟು ಇತ್ತಂಡಗಳಲ್ಲಿಯೂ ಸತ್ತ ಮಂದಿಗಳು ಒಟ್ಟು ೯೯,೯೮,೭೭೧; ಭಯಂಕರ ಘಾಯಪಟ್ಟವರು ೬೨,೯೫,೫೧೨; ಅಲ್ಪ ಸ್ವಲ್ಪ ಘಾಯಪಟ್ಟವರು ೧,೪೦,೦೨,೦೭೯ ಜೀವತ್ತಿಯಾದವರು ೫೯,೮೩,೬೦೦ ಇಷ್ಟು ಧರಿಸಿದ ಸೈನಿಕರಿಗೊದಗಿದ ನಷ್ಟದ ಅಂಕಿಗಳಿವು. ಇದಲ್ಲದೆ, ಯುದ್ಧದ ಕಾಲಕ್ಕೆ ಒದಗಿದ ರೋಗು, ಕೊಲೆ, ಗುಂಡು ಹಾರಿಸೋಣ, ವಿಮಾನಿನ ಮೇಲಿಂದ ದಾಳು, ಸಮುದ್ರಗಳ್ಳರ ಹಾವಳಿ ಹಸ್ತುಹಾರಿ, ಇತ್ಯಾದಿಗಳಿಂದ ಒದಗಿದ ನಷ್ಟವು ಪ್ರತ್ಯಕ್ಷ ಯುದ್ಧದಿಂದ ಒದಗಿದ ಷ್ಟೇ ಇರುತ್ತದೆಂದು ಹೇಳು ವ ರು ಮಾನ್ಯವಷ್ಟೆ. ಯುದ್ಧದಿಂದ ಅನಾಥರಾದ ಮಕ್ಕಳ ಸಂಖ್ಯೆ ಕೇಳಿದರೆ, ಭಯವಾಗುತ್ತದೆ. ಫ್ರಾನ್ಸದಲ್ಲಿ ಹೀಗೆ ಅನಾಥರಾದ ಮಕ್ಕಳು; ೮,೮೭.೫೦೦ ಎಂದು ಸರಕಾರ ಅಂದಾಜಿದೆ. ಇಟಲಿಯೊಳಗಿನ ೫,೧೨,೦೦೦ ಮಕ್ಕಳು ತಮ್ಮ ತಂದೆಗಳನ್ನು ರಣ ದೇವತೆಗೆ ಬಲಿಕೊಟ್ಟರೆಂದು ವಾ ಪ್ರೊಫೆಸರರ ಎಣಿಕೆ. ಫ್ರಾನ್ಸದೇಶದಲ್ಲಿ ಯುದ್ಧದ ಕಾಲಕ್ಕೆ ಮಡಿದವರ ಸಂಖ್ಯೆಗೂ, ಅನಾಥರಾದ ಮಕ್ಕಳ ಸಂಖ್ಯೆಗೂ ಬೀಳುವ ಪ್ರಮಾಣದಂತೆ ಆಲೋಚಿಸಿದರೆ, ಇತರ ರಾಷ್ಟ್ರಗಳಲ್ಲಿ ೬೫ ಲಕ್ಷ ಮಕ್ಕಳು ಅನಾಥರಾಗಿರಬೇಕು. ಅಮೇರಿಯ ಪದ್ಧತಿಯಿಂದ ವಿಚಾರಿಸಿದರೆ, ೧,೩೦,೦೦೦ ಮಕ್ಕಳು ಅನಾಥರಾಗುವರು. ಫ್ರಾನ್ಸದೊಳಗಿನ ಜನನಪ್ರಮಾಣವು ತೀರ ಕಡಿಮೆಯಿದ್ದು, ಇಟಲಿಯೊಳಗಿನದು ತೀರ ಹೆಚ್ಚು; ಈ ವಿಚಾರದಿಂದ ದೃಷ್ಟಿಕ್ಕೆ ಮಾಡಿದರೆ ಸಾಮಾನ್ಯವಾಗಿ ೯೦ ಲಕ್ಷ ಮಕ್ಕಳು ಅನಾಥರಾಗಿರಬೇಕು. ಹೀಗೆಯೇ ವಿಧವೆಗಳ ವಿಚಾರ ಮಾಡಿದರೆ, ೫೦ ಲಕ್ಷ ಹೆಂಗಸರು ವಿ ಧ ವೆ ಯ ರಾ ಗಿ ರ ಬೇ ಕು. ಇ ದ ಲ್ಲ ದೆ, ೧ ಅಜ್ಞ ಜನರಿಗೆ ಹೇಳಕೊಳ್ಳುವಷ್ಟು ಉಪದ್ರವವಾಯಿತು. ಲಕ್ಷಾವಧಿ ಹೆಂಗಸರು ಯುದ್ಧದ ಅವಮಾನದ ಅಪತ್ಯಗಳಿಗೆ ಬೆದರಿ, ಹಾದಿಯ ಮೇಲೆಯೇ ಪ್ರಸೂತರಾದರು. ಹುಟ್ಟು ಹೊಸದಾಗಿ ಹುಟ್ಟಿದ ಕೂಸುಗಳನ್ನು ಕೊಂದು ಬಿಡುತ್ತಿದ್ದರು. ಈ ಸ್ಥಿತಿಯನ್ನು ವರ್ಣಿಸಲಶಕ್ಯವು. ಇದಲ್ಲದೆ, ಯುದ್ಧದಲ್ಲಿ ಮಡಿದವರು ರಾಷ್ಟ್ರದೊಳಗಿನ ನರಪುಂಗವರು, ಸಶಕ್ತರು; ಸತೇಜರು, ಬುದ್ಧಿ ಕುಶಲರು; ಕಾರ್ಯದಕ್ಷರು. ಇಂಥವರು ನಷ್ಟ ಹೊಂದಿದ್ದರಿಂದ, ಭೂಕಂಪಕ್ಕೆ ಒದಗಿದ ಹಾನಿಯು ಅಲ್ಪಮಾತ್ರವು. ಯುದ್ಧದಿಂದ ಒದಗಿದ ಅಲ್ಪಮಾತ್ರ ಹಾನಿಯನ್ನು ಮಿ। ಬೋಜರವರು ಒಂದು ಉದಾಹರಣೆಯಿಂದ ತಿಳಿಸಿ ಹೇಳಿರುವರು:- ವಿಲಾಯತಿಯಲ್ಲಿ ಆಧುನಿಕ ಸುಧಾರಣೆಗಳಿಂದೊಡಗೂಡಿದ ಲುಸಿಟಾನಿಯಾ ಎಂಬ ಹಡಗವು ಅಟಲಾಂಟಿಕ ಮಹಾಸಾಗರದಲ್ಲಿ ಥಟ್ಟನೆ ಮುಳುಗಿತು. ಅದರಿಂದ ೧ ಸಾವಿರ ಜನರು ಮಡಿದರು. ಈ ಸುದ್ದಿ ಕೇಳಿದೊಡನೆ ಸಮಸ್ತ ರಾಷ್ಟ್ರಗಳೂ ಹೌಹಾರಿದವು. ಭಯಂಕರ ಅಪಘಾತ ಎಂದು ಎಲ್ಲ ಭೂಲೋಕದಲ್ಲಿ ಕಳವಳ ಉಂಟಾಯಿತು. ಸ್ಥೂಲಮಾನದಿಂದ ಮಹಾಯುದ್ಧಕ್ಕೆ ೨ ಕೋಟಿ, ೭ ಲಕ್ಷ ಮಂದಿಗಳು ಬಲಿಬಿದ್ದರು. ಇಷ್ಟು ಜನರು ಸಾಯಬೇಕಾದರೆ, ೭೦ ವರುಷಗಳ ವರೆಗೆ ದಿನಾ ೧ ಲುಸಿಟಾನಿಯಾ ಹಡಗವನ್ನು ಅಟಲಾಂಟಿಕ ಮಹಾಸಾಗರದಲ್ಲಿ ಧಾರೆಯೆರೆಯಬೇಕಾಗುವದು. ೭೦ ವರುಷಗಳ ಮಾತೇಕೆ. ರಣದೇವತೆಯು ಈ ಹಾನಿಯನ್ನು ೧,೫೬೭ ದಿನಗಳಲ್ಲಿ ಒದಗಿಸಿಬಿಟ್ಟಿತು. ಇಷ್ಟು ಭಯಂಕರ ನಷ್ಟವು ಮಹಾಯುದ್ಧದಿಂದ ಒದಗಿರುವದು.

— ಪ.ದ್ರಾವಿಡ ಮ್ಯುನಿಸಿಪಾಲಿಟಿಯವರು ಮಹಾತ್ಮರ ಭಾವಚಿತ್ರವನ್ನು ತಮ್ಮ ನಗರ ಭವನದಲ್ಲಿ ಹಚ್ಚುವ ನಿರ್ಧಾರ ಮಾಡಿರುವರು.

— ಮಹಾರಾಷ್ಟ್ರದ ಮಾಥೇರಿ ಗ್ರಾಮದಲ್ಲಿ ಡಾ। ಭಾಟೇಕರರವರು ಚಹಾನಿಷೇಧಕ ಉಪನ್ಯಾಸಗಳನ್ನಿತ್ತು ವರ್ತಕರ ಕಡೆಯಿಂದ ಚಹಾ ಮಾರಾಟ ಮಾಡತಕ್ಕದ್ದಲ್ಲವಾಗಿ ಪ್ರತಿಜ್ಞೆಯನ್ನು ಕೊಂಡು ಚಹಾವನ್ನು ಮೊರದಲ್ಲಿ ತೆಗೆದು ಹೊರತಳ್ಳಿದರು.

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ.

ಕಾಮಿನಿಯಾ ತೈಲ. ರಿಜಿಸ್ಟರ್ಡ

ಮನೋಹರ ಗುಂಗುರು ಗುಂಗುರಾಗಿರುವ ನೀಲಿಮಯಿಂದ ನಿಬಿಡವಾದ ಕೇಶದ ಮುಖವನ್ನು ಯಾವ ಸ್ತ್ರೀಯು ತಾನೇ ವಾಂಛಿಸದೊಲ್ಲಳು? ಇಂಥ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾವದೋ.

ಕಾಮಿನಿಯಾ ಆಯಿಲ್ (ರಿಜಿಸ್ಟರ್ಡ)

ಈ ಆಯಿಲ್ ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತದೆಯೋ ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ವೃದ್ಧರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ. ಈ ಆಯಿಲ್ ಹೊಡೆದುಕೊಳ್ಳುವಲ್ಲೇ ಮಸ್ತಕದ ಬೇನೆಯು ತಕ್ಷಣ ಹೋಗಿ ಮನಸ್ಸು ಉಲ್ಹಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ಹೊಡೆಯ ಹೊಡೆಯ ಬಿಳಿ ಎಂದಿಗೂ ಆಗುವದಿಲ್ಲ. ಉದುರಿ ಹೋಗುವದಿಲ್ಲ, ಅದರೆ, ಅವು ಶುದ್ಧವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವದು.

ಕೀಳು ತರದ ಎಣ್ಣೆಗಳನ್ನು ಕೊಂಡುಕೊಂಡು ತಮ್ಮ ಹಣವನ್ನೂ ಕಳೆಯನ್ನೂ ಹಾಳುಮಾಡಿಕೊಳ್ಳುವದಕ್ಕಿಂತ ಒಂದೇಯೊಂದು ಬಾರಿ "ಕಾಮಿನಿಯಾ ಆಯಿಲ್ ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯು ಶ್ರೇಷ್ಠತೆಯ ದೆಸೆಯಿಂದ ನಮಗೆ ಪ್ರದರ್ಶನದಲ್ಲಿ "ಸರ್ಟಿಫಿಕೇಟ ಆಫ್ ಮೆರಿಟ" ಅಥವಾ ಯೋಗ್ಯತಾಪತ್ರವೂ ಇತರ ಸಾವಿರಾರು ಗ್ರಾಹಕರು ಉಪಯೋಗಿಸುವದ ಮಾನಪತ್ರಗಳೂ ದೊರೆತಿವೆ.

ಕ್ರಯ:— ಸೀಸೆಗೆ ರೂಪಾಯಿ 1-0-0, ಸೀಸೆ 3ಕ್ಕೆ ರೂಪಾಯಿ 2-10 0 ವ್ಹಿ. ಪಿ ಖರ್ಚು 0-14-0.

ಅತಿ ಮನೋಹರವಾದ ಸುರಭಿಯು !

ಒಟ್ಟೋ-ದಿಲ್ ಬಹಾರ್ !! (ರಿಜಿಸ್ಟರ್ಡ.)

ಈ ಸುಗಂಧದ್ರವ್ಯವು ಮಧುರ, ಕೋಮಲ, ಚಿರಸ್ಥಾಯಿ ಮತ್ತು ಅತ್ಯುತ್ತಮವು ಆಗಿದ್ದು ಶುದ್ಧವಾಗಿ ಪರೀಕ್ಷಿಸಿ ಆರಿಸಿ ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು. ಇದರಲ್ಲಿ ಮದಿರೆಯ (ಆಲ್ಕೊಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ವಸ್ತ್ರದಲ್ಲಿ ಅಥವಾ ಅಂಗಿಯಲ್ಲಿ ಈ ದ್ರವ್ಯದ ಕೆಲವು ಹನಿಗಳನ್ನು ಚಿಮುಕಿಸಿದರೆ ನಿಮ್ಮ ಸುತ್ತಲು ಸ್ವರ್ಗೀಯವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ, ಈ ಒಟ್ಟೋ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ವಿಶೇಷ ಮೋಹಕತೆಯಿಂದ ಸೆಳೆಯುವದು. ಒಂದೇ ಒಂದು ಸೀಸೆಯನ್ನು ತರಿಸಿನೋಡಿರಿ.

ಸಣ್ಣ ಸೀಸೆ 1 ಕ್ಕೆ 0 8 0; 1 ಪ್ರಮಾಣದ (ಮಿಡಿಯಂ) ಸೀಸೆ 1 ಕ್ಕೆ 0 12 0; ½ ಔನ್ಸಿನ ದೊಡ್ಡ ಸೀಸೆ 1 ಕ್ಕೆ 2 0 0. ಅಂಚೆಯ ವೆಚ್ಚ ಬೇರೆ 0 4 0

ಒಟ್ಟೋ-ದಿಲ್ ಬಹಾರ್ ಪರಿಮಳ ಕಾರ್ಡುಗಳು ಡಜನ್ 1 ಕ್ಕೆ 0 12 0.

Address: **The Anglo Indian Drug & Chemical Co.**

16, Market, **BOMBAY 2.**

ವಿವಿಧ ಸಂಗ್ರಹ.

ಟಪಾಲು-ತಂತಿ ಖಾತೆಯ ರಿಪೋರ್ಟು

೧೯೨೫—೨೬ನೇ ಇಸ್ವಿಯ ಟಪಾಲ-ತಂತಿಖಾತೆಗಳ ರಿಪೋರ್ಟು ಪ್ರಸಿದ್ಧವಾಗಿದೆ. ಸಮಸ್ತ ಟಪಾಲ ಆಫೀಸುಗಳೊಳಗಿಂದ ೧ ಅಬ್ಜ, ೨೯ ಕೋಟಿ, ೪೦ ಲಕ್ಷ ಸಾಮಗ್ರಿಗಳು ಬಟವಡೆಯಾದವು. ಅವುಗಳಲ್ಲಿ ೪ ಕೋಟಿ ೭೫ ಲಕ್ಷ ರಿಜಿಸ್ಟರ ಆಗಿ ಬಟವಡೆಯಾದವು. ಟಪಾಲ ಟಿಕೀಟ ಇವುಗಳ ವಿಕ್ರಯದಿಂದ ೮ ಕೋಟಿ, ೪೦ ಲಕ್ಷ ರೂಪಾಯಿಗಳ ಉತ್ಪನ್ನವಾಯಿತು. ೨ ಕೋಟಿ, ೪೨ ಲಕ್ಷ ಮನಿಆರ್ಡರುಗಳ ೮೪ ಕೋಟಿ ರೂಪಾಯಿಗಳು ಸಂಚಾರವಾದವು. ವಿ. ಪಿ. ಪಾರ್ಸಲುಗಳಿಂದ ೨೬ ಕೋಟಿ ೭೦ ಲಕ್ಷ ರೂಪಾಯಿಗಳು ವಸೂಲ ಮಾಡಲ್ಪಟ್ಟವು. ವಿಲಾಯತಿಯಿಂದ ಬರುವ ಟಪಾಲ ಬೋಟಿಗೆ ಮೊದಲು ೧೯ ದಿನ ೨೦ ತಾಸು ತಗಲುತ್ತಿದ್ದವು, ಈಗ ೧೪ ದಿನ ೧೫ ತಾಸು ತಗಲುತ್ತವೆ. ಇಲ್ಲಿಂದ ವಿಲಾಯತಿಗೆ ಹೋಗುವ ಟಪಾಲು ಬೋಟಿಗೆ ಮೊದಲು ೧೮ ದಿನ ೫ ತಾಸು ತಗಲುತ್ತಿದ್ದವು. ಈಗ ೧೪ ದಿನ ೯ ತಾಸು ತಗಲುತ್ತವೆ.

* * *

ಕೈರಾಟಿಯ ಪ್ರಸಾರ

ಹಿಂದುಸ್ಥಾನದೊಳಗಿನ ಮ್ಯುನಿಸಿಪಾಲಿಟಿಯ ಶಾಲೆಗಳಲ್ಲಿ ಕೈರಾಟಿಯ ಶಿಕ್ಷಣವು ಭರದಿಂದ ಪ್ರಸಾರವಾಗುತ್ತದೆ. ಸಂಯುಕ್ತ ಪ್ರಾಂತದಲ್ಲಿ ಅನೇಕ ಮ್ಯುನಿಸಿಪಾಲಿಟಿಗಳು ಖಾದಿಯ ಮೇಲಿನ ಆಕಟ್ರಾಯ ಡ್ಯೂಟಿಯನ್ನು ರದ್ದು ಮಾಡಿರುವವು. ತಮ್ಮ ನೌಕರರಿಗೆ ಖಾದಿಯ ಪೋಷಾಕನ್ನೇ ಪೂರೈಸುತ್ತಿರುವರು. ತಿರುಪತಿಯ ಮ್ಯುನಿಸಿಪಾಲಿಟಿಯು ಚಿಕ್ಕದಾದರೂ, ಸ್ವತಂತ್ರ ಖಾದಿ ಭಂಡಾರವನ್ನೇ ಸ್ಥಾಪಿಸಿರುವದು. ಬಿಹಾರ ಹಾಗು ಓಡಿಸಾ ಪ್ರಾಂತದೊಳಗಿನ ಜಿಲ್ಹಾ ಬೋರ್ಡುಗಳು ತಮ್ಮ ಶಾಲೆಗಳಲ್ಲಿ ಕೈರಾಟಿಯ ಪ್ರವೇಶ ಮಾಡುತ್ತಿರುವರು. ಅಲಹಾಬಾದ ಮ್ಯುನಿಸಿಪಾಲಿಟಿಯವರು ಮಾಡಿದ ಯತ್ನಗಳು ಪ್ರಶಂಸನೀಯವಿವೆ. ಕಾನಪುರದೊಳಗಿನ ಸ್ವದೇಶೀ ಪ್ರದರ್ಶನದಲ್ಲಿ ಅಲಹಾಬಾದ ಮ್ಯುನಿಸಿಪಾಲಿಟಿಯ ವಿದ್ಯಾರ್ಥಿಗಳು ಕೈರಾಟಿಯನ್ನು ತಿರುಗಿಸುವ ಚಳಕವನ್ನು ನೋಡಿ, ಎಲ್ಲರೂ ಬೆರಗಾದರು. ಅಲಹಾಬಾದ ಮ್ಯುನಿಸಿಪಾಲಿಟಿಯವರು ಕೈರಾಟಿಯ ಪ್ರಗತಿಯ ವಿಷಯ ಒಂದು ವರದಿಯನ್ನು ಪ್ರಕಟಿಸಿರುವರು. ಅದನ್ನು ಎಲ್ಲರೂ ಮನನ ಮಾಡತಕ್ಕದ್ದು. 'ಮ್ಯುನಿಸಿಪಾಲಿಟಿಯವರು ೨೪ ಹುಡುಗರ ಶಾಲೆಗಳನ್ನೂ, ೧೨ ಹುಡುಗಿಯರ ಶಾಲೆಗಳನ್ನೂ ನಡಿಸುತ್ತಿರುವರು. ಹುಡುಗರ ಸಂಖ್ಯೆಯು ೨೪೫೧, ಹುಡುಗಿಯರ ಸಂಖ್ಯೆಯು ೬೪೭. ೧೪೭ ಶಿಕ್ಷಕರಿರುವರು, ೭೫ ಶಿಕ್ಷಕಿಯರಿರುವರು. ಮೇಲ್ತರಗತಿಯಲ್ಲಿ ಶೇಕಡಾ ೫೦ ರಷ್ಟು, ಕೆಳತರಗತಿಗಳಲ್ಲಿ ಶೇಕಡಾ ೧೦ ರಿಂದ ೫೦ ರಷ್ಟು ಹುಡುಗರು ನೂಲುತ್ತಿರುವರು. ನೂಲುವ ಹುಡುಗಿಯರ ಪ್ರಮಾಣವು ಇದಕ್ಕಿಂತ ಹೆಚ್ಚಿದೆ. ಶೇಕಡಾ ೮೦ ರಷ್ಟು ಶಿಕ್ಷಕರು, ೯೫ ರಷ್ಟು ಶಿಕ್ಷಕಿಯರು ನೂಲಬಲ್ಲವರು. ಸ್ಥಳಸಂಕೋಚದ ಮೂಲಕ ಸಾಕಷ್ಟು ಕೈರಾಟಿಗಳನ್ನಿಡಲು ತೊಂದರೆಯಾಗಿದೆ. ಪ್ರತಿಯೊಂದು ಶಾಲೆಯಲ್ಲಿ ಸರಾಸರಿ ೧೦ಕ್ಕಿಂತ ಹೆಚ್ಚು ಕೈರಾಟಿಗಳು ಬೇಕಾಗುವದಿಲ್ಲ. ದಿನಾ ೪೫ ಮಿನಿಟುಗಳ ವರೆಗೆ ಪ್ರತಿ ಒಬ್ಬ ವಿದ್ಯಾರ್ಥಿಯು ನೂಲಬೇಕು. ಇವೆಲ್ಲ ಶಾಲೆಗಳ ನೂಲಿನ ಉತ್ಪನ್ನವು ದಿನಕ್ಕೆ ೧,೧೮೮ ತೊಲೆಗಳಾಗುತ್ತಿದ್ದು ನೂಲಿನ ನಂಬರು ೬ ರಿಂದ ೧೫ ರವರೆಗೆ ಇರುತ್ತದೆ." ಕೈರಾಟಿಯ ಪ್ರವೇಶದಿಂದ, ಇತರ ಅಭ್ಯಾಸವು ಕೆಡಲಿಲ್ಲ. ಇದೊಂದು ವಿಶೇಷ. ಸಾಮಾನ್ಯ ಕೈರಾಟಿಗಿಂತ 'ತಕ್ಲಿ' ಮಾದರಿಯ ಕೈರಾಟಿಗಳನ್ನು ಪ್ರಯೋಗಿಸಿದರೆ, ಸ್ಥಳದ ಕೊರತೆಯಾಗಲಿಕ್ಕಿಲ್ಲೆಂಬ ಸೂಚನೆಯನ್ನು ಮನ್ನಿಸಿ ಈಗಾಗಲೇ ೨೦೦ ತಕ್ಲಿಗಳು ಪ್ರವೇಶಗೊಂಡಿವೆ. ಪುಣೆಯ ಮ್ಯುನಿಸಿಪಾಲಿಟಿಯವರೂ ತಮ್ಮ ಪ್ರಾಥಮಿಕ ಶಾಲೆಗಳಲ್ಲಿ ತಕ್ಲಿ ಕೈರಾಟಿಯ ಪ್ರಸಾರ ಮಾಡುವ ನಿರ್ಧಾರ ಮಾಡಿರುವರು. ಅದರಂತೆ ಒಂದು ಹುಡುಗರ ಶಾಲೆಯಲ್ಲಿಯೂ, ಒಂದು ಹುಡುಗಿಯರ ಶಾಲೆಯಲ್ಲಿಯೂ ತಕ್ಲಿಯು ಪ್ರವೇಶಗೊಂಡಿದೆ. ಈಗ ೧೭೫ ವಿದ್ಯಾರ್ಥಿಗಳು ತಕ್ಲಿಯಿಂದ ನೂಲು ತೆಗೆಯುತ್ತಿರುವರು. ಶಿಕ್ಷಕರಿಗೆ ನೂಲಲು ಕಲಿಸಲು ಒಂದು ವರ್ಗವನ್ನು ಮ್ಯುನಿಸಿಪಾಲಿಟಿಯವರು ತೆರೆಯುವವರಾಗಿದ್ದಾರೆ.

* * *

ಪ್ರಸಿದ್ಧ ಖಾದಿ ಸೇವಕರು

ಪ್ರಭಾಕರರು 'ಯಂಗ ಇಂಡಿಯಾ' ಪತ್ರಿಕೆಯಲ್ಲಿ ಬರೆಯುವದೇನಂದರೆ — "ಬಂಗಾಲದ ಖಾದಿ ಪ್ರತಿಷ್ಠಾನದವರು ಒಂದು ಪತ್ರ ಬರೆದಿರುವರು. ಡಾ. ಪ್ರಫುಲ್ಲ ಘೋಷರವರು ಖಾದಿಯ ಪ್ರಸಾರಕ್ಕಾಗಿ ಬಂಗಾಲದಲ್ಲಿ ಅವಿಶ್ರಾಂತ ದುಡಿಯುತ್ತಿರುವರು. ರಾಷ್ಟ್ರ ಸಂಸ್ಥೆಗಳಲ್ಲಿ ವಿಖ್ಯಾತನಾದ ಇವರು ಖಾದಿಯ ಕುರಿತು ಉಪನ್ಯಾಸಗಳನ್ನೀಯುತ್ತಾ ಖಾದಿಯನ್ನು ಸ್ವತಃ ಹೆಗಲಮೇಲೆ ಹೊತ್ತುಕೊಂಡು ಹೋಗಿ ಮನೆ ಮನೆಗೆ ಮಾರುತ್ತಾರೆ. ಡಾ। ಘೋಷರವರು ಡಾ। ರೋಯ್‌ರವರ ಪ್ರೇಮದ ಶಿಷ್ಯರು. ಘೋಷರವರು ಟಂಕಸಾಲೆಯಲ್ಲಿ ೫೦೦ ರೂಪಾಯಿಗಳ ಸಂಬಳದ ಮೇಲಿದ್ದರು. ಅದನ್ನು ಬಿಟ್ಟು ಅವರು ಖಾದಿಯ ಕಾರ್ಯವನ್ನು ವಹಿಸಿಕೊಂಡಿರುವರು. ಈಗ ಅವರು ಬರೇ ೫೦ ರೂಪಾಯಿ ಸಂಬಳದ ಮೇಲಿರುವರು.

* * *

ಮಹಾತ್ಮರ ಜೀವನಕ್ರಮ

ಮಹಾತ್ಮರು ಈಗ ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳತಕ್ಕದ್ದೆಂದು ಡಾಕ್ಟರರು ಮಾಡಿದ ಕಾರ್ಯಕ್ರಮವು ವಾಚಕರಿಗೆ ವಿದಿತವಿರುವದಷ್ಟೇ. ಈ ವಿಶ್ರಾಂತಿ ಸಮಯದಲ್ಲಿ ಅವರು ಆಶ್ರಮದಲ್ಲಿ ಬರುವವರಿಗೆ ದರ್ಶನ ಮಾತ್ರ ಕೊಡುತ್ತಿದ್ದರು. ಯಾರೊಡನೆಯೂ ವಿಶೇಷ ಸಂಭಾಷಣೆ ಮಾಡುತ್ತಿದ್ದಿಲ್ಲ. ಅಷ್ಟೇಕೆ?— ಆಶ್ರಮವಾಸಿಗಳೊಡನೆ ಕೂಡ ಮಾತಾಡುತ್ತಿದ್ದಿಲ್ಲ. ಬೆಳಿಗ್ಗೆ ಏಳುತ್ತಾರೆ, ೧೦ ಘಂಟೆಯ ವರೆಗೆ ಮೌನವ್ರತವನ್ನಾಚರಿಸುತ್ತಾರೆ. ಬಳಿಕ, ಈಶಪ್ರಾರ್ಥನೆ ನಡಿಸುತ್ತಾರೆ. ಸಾಯಂಕಾಲ ಸಮಯ ದರ್ಶನೇಚ್ಛುಗಳೊಡನೆ ಮಾತುಕಥೆ ನಡಿಸುತ್ತಾರೆ. ಪ್ರತಿ ಸೋಮವಾರ ಇಡೀ ದಿನ ಮೌನದಿಂದಿರುತ್ತಾರೆ. ಜ್ವರಗ್ರಸ್ತರಾದಂದಿನಿಂದ ಯಾರೊಡನೆಯೂ ಮಾತಾಡಬಾರದೆಂದು ವೈದ್ಯರಾಜರ ಕಟ್ಟಪ್ಪಣೆಯಾಗಿದೆ.

ಅಮೇರಿಕೆಯೊಳಗಿನ ಹುಲಿ

ಅಮೇರಿಕೆಯ ಕಾಡುಗಳಲ್ಲಿ 'ಜೊಗ್ಗರ' ಎಂಬ ಜಾತಿಯ ಹುಲಿಯಿದೆ. ನೋಡಲಿಕ್ಕೆ ಹುಲಿಯು ಚಿರ್ಚಿಯಂತೆ ತೋರುತ್ತದೆ. ಆಕಾರವು ಸಾಧಾರಣ ಮಟ್ಟಿಗೆ ಅಷ್ಟೇ. ಜೊಗ್ಗರವು ಗಿಡಗಳನ್ನು ಹತ್ತಬಲ್ಲದು. ಅನೇಕಾವರ್ತಿ ಗಿಡಗಳ ಮೇಲೆ ಹತ್ತಿಕೊಂಡು ಹೊಂಚು ಹಾಕಿ ಬೇಟೆಯಾಡುತ್ತದೆ. ಜೊಗ್ಗರ ಹುಲಿಯು ಚಪಲವಿದೆ, ಧೂರ್ತವಿದೆ.

* * *

ಹಳೇ ಹಂಚಿಕೆ

ಅಲ್ಲಾಉದ್ದೀನ ಖಿಲಜಿಯವರು ಚಿತ್ತೂರಕ್ಕೆ ಅಲ್ಲಿಯ ಪದ್ಮಿನಿಯನ್ನು ಸ್ವಾಧೀನಪಡಿಸಿಕೊಳ್ಳುವದಕ್ಕಾಗಿ ಆತನು ಅಲ್ಲಿಯ ರಜಪೂತರನ್ನು ಬಹಳವಾಗಿ ಪೀಡಿಸಿದಾಗ, ಪದ್ಮಿನಿಯು ಪಠಾಣನಿಗೆ ದಂಡಿಸಲು ಒಂದು ಹಂಚಿಕೆಯನ್ನು ಹೂಡಿದಳಷ್ಟೇ - ಅಲ್ಲಾಉದ್ದೀನನು ತನ್ನ ರಾಜ್ಯಕ್ಕೆ ಹೋಗುವದೇಕೆ, ಮತ್ತು ರಜಪೂತ ರಾಣಿಯರೊಳಗಿಂದ ಬರತಕ್ಕ ಪಲ್ಲಕ್ಕಿಗಳನ್ನು ನೋಡದೆ, ತನ್ನ ರಾಜ್ಯದಲ್ಲಿ ಬರಗೊಡಬೇಕು. ಪಲ್ಲಕ್ಕಿಯಲ್ಲಿ ಬರುವದೆಲ್ಲ ರಾಣಿ ಪದ್ಮಿನಿಯ ಪರಿವಾರದ ದಾಸಿಯರು. ಇತ್ಯಾದಿ ಹೇಳಿದ್ದಳು. ಕಾಮಾಂಧನಾದ ಅಲ್ಲಾಉದ್ದೀನನು ಒಪ್ಪಿಕೊಂಡು, ತನ್ನ ರಾಜ್ಯಕ್ಕೆ ಹಿಂತಿರುಗಿದನು. ಪದ್ಮಿನಿಯು ರಜಪೂತ ಸೈನಿಕರಿಗೆ ಗುಪ್ತವಾಗಿ ಕೂಡ್ರಿಸಿ ಪಲ್ಲಕ್ಕಿಗಳನ್ನು ಅಲ್ಲಾಉದ್ದೀನನ ರಾಜ್ಯಕ್ಕೆ ಕಳುಹಿದಳು. ಒಬ್ಬ ಸೇನಾಪತಿಗೂ ಕಳುಹಿದಳು. ಸೇನಾಪತಿಯು ಪಲ್ಲಕ್ಕಿಯೊಳಗೆ ಪದ್ಮಿನಿಯಿರುವದಾಗಿ ಅಲ್ಲಾಉದ್ದೀನನಿಗೆ ತಿಳಿಸಲು ಪದ್ಮಿನಿಯನ್ನು ಸ್ವಾಧೀನಪಡಿಸಿಕೊಳ್ಳುವದಕ್ಕಾಗಿ ಮುಂದಾದನು. ಕೂಡಲೆ, ಸೇನಾಪತಿಯು ಸೈನಿಕರಿಗೆಲ್ಲ ಅಲ್ಲಿಯೇ ಒಟ್ಟುಮಾಡಿ ಅಲ್ಲಾಉದ್ದೀನನ ಸೈನಿಕರಿಗೆಲ್ಲ ಸಂಹರಿಸಿಬಿಟ್ಟನು. ಅಲ್ಲಾಉದ್ದೀನನಿಗೆ ಪಲಾಯನ ಮಾಡಬೇಕಾಯಿತು. ಇಂಥ ಪ್ರಕಾರವೊಂದು ಸದ್ಯಕ್ಕೆ ನಿಜಾಮ ರಾಜ್ಯದ ಕುಂಜವಳ ಗ್ರಾಮದಲ್ಲಿ ಸಂಭವಿಸಿತು. ಬಿದ್ರಿ ಅಲಂ ಎಂಬೊಬ್ಬರು ದೊಡ್ಡ ಜಹಾಗೀರದಾರರು. ಅವರಿಗೆ ಒಬ್ಬ ಮರಾಠಾ ಜಾತಿಯ ಹುಡುಗಿಯ ಮೇಲೆ ಮನಸ್ಸಾಯಿತು. ಹುಡುಗಿಯನ್ನು ತನ್ನ ಭವನದಲ್ಲಿ ಕಳಿಸಲು ಆಪ್ತರಿಗೆ ಜಹಾಗಿರದಾರರು ಆಜ್ಞಾಪಿಸಿದರು. ದೊಡ್ಡವರ ಆಜ್ಞೆ! ಆಪ್ತರು ಉಲ್ಲಂಘಿಸಲಾರದ ಮಾತು, ಮನ್ನಿಸಲಾಗದ ವಿಷಯ. ಒಬ್ಬ ಆಪ್ತನು ಒಂದು ಹಂಚಿಕೆಯನ್ನು ಶೋಧಿಸಿ ತೆಗೆದನು. ತಾನು ಹುಡುಗಿಯ ವೇಷವನ್ನು ತಾಳಿಕೊಂಡನು, ಇನ್ನೊಬ್ಬನು ದಾಸಿಯ ವೇಷ ತಾಳಿಕೊಂಡನು. ಇಬ್ಬರೂ ಗುಪ್ತವಾಗಿ ಶಸ್ತ್ರಸನ್ನದ್ಧರಾಗಿ ಜಹಾಗೀರದಾರರ ಭವನಕ್ಕೆ ಹೋದರು. ಜಹಾಗೀರದಾರರು ಹುಡುಗಿಯೆಂದು ಇವರೊಡನೆ ಸಲಿಗೆ ಮಾಡಬಂದಾಗ, ಇಬ್ಬರೂ ಹೆಂಗಸಿನ ವೇಷ ಇಳಿಸಿ, ಜಹಾಗೀರದಾರರನ್ನು ಕೊಂದು ಬಿಟ್ಟರು. ಮತ್ತು ನಡೆದ ಹಕೀಕತನ್ನು ಅಲ್ಲಿಯ ಪೋಲೀಸ ಅಧಿಕಾರಿಗಳಿಗೆ ತಿಳಿಸಿದರು. ಈಗ ಈ ಕುರಿತು ಅಲ್ಲಿ ಚೌಕಶಿ ನಡೆದದೆ.

ಪಂಢರಪುರದಲ್ಲಿ ಆಣೆಕಲ್ಲಿನ ಸುರಿಮಳೆ

ಪಂಢರಪುರದಲ್ಲಿ ಶುಕ್ರವಾರ ತಾ. ೨೧ನೇಗೆ ಸಾಯಂಕಾಲ ೬ ಘಂಟೆಯ ಸಮಯಕ್ಕೆ ಭೂಕಂಪನ ತ್ರಾವೋದಿಗಳ ಸಂಚಯವಾಯಿತು. ಗುಡುಗು, ಮಿಂಚು ಪ್ರಾರಂಭವಾಯಿತು. ಅರ್ಧ ತಾಸಿನಲ್ಲಿ ದೊಡ್ಡದೊಂದು ಬಿರುಗಾಳಿಯೆದ್ದಿತು; ಮಳೆ ಬೀಳಲಾರಂಭಿಸಿತು. ಮೊದಲು, ಲಿಂಬೆಹಣ್ಣಿನಷ್ಟು ದೊಡ್ಡದಾದ ಆಣೆಕಲ್ಲುಗಳು ಬಿದ್ದವು. ಕೊನೆಕೆ, ಕೋಳಿಮೊಟ್ಟೆಯಗಲದಷ್ಟು ದೊಡ್ಡ ಆಣೆಕಲ್ಲುಗಳು ಬೀಳಲಾರಂಭಿಸಿದವು. ೧೫ ಮಿನಿಟುಗಳ ವರೆಗೆ ಅಕಸ್ಮಾತ್ ಈ ಆಣೆಕಲ್ಲುಗಳ ಸುರಿಮಳೆಯಾಯಿತು. ಊರವರಿಗೆ ಈ ಆಪತ್ತಿನ ಸುಳಿವಾಗದೆಯಿದ್ದುದರಿಂದ ಅನೇಕ ಜನರು ಸಾಯಂಕಾಲ ಸಮಯಕ್ಕೆ ಅಡ್ಡಾಡಲಿಕ್ಕೆ ಹೋಗಿದ್ದರು. ಹೈಸ್ಕೂಲಿನ ವಿದ್ಯಾರ್ಥಿಗಳು ಕಾಲುಚೆಂಡಿನ ಆಟವಾಡುತ್ತಿದ್ದರು. ಅವರ ಮೈಮೇಲೆಲ್ಲ ಆಣೆಕಲ್ಲುಗಳು ಬಿದ್ದು ಪೆಟ್ಟಾಗಿದೆ. ಅನೇಕರಿಗೆ ತಲೆಯ ಮೇಲೆ ಆಣೆಕಲ್ಲು ಬಿದ್ದು ತಲೆ ಒಡೆದಿದೆ. ಮ್ಯುನಿಸಿಪಾಲಿಟಿಯ ಕಂದೀಲುಗಳೆಲ್ಲ ಒಡೆದಿವೆ. ಬೆಳೆಯು ವಿಶೇಷ ನಾಶವಾಗಿದೆ. ಮಳೆಯು ಅಷ್ಟಕ್ಕೇ ನಿಲ್ಲದಿದ್ದರೆ ಭಯಂಕರ ಪ್ರಕಾರವಾಗುತ್ತಿತ್ತು. ಇದೊಂದು ಶ್ರೀ ಪಾಂಡುರಂಗನ ಕೃಪೆಯೇ.

* *

ಬಾಗಲಕೋಟೆಯಲ್ಲಿ ಮಧ್ವನವಮಿಯ ಮಹೋತ್ಸವ

ಬಾಗಲಕೋಟೆಯಲ್ಲಿ ಶ್ರೀಸಮುತ್ತರಾಧಿ ಮಠದ ಶ್ರೀ ಸತ್ಯಧ್ಯಾನತೀರ್ಥಂಗಳವರ ಮಠ ... ಶ್ರೀಗಳವರಿಗೆ ಬಾಗಲಕೋಟೆಯಲ್ಲಿ ಭಕ್ತರೆಲ್ಲ ತಂಡಗಳಾಗಿ ಸೇರಿ, ಅಪೂರ್ವವಾದ ಸ್ವಾಗತವನ್ನಿತ್ತರು. ಮಧ್ವನವಮಿಯ ಉತ್ಸವವು, ಮಧ್ವನವಮಿಯಿಂದ ತ್ರಯೋದಶಿ ವರೆಗೆ ಸಾಗಿತು. ಶ್ರೀ ರಾಮದೇವರ ಉತ್ಸವ, ಪಂಡಿತರ ಪರೀಕ್ಷೆ, ಸಂಭಾವನೆ, ದಕ್ಷಿಣೆ ಇತ್ಯಾದಿ ಕಾರ್ಯಕ್ರಮವು ಬಹು ಸಡಗರದಿಂದ ನೆರವೇರಿತು. ಶ್ರೀಗಳ ಈ ಉತ್ಸವಕ್ಕೆ ದೂರದೂರದಿಂದ ಪಂಡಿತರೂ, ವೈದಿಕರೂ, ಗೃಹಸ್ಥರೂ ಹೋಗಿದ್ದರು. ೫ ಸಾವಿರಕ್ಕೆ ಮಿಕ್ಕಿ ಜನಸಂದಣಿಯು ನೆರೆದದ್ದೆಂದು ಹೇಳುತ್ತಾರೆ. ತ್ರಯೋದಶಿ ದಿನ ಮಂಟಪವು ಸಾಲದೆ, ಪ್ಯಾಟಿಯ ಗ್ರಾಮದೇವಿಯ ಗುಡಿಯ ವರೆಗೆ ಬ್ರಾಹ್ಮಣರ ಭೋಜನಕ್ಕೆ ಆಸನವಾಗಿದ್ದಿತು. ಭೋಜನವಾದ ಬಳಿಕ, ಶ್ರೀಗಳು ಬ್ರಾಹ್ಮಣರಿಗೆಲ್ಲ ದಕ್ಷಿಣೆಯನ್ನಿತ್ತು ಸತ್ಕರಿಸಿದರು. ಈ ಬಗ್ಗೆ ಶ್ರೀಗಳಿಗೆ ೧೦ ಸಾವಿರ ರೂಪಾಯಿಗಳ ವೆಚ್ಚವಾಯಿತು. ಪಂಡಿತರಿಗೂ ಶ್ರೀಗಳು ೧೨ ಸಾವಿರ ರೂಪಾಯಿಗಳ ಸಂಭಾವನೆ ಕೊಟ್ಟಿದರು. ಶ್ರೀ ಸತ್ಯಧ್ಯಾನ ತೀರ್ಥಂಗಳವರ ಔದಾರ್ಯವನ್ನು ವಿದ್ಯಾಭಿಮಾನವನ್ನು ಅನೇಕರು ಹೊಗಳುತ್ತಿರುವರು. ಬಾಗಲಕೋಟೆಯಲ್ಲಿ ಇಂಥ ಸಮಾರಂಭವು ಹಿಂದೆಂದೂ ಜರುಗಲಿಲ್ಲೆಂದು ಮುದುಕರು ಹೇಳುತ್ತಾರೆ. ಮಧ್ವನವಮಿಯ ಉತ್ಸವದ ದಿನಗಳಲ್ಲಿ ದಿನಾ ಹರಿಕೀರ್ತನೆಯು ನಡೆಯುತ್ತಿದ್ದಿತು. "ಕರ್ನಾಟಕ ವೃತ್ತ" ಪತ್ರಿಕೆಯ ಸಂಪಾದಕರಾದ ಶ್ರೀ ಮುದವೀಡಕರ ಕೃಷ್ಣರಾಯರು ಒಂದು ದಿನ ಕಥೆ, ಅವರ ಶೈಲಿಯ ಕೀರ್ತನದಿಂದ ಜನಮನರಂಜನವನ್ನೂ, ಧರ್ಮೋಪದೇಶವನ್ನೂ ಮಾಡಿದರು. ವಿಜಾಪುರ ಬ್ರಾಹ್ಮಣ ಸಭೆಯ ವಿದ್ಯಮಾನದ ೧೦ನೆಯ ಒಂದು ಜಾಹೀರ ವ್ಯಾಖ್ಯಾನವಾಯಿತು: ಸಮಾರಾಧನೆಯ ಸಮಯ ಸೀರೆ ಮಿತಿಮೀರಿ ಅನ್ನದಾನಕ್ಕಾಗಿ ಖರ್ಚು ಮಾಡುವದು ಅನವಶ್ಯಕವೆಂದು ಕೆಲವರು ಉದ್ಗರಿಸಿದರು. ಈ ವಿಧಾನದ ಮೇಲೆ ಟೀಕೆ—ಪ್ರತಿಟೀಕೆಗಳಾದವು. ಮುಂದೆ ಗೊಂದಲವಾಯಿತು. ಬ್ರಾಹ್ಮಣರಿಗೆ ಇಂಥ ವರ್ತನವು ಅನುಚಿತವೆಂದು ವೇ. ಮೂ. ಕೊರ್ತಿ ಆಚಾರ್ಯರು ನುಡಿದ ಬಳಿಕ, ಸಭೆಯು ಶಾಂತವಾಯಿತು. ಬ್ರಾಹ್ಮಣರು ಶಾಂತತೆಯಿಂದಲೂ, ಸುವಿಚಾರದಿಂದಲೂ ವರ್ತಿಸಲಿಸಬೇಕು.

* *

ಮದ್ಯಪಾನ ನಿಷೇಧ

ಕಳೆದ ೨೦ನೇ ತಾರೀಖಿನ ದಿವಸ ದಿಲ್ಲಿಯಲ್ಲಿ ಮದ್ಯಪಾನ ನಿಷೇಧದ ಸಭೆಯು ದಿವಾನಬಹಾದ್ದೂರ ರಾಮಚಂದ್ರರಾಯರ ಅಧ್ಯಕ್ಷತೆಯಲ್ಲಿ ಸೇರಿತು. ಈ ಪರಿಷತ್ತಿಗೆ ಬೇರೆ ಬೇರೆ ಭಾಗಗಳಿಂದ ಪ್ರತಿನಿಧಿಗಳು ಹೋಗಿದ್ದರು. ದಿವಾನ ಬಹಾದ್ದೂರ ರಾಮಚಂದ್ರರಾಯರು ಅನೇಕ ದೃಷ್ಟಿಯಿಂದ ಮದ್ಯಪಾನದ ಪ್ರಶ್ನೆಯನ್ನು ವಿಚಾರಿಸಿ, ಮದ್ಯಪಾನೋಚ್ಚಾಟನದಿಂದ ಈ ರಾಷ್ಟ್ರಕ್ಕೆ ಕ್ಷೇಮವಾಗುವದಾಗಿ ಪ್ರತಿಪಾದಿಸಿದರು. ಹಿಂದುಸ್ಥಾನದೊಳಗಿನ ಸಮಸ್ತ ಸಮಾಜಗಳೂ ಮದ್ಯಪಾನವನ್ನು ನಿಲ್ಲಿಸಬೇಕೆಂದು ಪ್ರತಿಪಾದಿಸುತ್ತಾರಾಗಿಯೂ ದಿವಾನಬಹಾದ್ದೂರರು ನುಡಿದು, ಮದ್ಯಪಾನವನ್ನು ಕ್ರಮವಾಗಿ ನಿಲ್ಲಿಸಲು ಯೋಜನೆ ಬೇಕೆಂದು ಬೋಧಿಸಿದರು. ಪರಿಷತ್ತಿನಲ್ಲಿ ಎರಡು ಠರಾವುಗಳು ಮಂಜೂರಾದವು. ಮದ್ಯಪಾನೋಚ್ಚಾಟನವು ಭಾರತೀಯರ ಮನಃಪ್ರವೃತ್ತಿಗೆ ಅನುಕೂಲವಾಗಿದ್ದು, ಅವರ ಅಭಿವೃದ್ಧಿಗೂ ಅವಶ್ಯವಾಗಿರುವದರಿಂದ, ಹಿಂದುಸ್ಥಾನ ಸರಕಾರದವರೂ, ಪ್ರಾಂತಿಕ ಸರಕಾರದವರೂ ಮದ್ಯಪಾನವನ್ನು ಸಂಪೂರ್ಣವಾಗಿ ನಿರ್ಮೂಲಿಸಬೇಕೆಂದು ನಿಶ್ಚಯಿಸಬೇಕು. ಸರಕಾರಕ್ಕೆ ಈ ಕುರಿತು, ನಷ್ಟವಾಗುವ ಸ್ವಲ್ಪ ತೊಂದರೆಯಾಗುವ ಸಂಭವವಿದೆ. ಆದ್ದರಿಂದ ಶಿಕ್ಷಣ ... ಸರಕಾರವು ... ಬೇಕು. ಮ್ಯುನಿಸಿಪಾಲಿಟಿ, ಲೋಕಲ್‌ಬೋರ್ಡ ಮುಂತಾದ ಸ್ಥಳಿಕ ಸಂಸ್ಥೆಗಳಿಗೆ ತಮ್ಮ ತಮ್ಮ ಅಧಿಕಾರ ಕ್ಷೇತ್ರಗಳೊಳಗಿನ ಸರಾಯಿ ಅಂಗಡಿಗಳ ವ್ಯವಸ್ಥೆಯನ್ನು ತಮ್ಮ ಇಚ್ಛೆಯಂತೆ ಮಾಡಲಿಕ್ಕೆ ಅಧಿಕಾರ ಕೊಡಬೇಕು. ಕ್ರಮವಾಗಿ ಈ ಅಧಿಕಾರವನ್ನು ಪ್ರಾಂತಕ್ಕೆ ಕೊಟ್ಟು ಅದನ್ನು ... ಹಿಂದುಸ್ಥಾನ ಸರಕಾರದವರು ಕೈಕೊಳ್ಳಬೇಕು. ಸರಕಾರವು ತಮ್ಮ ಆಯ-ವ್ಯಯ ಪತ್ರಿಕೆಯನ್ನು ಪುನರ್ಘಟಿಸಿ, ಸರಾಯಿಯ ಉತ್ಪನ್ನವನ್ನು ಆಯದಲ್ಲಿ ಹಿಡಿಯದೆ, ಪ್ರಾಂತಿಕ ಖರ್ಚಿನ ವ್ಯವಸ್ಥೆ ಮಾಡಬೇಕು. ಇತ್ಯಾದಿ ಠರಾವುಗಳು ಮಂಜೂರಾದವು. ಸರಕಾರದವರು ಈ ಕುರಿತು ಏನು ಉಪಾಯಯೋಜನೆ ಮಾಡುತ್ತಾರೆಂಬುದು ನೋಡಬೇಕು.

* *

ಮುಂಬಯಿ ಪ್ರಾಂತಾಧಿಪರ ವಿಚಾರಗಳು.

ಭರತಖಂಡದೊಳಗಿನ ಅಂಜುಮನ ಇಸ್ಲಾಮ ಸಂಸ್ಥೆಯವರು, ಮುಂಬಯಿಯ ಪ್ರಾಂತಾಧಿಪರಿಗೆ ದಾನವಪತ್ರವನ್ನು ಸಮರ್ಪಿಸಿದರು. ಸಂಸ್ಥೆಯವರು ಶ್ರೀಸ್ಪೀಕರ್ ... ಕಾರತವೇಕೆಂದು ಪ್ರಾಂತಾಧಿಪರಿಗೆ ಬಿನ್ನೈಸಿದರು. ಪ್ರಾಂತಾಧಿಪರು ನುಡಿದದ್ದೇನೆಂದರೆ — ನಿಮ್ಮ ಸಮಾಜದವರು ಮದ್ಯಪಾನೋಚ್ಚಾಟನವನ್ನು ನೀವು ಕೈಕೊಳ್ಳಬೇಕೆಂದು ಮಾಡಿದ ಬಿನ್ನಹವು ಸಮ್ಮತವಿದೆ. ಮದ್ಯಪಾನವನ್ನು ಪ್ರತಿಬಂಧಿಸಿದರೆ, ಸರಕಾರದ ಆದಾಯವು ಬಹಳಷ್ಟಿಗೆ ಕುಗ್ಗುವದು. ಮದ್ಯಪಾನವನ್ನು ನಿರ್ಮೂಲಿಸಿ ಹೇಳುವಾಗ ಮಹಮ್ಮದೀಯರ ಶಿಕ್ಷಣಕ್ಕಾಗಿ ಹೆಚ್ಚಿನ ವ್ಯಯ ಮಾಡಲು ನೀವು ಹೇಳುತ್ತೀರಿ. ನಿಮಗೆ ಇನ್ನೊಂದು ಭಾಷಾ ಶಿಕ್ಷಣವನ್ನು ಕೊಡುವ ಏರ್ಪಾಡಾಗಬೇಕಾಗಿರುವ ನಿಮ್ಮ ಹೇಳಿಕೆ ಇದೆ. ಇದಕ್ಕೆ ಹೆಚ್ಚು ಹಣ ಬೇಕು. ಹೀಗೆ ಶಿಕ್ಷಣಕ್ಕೆ ತಗಲುವ ಹಣವನ್ನು ಬೇರೊಂದು ಉಪಾಯದಿಂದ ಸಂಪಾದಿಸುವ ಉಪಾಯಯೋಜನೆ ಮಾಡಿದ ಹೊರತು, ಸರಕಾರಕ್ಕೆ ದಕ್ಕಂತವಿಲ್ಲೆಂದೂ ನೀವು ಒಪ್ಪುವಿರಿ. ನಿಮ್ಮ ಸಮಾಜದವರು ಮದ್ಯಪಾನೋಚ್ಚಾಟನಕ್ಕಾಗಿ ಬಹಳ ಪ್ರಯತ್ನ ಮಾಡುತ್ತಿದ್ದಾರೆ. ಹೀಗೆ ಪ್ರಯತ್ನ ಮಾಡುವದು ಉಚಿತವು. ಆದರಿಂದ, ನಾವು ಇನ್ನೊಂದು ತೆರಿಗೆಯನ್ನು ಕಲ್ಪಿಸಿ, ಮದ್ಯಪಾನವನ್ನು ಪ್ರತಿಬಂಧಿಸಬೇಕಾಗಿದೆ. ಹೊಸ ತೆರಿಗೆಯ ಆಕರಣೆಗೆ ನೀವೆಲ್ಲರೂ ನಮಗೆ ನೆರವಾಗಬೇಕು.

ಮಹಾಶಿವರಾತ್ರಿಗಾಗಿ
ಗೋಕರ್ಣಕ್ಕೆ ಬರಹೋಗುವ
ಯಾತ್ರಿಕರಿಗೆ

ನೇಮಿಸಿದ ಹೊತ್ತಿಗೆ ಮೋಟರಿನ ವ್ಯವಸ್ಥೆ

ಹಾಗೂ

ವಸತಿಗೆ, ಊಟ, ವಾಸದ ಬಗ್ಗೆ ಯೋಗ್ಯ ವ್ಯವಸ್ಥೆ

ಈ ಕೆಳಗಿನಂತೆ ಮೋಟಾರ ವ್ಯವಸ್ಥೆಯಿದೆ—

ಗೋಕರ್ಣದಿಂದ ಕುಮಟಾ, ಹೊನ್ನಾವರ, ಭಟ್ಕಳ, ಗೋಕರ್ಣದಿಂದ ಕುಮಟಾ, ಶಿರ್ಸಿ, ಹುಬ್ಬಳ್ಳಿ, ಗೋಕರ್ಣದಿಂದ ಅಂಕೋಲಾ, ಕಾರವಾರ.

ಟೀಪ—ಟಿಕೇಟು ಮುಂದಾಗಿ ಬರೆದುಕೊಳ್ಳಬಯಸುವವರು ಈ ಕೆಳಗಿನ ಪತ್ತೆಗೆ ಪತ್ರವ್ಯವಹಾರ ಮಾಡತಕ್ಕದ್ದು.

ಅನಂತ ಮಂಗೇಶರಾವ ಸರಿಹಿತ್ತಲ,
ಮೋಟರ ಏಜಂಟ,
ಕುಮಟಾ, (ಉತ್ತರ ಕನ್ನಡ)

S U. NARAYANACHARYA & CO.
Chaukamba, BENARES CITY



ನಮ್ಮಲ್ಲಿ ಎಲ್ಲಾ ತರದ ರೇಷ್ಮೆ ಪೀತಾಂಬರ, ಜರಿ ಕಣ, ಜರಿ ಸೀರೆ, ಶಾಲ್ಜೋಡ ಶಾಲು, ಕದವಾರ ರುಮಾಲು, ರುದ್ರಾಕ್ಷಿ, ಕಸ್ತೂರಿ, ಲಿಂಗಗಳು, ಸ್ಫಟಿಕದ ... ಮೊದಲಾದ ಮಾಲುಗಳು ಸಿಗುತ್ತವೆ. ಕ್ಯಾಟಲಾಗ ಕೊಡುವವರಿಗೆ ಉಚಿತವಾಗಿ ಕಳಿಸಲಾಗುವದು

ವಿಳಾಸ—ಶಿರೋಮಣಿ ನಾರಾಯಣಾಚಾರ್ಯ

ಕಂಪನಿ, ಚೌಕಂಬಾ, ಕಾಶಿ.

ಕಾನಡಾವೃತ್ತ.

ಮಿತಿ ಶ್ರೀಧನ ಸಂ| ಮಾಘ ಶು| ೧೦ ಮಿ ಸೋಮವಾರ

ಬ್ರಿಟಿಶರ ದುರಾಶೆ.

ಹಿಂದುಸ್ಥಾನದ ಪಾರತಂತ್ರ್ಯವೇ ಯುದ್ಧಕಾರಣವು

“ಜಪಾನ ಟ್ಯಾಯ್ಮ್ಸ” ಪತ್ರಿಕೆಯಲ್ಲಿ ‘ಬ್ಯುಷ್ಝರ’ ಎಂಬ ನಿರೀಕ್ಷಕರೆಂಬವರು ಹಿಂದುಸ್ಥಾನವೇ ಭೂಲೋಕದೊಳಗಿನ ಯುದ್ಧಕ್ಕೆ ಮೂಲವೆಂದು ಪ್ರಸ್ತಾವಿಸಿ, ಮನನೀಯ ಲೇಖವನ್ನೊಂದು ಬರೆದಿರುವರು. ಬ್ರಿಟಿಶರು ಹಿಂದುಸ್ಥಾನವನ್ನು ಸ್ವಾಧೀನದಲ್ಲಿರಿಸಿಕೊಳ್ಳುವ ಪಟ್ಟಿಯ ಮೂಲಕ ರಾಷ್ಟ್ರಗಳಲ್ಲಿ ಕುತಂತ್ರಗಳು ಪ್ರಾದುರ್ಭೂತವಾಗುತ್ತವಾಗಿಯೂ, ಹಿಂದುಸ್ಥಾನಕ್ಕೆ ಸ್ವರಾಜ್ಯಪ್ರಾಪ್ತಿಯಾದರೆ, ಭೂಲೋಕದೊಳಗಿನ ರಾಷ್ಟ್ರಗಳೊಳಗಣ ಮತ್ಸರಬುದ್ಧಿಗೂ, ದುರಾಶೆಗೂ ಕೀಲುಬಿದ್ದು, ಭೂಲೋಕದಲ್ಲಿ ಶಾಂತತಾದೇವಿಯ ಸಾಮ್ರಾಜ್ಯವು ನೆಲೆಗೊಳ್ಳುವದೆಂದೂ ಸಪ್ರಮಾಣ ಪ್ರತಿಪಾದಿಸಿರುವರು. ಶಾಂತತಾದೇವಿಯ ಸಾಮ್ರಾಜ್ಯವಾಗಬೇಕಾದರೆ, ಹಿಂದುಸ್ಥಾನದೊಳಗಿನ ಬ್ರಿಟಿಶ ಸಾಮ್ರಾಜ್ಯದ ನೊಗವು ದೂರವಾಗಲೇಬೇಕೆಂದು ನಿರೀಕ್ಷಕರ ಹೇಳಿಕೆಯಿದೆ.

ಮಹಾಯುದ್ಧದ ಕಾರಣವಾದರೂ, ಹಿಂದುಸ್ಥಾನವೇ ಎಂದು ನಿರೀಕ್ಷಕರು ಅಭಿಪ್ರಾಯಪಟ್ಟಿರುವರು. ಇರಾಣ ಹಾಗು ಅಫಗಾಣಿಸ್ಥಾನ ರಾಷ್ಟ್ರಗಳ ಸಹಾಯದಿಂದ ರಶಿಯಾ ದೇಶವು ಇರಾಣದ ಅಖಾತದ ಮೇಲೆ ಪ್ರತಿಷ್ಠೆಯನ್ನು ಬೆಳೆಸಲು ಹೊಂಚು ಹಾಕುತ್ತಿದೆ. ಇರಾಣದ ಅಖಾತದಲ್ಲಿ ಇರಾಣಿಗಳ ಪ್ರಾಬಲ್ಯ ಬೆಳೆಯದಂತೆ ಅಖಾತದ ನೆರೆಹೊರೆಯ ರಾಷ್ಟ್ರಗಳ ಮೇಲೆ ಬ್ರಿಟಿಶರು ಸಾಗಿ ಹೋಗುತ್ತಿರುವರು. ಇದೆಲ್ಲ ಭರತ ಖಂಡದೊಳಗಿನ ಸಾಮ್ರಾಜ್ಯವನ್ನು ದೃಢವಾಗಿ ಸ್ಥಾಪಿಸಲು ನಡೆದಿರುವ ಖಟಾಟೋಪ. ಇಂಥ ಅನ್ಯಾಯಗಳಿಂದ ಸಾಮ್ರಾಜ್ಯವು ಎಂದೂ ಬಾಳದು. ಹಿಂದುಸ್ಥಾನವು ಸಾಮ್ರಾಜ್ಯಕ್ಕೆ ಒಂದು ಪ್ರಕಾರದಿಂದ ಆಶ್ರಯಸ್ಥಾನವು, ಇನ್ನೊಂದು ಪ್ರಕಾರದಿಂದ ಮರ್ಮಸ್ಥಾನವು. ಪ್ರಕೃತ ಹಿಂದುಸ್ಥಾನದ ಸ್ಥಿತಿಯು ಬಹಳ ಭಯಾನಕವಾಗಿದೆ. ದೇಶದಲ್ಲೆಲ್ಲ ಅಸಮಾಧಾನ, ಅಪ್ರೀತಿ, ಅದರೊಳಗೂ ಲೋಕಮತಕ್ಕೆ ವಿರುದ್ಧವಾಗಿ ಒಂದು ಘಟನೆಯನ್ನು ಬ್ರಿಟಿಶರು ತಯಾರಿಸಿ ಲೋಕಮತವನ್ನು ಮುಷ್ಟಿ ಪ್ರಕ್ಷುಬ್ಧ ಮಾಡಿರುವರು. ಅಮೇರಿಕೆಯ ಸಂಸ್ಥಾನಗಳು ಬ್ರಿಟಿಶರ ರಾಜ್ಯನೊಗವನ್ನು ಅಲ್ಲಗಳೆದಂತೆ, ಭಾರತೀಯರೂ ಅಲ್ಲಗಳೆಯುವರೆಂದು ನಿಷ್ಪಕ್ಷಪಾತಿ ನಿರೀಕ್ಷಕರ ಅಭಿಪ್ರಾಯವಿದೆ. ಹಿಂದುಸ್ಥಾನವನ್ನು ನಿರಂತರವಾಗಿ ತಮ್ಮ ಕೈಗೊಂಬೆಯಾಗಿಡಬೇಕೆಂಬದರಿಂದಲೇ ಬ್ರಿಟಿಶ ಪ್ರತಿನಿಧಿಗಳಾದ ಕರ್ನಲ್ ಎಮೇರಿಯವರು ಇರಾಕ ಪ್ರದೇಶದ ಮೇಲಿನ ರಾಜ್ಯಸೂತ್ರಗಳನ್ನು ಇನ್ನು ೨೫ ವರುಷಗಳ ವರೆಗೆ ಬ್ರಿಟಿಶರ ಸ್ವಾಧೀನದಲ್ಲಿಡಬೇಕೆಂದು ರಾಷ್ಟ್ರಸಂಘದೊಡನೆ ಬೇಡಿಕೊಂಡಿರುವರು. ಮೋಸಲ್ ಪ್ರದೇಶವಾದರೂ ಈ ಕಾರಣಕ್ಕಾಗಿಯೇ ಬೇಕಾಗಿದೆ. ಬ್ರಿಟಿಶ ಛತ್ರಾಕ್ರಿಯದಲ್ಲಿ ಅರಬ ಸಾಮ್ರಾಜ್ಯವನ್ನು ಸ್ಥಾಪಿಸಲಿಕ್ಕೆ ಬ್ರಿಟಿಶರು ಹೆಣಗಾಡುವ ಕಾರಣವಾದರೂ ಇದೇ. ಇಜಿಪ್ತದ ಸ್ವಾತಂತ್ರ್ಯವನ್ನು ನಾಮಮಾತ್ರ ಇಟ್ಟು, ಸರ್ವಾಧಿಕಾರವನ್ನು ತಮ್ಮೊಡನೆಯೇ ಬ್ರಿಟಿಶರು ಇಟ್ಟುಕೊಳ್ಳುವ ಮರ್ಮವಾದರೂ ಇದೇ. ಇರಾಣದ ಅಖಾತದ ಅಧಿಪತಿಗಳು ಬ್ರಿಟಿಶರಾಗಬೇಕು, ಅಂದರೆ ಮಾತ್ರ ಹಿಂದುಸ್ಥಾನವು ಸುರಕ್ಷಿತವಾಗಿ ಬ್ರಿಟಿಶರ ಸ್ವಾಧೀನದಲ್ಲಿರುವದು.

ಮಹಾಯುದ್ಧಪೂರ್ವದಲ್ಲಿ ಬ್ರಿಟಿಶರು ಇರಾಣದ ದಕ್ಷಿಣ ಭಾಗವನ್ನೂ, ರಶಿಯಾದವರು ಉತ್ತರ ಭಾಗವನ್ನೂ ತಮ್ಮೊಳಗೆ ಹಂಚಿಕೊಂಡಿರುತ್ತಿದ್ದರು. ಇರಾಣದವರೊಡನೆ ಒಪ್ಪಂದ ನಡಿಸುವ ವೇಷದಿಂದ ಬ್ರಿಟಿಶರು ಅವರ ಸ್ವಾತಂತ್ರ್ಯವನ್ನೇ ಅಪಹರಿಸಿಕೊಂಡರು. ಇರಾಣ ರಾಷ್ಟ್ರದಲ್ಲಿ ರಾಷ್ಟ್ರೀಯ ತೇಜವು ಪ್ರಾದುರ್ಭೂತವಾದದ್ದರಿಂದ ಬ್ರಿಟಿಶರ ಕುತಂತ್ರದ ಒಪ್ಪಂದವು ಫಲಿಸಲಿಲ್ಲ ಆ ಮಾತು ಬೇರೆ.

ಈಗ ಬ್ರಿಟಿಶರು ಬೆಹರೀನ ಪ್ರದೇಶದ ಮೇಲೆ ಕಣ್ಣಿಟ್ಟಿರುವರು. ಬೆಹರೀನ ಪ್ರದೇಶವು ಒಂದು ಸ್ವತಂತ್ರ ಸಂಸ್ಥಾನವು. ಈ ಸಂಸ್ಥಾನದ ಸ್ವಾತಂತ್ರ್ಯಪರಿಪಾಲನಕ್ಕಾಗಿ ಬ್ರಿಟಿಶರು ಈ ಮುಂಚೆ ಅನೇಕಾವರ್ತಿ ಒಡಬಡಿಸಿರುವರು. ಅಂಥ ಸಂಸ್ಥಾನಿಕರನ್ನು ಬ್ರಿಟಿಶರು ಪದಚ್ಯುತ ಮಾಡಿ, ಬ್ರಿಟಿಶರು ಸಮಸ್ತ ರಾಜ್ಯಸೂತ್ರಗಳನ್ನು ಬಲಾತ್ಕಾರದಿಂದ ತಮ್ಮ ಕೈವಶ ಮಾಡಿಕೊಂಡರು. ಪ್ರಜೆಗಳು ಸ್ವಾತಂತ್ರ್ಯಪ್ರಾಪ್ತಿಗಾಗಿ ಮಾಡಿದ ಯತ್ನಗಳು ವಿಫಲವಾದವು. ಆಗ ಅವರ, ಪಾರತಂತ್ರ್ಯಕ್ಕಿಂತ ದೇಶತ್ಯಾಗವೇ ಲೇಸೆಂದು ಹೇಳಲು, “ನಿಮಗೆ ಆಶ್ರಯ ಕೊಡಬಾರದೆಂದು ನೆರೆಯ ಅರಬರಿಗೆ ವಿಧಿಸೋಣಾಗಿದೆ”ಂದು ಅಧಿಕಾರಿಗಳು ಗದ್ದರಿಸಿದರು. ಇಂದ ನಡಾವಳಿಯಿಂದ ಅರಬರು ಬೇಸತ್ತು ಹೋಗಿರುವರು. ಇಂಗ್ಲಿಷರಿಂದ ಕೂಡಲೆ, ಅವರು ಹೇಸುತ್ತಾರೆ. ಇಷ್ಟೆಲ್ಲ ಅತ್ಯಾಚಾರಗಳ ಕಾರಣವೇನೆಂದು ಬಲ್ಲಿರೋ? ಬೆಹರೀನ ಪ್ರದೇಶವು ಹಿಂದುಸ್ಥಾನಕ್ಕೆ ಬರುವ ಇರಾಣದ ಅಖಾತದೊಳಗಿನ ಹಾದಿಯ ಮೇಲಿದೆ. ಇದರ ಮೇಲಿಂದ ಭಾರತೀಯರ ಪಾರತಂತ್ರ್ಯಪಾಲನಕ್ಕಾಗಿಯೇ ಬ್ರಿಟಿಶರು ನಾಲ್ಕೂ ಬದಿಯಿಂದ ಕೈಕಾಲು ನೀಡಿ ದ್ವೇಷಬೀಜಗಳನ್ನು ಬಿತ್ತುತ್ತಾರೆಂದೂ ಕಲ್ಪನೆಯಾಗುವದು. ಮತ್ತೊಂದು ಮಾತಿದೆ. ಹಿಂದುಸ್ಥಾನವು ಬಹು ದೊಡ್ಡ ವಿಶಾಲ ಪ್ರದೇಶ ಸುವರ್ಣ ಭೂಮಿಯಲ್ಲವೇ? ಅದರ ಮೇಲೆ ಬ್ರಿಟಿಶರೊಬ್ಬರೇ ರಾಜ್ಯನಡಿಸಬೇಕೇನು? ನಾವ್ಯಾಕೆ ಅದನ್ನು ಉಪಭೋಗಿಸಬಾರದು? ಇತ್ಯಾದಿ ವಿಚಾರಗಳಿಂದ ಇತರ ರಾಷ್ಟ್ರಗಳು ಶಾಂತತಾಭಂಗ ಮಾಡುತ್ತಿರುವವು. ನೆಪೋಲಿಯನ್ನನು ಇಜಿಪ್ತದ ವರೆಗೆ ಬಂದಿದ್ದು ಭರತಖಂಡದ ಅಭಿಲಾಷೆಯಿಂದಲ್ಲವೇ! ಅಫಘಾಣಿಸ್ಥಾನದ ಅಮೀರರೊಡನೆ ಅನೇಕಾವರ್ತಿ ಯುದ್ಧಗಳಾದ ಕಾರಣವು ಬ್ರಿಟಿಶರ ದುರಾಶೆಯೇ. ರಶಿಯಾ ರಾಷ್ಟ್ರವನ್ನು ಆದಷ್ಟು ದೂರ ಸರಿದಿಡಲು ಅಫಘಾಣ ಯುದ್ಧಗಳಾದವು. ೧೮೮೫ನೇ ಇಸ್ವಿಯಲ್ಲಿ ಇಜಿಪ್ತ ದೇಶದ ಮೇಲೆ ದಂಡೆತ್ತಿ ಹೋದದ್ದು ಹಿಂದುಸ್ಥಾನಕ್ಕೆ ಬರ-ಹೋಗುವ ಹಾದಿಯು ನಿರಾತಂಕವಿರಬೇಕೆಂಬ ವಿಚಾರದಿಂದಲೇ. ಹೊರತು, ಪರೋಪಕಾರದಿಂದಲ್ಲ. ಬ್ರಿಟಿಶರು ಹೆಚ್ಚೆಚ್ಚು ಸೈನ್ಯವನ್ನು ತಯಾರಿಸುವದಾದರೂ ಹಿಂದುಸ್ಥಾನದ ಮೇಲಿನ ತಮ್ಮ ಅಂಕೆಯನ್ನು ದೃಢೀಕರಿಸುವದಕ್ಕಾಗಿಯೇ. ಬ್ರಿಟಿಶರು ಸೈನ್ಯ ಬೆಳೆಸಿದಂತೆ, ಇತರ ರಾಷ್ಟ್ರಗಳೂ ತಮ್ಮ ತಮ್ಮ ಸೈನ್ಯಗಳನ್ನು ಬೆಳೆಸಹತ್ತಿದವು. ಸೈನ್ಯವು ಬೆಳೆದಂತೆ ಯುದ್ಧಕಾಂಕ್ಷೆಯು ಬೆಳೆದು ಯುದ್ಧಗಳಾಗಹತ್ತಿದವು.

ಚೀನದಲ್ಲಿಯೂ ಗೊಂದಲವಾಗಲಿಕ್ಕೂ ಬ್ರಿಟಿಶರೇ ಕಾರಣರು. ಹಿಂದುಸ್ಥಾನವನ್ನು ಬ್ರಿಟಿಶರು ಅಪಹರಿಸಿದಂತೆ, ಚೀನ ದೇಶವನ್ನು ನಾವ್ಯಾಕೆ ಅಪಹರಿಸಿಕೊಳ್ಳಬಾರದು? ಎಂದು ಇತರ ರಾಷ್ಟ್ರಗಳು ಆಲೋಚಿಸುತ್ತಿರುವವು. ಜರ್ಮನಿಯವರು ಚೀನದಲ್ಲಿ ಪ್ರತಿಷ್ಠೆ ಸಂಪಾದಿಸಿದರೆ, ಹಿಂದುಸ್ಥಾನವು ತಮ್ಮ ಕೈತಪ್ಪಿ ಹೋದೀತೆಂದು ಬ್ರಿಟಿಶರು ಭೀತಿಗೊಳ್ಳುತ್ತಿದ್ದರು. ಜರ್ಮನ್‌ರು ಬಗದಾದದವರೆಗೆ ಉಗಿಬಂಡಿಯನ್ನು ರಚಿಸಿ, ಹಿಂದುಸ್ಥಾನದ ಮೇಲೆ ಕಣ್ಣಿಟ್ಟರು. ಅಸಂತುಷ್ಟರಾದ ಭಾರತೀಯರು ದಂಗೆಯನ್ನೆಬ್ಬಿಸಿ ತಮಗೆ ನೆರವಾಗುವರೆಂದು ಜರ್ಮನಿಯವರ ಅಂದಾಜಿತ್ತು. ಹಿಂದುಸ್ಥಾನವು ಸ್ವತಂತ್ರವಾಗಿದ್ದರೆ, ಜರ್ಮನ್ ರಾಷ್ಟ್ರವು ಎಂದೂ ಈ ದುರಾಶೆಗೆ ಬಲಿಬೀಳುತ್ತಿರಲಿಲ್ಲ. ಸಿಂಗಾಪುರದಲ್ಲಿ ಸದ್ಯಕ್ಕೊಂದು ನೌಕಾಸೇನಾಸ್ಥಳವನ್ನು ಬ್ರಿಟಿಶರು ಕಟ್ಟಿ, ತಮ್ಮ ಸಾಮ್ರಾಜ್ಯದ ಆಸ್ಟ್ರೇಲಿಯಾ ದೇಶಕ್ಕೆ ಹಿತ ಮಾಡಲು ಬಯಸುತ್ತಿರುವರು. ಇದಾದರೂ ಹಿಂದುಸ್ಥಾನದ ಸಂರಕ್ಷಣಕ್ಕಾಗಿಯೇ. ಇದರಿಂದ ಪಾಸಿಫಿಕ್ ಮಹಾಸಾಗರದಲ್ಲಿ ಮುಂದೆ ಒಂದು ಯುದ್ಧವಾಗಬಹುದೆಂದು ನಿರೀಕ್ಷಕರು ಅಂದಾಜು ಮಾಡಿರುವರು.

ಹಿಂದುಸ್ಥಾನದೊಳಗಿನ ಬ್ರಿಟಿಶರ ಅಧಿಕಾರದಿಂದ ಒದಗಿದ ದುಷ್ಟ ಪರಿಣಾಮಗಳನ್ನು ಅಮೇರಿಕನ್ ಕ್ರಿಶ್ಚನ್ ಪಾದ್ರಿ-ಸಾಹೇಬರು ವರ್ಣಿಸಿರುವರು. ಅವೇನಂದರೆ:- ಬ್ರಿಟಿಶರು ಪೂರ್ಣರಾಗಿ ತಕ್ಕ ಕಾಲದಲ್ಲಿ ಹಿಂದುಸ್ಥಾನಕ್ಕೆ ನ್ಯಾಯದಿಂದಲೂ, ಗೆಳೆತನದಿಂದಲೂ ನಡೆದುಕೊಂಡಿದ್ದರೆ, ಬ್ರಿಟಿಶರಾಷ್ಟ್ರಕ್ಕೆ ಈ ಭೂತಲದ ಮೇಲೆ ಶಾಂತಿಸ್ಥಾಪನೆ ಮಾಡಿದ ಹಾಗು ಸಮೃದ್ಧಿಗೈದ ಶ್ರೇಯಸ್ಸು ಪ್ರಾಪ್ತವಾಗುತ್ತಿತ್ತು. ಈಗ ಏನು! ಲಕ್ಷಾವಧಿ ಕೂಲಿಕಾರರ ನಷ್ಟ! ಲಕ್ಷಾವಧಿ ಅನಾಥ ವಿಧವೆಯರ ಗೋಳು!! ಲಕ್ಷಾವಧಿ ಜನರ ಹೊಟ್ಟೆಯ ಗೋಳಾಟ!!! ಕೋಟ್ಯಾವಧಿ, ಅಬ್ಜಾವಧಿ ರೂಪಾಯಿಗಳ ಹಾನಿ!!!! ಕೈಗಾರಿಕೆಗಳ ನಾಶ. ಯುರೋಪ ಖಂಡದಲ್ಲಂತು ಪರಸ್ಪರ ಅವರ್ಣನೀಯವಾದ ಬೆದರಿಕೆ, ದ್ವೇಷ; ಮತ್ತು ಈ ಮೂಲಕ ಜನಿತವಾದ ಕಲ್ಪನಾತೀತವಾದ ದುಃಖ. ಹೀಗೆ ಹಿಂದುಸ್ಥಾನವನ್ನು ಖಡ್ಗದಿಂದ ಸ್ವಾಧೀನದಲ್ಲಿಟ್ಟುಕೊಂಡು ಸುಲಿದ ಬಗ್ಗೆ ಬ್ರಿಟಿಶರು ಬಹಳವಾಗಿ ದಣಿಸಲ್ಪಟ್ಟಿರುವರು, ಯುರೋಪ ಖಂಡವೂ ದಣಿದಿದೆ.

'ನಿರೀಕ್ಷಕ'ರು ಈ ಪ್ರಕಾರ ಬ್ರಿಟಿಶರ ಮರ್ಮವನ್ನು ಹೊರಗೆಡಹುವರು. ತಾತ್ಕಾಲಿಕ ಕಾರಣಗಳನ್ನೂ, ಪರೋಪಕಾರದ ಮಾತುಗಳನ್ನೂ ಬ್ರಿಟಿಶರು ಮುಂದೊಡ್ಡಿ ಸಾಧಿಸಿದ ಸ್ವಾರ್ಥಸಾಧನೆಯನ್ನು 'ನಿರೀಕ್ಷಕ'ರು ಚಿತ್ತವೇಧಕವಾಗಿ ಬೈಲಿಗೆಳೆದಿರುವರು, ಪರಛಿದ್ರಗಳನ್ನು ಶೋಧಿಸಿ ಪರನಿಂದೆ ಮಾಡಿ, ಯುದ್ಧವು ಜರ್ಮನರಿಂದಾಯಿತು, ನಾವು ಶುಚಿಭೂತ ಪ್ರಾಣಿಗಳು, ಎಂದು ಮೆರೆಯುವ ಬ್ರಿಟಿಶರ ನಿರೀಕ್ಷಣವನ್ನು 'ನಿರೀಕ್ಷಕ'ರು ಚೆನ್ನಾಗಿ ಮಾಡಿರುವರು. ಭಾರತೀಯರು ಬ್ರಿಟಿಶರ ಅಧೀನವಿರುವ ವರೆಗೆ ಎಷ್ಟು ತಹನಾಮೆಗಳಾದರೂ ಅವೆಲ್ಲ ನಿರರ್ಥಕವೆಂದು 'ನಿರೀಕ್ಷಕ'ರು ಹೇಳಿ, ಹಿಂದುಸ್ಥಾನದ ಪ್ರಶ್ನೆಯು ಭೂತಲದ ಲಾಭಾಲಾಭದ ಪ್ರಶ್ನೆಯಾಗಿ ಪರಿಣಮಿಸಿರುವದೆಂದು ಪ್ರತಿಪಾದಿಸಿರುವರು. ದೂರನಿಂತು ತಹನಾಮೆ ಮಾಡುವದಕ್ಕಿಂತ ಹಿಂದುಸ್ಥಾನದಲ್ಲಿಯೇ ರಾಷ್ಟ್ರಪ್ರತಿನಿಧಿಗಳು ಸೇರಿಕೊಂಡು ಹಿಂದುಸ್ಥಾನದ ಪ್ರಶ್ನೆಯನ್ನು ಸಮಾಧಾನಕರವಾಗಿ ಬಿಡಿಸುವದು ಕ್ಷೇಮಕರವೆಂದೂ ನಿರೀಕ್ಷಕರು ಧ್ವನಿಸಿರುವರು. ಬ್ರಿಟಿಶರ ಅಂತಃಕರಣದ ಮುಂದೆ ಇಷ್ಟು ಸ್ವಚ್ಛವಾದ ಕನ್ನಡಿ ಹಿಡಿದು ನಿಜರೂಪವನ್ನು ತೋರಿಸಿ, ಜತೆ ಭಾರತೀಯರಿಗೆ ಭೂಲೋಕದೊಳಗಣ ಸಹಾನುಭೂತಿಯನ್ನು ಸಂಪಾದಿಸಿ 'ನಿರೀಕ್ಷಕ'ರು ಬಹು ಮಟ್ಟಿಗೆ ನೆರವಾಗಿರುವರೆಂದು ಸಮಸ್ತರೂ ಒಪ್ಪುವರು. ಇನ್ನಾದರೂ ಬ್ರಿಟಿಶರು ಸರ್ಪಪಾತ್ರವಿದ್ದ ಪರಛಿದ್ರಗಳ ಶೋಧನೆಯಲ್ಲಿ ತೊಡಗದೆ ಬಿಲ್ವಪಾತ್ರವಿದ್ದ ಆತ್ಮಛಿದ್ರಗಳನ್ನು ನೋಡಿಕೊಂಡು, ಅವನ್ನೇ ದೂರಪಡಿಸಿಕೊಂಡರೆ, ಬ್ರಿಟಿಶರಿಗೂ ಕ್ಷೇಮವು; ಭೂಲೋಕಕ್ಕೂ ಕ್ಷೇಮವು; ಭಾರತೀಯರಿಗಂತು ಕ್ಷೇಮವೇ.

ಸ್ಫುಟ ಸೂಚನೆಗಳು.

೧. ಚೀನ ದೇಶದೊಳಗಣ ಸ್ಥಿತಿಯನ್ನು ವಿಚಾರಿಸಿದರೆ, ರಶಿಯಾ ದೇಶಕ್ಕೆ ಜಪಾನ ದೇಶವು ನೆರವಾಗುವ ಸಂಭವ ಕಾಣುತ್ತದೆ. ಚೀನ ದೇಶದಲ್ಲಿ ಬ್ರಿಟಿಶರ ಪ್ರತಿಷ್ಠೆಯನ್ನು ಕುಗ್ಗಿಸಿ ರಶಿಯಾ ದೇಶವು ಬಡಿದಾಡುತ್ತಿದೆ. ಮುಕಡೇನದ ಗವ್ಹರ್ನರರಾದ ಚೆಂಗ್ಸೊಲೀನರವರು ರಶಿಯಾ ದೇಶದ ವಿರೋಧಕರು. ಇವರಿಗೆ ಸ್ವಸಾಮರ್ಥ್ಯದಿಂದ ರಶಿಯಾ ದೇಶಕ್ಕೆ ಇದಿರಾಗುವ ಸಾಮರ್ಥ್ಯವಿಲ್ಲ. ಜಪಾನ ದೇಶದ ಬಲದಿಂದ ರಶಿಯಾ ದೇಶವನ್ನು ಹಿಮ್ಮೆಟ್ಟಿಸಬೇಕೆಂದು ಅವರು ಹೊಂಚು ಹಾಕಿದ್ದರು. ಹಾರ್ಬಿನದ ರೈಲ್ವೆಯಲ್ಲಿ ರಶಿಯನ್ನರು ಪ್ರವೇಶಗೊಂಡರೆ ಚೆಂಗ್ಸೊಲೀನರವರು ರಶಿಯಾ ದೇಶದೊಡನೆ ಯುದ್ಧ ಹೂಡಿ, ರಣದೇವಿಯ ಪ್ರಾಣಪ್ರತಿಷ್ಠೆ ಮಾಡುವರೆಂದು ಎಲ್ಲರೂ ಅಂದಾಜು ಮಾಡಿದ್ದರು. ಆದರೆ, ಜಪಾನ ರಾಷ್ಟ್ರವು ಬೆಂಬಲವನ್ನೀಯದ್ದರಿಂದ ರಶಿಯಾ ದೇಶಕ್ಕೆ ಯಾರೂ ಇದಿರಾಗದೆ, ಹಾರ್ಬಿನದ ರೈಲ್ವೆಯು ಅವರಿಗೆ ನಿರಾತಂಕವಾಗಿ ಸ್ವಾಧೀನವಾಯಿತು. ಚೆಂಗ್ಸೊಲೀನರವರು ರಶಿಯನ್ನರ ಕೆಲವು ಅಧಿಕಾರಿಗಳನ್ನು ಸೆರೆಹಿಡಿದಿದ್ದರು. ೩ ದಿನಗಳಲ್ಲಿ ಅವರನ್ನು ಬಂಧಮುಕ್ತ ಮಾಡದಿದ್ದರೆ ಯುದ್ಧವಾಗುವದೆಂದು ರಶಿಯನ್ನರು ಗದ್ದರಿಸಲು, ಚೆಂಗ್ಸೊಲೀನರವರು ಸುಮ್ಮನೆ ಹಿಂದರಿದಿರುವರು. ಜಪಾನ ರಾಷ್ಟ್ರವು ರಶಿಯಾ ದೇಶದಲ್ಲಿ ವ್ಯಾಪಾರ ಬೆಳಸಲಿಕ್ಕೆ ಕೆಲವು ಅನುಕೂಲತೆಗಳನ್ನು ಸಂಪಾದಿಸಿದೆ. ಇದಲ್ಲದೆ, ಚೀನ ದೇಶದಲ್ಲಿ ರಶಿಯಾ ದೇಶದ ಪ್ರತಿಷ್ಠೆಯಾದರೂ, ಜಪಾನ ದೇಶಕ್ಕೆ ಹಾನಿಯೇನಿಲ್ಲ. ಬ್ರಿಟಿಶಾದಿ ಯುರೋಪಿಯನ್ ರಾಷ್ಟ್ರಗಳ ಮೇಲೆಯೇ ರಶಿಯಾ ದೇಶದ ಕಟಾಕ್ಷವಿರುವದರಿಂದ ಮತ್ತು ಅಪರಾತ ಈ ರಾಷ್ಟ್ರಗಳು ಚೀನ ದೇಶದೊಳಗಿಂದ ಹೊರಹೋದಲ್ಲಿ ಜಪಾನಕ್ಕೂ ಲಾಭವಿರುವದರಿಂದ ಜಪಾನ ದೇಶವು ರಶಿಯಾ ದೇಶಕ್ಕೇ ನೆರವಾಗಿದೆ. ಬ್ರಿಟಿಶರಿಗೆ ಈಗ ಚೀನ ದೇಶದಲ್ಲಿ ಇಂಬು ದೊರೆಯಲಾರದು. ಹೀಗೆ ಏಶಿಯಾ ಖಂಡದ ಪೂರ್ವಭಾಗದೊಳಗಿಂದ ಯುರೋಪಿಯನ್ ರಾಷ್ಟ್ರಗಳು ಹೊರಹೋಗುತ್ತಿರುವವು. ಜಪಾನದ ಗೆಳೆತನದಿಂದ ರಶಿಯಾ ದೇಶಕ್ಕೆ ಬಹಳ ದೊಡ್ಡ ಲಾಭ; ಬ್ರಿಟಿಶರಿಗೆ ಬಹಳ ದೊಡ್ಡ ಹಾನಿ

---

೨. ಭಡೋಚ ಜಿಲ್ಲೆಯಲ್ಲಿ ಅಂಜುಮನ ಇಸ್ಲಾಮು ಸಂಸ್ಥೆಯವರು ಮಾನಪತ್ರವನ್ನರ್ಪಿಸಿ ಮದ್ಯಪಾನವನ್ನು ಹೊರದೂಡಲು ಮಾಡಿದ ವಿನಂತಿಗೆ ಪ್ರಾಂತಾಧಿಪರು ಕೊಟ್ಟ ಉತ್ತರವು ತೀರ ಅನುಚಿತವೆಂದು ಎಲ್ಲರೂ ಒಪ್ಪುವರು. ಮದ್ಯಪಾನದಿಂದ ಪ್ರಜೆಗಳಿಗೊದಗುವ ನಷ್ಟ-ಕಷ್ಟಗಳನ್ನು ಹೇಳಿ ತೀರದು. ಇದನ್ನು ನಿರ್ಮೂಲಿಸಬೇಕಾದರೆ, ಶಿಕ್ಷಣದ ಕಡೆಗೆ ಬೊಟ್ಟು ತೋರಿಸಿ, ಹೆಂಡಗುತ್ತಿಗೆಯ ಪದ್ಧತಿಯನ್ನು ಬೆಳೆಸುವದು ಪ್ರಜಾಕಲ್ಯಾಣದ ಇಂಬು ಬಯಸುವ ಪ್ರಾಂತಾಧಿಪರಿಗೆ ಎಂದೆಂದಿಗೂ ಶೋಭಿಸದು. ಮೊಟ್ಟಮೊದಲು ಪ್ರಜೆಗಳಿಗೆ ಹೆಂಡ ಕುಡಿಯ ಕಲಿಸಿ- ಎಚ್ಚತ್ತಳಿ ಮಾಡುವದು ದೊಡ್ಡ ಪಾಪವು; ಅದನ್ನು ಚಿಕಿತ್ಸೆಗೆಯ್ಯಹೋದಾಗ, ಪವಿತ್ರ ವಿದ್ಯಾದೇವಿಯ ಸಾನ್ನಿಧ್ಯವನ್ನು ಮುಂದೆ ಮಾಡಿ ಸಮರ್ಥಿಸುವದು ಇನ್ನೊಂದು ಪಾಪವು. ಶಿಕ್ಷಣಕ್ಕೂ, ಹೆಂಡಗುತ್ತಿಗೆಗಳಿಗೂ ತಳಕು ಹಾಕುವಾಗ, ಪ್ರಾಂತಾಧಿಪರು ಇನ್ನೊಂದು ಸೂಚನೆಯನ್ನು ಮಾಡಿರುವರು. ಹೊಸ ಕರಗಳನ್ನಿತ್ತು ಅಬಕಾರಿ ಉತ್ಪನ್ನದ ಕೊರತೆಯನ್ನು ಭರಪಾಯಿ ಮಾಡಿಕೊಂಡ ಹೊರತು, ಮದ್ಯಪಾನನಿಷೇಧದ ಮಾತೆತ್ತಬಾರದೆಂದೂ ಪ್ರಾಂತಾಧಿಪರ ಅಪ್ಪಣೆಯಿದೆ. ಕರಗಳ ಭಾರವು ಮಿತಿಮೀರಿ ಏರಿರುವದು. ಇನ್ನೂ ಕರಗಳನ್ನು ಹೇರುವದು ಪಾಪವು. ಶಿಕ್ಷಣದಂಥ ಸುಧಾರಿಸಿದ ಸರಕಾರದ ಕರ್ತವ್ಯಪರಿಪಾಲನೆಗೆ ಹೊಸದಾಗಿ ಕರ ಹೇರಬೇಕಾದ ಬಳಿಕ, ಸರಕಾರವು ಸುಧಾರಿಸಿದ್ದೆಂದು ಹೇಳಿಸಿಕೊಳ್ಳಲು ಎಂದಾದರೂ ಪಾತ್ರವಾದೀತೇನು? ಅಥವಾ "ಜಪಾನ ಕ್ರಾನಿಕಲ್" ಪತ್ರಿಕೆಯಲ್ಲಿ ನಿರೀಕ್ಷಕರು ಉದ್ಧರಿಸಿದಂತೆ ಹಿಂದುಸ್ಥಾನವು ಪ್ರಜಾಕಲ್ಯಾಣಕ್ಕಾಗಿ ಆಳಲ್ಪಡದೆ, ಬ್ರಿಟಿಶರ ಸ್ವಾರ್ಥದೃಷ್ಟಿಯಿಂದಲೇ ಆಳಲ್ಪಡುತ್ತಿದ್ದದರಿಂದ ಇಂಥ ಪ್ರಕಾರಗಳು ಹಿಡಿಗಿ ಬರುತ್ತವೆಂದು ನಾವು ಹೇಳಬಹುದೇನು?

---

೩. ಅಲಹಾಬಾದ-ಪ್ರಯಾಗದೊಳಗಿನ ಶ್ರೀಮತಿ ಉಮಾದೇವಿ ನೆಹರೂರವರು, ಮಾನಧನ ಪುರುಷರಿಗೆ ಸ್ವೋದಾಹರಣದಿಂದ ಒಂದು ಪಾಠ ಕಲಿಸಿರುವರು. ಶ್ರೀಮತಿಯವರು ಅಲ್ಲಿಯ ಮ್ಯುನಿಸಿಪಾಲಿಟಿಯ ಸದಸ್ಯತ್ವಕ್ಕೆ ಉಮೇದವಾರರಾಗಿ ನಿಂತುಕೊಂಡಿದ್ದರು. ಮತದಾರರು ಅಭಿಮಾನಶೂನ್ಯರಾದದ್ದರಿಂದ ದೇವಿಯವರು ಅಪಯಶ ಹೊಂದಿದರು. ಪ್ರಾಂತಿಕ ಸರಕಾರವು ಶ್ರೀಮತಿಯವರನ್ನು ತನ್ನ ಅಧಿಕಾರಬಲದಿಂದ ಸಭಾಸದರನ್ನಾಗಿ ನೇಮಿಸಿದರು. ಶ್ರೀಮತಿಯವರು ಅದನ್ನು ತ್ಯಜಿಸುವಾಗ ಬರೆದದ್ದೇನಂದರೆ:— "ಚುನಾವಣೆಯಲ್ಲಿ ಉಮೇದವಾರರಾಗಿ ನಿಂತು ಪರಾಜಯಹೊಂದಿದ ವ್ಯಕ್ತಿಗಳು ಸರಕಾರದ ಬಲದಿಂದ ಪ್ರತಿನಿಧಿಕ ಸಂಸ್ಥೆಯಲ್ಲಿ ಸೇರಿಕೊಳ್ಳುವದು ಅಯೋಗ್ಯವೆಂದು ನನ್ನ ಮತವು." ಶ್ರೀಮತಿ ಉಮಾದೇವಿಯವರು ಪ್ರದರ್ಶಿಸಿದ ತತ್ವನಿಷ್ಠೆಯನ್ನು ನಾವು ಮನಃಪೂರ್ವಕ ಕೊಂಡಾಡುವೆವು. ಮತದಾರರು ತಮಗೆ ಮತ ಕೊಡದೆ ತಳ್ಳಿದಾಗ, ತಾವು ಸರಕಾರದ ಆಶ್ರಯ ಹಿಡಿದು, ಸ್ಥಾನಿಕ ಸ್ವರಾಜ್ಯಸಂಸ್ಥೆಗಳಲ್ಲಿ ಸೇರಿಕೊಳ್ಳುವದು ಅವಮಾನಾಸ್ಪದವೆಂದು ಅರಿತುಕೊಂಡಿದ್ದರೆ, ಅಷ್ಟು ಸ್ವಾಭಿಮಾನವು ಉಮೇದವಾರರಲ್ಲಿ ನೆಲೆಗೊಂಡಿದ್ದರೆ, ನಮ್ಮ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಿಂದ ನಮಗೆ ಬಹಳ ಉಪಕಾರವಾಗುತ್ತಿತ್ತು; ಉಮೇದವಾರರ ಲೋಕಸಂಗ್ರಹಬುದ್ಧಿಯೂ ಮಿಗಿಲಾಗುತ್ತಿತ್ತು. ರಾಜಕಾರಣದಲ್ಲಿರಲಿ, ಅದಿರಲಿ, ಯಾವದೇ ಹಾದಿಯಿಂದ, ಮೆಂಬರಿಯ ಖುರ್ಚಿ ಒಂದು ದೊರೆತರಾಯಿತು, ಎಂಬ ಸ್ವಾರ್ಥಮಾನಶಕ್ತಿಯಿಂದ ಖುರ್ಚಿಯನ್ನಲಂಕರಿಸಲು ಬೇಡುವ ಮಹಾನುಭಾವರಿಗೆ ಶ್ರೀಮತಿ ಉಮಾದೇವಿಯವರು ಚೊಕ್ಕ ಪಾಠವನ್ನು ಹೇಳಿರುವರು. ಇದನ್ನು ಅವರು ಗ್ರಹಿಸಬೇಕೆಂದು ನಮ್ಮ ಬಿನ್ನಹವಿದೆ.

ಜಾಹೀರ ವಿನಂತಿ.

ಶ್ರೀ ಗೋಕರ್ಣ ಕ್ಷೇತ್ರದಲ್ಲಿ ನಡೆಯುವ ಮಹಾಶಿವರಾತ್ರಿ ಮಹೋತ್ಸವದ ನಿಮಿತ್ತ ನಮ್ಮ ಆಫೀಸು ಕೆಲಸಕ್ಕೆ ರಜೆಯಿರುವದರಿಂದ ಮುಂದಿನ ಸಂಚಿಕೆಯನ್ನು ಹೊರಡಿಸಲು ಅಸಾಧ್ಯವಿರುವದು. ‘ವೃತ್ತ'ವು ತಾರೀಖು ೨೨-೨-೧೯೨೬ ನೇಗೆ ಎಂದಿನಂತೆ ವಾಚಕರ ಸೇವೆಗೆ ಬರುವದು. ಇತಿ ಮೆನೇಜರ.

ಸ್ಥಾನಿಕ ವೃತ್ತಾಂತ.

ಕುಮಟಾ— ಇಲ್ಲಿ ನಡೆದ ಹೇರೂರ ಖೂನಿ ಖಟ್ಲೆಯ ವಿಚಾರಣೆಯು ಕಳೆದ ಶನಿವಾರ ವರೆಗೆ ನಡೆಯಿತು. ಉಗ್ರಾಣಿ ಬಾಬು ನಾಯಕ, ಪಟೇಲ, ಸಿದ್ದೋಳ ಸರ್ಜನ ಇತ್ಯಾದಿಗಳ ಜಬಾನಿಗಳು ನಡೆದವು. ಸರಕಾರದ ಪರ ವಕೀಲರೂ, ಆರೋಪಿ ವಕೀಲರೂ ತಮ್ಮ ತಮ್ಮ ತರ್ಕಗಳನ್ನು ಸಾದರಪಡಿಸಿದರು. ಈ ಹೊತ್ತು ಎಸ್ಸೆಸರರ ಅಭಿಪ್ರಾಯ ಕೇಳಲಾಯಿತು. ಇಬ್ಬ ಎಸ್ಸೆಸರರು ಕೂಡ ಆರೋಪಿಯರೂ ನಿರಪರಾಧಿಗಳೆಂದು ಅಭಿಪ್ರಾಯ ಪಟ್ಟರು. ಇಬ್ಬರು ಆರೋಪಿ ನಂಬರ ೧ನೇಯವನಾದ ಈತನು ಅಪರಾಧಿ ಎಂದೆಂದರು. ಜಡ್ಜರ [illegible] ಕೇಸಿನ ತೀರ್ಪು [illegible] ಕೊಟ್ಟು ಮೂವರು ಆರೋಪಿಗಳನ್ನೂ ಬಿಟ್ಟುಕೊಟ್ಟರು. ಆರೋಪಿ [illegible] ಕಬೂಲಿ ಜಬಾಬಿನ ಹೊರತು ಬೇರೆ ಸಾಕ್ಷ್ಯ ಪುರಾವೆಯಿರುವದಿಲ್ಲವಾಗಿಯೂ, ಕಬೂಲಿ ಜಬಾಬು ಕೊಟ್ಟದೆಯಂತೆ [illegible] ಜಡ್ಜರು ಅಭಿಪ್ರಾಯ ಪಟ್ಟರು. [illegible] ಸಾಮಾನ್ಯವಾಗಿ ಅನೀತಿಪರರಾಗಿ [illegible] ಜಾತಿಯವರಿದ್ದಾಳೆಂದೂ, [illegible] ಅನೈತಿಕ ಸಂಬಂಧವನ್ನು ತಿಳಕೊಳ್ಳಲಿಕ್ಕೆ [illegible] ಸಾಕಷ್ಟು [illegible] ಕಲ್ಯಾಣಿಯು ಸಾಮಾನ್ಯ [illegible] ಸುಳ್ಳು ಜಬಾಬು ಕೊಟ್ಟಿರುವಳೆಂದೂ ಜಡ್ಜರು [illegible] ಪೋಲೀಸ ಸಬ್ ಇನಸ್ಪೆಕ್ಟರರ [illegible] ಆರೋಪಿ [illegible] ಕಬೂಲಿ ಜಬಾಬು ಕೊಂಡರೆಂದು ಜಡ್ಜರ ಅಭಿಪ್ರಾಯವಾಗಿದೆ. ಪೋಲೀಸ ಸಬ್ ಇನಸ್ಪೆಕ್ಟರರ ವರ್ತನವನ್ನು ಡಿಸ್ಟ್ರಿಕ್ಟ ಮೆಜಿಸ್ಟ್ರೇಟರು ವಿಚಾರಿಸಬೇಕೆಂದೂ ಜಡ್ಜರ [illegible] ಇನಸ್ಪೆಕ್ಟರರು [illegible] ಹಾಗು [illegible] ಸಂಗ್ರಹ, [illegible] ಪ್ರಮಾಣ [illegible] ಸಾಕ್ಷಿಗಳಿಂದ ಜಡ್ಜರು [illegible] ತೀರ್ಪು [illegible] ಸಮಯದಲ್ಲಿ [illegible] ಆರೋಪಿಗಳು [illegible] ಜಡ್ಜರು ಈ ಹೊತ್ತು [illegible] ಕೊಟ್ಟಿರುವರು. [illegible] ಖಟ್ಲೆಯ ವಿಚಾರವಾಗುವದು.

ಸಾಭಾರ ಸ್ವೀಕಾರ

ಜಯಕರ್ನಾಟಕ— ವರ್ಷ ೪, ಸಂಚಿಕೆ ೪ ಸಂಪಾದಕರು ರಾ| [illegible], ಧಾರವಾಡ. ವಾರ್ಷಿಕ ವರ್ಗಣಿ ರೂಪಾಯಿ ೫ [illegible]

ಸ್ವಧರ್ಮ ಧಾರವಾಡ ಕರ್ನಾಟಕ ಮಹಾವಿದ್ಯಾಲಯದಿಂದ ಪ್ರಕಟವಾಗುವ ತಿಂಗಳ ಮಾಸಪತ್ರಿಕೆ. ಪುಸ್ತಕ ೩, ಸಂಚಿಕೆ ೧೧. ಸಂಪಾದಕರು [illegible] ಎಂ. ಎ. ಕರ್ನಾಟಕ ವಿದ್ಯಾಲಯ ಧಾರವಾಡ, ವಾರ್ಷಿಕ ವರ್ಗಣಿ ರೂ. ೩-೦-೦

ರಂಗಭೂಮಿ— ಶ್ರೀ ದತ್ತಾತ್ರೇಯ ಸಂಗೀತ ನಾಟಕ ಮಂಡಳಿ, ಗದಗ ಇವರ ಆಶ್ರಯದಲ್ಲಿ ಹೊರಡುವ ಮಾಸಪತ್ರಿಕೆ. ವರ್ಷ ೧, ಸಂಚಿಕೆ ೬. ಸಂಪಾದಕ ಶ್ರೀ ದತ್ತಾತ್ರೇಯ ಕೃಷ್ಣ ಭಾರದ್ವಾಜ, ರಂಗಭೂಮಿ ಕಾರ್ಯಾಲಯ ಆನಂದಾಶ್ರಮ, ಬಸವನಗುಡಿ, ಬೆಂಗಳೂರು ವಾರ್ಷಿಕ ವರ್ಗಣಿ ರೂಪಾಯಿ ೩-೦-೦

‘ಧುರೀಣ'ನ ಸತ್ಯಾಪಲಾಪ:

ರಾ| ರಾ| “ಕಾನಡಾವೃತ್ತ” ಪತ್ರಕರ್ತರಿಗೆ—

ವಿ. ವಿ. ಕಳೆದ ತಾರೀಖು ೨ ೨-೧೯೨೬ ನೇಗೆ ಪ್ರಕಟವಾದ ‘ಧುರೀಣ' ಪತ್ರಿಕೆಯಲ್ಲಿ ವೈ| ಡಾ| ರಾಮದಾಸ ಶ್ಯಾನಭಾಗ, ಎಮ್. ಬಿ. ಬಿ. ಎಸ್ ಇವರ ಕುರಿತು ಬರೆದ ಟಿಕೀಕಳು ನೋಡಿ ಆಶ್ಚರ್ಯವಾಯಿತು. ವೈ| ಡಾ| ಗಳ ತಂದೆಯವರಿಗೆ ಮುಂಬಯಿಯ ಗ್ರಂಟ ಮೆಡಿಕಲ್ ಕೋಲೇಜಿನ ಡೀನರವರು ಬರೆದ ಪತ್ರವನ್ನು ಇದರಡಿ ಕೊಟ್ಟಿರುವೆನು.

ಈ ಉಲ್ಲೇಖ ನೋಡಿರಿ!

GRANT MEDICAL COLLEGE,
BOMBAY, 3rd February, 1926

Dear Sir

It is with sincere regret that I heard of the untimely death of your son Dr. Rama Dasa Shanbhag, and I together with the whole College sympathise with you and the family in your sad bereavement. A copy of the notice that I put up on the notice board of this College is hereto attached.

Yours faithfully,
S. L. Bhatia.

To
Mr D. P. Shanbhag
Kuligaddekar, KUMTA N. Kanara

No 147 of 1926
OFFICE OF THE DEAN,
GRANT MEDICAL COLLEGE,
Bombay 3-2 1926

NOTICE.

I regret to announce the death of Mr R. D. Shanbhag M B B S late Second Tutor in Medicine, which took place in Bombay on 31st January, 1926. Mr Shanbhag joined this College in June 1918 after passing Intermediate Science (Group D) examination from the Fergusson College, Poona. He passed the Intermediate M B B.S. examination in 1920 and the Final Examination for the degrees of M. B. B. S. in April 1922 both examinations at the first attempt and in the least possible time. After graduation he was made a Fellow of the College and Clinical Registrar to the Senior Physician, a position that he held with distinction from 23rd August 1922 to 7th June 1923. He was appointed Second Tutor in Medicine, which appointment he held with equal distinction from 1st January, 1924 till December 1925. His distinguished career has however been cut short by his early death. The whole College will join with me in expressing the sincerest sympathy with the bereaved relatives.

S. L. BHATIA.
Captain, I. M. S.
Dean, Grant Medical College.

ಇದರೊಂದಿಗೆ ‘ಕಾನಡಾ ಧುರೀಣ'ದ ಮೇಲ್ಕಂಡ ಸಂಚಿಕೆಯಲ್ಲಿ ಬರೆದ ಉಲ್ಲೇಖದ ತುಲನೆ ಮಾಡಿರಿ.

ಈ ಉಲ್ಲೇಖ ನೋಡಿರಿ!

“ಮುಂಬಯಿಯಲ್ಲಿ ಕೆಂಪ್ ಎಂಬ ಕಂಪನಿಯಲ್ಲಿ ಕಳೆದ ಮೂರು ವರ್ಷಗಳಿಂದ ಡಾಕ್ಟರರಾಗಿ ೩೦೦ ರೂ. ಸಂಬಳದ ಮೇಲಿದ್ದ ಡಾ| ರಾಮದಾಸ ಶ್ಯಾನಭಾಗ ಕುಳಗದ್ದೆ, ಎಂ ಬಿ ಬಿ. ಎಸ್. ಇವರು ಕಳೆದ ಶನಿವಾರ ತಮ್ಮ ೨೮ನೇ ವರ್ಷದಲ್ಲಿ ಅಕಾಲವಾಗಿ ಪರಲೋಕವಾಸಿಗಳಾದರೆಂದು ತಿಳಿಸಲು ತುಂಬಾ ವಿಷಾದಪಡುತ್ತೇವೆ. ಅವರು ಉತ್ಸಾಹಿಗಳೂ, ಸದಾಚಾರಿಗಳೂ, ಸೂಕ್ಷ್ಮಬುದ್ಧಿಯವರೂ ಆಗಿದ್ದು, ಘನತೆಗೇರುವ ಪರಿಸ್ಥಿತಿಯಲ್ಲಿದ್ದರು. ಅವರ ನಿಧನದಿಂದ ಅವರ ಕುಟುಂಬಕ್ಕೂ, ಗೌ| ಸಾ| ಸಮಾಜಕ್ಕೂ ವಿಶೇಷ ಹಾನಿ ತಟ್ಟಿತೆಂಬುದರಲ್ಲಿ ಸಂದೇಹವಿಲ್ಲ. ಅವರ ಆತ್ಮಕ್ಕೆ ಶಾಂತಿಯಿರಲಿ.”

ಇವೆರಡರ ವಾಚನದಿಂದ ‘ಧುರೀಣ'ದಲ್ಲಿ ಪ್ರಕಟವಾದ ಟಿಕೀಕಳು ನಿರಾಧಾರವಾದದ್ದೆಂದು ಯಾರೂ ಹೇಳುವರು. ‘ಧುರೀಣ'ದ ಉಲ್ಲೇಖದಲ್ಲಿ ಒಂದು ವಿಶೇಷವಿದೆ. ಅದನ್ನು ಓದುವವರಿಗೆ ‘ಧುರೀಣ'ದೊಳಗಿನ ಸುದ್ದಿ ಸುಳ್ಳೆಂದು ಎಂದೂ ಕಾಣದು. ಅಷ್ಟು ಕುಶಲವಾಗಿ ಸುಳ್ಳು ಹೇಳಲಾಗಿದೆ “ಕೆಂಪ ಎಂಬ ಕಂಪನಿ” “ಮೂರು ವರುಷ” “೩೦೦ ರೂಪಾಯಿ” “ಸಂಬಳ” ಎಂಬೀ ನಿಶ್ಚಯಾತ್ಮಕ ವಿಧಾನಗಳಿಂದ ಸುಳ್ಳಿಗೆ ಸತ್ಯ ಸತ್ಯದ ಪುಟ ಬಂದಿದೆ. ಈ ವಿಧಾನಗಳು ತೀರ ಕಿಡಿಗೇಡಿತನದ್ದು ವೈ| ಡಾ| ಗಳ ಕೀರ್ತಿಯನ್ನು ಕೆಡಿಸುವ ಪ್ರಕಾರವೆಂದು ನನಗೆಂತು ತೋರುತ್ತದೆ. ಗ್ರಂಟ ಮೆಡಿಕಲ್ ಕಾಲೇಜಿನ ಅಧಿಕಾರಿಗಳಾದ ಡೀನರವರ ಪತ್ರವಿಲ್ಲದಿದ್ದರೆ, ‘ಧುರೀಣ'ವು ಪ್ರಕಟಿಸಿದ ಸುದ್ದಿಯು ನಿರಾಧಾರವೆಂದು ಹೇಳುವ ಧೈರ್ಯವು ಯಾರಿಗೂ ಇದ್ದಿದ್ದಿಲ್ಲ! ಇಷ್ಟು ಸೂಕ್ಷ್ಮವಾಗಿ ಪ್ರಕಟಿಸಿದ ಮಾಹಿತಿಯನ್ನು ಕೆಂಪ ಎಂಬ ಕಂಪನಿಯಲ್ಲಿ ಯಾರಾದರೂ ‘ಸಂಬಳ'ಕ್ಕಿದ್ದ ಮನುಷ್ಯನಿರಬಹುದೆಂದು ನಾನು ಆಲೋಚಿಸಿ, ಈ ಕುರಿತು ಚೌಕಶಿ ಮಾಡಿದೆನು. ಆಗ ದೊರೆತ ಮಾಹಿತಿಯನ್ನು ಕೇಳಿ ನನಗೆ ಸಖೇದಾಶ್ಚರ್ಯವೆನಿಸಿತು. ಇಲ್ಲಿಯ ಡಾ| ಪಾಡಕೂರರ ವಿನಂತಿ ಮೇರೆಗೆ ಇಲ್ಲಿಯ ಡಾ| ಆರ್ ವ್ಹಿ ಕಲ್ಯಾಣಪೂರ ಎಮ್. ಬಿ ಬಿ. ಎಸ್. ಇವರು ವೈ| ಡಾ| ಗಳ ವಿಷಯವಾಗಿ ‘ಧುರೀಣ'ದಲ್ಲಿ ಪ್ರಕಟವಾದ ಉಲ್ಲೇಖದ ಮಾಹಿತಿಗಾರರೆಂದು ತಿಳಿದುಬರುತ್ತದೆ! ಡಾ| ಕಲ್ಯಾಣಪೂರರವರು ಗ್ರಂಟ ಮೆಡಿಕಲ್ ಕಾಲೇಜಿನಲ್ಲಿ ವಿದ್ಯಾರ್ಥಿಗಳಿದ್ದರು. ಇವರು ವಿದ್ಯಾರ್ಥಿಗಳಿದ್ದಾಗ ವೈ| ಡಾ| ಗಳು ‘ರಜಿಸ್ಟ್ರರ' ಹಾಗು ‘ಟ್ಯೂಟರ' ಯಾನೆ ಶಿಕ್ಷಕರಿದ್ದರು.. ಹೀಗಿನ ಸ್ಥಿತಿಯಲ್ಲಿ ಡಾ| ಕಲ್ಯಾಣಪೂರರು ಇಂಥ ಮಾಹಿತಿಯನ್ನು ಪ್ರಕಟಿಸಬಲ್ಲರೆಂದು ನನಗೇನೂ ಅನಿಸುವದಿಲ್ಲ; ನನಗೆ ನಂಬಿಗೆಯೂ ಹುಟ್ಟುವದಿಲ್ಲ. ಚೌಕಶಿಯಲ್ಲಂತು ಡಾ| ಕಲ್ಯಾಣಪೂರರೇ ಈ ಮಾಹಿತಿಯನ್ನು ಪ್ರಕಟಿಸಿದರೆಂದು ಹೇಳಲಾಗುತ್ತದೆ. ಆದ ಕಾರಣ ‘ಧುರೀಣ” ಕರ್ತರಾಗಲಿ, ಡಾ| ಕಲ್ಯಾಣಪೂರರಾಗಲೀ ಈ ಕುರಿತು ಸ್ಪಷ್ಟೀಕರಿಸುವರೇನು?

ಕುಮಟಾ, | ತಮ್ಮ ವಿಧೇಯ,
ತಾ. ೬-೨-೨೬. | *W. S. S.*

ವೃತ್ತಸಾರ.

—ಮುಂಬಯಿಯಲ್ಲಿ ೯೦೦ ಸೂಳೆಯ ಮನೆಗಳಿವೆ. ೫೦೦೦ ಸೂಳೆಯರಿರುವರು. ಅವರನ್ನು ಹೊರಸೂಸಬೇಕೆಂದು ಮುಂಬಾಪುರದ ಸ್ತ್ರೀಯರು ಠರಾಯಿಸಿ, ಸರಕಾರಕ್ಕೂ, ಮ್ಯೂನಿಸಿಪಾಲಿಟಿಗೂ ಈ ಕುರಿತು ಬಿನ್ನಹ ಮಾಡಿಕೊಂಡಿರುವರು.

—ಮ್ಯೂನಿಸಿಪಾಲಿಟಿಗಳ ಅಧಿಕಾರ ಕಕ್ಷೆಯಲ್ಲಿ ಗೋವಧೆಯನ್ನು ನಿಯಂತ್ರಿಸುವ ಅಧಿಕಾರ ಕೊಡುವ ವಿಚಾರಾಗಳೀಕೆಂದು ಮುಂಬಯಿ ಪ್ರಾಂತಿಕ ಕಾಯಿದೆ ಕೌನ್ಸಿಲಿನ ಸಭಾಸದರಾದ ರಾ| ಸಾವೇಯವರು ಠರಾವು ತರುವರಿದ್ದಾರೆ.

— ಲಂಡನಿನ ದುರಾದಾಬಾದರವರು ತಮ್ಮ ಸಂಸ್ಥಾನಕರ್ಷಕಗಳ ಬೀಳ್ ಭೂಮಿಯನ್ನು ಒಕ್ಕಲಿಗರಿಗೆ ಉಚಿತವಾಗಿ ಕೊಡಲು ಪ್ರಕಟಣೆಯನ್ನು ಹೊರಡಿಸಿರುವರು. ನಿರುದ್ಯೋಗಿಗಳಾಗಿ ಹೊಟ್ಟೆಕೂಳು ಕೂಳು ಸಿಗದೆ ಗೋಳಿಡುವ ಬೇಸಾಯಗಾರರು ಲಾಭ ಪಡೆಯಬೇಕು.

— ಮುಂಬಯಿಯ ವಿಶ್ವವಿದ್ಯಾಲಯದವರು ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಯ ಅಭ್ಯಾಸಕ್ರಮದಲ್ಲಿ ಹಿಂದೀ ಭಾಷೆಯನ್ನು ಸೇರಿಸಿರುವರು.

— ೧೯೧೧-೧೨ ರಿಂದ ೧೯೩೪-೩೫ ರವರೆಗೆ ಅಫಘಾನ ಸರಹದ್ದಿನ ಬಂಡಿನ ಬಗ್ಗೆ ೫೮ ಕೋಟಿ ರೂಪಾಯಿ ವೆಚ್ಚವಾದವು. ಸರಹದ್ದಿನ ಮೇಲೆ ಅಂತರಗಳಿಗೆ ೬.೭ ಲಕ್ಷ ರೂಪಾಯಿಗಳ ಬಕ್ಷೀಸು ಕೊಡಲಾದವು. ಇದೆಲ್ಲ ಭಕ್ತ ಹಿಂದುಸ್ಥಾನದ ಸರಹದ್ದು ಸುರಕ್ಷಿತವಿಡಬೇಕೆಂದು !

— ಲಂಡನ ಪಾದ್ರಿ ಸಾಹೇಬರ ಸಭೆಯು ಜನವರಿ ೩೦ ನೇಗೆ ಸೇರಿ ಹಿಂದುಸ್ತಾನದಲ್ಲಿ ಹಿಂದೂ ಧರ್ಮದ ವಿರುದ್ಧ ಚಳವಳಿ ನಡಸಿ ಕ್ರೈಸ್ತ ಮತಪ್ರಸಾರ ಮಾಡುವ ಕುರಿತು ಆಲೋಚನೆಯಾಯಿತು. ಮದ್ರಾಸದಲ್ಲಿ ಬಿಶಪರಾಗಿದ್ದ ವ್ಹೈಟಹೆಡ್‌ರವರು ಹಿಂದೂಗಳನ್ನು ಧರ್ಮಭ್ರಷ್ಟ ಮಾಡಲು ಶಸ್ತ್ರವಿದ್ದರೆ ದಾಳಿಯಿಡಬೇಕೆಂದರು. ಹಿಂದೂ ಮಿಶನರಿ ಸಂಸ್ಥೆಗಳು ಧರ್ಮಾಂತರ ಹೊಂದಿದ ಹಿಂದೂಗಳನ್ನು ಶುದ್ಧಿಸುವ ಉಪಾಯಯೋಜನೆಯು ಅಕ್ಷೇಪಕರವೆಂದು ಸೂಚಿಸಲಾಯಿತು.

— ಭಿಲ್ಲರ ಸ್ಥಿತಿ ಸುಧಾರಿಸಲಿಕ್ಕಾಗಿ ಗುಜರಾಥದ ಭಿಲ್ಲ ಸೇವಾ ಸಮಾಜದವರು ಅಂಕಲೇಶ್ವರ ತಾಲೂಕಿನ ಅಮ್ಮತಪುರಾ ಎಂಬಲ್ಲಿ ಒಂದು ಆಶ್ರಮವನ್ನು ತೆರೆದಿರುವರು. ಈ ಆಶ್ರಮಕ್ಕೆ ಹಿಂದೂ ಮಹಾ ಸಭೆಯವರು ೫೦೦ ರೂಪಾಯಿ ಅರ್ಪಿಸಿರುವರು.

— ವಿದ್ಯುಚ್ಛಕ್ತಿಯ ಉಪಾಯದಿಂದ ಪ್ರಾಣಿಗಳ ದೇಹದ ರಕ್ತವನ್ನು ಎಕ್ಸರೆಮಾಗಿ ಮಾಡಿಸಿ ತೋಳಗಳನ್ನು ತಿರುಗಿಸಿದರೆ ಕೆಲ ಸಮಯದಲ್ಲೇ ಪ್ರಾಣವು ತಿಂತಿರುಗಿ ಬರುವದೆಂದು ಅಸ್ಟ್ರೇಲಿಯಾ ದೇಶದ ಒಬ್ಬ ವೈದ್ಯರಾಜರ ಅಭಿಪ್ರಾಯ ಎಂಥೆಂಥ ಚಮತ್ಕಾರ! ನರ ಕರೀಲೇ ಕರೀಸೋ ನರಕಾ ನಾರಾಯಣ ಹೋ ಜಾಯ್, ಎಂಬಂತಾಯಿತು !!

— ಶ್ರೀ ದ್ವಾರಕಾ ಕ್ಷೇತ್ರದಲ್ಲಿ ಶ್ರೀ ದ್ವಾರಕಾ ಪೀಠಾಧೀಶ್ವರರಾದ ಶ್ರೀ ಜಗದ್ಗುರು ಶಂಕರಾಚಾರ್ಯ ಶಾಂತಾನಂದ ಸರಸ್ವತಿಯವರು, 'ಸನಾತನ ಧರ್ಮ ಸಂಸ್ಕೃತ ಮಹಾವಿದ್ಯಾಲಯ'ವನ್ನೊಂದು ಫೆಬ್ರುವರಿ ತಾ. ೧೫ನೇಗೆ ತೆರೆಯಲಿರುವರು. ವಿದ್ಯಾರ್ಥಿಗಳ ಊಟ-ವಸತಿಗಳ್ಳ ವೆಚ್ಚ ಶ್ರೀ ದ್ವಾರಕಾ ಪೀಠದಿಂದಲೇ ನಡೆಯುವದು.

— ಕಲಕತ್ತೆಯ ಕ್ಯಾಕೋಟಿನಲ್ಲಿ ಇಂಪೀರಿಯಲ್ ಟೊಬೆಕೋ ಕಂಪನಿಯ ಮೇಲೆ ಕಲ್ಕತ್ತೆ ಜಿ. ಎಂಡ್ ಎಚ್. ಓ. ಮಿಲ್ಸ ಕಂಪನಿಯವರು ಮಾಡಿದ ನಷ್ಟಭರಪಾಯಿಯ ದಾವೆಯು ವಾದಿಗೆ ಅನುಕೂಲವಾಗಿ ನಿಕಾಲೆಯಾಗಿದೆ. ಇದರಂತೆ ಪ್ರತಿವಾದಿಯು ವಾದಿಗೆ ೩॥ ಲಕ್ಷ ರೂಪಾಯಿಗಳನ್ನು ತೆರಬೇಕಾಗುವದು. ವಾದಿಯು "ಗೋಲ್ಡಫ್ಲೇಕ್" ಎಂಬ ಹೆಸರಿನ ಸಿಗರೆಟ್ ಡಬ್ಬಿಗಳನ್ನು ಮಾರಾಟಕ್ಕೆ ತಂದಾಗ ಪ್ರತಿವಾದಿ ಕಂಪನಿಯವರು ನ್ಯಾಯದಿಂದ ಪ್ರತಿಬಂಧಕ ಹುಕುಮನ್ನು ಹೊರಡಿಸಿ ವಾದಿಗೆ ನಷ್ಟಮಾಡಿದರೆಂದು ದಾವೆಯು.

— ಬಳ್ಳಾರಿ ಜಿಲ್ಲೆಯ ಸೊಂಡೂರ ಮಹಾರಾಜರವರು ತಮ್ಮ ಸಂಸ್ಥಾನದಲ್ಲಿ ಗೋವಧೆಯನ್ನು ಕಾಯದೆಯಿಂದ ಬಂದ್ ಮಾಡಿರುವರು.

— ಶ್ರವಣಬೆಳಗೊಳ ಮಠದ ಜೈನ ಧರ್ಮದ ಶ್ರೀ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಸ್ವಾಮಿಗಳವರು ಕೆಲ್ಲಕಾಲದ ಬೇನೆಯಿಂದ ಮಾಘ ಶು ೧೩ಕೆಗೆ ಸಮಾಧಿಸ್ಥರಾದರು. ಶ್ರೀಗಳು ವಿದ್ಯಾಸಂಪನ್ನ, ಧರ್ಮಾತ್ಮರೂ, ಶಾಂತ ಸ್ವಭಾವದವರೂ ಆಗಿದ್ದರು. ಮರಣ ಸಮಯದಲ್ಲಿ ಗಳ ವಯಸ್ಸು ಸುಮಾರು ೪೪ ವರುಷ. ಧರ್ಮಾಸನದ ಸ್ಥಾನ ಸಮಾಜವು ಶೋಕಗ್ರಸ್ತವಾಗಿದೆ.

— ಕರ್ನಾಟಕ ಪ್ರಾಂತಿಕ ಪರಿಷತ್ತಿನ ಅಧಿವೇಶನವು ಬಳ್ಳಾರಿಯಲ್ಲಿ ಮೇ ತಿಂಗಳ ಕೊನೆಯ ವಾರದಲ್ಲಿ ಜರುಗುವ ವಿಚಾರ ನಡೆದಿದೆ.

— ಬಿಹಾರ ಹಾಗು ಒರಿಸಾ ಪ್ರಾಂತದ ಸ್ವರಾಜ್ಯಪಕ್ಷದ ಸಭಾಸದರಾದ ಶ್ರೀ ಕೃಷ್ಣವಲ್ಲಭ ಸಹಾಯರವರು ಕೆಳ್ಳಟ ಕಮಿಶನರರಾದ ಮಿ॥ ಮೂರ್ಫಿಯವರ ಮೇಲೆ ಅಬ್ರೂ ಲುಕ್ಸಾನಿನ ದಾವೆ ದಾಖಲ ಮಾಡಿರುವರು.

— ಮುಂಬಯಿಯ ಶಾಸನ ಕೌನ್ಸಿಲಿನ ಸಭಾಸದರಾದ ಮಿ॥ ಚಿಟ್ನಿಸ್ಸರವರು ಕೇಂದ್ರ ಶಾಸನ ಕೌನ್ಸಿಲಿನಲ್ಲಿ ಶ್ರೀ ಕೇಳಕರವರ ಜಾಗೆಗೆ ಆರಿಸಿಹೋಗಿರುವರು. ಮಿ॥ ಚಿಟ್ನಿಸ್ಸರವರ ಜಾಗತಿಯಿಂದ ಖಾಲಿಯಾದ ಜಾಗದ ಬಗ್ಗೆ ಪ್ರಾಂತಿಕ ಶಾಸನ ಕೌನ್ಸಿಲಿನ ಚುನಾವಣೆಯಾಗುವದಿದೆ.

— ಫೋಂಡಾಬಾದಲ್ಲಿ ಪ್ರಜೆಗಳ ಪೋಲೀಸರ ದೊಡ್ಡ ಗಡಿಬಿಡಿಯಾಗಿತ್ತು. ಇಬ್ಬರು ಪ್ರಮುಖ ದಂಗೆಗಾರರನ್ನು ಪೋಲೀಸ ಸರಕಾರದವರು ಸದೆಹಿಡಿದರು. ಅದರಿಂದ ಅಲ್ಲೆಲ್ಲ ಶಾಂತವಾಗಿದೆ

— ಮುಂಬಯಿಯ ವಿಲ್ಸನ್ ಕಾಲೇಜದ ಪ್ರೊಫೆಸರರಾದ ಎಮ್. ಮಹಮ್ಮದರವರು ಅಲಿಘರ ವಿದ್ಯಾಲಯಕ್ಕೆ ೫೦ ಸಾವಿರ ರೂಪಾಯಿಗಳನ್ನು ಅರ್ಪಿಸಿರುವರು. ಪ್ರೊಫೆಸರರವರು ಈ ವರೆಗೆ ಸಂಗ್ರಹಿಸಿದ ಸಂಪೂರ್ಣ ದ್ರವ್ಯನಿಧಿಯಿದು. ಈ ನಿಧಿಯಿಂದ ವಿಶ್ವವಿದ್ಯಾಲಯದವರು 'ಆರ್ಟ ಗೆಲರಿ' ಯಾನೆ ಕಲಾಕೌಶಲ್ಯದ ಮಂದಿರವನ್ನೊಂದು ರಚಿಸಿ, ಅದರೊಳಗೆ ಉತ್ತಮೋತ್ತಮ ಕಲಾಕೌಶಲ್ಯಗಳ ವಸ್ತುಸಂಗ್ರಹ ಮಾಡಬೇಕೆಂದು ಪ್ರೊ॥ ಮಹಮ್ಮದರವರು ವಿಧಿಸಿರುವರು.

— ಶಾಂಘಾಯಿನಲ್ಲಿ ಒಬ್ಬಳು ಪ್ರಸೂತಳಾಗಿ ವಿಲಕ್ಷಣವಾದ ಕೂಸನ್ನು ಹೆತ್ತಳು. ಕೂಸಿಗೆ ತಲೆಯಿಲ್ಲ. ಬೆನ್ನಿನ ಮೇಲೆ ಒಂದು ಕಣ್ಣು ಅದರಲ್ಲಿ ಎರಡು ಕಣ್ಣು!

— ನಿಜಾಮ ಸರಕಾರದವರು ಮಹಮ್ಮದೀಯ ಧರ್ಮ ಪ್ರಚಾರಕ್ಕಾಗಿ ೫ ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡುವವರಿದ್ದಾರಾಗಿ ತಿಳಿದು ಬರುತ್ತದೆ.

— ಮುದ್ದಿನ ಆನೆ ನೋಡಿ ಹೈದರಾಬಾದದಲ್ಲಿ ಒಬ್ಬ ಟಪಾಲ ಖಾತೆಯ ಅಧಿಕಾರಿಯು ತನ್ನ ಪತ್ನಿಯನ್ನು ೧೩೦೦೦ ರೂಪಾಯಿಗಳಿಗೆ ಮಾರಿದನು. ಈ ಕುರಿತು ಆತನ ಕಡೆಯ ನಾಮೆಯು ಕೂಡ ಆಯಿತು. ಆದರೆ, ಕರಾರಿನಂತೆ ಹಂಡತಿಯನ್ನು ಕ್ರಯಕ್ಕೆ ಕೊಂಡವನು ಹಣವನ್ನು ಕೊಡಲಿಲ್ಲ. ಮುದ್ದಿನ ಆನೆಯಿಂದ ಹಂಡತಿಯನ್ನು ಮಾರಿದವನು ಧಡಕ್ಕನೆ ಮೆಜಿಸ್ಟ್ರೇಟರಲ್ಲಿ ಫಿರ್ಯಾದು ಮಾಡಲು, ಮೆಜಿಸ್ಟ್ರೇಟರು, ಇದು ದಿವಾಣಿ ಬಾಬೆಂದು ದಾವೆಯನ್ನು ತಳ್ಳಿಬಿಟ್ಟರು. ಹೆಂಡತಿ ಮಾರಿದ ಬಗ್ಗೆ ದೋಷ್ಯಲಕ್ಷ್ಯವಾಯಿತು.

— ಬೌಲಾ ಖೂನಿ ಪ್ರಕರಣದ ಕೊನೆ ಹಿಡಿದೆ. ಇಂದೂರಿನ ಹೋಳಕರ ಮಹಾರಾಜರ ಚೌಕಿ ಅವರಿಗೆ ಒಂದು ಬಾರಿ ಮಂತ್ರಿಪದ ನೇಮಣೂಕಿಯಾಗಿದೆ.

ತ್ವರೆಮಾಡಿರಿ ! ತ್ವರೆಮಾಡಿರಿ !!

ಸಂಗೀತ

ಉಜ್ವಲ ನಿಜ ರಾಜನಿಷ್ಠೆ

ಅಥವಾ...

(ರಾಕ್ಷಸೀ ಮಹತ್ವಾಕಾಂಕ್ಷೆ)

ಎಂಬ ಚರಿತ್ರ ಕನ್ನಡ ನಾಟಕವು

ಅಚ್ಚಿನಲ್ಲಿದೆ !

ಅಂ ೫ ೧—೭.

ಅಲ್ಪಾವಧಿಯಲ್ಲಿಯೇ ವಿಕ್ರಯಕ್ಕೆ ಸಿಗಲಿದೆ !

ಪತ್ತ:—

☞ ವ್ಯವಸ್ಥಾಪಕ—ಶ್ರೀ ದತ್ತ ಮಂಡಳಿ,

ಕುಮಟಾ, ಉ. ಕಾನಡಾ.

ನೋಟೀಸು.

ಉತ್ತರ ಕನ್ನಡ ಕಾನಡಾ ಜಿಲ್ಲೆಯ ತಾಲೂಕಾ ಕಾಂಗ್ರೆಸ್ ಕಮಿಟಿ ಅಧಿಕಾರಿಗಳಿಗೆ ವಿನಂತಿಪೂರ್ವಕ ತಿಳಿಸುವದೇನಂದರೆ,— ತಮ್ಮ ಜಿಲ್ಲಾ ಮತ್ತು ತಾಲೂಕ ಲೋಕಲ್‌ಬೋರ್ಡಿನ ಚುನಾವಣೆಯು ಇದೇ ಬರುವ ಮಾರ್ಚ ತಿಂಗಳಲ್ಲಿ ಜರಗುವದು. ಇದೇ ತಿಂಗಳ ತಾರೀಖು ೧೦-೧೩-೧೪ನೇಗೆ ಉಮೇದ್ವಾರರ ನೋಮಿನೇಶನ್ ಪತ್ರಗಳನ್ನು ದಾಖಲ ಮಾಡಬೇಕಾಗುವದು. ಲೋಕನಿಯುಕ್ತ ಸಂಸ್ಥೆಗಳನ್ನು ಸಾಧ್ಯವಿರುವಷ್ಟರ ಮಟ್ಟಿಗೆ ರಾಷ್ಟ್ರೀಯ ಪಕ್ಷದ ಅನುಯಾಯಿಗಳೇ ಹಿಡಿದು ವಿಧಾಯಕ ಕಾರ್ಯಕ್ರಮವನ್ನು ಮುಂದರಿಸಿ ದೇಶದ ಉನ್ನತಿ ಆಗುವಂತೆ ಮಾಡಬೇಕಾಗಿ ರಾಷ್ಟ್ರೀಯ ಸಭೆಯ ಅಭಿಪ್ರಾಯವಿರುವದು ನಿಮಗೆಲ್ಲ ಗೊತ್ತಿದ್ದ ಮಾತೇ ಇದೆ. ಕಾರಣ, ನಿಮ್ಮ ನಿಮ್ಮ ತಾಲೂಕುಗಳಲ್ಲಿ ತಾಲೂಕು ಮತ್ತು ಜಿಲ್ಲಾ ಬೋರ್ಡುಗಳಿಗೆ ಕಾಂಗ್ರೆಸ್ ಪಕ್ಷದವರನ್ನೇ ಉಮೇದ್ವಾರರನ್ನಾಗಿ ನಿಲ್ಲಿಸುವ ಪ್ರಯತ್ನ ಮಾಡಿ ಅವರೇ ಆರಿಸಿ ಬರುವಂತೆ ಮುತ್ತುವರ್ಜಿ ಮಾಡಿಸಬೇಕು. ಅದಕ್ಕೆ ಜಿಲ್ಲಾ ಕಾಂಗ್ರೆಸ್ ಕಮಿಟಿಯಿಂದ ಬೇಕಾಗುವ ಸಹಾಯವನ್ನು ಸಾಧ್ಯವಿರುವಷ್ಟರ ಮಟ್ಟಿಗೆ ಕೊಡಲಾಗುವದು.

ಮಂಜುನಾಥ ದೇವರಭಟ್ಟ ಕರ್ಕಿ,

ರಾಮತೀರ್ಥ ತಾ. ೪-೨-೧೯೩೬	ಪ್ರೆಸಿಡೆಂಟ, ಜಿ. ಕಾಂ. ಕಮಿಟಿ.

ದಿ ಮೈಸೂರ ಅಗ್ರಿಕಲ್ಚರಲ್ ಡೈರಿ ಫಾರ್ಮ್ಸ ಕಂಪನಿ, ಲಿಮಿಟೆಡ್.

೧೯೧೩ ನೇ ಇಸವಿಯ ಕಂಪನಿಗಳ ರೆಗ್ಯುಲೇಶನ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ. ಸದರಿ ಕಂಪನಿಯಲ್ಲಿ ನಾನು, ಕಾರವಾರ ಡಿಸ್ಟ್ರಿಕ್ಟದೊಳಗಿನ ಕುಮಟಾ, ಅಂಕೋಲಾ, ಕಾರವಾರ ತಾಲೂಕುಗಳ ಬಗ್ಗೆ ಸದ್ರಿ ಕಂಪನಿಯ ತರ್ಫೆನಿಂದ ಇನಸ್ಪೆಕ್ಟರನಾಗಿದ್ದು, ಈ ಬಗ್ಗೆ ಮೇಲೆ ವಿದಿತಪಟ್ಟ ಕಂಪನಿಯಿಂದ ಅಧಿಕಾರಪಟ್ಟವನಾಗಿರುತ್ತೇನೆ. ಈ ಇನಸ್ಪೆಕ್ಟರನಾಗಿ ಕೆಲವು ಸಬ್ ಏಜಂಟರುಗಳನ್ನು ಸಹ ನೇಮಿಸಿ, ಕಂಪನಿಯ ಪ್ರೋಗ್ರೆಸ್ ಆಗುತ್ತಾ ಇದೆ. ಈ ಮೂಲಕ ತಿಳಿಯಪಡಿಸುವದೇನಂದರೆ,— ಸರ್ವ ಜನರೂ ಈ ಕಂಪನಿಯ ತತ್ವಗಳನ್ನು ವಿಮರ್ಶಿಸಿ ನೋಡಿ, ಇದರಿಂದಾಗುವ ಹಿತವನ್ನು ಪಡಕೊಳ್ಳುವದಲ್ಲದೆ, ಕಂಪನಿಯನ್ನೂ ಊರ್ಜಿತಾವಸ್ಥೆಗೆ ತರಬೇಕಾಗಿ ವಿನಂತಿ. ಸದ್ರಿ ಕೆಲಸಗಳನ್ನು ನಡೆಸುವದರ ಬಗ್ಗೆ ನಾನು ಹಾಲೀ ಕುಮಟಾ ಗುಡಿಗಾರ ಪೇಟೆಯಲ್ಲಿ ನನ್ನ ಹೆಡ್ ಕ್ವಾರ್ಟರ್ಸನ್ನು ಸ್ಥಾಪಿಸಿರುತ್ತೇನೆ. ಹಿಂದೆ ಈ ಸಲುವಾಗಿ ಕಾನಡಾ ಧುರೀಣರಲ್ಲಿ ಡಿಸ್ಟ್ರಿಕ್ಟ ಏಜಂಟರವರಿಂದಾ ಮಾಹಿತಿಯು ಕೊಡಲ್ಪಟ್ಟಿರುತ್ತದೆ.

ಕಾರವಾರ, ಅಂಕೋಲಾ ತಾಲೂಕುಗಳಲ್ಲಿ ಸಬ್ ಏಜಂಟ ಜಾಗ ಖಾಲಿ ಇರುತ್ತದೆ. ಸದ್ರಿ ಜಾಗಕ್ಕೆ ಆರಂಭ ತಿಂಗಳಿಗೆ ೩೦ ರೂಪಾಯಿ ಪಗಾರು ಇರುತ್ತದೆ. ಅಪೇಕ್ಷೆಯುಳ್ಳವರು ಈ ಕೆಳಗಿನ ವಿಳಾಸಕ್ಕೆ ಪತ್ರ ದ್ವಾರಾವಾಗಲಿ ಸಮಕ್ಷಮವಾಗಲೀ ಭೆಟ್ಟಿ ಆದಲ್ಲಿ ಸರ್ವವೂ ತಿಳಿದು ಬರುವದು.

R. V. HEGDE,
Taluk Inspector,
Kumta, Ankola, Karwar,
A. D. F. CO., LTD. *Mysore.*
Head Office – **KUMTA.**

ಮಹಾತ್ಮರ ಆತ್ಮಚರಿತ್ರೆ!

ಕಷ್ಟ ಪ್ರಸಂಗ. (ಮುಂದರಿದದ್ದು.)

ಆ ಮುಹೂರ್ತದಲ್ಲಿ ಬಂತು ನನ್ನ ಮನಸ್ಥಿತಿಯನ್ನು ಸಂಪೂರ್ಣವಾಗಿ ನಾನು ವರ್ಣಿಸಲಾರೆ. ಸುಧಾರಣೆಯ ಆತ್ಯಾತುರತೆಯೂ, ಜೀವನಕ್ರಮದಲ್ಲಿ ಮಹತ್ವದ ನೂತನ ಬದಲಾವಣೆ ಮಾಡುವ ಪ್ರಸಂಗವೂ ಒಂದು ಬದಿಗೆ, ಮತ್ತು ಆ ಕೃತ್ಯವನ್ನು ಕಳ್ಳನಂತೆ ಮುಚ್ಚಬೇಕಾದ ನಾಚಿಕೆಯು ಇನ್ನೊಂದು ಬದಿಗೆ, ಯಾವುದಕ್ಕೆ ನಾನು ಅಧೀನನಾದೆನೆಂದು ಹೇಳಲಾರೆ. ನದಿಯ ದಂಡೆಯ ಮೇಲೆ ನಿರ್ಜನ ಸ್ಥಳ ಹುಡುಕಿ ನಾವು ಹೋದೆವು. ಅಲ್ಲಿ ನಾನು ಮೊಟ್ಟಮೊದಲು ಮಾಂಸವನ್ನು ನೋಡಿದೆ. ಅಲ್ಲಿಯೇ ಅದರ ಸಂಗಡ ಬ್ರೆಡ್ಡೂ ಇತ್ತು. ಎರಡೂ ನನಗೆ ರುಚಿಸಲಿಲ್ಲ. ಮಾಂಸವು ಚರ್ಮದಂತೆ ಘಟ್ಟಿಯೆನಿಸಿತು. ನನಗೆ ಅದು ತಿನ್ನಲಾಗಲಿಲ್ಲ ನನ್ನ ಮನಸ್ಸು ಹೇಸಿತು. ಅದರಿಂದ ನಾನು ತಿನ್ನಲಿಲ್ಲ.

ಆ ರಾತ್ರಿ ಬಹಳ ಕಷ್ಟವಾಯಿತು. ನನಗೆ ಸರಿಯಾಗಿ ನಿದ್ದೆ ಹತ್ತಲಿಲ್ಲ ತರತರದ ದುಃಸ್ವಪ್ನಗಳು ಬಿದ್ದವು ಘಳಿಗೆಗೆ ನನ್ನ ಹೊಟ್ಟೆಯಲ್ಲಿ ಜೀವಂತ ಆಡು ಬೀನಸ್ವರದಿಂದ ಚೀರುತ್ತಿದೆಯೆಂಬಂತೆ ತೋರಿತು, ಕೂಡಲೇ ಪಶ್ಚಾತ್ತಾಪವಾಗಿ ನಾನು ಏಳುತ್ತಿದ್ದೆ; ಮತ್ತು ಮಾಂಸ ಭಕ್ಷಣವು ಒಂದು ಕರ್ತವ್ಯವಾಗಿರುವದೆಂದು ಮನಸ್ಸಿಗೆ ಸಮಾಧಾನ ಮಾಡಿಕೊಳ್ಳುತ್ತಿದ್ದೆ! ಗೆಳೆಯನಂತೂ ಹೀಗೆಲ್ಲ ಹಿಂಜರಿಯುವವನಲ್ಲ. ಬಳಿಕ, ಆತನು ಮಾಂಸದಿಂದ ತರತರದ ರುಚಿಕರವಾದ ಪದಾರ್ಥಗಳನ್ನು ಸ್ವಚ್ಛವಾಗಿ ತಯಾರಿಸ ಹತ್ತಿದನು. ನದೀಗುಂಟದ ನಿರ್ಜನ ಸ್ಥಳದ ಮೇಲೆ ಇನ್ನು ಮುಂದೆ ಭೋಜನ ಮಾಡುವದವಶ್ಯವಿಲ್ಲೆಂದು ಹೇಳಿದನು. ಅಲ್ಲಿಯ ಒಬ್ಬ ಸಂಸ್ಥಾನಿಕರ ಬಳಕಂಡಿನಿಂದ ಒಂದು ಮೇಜು ಮುಂತಾದ ಸರಂಜಾಮಿದ್ದ ಭೋಜನಗೃಹ ಹಾಗು ಭವ್ಯ ಮಂದಿರವನ್ನು ಮಾಂಸ ಭಕ್ಷಣದ ಸ್ಥಾನವನ್ನಾಗಿ ಏರ್ಪಡಿಸಿಕೊಂಡನು. ಇದಕ್ಕೆ ನಾನು ಮರುಳಾದೆ. ಬ್ರೆಡ್ಡು ಈಗ ನನಗೆ ರುಚಿಯಾಗಹತ್ತಿತ್ತು. ಆಡಗಳಿಗೆ ನಾನು ದಯಾಕ್ರಾಂತನಾಗಿರುವದಿಲ್ಲವಾಗಿ ನಾನು ಆಶೆ ಮಾಡಿದೆನು. ಬರೇ ಮಾಂಸವು ನನಗೆ ರುಚಿಸದಾದರೂ, ಮಾಂಸ ಪದಾರ್ಥಗಳನ್ನು ನಾನು ರುಚಿಯಿಂದ ತಿನ್ನಹತ್ತಿದೆನು ಈ ರೀತಿ ಒಂದು ವರುಷದ ವರೆಗೆ ನಡೆಯಿತು. ಈ ವರುಷದಲ್ಲಿ ಮಾಂಸ-ಮಿಷ್ಟಾನ್ನ ಭೋಜನಗಳನ್ನು, ಹೆಚ್ಚೆಂದರೆ, ಐದಾವರ್ತಿ ಉಪಭೋಗಿಸಿತ್ತೇನು ಹೀಗೆ ವರುಷದಲ್ಲಿ ಇಷ್ಟು ಅಲ್ಪಾವರ್ತಿ ಮಾತ್ರ ಒದಗುವ ಕಾರಣವು ಸ್ಪಷ್ಟವಿದೆ ಆ ಭವ್ಯ ಮಂದಿರವು ನಿತ್ಯವೂ ನಮಗೆ ಸಿಗುತ್ತಿರಲಿಲ್ಲ, ಪುನಃ ಪುನಃ ವಿಶೇಷ ಖರ್ಚಿನವಾದ ರುಚಿಕರವಾದ ಪದಾರ್ಥಗಳನ್ನು ತಯಾರಿಸುವದೂ ಕಷ್ಟವೇ ಈ ಸುಧಾರಣೆಗಾಗಿ ತೆರಲಿಕ್ಕೆ ನನ್ನಲ್ಲಿ ಹಣವಿರಲಿಲ್ಲ ಆದರಿಂದ ಮಾಂಸ ಭೋಜನ ಖರ್ಚನ್ನು ಯಾವಾಗಲೂ ಗೆಳೆಯನೇ ಸಂಪಾದಿಸಬೇಕಾಗುತ್ತಿತ್ತು. ಆತನು ಎಲ್ಲಿಂದ ದುಡ್ಡು ಗೂಡಿಸುತ್ತಿದ್ದನೆಂಬುದು ನಾನರಿಯದ ಮಾತು. ನನಗೆ ಮಾಂಸ ಭಕ್ಷಕನಾಗಿ ಪರಿಣಮಿಸಲು ಆತನ ದೃಢ ನಿಶ್ಚಯವಿದ್ದದರಿಂದ, ಆತನೇ ಖರ್ಚನ್ನೆಲ್ಲ ಒದಗಿಸುತ್ತಿದ್ದನು. ಆತನ ಸಂಪತ್ತು ವಿಪುಲವಿದ್ದಿಲ್ಲ; ಆದರಿಂದ ಅಂಥ ಮಾಂಸ ಭೋಜನ ಸಮಾರಂಭಗಳು ಅಪರೂಪವಾಗಿ ಜರುಗಬೇಕಾಗಿದ್ದವು.

ಮಾಂಸ-ಮಿಷ್ಟಾನ್ನಗಳ ಭೋಜನ ಮಾಡಿದ ದಿವಸ ಮನೆಯಲ್ಲಿ ಊಟ ಮಾಡುತ್ತಿದ್ದಿಲ್ಲ. ನಮ್ಮ ಮಾಂಸ-ಭೋಜನಗಳು ಗುಪ್ತವಾಗಿ ನಡೆಯುತ್ತಿದ್ದವು. ನಿತ್ಯದಂತೆ ತಾಯಿಯು ನನಗೆ ಊಟಕ್ಕೆ ಕರೆಯುತ್ತಿದ್ದಳು. ಯಾಕೆ ನಾನು ಊಟವನ್ನು ಮಾಡುವದಿಲ್ಲೆಂದು ನನ್ನನ್ನು ಪ್ರಶ್ನಿಸುತ್ತಿದ್ದಳು. "ಇಂದು ನನಗೆ ಹಸಿವೆಯಿಲ್ಲ, ಜೀರ್ಣಾವಯವಗಳಲ್ಲಿ ಏನೋ ಹೆಚ್ಚು-ಕಡಿಮೆಯಾಗಿದೆ," ಎಂದು ನಾನು ಹೇಳುತ್ತಿದ್ದೆ. ತಾಯಿಗೆ ಈ ನೆವ ಹೇಳಬೇಕಾದರೆ, ನಾನು ತಲ್ಲಣಿಸುತ್ತಿದ್ದೆ, ನಾನು ಸುಳ್ಳು ಹೇಳುತ್ತೇನೆ, ತಾಯಿಯ ಹತ್ತರ ಸುಳ್ಳಾಡುತ್ತಿದ್ದೇನೆ, ಎಂದು ನಾನು ಸಂಪೂರ್ಣವಾಗಿ ಅರಿತಿದ್ದೆ. ನಾನು ಮಾಂಸಭಕ್ಷಕನಾದ ಸುದ್ದಿಯು ತಾಯಿ-ತಂದೆಗಳಿಗೆ ಹತ್ತಿದರೆ, ಅವರಿಗೆ ಮರ್ಮಾಘಾತವಾಗಿ, ಅವರು ಮರಣಪ್ರಾಯರಾಗುವರೆಂಬೂ ನಾನರಿತಿದ್ದೆ ಈ ಗ್ರಹಿಕೆಯು ದಿನ ಹೋದ ಹಾಗೆ ಬೆಳೆಯುತ್ತ ನಡೆಯಿತು. ಮತ್ತು ನನ್ನಷ್ಟಕ್ಕೆ ನಾನು ಅಂದುಕೊಂಡಿದ್ದೇನಂದರೆ- "ಮಾಂಸ ತಿನ್ನುವದು ಅವಶ್ಯವು, ಹಾಗೆ ದೇಶದಲ್ಲಿ ಭೋಜನ ಸುಧಾರಣೆ ಮಾಡುವದು ಅವಶ್ಯವು. ಆದರೆ, ತಾಯಿ-ತಂದೆಗಳಿಗೆ ವಂಚಿಸುವದೂ, ಸುಳ್ಳಾಡುವದೂ, ಮಾಂಸದಕ್ಕಿಂತ ಕೆಡಕು ತಾಯಿ ಪರಲೋಕವಾಸಿಗಳಾಗುವ ತಂದೆಗಳ ಜೀವಮಾನವಿರುವ ವರೆಗೆ ಮಾಂಸಭಕ್ಷಣದ ಮಾತು ನಾನೆತ್ತಬಾರದು. ಅವರ ತರುವಾಯ, ನಾನು ಸ್ವತಂತ್ರನಾದ ಬಳಿಕ, ನಾನು ಬಹಿರಂಗವಾಗಿ ಮಾಂಸವನ್ನು ತಿನ್ನುವೆನು, ಆದರೆ ಅನಕ ವರೆಗೆ ಅದನ್ನು ಮುಟ್ಟಲಾರೆ" ಈ ನಿರ್ಣಯವನ್ನು ನನ್ನ ಗೆಳೆಯನಿಗೆ ಹೇಳಿದೆನು ಅಂದಿನಿಂದ ಈ ವರೆಗೆ ಪುನಃ ಮಾಂಸ ಸ್ಪರ್ಶ ಮಾಡಲಿಲ್ಲ ತಮ್ಮ ಮಗಂದಿರಿಬ್ಬರು ಮಾಂಸಭಕ್ಷಣ ಮಾಡುತ್ತಿದ್ದ ಸುದ್ದಿಯು ತಾಯಿ-ತಂದೆಗಳಿಗೆ ಎಂದೂ ಗೊತ್ತಾಗಲಿಲ್ಲ

ತಾಯಿ-ತಂದೆಗಳೊಡನೆ ಸುಳ್ಳು ಮಾತು ಆಡಬಾರದೆಂಬ ಸದಿಚ್ಛೆಯಿಂದ ನಾನು ಮಾಂಸವನ್ನು ತ್ಯಜಿಸಿದೆ; ಆದರೆ, ಗೆಳೆಯನ ಸಹವಾಸವನ್ನು ಮಾತ್ರ ನಾನು ಬಿಡಲಿಲ್ಲ. ಸುಧಾರಣೆಯ ಆತ್ಯಾತುರತೆಯಿಂದಲೇ ನಾನು ಪತಿತ ನಾದೆ. ಆದರೆ, ನನ್ನ ಪತನವು ಕ್ರಮವಾಗಿ ನನಗೆ ಗೊತ್ತಿಲ್ಲದೆ ಸಾಗಿತು.

ಈ ಸಹವಾಸದಿಂದಲೇ ನಾನು ನನ್ನ ಹೆಂಡತಿಯೊಡನೆಯೂ ಕಠಿಣನಾಗುತ್ತಿದ್ದೆ ಆದರೆ, ಈ ಇಕ್ಕಟ್ಟಿನೊಳಗಿಂದ ನಾನು ದೈವಸಂಕೇತದಿಂದ ಪಾರಾದೆ. ಗೆಳೆಯನು ನನಗೊಮ್ಮೆ ಸೂಳೆಯ ಮನೆಗೆ ಒಯ್ದನು ಅವನು ಅವಶ್ಯವುಳ್ಳ ಮಾಹಿತಿ ಕೊಟ್ಟು ನನಗೆ ಒಳನೂಕಿದನು. ಎಲ್ಲ ವ್ಯವಸ್ಥೆಯು ಮೊದಲೇ ಏರ್ಪಾಟಾಗಿತ್ತು ಸೂಳೆಯ ಬೀಳು ಮೊದಲೇ ಕೊಟ್ಟಾಗಿತ್ತು ನಾನು ಪಾಪದ ಬಾಯೊಳಗೆ ಸಿಲುಕಿದೆ. ಆದರೆ, ಪರಮಾತ್ಮನು ದಯಾಸಾಗರನಾಗಿ ನನಗೆ ಕಾಪಾಡಿದನು. ಈ ಪಾಪಕೂಪದಲ್ಲಿ ನಾನು ಕುರುಡನಾದೆ; ಮೂಕನಾದೆ ನಾನು ಸೂಳೆಯ ಹಾಸಿಗೆಯ ಮೇಲೆ ಸೂಳೆಯ ಜೊತೆಗೆ ಕೂತುಕೊಂಡೆ; ಆದರೆ, ನನ್ನಿಂದ ಮಾತಾಡಲಿಕ್ಕಾಗಲಿಲ್ಲ; ಇದನ್ನು ಸೂಳೆಯಿಂದ ಸಹಿಸಲಿಕ್ಕಾಗಲಿಲ್ಲ ನನಗೆ ಬೈದಳು, ತಿಕ್ಕಾಗಿ ಬೈದಳು. ಹೊರನೂಕಿಬಿಟ್ಟಳು ಇದರಿಂದ ನನ್ನ ಪೌರುಷಭಂಗವಾಯಿತೆಂದು ನನಗನಿಸಿ, ನಾಚಿಕೆಯಿಂದ ಮರಣವೇ ಲೇಸೆಂಬು ನನಗನಿಸಿತು. ಆ ಬಳಿಕ, ನನಗೆ ಒದಗಿಸಿದ ಬಗ್ಗೆ ಪರಮಾತ್ಮನ ಆಭಾರ ಮನ್ನಿಸುತ್ತೇನೆ

ಹೀಗೆಯೇ ನಾಲ್ಕು ಸಂಗತಿಗಳಾದವು. ಆದರೆ, ನನ್ನ ಪ್ರಯತ್ನಕ್ಕಿಂತ, ನನ್ನ ದೈವಬಲದಿಂದಲೇ ನಾನು ಪಾರಾದೆ. ನೀತಿಶಾಸ್ತ್ರದೃಷ್ಟಿಯಿಂದ ಇವೆಲ್ಲ ನೀತಿಭ್ರಷ್ಟ ಪ್ರಸಂಗಗಳು ವಿಷಯ-ಕೃತ್ಯವು ಪ್ರತ್ಯಕ್ಷ ಸಂಭವಿಸದಿದ್ದರೂ, ವಿಷಯಾಸಕ್ತಿಯು ಪ್ರಾದುರ್ಭಾವವು ವಿಷಯಕೃತ್ಯದಷ್ಟೇ ಗರ್ಹಣೀಯವು. ಆದರೆ, ಸಾಮಾನ್ಯ ಮಾನವರ ವಿಚಾರದಂತೆ, ಪ್ರತ್ಯಕ್ಷ ಪಾಪಕೂಪದಲ್ಲಿ ಸೇರಿಕೊಳ್ಳದವನು ಪತಿತನಾಗುವದಿಲ್ಲ, ಈ ದೃಷ್ಟಿಯಿಂದ ನಾನು ಪತಿತನಾಗಲಿಲ್ಲ. ಒಮ್ಮೊಮ್ಮೆ ಇಕ್ಕಟ್ಟಿನೊಳಗಿಂದ ಪಾರಾಗುವದರಿಂದ ಪಾರಾದವರಿಗೂ, ಆತನ ಜೊತೆಗಾರರಿಗೂ ಹಿತವಾಗುತ್ತದೆ. ಧರ್ಮಜಾಗೃತಿಯಾದ ಬಳಿಕ, ಮಾನವನು ಪತನವಾಗದಿದ್ದ ಬಗ್ಗೆ ದಯಾಸಾಗರ ಪರಮಾತ್ಮನ ಉಪಕಾರ ಮನ್ನಿಸುತ್ತಾನೆ. ಒಮ್ಮೊಮ್ಮೆ ಮಾನವನು ಎಷ್ಟು ವಿರೋಧಿಸಿದರೂ, ಆತನು ವಿಕಾರವಶನಾಗುವ ಪ್ರಸಂಗಗಳೂ ನಾವು ಕೇಳಿರುವೆವು; ಮತ್ತು ಮಾನವನು ಸಂತೋಷದಿಂದ ವಿಕಾರವಶನಾಗಹತ್ತಿದಾಗ ಮಧ್ಯದಲ್ಲಿಯೇ ಆತನು ಪಾರಾಗುವ ಬಗೆ ನಾವು ಅರಿತಿರುವೆವು. ಇದೆಲ್ಲ ಹ್ಯಾಗೆ ಸಂಭವಿಸುತ್ತದೆ? ಮಾನವನ ಸ್ವಾತಂತ್ರ್ಯವೆಷ್ಟು? ಆತನ ಪಾರತಂತ್ರ್ಯವೆಷ್ಟು? ಆತನು ಎಷ್ಟರ ಮಟ್ಟಿಗೆ ಆತ್ಮಬುದ್ಧಿಯಿಂದ ವರ್ತಿಸಬಲ್ಲನು? ಮತ್ತು ಎಲ್ಲಿ ದೈವಬಲದ ಪ್ರವೇಶವಾಗುತ್ತದೆಂಬುದೆಲ್ಲ ಗೂಢವೇ. ಅದು ಯಾವಾಗಲೂ ಗೂಢವೇ

ಆದರೆ, ನನ್ನ ಕಥೆಯನ್ನು ಮುಂದರಿಸುವೆ. ಇಷ್ಟಾದರೂ, ಗೆಳೆಯನ ಸಹವಾಸವು ಕೆಟ್ಟದ್ದೆಂದು ನನಗನಿಸದು ಅದರಿಂದ ನಾನು ಮತ್ತೆ ಕೆಲವು ಕಷ್ಟಗಳನ್ನು ಅನುಭವಿಸಬೇಕಾಯಿತು. ಕೊನೆಗೆ ನನ್ನ ಗೆಳೆಯನ ಕೆಲವು ಅಸತ್ಯತೆಗಳನ್ನು ನಾನು ಕಣ್ಣಾರೆ ಕಂಡು ಜಾಗೃತನಾದೆ ಅಂಥ ನಡತೆಗಳನ್ನು ಆತನು ಆಚರಿಸಬಲ್ಲನೆಂದು ನಾನೆಂದೂ ಯೋಚಿಸಿದ್ದಿಲ್ಲ. ಈ ಕುರಿತು ಮುಂದೆ ಹೇಳುವೆನು. ಈಗ ಒಂದರ ಹಿಂದೊಂದಾಗಿ ಘಟನೆಗಳು ಸಂಭವಿಸಿದಂತೆ ಹೇಳತೊಡಗುವೆನು.

ಇದೇ ಕಾಲದಲ್ಲಿ ಸಂಭವಿಸಿದ ಒಂದು ಘಟನೆಯನ್ನು ಇಲ್ಲಿ ನಮೂದಿಸಬೇಕಾಗಿದೆ. ಈ ಗೆಳೆಯನ ಸಹವಾಸದ ಮೂಲಕವಾಗಿ. ನನಗೂ, ನನ್ನ ಹೆಂಡತಿಗೂ ವಿತುಷ್ಟವಾಗಲೊಂದು ಕಾರಣವಾಯಿತು. ನಾನು ನಿಷ್ಠಾವಂತನಾಗೂ ಮತ್ಸರಬುದ್ಧಿಯ ಗಂಡನಾಗಿದ್ದೆ. ಹೆಂಡತಿಯ ಮೇಲೆ ನನಗೆ ಸಂಶಯ ಬಹಳ. ಗೆಳೆಯನು ಸಂಶಯಕ್ಕೆ ಹೆಚ್ಚು ಪುಟ ಕೊಟ್ಟನು. ಗೆಳೆಯನು ಸತ್ಯವಂತನೆಂದು ನಾನು ನಿಶ್ಚಿತವಾಗಿ ತಿಳಕೊಂಡಿದ್ದೆ ಈ ಗೆಳೆಯನ ಹೇಳಿಕೆಯ ಮೇರೆಗೆ ನನ್ನ ಹೆಂಡತಿಗೆ ಕಷ್ಟಕೊಟ್ಟು ನಾನು ಮಾಡಿದ ಪಾಪಾಚರಣೆಯು ಅಕ್ಷಮ್ಯವಿದೆ. ಈ ಕಷ್ಟಗಳನ್ನು ಹಿಂದೂ ಕುಲಸ್ತ್ರೀಯರೇ ಸಹಿಸಬಲ್ಲರು. ಇದರಿಂದಲೇ ಹಿಂದೂ ಸ್ತ್ರೀಯರು ಸಹನಶಕ್ತಿಯ ಪ್ರತ್ಯಕ್ಷ ಅವತಾರರೆಂದು ನನ್ನ ಗ್ರಹಿಕೆಯಾಗಿದೆ. ಒಬ್ಬ ಸೇವಕನ ಮೇಲೆ ಮಿಥ್ಯಾರೋಪ ಹಿಡಿದರೆ, ಆತನು ತನ್ನ ಕೆಲಸವನ್ನು ತೊರೆಯಬಲ್ಲನು; ಇಂಥ ಪ್ರಸಂಗದಲ್ಲಿ ಮಗನೂ ತಂದೆಯನ್ನು ಬಿಟ್ಟು ಹೋಗಬಹುದು; ಗೆಳೆಯನು ಗೆಳೆತನವನ್ನು ಅಂತ್ಯಗೊಳಿಸಬಹುದು; ಹೆಂಡತಿಯು ಗಂಡನ ಮೇಲೆ ಸಂಶಯಪಟ್ಟರೆ, ಅವಳು ಸುಮ್ಮಗುಳಿಯುವಳು, ಗಂಡನು ಅವಳ ಮೇಲೆ ಸಂಶಯ ಹಿಡಿದರೆ, ಕೆಲಸ ಕೆಟ್ಟಿತು. ಅವಳೆಲ್ಲಿಗೆ ಹೋಗುವದು? ಕೋರ್ಟುಗಳಲ್ಲಿ ಘಟಸ್ಫೋಟ ಮಾಡಿಕೊಳ್ಳುವ ಅಧಿಕಾರವು ಹಿಂದೂ ಕುಲಸ್ತ್ರೀಯರಿಗಿರುವದಿಲ್ಲ; ಕಾಲಿ ಮೆಯ ಆಶ್ರಯವು ಅವರಿಗಿರುವದಿಲ್ಲ. ನನ್ನ ವರ್ತನದಿಂದ ಅವಳಿಗೆ ನಾನು ಬಹಳ ಕಾಡಿದೆ! ಘಟಸ್ಫೋಟವಾದರೆ ಒಳಿತೆಂದು ಅವಳಿಗನಿಸುವ ವರೆಗೆ, ನಾನು ಕಾಡಿದ್ದನ್ನು ಎಂದೂ ಮರೆಯಲಾರೆ; ಅಥವಾ ಆ ಕುರಿತು ನಾನು ಕ್ಷಮಿಸಿಕೊಳ್ಳಲಾರೆ. ಅಹಿಂಸಾತತ್ವದ ಅಂಗ-ಉಪಾಂಗಗಳೆಲ್ಲ ತಿಳಿದ ಬಳಿಕ, ನನ್ನ ಸಂಶಯ ರೋಗದ ನಿವಾರಣೆಯಾಯಿತು. ಆಗಲೇ ಬ್ರಹ್ಮಚರ್ಯದ ಮಹಿಮೆಯು ನನಗೆ ತಿಳಿದು ಬಂತು. ಹೆಂಡತಿಯು ಗಂಡನ ದಾಸಿಯಲ್ಲ; ಅವಳು ಗಂಡನ ಜೊತೆಗಾತಿಯು, ಸಹಾಯಕಳು. ಹಾಗು ಸಮಸ್ತ ಸುಖ-ದುಃಖಗಳಲ್ಲಿ ಸರಿ ಪಾಲುಗಾರಳಾಗಿರುವಳು, ಗಂಡನಂತೆಯೇ ಸಂಶಯ ಮಾರ್ಗಕ್ರಮಣ ಮಾಡಲು ಅವಳಿಗೆ ಸ್ವಾತಂತ್ರ್ಯವಿದೆ. ಸಂದೇಹ-ಸಂಶಯಗಳಿಂದುಂಟಾದ ಆ ಅಂಧಕಾರದ ದಿನಗಳನ್ನು ನೆನಿಸಿದರೆ, .. ನನ್ನ ಮೂರ್ಖತನವನ್ನೂ ವಿಷಯಲಂಪಟ ಕಠೋರ ವೃತ್ತಿಯನ್ನೂ ಸ್ಮರಿಸಿ ನನಗೆ ಬೇಸರವಾಗುತ್ತದೆ. ಮತ್ತು ಗೆಳೆಯನ ಅಂಧ ಭಕ್ತನಾಗಿ ಮಾಡಿದ ಪಾಪಾಚರಣೆಯನ್ನು, ನಾನು ಮರುಗುತ್ತೇನೆ.

— ಕಾಶ್ಮೀರ ಸಂಸ್ಥಾನದ ಹೊಸ ಮಹಾರಾಜರಾದ ರಾಜಾ ಹರಿಸಿಂಗರವರ ರಾಜ್ಯಾರೋಹಣ ಸಮಾರಂಭವು ಜರುಗಿತು. ಆ ಸಮಯ ದೇಶ್ಟಿಯರ ನರ್ತನಕ್ಕಾಗಿ ೧ ಲಕ್ಷ ರೂಪಾಯಿ ಖರ್ಚು ಬಂತು ಕಾಣಾ!!

— ಹೊಸದಾಗಿ ನೇಮಿಸಲ್ಪಟ್ಟ ಬೆ.ಸಾಯ ಕಮೀಟಿಗಳಿಗಾಗಿ ೩ ಲಕ್ಷ ರೂಪಾಯಿಗಳ ಖರ್ಚು ಬರುವದು.

ಸುಗಂಧಿ ತಾಂಬೂಲೀ ಜರ್ದಾ!

ಉತ್ತಮ ತಂಬಾಕ ತಕ್ಕೊಂಡು ಅದಕ್ಕೆ ತಾಂಬೂಲ ಪದಾರ್ಥಗಳ ಮತ್ತು ಮುಖರಂಜನ ಔಷಧೀ ವನಸ್ಪತಿಗಳ ಅರ್ಕದ ಬಗಳೀಕೊಟ್ಟು ಈ ತಾಂಬೂಲೀ ಜರ್ದಾ ತಯಾರ ಮಾಡಿರುತ್ತದೆ. ಇದು ತಿನ್ನಲಿಕ್ಕೆ ಕಹೀ ಇದ್ದು ಸುವಾಸಿಕವಿರುತ್ತದೆ. ಇದರ ಸೇವನೆಯಿಂದ ಬಾಯಿಯು ಹೊಲಸು, ಹಲ್ಲು ನೋವು, ಹುಳ ಇವು ನಾಶವಾಗಿ ಹಲ್ಲುಗಳು ಒಳ್ಳೇ ಗಟ್ಟಿಯಾಗುತ್ತವೆ. ಇದರ ಸೇವನೆಯಿಂದ ದಮ್ಮು, ಕಫ ಮುಂತಾದ ವಿಕಾರಗಳು ಉಂಟಾಗುವ ಭೀತಿಯು ಏನೂ ಇಲ್ಲ. ಆದ್ದರಿಂದ ತಂಬಾಕ ಸೇವಿಸುವ ರಸಿಕರು ಅವಶ್ಯವಾಗಿ ಅನುಭವ ತಕ್ಕೊಳ್ಳಬೇಕು. ೧ ಪುಡಿಗೆ ಕಿಂ. ರೂ. ೦-೬-೦, ೨೫ಕ್ಕೆ ೦-೯-೦, ೧೦೦ಕ್ಕೆ ರೂ. ೨-೦-೦, ೫೦೦ಕ್ಕೆ ರೂ. ೮-೦-೦, ೧೦೦೦ಕ್ಕೆ ರೂ. ೧೫-೦-೦. ಟಪಾಲ, ಪೆಕಿಂಗ ಖರ್ಚ ಪ್ರತ್ಯೇಕ ಬೀಳುವದು. ವಿಶೇಷ ಮಾಹಿತಿ ಬಗ್ಗೆ ಕೆಳಗಿನ ವಿಳಾಸದ ಮೇಲೆ ಪತ್ರವ್ಯವಹಾರ ಮಾಡಿದರೆ ಜರೂರ ಉತ್ತರ ಕೊಡಲ್ಪಡುವದು.

ಪತ್ತೆ:- **ಎಸ್. ಬಿ. ಕದಂ,**
ಬೀಡಿ ಮತ್ತು ತಂಬಾಕು ಜರ್ದಾ ದುಕಾನ,
ಮು॥ ಪೋ॥ ನಿಪ್ಪಾಣಿ, ಜಿ ಬೆಳಗಾಂವ

"ಲೋಕರಹಸ್ಯ"

ಈ ಕನ್ನಡ ಮಾಸ ಪತ್ರಿಕೆಯಲ್ಲಿ ವ್ಯಾಪಾರಸ್ಥರಿಗೆ ವ್ಯಾಪಾರದ ವಿಚಾರ, ರೈತರಿಗೆ ಕೃಷಿಯ ಅತ್ಯುತ್ತಮ ಮಾರ್ಗಗಳು, ಸ್ತ್ರೀಯರಿಗೆ ಗೃಹಕೃತ್ಯದ ವಿಚಾರಗಳು, ಬಡವರಿಗೆ ಹಣ ಸಂಪಾದನೆಯ ಸುಲಭ ಮಾರ್ಗಗಳು, ರಸಿಕರಿಗೆ ವಿನೋದ ವಿಚಾರಗಳು, ಪ್ರತಿಯೊಬ್ಬರಿಗೂ ಬೇಕಾದ ರಾಜಕೀಯ ವಿಚಾರಗಳು, ವೈದ್ಯ ಭಾಗಗಳು, ಜ್ಯೋತಿಷ್ಯ, ಕಾನೂನು, ವೇದಾಂತ, ಕಾದಂಬರಿಗಳು, ಗೋಪಾಲನೆ, ಕೈಗಾರಿಕೆಗಳು, ವೃತ್ತಾಂತಗಳೇ ಮುಂತಾದ ವಿಷಯಗಳೆಲ್ಲವೂ ಪ್ರಕಟವಾಗುತ್ತವೆ. ಪತ್ರಿಕೆಯು ಪ್ರತಿಯೊಂದು ಪುಟದಲ್ಲೂ ಅನುಕೂಲವಾದ ಗೂಢ ವಿಚಾರಗಳಿಂದ ತುಳುಕುತ್ತಿವೆ. ಪ್ರತಿ ಮಾಸದಲ್ಲಿಯೂ ೩೦ ಪುಟಗಳಿಗೆ ಕಡಿಮೆಯಿಲ್ಲದ ವಿಷಯಗಳಿರುತ್ತವೆ. ವಾರ್ಷಿಕ ಚಂದಾ ಅಂಚೆ ವೆಚ್ಚ ಸೇರಿ
ರೂ. ೩—೮—೦. ಮಾತ್ರ.
ಮಾದರಿ ಸಂಚಿಕೆಗೆ ಕ್ರಯ ೦—೫—೦
ಮಾದರಿ ಸಂಚಿಕೆಗಳನ್ನು ಪುಕ್ಕಟವಾಗಿ ಕೊಡುವದಿಲ್ಲ

ಹಾಕಿದ ಹಣವನ್ನು ನಷ್ಟ ಮಾಡದೆ, ಹಾಕಿದ ಹಣಕ್ಕೆ ಅದೃಷ್ಟ ಹಾಗೆಯೇ ತಿಂಗಳಿಗೆ ೧೦೦ ರೂ. ಗಳ ಹುಟ್ಟುವಳಿಯೇ ಹಣ ಸಂಪಾದನೆ ಮಾಡುವ ವಿಧಾನವನ್ನು ತಿಳಿಯುವ ಬಗ್ಗೆ ಒಂದಾಣೆ ಸ್ಟಾಂಪು ಕಳಿಸಿ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮೆನೇಜರ್,
"ಲೋಕರಹಸ್ಯ"
ವೀರರಾಜೇಂದ್ರ ಪೇಟೆ, ಕೊಡಗ

"ಚಾಟಾನೂಗಾ" ಕಬ್ಬಿನ ಗಾಣ!

ಜಗತ್ತಿನಲ್ಲಿ ಸರ್ವೋತ್ಕೃಷ್ಟವೆಂದೇ ಇದು ಇಷ್ಟು ಪ್ರಖ್ಯಾತಿ ಹೊಂದಿತು!

ನಂ ೧೨, ರೂ. ೧೪೫
,, ೧೩, ರೂ. ೧೮೫
,, ೩೩, ರೂ. ೧೯೦
,, ೩೪, ರೂ. ೩೪೮

ದಸ್ತಾಲು ಮುಂಬಯಿ ರೇಲ್ವೆ ಸ್ಟೇಶನ್ನಿನ ವರೆಗೆ ತಂದು ಕೊಡಲ್ಪಡುವವು



ಇದರ ರೋಲುಗಳು ಶುದ್ಧ ಕಬ್ಬಿಣದಿಂದ ಮಾಡಿದ್ದಿರುತ್ತವೆ, ಕಬ್ಬಿನೊಳಗಿನ ಹನಿ ಹನಿ ರಸವನ್ನೂ ಕೂಡ ಹಿಂಡಿ ತೆಗೆಯುವ ವ್ಯವಸ್ಥೆ ಮಾಡಲ್ಪಟ್ಟಿರುತ್ತದೆ. ಗಾಣದ ಎರಡೂ ಬದಿಗಳ ಯಾವದೇ ಬದಿಯಿಂದ ಕಬ್ಬು ಕೊಡ ಬರುತ್ತದೆ

ಆರ್ಡರಿನ ಸಂಗಡ ೩ ಹಣವನ್ನು ಡಿಪೋಝಿಟ್ಟಾಗಿ ಕಳಿಸಬೇಕು.

ಕ್ಯಾಟಲಾಗು "ಕಬ್ಬಿನ ಗಾಣ" ಪುಕ್ಕಟೆ!

ಮೆಕ್‌ಬೆಥ ಬ್ರದರ್ಸ ಮತ್ತು ಕಂಪನಿ, ಲಿಮಿಟೆಡ್.
ಕೋಡಾಕ ಹೌಸ, ಹೊರ್ನಬಿ ರೋಡ, ಮುಂಬಯಿ.

ಏಜಂಟರು ಬೇಕು! ಏಜಂಟರು ಬೇಕು!!

ನಮ್ಮಲ್ಲಿ
ಅತಿ ಮನೋಹರವಾದ
ಶೀಶೆ ಕಟ್ಟಿಗೆಯ
ದೇವರ ಮಂಟಪಗಳೂ,
ತಂಗಡದ ಸೌಭಾಗ್ಯವತಿ ಪೆಟ್ಟಿಗೆಗಳೂ, ಡಿಕ್ಸನೇರಿ ಪೆಟ್ಟಿಗೆಗಳೂ, ಅಫೀಸ ಬಾಕ್ಸುಗಳೂ, ರೋಕಿಂಗ ಖುರ್ಚಿಗಳೂ ಹಾಗೂ ಯಾವತ್ತೂ ತರದ ಮನೇ ಸಾಮಾನು ಸಿಗುತ್ತದೆ.

ನಮ್ಮ ವಿಳಾಸ:—
ದಿ ನೋರ್ಥ ಕೆನರಾ ಟ್ರೇಡಿಂಗ ಕಂಪನಿ,
ಶಾಂತಿ ಭುವನ,
ಕಾರವಾರ.

धातू क्षीणता व कमजोरपणा यांसाठीं

मदन मंजरी गोळ्या. (रजिस्टर्ड.)

या दिव्य गोळ्या रक्त व वीर्य सुधारून त्यांची चांगली वाढ करतात. पचन शक्ति सुधरून परसाकडे साफ होतें. त्याचप्रमाणें प्रत्येक प्रकारची अशक्तता दूर होऊन शरीर तेजदार व बलवान होतें. किं. ४० गोळ्यांच्या डबीस रु. १.

रमण विलासिनी गोळ्या. रात्रीं फक्त १ गोळी दुधाबरोबर खाल्यानें इच्छेप्रमाणें वीर्यस्तंभन होतें. किं. डबीस रु. १

नपुंसकत्वारी घृत. हा लेप पुरुषाच्या गुह्यभागावर लावला असतां सर्व रोग नाश पाऊन खरें पुरुषत्व प्राप्त होतें. किं. डबीस रु. १.

कुमटा एजंट :— माधव सांतप्पा शेणवी बेळेकेरी.

राजवैद्य नारायणजी केशवजी वैद्य:— १९१ काळबादेवी रोड मुंबई २

ಗೌರೀಹುಣ್ಣಿವೆಯಿಂದ ೪ನೇ ವರ್ಷ ಪ್ರಾರಂಭ

ಸಚಿತ್ರ | **ಜಯಕರ್ನಾಟಕ** [ಮಾಸಪತ್ರಿಕೆ

ಸಂಪಾದಕ—ಆಲೂರ ವೆಂಕಟರಾಯರು

ಇದರಲ್ಲಿ ವಾಙ್ಮಯಾತ್ಮಕ ಸಾಹಿತ್ಯ, ಧಾರ್ಮಿಕ ಸಾಮಾಜಿಕ ಐತಿಹಾಸಿಕ ಆರ್ಥಿಕ ಇತ್ಯಾದಿ ವಿಷಯಗಳು ಇರುವವು. ಪ್ರಪಂಚ ಪರಿಚಯ, ಜೇನಹುಟ್ಟು ಮಕ್ಕಳಿಗಾಗಿ ಕೊಡಲ್ಪಡುವವು. ಪ್ರತಿ ಸಂಚಿಕೆಯಲ್ಲಿ ಸುಂದರ ಚಿತ್ರಗಳು ಇರುತ್ತವೆ. ಡೆಮಿಪರ್ಣ ರಿಪ್ಪು ಆಕಾರದ ೩೦ ಪುಟಗಳು ವರ್ಗಣಿ ರೂ ೫-೮-೦ ಕಾರ್ಯದರ್ಶಿ ಜಯಕರ್ನಾಟಕ, ಧಾರವಾಡ.

ಎಲ್ಲಾ ನೋವುಗಳಿಗೆ ದಿವ್ಯೌಷಧ

ವಾತಹಾರಿ ತೈಲ.

ತ್ರಯ ೪ ತೊಲಿ ಬಾಟ್ಲಿ ೧ಕ್ಕೆ ೦—೧೨—೦ ಅಂಜಿ ಸುವಾಸಿಕ ಕಾಬೂಲಿ ಹಿಂಗು ೧೦ ತೊಲಿ ಡಬ್ಬಿ ೧ಕ್ಕೆ ೧—೮—೦ ಹಿಂಗಿನ ಅರ್ಕ ೧ ತೊಲಿಯ ಬಾಟ್ಲಿ ೧ಕ್ಕೆ ೦—೮—೦ ರಕ್ತಶುದ್ಧಿಕಾರಕ ಧಾತು ಪೌಷ್ಟಿಕ, ಶಕ್ತಿವರ್ಧಕ ಹಲವಾ ೨೦ ತೊಲಿಯ ಡಬ್ಬಿ ೧ಕ್ಕೆ ೧—೪—೦ ೧ ತೊಲಿಯ ಹಿಂಗಿನ ವಡಿಗಳು ಡಜನ್ ೧ಕ್ಕೆ ೨—೦—೦ ತಲೆಗೆ ಹಾಕುವ ಸುವಾಸಿಕ ಕುಸಕರಾಜ ತೈಲ ೪ ತೊಲಿಯ ಬಾಟ್ಲಿ ೧ಕ್ಕೆ ೦—೧೨—೦ ಹುಳದ ಪ್ರೊಡು ತೊಲಿ ೧ಕ್ಕೆ ೦—೮— ಇದಲ್ಲದೆ, ನೀಲಗಿರಿ ತೈಲ, ಎಲ್ಲಾ ತರದ ಅಂಚೆ ಉಪಟಿಕೆಗಳು ಯೋಗ್ಯ ಕಿಂಮತಿಗೆ ಸಿಗುವವು. ಟಪಾಲ ಖರ್ಚು ಪ್ರತ್ಯೇಕ.

ಕೆರೇಕರ ಕಾಬೂಲೀ ಹಿಂಗಿನ ದುಕಾನ,

ಅಳಕೀಬಾಜಾರ, ಕುಮಟಾ.

ರಾಗದ ಪೆಟ್ಟಿಗೆಗಳು.

ತಬಲೆ ಜೋಡಿ ಇತ್ಯಾದಿ ಗಾಯನ ಸಾಮಾನು.

೨, ರಾಗದ ಕೈಪೆಟ್ಟಿಗೆ ಕಿಂ. ೩೦, ೪೦, ೬೦, ೭೫ ೧೦೦

„ ಕಾಲು ಪೆಟ್ಟಿಗೆ ಕಿಂ ೬೫, ೭೫, ೧೨೦, ೧೫೦

„ ತಬಲೆ ಜೋಡಿ ಕಿಂ ೧೬, ೧೮, ೩೦, ೫೦

„ ಹಾರ್ಮೋನಿಯಮ ಗ್ಯಾಡ (ಮರಾಠಿ) ಕಿಂ ೧॥, ತಬಲೆ ಗ್ಯಾಡ ಕಿಂ. ೧॥ ೮.

ವಿಶೇಷ ಮಾಹಿತಿಗೆ ನಮ್ಮ ಮರಾಠಿ ಕ್ಯಾಟಲಾಗ ತರಿಸಿ ಕೊಳ್ಳುವದು.

ಪತ್ರವ್ಯವಹಾರ ಮರಾಠಿಯಿಂದ ಇಲ್ಲವೆ ಇಂಗ್ರಜಿಯಿಂದ ಮಾಡಬೇಕು.

ಪತ್ತೆ:—**ಗೋಪಾಳ ಸಖಾರಾವ** ಮತ್ತು

ಕಂಪನಿ, ವಿಠ್ಠಲವಾಡಿ ಎದುರಿಗೆ

೨೨೬ ಕಾಳಬಾದೇವಿ. ಮುಂಬಯಿ

ಟಿ. ಎಸ್. ಮೋಟರ ಸರ್ವಿಸ, ಶಿವಮೊಗ್ಗಾ.

ಗೇರಸಪ್ಪಾ ಜೋಗಿಗೆ ರೆಗ್ಯುಲರ್ ಸರ್ವಿಸ್



ಶಿವರಾತ್ರಿಯ ಸಮಯದಲ್ಲಿ ಗೋಕರ್ಣಕ್ಕೆ ಸ್ಪೆಶಲ್ ಲಾರಿಗಳು

(೧) ಹುಬ್ಬಳ್ಳಿ ಯಲ್ಲಾಪುರ- ಅಂಕೋಲಾ- ಕಾರವಾರ (೨) ಹುಬ್ಬಳ್ಳಿ- ಮುಂಡಗೋಡ ಶಿರ್ಶಿ ಕುಮಟಾ- ಹೊನ್ನಾವರ- ಭಟ್ಕಳ (೩) ಕುಮಟಾ- ಶಿರ್ಶಿ- ಶಿದ್ದಾಪುರ ಗೇರಸಪ್ಪಾ- ಜೋಗ) **Gersppa Falls**) ಸಾಗರ ಶಿವಮೊಗ್ಗಾ—ಈ ಲೈನುಗಳಲ್ಲಿ ರೆಗ್ಯುಲರ್ ಸರ್ವಿಸ ನಡೆಯುತ್ತದೆ ಪ್ರಯಾಣಿಕರಿಗೆ ಅನುಕೂಲ್ಯವಾಗುವಂತೆ ಎಲ್ಲ ವ್ಯವಸ್ಥೆ ಮಾಡಲಾಗಿದೆ

ಹೆಚ್ಚಿನ ಮಾಹಿತಿಯನ್ನು ಆಫೀಸಿನಲ್ಲಿ ತಿಳಿದುಕೊಳ್ಳಬಹುದು

THE

INDIA PROVIDENT COMPANY LTD:

ESTABLISHED 1910

Dividend declared 1912 — 2? per cent

Dividend declared 1922 — 30 per cent

Dividend declared previous year 15 20 per cent

The Safest office for Life Insurance of the poor Premium Re 1 As 8 per mensem

Apply at once to

PADMANABH GOPAL KAMAT,

Agent, ANKOLA N' Kanara

ಸರಕಾರದಲ್ಲಿ ರಜಿಸ್ಟ ಆದಂಥ

ಅನೇಕ ಸರ್ಟಿಫಿಕೇಟುಗಳು ಮತ್ತು ಸುವರ್ಣಪದಕಗಳು ದೊರೆತಿರುವ

ದ್ರಾಕ್ಷಾರ್ಕಮಧು.

ರಕ್ತಶುದ್ಧಿ ಮತ್ತು ಧಾತುವೃದ್ಧಿಕಾರಕ

ಈ ಮಧು ಮಹೌಷಧಿಯಾಗಿದ್ದು ಬಹಳ ಸೇವನಿಯೂ ರುಚಿಕರವೂ ಆಗಿರುತ್ತದೆ. ಮಧುವ ಸೇವನದಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ವಿಕಾರದಿಂದಾದ ಬೇನೆಯು ಹೋಗುವದು. ೬೦ ೭೦ ವರ್ಷದ ಮುದುಕರ ಶರೀರವು ತರುಣರಂತೆ ಪ್ರವರ್ಧಮಾನವಾಗುವದು (ನಿಜವಾ ಬಂದೇ ಸಪ್ತಕದಲ್ಲಿ ಅನುಭವಕ್ಕೆ ಬರುವದು) ಜನನೇಂದ್ರಿಯದೊಳಗಿನ ಶಕ್ತಿಯು ಹೋಗಿ ವ್ಯಸನ ಪಡುವದಕ್ಕೆ ಆಸ್ಪದವಾಗುವದು ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ ಧಾತುವು ಬಂದಾಗುವದು — ಪಿರಿಯ ಹಾಗೂ ಕಾನಿಂತ ದೂಷಿತವಾದ ಶರೀರವು ನಿರೋಗವಾಗುವದು. ಮೂರು ದಿವಸದಲ್ಲಿ ಗುಣ ಬರುವದು. ತರುಣ ಸ್ತ್ರೀಪುರುಷರು ಈ ದ್ರಾಕ್ಷಾರ್ಕ ಮಧುವ ಸೇವನ ಮಾಡಿ ಅದರೊಳಗಿನ ಗುಣ ಪರೀಕ್ಷೆ ಮಾಡಬೇಕು. ಅದರಿಂದ ಕ್ಷಯರೋಗ, ಉದರರೋಗ ಮುಂತಾದ ಅನ್ಯರೋಗಗಳು ನಾಶವಾಗುವವು. ದಿವಸದಲ್ಲಿ ಎರಡಾವರ್ತಿ ಊಟಮಾಡಿದರೂ ಅನ್ನ ಪಚನವಾಗಿ ಹಸಿವೆ ಚನ್ನಾಗಿ ಆಗುತ್ತದೆ ಇದರ ಅನುಭವ ಮೊದಲನೇ ದಿವಸವೇ ಬರುವದು. ಶೌಚ ಸಾಫ ಆಗುವದು. ಸ್ವಪ್ನದಲ್ಲಿ ಎಷ್ಟೇ ದಿವಸದ ಕಾಯಿಲೆ ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ಔಷಧಕ್ಕೆ ಪಥ್ಯವಿಲ್ಲ ಸ್ತ್ರೀಸಂಭೋಗ ವಿಷಯದ ಕಾಯಿಲೆ ಹೊಸಬೇನೆ ಇದ್ದರೆ ೧೦ ದಿವಸ ಸಾಲುವ ಒಂದೇ ಬಾಟಲಿಯಿಂದ ಗುಣಬರುವದು ಹಳೇ ರೋಗವಿದ್ದರೆ ಬಾಟಲಿಯಿಂದ ಗುಣಬರುವದು ಒಂದು ಬಾಟ್ಲಿಯ ಕಿಮ್ಮತು ೧॥ ರೂಪಾಯಿ ಮೂರು ಬಾಟಲಿಯ ಕಿಮ್ಮತು ೩—೦—೦ ಮೂರು ಬಾಟಲಿಗಳನ್ನು ಒಂದೇ ಪಾರ್ಸಲಿನಲ್ಲಿ ಕಳಿಸುವೆವು. ಅಂದರೆ ಟಪಾಲಖರ್ಚು ಹೆಚ್ಚು ಬೀಳುವದಿಲ್ಲ. ಆರು ಬಾಟಲಿಗಳ ಕಿಮ್ಮತು ೧೨—೦—೦ ಮತ್ತು ೧ ಬಾಟಲಿ ಪುಕ್ಕಟೆ ಸಿಗುವದು. ಟಪಾಲಖರ್ಚು ಬೇರೆ ಬೀಳುವದು. ಹಿಂಬದಿಯ ಆಪೀಸಿನಿಂದ ೧ ಬಾಟ್ಲಿಗೆ ೧—೦—೦ ೩ ಬಾಟ್ಲಿಗೆ ೩—೦—೦ ೬ಕ್ಕೆ ೧೩—೧—೦

ಮ್ಯಾನೇಜರ— ದ್ರಾಕ್ಷಾರ್ಕಮಧು ಆಫೀಸ ಪೋ. ನಿಪ್ಪಾಣಿ ಜಿ ಬೆಳಗಾಂ

ವಿವಿಧ ಸಂಗ್ರಹ.

ದಿನಕ್ಕೆರಡು ಊಟ

ಜನಾನದ ಹಾಕ್ಟರರೊಬ್ಬರು ದಿನಕ್ಕೊಂದು ಊಟ ಉಂಡರೆ, ಮಾನವನಿಗೆ ಹಿತವಾಗುತ್ತದೆಂದು ಪ್ರತಿಪಾದಿಸಿದರು. ಆ ಕಾಲಕ್ಕೆ "ಎಕ್ಸ"ರೆಂಬುವರೊಬ್ಬರು ಮುಂಬಯಿ ಕ್ರಾನಿಕಲ್ ಪತ್ರಿಕೆಗೆ ಒಂದು ಪತ್ರ ಬರೆದು ಹವಾಗುಣ ದಿನಾ ಎರಡು ಊಟ ಉಣ್ಣಬೇಕೆಂದು ಪ್ರತಿಪಾದಿಸಿರುವರು. ಎರಡು ಹೊತ್ತು ಉಂಡರೆ, ಹೊಟ್ಟೆಯು ಹಸಿವು ಸಂಪೂರ್ಣವಾಗಿ ಸಮಾಧಾನವಾಗುತ್ತದೆ. ಬೆಳಗಿನ ಹೊತ್ತಿಗೆ ಏನೂ ತಿನ್ನಬಾರದು. ಗಟನೇ ಶತಮಾನದಲ್ಲಿ ದೊಡ್ಡದಾದ ಒಂದು ಗಾದೆಮಾತಿನಿಂದಲೂ ಇದೇ ಸಂಗತಿಯು ಸ್ಪಷ್ಟವಾಗುತ್ತದೆ —"ಬೆಳಗಿನ ೬ ಘಂಟೆಗೆ ಏಳಬೇಕು, ೧೦ ಘಂಟೆಗೆ ಉಣ್ಣಬೇಕು, ಸಾಯಂಕಾಲ ೬ ಘಂಟೆಗೆ ಪುನಃ ಉಣ್ಣಬೇಕು, ೧೦ ಘಂಟೆಗೆ ಮಲಗಬೇಕು, ಅಂದರೆ, ಮನುಷ್ಯನು ಹತ್ತುಪಟ್ಟು ಹೆಚ್ಚು ವರುಷ ಬದುಕುವನು" (*To rise at six Dine at ten Sup at six Go to bed at ten Makes a man live ten times ten*) ಎಂಬ ರೋಗದ ಸಂಬಂಧವಾದ ಹಳಗಿನ ಪುರಾತನ ಕಾಲದ ಗಾದೆಯು ರು ದೇಹಶಕ್ತಿಯಿಂದಲೂ, ಮಾನಸಿಕ ಸಾಮರ್ಥ್ಯದಿಂದಲೂ ಖ್ಯಾತಿಹೊಂದಿದ್ದರು ಅವರು ದಿನಾ ಒಂದೇ ಎಂದು ಹೊತ್ತು ಉಣ್ಣುತ್ತಿದ್ದರು ಅದರಂತೆ ಹಿಟ್ಲರ್ ಜಾತಿಯವರೂ ಎರಡೇ ಹೊತ್ತು ಉಣ್ಣುತ್ತಿದ್ದರು ಹಿಂದುಸ್ಥಾನದೊಳಗಿನ ಕಲಾಧೀರರು ಎರಡೇ ಹೊತ್ತು ಉಣ್ಣುವ ರೂಢಿಯನ್ನಿಟ್ಟಿರುವರು. ಸ್ಟೀಫ ವಿನನ್ ಎಂಬುವನು ದೊಡ್ಡ ಮಲ್ಲನು, ಆತನು ಎರಡೇ ಹೊತ್ತು ಉಣ್ಣುತ್ತಿದ್ದನು. ಹಿಕ್ಸನ್ ಎಂಬುವನು ಕಾಲುನಡಿಗೆಯಲ್ಲಿ ಅಗ್ರಗಣ್ಯನು. ಅತನೂ ಎರಡೇ ಹೊತ್ತು ಉಣ್ಣುತ್ತಾನೆ. ಮಾನವನು ಎಷ್ಟು ಕಷ್ಟಕರವಾದ ಕೆಲಸವನ್ನು ಕೈಕೊಂಡರೂ, ಎರಡೇ ಹೊತ್ತು ಉಣ್ಣುವದರಿಂದ ಆತನು ದೃಢಕಾಯನಾಗುತ್ತಾನೆಂದು ವೆಸ್ಟನ್‌ರವರು ಹೇಳಿದ್ದಾರೆ. ವೆಸ್ಟನ್‌ರವರೆಂದರೆ, ಸಾಮಾನ್ಯರಲ್ಲ. ಈಗ ಅವರು ಬಹಳ ಮುದುಕರಾಗಿರುವರು. ೩೩ ವರ್ಷ ಪ್ರಾಯದವರಿದ್ದಾಗ, ಅವರು ದಿನಾ ಎರಡು ಸಲ ಉಂಡು ಸಾನ್‌ಫ್ರಾನ್ಸಿಸ್ಕೋದಿಂದ ನ್ಯೂಯಾರ್ಕದವರೆಗೆ ನಡೆಕೊಂಡು ಹೋದರು. ಸಾನ್‌ಫ್ರಾನ್ಸಿಸ್ಕೋದಿಂದ ನ್ಯೂಯಾರ್ಕ ದಪ್ಪಗಾತ್ರ ೩೫೦೦ ಮೈಲು ಇದೆ. ಇಷ್ಟು ನಡೆಯಲಿಕ್ಕೆ ವೆಸ್ಟನ್‌ರವರಿಗೆ ೭೭ ದಿನಗಳು ತಗಲಿದವು. ಅಂದರೆ, ದಿನಾ ೪೫ ಮೈಲು ಕಾಲು ನಡಿಗೆಯಾಯಿತು. ಡಾ। ರೆಜಿನಾಲ್ಡ ಎಫ್ ಈ ಆಸ್ಟಿನ್, ಎಮ್ ಡಿ ಎಮ್ ಸಿ, ರವರು "*Direct paths to Health*" ಎಂಬ ಮನನೀಯ ಗ್ರಂಥವನ್ನು ಬರೆದಿರುವರು. ಅವರು ಬೆಳಗಿನ ಹೊತ್ತಿಗೆ ಏನೂ ತಿನ್ನಬಾರದೆಂದೂ, ದಿನಾ ಎರಡು ಸಲ ಉಣ್ಣಬೇಕೆಂದೂ ಅಭಿಪ್ರಾಯ ಬರೆದಿರುವರು ಮೊದಲನೇ ಊಟವನ್ನು ಮಧ್ಯಾಹ್ನಕ್ಕೆ ಕೊಳ್ಳಬೇಕು, ಎರಡನೇ ಊಟವನ್ನು ಸಾಯಂಕಾಲಕ್ಕೆ ಮಾಡಬೇಕು. ಅವಶ್ಯವಿದ್ದರೆ, ಬೆಳಗಿನ ಹೊತ್ತಿಗೆ ನೀರು, ಸೋಡಾ ವಾಟರು ಅಥವಾ ನಿಸ್ತೇಜ ಚಹಾ (*weak tea*) ಕೊಳ್ಳಲಿಕ್ಕೆ ಅಡ್ಡಿಯಿಲ್ಲ ಅವರಾತ್ರಿಕ್ಕೂ ಇದೇ ಪ್ರಕಾರ ಮಾಡಬಹುದು. ನೀರು ಕುಡಿಯುವದರಿಂದ ಹೊಟ್ಟೆಯೊಳಗಿರುವ ಅಪಾಯಕರ ಪದಾರ್ಥಗಳೆಲ್ಲ ಹೊರ ಹೋಗಿ ಹೊಟ್ಟೆಯು ಸ್ವಚ್ಛವಾಗಲು ಅನುಕೂಲವಾಗುತ್ತದೆ. ಹಾಗು ಕೆಲವು ದಿನಗಳಿಗೊಮ್ಮೆ ೨೪ ತಾಸು ಉಪೋಷಣ ಮಾಡಬೇಕು. ಇದರಿಂದ ಪ್ರಕೃತಿಯು ಬಹಳ ಚೆನ್ನಾಗಿರುತ್ತದೆ. ಲಂಡನದ ಡಾಕ್ಟರರೊಬ್ಬರು, ಆಹಾರವನ್ನು ಮಿತಿಯಿಂದ ಸೇವಿಸಿ, ಬಹಳ ಕಾಲುನಡಿಗೆಯ ವ್ಯಾಯಾಮ ಮಾಡಿದರೆ ಮನುಷ್ಯನು ಶತಾಯುಷ್ಯನಾಗಿರುತ್ತಾನೆಂದು ಅಭಿಪ್ರಾಯಪಟ್ಟಿರುವರು. ದಿನಾ ೮ ಮೈಲು ಪ್ರತಿದಿನ, ಸಾಯಂಕಾಲದಲ್ಲಿ ೨-೩ ಮೈಲು ನಡೆಯುವ ರೂಢಿಯುಳ್ಳವರು ತೀರ ಅಶಕ್ತರಿದ್ದರೂ ಹೀಗೆ ಅಭ್ಯಾಸವನ್ನಿಟ್ಟು ಆರೋಗ್ಯವನ್ನು ಪಡೆಯಬಹುದು. ಸಾಮಾನ್ಯಜನರಿಗೆಲ್ಲ ಸುಲಭಸಾಧ್ಯವೆಂದು "ಎಕ್ಸ"ರವರು ಸೂಚಿಸಿರುವರು "ಎಕ್ಸ"ರವರ ಅಭಿಪ್ರಾಯಗಳನ್ನು ವಾಚಕರು ವಿಚಾರಿಸಿ ನೋಡಿದರೆ, ಹಲವು ಚಟದಿಂದ ಒದಗುವ ಅನಾರೋಗ್ಯ ಹಾಗು ಅಪಾಯಕರ ಖರ್ಚು ತಪ್ಪುವದು, ದೇಹಕ್ಕೂ ಹಿತವಾಗುವದು. ಕೈಕೊಂಡ ಕಾರ್ಯವನ್ನು ನೆರವೇರಿಸಲು ವಿಶೇಷ ಉತ್ಸಾಹ ಬರುವದು

*

ಬ್ರಿಟಿಶರು ಭೂತಲದ ಪಹರೆದಾರರು!

ಕಳೆದ ವಾರದ ತಿಂಗಳಿನಲ್ಲಿ "ಸೆಂಟ್ರಲ್ - ಏಶಿಯನ್ ಸೊಸೈಟಿ" ಎಂಬ ಯುರೋಪಿಯನ್ ಸಂಘದ ಸಭೆಯೊಂದು ಲಂಡನದಲ್ಲಿ ನೆರೆದಿತ್ತು. ಆಗ ಅಧ್ಯಕ್ಷಸ್ಥಾನದಲ್ಲಿ ಕರ್ನಲ್ ಸರ್ ಆರ್ನಾಲ್ಡ ವಿಲ್ಸನ್‌ರವರು ಹೇಳಿದ್ದೇನೆಂದರೆ —

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ

ಕಾಮಿನಿಯಾ ತೈಲ. ರಜಿಸ್ಟರ್ಡ

ನಯವಾದ ಗುಂಗುರು ಗುಂಗುರಾಗಿರುವ ನೀಲಿಮಯವಾದ ವಿಪುಲವಾದ ಕೇಶವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು? ಅಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾವುದೋ.

ಕಾಮಿನಿಯಾ ಆಯಿಲ್ (ರಜಿಸ್ಟರ್ಡ

ಈ ಆಯಿಲ್ ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತದೆಯೋ ಹಾಗೆಯೇ ಮಾನಸಿಕ ಪರಿಶ್ರಮದವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅತ್ಯಾವಶ್ಯಕ ಸಹಕಾರಿಯಾಗಿರುತ್ತದೆ. ಈ ಆಯಿಲ್ ಹಚ್ಚಿಕೊಳ್ಳುತ್ತಲೇ ಮಸ್ತಿಷ್ಕವು ತಂಪಾಗಿ ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ಹಚ್ಚಿದ ಬಳಿಕ ಎಂದಿಗೂ ಉದುರಿ ಬಿದ್ದು ಹೋಗಲಾರವು, ಅದರೆ, ಅವು ಹೊಸ ತಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮನೋಹರವೂ ಆಗಿರುತ್ತದೆ.

ಕೀಳು ತರದ ಎಣ್ಣೆಗಳನ್ನು ಕೊಂಡುಕೊಂಡು ಹಣವನ್ನು ಹಾಳುಮಾಡಿಕೊಳ್ಳುವದಕ್ಕಿಂತ ಒಂದೇಯೊಂದು ಬಾರಿ "ಕಾಮಿನಿಯಾ ಆಯಿಲ್" ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯು ದೇಶದ ಸರ್ವ ಪ್ರದರ್ಶನದಲ್ಲಿ "ಸರ್ಟಿಫಿಕೇಟ ಆಫ್ ಮೆರಿಟ್" ಅಥವಾ ಯೋಗ್ಯತಾಪತ್ರವು ಅದಕ್ಕೆ ದೊರಕಿದೆ. ಗ್ರಾಹಕರು ಉಪಯೋಗಿಸುವ ಬಹುಮಾನಪತ್ರಗಳು ದೊರೆತಿವೆ.

ಕ್ರಯ:— ಸೀಸೆಗೆ ರೂಪಾಯಿ 1-0-0, ಸೀಸೆ ೩ಕ್ಕೆ ರೂಪಾಯಿ 2-10 0 ವ್ಹಿ. ಪಿ ಖರ್ಚ 0-14-0

ಅತಿ ಮನೋಹರವಾದ ಸುರಭಿಯು!

ಒಟ್ಟೋ-ದಿಲ್ ಬಹಾರ್ !! (ರಜಿಸ್ಟರ್ಡ)

ಈ ಸುಗಂಧದ್ರವ್ಯವು ಮಧುರ, ಕೋಮಲ, ಚಿರಸ್ಥಾಯಿ ಮತ್ತು ಅತ್ಯುತ್ತಮವಾದ ಅನೇಕ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದದ್ದು. ಇದರಲ್ಲಿ ಮದಿರೆಯ (ಅಲ್ಕೋಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈ ವಸ್ತ್ರಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವ್ಯದ ಕೆಲವು ಹನಿಗಳನ್ನು ಹಚ್ಚಿಕೊಂಡರೆ ನಿಮ್ಮ ಸುತ್ತಲು ಸ್ವರ್ಗೀಯ ಸುಗಂಧ ಪುಷ್ಪವಾಟಿಕೆಯು ಅರಳಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೇ ಇರಲಿ, ಈ ಒಟ್ಟೋ-ದಿಲ್ ಬಹಾರದ ಗಂಧವು ಅವೆಲ್ಲವುಗಳನ್ನು ಮೀರಿ ಮನಸ್ಸನ್ನು ತನ್ನ ಕಡೆಯಿಂದ ಸೆಳೆಕೊಳ್ಳುವುದು. ಒಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ

ಸಣ್ಣ ಸೀಸೆ 1 ಕ್ಕೆ 0 8 0, 1 ಡ್ರಾಮಿನ (ಮಿಡಿಯಂ) ಸೀಸೆ 1 ಕ್ಕೆ 0 12 0; ½ ಔನ್ಸಿನ ದೊಡ್ಡ ಸೀಸೆ 1 ಕ್ಕೆ 2 0 0. ಅಂಚೆಯ ವೆಚ್ಚ ಬೇರೆ 0 4 0

ಒಟ್ಟೋ-ದಿಲ್ ಬಹಾರ್ ಪರಿಮಳ ಕಾಡಿಗಳು ಡಜನ್ 1 ಕ್ಕೆ 0 12 0

Address: **The Anglo Indian Drug & Chemical Co.**

16, Market, **BOMBAY 2**

"ನಾವು ಆರಬರ ಪಾರುಪತ್ಯಗಾರರಾದ್ದರಿಂದಷ್ಟೇ ಅಲ್ಲ! ಯುರೋಪ ಹಾಗು ಏಸಿಯಾ ಖಂಡಗಳೊಳಗೆ ನಮ್ಮ ಸಂಸ್ಕೃತಿ ಹಾಗು ನಮ್ಮ ವಿಚಾರಗಳನ್ನು ಅಂಗೀಕರಿಸುವ ರಾಷ್ಟ್ರಗಳ ಪಾರುಪತ್ಯಗಾರರು ನಾವು! ರಷಿಯಾ ದೇಶದವರು ಬೇರೆ ರಾಷ್ಟ್ರಗಳನ್ನು ತಮ್ಮೊಳಗೆ ತಮಗನುಕೂಲವಾಗಿ ಸೇರಿಸಿಕೊಳ್ಳಲಿ, ಯಾ ಬಿಡಲಿ, ಯುರೋಪ, ಜಪಾನ, ಚೀನ, ಹಿಂದುಸ್ಥಾನ ಹಾಗು ಅರಬೀ ದೇಶಗಳಿಗೆ ಮಾನವೀ ಹಕ್ಕುಗಳ ಪ್ರೀತಿ ಬಹಳ. ಈ ರಾಷ್ಟ್ರಗಳೆಲ್ಲ ತಮ್ಮ ತಮ್ಮ ರಾಷ್ಟ್ರಪರಂಪರೆಯಂತೆ ಸ್ವರಾಷ್ಟ್ರಧರ್ಮವನ್ನು ಪರಿಪಾಲಿಸಿ ನಡಕೊಳ್ಳಬಯಸುವವು. ಅಂಥವು ಸ್ವಸಂತೋಷದಿಂದ ರಶಿಯಾ ದೇಶದ ಬೋಲ್ಶೆವಿಕ್ ಪಂಥದ ತತ್ವಗಳನ್ನು ಅಂಗೀಕರಿಸುವ ಮಾತು ಎಂದೆಂದಿಗೂ ಆಗದು." ಎಲ್ಲನ್‌ರವರು ಮತ್ತು ವಿಚಾರ ಮಾಡಿದ್ದರೆ, ಬ್ರಿಟಿಶರ ಪಾರುಪತ್ಯಕ್ಕೆ ಇತರ ರಾಷ್ಟ್ರಗಳು ಒಪ್ಪಲಾರವೆಂದು ಅವರಿಗೆ ತಿಳಿಯುವದಾಗಿತ್ತು. ಯಾಕೆಂದರೆ, ಅವರ ಹೇಳಿಕೆಯಂತೆಯೇ ದೇಶದಲ್ಲಿ ರಾಷ್ಟ್ರಧರ್ಮಜಾಗ್ರತಿಯಾಗಿದೆ. ವ್ಯಕ್ತಿಗಳ ಅಧಿಕಾರದ ಜಾಗ್ರತಿಯಾಗಿದೆ. ಸ್ವರಾಷ್ಟ್ರಪರಂಪರೆಯಂತೆಯೇ ರಾಷ್ಟ್ರಮಂದಿರವನ್ನು ನಿರ್ಮಿಸುವ ವಿಚಾರಗಳು ರಾಷ್ಟ್ರಗಳಲ್ಲಿ ಪ್ರಾದುರ್ಭೂತವಾಗಿವೆ.

***

ಸ್ವದೇಶೀ ತತ್ತಿಗಳನ್ನೇ ಉಪಯೋಗಿಸಿರಿ!

ವಿಲಾಯತಿಯಲ್ಲಿ ಈಗ ಒಂದು ದೊಡ್ಡ ಚಳವಳಿ. ಇಂಗ್ಲಂಡದಲ್ಲಿ ಪ್ರತಿ ವರುಷ ೩ ಕೋಟಿ ಪೌಂಡು, ಅಂದರೆ ಸ್ಥೂಲಮಾನದಿಂದ ೪೦ ಕೋಟಿ ರೂಪಾಯಿಗಳ ತತ್ತಿಗಳು ಆಯರ್ಲಂಡ, ಬೆಲ್ಜಿಯಮ, ನೋರ್ವೇ, ಡೆನ್ಮಾರ್ಕ ಮುಂತಾದ ದೇಶಗಳೊಳಗಿಂದ ಆಮದಾಗುತ್ತವೆ. ಆದ್ದರಿಂದ ಇಂಗ್ಲಂಡದೊಳಗಿನ ಬೇಸಾಯ ಖಾತೆಯವರು ದೇಶದಲ್ಲಿ ತಗಲುವ ತತ್ತಿಗಳನ್ನೆಲ್ಲ ದೇಶದಲ್ಲೇ ತಯಾರಿಸುವಂತೆ ಯತ್ನ ಮಾಡುತ್ತಿರುವರು. ಪರದೇಶದಿಂದ ತತ್ತಿಗಳನ್ನು ಆಮದು ಮಾಡುವದರಿಂದ ಸ್ವದೇಶದೊಳಗಿನ ಹೇಂಟೆಗಳ ಅಪಮಾನವಾಗುತ್ತದೆಂದು ಬೇಸಾಯ ಖಾತೆಯವರ ಹೇಳಿಕೆ. ತತ್ತಿಗಳಲ್ಲಿ ರೂಪಭೇದವಿಲ್ಲ. ಅವು ಬೇಕಾದರೆ, ಯಾವದೇ ದೇಶದಿಂದ ಆಮದಾದದ್ದಿರಲಿ. ದೇಶೀ ತತ್ತಿಗಳ್ಯಾವವು? ಪರದೇಶೀ ತತ್ತಿಗಳ್ಯಾವವು? ಎಂದು ತಿಳಿಯುವದಕ್ಕಾಗಿ ಇಂಗ್ಲಂಡದಲ್ಲಿ ತಯಾರಾಗುವ ತತ್ತಿಗಳ ಮೇಲೆಲ್ಲ ಮುದ್ರೆ ಹೊಡೆಯಬೇಕೆಂದು ಬೇಸಾಯಗಾರರ ನಿರ್ಧಾರವಾಗಿದೆ. ತತ್ತಿ ತಿನ್ನುವವರ ಮತ್ತೊಂದು ತಕರಾರಿದೆ. ಇಂಗ್ಲಂಡದೊಳಗಿನ ತತ್ತಿಗಳು ಬಹಳ ದಿನಗಳವು, ಆದ್ದರಿಂದ ಅವುಗಳಿಗೆ ಅಷ್ಟು ರುಚಿಯಿರುವದಿಲ್ಲ. ಆಯರ್ಲಂಡ, ಡೆನ್ಮಾರ್ಕ ಮುಂತಾದ ದೇಶಗಳಿಂದ ರಪ್ತಾಗಿ ಇಂಗ್ಲಂಡಕ್ಕೆ ಆಮದಾಗುವ ತತ್ತಿಗಳು ಬಹಳ ಹಸಿದಿದ್ದು ರುಚಿಕರವಾಗಿರುತ್ತವೆ. ಆದ್ದರಿಂದ ಇಂಗ್ಲಂಡದಲ್ಲಿ ತಯಾರಾಗುವ ತತ್ತಿಗಳ ಮೇಲೆ ಹೊಡೆಯುವ ಮುದ್ರೆಯಲ್ಲಿ ಅವು ತಾರೀಖನ್ನು ತೋರಿಸುವ ಏರ್ಪಾಟಾಗಬೇಕೆಂದು "ಮೆಂಚೆಸ್ಟರ ಗಾರ್ಡಿಯನ್" ಪತ್ರಿಕೆಯು ಸೂಚಿಸಿರುವದು. ಇಂಗ್ಲಂಡ ದೇಶವು ಸ್ವದೇಶೀಯ ವಸ್ತುಗಳ ಆಶ್ರಯದಿಂದ ಆರ್ಥಿಕ ಸ್ವಾತಂತ್ರ್ಯವನ್ನು ಬಲಪಡಿಸಿಕೊಳ್ಳುತ್ತಿರುವಾಗ, ಹಿಂದುಸ್ಥಾನದವರು ಹತ್ತಿ ಬೆಳಸಬೇಕು, ಬಿಡಲ ಬೀಜ ಬೆಳಸಬೇಕು, ಇಂಗ್ಲಂಡದವರು ಅರಿವೆ ನೇಯಬೇಕು, ಬಿಡಲ ಎಣ್ಣೆ ತಯಾರಿಸಬೇಕು, ಮತ್ತು ಅವನ್ನು ಹಿಂದುಸ್ಥಾನದವರು ಉಪಯೋಗಿಸಬೇಕು. ಹಿಂದುಸ್ಥಾನದಲ್ಲಿ ಹಿಂದುಸ್ಥಾನ ಸರಕಾರವು ಸ್ವದೇಶೀ ಪುರಸ್ಕಾರ ಮಾಡುವದಿಲ್ಲ. ದೇಶಾಭಿಮಾನಿಗಳು ಪುರಸ್ಕಾರ ಮಾಡಿದರೆ, ರಾಜದ್ರೋಹವಾಗುತ್ತದೆ. ಇದೊಂದು ಸ್ವಾತಂತ್ರ್ಯ ಪಾರತಂತ್ರ್ಯಗಳೊಳಗಿನ ಭೇದವು.

***

ವಿದ್ಯಾರ್ಥಿಗಳ ಸಂಪು

ಬಡೋದಾ ಸಂಸ್ಥಾನದ ಅಮರೇಲಿಯಲ್ಲಿ ಒಂದು ಇಂಗ್ಲಿಷ ಶಾಲೆಯಿದೆ. ಆ ಶಾಲಾಧಿಕಾರಿಗಳು ಶಾಲೆಯ ಫೀಯನ್ನು ಇಮ್ಮಡಿ ಮಾಡಿದರು. ವಿದ್ಯಾರ್ಥಿಗಳು ಈ ಕೃತ್ಯದ ವಿರುದ್ಧ ನಿಷೇಧ ಮಾಡಿದಾಗ್ಯೂ, ಅಧಿಕಾರಿಗಳು ಕಿವಿಗೊಡದ್ದರಿಂದ, ವಿದ್ಯಾರ್ಥಿಗಳು ಶಾಲೆಗೆ ರಾಮರಾಮ ಹೇಳಿದರು. ಬಡೋದೆಯ ವಿದ್ಯಾಧಿಕಾರಿಗಳಿಗೆ ವಿದ್ಯಾರ್ಥಿಗಳು ತಂತಿ ಮೂಲಕ ನಿವೇದನವನ್ನು ತಿಳಿಸಲು, ಫೀಯನ್ನು ಹಳೆ ಪ್ರಮಾಣದಿಂದ ಪಡಿಸುವದಾಗಿ(?) ವಿದ್ಯಾಧಿಕಾರಿಗಳು ತಿಳಿಸಿದರು. ಸಂಪಿನ ಸುದ್ದಿಯಾದ ಬಳಿಕ, ರಿವಾಜು ವಿದ್ಯಾರ್ಥಿಗಳಿಗೆ ಶಾಲೆಗೆ ಹೋಗಬೇಕಾಗಿಯೂ ಈ ಕುರಿತು ಮುಂದೆ ವಿಚಾರವಾಗುವದಾಗಿಯೂ ವಿದ್ಯಾರ್ಥಿಗಳಿಗೆ ತಂತಿಮೂಲಕ ತಿಳಿಸಿದ್ದಾರೆ. ಬಡೋದೆಯ ಹೈಸ್ಕೂಲಿನ ವಿದ್ಯಾರ್ಥಿಗಳೂ ಈ ಕುರಿತು ನಿಷೇಧ ಪ್ರದರ್ಶಿಸಿರುವರು. ಅಮರೇಲಿಯೊಳಗಿನ ಪ್ರಮುಖ ನಾಗರಿಕರು ಸಂಪುಗಾರ ವಿದ್ಯಾರ್ಥಿಗಳಿಗೆ ವಿದ್ಯಾರ್ಜನದ ವ್ಯವಸ್ಥೆ ಮಾಡಿರುವರು.

***

ಆತ್ಮಸಮಾಧಿಯಿಂದ ಉಪೋಷಣ

ರಾವಲಪಿಂಡಿ ಜಿಲ್ಲೆಯ [illegible] ಗ್ರಾಮದಲ್ಲಿ ಸನಿಯಪ್ಪನ್‌ರೆಂಬೊಬ್ಬ ಸನ್ಯಾಸಿಗಳಿರುವರು. ಇವರ ಗುರುಗಳು ೪೦ ದಿವಸಗಳವರೆಗೆ ಉಪವಾಸ ಮಾಡಬೇಕೆಂದು ಆಜ್ಞೆ ಮಾಡಿದ್ದಂತೆ ಉಪೋಷಣ ಪ್ರಾರಂಭ [illegible] ದಿನಗಳವರೆಗೆ ಅನ್ನ ಜಲ ಕೂಡ ಸ್ವೀಕರಿಸದಂತೆ ಸನಿಯಪ್ಪನ್‌ರವರು ನೆಲದಲ್ಲಿ ಹುಗಿದುಕೊಂಡಿರಬೇಕೆಂದು ಆಜ್ಞೆ [illegible]. ಆದರಂತೆ ಕಳೆದ ಫೆಬ್ರುವರಿ ೧ನೇ ತಾರೀಖಿಗೆ ಸನಿಯಪ್ಪನ್‌ರವರು ಒಂದು ದೊಡ್ಡ ತಗ್ಗು(?) ಯನ್ನು ಅಗೆಸಿ ಅದರೊಳಗೆ ತಾವು ಕೂತುಕೊಂಡರು. ತಲೆಯ ಮೇಲೆ ಒಂದು ಹಲಿಗೆಯನ್ನಿಟ್ಟುಕೊಂಡು ಮೇಲೆ ಮಣ್ಣು ಹಾಕಿಕೊಂಡರು. ಈ ಕೆಲಸವನ್ನೆಲ್ಲ ಸನಿಯಪ್ಪನ್‌ರವರ ಆಪ್ತೇಷ್ಟರಿಂದಲೂ ಗುರುಗಳ ಆಜ್ಞೆಯಿಂದಲೂ ಗಸ್ತಾಗಿ ನೆರವೇರಿತು. ಸರಿಯಾಗಿ ೪೦ ದಿನಗಳ ಬಳಿಕ, ಸನಿಯಪ್ಪನ್‌ರವರಿಗೆ ಮೇಲಕ್ಕೆತ್ತಬೇಕೆಂದು ಎಲ್ಲರ ಆಲೋಚನೆಯಿತ್ತು. ಆದರೆ ೯ ದಿನಗಳ ಬಳಿಕ, ಪೋಲೀಸರಿಗೆ ಹ್ಯಾಗೋ ಈ ಸುಳಿವು ಹತ್ತಿತು. ಸರ್ಕಲ್ ಇನ್ಸಪೆಕ್ಟರರು ಪೋಲೀಸ ಸಿಪಾಯಿಗಳೊಡನೆ ಅಲ್ಲಿ ಹೋಗಿ ತಗ್ಗಿನಲ್ಲಿಯ ಮಣ್ಣನ್ನು ಅಗಿಸಹತ್ತಿದರು. ಸನಿಯಪ್ಪನ್‌ರವರ ಆಪ್ತರೂ ಸಹಕಾರಿ ಶಿಷ್ಯರೂ ಬಹಳ ಹೆದರಿಕೊಂಡರು. ಆದರೂ ಪೋಲೀಸರು ಕೇಳಲಿಲ್ಲ. ತಗ್ಗಿನೊಳಗಿಂದ ತೆಗೆದರು. ಸನಿಯಪ್ಪನ್‌ರವರು ಜೀವಂತರಿದ್ದರು. ಡಾಕ್ಟರರು ತಪಾಸ ಮಾಡಿ ನೋಡಿದರು. ಆಗ ನಾಡಿಯ ಚಲನವು ೧೨೦ ಮತ್ತು ಶ್ವಾಸೋಚ್ಛ್ವಾಸವು ೩೦ ಇತ್ತು. ಡಾಕ್ಟರರು ಇಷ್ಟು ಬೇಗನೆ ಅಗೆದು ತೆಗೆದದ್ದು ಒಳ್ಳೇದಾಯಿತೆಂದು ಅಭಿಪ್ರಾಯಪಟ್ಟರು. ಶ್ರೀ ಸನಿಯಪ್ಪನ್‌ರವರಿಗೆ ಗುರುಗಳ ಆಜ್ಞೆಯಂತೆ ತಮ್ಮ ಪ್ರಯೋಗವನ್ನು ಪೂರ್ಣವಾಗಿ ನೆರವೇರಿಸಗೊಟ್ಟಿದ್ದರೆ, ಭಕ್ತಿಯ ಪ್ರಭಾವದಿಂದ ೪೦ ದಿನಗಳವರೆಗೆ ಅವರು ಬದುಕುತ್ತಿದ್ದರೋ ಇಲ್ಲವೋ ತಿಳಿಯುತಿತ್ತು. ಅದೇನು ಆತ್ಮಹತ್ಯೆಯ ಅಪಕೃತ್ಯವಲ್ಲ. ತಪಃಸಿದ್ಧಿಯ ಪ್ರಯೋಗವು. ಅಂಥ ಪ್ರಯೋಗಗಳನ್ನು ಮಾಡುವವರಿಗೆ ಪೋಲೀಸರು ಅಡ್ಡಗಟ್ಟುವದು ಸಿಂಧುವಲ್ಲ.

***

ಕೈರಾಟಿಯ ಪ್ರಸಾರ

ಮೈಸೂರಿನಲ್ಲಿ ಮಹಾರಾಜರವರು ಕೈರಾಟಿಯ ಪುರಸ್ಕರ್ತರಾಗಿರುವರು. ತಮ್ಮ ಅರಮನೆಯಲ್ಲಿ ಕೈರಾಟಿಯನ್ನು ಬಳಕೆ ಮಾಡಿಕೊಂಡಿರುವರು. ತಮ್ಮ ಸ್ವಂತ ಖರ್ಚಿನಿಂದ ಅನೇಕ ಕೈರಾಟಿಗಳನ್ನು ಪೂರೈಸಿರುವರು. ಕೈರಾಟಿಯ ಶಿಕ್ಷಣ ಕೊಡಲು ಶಿಕ್ಷಕರನ್ನು ನೇಮಿಸಿರುವರು. ಸರದಾರ(?) ಕುಟುಂಬದವರು ತಮ್ಮಲ್ಲಿ ಮಹಾರಾಜರ ಅನುಗ್ರಹಕ್ಕೆ ಪಾತ್ರವಾದ ಕೈರಾಟಿಗೆ ಪ್ರವೇಶ ಕೊಟ್ಟಿರುವರು. ಖಾದಿಯ ಸಹಕಾರಿ ಉದ್ಯಮವೊಂದಿದೆ. ಆ ಉದ್ಯಮದೊಳಗಿಂದಲೇ ಮಹಾರಾಜರವರು ತಮ್ಮ ಅರಮನೆಯಲ್ಲಿ ಬೇಕಾದ ಸಾಮುಗ್ರಿಗಳನ್ನು ಖರೀದಿ ಮಾಡುತ್ತಿರುವರು. ಔದ್ಯೋಗಿಕ ಖಾತೆಯವರು ಜಾತ್ರೆಯ ಸಮಯ ಖಾದಿಯ ಪ್ರದರ್ಶನಗಳನ್ನು ಸೇರಿಸಿ ಪ್ರೋತ್ಸಾಹನ ಕೊಡುತ್ತಿರುವರು. ಉತ್ತಮ ಪ್ರತಿಯ ಕೈರಾಟಿಗಳು ೫॥ ರೂಪಾಯಿಗಳಿಗೆ ಮಾರಾಟಕ್ಕೆ ಸಿಗುವಂತೆ ಬೇಸಾಯ ಖಾತೆಯವರು ವ್ಯವಸ್ಥೆ ಮಾಡಿರುವರು. 'ರಾಜಾ ಬೋಲೆ ದಳ ಹಾಲೇ' ಮಹಾರಾಜರು ಖಾದಿಯ ಪುರಸ್ಕರ್ತರಾದ ಮೇಲೆ, ಇಡೀ ರಾಜ್ಯಯಂತ್ರವು ಖಾದಿಯನ್ನು ಪುರಸ್ಕರಿಸಹತ್ತಿತು. ಪ್ರಜಾಹಿತದಕ್ಷ ಪ್ರಜಾಕ್ಷೇಮ ಚಿಂತಕ ಪ್ರಜಾನುರಂಜಕ ಮಹಾರಾಜರಿದ್ದರೆ ಒದಗುವ ಲಾಭಗಳಿವು! ಇದೇ ಸಮಯ ಮದ್ರಾಸ ಮ್ಯುನಿಸಿಪಾಲಿಟಿಯವರು ಕೈಕೆಳಗಿನ ತೀರ್ಮಾನವನ್ನೊಂದು ಹೇಳಿರುವಷ್ಟೆ. ತಮ್ಮ ಸೇವಕರೆಲ್ಲ ಖಾದಿಯ ಅರಿವೆ ಅಂಚಡಿಗಳನ್ನು ಧರಿಸಬೇಕೆಂದು ಮದ್ರಾಸ ಮ್ಯುನಿಸಿಪಾಲಿಟಿಯವರು ತೀರ್ಮಾನ ಮಾಡಿರುವರು. ಸಮಸ್ತ ಶಾಲೆಗಳಲ್ಲಿಯೂ ಒತ್ತಾಯದಿಂದ ಕೈನೂಲು ತೆಗೆಯಲು ಕಲಿಸಬೇಕೆಂದೂ ನಿರ್ಧರಿಸಲಾಗಿದೆ.

***

ಚೀನದಲ್ಲಿ ಬ್ರಿಟಿಶರ ಸ್ಥಿತಿ

ಚೀನ ದೇಶದಲ್ಲಿ ಬ್ರಿಟಿಶರ ಪ್ರತಿಷ್ಠೆಯು ಕುಗ್ಗಿದೆ. ಬಹಳ ಕುಗ್ಗಿದೆ. ಹೇರಳವಾಗಿ ಕುಗ್ಗಿದೆ! ಬ್ರಿಟಿಶರಿಂದ ಕಾಂಟನ್‌ದಲ್ಲಿ ಚೀನದವರಿಗೆ ಸಂತಾಪವಾಗುತ್ತದೆ. ಬ್ರಿಟಿಶ ಸಾಮಾನುಗಳ ಬಹಿಷ್ಕಾರವು ಕಡುತರವಾಗಿ ಸಾಗಿದೆ. ಈ ಕಾರಣ ಬ್ರಿಟಿಶರು ಸಾವಿರಾರು ವಸ್ತುಗಳನ್ನು ಮಾರಲು ಮಾಡಿದ್ದರೂ ಅವರ ಕಾಟವೇನೂ ಸಾಗಲಿಲ್ಲ. ಚೀನದ ಬಹಿಷ್ಕಾರದಿಂದ ಬ್ರಿಟಿಶರ ವ್ಯಾಪಾರಕ್ಕೆ ಕೀಲುಬಿದ್ದಂತಾಗಿದೆ. ವ್ಯಾಪಾರವು ಹೋಗಲಿ, [illegible] ವಿಚಾರಿಸಲಿಕ್ಕೂ ಮಾರ್ಗವಿಲ್ಲ. ಬ್ರಿಟಿಶರಿಗೆ ಚೀನದವರು ನಡಿಸಿಕೊಳ್ಳುವ ನಡಾವಳಿಯು ಮೊದಲಿಂದ ತೋರುವ ಚೀನದವರ ಸೊಕ್ಕು ಮುರಿಯಬೇಕೆಂದು ಹಾಂಕಾಂಗ ಪೆಟ್ರೋಲಿಯಮ್ ಕಂಪನಿಯ ಅಧ್ಯಕ್ಷರಾದ ಸರ್ ರೊಬರ್ಟ್ ಹಾಲೆಕೊಹೇನ್‌ರವರು ಪ್ರತಿಪಾದಿಸಿದರು. ಚೀನದವರಿಗೆ ಬಂದ ಆತಂಕವನ್ನು ಅವರು ಹೇಗೆ ವರ್ಣಿಸುವರೆಂದರೆ — ಅನೇಕ ಪ್ರತಿಷ್ಠಿತ ಪೇಢಿಗಳು ವ್ಯಾಪಾರದ ಸರಕಿಲ್ಲದೆ ಬಳಲುತ್ತಿವೆ. ಈ ಕಠಿಣಕಾಲದಲ್ಲಿ ಬ್ರಿಟಿಶ ವ್ಯಾಪಾರದ ವ್ಯಾಪ್ತಿಯನ್ನು ಚೀನ ದೇಶದಲ್ಲಿ ಬಹಳವಾಗಿ ಬೆಳೆಸಿ ಲಾಭಪಡೆಯಬೇಕೆಂದು ಆಲೋಚನೆಯಿತ್ತು. ಆದರಂತು ನಷ್ಟವಾಗಿದೆ. ಇಷ್ಟಲ್ಲದೆ ಚೀನದವರು ಬ್ರಿಟಿಶರಿಗೆ ನಡಿಸಿಕೊಳ್ಳುವ ಪ್ರಕಾರಗಳನ್ನು ಕೇಳಿರಿ. ಹಾಂಗಕಾಂಗದೊಳಗಿನ ಬ್ರಿಟಿಶ ಕಂಪನಿಯ ಪ್ರತಿನಿಧಿಗಳೊಬ್ಬರು ಬರೆದ ಪತ್ರದಲ್ಲಿ ಕೆಲವು ಹಕೀಕತುಗಳನ್ನು ಬರೆದಿರುವರು. ಚೀನ ದೇಶದ [illegible] ಎಂಬಲ್ಲಿ ಒಂದು ಬ್ರಿಟಿಶ ವಸಾಹತಿದೆ. ಅಲ್ಲಿ ಮೋಟಾರ ಬೋಟಿಯಲ್ಲಿ ಕೂತುಕೊಂಡು ಹೋಗಬೇಕು. ಕೆಂಟನ್(?) ಎಂಬ ಬ್ರಿಟಿಶ ಸಾಹೇಬರಿಗೆ ಮೋಟಾರ ಬೋಟಿಯಿಂದ ಅಲ್ಲಿ ಒಯ್ಯಲು ಚೀನದವರು ಒಪ್ಪಲಿಲ್ಲ. ಆದ್ದರಿಂದ ಸಾಹೇಬರು ಸ್ವತಃ ಮೋಟಾರ ಬೋಟ ನಡಿಸಿಕೊಂಡು ಹೋಗಬೇಕಾಯಿತು. ವಸಾಹತಿನಲ್ಲಿಯ ಬ್ರಿಟಿಶ ಅಧಿಕಾರಿಗಳಿಗೆ ನಿತ್ಯವೂ ಬೇಕಾಗುವ ಆಹಾರ ಸಾಮುಗ್ರಿಗಳನ್ನೆಲ್ಲ ಬ್ರಿಟಿಶರೇ ಸ್ವಂತಕೈಯಿಂದ ತಂದುಕೊಳ್ಳಬೇಕು. ಅಡಿಗೆ ಭಟ್ಟರೂ ಅವರೇ, ಮಡಿವಾಳರೂ ಅವರೇ, ಮನೆ ಆಳೂ ಅವರೇ. ಇಷ್ಟೆಲ್ಲ ಮಾಡಿಕೊಂಡು ಚೀನದವರ ಆಘಾತದಿಂದ ವಸಾಹತನ್ನು ಕಾಪಾಡಿಕೊಳ್ಳಬೇಕಾಗಿದೆ. ಸ್ವಾಟೋ ಎಂಬ ವಸಾಹತಿನಲ್ಲಿಯೂ ಇದೇ ಕಥೆ. ಹಾಂಗಕಾಂಗದೊಳಗಿಂದ ಬೋಟಿಯ ಮೇಲಿಂದ ದಿನಾ ಆಹಾರವನ್ನು ಬ್ರಿಟಿಶರು ತಂದುಕೊಳ್ಳಬೇಕು. ತಪ್ತ ಬಿಸಿಲಿನಲ್ಲಿ ಬೋಟಿಯ ಮೇಲೆ ಹತ್ತಿ ಬಳಿ ಉಗ್ರಾಣದಲ್ಲಿ ಸೇರಿ, ಆಹಾರ ಸಾಮುಗ್ರಿಗಳನ್ನು ಹೊತ್ತುಕೊಳ್ಳಬೇಕು. ಯಾವ ಕೆಲಸಕ್ಕೂ ಚೀನದವರು ಬ್ರಿಟಿಶರಿಗೆ ಎಳ್ಳಷ್ಟು ನೆರವಾಗುವದಿಲ್ಲ. [illegible] ದಲ ಸಹವಾಸಕ್ಕೆ ಹೋಗುವದಿಲ್ಲ. ಮತ್ತೊಂದು

ವು ಬ್ರಿಟಿಶರಿಗೆ [illegible] ಯುರೋಪಿಯನ್ನರ ಸಂಖ್ಯೆ ಸಿಗುವದಿಲ್ಲ ಯಾಕೆಂದರೆ, ಬ್ರಿಟಿಶರಿಗೆ ಅವರು ಸೇವಾ ಗಳೋದರೆ, ತಮ್ಮಮೇಲೆ ಅಪವಾದ ಗಳಿಯಾಗುವದೆಂದು ಅವರು ಹೆದರುತ್ತಾರೆ. ಚೀನದವರು ಅನ್ಯರೆಂದು ತಿಳಿ ಗೊಂಡವನ್ನು ರಚಿಸುತ್ತಾರೆ ಈ ವರೆಗೆ ಚೀನದ ಕೂಲಿಯಾಳುಗಳಿಂದ ಮಾಡಿಸಿಕೊಳ್ಳುತ್ತಿದ್ದ ಚಿಕ್ಕ ಚಿಕ್ಕ ಕೆಲಸಗಳನ್ನು ಈಗ ಸ್ವತಃ ಬ್ರಿಟಿಶ ಸಾಹೇಬರು ಮಾಡು ತ್ತಿರುವಾಗ, ಚೀನದವರು ದೂರ ನಿಂತು ಹೀಯಾಳಿಸು ತ್ತಾರೆ. ಇದರ ಮೇಲಿಂದ ಚೀನ ದೇಶದಲ್ಲಿ ಬ್ರಿಟಿಶರು ಗಳಿಸಿದ ಮಹದ ಕೀರ್ತಿ ಕುಂದಿ ಹೋಗಬಹುದಾಗಿತ್ತೆಂದು ಹೇಳಬಹುದು.

ಧುರೀಣನ ಸತ್ಯಾಪಲಾಪ

ರಾ ರಾ| ಕರ್ನಾಟಕವೃತ್ತದ ಪತ್ರಕರ್ತರಿಗೆ—

ತಮ್ಮ ತಾರೀಖು ೮-೨-೧೯೨೬ನೇ ಸಂಚಿಕೆಯಲ್ಲಿ "ಧುರೀಣನ ಸತ್ಯಾಪಲಾಪ" ಎಂಬ ಸದರದಲ್ಲಿ W. S. S. ಇವರು ಬರೆದ ಲೇಖವನ್ನು ನೋಡಿದ್ದರ ಮೇಲಿಂದ ಅವಶ್ಯ 'ಸತ್ಯಾಪಲಾಪ' ಅನ್ನಬೇಕೋ ಅಥವಾ ಮಿಥ್ಯಾ ಅಪವಾದ ಅನ್ನಬೇಕೋ ಎಂಬುದು ವಾಚಕರೇ ನಿಶ್ಚಯಿಸಲಿ.

ನಾನು ಮುಂಬಯಿಯಲ್ಲಿ ಗ್ರಾಂಟ ಮೆಡಿಕಲ್ ಕಾಲೇಜಿನಲ್ಲಿದ್ದಾಗ ನನ್ನ ಮಿತ್ರರಾದ ಮೈ| ರಾ| ಶಾಸ್ತ್ರಿ ರಾಮ ರಾಯರು ಪಠಾರಿ ಕೋರ್ಟಿನಲ್ಲಿ ರಜಿಸ್ಟ್ರರ' ಆಫೀಸಿ ನ ಇದ್ದರೆಂಬುದು ನಿಜ. ಮೈ| ರಾ| ಗಳ ನಿಧನದ ದುಃಖ ಕರ ವಾರ್ತೆಯು ನನಗೆ ತಿಳಿದ ಮುಂಗಳವಾರ ತಾರೀಖು ೩—೨—೧೯೨೬ ನೇ ದಿವಸ ಮಧ್ಯಾಹ್ನಕ್ಕೆ ಅಂದರೆ, 'ಧುರೀಣ' ಪತ್ರವು ಹೊರಡುವ ಸಮಯಕ್ಕೇನೇ ನನಗೆ ತಿಳಿದದ್ದಾಗಿರುತ್ತದೆ. 'ಧುರೀಣ' ಪತ್ರಕ್ಕೆ ಮಾಹಿತಿ ನಾನು ಪೂರೈಸಿದೆಂಬುದು ಕೇವಲ ಸುಳ್ಳು ಅದುತ್ತರ ಆ ಆ ಕಾಲಕ್ಕೆ ಮಾಹಿತಿ ಕೊಡ ತಮ್ಮ ಸಮಯವು ಇದ್ದಿಲ್ಲೆಂಬು ದು ಕೂಡಾ ಸಹಜ ಕಾಣುವಂತ ಇದೆ 'W. S. S ರ ಬಾಳು ಎಂಬುದು ಬರೇ ಕಲ್ಪನೆ ಸಂಗತಿ ಎಂತ ನಾನು ತಿಳಿಯಬೇಕಾಗುತ್ತದೆ 'ಧುರೀಣ' ಪತ್ರಕರ್ತರಾಗಲೀ, ಅವರ ವರ್ತನೆ ಬೀರಿಸುವರಾಗಲೀ, ನನ್ನ ಕಡೆಗೆ ಮಾಹಿ ತಿ ಬಗ್ಗೆ ಯಾರೂ ಬಂದದ್ದು ಇಲ್ಲ. ಏನೂ ಕಾರಣವಿಲ್ಲದೆ ನನ್ನ ಹೆಸರು ಯಾಕೆ ಮುಂದೆ ತಂದರೆಂಬುದು W. S. S ರೇ ಗೊತ್ತು. ಮಾನ್ಯರೇ ಇದ್ದ ಸಂಗತಿ ಇದರ ಮೂಲ ಕ ಬಹುಗಿ ಜಾಹೀರ ಮಾಡಿದ್ದು, ತಮ್ಮ ಬರೇ ಸಂಚಿಕೆ ಯಲ್ಲಿ ಪ್ರಕಟಿಸಬೇಕಾಗಿ ವಿನಂತಿ ಮಾಡುತ್ತೇನೆ

Kumta, 14-2-1926 } R. V. KALYANPURKAR

***

ಕರ್ನಾಟಕವೃತ್ತ ಪತ್ರಕರ್ತರ ಬಳಿಗೆ—

ವಿ. ವಿ ರಾ| ಕಲ್ಯಾಣಪುರಕರರ ಪತ್ರ ನೋಡಿದೆ ರಾ| ಕಲ್ಯಾಣಪುರಕರರು ಸುಳ್ಳು ಬರೆಯುತ್ತಾರೆಂದು ನಾನು ಹೇಳಲಾರೆ, ನನಗೆ ಸಿಕ್ಕ ಮಾಹಿತಿಯು ನಿರಾಧಾರ ವಾದದ್ದೆಂದೂ ನಾನು ಹೇಳಲಾರೆ. ನೀವು ಛಾಪಿಸಿದ ಪತ್ರ ದಲ್ಲಿ ಒಂದು ತಪ್ಪಾಗಿದೆ. ಅದು ಮುದ್ರಣದೋಷವಿರ ಬಹುದು "ರಾ| ಶಾಸ್ತ್ರಿಗಳ ವಿನಂತಿಯ ಮೇರೆಗೆ" ಎಂತ ನಾನು ಬರೆದದ್ದಲ್ಲ, "ರಾ| ಶಾಸ್ತ್ರಿಗಳ ವಿನಂತಿ ಯ ಮೇರೆಗೆ" ಎಂದು ನಾನು ಬರೆದಿದ್ದೆ. ರಾ| ಶಾಸ್ತ್ರಿಗಳೆಂದರೆ, ಬಾ| ಕಡಾಕ ಮಹಾಬಲೇಶ್ವರ ಶಾಸ್ತ್ರಿಗಳು, ಪೆ ನ್ಶನರ್, 'ಕಾನಡಾ ಧುರೀಣ,' ಕುಮಟಾ ಇವರಾಗಿರು ವರು. ಇವರೇ ರಾ| ಕಲ್ಯಾಣಪುರಕರರ ಹೆಸರನ್ನು ನನ ಗೆ ಹೇಳಿದ್ದು. ಅವರು ಸುಳ್ಳು ಹೇಳಿದ್ದರೆ, ನನ್ನ ಉಪಾ ಯವಿಲ್ಲ. ರಾ| ಶಾಸ್ತ್ರಿಗಳಿಗೂ, ರಾ| ಕಲ್ಯಾಣಪುರಕರರಿ ಗೂ ಚಲೋ ಸ್ನೇಹವಿದ್ದಾಗ, ಬಯಾಗ್ರಫಿ ಮಾಹಿತಿ ಕೊಟ್ಟು ನಿಷ್ಕಾರಣವಾಗಿ ಅವರ ಹೆಸರು ಬರೆದಿತ್ತು. ನನ

[ಕಡೇ ಪಾನಿನ ಕೊನೆ ನೋಡಿರಿ]

ಪ್ರಕಟನೆ

ದಿ ಓರಿಯಂಟಲ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂಪನಿ, ಬೆಂಗಳೂರ—

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೨೬ನೆಯ ಇಸ್ವಿ ಜನೇವರಿ ೨೧ನೆಯ ತಾರೀಖಿನ ದಿವಸ ಸಾಯಂಕಾಲ ೫—೩೦ ಘಂಟೆಗೆ ಈ ಕಂಪನಿಯ ಹೆಡ್ ಆಫೀಸಿನಲ್ಲಿ ಬಹಿರಂಗವಾಗಿ ಜರುಗಿದ್ದು ಡೆಪ್ಯುಟಿ ಬೋರ್ಡ ಆಫ್ ಡಾಯರೆಕ್ಟರ್ಸ್ ಚೇರಮನ್ನರಾದ ಡಾಕ್ಟರ ರಾ| ಕೆ ಎಸ್ ಅಯ್ಯಂಗಾರ L.R.C.P. M R C S ಇವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ಬಿದ್ದು ಇನ್ನು ಪ್ರತಿ ಒಬ್ಬರಿಗೆ ೧೦೦೦ ರೂಪಾಯಿಗಳ ಸೂಲವು ದೊರೆಯಬೇಕೆಂದು ನಿರ್ಣಯವಾಯಿತು

(೧)	ಬಾಂಡ ನಂಬರ ೫೬೭೦	ವಿ ವಿಠ್ಠಲ ಚಿಮ್ಮಾಜಿ ಸೇಟ್ ಕಲಾಸ ಆಲಿಬಾಗ ಮುಂಬೈ	೧೦೦೦
(೨)	ಬಾಂಡ ನಂ| ೧೩೩೭೭	ಮಿ| ರಂಗಪ್ಪ ವ್ಯಾಪಾರಿಗಳ ಮುಲಿಕುಂಟೆ, ಪೋಸ್ಟ ಸಿರಾ. ತಾಲೂಕ ಸಿರಾ, ಜಿಲ್ಲಾ ಟುಮಕೂರ	೧೦೦೦
(೩)	ಬಾಂಡ ನಂ| ೧೧೯೯೭	ಮಿ| ವೆಂಕಟರಮಣ ವೆಂಕಟರಮಣ ಹೆಗಡೆ, ಸೀತ್ಕುರಿ, ಪೋಷ್ಟ ಕಳಚೆ, ಹೊನ್ನಾವರ ತಾ| (ನಾರ್ಥ ಕ್ಯಾನರಾ) ಜಿಲ್ಲಾ	೧೦೦೦
(೪)	L B C " ೧೮೩೩	ಮಿ| ಜಿ. ವೆಂಕಟಪ್ಪ ಮರ್ಚಂಟ ಮತ್ತು ಕಮೀಶನದಾರ. ಬ್ರುಸಪೇಟ, ಬಳ್ಳಾರಿ.	೧೦೦೦
(೫)	" ೨೫೦	ಮಿ| ರಾಮಚಂದ್ರ ವಾಮನ ಕಾಂಡೇಕರ c/o ಕಾಲೂಸ್ಕರ ವಾಡಾ, ಪ್ಯಾರೇಸ ರೋಡ, (ಬರೋಡಾ)	೧೦೦೦
(೬)	" ೧೮೪೦	ಮಿ| ಆರ್ ಎಚ್ ನಾಡಿಗೇರ್, ಮಾಸ್ತರ, ಗವರ್ನಮೆಂಟ ಸಿಟಿ ಹಾಯಸ್ಕೂಲ, ಹೈದರಾಬಾದ (ದಕ್ಷಿಣ)	೧೦೦೦

ಬಿ. ಎಸ್. ಆರಾಧ್ಯ.

ಮುಂಬಯಿ ಇಲಾಖೆಯ, ಚೀಫ್ ಏಜಂಟ, ಹುಬ್ಬಳ್ಳಿ.

ಆಶ್ಚರ್ಯಕರ! ಅಮೇರಿಕಾ ಖಂಡದ ಆಶ್ಚರ್ಯಕರ!!

ಪ್ರಸಿದ್ಧ ಡಾಕ್ಟರನೊಬ್ಬನು ಕಂಡು ಹಿಡಿದ ಸಿದ್ಧೌಷಧ !

ಸರ್ವರೋಗ ನಿವಾರಣೆಯಾಗುವ ಸಂಜೀವನೌಷಧವನ್ನು ಕಂಡು ಹಿಡಿಯುವದಕ್ಕಾಗಿ ಅಮೇರಿಕಾ ಖಂಡದ ಪ್ರಖ್ಯಾತ ಡಾಕ್ಟರನೊಬ್ಬನು ಅನೇಕ ವರ್ಷಗಳಿಂದ ಬಹು ಧನ ನಷ್ಟ ಮಾಡಿಕೊಂಡು ಸಂಶೋಧನಗಳನ್ನು ಮಾಡಿ ಕೊನೆಯಲ್ಲಿ

ಎಲಿಕ್ಸಿರ್ ಆಫ್ ಲೈಫ್

ಅಥವಾ

ಜೀವನಾಧಾರ

ಎಂಬ ಔಷಧವನ್ನು ಸಿದ್ಧಿಗೊಳಿಸಿರುವನು. ಅನುಭವಪೂರ್ವಕದಿಂದ ಅನೇಕ ರೋಗಗಳಿಗೆ ಎಂದರೆ, ಅಗ್ನಿಮಾಂದ್ಯ, ಅಜೀರ್ಣ, ಹೊಟ್ಟೆ ಅಥವಾ ತಲೆ ಭಾರವಾಗಿರುವದು, ಅತಿಸಾರ, ವಾಂತಿ, ಭೇದಿ ಅಥವಾ ಕಾಲರಾ, ತಲೆನೋವು, ನೆಗಡಿ, ಮಲೇರಿಯಾ ಜ್ವರ, ಇತರ ವಿವಿಧವಾದ ಜ್ವರಗಳು, ಮಾನಸಿಕ ದೌರ್ಬಲ್ಯ, ಕಲ್ಲು ಮುಳ್ಳು ಕಿವಿ ನೋವು ಮೂಲವ್ಯಾಧಿ, ನಾಯಿಕೆಮ್ಮು, ಸ್ತ್ರೀವ್ಯಾಧಿ ಮುಂತಾದ ಎಲ್ಲಾ ಬಗೆಯ ಸಾಂಕ್ರಾಮಿಕ ರೋಗಗಳಿಗೆ, (ಇನ್‌ಫ್ಲೂಯೆಂಜಾ, ಪ್ಲೇಗು,) ಹಾವು, ಚೇಳು, ಮುಂತಾದ ವಿಷ ಜಂತುಗಳ ಕಡಿತಕ್ಕೆ, ಬಾಲಗ್ರಹ ಇವೇ ಮುಂತಾದವುಗಳಿಗೆ ಈ ಜೀವನಾಧಾರವನ್ನು ಕೊಟ್ಟು ಗುಣಪಡಿಸಿರುತ್ತಾನೆ. ಊರಲ್ಲಿ ಸಾಂಕ್ರಾಮಿಕ ರೋಗವಿರುವಾಗ ಇದನ್ನು ಅಲ್ಪ ಪ್ರಮಾಣದಲ್ಲಿ ಉಪಯೋಗಿಸುತ್ತಿದ್ದರೆ ಯಾವ ರೋಗವೂ ಬರುವದಿಲ್ಲ. ಈ ಜೀವನಾಧಾರವೆಂಬ

ಸಂಜೀವನೌಷಧ

ಒಂದು ಸೀಸೆಯು ಪ್ರತಿ ಮನೆಯಲ್ಲಿ ಅಥವಾ ಪ್ರತಿ ಒಬ್ಬರ ಜೇಬಿನಲ್ಲಿದ್ದರೆ ಅನುಭವಸ್ಥನಾದ ಡಾಕ್ಟರನಿದ್ದಂತೆಯೇ. ಡಾಕ್ಟರರಿಗೆ ಕೊಡಬೇಕಾದ ಫೀಜುಗಳನ್ನು ಈ ಜೀವನಾಧಾರವೆಂಬ ಡಾಕ್ಟರನಿಗೆ ಕೊಡಬೇಕಾದ್ದಿಲ್ಲ. ಸೀಸೆ ಒಂದಕ್ಕೆ ರೂ. ೧-೮-೦ ಟಪಾಲು ಖರ್ಚು ಪ್ರತ್ಯೇಕ ಆರ್ಡರು ಬೇಕಾದವರು

ಜೀವನಾಧಾರ ಡಿಪೋ,

ಮೈಸೂರು.

ಬ್ರಾಂಚ.- ಜೀವನಾಧಾರ ಡಿಪೋ,

ಹುಬ್ಬಳ್ಳಿ.

ಕರ್ನಾಟಕವೃತ್ತ.

ಮಿತಿ ಕ್ರೋಧನಸಂ| ಫಾಲ್ಗುಣ ಶು| ೧೦ ಮಿ ಸೋಮವಾರ.

"ಲೋಕಮತವಿಲ್ಲ."

ನಮ್ಮ ಹಿಂದುಸ್ಥಾನ ಸರಕಾರವು ನಮ್ಮ ಕರ್ನಾಟಕವನ್ನು ಏಕೀಕರಣ ಮಾಡುವ ಉಪಾಯಯೋಜನೆ ಮಾಡಲು ಲೋಕಮತದ ಬೆಂಬಲವಿಲ್ಲದೆ ಬಳಲುತ್ತದೆ ನೋಡಿ! ಮದ್ರಾಸಿನ ಡಾ| ಯು. ರಾಮರಾಯರು ಫೆಬ್ರುವರಿ ತಾರೀಖು ೧೭ನೇಗೆ ದಿಲ್ಲಿಯಲ್ಲಿ ಸೇರಿದ ಕೌನ್ಸಿಲ್ ಆಫ್ ಸ್ಟೇಟ್ ಯಾನೆ ಹಿರಿಯರ ಸಭೆಯಲ್ಲಿ ಚೆದರಿಬಿದ್ದ ಕರ್ನಾಟಕವನ್ನು ಒತ್ತಟ್ಟಿಗೆ ಸೇರಿಸುವ ಉಪಾಯಯೋಜನೆ ಮಾಡಲು ಮಂಡಳವನ್ನೊಂದು ನೇಮಿಸಬೇಕೆಂದು ಸೂಚಿಸಿದರು. ಈ ಸೂಚನೆಗೆ ಸರಕಾರವು ಲೋಕಮತವಿಲ್ಲವೆಂದು ಕಲ್ಲು ಹೊಡೆದು ವಿರೋಧಿಸಿತು. ಈ ಕುರಿತು ಪ್ರಾಂತಿಕ ಕಾಯಿದೆ ಕೌನ್ಸಿಲುಗಳಲ್ಲಿ ಚರ್ಚೆನಡಿಸಬೇಕಾಗಿಯೂ ಡಾ|ರಾಮರಾಯಪ್ರಭೃತಿ ಕರ್ನಾಟಕ ಏಕೀಕರಣಪುರಸ್ಕರ್ತರಿಗೆ ಸರಕಾರದ ಅನುಜ್ಞೆಯಾಗಿದೆ.

ಲೋಕಮತವಿಲ್ಲವೆಂದರೇನು? ಡಾ| ರಾಮರಾಯರವರು ಸೂಚಿಸಲಿಕ್ಕಿದ್ದ ಕರ್ನಾಟಕದ ಏಕೀಕರಣದ ತೀರ್ಮಾನಕ್ಕೆ ಕರ್ನಾಟಕದೊಳಗಿನ ಅಲ್ಲಲ್ಲಿಯ ಪ್ರಮುಖರೂ, ವೃತ್ತಪತ್ರಕಾರರೂ ತಮ್ಮ ತಮ್ಮ ವಿಚಾರಗಳನ್ನು ನಮೂದಿಸಿ ಬೆಂಬಲವನ್ನಿತ್ತಿರುವರು. ಈ ಕುರಿತು ಧಾರವಾಡ, ವಿಜಾಪುರ ಕಡೆಗಳಲ್ಲಿ ಸಾರ್ವಜನಿಕ ಸಭೆಗಳು ಕೂಡ ಸೇರಿ ತೀರ್ಮಾನಗಳಾಗಿವೆ ಮತ್ತು ಒಂದು ಪುರಾವೆಯಿದೆ. ರಾಷ್ಟ್ರೀಯ ಸಭೆಯು ಭಾರತೀಯರ ಲೋಕಮತದ ಪ್ರತಿಬಿಂಬವು. ಕರ್ನಾಟಕಸ್ಥರ ಮತದಿಂದಲೇ ರಾಷ್ಟ್ರೀಯ ಸಭೆಯವರು ಕರ್ನಾಟಕವನ್ನು ಒಂದು ಪ್ರಾಂತವನ್ನಾಗಿ ಏರ್ಪಡಿಸಿರುವರು. ರಾಷ್ಟ್ರೀಯ ಸಭೆಯು ಲೋಕಮತದ ಬೆಂಬಲವಿಲ್ಲದಿದ್ದರೆ, ಕರ್ನಾಟಕ ಪ್ರಾಂತವನ್ನು ಪ್ರತ್ಯೇಕ ರಚಿಸುತ್ತಿತ್ತೇನು? ರಾಷ್ಟ್ರೀಯ ಸಭೆಯಲ್ಲಿ ಪ್ರಾದುರ್ಭಾವವಾದ ಲೋಕಮತವು ಸರಕಾರಕ್ಕೆ ಮಾನ್ಯವಿಲ್ಲದಿದ್ದರೆ, ಅದಕ್ಕೆ ಯಾರದೇನುಪಾಯ?

ಸರಕಾರದ ಇನ್ನೊಂದು ಆಕ್ಷೇಪವೂ ನಿರಾಧಾರವಾದದ್ದಿದೆ. ಮುಂಬಯಿಯ ಕಾಯಿದೆ ಕೌನ್ಸಿಲಿನಲ್ಲಿ ಕರ್ನಾಟಕದ ಏಕೀಕರಣದ ಕುರಿತು ಹಿಂದೊಮ್ಮೆ ಠರಾವು ತಂದಾಗ ಈ ವಿಷಯವು ಅಖಿಲ ಭಾರತೀಯ ಸ್ವರೂಪದ್ದಿದ್ದರಿಂದ ಅಖಿಲ ಭಾರತೀಯ ಕೌನ್ಸಿಲು ಸಭೆಗಳಲ್ಲಿ ಚರ್ಚಿಸಬೇಕೆಂದು ತೀರ್ಮಾನವಾಗಿ, ಠರಾವು ತಿರಸ್ಕರಿಸಲ್ಪಟ್ಟಿತ್ತು ಈ ವಿಷಯವನ್ನು ಶ್ರೀ| ರಾಮದಾಸರವರು ಸಭಿಕರಿಗೆ ತಿಳಿಸಿದರು. ಆದರೂ, ತೀರ್ಮಾನವು ರದ್ದಾಯಿತು. ಪ್ರಾಂತಿಕ ಕೌನ್ಸಿಲುಗಳಲ್ಲಿ ಚರ್ಚೆ ಮಾಡಬಂದರೆ, ಅಖಿಲ ಭಾರತೀಯ ಕೌನ್ಸಿಲುಗಳಿಗೆ ಹೋಗಿರಿ, ಎಂದು ಹೇಳುವದು, ಅಲ್ಲಿ ಹೋದರೆ, ಇಲ್ಲಿ ಹೋಗಿರಿ, ಎಂದು ಹೇಳುವದು. ಎರಡೂ ಕಡೆಗೆ ಹೇಳುವ ಆಳರಸರು ಒಂದೇ ರಾಜ್ಯಪದ್ಧತಿಯವರು. ಇದೊಂದು ಪ್ರಜಾಬೇಡಿಕೆಗಳನ್ನು ತಪ್ಪಿಸಿಕೊಳ್ಳುವ ಸುಲಭೋಪಾಯವೆಂದು ಬಲ್ಲವರು ಬಲ್ಲರು.

ಲೋಕಮತದ ನೆವವು ತೀರ ನಿರಾಧಾರವಾದದ್ದು. ಹಿಂದುಸ್ಥಾನ ಸರಕಾರವು ಲೋಕಮತ ನೋಡಿ ರಾಜ್ಯ ನಡಿಸಹತ್ತಿದರೆ, ಭಾರತೀಯರು ಸ್ವರಾಜ್ಯಕ್ಕಾಗಿ ಇಷ್ಟು ಹೋರಾಡಬೇಕಾಗಿದ್ದಿಲ್ಲ. ಸ್ವರಾಜ್ಯ ಪ್ರಾಪ್ತಿಯ ಆಶೆಯು ಅವರಿಗೆ ಬಾಧಿಸುತ್ತಿದ್ದಿಲ್ಲ. ಹಿಂದುಸ್ಥಾನ ಸರಕಾರಕ್ಕೆ ಚದರಿಬಿದ್ದ ಕರ್ನಾಟಕವನ್ನು ಒಂದು ಕಡೆ ತಂದು ಪುನರುದ್ಧರಿಸುವ ಆಲೋಚನೆಯು ಇರುವದಿಲ್ಲ. ಹಾಗೆ ಆಲೋಚನೆಯು ಇದ್ದಿದ್ದರೆ, ಸರಕಾರಕ್ಕೆ ತಾನಾಗಿ ಈ ವ್ಯವಸ್ಥೆಯನ್ನು ಕೈಕೊಳ್ಳಲು ಬೇಕಷ್ಟು ಇಂಬಿರುವದು. ಮುಂಬಯಿ, ಮದ್ರಾಸ, ಇತ್ಯಾದಿ ಪ್ರಾಂತಗಳ ರಚನೆಯು ಹ್ಯಾಗಾಯಿತೆಂಬ ಇತಿಹಾಸ ಬಲ್ಲವರಿಗೆ ಹೇಳುವದು ಬೇಡ. ಬ್ರಿಟಿಶ ಸಾಹಸಿಗರು ಪ್ರದೇಶಗಳನ್ನು ಸಂಪಾದಿಸಿದಂತೆ, ಇಲ್ಲಿಷ್ಟು, ಅಲ್ಲಿಷ್ಟು ಸೇರಿಸಿಬಿಟ್ಟರು. ಹೊರತು, ಆಯಾ ಪ್ರದೇಶಗಳ ಪರಂಪರೆಯನ್ನಾಗಲಿ, ಸಂಪ್ರದಾಯಗಳನ್ನಾಗಲಿ, ಆಚಾರ ರಗಳನ್ನಾಗಲಿ, ಸಂಸ್ಕೃತಿಯನ್ನಾಗಲಿ, ಆ ಕಾಲದ ರಾಜ್ಯಕರ್ತರು ವಿಚಾರಿಸಲಿಲ್ಲ; ವಿಚಾರಿಸಲಿಕ್ಕೆ ಆಗ ಸಮಯವೂ ಇರಲಿಲ್ಲ. ಇಂದು ಟೀಪೂ ಸುಲ್ತಾನನ ಮೇಲೆ ದೌಡು ನಾಳೆ ಪೇಶ್ವೆಯವರ ಮೇಲೆ ದೌಡು, ನಾಡದು ಹೋಳಕರನ ಮೇಲೆ ದಾಳಿ, ಹೀಗೆ ಬ್ರಿಟಿಶ ಸಾಹಸಿಗರು ತಮ್ಮ ಅಧಿರಾಜ್ಯವನ್ನು ಭರತಖಂಡದ ಮೇಲೆ ಸ್ಥಾಪಿಸಲು ನಿಮಗ್ನರಾಗಿದ್ದರು. ಕರ್ನಾಟಕಸ್ಥರ ಸಂಸ್ಕೃತಿ, ಮರಾಠೆಯರ ಸಂಪ್ರದಾಯ, ಬಂಗಾಲಿಗಳ ಪರಂಪರೆ, ಆಂಧ್ರರ ಕಲಾಕೌಶಲ್ಯ, ತಮಿಳರ ರಾಜಕೀಯ ಇತ್ಯಾದಿಗಳ ವಿಚಾರದಿಂದ ಅವರವರ ಅಭಿವೃದ್ಧಿಯಾಗುವಂತೆ ಪ್ರಾಂತಗಳನ್ನು ರಚಿಸಲು ಆ ಕಾಲದಲ್ಲಿ ಸಾಕಷ್ಟು ಬೇಕಷ್ಟು ಅನುವು ದೊರೆಯಲಿಲ್ಲ. ಆ ಬಗ್ಗೆ ಈಗ ಯಾರೂ ದೂರಲಾರರು; ದೂರುವದು ನಿರರ್ಥಕವು.

ಆದರೆ, ಆ ಕಾಲವೂ ಸಮಾಪ್ತಿಯಾಗಿ, ಹೊಸ ಮನ್ವಂತರವು ಪ್ರಾರಂಭವಾಯಿತು. ಬ್ರಿಟಿಶರು ಭಾರತೀಯರ ಕಲ್ಯಾಣೇಚ್ಛುಗಳಾದರು. ಭಾರತೀಯರ ಅಭಿವೃದ್ಧಿಗಾಗಿಯೇ, ರಾಷ್ಟ್ರಸಂವರ್ಧನಕ್ಕಾಗಿಯೇ ಬ್ರಿಟಿಶರು ಹಿಂದುಸ್ಥಾನದಲ್ಲಿ ಬೇರೂರಿಕೊಂಡು ಕೂತುಕೊಂಡಿರುವರು. ಹಾರ್ಡಿಂಜ ದೊರೆಗಳು ಸರ್ವಾಧಿಪತಿಗಳಿದ್ದಾಗ, ಅವರು ತಾ. ೨೫ ಆ-೧೯೧೧ನೇಗೆ ಬರೆದ ಒಂದು ಕಾಗದದೊಳಗಿನ ಮುಖ್ಯಾಂಶವನ್ನು ಇಲ್ಲಿ ನಮೂದಿಸುವದವಶ್ಯವು. ಪ್ರಾಂತಗಳ ಮೇರೆಗಳು ಸಮಾಧಾನಕರವಾಗಿ ನಿಶ್ಚಯಿಸಲ್ಪಡಬೇಕಾದರೆ, ಅವನ್ನಾಳಲು ಅನುಕೂಲವಾಗಿರಬೇಕು. ಸಾಮಾನ್ಯವಾಗಿ ಒಂದೇ ಭಾಷೆಯನ್ನಾಡುವ ನೆರೆಹೊರೆಯ ಪ್ರದೇಶಗಳನ್ನು ಒಟ್ಟುಗೂಡಿಸಿ ಪ್ರಾಂತರಚನೆ ಮಾಡುವದು ಪ್ರಶಸ್ತವು. ಪ್ರಾಂತರಚನೆಯಿಂದ ಪ್ರಾಂತದೊಳಗಿನ ಪ್ರಜೆಗಳ ಆಕಾಂಕ್ಷೆಗಳೂ ತೃಪ್ತವಾಗಿರಬೇಕು. ದೊರೆಗಳು ನಿಬಂಧವನ್ನು ಮಾತ್ರ ಬರೆಯದೆ, ಐದು ಕಡೆ ಚದರಿಹೋದ ವಂಗಭಂಗವನ್ನು ರದ್ದುಪಡಿಸಿ, ಬಂಗಾಲವನ್ನು ರಚಿಸಿದರು. ಬಿಹಾರ ಹಾಗು ಛೋಟಾನಾಗಪುರದೊಳಗಿನ ಒಂದೇ ಹಿಂದೀ ಭಾಷೆಯನ್ನಾಡುವ ಪ್ರಜೆಗಳನ್ನು ಒಂದು ಪ್ರಾಂತದಲ್ಲಿ ಸೇರಿಸಿದರು. ಇದರ ಮೇಲಿಂದ ಗೊತ್ತಾಗುವದೇನು? ಒಂದೇ ಭಾಷೆಯ ಪ್ರಜೆಗಳನ್ನು ಒತ್ತಟ್ಟಿಗೆ ಸೇರಿಸಿದರೆ, ಅವರನ್ನಾಳುವದೂ ಸುಲಭ; ಆಚಾರ ವಿಚಾರಗಳಿಗೂ ಅನುಕೂಲ; ಪ್ರಜಾಭಿವೃದ್ಧಿಗೂ, ಪ್ರಜಾಸಂಸ್ಕಾರಕ್ಕೂ ಹಿತಪ್ರದ! ಸಾಮಾನ್ಯ ಭಾಷೆಯಿಂದ ಒದಗುವ ಲಾಭಗಳೂ, ಸಾಮಾನ್ಯ ಆಡಳಿತೆಯಿಂದ ಒದಗುವ ಲಾಭಗಳೂ ಅನ್ಯೋನ್ಯವಾಗಿ ಪ್ರಜಾಕ್ಷೇಮವನ್ನುಂಟುಮಾಡುತ್ತವೆ.

ಇತ್ತ ಕರ್ನಾಟಕವನ್ನು ನೋಡಿ, ಕೆಲ ಪ್ರದೇಶವು ಮುಂಬಯಿಯಲ್ಲಿ, ಕೆಲ ಭಾಗವು ಮದ್ರಾಸಿನಲ್ಲಿ, ಹಲವು ನಿಜಾಮ ರಾಜ್ಯದಲ್ಲಿ ಇನ್ನು ಕೆಲವು ಮೈಸೂರಿನಲ್ಲಿ, ಮತ್ತು ಕೆಲವು ಕೊಡಗಿನಲ್ಲಿ ಬೇರೆ ಬೇರೆ ರಾಜ್ಯ, ಬೇರೆ ಬೇರೆ ಆಡಳಿತೆ. ಒಂದೇ ಕರ್ನಾಟಕದ ಪ್ರಜೆಗಳ ಮೇಲೆ ಐದು ಬದಿಗಳಿಂದ, ಐದು ಪ್ರಕಾರದ ಹೊರೆಗಳು ಬಂದು ಬಿದ್ದು ಪರಸ್ಪರ ಎಳೆದಾಟ ನಡೆದಾಗ, ಕರ್ನಾಟಕವು ಎಂದಾದರೂ ಬೆಳೆದೀತೇನು! ಅಲ್ಲಿಯ ಪ್ರಜೆಗಳಿಗೆ ಸ್ವತ್ವವು ಉಳಿಯಬಲ್ಲದೇನು! ಕರ್ನಾಟಕವೆಂದರೆ, ಸಾಮಾನ್ಯ ದೇಶವಲ್ಲ. ಶ್ರೀ ವಿದ್ಯಾರಣ್ಯ ಪುಲಿಕೇಶಿ, ಹಕ್ಕಬುಕ್ಕರಂಥ ರಾಜಕಾರಣ ಧುರಂಧರರು ಜನ್ಮವನ್ನಿತ್ತಿದ ದೇಶವಿದು! ಪಂಪ-ರನ್ನಪ್ರಭೃತಿ ಕವಿಶಿರೋಮಣಿಗಳಿಂದ ಪಾವನವಾದ ಪುಣ್ಯಭೂಮಿಯಿದು! ಪ್ರದೇಶದ ಮಟ್ಟಿಗೂ ಒಂದು ಪ್ರಾಂತವಾಗಲು ಕರ್ನಾಟಕವು ಅರ್ಹವಿದೆ ಕರ್ನಾಟಕ ಪ್ರಾಂತದ ಕ್ಷೇತ್ರವು ೩೦,೫೯೭

…ಪ್ರಚ್ಛನ್ನ ಮೈಲಿದ್ದು, ಲೋಕಸಂಖ್ಯೆಯು …ಗುತ್ತದೆ. ಇಂಥ ಘನಕಗೇ …ದ ಕರ್ನಾಟಕವನ್ನು ಏಕೀಕರಣ ಮಾಡಲು …ರ್ನಾಟಕಸ್ಥರು ಆಗ್ರಹದಿಂದ, ಅತ್ಯಾಗ್ರಹ …ದ ಬೇಡಿಕೊಂಡರೂ, ಆ ಕುರಿತು ವಿಚಾರ …ಡಲು ಒಂದು ಮಂಡಳವನ್ನು ನೇಮಿಸಂ…ರೂ, "ಲೋಕಮತವಿಲ್ಲ"ವೆಂಬ ನಿರಾಧಾರ …ದ ನೆವವನ್ನು ಮುಂದೊಡ್ಡಿ, ಕರ್ನಾಟಕ …ತ ಸೊಂಟ ಮುರಿಯುವದು ಎಂದೆಂದಿಗೂ …ಯಸ್ಕರವಲ್ಲ. ಲೋಕಮತವನ್ನೇ ಕಾಲಿಗೆ… …ಗೆಗೂ ದಬ್ಬಿಹಾಕಿ, ನಿರಂಕುಶ ಕಾರಭಾ…ವನ್ನು ನಡಿಸಿ, ದೇಶಾಭಿಮಾನಿಗಳಿಗೆ ಕಾಡು… ಆಳರಸರಿಗಂತು ಈ ನೆವವು ಎಂದೂ …ಭಿಸದು. ಕರ್ನಾಟಕದ ಏಕೀಕರಣ ಸಾ…ಕ ಪ್ರಶ್ನೆಗೆ ಬಾಧಕ ತರಲು ಪ್ರಮಾಣಸಿದ್ಧ …ರ್ಯಾಭಾವದಲ್ಲಿ ಸರಕಾರವು "ಲೋಕಮತ…ಲ್ಲ"ವೆಂಬ ಸೊಟ್ಟ ನೆವವನ್ನು ಮುಂದೊಡ್ಡಿರ…ಹುದೆಂದ. ಯಾರು ಹೇಳರು?

ಸ್ಫುಟ ಸೂಚನೆಗಳು.

೧. ಭಾರತೀಯರ ಮೇಲೆ ಇನ್ನೊಂದು ಹೊಸ …ರೆಯು ಹೇರಲ್ಪಡುವದು. ಹಿಂದುಸ್ಥಾನದ ಪ್ರ…ಲು ಈ ವರೆಗೆ ಪ್ರಚಂಡ ಸೈನ್ಯ ಖರ್ಚನ್ನ… ಕೊಡಬೇಕಾಗಿತ್ತು. ಈಗ ಇನ್ನೊಂದು ಖರ್ಚಿ…ನ ಪ್ರಸಂಗವು ಬಂದಿದೆ. ಅದ್ಯಾವುದು? ಹಿಂ…ಸ್ಥಾನಕ್ಕಾಗಿ ನಿರ್ಮಾಣವಾಗುವ ನೌಕಾಸೇನೆಯು… ಸಿಂಗಾಪುರದಲ್ಲಿ ಹಿಂದುಸ್ಥಾನ ಸರಕಾರವು …ಸೇನೆಯನ್ನು ರಚಿಸಿ, ಅಲ್ಲಿ ಹಿಂದುಸ್ಥಾನದ …ಸೈನ್ಯವನ್ನೆಲ್ಲ ಕೇಂದ್ರೀಕೃತ ಮಾಡುವದು. …ಸ್ಥಾನಕ್ಕೆ ಈ ಸಮಯ ನೌಕೆಯ ಕಾಕೆ ಬೇಕು… …ಯಾರಾದರೂ ಪ್ರಶ್ನೆಯನ್ನೆತ್ತದಿರರು. ಅದ… ಉತ್ತರವಿಷ್ಟೇ. ನಮಗೇನೂ ಹಡಗುಪಡೆಗಳು… ಹಾಗಾದರೆ, ಈಗ ಹಡಗುಪಡೆಗಳ ತಾಣ್ಯವ …ರಚಿಸುವ ರಹಸ್ಯವೇನು? ಚೀನ ದೇಶದಲ್ಲಿ ಬ್ರಿಟಿಶ …ಶಿಷ್ಟೆಯು ನಾಮಶೇಷವಾಗಿದೆ; ಸ್ಪಷ್ಟವಾಗಿ …ಹೇಳಬೇಕಾದರೆ ನಾಮದ ಶೇಷವು ಕೂಡ ಹಾರಿಹೋ…ಪ್ರತಿಷ್ಠೆ ಬರುಗಹತ್ತಿದೆ. ಅಷ್ಟಕ್ಕೇ ದಿರಾಗಲು ಬ್ರಿಟಿಶ …ಸಾಮ್ರಾಜ್ಯಶಾಹಿಗೆ ತಕ್ಕ ಸ್ಥಳವೆಲ್ಲಿಯೂ ಇರುವ… ಅದಕ್ಕಾಗಿ ಹಿಂದುಸ್ಥಾನದ ಖರ್ಚಿ… ಹಿಂದುಸ್ಥಾನಕ್ಕಾಗಿ ಸಿಂಗಾಪುರದಲ್ಲಿ ನೌಕಾ…ದ ನಿರ್ಮಾಣವಾಗಿದೆ. ಭಾರತೀಯ ನೌಕಾದಳ… ನಿರ್ಧಾರವೆಲ್ಲ ಸಾಮ್ರಾಜ್ಯದ ನೌಕಾಖಾತೆಯ …ಲೋಚನೆಯಿಂದ ನಡೆದಿರುವದಾಗಿಯೂ, ಈ …ರವಲ್ಲಿ ಸಾಮ್ರಾಜ್ಯದ ನೌಕಾಖಾತೆಯ ಪ್ರತಿನಿ…ಧಿಗಳೆಂದೂ ಮುಖ್ಯ ಪ್ರಧಾನರಾದ ಮಿ। ಬೊ…ರವರು ಕಳೆದ ವಾರ್ಗಳವಾರಕ್ಕೆ ಸೇರಿದ …ಮೆಂಟಿನಲ್ಲಿ ಹೇಳಿದರು. ಅಂದ ಬಳಿಕ, ಹಿಂ…ನದ ಹಿತಕ್ಕಾಗಿ, ಹಿಂದುಸ್ಥಾನದ ಸಂರಕ್ಷಣ… ಹಿಂದೀ ನೌಕಾ ತಾಣ್ಯದ ರಚನೆಯಾಗಿರುವ… ಮತ್ತೆ ಹೇಳಬೇಕೇನು? ನೌಕಾಸೇನೆಯಲ್ಲಿ …ರಿಗೆ "ಕಿಂಗ್ಸ ಕಮೀಶನ್"ನಂಥ ದೊಡ್ಡ ಸೇನಾಪತಿ ಅಧಿಕಾರಗಳನ್ನು ಕೊಡುವ ವಿಚಾರವಿರುವದೇನೆಂದು ಕರ್ನಲ್ ವೆಡ್ಜವುಡ್‌ರವರು ಪ್ರಶ್ನಿಸಲು, ಮುಖ್ಯ ಪ್ರಧಾನರು ಆತುರ ಕೊಡಲು ನಿಯಮವುದಂತೆ ವಾಯಿದೆ ಬೇಕೆಂದು ಹೇಳಿ, ದಾರಾದರು. ಇದರ ಮೇಲಿಂದಲೂ, ಭಾರತೀಯರ ಕ್ಷೇಮಚಿಂತನೆಯಿಂದಲೇ ಸಿಂಗಾಪುರದಲ್ಲಿ ನೌಕಾದಾಣ್ಯದ ಯೋಜನೆಯಾಗಿರುವದೆಂದು ನಾವಾಗಿ ಹೇಳಬೇಕೇನು?

೨. ಪರದೇಶ ರಾಜಕಾರಣದ ಸೂತ್ರಗಳನ್ನು ಮಾತ್ರ ನಾವು ಪರಿಶೀಲಿಸಬೇಕಾಗಿದೆ. ಮೋಸಲ್ ಪ್ರಕರಣವು ದಿನ ಹೋದಹಾಗೆ ಬಿಗಿಯಾಗುತ್ತ ನಡೆದಿದೆ, ತುರ್ಕರು ಹಿಮ್ಮೆಟ್ಟುವವರಲ್ಲ. ನಾವಕಾರಮಾಗಿ, ಸ್ಥೈರ್ಯದಿಂದ ಮುಂದರಿಯುತ್ತಿರುವರು. ಸದ್ಯಕ್ಕೆ ತುರ್ಕರು ಒಂದು ಕಾಯಿದೆಯಿಂದ ತಮ್ಮ ರಾಜ್ಯದಲ್ಲಿ ಸೇರುವ ಸಾಮಗ್ರಿಗಳ ಮೇಲಿಲ್ಲ ೫ ಪಟ್ಟು ಕಸ್ಟಮ್ ತೆರಿಗೆಯನ್ನು ಹೇರಿರುವರು. ಇದಲ್ಲದೆ, ಒಳ ಸೇರಿದ ಬಳಿಕ, ಆಕರ, ಈ ಕರ, ಇನ್ನೂ ಕರ ಮತ್ತೂ ಕರ, ಈ ರೂಪಗಳಿಂದ ೮ ಪಟ್ಟು ಕರ ತೆರಬೇಕಾಗುವದಂತೆ. ಈ ಕಾಯಿದೆಯು ತುರ್ಕರೊಡನೆ ವ್ಯಾಪಾರದ ಕರಾರುಗಳನ್ನು ಮಾಡಿಕೊಂಡ ರಾಷ್ಟ್ರಗಳಿಗೆ ಲಾಗು ಮಾಡಲ್ಪಡಲಿಕ್ಕಿಲ್ಲ. ಬ್ರಿಟಿಶ ಸಾಮ್ರಾಜ್ಯದಿಂದ ರಫ್ತು ಆಗುವ ಸಾಮಗ್ರಿಗಳ ಮೇಲಿಲ್ಲ ಈ ಕರವು ಹೇರಲ್ಪಡುವದು. ಇದೊಂದು ಬ್ರಿಟಿಶರಿಗೆ ಮುಂಜಾಗ್ರತೆಯ ಸೂಚನೆ, ಇನ್ನೊಂದು ಸೂಚನೆಯಾಗಹತ್ತಿದೆ. ತುರ್ಕರು ಕಪ್ಪು ಸಮುದ್ರದ ಮೇಲೆ ದಂಡೆಗುಂಟ ಕೋಟೆಗಳನ್ನು ರಚಿಸಲಾರಂಭ ಹೆಂಬ ಖಬರ ಕಪ್ಪುಹತ್ತಿರುವದು. ಇಂಗ್ಲಂಡದ ನೌಕಾಸೇನೆಯಿಂದ ಯುದ್ಧ ಪ್ರಸಂಗದಲ್ಲಿ ಆತ್ಮಸಂರಕ್ಷಣ ಮಾಡಿಕೊಳ್ಳಲು ಈ ಕೋಟೆಗಳ ರಚನೆಯಾಗಿರುವದೆಂದು ಬಲ್ಲವರು ಹೇಳುತ್ತಾರೆ. ಭೂಮಧ್ಯ ಸಮುದ್ರ ದಂಡೆಗುಂಟ ತುರ್ಕಸ್ಥಾನದಲ್ಲಿ ಮೊದಲೇ ಭದ್ರ ಕೋಟೆಗಳಿವೆ. ಕಪ್ಪು ಸಮುದ್ರದ ಮೇಲಿನ ಕೋಟೆಗಳು ಸಿದ್ಧವಾದ ಬಳಿಕ, ತುರ್ಕರೂ, ರಶಿಯಾ ದೇಶದವರೂ ಒತ್ತಟ್ಟಿಗೆ ಕೂಡಿ ಬ್ರಿಟಿಶರಿಗೆ ಮೋಸಲ್ ಬಿಡಿಸುವರೆಂದು ಅಂದಾಜಿದೆ. ತುರ್ಕರಿಗೆ ಇದಿರಾಗಲು ಬ್ರಿಟಿಶರು ಇಟಾಲಿಯವರನ್ನು ಬಗಲಲ್ಲಿ ಸೇರಿಸಿಕೊಂಡಿರುವರು. ಇಟಾಲಿಗೂ, ಜರ್ಮನಿಗೂ ಟ್ಯಾರೋಲ ಪ್ರಾಂತದ ವಿಷಯ ಕಲಹ ನಡೆದದೆ. ಟ್ಯಾರೋಲ ಪ್ರಾಂತದಲ್ಲಿ ರಾಜ್ಯವು ಇಟಾಲಿಯದು.; ಪ್ರಜೆಗಳು ಜರ್ಮನ್‌ರು. ಜರ್ಮನ್ ಸಂಸ್ಕೃತಿಯನ್ನು ಅಳ್ಳಿ ತೊಳೆದು, ಜರ್ಮನ್‌ರನ್ನು ಇಟಾಲಿಯನ್‌ರಾಗಿ ರೂಪಾಂತರಿಸುವೆವೆಂದು ಇಟಾಲಿಯ ಅಧಿಪತಿಗಳಾದ ಮುಸೋಲಿನಿಯವರ ದುರಾಶೆ. ಅದಕ್ಕಾಗಿ ಜರ್ಮನ್‌ರು ಇಟಾಲಿಗೆ ಬಹಿಷ್ಕರಿಸಹತ್ತಿರುವರು. ಈ ಕುರಿತು ಜರ್ಮನಿಯ ಪಾರ್ಲಿಮೆಂಟಿನಲ್ಲಿ ತೀಕ್ಷ್ಣವಾದ-ವಿವಾದವುಟಾಗಿ, ಪಾರ್ಲಿಮೆಂಟಿನವರು ಇಟಾಲಿಗೆ ತಿಳಿಸಿದ್ದೇನಂದರೆ:—"ನಮ್ಮ ಬಹಿಷ್ಕಾರಕ್ಕೆ ಕಾಸಬ ಮಾಡಲುದ್ಯುಕ್ತರಾಗಿ ನೀವು ನಮ್ಮ ಮೇಲೆ ಸಾಗಿ ಬಂದರೆ, ನಾವು ನಿಃಶಸ್ತ್ರರಿದ್ದಾಗ್ಯೂ, ನಾವು ನಿಮಗೆಂದೂ ಹಿಂಜರಿಯೆವು. ಧೀರರಂತೆ ನಿಮ್ಮೊಡನೆ ಕಾದಾಡಿ ಪರಿಣಾಮವನ್ನು ನೋಡಬಿಡುವೆವು" ಜರ್ಮನಿ ಹಾಗು ಇಟಾಲಿಗಳೊಳಗಿನ ವಿರೋಧದಿಂದ ಬ್ರಿಟಿಶ-ಇಟಾಲಿಗಳ ಸ್ನೇಹಭಾವವು ನಷ್ಟವಾಗಿದೆ. ಹೀಗೆ ಮೋಸಲ್ ಅಪಹಾರದಿಂದ ಅನರ್ಥಪರಂಪರೆ ಯುಂಟಾಗಹತ್ತಿದೆ. ಇನ್ನೊಮ್ಮೆ ಯುದ್ಧವಾಗಲೇಬೇಕೆಂದು ಭೂತಲದೊಳಗಿನ ರಾಜಕಾರಣ ಸೂತ್ರ ವಿಶಾರದರು ಅಭಿಪ್ರಾಯಪಡುತ್ತಿರುವರು. ರಾಷ್ಟ್ರಗಳು ಆತ್ಮಪ್ರತಿಷ್ಠೆ, ಆತ್ಮಪ್ರಾಬಲ್ಯ, ಸ್ವಾರ್ಥ ಇವುಗಳಿಗೆ ಬಲಿಬಿದ್ದು ನ್ಯಾಯಾನ್ಯಾಯಗಳ ವಿಚಾರ ತೊರೆದಾಗ ಯುದ್ಧದಂಥ ಪ್ರಸಂಗ ಒದಗದಿರುವದು ಅಶಕ್ಯ ಮಾತು.

೩. ಮುಂಬಯಿಯ ಸರ್ ಕಾವಸಜಿ ಜಹಾಂಗೀರ ಸಭಾಮಂದಿರದಲ್ಲಿ ಪ್ರಾಥಮಿಕ ಶಿಕ್ಷಣವನ್ನು ಸ್ವೀಕರಿಸಿದ ಸ್ಕೂಲ ಬೋರ್ಡುಗಳ ಪರಿಷತ್ತೊಂದು ಕಳೆದ ತಾ. ೬-೭ನೇಗೆ ಸೇರಿತ್ತು. ಕರಾಚಿ ಮ್ಯುನಿಸಿಪಾಲಿಟಿಯ ಅಧ್ಯಕ್ಷರಾದ ಶ್ರೀ। ಜಮಶೆಡ ಮೇಥಾರವರು ಸಭಾಪತಿಗಳಾಗಿದ್ದರು. ಸಭೆಯಲ್ಲಿ ಪಠ್ಯ ಪುಸ್ತಕ, ಶಾರೀರಿಕ ಶಿಕ್ಷಣ, ಶಿಕ್ಷಕರ ಸಂಬಳದ ಪ್ರಮಾಣ, ಸರಕಾರದ ಸಂಬಂಧ, ಸರಕಾರದ ಸಹಾಯದ ಪ್ರಮಾಣ ಇತ್ಯಾದಿ ವಿಷಯಗಳ ಚರ್ಚೆಯಾಯಿತು. ಆ ಕುರಿತು ಮುಂದೆ ಯಥಾವಕಾಶ ಬರೆಯಲಿಕ್ಕಿರುವೆವು. ಸದ್ಯಕ್ಕೆ ಒಂದು ಮಾತನ್ನು ನಮೂದಿಸುವದು ಅಪ್ರಾಸಂಗಿಕವಾಗಲಾರದು. ಸಭೆಯಲ್ಲಿ ಸರಕಾರದ ಪ್ರತಿನಿಧಿಗಳೂ ಇದ್ದರು. ಸರಕಾರವು ಕೊಡುವ ದ್ರವ್ಯಸಹಾಯವು ಕಡ್ಡಾಯದ ಪ್ರಾಥಮಿಕ ಶಿಕ್ಷಣ ಕೊಡುವ ಯೋಜನೆಗೆ ಎಂದೂ ಸಾಲದೆಂದೂ, ಈಗಿನ ಪ್ರಮಾಣದಿಂದ ಸರಕಾರಿ ಸಹಾಯ ಪಡೆದು ಕಡ್ಡಾಯದ ಪ್ರಾಥಮಿಕ ಶಿಕ್ಷಣವನ್ನು ನಡಿಸಹೋದರೆ, ಲೋಕಲ್ ಬೋರ್ಡುಗಳು ದಿವಾಳಿ ಅರ್ಜಿಯನ್ನು ಸದ್ಯಕ್ಕೇ ದಾಖಲಮಾಡಿಸಬೇಕಾಗುವದೆಂದು ಹೇಳಲಾಯಿತು. ಕಡ್ಡಾಯದ ಪ್ರಾಥಮಿಕ ಶಿಕ್ಷಣದ ಯೋಜನೆಗೆ ಚಲೋ ಶಿಕ್ಷಕರು ಅವಶ್ಯವಿದ್ದದರಿಂದ, ಅವರಿಗೆ ದೊರಕಿಸಿಕೊಳ್ಳಲು, ಯೋಗ್ಯತೆಗೆ ಸರಿಯಾಗಿ ಹೆಚ್ಚು ಸಂಬಳವನ್ನೀಯವೇಕೆಂಬೂ ಸಭಿಕರ ಮತವಾಯಿತು. ಸಾಲೆ-ಪರಾಂಜಪೇಯವರು ನಿಶ್ಚಯಿಸಿದ ಯೋಜನೆಯಂತೆ ಸಂಬಳ ಕೊಡಬೇಕೆಂದೂ ಗೊತ್ತಾಯಿತು. ಮುಂಬಯಿ ಸರಕಾರದ ಪ್ರತಿನಿಧಿಗಳಾದ ಮುಂಬಯಿ ಭಾಗದ ಗವ್ಹರ್ನಮೆಂಟ ಎಜ್ಯುಕೇಶನ್ ಇನ್ಸಪೆಕ್ಟರರವರು ಸಭಿಕರಿಗೆ ದೊಡ್ಡ ರಾಜವಚನವನ್ನಿತ್ತರು. ಈ ವಚನದಂತೆ ಹಣ ಸಂಪಾದಿಸಲು ಸರಕಾರದ ಆಕ್ಷೇಪವಿರುವದಿಲ್ಲವಾಗಿಯೂ ಇನ್ಸಪೆಕ್ಟರರು ನುಡಿದರು. ಸ್ಕೂಲ ಬೋರ್ಡಿನ ಅಧಿಕಾರಿಗಳು ತಮ್ಮ ತಮ್ಮ ಅಧಿಕಾರ ಕಕ್ಷೆಯಲ್ಲಿ ಹೆಚ್ಚೆಚ್ಚು ತೆರಿಗೆಗಳನ್ನು ಎತ್ತುವಳಿ ಮಾಡಿ ಶಿಕ್ಷಕರಿಗೆ ಹೆಚ್ಚೆಚ್ಚು ಸಂಬಳವನ್ನೀಯುತ್ತಿರಲಿ. ಸರಕಾರದ ಆಕ್ಷೇಪಣೆಯಿಲ್ಲೆಂದೂ ಇನ್ಸಪೆಕ್ಟರರು ಗಾಂಭೀರ್ಯದಿಂದ ರಾಜವಚನವನ್ನಿತ್ತರು. ನಾವು ಎತ್ತುವಳಿ ಮಾಡಿಕೊಂಡು ನಮ್ಮ ಶಿಕ್ಷಣಕ್ಕೆ ವಿನಿಯೋಗ ಮಾಡಲಿಕ್ಕೆ ಸರಕಾರದ ಆಕ್ಷೇಪವಿಲ್ಲವಾಗಿ ಹೇಳುವದು ಮಹಾ ದೊಡ್ಡ ಉಪಕಾರವೆಂದು ಬೋರ್ಡುಗಳು ತಿಳಿಯಲಿ. ಈ ಉಪಕಾರ ಮಾಡುವದಕ್ಕಾಗಿಯೇ ನಮ್ಮ ಮುಂಬಯಿ ಸರಕಾರದವರು ಪ್ರಾಥಮಿಕ ಶಿಕ್ಷಣದ ಸಂಬಳದ ಕಿದ್ದುಪಾಡದ ವಿಚಾರವನ್ನು ಈವರೆಗೆ ಮಾಡುತ್ತ ಬಂದಿಹರು. ಇದಕ್ಕೂ ಹೆಚ್ಚಿಗೆ ಸರಕಾರವು ಮಾಡತಕ್ಕ ಸಹಾಯವಿರುವದೇನು?

೪. ಮದ್ರಾಸ ಕಾಯಿದೆ ಕೌನ್ಸಿಲಿನಲ್ಲಿ ನಡೆದ ಪ್ರಶ್ನೋತ್ತರದಲ್ಲೊಂದು ಅಲ್ಲಿಯ ಅಧಿಕಾರಿಗಳು ವರ್ತಿಸುವದುತ್ತಮವು. ದಿವಾನರು ಖಾಸಗಿ ಗೃಹಸ್ಥರಲ್ಲಿ ಏಕೆ ಉಳಕೊಳ್ಳಬೇಕೆಂದು ಸಭಾಸದರೊಬ್ಬರು ಪ್ರಶ್ನಿಸಿದರು. ಅದಕ್ಕೆ ಮುಖ್ಯ ದಿವಾನರು ಉತ್ತರಿಸಿದ್ದೇನಂದರೆ- "ಗೆಳೆಯರ ನಿಮಂತ್ರಣೆಗಳನ್ನು ತಿರಸ್ಕರಿಸುವದು ಶಿಷ್ಟಸಮ್ಮತವಾಗದು. ನಿಮಂತ್ರಣ ಇಲ್ಲದಿದ್ದರೆ, ದಿವಾನರು ಯಾರಲ್ಲಿಯೂ ಹೋಗುವದಿಲ್ಲ" ಈ ಪ್ರಶ್ನೋತ್ತರದ ಧ್ವನಿತಾರ್ಥವು ಎಲ್ಲರಿಗೂ ತಿಳಿಯುವಂತಿದೆ. ದೊಡ್ಡ ದೊಡ್ಡ ಅಧಿಕಾರಿಗಳಿಗೆ ಅವರವರ ಅಧಿಕಾರಕಕ್ಷೆಯಲ್ಲಿ ಸ್ಥಳಿಕ ಗೃಹಸ್ಥರ ನಿಮಂತ್ರಣೆಗಳಾಗುವದು ಸಹಜವು. ಸಿಕ್ಕ ಸಿಕ್ಕ ನಿಮಂತ್ರಣೆಗಳನ್ನು ಶಿಷ್ಟಾಚಾರದ ನೆವದಿಂದ ಸ್ವೀಕರಿಸತಕ್ಕ ಸ್ಥಳಿಕ ಅಧಿಕಾರಿಗಳು ಕಿರಿಯರಾದವರಾಗಿದ್ದರಂತೂ ಅದೇ ತರದ ತುಂಬ ನಿಮಂತ್ರಣೆಗಳ ಮೇಲೆ ಆಮಂತ್ರಣಗಳು ಬರುವವು. ಶಿಷ್ಟಾಚಾರಗಳನ್ನು ಪಾಲಿಸಹೋದರೆ, ಅಧಿಕಾರದ ಕರ್ತವ್ಯವು ನಿಷ್ಪಕ್ಷಪಾತವಾಗಿಯೂ, ನಿರ್ದಾಕ್ಷಿಣ್ಯದಿಂದಲೂ ಎಂದಿಗೂ ನಡೆಯಲಾರದು. ನಿಮಂತ್ರಣೆಗಳ ಪಾಲನದಿಂದ ಮಾನವನಲ್ಲಿ ಪಕ್ಷಪಾತದ ಹುಟ್ಟು ಸಹಜವಾಗಿ ಪ್ರಾದುರ್ಭೂತವಾಗುತ್ತದೆ. ನಿಮಂತ್ರಣೆಗಳನ್ನು ಮಾತ್ರವೆ ದೊಡ್ಡವರು ಹಂಗಿನಿಂದ ಜನಿತವಾದ ಉಪಕಾರದಿಂದ ಸ್ವಾರ್ಥ ಸಾಧಿಸಿಕೊಳ್ಳುವ ದೂರದೃಷ್ಟಿಯಿಂದಲೇ ದೊಡ್ಡ ದೊಡ್ಡ ಅಧಿಕಾರಿಗಳಿಗೆ ತಮ್ಮಲ್ಲಿ ಉಪಹಾರ ಫಲಾಹಾರ ಔತಣ ಇತ್ಯಾದಿ ಸತ್ಕಾರ ಸಮಾರಂಭಗಳನ್ನು ಜರುಗಿಸುತ್ತಾರೆ. ಹೊರತು ವ್ಯಕ್ತಿಶಃ ಅಧಿಕಾರಿಗಳ ಪ್ರೇಮದಿಂದ, ಅಥವಾ ಆದರಬುದ್ಧಿಯಿಂದ ಈ ಸತ್ಕಾರಗಳು ಒದಗಿ ಬರುವದಿಲ್ಲ. ಅಧಿಕಾರ ತ್ಯಾಗವಾಯಿತೆಂದರೆ, ಅಧಿಕಾರಿಗಳಿಗೆ ದೊಗ್ಗು ಸಲಾಮು ಕೂಡ ದೊರೆಯದ ಅನೇಕ ಉದಾಹರಣೆಗಳಿವೆ. ಮತ್ತೊಂದು ಮಾತಿದೆ. ನಿಮಂತ್ರಣೆಗಳನ್ನು ಸ್ವೀಕರಿಸುವ ಅಧಿಕಾರಿಗಳೊಡನೆ ವಿಶೇಷ ಸ್ನೇಹಭಾವವನ್ನು ಬೆಳೆಸುವ ಗೃಹಸ್ಥರು ಸಾಮಾನ್ಯ ಪ್ರಜಾಜನರಿಗೆ "ನಾನು ಈ ಸಾಹೇಬರಿಗೆ ಬಲ್ಲೆ; ಆ ಮುನಸೀಫರಿಗೆ ಬಲ್ಲೆ: ಈ ದಿವಾನರಿಗೆ ಬಲ್ಲೆ; ನ್ಯಾಯಮೂರ್ತಿಗಳಿಗೆ ಬಲ್ಲೆ; ಕಲೆಕ್ಟರರು ನನ್ನ ಗುರುತಿನವರು; ಪ್ರಾಂತ ಅಧಿಕಾರಿಗಳೊಡನೆ ನಾನು ತಿರುಗಾಡಿ ಬಂದೆನು" ಇತ್ಯಾದಿ ದೊಡ್ಡಸ್ತಿಕೆಯ ಮಾತುಗಳನ್ನಾಡಿ ಪ್ರತಿಷ್ಠೆಯನ್ನು ಸಂಪಾದಿಸುತ್ತಾರೆ; ಮತ್ತು ಸ್ವಾರ್ಥಸಾಧಿಸುತ್ತಾರೆ. ಇದೆಲ್ಲ ವ್ಯಾಪಾರವು ಅಧಿಕಾರಿಗಳ ತಿಳುವಳಿಕೆಯಿಂದ ನಾಗುತ್ತದೆಂದು ಯಾರೂ ಹೇಳರು. ಆದರೂ ಗೃಹಸ್ಥರು ಮಾಡುವ ವ್ಯವಹಾರಗಳೆಲ್ಲ ಅಧಿಕಾರಿಗಳ ತಿಳುವಳಿಕೆಯಿಂದಲೇ ನಡೆಯುತ್ತಿರುತ್ತವೆಂದು ಲೋಕಾಪವಾದವಾಗುತ್ತದೆ. ಅಧಿಕಾರಿಗಳ ಹೆಸರಿಗೊಂದು ಇದರಿಂದ ದೊಡ್ಡ ಕಳಂಕ ತಗಲುತ್ತದೆ. ಇಷ್ಟೆಲ್ಲ ವಿಚಾರದಿಂದ ಮದ್ರಾಸ ಕಾಯಿದೆ ಕೌನ್ಸಿಲಿನ ಸಭಾಸದರು ಈ ಪ್ರಶ್ನೆಯನ್ನು ಕೇಳಿದ್ದರು. ಅದಕ್ಕೆ ಮುಖ್ಯ ದಿವಾನರು "ನಿಮಂತ್ರಣೆ" "ಶಿಷ್ಟಾಚಾರಪಾಲನ" ಇತ್ಯಾದಿ ಸೂಕ್ತಗಳನ್ನು ಹೇಳಿ ಉತ್ತರಿಸಿದ್ದು ಹಿರಿಯ ಅಧಿಕಾರಿಗಳು ಅಧಿಕಾರಾರೂಢರಾಗಿರುವ ವರೆಗೆ ಖಾಸಗಿ ಗೆಳೆಯರೊಡನೆ ಯಾವದೇ ಪ್ರಕಾರದ ಸಂಬಂಧವಿರದಂತೆ ಜಾಗರೂಕರಾಗಿರುವದು ಅವರಿಗೆ ಭೂಷಣವು; ಪ್ರಜೆಗಳಿಗೂ ಕ್ಷೇಮಕರವು.

ಸ್ಥಾನಿಕ ವೃತ್ತಾಂತ.

ಕುಮಟಾ— ಚಳಿ ಸಾಮಾನ್ಯ. ಮದುವೆ-ಮುಂಜಿಗಳ ಗದ್ದಲ ವಿಶೇಷ.

ಶ್ರೀ ಗೋಕರ್ಣ ಕ್ಷೇತ್ರದಲ್ಲಿ ಶ್ರೀ ಮಹಾಶಿವರಾತ್ರಿಯ ಮಹೋತ್ಸವವು ನಿರ್ವಿಘ್ನದಿಂದ ಪಾರುಗಂಡಿತು. ಸಬ್ ಡಿವಿಜನಲ್ ಮೆಜಿಸ್ಟ್ರೇಟರಾದ ಮಿ| ಬಿಡೇಯವರು ಶ್ರೀ ಕ್ಷೇತ್ರದ ಮೇಲೆ ಶಾಂತತಾಭಂಗವಾಗದಂತೆ ಕರ್ಣಾಟಕದ ವೈದಿಕರಿಗೆ ಕೋಟಿತೀರ್ಥದಲ್ಲಿ ಯಾರೂ ಪ್ರತಿಬಂಧ ಮಾಡದಂತೆಯೂ, ಇತರ ಕ್ಷೇತ್ರ ಕಾರ್ಯಗಳನ್ನು ಸಮುದ್ರ ಯಾ ಕೋಟಿತೀರ್ಥದ ಮೇಲೆ ಮಾಡುವದಿದ್ದಲ್ಲಿ, ವೈದಿಕರು ಹವ್ಯಕ ಹಾಗು ಕೋಟಿ ಬ್ರಾಹ್ಮಣರ ಪುರೋಹಿತ್ಯದಿಂದ ಸಾಗಿಸಬೇಕೆಂದೂ ಹುಕುಮುಗಳನ್ನು ಹೊರಡಿಸಿದ್ದರು. ಇದರಿಂದ ಶಾಂತತಾ ಭಂಗವಾಗಲಿಲ್ಲವಾದರೂ, ವೈದಿಕರಿಗೆ ಬಹಳ ಖೇದವಾಗುವದು ಸಹಜವು. ರಥೋತ್ಸವದ ದಿನ ಗುಂಡಬಾಳೆಯ ಬಚ್ಚ ಬಕ್ಕಲಿಗನು ತೇರು ಎಳೆಯುವಾಗ ಬಿದ್ದುದರಿಂದ ದುಃಖಕರ ಘಟನೆಯಾಯಿತು. ಸ್ವಲ್ಪ ಹೊತ್ತಿನಲ್ಲಿ ವೈದ್ಯರ ಉಪಚಾರದಿಂದ ಅವನು ತಿಳುವಳಿಕೆಗೆ ಬಂದರೂ, ಗುಂಡಬಾಳೆಯ ಶ್ರೀ ರಾಮಚಂದ್ರ ಅನಂತ ಪೈಯವರು ಕೂಡಲೆ ಅವನಿಗೆ ಗುಡಿಸಲಿನಲ್ಲಿ ಉಪಚಾರ ನಡೆಸಿದ್ದರಿಂದ ಅವನಿಗೆ ಬಹಳ ಉಪಕಾರವಾಯಿತು. ಜಾತ್ರೆಯ ಕಾಲದಲ್ಲಿ ಇಂಥ ಅಪಘಾತಗಳಿಗೆ ಆಸ್ಪದ ಸಿಗದಂತೆ ಕಾರ್ಯಕರ್ತರು ತಕ್ಕ ಬಂದೋಬಸ್ತು ಮಾಡಬೇಕು.

ಕೀರ್ತನ ಕೇಸರಿ ಶ್ರೀ ಜನಾರ್ದನಬುವಾ ಕರು ಇಲ್ಲಿಯ ಶ್ರೀ ಶಾಂತೇರಿ ಕಾಮಾಕ್ಷಿ ದೇವಾಲಯದಲ್ಲಿ ಕಳೆದ ಸೋಮವಾರದಿಂದ ಗುರುವಾರದ ವರೆಗೆ ೪ ಕೀರ್ತನಗಳನ್ನು ಮಾಡಿದರು. ಶ್ರೀ ಜನಾರ್ದನಬುವಾ ಕರ ಕೀರ್ತನವು ಲಾಲಿತ್ಯವು ಚಿತ್ತವೇಧಕವು ಆದುದರಿಂದ ಪ್ರತಿಯೊಂದು ಕೀರ್ತನೆಗೆ ದೇವಸ್ಥಾನ ತುಂಬ ಜನರು ಸೇರುತ್ತಿದ್ದರು. ಶ್ರೀ ಜನಾರ್ದನಬುವಾ ಕರ ಬಿನ್ನಹದಂತೆ, ನಿಜಾಮ ಹೈದರಾಬಾದ ಸಂಸ್ಥಾನದಲ್ಲಿ ಅವರು ಸ್ಥಾಪಿಸಿರುವ ಶ್ರೀ ವಿದ್ಯಾರಣ್ಯ ಮುಕ್ತ ಗ್ರಂಥಾಲಯದವರು ಯಥಾಶಕ್ತಿ ದಕ್ಷಿಣೆ ಸಲ್ಲಿಸುತ್ತಾರೆ.

ಹಗಲು ಶ್ರೀ ಗೋಪಾಲಕೃಷ್ಣ ನರಸಿಂಹ ಭಟ್ಟರವರು ಕಳೆದ ೭ ತಾರೀಖಿನಿಂದ ವ್ಯಾಖ್ಯಾನಗಳಾದರಿಂದು ತಿಳಿಸಲು ಸಂತೋಷವಾಗುತ್ತದೆ. ಶ್ರೀ ಭಟ್ಟರು ವೈದಿಕ ಶಾಸ್ತ್ರಸಂಪನ್ನರಿದ್ದು ತಂತ್ರ-ಮಂತ್ರಗಳಲ್ಲಿ ಬಲ್ಲವರಾಗಿದ್ದರು. ಜ್ಯೋತಿಷ್ಯಶಾಸ್ತ್ರದಲ್ಲಿಯೂ ಅವರಿಂದ ಬಹಳ ಉಪಕಾರವಾಗುತ್ತಿತ್ತು.

ಇಲ್ಲಿಂದ ಬೆಳಗಿನ ೧೦ ಘಂಟೆಗೆ ಕಾರವಾರಕ್ಕೆ ಹೋಗುತ್ತಿದ್ದ ಶಿರಸಿಯ ಮೋಟಾರ ಗಾಡಿಗೆ ದೇವಿಮನೆಯಲ್ಲಿ ಅಪಘಾತವಾಯಿತು. ಹಾದಿಯಲ್ಲಿ ಒಂದು ಸಣ್ಣ ವೇಸೋ ಹಿಡಿ ಕಾರಣವಾಗಿದ್ದಿತು. ಡ್ರಾಯವ್ಹರನು ಮೋಟಾರನ್ನು ಅತ್ತಿತ್ತ ತಿರುಗಿಸುವ ಸಂಭ್ರಮದಲ್ಲಿ ಮೋಟಾರು ಹಾದಿ ತಪ್ಪಿ ಕೆಳಕ್ಕೆ ಬಿತ್ತು. ಪ್ರಯಾಣಿಕರಿಗೆ ಬಹಳ ದುಃಖಪಡುವಂತಾಗಿಲ್ಲ. ಮೋಟಾರಿನ ಬೋಡಿಯು ಒಡೆದು ಚೂರಾಯಿತು.

ಕಾರವಾರ— ಇಲ್ಲಿಯ ಫಸ್ಟಕ್ಲಾಸ ಕೋರ್ಟಿನಲ್ಲಿ ಫಸ್ಟಕ್ಲಾಸ ಸಬಜಡ್ಜರಿಲ್ಲದ ಮೂಲಕ ಫಸ್ಟಕ್ಲಾಸ ಅಧಿಕಾರದ ದಾವೆಗಳೆಲ್ಲ ಡಿಸ್ಟ್ರಿಕ್ಟ ಕೋರ್ಟಿಗೆ ವಿಚಾರಕ್ಕಾಗಿ ಕಳಿಸಲ್ಪಟ್ಟಿವೆ; ಕೆಲವು ಸೆಕೆಂಡಕ್ಲಾಸ ದಾವೆಗಳು ಮೂಲ ದಾವೆಗಳಲ್ಲಿ ಸೇರಿಸಿ ಇಲ್ಲಿನ ಸೆಕೆಂಡ ಕ್ಲಾಸ ಸಬಜಡ್ಜರ ಬಳಿಗೆ ವಿಚಾರಕ್ಕಾಗಿ ಬಂದಿವೆ.

ಮುಂದಿನ ವರುಷಕ್ಕೆ ಬಿಣಗಿ ಹಾಗು ಚೆಂಡಿಯೆ ಕೇಂದ್ರ ಶಾಲೆಗಳಿಗೆ "ಸವಾಲುಗಳೆಲ್ಲ" ಸರಕಾರದವರು ಅನುಕೂಲವಾಗಿ ಒದಗಿ ಬಂದ ಈ ಸಂಧಿಯನ್ನು ಸಾಧಿಸಿ, ಮುಂದಿನ ವರುಷದಿಂದ ಈ ಅಂಗಡಿಗಳನ್ನು ಮುಚ್ಚಿಸಿದರೆ, ಇಡೀ ಪ್ರಜೆಗಳು ಕೃತಜ್ಞರಾಗುವರು.

ಅಖಿಲ ಭಾರತೀಯ ಮರಾಠಾ ಶಿಕ್ಷಣ ಪರಿಷತ್ತಿನ ಅಧಿವೇಶನವನ್ನು ಕಾರವಾರದಲ್ಲಿ ಸೇರಿಸಬೇಕೆಂದು ಗೊತ್ತಾಗಿದೆ. ಖರ್ಚಿನ ರಕಮನ್ನು ಕೊಂಕಣ ಮರಾಠಾ ಸಮಾಜದವರು ತೀವ್ರ ರೂಪಾಯಿಗೊಂದು ಪಾವಲಿಯಂತೆ ವಸೂಲ ಕೊಡಬೇಕೆಂದು, ನಿರ್ಣಯವಾಗಿರುವದು.

ಚೆಂಡಿಯೆಯಲ್ಲಿ ತಾ. ೧೩-೨-೧೯೩೬ನೇಯ ದಿವಸ ಸಾಯಂಕಾಲಕ್ಕೆ ಒಂದು ಮೋಟಾರ ಅಪಘಾತವಾಯಿತು ಸಾಯಂಕಾಲ ೭ ಘಂಟೆಯಾಗಿತ್ತು. ಮೋಟಾರಿಗೆ ದೀಪವಿತ್ತು. ಆದರೂ ಡ್ರಾಯ್ವ್ಹರ ಸಾಹೇಬರಿಗೆ ಮುಂದೆ ಹೋಗುವ ದನಗಳು ಕಾಣಲಿಲ್ಲ. ಒಂದು ಎತ್ತಿನ ಮೇಲಿಂದ ಮೋಟಾರು ಸಾಗಿಹೋಗಿ ಎತ್ತು ಅಲ್ಲಿಂದಲ್ಲೇ ಪರಲೋಕವನ್ನೈದಿತು. ದನಗಳ ಕಾವಲಿಗಿದ್ದವನಿಗೂ ಸ್ವಲ್ಪ ಪೆಟ್ಟಾಗಿದೆ. ದೀಪಕ್ಕೆ ಬೆಳಕಿದ್ದಿಲ್ಲವೋ? ಅಥವಾ ಡ್ರಾಯ್ವ್ಹರ ಸಾಹೇಬರಿಗೆ ಮೋಜಿನ ಹೆಂಡ್ತಿ ಹಿಡಿದಾಗ ಆದ ಕಾರಣ ಅವ ಲೆಕ್ಕಿಸ್ರೋ?

ಶ್ರೀ ಆರ್. ಬಿ. ಶೇಣ್ವಿ ಚೆಂಡಿಯೆ ಇವರು ಲೋಕಲ್ ಬೋರ್ಡಗಳಿಗೆ ಉಮೇದ್ವಾರರಾಗಿ ನಿಂತ ರಾಷ್ಟ್ರೀಯ ರಂದೆನಿಸಿಕೊಳ್ಳುವವರಿಗೆ ಬಿನ್ನೈಸಿಕೊಳ್ಳುವದೇನಂದರೆ:— ಮೊಟ್ಟಮೊದಲು ಅಖಿಲ ಭಾರತೀಯ ರಾಷ್ಟ್ರೀಯ ಸಭೆಯು ಹೇಳಿದಂತೆ ನಡೆಯಿರಿ, ಸರ್ವಶುಭ್ರ ಖಾದಿಯನ್ನು ಧರಿಸಿರಿ, ತಾವು ಮುಂದೆ ಯಾವ ಬೋರ್ಡಿನ ಮೆಂಬರರಾಗುವಿರೋ, ಅಂಥ ಬೋರ್ಡಿನ ಕೆಲಸ ಮಾಡುವಾಗ ಎಳ್ಳಷ್ಟೂ ಸ್ವಾರ್ಥವನ್ನು ಹಿಡಿಯುವದಿಲ್ಲೆಂದು ಪ್ರತಿಜ್ಞೆ ಮಾಡಿರಿ. ಅಂದರೆ, ನೀವು ರಾಷ್ಟ್ರೀಯರೆಂದು ತಿಳಿದು ಮತದಾರರು ನಿಮಗೆ ಮತ ಕೊಟ್ಟಾರು.

ಸದಾಶಿವಗಡ— ಜನವರಿ ತಿಂಗಳ ಕೊನೆಯ ದಿವಸಗಳಲ್ಲಿ "ಸದಾಶಿವಗಡ ಶಿಕ್ಷಣ ಸಂಘ"ದ ಜನ್ಮದಿನದ ಪ್ರೀತ್ಯರ್ಥ ಸಂಘದ ಇಲ್ಲಿಯ ಪ್ರಾಯ್ವ್ಹೇಟ ಇಂಗ್ಲಿಷ ಶಾಲೆಯಲ್ಲಿ ದೊಡ್ಡ ಸಮಾರಂಭವಾಯಿತು. ಶಾಲಾ ಹುಡುಗರ ಅನೇಕ ತರದ ಕಾರ್ಯಕ್ರಮಗಳಾದವು. ೩೧ ನೇ ತಾರೀಖಿಗೆ ಆಸಿಸ್ಟಂಟ ಕಲೆಕ್ಟರರಾದ ರಾ. ರಾ. ಕಾಮತರ ಅಧ್ಯಕ್ಷತೆಯಲ್ಲಿ ಹುಡುಗರಿಗೆ ಇನಾಮು ಹಂಚುವ ಸಮಾರಂಭವಾಯಿತು. ಶಾಲೆಯ ಮುಖ್ಯಾಧ್ಯಾಪಕರಾದ ಶ್ರೀ ಶಂಕರ ಭ. ನಾಡಕರ್ಣಿಯವರು ತಮ್ಮ ವರದಿಯಲ್ಲಿ ಶಾಲೆಯ ಅಭಿವೃದ್ಧಿಯ ಇತಿಹಾಸವನ್ನು ಹೇಳಿ, ಒಂದೆರಡು ವರುಷಗಳ ವಿಯೋಗದ ನಂತರ, ಶ್ರೀ. ಗಣಪತ ಸದಾಶಿವ ನಾಡಕರ್ಣಿಯವರ ಸಂಘದ ಕಾರ್ಯದರ್ಶಿ ಸ್ಥಾನಕ್ಕೆ ಶಾಲೆಗೆ ಪುನಃ ಸಂಯೋಗವಾದ ಬಗ್ಗೆ ಆನಂದವನ್ನು ವ್ಯಕ್ತಪಡಿಸಿದರು. ಸಂಘದ ಕಾರ್ಯದರ್ಶಿ ಪತಿಯಿಂದ ಶ್ರೀ ಗಣಪತರಾಯರ ಉಪನ್ಯಾಸವಾಯಿತು. ಶಾಲೆಯ ಹುಡುಗ-ಹುಡುಗಿಯರ ಸಂಭಾಷಣೆಗಳೂ, ಹಾಡುಗಳೂ ಮನೋಹರವಾಗಿದ್ದವು. ಆದರೆ, ಅಧ್ಯಕ್ಷರ ಸದುಪದೇಶದ ಸವಿ ನುಡಿಗಳನ್ನು ಸವಿಯಲಿಕ್ಕೆ ಬಂದವರಿಗೆ ನಿರಾಶೆಯಾಯಿತು! ಅಧ್ಯಕ್ಷರಾದ ರಾ. ರಾ. ಕಾಮತರು ಒಂದು ಶಬ್ದವನ್ನು ಸಹ ಮಾತಾಡದೆ, ಇಡೀ ಸಮಾರಂಭವನ್ನು ಮುಗಿಸಿದರು!! ಇದರಿಂದ ಸ್ವಲ್ಪ ಬೆರಗಾಯಿತು. ಮರುದಿನ ಹಿಂದೂ, ಮುಸಲ್ಮಾನ, ಕ್ರಿಶ್ಚನ್ನರ ದೇವಾಲಯಗಳಿಗೆ ಹುಡುಗರು ಸಡಗರದ ಮೆರವಣಿಗೆಯಿಂದ ಹೋಗಿ ಪ್ರಾರ್ಥನೆ ಮಾಡಿಕೊಂಡರು. ಹೀಗೆ ಸಮಾರಂಭವು ಕೊನೆಗೊಂಡಿತು.

ಬಿಣಗೆ— ಇಲ್ಲಿಯ ಒಂದು ದೇವಸ್ಥಾನವು ಕಟ್ಟಿ ಅನೇಕ ವರ್ಷಗಳು ಕಳೆದು ಹೋಗಿದ್ದರೂ, ಅದರ ಪ್ರತಿಷ್ಠೆಯಾಗದೆ ಹಾಗೇ ಇದ್ದಿತ್ತು. ಕಳೆದ ವಾರದಲ್ಲಿ ಅದರಲ್ಲಿ ಶ್ರೀ ರಾಮ ದೇವರ ಪ್ರಾಣಪ್ರತಿಷ್ಠೆಯು ಬಲು ಸಡಗರದಿಂದ ನೆರವೇರಿತು. ಈ ದೇವಸ್ಥಾನದಿಂದ ಇಲ್ಲಿಯ ಬ್ರಾಹ್ಮಣವೃಂದಕ್ಕೆ ಇಷ್ಟು ವರ್ಷಗಳ ತನಕ ಇದ್ದ ಕೊರತೆಯು ದೂರವಾದಂತಾಯಿತು. ಇದರಿಂದಾದರೂ ಜನರಲ್ಲಿ ಧಾರ್ಮಿಕ ಭಾವನೆಯು ಪ್ರಚಾರವಾಗಲಿ.

...ಶಿರ್ಸಿ— ಇಲ್ಲಿಯ ಮ್ಯುನಿಸಿಪಾಲಿಟಿಯವರು ಸೂಕನ ...ಗಿ ಜೋಡಿಸಿದ ಹ್ಯಾಸ್ಕೂಲಿಗೆ "ಶ್ರೀ ಮಾರಿಕಾಂಬಾ ...ಸ್ಕೂಲ, ಶಿರ್ಸಿ" ಎಂಬ ನಾಮಕರಣ ಮಾಡಲಾಗಿದೆ. ...ಮಾರಮ್ಮ ದೇವಸ್ಥಾನದ ಭಂಡಾರದಿಂದ ಮೊಕ್ತೇಸ ...ತ್ರಕಾಲದಮಕ್ಕೆ ೧೦_ ಸಾವಿರ ರೂಪಾಯಿಗಳನ್ನಿತ್ತ ...ಮ್ಯುನಿಸಿಪಾಲಿಟಿಯವರು ಕೃತಜ್ಞರಾಗಿ ಶ್ರೀ ಅಮ್ಮ ...ನ ಹೆಸರನ್ನೇ ಶಾಲೆಗೆ ಕೊಟ್ಟಿರುವರು. ಇಲ್ಲಿ ತಾರೀಖು ...೧೯೨೬ನೇಯಿಂದ ೬ನೇ ಇಯತ್ತೆಯನ್ನು ಪ್ರಾರಂಭ ...ವ ವಿದ್ಯಾರ್ಥಿಗಳು ಅಪ್ಪಣೆಯನ್ನಿತ್ತಿರುವರು. ...ದಿಂದ ಇಲ್ಲಿ ಸಂಪೂರ್ಣ ಹ್ಯಾಸ್ಕೂಲು ಪ್ರಾರಂಭವಾ ...ವರು. ಈಗ ಮೂವರು ಗ್ರೇಜ್ಯುಏಟರು ಶಿಕ್ಷಕರಾಗಿರುವ ... ಇನ್ನಿಬ್ಬ ಗ್ರ್ಯಾಜ್ಯುಏಟರನ್ನು ಶೀಘ್ರವೇ ಕರಿಸುವ ...ವಾಗುವರು. ಶಾಸ್ತ್ರೀಯ ಉಪಕರಣಗಳ ಬಗ್ಗೆ ...ವಸ್ಥೆ ಮಾಡಲಾಗಿದೆ. ಶಕ್ಯವಿದ್ದ ವಿದ್ಯಾರ್ಥಿಗಳಿಗಿಲ್ಲಿ ...ಹವನ್ನು ಮ್ಯುನಿಸಿಪಾಲಿಟಿಯವರು ಜೋಡಿಸ ...ವರು. ಸಹಕಾರಿ ಬೇಕಿಂಗನವರು ವಾಚನಾಲಯಕ್ಕ ...೧೦೦೦ ರೂಪಾಯಿಗಳನ್ನು ಅರ್ಪಿಸಿರುವರು. ಮೆಟ್ರಿಕ್ಯು ...ಷನ ಹಾಗು ಸ್ಕೂಲಫೈನಲ್ ಪರೀಕ್ಷೆಗೆ ಹೋಗುವ ...ವಿದ್ಯಾರ್ಥಿಗಳಿಗೆ ಸಮಸ್ತ ಅನುಕೂಲ್ಯಗಳ ವ್ಯವಸ್ಥೆಯಾ ...ದೆ.

...ಲ್ಲಿಯ ವಕೀಲರಾದ ರಾ। ನೆಜ್ಜೂರ ಸದಾಶಿವಗೌಡ ...ರವರಿಗೆ "ರಾವಸಾಹೇಬ" ಎಂಬ ಕಿತಾಬು ದೊ ...ರೆತ್ತದ್ದಾಗಿ ಸಿದ್ದಾಪುರದಲ್ಲಿ ಅಭಿನಂದನವಾದ ಸಭೆಸೇರಿ ... ಈ ಸಭೆಗೆ ಸಾಗರ, ಸೊರಬ, ಶಿರ್ಸಿ ಮುಂತಾದ ...ಲಿಂದ ಅನೇಕರು ಬಂದಿದ್ದರು. ಅಧ್ಯಕ್ಷರಾದ ರಾ। ...ರಾಮಚಂದ್ರ ನಾರಾಯಣ ಭಟ್ಕಳರವರೂ, ಮಾನ್ಯಶ್ರೀ ...ವೇ। ಮಾ। ಸೋಮನಾಥ ಶಾಸ್ತ್ರಿಗಳವರೂ, ರಾ। ...ಶಿವಲಿಂಗಪ್ಪ ಗೌಡರವರೂ, ಕೋಡ್ಲಾವರ ಬಸ ...ವರೂ ರಾವಸಾಹೇಬ ನೆಜ್ಜೂರ ಸದಾಶಿವಗೌಡರವರ ...ಂದಿನ ಇತಿಹಾಸವನ್ನೆಲ್ಲ ವಿಸ್ತಾರಪೂರ್ವಕವಾಗಿ ವಿವರಿ ...ಅಭಿನಂದನ ಮಾಡಿದರು. ಸಮಯೋಚಿತ ಮಾತ ನ ...ನ್ನಾಡಿ ರಾ। ನೆಜ್ಜೂರ ಸದಾಶಿವಗೌಡರವರು ಉತ್ತರ ...ಕೊಟ್ಟ ಬಳಿಕ, ಸಂಕಾರದ ಅಭಾರ ಮನ್ನಣೆ, ಈಶಸ್ತು ...ವನಾ, ಬಾಧಕ ದಂಪತಿಗಳಿಗೆ ದೀರ್ಘಾಯುರಾರೋ ... ಪ್ರಾರ್ಥನೆ, ಇತ್ಯಾದಿ ಪ್ರಾರ್ಥನೆಗಳು ನಡೆದು, ಅಭಿ ...ದನ ಸಮಾರಂಭವು ವಿಸರ್ಜನವಾಯಿತೆಂದು ಓರ್ವ ...ಕ್ಷಕರು ಬರೆದು ತಿಳಿಸುತ್ತಾರೆ.

ಸಿದ್ದಾಪುರ— ಪ್ರೊಫೆಸರ ವಿಶ್ವನಾಥಮೂರ್ತಿಯವ ...ತಾ. ೬ನೇ ರವಿವಾರದಿವಸ ರಾಷ್ಟ್ರೀಯ ಶಾಲೆಗೆ ಭೆಟ್ಟಿ ...ಕೊಟ್ಟಿದ್ದರು. ಅವರ ವಿದ್ಯಾರ್ಥಿಗಳು ಮಾಡಿ ತೋರಿಸಿದ ...ಆಟ, ಉಚ್ಛಾರ, ಆಸನ, ಪ್ರಾಣಾಯಾಮಗಳನ್ನು ...ನೋಡಿ ಆನಂದಪಟ್ಟರು.

...ಸರ್ವಿಯವರು ಇಲ್ಲಿ ಎರಡು ನಾಟಕಗಳನ್ನು ಮಾಡಿ ...ಮುಗಿಸಿ ಸಾಗರಕ್ಕೆ ಹೋಗಿರುವರು. ಕಡೇ ನಾಟಕದ ...ದಿನದಲ್ಲಿ (ಖರ್ಚು ಕಳೆದು) ಉಳಿದದ್ದನ್ನು, ಪ್ರಸೆ ...ಲ್ಲಿ ನೆರೆಯುತ್ತಕ್ಕ ಕೇಶಕೀ ಪ್ರದರ್ಶನಕ್ಕೆ ಉಪಯೋಗ ...ವಿನಂತಿ ಮೇರೆಗೆ ಕೊಟ್ಟರು. ಅಂದೇ ನಾಟಕದಲ್ಲಿ ...ಸಾಧಮೂರ್ತಿಯವರ ಸಂಕ್ಷಿಪ್ತ ಚರಿತ್ರೆಯನ್ನೂ, ...ತ್ತು, "ಶರೀರಮಾದ್ಯಂ ಖಲು ಧರ್ಮಸಾಧನಂ" ಶರೀರ ...ಸತ್ವ ಧನಸಂಪತ್ತು ಎಂಬುದನ್ನೂ, ಇಲ್ಲಿಯ ಪೂಜ್ಯ ...ರಾಮ ಸಾಹೇಬರೂ, ಶ್ರೀ ರಾಮಚಂದ್ರ ನಾರಾಯಣ ...ಭಟ್ಕಳರವರು ಚನ್ನಾಗಿ ಹೇಳಿದರು ಪ್ರೊ. ವಿಶ್ವನಾಥಮೂ ...ರ್ತಿಯವರು ಬ್ರಾಹ್ಮಣರು, ಚಿಕ್ಕಮಗಳೂರು ಜಿಲ್ಲೆಯವರು ಅವರಿ ...ಮೊದಲು ಚಿಕ್ಕಂದಿನಲ್ಲಿ ಪಮ್ಮಿನ ಉಪದ್ರವವಿದ್ದಿತ್ತಂ ... ಅವರು ಪ್ರೊ। ರಾಮಮೂರ್ತಿಯವರ ಕಡೆ ಹೋಗಿ ...ಸಿಸುಯಾಮ ವಗ್ಯರೆ ಕಲಿತ ನಂತರ, ಎಲ್ಲ ರೋಗವೂ ...ವಾಗಿ ಈಗ ಅದ್ಭುತ ಶಕ್ತಿಯುಳ್ಳವರಾಗಿದ್ದಾರೆ, ಅವರು ...ತಾ-ಪಿತೃಗಳ ಮೇಲೆ ಬಹಳ ಭಕ್ತಿಯನ್ನು ಇಟ್ಟಿದ್ದಾ ... ಈಗ ಅವರ ತಂದೆಯವರು ಇಲ್ಲ. ಮಾತೋಶ್ರೀಯವರ ...ಅವರು ಪ್ರತಿ ನಿತ್ಯ ದೇವರಂತೆ ನಮಸ್ಕಾರ ಮಾಡಿ

ಮುಂದೆ ತಮ್ಮ ಶಾರೀರಿಕ ಅದ್ಭುತ ಶಕ್ತಿಯನ್ನು ಜನರಿಗೆ ತೋರಿಸಲಿಕ್ಕೆ ಹೋಗುತ್ತಾರೆ. ಅವರು ಕುಸ್ತಿಯಲ್ಲಿಯೂ ದರೂ, ಹುಡುಗರ ಶಿಕ್ಷಣದಲ್ಲೂ, ಆಹಾರದಲ್ಲೂ, ನೀತಿ ವಗ್ಯರೆ ಕಡೆಗೂ-ಹೆಚ್ಚು ಲಕ್ಷ್ಯ ಪೂರೈಸುತ್ತಾರೆ. ಸಣ್ಣ ಹುಡುಗರ ಮೇಲೆ ಇವರ ಪ್ರೀತಿ ಬಹಳ.

ಇಲ್ಲಿಯ ಡಾಕ್ಟರ ವಿ। ಹೊಸಂಗಡಿಯವರಿಗೆ ಗೋಕ ರ್ಣಕ್ಕೆ ವರ್ಗವಾಗಿದೆ. ಅವರ ಜಾಗಕ್ಕೆ ಗೋಕರ್ಣದಲ್ಲಿದ್ದ ವಿ। ಮಾಗಳೆಎಂಬುವರು ಬರುತ್ತಾರೆ

ಹೊನ್ನಾವರ— ಹೊನ್ನಾವರ ತಾಲೂಕ ಕರ್ಕಿ ರಾ। ಭಾವಿ ಕೇಶವ ನಾರಾಯಣ ಹೆಗಡೆಯವರು ಬರೆದು ತಿಳಿಸುವದೇನಂದರೆ:—ಸದ್ಯ ಜಿಲ್ಲೆಯ ಪಶ್ಚಿಮದಿಕ್ಕಿಗೆ ಇರುವ ಸಮುದ್ರದ ಪೂರ್ವಭಾಗದಮೇಲಿನ ಉಸುಬಿನ ಬೇಲೆಯು ಹೆಚ್ಚು ಪಶ್ಚಿಮ ಗಾಳಿಯ ಹೊಡೆತದಿಂದಲೂ, ಸಮುದ್ರದ ತೆರೆಗಳಿಂದಲೂ, ಕರಿವ ಬುಗ್ಗಾತು ಜಮೀನುಗಳಲ್ಲಿ ತುಂಬಿ, ಬೇಸಾಯಗಾರರಿಗೆ ಬಹಳ ನಷ್ಟವನ್ನುಂಟು ಮಾಡುತ್ತವೆ. ಪ್ರತಿ ವರ್ಷವೂ ಉಸುಬನ್ನು ತೆಗೆಸಿ ಹೊಲಗಳನ್ನು ಸಾಗುವಳಿ ಮಾಡಬೇಕಾಗುತ್ತದೆ. ಇದನ್ನು ತಪ್ಪಿಸಿಕೊಳ್ಳಲಿಕ್ಕೆ ಗಾಳಿಗಿಡಗಳನ್ನು ಹಚ್ಚಿ ಸಮುದ್ರದ ದಡದಲ್ಲಿ ಹಚ್ಚಿದರೆ, ಈ ನಷ್ಟವು ತಪ್ಪುವದು; ಜನಗಳಿಗೆ ಮೋಪು ಸಿಗುವದು; ಆದುದರಿಂದ ಸರಕಾರದವರು ಸದರ ಗಾಳಿಗಿಡದ ಬೀಜಗಳನ್ನು ಮಾರ್ಗಶೀರ್ಷ ಮಾಸದಲ್ಲಿ ತೋರಿಸಿದ್ದ ಸ್ಥಳದಲ್ಲಿ ನೆಡಬೇಕು. ಇತ್ಯಾದಿ.

ಧುರೀಣನ ಸತ್ಯಾಪಲಾಪ.

(೫ನೇ ಪುಟದಿಂದ ಮುಂದರಿದದ್ದು.)

ಗೆ ಹೇಳುವ ಕಾರಣವು ಅವರಿಗಿರುವದಿಲ್ಲ. ಡಾ। ಕಲ್ಯಾಣಪುರರು ಬರೆದ ವಾಚಕರು ನಿಜವಿದ್ದರೆ, ‹ ಧುರೀಣ › ಆಫೀಸಿನಲ್ಲಿ ಸುಳ್ಳು ಹೇಳಿ, ವೃಥಾ ಪರರ ಹೆಸರು ಕೆಡಿಸುವ ಉಪದ್ವ್ಯಾಪವು ನಡೆಯುತ್ತಿದೆಂದೂ ಹೇಳಬೇಕಾಗಿದೆ. ಇರಲಿ. ಬಟ್ಟಿನ ಮೇಲೆ ಸತ್ಯವು ಹೊರಬಿತ್ತು. ವ್ಯೆ। ಮಾ। ರಾಮಚಂದ್ರರು ಜಿ. ಜಿ. ಹಾಸ್ಪಿಟಲದಲ್ಲಿ ರಿ ಜಿ ಸ್ಟ್ರಾರ ಹಾಗು ಟ್ರೆಜರರ ಇದ್ದ ಸಂಗತಿಯು ಡಾ। ಕಲ್ಯಾಣಪುರ ಕರರಿಗೂ ಮಾನ್ಯವಿದೆ. ಅಂದ ಮೇಲೆ, ‹ ಧುರೀಣ › ಕಾರರು ತಮ್ಮ ವಿತ್ಯಾದ ಪಾಠಕ ವ್ಯಾಜ್ಞಪ್ತರಕರಿಂದ ಮಾಡಿತಿ ಕೊಳ್ಳುವದನ್ನು ಜಾಗ್ರತೆ ಸಹ ವಹಿಯುವೆ, ವ್ಯೆ। ಮಾ। ಗಳು ‹ ಕಂಪ ಎಂಡ್ ಕಂಪನಿ › ಯ ಲ್ಲಿ ಕಳೆದ ಮೂರು ವರ್ಷಗಳಿಂದ ಕಾಂಬಳಕ್ಕಿದ್ದರೆಂಬ ‹ ಧುರೀಣ › ದ ಕುತ್ಸಿತ ವಿಧಾನವು ಕೇವಲ ಸತ್ಯಾಪಲಾಪವಲ್ಲವೇ? ಇಷ್ಟೇ ಸದ್ಯ ಹೇಳಿಕೆ.

ತಮ್ಮ,

ಬಿ. ಕೆ. ಕೆ

ಶ್ರೀ ಬಿಳಗಿ ಮಾರಿಕಾಂಬಾ ಸುಪ್ರಸನ್ನಃ ॥

ಸಕಲ ದೇಶಕ್ಕೂ ಸುಭಿಕ್ಷ-ಸುಫಲ-ಕಲ್ಯಾಣವಾಗಬೇಕೆಂದು ಈ ವರ್ಷವೇ ಶ್ರೀ ಬಿಳಗಿ ಶ್ರೀ ಮಾರಮ್ಮ ದೇವರ ಜಾತ್ರೆ ಮಾಡತಕ್ಕ ಬಗ್ಗೆ ಶೀಮ ಮುಖ್ಯಸ್ಥರು ವ ಮೊಕ್ತೇಸರರು ಕೂಡಿ ಇದೇ ಬರುವ ಕ್ಷಯ ಸಂ॥ದ ಅಧಿಕ ಚೈತ್ರ ಶು॥ ೩ ಯು ಮಂಗಳವಾರ ಜಾತ್ರಾ ನಿಶ್ಚಯ ಮಾಡಿಯದೆ. ಕಾರಣ ಆ ಬಗ್ಗೆ ಶಾಂತ ಸರ್ವರೂ ಬಂದು, ಅಮ್ಮನವರ ಶ್ರೀ ದರ್ಶನ, ಭಂಡಾರ ವಗ್ಯರೆ ತೆಗೆದುಕೊಂಡು, ಅಮ್ಮನ ವ ರ ಕೃಪೆಗೆ ಪಾತ್ರರಾಗಬೇಕಾಗಿ ಅಪೇಕ್ಷಿಸುತ್ತೇವೆ.

ವಿ೦ಾ। ಶಿವಪ್ಪ ಹೆಗಡೆ, ಹೂವಿನಮನೆ,

ಮೊಕ್ತೇಸರ.

ಜಾಹೀರ ನೋಟೀಸು.

ಕುಮಟಾ ಸಬಜಜ್ಜ ಕೋರ್ಟಿನಲ್ಲಿ.

ಮೂಲ ನಂಬರ ೪೮೦-೧೯೨೪.

ಕಂಕರ ಶೇಷಗಿರಿ ಚಂದಾವರ ಉಭಯಕರ ಸಾರಸ್ವತ ಬ್ರಾಹ್ಮಣ ವಯ ವರುಷ ೬೦ ಧೆನ್ನವರ ಸಾಕೀನ ಕಾರವಾರ ಮುಲ್ಲಾಪುರ. ಶ್ರೀ ಗೋಪಾಲಕೃಷ್ಣ ದೇವರ ಭಟಕ ವ ಕಾಲ ವ್ಯೆವಾಟದಾರ ನಾತೆಯಿಂದ ಸಹ-

ವಿರುದ್ಧ

೧ನೇ ವಿಠಾಬಾಯಿ ಯಾನೆ ಅಂಬಣ್ಣ ರಾಮಯ್ಯಾರ ಚಂದಾವರಕರ ಸಾರಸ್ವತ ರೈತಾಬಿ ಕಸಬು ಪ್ರಾಯ ವರುಷ ೩೧ ಸಾಕೀನ ಚಂದಾವರ ತಾಲೂಕ ಹೊನ್ನಾವರ.
೨ನೇ ಕೃಷ್ಣದಾಸ ಪ್ರಾಯ ೧೭ } ಪದ್ಮನಾಭ
೩ನೇ ರಾಮದಾಸ ಪ್ರಾಯ ೧೪ } ದಾಸ ಚಂದಾವರಕರ, ಪಾಲಕ ಕರ್ತ, ೨-೩ನೇಯವರು ಅಪ್ರಾಯಸ್ಥರ ರಕ್ಷಕ ತಾಯಿ ಗಿರಿಜಾಬಾಯಿ ಕೋಂ ಪದ್ಮನಾಭರಾವ ಚಂದಾವರಕರ ಸಾಕೀನ ಹೊನ್ನಾವರ.
೪ನೇ ನಾರಾಯಣ ರಾಮಚಂದ್ರ ಚಂದಾವರಕರ,ಸಾರಸ್ವತ,ಪ್ರಾಯ ೬೬, ಪಿಂಚನದಾರ, ಧೆನ್ನವರ ಸಾಕೀನ ಮುಲ್ಲಾಪುರ ತಾಲೂಕ ಹೊನ್ನಾವರ.

ಕೋರ್ಟ ಫೀ ಆಕಾರ ರೂ. ೮೦೦.

ವಕೀಲ ಫೀ ಆಕಾರ ಬಗ್ಗೆ ರೂ. ೩೦೦೦.

ಸದ್ರಿ ವಾದಿಯು ಸದ್ರಿ ಮೂಲ ನಂಬರಕ್ಕೆ ಮಾಡಿದ ದಾವೆಯು ಮುಲ್ಲಾಪುರ ಶ್ರೀ ಗೋಪಾಲ ಕೃಷ್ಣ ದೇವರ ಭಟಕ ನಾತೆಯಿಂದಲೂ, ಕಾಲ ವ್ಯೆವಾಟದಾರ ನಾತೆಯಿಂದಲೂ ಆಗಿದ್ದು, ಸದ್ರಿ ದಾವೆಯಲ್ಲಿ ಕಾಣಿಸಿದ ಶ್ರೀ ದೇವರ ದಾಖ್ತು ಕೊಳ್ಳಿ ವ ಕೋನಳ್ಳಿ ಗ್ರಾಮಗಳ ಆಸ್ತಿ ಕಬಜ್ಯಾ ವ ಉತ್ಪನ್ನದ ಬಗ್ಗೆ ಆಗಿರುತ್ತದೆ. ಸದ್ರಿ ಶ್ರೀ ದೇವರ ಭಟಕರು ಇನ್ನು ಯಾರಾದರೂ ಸದ್ರಿ ದಾವೆಯಲ್ಲಿ ಇನ್ನೂ ಪಕ್ಷಗಾರರಾಗಿ ತ್ಮವಹರಿಸಲಿಕ್ಕೆ ಉದ್ಯುಕ್ತರಿದ್ದ ಪಕ್ಷಕ್ಕೆ ಅದನ್ನು ಈ ಕೋರ್ಟಿಗೆ ಸದ್ರಿ ಮೂಲ ನಂಬರದಲ್ಲಿ ತಾರೀಖು ೨೨ನೇ ಮಾರ್ಚ ೧೯೨೬ನೇ ದರೊಳಗಾಗಿ ಜ್ಯಾಹೀರ ಮಾಡತಕ್ಕದ್ದು.

ತಾರೀಖು ೧೫-೨-೧೯೨೬.

H. S. BAINDUR,
KARKUN.

J. H. Chinmulgund,
Sub-Judge,
KUMTA.

S. U. NARAYANACHARYA & CO.
Chaukamba, BENARES CITY.



ನಮ್ಮಲ್ಲಿ ಎಲ್ಲಾತರದ ರೇಷ್ಮೆ ಪೀತಾಂಬರ, ಜರಿ ಕಣ, ಜರಿ ಸೀರೆ, ಕಾಶ್ಮೀರ ಶಾಲು, ತರವಾರ ರ.ದ್ರಾಕ್ಷೆ, ಕಸ್ತೂರಿ, ಲಿಂಗಗಳೂ, ಸಾಲಿಗ್ರಾಮ, ಮೊದಲಾದ ಮಾಲುಗಳು ಸಿಗುತ್ತವೆ ಕ್ಯಾಟಲಾಗ ಕೇಳುವವರಿಗೆ ಧರ್ಮವಾಗಿ ಕಳಿಸಲಾದೀತು.

ವಿಳಾಸ—ಶಿರೋಮಣಿ ನಾರಾಯಣಾಚಾರ್ಯ ಕಂಪನಿ, ಚೌಕಂಬಾ, ಕಾಶಿ.

ಮಹಾತ್ಮರ ಆತ್ಮಚರಿತ್ರ.

(೮) ಕಳ್ಳತನ ಹಾಗು ಪಶ್ಚಾತ್ತಾಪ.

ಮಾಂಸಭಕ್ಷಣ ಕಾಲದ ಹಾಗು ಅದಕ್ಕೂ ಮುಂಚಿನ ಇನ್ನೂ ಕೆಲವು ಅಕೃತ್ಯಗಳನ್ನು ನಾನು ಹೇಳುವದುಳಿದಿವೆ. ಅವು ನನ್ನ ಮದುವೆಯ ಮುಂಚೆಯಾಗಿಯೂ ಅನಂತರ ಸಂಭವಿಸಿದವು.

ನಮ್ಮ ಒಬ್ಬ ಆಪ್ತನಿಗೂ, ನನಗೂ ಬೀಡಿ ಸೇದಬೇಕೆಂಬ ಒಲವಿಕೆಯುಂಟಾಯಿತು. ನಮ್ಮ ಹತ್ತಿರ ಹಣವಿದ್ದಿಲ್ಲ. ಬೀಡಿ ಸೇದುವದರಿಂದ ಲಾಭವಾಗುವದೆಂದು ನಮಗೆ ತೋರಿದ್ದಿಲ್ಲ. ಅಥವಾ ಸಿಗರೇಟಿನ ವಾಸನೆಗೆ ಮರುಳಾಗಲಿಲ್ಲ. ಬಾಯೊಳಗಿಂದ ಚಿಕ್ಕ ಚಿಕ್ಕ ಹೊಗೆಯ ಸುರುಳಿಯನ್ನು ಹೊರ ಸೂಸುವದೆಂದು ಆನಂದವೆಂದು ನಮಗನಿಸಿತು. ನನ್ನ ಚಿಗಪ್ಪನು ಬೀಡಿ ಸೇದುತ್ತಿದ್ದನು. ಆತನು ಬೀಡಿ ಸೇದುವದನ್ನು ನೋಡಿ ನಾವೂ ಅವನನ್ನೇ ಅನುಕರಿಸಬೇಕೆಂದು ನಮಗೆ ತೋರಿತು. ಆದರೂ ನಮ್ಮ ಹತ್ತಿರ ಹಣವಿದ್ದಿಲ್ಲ. ಆದರಿಂದ ಚಿಗಪ್ಪನು ಸೇದಿ ಬೀಸಾಡಿದ ಬೀಡಿಯ ತುಂಡುಗಳನ್ನು ಕದ್ದು ಸೇದಲಾರಂಭಿಸಿದೆವು.

ಆದರೆ ಈ ಬೀಡಿಯ ತುಂಡುಗಳು ಯಾವಾಗಲೂ ಸಿಗುತ್ತಿರಲಿಲ್ಲ. ಇವುಗಳಿಂದ ಹೆಚ್ಚು ಹೊಗೆಯೂ ಬರುತ್ತಿರಲಿಲ್ಲ. ಆದರಿಂದ ನಮ್ಮ ಒಬ್ಬ ಆಳಿನ ಕಿಸೆಯೊಳಗಿನ ಕೆಲವು ದುಗ್ಗಾಣಿಗಳನ್ನು ಕದ್ದು ಊರ ಬೀಡಿಗಳನ್ನು ಕೊಂಡುಕೊಳ್ಳಹತ್ತಿದೆವು. ಈ ಬೀಡಿಗಳನ್ನು ಸೇದುವದು ಹೇಗೆ? ಹಿರಿಯರ ಮುಂದೆ ನಮಗೆ ಬೀಡಿ ಸೇದಬರುತ್ತಿದ್ದಿಲ್ಲ. ಈ ಪ್ರಕಾರ ಕದ್ದು ತಂದ ದುಡ್ಡಿನಿಂದ ಕೆಲವು ದಿನಗಳವರೆಗೆ ನಡೆಯಿತು. ಅಷ್ಟರಲ್ಲಿ ಕೆಲವೊಂದು ಗಿಡದ ದಂಟು ಬೀಡಿಗಳಂತೆ ಸೇದಬರುತ್ತದೆಂದು ನಮಗೆ ತಿಳಿಯಿತು. ಅದನ್ನು ನಾವು ಸಂಪಾದಿಸಿ ಸೇದಲಾರಂಭಿಸಿದೆವು.

ಆದರೆ, ಇವುಗಳಿಂದ ನಮ್ಮ ಸಮಾಧಾನವಾಗಲಿಲ್ಲ. ನಮಗೆ ಸ್ವಾತಂತ್ರ್ಯವಿಲ್ಲವೆಂದು ನಮಗೆ ಬಹಳವಾಗಿ ಬಾಗಾಗ ಅನಿಸಹತ್ತಿತು. ಹಿರಿಯರ ಅಪ್ಪಣೆಯ ಹೊರತು ನಮಗೆ ಯಾವದೇ ಒಂದು ಕೆಲಸ ಮಾಡಬರುತ್ತಿದ್ದಿಲ್ಲ. ಇದು ತೀರ ಅಸಹ್ಯವಾಯಿತು. ಮನಸ್ಸಿಗೆ ತೀರ ಬೇಸರವೆನಿಸಿತು. ಮತ್ತು ನಾವಿಬ್ಬರೂ ಆತ್ಮಹತ್ಯ ಮಾಡಿಕೊಳ್ಳಬೇಕೆಂದು ನಿರ್ಣಯಿಸಿದೆವು.

ಆದರೆ, ಆತ್ಮಹತ್ಯ ಮಾಡಿಕೊಳ್ಳುವ ಬಗೆ ಹೇಗೆ? ವಿಷ ಸಂಪಾದಿಸುವದೆಲ್ಲಿಂದ? ದತ್ತೂರಿಯ ಬೀಜಗಳನ್ನು ಭಕ್ಷಿಸುವದರಿಂದ ವಿಷವು ಬೇರೊಂದಿಲ್ಲವೆಂದೂ ನಮಗೆ ತಿಳಿಯಿತು. ನಾವು ಕಾಡಿಗೆ ಹೋಗಿ, ಅವನ್ನು ಹುಡುಕಿ ತಂದೆವು. ಸಾಯಂಕಾಲವು ಈ ಉದ್ಯೋಗಕ್ಕೆ ಯೋಗ್ಯ ಸಮಯವೆನಿಸಿತು. ಶ್ರೀ ಕೇದಾರೇಶ್ವರನ ದೇವಾಲಯಕ್ಕೆ ಹೋಗಿ ಶ್ರೀದೇವರ ನಂದಾದೀಪದಲ್ಲಿ ಹಿಂದಿಷ್ಟು ತುಪ್ಪವನ್ನು ಎರೆದು ಶ್ರೀ ದೇವರ ದರ್ಶನ ಪಡೆದೆವು. ಏಕಾಂತವಾದ ಸ್ಥಳ ನೋಡಿ ಕೂತುಕೊಂಡೆವು. ಆದರೆ ನಮಗೆ ವಿಷಪಾನ ಮಾಡಲು ಧೈರ್ಯವಾಗದು. ನಾವು ಕೂಡಲೆ ಮೃತಹೊಂದದಿದ್ದರೆ?— ಆತ್ಮಹತ್ಯ ಮಾಡಿಕೊಂಡು ಫಲವೇನು? ಪರಾಧೀನತೆಯನ್ನು ಸಹಿಸುವದೇ ಒಳಿತಲ್ಲವೋ? ಇಷ್ಟರಲ್ಲಿ ಎರಡು ಮೂರು ಬೀಜಗಳನ್ನು ನಾವು ನುಂಗಿದೆವು. ಇನ್ನು ನಮ್ಮಿಂದ ಮುಂದರಿಯಲಾಗಲಿಲ್ಲ. ಸಾವಿಗೆ ಇದಿರಾಗಲು ನಮಗೆ ಕೂಡಲಿಲ್ಲ. ಆದರಿಂದ ನಾವು ಶ್ರೀ ಕೇದಾರೇಶ್ವರನ ಸನ್ನಿಧಿಯಲ್ಲಿ ಹೋಗಿ ಆತ್ಮಹತ್ಯೆಯ ವಿಷಯವನ್ನೇ ತ್ಯಜಿಸಿ ಸಾವಧಾನಚಿತ್ತರಾಗಲು ನಿರ್ಣಯಿಸಿದೆವು.

ಆತ್ಮಹತ್ಯೆಯ ಆಲೋಚನೆ ಮಾಡುವದು ಸುಲಭವು, ಆದರೆ, ಆತ್ಮಹತ್ಯೆಯನ್ನು ಮಾಡಿಕೊಳ್ಳುವದು ಅಷ್ಟು ಸುಲಭವಲ್ಲೆಂದು ನನಗೆ ಹೊಳೆಯಿತು. ಅದರಿಂದ ಯಾವನಾದರೂ ಆತ್ಮಹತ್ಯ ಮಾಡಿಕೊಳ್ಳುತ್ತೇನಾಗಿ ಹೆದರಿಸಿದರೆ, ಅದರಿಂದ ನನಗೇನೂ ಅನಿಸುವದಿಲ್ಲ. ಆತ್ಮಹತ್ಯ ವಿಚಾರದಿಂದ ಕೊನೆಗೆ ಆದದ್ದೆಂಬುವದು ಇಷ್ಟೇ: ನಾವಿಬ್ಬರೂ ಬೀಡಿಯ ತುಂಡುಗಳನ್ನು ಸೇದುವದನ್ನು ಬಿಟ್ಟೆವು; ಬೀಡಿಗಾಗಿ ಆಳಿನ ದುಗ್ಗಾಣಿಗಳನ್ನು ಕಳುವು ಮಾಡುವ ಚಟವನ್ನು ಬಿಟ್ಟುಕೊಟ್ಟೆವು.

ದೊಡ್ಡವನಾದಂದಿನಿಂದ ನನಗೆಂದೂ ಬೀಡಿ ಸೇದಬೇಕೆಂದೆನಿಸಲಿಲ್ಲ. ಬೀಡಿ ಸೇದುವ ಚಟವು ಕಾಡುಪದ್ಧತಿಯದೆಂದೂ, ಹೊಲಸೆಂದೂ, ಅಪಾಯಕರವೆಂದೂ ನಾನು ಗ್ರಹಿಸಿದ್ದೇನೆ. ಭೂಮಂಡಲದಲ್ಲೆಲ್ಲ ಬೀಡಿ ಸೇದುವ ಅಷ್ಟೊಂದು ದೊಡ್ಡ ಹುಚ್ಚು ಯಾಕೆ ಉಂಟಾಗಿರುವದೆಂಬದು ತಿಳಕೊಳ್ಳಲಿಕ್ಕೆ ನಾನು ಬಹಳ ವಿಚಾರಮಾಡಿದೆ. ಆದರೆ, ಈ ಕುರಿತು ಇದುವರೆಗೂ ನನಗೆ ಏನೂ ಗೊತ್ತಾಗಲಿಲ್ಲ. ಬೀಡಿ ಸೇದುವ ಮಂದಿಯಿದ್ದ ಉಗಿಬಂಡಿಯ ಡಬ್ಬಿಯೊಳಗಿಂದ ಪ್ರಯಾಣ ಮಾಡುವದೂ ಕೂಡ ನನಗೆ ಕಷ್ಟವಾಗಿದೆ. ನನಗೆ ಉಸುರುಕಟ್ಟುತ್ತದೆ.

ಕೆಲವು ದಿನಗಳ ತರುವಾಯ ಈಕಳವಿಗಿಂತ ಇನ್ನೊಂದು ಮಹದಪರಾಧವನ್ನು ನಾನು ಮಾಡಿದೆನು. ನೀಚ ಕೆಟ್ಟ ನಮೂರಿಸಿದ ಕಳವಿನ ಸಮಯ ನನಗೆ ೧೨ ಅಥವಾ ೧೩ ವರುಷ ವಯಸ್ಸಾಗಿದ್ದಿರಬಹುದು. ಅದಕ್ಕಿಂತ ಕಡಿಮೆಯೇ ಆಗಿದ್ದಿರಬಹುದು. ಆದರೆ ಈ ಸಮಯ ನನಗೆ ೧೫ ವರ್ಷ ವಯಸ್ಸಾಗಿತ್ತು. ನನ್ನ ಒಬ್ಬ ಅಣ್ಣನು ಮಾಂಸ ತಿನ್ನುತ್ತಿದ್ದನೆಂದು ನಾನು ಮೊದಲೇ ಹೇಳಿದ್ದೇನೆ. ಆತನ ಬಂಗಾರದ ಹಿಳಿಯ ಒಂದು ಬಂಗಾರದ ತುಂಡನ್ನು ನಾನು ಕದ್ದೆ[illegible] ಸುಮಾರು ೨೫ ರೂಪಾಯಿ ಸಾಲವಾಗಿತ್ತು. [illegible] ಒಂದೊಂದಿತ್ತು. ಸಣ್ಣ ತುಂಡು ತೆಗೆಯುವದೇನೂ [illegible] ಕಲ್ಲ. ತುಂಡು ತೆಗೆದು ಸಾಲ ತೀರಿಸಿದೆ. ಆದರೆ ಈ ಅಪಕೃತ್ಯವು ತೀರ ಅಸಹ್ಯವಾಯಿತು. ಇನ್ನು ಮುಂದೆ ಕಳುವು ಮಾಡಲಿಕ್ಕಿಲ್ಲವೆಂದು ನಾನು ಮನಸ್ಸಿನಲ್ಲಿಯೇ ಮಾಡಿಕೊಂಡೆ. ನನ್ನ ತಂದೆಯ ಬಳಿಗೆ ನನ್ನ ಅಪಕೃತ್ಯವನ್ನು ಹೇಳಿಕೊಳ್ಳಬೇಕಾಗಿಯೂ ನಾನು ನಿರ್ಧರಿಸಿಕೊಂಡೆ. ಆದರೆ ಬಾಯಿಯಿಂದ ಈ ಪ್ರಸ್ತಾಪ ಮಾಡುವದು ನನ್ನಿಂದ ಸಾಗದ ಮಾತಾಯಿತು. ತಂದೆ ನಮಗೆ ಹೊಡೆದಾರೆಂಬ ಭೀತಿಯಿಂದಲ್ಲ. ನಮಗೆ ಆತನು ಒಂದಾದರೂ ಹೊಡೆದದ್ದು ನನ್ನ ಜ್ಞಾಪಕದಲ್ಲಿಲ್ಲ. ಈ ಅಪಕೃತ್ಯವನ್ನು ತಿಳಿಸಿದ್ದಲ್ಲಿ ಆತನಿಗೆ ಆಗುವ ವ್ಯಥೆಯ ವಿಚಾರದಿಂದ ನನಗೆ ಬೆದರಿಕೆಯುಂಟಾಯಿತು. ಆದರೆ ಏನಿದ್ದರೂ ನಾನು ಸಹಿಸಿಕೊಳ್ಳಬೇಕೆಂದು ನನಗನಿಸಿತು. ಪಾಪನಿವೃತ್ತಿಯಾಗಬೇಕಾದರೆ, ತುಂಬು ಸತ್ಯನಿವೇದನ ಮಾಡಿದ ಹೊರತು ಗತಿಯಿಲ್ಲವೆಂದು ನನ್ನ ನಿರ್ಧಾರವಾಗಿತ್ತು.

ಕೊನೆಗೆ ನನ್ನ ವಿಚಾರವನ್ನೆಲ್ಲ ಬರೆದು ತಂದೆಗೆ ಸಾದರಪಡಿಸಿ ಆತನ ಕ್ಷಮಾಯಾಚನೆಮಾಡಬೇಕೆಂದು ನಿರ್ಧರಿಸಿಕೊಂಡೆ. ಒಂದು ಕಾಗದದ ಚೀಟಿನ ಮೇಲೆ ಹಕೀಕತವನ್ನು ಬರೆದು ಅದನ್ನು ಸ್ವತಃ ತಂದೆಗೆ ಕೊಟ್ಟೆ. ಅದರಲ್ಲಿ ನನ್ನ ಅಪರಾಧವನ್ನೆಲ್ಲ ನಾನು ಒಪ್ಪಿಕೊಂಡಿದ್ದೆ. ಈ ಕುರಿತು ತಕ್ಕ ಶಾಸನವಾಗಬೇಕೆಂದೂ ಹೇಳಿಕೊಂಡಿದ್ದೆ. ನನ್ನ ಅಪರಾಧಕ್ಕಾಗಿ ಆತನು ಸ್ವತಃ ಯಾವದೇ ಪ್ರಕಾರದ ಶಿಕ್ಷೆಯನ್ನು ಅನುಭವಿಸಬಾರದಾಗಿ ಕೊನೆಗೆ ಬಿನ್ನೈಸಿಕೊಂಡು ಇನ್ನು ಮುಂದೆ ಕಳುವು ಮಾಡಲಿಕ್ಕಿಲ್ಲವೆಂದು ನಾನು ಪ್ರತಿಜ್ಞೆ ಮಾಡಿದ್ದೆ.

ತಂದೆಯವರಿಗೆ ನಾನು ಕಾಗದವನ್ನು ಕೊಟ್ಟೆ. ಆಗ ನನ್ನ ಮೈ ನಡುಗುತ್ತಿತ್ತು. ನನ್ನ ತಂದೆಯವರು ಭಗಂದರ ವ್ಯಾಧಿಯ ಮೂಲಕ ಹಾಸಿಗೆ ಹಿಡಿದಿದ್ದರು. ಆ ಸಮಯ ಅವರು ಬರೇ ಹಲಿಗೆಯ ಮೇಲೆ ಮಲಗಿದ್ದರು. ಕಾಗದ ಕೊಟ್ಟು ಹಲಿಗೆಯ ಎದುರಿಗೆ ನಾನು ಕೂತುಕೊಂಡೆನು.

ತಂದೆಯವರು ಕಾಗದವನ್ನೋದಿದರು. ಮುತ್ತಿನಂತೆ ಅವರ ಕಣ್ಣುಗಳಿಂದ ಕಣ್ಣೀರು ಸುರಿಯಹತ್ತಿತು. ತಂದೆಯವರು ಓದುವದಕ್ಕಾಗಿ ಕೂತುಕೊಂಡಿದ್ದರು. ಕೈಯಲ್ಲಿದ್ದ ಕಾಗದವು ಒದ್ದೆಯಾಯಿತು. ನಿಮಿಷ ಮಾತ್ರ ತಂದೆಯವರು ಕಣ್ಮುಚ್ಚಿ ವಿಚಾರ ಮಾಡಿದರು. ಕಾಗದವನ್ನು ಹರಿದು ಪುನಃ ಮಲಗಿಕೊಂಡರು. ನಾನೂ ಅತ್ತು ಬಿಟ್ಟೆ. ತಂದೆಯವರಿಗುಂಟಾದ ವೇದನೆಯು ನನಗೆ ಪ್ರತ್ಯಕ್ಷ ಕಾಣುತ್ತಿತ್ತು. ನಾನು ಚಿತ್ರಕಾರನಿದ್ದಿದ್ದರೆ ಇಂದಿಗೂ ಆಗಿನ ಆದೇ ನೋಟವನ್ನು ಚಿತ್ರಿಸಬಲ್ಲೆ. ಅಷ್ಟು ಆ ಪ್ರಸಂಗವು ಪ್ರತ್ಯಕ್ಷ ನನಗೆ ಈಗಲೂ ತೋರುತ್ತದೆ.

ಆ ಪ್ರೇಮಾಶ್ರುಗಳಿಂದ ನನ್ನ ಅಂತಃಕರಣಶುದ್ಧಿಯಾಗಿ ಪಾಪಕ್ಷಾಲನವಾಯಿತು. ಇಂಥ ಪ್ರೇಮವನ್ನು ಅನುಭವಿಸಿದವನೇ ಅದನ್ನು ಯಥಾರ್ಥವಾಗಿ ಹೇಳಬಲ್ಲನು. “ಪ್ರೇಮಬಾಣಗಳಿಂದ ಚುಚ್ಚಲ್ಪಟ್ಟವನಿಗೇ ಅವುಗಳ ಸಾಮರ್ಥ್ಯವು ಗೊತ್ತಾಗುವದು,” ಎಂಬ ವಚನವಿರುವದಿಲ್ಲವೇ? ಇದೊಂದು ಅಹಿಂಸಾಪಾಠವಾಗಿತ್ತು. ಆಗ ಅದು ತಂದೆಯ ಪ್ರೀತಿಯ ದ್ಯೋತಕವೆಂದು ನಾನು ತಿಳಕೊಂಡಿದ್ದೆ. ಅದು ನಿರ್ಮಲವಾದ ಅಹಿಂಸೆಯ ಪ್ರಭಾವವೆಂದು ನನಗೆ ಗೊತ್ತಾಗುತ್ತದೆ. ಇಂಥ ಅಹಿಂಸೆಯು ಸರ್ವವ್ಯಾಪ್ತವಾದಾಗ ಎಲ್ಲವೂ ರೂಪಾಂತರ ಹೊಂದುತ್ತದೆ. ಅದರ ಸಾಮರ್ಥ್ಯಕ್ಕೆ ಮಿತಿಯುಂಟೇ?

ಇಷ್ಟು ಘನತರವಾದ ಶಾಂತಿಯಿಂದ ಕ್ಷಮೆಮಾಡುವದು ನನ್ನ ತಂದೆಯ ಸ್ವಭಾವವಲ್ಲ. ಆತನು ಸಿಟ್ಟಾಗಿ ಕಠೋರ ವಚನಗಳನ್ನಾಡಿ ತನ್ನ ಹಣೆಯನ್ನು ಬಡಿದುಕೊಳ್ಳುವನೆಂದು ನಾನು ಎಣಿಸಿದ್ದೆ. ಇದರ ಬದಲು ಆತನ ಶಾಂತಿಯನ್ನು ನೋಡಿ ನನಗೆ ಆಶ್ಚರ್ಯವಾಯಿತು. ಸತ್ಯನಿವೇದನೆಯಿಂದ ಈ ಪ್ರಕಾರವು ಒದಗಿರಬೇಕು. ಅಪರಾಧದ ಸತ್ಯಸ್ಥಿತಿಯನ್ನು ಇದ್ದಕ್ಕಿದ್ದ ಹಾಗೆ ನಮೂದಿಸಿ, ಇಂಥ ಅಪರಾಧಗಳನ್ನು ಇನ್ನು ಮುಂದೆ ಮಾಡಲಿಕ್ಕಿಲ್ಲವಾಗಿ ಪ್ರತಿಜ್ಞೆಮಾಡಿ ಹಕ್ಕುಳ್ಳ ಅಧಿಕಾರಪುರುಷನೆದುರಿಗೆ ಹೇಳಿಕೊಳ್ಳುವದೇ ಪಶ್ಚಾತ್ತಾಪದ ಪರಿಶುದ್ಧ ಪ್ರಕಾರವು. ಸತ್ಯಸ್ಥಿತಿಯ ನಿವೇದನದಿಂದ ತಂದೆಯವರಿಗೆ ನನ್ನ ಕುರಿತು ಇರತಕ್ಕ ಸಂಶಯಗಳೆಲ್ಲ ದೂರವಾಗಿ ಆತನ ಪ್ರೇಮವು ಅಪರಿಮಿತವಾಗಿ ಬೆಳೆಯಿತು.

ಬೆಸ್ಟ ಅಲಾರಂ ಟೈಂಪೀಸ.



ಈ ಗಡಿಯಾರುಗಳು ಜರ್ಮನ್ ದೇಶದಲ್ಲಿ ತಯಾರಿಸಿದ್ದು ಮೇಲೆ ನಿಕ್ಕಲ್ ಪಾಲೀಷ ಎಂದೂ ಕೆಡದ ನಿಕ್ಕಲ್ ಪಟ್ಟಿಯು ಹಾಕಲ್ಪಟ್ಟಿರುವದು. ಇದು ಬಂದಾವಸ್ತ ಬೀಗ ಹಾಕಿದರೆ, ೩೦ ಗಂಟೆಯ ವರೆಗೆ ನಡೆಯುವದು. ಮತ್ತು ಬರಾಬರ ಗಂಟೆಯನ್ನು ತೋರಿಸುವದು. ಗಡಿಯಾರದ ಎತ್ತರ ೭ ಅಂಗುಲವಿರುವದು. ಗಂಟೆ ತೋರಿಸುವ ಡಯಲು ೪ ಅಂಗುಲವಿರುವದು. ಇದರಲ್ಲಿ ಅಲಾರಂ ಇರುವದರಿಂದ ಬೆಳಗಿನ ಜಾವದಲ್ಲಿ ಬೇಗನೆ ಗಂಟೆಯನ್ನು ಗುರುತು ಹಿಡಿದರೆ ಬಾರಿಸುವದು. ಅಂಗಡಿ, ಸ್ಕೂಲು, ಮನೆ, ರೀಡಿಂಗ ರೂಮು ಮುಂತಾದವುಗಳಲ್ಲಿ ಇಡಲು ಬಹು ಉಪಯುಕ್ತವಾದದ್ದು. ಇವಕ್ಕೆ ಖಾತ್ರಿಯಾದ ೫ ವರ್ಷದ ಗ್ಯಾರಂಟಿ ಕೊಡುವೆವು. ಕ್ರಯ ೧ಕ್ಕೆ ರೂ. ೪—೪—೦ ಅಲಾರಂ ಇಲ್ಲದ್ದು ೧ಕ್ಕೆ ರೂ. ೪—೪—೦

ಹರ್ಸ ಇಮಿಟೇಶನ ರೇಶ್ಮೆ ಸೀರೆಗಳು



ಈ ಸೀರೆಗಳನ್ನು ಹೆಸರುವಾಸಿಯಾದ ದೊಡ್ಡ ಕಂಪನಿಯವರಿಂದ ತಯಾರಿಸಿದ್ದು ೧೮ ಮೊಳ ಉದ್ದ ೨॥। ಮೊಳ ಅಗಲವು ಇರುವದು. ಇವನ್ನು ಲಂಡನ್ ಪಟ್ಟಣದ ಹೊಸ ಗಟ್ಟಿಯಾದ ಸಣ್ಣ ನೂಲಿನಿಂದ ರೇಶಿಮೆಯಂತೆಲೂ ತಯಾರಿಸಿದ ಹೊಸ ನಮೂನೆಯ ಅಂಚೂ, ಸುಂದರವಾದ ಸೆರಗೂ ಇರುವವು. ಇವು ಯಾವಾಗೂ ರೇಶಿಮೆಯಂತೆ ಇರುವವು. ಎಲ್ಲಾ ಬಣ್ಣಗಳಲ್ಲಿಯೂ ಸಿಕ್ಕುವವು. ಮತ್ತು ಎಲ್ಲಾ ಮನೆಯವರಿಗೂ ಉಪಯುಕ್ತವಾದದ್ದು. ಕ್ರಯ ೩೦ ೧ಕ್ಕೆ ರೂ. ೬—೦ ೩ಕ್ಕೆ ರೂ. ೭—೦—೦ ಸಾಗ ಸೀರೆ ೧ಕ್ಕೆ ರೂ. ೧—೦

ವಿಳಾಸ:— ಎಂ. ಬೆನ್ಸನ್ ಎಂಡ್ ಕೋ.
೫೦೪, ಪೋಸ್ಟಬಾಕ್ಸ, ಮದರಾಸ.

ಮಹಾಶಿವರಾತ್ರಿಗಾಗಿ

ಗೋಕರ್ಣಕ್ಕೆ ಬರ-ಹೋಗುವ

ಯಾತ್ರಿಕರಿಗೆ

ನೇಮಿಸಿದ ಹೊತ್ತಿಗೆ ಮೋಟರಿನ ವ್ಯವಸ್ಥೆ

ಹಾಗೂ

ವಸತಿಗೆ, ಊಟ, ವಾಸದ ಬಗ್ಗೆ ಯೋಗ್ಯ ವ್ಯವಸ್ಥೆ!

ಈ ಕೆಳಗಿನಂತೆ ಮೋಟಾರ ವ್ಯವಸ್ಥೆಯಿದೆ—

ಗೋಕರ್ಣದಿಂದ ಕುಮಟಾ, ಹೊನ್ನಾವರ, ಭಟ್ಕಳ ಗೋಕರ್ಣದಿಂದ ಕುಮಟಾ, ಶಿರ್ಸಿ, ಹುಬ್ಬಳ್ಳಿ ಗೋಕರ್ಣದಿಂದ ಅಂಕೋಲಾ, ಕಾರವಾರ.

ಟೀಪು —ಟಿಕೇಟು ಮುಂದಾಗಿ ಪಡಕೊಳ್ಳಲಿಚ್ಛಿಸುವವರು ಈ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡತಕ್ಕದ್ದು.

ಅನಂತ ಮಂಗೇಶರಾವ ಹಳದಿಪುರಕರ,

ಮೋಟರ ಏಜಂಟ,

ಕುಮಟಾ, (ಉತ್ತರ ಕನ್ನಡ)

ಸುಗಂಧಿ ತಾಂಬೂಲೀ ಜರ್ದಾ!

ಈ ಜರ್ದಾ ತಿನ್ನಲಿಕ್ಕೆ ಕಡಕ ಇದ್ದು, ಸುವಾಸಿಕ ವಿರುತ್ತದೆ ಇದರ ಸೇವನದಿಂದ ಬಾಯಿಯು ಹೊಲಸು, ಹೇಡಸೆ, ಹುಳ ಇವು ನಾಶವಾಗಿ ಹಲ್ಲುಗಳು ಒಳ್ಳೇ ಘಟ್ಟಿಯಾಗುತ್ತವೆ. ಇದರ ಸೇವನದಿಂದ ದಮ್ಮು, ಕಫ ಮುಂತಾದ ವಿಕಾರಗಳುಂಟಾಗುವ ಸ್ವಲ್ಪವೂ ಭೀತಿಯಿಲ್ಲ ಕಾರಣ, ತಂಬಾಕು ಸೇವಿಸುವವರು ಅವಶ್ಯವಾಗಿ ಅನುಭವ ತೊಳ್ಳಬೇಕು ೧ ಕುಪಿ ಕಿಂ ರೂ ೦೦೬, ೨ ಆರ ಕಿಂ ರೂ ೦-೯ ೦, ೫೦೦ ಕಿಂ ರೂ. ೧-೦-೦ ೧೦೦೦ ಕುಪಿಗಳ ಕಿಂ ರೂ ೧೭ ೦-೦, ಟಪಾಲ, ಪೆಕಿಂಗ ಖರ್ಚು ಬೇರೆ ಪ್ರತ್ಯೇಕ

ಸುಗಂಧಿ ನಶ್ಯ.—ಈ ನಶ್ಯವು ಒಳ್ಳೇ ತಂಬಾಕಿನಿಂದ ಮಾಡಿದ್ದಿದ್ದು, ಇದರಿಂದ ಶ್ಲೇಷ್ಮ ಥಂಡಿ ಅರತಲೆಬಡತ ಮುಂತಾದವುಗಳು ಕೂಡಲೆ ಮಾಯವಾಗಿ ತಲೆಯು ಭಾರವಾಗಿದ್ದರೂ ಹಗುರವಾಗಿ ವಿಚಾರಶಕ್ತಿಗೆ ಚಪಲತೆಯು ಪ್ರಾಪ್ತವಾಗುವದರಿಂದ ಯಾವದೇ ಕೆಲಸವನ್ನು ಕೈಕೊಳ್ಳಲಿಕ್ಕೆ ಸ್ಫೂರ್ತಿಯುಂಟಾಗುತ್ತದೆ ಒಮ್ಮೆ ಪರೀಕ್ಷಿಸಿ ಖಾತ್ರಿಮಾಡಿಕೊಳ್ಳಿರಿ. ೧ ಡಬ್ಬಿ ಕಿಂ. ರೂ. ೦-೪-೦, ೧ ಡಜನ್ ಡಬ್ಬಿ ಕಿಂ ರೂ ೩-೦-೦ ಪೆಕಿಂಗ, ಪೋಸ್ಟೇಜ ಖರ್ಚು ಬೇರೆ

ಉತ್ತಮ ಬೀಡಿಗಳು:—ಅತ್ಯುತ್ತಮ ಪ್ರತಿಯ ತಂಬಾಕಿನಿಂದ ಚನ್ನಾಗಿ ಕಟ್ಟಿದ ಬೀಡಿಗಳು ನಮ್ಮಲ್ಲಿ ತಯಾರಿರುತ್ತವೆ. ಕಿಮ್ಮತ್ತಿನ ವಿಷಯಕ್ಕೆ ಬರೆದು, ಫುರಸತ್ ನೋಡಿ ನಮ್ಮಲ್ಲಿಗೆ ಆರ್ಡರ ಕೊಡತಕ್ಕದ್ದು. ಇದರ ಹೊರತು, ನಮ್ಮಲ್ಲಿಯು ಬಾಜಾರದಲ್ಲಿ ಎಲ್ಲಾ ಪ್ರಕಾರಗಳ ತಂಬಾಕು ಬರುತ್ತದೆ, ಬೇರೆ ವಿಧ ನಮೂನೆಯ ತಂಬಾಕನ್ನು ಯೋಗ್ಯ ದಲಾಲಿ ತಿಂದು, ಖರೇದಿ ಮಾಡಿಕೊಡುವೆವು. ವಿಶೇಷ ಮಾಹಿತಿ ಬಗ್ಗೆ ಪತ್ರವ್ಯವಹಾರ ಮಾಡಿದರೆ, ಕೂಡಲೆ ಉತ್ತರ ಬರೆಯುವೆವು.

ಪತ್ತೆ.- ಎಸ್. ಬಿ. ಕದಂ,

ಬೀಡಿ ಮತ್ತು ತಂಬಾಕು, ಜರ್ದಾ ದುಕಾನ,

ಮು॥ ಪೋ॥ ನಿಪ್ಪಾಣಿ, ಜಿ. ಬೆಳಗಾಂವ

"ಚಾಟಾನೂಗಾ" ಕಬ್ಬಿನ ಗಾಣ!

ಜಗತ್ತಿನಲ್ಲಿ ಸರ್ವೋತ್ಕೃಷ್ಟವೆಂದೇ ಇದು ಇಷ್ಟು ಪ್ರಖ್ಯಾತಿ ಹೊಂದಿತು!

ನಂ ೧೨, ರೂ ೧೪೫

,, ೧೪, ರೂ ೧೬೫.

,, ೨೨, ರೂ ೧೯೦

,, ೩೨, ರೂ ೩೬೮.

ಮಾಲು ಮುಂಬಯಿ ರೇಲ್ವೆ ಸ್ಟೇಶನ್ನಿನ ವರೆಗೆ ತಂದು ಕೊಡಲ್ಪಡುವದು



ಇದರ ರೋಲುಗಳು ಶುದ್ಧ ಕಬ್ಬಿಣದಿಂದ ಮಾಡಿದ್ದಿರುತ್ತವೆ. ಕಬ್ಬಿನೊಳಗಿನ ಹನಿ ಹನಿ ರಸವನ್ನೂ ಕೂಡ ಹಿಂಡಿ ತೆಗೆಯುವ ವ್ಯವಸ್ಥೆ ಮಾಡಲ್ಪಟ್ಟಿರುತ್ತದೆ. ಗಾಣದ ಎರಡೂ ಬದಿಗಳ ಯಾವದೇ ಬದಿಯಿಂದ ಕಬ್ಬು ಕೊಡಬಹುದು

ಆರ್ಡರಿನ ಸಂಗಡ ೧/೪ ಹಣವನ್ನು ಡಿಪೋಜಿಟ್ಟಾಗಿ ಕಳಿಸಬೇಕು.

ಕ್ಯಾಟಲಾಗು "ಡಬ್ಲ್ಯು ೧೧೨" ಪುಕ್ಕಟೆ!

ಮೆಕ್‌ಬೆಥ ಬ್ರದರ್ಸ ಎಂಡ್ ಕಂಪನಿ, ಲಿಮಿಟೆಡ್.

ಕೋಡಾಕ ಹೌಸ, ಹೊರ್ನಬಿ ರೋಡ, ಮುಂಬಯಿ.

ಏಜಂಟರು ಬೇಕು! ಏಜಂಟರು ಬೇಕು!

ನಮ್ಮಲ್ಲಿ

ಅತಿ ಮನೋಹರವಾದ

ಶೀಶೆ ಕಟ್ಟಿಗೆಯ

ದೇವರ ಮಂಟಪಗಳೂ,

ಹೆಂಗಸರ ಸೌಭಾಗ್ಯವತಿ ಪೆಟ್ಟಿಗೆಗಳೂ, ಡಿಳ್ಳನೇರೀ ಪೆಟ್ಟಿಗೆಗಳೂ, ಆಫೀಸ ಬಾಕ್ಸಗಳೂ, ರೊಕಿಂಗ ಖುರ್ಚೆಗಳೂ ಹಾಗೂ ಯಾವತ್ತೂ ತರದ ಮನೇ ಸಾಮಾನು ಸಿಗುತ್ತದೆ

ನಮ್ಮ ವಿಳಾಸ—

ದಿ ನೊರ್ಥ ಕೆನರಾ ಟ್ರೇಡಿಂಗ ಕಂಪನಿ,

ಶಾಂತಿ ಭುವನ,

ಕಾರವಾರ.

धातु क्षीणता व कमजोरपणा यांसाठीं

मदन मंजरी गोळ्या. (रजिस्टर्ड.)

या दिव्य गोळ्या रक्त व वीर्य सुधारून त्याची चांगली वाढ करतात. पचन शक्ति सुधरून परसाकडे साफ होते त्याचप्रमाणें प्रत्येक प्रकारची अशक्तता दूर होऊन शरीर तेजदार व बळवान होतें. कि ४० गोळ्यांच्या डबीस रु १.

रमण विलासिनी गोळ्या. रात्रौ फक्त १ गोळी दुधाबरोबर खाल्यानें इच्छेप्रमाणे वीर्यस्तंभन होते. किं. डबीस रु. १

नपुंसकत्वारी घृत. हा लेप पुरुषाच्या गुह्यभागावर लावला असतां सर्व रोग नाश पाऊन खरें पुरुषत्व प्राप्त होतें. किं. डबीस रु. १.

कुमटा एजंट — माधव सांतप्पा शेणवी बेलेकेरी

राजवैद्य नारायणजी केशवजी वैद्यः— १९३ काळबादेवी रोड मुंबई २

ರೋಗದಿಂದ ನರಳಬೇಡಿರಿ.

ನಮ್ಮಲ್ಲಿ ಜಂತು ಗುಳಿಗೆ, ಪಿತ್ತ ಗುಳಿಗೆ, ಎಲ್ಲ ತರದ ಜ್ವರ, ಜ್ವರಗಡ್ಡೆ, ಚಳಿಜ್ವರ, ಕಾಮಿಲೆ, ದಮ್ಮು, ಕೆಮ್ಮು, ಕಫ, ಅಗ್ನಿಮಾಂದ್ಯ, ಮಲಬದ್ಧತೆ, ಮೂಲವ್ಯಾಧಿ, ನರ, ವಾತ, ಕಲಿನಡತ, ಪ್ರದರ, ಗರ್ಭಾಶಯದ ಎಲ್ಲ ರೋಗ, ಪ್ರಮೇಹ, ಉಪದಂಶ ಗಮಿ ೯) ಬಾಲಗ್ರಹ ಖಜ್ಜಿ, ಗಜಕರ್ಣಗಳಿಗೆ ಖಂಡಿತ ಗುಣ ಬರುವ ಜರ್ಮನ, ಅಮೇರಿಕನ, ಫ್ರೇಂಚ ಇಂಗ್ಲಿಷ ವ ಸ್ವದೇಶಿ ಪೇಟಂಟ ಔಷಧಗಳು ಬಹಳ ಅಗ್ಗವಾಗಿ ಸಿಗುವವು.

ಇದಲ್ಲದೆ ಎಲ್ಲ ತರದ ಪೇಟಸರಿ, ಪರಫ್ಯೂಮರಿ ಸ್ಪೋರ್ಟಿಂಗ ಸಾಮಾನು, ಟಿಲ್ಲ ಸ್ಟೋ ಬ್ಯಾಲ, ಸುಪರದಿಟ, ಮೋಟರಿಸ ಮೊಟಾರ ಬಂಡಿಗಳು, ಸುಲಭದ ದರದಿಂದ ಸಿಗುವವು ನಮ್ಮಲ್ಲಿದ್ದ ನಿಮಗೆ ಅವಶ್ಯವಿದ್ದ ಸಾಮಾನು ಬೇರೆ ದೇಶದಿಂದ ತರಿಸಿ ಕೊಡಲಾಗುವದು.

ಎಸ್ ಎಲ್ ಧಾಕಪ್ಪ ಮತ್ತು ಪ್ರದರ್ಶ,

ಸಿರಸಿ

ಹಾಕ್ಟರ ಜೀ. ಬೀ ಯವರ

ಸುಗಂಧ ನಶ್ಯದ ಪುಡಿ

ಸುಲಭ ಕ್ರಯ! ಸುಲಭ ಕ್ರಯ!!

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾ... ಮಂ... ಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪಿನಸಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಬೇಲ್ಪಟ್ಟ ಸ... ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಟ್ಟದ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಜನರು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ... ಕಳಿಸಲಾದೀತು.

ಬುಡ್ಡಿ ಒಂದಕ್ಕೆ ಕಿಮ್ಮತ್ತು ೦-೪-೦. ವ್ಹಿ. ಪಿ ೪ ಆಣೆ ಡಜನ್ ೧ ಕ್ಕೆ ರೂ. ೨-೮-೦. ವ್ಹಿ. ಪಿ. ೦-೮-೦ ದಯಮಾಡಿ ನಿಮ್ಮ ಹೆಸರನ್ನೂ ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ —ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪೋ. ಬಾ. ೫೧೦, ಜಾರ್ಜಟೌನ, ಮದರಾಸ

ವಿಶೇಷ] ಅನುಭವಸಿದ್ಧ [ಪಥ್ಯವಿಲ್ಲ

ವನೌಷಧಿಮೂಲಿಕೆಗಳು

ವಾಯುದುಮ್ಮಸ (ನಿಮೋನಿಯಾ) ವಾಂತಿಭ್ರಾಂತಿ (ಕೊಲೆರಾ) ಅರ್ಧಾಂಗವಾಯು (ಪೆರಾಲೆಸಿಸ್) ಹುಚ್ಚು ನಾಯಿ ಸಾಯಿಕಡಿತ ಸರ್ಪದ ವಿಷ ಹೊಟ್ಟೆಯಲ್ಲಿ ಕೃತ್ರಿಮ ವಿಷಹಾಕಿದ್ದು (ಕೈಮದ್ದು) ವಗೈರೆ ರೋಗಗಳಿಗೆ ಒಂದೆ ಒಂದು ಮೂಲಿಕೆಯಿಂದ ಖಾತ್ರಿಯಾಗಿ ತೀವ್ರ ಗುಣಬರುವದು. ಇವು ಬಹುಕಾಲದಿಂದ ಅನುಭವ ತಕ್ಕೊಂಡಿದೆ. ಹಾಗು ಪ್ರತಿನಿತ್ಯ ಈಕಡೆಗೆ ಒಳಿಕೆಯಲ್ಲಿದ್ದ ಬಜಾರಿಗೆ ಬರುವ ಔಷಧಿಗಳ ತಾಜಾ ಮೂಲಿಕೆಗಳು ಒಮ್ಮೆ ತರಿಸಿ ಅನುಭವ ತಕ್ಕೊಂಡರೆ ಖಾತ್ರಿಯಾದೀತು. ಕೊಲೆರಾ ಔಷಧಿಗಳ ದ್ರಾವಕ (Tincture) ಸಹ ಆಗಾವು ಸೂಚಿಸಿದರೆ ಕಳುಹುವೆವು.

ವಾಯುದುಮ್ಮಸದ ಬಗ್ಗೆ ಔಷಧಿ ಮೂಲಿಕೆ ತೊಲೆ ೧ ಕ್ಕೆ ೦-೨-೦

ಕೊಲೆರಾದ ಬಗ್ಗೆ „ „ ೦ ೨ ೦

ಅರ್ಧಾಂಗ ವಾಯುವಿನಬಗ್ಗೆ

೧ ವಾಸಿಗೆ ಸಾಲುವಷ್ಟು ॥ ಶೇರು ..೧ ೭ ೦

ಪ್ರಕೃತಿ ತಿಳಿಸಬೇಕು.

ನಾಯಿ ಕಡತದಬಗ್ಗೆ ೦-೪ ೦

ಸರ್ಪಸುತ್ತಿನ ಬಗ್ಗೆ ... ೦ ೨ ೦

ಹೊಟ್ಟೆಯಲ್ಲಿ ಕೃತ್ರಿಮ ಔಷಧಿ ಬಿದಬಗ್ಗೆ ತೊಲೆ ೧೦ ಕ್ಕೆ ೦-೮-೦

ರಕ್ತಶುದ್ಧಿ ವ ಮಲಶೋಧನೆ ಬಗ್ಗೆ ಮೂಲಿಕೆ ಬಾಟ್ಲಿ ಕ್ಕೆ ೧ ೦ ೦

ಮೋರಾವಳಾ (ನೆಲ್ಲಿಕಾಯಿ ಗುಳಂಬ) ಬಾಟ್ಲಿ ೧ ಕ್ಕೆ ೧-೦ ೦

ದಾಕುಗಳಲ್ಲಿ ಯಾ ಆದಕ್ಕೂ ಹೆಚ್ಚು ತರಿಸಿಕೊಳ್ಳುವವರಿಗೆ ಕಡಿಮೆ ದರದಿಂದ ಕಳಿಸಲ್ಪಡುವದು ಟಪಾಲ ಖರ್ಚ ಪ್ರತ್ಯೇಕ. ವಿಶೇಷ ಮಾಹಿತಿ ಪತ್ರ ದ್ವಾರಾ. ಅನುಪಾನಪತ್ರ ಔಷಧೀ ಸಂಗಡ.

ಎನ್. ಜಿ. ಹೆಗಡೆ, ಮಾಸ್ತೇರಿ,

ಪೋಸ್ಟ—ಬಂಕಿಕೊಡ್ಲ ಜಿ. ಉತ್ತರ ಕಾನಡಾ

ಸರಕಾರದಿಂದ ಪೇಟಂಟ ಪಡೆದ

ಮಲ್ಬಾರ ಕಪ್ಪಲಿ.

ತೋಟಿಗರಿಗೆ ಬಹಳ ಅನುಕೂಲವಾಗಿರುವವು.

ಇವು mild steel ಎಂಬ ಜಾತಿಯ ಉಕ್ಕಿನ ತಗಡಿನಿಂದ ಮಾಡಲ್ಪಟ್ಟಿರುವದು ಎತ್ತುಗಳಿಗೆ ಬಹಳೇ ಹಗುರವಾಗುತ್ತದೆ ಇವುಗಳೊಳಗಿಂದ ಒಂದು ಹನಿ ಸಹ ನೀರು ಕೆಳಗೆ ಬೀಳದಂತೆ ಮಾಡಿದ, ಪಾಡಲ್ಪಟ್ಟಿರುವದ ಕಪ್ಪಲಿ ಬಾಯಿಂದ ನೀರು ಡೋಣಿಯಲ್ಲಿ ಬೀಳುವ ಕಾಲಕ್ಕೆ ... ರಚನೆಯಲ್ಲಿ ಸುಧಾರಣೆಯನ್ನು ಮಾಡಿದ್ದೇವೆ

ಬೆಲೆಯ ಬಗ್ಗೆ ಬರೆದು ಕೇಳಿಕೊಳ್ಳಿರಿ

ಕಿರ್ಲೋಸ್ಕರ ವಾರ್ತೆ —ಜನವರಿ ಸಂಚಿಕೆಯು

ಹೊರಬಿದ್ದಿರುವದು. ವಾರ್ಷಿಕ ಚಂದಾ ರೂ. ೧-೪-೦

ಕಿರ್ಲೋಸ್ಕರ ಬಂಧು ಲಿಮಿಟೆಡ್; { ಕಿರ್ಲೋಸ್ಕರವಾಡಿ, ಜಿಲ್ಹಾ ಸಾತಾರಾ

ಅಮೃತಾಂಜನ.



ಇದರ ಉಪಯೋಗದಿಂದ, ವಾತವೇದನೆ, ಉಳುಕು ಇತ್ಯಾದಿ ವ್ಯಾಧಿಗಳಮೇಲೆ, ರಾಮಬಾಣದಂತಾಗಿರುವದು. ಕಳೆದ ೩೩ ವರ್ಷಗಳಿಂದ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗುತ್ತದೆ. ಲಕ್ಷಗಟ್ಲೆ ಕುಟುಂಬಗಳು ಅಮೃತಾಂಜನವನ್ನು ಉಪಯೋಗಿಸುತ್ತಿರುವವು. ಆದವಂತೆ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಬೀಗು, ಸಂಧಿವಾತ ಮೊದಲಾದ ಎಷ್ಟೋ ವ್ಯಾಧಿಗಳಮೇಲೆ ಇದು ಗುಣಕಾರಿಯೆಂದು ಅರಿಯಬೇಕಾದರೆ ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬೇಕು. ಕಿಮ್ಮತ್ತು ೧೦ ಆಣೆ ವ್ಹಿ. ಪಿ. ಖರ್ಚ ಬೇರೆ.

ಅಮೃತಾಂಜನ ಡಿಪೋ, ಫೋರ್ಟ, ಮುಂಬಯಿ.

Printed and Published by Krishnarao Keshav Shenvi (Editor) at his Star of Kanara Press Kumta

Reg. No. B 1270.

Monday, March 1st, 1926.

ವರ್ಷ ೧೦.

ಸಂಚಿಕೆ ೨೧.

ಕಾನಡಾವೃತ್ತ.

THE KANARA NEWS.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः।
इति महति विरोधे वर्तमाने समाने नृपतिजनपदानां दुर्लभः कार्यकर्ता॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಪತ್ರದ ವರ್ಗಣಿ.

ಮುಂಗಡವಾಗಿ ಕೊಟ್ಟರೆ ರೂಪಾಯಿ 2-4-0
ವರ್ಷಾರ್ಧದಿಂದ ರೂ. 3-0-0.
ಅಂಚೆವೆಚ್ಚ ಸಹ ರೂಪಾಯಿ 3-2-0.
ಪ್ರತಿ ಸಂಚಿಕೆ 0-1-0.

ಜಾಹಿರಾತುಗಳ ದರ

ಕನ್ನಡ, ಇಂಗ್ಲಿಷ ಸ್ಮಾಲ ಪೈಕಾ (೧೧ ಎಮ್ ಅಗಲ) ೫ ಸಾಲುಗಳವರೆಗೆ ರೂ. 1-0-
ಆನಂತ್ರ ಪ್ರತಿಸಾಲಿಗೆ 0-2-0.
ಜಾಹಿರಾತು ಎಷ್ಟು ದೊಡ್ಡದಿರುವದೋ ಆ ಮಾನದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.
ಬಾಕಿ ಜಾಹಿರಾತುಗಳ ಬಗ್ಗೆ ಪತ್ರವ್ಯವಹಾರ ಯಾ ಸಮಕ್ಷ ತಿಳಿಸಲ್ಪಡುವದು.

(ಕುಮಟಾ—ಕಾನಡಾವೃತ್ತ ಸೋಮವಾರ, ತಾರೀಖು ೧ ಮಾಹೆ ಮಾರ್ಚ ಸನ್ ೧೯೨೬ ನೇ ಇಸವಿ.)

हिंदुस्थानातील रहिवाशांस ज्याप्रमाणे हिंदुस्थानची हवा त्याप्रमाणेच हे औषध हिंदुस्थानातील लोकांस ज्यास्त फायदेशीर आहे.

द्राक्षासव-

दीड रतलची किंमत २ रुपये.

रामबाण औषधें

सर्दि पळविणारें,
भूक वाढविणारें,
शौच्यास साफ करणारें,
झोप आणणारें,
शक्ति देणारें,
तेजस्वीपणा आणणारें,

पिण्यांस रुचिकर

कचाटलाग मागवा,

हिंदुफार्मास्युटिकलवर्क्सलिमिटेड,

मुंबई नं: १३

एजंट— मेसर्स पंडित आणी कंपनी, तीर्थहळ्ळी.

ಬೇಕಾದ ಚಿನ್ನಾಭರಣಗಳು ನಮಗೆ ಆರ್ಡರ ಕೊಟ್ಟಲ್ಲಿ ಯೋಗ್ಯ ಮುದ್ದತ್ತಿನಲ್ಲಿ ಕೊಡುವೆವು.

R. S. KASARGOD. B.A.

Jewellers, KUMTA.

ಆರ್. ಎಸ್. ಕಾಸರಗೋಡ, ಬಿ. ಏ.,

ರತ್ನಾಭರಣ ವ್ಯಾಪಾರಿ,-ಕುಮಟಾ.

ಯಾವದೇ { ಆಕಾರದ / ನಕ್ಷೆಯ / ನಂಬರಿನ } ಗಡಿಯಾರವನ್ನು

ಬರೇ ೭ ರೂಪಾಯಿಗಳಿಗೆ ಕೊಡುತ್ತೇವೆ.
ಮೂಲ ಬೆಲೆ ರೂಪಾಯಿ ೧೪, ಅರ್ಧ ಬೆಲೆ ರೂಪಾಯಿ ೭,



ಬರೇ ಒಂದು ತಿಂಗಳ ಒಳಗೆ, ನಾವು ಈ ದರವನ್ನು ಹೊಸ ವರ್ಷದಲ್ಲಿ ಮಾತ್ರ ಕೊಡುತ್ತೇವೆ. ಎಲ್ಲಾ ಗಡಿಯಾರಗಳನ್ನು ಅರ್ಧ ಬೆಲೆಗೆ ಮಾರುತ್ತೇವೆ. ಅತ್ಯುತ್ತಮ ಚಲನೆ! ನಿರ್ದೋಷ ಯಂತ್ರರಚನೆ !! ಧರಿಸುವದಕ್ಕೆ ಯೋಗ್ಯ ಹಾಗು ರಮ್ಯ!!! ಎಲ್ಲಾ ಗಡಿಯಾರಗಳಿಗೆ ಗ್ಯಾರಂಟಿ ಇರುತ್ತದೆ. ಯಾವದೇ ಆಕಾರದ, ನಕ್ಷೆಯ, ನಂಬರಿನ ಗಡಿಯಾರವನ್ನು ಉತ್ಕೃಷ್ಟ ಚರ್ಮ ಪಟ್ಟಿಯ ಸಹಿತ ಉಚಿತವಾಗಿ ಕೊಡುತ್ತೇವೆ. ಬೆಲೆ ರೂಪಾಯಿ ೭ ಮಾತ್ರ!

ಅಲ್ಪವೇ ಇವೆ; ಈಗಲೇ ಬರೆಯಿರಿ.

ಪತ್ತೆ:— Swan House: P B 603 P T Madras

ಅತಲ್ಲವಿವೆ! ಉಚಿತ!

ಕೇವಲ ಉಚಿತ



ಉಚಿತ ಕೇವಲ ಉಚಿತ !

"ತಾರಾ" ಲೀವರ ರಜಿಸ್ಟರ್ಡ ಪೊಕೆಟ್ ವಾಚು ೧೮ ಕೆರೆಟ್ ರೋಲ್ಡ ಗೋಲ್ಡಿನದು. ಮುಚ್ಚಳವಿಲ್ಲದ ಮೇಲೆ ೫ ವರ್ಷದ ಗ್ಯಾರಂಟಿ ಇರುವದೆಂದು ಗಡಿಯಾರ ಕರ್ತರು ಅಚ್ಚು ಹೊಡೆದಿರುವರು. ಈ ಗಡಿಯಾರವನ್ನು ಕೊಂಡುಕೊಳ್ಳುವವರಿಗೆ ನಾವು ನಮ್ಮ "ಸಿ" ರಜಿಸ್ಟರ್ಡ ಟೈಂಪೀಸನ್ನು ಉಚಿತವಾಗಿ ಕೊಡುತ್ತೇವೆ. ಇದೊಂದು ಅಪೂರ್ವ ಕಾಣಿಕೆ ಕೆಲವೇ ಗಡಿಯಾರಗಳಿವೆ. ಒಮ್ಮೆ ಕೊಂಡು ನೋಡಿರಿ ಉಚಿತವಾಗಿ ಟೈಮಪೀಸ ಹಾಗು "ತಾರಾ" ಲೀವರ ರಜಿಸ್ಟರ್ಡ ೧೮ ಕೆರೆಟ್ ರೋಲ್ಡ ಗೋಲ್ಡಿನ ಪೊಕೆಟ್‌ವಾಚ್ ಗಡಿಯಾರಗಳಿಗೆ ಕೂಡಿ ಬರೇ ರೂಪಾಯಿ ೫

CAPTAIN WATCH CO., P. B. 265, MADRAS

ದರ ಕಡಿಮೆ ಮಾಡಿರುವೆವು ! ಸುಸಂಧಿ!

ನಮ್ಮ ಸುಪ್ರಸಿದ್ಧ ಇಂಗ್ಲಿಷ ಮೋಡ

ಸಾಯಕಲ

ವೆಲಿಂಗ್ಟನ

ಸಾಯಕಲ ಮತ್ತು ಮೋಟಾರ ಕಂಪನಿ, ಹೊರ್ನಬೀ ರೋಡ, ಮುಂಬಯಿ ನಂಬರ ೧.

ಅರ್ಸೆನಲ ರೋಡ, ಪುಣೆ.

ರೀಹುಣ್ಣಿಮೆಯಿಂದ ೪ನೇ ವರ್ಷ ಪ್ರಾರಂಭ

ಸಚಿತ್ರ| ಜಯಕರ್ನಾಟಕ [ಮಾಸಪತ್ರಿಕೆ

ಸಂಪಾದಕ-- ಆಲೂರ ವೆಂಕಟರಾಯರು

ಇದರಲ್ಲಿ ವಾಙ್ಮಯಾತ್ಮಕ ಸಾಹಿತ್ಯ, ಧಾರ್ಮಿಕ ಸಾಮಾಜಿಕ ಐತಿಹಾಸಿಕ ಆರ್ಥಿಕ ಇತ್ಯಾದಿ ವಿಷಯಗಳು ಬರುವವು. ಪ್ರಪಂಚ ಪರಿಚಯ, ಜೀವನಚರಿತ್ರ, ನಾಟಕಾದಿಗಳು ಕೊಡಲ್ಪಡುವವು. ಪ್ರತಿ ಸಂಚಿಕೆಯಲ್ಲಿಯೂ ಸುಂದರ ಚಿತ್ರಗಳೂ ಇರುತ್ತವೆ. ಜೊತೆಗೆ ರಿಪ್ಪ್ಯ ಆಕಾರದ ೩೦ ಪುಟಗಳು. ವರ್ಗಣಿ. ರೂ. ೫-೮-೦

ಕಾರ್ಯದರ್ಶಿ ಜಯಕರ್ನಾಟಕ, ಧಾರವಾಡ.

ಎಲ್ಲಾ ನೋವುಗಳಿಗೆ ದಿವ್ಯೌಷಧ

ವಾತಹಾರಿ ತೈಲ.

ಕ್ರಯ ೫ ತೊಲಿ ಬಾಟ್ಲಿ ೧ ಕ್ಕೆ ೦—೧೨—೦ ಅಂಚೆ ಸುವಾಸಿಕ ಕಾಬೂಲಿ ಹಿಂಗು ೧೦ ತೊಲಿ ಡಬ್ಬಿ ೧ ಕ್ಕೆ ೧—೮—೦. ಹಿಂಗಿನ ಅರ್ಕ ॥ ತೊಲೆಯ ಬಾಟ್ಲಿ ೧ ಕ್ಕೆ ೦—೮—೦ ರಕ್ತಶುದ್ಧಿಕಾರಕ ಧಾತು ಪೌಷ್ಟಿಕ, ಶಕ್ತಿವರ್ಧಕ ಹಲವಾ ೨೦ ತೊಲಿಯ ಡಬ್ಬಿ ೧ ಕ್ಕೆ ೧—೪—೦. ೧ ತೊಲಿಯ ಹಿಂಗಿನ ಡಬ್ಬಿಗಳು ಡಜನ್ ೧ ಕ್ಕೆ ೨—೦—೦. ತಲೆಗೆ ಹಾಕುವ ಸುವಾಸಿಕ ಮಸಕರಾಚ ತೈಲ ೫ ತೊಲಿಯ ಬಾಟ್ಲಿ ೧ ಕ್ಕೆ ೦—೧೨—೦. ಹಳದ ಪ್ರೊಮ ತೊಲಿ ೧ ಕ್ಕೆ ೦—೮—. ಇದಲ್ಲದೆ, ನೀಲಗಿರಿ ತೈಲ, ಎಲ್ಲಾ ತರದ ಅಂಚೆ ಊದಬತ್ತಿಗಳು ಯೋಗ್ಯ ಕಿಂಮತಿಗೆ ಸಿಗುವವು. ಟಪಾಲ ಖರ್ಚ ಪ್ರತ್ಯೇಕ.

ಕೆರೇಕರ ಕಾಬೂಲೀ ಹಿಂಗಿನ ದುಕಾನ,
ಅವಳಿಬಾಜಾರ, ಕುಮಟಾ.

ರಾಗದ ಪೆಟ್ಟಿಗೆಗಳು.

ತಬಲೆ ಜೋಡಿ ಇತ್ಯಾದಿ ಗಾಯನ ಸಾಮಾನು.

೧. ರಾಗದ ಕೈಪೆಟ್ಟಿಗೆ ಕಿಂ. ೩೦, ೪೦, ೬೦, ೭೫, ೧೦೦
೨. ,, ಕಾಲು ಪೆಟ್ಟಿಗೆ ಕಿಂ. ೬೫, ೭೫, ೧೩೦, ೧೪೦
೩. ತಬಲೆಜೋಡಿ ಕಿಂ ೧೬, ೧೮, ೨೦, ೨೫.
೪. ಹಾರ್ಮೋನಿಯಮ ಗ್ಯಾಡ (ಮರಾಠಿ) ಕಿಂ. ೧॥, ತಬಲೆ ಗ್ಯಾಡ ಕಿಂ. ೧೨ ಆ.

ವಿಶೇಷ ಮಾಹಿತಿಗೆ ನಮ್ಮ ಮರಾಠಿ ಕ್ಯಾಟಲಾಗ ಪುಕ್ಕಟೆ ಕೊಡುವೆವು.

ಪತ್ರವ್ಯವಹಾರ ಮರಾಠಿಯಿಂದ ಇಲ್ಲವೆ ಇಂಗ್ರಜಿಯಿಂದ ಮಾಡಬೇಕು.

ಪತ್ತೆ:-ಗೋಪಾಳ ಸಖಾರಾಮ ಮತ್ತು ಕಂಪನಿ, ವಿಠ್ಠಲವಾಡಿ ಎದುರಿಗೆ ೨೨೬ ಕಾಳಬಾದೇವಿ, ಮುಂಬಯಿ

ಟಿ. ಎಸ್. ಮೋಟರ ಸರ್ವಿಸ, ಶಿವಮೊಗ್ಗಾ.

ಗೇರಸಪ್ಪಾ ಜೋಗಿಗೆ ರೆಗ್ಯೂಲರ್ ಸರ್ವಿಸ್



ಶಿವರಾತ್ರಿಯ ಸಮಯದಲ್ಲಿ ಗೋಕರ್ಣಕ್ಕೆ ಸ್ಪೆಶಲ್ ಬಸ್ಸುಗಳು

(೧) ಹುಬ್ಬಳ್ಳಿ- ಯಲ್ಲಾಪುರ- ಅಂಕೋಲಾ- ಕಾರವಾರ (೨) ಹುಬ್ಬಳ್ಳಿ- ಮುಂಡಗೋಡ ಶಿರ್ಶಿ ಕುಮಟಾ- ಹೊನ್ನಾವರ- ಭಟ್ಕಳ (೩) ಕುಮಟಾ- ಶಿರ್ಶಿ- ಶಿದ್ದಾಪುರ- ಗೆರಸಪ್ಪಾ- ಜೋಗ) Gersappa Falls)ಸಾಗರ ಶಿವಮೊಗ್ಗಾ—ಈ ಲೈನುಗಳಲ್ಲಿ ರೆಗ್ಯೂಲರ್ ಸರ್ವಿಸ ನಡೆಯುತ್ತದೆ ಪ್ರಯಾಣಿಕರಿಗೆ ಅನುಕೂಲವಾಗುವದಕ್ಕೆ ಎಲ್ಲಾ ಸ್ಟೇಶನಗಳಲ್ಲೂ ವ್ಯವಸ್ಥೆ ಮಾಡಿದೆ

ಹೆಚ್ಚಿನ ಮಾಹಿತಿಯನ್ನು [illegible] ಲ್ಲಿ ತಿಳಿದುಕೊಳ್ಳಬಹುದು

THE

INDIA PROVIDENT COMPANY LTD:

ESTABLISHED 1910

Dividend declared 1912 20 per cent.
Dividend declared 19_2 30 per cent
Dividend declared previous year 1920 per cent

The Safest office for Life Insurance of the poor Premium Re 1 0 As 6 per mensem

Apply a once to

PADMANABH GOPAL KAMAT,
Agent, ANKOLA N. Kanara

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕೆಟುಗಳು ಮತ್ತು ಸುವರ್ಣಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು.

ರಕ್ತಶುದ್ಧಿ ಮತ್ತು ಧಾತುವೃದ್ಧಿಕಾರಕ.

ಈ ಮಧುವು ಮಹೌಷಧಿಯಾಗಿದ್ದು ಬಹಳ ಸಿಹಿಯಾಗಿಯೂ ರುಚಿಕರವಾಗಿಯೂ ಇರುತ್ತದೆ. ಈ ಮಧುವಿನ ಸೇವನದಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ವಿಕೃತಿಯಿಂದಾದ ಬೇನೆಯು ಹೋಗುವದು [illegible] ಪ್ರವರ್ಧಮಾನವಾಗುವದು (ನಿಜವಾಗಿ ಒಂದೇ ಸಪ್ತಾಹದಲ್ಲಿ ಅನುಭವಕ್ಕೆ ಬರುವದು) ಜನನೇಂದ್ರಿಯದೊಳಗಿನ [illegible] ಇಲ್ಲದಂತಾಗುವದು. ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ಆಚೆಗೆ ಹೋಗುವ [illegible] ಬಂದಾಗುವದು — ಪರಮಾ ಮಾಗೂ [illegible] ದೂಷಿತವಾದ ಶರೀರವು ನಿರೋಗವಾಗುವದು. ಮೂರು ದಿವಸದಲ್ಲಿ ಗುಣಬರುವದು. ತರುಣ ಸ್ತ್ರೀಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಅದರೊಳಗಿನ ಗುಣ ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ, ಉದರರೋಗ ಮತ್ತು ಇವುಗಳು ನಾಶವಾಗುವವು ದಿವಸದಲ್ಲಿ ಮೂರಾವರ್ತಿ ಊಟಮಾಡಿದರೂ ಅನ್ನ ಪಚನವಾಗಿ ಹಸಿವೆ ಚನ್ನಾಗಿ ಆಗುತ್ತದೆ ಇದರ ಅನುಭವವು ಮೊದಲನೇ ದಿವಸವೇ ಬರುವದು. ಶೌಚ ಸಾಫ ಆಗುವದು. [illegible] ಒಂದು ವಾರದಲ್ಲಿ ನಾಶವಾಗುವದು. ಈ ಔಷಧಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ. ಹೊಸಬೇನೆ ಇದ್ದರೆ ೧೦ ದಿವಸ ಸಾಲುವ ಒಂದು ಬಾಟಲಿಯಿಂದ ಗುಣಬರುವದು. ಹಳೇ ರೋಗವಿದ್ದರೆ ೩ ಬಾಟಲಿಯಿಂದ ಗುಣಬರುವದು. ಒಂದು ಬಾಟ್ಲಿಯ ಕಿಮ್ಮತ್ತು ೧। ರೂಪಾಯಿ ಮೂರು ಬಾಟಲಿಯ ಕಿಮ್ಮತ್ತು ೩—೦—೦ ಮೂರು ಬಾಟಲಿಗಳನ್ನು ಒಂದೇ ಪಾರ್ಸಲಿನಲ್ಲಿ ಕಳಿಸುವೆವು. ಅಂದರೆ ಟಪಾಲಖರ್ಚ ಹೆಚ್ಚು ಬೀಳುವದಿಲ್ಲ. ಸಣ್ಣ ಬಾಟಲಿಗಳ ಕಿಮ್ಮತ್ತು ೧೨—೦—೦ ಮತ್ತು ೧ ಬಾಟಲಿ ಪುಕ್ಕಟೆ ಸಿಗುವದು. ಟಪಾಲ ಖರ್ಚ ಬೇರೆ ಬೀಳುವದು [illegible] ೧ ಬಾಟ್ಲಿಗೆ ೧—೦ ೩ ಬಾಟ್ಲಿಗೆ ೩—೦—೦ [illegible] ೧೩—೧—೦

ವ್ಯವಸ್ಥಾಪಕ— ದ್ರಾಕ್ಷಾರ್ಕಮಧು ಆಫೀಸ, ಪೋ. ನಿಪ್ಪಾಣಿ ಜಿ ಬೆಳಗಾಂವ

ಮಹಾಶಿವರಾತ್ರಿಗಾಗಿ
ಗೋಕರ್ಣಕ್ಕೆ ಬರ-ಹೋಗುವ
ಯಾತ್ರಿಕರಿಗೆ

ನೇಮಿಸಿದ ಹೊತ್ತಿಗೆ ಮೋಟರಿನ ವ್ಯವಸ್ಥೆ
ಹಾಗೂ

ಅಡಿಗೆ, ಊಟ, ವಾಸದ ಬಗ್ಗೆ ಯೋಗ್ಯ ವ್ಯವಸ್ಥೆ!
ಈ ಕೆಳಗಿನಂತೆ ಮೋಟಾರ ವ್ಯವಸ್ಥೆಯಿದೆ.—

ಗೋಕರ್ಣದಿಂದ ಕುಮಟಾ, ಹೊನ್ನಾವರ, ಭಟ್ಕಳ. ಗೋಕರ್ಣದಿಂದ ಕುಮಟಾ, ಶಿರ್ಸಿ, ಹುಬ್ಬಳ್ಳಿ. ಗೋಕರ್ಣದಿಂದ ಅಂಕೋಲಾ, ಕಾರವಾರ

ಟೀಪ—ಬೇರೆಯ ಮುಂದಾಗಿ ಮಾತುಕೊಳ್ಳಲಿಚ್ಛಿಸುವವರು ಈ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡತಕ್ಕದ್ದು.

ಅನಂತ ಮಂಗೇಶರಾವ ಇಕೆಹಿತ್ತಲ,
ಮೋಟರ ಏಜಂಟ,
ಕುಮಟಾ, (ಉತ್ತರ ಕನ್ನಡ)

ಸುಗಂಧಿ ತಾಂಬೂಲೀಜರ್ದಾ !

ಈ ಜರ್ದಾ ತಿನ್ನಲಿಕ್ಕೆ ಕಡಕವಿದ್ದು, ಸುವಾಸಿಕ ಇರುತ್ತದೆ. ಇದರ ಸೇವನದಿಂದ ಬಾಯಿಯು ಹೊಲಸು, ವೇದನೆ, ಹುಳ ಇವು ನಾಶವಾಗಿ ಹಲ್ಲುಗಳು ಒಳ್ಳೇ ಘಟ್ಟಿಯಾಗುತ್ತವೆ ಇದರ ಸೇವನದಿಂದ ದಮ್ಮು, ಕಫ ಮುಂತಾದ ವಿಕಾರಗಳುಂಟಾಗುವ ಸ್ವಲ್ಪವೂ ಭೀತಿಯಿಲ್ಲ ಕಾರಣ, ತಂಬಾಕು ಸೇವಿಸುವವರು ಅವಶ್ಯವಾಗಿ ಅನುಭವ ತೊಗೊಳ್ಳಬೇಕು ೧ ಪಾವ ಕಿಂ. ರೂ. ೦-೬-೦, ಅರ್ಧ ಶೇರು ರೂ ೦-೧೦-೦, ಒಂದು ಶೇರು ಕಿಂ ರೂ. ೧-೪-೦ ೧೦೦ ಪುಡಿಗಳ ಕಿಂ ರೂ ೧-೭-೦, ಟಪಾಲ, ಪೆಕಿಂಗ ಖರ್ಚು ಬೇರೆ ಪ್ರತ್ಯೇಕ

ಸುಗಂಧಿ ನಶ್ಯ:—ಈ ನಶ್ಯವು ಒಳ್ಳೇ ತಂಬಾಕಿನಿಂದ ಮಾಡಿದ್ದಿದ್ದು, ಇದರಿಂದ ಶ್ಲೇಷ್ಮ, ಧಂಡಿ, ಅರತಲೆನೋವು ಮುಂತಾದವುಗಳು ಕೂಡಲೇ ಮಾಯವಾಗಿ ತಲೆಯು ಭಾರವಾಗಿದ್ದರೂ ಹಗುರವಾಗಿ ವಿಚಾರಶಕ್ತಿಗೆ ಚಪಲತೆಯು ಪ್ರಾಪ್ತವಾಗುವದರಿಂದ ಯಾವದೇ ಕೆಲಸವನ್ನು ಕೈಕೊಳ್ಳಲಿಕ್ಕೆ ಸ್ಫೂರ್ತಿಯುಂಟಾಗುತ್ತದೆ. ಒಮ್ಮೆ ಪರೀಕ್ಷಿಸಿ ಖಾತ್ರಿಮಾಡಿಕೊಳ್ಳಿರಿ. ೧ ಡಬ್ಬಿ ಕಿಂ, ರೂ ೦-೪-೦; ೧ ಡಜನ್ ಡಬ್ಬಿ ಕಿಂ. ರೂ. ೩-೦-೦ ಪೆಕಿಂಗ, ಪೋಸ್ಟೇಜ ಖರ್ಚು ಬೇರೆ

ಉತ್ತಮ ಬೀಡಿಗಳು:—ಅತ್ಯುತ್ತಮ ಪ್ರತಿಯ ತಂಬಾಕಿನಿಂದ ಅಸ್ಸಲಾಗಿ ಕಟ್ಟಿದ ಬೀಡಿಗಳು ನಮ್ಮಲ್ಲಿ ತಯಾರಿರುತ್ತವೆ. ಕಿಮ್ಮತ್ತಿನ ವಿಷಯಕ್ಕೆ ಬರೆದು, ಪ್ರಥಮ್ ನೋಡಿ ಮಾಲಿಗ ಆರ್ಡರ ಕೊಡಬಹುದು ಇದರ ಹೊರತು, ನಮ್ಮಲ್ಲಿಯು ಬಾಜಾರದಲ್ಲಿ ಎಲ್ಲಾ ಪ್ರಕಾರಗಳ ತಂಬಾಕು ಬರುತ್ತದೆ ಬೇಕಾದ ಸಮಯದಲ್ಲಿಯು ತಂಬಾಕನ್ನು ಯೋಗ್ಯ ದರದಲ್ಲಿ ಕೊಂಡು ಖರೀದಿ ಮಾಡಿಕೊಳ್ಳುವದು. ಹೆಚ್ಚಿನ ಮಾಹಿತಿ ಬಗ್ಗೆ ಪತ್ರವ್ಯವಹಾರ ಮಾಡಿದರೆ, ಕೂಡಲೆ ಉತ್ತರ ಬರೆಯುವೆವು.

ಪತ್ತೆ:— **ಎಸ್. ಬಿ. ಕದಂ,**
ಬೀಡಿ ಮತ್ತು ತಂಬಾಕು ಜರ್ದಾ ದುಕಾನ,
ಮು॥ ಪೋ॥ ನಿಪ್ಪಾಣಿ, ಜಿ ಬೆಳಗಾಂವ

"ಚಾಟಾನೂಗಾ ಕಬ್ಬಿನ ಗಾಣ!

ಜಗತ್ತಿನಲ್ಲಿ ಸರ್ವೋತ್ಕೃಷ್ಟವೆಂದೇ ಇದು ಇಷ್ಟು ಪ್ರಖ್ಯಾತಿ ಹೊಂದಿತು!

ನಂ ೧೨, ರೂ, ೧೪೫
,, ೧೩, ರೂ, ೧೮೫.
,, ೩೨, ರೂ, ೧೯೦.
,, ೩೩, ರೂ, ೩೬೮.

ಮಾಲು ಮುಂಬಯಿ ರೇಲ್ವೆ ಸ್ಟೇಶನ್ನಿನ ವರೆಗೆ ತಂದು ಕೊಡಲ್ಪಡುವದು.



ಇದರ ರೋಲುಗಳು ಶುದ್ಧ ಕಬ್ಬಿಣದಿಂದ ಮಾಡಿದ್ದಿರುತ್ತವೆ. ಕಬ್ಬಿನೊಳಗಿನ ಹನಿ ಹನಿ ರಸವನ್ನೂ ಕೂಡ ಹಿಂಡಿ ತೆಗೆಯುವ ವ್ಯವಸ್ಥೆ ಮಾಡಿರುತ್ತದೆ. ಗಾಣವು ಎರಡೂ ಬದಿಗಳಿಂದಲೂ ಅದೇ ಬದಿಯಿಂದ ಕಬ್ಬು ಕೊಡಬಹುದು.

ಆರ್ಡರಿನ ಸಂಗಡಲ್ಲಿ ಹಣವನ್ನು ಡಿಪೋಝಿಟ್ಟಾಗಿ ಕಳಿಸಬೇಕು.

ಕ್ಯಾಟಲಾಗು "ಡಬ್ಲ್ಯು ೧೧೨" ಪುಕ್ಕಟೆ!

ಮೆಕ್‌ಬೆಥ ಬ್ರದರ್ಸ ಮತ್ತು ಕಂಪನಿ, ಲಿಮಿಟೆಡ್.

ಕೋಡಾಕ ಹೌಸ, ಹೊರ್ನಬಿ ರೋಡ, ಮುಂಬಯಿ.

ಏಜಂಟರು ಬೇಕು! ಏಜಂಟರು ಬೇಕು!!

ನಮ್ಮಲ್ಲಿ
ಅತಿ ಮನೋಹರವಾದ
ಶೀಶೆ ಕಟ್ಟಿಗೆಯ
ದೇವರ ಮಂಟಪಗಳೂ,

ಹೆಂಗಸರ ಸೌಭಾಗ್ಯದ ಪೆಟ್ಟಿಗೆಗಳೂ, ಡಿಕ್ಸನೇರಿ ಪೆಟ್ಟಿಗೆಗಳೂ, ಆಫೀಸ ಬಾಕ್ಸಗಳೂ, ರೋಕಿಂಗ ಖುರ್ಚಿಗಳೂ ಹಾಗೂ ಯಾವತ್ತೂ ತರದ ಮನೇ ಸಾಮಾನು ಸಿಗುತ್ತದೆ.

ನಮ್ಮ ವಿಳಾಸ:—
ದಿ ನೊರ್ಥ ಕೆನರಾ ಟ್ರೇಡಿಂಗ ಕಂಪನಿ,
ಶಾಂತಿ ಭುವನ,
ಕಾರವಾರ.

धातु क्षीणता व कमजोरपणा यांसाठीं

मदन मंजरी गोळ्या. (रजिस्टर्ड.)

या दिव्य गोळ्या रक्त व वीर्य सुधारून स्त्रांची व्याधी नाश करतात. पचन शक्ति सुधरून परसाकडे साफ होतें. त्याचप्रमाणें प्रत्येक प्रकारची अशक्तता दूर होऊन शरीर तेजदार व बळवान होतें. कि. ४० गोळ्यांच्या डबीस रु. १.

रमण विलासिनी गोळ्या. रात्रौ फक्त १ गोळी दुधाबरोबर खाल्यानें इच्छेप्रमाणे वीर्यस्तंभन होते. कि. डबीस रु. १

नपुंसकत्वारी घृत. हा लेप पुरुषाच्या गुह्यभागावर लावला असता सर्व रोग नाश पाऊन खरे पुरुषत्व प्राप्त होतें. कि. डबीस रु. १.

कुमटा एजंट :— माधव सांतप्पा शेणवी बेळेकेरी.

राजवैद्य नारायणजी केशवजी मुंबई:— १९३ काळबादेवी रोड मुंबई २

ಕರ್ನಾಟಕದ ದುರ್ದಶೆ.

ತಾಯೇ, ಕರ್ನಾಟಕ ಭುವನೇಶ್ವರೀ, ನಿನ್ನ ಚರಣಾರವಿಂದಂಗಳಿಗೆ ನನ್ನ ಪ್ರೇಮಪೂರ್ವಕವಾದ ಪ್ರಣಾಮವಿರಲಿ. ಆದರೆ ಇದೇನು ಕಷ್ಟದುರ್ಗ! ಮಾತೆಯೇ, ನಿನ್ನ ಕರುಣಾಕರವಾದ ಕಣ್ಣುಗಳಿಂದ ಬಂದೇ ಸವನೆ ನೀರು ಸುರಿಯುತ್ತದೇಕೆ? ಅಯ್ಯೋ, ತೇಜಃಪುಂಜವಾದ ಮುಖಕಮಲವೂ ಬಾಡಿಹುದು! ಬಂಧು-ಭಗಿನೀಯರೇ, ಇತ್ತ ನೋಡಿರಿ. ನಮ್ಮ ಮಾತೆಯು ಏಕಾಗ್ರ ಚಿತ್ತದಿಂದಲೂ, ದುಃಖಾಂತಃಕರಣದಿಂದಲೂ, ಪರಮೇಶ್ವರನನ್ನು ಪ್ರಾರ್ಥಿಸುತ್ತಿದ್ದಾಳೆ. ನಮ್ಮ ಕರ್ನಾಟಕ ಮಾತೆಯ ಅಂತಃಕರಣವು ಈ ಪ್ರಕಾರ ದುಃಖದಿಂದ ಮುಸುಕಲಿಕ್ಕೆ ಕಾರಣವೇನಾಗಿರಬೇಕು? ಅದು ನೋಡಿರಿ! ನಮ್ಮ ತಾಯಿಯು ದುಃಖದಿಂದ ಕೋಮಲವಾದ ಪ್ರಾರ್ಥನೆಯು ಹೊರಬೀಳುತ್ತಲಿದೆ:—"ಸರ್ವಸಮರ್ಥನಾದ ಪರಮೇಶ್ವರನೇ ನಿನ್ನ ಕೃತಿಯು ಅವರ್ಣನೀಯವಾಗಿದೆ. ಒಂದು ಕ್ಷಣದಲ್ಲಿ ಅರಸನಿದ್ದವನನ್ನು ಆಳಾಗಿಯೂ, ಆಳಾಗಿದ್ದವನನ್ನು ಪಿರಾವತದ ಅಂಬಾರಿಯಲ್ಲಿ ಮೆರೆಯುವಂಥ ಸಮರ್ಥನಪ್ಪಗಿಯೂ ನೀನು ಮಾಡುತ್ತಿರುವೆ. ನನ್ನ ಸ್ಥಿತಿಯಾದರೂ ನೀನು ಇದೇ ಪ್ರಕಾರ ಮಾಡಿರುವೆಯಲ್ಲವೇ? ಅತ್ಯಂತ ಉಚ್ಚ ಸ್ಥಿತಿಯಲ್ಲಿದ್ದ ನನ್ನನ್ನು ಈಗ ನೀನು ಈ ನೀಚ ಸ್ಥಿತಿಯಲ್ಲಿ ತರುಹುವೇ? ದಯಾಳುವಾದ ಜಗದೀಶ್ವರನೇ, ಕೆಲವು ಕಾಲದ ಹಿಂದೆ ನನ್ನ ಮಕ್ಕಳು ನನ್ನನ್ನು ಎಷ್ಟು ಪ್ರೀತಿಯಿಂದ ಸಲಹುತ್ತಿದ್ದರು! ಅವರ ಇಡೀ ಜೀವನವನ್ನು ನನ್ನ ಸಲುವಾಗಿಯೇ ಅವರು ಖರ್ಚುಮಾಡುತ್ತಿದ್ದರು. ನನ್ನ ಏಳ್ಗೆಯೇ ಅವರ ಏಳ್ಗೆ ಎಂದು ತಿಳಿದು, ಯಾವತರ್‍ಹ ತರದಿಂದ ನನ್ನನ್ನು ಪ್ರಕಾಶಕ್ಕೆ ತರಲು ಅವರು ಪ್ರಯತ್ನಿಸುತ್ತಿದ್ದರು. ಆದರೆ, ಈಗ, ಈ ನನ್ನ ಮಕ್ಕಳು, ಇದೇ ನನ್ನ ಒಡಲೊಳಗೆ ಬಹು ಪ್ರೀತಿಯಿಂದ ಕಾಪಾಡಿದ ನನ್ನ ಮಕ್ಕಳು, ನನ್ನ ಕಡೆಗೆ ಹೊರಳಿ ಸಹಾ ನೋಡುವದಿಲ್ಲ. ನಾನು ಇಷ್ಟು ಕಷ್ಟದಲ್ಲಿದ್ದರೂ, 'ಅವ್ವಾ, ನಿನಗೆ ಏನಾಗುತ್ತದೆ?' ಎಂದು ಕೇಳುವವರು ಒಬ್ಬರೂ ಸಹಾ ನನಗೆ ಇಲ್ಲವಲ್ಲಾ! ಕೋಟಿಗಟ್ಟಲೆ ಮಕ್ಕಳು ನನ್ನ ಉದರದಲ್ಲಿ ಹುಟ್ಟಿ ಇಂದು ನಾನು 'ಬಂಜೆ' ಎಂದೆನ್ನಿಸಿಕೊಳ್ಳುವ ಹೊತ್ತು ಬಂತಲ್ಲಾ! ಪ್ರಭುವೇ ಈಗ ನಿನ್ನ ಹೊರತು ನನಗೆ ಯಾರು ಗತಿ!"

ಎಲಾ! ಕರ್ನಾಟಕದ ಮಕ್ಕಳು ಅನ್ನಿಸಿಕೊಳ್ಳುವವರೇ, ನಮ್ಮ ತಾಯಿಯು ಬಹು ದುಃಖದಿಂದ ಪರಮೇಶ್ವರನನ್ನು ಪ್ರಾರ್ಥಿಸಿದ ಮಾತುಗಳನ್ನು ನೀವೆಲ್ಲರೂ ಕೇಳಿರಲ್ಲವೇ? ನಿಜ: ನಮ್ಮ ತಾಯಿಯು ಹೀಗೆ ಶೋಕಮಾಡಲಿಕ್ಕೆ ಬಲವಾದ ಕಾರಣವೇ ಇದೆ. ಬಹು ಪುರಾತನ ಕಾಲದಿಂದ ನಮ್ಮ ಕರ್ನಾಟಕ ದೇಶವು ಹಿಂದುಸ್ಥಾನದಲ್ಲಿ ಬಹು ಹೆಸರುಗೊಂಡಿತ್ತು. ಹಿಂದುಸ್ಥಾನದಲ್ಲಿಯೇ ಏಕೆ? ವಿಜಯನಗರದ ರಾಜರ ಕಾಲದಲ್ಲಿಯಂತೂ ಕರ್ನಾಟಕದ ಹೆಸರು ಯುರೋಪ, ಅಮೇರಿಕಾ ದೇಶಗಳಲ್ಲಿಯೂ ಪ್ರಖ್ಯಾತಗೊಂಡಿತ್ತು. ವಿಜಯನಗರದ ಸುಪ್ರಸಿದ್ಧ ಕೃಷ್ಣರಾಯ ರಾಮರಾಯರ ಕಾಲದಲ್ಲಿ ಜಗತ್ತಿನ ಯಾವತರ್‍ಹ ಜನರು, ಒಳ್ಳೇ ರತ್ನಾದಿಗಳೂ, ಸುವರ್ಣವೂ ಬೇಕಾದರೆ ಕರ್ನಾಟಕದ ರಾಜಧಾನಿಯಲ್ಲಿ ಬರಬೇಕಾಗಿತ್ತು. ಕೋಲಾರದಂಥ ಭಂಗಾರದ ಖಣಿಗಳು ಕರ್ನಾಟಕದಲ್ಲಿಯಲ್ಲದೇ ಇನ್ನಾವ ದೇಶಗಳಲ್ಲಿದ್ದುವೆ? ಭಾಷೆಯಲ್ಲಿಯೂ ಸಹಾ, ಕನ್ನಡ ಭಾಷೆಯು ಬಹು ಪುರಾತನ ಭಾಷೆಯಿದ್ದದರಿಂದಲೂ, ದೊಡ್ಡ ದೊಡ್ಡ ಭಾಷಾಪಂಡಿತರು ಕನ್ನಡ ಭಾಷೆಯ ... ವಿಪುಲದಾಗಿದ್ದುದರಿಂದಲೂ ಬಹು ಹೆಸರುಗೊಂಡಿತ್ತು ... ವೀರಶಿರೋಮಣಿಗಳಾದ ಹರಿಹರರಾಯ ಬುಕ್ಕ, ... ದವರು ಹಿಂದುಸ್ಥಾನದ ಯಾವತರ್‍ಹ ಪ್ರಾಂತಗಳಿಗಿಂತ ... ಕರ್ನಾಟಕವನ್ನು ಮುಂದೊತ್ತಿದರು. ರನ್ನ, ಪಂಪ, ... ನಿ ಮೊದಲಾದ ಸುಪ್ರಸಿದ್ಧ ಕವಿಗಳೂ, ಮಧ್ವಾಚಾ... ರಂಥ ದ್ವೈತಮತಸ್ಥಾಪಕರಾದ ಆಚಾರ್ಯರೂ, ವಿ... ರಣ್ಯರಂಥ ವಿದ್ವಾಂಸರೂ, ಪುರಂದರದಾಸ, ಕನಕದಾ... ಬಸಪ್ಪಯ್ಯ ಇವ. ಧರರಂಥ ಭಗವದ್ಭಕ್ತರೂ ಈ ನ... ಕರ್ನಾಟಕವನ್ನು ಪ್ರಸಿದ್ಧಿಗೆ ತಂದರು. ಗೋಕರ್ಣದ ... ಕ್ಷೇತ್ರಗಳು ಕರ್ನಾಟಕವನ್ನು ಪುನೀತವಾಗಿ ಮಾಡಿದ... ಆದರೆ—

ಮೋಡವು ಚಂದ್ರನನ್ನು ಮುಸುಕಿ ಕಗ್ಗತ್ತಲೆಯು ... ಉಂಟು ಮಾಡುವಂತೆ ಪಾಶ್ಚಾತ್ಯರ ಆವಿರ್ಭಾವವು ... ಪ್ರ ಇಡೀ ಹಿಂದುಸ್ಥಾನಕ್ಕೆ ಸುವರ್ಣಯುಗಸಂಪದಗಳಿ... ಮುಸುಕಿದೆ. ಹಿಂದುಸ್ಥಾನದ ಸಂಗಡಲೇ ನಮ್ಮ ಕರ್ನಾಟಕ ಮಾತೆಯೂ ಆ ಮೋಡದಲ್ಲಿ ಮುಸುಕಿ ಹೋ... ತ್ತಾಳೆ. ಇಂಗ್ಲೀಷ ವಿದ್ಯೆಯೆಂಬ ಹುಲಿಯ ಹಾಲನ್ನು ... ದು, ವಿದ್ವಾಂಸರೆಂದೆನ್ನಿಸಿಕೊಳ್ಳುವ ಕರ್ನಾಟಕಸ್ಥರೆಲ್ಲ... ತಮ್ಮ ತಾಯಿಮನೆಯಾದ ಕರ್ನಾಟಕದ ಹಳ್ಳಿಗಳ... ಹಾಳುಗೆಡಹಿ, ಮನೆಮಾರುಗಳನ್ನು ಮಾಡಿ, ಉತ್ತಮವಾದ ... ಗದ್ದೆ ಬೇಸಾಯದ ಕಡೆಗೆ ದುರ್ಲಕ್ಷ ಮಾಡಿ, ಮುಂಬ... ಯಂಥಾ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ತಮ್ಮ ಶರೀ... ನ್ನು ಹೊಟ್ಟೆ-ಬಟ್ಟೆಗಳ ಸಲುಗೆ ಪರಕೀಯರಿಗೆ ... ಪಾಶ್ಚಾತ್ಯರ ಗುಲಾಮರಾಗಿ ಇರಹತ್ತಿದ್ದಾರೆ. ತಮ್ಮ ... ಕೃಭಾಷೆಯಾದ ಕನ್ನಡ ಭಾಷೆಯನ್ನು ಸಹಾ...

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ.

ಕಾಮಿನಿಯಾ ತೈಲ. ರಿಜಿಸ್ಟರ್ಡ

ಮದುವಾದ, ಗುಂಗುರು ಗುಂಗುರಾಗಿರುವ ನೀಲಿಮೆಯಿಂದ ನಿಬಿಡವಾದ ಕೇ... ಮುವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು? ಇಂಥಹ ಕೇಶರಾಶಿಯನ್ನು ಸ್ತ್ರೀ... ರಿಗೆ ಒದಗಿಸಿ ಕೊಡಲು ಇದು ಉಪಕರಣವಾದದ್ದೋ.

ಕಾಮಿನಿಯಾ ಆಯಿಲ್ (ರಿಜಿಸ್ಟರ್ಡ

ಈ ಆಯಿಲ್ ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ... ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ... ಆರೋಗ್ಯದ ಸಹಕಾರಿಯಾಗಿರುತ್ತದೆ. ಈ ಆಯಿಲ್ ತೊಡೆದುಕೊಳ್ಳುತಲೇ ಮುಸ್ಸಿ... ನೆಯು ತಣ್ಣಗಾಗಿ ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ... ಕೊಡೆಯ ತೊಡಗಿದ ಬಳಿಕ ಎಂದಿಗೂ ಉದುರಿ ಬಿದ್ದು ಹೋಗಲಾರವು, ಆದರೆ, ... ತ್ವರಾಗಿ ಬೆಳೆದು ಸಮೃದ್ಧವಾಗುವದು. ಇದರ ಸುಗಂಧವಾದರೋ ಮಧುರವೂ ಮನೋ... ಆಗಿರುವುದು.

ಕೀಳು ತರದ ಎಣ್ಣೆಗಳನ್ನು ಕೊಂಡುಕೊಂಡು ತಮ್ಮ ಹಣವನ್ನು ಕಳೆ... ಹಾಳುಮಾಡಿಕೊಳ್ಳುವದಕ್ಕಿಂತ ಒಂದೇವೊಂದು ಬಾರಿ "ಕಾಮಿನಿಯಾ ಆ... ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯು ದೆಸೆಯಿಂದ ನಮಗೆ ... ಪ್ರದರ್ಶನದಲ್ಲಿ "ಸರ್ಟಿಫಿಕೇಟ ಆಫ್ ಮೆರಿಟ್" ಅಥವಾ ಯೋಗ್ಯತಾದರ್ಶಕವೂ ... ನೂರಾರು ಸ್ವಹಸ್ತದ ಉತ್ತಮೋತ್ತಮವಾದ ಮಾನಪತ್ರಗಳೂ ದೊರೆತಿ.

ಕ್ರಯ:— ಸೀಸೆಗೆ ರೂಪಾಯಿ 1-0-0, ಸೀಸೆ 3ಕ್ಕೆ ರೂಪಾಯಿ 2-10 0 ...
ಖರ್ಚು 0-14-0.

ಅತಿ ಮನೋಹರವಾದ ಸುರಭಿಯು!

ಒಟ್ಟೋ-ದಿಲ್ ಬಹಾರ್ !! (ರಿಜಿಸ್ಟರ್ಡ.)

ಈ ಸುಗಂಧದ್ರವ್ಯವು ಮಧುರ, ಕೋಮಲ, ಚಿರಸ್ಥಾಯಿ ಮತ್ತು ಅತ್ಯುತ್ತಮವು ಚನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಲೇಪಗಳಿಂದ ಸಿದ್ಧ... ಇದರಲ್ಲಿ ಮದಿರೆಯ (ಆಲ್ಕೊಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈ ವಸ್ತ್ರದಲ್ಲಿ ಅಥವಾ ಅಂಚಿನಲ್ಲಿ ಈ ದ್ರವ್ಯದ ಕೆಲವು ಹನಿಗಳನು ... ಹರಿ ನಿಮ್ಮ ಸುತಲು ನೈಸರ್ಗಿಕವಾದಂಥ ಪುಷ್ಪವಾಟಿಕೆಯು ಅರಳಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ, ಈ ಒಟ್ಟೋದಿಲ್ ... ನ ಗಂಧವು ಅವೆಲ್ಲವುಗಳನ್ನು ಮೀರಿ ಮನಸ್ಸನ್ನು ತನ್ನ ಕಡೆಯಿಂದ ಸೆಳೆಕೊಳ್ಳುತ್ತದೆ. ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ

ಸಣ್ಣ ಸೀಸೆ 1 ಕ್ಕೆ 0 8 0; 1 ಡ್ರ್ಯಾಮಿನ (ಮಿಡಿಯಂ) ಸೀಸೆ 1 ಕ್ಕೆ 0 12 0; $\frac{1}{2}$ ಔನ್ಸಿನ ದೊಡ್ಡ ಸೀಸೆ 1 ಕ್ಕೆ 2 0 0. ಅಂಚೆಯ ವೆಚ್ಚ ಬೇರೆ ...
ಒಟ್ಟೋ-ದಿಲ್ ಬಹಾರ್ ಪರಿಮಳ ಕಾರ್ಡುಗಳು ಡಜನ್ 1 ಕ್ಕೆ 0 12 0.

Address: **The Anglo Indian Drug & Chemical C...**
16, Market, **BOMBA...**

...ಟ್ಟಿದ್ದಾರೆ. ಎಲ್ಲಿ ನೋಡಿದರೂ ಇಂಗ್ಲೀಷ ಭಾಷೆ [illegible] ಬೇರೆ ಭಾಷೆಯ ಶಬ್ದಗಳು ಈ ಸಂಸ್ಕೃತ [illegible] ತನ್ನಿಸಿಕೊಳ್ಳುವವರ ಬಾಯಿಂದ ಹೊರಗೆ ಬೀಳುವ [illegible]. ಅಥವಾ ಒಂದು ವೇಳೆ ಅನಿಶ್ಚಭಾಷೆ ಆಡಿದರೂ [illegible] ಸ್ಥಿತಿಯು ಇಂಗ್ಲೀಷ ಭಾಷೆಯ ಶಬ್ದಗಳನ್ನು [illegible] ಅಲ್ಲಿ ಬೆರಸಿದ ವಿನಹಾ ಅವರಿಗೆ ಮಾತಾಡಲಿಕ್ಕೆ ತಿಳಿ[illegible]ವದೇ ಇಲ್ಲ. ಕರ್ನಾಟಕದ ಸುಶಿಕ್ಷಿತರು ಕೆಲವರು [illegible] ಈಗ ಮಹಾರಾಷ್ಟ್ರ ಭಾಷೆಯನ್ನು, ಇಂಗ್ಲೀಷ [illegible]ಷೆಯನ್ನು ಕಲಿಸಲಿಕ್ಕೆ ಆರಂಭಿಸಿದ್ದಾರೆ. ಅಂಥಾ [illegible]ತನದಿಂದ ಹೆಸರುವಟ್ಟ ಈ ಕನ್ನಡ ಭಾಷೆಯು ಕಡೆ [illegible]ಯಾಗುವದೇ ಇಲ್ಲ!!

ಸರಕಾರದವರಿಗಂತೂ ನಿಮ್ಮ ಕರ್ನಾಟಕದ ಕುಂದು [illegible] ನಮ್ಮ ತಾಯಿಯನ್ನು ಸೆಲಸಬೇಕಾದ [illegible] ಸಿದ್ಧಿಯೇ ಬೀಳುವದಿಲ್ಲ. ಒಂದು ತುಂಡು ಮದ್ರಾಸ [illegible] ಇಲಾಖೆಗೆ ಸೇರಿದರೆ, ಇನ್ನೊಂದು ತುಂಡು ಮುಂಬಯಿ [illegible]ಖೆಗೆ, ಒಂದು ತುಂಡು ಮೈಸೂರಿಗೆ ಸೇರಿದರೆ, [illegible]ಂದು ಅಂಧ್ರಕ್ಕೆ, ಒಂದು ಹೈದ್ರಾಬಾದಿಗೆ ಸೇರಿದರೆ, [illegible]ಂದು ಮಹಾರಾಷ್ಟ್ರಕ್ಕೆ ಕಟ್ಟಿರೆ ನಮ್ಮ ನವ್ಯ [illegible] ಹಚ್ಚಿಸಿ ನಮ್ಮನ್ನು ಗುಲಾಮರನ್ನಾಗಿ ಮಾಡಿ [illegible]ತ್ತವನ್ನು ನಡಿಸುವದೇ ಸರಕಾರದವರ ಉದ್ದೇ[illegible]ವಾಗಿದೆ. ನಾವಾದರೂ ಸರಕಾರದವರ ಈ ಕೃತ್ಯ[illegible] ನಿರೋಧಿಸುತ್ತೇವೆಯೋ? ಇಲ್ಲ. ನಮ್ಮನಮ್ಮೊಳಗೆ [illegible] "ಇವನು ಕೆಂಚಿ; ನಾನು ಉತ್ತರಿ; ಅವನು ಧಾರ[illegible] ಕನ್ನಡ ಆಡುತ್ತಾನೆ; ಆದರೆ ನಾನು ಶುದ್ಧ ಬೆಂಗ[illegible] ಕನ್ನಡಿಗ," ಎಂದು ಕೃಮನಸ್ಯವನ್ನು ಹುಟ್ಟಿಸಿ[illegible] ದಿಕ್ಕಿನಲ್ಲಿದ್ದ ನಮ್ಮ ಕರ್ನಾಟಕ ಮಾತೆಯು [illegible] ಮತ್ತಿಷ್ಟು ವ್ಯಸನದಲ್ಲಿ ಹಾಕುತ್ತೇವೆ. ಹರಹರ! [illegible]ಕಾರದ ಕರ್ನಾಟಕದ ದುಃಸ್ಥಿತಿಯು ಯಾವಾಗ [illegible]ವದೋ ಶಿವನಿಗೇ ಗೊತ್ತು!!

[illegible] ಸಂಸ್ಥಾನವೊಂದು ಕರ್ನಾಟಕ ದೇಶದ [illegible]ವಾಗಿದೆ. ಆದರೆ ನಮ್ಮ ದುರ್ದೈವದಿಂದ ಆ [illegible] ಸಹಾ ಮಾತೃಸ್ಥಿತಿ ತವರುಮನೆಯಾಗಲಿಕ್ಕೆ [illegible]ವಾಗಿದೆ. ಮೈಸೂರಿನಲ್ಲಿಯಾದರೂ ನಮ್ಮ ಕರ್ನಾಟ[illegible] ಸ್ಥಿತಿಯು ಚಿರಕಾಲ ಇರುವ ಹಾಗೆ ಕನ್ನಡ ಭಾಷೆ [illegible] ಮೂಲನೇ ಭಾಷೆಯಾಗಿರುವ ಒಂದು ಕರ್ನಾಟಕ [illegible]ದ್ಯಾಲಯವು ಆಗುವ ಹಾಗೆಯೂ, ಅದರಲ್ಲಿ ಯಾವ [illegible] ಕರ್ನಾಟಕರಿಗೆ ಸುಲಭತೆಯಿಂದ ಶಿಕ್ಷಣ ತೆಗೆದು[illegible] ಹಾಗೆ ಅನುಕೂಲತೆ ಆಗುವ ಹಾಗೆಯೂ [illegible] ಮೈಸೂರು ಸರಕಾರದವರ ಅದ್ಯ ಕರ್ತವ್ಯ[illegible]ದೆ. ಪರಮೇಶ್ವರನು ನಮ್ಮ ಈ ಇಚ್ಛೆಯನ್ನು ಪೂರ್ತಿ [illegible]ಸುವ ಹಾಗೆ ಮಾಡಲಿ; ಅಂದರೆ, ಕರ್ನಾಟಕ ಮಾತೆ[illegible] ದುಃಖವು ಕಡಿಮೆಯಾದೀತು.

[illegible]ಲಾಗಿ ಬಳ್ಳಾರಿಯೂ ಅಂಧ್ರಕ್ಕೆ ಸೇರಿರುವದರಿಂದ ಕರ್ನಾಟಕ ಮಾತೆಗೆ ಅಸಹ್ಯವಾದ ದುಃಖವಾಗಿದೆ. [illegible] ತನ್ನ ಹೊಟ್ಟೆಯ ಕರುಳಲ್ಲವೇ? ಅವನ್ನು [illegible]ವರು ಕಸುಕೊಂಡ ಮೇಲೆ ನಮ್ಮ ಮಾತೆಗೆ [illegible] ದುಃಖವಾಗಿರಬೇಕು? ನೀವೇ ಊಹಿಸಿರಿ! ಅರಿ[illegible].

[illegible]ರ್ನಾಟಕವು ದಿನೇ ದಿನೇ ಹೀನ ದೇಶವಾಗುತ್ತಾ ಹೋ[illegible]ದೆ. ಹೊಲಗದ್ದೆಗಳಲ್ಲಿ ನೊಪಲಿನಷ್ಟು ಬೆಳೆಯುವದಿ[illegible] ಇರವಿಗಳ ಕಾಯಿದೆಗಳಿಂದ ಜನರು ಬೇಸತ್ತಿರುವ[illegible] ಜನರಿಗೆ ವಿದ್ಯೆ ಕಲಿಯಲಿಕ್ಕೆ ಬೇಕಷ್ಟು ಸಾಲೆಗಳಿ[illegible] ಉಂಡಾಡಿ ತಿರುಗುವವರಿಗೆ ಉದ್ಯೋಗವಿಲ್ಲ. ಇದ್ದ[illegible]ಂತರೆಲ್ಲಾ ಬಹಳ ಸ್ವಾರ್ಥಪರರುಗಳಾಗಿ ವ್ಯಸನದ ಕೆಳಗೆ ಬಿದ್ದ ಬಡ್ಡಲಿಗರನ್ನು ಸುಲಿಯುತ್ತಿದ್ದಾರೆ. [illegible] ಮಾತಿಗೆಲ್ಲ ಒಡೆಯರೂ ಬಡ್ಡಲಿಗರೂ, ಸಗೆ [illegible] ನ್ಯಾಯಸ್ಥಾನಕ್ಕೆ ದುಡ್ಡಿನ ಮಳೆಯನ್ನು ಸುರಿಸುತ್ತ, [illegible] ಅರೆಹೊಟ್ಟೆ ಉಂಡು ತಿರುಗುತ್ತಿದ್ದಾರೆ. ಅಹಾ! [illegible] ಇಂಥ ದುಸ್ಥಿತಿಯನ್ನು ನೋಡಿ ನಮ್ಮ [illegible]ಟಕ ಮಾತೆಯೂ ಈ ಪ್ರಕಾರವಾಗಿ ಆಳುತ್ತ ದೇವ[illegible] ಪ್ರಾರ್ಥಿಸುತ್ತಿದ್ದಾಳೆ. ಕರ್ನಾಟಕದ ವಿದ್ಯಾವಂತ [illegible]ಬಂಧು-ಭಗಿನಿಯರೇ! ನಮ್ಮ ಮಾತೆಗೆ ಇಂಥ ಹೀನ

[illegible]ಸ್ಥಿತಿಯು ಬಂದಿರುವಾಗಲಾದರೂ ನಾವೆಲ್ಲ ಒಟ್ಟಾಗಿ ಅದ [illegible] ನೋಗಿ ನಮಸ್ಕರಿಸಿ,ಅವಳಿಗೆ ಒಡಂಬಡಿಸ[illegible]-"ಹೇ ಮಾತೇ! ಕರ್ನಾಟಕಭುವನಸುಂದರೀ, ತಳಬೇಡ; ನಾವು ಇಷ್ಟು ಕೃತ್ರ-ಪುತ್ರಿಯರು ನಿನಗೆ ಇರುವಾಗ ನೀನು ಹೆದರಬೇಡ; ಬೇಸರಪಡಬೇಡ. ಈ ಹೊತ್ತಿನಿಂದ ನಾವೆಲ್ಲ ರೂ ತನು-ಮನ-ಧನಗಳಿಂದ ನಿನ್ನ ಸೇವೆಯನ್ನು ಮಾಡುವ ನ್ಯಕಡೆ ಕಂಕಣವನ್ನು ಆ ದಯಾಳ ಪರಮೇಶ್ವರ ನಿಗೆ ಸ್ಮರಿಸಿ ಕೈಯಿಗೆ ಕಟ್ಟಿಕೊಳ್ಳುತ್ತೇವೆ. ಕಣ್ಣನ್ನು ಒರಸಿ ಸುಹಾಸ್ಯದಿಂದ ನಮ್ಮನ್ನು ಆಶೀರ್ವದಿಸು." ಅಹಾ! ಬಂಧುಭಗಿನಿಯರೇ! ನೋಡಿರಿ. ನಮ್ಮ ತಾಯಿಯು ನಮ್ಮ ಕಡೆಗೆ ಕರುಣಾಪೂರ್ಣ ದೃಷ್ಟಿಯಿಂದ ನೋಡಿ ನಮ್ಮನ್ನು ಆಶೀರ್ವದಿಸುತ್ತಿದ್ದಾಳೆ!!

ಜಯ ಜಗದೀಶ್ವರೀ ಕರ್ನಾಟಕ ಮಾತೇ, ನಿನಗೆ ಜಯಜಯಕಾರವಿರಲಿ!

ಮುಂಬಯಿ, ೨೨-೨-೧೯೨೬	ಕರ್ನಾಟಕ ಮಾತೆಯ ಸೇವಕ, ಬಾಬುರಾವ ಶಿಬಾರ.

ಪ್ರಕಟನೆ.

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರೆನ್ಸ ಕಂಪನಿ, ಬೆಂಗಳೂರ.

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೨೬ನೆಯ ಇಸ್ವಿ ಜನೇವರಿ ೩೧ನೆಯ ತಾರೀಖಿನ ದಿವಸ ಸಾಯಂಕಾಲ ೫-೩೦ ಘಂಟೆಗೆ ಈ ಕಂಪನಿಯ ಹೆಡ್ ಆಫೀಸಿನಲ್ಲಿ ಸಾರ್ವಜನಿಕವಾಗಿ ಜರುಗಿಯಿತು. ಬೋರ್ಡ ಆಫ್ ಡಾಯರೆಕ್ಟರ್ಸ್ ಚೇರಮನ್ನರಾದ ರಾವಸಾಹೇಬ ಡಾ। ಕೆ. ಎಸ್. [illegible] L.R.C.P. M.R.C.S. ಅವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ಬಡ್ಡಿ ಮತ್ತು ಮತ್ತೆ ಇಲ್ಲದೆ ೧೦೦೦ ರೂಪಾಯಿಗಳ ಸಾಲವು ದೊರೆಯಬೇಕೆಂದು ನಿರ್ಣಯವಾಯಿತು.

(೧)	ಬಾಂಡ ನಂಬರ ೫೩೭೦	ಮಿ। ವಿಠ್ಠಲ ಬಿಹ್ಯಾಡ ಸೇಟ್ ಕಲ್ಯಾಣ ಅಲಿಬಾಗ ಮುಂಬಯಿ ...	೧೦೦೦
(೨)	ಬಾಂಡ ನಂ। ೧೩೩೦೬	ಮಿ। ರಂಗಪ್ಪ ಶ್ಯಾನಭೋಗ ಹುಲಿಕುಂಟೆ, ಪೋಸ್ಟ ಸಿರಾ. ತಾಲೂಕ ಸಿರಾ, ಜಿಲ್ಲಾ ತುಮಕೂರ. ...	೧೦೦೦
(೩)	ಬಾಂಡ ನಂ। ೧೯೯೯೬	ಮಿ। ವೆಂಕಟರಾಮು ವೆಂಕಟರಾಮು ಜಗತಿ ಶೀತ್ಯಾಡಿ, ಹಸ್ಸ-ಕೋಟೆ, ಹೊಸ್ಪೇಟ ಪೋ। (ನಾರ್ಥ ಕ್ಯಾನರಾ) ಜಿಲ್ಲಾ. ...	೧೦೦೦
(೪)	L. B. C. " ೧೦೩೩	ಮಿ। ಜಿ. ವೆಂಕಟಪ್ಪ ಮರ್ಚಂಟ ಮತ್ತು ಜಮೀನದಾರ. ಕೃಷ್ಣಪೇಟೆ, ಬಳ್ಳಾರಿ.	೧೦೦೦
(೫)	" ೨೫೦	ಮಿ। ರಾಮಚಂದ್ರ ವಾಮನ ಕಾಂಡೇಕರ C/o ಕಾಲಕಸ್ಕರ ಮಾತಾ, ಮ್ಯಾಟೀನ ರೋಡ, (ಪುರೋಹಿ.)	೧೦೦೦
(೬)	" ೧೦೪೦	ಮಿ। ಆರ್. ಎಚ್. ಸಾಲೋಮನ್, ಮಾಸ್ತರ, ಗವರ್ನಮೆಂಟ ಸಿಟಿ ಹಾಯಸ್ಕೂಲ, ಹೈದರಾಬಾದ (ಡೆಕ್ಕನ.)	೧೦೦೦

ಬಿ. ಎನ್. ಅರಾಧ್ಯ.

ಮುಂಬಯಿ ಇಲಾಖೆಯ, ಚೀಫ್ ಏಜಂಟ, ಹುಬ್ಬಳ್ಳಿ.

ಅತ್ಯದ್ಭುತ! ಅಮೇರಿಕಾ ಖಂಡದ ಅತ್ಯದ್ಭುತ!!

ಪ್ರಸಿದ್ಧ ಡಾಕ್ಟರನೊಬ್ಬನು ಕಂಡು ಹಿಡಿದ ಸಿದ್ಧೌಷಧ.

ಸರ್ವರೋಗ ನಿವಾರಣೆಯಾಗುವ ಸಂಜೀವನೌಷಧವನ್ನು ಕಂಡು ಹಿಡಿಯುವದಕ್ಕಾಗಿ ಅಮೇರಿಕಾ ಖಂಡದ ಪ್ರಖ್ಯಾತ ಡಾಕ್ಟರನೊಬ್ಬನು ಅನೇಕ ವರ್ಷಗಳಿಂದ ಬಹು ಧನ ನಷ್ಟ ಮಾಡಿಕೊಂಡು ಶೋಧನೆಗಳನ್ನು ಮಾಡಿ ಕೊಡಿಯಲ್ಲಿ

ಎಲೆಕ್ಸಿರ್ ಆಫ್ ಲೈಫ್

ಅಥವಾ

ಜೀವನಾಧಾರ

ಎಂಬ ಔಷಧವನ್ನು ಸಿದ್ಧಗೊಳಿಸಿರುವನು. ಅನುಭವಿಕ ಶರಿಂದ ಅನೇಕ ರೋಗಗಳಿಗೆ ಎಂದರೆ, ಅಗ್ನಿಮಾಂದ್ಯ, ಅಜೀರ್ಣ, ಹೊಟ್ಟೆ ಅಥವಾ ತಲೆ ಭಾರವಾಗಿರುವದು, ಅತಿಸಾರ, ವಾಂತಿ, ಭೇದಿ ಅಥವಾ ಕಾಲರಾ, ತಲೆನೋವು ನೆಗಡಿ, ಮಲೇರಿಯಾ ಜ್ವರ, ಇತರ ವಿವಿಧವಾದ ಜ್ವರಗಳು, ಮಾನಸಿಕ ದೌರ್ಬಲ್ಯ, ಕಣ್ಣು ಮತ್ತು ಕಿವಿ ನೋವು ಮುಂತಾದವು, ನಾಯಿಕೆಮ್ಮು, ಸ್ತ್ರೀವ್ಯಾಧಿ ಮುಂತಾದ ಎಲ್ಲಾ ಬಗೆಯ ಸಾಂಕ್ರಾಮಿಕ ರೋಗಗಳಿಗೆ, (ಇನ್‌ಫ್ಲ್ಯುಯೆಂಜಾ ಜ್ವರ, ಪ್ಲೇಗ್,) ಹಾವು, ಚೇಳು, ಮುಂತಾದ ವಿಷ ಜಂತುಗಳ ಕಡಿತಕ್ಕೆ, ಬಾಲಗ್ರಹ ಅವೇ ಮುಂತಾದವುಗಳಿಗೆ ಈ ಜೀವನಾಧಾರವನ್ನು ಕೊಟ್ಟು ಗುಣಪಡಿಸಿರುತ್ತಾನೆ. ಊರಲ್ಲಿ ಸಾಂಸರ್ಗಿಕ ರೋಗವಿರುವಾಗ ಇದನ್ನು ಅಲ್ಪ ಪ್ರಮಾಣದಲ್ಲಿ ಉಪಯೋಗಿಸುತ್ತಿದ್ದರೆ ಯಾವ ರೋಗವೂ ಅಂಟುವದಿಲ್ಲ. ಈ ಜೀವನಾಧಾರವೆಂಬ

ಸಂಜೀವನೌಷಧ

ಒಂದು ಸೀಸೆಯು ಪ್ರತಿ ಮನೆಯಲ್ಲಿ ಅಥವಾ ಪ್ರತಿ ಒಬ್ಬನ ಕಿಸೆಯಲ್ಲಿದ್ದರೆ ಅನುಭವಸ್ಥನಾದ ಡಾಕ್ಟರನೊಬ್ಬನು ಹತ್ತರವಿದ್ದಂತೆಯೇ, ಡಾಕ್ಟರರಿಗೆ ಕೊಡಬೇಕಾದ ಫೀಜುಗಳನ್ನು ಈ "ಜೀವನಾಧಾರ"ವೆಂಬ ಡಾಕ್ಟರರಿಗೆ ಕೊಡ ಬೇಕಾದ್ದಿಲ್ಲ. ಸೀಸೆ ಒಂದಕ್ಕೆ ರೂ. ೧-೮-೦ ಟಪಾಲು ಖರ್ಚು ಬೇರೆ ಆಯಿದು ಬೇಕಾದರು.

ಜೀವನಾಧಾರ ಡಿಪೋ,
ಮೈಸೂರು.

ಬ್ರಾಂಚ:- **ಜೀವನಾಧಾರ ಡಿಪೋ,**
ಹುಬ್ಬಳ್ಳಿ

ಕಾನಡಾವೃತ್ತ.

ಮಿತಿ ಕ್ರೋಧನ ಸಂ॥ ಫಾಲ್ಗುಣ ವ॥ ೨ಗೆ, ಸೋಮವಾರ

ಪ್ರಾಂತಿಕ ಕಂದಾಯ.

ಮತ್ತೂ ತೆರಿರಿ; ಇನ್ನೂ ತೆರಿರಿ

ಸೋಮವಾರ ತಾ. ೨೨ನೇಯಿಂದ ಮುಂಬಯಿಯ ನಗರ ಭವನದಲ್ಲಿ ನಮ್ಮ ಮುಂಬಯಿ ಪ್ರಾಂತದ ಮುಂದಿನ ವರುಷದ ಆಯ-ವ್ಯಯ ಪತ್ರಿಕೆಯ ಚರ್ಚೆಯಾಗುತ್ತಲಿದೆ. ಪ್ರಾಂತಿಕ ಸರಕಾರವು, ಪ್ರಾಂತಿಕ ಕಾಯಿದೆ ಕೌನ್ಸಿಲಿಗೆ ಸೋಮವಾರ ಆಯ-ವ್ಯಯದ ಅಂದಾಜು ಪತ್ರಿಕೆಯನ್ನು ಸಾದರಪಡಿಸಿ, ಕಾಯಿದೆ ಕೌನ್ಸಿಲಿನ ಅನುಮತಿಯನ್ನು ಬೇಡಿತು. ಪ್ರಾಂತಿಕ ಕಂದಾಯದ ಸ್ಥಿತಿಯು ಇತ್ತಿತ್ತ ಬಹಳೇ ಚಿಂತಾಜನಕವಾಗಿರುವದು. ಆಯ-ವ್ಯಯವನ್ನು ಬಾಯಿಗೂಡಿಸುವದು ಬಹಳ ಕಷ್ಟವಾಗಿದೆ. ಆದರಿಂದ ನಮ್ಮ ಪ್ರಾಂತಿಕ ಸರಕಾರವು ಮುಂದಿನ ವರುಷದಲ್ಲಿ ಮತ್ತೂ ಕರಗಳನ್ನು ಹೇರಲಿಚ್ಛಿಸಿ, ಅವುಗಳಿಗಾಗಿ ಕೌನ್ಸಿಲು ಸಭಾಸದರ ಸಮ್ಮತಿಯನ್ನು ಬೇಡುತ್ತಿದೆ.

ನಗರ ಭವನದಲ್ಲಿ ಸೇರಿದ ಕಾಯಿದೆ ಕೌನ್ಸಿಲಿನೊಳಗಿನ ಚರ್ಚೆಯನ್ನು ಪರಾಮರ್ಶಿಸಿದರೆ, ನಮ್ಮ ಮುಂಬಯಿ ಸರಕಾರವು ಆಚರಿಸುತ್ತಿದ್ದ ಹಾವಳಿಯು ನೆನವರಿಕೆಯಾಗುವದು. ಪ್ರಾಂತಿಕ ಉತ್ಪನ್ನವು ೧೯೧೦-೧೧ನೇ ಸಾಲಿನಲ್ಲಿ ೭ ಕೋಟಿ, ೧೬ ಲಕ್ಷವಿತ್ತು; ಆಗ ಖರ್ಚು ೬ ಕೋಟಿ, ೪೦ ಲಕ್ಷ. ೧೯೨೧-೨೨ನೇ ಸಾಲಿನಲ್ಲಿ ಉತ್ಪನ್ನವು ೧೨ ಕೋಟಿ, ೬೦ ಲಕ್ಷ; ಖರ್ಚು ೧೪ ಕೋಟಿ, ೨೮ ಲಕ್ಷ. ಕಳೆದ ೧೯೨೪-೨೫ನೇ ಸಾಲಿನಲ್ಲಿ ೧೪ ಕೋಟಿ, ೬೬ ಲಕ್ಷ ಉತ್ಪನ್ನ; ಖರ್ಚು ೧೪ ಕೋಟಿ, ೫೮ ಲಕ್ಷ. ಮುಂದಿನ ವರುಷದಲ್ಲಿ ೧೪ ಕೋಟಿ, ೬೧ ಲಕ್ಷ ಉತ್ಪನ್ನ; ೧೫ ಕೋಟಿ ೨೧ ಲಕ್ಷ ಖರ್ಚು; ಹೀಗೆ ಅಂದಾಜು ಮಾಡಲ್ಪಟ್ಟಿದೆ. ಮುಂದಿನ ವರುಷದಲ್ಲಿ ಬರಲಿಕ್ಕಿದ್ದ ರೂ. ೬೦ ಲಕ್ಷದ ತುಟ್ಟಿಯನ್ನು ಪ್ರಾಂತಿಕ ಸರಕಾರವು ಹೊಸ ಕರಗಳ ಎತ್ತುವಳಿಯಿಂದ ತುಂಬಲೆತ್ನಿಸುತ್ತದೆ.

ಕೌನ್ಸಿಲು ಸಭಾಸದರು ಹೊಸ ಕರಗಳನ್ನೆತ್ತಲು ಸಮ್ಮತಿ ಕೊಡುವದಿಲ್ಲ. ಪ್ರಾಂತಿಕ ಸರಕಾರವು ಶಿಕ್ಷಣ, ಆರೋಗ್ಯ ಮುಂತಾದ ರಾಷ್ಟ್ರಹಿತಸಂವರ್ಧಕ ಖಾತೆಗಳನ್ನು ಮುಂದೆ ಮಾಡಿ ಹೊಸ ಕರಗಳನ್ನು ಎತ್ತುವಳಿ ಮಾಡುವ ಯತ್ನದಲ್ಲಿದೆ. ಹೊಸದಾಗಿ ಚುನಾವಣೆಯಲ್ಲಿ ಯಶಸ್ವಿಯಾದ ಡಾ॥ ರಘುನಾಥರಾವ ಪರಾಂಜಪೇಯವರೂ ಪ್ರಾಂತಿಕ ಸರಕಾರಕ್ಕೆ ಸ್ಪಷ್ಟ ಸವಾಲು ಮಾಡಿದರು. ಮುಂಬಯಿ, ಪುಣೆ ಮುಂತಾದ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ನಾಟಕ, ಸಿನೆಮಾ ಇತ್ಯಾದಿ ಮನೋರಂಜಕ ಸಂಸ್ಥೆಗಳ ಮೇಲೆ ತೆರಿಗೆ ಹೇರುವಾಗ ಡಾ॥ ಪರಾಂಜಪೇಯವರು ದಿವಾನರಿದ್ದರು. ಈ ತೆರಿಗೆಯಿಂದ ಹುಟ್ಟುವ ಹಣವನ್ನೆಲ್ಲ ಸರಕಾರವು ಶಿಕ್ಷಣಕ್ಕೆ ಕೊಡುವದೆಂದು ಪ್ರಾಂತಿಕ ಸರಕಾರದ ಪ್ರತಿನಿಧಿಗಳಾಗಿ ಡಾ॥ ಪರಾಂಜಪೇಯವರು ಆಗ ಕೌನ್ಸಿಲಿನಲ್ಲಿ ವಚನ ಕೊಟ್ಟಿದ್ದರು. ಆ ವಚನವು ಈಗ ಎಲ್ಲಿರುವದಾಗಿ ದಿವಾನಪದಭ್ರಷ್ಟರಾದ ಡಾ॥ ಪರಾಂಜಪೇಯವರೇ ತಮ ಉತ್ತರಾಧಿಕಾರಿಗಳಿಗೆ ಕೇಳುತ್ತಿರುವಾಗ, ಪ್ರಾಂತಿಕ ಸರಕಾರದ ಮೋಹಕ ವಚನಗಳನ್ನು ನಂಬುವ ಬಗೆ ಹೇಗೆ?

ಖರ್ಚು ಮಿಗಿಲಾಯಿತು. ಹೇಗೆ ಮಿಗಿಲಾಯಿತು ಬಲ್ಲಿರೋ? ಕಾದಿಟ್ಟ ಖಾತೆಗಳ ಖರ್ಚಿನ ಸೋಗ ಹಾಗೆ ಬಡತಿ-ಭತ್ತೆಗಳಿಂದ ವಿಪರೀತ ಏರಿತು; ಮುಂಬಯಿ ಪಟ್ಟಣದ ವಿಸ್ತಾರಕ್ಕಾಗಿ, 'ಬೆಕ್ ಬೇ' ಉಪಸಾಗರವನ್ನು ಹಗಿದು, ಪಟ್ಟಣವಿಸ್ತಾರ ಮಾಡಿ ಪ್ರಾಂತಿಕ ಪ್ರಜೆಗಳಿಗೆ ಲಾಭ ಮಾಡಿಕೊಡುವ ಯೋಜನೆಯಿಂದ ಕೋಟ್ಯಾವಧಿ ರೂಪಾಯಿಗಳು ನಷ್ಟವಾದವು: ಸಕ್ಕರದಲ್ಲಿ ದೊಡ್ಡದೊಂದು ಕಟ್ಟು ಕಟ್ಟಿ ಹತ್ತಿ ಬೆಳಿಸುವ ಯೋಜನೆಯೊಂದೂ ನಡೆದದೆ; ಅದಕ್ಕೆ ಲಕ್ಷಾವಧಿ ರೂಪಾಯಿಗಳು ಖರ್ಚಾಗುತ್ತಲಿವೆ: 'ಬೆಕ ಬೇ' ಉಪಸಾಗರವನ್ನು ಹೂಗಿಯುವ ಯೋಜನೆಯ ಅವಸ್ಥೆ ಕೇಳಿರಿ! "ಸಂ ಜೊರ್ಜ ಲೊಯ್ಡ" ಎಂಬ ಯಂತ್ರದಿಂದ ತಾಸಿಗೆ ೨೦೦೦ ಘನ ಯಾರ್ಡ ಮಣ್ಣು ಉಪಸಾಗರದಲ್ಲಿ ತುಂಬಬೇಕೆಂದು ತಜ್ಞರ ಅಂದಾಜು; ಆ ಅಂದಾಜು ಹಿಡಿದು, ತಜ್ಞರು ಈ ಯೋಜನೆಯನ್ನು ಕೈಕೊಂಡಿದ್ದರು; ಈ ಯಂತ್ರದಿಂದ ಈಗ ನೋಡಲಾಗಿ, ತಾಸಿಗೆ ೪೬೨ ಘನ ಯಾರ್ಡ ಮಣ್ಣು ಉಪಸಾಗರದಲ್ಲಿ ಬೀಳುತ್ತದೆ. "ಕಾಳು" ಎಂಬ ಇನ್ನೊಂದು ಯಂತ್ರವಿದೆ. ಇದರಿಂದ ತಾಸಿಗೆ ೧॥ ಸಾವಿರ ಘನ ಯಾರ್ಡ ಮಣ್ಣು ಬೀಳಬೇಕೆಂಬ ಅಂದಾಜು ಹೋಗಿ, ಈಗ ೬೪೦ ಘನ ಯಾರ್ಡ ಮಣ್ಣು ಉಪಸಾಗರದಲ್ಲಿ ಬಿದ್ದರೆ, ಪ್ರಾಂತದೊಳಗಿನ ಬಡ ಪ್ರಜೆಗಳ ಭಾಗ್ಯ! ಅಂದಾಜು ಗಜ, ಆದದ್ದು ಅಜ: ಹೀಗೆ ಅಜ-ಗಜಾಂತರವಾಗುವ ಕಾರಣವೇನೆಂದು ಪ್ರಶ್ನಿಸಿದರೆ, ಪ್ರಾಂತಿಕ ಸರಕಾರವು, ಮಣ್ಣು ಅಗಿಯುವ ಭೂಮಿಯು ಮೆತ್ತನ್ನವೆಂಬ ಗ್ರಹಿಕೆಯಿಂದ ಅಂದಾಜು ಮಾಡಲ್ಪಟ್ಟಿತ್ತೆಂದೂ, ಈಗ ಅಲ್ಲಿ ಘಟ್ಟಿ ನೆಲ ಹತ್ತಿದ್ದರಿಂದ ಕೆಲಸ ಸಾಗುವದಿಲ್ಲೆಂದೂ ನೆವ ಹೇಳುತ್ತಾರೆ. ಡಾ॥ ಪರಾಂಜಪೇಯವರು ಇದೊಂದು ಕಪಟವೆಂದು ಮೊನ್ನೆ ಕೌನ್ಸಿಲಿನಲ್ಲಿ ನುಡಿದರು. ದಿವಾಣಪದಾರೂಢರಾಗಿ ಪ್ರಾಂತಿಕ ಸರಕಾರದ ಗರ್ಭಾಗಾರದಲ್ಲಿ ಸೇರಿಕೊಂಡ ಪುಣ್ಯಾತ್ಮರೇ ಸರಕಾರದ ಮೇಲೆ ಕಪಟದ ಆರೋಪ ಹೊರಿಸುವಾಗ, ನಾವು ಮತ್ತೇನು ಹೇಳಬೇಕು! ಈ ಯೋಜನೆಯನ್ನು ಸರಕಾರವು ಪ್ರಾಮಾಣಿಕ ಬುದ್ಧಿಯಿಂದ ಕೈಕೊಂಡಿತ್ತೆಂದು ಡಾ॥ ಪರಾಂಜಪೇಯವರು ಒಪ್ಪುವದಿಲ್ಲ. ಆ ಕುರಿತು ಹ್ಯಾಕೋರ್ಟಿನ ನ್ಯಾಯಮೂರ್ತಿಗಳೊಬ್ಬರು, ವಿಖ್ಯಾತ ಇಂಜಿನಿಯರರಾದ ಸರ್ ವಿಶ್ವೇಶ್ವರಯ್ಯನವರು, ಮುಂಬಯಿಯ ಪ್ರಸಿದ್ಧ ವರ್ತಕರಾದ ಸರ್ ಪುರುಷೋತ್ತಮದಾಸ ಠಾಕೂರದಾಸರವರು, ಹೀಗೆ ಮೂವರಿದ್ದ ಒಂದು ಚೌಕಶಿ ಮಂಡಳವನ್ನು ನೇಮಿಸಿ, ಮುಂಬಯಿ ಪಟ್ಟಣದ ವಿಸ್ತಾರ ಯೋಜನೆಯನ್ನು ಕೈಕೊಂಡ ಅಧಿಕಾರಿಗಳ ಪ್ರಾಮಾಣಿಕತನವನ್ನು ಶೋಧಿಸಬೇಕೆಂದು ಸೂಚಿಸಿರುವರು. ಇಷ್ಟು ದೊಡ್ಡ ತಪ್ಪು ಪ್ರಾಮಾಣಿಕತನದಿಂದ ಒದಗಲಾರದೆಂದು ಹೇಳಿ, ಅದನ್ನು ಸಿದ್ಧಪಡಿಸಲು ನಿಷ್ಪಕ್ಷಪಾತಿ ತಜ್ಞರ ಮಂಡಳವನ್ನೊಂದು ನೇಮಿಸಬೇಕಾಗಿ ಹೇಳುತ್ತಿರುವಾಗ, ಸರಕಾರವು ಕೋಟ್ಯಾವಧಿ ರೂಪಾಯಿಗಳನ್ನು ಸ್ವಾರ್ಥಸಾಧನೆಗಾಗಿ ಖರ್ಚು ಮಾಡಿತೆಂದೂ, ಪ್ರಜೆಗಳಿಗೆ ಟೋಕೋಪಕಾರದ ದೊಡ್ಡಸ್ತನದ ಮಾತು ಹೇಳಿ ವಂಚಿಸಿತೆಂದೂ ತ್ರಯಸ್ಥರು ಹೇಳಿದರೆ, ಅಯಥಾರ್ಥವಾಗುವದೇನು! "ಈ ಯೋಜನೆಯನ್ನು ಅಲ್ಲಿಂದಲ್ಲೇ, ಈಗಿಂದೀಗ ತಡಿಸಿರಿ," ಎಂದು ಮುಂಬಯಿಯ ಪ್ರಸಿದ್ಧ ವ್ಯವಹಾರಜ್ಞರಾದ ಶ್ರೀ॥ ಮನು ಸುಭೇದಾರರವರು ಈ ಯೋಜನೆಯ ಸಾಧಕ-ಬಾಧಕವನ್ನೆಲ್ಲ ಪರ್ಯಾಲೋಚಿಸಿ ಅಭಿಪ್ರಾಯ ಕೊಟ್ಟಾಗ್ಯೂ, ಪ್ರಾಂತಿಕ ಸರಕಾರವು ಈ ವರ್ಷವೂ ಈ ಯೋಜನೆಗಾಗಿ ೩೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬಯಸುತ್ತದೆ. ಇದಕ್ಕೆ ಯಾರು ಏನನ್ನಬೇಕು, ತಿಳಿಯುವದಿಲ್ಲ.

ಕೌನ್ಸಿಲಿನಲ್ಲಿ ವಿಶೇಷವಾಗಿ ಮುಂಬಯಿ ಪಟ್ಟಣದ ವಿಸ್ತಾರಯೋಜನೆಯ ಚರ್ಚೆಯೇ ಪ್ರಾಮುಖ್ಯವಾಗಿ ನಡೆಯುತ್ತಿದ್ದು. ಸಭಾಸದರು ಎದ್ದೆದ್ದು ಸರಕಾರದ ಮೇಲೆ ಈ ಕುರಿತು ಟೀಕೆ ಮಾಡುತ್ತಿರುವರು. ಕೋರ್ಟ ಫೀಯನ್ನು ಏರಿಸಲಿಕ್ಕಾಗಲಿ, ಜನರಲ್ ಸ್ಟಾಂಪಿನ ದರ ಏರಿಕೆಯ ಪ್ರಮಾಣವನ್ನು ಮತ್ತೂ ಮುಂದೆ ಚಾಲು ಇಡಲಿಕ್ಕಾಗಲಿ ಯಾರೂ ಒಪ್ಪುವದಿಲ್ಲ. ಒಂದು ಮಾತನ್ನು ಮಾತ್ರ ಇಲ್ಲಿ ಹೇಳಿ ಈ ಲೇಖವನ್ನು ಮುಗಿಸುವೆವು. ಕೋರ್ಟ ಫೀಯನ್ನು ಏರಿಸುವಾಗ "ಬರೇ ಎರಡು ವರ್ಷಕ್ಕಾಗಿ ಮಾತ್ರ" ವೆಂದು ಹೇಳಿ, ಸರಕಾರವು ಮುಂದೂರು ಮಾಡಿಕೊಂಡಿತ್ತು. ಕಳೆದ ವರುಷ ಈ ಕಾಯಿದೆಯ ಅವಧಿಯು ಸಮಾಪ್ತಿಯಾಗುವ ಸಮಯ, ಅವಧಿಯನ್ನು ಮುಂದರಿಸಲು ಸರಕಾ

ಕಳೆದ ವರುಷದ ಶಾಯಿದೆ ಕೌನ್ಸಿಲಿನ ಬೇಶನದಲ್ಲಿ ತಿದ್ದುವಡಿಯ ಸೂಚನೆ ತರ ಲದನ್ನು ಕೌನ್ಸಿಲಿನವರು ಧಿಕ್ಕರಿಸಿದ್ದರು. ಸರಕಾರವು ದೊಡ್ಡಸ್ತನ ತೋರಿಸಿ, ೫೦ ರೂಪಾಯಿಗಳ ಖರ್ಚನ್ನು ತಗ್ಗಿಸಿತು. ವರುಷ ಪುನಃ ಅದೇ ಕಾಯಿದೆಯು ಪ್ರಸ್ತುತವಾಗುತ್ತಿದೆ. ಜನರಲ್ ಸ್ಟಾಂಪಿನ ಣವನ್ನು ಮೂರು ವರುಷದ ಪೂರ್ತ ಕಾರವು ಏರಿಸಿತ್ತು. ಏರಿಕೆಯ ಕಾಯಿದೆ ಅವಧಿಯು ಇದೇ ಬರುವ ಮಾರ್ಚ ತಿಂ ಕೊನೆಗೆ ಸಮಾಪ್ತಿಯಾಗುತ್ತದೆ. ಈ ಮಿದೆಯನ್ನು ಹಾಗೆಯೇ ಮುಂದರಿಸಬೇ ದು ಸರಕಾರದ ಅಪೇಕ್ಷೆ. ಒಮ್ಮೆ ಕರ ಏತೆಂದರೆ, ಆ ಕರವನ್ನು ಹಂಗಾಮಿಯಾ ಹೇರಿದ್ದರಲಿ, ಅಥವಾ ಯಾವದೇ ನೆವದಿಂ ಹೇರಿದ್ದರಲಿ, ಅದನ್ನು ತಗ್ಗಿಸಲು ಸರ ರವು ತಾನಾಗಿ ಎಂದೂ ಒಪ್ಪುವದಿಲ್ಲ. ಹಂ ಮಿಯಾಗಿ ಹೇಳುವದು ಬರೇ ಚಂಚುಪ್ರವೇ ಶ್ಕಾಗಿ! ಕೌನ್ಸಿಲು ಸಭಾಸದರು ಇದನ್ನ ಅರಿತುಕೊಂಡು, ಪೋಸ್ಟ್ ಹುಂಗೆಗಳ ಹೋ ಮನ್ನು ಧಿಕ್ಕರಿಸಿ, ಸರಕಾರಕ್ಕೆ ಮಿತವ್ಯಯ ಪಾಠ ಕಲಿಸುವರೆಂದು ನಾವು ರೆ ನಂಬಿರುವೆವು.

ಸ್ಫುಟ ಸೂಚನೆಗಳು.

೧. ದಕ್ಷಿಣ ಅಫ್ರಿಕೆಯೊಳಗಿಂದ ಭಾರತೀಯ ನ್ನು ಹೊರತಳ್ಳುವ ಕಾಯಿದೆಯ ಸ್ವರೂಪವನ್ನು, ನ್ನು ಹಿಂದುಸ್ಥಾನ ಸರಕಾರದ ದುರ್ಬಲತೆಯ ನ್ನು ನಾವು ಈ ಮುಂಚೆಯೇ ವಿವರಿಸಿರುವೆವು. ಕ್ಕೆ ಈ ಕುರಿತು ಹಿಂದುಸ್ಥಾನ ಸರಕಾರಕ್ಕೂ, ಣ ಅಫ್ರಿಕೆಯ ಸರಕಾರಕ್ಕೂ ನಡೆದ ಪತ್ರ ವಹಾರವು ಪ್ರಕಟವಾಗಿ, ಈ ಪತ್ರವ್ಯವಹಾರದ ಲೋಚನದಿಂದ ಸ್ವರಾಜ್ಯ–ಪರರಾಜ್ಯಗಳೊಳ ಭೇದವು ಸ್ಪಷ್ಟವಾಗಿ ತೋರುವದಿದೆ. ಮೊ ಮೊದಲು, ಈ ಕಾನೂನನ್ನು ಕೈಕೊಳ್ಳಬೇಕಾ ದೆ 'ರೌಂಡ ಟೇಬಲ್ ಕಾನ್ಫರನ್ಸ' ಎಂಬ ಪ್ರಾತಿನಿಧಿಕ ಪರಿಷತ್ತನ್ನು ಸೇರಿಸಿರೆಂದು ಹಿಂದುಸ್ಥಾನ ಸರಕಾರವು ಆಗ್ರಹ ಮಾಡಿ ಹೇಳಿಕೊಂಡಿತು. ಭಾರತೀಯರನ್ನು ದಕ್ಷಿಣ ಅಫ್ರಿಕೆಯಲ್ಲಿ ಸ್ಥಿರಗೊಳಿ ಸುವ ಪ್ರಾತಿನಿಧಿಕ ಪರಿಷತ್ತಿನ ಯೋಜನೆಯಾದ ಅಂಥ ಪರಿಷತ್ತಿಗೆ ತಾವೆಂದೂ ಒಪ್ಪಲಾರೆವೆಂ ದಕ್ಷಿಣ ಅಫ್ರಿಕೆಯ ಸರಕಾರವು ಖರೆಮಾಡಿ ಹೇಳಿಬಿಟ್ಟಿತು. ಭಾರತೀಯರಿಗೆ ದಕ್ಷಿಣ ಅಫ್ರಿ ಕೆಯಲ್ಲಿ ಉಳಿಯಗೊಡುವದು, ಇಲ್ಲವೆ ಹೊರತಳ್ಳು ವು ಅಲ್ಲಿಯ ಅಂತಸ್ಥ ಕಾರಭಾರವೆಂದು ದಕ್ಷಿಣ ಅಫ್ರಿಕೆಯ ಸರಕಾರದವರು ಅಭಿಪ್ರಾಯಪಟ್ಟು ಯೋಜನೆಯನ್ನು ಧಿಕ್ಕರಿಸಿದರು. ಅದರೂ, ಪ್ರಾತಿನಿಧಿಕ ಪರಿಷತ್ತನ್ನು ಸೇರಿಸಲಿಕ್ಕೆ ತಮ್ಮ ಅಡ್ಡಿಯಿಲ್ಲ ವಾಗಿಯೂ, ಪರಿಷತ್ತಿನವರು ಹೊರತಳ್ಳುವ ಕಾನೂ ನಿಂದ ಭಾರತೀಯರಿಗೆ ಹೊರಡಬೇಕಾಗುವಾಗ ವಿಶೇಷ ಉಪದ್ರವವಾಗದಂತೆ ಯೋಜಿಸುವದಿದ್ದರೆ, ಅದಕ್ಕೆ ಮಾತ್ರ ದಕ್ಷಿಣ ಅಫ್ರಿಕೆಯ ಸರಕಾರವು ಸಂತೋಷ ದಿಂದ ನೆರವಾಗುವದೆಂದೂ ಹೇಳಲಾಯಿತು. ಕಾ ನೂನಿನ ಮೂಲಕ ಹೊರಬಿದ್ದ ನಿರಾಧಾರಿಗಳಾದ ಭಾರತೀಯರಿಗೆ ವಂತಿಗೆ ಕೂಡಿಸಿ ಹಿಂದುಸ್ಥಾನ ಸರ ಕಾರವು ಆಶ್ರಯ ಕೊಡುವದಿದ್ದರೆ, ಅದಕ್ಕೂ ತಮ್ಮ ಆಕ್ಷೇಪವಿಲ್ಲವಾಗಿ ಅಲ್ಲಿಯ ಸರಕಾರದ ಹೇಳಿಕೆಯಾ ಯಿತು. ಎಷ್ಟು ದೊಡ್ಡ ಔದಾರ್ಯ ನೋಡಿರಿ!

೨. ಅದರೂ, ಹಿಂದುಸ್ಥಾನ ಸರಕಾರವು ತನ್ನ ಶಿಷ್ಟಮಂಡಳವನ್ನೊಂದು ಅಲ್ಲಿಗೆ ಕಳುಹುತ್ತೇವಾಗಿ ಹೇಳಿ, ಅಲ್ಲಿಯ ಸರಕಾರದ ಅಪ್ಪಣೆ ಬೇಡಿತು. "ಶಿಷ್ಟಮಂಡಳಕ್ಕೆ ನಮ್ಮ ಅಸ್ತಿವಾನವಿಲ್ಲ; ಶಿಷ್ಟ ಮಂಡಳದವರು ಸ್ವತಂತ್ರ ವ್ಯಕ್ತಿಯವರಿರಬೇಕು. ಕೇ ವಲ ಮಾಹಿತಿ ಪೂರೈಸಿಕೊಳ್ಳುವದಕ್ಕಾಗಿ ಅವರು ಬರಬೇಕು; ಸ್ಥಳಿಕ ಚಳವಳಿಯಲ್ಲಿ ಅವರು ಪ್ರವೇಶ ಗೊಳ್ಳಬಾರದು; ಕಾನೂನಿನ ಕುರಿತು ಚೌಕಶಿ ಮಾ ಡಲು ನೇಮಿಸಲ್ಪಟ್ಟ ಸಿಲೆಕ್ಟ ಕಮಿಟಿಯ ಮುಂದೆ ಈ ಶಿಷ್ಟಮಂಡಳದವರು ತಮ್ಮ ಹಕೀಕತನ್ನು ಹೇಳ ದರೆ, ನಾವು ಕೇಳಿಕೊಳ್ಳುವೆವು; ಹೇಳುವದನ್ನೆಲ್ಲ ೮–೧೦ ದಿವಸಗಳಲ್ಲಿ ಹೇಳಬೇಕು;" ಇತ್ಯಾದಿ ಕಠಿಣ ಕರಾರುಗಳನ್ನು ದಕ್ಷಿಣ ಅಫ್ರಿಕೆಯ ಸರಕಾರದವರು ಹಿಂದುಸ್ಥಾನ ಸರಕಾರದ ಮೇಲೆ ಹೊರಿಸಿದರು. ಕಾನೂನಿನ ವಿಚಾರವನ್ನು ಕೆಲ ಕಾಲ ಮುಂದೂಡಿರೆಂದು ಹಿಂದುಸ್ಥಾನ ಸರಕಾರವು ಪರಿಪರಿಯಿಂದ ಹೇಳಿಕೊಂಡರೂ, ದಕ್ಷಿಣ ಅಫ್ರಿಕೆಯ ಸರ ಕಾರವು ಅದಕ್ಕೆ ಕಿವಿಗೊಡದೆ, ಪ್ರಕೃತ ಅಧಿವೇಶನದಲ್ಲಿಯೇ ಈ ಕಾನೂನು ಮಂಜೂರಾ ಗಬೇಕೆಂದು ತಮ್ಮ ಪ್ರಜೆಗಳ ಹಿತಾರ್ಥವಿರುವದೆಂ ದು ಹೇಳಿ, ಹಿಂದುಸ್ಥಾನ ಸರಕಾರದ ಬಿನ್ನಹವನ್ನು ತಾತ್ಸಾರ ಮಾಡಿತು. ಹಿಂದುಸ್ಥಾನವು ದಕ್ಷಿ ಣ ಅಫ್ರಿಕೆಯ ಮಾನದಿಂದ ವಿಶಾಲ ದೇಶ! ಪ್ರಜೆಗಳೂ ಹೇರಳ!! ಪ್ರಜಾಸಾಮರ್ಥ್ಯವು ಹೇರಳ ವಿರಬೇಕಾಗಿತ್ತು; ಆದರೆ, ಪ್ರಜೆಗಳು ಪಾರತಂತ್ರ್ಯ ಪಂಕದಲ್ಲಿ ಸಿಲುಕಿದ್ದದರಿಂದ ದಕ್ಷಿಣ ಅಫ್ರಿಕೆಯ ಸರಕಾರಕ್ಕೆ ಬಗ್ಗಿ ಸಲಾಮು ಹೊಡೆಯುವ ಅವ ಮಾನಾಸ್ಪದ ಪ್ರಸಂಗವು ಬಂದೊದಗಿದೆ. ಇನ್ನು ಹಿಂದೆರಡು ವಾರಗಳಲ್ಲಿ ಕಾನೂನು ಮಂಜೂರಾಗು ವದಂತೂ ನಿಜವು. ಭಾರತೀಯರು ಅದಕ್ಕೆ ಇದಿ ರಾಗುವ ಬಗೆ ಹೇಗೆ? ಬ್ರಿಟಿಶರಿಗೆ, ಫ್ರೆಂಚರಿಗೆ, ಅಮೇರಿಕೆಯವರಿಗೆ ಈ ಗತಿಯಾಗಿದ್ದಿದ್ದರೆ, ರಾಷ್ಟ್ರ ಗಳಲ್ಲೆಲ್ಲ ದೊಡ್ಡ ಕೋಲಾಹಲವೆದ್ದು ಸಮಸ್ತ ರಾ ಷ್ಟ್ರಗಳು ಒಕ್ಕಟ್ಟಾಗಿ ದಕ್ಷಿಣ ಅಫ್ರಿಕೆಯ ಮೇಲೆ ಹಾರಿಬೀಳುತ್ತಿದ್ದವು. ಆದರೆ, ಬಡ ಭಾರತೀಯರಿಗೆ ಕೇಳುವವರಾರು?

೩. ಮುಂಬಯಿ ಸರಕಾರವು ಮದ್ಯಪಾನನಿಷೇಧ ಪ್ರೋತ್ಸಾಹನದ ಕುರಿತು ವಿಚಾರ ಮಾಡುವದಕ್ಕೆ ಒಂದು ಮಂಡಳವನ್ನು ನೇಮಿಸಿರುವದು. ಈ ಮಂಡಳವು ಮದ್ಯಪಾನನಿರೋಧನದಿಂದ ಸರಕಾರಕ್ಕೊದಗುವ ನಷ್ಟವನ್ನು ಲೆಕ್ಕ ಮಾಡಬೇಕು: ಅದನ್ನು ತುಂಬಿ ಕರಲು ಎತ್ತುವಳಿ ಮಾಡಬಹುದಾದ ಹೊಸ ಕರಗಳ ರೂಪಗಳನ್ನು ಸಂಶೋಧಿಸಬೇಕು; ಮದ್ಯಪಾನನಿರೋ ಧನವು ಕ್ರಮವಾಗಿ ನಡೆಯಬೇಕಾದ್ದರಿಂದ ಈ ಸ್ಥಿತ್ಯಂತರದ ಕಾಲದಲ್ಲಿ ಹೇರಬೇಕಾದ ಕರಗಳ ಕಾ ರ್ಯಕ್ರಮ ಪತ್ರಿಕೆಯನ್ನೂ ತಯಾರಿಸಬೇಕು. ಅಬ ಕಾರಿ ಖಾತೆಯ ಉತ್ಪನ್ನವು ಈಗಳು ಕೋಟಿ ಇರುವ ದು ಮದ್ಯಪಾನನಿರೋಧನವಾಗಬೇಕಾದರೆ, ಇಷ್ಟು ರಕಮನ್ನು ಪ್ರಾಂತದೊಳಗಿನ ಪ್ರಜೆಗಳು ಹೊಸಕ ರಗಳ ರೂಪದಿಂದ ಹೇರಿಕೊಳ್ಳಲುದ್ಯುಕ್ತರಾದರೆ, ಸರ ಕಾರವು ಮದ್ಯಪಾನನಿರೋಧನದ ವಿಚಾರ ಮಾ ಡುವದು. ಕರದ ಎತ್ತುವಳಿಯು ತಕತಕದಿಂದ ಸಾಗಿ, ಈಗ ಹೊಸ ಕರಗಳ ಹೆಸರು ಸರಕಾರಕ್ಕೆ ಸೂಚಿಸಿದಂ ತಾಗಿದೆ, ಮಿತವ್ಯಯ ಮಾಡುವ ಬುದ್ಧಿಯು ಸರಕಾ ರಕ್ಕಿರುವದಿಲ್ಲ. ಮದ್ಯಪಾನವನ್ನು ನಿಲ್ಲಿಸಬೇಕೋ? ಶಿಕ್ಷಣದ ವಿಸ್ತಾರ ಮಾಡಬೇಕೋ? ಹೊಸ ಕರಕೊಡಿ ರಿ; !! ಚಿಕಿತ್ಸಾಲಯಗಳನ್ನು ತೆರೆದಿಡಬೇಕೋ? ಹೊಸ ಕರ ಕೊಡಿರಿ!! ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ವಿಸ್ತಾರ ಬೇಕೋ? ಹೊಸ ಕರ ಕೊಡಿರಿ!! ಸರಕಾರ ದ ಅಡಚಣಿಯ ಮೂಲಕ ಇವೆಲ್ಲ ಪ್ರದಾಹಿಕದ ಯೋಜನೆಗಳು ಕಡೆದಿವೆ: ಹಣವಿದ್ದರೆ ಸರಕಾರ ಕ್ಕೆ ಇವನ್ನು ಪುರಸ್ಕರಿಸಲು ಸಂಕೋಚವೇ! ಅದೇ ಅಧಿಕಾರ ಸಂಬಳವನ್ನು ಏರಿಸುವ ಮಾತಿರಲಿ, ಹೊ ಸ ಕರ ತೆರುವದು ಬೇಡ; ಆಗ ಹಣದ ಅಡಚಣಿ ಯಿಲ್ಲ. ಬಡತಿ ಕೊಡಬೇಕೆನ್ನುವಷ್ಟರಲ್ಲಿ ಕೊಟ್ಟು ಹೋಯಿತು. ಇದು ಅಧಿಕಾರ ರಾಜ್ಯಭಾರವು!!

೪. ಇದೇ ಸಮಯ ಟೀಪೂ ಸುಲ್ತಾನನ ಒಂದು ಕಥೆಯನ್ನು ನಿವೇದಿಸುವದು ಸಮಯೋಚಿತವು. ಟಿಪ್ಪೂ ಸುಲ್ತಾನನು ೧೭೮೩ನೇ ಇಸ್ವಿಯಲ್ಲಿ ಯುದ್ಧ ಮಾಡಿ ಸೋತು ಹೋಗಿದ್ದನು. ಆತನಿಗೆ ಅತ್ತ ಯುದ್ಧದ ಹೇರಳ ಖರ್ಚು, ಇತ್ತ ಕೆಲವು ಪ್ರದೇಶವು ಶತ್ರುಗಳ ಕೈಸೇರಿ, ಹೇರಳ ನಷ್ಟ! ಸಾಲ ತೀರಿಸಲಿ ಕ್ಕಾಗಿ, ರಾಜ್ಯಭಾರವನ್ನು ನಡಿಸುವದಕ್ಕಾಗಿ ಆತನು ಹಿಂದೂ ದೇವಾಲಯಗಳನ್ನು ಸುಲಿದನು; ಕ್ರೈಸ್ತರ ಉಪಾಸನೆಯನ್ನೂ ಅಪಹರಿಸಿದನು; ಇಷ್ಟಾದರೂ, ಪ್ರಜೆಗಳಿಗೆ ಮದ್ಯಪಾನ ಮಾಡಹಚ್ಚಿ, ದ್ರವ್ಯಸಂ ಪಾದನ ಮಾಡಬೇಕೆಂಬ ದುರಾಶೆಯು ಆತನಿಗೆ ಸ್ಪ ರ್ಶಿಸಲಿಲ್ಲ. ೧೭೮೩ನೇ ಇಸ್ವಿಯ ಮುಂಚೆಯಾಗಿಯೇ ಮದ್ಯಪಾನವ್ಯಾಪಾರಕ್ಕೆ ತಡೆಹಾಕಲು ಸುಲ್ತಾನನು ಯೋಜಿಸಿದ್ದನು ಯುದ್ಧದ ತರುವಾಯ ಆತನು ಮತ್ತೂ ಕಠೋರಯುಕ್ತನಾಗಿ, ಮದ್ಯಪಾನ ವನ್ನು ೩–೪ ತಿಂಗಳುಗಳಲ್ಲಿ ನಿರ್ಮೂಲಿಸಿಬಿಟ್ಟನು; ಮದ್ಯದ ಭಟ್ಟಿಗಳನ್ನೂ, ಮದ್ಯದ ವನಸ್ಪತಿಗಳನ್ನೂ ನಾಮಶೇಷ ಮಾಡಿಬಿಟ್ಟನು. ಟೀಪೂವಿನ ಮದ್ಯಪಾ ನನಿರೋಧನದ ಸಾಹಸವನ್ನು ನೆನಿಸಿದರೆ, ಮಹ ದಾನಂದವಾಗುತ್ತದೆ. ಇಷ್ಟಾಗಿ, ಸುಲ್ತಾನನು ಪರ ಮಾವಧಿಯ ಹಣದ ಅಡಚಣಿಯುಳ್ಳವನು; ಆದರೂ, ಮದ್ಯಪಾನದ ಪಾಪದ ದುಡ್ಡಿಗೆ ಆತನು ಕೈಹೊತ ಲಿಲ್ಲ. ಆದರೆ, ಟೀಪೂವು ಸುಧಾರಿಸಿದವನಲ್ಲ; ನಮ್ಮ ಬ್ರಿಟಿಶರು ಸುಧಾರಿಸಿದವರು; ಮದ್ಯಪಾನವನ್ನು ನಿ ರ್ಮೂಲಿಸಬೇಕಾದರೆ, ಪ್ರಜೆಗಳು ಹೊಸ ಕರಗಳನ್ನು ಹೇರಿಕೊಂಡು ದುಡ್ಡು ತೆರಬೇಕು! ಟೀಪೂವಿನ ಕಾ ರುಬಾರಕ್ಕೂ, ಬ್ರಿಟಿಶರ ಸುಧಾರಣೆಗೂ ಇಷ್ಟೇ ಹಿಂ ಮು ಭೇದ.

— ಸಿಂಗಾಪುರ ಹಡಗಿನ ಖರ್ಚನ್ನು ಹಿಂದುಸ್ಥಾನ ಸರ ಕಾರವು ಕೊಡುವದಿಲ್ಲವಾಗಿ ಮುಖ್ಯ ಪ್ರಧಾನರು ವಿಲಾಯ ತಿಯ ಪಾರ್ಲಿಮೆಂಟಿನಲ್ಲಿ ಸ್ಪಷ್ಟೀಕರಣ ಮಾಡಿದರು. ಅದಕ್ಕೆ ಬೇಕಾಗುವ ಸೌಕರ್ಯವನ್ನು ಹಿಂದುಸ್ಥಾ ನ ಸರಕಾರವು ಸ್ವಂತ ಖರ್ಚಿನಿಂದ ಮಾಡುವ ಯೋಜ ನೆಯಾಗಿಯದೆ.

— ಮುಂಬ್ಯಾದೊಳಗಿನ ಧರ್ಮಸ್ಥಾನದಲ್ಲಿ ಪರ್ಚ್ಕ್ಕೆ ೫೦೦೦೦ಕ್ಕೆ ಮಿಕ್ಕ ಗೋವಧೆಯಾಗುತ್ತದೆ! ಏನಿದು!!

ಸ್ಥಾನಿಕ ವೃತ್ತಾಂತ.

ಕುಮಟಾ— ಶಕೆ ಬಹಳ ಹೋಳೀ ಹಬ್ಬದ ಗದ್ದಲ

ಈ ತಾಲೂಕಿನ ತರ್ಫೆನಿಂದ ಜಿಲ್ಹಾ ಲೋಕಲ್ ಬೋರ್ಡಿನ ಮೂರು ಜಾಗಗಳಿಗೆ ಉಮೇದ್ವಾರರಾಗಿ ನಿಂತ ನಾಲ್ವರಲ್ಲಿ ರಾ ಗೋಪಾಲಕೃಷ್ಣ ಕೃಷ್ಣ ಹೆಗಡೆಯವರು ತಮ್ಮ ಅರ್ಜಿಯನ್ನು ಹಿಂತೆಗೆದುಕೊಂಡದ್ದರಿಂದ ಉಳಿದ ಮೂವರಾದ ರಾ ಗಣೇಶ ಗಣಪತಿ ಶಾಸ್ತ್ರಿ ಮಹಾಬಲೇಶ್ವರ ಗಣಪತಿ ಭಟ್ಟ ಗೋಟೆ, ಜನಾರ್ದನ ಶಿನ ಪಂಡಿತರವರು ಪ್ರತಿಸ್ಪರ್ಧಿಗಳಿಲ್ಲದೆ ಆರಿಸಿಬಂದಿರುವರು ಕುಮಟಾ ತಾಲೂಕ ಲೋಕಲ್ ಬೋರ್ಡಿನ ೧ ಹಾಗು ೨ ನೇ ಗ್ರೂಪ್ಪುಗಳ ತರ್ಫೆನಿಂದ ಹಿಂದಿನ ಇಲೆಕ್ಷನ ಕ್ರಮದಲ್ಲಿ ಪ್ರತಿಸ್ಪರ್ಧಿಗಳಿಲ್ಲದೆ ಆರಿಸಿ ಬಂದವರ ಸಭಾಸದಾಧಿಕಾರವನ್ನು ಕಾಯಂ ಇಟ್ಟು, ಆ ಗ್ರೂಪ್ಪುಗಳಿಗೆ ಕೊಟ್ಟ ಉಮೇದ್ವಾರರ ಅರ್ಜಿಗಳು ವಜೆಗೆ ಹಾಕಿಯವೆ ೩ನೇ ಗ್ರೂಪಿನ ಎರಡು ಆಸನಗಳಿಗೆ ರಾ। ಗೋಪಾಲಕೃಷ್ಣ ಕೃಷ್ಣ ಹೆಗಡೆ, ಮಾಧವ ಗಣಪಯ್ಯ ಶ್ಯಾನಭಾಗ, ವೆಂಕಟ್ರಮಣ ಗಣಪ ಹೆಗಡೆ ಬೇಲೆಕೇರಿ ಈ ಮೂವ ಉಮೇದ್ವಾರರಿರುವರ ೪ನೇ ಗ್ರೂಪಿಗೆ ರಾ ರಾಮಕೃಷ್ಣ ಮಹಾದೇವ ಭಟ್ಟ ದೇವತೆ, ಅಂಬಾರಾಮ ನಾರಾಯಣ ಉಪಾಧ್ಯಾಯ ಇವರಿಬ್ಬರು ಎರಡು ಆಸನಗಳಿಗೆ ಆರಿಸಿ ಬಂದಿರುವರು ೫ನೇ ಗ್ರೂಪಿಗೆ ರಾ ವಾಸುದೇವ ಭಿಕ್ಕ ಶ್ಯಾನಭಾಗ ಬಾಳೇರಿ, ಶ್ರೀಧರ ಭಗವಂತ ಶ್ಯಾನಭಾಗ ಸುಬ್ರಾಯ ಈಶ್ವರ ಹೆಗಡೆ ಯಲವಳ್ಳಿ, ವೈಕುಂಠ ಪುಂಡ್ಲಿಕ ಹೆಗಡೆ ಹೀಗೆ ನಾಲ್ವರು ಒಂದು ಜಾಗೆಗೆ ಉಮೇದ್ವಾರರು, ೬ನೇ ಗ್ರೂಪಿನ ಒಂದೇ ಆಸನಕ್ಕೆ ರಾ॥ ವಿಶ್ವೇಶ್ವರ ಶಿವಣ್ಣ ಹೆಗಡೆ ಇವರೊಬ್ಬರೆ ಉಮೇದ್ವಾರರಿದ್ದಪರಿಂದ ಅವರು ಆರಿಸಿಬಂದಿರುವರು ೭ನೇ ಗ್ರೂಪಿನ ಎರಡು ಆಸನಗಳಿಗೆ ರಾ॥ ಗೋಪಾಲಕೃಷ್ಣ ಭಟ್ಟ ರಾಮಕೃಷ್ಣ ಭಟ್ಟ ಕಡೇಕೋಡಿ, ರಾಮ ಭಟ್ಟ ಗಣಪಭಟ್ಟ ಅತ್ತಿಡಿ, ರಾಮಚಂದ್ರ ಶ್ರೀನಿವಾಸ ಪೈ ಹೊಲೆಗದ್ದ, ಸುಬ್ರಾಯ ವೆಂಕಟ್ರಮ ಭಟ್ಟ ಊರಕೇರಿ ಇವರು ಉಮೇದ್ವಾರರು, ಇಲೆಕ್ಷನು ಮಾರ್ಚ ತಾರೀಖು ೨೯ನೇಗೆ ಕಾಗಾಲ, ಮಿರ್ಜಾನ, ಕೂಜಳ್ಳಿಗಳಲ್ಲಿ ನಡಿಯುವದು

ಈ ಹೊತ್ತಿನಿಂದ ಮ್ಯುನಿಸಿಪಾಲಿಟಿಗಳ ಶಾಲೆಗಳು ಸ್ಕೂಲಬೋರ್ಡಿಗೆ ಸೇರಿದವು ಮ್ಯುನಿಸಿಪಾಲಿಟಿಗಳ ಸ್ಕೂಲ ಕಮಿಟಿಗಳ ಕಾರಭಾರವು ಮುಗಿಯಿತು

ಕರ್ನಾಟಕ ಸಿನೇಮಾ ಕಂಪನಿಯವರು "ಗಂಗಾವತರಣ", "ಮಾರ್ಕಂಡೇಯ" ಚಿತ್ರಪಟಗಳನ್ನು ತೋರಿಸುತ್ತಿರುವರು ಪ್ರೇಕ್ಷಣೀಯ ವಿರುವವಂತೆ!

ಕುಮಟೆ ತಾರೀ ಸಂಕದ ಕಟ್ಟೋಣವು ಇನ್ನೂ ಎಷ್ಟು ಕಾಲ ನಡೆಯುವದೋ ಏನೋ! ಈ ವರೇಗಿನ ಸಂಕದ ಕಟ್ಟೋಣವು ಕಿತ್ತು ಹಾಕಿಯದೆ ಈ ನಷ್ಟಕ್ಕೆ ಹೊಣೆಗಾರರ್‍ಯಾರು?

ಕಾರವಾರ— ಸ್ಕೂಲಬೋರ್ಡಿನ ಇಲೆಕ್ಷನಿನಲ್ಲಿ ಏ।ಶೇಕ ಅಮದು, ಮಿಸೆಸ್ ರೋಜ ಪಾಚೆಕೋ, ರಾ। ನಾರಾಯಣ ಜಾಬಾಜಿ ಡಿಂಚಣಕರ ವೋಜೀ, ಎಮ್ ಟಿ ಶೆಟ್ಟಿ, ಇವರು ಪ್ರತಿಸ್ಪರ್ಧಿಗಳಿಲ್ಲದೆ ಆರಿಸಿ ಬಂದರು, ಉಳಿದ ಸದಸ್ಯರುಗಳಲ್ಲಿ ರಾ| ಹಟ್ಟಂಗಡಿ, ಯಶವಂತ ಕೇಳಕರ, ಎಸ್. ವ್ಹಿ ಕಾಮತ, ಶಿವಾ ನೀಲಕಂಠ ನಾಯಕ ಹಾಗು ಎಸ್. ಎಚ್ ನ್ಯಾಕ, ಎಮ್ ಏ ಎಲ್‌ಎಲ್ ಬಿ ಹೊನ್ನಾವರ, ಇವರು ಆರಿಸಿ ಬಂದಿರುವರು ರಾ| ಶಿವಾ ನೀಲಕಂಠ ನ್ಯಾಕರ ವರ್ತನೆ ಹಿಂದೆ ಕೆಲವರು ತಮ್ಮ ಸ್ಕೂಲ ಮಾಸ್ತರ ಇರತ್ತ ಜನರಲ್‌ವಾರ್ಡಿನಲ್ಲಿ ಉಮೇದ್ವಾರರಾಗಿ ನಿಂತು ಯೋಗ್ಯವಲ್ಲ ಜಿಲ್ಹಾ ಬೋರ್ಡಿನ ಮತದಾತರೂ ಕೂಡ ಈ ಕುರಿತು ವಿಚಾರಿಸಿ ಅವರಿಗೆ ಮತ ಕೊಡಬಾರದೆಂದು ... ನಿಸ್ತರು ಸ್ಕೂಲ ಬೋರ್ಡಿನ ಅಧ್ಯಕ್ಷರು ರಾ ಹಟ್ಟಂಗಡಿಯವರು ಆಗ ಜರೆದ ಮತಾತ್ಮಕ ... ಸ್ಕೂಲಬೋರ್ಡಿನ ಮೊದಲನೇ ಸಭೆಯ ... ನೇ ತಾರೀಖಿಗೆ ಕಾರವಾರದಲ್ಲಿ ...

ಪಿ ವೀ ಸ್ಕೂಲ... ... ಪ್ರಸಿದ್ಧರಾದ ಸರ್ ಜಾರ್ಜ್ ವುಡ್‌ರವರ ಸ್ಕೂಲ್ಸ ಇಲ್ಲಿ ... ಸಮರಿದ್ದಾರೆ

ಶಿದ್ದಾಪುರ— ಒಬ್ಬರು ತಿಳಿಸುವದೇನಂದರೆ— ಹಿಂದೆ ಕಳೆದ ಸೋಮ ಸೂರ್ಯಗ್ರಹಣದ ದಿವಸ ಭುವನಗಿರಿಯ ಶ್ರೀ ಅಮ್ಮನವರ ದೇವಸ್ಥಾನದಲ್ಲಿ ಹಲವು ಕಾಯಿ ಸಮರ್ಪಣ ಮಾಡಿಸಿಕೊಂಡು ಒಂದು ಹಳೆಪೈಕ ಜಾತಿಯ ಒಬ್ಬ ವೃದ್ಧ ನಗೆ ಹಸ್ತರು ಹೋಗಿದ್ದರು ಆವರು ಶ್ರೀ ದೇವಸ್ಥಾನದ ಜೆಟ್ಟಿಗಿಲನ್ನು ದಾಟಿ ಬಂದ ಕಾರಣ ... ಗ್ರಹಣವು ಪೂರ್ಣ ಬಿಟ್ಟ ನಂತರ ಹಣ್ಣು ಕಾಯಿ ಸಮರ್ಪಣ ಮಾಡಿಕೊಡುವದರ ಬದಲು ಅಲ್ಲಿಯ ಪೂಜಾರಿಗಳು ತಕರಾರಿಗೆ ಪ್ರಾರಂಭಿಸಿದರಂತೆ ... ಒಳಗೆ ಬಂದದ್ದರಿಂದ ಈಗ ಪ್ರಾಯಶ್ಚಿತ್ತ ಮಾಡಿಕೊಂಡು ಮುಂದಿನ ಕೆಲಸ ನಡೆಯಬೇಕಾಗಿದೆ ಆದ್ದರಿಂದ। ಪ್ರಾಯಶ್ಚಿತ್ತಕ್ಕೆ ಹಣ ಬೇಕು ಎಂದರು ಆದರೆ ಸದ್ಗೃಹಸ್ಥರು ತಾವು ಕೊಡುವದಿಲ್ಲ ನಮ್ಮ ಸಹಿಕರಾದ ಇತರ ಪರಿವಾರ ಜನಗಳೇ ಮುಂತಾದವರು ... ಜಾಗದಲ್ಲಿ ಹೋಗತ್ತಾರೆ ... (ನಮ್ಮ ಸಮಾಜದವರು) ಮಾತ್ರ ಹೋಗಬಾರದೆಂದು ಯಾವ ಶಾಸ್ತ್ರದಲ್ಲಿ ಅದೆ ಎಂದು ಪ್ರಶ್ನಿಸಿದ್ದಕ್ಕೆ ಸಮರ್ಪಕ ಉತ್ತರಗಳಿಲ್ಲ ಅರ್ಥ ತಾನು ಇಲ್ಲದ ಸಲ್ಲದ ಒಣ ಮಾತುಗಳನ್ನಾಡಿಕೊಳ್ಳುತ್ತ ನಂತರ ಕಾಯಿ ಸಮರ್ಪಣ ಮಾಡಿಕೊಟ್ಟರು ಸದ್ಗೃಹಸ್ಥರಿಗೆ ಈ ಮಾತಿನ ಖುಲಾಸೆ ಮುಂದಿನ ಭುವನಗಿರಿ ಜಾತ್ರೆಯಲ್ಲಿ (ಕಳೆದು ಹೋದ) ಅಂದರೆ ತಾ ೨೮ ೧ ೨೬ಕ್ಕೆ ಮಾಡೋಣವೆಂದಿದ್ದರಂತೆ ಆದರೆ ಆ ದಿವಸ ಏನೂ ನಿಕಾಲಿ ಆದಂತೆ ತೋರುವದಿಲ್ಲವಾಗಿ ತಿಳಿಯುತ್ತದೆ

ವೃತ್ತಸಾರ.

— ಸ್ವರಾಜ್ಯ ಪಕ್ಷದವರಾದ ಕಲಕತ್ತೆಯ ಶ್ರೀ ಪ್ರಕಾಶಚಂದ್ರ ಸಿಂಹರವರು ಜೇಲಕ್ಕೆ ಬೇಸರಪಟ್ಟು ವಿಷಪಾನ ಮಾಡಿಕೊಂಡು ದೈವವಶರಾದರು ತಾನು ಸಾಯುವ ಮುಂಚೆ ೩ ವರ್ಷ ಪ್ರಾಯದ ಶಂಕರನೆಂಬ ಒಬ್ಬ ಹುಡುಗನನ್ನೂ ೫ ವರ್ಷ ಪ್ರಾಯದ ಛಾಯಾ ಎಂಬ ಹುಡುಗಿಯನ್ನೂ ಹಾಲಿನಲ್ಲಿ ವಿಷಕೊಟ್ಟು ಕೊಂದನು ಶ್ರೀ ಸಿಂಹರವರು ಅಸಹಯೋಗದಲ್ಲಿ ಸೇರಿ ಜೈಲುವಾಸವನ್ನೂ ಅನುಭವಿಸಿದ್ದರು ಪರಮಾತ್ಮನ ಮೇಲಿನ ವಿಶ್ವಾಸವು ನಷ್ಟವಾದ್ದರಿಂದ ತಾನು ಆತ್ಮಹತ್ಯ ಪ್ರತ್ಯಹತ್ಯಗಳನ್ನು ಮಾಡಿದೆನೆಂದು ಆತನು ಬರೆದಿಟ್ಟಿರುವರು

— ಮದ್ರಾಸಪ್ರಾಂತದಲ್ಲಿ ಕಿರುಪತ್ತೂರ ಮಹೋತ್ಸವಕ್ಕೆ ತಾಲೂಕ ಲೋಕಲ್‌ಬೋರ್ಡಿನ ಮುಖ್ಯಾಧ್ಯಾಪಿಕೆಯರು ಹಾಜರ ಇರಲಿಲ್ಲನೆಂದು ಅವರಿಗೆ ಬಡತರ್ಫ ಮಾಡಲಾಯಿತು

— ಆಸ್ಟ್ರೇಲಿಯಾ ದೇಶದ ಕೂರಾ ಗುಡ್ಡ ಪ್ರದೇಶದಲ್ಲಿ ದೊಡ್ಡ ಬೆಂಕಿ ಎದ್ದು ಬಹಳಹಾನಿ ಬೆಂಕಿಯ ಜ್ವಾಲೆಗಳು ೫೦ ಅಡಿ ಎತ್ತರ ಹಾರುತ್ತಿದ್ದವಂತೆ ಈ ಜ್ವಾಲೆಗಳಿಂದ ೩೨ ಕರಗಸ ಗಿರಣಿಗಳು ಸುಟ್ಟು ಹೋದವು ೮೦೦ ಕೂಲಿಕಾರರು ನಿರುದ್ಯೋಗಿಯಾಗಿರುವರು

— ವಿಲಾಯತಿಯೊಳಗಿನ "ಸೊಲ್ಟಲೇಕಸಿಟಿ" ಎಂಬಲ್ಲಿ ಖರ್ಚಾದ ಒಂದು ದೊಡ್ಡ ಗಾಳಿಬೀಸಿ ೧೦೦ ಮಂದಿಗಳು ಹುಗಿದುಬಿದ್ದರು ೨೮ ಮಂದಿಗಳು ಮಡಿದರು ಉಳಿದವರ ಪತ್ತೆಯಿಲ್ಲ ಒಂದು ಖಾನಾವಳಿಯಲ್ಲಿ ೫೦ ಮಂದಿಗಳು ಮಲಗಿಕೊಂಡಿದ್ದರು ಬಿರ್ಗಾಳಿ ಬಿದ್ದ ಕೂಡಲೆ ಇಡೀ ಖಾನಾವಳಿಯು ನುಚ್ಚುನೂರು! ಖಾನಾವಳಿಯ ಯಜಮಾನಿ ಬಿಚಾರಿ! ಅವಳಿಗೆ ಒಬ್ಬ ಹುಡುಗ ಹಾಗು ಒಬ್ಬ ಹುಡುಗಿ ಇದ್ದರು ಇಬ್ಬರ ಬಳಿಯಲ್ಲಿ ವಿಲಿಯವ ಒಂದು ತಗಡು ಮಂಗಿ ಇತ್ತು ಆ ಮಂಗಿಯು ಇಬ್ಬ ಮಕ್ಕಳ ಮೇಲೆ ಕವಚ ಬಿತ್ತು ಆದರಿಂದ ಖರ್ಚದ ಬಾಧೆಯು ಮಕ್ಕಳಿಗೆ ತಟ್ಟಲಿಲ್ಲ ನಾಲ್ಕು ತಾಸಿನ ಮೇಲೆ ಅವರಿಗೆ ಹೊರತೆಗೆದರು ಗಿಡಮರಗಳ ನಷ್ಟವನ್ನು ಹೇಳತೀರದು

— ಮುಂಬಯಿ ಕಾಯಿದೆ ಕೌನ್ಸಿಲಿಗೆ ಡಾ। ಪರಾಂಜಪೆಯವರ ಸಭಾಸದರಾಗಿ ಆರಿಸಿ ಬಂದರು ಸ್ವರಾಜ್ಯಪಕ್ಷದ ಡಾ। ದೇಶಮುಖರವರು ಪರಾಜಯ ಹೊಂದಿದರು ಪ್ರತಿಯೋಗಿ ಸಹಕಾರಿಗಳು ಹುಳ ಕಿನಿಂದ ಡಾ। ಪರಾಂಜಪೆಯವರು ಗದ್ದರೆಂದು ಬಲ್ಲವರ ಹೇಳಿಕೆ!

— ಬಾಲ್ಕನ ಪ್ರದೇಶದಲ್ಲಿ ತೋಳಗಳ ಹಾವಳಿ ವಿ... ಮನೆಗಳಲ್ಲಿ ಸೇರಿ ಜನರನ್ನೂ ದನಕರುಗಳನ್ನೂ ಭಕ್ಷಿಸುತ್ತಿರುವವು! ವಿಪರೀತ ಕಾಲ

— ಅಖಿಲ ಭಾರತೀಯ ಕಾಂಗ್ರೆಸ ಕಮಿಟಿಯ ಅಧಿವೇಶನವು ದಿಲ್ಲಿಯಲ್ಲಿ ಶನಿವಾರ ತಾರೀಖು ೬ನೇಗೆ ಸೇರುವದರಿಂದ ಪಂಡಿತ ಮೋತಿಲಾಲ ನೆಹರೂರವರು ಮಹಾತ್ಮರೊಡನೆ ಆಲೋಚಿಸಲು ಅಹಮ್ಮದಾಬಾದಿಗೆ ಹೋಗಿರುವರು ಪಂಡಿತ ಮದನಮೋಹನ ಮಾಲವಿಯರವರು ವರಿಷ್ಠಸಭೆಯ ಕೌನ್ಸಿಲಿನೊಳಗೂ ಸ್ವತಂತ್ರ ಪಕ್ಷಕ್ಕೆ ರಾಜೀನಾಮೆಯನ್ನಿತ್ತಿರುವರು, ಬೆಂಗಾಲ ಜಿನ್ನಾರವರೂ ಆದಕ್ಕೆ ರಾಜೀನಾಮೆಯಿತ್ತರು ಹೊಸ ಪಕ್ಷಗಳ ಪ್ರಾದುರ್ಭಾವವಾಗುವದಂತೆ! ಆಕೋಲೆಯಲ್ಲಿ ಪ್ರತಿಯೋಗಿ ಸಹಕಾರಿಪಕ್ಷದ ಪ್ರಾಣಪ್ರತಿಷ್ಠೆಯಾಯಿತು ಗೊಂದಲದಲ್ಲಿ ಗದ್ದಲ

— ಬೆಂಗಳೂರಲ್ಲಿ ಅಖಿಲ ಕರ್ನಾಟಕ ಆಯುರ್ವೇದ ಸಮ್ಮೇಳನವು ಡಾ। ಸವಣೂರರವರ ಅಧ್ಯಕ್ಷತೆಯಲ್ಲಿ ಸೊಗಸಾಗಿ ನೆರವೇರಿತು ಸಭೆಗೆ ಕರ್ನಾಟಕದಿಂದ ಸುಮಾರು ೨೦೦ ಪ್ರತಿನಿಧಿಗಳು ಸೇರಿದ್ದರು ಪರಿಷತ್ತಿಗೆ ಮೈಸೂರಿನ ಯುವರಾಜರು ೩೦೦ ರೂಪಾಯಿಗಳನ್ನು ಅರ್ಪಿಸಿರುವರು

— ರಗೂನಿನ ಕ್ಯಾಕಪನ ಬಂದರದಿಂದ ೩೦ ಪ್ರಯಾಣಿಕರನ್ನು ಹೇರಿಕೊಂಡು ಒಂದು ದೋಣಿ ರಂಗೂನಿಗೆ ಹೋಗುತ್ತಿರುವಾಗ ತೆರೆಗಳು ಬಿದ್ದು ಮುಳುಗಿತು ೨೬ ವರಿ ಪ್ರಯಾಣಿಕರು ಈಜಿಕೊಂಡು ಬದುಕಿದರ ... ವರಿಗಳು ಜಲಸಮಾಧಿ ಹೊಂದಿದರು ಪಾಪ!

ಮುಂಬಯಿಯ ಕಾಯಿದೆ ಕೌನ್ಸಿಲಿನ ಶುಕ್ರವಾರದ ಅಧಿವೇಶನದಲ್ಲಿ "ಅನರಲ ಸ್ಟಾಂಪ"ನ್ನು ಏರಿಸತಕ್ಕ ಕಾಯಿದೆಯ ಪ್ರಥಮ ವಾಚನವು ಮಂಜೂರಾಗಿಯದೆ ಬ್ರಾಹ್ಮಣೇತರ ಸಭಾಸದರು ಸರಕಾರಕ್ಕೆ ಆಶ್ರಯವನ್ನಿತ್ತರು ಮೂರು ವಾಚನಗಳಾಗುವ ವರೇಗೆ ಆರಿಯದ

— ವಾಯುವ್ಯ ಸರಹದ್ದಿನ ಉಗಿಬಂಡಿಯವರಿಗೆ ಬೋಲ್ಟ" ಮುಂತಾದ ಸಾಮಗ್ರಿ ಬೇಕಾಗಿದೆ. ಯುರೋಪಿನ ಇತರ ರಾಷ್ಟ್ರಗಳಿಗೆ ಇವನ್ನು ಪೂರೈಸಲು ಮನಾಯಿಯದೆ ಅಂದ ಮೇಲೆ ಬ್ರಿಟಿಶ ಸಾಮಗ್ರಿಗಳನ್ನೇ ಹೆಚ್ಚು ದರ ತೆತ್ತು ಕೊಳ್ಳಬೇಕು ಕಾರಣವದು ಹಿಂದುಸ್ಥಾನದವರು! ಗುಲಾಮ ಬ್ರಿಟಿಶರಿಗೆ!

— ಈಜಿಪ್ತದಲ್ಲಿ ವಿದ್ಯಾರ್ಥಿಗಳು ಯುರೋಪಿಯನ್ ಉಡಿಗೆ ತೊಡಿಗೆಗಳನ್ನು ಹಾಕಿಕೊಂಡು ಬರಲು, ಅದಕ್ಕೆ ಅಲ್ಲಿಯ ಅಧಿಕಾರಿಗಳು ಆತಂಕ ಮಾಡಿದರು ವಿದ್ಯಾರ್ಥಿಗಳು ಮುಸಲ್ಮಾನ ಪೋಷಾಕನ್ನೇ ಧರಿಸಿ ಶಾಲೆಗಳನ್ನು ಸೇರಿದರು ಶಾಲೆಗಳನ್ನು ಸೇರಿದ ಬಳಿಕ ಈ ಉಡಿಗೆ ತೊಡಿಗೆಗಳನ್ನು ತೆಗೆದರು, ಒಳಬದಿಗೆ ಯುರೋಪಿಯನ್ ಪೋಷಾಕಿತ್ತು ಶಿಕ್ಷಕರು ಹೊರಕಳ್ಳರು ದ್ಯಾಕ್ತರಾಗಲು, ವಿದ್ಯಾರ್ಥಿಗಳು ಶಾಲಾಗೃಹದಲ್ಲೇ ಮಲಗಿಕೊಂಡರು, ಶಿಕ್ಷಕರೇನು ಮಾಡುತ್ತಾರೆ!

— ಇರಾಕ ಪ್ರದೇಶದಲ್ಲಿ ವಿಮಾನ ಮಾರ್ಗದಿಂದ ಸ್ಟೇಶನರನ್ನು ಬ್ರಿಟಿಶರು ಕಳುಹುವ ತಯಾರಿಯಲ್ಲಿರುವರು ... ಮಿನಿಟಗೊಂದು ಮೈಲಿನಂತೆ ಮಾರ್ಗಕ್ರಮಿಸುವ ... ವಿಮಾನಗಳು ತಯಾರಾಗಿವೆ

'ಧುರೀಣ'ನ ಸತ್ಯಾಪಲಾಪ

ಕಾನಡಾವೃತ್ತಪತ್ರಿಕಕಾರರ ಬಳಿಗೆ—

ಧುರೀಣದ ಮೇಲೆ ಜರದಾದ ರಾ। ಮಾಸೂರರ ಸುಳ್ಳಾಟ ಕದ ಪ್ರಾಣ ಹೊರಬಿದ್ದದ್ದು ನೋಡಿ, 'ಸಂಬಳ'ಕ್ಕಿದ್ದ ಸಂಪಾದಕರ ಸ್ವಾಮಿಭಕ್ತಿಯು ಉಕ್ಕೇರಿದೆ, ಸಂಗತ್ಯಾ ಸಂಗಳನ್ನು ಎಳೆಕೊಳ್ಳಲಾರದಷ್ಟು ವಿಕಾರದವರಾಗಿ ನನ್ನ ಮೇಲೆ ಹಾರಿಬಿದ್ದಿರುವರು. ಸ್ವಲ್ಪದರಲ್ಲಿ ಹೇಳುತ್ತೇನೆ. ಕೇಳಿರಿ! ಧುರೀಣದ ಹೇಳಿಕೆಯಂತೆ ವೈ॥ ವಾ॥ ರಾಮರಾವರ ವಿಷಯು ಕೇವಲ ಸುಳ್ಳು ಸಂಗತಿಯನ್ನು ಕ ದ್ದು ಧುರೀಣದಲ್ಲಿ ಪ್ರಕಟಿಸಿದವರು ರಾ। ಮಾಸೂರರು! ಪರ ಹಸ್ತರ ಸಹಸ್ಯೆ ನಾನು ಔಕಾ ಮಾಡಲಾಗಿ ಈ ಸಂಗತಿಯನ್ನು ಬಚ್ಚಿಟ್ಟವರೂ ರಾ। ಮಾಸೂರರೇ! ತನ್ನ ಬದಲಿ ಮೇರೆಗೆ ಡಾ॥ ಕಲ್ಯಾಣಪೂರಕರು 'ಈ ಸುಳ್ಳು ಸಂಗತಿಯನ್ನು ಪ್ರಕಟಿಸಿದ್ದರೆಂದು ಹೇಳಿ ಪರರ ಹೆಸರು ಕೆಡಿಸಲೆತ್ನಿಸಿದವರೂ ರಾ। ಮಾಸೂರರೇ! ಪ್ರಕಟವಾದ ದ್ದನ್ನು ಮುಂದಿನ ಧುರೀಣದ ಸಂಚಿಕೆಯಲ್ಲಿ ತಪ್ಪದೆ ತಿದ್ದುವೆನೆಂದು ನನಗೆ ಅಭಿವಚನವಿತ್ತವರೂ ರಾ। ಮಾಸೂರರೇ! ವಚನಭಂಗ ಮಾಡಿ ಮೌನ ಹಿಡಿದವರೂ ಅವರೇ! ಧುರೀಣ ಅಧಿಪತಿಗಳ ವಚನವಿದು ಎಷ್ಟು ಕೊಳ್ಳಿರುತ್ತದೆಂಬುದು (ಕಾರಣಾಂತರದಿಂದ ವೃತ್ತಪತ್ರ ಧುರೀಣವೂ ಒಂದೇ ದಿನ ಪ್ರಕಟವಾದ ಬಳಿಕ) ನಿಮಗೆ ಸ್ಪಷ್ಟವಾಗಿ ಹೊಳೆಯಿತು. ಇಷ್ಟೆಲ್ಲ ಹೊಲಸಿಗೆ ಕಾರಣರಾದವರು ರಾ। ಮಾಸೂರರೇ ಹಾಗೆ, ವೃತ್ತದ ಸಂಪಾದಕರು ವೃಥಾ ನನ್ನ ಮೇಲೆ ಹಾರಿಬಿದ್ದಿರುವರು ಮತ್ತು ಯಜಮಾನರ ಇಷ್ಟೆಲ್ಲ 'ಹೊಲಸು ಹೊರಬಿದ್ದ ಬಳಿಕ, ಸಂಪಾದಕರು, "ತಪ್ಪು ಒಪ್ಪಿಕೊಳ್ಳದಿರುವ ಮೂರ್ಖಪ್ರವೃತ್ತಿಯವರೇನೂ ನಾವಲ್ಲ" ಎಂಬ ಸಂಗತಿಗಳನ್ನರಿತವರು ಎಂಥ ಸಂಭಾವಿತರು!

ವೈಶ್ಯಕೀ ಕಾಲೇಜಿನಲ್ಲಿ 'ರಜಿಸ್ಟ್ರಾರ' ಹಾಗೂ 'ಟ್ಯೂಟರ' (ಪ್ರೊಫೆಸರ) ರಾಗಿರುವದಕ್ಕಿಂತ, ವಿವಿಧ ಮಾದರಿಯ ... ಕಂಪನಿ"ಯಲ್ಲಿ "ಸಂಬಳ"ಕ್ಕಿರುವದು ಹೆಚ್ಚು ಗೌರವಕರವೆಂದು ಸದ್ಯದವರು ಸಿದ್ಧಪಡಿಸಲು ಮುಂಬಯಿಯ ಯಾರೋ ಒಬ್ಬ ಗುಪ್ತ ಮಿತ್ರನ ಹೇಳ್ವ ಪತ್ರದ ಆಧಾರವನ್ನು ಎತ್ತಿ ಕೊಟ್ಟಿರುವರು. ಒಡೀ ಕಾಟಕ್ಕೆ ಬೇರೆಯೇ ಸಾಕ್ಷಿ ಬೇಕೆಂದರೆ, ಎಳ್ಳಷ್ಟು ಆಧಾರವಿಲ್ಲದ "ವ್ಯವಹಾರಕುಶಲನಿಂದ" ೧೬ ಆಣೆ ಸುಳ್ಳನ್ನಾಡುವವರ ಕಂಪನಿಯಲ್ಲಿ ಯಾರಾದ ಯಾರೊಬ್ಬ ವೇಷಧಾರಿ ಮಿತ್ರನಿರಬೇಕೆಂದು ಅವನ ಬರವಣಿಗೆಯ ಮೇಲಿಂದಲೇ ಸ್ಪಷ್ಟವಾಗುತ್ತದೆ. ಇಷ್ಟು ಅನಾಪ್ತರ "ವ್ಯವಹಾರಿಕತನವು" ಅವರಲ್ಲಿ ತುಂಬಿರುತ್ತದೆ! ಇಂಥ ಗುಪ್ತ ಪತ್ರಗಳನ್ನು ನಂಬುವದ್ಯಾರು? ಅಂದರೆ 'ರಜಿಸ್ಟ್ರಾರ' ಹಾಗು 'ಟ್ಯೂಟರ' ಈ ಜಾಗೆಗಳು ವೈಶ್ಯಕೀ ಕಾಲೇಜಿನಲ್ಲಿ ಗೌರವದ ಜಾಗೆಗಳಿದ್ದು ಮೇಲ್ಪಂಕ್ತಿಯಲ್ಲಿ ತೇರ್ಗಡೆ ಹೊಂದಿದ ಒಬ್ಬಿಬ್ಬರಿಗೆ ಮಾತ್ರ ಈ ಬಹುಮಾನಗಳು ದೊರಕುತ್ತವೆ. ಇದಲ್ಲದೆ ವೈ॥ ವಾ॥ ರಾಮರಾಯರಿಗೆ ತಮ್ಮ ಸ್ವತಂತ್ರ ಧಂದೆಯಿಂದ ತಿಂಗಳಿಗೆ ರೂ ೪೦೦–೫೦೦ ಪ್ರಾಪ್ತಿಯಿತ್ತು. ... ಈ ಜಾಗೆಗಳ 'ಸಂಬಳ'ದ ಅಂಕಿ ನೋಡಿ ಹೆದರಿಸುವ ಕೆಲ ಖಲೇ ಸಂಬಳದ ಗುಲಾಮರು ಒಂದು ಸಂಗತಿಯನ್ನು ಅವಶ್ಯವಾಗಿ ಲಕ್ಷದಲ್ಲಿಡಬೇಕು. ಅದೇನೆಂದರೆ, ಮುಂಬಯಿಯ ಕಂಪನಿಗಳಲ್ಲಿ "ಜೀ ಹುಕುಂ" ಹಮಾಲರು ಸಹ ಧುರೀಣದ ಸಂಪಾದಕರ ಸಂಬಳದ ಇಮ್ಮಡಿ ಸಂಬಳವನ್ನು ನಿತ್ಯವೂ ಗಳಿಸುತ್ತಿರುವರು. ಧುರೀಣದ ಕಚೇರಿಯಲ್ಲಿ 'ಜೀ ಹುಕುಂ' ಹಮಾಲರು ಧುರೀಣದ ಸಂಪಾದಕರಿಗಿಂತ ಇಮ್ಮಡಿ ಶ್ರೇಷ್ಠರು! ಆದರೆ 'ವಿದ್ವಾನೇವ ವಿಜಾನಾತಿ ವಿದ್ವಜ್ಜನ ಪರಿಶ್ರಮಂ'ಎಂಬ ಮಾತೇನು ಸುಳ್ಳಲ್ಲ.

ಡಾ। ಕಲ್ಯಾಣಪೂರಕರ ಹಾಗು ಮಾಸೂರರನ್ನು ನಾನಾಗಿ ವೃಥಾ ನನ್ನ ಲೆಕ್ಕಣಿಕೆಯ 'ಬಾಯಿಗೆ' ಕೊಟ್ಟೆನೆಂಬ ನನ್ನ ಮೇಲಿನ ಆರೋಪವು ತೀರ ನಿರಾಧಾರವಿರುವದೆಂದು ಯಾರಿಗೂ ತಿಳಿಯುವ ಹಾಗಿದೆ. ಅದರ, ಇಂಥ ಸಣ್ಣ ವಿಷಯದಲ್ಲಿ ಸಹ ರಾ। ಮಾಸೂರರು ವೃಥಾ ಹೇರಳ ಸುಳ್ಳಾಟಕೆಯಿಂದ ಎಬ್ಬಿಸಿದ 'ಹೊಲಸನ್ನು' ಮಾತ್ರ ಧುರೀಣ ಸಂಪಾದಕರು ತಮ್ಮ (ಬಾಯಿ ಬಿಲ್ಲದ) ಮೊಂಡು ಲೆಕ್ಕಣಿಕೆಯಿಂದ ತಿಕ್ಕಿತಿಕ್ಕಿದರೂ, ಅದೆಂದೂ ತೊಳೆದು ಹೋಗಲಾರದು. ಯಜಮಾನರೆಂದು ಕಣ್ಮುಚ್ಚಿ 'ಹೊಲಸು ತೊಳೆಯುವದು ಸ್ವಾಭಿಮಾನವಲ್ಲ' — ಧುರೀಣ ಸಂಪಾದಕರಿಗೆ ಇಷ್ಟೇ ನನ್ನ ಪ್ರೇಮಪೂರ್ವಕ ಸೂಚನೆ

ತಮ್ಮ,

ಬಿ ಎ ಡಿ

[*_* ಈ ಚರ್ಚೆಯು ಇಷ್ಟಕ್ಕೇ ಕಡೆಮುಬೇಕು

ಸಂ ಕಾ ವೃ]

ಕಾನಡಾ ಡಿಸ್ಟ್ರಿಕ್ಟ ಲೋಕಲ್ ಬೋರ್ಡಿನ ಮತದಾರರಿಗೆ—

ಮಹನೀಯರೇ,

ವಿನಯಪೂರ್ವಕ ವಿನಂತಿಗಳು. ನಾನು ಕಳೆದ ಮೂರು ವರುಷದಿಂದಾ ಡಿಸ್ಟ್ರಿಕ್ಟ ಬೋರ್ಡಿನ ಶಿರಸಿ ತಾಲೂಕ ಮೆಂಬರನಿದ್ದು ಇದೇ ಬರುವ ಮಾರ್ಚ ತಿಂಗಳ ೫ನೇ ತಾರೀಖಿಗೆ ಆಗುವ ಇಲೆಕ್ಷನ್ನಕ್ಕೆ ಸಹ ಡಿಸ್ಟ್ರಿಕ್ಟ ಲೋಕಲ್ ಬೋರ್ಡಿನ ಮೆಂಬರನಾಗಲಿಕ್ಕೆ ಅರ್ಜಿ ಮಾಡಿರತ್ತೇನೆ. ತಾವೆಲ್ಲ ಮತದಾರರು ನನಗೆ ಮತ ಕೊಟ್ಟು ಆರಿಸಿಬರು ವಂತೆ ಪ್ರಾರ್ಥಿಸಿಕೊಂಡಿರುವ

ತಮ್ಮ ಕೃಪಾಭಿಲಾಷಿ,

ಮುಕ್ಕಾಂ, (ಶಿರಸಿ) } ಸೀತಾರಾಮ ಗಣೇಶ
ತಾ. ೨೧–೨–೨೬ } ಹೆಗಡೆ, ನೇರ್ಲಹದ್ದ.

ಬೆನ್ಸನ ಅಲಾರಂ ಟೈಂಪೀಸು.



ಈ ಗಡಿಯಾರಗಳು ಜರ್ಮನ್ ದೇಶದಲ್ಲಿ ತಯಾರಿಸಿದ್ದು. ಮೇಲುಗಡೆ ಎಂದೂ ಕೆಡದಂಥ ನಿಕ್ಕಲ್ ಪಾಲಿಶ ಮಾಡಿರುವದು ಇದಕ್ಕೆ ಒಂದಾವರ್ತಿ ಬೀಗ ಕೊಟ್ಟರೆ, ೩೦ ಗಂಟೆಯ ಕಾಲ ನಡೆಯುವದು. ಮತ್ತು ಬರಾಬರ ಗಂಟೆಯನ್ನು ತೋರಿಸುವದು ಗಡಿಯಾರದ ಎತ್ತರ ೬ ಅಂಗುಲ ಇರುವದು ಗಂಟೆ ತೋರಿಸುವ ತಲೆಯು ೪ ಅಂಗುಲವಿರುವದು ಇದರಲ್ಲಿಯಾರೇ ಆಗಲಿ, ಬೆಳಬೆಳಗಿನ ಗಂಟೆಯನ್ನು ಗುರುತು ಹಿಡಿಯಬಹುದು ಇದು ಅಂಗಡಿ, ಸ್ಕೂಲು, ಮನೆ, ರೀಡಿಂಗ ರೂಮು, ಗುಡಿ ಮುಂತಾದವುಗಳಲ್ಲಿ ಇಡಲು ಬಹು ಲಾಯಖಾದದ್ದು ಇದಕ್ಕೆ ಖಾತ್ರಿಯಾದ ೫ ವರ್ಷದ ಗ್ಯಾರಂಟಿ ಕೊಡುವೆವು ಕ್ರಯ ೧ಕ್ಕೆ ರೂ. ೫–೪–೦. ಅಲಾರಂ ಇಲ್ಲದ್ದು ೧ಕ್ಕೆ ರೂ ೪–೮–೦

ಹರ್ಸ ಇಮಿಟೇಶನ್ ರೇಶ್ಮೆ ಸೀರೆಗಳು



ಈ ಸೀರೆಗಳನ್ನು ಹೆಸರುವಾಸಿ ಹೊಂದಿದ ದೊಡ್ಡ ಕಂಪನಿಯವರಿಂದ ತಯಾರಿಸಿದ್ದು ೧೮ ಮೊಳ ಉದ್ದವೂ, ೨॥ ಮೊಳ ಅಗಲವೂ ಇರುವದು ಇದನ್ನು ಲಂಡನ್ ಪಟ್ಟಣದ ಹರ್ಸ ಗಟ್ಟಿಯಾದ ಸಣ್ಣ ನೂಲಿನಿಂದಲೂ ರೇಶಿಮೆಯಿಂದಲೂ ತಯಾರಿಸಿದೆ ಅಂದವಾದ ಅಂಚೂ, ಸುಂದರವಾದ ಸೆರಗೂ ಇರುವದು ಇವು ಥಾಮಗಳ ರೇಶಿಮೆಯಂತೆ ಇರುವವು ಎಲ್ಲಾ ಬಣ್ಣಗಳಲ್ಲಿಯೂ ಸಿಕ್ಕುವವು ಮತ್ತು ಎಲ್ಲಾ ಮತಸ್ಥರಿಗೂ ಲಾಯಖಾದದ್ದು ಕ್ರಯ ನಂ ೧ಕ್ಕೆ ರೂ. ೮–೮–೦ ನಂ ೨ಕ್ಕೆ ರೂ ೬ ೮–೦ ನೆರಿಗೆ ಸೀರೆಗೆ ರೂ ೧೨–೮–೦

ವಿಳಾಸ:- ಎಂ. ಬೆನ್ಸನ್ ಎಂಡ್ ಕೋ..

೫೧೪, ಪೋರ್ಟಟೌನ, ಮದರಾಸು

ಹೊಸ ಆಟ! ಬದಲಿಸಿದ ಪ್ರೋಗ್ರಾಮು!!

ಬಡಬಗ್ಗರಿಗೂ ನೋಡಬರುವಂತೆ

ಟಿಕೀಟಿನ ದರ ೨ ಆಣೆ ಇಟ್ಟಿದೆ.

ಕರ್ನಾಟಕ ಸಿನೇಮಾ.

ಸ್ಥಳ —ಕುಮಟೆಯೊಳಗಿನ ಭವ್ಯ ಡೇರೆಯಲ್ಲಿ—

ಸೋಮವಾರ ತಾರೀಖು ೧ ಹಾಗು ಮಂಗಳವಾರ ತಾರೀಖು ೨

ಬರೇ ಈ ಎರಡು ದಿವಸ!

ಪ್ರಾರಂಭ ರಾತ್ರಿ ೭ ರಿಂದ ಹಾಗು ೧೦ ರಿಂದ

ಶಿವಮಹಿಮೆ ತೋರಿಸುವ ಉತ್ತಮ ಚಿತ್ರಪಟ

ಮಾರ್ಕಂಡೇಯ ಅವತಾರ.

ಅಂಕ ೭

ದೊರತು ಒಂದು ಇಂಗ್ರಜಿ ಹಾಸ್ಯಕರ ಚಿತ್ರಪಟವು ತೋರಿಸಲ್ಪಡುವದು!

ಬುಧವಾರ ತಾ ೩ನೇಗ್ಗೆ ದೇಶೀ ಚಿತ್ರಪಟ

ಮಾರುತೀ ಜನ್ಮ ಅಥವಾ ಸತೀ ಅಂಜನೀ

ಬರುವದಿದೆ!

ಸಿಂಹಗಡ, ಕೃಷ್ಣ ಸತ್ಯಭಾಮಾ, ಕೃಷ್ಣ ಜನ್ಮ

ಪ್ರೊಪ್ರಾಯಟರ

ಮಹಾತ್ಮರ ಆತ್ಮಚರಿತ್ರ.

(೯) ತೀರ್ಥರೂಪರ ನಿಧನ ಹಾಗು ನನ್ನ ಪರಮಾವಧಿಯ ನಾಚಿಕೆಗೇಡಿತನ.

ಈಗ ನಾನು ಉಲ್ಲೇಖಿಸುವದು ನನ್ನ ೧೬ನೇ ವರ್ಷ ಪ್ರಾಯದ ಹಕೀಕತು. ನನ್ನ ತಂದೆಯವರು ಭಗಂದರ ರೋಗದ ಮೂಲಕ ಹಾಸಿಗೆ ಹಿಡಿದದ್ದರಷ್ಟೇ. ನಾನು ನನ್ನ ತಾಯಿ ಹಾಗು ಮನೆಯ ಒಬ್ಬ ಮುದುಕ ಆಳು ಹೀಗೆ ಮೂವರೇ ಮುಖ್ಯವಾಗಿ ಅವರ ಉಪಚಾರ ಮಾಡುತ್ತಿದ್ದೆವು. ನಾನು ದಾದಿಯ ಕೆಲಸ ಮಾಡುತ್ತಿದ್ದೆ. ಅಂದರೆ, ಭಗಂದರವನ್ನು ಆಗಿಂದಾಗ ತೊಳೆದು ಪಟ್ಟಿ ಕಟ್ಟುತ್ತಿದ್ದೆ. ತಂದೆಯವರಿಗೆ ಔಷಧ ಕೊಡುತ್ತಿದ್ದೆ, ಹಾಗು ಔಷಧಿಗಳನ್ನು ಮನೆಯಲ್ಲಿ ತಯಾರ ಮಾಡಬೇಕಾದಾಗ ಅವನ್ನು ಸಿದ್ಧಗೊಳಿಸುತ್ತಿದ್ದೆ. ದಿನಾ ರಾತ್ರಿ ನಾನು ತಂದೆಯವರ ಕಾಲುಗಳನ್ನು ಒತ್ತುತ್ತಿದ್ದೆ. ತಂದೆಯವರಿಗೆ ನಿದ್ದೆ ಹತ್ತಿದ ಬಳಿಕ, ಅಥವಾ ಅವರು ನನಗೆ ಹೋಗ ಹೇಳಿದ ಬಳಿಕ, ನಾನು ಹೋಗುತ್ತಿದ್ದೆ. ಈ ಸೇವೆಯನ್ನೆಲ್ಲ ನಾನು ಭಕ್ತಿಯಿಂದ ಮಾಡುತ್ತಿದ್ದೆ. ಈ ಸೇವೆಯನ್ನು ನಾನೆಂದೂ ಉಪೇಕ್ಷಿಸಿದ್ದು ನನ್ನ ನೆನಪಿನಲ್ಲಿಲ್ಲ. ನಿತ್ಯಕರ್ಮಗಳಿಗೆ ತಗಲುವ ಹೊತ್ತನ್ನುಳಿದು, ಉಳಿದ ಸಮಯವೆಲ್ಲ ಶಾಲೆ ಹಾಗು ಪಿತೃಸೇವೆಯಲ್ಲಿ ಹಂಚಿಹೋಗುತಿತ್ತು. ತಂದೆಯವರ ಅಪ್ಪಣೆಯಾದರೆ ಅಥವಾ ತಂದೆಯವರ ಪ್ರಕೃತಿಯು ನೆಟ್ಟಗಿರುವದೆಂದು ತೋರಿದರೆ ಸಾಯಂಕಾಲ ಸಮಯ ನಾನು ಅಡ್ಡಾಡ ಹೋಗುತ್ತಿದ್ದೆ.

ಇದೇ ಸಮಯ ನನ್ನ ಹೆಂಡತಿಯು ಬಸುರಿದ್ದಳು. ಇಷ್ಟು ಚಿಕ್ಕ ಪ್ರಾಯದಲ್ಲಿ ಹೆಂಡತಿಯು ಬಸರಾದ ಹಕೀಕತು ಪರಮಾವಧಿಯ ನಾಚಿಕೆಗೇಡಿತನವೆಂದು ನನಗೀಗ ತೋರುತ್ತದೆ. ನಾನು ವಿದ್ಯಾರ್ಜನ ಮಾಡುತ್ತಿದ್ದಾಗ ಇಂದ್ರಿಯನಿಗ್ರಹ ಮಾಡುವದು ನನ್ನ ಕರ್ತವ್ಯವಿತ್ತು. ವಿಷಯವಾಸನೆಯಿಂದ ನನ್ನ ಅಭ್ಯಾಸವು ಹಾಳಾಗಿ ಕೆಟ್ಟಿತು. ಶ್ರವಣನು [illegible] ನನಗೆ ಆದರ್ಶಭೂತನಾಗಿದ್ದನು. ಪಿತೃಭಕ್ತಿಗಿಂತಲೂ ವಿಷಯವಾಸನೆ ನನಗೆ ಮೇಲಾಯಿತು, ದಿನಾ ರಾತ್ರಿ ನನ್ನ ಕೈಗಳು ತಂದೆಯ ಕಾಲುಗಳನ್ನೇ ಒತ್ತುತ್ತಿದ್ದಾಗ, ನನ್ನ ಚಿತ್ತವು ಶಯನಮಂದಿರದ ಸುತ್ತುಮುತ್ತು ಸುಳಿದಾಡುತ್ತಿತ್ತು. ಈ ಪ್ರಾಯದಲ್ಲಿ ಧರ್ಮವೂ [illegible] ಬುದ್ಧಿಯೂ ವಿಷಯಸುಖೋಪಭೋಗವನ್ನು ನಿಷೇಧಿಸುತ್ತಿದ್ದವು. ತಂದೆಯವರ ಪಾದಸೇವೆಯೊಳಗಿಂದ ಮುಕ್ತನಾದರೆ ನನಗೆ ಸಂತೋಷವಾಗುತ್ತಿತು ಮತ್ತು ತಂದೆಯವರಿಗೆ ನಮಸ್ಕಾರ ಮಾಡಿ ನೆಟ್ಟಗೆ ನಾನು ಶಯನಮಂದಿರಕ್ಕೆ ಹೋಗುತ್ತಿದ್ದೆ.

ಇತ್ತ ತಂದೆಯವರ ಪ್ರಕೃತಿಯಾದರೂ ದಿನ ಹೋದ ಹಾಗೆ ಬಿಗಡಾಯಿಸುತ್ತ ನಡೆದಿತ್ತು. ಆಯುರ್ವೇದ ವೈದ್ಯರು ತಮ್ಮ ತೈಲಗಳನ್ನೂ, ಹಕೀಮರು ಲೇಪಗಳನ್ನೂ, ಊರ [illegible] ಗಾರರು ತಮ್ಮ ಮದ್ದುಗಳನ್ನೂ ಪ್ರಯೋಗಿಸಹತ್ತಿದರು. ಒಬ್ಬ ಇಂಗ್ಲಿಷ ಸರ್ಜನರ ಚಿಕಿತ್ಸೆಯೂ ನಡೆಯಿತು. ಕೊನೆಗೆ ಈ ರೋಗಕ್ಕೆ ಶಸ್ತ್ರಕ್ರಿಯೆಯೇ ತಕ್ಕ ಉಪಾಯವೆಂದು ಆ ವೈದ್ಯರು ಅಭಿಪ್ರಾಯಪಟ್ಟರು. ಆದರೆ, ಈ ಅಭಿಪ್ರಾಯವು ನಮ್ಮ ಮನೆತನದ ವೈದ್ಯರಿಗೆ ಸರಿದೋರಲಿಲ್ಲ. ಇಳಿಪ್ರಾಯದಲ್ಲಿ ತಂದೆಯವರು ಶಸ್ತ್ರಕ್ರಿಯೆ ಮಾಡಿಸಿಕೊಳ್ಳುವದು ಶ್ರೇಯಸ್ಕರವಲ್ಲವೆಂದು ಅವರ ಅಭಿಪ್ರಾಯವಾಯಿತು. ನಮ್ಮ ವೈದ್ಯರು ವೈದ್ಯಶಾಸ್ತ್ರದಲ್ಲಿ ನಿಪುಣರೆಂದು ಖ್ಯಾತಿಗೊಂಡವರಿದ್ದದರಿಂದ ಅವರ ಅಭಿಪ್ರಾಯವೇ ಮೇಲಾಯಿತು. ಶಸ್ತ್ರಕ್ರಿಯೆಯ ವಿಚಾರವು ತ್ಯಜಿಸಲ್ಪಟ್ಟಿತು. ಇದಕ್ಕಾಗಿ ತಂದ ತರತರದ ಅನೇಕ ಮದ್ದುಗಳೂ ನಿರರ್ಥಕವಾದವು. ನಮ್ಮ ವೈದ್ಯರು ಶಸ್ತ್ರಕ್ರಿಯೆ ಮಾಡಗೊಟ್ಟಲ್ಲಿ ಭಗಂದರವು [illegible] ವಾಸಿಯಾಗುತ್ತಿತ್ತೆಂದು ನನ್ನ ಗ್ರಹಿಕೆ. ಹಾಗು ಮುಂಬಯಿಯಲ್ಲಿ ಖ್ಯಾತಿಗೊಂಡ ಸರ್ಜನರ ಕಡೆಯಿಂದ ಈ ಶಸ್ತ್ರಪ್ರಯೋಗವು ನಡೆದಿದ್ದರೆ [illegible]. ಆದರೆ, ಈಶ ಸಂಕಲ್ಪವೇ ಬೇರೆ. [illegible] ನನ್ನ ತಂದೆಯವರು [illegible] ನೋಡಿ, ಆಗ ನನಗೆ [illegible] ನಾನು [illegible]

ಕಾಳರಾತ್ರಿಯು ಬಂತು. ಆಗ ನನ್ನ ಚಿಕ್ಕಪ್ಪ [illegible] ತಂದೆಯವರ [illegible] ರಾಜಕೋಟಿಗೆ [illegible] ಅಣ್ಣತಮ್ಮಂದಿರ [illegible] ಚಿಗಪ್ಪನವರು ಇಡೀ ದಿನ ತಂದೆಯವರ ಹಾಸಿಗೆ ಬಳಿ ಕೂತುಕೊಳ್ಳುತ್ತಿದ್ದರು ಮತ್ತು ನಮಗೆಲ್ಲರಿಗೆ ಮಲಗಲಿಕ್ಕೆ ಹೇಳಿ ತಾವು ತಂದೆಯವರ ಹಾಸಿಗೆ ಬಳಿಯಲ್ಲಿಯೇ ಮಲಗುತ್ತಿದ್ದರು. ಯಾರೂ ಹೇಳಿದರೂ ಕೇಳುತ್ತಿರಲಿಲ್ಲ. ಕಾಳರಾತ್ರಿಯೇ ಆಗಬಹುದೆಂದು ಯಾರಿಗೂ ಆ ಸಮಯ ತೋರಲಿಲ್ಲ. ಆದರೂ ತಂದೆಯವರ ಪ್ರಕೃತಿಯು ತೀರ ಗಂಡಾಂತರ ಸ್ಥಿತಿಯಲ್ಲಿತ್ತು.

ರಾತ್ರಿ ೧೦|| ಅಥವಾ ೧೧ ಹೊಡೆದಿರಬಹುದು. ನಾನು ತಂದೆಯವರ ಕಾಲನ್ನು ಒತ್ತುತ್ತಿದ್ದೆ. ಚಿಗಪ್ಪನವರು ತಾವು ಒತ್ತುತ್ತೇವೆಂದು ಹೇಳಿದರು. ನನಗೆ ಸಂತೋಷವಾಯಿತು. ನಾನು ಕೂಡಲೆ ಶಯನಮಂದಿರಕ್ಕೆ ನಡೆದೆ. ನನ್ನ ಹೆಂಡತಿಗೆ ಗಾಢ ನಿದ್ದೆ ಹತ್ತಿತ್ತು. ಆದರೆ, ನಾನು ಸುಮ್ಮನಿರುವದಿಲ್ಲವಾಗಿ ಅವಳು ಮಲಗುವ ಬಗೆ ಹೇಗೆ? ಅವಳಿಗೆ ನಾನು ಎಚ್ಚರಗೊಳಿಸಿದೆ. ೫-೭ ನಿಮಿಷಗಳಲ್ಲಿ ನಮ್ಮ ಆಳು ಬಾಗಿಲು ತಟ್ಟಿದನು. ನಾನು ಗಾಬರಿಯಿಂದೆದ್ದೆ. "ಬಾಪೂಗೆ ವಿಶೇಷ,' ವೆಂದು ಆತನು ಉದ್ಗರಿಸಿದನು. ತಂದೆಯವರಿಗೆ ವಿಶೇಷವೆಂದು ನನಗೆ ಗೊತ್ತಿತ್ತು. ಆದರಿಂದ ಆ ಸಮಯ ಹೇಳಿದ "ವಿಶೇಷ" ಶಬ್ದದ ಅರ್ಥವನ್ನು ನಾನು ಕೂಡಲೆ ಊಹಿಸಿದೆ. ಹಾಸಿಗೆಯಿಂದ ಚಟ್ಟನೆ ಎದ್ದು ಏನಾಯಿತೆಂದು ಸ್ಪಷ್ಟವಾಗಿ ನನಗೆ ಹೇಳೆಂದೆನು. "ಬಾಪೂರವರು ಕಾಲಾಧೀನರಾದರು."

ಹೀಗೆ ಎಲ್ಲವೂ ಮುಗಿಯಿತು. ನಾನು ಶೋಕಿಸುವದೊಂದೇ ಉಳಿಯಿತು. ನನಗೆ ಅವರ್ಣನೀಯವಾದ ನಾಚಿಕೆಯಾಯಿತು. ಬಹಳವಾಗಿ ವ್ಯಥಿಸಿದೆ. ತಂದೆಯವರಿದ್ದ ಕೋಣೆಗೆ ಓಡಿದೆ. ನಾನು ಪಶುತುಲ್ಯ ಬುದ್ಧಿಯಿಂದ ವಿಷಯಲಂಪಟನಾಗಿರದಿದ್ದರೆ, ಅಂತ್ಯಕಾಲದಲ್ಲಿ ಪಿತೃವಿರಹವೇದನೆಯಿಂದ ನಾನು ನರಳಬೇಕಾಗಿದ್ದಿಲ್ಲ. ನಾನು ಆತನ ಕಾಲು ಒತ್ತುತ್ತಿರುವಾಗಲೇ ಆತನು ನನ್ನ ತೊಡೆಯಮೇಲೆ ಪ್ರಾಣತ್ಯಾಗ ಮಾಡುತ್ತಿದ್ದನು. ಈಗ ಆ ಭಾಗ್ಯವು ನನ್ನ ಚಿಗಪ್ಪನ ಪಾಲಿಗೆ ಸೇರಿತು. ನನ್ನ ಚಿಗಪ್ಪನು ಅಷ್ಟು ಜ್ಯೇಷ್ಠ ಬಂಧುಭಕ್ತಿಯಿಂದ [illegible]ತನಾಗಿದ್ದರಿಂದಲೇ ಆತನಿಗೆ ಅಂತ್ಯಕಾಲದಲ್ಲಿ ಸೇವೆ ಮಾಡುವ ಪುಣ್ಯವು ಲಭಿಸಿತು. ತಂದೆಯವರಿಗೆ ಮುಂ[illegible] ಗಂಡಾಂತರದ ದುಸ್ವಪ್ನ ಬಿದ್ದಿತ್ತು. ಲೆಕ್ಕಣಿಕೆ [illegible] ಕಾಗದವನ್ನು ತರಲು ಆತನು ಸಂಜ್ಞೆಮಾಡಿ ಅಂತ್ಯಸಂಸ್ಕಾರಗಳ ತಯಾರಿ ಮಾಡಿರೆಂದು ಬರೆದನು. ತೋಳಿನ ಮೇಲಿದ್ದ ಯಂತ್ರವನ್ನು [illegible] ತರಿದು, [illegible] ಕುತ್ತಿಗೆಯ ಬಂಗಾರದ ಸರವನ್ನು ತಗೆದು [illegible] ಕ್ಷಣದಲ್ಲಿ ಆತನು ಪ್ರಾಣತ್ಯಾಗ ಮಾಡಿಬಿಟ್ಟನು. ಹಿಂದಿನ ಅಧ್ಯಾಯದಲ್ಲಿ ನಾನು ಉಲ್ಲೇಖಿಸಿದ ನಾಚಿಕೆಗೇಡಿತನದ ಅಪಕೃತ್ಯವೆಂಬುದು ಇದೇ. [illegible] ಎಷ್ಟು ಹಾಕಿ ಎಚ್ಚರಿಕೆಯಿಂದ ಸೇವೆ ಮಾಡತಕ್ಕ [illegible]ನ ಸಂದರ್ಭದಲ್ಲಿ ನಾನು ವಿಷಯಲಂಪಟನಾದೆನಲ್ಲ. ಈ ಕಲಂಕವು ನನ್ನ ಹೃತ್ಪಟಲದ ಮೇಲಿಂದ [illegible] ನನ್ನಿಂದ ಅಳಿಸಿ ತೊಳೆಯುವದಾಗಲಿಲ್ಲ ಅಥವಾ ಅದೆಂದೂ ಮರೆತು ಹೋಗುವದಿಲ್ಲ. ನನ್ನ ಪಿತೃಭಕ್ತಿಯು ಅಪಾರವಿದ್ದು ಅದಕ್ಕಾಗಿ ನಾನು ಬೇಕಾದ ತ್ಯಾಗವನ್ನು ಮಾಡಬಲ್ಲೆ. ಆದರೂ, ಆ ಸಮಯ ನನ್ನ ಮನಸ್ಸು ವಿಷಯವಾಸನೆಯಿಂದ ದೂಷಿತವಾಗಿದ್ದಿತು. ಇದೊಂದು ಅಕ್ಷಮ್ಯ ದೋಷವೆಂದು ನಾನು [illegible] ನಾನು ನಿಷ್ಠಾವಂತ ಪತಿಯಾಗಿದ್ದರೂ, ವಿಷಯಲಂಪಟನೆಂದೇ ನಾನು ಗ್ರಹಿಸುತ್ತಿದ್ದೇನೆ. ವಿಷಯಬಂಧನದೊಳಗಿಂದ ಮುಕ್ತನಾಗಲು ನನಗೆ ಬಹು ಕಾಲ ಹಿಡಿಯಿತು. [illegible] ಅದರೊಳಗಿಂದ ವಿಮೋಚನ ಹೊಂದಬೇಕಾದರೆ, [illegible] ಪ್ರಸಂಗಗಳನ್ನು ಅನುಭವಿಸಬೇಕಾಯಿತು.

ಒಂದು ಸಂಗತಿಯನ್ನು ಹೇಳಿ, ಪರಮಾವಧಿಯ ನಾಚಿಕೆಗೇಡಿತನದ ಅಧ್ಯಾಯವನ್ನು ಮುಗಿಸುವೆನು. ನನ್ನ ಹೆಂಡತಿಯಲ್ಲಿ ಒಂದು ಕೂಸು ಹುಟ್ಟಿತು. ಹುಟ್ಟಿ ೩-೪ ದಿನಗಳಲ್ಲಿಯೇ ಕೂಸು ಇಹಲೋಕವನ್ನು ಬಿಟ್ಟಿತು. ಹೀಗಾಗುವದು ಸಹಜವು [illegible] ತಂದೆಗಳೂ ನನ್ನ ಉದಾಹರಣೆಯ ಮೇಲಿಂದ ಎಚ್ಚರಗೊಳ್ಳಲಿ.

(೧೦) ಧರ್ಮಜಾಗೃತಿ.

ಆರೇಳು ವರುಷ ಪ್ರಾಯದಿಂದ ೧೬ ವರುಷಗಳವರೆಗೆ ನಾನು ಶಾಲೆಯಲ್ಲಿ ಕಲಿಯುತ್ತಿದ್ದೆ. ನಾನಾ [illegible] ಸಂಗತಿಗಳನ್ನು ನನಗೆ ಕಲಿಸುತ್ತಿದ್ದರು. ಧರ್ಮ[illegible] ಮಾತು ಕೇಳಬೇಡಿರಿ. ಶಿಕ್ಷಕರು ಅನಾಯಾಸದಿಂದ [illegible] ಧರ್ಮವನ್ನು ಕಲಿಸಬಹುದಾಗಿತ್ತು. ಆದರೆ, ಆ ಜ್ಞಾನ[illegible] ಅವರಿಂದ ನನಗೆ ದೊರಕಲಿಲ್ಲ. ಆದರೂ, ಸುತ್ತುಮುತ್ತಲಿನ ಪರಿಸ್ಥಿತಿಯ ನಿರೀಕ್ಷಣದಿಂದ ನಾನು ಒಂದೊಂದೇ ಈ ವಿಷಯ ಗ್ರಹಣ ಮಾಡಹತ್ತಿದೆನು. ನನ್ನ ಧರ್ಮ[illegible] ವ್ಯಾಪ್ತಿಯು ವಿಶಾಲವಿದೆ. ಆತ್ಮಜ್ಞಾನ [illegible] ವ್ಯಾಪ್ತಿಯು.

ವೈಷ್ಣವ ಕುಲೋತ್ಪನ್ನನಾಗಿದ್ದದರಿಂದ ವೈಷ್ಣವ [illegible] ಹವೇಲಿಗೆ ಅನೇಕಾವರ್ತಿ ನಾನು ಹೋಗಬೇಕಾಗಿದ್ದಿತು. ಆದರೆ, ಅದರಿಂದ ನನ್ನ ಮನಸ್ಸಿನ ಜಾಗೃತಿಯಾಗಲಿಲ್ಲ. ಅಲ್ಲಿಯ ಆಡಂಬರದ ಹೊಳಪುಗಳು ನನಗೆ ಸೇರುತ್ತಿದ್ದಿಲ್ಲ, ಅದಲ್ಲದೆ, [illegible] ಅನಾಚಾರಗಳು ಕೂಡ ಸಂಭವಿಸುತ್ತವೆಂದು ನನಗೆ ಕೇಳಬಂತು. ಆದರಿಂದ ಆ ಗೊಡವೆಯನ್ನೇ ನಾನು ಬಿಟ್ಟೆ. ಹವೇಲಿಯಿಂದ ನನಗೇನೂ ಲಾಭವಾಗಲಿಲ್ಲ.

ಆದರ ಬದಲು ನನಗೆ ನಮ್ಮ ಮನೆಯ ದಾದಿಯಿಂದ ಬಹಳ ಜಾಗೃತಿಯಾಯಿತು. ದಾದಿಯ ಹೆಸರು [illegible]. ಅವಳು ನಮ್ಮ ಮನೆಯ ಪುರಾತನ ಆಳು. ಅವಳಿಗೆ ನನ್ನ ಮೇಲೆ ಬಹು ಪ್ರೀತಿ. ಈಗಲೂ ನನಗೆ ಅವಳ ಸ್ನೇಹದ ನೆನಪರಿಕೆಯಾಗುತ್ತದೆ. ಭೂತ-ಪಿಶಾಚಿಗಳಿಗೆ ನಾನು ಬಹಳ ಬೆದರುತ್ತಿದ್ದೆನೆಂದು ಈ [illegible] ಹೇಳಿರುವೆನು. [illegible] ರಂಭೆ [illegible] ರಾಮನಾಮೋಚ್ಚಾರದಿಂದ ಈ ಬೆದರಿಕೆಯು ನಷ್ಟ

ಕ್ತವಾಗಿ ಹೇಳಿದಳು. ರಾಮನಾಮಕ್ಕಿಂತ ಅವಳ ಮೇಲೆ ನನ್ನ ನಂಬಿಗೆ ಹೆಚ್ಚು. ಆದರಿಂದ ಭೂತ-ಪಿಶಾಚಭಯ ನಿವಾರಣೆಕ್ಕಾಗಿ ಚಿಕ್ಕಂದಿನಿಂದಲೇ ನಾನು ರಾಮನಾಮೋಚ್ಚರಣ ಪ್ರಾರಂಭಿಸಿದೆನು. ಈ ಮನಸ್ಸು ಬಹು ಕಾಲ ನಡೆಯಲಿಲ್ಲ. ಆದರೆ, ಚಿಕ್ಕ ಪ್ರಾಯದಲ್ಲಿ ಬಿತ್ತಿದ ಬೀಜವು ವ್ಯರ್ಥವಾಗಲಿಲ್ಲ. ಸುಶೀಲ ರಂಭೆಯ ಉಪದೇಶದ ಬೀಜದಿಂದಲೇ ಇಂದಿಗೂ ರಾಮನಾಮವು ನನ್ನ ಸಮಸ್ತ ಪ್ರಕಾರದ ಉಪದ್ರವಗಳಿಗೆ ಅತ್ಯುತ್ಕೃಷ್ಟ ನಿವಾರಣೋಪಾಯವಾಗಿದೆ.

ನನ್ನ ಅಣ್ಣನ ಮಗನೊಬ್ಬನು ರಾಮಾಯಣದ ಭಕ್ತನಿದ್ದನು. ಆತನು ಇದೇ ಸಮಯ ನಮ್ಮಿಬ್ಬರು ಅಣ್ಣ-ತಮ್ಮಂದಿರಿಗಾಗಿ ರಾಮರಕ್ಷಾ ಪಾಠ ಕಲಿಸಲು ವ್ಯವಸ್ಥೆ ಮಾಡಿದನು. ಅದನ್ನು ನಾವು ಬಾಯಿಪಾಠ ಮಾಡಿದೆವು, ನಿತ್ಯವೂ ಬೆಳಗಾದ ಬಳಿಕ, ಬೆಳಗಿನ ಹೊತ್ತಿಗೆ ಅದನ್ನು ಪಠಣ ಮಾಡುವ ಕ್ರಮವನ್ನಿಟ್ಟಿದ್ದೆವು. ಪೋರಬಂದರದಲ್ಲಿರುವಷ್ಟರ ಮಟ್ಟಿಗೆ ಈ ಕ್ರಮವು ನಡೆಯಿತು. ರಾಜಕೋಟೆಕ್ಕೆ ಹೋದ ಬಳಿಕ, ಅದನ್ನೆಲ್ಲ ಮರೆತವು. ರಾಮರಕ್ಷೆಯಲ್ಲಿ ನನಗೇನು ನಂಬಿಗೆಯಿದ್ದಿಲ್ಲ. ಅಣ್ಣನ ಮಗನ ಸಮಾಧಾನಕ್ಕಾಗಿ ಅದನ್ನು ನಾನು ಪಠಿಸುತ್ತಿದ್ದೆ, ಶುದ್ಧವಾಗಿ ರಾಮರಕ್ಷೆಯನ್ನುಚ್ಚರಿಸಲು ನಾನು ಬಲ್ಲೆನೆಂಬ ಅಭಿಮಾನದಿಂದಲೂ ಅದರ ವರೆಗೆ ರಾಮರಕ್ಷೆಯನ್ನು ಪಠಿಸುತ್ತಿದ್ದೆ.

ತಂದೆಯ ಬಳಿ ರಾಮಾಯಣಪಾರಾಯಣವಾಗುತ್ತಿದ್ದುದರಿಂದ ನನ್ನ ಹೃತ್ಪಟಲದ ಮೇಲೆ ವಿಶೇಷ ಪರಿಣಾಮವಾಯಿತು. ನನ್ನ ತಂದೆಯವರು, ಅಸ್ವಸ್ಥರಿದ್ದಾಗ ಕೆಲ ಕಾಲ ಪೋರಬಂದರದಲ್ಲಿದ್ದನು. ದಿನಾ ಸಂಜೆಯ ಸಮಯ ಆತನು ರಾಮಾಯಣವನ್ನು ಕೇಳುತ್ತಿದ್ದನು. ಪ್ರಸಿದ್ಧ ರಾಮಭಕ್ತರಾದ ಬಿಲೇಶ್ವರದ ಲಾಧಾ ಮಹಾರಾಜರವರು ರಾಮಾಯಣವನ್ನು ಓದುತ್ತಿದ್ದರು. ಲಾಧಾ ಮಹಾರಾಜರವರಿಗೆ ಕುಷ್ಠ ರೋಗವಿತ್ತಂತೆ. ಅದನ್ನು ಅವರು ಬಿಲೇಶ್ವರ ದೇವಾಲಯದೊಳಗಿನ ಶ್ರೀ ಮಹಾದೇವ ಮೂರುತಿಗೆ ಅರ್ಪಿಸಿದ ಬಿಲ್ವದಲಗಳನ್ನು ಕುಷ್ಠ ಪೀಡಿತ ಮೈಗೆ ಹಚ್ಚಿಕೊಂಡು, ರಾಮನಾಮ ಜಪ ಮಾಡಿ ಕುಷ್ಠ ರೋಗ ಪರಿಹಾರ ಮಾಡಿಕೊಂಡರಂತೆ. ಇನ್ನೇನೂ ಔಷಧೋಪಚಾರವನ್ನು ಅವರು ಮಾಡಿಕೊಳ್ಳಲಿಲ್ಲ, ಕೇವಲ ಅವರ ಭಕ್ತಿಯಿಂದಲೇ ಪ್ರಾಣಾಂಗವಾದರಂತೆ. ಇದು ಸಟಿಯೋ, ದಿಟವೋ ನಾನರಿಯೆ. ನಾವಂತು ಈ ಕಥೆಯನ್ನು ನಂಬಿದೆವು. ಲಾಧಾ ಮಹಾರಾಜರವರು ರಾಮಾಯಣವನ್ನು ಓದುವ ಸಮಯ ಅವರಿಗೆ ಕುಷ್ಠ ರೋಗವೇನಿದ್ದಿಲ್ಲ, ಇಷ್ಟಂತು. ನಾನು ಖಂಡಿತ ಹೇಳಬಲ್ಲೆ. ಅವರ ಸ್ವರವು ಮಧುರವಿತ್ತು. ದ್ವಿಪದಿಗಳನ್ನು, ಚತುಷ್ಪದಿಗಳನ್ನೂ ಅವರು ಹಾಡಿ, ಅವನ್ನು ವಿವರಿಸುತ್ತಿರುವಾಗ ತಮ್ಮ ದೇಹಭಾನವನ್ನೇ ಮರೆಯುತ್ತಿದ್ದರು, ತಮ್ಮೊಡನೆ ಶ್ರೋತೃವೃಂದವನ್ನೂ ರಾಮಾಯಣದಲ್ಲಿ ತನ್ಮಯ ಮಾಡುತ್ತಿದ್ದರು. ಆ ಸಮಯ ನಾನು ೧೩ ವರ್ಷ ಪ್ರಾಯದವನಾಗಿರಬೇಕು; ಆದರೂ, ಅವರ ವಾಚನದಿಂದ ನನಗುಂಟಾದ ಮಹಾನಂದವು ಈಗಲೂ ನನ್ನ ಜ್ಞಾಪಕದಲ್ಲಿದೆ. ಇದೇ ನನ್ನ ರಾಮಾಯಣ ಭಕ್ತಿಯ ಮೂಲ ಬೀಜವು. ಇಂದಿಗೆ ತುಲಸೀದಾಸರ ರಾಮಾಯಣವು ಸಮಸ್ತ ಭಕ್ತಿಮಾರ್ಗದಲ್ಲಿ ಶ್ರೇಷ್ಠವಾದ ಗ್ರಂಥವೆಂದು ನಾನು ಎಣಿಸುತ್ತೇನೆ.

ಕೆಲ ತಿಂಗಳುಗಳ ಬಳಿಕ, ನಾವು ರಾಜಕೋಟೆಗೆ ಬಂದೆವು. ಅಲ್ಲಿ ರಾಮಾಯಣಪಠಣವಿದ್ದಿಲ್ಲ. ಪ್ರತಿ ಏಕಾದಶಿಯ ದಿನ ಭಾಗವತವನ್ನು ಓದುತ್ತಿದ್ದರು, ಆ ಕಾಲಕ್ಕೆ ನಾನು ಕೆಲವು ಸಾರೆ ಹೋಗಿದ್ದೆ, ಆದರೆ, ಭಾಗವತಪಠಣವು ಚಿತ್ತಾಕರ್ಷಕವಾಗಿದ್ದಿಲ್ಲ. ಭಾಗವತವೇ ಧರ್ಮಜಾಗೃತಿ ಮಾಡಲು ಸಮರ್ಥವಿದ್ದ ಗ್ರಂಥವೆಂದು ಈಗ ನಾನು ತಿಳಿಯುತ್ತೇನೆ. ಅತ್ಯಂತ ಭಕ್ತಿಯಿಂದ ನಾನು ಅದರ ಗುಜರಾಥಿ ಭಾಷಾಂತರವನ್ನು ಓದಿರುವೆನು. ಆದರೆ, ನನ್ನ ೨೧ ದಿನಗಳ ಉಪೋಷಣ ವ್ರತದ ಸಮಯ ಪಂಡಿತ ಮದನಮೋಹನ ಮಾಲವೀಯರವರು ಭಾಗವತದೊಳಗಿನ ಕೆಲವು ಮೂಲಭಾಗಗಳನ್ನು ಓದಿ ಹೇಳಿದಾಗ ಇಂಥ ಭಕ್ತರ ಕಡೆಯಿಂದಲೇ ನನ್ನ ಚಿಕ್ಕ ಪ್ರಾಯದಲ್ಲಿ ಈ ಗ್ರಂಥಪಠಣವನ್ನು ನಾನು ಕೇಳಿದ್ದರೆ, ಅಂದಿನಿಂದಲೇ ಈ ಗ್ರಂಥದ ಭಕ್ತಿಯು ನನ್ನಲ್ಲಿ ಪ್ರಾದುರ್ಭೂತವಾಗುತ್ತಿತ್ತೆಂದು ನನಗನಿಸಿತು. ಆ ಪ್ರಾಯದಲ್ಲಿ ಉಂಟಾದ ಸಂಸ್ಕಾರಗಳು ಬಹು ಕಾಲದ ವರೆಗೆ ಸ್ವಭಾವದಲ್ಲಿ ಬೇರೂರುತ್ತವೆ, ಆ ಕಾಲದಲ್ಲಿ ಇಂಥ ಉತ್ತಮ ಗ್ರಂಥಗಳನ್ನು ಕೇಳುವ ಭಾಗ್ಯವು ನನಗೆ ಪ್ರಾಪ್ತವಾಗದ ಬಗ್ಗೆ ನಾನು ಯಾವಾಗಲೂ ಮರುಗುತ್ತಿರುತ್ತೇನೆ.

ಆದರೆ, ರಾಜಕೋಟೆಯಲ್ಲಿ ಸನಾತನ ಧರ್ಮದ ಸಮಸ್ತ ಸಂಪ್ರದಾಯಗಳ ಬಗ್ಗೆ, ಇತರ ಧರ್ಮಗಳ ಬಗ್ಗೆ ಸಮಾನವಾಗಿ ಆದರಬುದ್ಧಿಯನ್ನಿಡಬೇಕೆಂಬ ಶಿಕ್ಷಣವು ನನಗೆ ಪ್ರಾಪ್ತವಾಯಿತು. ನನ್ನ ತಾಯಿ-ತಂದೆಗಳು ಹವೇಲಿಗೆ ಹೋಗುತ್ತಿದ್ದರು; ಹಾಗೆಯೇ ಶಿವ ಹಾಗೂ ರಾಮ ದೇವಾಲಯಗಳಿಗೆ ಹೋಗುತ್ತಿದ್ದರು, ನಮಗೂ ಕರಕೊಳ್ಳುತ್ತಿದ್ದರು, ಅಥವಾ ಕಳುಹಿಸುತ್ತಿದ್ದರು. ಜೈನ ಧರ್ಮಾಚಾರ್ಯರು ನನ್ನ ತಂದೆಯವರ ಕಡೆಗೆ ಬರ ಹೋಗುತ್ತಿದ್ದರು, ಹಾಗು ನಮ್ಮ ಕಡೆಯಿಂದ ಆಹಾರವನ್ನು ಸ್ವೀಕರಿಸುತ್ತಿದ್ದರು. ಧಾರ್ಮಿಕ ಹಾಗು ಪ್ರಾಪಂಚಿಕ ವಿಷಯಗಳ ಮೇಲೆ ನಮ್ಮ ತಂದೆಯವರೊಡನೆ ಅವರು ಚರ್ಚೆಯನ್ನು ನಡೆಸುತ್ತಿದ್ದರು.

ಇದಲ್ಲದೆ, ಮುಸಲ್ಮಾನ ಹಾಗು ಪಾರ್ಸಿ ಮಿತ್ರರೂ ತಂದೆಯವರ ಕಡೆಗೆ ಬಂದು ತಮ್ಮ ತಮ್ಮ ಧರ್ಮಗಳ ಮಾತುಕತೆ ನಡೆಸುತ್ತಿದ್ದರು. ಅವರ ಹೇಳಿಕೆಯನ್ನೆಲ್ಲ ತಂದೆಯವರು ಯಾವಾಗಲೂ ಆದರಭಾವದಿಂದ ಕೇಳುತ್ತಿದ್ದರು, ಅನೇಕಾವರ್ತಿ ಕುತೂಹಲದಿಂದಲೂ ಕೇಳುತ್ತಿದ್ದರು. ನಾನು ತಂದೆಯವರಿಗೆ ದಾದಿಯ ಉಪಚಾರ ನಡೆಸುತ್ತಿದ್ದೆ, ಆದರಿಂದ ಅನೇಕಾವರ್ತಿ ಇಂಥ ಸಂಭಾಷಣೆಗಳನ್ನು ಕೇಳುವ ಪ್ರಸಂಗವು ನನಗೆ ಸಿಗುತ್ತಿತ್ತು. ಇವೆಲ್ಲ ಕಾರಣಗಳ ಮೇಲಿಂದ ಸಮಸ್ತ ಧರ್ಮಗಳ ವಿಷಯ ನನ್ನಲ್ಲಿ ಆದರಭಾವವು ಉಂಟಾಗಿದೆ.

ಇದಕ್ಕೆ ಕ್ರೈಸ್ತ ಧರ್ಮವು ಮಾತ್ರ ಒಂದು [illegible]ವು. ಈ ಕುರಿತು ಒಂದು ಪ್ರಕಾರದ ತಿರಸ್ಕಾರವು ನನ್ನಲ್ಲುದ್ಭವಿಸಿತು. ಅದಕ್ಕೊಂದು ಕಾರಣವಿದೆ. ಆ ಕಾಲದಲ್ಲಿ ಪಾದ್ರಿಗಳು ಹೈಸ್ಕೂಲಿನ ಒಂದು ಮೂಲೆಯಲ್ಲಿ ನಿಂತು ಹಿಂದೂಗಳಿಗೂ, ಹಿಂದೂ ದೇವತೆಗಳಿಗೂ ಅಪಶಬ್ದಗಳನ್ನಾಡುತ್ತಿದ್ದರು. ಇದು ನನಗೆ ಅಸಹ್ಯವಾಗುತ್ತಿತ್ತು. ಒಮ್ಮೆ ಅಲ್ಲಿ ನಿಂತು ನಾನು ಅವರ ಮಾತನ್ನು ಕೇಳಿರಬೇಕು, ಆದರೆ, ಇನ್ನು ಮುಂದೆ ಅಲ್ಲಿ ನಿಲ್ಲಬಾರದೆಂದು ಆಗಲೇ ನನ್ನ ಮನೋನಿಶ್ಚಯವಾಯಿತು. ಅದೇ ಸಮಯ ಒಬ್ಬ ಪ್ರಸಿದ್ಧ ಹಿಂದೂ ಮನುಷ್ಯನು ಕ್ರೈಸ್ತ ಮತಕ್ಕೆ ಸೇರಿದನೆಂದು ನಾನು ಕೇಳಿದೆ. ಧರ್ಮಾಂತರ ಮಾಡಿದಾಗ ಆತನು ಗೋಮಾಂಸವನ್ನು ತಿನ್ನಬೇಕಾಯಿತೆಂದೂ, ಹೆಂಡ ಕುಡಿಯಬೇಕಾಯಿತೆಂದೂ, ಉಡಿಗೆ-ತೊಡಿಗೆಗಳನ್ನು ಬದಲಿಸಬೇಕಾಯಿತೆಂದೂ, ಅಂದಿನಿಂದ ಆತನು ಹ್ಯಾಟನ್ನು ಹಾಕಿಕೊಂಡು ಯುರೋಪಿಯನ್ ಉಡಿಗೆ-ತೊಡಿಗೆಗಳನ್ನು ಧರಿಸಿ ಅಡ್ಡಾಡುತ್ತಿದ್ದನೆಂದೂ ಊರಲ್ಲೆಲ್ಲ ಸುದ್ದಿಯಾಯಿತು. ಇದನ್ನು ಕೇಳಿ, ನನಗೆ ಬೇಸರವೆನಿಸಿತು. ಗೋಮಾಂಸವನ್ನು ತಿನ್ನಲಿಕ್ಕೂ ಹೆಂಡ ಕುಡಿಯಲಿಕ್ಕೂ ಮೂಲ ಉಡಿಗೆ-ತೊಡಿಗೆಗಳನ್ನು ಬದಲಿಸಲಿಕ್ಕೂ ಒತ್ತಾಯ ಮಾಡುವ ಧರ್ಮವು, ಧರ್ಮವೆಂದು ಕರೆಯಿಸಿಕೊಳ್ಳಲಿಕ್ಕೆ ಕೇವಲ ಅಪಾತ್ರವೆಂದು ನನ್ನ ಮತವಾಯಿತು. ಇದಲ್ಲದೆ, ಕ್ರೈಸ್ತ ಮತಕ್ಕೆ ಧರ್ಮಾಂತರ ಹೊಂದಿದವರು ತನ್ನ ಹಿರಿಯರ ಧರ್ಮವನ್ನು, ಆಚಾರಗಳನ್ನು, ದೇಶವನ್ನು ಆಗಲೇ ಬಯ್ಯತೊಡಗಿದರೆಂದು ನಾನು ಕೇಳಿದೆನು. ಇವೆಲ್ಲ ಕಾರಣಗಳ ಮೂಲಕ ಕ್ರೈಸ್ತ ಧರ್ಮದ ಬಗ್ಗೆ ನನ್ನಲ್ಲಿ ಅನಾದರವುಂಟಾಯಿತು.

ಆದರೆ, ಬೇರೆ ಧರ್ಮಗಳನ್ನು ಸಮಾನವಾಗಿ ನಾನು ಎಣಿಸುತ್ತಿದ್ದಾಗ್ಯೂ, ನನ್ನಲ್ಲಿ ಪರಮಾತ್ಮನ ಭಕ್ತಿಯು, ನೆಲೆಸಿತ್ತೆಂದು ನಾನು ಹೇಳಲಾರೆ. ಈ ಕಾಲದಲ್ಲಿ ಮನುಸ್ಮೃತಿಯು ನನ್ನ ಕೈಸೇರಿತು, ಈ ಗ್ರಂಥವು ತಂದೆಯವರ ಗ್ರಂಥಸಂಗ್ರಹದಲ್ಲಿತ್ತು. ಆ ಗ್ರಂಥದೊಳಗಿನ ಸೃಷ್ಟಿನಿರ್ಮಾಣದ ಹೇಳಿಕೆಗಳಿಂದ ನನಗೆ ವಿಶೇಷ ಭಕ್ತಿಯುಂಟಾಗಲಿಲ್ಲ. ನಾನು ಅದರ ವಾಚನದಿಂದ ನಾಸ್ತಿಕ ಮತದವನಾಗಹತ್ತಿದೆ. ಒಬ್ಬ ಅಣ್ಣನ ಮಗನಿದ್ದನು. ಆತನು ಈಗಲೂ ಜೀವಂತನಿದ್ದಾನೆ. ಆತನು ಬುದ್ಧಿವಂತನು. ನನ್ನ ಸಂಶಯನಿವಾರಣ ಮಾಡಲು ಆತನಿಗೆ ಹೇಳಲು ಆತನಿಂದ ಸಾಗದಾಯಿತು. «ನೀನು ದೊಡ್ಡವನಾದ ಬಳಿಕ, ಈ ಸಂಶಯಗಳನ್ನು ನಿನ್ನಷ್ಟಕ್ಕೆ ನೀನೇ ಪರಿಹರಿಸಿಕೊಳ್ಳಬಲ್ಲೆ, ಈ ಪ್ರಾಯದಲ್ಲಿ ನೀನು ಈ ಪ್ರಶ್ನೆಗಳ ಚರ್ಚೆ ಮಾಡಬಾರದು,” ಎಂದು ಆತನು ಹೇಳಿ, ನನಗೆ ಕಳಿಸಿಬಿಟ್ಟನು. ನಾನು ಸುಮ್ಮಗಾದೆ, ಆದರೆ, ಮನಸ್ಸಿಗೆ ಸಮಾಧಾನವಾಗಲಿಲ್ಲ. ಮನುಸ್ಮೃತಿಯೊಳಗಿನ ಆಹಾರದ ವಿಷಯಗಳ ಅಧ್ಯಾಯಗಳು ನಿತ್ಯರೂಢಿಯ ವಿರೋಧವಾದವುಗಳೆಂದು ನನಗನಿಸಿತು. ಈ ಕುರಿತು ಸಮಾಧಾನವಾದ ಹೇಳಿದರೂ, ಅಣ್ಣನ ಮಗನು ಅದೇ ಉತ್ತರವನ್ನಿತ್ತನು. ಬುದ್ಧಿಯು ವಿಕಾಸ ಹೊಂದಿ ಇನ್ನು ಹೆಚ್ಚು ವಾಚನವಾದ ಬಳಿಕ, ಇದು ನನಗೆ ಸುಗಮವಾಗಿ ತಿಳಿಯುವದೆಂದು ನಾನು ಭಾವಿಸಿದೆ.

ಮನುಸ್ಮೃತಿಯ ವಾಚನದಿಂದ ಆ ಕಾಲದಲ್ಲಿ ಅಹಿಂಸೆಯ ಶಿಕ್ಷಣ ಮಾತ್ರ ನನಗೆ ದೊರೆಯಲಿಲ್ಲ. ಮಾಂಸಭಕ್ಷಣದ ಹಕೀಕತನ್ನು ನಾನು ಮೊದಲೇ ಹೇಳಿರುವೆನು. ಮನುಸ್ಮೃತಿಯು ಅದನ್ನು ಸಮರ್ಥಿಸುತ್ತದೆಂದು ನನಗೆ ತೋರಿತು, ಸರ್ಪ, ತಗಣಿ ಇತ್ಯಾದಿಗಳನ್ನು ಕೊಲ್ಲುವದು ನೀತಿಯೆಂದು ಆ ಕಾಲಕ್ಕೆ ನಾನು ತಿಳಕೊಂಡೆ. ಆ ಪ್ರಾಯದಲ್ಲಿ ತಗಣಿ ಮುಂತಾದ ಕ್ರಿಮಿಗಳನ್ನು ಕೊಲ್ಲುವದೊಂದು ಧರ್ಮವೆಂದು ಎಣಿಸಿ ನಾನು ಅವುಗಳನ್ನು ಕೊಂದ ನೆನಪಿದೆ.

ಆದರೆ, ನೀತಿಯು ಜಗತ್ತಿನ ಆಧಾರವು; ಸಮಸ್ತ ನೀತಿಯು ಸತ್ಯದಲ್ಲಿ ಸಮಾವೇಶವಾಗಿದೆ, ಎಂಬೆರಡು ಸಂಗತಿಗಳು ನನ್ನ ಮನದಟ್ಟಾಗಿದ್ದವು. ಸತ್ಯವೇ ನನ್ನ ಧ್ಯೇಯವಾಯಿತು, ಸತ್ಯಪ್ರಾಪ್ತಿಯೇ ನನ್ನ ಧ್ಯೇಯವಾಗಿ ಪರಿಣಮಿಸಿತು. ದಿನ ಹೋದ ಹಾಗೆ ಸತ್ಯಶೋಧನ ಕಾಂಕ್ಷೆಯು ಹಿಗ್ಗುತ್ತ ನಡೆಯಿತು; ಸತ್ಯ ವ್ಯಾಖ್ಯೆಯು ಕೂಡ ಅದರಂತೆ ಹೆಚ್ಚೆಚ್ಚು ವ್ಯಾಪಕವಾಗುತ್ತ ನಡೆದದೆ.

ಇದಲ್ಲದೆ, ನೀತಿವಿಷಯಕ ಶ್ಲೋಕವೊಂದು ಮನ ಪಟ್ಟಾಯಿತು, ಅಪಕಾರವನ್ನು ಉಪಕಾರದಿಂದ ತೀರಿಸಬೇಕೆಂಬ ಬೋಧವು ನನ್ನ ಆಯುಷ್ಯಕ್ರಮದ ಧೋರಣವಾಯಿತು. ಈ ಧೋರಣವನ್ನು ನಾನು ಪುರಸ್ಕರಿಸಿ, ಅನೇಕ ಪ್ರಯೋಗಗಳನ್ನು ನಾನು ಮಾಡಿ ನೋಡಿದೆ. ಆ ಚಮತ್ಕಾರಗಳನ್ನು ಒದಗಿಸುವ ಶ್ಲೋಕವು ಯಾವದೆಂದರೆ.—

ನೀರು ಕೊಡುವವನಿಗೆ ಚಲೋ ಊಟವನ್ನು ಹಾಕಬೇಕು, ಸ್ವಲ್ಪ ತಲೆ ಬಗ್ಗುಸುವವನಿಗೆ ಸಾಷ್ಟಾಂಗ ನಮಸ್ಕಾರ ಮಾಡಬೇಕು, ಒಂದು ದುಡ್ಡಿನ ಋಣವನ್ನು ಹೊನ್ನಿನಿಂದ ತೀರಿಸಬೇಕು, ಜೀವ ಉಳಿಸುವವರ ದುಃಖ ನಿವಾರಣೆಕ್ಕಾಗಿ ಪ್ರಾಣತ್ಯಾಗವನ್ನೂ ಮಾಡಬೇಕು, ಒಂದು ಉಪಕಾರಕ್ಕಾಗಿ ಹತ್ತು ಉಪಕಾರಗಳನ್ನು ಮಾಡಬೇಕು, ಆದರೆ, ಕಾಯಾ,ವಾಚಾ, ಮನಸ್ಸಿನಿಂದ ಉಪಕಾರ ಮಾಡಿ ತೀರಿಸುವ ಪುರುಷನೇ ಸರ್ವಶ್ರೇಷ್ಠನು

S. U. NARAYANACHARYA & CO.

Chaukamba, BENARES CITY.



ನಮ್ಮಲ್ಲಿ ಎಲ್ಲಾ ತರದ ರೇಶ್ಮೆ ಪೀತಾಂಬರ, ಜರಿ ಕಣ ಜರಿ ಸೀರೆ, ಕಾಶ್ಮೀರ್ ಶಾಲು, ತರವಾರಿ ರುದ್ರಾಕ್ಷಿ, ಕಸ್ತೂರಿ, ಲಿಂಗಗಳೂ, ಸ್ಫಟಿಕಮಣಿ, ವೊದಲಾದ ಸಾಮಾನುಗಳು ಸಿಗುತ್ತವೆ. ಕ್ಯಾಟಲಾಗ ಕೇಳುವವರಿಗೆ ಉಚಿತವಾಗಿ ಕಳಿಸಲಾದೀತು.

ವಿಳಾಸ—ಶಿರೋಮಣಿ ನಾರಾಯಣಾಚಾರ್ಯ

ಕಂಪನಿ, ಚೌಕಂಬಾ,-ಕಾಶಿ

ರೋಗದಿಂದ ನರಳಬೇಡಿರಿ.

ನಮ್ಮಲ್ಲಿ ಜಂತು ಜುಲಾಬು, ಶೀತ ಜುಲಾಬ, ಎಲ್ಲ ತರದ ಜ್ವರ, ಜ್ವರಗರ್ಭ ಪಿಶಿಜ್ವರ ಕಾಮಿಲೆ, ದಮ್ಮು, ಕೆಮ್ಮು, ಕಫ ಅಗ್ನಿಮಾಂದ್ಯ, ಮಲಬದ್ಧತೆ ಮೂಲವ್ಯಾಧಿ, ನರ, ವಾತ, ಕಲೆಮಡಕ ಪ್ರದರ, ಗರ್ಭಾಶಯದ ಎಲ್ಲ ರೋಗ ಪ್ರಮೇಹ, ಉಪದಂಶ ಗಮಿ) ಬಾಲಗ್ರಹ ಖಜ್ಜಿ, ಗಜಕರ್ಣಗಳಿಗೆ ಖಂಡಿತ ಗುಣ ಬರುವ ಜರ್ಮನ, ಅಮೇರಿಕನ, ಫ್ರೇಂಚ ಇಂಗ್ಲಿಷ ಮತ್ತು ದೇಶಿ ಪೇಟಂಟ ಔಷಧಗಳು ಬಹಳ ಅಗ್ಗವಾಗಿ ಸಿಗವವು.

ಇದಲ್ಲದೆ ಎಲ್ಲ ತರದ ಸೇಕಸರಿ ಪರಫ್ಯೂಮ ರಿಸ್ಟಾಕಳ ಸಾಮಾನು, ಓಲ್ಡಸ್ಮೋಕ್ಯಾಲ ಸುವರಚಿಕ್ಕ, ಮೋರಿಸ ಮೋಟಾರ ಬಂಡಿಗಳು ಸವಲತಿನ ದರದಿಂದ ಸಿಗುವವು ನಮ್ಮಲ್ಲಿಲ್ಲದ ನಿಮಗೆ ಅವಶ್ಯವಿರುವ ಸಾಮಾನು ಬೇರೆ ದೇಶದಿಂದ ತರಿಸಿಕೊಡಲಾಗುವದು

ಎಸ್ ಎಲ್ ಥಾಕಪ್ಪ ಮತ್ತು ಬ್ರದರ್ಸ,

ಶಿರಸಿ.

ವಿಶೇಷ] **ಅನುಭವಸಿದ್ಧ** [ಪಥ್ಯವಿಲ್ಲ

ವನೌಷಧಿಮೂಲಿಕೆಗಳು

ವಾಯುದುಮ್ಮಾನ (ನಮೋನಿಯಾ) ವಾಂತಿ ಭ್ರಾಂತಿ (ಕಾಲೆರಾ) ಅರ್ಧಾಂಗವಾಯು (ಪೆರಾಲಿಸಿಸ್)ಹುಚ್ಚು ನಾಯಿ ನಾಯಿಕಡಿತ ಸರ್ಪಸುತ್ತು ಹೊಟ್ಟೆಯಲ್ಲಿ ಕ್ರಿಮಿ ವಿಷಹಾಕಿದ್ದು (ಕ್ರಿಮಿಸಗು) ವಗೈರೆ ರೋಗಗಳಿಗೆ ಒಂದೆ ಒಂದು ಮೂಲಿಕೆಯಿಂದ ಖಾತ್ರಿಯಾಗಿ ತೀವ್ರ ಗುಣಬರುವದು ಇವು ಬಹುಕಾಲದಿಂದ ಅನುಭವ ತಕ್ಕೊಂಡು. ಹಾಗು ಪ್ರತಿನಿತ್ಯ ಉಪಯೋಗಕ್ಕೆ ಬಳಕೆಯಲ್ಲಿದ್ದು ಖಚಾಗುವ ಔಷಧಿಗಳ ತಾಜಾ ಮೂಲಿಕೆಗಳು। ಒಮ್ಮೆ ತರಿಸಿ ಅನುಭವ ತಕ್ಕೊಂಡರೆ ಖಾತ್ರಿಯಾದೀತು ಕಾಲರಾ ಔಷಧಿಗಳ ದ್ರಾವಣ (Tincture) ಸಹ ಆಗಾವ ಸೂಚಿಸಿದರೆ ಕಳಿಸುವೆವು

ವಾಯುದುಮ್ಮಾನದ ಬಗ್ಗೆ ಔಷಧ ಮೂಲಿಕೆ ತೊಲೆ ೧ಕ್ಕೆ ೦ ೩ ೦

ಕಾಲೆರಾದ ಬಗ್ಗೆ „ „ ೬ ೩ ೦

ಅರ್ಧಾಂಗ ವಾಯುವಿನಬಗ್ಗೆ ೧ ಜನರಿಗೆ ಸಾಲುವಷ್ಟು ॥ ಶೇರು . ೮ ೫ ೦

ಪ್ರಕೃತಿ ತಿಳಿಸಬೇಕು

ನಾಯಿ ಕಡಿತದಬಗ್ಗೆ ೦ ೪ ೦

ಸರ್ಪಸುತ್ತಿನ ಬಗ್ಗೆ ೦ ೩ ೦

ಹೊಟ್ಟೆಯಲ್ಲಿ ಕ್ರಿಮಿ ಔಷಧಿ ಬಿದಬಗ್ಗೆ ತೊಲೆ ೧೦ ಕ್ಕೆ ೦ ೬ ೦

ರಕ್ತಶುದ್ಧಿ ವ ಮಲಶೋಧನೆ ಬಗ್ಗೆ ಮೂಲಿಕೆ ರಾತ್ಲ ಕ್ಕೆ ೧ ೦ ೦

ಮೋರಾವಳಾ (ನೆಲ್ಲಿಕಾಯಿ ಗುಳಂಬ) ರಾತ್ಲ ೧ ಕ್ಕೆ ೧ ೦ ೦

ರಾತುಗಟ್ಲೆ ಯಾ ಅದಕ್ಕೂ ಹೆಚ್ಚು ತರಿಸಿಕೊಳುವವರಿಗೆ ಕಡಿಮೆ ದರದಿಂದ ಕಳಿಸಲ್ಪಡುವದು. ಟಪಾಲ ಖರ್ಚು ಪ್ರತ್ಯೇಕ ವಿಶೇಷ ಮಾಹಿತಿ ಪತ್ರದ್ವಾರಾ ಅನುಪಾನಪತ್ರ ಔಷಧೀ ಸಂಗಡ

ಎನ್. ಜಿ. ಹೆಗಡೆ, ಮಾಸ್ತೇರಿ,

ಪೋಸ್ಟ—ಬಂಕಿಕೊಡ್ಲ ಜಿ. ಉತ್ತರ ಕಾನಡಾ

ಸುಲಭ ಕ್ರಯ! ಸುಲಭ ಕ್ರಯ!

ಡಾಕ್ಟರ ಜೀ. ಬೀ ಯಾವರ

ಸುಗಂಧ ನಶ್ಯದ ಪುಡಿ

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿದ ಲಕ್ಷ್ಯಾವಧಿ ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪಿನಸಿ, ಒಂಟೆತಲೆನೋವು, ತಲೆಯಲ್ಲಿಯ ರೋಗಗಳು ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಸೇರಲ್ಪಟ್ಟ ಈ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನು ಹೆಚ್ಚು ಮಾಡುತ್ತದೆ, ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಬಂದು ಚಿಟಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಉಚಿತ ಕಳಿಸಲಾಗುವದು

ಬುದ್ದಿ ಒಂದಕ್ಕೆ ಕ್ರಯ ರೂ ೦-೪-೦, ಪೋ ಪ ೪ ಆಣೆ ಡಜನ್ ೧ ಕ್ಕೆ ರೂ ೩-೮-೦, ಪೋ ಪೇ, ೦-೮-೦ ದಯಮಾಡಿ [illegible] ಸರಿಯಾಗಿ ತಿಳಿಯುವಂತೆ ಬರೆಯಿರಿ

ಪತ್ತೆ —ಗುರುಬಸವ ಕ ಕಂಪನಿ ಲಿಮಿಟೆಡ್ ಪೋ ಬಾ ೫೧೦, ಪಾರ್ಕಟೌನ ಮದರಾಸ

ಸರಕಾರದಿಂದ ಪೇಟಂಟ ಪಡೆದ

ಮಲ್ಲಾರ ಕಪ್ಪಲಿ

ತೋಟಗರಿಗೆ ಬಹು ಅನುಕೂಲವಾಗಿರುವದು.

ಇದು mild steelವೆಂಬ ಜಾತಿಯ ಉಕ್ಕಿನ ತಗಡಿನಿಂದ ಮಾಡಲ್ಪಟ್ಟಿರುವದ ಎತ್ತುಗಳಿಗೆ ಬಹಳೇ ಹಗರು ತೋರುತ್ತದೆ ಇದರೊಳಗಿಂದ ಒಂದು ಹನಿ ಸಹ ನೀರು ಕೆಳಗೆ ಬೀಳದಂತೆ ಏರ್ಪಾಡು ಮಾಡಲ್ಪಟ್ಟಿರುವದು ಕಪ್ಪಲಿ ಬಾಯಿಂದ ನೀರು ತೋಳಿನಲ್ಲಿ ಬೀಳುವ ಕಾಲಕ್ಕೆ ಎತ್ತುಗಳಿಗೆ ಭಾರವಾಗದಂತೆ ರಚನೆಯಲ್ಲಿ ಸುಧಾರಣೆಯನ್ನು ಮಾಡಿರುತ್ತೇವೆ

ಬೆಲೆಯ ಬಗ್ಗೆ ಬರೆದು ತಿಳಿದುಕೊಳ್ಳಿರಿ

ಕಿರ್ಲೋಸ್ಕರ ವಾರ್ತೆ —ಜನವರಿ ಸಂಚಿಕೆಯು

ಹೊರಬಿದ್ದಿರುವದು ೩ ಆಣೆಯ ಸ್ಟಾಂಪ ಕಳಿಸಿರಿ ವಾ ವ. ರೂ ೧-೪-೦

ಕಿರ್ಲೋಸ್ಕರ ಬಂಧು ಲಿಮಿಟೆಡ್;{ ಕಿರ್ಲೋಸ್ಕರವಾಡಿ, ಜಿಲ್ಲಾ ಸಾತಾರಾ

ಅಮೃತಾಂಜನ.

ಇದರ ಉಪಯೋಗದಿಂದ, ವಾತವೇದನೆ, ಉಳುಕು ಇತ್ಯಾದಿ ವ್ಯಾಧಿಗಳಮೇಲೆ, ರಾಮಬಾಣದಂತಾಗಿರುವದು ಕಳೆದ ೨೫ ವರ್ಷಗಳಿಂದ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗುತ್ತದೆ ಲಕ್ಷಗಟ್ಟಲೆ ಜನರುಗಳು ಅಮೃತಾಂಜನವನ್ನು ಉಪಯೋಗಿಸುತ್ತಿರುವರು ಇದರಿಂದ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಬೇಗು, ಸಂಧಿವಾತ ಮೊದಲಾದ ಎಷ್ಟೋ ವ್ಯಾಧಿಗಳಮೇಲೆ ಇದು ಗುಣಕಾರಿಯೆಂದು ಅರಿಯುವವರು ಇದರ ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು. ಕಿಮ್ಮತ್ತು ೧೦ ಆಣೆ ಟ ಖರ್ಚು ಬೇರೆ.

ಅಮೃತಾಂಜನ ಡಿಪೋ, ಫೋರ್ಟ, ಮುಂಬಯಿ.

Printed and Published by Krishnarao Keshav Shenvi (Editor) at his Star of Kanara Press Kumta

Monday, March 8th, 1926.

ವರ್ಷ ೧೦. ಸಂಚಿಕೆ ೩೨

ಕಾನಡಾವೃತ್ತ.

THE KANARA NEWS.

ಪತ್ರದ ವರ್ಗಣಿ.
ಕುಮಟೆಯಲ್ಲಿ ಅಗಾವು
ರೂಪಾಯಿ 2-4-0
ಕುನೆಯಾರ್ಡರಿಯಿಂದ
ರೂ 3-0-0.
ವ್ಹಿ. ಪಿ. ಅಂಚೆವೆಚ್ಚ ಸೇರಿ
ರೂಪಾಯಿ 3-3-0
ಬಿಡಿ ಸಂಚಿಕೆಗೆ 0-1-0.

[illegible] हितकर्ता [illegible] लोके [illegible] कार्यकर्ता [illegible]।
इति महति [illegible] वर्तमाने समाने [illegible] दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಜಾಹಿರಾತುಗಳ ದರ
ಕನ್ನಡ, ಇಂಗ್ಲಿಷ ಪ್ರ್ಯಾ[illegible]
[illegible] (೧೫ ಎಮ್ ಉದ)
೮ ಸಾಲುಗಳವರೆಗೆ ರೂ 1-0-
೮ ಸಂತ್ರ ಪ್ರತಿಸಾಲಿಗೆ 0-2-0
ಹೆಚ್ಚಿಗೆ ಸಾಲು ಎಷ್ಟು
ಕೊಟ್ಟಿರುವದೋ ಆ ಮಾಪ
ದಿಂದ ಅಷ್ಟು ಸಾಲುಗಳು ಹಿಡಿ
ಯಲ್ಪಡುವವು
ಬಾಕಿ ಜಾಹಿರಾತುಗಳ ಬಗ್ಗೆ
ಪತ್ರವ್ಯವಹಾರ ಯಾ ಸಮಕ್ಷ ತಿಳಿ
ಸಲ್ಪಡುವದು.

(ಕುಮಟಾ—ಕಾನಡಾವೃತ್ತ ಸೋಮವಾರ, ತಾರೀಖು ೮ ಮಾಹೆ ಮಾರ್ಚ ಸನ್ ೧೯೨೬ ನೇ ಇಸವಿ)

हिंदुस्थानातील रहिवाशांस ज्यामध्ये हिंदुस्थानची हवा मानवणारे हे औषध हिंदुस्थान.तील लोकास उत्तम फायदेशीर आहे
द्राक्षासव- वीर्य रक्त्याची किंमत २ रुपये
रामबाण औषधे
सर्दि घालविणारे,
भूक वाढविणारे,
पाचनशक्ति साफ करणारे,
झोप आणणारे,
शक्ति देणारे,
तेजस्वीपणा आणणारे,
— विश्वास रुचिकर
कधाटबाग मागवा,
संडुफार्मास्युटिकलवर्क्स लिमिटेड,
मुंबई नं: १३
एजंट— मेसर्स पंडित आणी कंपनी,
तीर्थहळ्ळी

ಬೇಕಾದ ಚಿನ್ನಾಭರಣಗಳು ನಮಗೆ ಆರ್ಡರ
ಕೊಟ್ಟಲ್ಲಿ ಯೋಗ್ಯ ಮುದ್ದತ್ತಿನಲ್ಲಿ ಕೊಡುವೆವು.
R. S. KASARGOD. B.A.
Jewellers, KUMTA.
ಆರ್. ಎಸ್. ಕಾಸರಗೋಡ, ಬಿ.ಎ.,
ರತ್ನಾಭರಣ ವ್ಯಾಪಾರಿ, ಕುಮಟಾ.

ಯಾವದೇ { ಆಕಾರದ / ನಕ್ಷೆಯ / ಸಂಖ್ಯೆಯ } ಗಡಿಯಾರವನ್ನು
ಬರೇ ೭ ರೂಪಾಯಿಗಳಿಗೆ ಕೊಡುತ್ತೇವೆ
ಮೂಲ ಬೆಲೆ ರೂಪಾಯಿ ೧೪ ಅರ್ಧ ಬೆಲೆ ರೂಪಾಯಿ ೭,



ಒರೇ ಒಂದು ತಿಂಗಳ ಬಗ್ಗೆ ಮಾತ್ರ ಈ ದರವನ್ನು ಕೊಡುವೆವು. ೫ ವರ್ಷದಲ್ಲಿ ಮಾತ್ರ ಕೊಡುತ್ತೇವೆ. ಎಲ್ಲಾ ಗಡಿಯಾರಗಳನ್ನು ಅರ್ಧ ಬೆಲೆಗೆ ಮಾರುತ್ತೇವೆ. ಅತ್ಯುತ್ತಮ ಚಲನ! ನಿರ್ದೋಷ ಯಂತ್ರರಚನೆ!! ಧರಿಸುವದಕ್ಕೆ ಯೋಗ್ಯ ಸುಂದರ ರಚನೆ!!! ಎಲ್ಲಾ ಗಡಿಯಾರಗಳಿಗೆ ಗ್ಯಾರಂಟಿ ಇರುತ್ತದೆ. ಯಾವದೇ ಆಕಾರದ ನಕ್ಷೆಯ ಸಂಖ್ಯೆಯ ಗಡಿಯಾರವನ್ನು ಉತ್ಕೃಷ್ಟ ರೇಶಿಮೆ ಪಟ್ಟಿಯ ಸಹಿತ ಉಚಿತವಾಗಿ ಕೊಡುತ್ತೇವೆ. ಬೆಲೆ ರೂಪಾಯಿ ೭ ಮಾತ್ರ!

ಅಲ್ಪವೇ ಇವೆ; ಈಗಲೇ ಬರೆಯಿರಿ.

ವಿಳಾಸ— Swan House: P B 503 P T Madras

ಅತ್ಯಲ್ಪವಿವೆ! ಕೇವಲ ಉಚಿತ


ಉಚಿತ! ಉಚಿತ! ಕೇವಲ ಉಚಿತ!

ತಾರು' ಲೀವರ ರಿಜಿಸ್ಟರ್ಡ ಪೋಕೆಟ್ ವಾಚ್ಚು ೧೮ ಕೆರೆಟ್ ರೋಲ್ಡ ಗೋಲ್ಡಿನದು ತುಟುಬಿಲ್ಲೆಯ ಮೇಲೆ ೫ ವರ್ಷದ ಗ್ಯಾರಂಟಿ ಇರುವದೆಂದು ಗಡಿಯಾರಗಳ ಕೆಳಗೆ ಅಚ್ಚು ಹೊಡೆದಿರುವದು. ಈ ಗಡಿಯಾರವನ್ನು ಕೊಂಡುಕೊಳ್ಳುವವರಿಗೆ ನಾವು ನಮ್ಮ "ಸಿ" ರಜಿಸ್ಟರ್ಡ ಟ್ಯಾಂಟೀನನ್ನು ಉಚಿತವಾಗಿ ಕೊಡುತ್ತೇವೆ. ಇದೊಂದು ಅಪೂರ್ವ ಕಾಣಿಕೆ. ಕೆಲವೇ ಗಡಿಯಾರಗಳಿವೆ. ಒಮ್ಮೆ ಕೊಂಡು ನೋಡಿರಿ! ಉಚಿತವಾಗಿ ಸಿಗುವದು "ತಾರಾ" ಲೀವರ ರಿಜಿಸ್ಟರ್ಡ ೧೮ ಕೆರೆಟ್ ರೋಲ್ಡ ಗೋಲ್ಡಿನ ಪೋಕೆಟ್‌ವಾಚ್ ಗಡಿಯಾರಗಳಿಗೆ ಕಾಡಿ ಬರೇ ರೂಪಾಯಿ ೫

CAPTAIN WATCH CO. P. B. 235 MADRAS

ದರ ಕಡಿಮೆ! ಮಾಡಿರುವೆವು! ಸುಸಂಧಿ!
ನಮ್ಮ
ಸುಪ್ರಸಿದ್ಧ
ಇಂಗ್ಲಿಷ ಮೋಡ
ಸಾಯಿಕಲ
ವೆಲಿಂಗ್ಟನ
ಸಾಯಿಕಲ ಮತ್ತು ಮೋಟಾರ
ಕಂಪನಿ, ಹೋರ್ನಬೀ ರೋಡ,
ಮುಂಬಯಿ ನಂಬರ ೧
—
ಅರ್ಸೆನಲ ರೋಡ, ಪುಣೆ.

ಜೂನ ತಿಂಗಳಿಂದ ೪ನೇ ವರ್ಷ ಪ್ರಾರಂಭ

ಜಯಕರ್ನಾಟಕ (ಮಾಸಪತ್ರಿಕೆ)

ಸಂಪಾದಕ—ಆಲೂರ ವೆಂಕಟರಾಯರು

ಇದರಲ್ಲಿ ಮಧ್ಯಯುಗೀನ ಸಾಹಿತ್ಯ, ಧಾರ್ಮಿಕ ಸಾಮಾಜಿಕ ಐತಿಹಾಸಿಕ ಆರ್ಥಿಕ ಇತ್ಯಾದಿ ವಿಷಯಗಳು ಇರುವವು. ಪ್ರಬಂಧ ಕಥೆಯು, ಜೀವನವೃತ್ತ [illegible] ಕೊಡಲ್ಪಡುವವು. ಪ್ರತಿ ಸಂಚಿಕೆಯಲ್ಲಿಯೂ ಸುಂದರ ಚಿತ್ರಗಳು ಇರುತ್ತವೆ. [illegible] ೬೦ ಪುಟಗಳು [illegible]

ಕಾರ್ಯದರ್ಶಿ ಬಾಬುಕರ್ನಾಟಕ, ಧಾರವಾಡ.

ಟಿ. ಎಸ್. ಮೋಟರ ಸರ್ವಿಸ, ಶಿವಮೊಗ್ಗಾ.

ಗೇರಸಪ್ಪಾ ಜೋಗಿಗೆ ರೆಗ್ಯೂಲರ್ ಸರ್ವಿಸ್



ಶಿವರಾತ್ರಿಯ ಸಮಯದಲ್ಲಿ ಗೋಕರ್ಣಕ್ಕೆ ಸ್ಪೆಶಲ್ ಲಾಗಳು

(೧) ಹುಬ್ಬಳ್ಳಿ ಯಲ್ಲಾಪುರ- ಅಂಕೋಲಾ- ಕಾರವಾರ (೨) ಹುಬ್ಬಳ್ಳಿ- ಮುಂಡಗೋಡ ಶಿರ್ಶಿ ಕುಮಟಾ- ಹೊನ್ನಾವರ- ಭಟ್ಕಳ (೩) ಕುಮಟಾ- ಶಿರ್ಶಿ ಶಿದ್ದಾಪುರ ಗೇರಸಪ್ಪಾ- ಜೋಗ) Gersappa Falls) ಸಾಗರ ಶಿವಮೊಗ್ಗಾ—ಈ ಲೈನುಗಳಲ್ಲಿ ರೆಗ್ಯುಲರ್ ಸರ್ವೀಸ ನಡೆಯುತ್ತದೆ.

ಪ್ರವಾಸಿಕರಿಗೆ [illegible] ಎಲ್ಲಾ ಸ್ಟೇಶನ್‌ಗಳಲ್ಲೂ ವ್ಯವಸ್ಥೆ ಮಾಡಿದೆ

[illegible] ಮಾಹಿತಿಯನ್ನು ಆಫೀಸಿನಲ್ಲಿ ತಿಳಿದುಕೊಳ್ಳಬಹುದು

ಎಲ್ಲಾ ನೋವುಗಳಿಗೆ ದಿವ್ಯೌಷಧ

ವಾತಹಾರಿ ತೈಲ.

ಕ್ರಯ [illegible] ಬಾಟ ೧ ಕ್ಕೆ ೦—೭—೦ [illegible] ಸುವಾಸಿಕ ಕಾಬೂಲಿ ಹಿಂಗು ೧೦ ತೊಲೆ [illegible] ೧—೮—೦ ಹಿಂಗಿನ ಅರ್ಕ [illegible] ಬಾಟ್ಲಿ ೧ ಕ್ಕೆ ೦—೮—೦ ರಕ್ತಶುದ್ಧಿಕಾರಕ ಧಾತು ಪೌಷ್ಟಿಕ, ಶಕ್ತಿವರ್ಧಕ ಹಲವಾ ೨೦ ತೊಲೆಯ ಡಬ್ಬಿ ೧ ಕ್ಕೆ ೧—೪—೦ ೧ ತೊಲೆಯ ಹಿಂಗಿನ ಡಬ್ಬಿಗಳ ಡಜನ್ ೧ ಕ್ಕೆ ೨—೦—೦ ತಲೆಗೆ ಹಚ್ಚುವ ಸುವಾಸಿಕ ಮಸಕರಾಜ ತೈಲ ೫ ತೊಲೆಯ ಬಾಟ್ಲಿ ೧ ಕ್ಕೆ ೦—೧೨—೦ ಶುದ್ಧ ಪ್ರೋಮ [illegible] ೧ ಕ್ಕೆ ೦—೮—. ಇದಲ್ಲದೆ, ನೀಲಗಿರಿ ತೈಲ, ಎಲ್ಲಾ ತರದ [illegible] ಯೋಗ್ಯ [illegible] ಸಿಗುವವು ಟಪಾಲ ಖರ್ಚ ಪ್ರತ್ಯೇಕ

ಕೆರೇಕರ ಕಾಬೂಲೀ ಹಿಂಗಿನ ದುಕಾನ,

ಅಳವೀಬಾಜಾರ, ಕುಮಟಾ.

THE

INDIA PROVIDENT COMPANY LTD:

ESTABLISHED 1910

Dividend declared 1912	20 per cent.
Dividend declared 1922	30 per cent.
Dividend declared previous year 1[illegible]	20 per cent

The Sa[illegible] for Life Insurance of the poor Premium Re 1/- to As 8 per mo[illegible]

Apply at once to

PADMANABH GOPAL KAMAT,

Agent, ANKOLA N. Kanara

ರಾಗದ ಪೆಟ್ಟಿಗೆಗಳು.

ತಬಲೆ ಜೋಡಿ ಇತ್ಯಾದಿ ಗಾಯನ ಸಾಮಾನು

[illegible] ರಾಗದ ಕೈಪೆಟ್ಟಿಗೆ ಕಿಂ. ೩೦, ೪೦, ೬೦, [illegible] ೧೦೦.
[illegible] ಕಾಲುಪೆಟ್ಟಿಗೆ ಕಿಂ ೬೫, ೭೫, ೧೫೦, ೧೪೦
[illegible] ತಬಲೆ ಜೋಡಿ ಕಿಂ. ೧೬, ೧೮, ೨೦, ೨೫.
[illegible] ಹಾರ್ಮೋನಿಯಮ ಗ್ಯಾಡ (ಮುರಾರಿ) ಕಿಂ. ೧॥, ತಬಲೆ ಗ್ಯಾಡ ಕಿಂ. ೧ [illegible]

ವಿಶೇಷ ಮಾಹಿತಿಬಗ್ಗೆ ಸಚಿತ್ರ ಕ್ಯಾಟಲಾಗ ಪುಕ್ಕಟೆ ಕೊಡುವೆವು.

ಪತ್ರವ್ಯವಹಾರ ಮರಾಠಿಯಿಂದ ಇಲ್ಲವೆ ಇಂಗ್ರಜಿಯಿಂದ ಮಾಡಬೇಕು.

ಪತ್ತೆ— ಗೋಪಾಳ ಸಖಾರಾಮ ಮುಕ್ತಿ ಕಂಪನಿ, ವಿಠ್ಠಲವಾಡಿ ಎದುರಿಗೆ ೨೦೬ ಕಾಳಬಾದೇವಿ, ಮುಂಬಯಿ ೨.

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕೇಟುಗಳು ಮತ್ತು ಸುವರ್ಣಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು.

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ

ಈ ಮಧುವು ಮಹೌಷಧಿಯಾಗಿದ್ದು ಬಹಳ [illegible] ರುಚಿಕರವಾಗಿಯೂ ಇರುತ್ತದೆ. ಈ ಮಧುವಿನ ಸೇವನದಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ [illegible] ೬೦ ತಿಂ ವರ್ಷದ ಮುದುಕರು [illegible] ಪ್ರವರ್ಧಮಾನವಾಗುವರು. ([illegible] ಒಂದೇ ಸಪ್ತಕದಲ್ಲಿ ಅನುಭವಕ್ಕೆ ಬರುವದು) [illegible] ಅಶಕ್ತತ್ವವು ಇಲ್ಲದಂತಾಗುವದು [illegible] ಪೂರ್ವದಲ್ಲಿ [illegible] ಬಂದಾಗುವದು — [illegible] ನಿರೋಗಿಯಾಗುವದು. [illegible] ದಿವಸದಲ್ಲಿ ಗುಣಬರುವದು [illegible] ಸ್ತ್ರೀಪುರುಷರು ಈ ದ್ರಾಕ್ಷಾರ್ಕಮಧುವಿನ ಸೇವನ [illegible] ಮಾಡಬೇಕು. ಇದರಿಂದ ಕ್ಷಯರೋಗ, ಉದರರೋಗ [illegible] ನಾಶವಾಗುವವು [illegible] ದಿವಸದಲ್ಲಿ [illegible] ಆಗುವದು ಇದರ ಅನುಭವವು ಕೊಡಲನೇ ದಿವಸವೇ ಬರುವದು. [illegible] ಎಷ್ಟೇ ದಿವಸದ [illegible] ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ವಿಷಯಕ್ಕೆ ಸಂಶಯವಿಲ್ಲ. ಸ್ತ್ರೀಸಂಭೋಗ [illegible] ೧೦ ದಿವಸ ಸಾಲುವ ಒಂದು ಬಾಟಲಿಯಿಂದ ಗುಣಬರುವದು. ಹಳೇ ರೋಗವಿದ್ದರೆ ೩ ಬಾಟಲಿಯಿಂದ ಗುಣಬರುವದು. ಒಂದು ಬಾಟ್ಲಿಯ ಕಿಮ್ಮತ್ತು ೧। ರೂಪಾಯಿ ಮೂರು ಬಾಟಲಿಯ ಕಿಮ್ಮತ್ತು ೩—೦—೦ ಮೂರು ಬಾಟಲಿಗಳನ್ನು ಒಂದೇ ಪಾರ್ಸಲಿನಲ್ಲಿ ಕಳಿಸುವೆವು. ಅಂದರೆ [illegible] ಬೀಳುವದಿಲ್ಲ [illegible] ಬಾಟಲಿಗಳ ಕಿಮ್ಮತ್ತು ೧೨—೦—೦ [illegible] ೧ ಬಾಟಲಿ ಪುಕ್ಕಟೆ [illegible] ಬೇರೆ ಬೀಳುವದು [illegible] ೧ ಬಾಟ್ಲಿಗೆ [illegible] ೬ ಬಾಟ್ಲಿಗೆ ೩—೦—೦ [illegible] ೧೩—೦—೦

ವ್ಯವಸ್ಥಾಪಕ— ದ್ರಾಕ್ಷಾರ್ಕಮಧು ಆಫೀಸ [illegible] ಬೆಳಗಾಂವ

ಬೆಸ್ಟ ಅಲಾರಂ ಟೈಂಪೀಸು.



ಈ ಗಡಿಯಾರುಗಳು ಜರ್ಮನ್ ದೇಶದಲ್ಲಿ ತಯಾರಿಸಿದ್ದು ಮೇಲುಗಡೆ ಎಂದೂ ಕೆಟ್ಟುಗದಂಥ ನಿಕ್ಕಲ್ ಚೆಲ್ಲಿಯುವುಳ್ಳವಿರುವದು. ಇವಕ್ಕೆ ಒಂದಾವರ್ತಿ ಬೀಗ ಕೊಟ್ಟರೆ, ೩೦ ಗಂಟೆಯು ಕಾಲ ನಡೆಯುವದು ಮತ್ತು [illegible]

[illegible]

ಹರ್ಸ ಇಮಿಟೇಶನ ರೇಶ್ಮೆ ಜಾಳಿಗೆಗಳು

ಈ ಸೀರೆಗಳನ್ನು [illegible]

[illegible]

ವಿಳಾಸ— ಎಂ ಬೆನ್ಸನ್ ಎಂಡ್ ಕಂ

[illegible]

ಸುಗಂಧಿ ತಾಂಬೂಲೀ ಜರ್ದಾ

ಈ ಜರ್ದಾ [illegible] ಇದರ ಸೇವನದಿಂದ [illegible] ನಾಶವಾಗಿ ಹಲ್ಲುಗಳು [illegible] ಇದರ ಸೇವನದಿಂದ [illegible] ಮುಂತಾದ ವಿಕಾರಗಳುಂಟಾಗುವ ಸ್ವಲ್ಪವೂ ಭೀತಿಯಿಲ್ಲ ಕಾರಣ, ತಂಬಾಕು [illegible] ಅವಶ್ಯವಾಗಿ ಅನುಭವ ಕೊಳ್ಳಬೇಕು [illegible]

ಸುಗಂಧಿ ನಶ್ಯ—ಈ ನಶ್ಯವು ಒಳ್ಳೇ ತಂಬಾಕಿನಿಂದ ಮಾಡಿದ್ದು, ಇದರಿಂದ [illegible] ಮುಂತಾದವುಗಳು ಕೂಡಲೆ [illegible] ಪ್ರಾಪ್ತವಾಗುವದರಿಂದ [illegible]

ಉತ್ತಮ ಬೀಡಿಗಳು:—ಅತ್ಯುತ್ತಮ [illegible] ತಂಬಾಕಿನಿಂದ [illegible] ಬೀಡಿಗಳು ನಮ್ಮಲ್ಲಿ ತಯಾರಿರುತ್ತವೆ [illegible] ಆರ್ಡರ ಕೊಡಬಹುದು. ಇದರ ಹೊರತು, ನಮ್ಮಲ್ಲಿಯು ಬಾಜಾರದಲ್ಲಿ ಎಲ್ಲಾ ಪ್ರಕಾರಗಳ ತಂಬಾಕು ಬರುತ್ತದೆ, [illegible] ಯೋಗ್ಯ ದಲಾಲಿ ಕೊಂಡು, ಖರೇದಿ ಮಾಡಿಕೊಳ್ಳುವೆವು. ವಿಶೇಷ ಮಾಹಿತಿ ಬಗ್ಗೆ ಪತ್ರವ್ಯವಹಾರ ಮಾಡಿದರೆ, [illegible] ಉತ್ತರ ಬರೆಯುವೆವು.

ಪತ್ತೆ— ಎಸ್. ಬಿ. ಕದಂ,

ಬೀಡಿ ಮತ್ತು ತಂಬಾಕು ಜರ್ದಾ ದುಕಾನ,

ಮು॥ ಪೋ॥ ನಿಪ್ಪಾಣಿ, ಜಿ. ಬೆಳಗಾಂವ

"ಚಾಟಾನೂಗಾ" ಕಬ್ಬಿನ ಗಾಣ!

ಜಗತ್ತಿನಲ್ಲಿ ಸರ್ವೋತ್ಕೃಷ್ಟವೆಂದೇ ಇದು ಇಷ್ಟು ಪ್ರಖ್ಯಾತಿ ಹೊಂದಿತು!



[illegible]

ಇದರ ರೋಲುಗಳು ಶುದ್ಧ ಕಬ್ಬಿಣದಿಂದ ಮಾಡಿದ್ದಿರುತ್ತವೆ. ಕಬ್ಬಿನೊಳಗಿನ ಹನಿ ಹನಿ ರಸವನ್ನೂ ಹಿಂಡಿ ತೆಗೆಯುವ ವ್ಯವಸ್ಥೆ ಮಾಡಲಾಗಿರುತ್ತದೆ. ಗಾಣದ ಎರಡೂ ಬದಿಗಳ [illegible] ಬದಿಯಿಂದ ಕಬ್ಬು ಕೊಡಬಹುದು.

ಆರ್ಡರಿನ ಸಂಗಡಲೆ ಹಣವನ್ನು [illegible] ಕಳಿಸಬೇಕು.

[illegible] ಪುಕ್ಕಟೆ!

ಮೆಕ್‌ಬೆಥ್ ಬ್ರದರ್ಸ ಮತ್ತು ಕಂಪನಿ, ಲಿಮಿಟೆಡ್.

ಕೋಡಾಕ ಹೌಸ, ಹೊರ್ನಬಿ ರೋಡ, ಮುಂಬಯಿ.



ಏ ಂಟರು ಬೇಕು! ಏಜಂಟರು ಬೇಕು!!

ನಮ್ಮಲ್ಲಿ

ಅತಿ ಮನೋಹರವಾದ

ಶೀಶೆ ಕಟ್ಟಿಗೆಯ

ದೇವರ ಮಂಟಪಗಳೂ,

ಶೃಂಗಾರ ಸೌಭಾಗ್ಯವತಿ ಪೆಟ್ಟಿಗೆಗಳೂ, [illegible] ಪೆಟ್ಟಿಗೆಗಳೂ, [illegible] ಬಾಕ್ಸಗಳೂ, [illegible] ಮುಂತಾದವುಗಳೂ [illegible] ಸಿಗುತ್ತದೆ.

ನಮ್ಮ ವಿಳಾಸ —

ದಿ ನೋರ್ಥ ಕೆನರಾ ಟ್ರೇಡಿಂಗ ಕಂಪನಿ,

[illegible] ಭುವನ,

ಕಾರವಾರ.

धातू क्षीणता व कमजोरपणा यांसाठी

मदन मंजरी गोळ्या. (रजिस्टर्ड)

या दिव्य गोळ्या रक्त व वीर्य सुधारून त्यांची चांगली वाढ करतात. पचन शक्ति सुधरून परसाकडे साफ होते त्याप्रमाणे प्रत्येक प्रकारची अशक्तता दूर होऊन शरीर तेजदार व बळवान होते. किं ४० गोळ्यांच्या डबीस रु. १

रमण विलासिनी गोळ्या. रात्री फक्त १ गोळी दुधाबरोबर खाल्यानें इच्छेप्रमाणे वीर्यस्तंभन होते. किं. डबीस रु. १

नपुंसकत्वारी घृत. हा लेप पुरुषाच्या गुह्यभागावर लावला असतां सर्व रोग नाश पावून खरे पुरुषत्व प्राप्त होते. किं. डबीस रु. १.

कुमटा एजंट — माधव सांतप्पा शेणवी हेलेकेरी

राजवैद्य नारायणजी केशवजी वैद्य:— १९३ काळबादेवी रोड मुंबई २

ವಿವಿಧ ಸಂಗ್ರಹ.

೧|| ಆಣೆಯ ಬೆಳಕಿ;

೧೦,೦೦೦ ರೂಪಾಯಿಗಳ ದಾವೆ.

ಈ ಹೊತ್ತು ಮುಂಬಯಿಯ ಹೈಕೋರ್ಟಿನಲ್ಲಿ ನ್ಯಾಯಮೂರ್ತಿಗಳಾದ ಮಿರ್ಝಾರವರ ಮುಂದೆ ಒಂದು ವಿಲಕ್ಷಣ ದಾವೆಯು ವಿಚಾರವಾಗುವದು. ದಾವೆಯು ೧೦,೦೦೦ ರೂಪಾಯಿ ನುಕಸಾನಕ್ಕೆ ೧|| ಆಣೆಯ ಅಣುವಿನಿಂದ ೧೦,೦೦೦ ರೂಪಾಯಿಯ ದೊಡ್ಡ ಅಲದ ಮರವು ಹುಟ್ಟಿದೆ. ವಾದಿಯವರಾದ ರಾ|| ಕೇಸರಿಮಲ ರತನಚಂದರವರು ಮುಂಬಯಿಯ ಲ್ಲಿ ತೆಂಗಿನಕಾಯಿಯ ದೊಡ್ಡ ವ್ಯಾಪಾರಿಗಳು ರಾ|| ರಾಮದಾಸ ಹರಿದಾಸ ಇತ್ಯಾದಿ ಪ್ರತಿವಾದಿಗಳು 'ಕೋಕೋನಟ್ ಎಸೋಸಿಯೇಶನ್' ಎಂಬ ತೆಂಗಿನಕಾಯಿ ವ್ಯಾಪಾರಿ ಸಂಘದ ಸಭಾಸದರು ೧೯೨೫ ನೇ ಇಸ್ವಿಯ ಡಿಶಂಬರ ೫ನೇ ತಾರೀಖಿಗೆ ವಾದಿಯು ಎರಡನೇ ಪ್ರತಿವಾದಿಯಿಂದ ನಗದು ಹಣ ಕೊಡುವ ಕರಾರ ಮೇಲೆ ೫೧ ಚೀಲ ತೆಂಗಿನ ಕಾಯಿಗಳನ್ನು ಖರೇದಿ ಮಾಡಿದರು. ಖರೇದಿದಾರರ ಪೇಢಿಗೆ ಹೋಗಿ ಖರೇದಿಗೆ ಕೊಟ್ಟ ಮಾಲು ಹಣಾ ವಸೂಲು ಪಡೆಯುವ ದು ಪೇಢಿಯ ಪದ್ಧತಿಯು. ವ್ಯಾಪಾರಿಯು ೮ ದಿನಗಳಾದ ಬಳಿಕ, ಹಣ ತೆರದಿದ್ದರೆ, ೭ ದಿನಗಳ ವರೆಗೆ ಶೇಕಡಾ ೪ ರಂತೆ ಖರೇದಿಗೆ ಕೊಟ್ಟ ಮಾಲು ಖರೇದಿ ಹಣದ ಮೇಲೆ ಬಡ್ಡಿ ಪಡೆಯಲಿಕ್ಕೆ ಹಕ್ಕುದಾರನಾಗುತ್ತಾನೆ. ಅದೇ ದಿನವಾದ ಡಿಶಂಬರ ೧೩ನೇ ತಾರೀಖಿಗೆ ಎರಡನೇ ಪ್ರತಿವಾದಿಯು ವಾದಿಯ ಪೇಢಿಗೆ ರೂಢಿಯಂತೆ ಹಣ ಕೇಳಲಿಕ್ಕೆ ಹೋಗಲಿಲ್ಲನಾಗಿಯೂ, ಎರಡು ದಿನಗಳಾದ ಬಳಿಕ ಡಿಶಂಬರ ೧೫ನೇ ತಾರೀಖಿಗೆ ಹಣ ಕೇಳಿದನೆಂದೂ ವಾದಿರು ಎಲ್ಲ ಹಣವನ್ನು ವಸೂಲ ಕೊಟ್ಟು ಪಾವತಿ ಪಡೆದರೆಂದೂ ವಾದಿಯವರ ಹೇಳಿಕೆ. ಡಿಶಂಬರ ೧೭ನೇ ತಾರೀಖಿಗೆ ವಾದಿಯರಿಗೆ ಪೂರ್ವಸೂಚನೆ ಕೊಡದೆ, ಪ್ರತಿವಾದಿ ಸಂಘದವರು ತಮ್ಮ ಪಟದ ಮೇಲೆ ವಾದಿರು ಮಾಹಿನಂತೆ ಹಣ ಸಂದಾಯ ಮಾಡುವವರಲ್ಲವಾಗಿ ಪ್ರಕಟಿಸಿದರು. ಮತ್ತು ಇದರಿಂದ ಸಂಘದ ವ್ಯಾಪಾರಿಗಳಿಗೆ ವಾದಿಯೊಡನೆ ವ್ಯಾಪಾರ ಮಾಡಲು ಪ್ರತಿಬಂಧಿಸಿದರು. ವಾದಿಯು ಸತ್ಯಸ್ಥಿತಿಯನ್ನು ನಿವೇದಿಸಿದರೂ, ಪ್ರತಿವಾದಿರು ವಾದಿಯ ಹೆಸರನ್ನು ಬಾಕಿದಾರರ ಯಾದಿಯಲ್ಲಿ ಇನ್ನೂ ದಾಖಲು ಇಟ್ಟಿರುವರಾಗಿಯೂ ಎರಡು ದಿನ ತಡವಾಗಿ ಹಣಕೊಟ್ಟದ್ದರಿಂದ ಬಡ್ಡಿ ಕೊಡಲಿಕ್ಕೆ ಸಂಘದ ನೇಮಗಳಿಗನುಸಾರವಾಗಿ ವಾದಿಯರು ಬದ್ಧರೆಂಬಲೂ ಪ್ರತಿವಾದಿಯರ ಹೇಳಿಕೆಯು ಪ್ದು, ಬರೇ ದ್ವೇಷ ಬುದ್ಧಿಯಿಂದ ತಮ್ಮ ಹೆಸರನ್ನು ಬಾಕಿದಾರರ ಯಾದಿಯಲ್ಲಿ ಪ್ರಕಟಿಸಿ, ತಮ್ಮನ್ನು ಕಷ್ಟ-ನಷ್ಟಗಳಿಗೆ ಗುರಿಮಾಡಿದವರಿಂದ ಅಕುರಿತು ೧೦,೦೦೦ ರೂಪಾಯಿಗಳ ನು ಕೊಡಿಸಬೇಕಾಗಿಯೂ, ಇನ್ನು ಮುಂದೆ ವಾದಿಯ ಹೆಸರನ್ನು ಬಾಕಿದಾರರ ಯಾದಿಯಲ್ಲಿಡದಂತೆ ಪ್ರತಿವಾದಿಯರಿಗೆ ಪ್ರತಿಬಂಧಕ ಹುಕುಮಾಗಬೇಕೆಂದೂ ವಾದಿಯರು ದಾವೆ ಮಾಡಿದ್ದಕ್ಕೆ, ಪ್ರತಿವಾದಿಯರು ಸಂಘದ ನಿಯಮಗಳಂತೆ ಅನೇಕ ದಿನಕ್ಕೆ ಹಣ ಕೊಡದ್ದರಿಂದಲೂ, ಮಿಕ್ಕಿದ ೨ ದಿನಗಳ ಬಡ್ಡಿಯನ್ನು ಕೊಡದ್ದರಿಂದ ಅವರ ಹೆಸರನ್ನು ಸಂಘದ ನಿಯಮಗಳಿಗನುಸಾರವಾಗಿ ಬಾಕಿದಾರರ ಯಾದಿಯಲ್ಲಿ ದಾಖಲುಮಾಡಲಾಯಿತೆಂದೂ, ಡಿಶಂಬರ ೩೦ನೇ ತಾರೀಖಿಗೆ ಸಂಘದ ಎಲ್ಲ ಸಭಾಸದರ ಸಭೆ ಕೂಡಿತ್ತೆಂದೂ ಆ ಸಭೆಯಲ್ಲಿ ವಾದಿರು ಹಾಜರಿದ್ದರೆಂತಲೂ ಎಲ್ಲರ ಹೇಳಿಕೆ. ಕೇಳಿಕೊಂಡು ವಾದಿರು ೧|| ಆಣೆ ಬಡ್ಡಿ ಕೊಡಬೇಕೆಂದೂ, ಬಡ್ಡಿ ಕೊಟ್ಟರೆ ಅವರ ಹೆಸರನ್ನು ಬಾಕಿದಾರರ ಪಟದ ಮೇಲಿಂದ ತೆಗೆದು ಹಾಕಲ್ಪಡುವದೆಂದೂ ಪ್ರತಿವಾದಿಯರು ತಮ್ಮ ಕೈಫೀಯತಿನಲ್ಲಿ ಹೇಳಿರುವರು. ವಿಚಾರಣೆಯು ಇಂದು ನಡೆಯುವದಿದೆ. ಏನು ಕಾಯಿದೆಯ ಹುಚ್ಚ ನೋಡಿರಿ! ದುರಭಿಮಾನವನ್ನೂ ನೋಡಿರಿ! ಬಡ್ಡಿ ಕೊಟ್ಟರೆ, ಮಾನ ಹೋಗುವದೆಂದು ವಾದಿಗಾಬರಿ, ಬಡ್ಡಿ ಕೊಡ್ಡದೆ ಬಿಟ್ಟರೆ, ಸಂಘವು ಮುಳು

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ.

ಕಾಮಿನಿಯಾ ತೈಲ. ರಿಜಿಸ್ಟರ್ಡ

ಮೃದುವಾದ, ಗುಂಗುರು ಗುಂಗುರಾಗಿರುವ ನೀಲಿಮೆಯಿಂದ ನಿಬಿಡವಾದ ಕೇಶವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು? ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡಲಾದ ಉಪಕರಣವಾದರೋ.

ಕಾಮಿನಿಯಾ ಆಯಿಲ್ ರಿಜಿಸ್ಟರ್ಡ

ಈ ಆಯಿಲ್ ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುವದೋ ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅವಶ್ಯದ ಸಹಕಾರಿಯಾಗಿರುತ್ತದೆ. ಈ ಆಯಿಲ್ ತೊಡೆದುಕೊಳ್ಳುತಲೇ ಮಸ್ತಕದ ನೆಯ ತಗ್ಗಿ ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತದೆ. ಕೂದಲುಗಳು ಅದನ್ನು ಕೊಡೆಯ ತೊಡಗಿದ ಬಳಿಕ ಎಂದಿಗೂ ಜಗುಳಿ ಬಿದ್ದು ಹೋಗಲಾರವು, ಅದರೆ, ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು.

ಕೀಳು ತರದ ಎಣ್ಣೆಗಳನ್ನು ಕೊಂಡುಕೊಂಡು ತಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡಿಕೊಳ್ಳುವದಕ್ಕಿಂತ ಒಂದೇ ಒಂದು ಬಾರಿ "ಕಾಮಿನಿಯಾ ಆಯಿಲ್" ಉಪಯೋಗಿಸಿ ನೋಡಿರಿ. ಈ ಎಣ್ಣೆಯ ಶ್ರೇಷ್ಠತೆಯು ಬಹಳ ಮಟ್ಟಿಗೆ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಆಫ್ ಮೆರಿಟ್" ಅಥವಾ ಯೋಗ್ಯತಾಪತ್ರವು ಸಿಕ್ಕಿದೆ. ನಾವಿರು ಗೃಹಸ್ಥರು ಉಪಯೋಗಿಸಿದ ಪ್ರಶಂಸಾಪತ್ರಗಳೂ ದೊರೆತಿ.

ಕ್ರಯ:— ಸೀಸೆಗೆ ರೂಪಾಯಿ 1-0-0, ಸೀಸೆ 3ಕ್ಕೆ ರೂಪಾಯಿ 2-10 0 ಪ್ಯಾಕಿಂಗ ಮತ್ತು ಅಂಚೆ 0-14-0.

ಅತಿ ಮನೋಹರವಾದ ಸುರಭಿಯು!

ಒಟ್ಟೋ-ದಿಲ್ ಬಹಾರ್ !! (ರಿಜಿಸ್ಟರ್ಡ)

ಈ ಸುಗಂಧದ್ರವ್ಯವು ಮಧುರ, ಕೋಮಲ, ಚಿರಸ್ಥಾಯಿ ಮತ್ತು ಅತ್ಯುತ್ತಮವು ಎಂದಾಗಿ ಪರೀಕ್ಷಿಸಿ ಆರಿಸಿ ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧಮಾಡಿದ್ದು ಇದರಲ್ಲಿ ಮದಿರೆಯ (ಆಲ್ಕೊಹೋಲ್) ಅಂಶವೇ ಇಲ್ಲವು. ಒಂದೇ ಒಂದು ಸಲ ನಿಮ್ಮ ಕೈ ವಸ್ತ್ರದಲ್ಲಿ ಅಥವಾ ಅಂಗಿಯಲ್ಲಿ ಈ ದ್ರವ್ಯದ ಕೆಲವು ಹನಿಗಳನ್ನು ಹಚ್ಚಿದರೆ ನಿಮ್ಮ ಸುತಲು ಸ್ವರ್ಗೀಯವಾದ ಒಂದು ಪುಷ್ಪವಾಟಿಕೆಯು ಅರಳಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ, ಈ ಒಟ್ಟೋ-ದಿಲ್ ಬಹಾರದ ಗಂಧವು ಎಲ್ಲವುಗಳನ್ನು ವಿಶಾಲ ಮನಸ್ಸಿನ ಶಕ್ತಿಯಿಂದ ಸೆಳೆದುಕೊಳ್ಳುವುದು. ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ

ಸಣ್ಣ ಸೀಸೆ 1 ಕ್ಕೆ 0 8 0; 1 ಡ್ರಾಮಿನ (ಮಿಡಿಯಂ) ಸೀಸೆ 1 ಕ್ಕೆ 0 12 0; ½ ಔನ್ಸಿನ ದೊಡ್ಡ ಸೀಸೆ 1 ಕ್ಕೆ 2 0 0. ಅಂಚೆಯ ವೆಚ್ಚ ಬೇರೆ 0 4

ಒಟ್ಟೋ-ದಿಲ್ ಬಹಾರ್ ಪರಿಮಳ ಕಾರ್ಡುಗಳು ಡಜನ್ 1 ಕ್ಕೆ 0 12 0

Address: **The Anglo Indian Drug & Chemical Co**

16, Market, **BOMBAY**

...ಮು ಪ್ರತಿವಾದಿಯಾರ ಜೊತೆ! ಹೀಗೆ ಕೋರ್ಟಿನಲ್ಲಿ ಪ್ರಕರಣ ನಡೆದದೆ.

***

ಇದೇ ನಿರಂಕುಶ ಕಾರಭಾರ.

ಹೈದರಾಬಾದದ ನಿಜಾಮ ಸಾಹೇಬರ ನಿರಂಕುಶ ಕಾರಭಾರದ ಒಂದು ಹಕೀಕತು ಮದ್ರಾಸ ಹೈಕೋರ್ಟಿನಲ್ಲಿ ಅನಪೇಕ್ಷಿತವಾಗಿ ಹೊರಬಿದ್ದಿದೆ. ಬಿಕಾನೇರದ ಸೇಟ ಚಂದುಮಲ ದ ಡಾ, ಸಿ. ಐ. ಈ. ...ನವರ ಹಿರಿಯರೊಬ್ಬರು ೧೮೮೮ನೇ ಇಸ್ವಿಯಲ್ಲಿ ಹೈದರಾಬಾದದ ನವಾಬರೊಬ್ಬರಿಂದ ಪ್ರೊ.ನೋಟ್ಟನ್ನು ... ನವರ ಹಿರಿಯರ ಮೇಲೆ ಹೈದರಾಬಾದದ ಕೋರ್ಟಿನಲ್ಲಿ ೫ ಲಕ್ಷ ೪೦ ಸಾವಿರ ರೂಪಾಯಿಗಳಿಗೆ ದಾವೆ ಮಾಡಿದ್ದರು ... ಸ್ಟ್ಯಾಂಪು ಕೊಡದೆ ೧೮೮೮ನೇ ಇಸ್ವಿಯಲ್ಲಿ ದಾವೆಯು ಕಿತ್ತುಹೋಯಿತು. ೧೯೧೧ನೇ ಇಸ್ವಿಯಲ್ಲಿ ... ೧೮೮೮ನೇ ಇಸ್ವಿಯ ದಾವೆಯ ವಾದಿಯ ವಾರಸದಾರರಾದ ಸೇಟ ಚಂದುಮಲರವರು ಎಜ್ಯುಕ್ಟರ... ಆ ದಾವೆಯನ್ನು ಈಗ ಪುನರ್ವಿಚಾರ ಮಾಡಬೇಕೆಂದ ನಿಜಾಮರ ಸಾಹೇಬರಿಗೆ ಅರ್ಜಿಮಾಡಿಕೊಂಡರು. ಅವಧಿಯ ಚೌಕಶಿ ಕೂಡ ಮಾಡದೆ, ನಿಜಾಮ ಸಾಹೇಬರು ಇಬ್ಬ ನ್ಯಾಯಮೂರ್ತಿಗಳನ್ನು, ನ್ಯಾಯಾ... ಹಾಗು ಔದ್ಯೋಗಿಕ ಖಾತೆಯ ಮಂತ್ರಿಗಳನ್ನು ದಾವೆಯ ಚೌಕಶಿ ಮಾಡಲು ಕಮಿಶನಿನ ಮೂಲಕ ನೇಮಿಸಿದರು. ಇಷ್ಟು ಉತ್ಸಾಹದಿಂದ ನಿಜಾಮ ಸಾಹೇಬರು ನೇಮಿಸಿದ ತ್ರಿಮೂರ್ತಿಗಳು ದಾವೆಯಂತೆ ಡಿಕ್ರಿ ಮಾಡಬೇಕೆಂದು ಅಭಿಪ್ರಾಯಕೊಟ್ಟರು. ನಿಜಾಮರವರು ಇನ್ನೊಂದು ಫರ್ಮಾನು ಹೊರಡಿಸಿ ಡಿಕ್ರಿ ಮಾಡಿದರು. ಅಷ್ಟರಲ್ಲಿ ಪ್ರತಿವಾದಿಯು ಮದ್ರಾಸದಲ್ಲಿ ಬಂದುಳಿದನು. ಬ್ರಿಟಿಶ ಕಾಯಿದೆಯಂತೆ ಮದ್ರಾಸ ಕೋರ್ಟಿನಲ್ಲಿ ನಿಜಾಮ ಸಾಹೇಬರ ಡಿಕ್ರಿಯ ಮೇಲೆ ದಾವೆ ದಾಖಲಾಯಿತು. ಪ್ರತಿವಾದಿಯು ಮದ್ರಾಸ ಪಟ್ಟಣದೊಳಗಿಂದ ವಾದಿಗೆ ಮೋಸಮಾಡುವ ದುರಾಲೋಚನೆಯಿಂದ ಓಡಿಹೋಗುವ ಸಂಭವವಿದೆಂದು ವಾದಿಯು ಸಾಧಿಸಿ ಪ್ರತಿವಾದಿಯ ಮೇಲೆ ಕಚ್ಚಾ ದಸ್ತಗಿರಿ ವಾರಂಟನ್ನು ಹೊರಡಿಸಿದ.... ಈ ಕುರಿತು ಮದ್ರಾಸ ಹೈಕೋರ್ಟಿನಲ್ಲಿ ... ನ್ಯಾಯಾಧೀಶರು ತರ್ಕಗಳನ್ನೆಲ್ಲ ಕೇಳಿಕೊಂಡು, ದಾವೆಯನ್ನು ಸಕ್ಕನೆ ಪಟದ ಮೇಲಿಂದ ಕಿತ್ತೊಗೆದರು. ಅವಧಿಯ ಕಾಯಿದೆಯ ಸಂರಕ್ಷಣವು ಸಮಸ್ತ ಪ್ರಜೆಗಳಿಗೆ ಸಿಗಬೇಕು; ಅದನ್ನು ಉಲ್ಲಂಘನ ಮಾಡಿದ ತೀರ್ಪು ನ್ಯಾಯಕ್ಕೆ ವಿರೋಧವು. ಇಂಥ ತೀರ್ಪುಗಳನ್ನು ಮನ್ನಿಸಲು ಬ್ರಿಟಿಶ ಕೋರ್ಟುಗಳು ಬದ್ಧವಾಗಿರುವದಿಲ್ಲ. ನಿಜಾಮ ಸಾಹೇಬರು ಛಿಟಿಸಿದ ನ್ಯಾಯಕೋರ್ಟು ಮೂಲ ನ್ಯಾಯತತ್ವಗಳಿಗೆ ವಿರೋಧವಾದ್ದರಿಂದೆ ಹೈದರಾಬಾದದೊಳಗಿನ ಸಂಸ್ಥಾನದ ಕಾಯಿದೆಯಂತೆ ನಿಜಾಮರು ತೀರ್ಪು ಮಾಡಿದ್ದರಿಂದ ಅದನ್ನು ಬ್ರಿಟಿಶ ಕೋರ್ಟು ಮನ್ನಿಸಬೇಕೆಂಬ ಬೆರಿಸ್ಟರ ನ್ಯೂಜೆಂಟ ಗ್ರಾಂಟರವರ ತರ್ಕಗಳು ವಿಫಲವಾದವು. ನ್ಯಾಯಮೂರ್ತಿಗಳು ಉದ್ಗರಿಸಿದ್ದೇನಂದರೆ:—"ಈ ಪ್ರಕಾರವು ಹೈದರಾಬಾದದಲ್ಲಿ ನ್ಯಾಯವಾಗಿರಬಹುದು; ಆದರೆ, ಪ್ರಜೆಗಳ ಹಕ್ಕಿಗೆ ಇಂಥ ಪ್ರಕಾರಗಳಿಂದ ಬಾಧಕ ಬರುತ್ತಿದ್ದರೆ, ಅದನ್ನು ಕಿತ್ತೊಗೆಯುವ ಅಧಿಕಾರವು ಕಾಯಿದೆಯಿಂದ ನನಗಿರುವದು." ನ್ಯಾಯಮೂರ್ತಿಗಳ ನ್ಯಾಯನಿಷ್ಠೆಯನ್ನು ನೋಡಿ ಎಲ್ಲರಿಗೂ ಆನಂದವಾಗುವದು. ಹಿಂದುಸ್ಥಾನದಲ್ಲಿ ಮೂಲ ನ್ಯಾಯತತ್ವಗಳಿಗೆ ವಿರುದ್ಧವಾಗಿ ನಡೆಯುವ ಅಪಕೃತ್ಯಗಳನ್ನೂ ಇಂಥ ನ್ಯಾಯಮೂರ್ತಿಗಳ ಕಡೆಗೆ ಒಯ್ದು ಇತ್ಯರ್ಥ ಮಾಡಿಕೊಳ್ಳುವ ಪ್ರಯೋಗವನ್ನು ಕಾಯಿದೆ ಪಂಡಿತರು ಮಾಡಿ ನೋಡಬಹುದು.

— ಮುಂಬಯಿ ಜೈಲಿನಲ್ಲಿ ಬಂಗಾಲದ ಹಟ್ಯಾಕಾಳೆಯು ಕಾನೂನಿಗೆ ಉತ್ತರ ಶ್ರೀ। ಸುಭಾಷಚಂದ್ರ ಬೋಸ ಇತ್ಯಾದಿ ಮಹನೀಯರು ಜೈಲಿನಲ್ಲಿ ಧರ್ಮಾಚಾರಕ್ಕೆ ಪ್ರತಿಬಂಧವಾದ್ದರಿಂದ ಉಪೋಷಣವನ್ನು ಕೈಕೊಂಡಿದ್ದರು. ಈ ಕುರಿತು ಮ್ಯಾ.ಕೌನ್ಸಿಲ ಅಲ್ಲಿಯವರು ಶ್ರೀ। ಭೋಸರ ಪರಿಚಯನ ಮಾತುಕಥೆ ನಡೆಸಿ, ಉಪೋಷಣವನ್ನು ತ್ಯಜಿಸಲು ಅವರ ಮನವೊಲಿಸಿದರು. ಜೈಲ ಅಧಿಕಾರಿಗಳ ವರ್ತನದ ಕುರಿತು ಕಲಕತ್ತೆಯಲ್ಲಿ ಹರತಾಳವು ಆಚರಿಸಲ್ಪಟ್ಟಿತು.

ಪ್ರಕಟನೆ.

ದಿ ಪೆಟ್ರಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರೆನ್ಸ ಕಂಪನಿ, ಬೆಂಗಳೂರ.

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೩೦ನೆಯ ಇಸ್ವಿ ಜನೇವರಿ ೩೧ನೆಯ ತಾರೀಖಿನ ದಿವಸ ಸಾಯಂಕಾಲ ೫-೩೦ ಘಂಟೆಗೆ ಈ ಕಂಪನಿಯ ಹೆಡ್ ಆಫೀಸಿನಲ್ಲಿ ನೂತನವಾಗಿ ಚುನಾಯಿಸಲ್ಪಟ್ಟ ಬೋರ್ಡ ಆಫ್ ಡಾಯರೆಕ್ಟರ್ಸ್ ಚೇರಮನ್ನರಾದ ರಾವಸಾಹೇಬ ಡಾ। ಕೆ. ಎಸ್ ಭ್ಯಾಸ್ಕರ L.R.C.P. M. R. C. S. ಇವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ಬಡ್ಡಿ ಮತ್ತು ವತೆ ಇಲ್ಲದೆ ೧೦೦೦ ರೂಪಾಯಿಗಳ ಸಾಲ ಪ್ರ ಪೊರೆಯಬೇಕೆಂದು ನಿರ್ಣಯವಾಯಿತು.

(೧)	ಬಾಂಡ ನಂಬರ ೫೬೦೦	ಮಿ। ವಿಠ್ಠಲ ಜಿವಾಜಿ ಸೇಟ್ ಕಲಾನ್ ಆಲಿಬಾಗ ಮುಂಬೈ ...	೧೦೦೦
(೨)	ಬಾಂಡ ನಂ। ೧೩೬೦೬	ಮಿ। ರಂಗಪ್ಪ ಕ್ಯಾಸಭೋಗೆ ಹುಲಿಕುಂಟೆ, ಪೋಸ್ಟ ಸಿರಾ, ತಾಲೂಕ ಸಿರಾ, ಜಿಲ್ಲಾ ತುಮಕೂರ. ...	೧೦೦೦
(೩)	ಬಾಂಡ ನಂ। ೧೧೯೯೬	ಮಿ। ವೆಂಕಟರಮಣ ವೆಂಕಟರಮಣ ಹೆಗಡೆ, ಕೇತ್ಕರಿ, ಬೆಬ್ಬನಾಕೇರಿ, ಹೊನ್ನಾವರ ಪೊ॥ (ನಾರ್ಥ ಕ್ಯಾನರಾ) ಜಿಲ್ಲಾ. ...	೧೦೦೦
(೪)	C. " ೧೨೭೭೩	ಮಿ। ಜಿ. ವೆಂಕಟಪ್ಪ ಮರ್ಚಂಟ ಮತ್ತು ಜಮೀನದಾರ. ಕ್ರಿಸಪೇಟ, ಬಳ್ಳಾರಿ.	೧೦೦೦
(೫)	" ೭೩೦	ಮಿ। ರಾಮಚಂದ್ರ ವಾಮನ್ ಕಾಂಡೇಕರ c/o ಕಾಲೂಸ್ಕರ ಸಾಹಾ, ಪ್ಯಾಲೇಸ ರೋಡ, (ಬರೋಡಾ.)	೧೦೦೦
(೬)	" ೧೮೪೦	ಮಿ। ಆರ್. ಎಚ್ ನಾಟೇಶನ್, ಮಾಸ್ತರ, ಗವರ್ನಮೆಂಟ ಸಿಟಿ ಹಾಯಿಸ್ಕೂಲ, ಹೈದರಾಬಾದ (ಡೆಕ್ಕನ.)	೧೦೦೦

ಬಿ. ಎನ್. ಅರಾಧ್ಯ.

ಮುಂಬಯಿ ಇಲಾಖೆಯ, ಚೀಫ್ ಏಜಂಟ, ಹುಬ್ಬಳ್ಳಿ.

ಅತ್ಯದ್ಭುತ! ಅಮೇರಿಕಾ ಖಂಡದ ಅತ್ಯದ್ಭುತ!!

ಪ್ರಸಿದ್ಧ ಡಾಕ್ಟರನೊಬ್ಬನು ಕಂಡು ಹಿಡಿದ ಸಿದ್ಧೌಷಧೆ

ಸರ್ವರೋಗ ನಿವಾರಣೆಯಾಗುವ ಸಂಜೀವನೌಷಧವನ್ನು ಕಂಡು ಹಿಡಿಯುವದಕ್ಕಾಗಿ ಅಮೇರಿಕಾ ಖಂಡದ ಪ್ರಖ್ಯಾತ ಡಾಕ್ಟರನೊಬ್ಬನು ಅನೇಕ ವರ್ಷಗಳಿಂದ ಬಹು ಧನ ನಷ್ಟ ಮಾಡಿಕೊಂಡು ಪರಿಶೋಧನೆಗಳನ್ನು ಮಾಡಿ ಕೊನೆಗೆ

ಎಲಿಕ್ಸಿರ್ ಆಫ್ ಲೈಫ್

ಅಥವಾ

ಜೀವನಾಧಾರ

ಎಂಬ ಔಷಧವನ್ನು ಸಿದ್ಧಗೊಳಿಸಿರುವನು. ಅನುಭವಿಗಳಿಂದ ಅನೇಕ ರೋಗಗಳಿಗೆ ಎಂದರೆ, ಅಗ್ನಿಮಾಂದ್ಯ, ಅಜೀರ್ಣ, ಹೊಟ್ಟೆ ಅಥವಾ ತಲೆ ಭಾರವಾಗಿರುವದು, ಅತಿಸಾರ, ವಾಂತಿ, ಭೇದಿ ಅಥವಾ ಕಾಲರಾ, ತಲೆನೋವು, ನೆಗಡಿ, ಮಲೇರಿಯಾ ಜ್ವರ, ಇತರ ವಿವಿಧವಾದ ಜ್ವರಗಳು, ಮಾನಸಿಕ ದೌರ್ಬಲ್ಯ, ಕಣ್ಣು ಮತ್ತು ಕಿವಿ ನೋವು, ಮಲಬದ್ಧತೆ, ನಾಯಿಕೆಮ್ಮು, ಸ್ತ್ರೀವ್ಯಾಧಿ ಮುಂತಾದ ಎಲ್ಲಾ ಬಗೆಯ ಸಾಂಕ್ರಾಮಿಕ ರೋಗಗಳಿಗೆ, (ಇನ್‌ಫ್ಲೂಯೆಂಜಾ, ಪ್ಲೇಗ,) ಹಾವು, ಚೇಳು, ಮುಂತಾದ ವಿಷ ಜಂತುಗಳ ಕಡಿತಕ್ಕೆ, ಬಾಲಗ್ರಹ ಇವೇ ಮುಂತಾದುವುಗಳಿಗೆ ಈ ಜೀವನಾಧಾರವನ್ನು ಕೊಟ್ಟು ಗುಣಪಡಿಸಿರುತ್ತಾನೆ. ಊರಲ್ಲಿ ಸಾಂಸರ್ಗಿಕ ರೋಗವಿರುವಾಗ ಅಥವಾ ಅಲ್ಲ ಪ್ರವಾಸದಲ್ಲಿ ಉಪಯೋಗಿಸುತ್ತಿದ್ದರೆ ಯಾವ ರೋಗವೂ ಅಂಟುವದಿಲ್ಲ. ಈ ಜೀವನಾಧಾರವೆಂಬ

ಸಂಜೀವನೌಷಧೆ

ಒಂದು ಸೀಸೆಯು ಪ್ರತಿ ಮನೆಯಲ್ಲಿ ಅಥವಾ ಪ್ರತಿ ಒಬ್ಬನ ಜೇಬಿನಲ್ಲಿದ್ದರೆ ಅನುಭವಸ್ಥನಾದ ಡಾಕ್ಟರನೊಬ್ಬನು ಹತ್ತಿರವಿದ್ದಂತೆಯೇ. ಡಾಕ್ಟರರಿಗೆ ಕೊಡಬೇಕಾದ ಫೀಜುಗಳನ್ನು ಈ "ಜೀವನಾಧಾರ"ವೆಂಬ ಡಾಕ್ಟರರಿಗೆ ಕೊಡಬೇಕಾದ್ದಿಲ್ಲ. ಸೀಸೆ ಒಂದಕ್ಕೆ ರೂ. ೧-೮-೦ ಟಪಾಲು ಖರ್ಚು ಪಗೈರೆ ಅಲಾಯಿದಾ ಬೀಳುವದು.

ಜೀವನಾಧಾರ ಡಿಪೋ,
ಮೈಸೂರು.

ಬ್ರಾಂಚ:- **ಜೀವನಾಧಾರ ಡಿಪೋ,**
ಹುಬ್ಬಳ್ಳಿ.

ಕಾನಡಾವೃತ್ತ.

ಮಿತಿ ಕ್ರೋಧನ ಸಂ। ಫಾಲ್ಗುಣ ವ। ೯ಮಿ, ಸೋಮವಾರ

ಕೌನ್ಸಿಲುತ್ಯಾಗ.

ಸ್ವರಾಜ್ಯಪಕ್ಷದವರ ರಾಜ್ಯಧೋರಣ

ಕಾನಪುರದ ರಾಷ್ಟ್ರೀಯ ಸಭೆಯು ಕೌನ್ಸಿಲುಗಳಲ್ಲಿ ಪ್ರವೇಶಗೈದ ರಾಷ್ಟ್ರೀಯ ಸಭಾಭಿಮಾನಿಗಳಿಗೆ ವಿಧಿಸೋಣಾದಂತೆ. ಫೆಬ್ರುವರಿ ತಿಂಗಳು ದಾಟಿಹೋದರೂ ಸರಕಾರವು ಇನ್ನೂ ಅನುತಾಪವನ್ನು ಪ್ರದರ್ಶಿಸದೆ, ನಿರಂಕುಶ ಕಾರಭಾರವನ್ನು ಹಿಂದಿನ ಸಂಚಿಕೆಯಿಂದ ಮುಂದರಿಸಿದೆ. ರಾಜ್ಯಪದ್ಧತಿಯನ್ನು ತಿದ್ದುವ ಯಾವದೇ ಉಪಾಯವನ್ನು ಸರಕಾರವು ಜಾಹೀರು ಮಾಡದ ಮೂಲಕ, ಪಂಡಿತ ಮೋತಿಲಾಲ ನೆಹರೂರವರ ನೇತೃತ್ವದಲ್ಲಿ ಸ್ವರಾಜ್ಯ ಪಕ್ಷದವರು ಕಾನಪುರದ ರಾಷ್ಟ್ರೀಯ ಸಭೆಯಲ್ಲಿ ನಿರ್ಣಯಿಸಿದಂತೆ, ಕಾಯಿದೆ ಕೌನ್ಸಿಲುಗಳೊಳಗಿಂದ ಹಿಂಜರಿಯುವ ನಿರ್ಧಾರವನ್ನು ಕೈಕೊಂಡಿರುವರು. ಈಹೊತ್ತು ವರಿಷ್ಠ ಕಾಯಿದೆ ಕೌನ್ಸಿಲಿನೊಳಗಿನ ಸಭೆಯಲ್ಲಿ ಸ್ವರಾಜ್ಯ ಪಕ್ಷದ ನಾಯಕರಾದ ಪಂಡಿತ ಮೋತಿಲಾಲ ನೆಹರೂರವರು ತಮ್ಮ ಕೌನ್ಸಿಲುತ್ಯಾಗದ ಉಪಾಯದ ಕುರಿತು ತಕ್ಕ ಉಪನ್ಯಾಸವನ್ನೂ ಮಾಡುವರಾಗಿ ತಿಳಿದು ಬರುತ್ತಿದೆ.

ಸ್ವರಾಜ ಪಕ್ಷದ ಕೌನ್ಸಿಲು ರಾಜಕಾರಣವನ್ನು ಪರಿಶೀಲಿಸಿದರೆ, ಒಂದೆರಡು ವಿಚಾರಗಳು ಸೂಚಿಸುವವು. ಸ್ವರಾಜ್ಯ ಪಕ್ಷದ ಮಾನ್ಯ ಲೋಕನಾಯಕರು ರಾಜ್ಯಧೋರಣದ ಕುರಿತು ಎಷ್ಟೋ ಬಿಕ್ಕತ್ತಿ ಭಾಷಣ ಮಾಡಿದಾಗ್ಯೂ, ಆ ಕುರಿತ ಯುಕ್ತಿವಾದಗಳನ್ನು ಹೂಡಿದಾಗ್ಯೂ, ಸರಕಾರವು, ತಾನು ಹಿಡಿದ ಮೊಲಕ್ಕೆ ಮೂರೇ ಕಾಲು ಎಂಬ ರಾಜ್ಯಸೂತ್ರಗಳನ್ನು ನಡಿಸುತ್ತಿದೆ. ಸ್ವರಾಜ್ಯ ಪಕ್ಷವು ಪ್ರಾಣಪ್ರತಿಷ್ಠೆಯಾದ ಬಳಿಕ, ಸ್ವತಂತ್ರರು ತಮ್ಮದೊಂದು ಸ್ವತಂತ್ರ ಪಕ್ಷವನ್ನು ನಿರ್ಮಿಸಿ, ಸ್ವರಾಜ್ಯ ಪಕ್ಷಕ್ಕೆ ಕೊರಳಿಗೆ ಕಟ್ಟಿದ ಕುಂಟೆಯಂತೆ ಬಳಸತೊಡಗಿದರು. ಪಂಡಿತ ಮೋತೀಲಾಲ ನೆಹರೂರವರು ಸ್ವಾಭಿಮಾನ ಪಾಲನ ಮಾಡಿಕೊಂಡು ಸ್ವಪಕ್ಷದ ತತ್ವಭಂಗ ಮಾಡದೆ, ಸ್ವತಂತ್ರರೊಡನೆ ಸಾಹಚರ್ಯ ಬೆಳೆಸಿದ ಯತ್ನಗಳು ಸಂಪೂರ್ಣವಾಗಿ ನಿರರ್ಥಕವಾದವೆಂದು ಹೇಳಬರದಿದ್ದಾಗ್ಯೂ, ಬಹುಮಟ್ಟಿಗೆ ಸಫಲವಾದವೆಂದೇ ಹೇಳಬೇಕು. ಸ್ವತಂತ್ರರು ಸ್ವರಾಜ್ಯವಾದಿಗಳಿಗೆ ಕೇವಲ ತಮ್ಮ ಸ್ವಾತಂತ್ರ್ಯವನ್ನು ಪ್ರದರ್ಶಿಸುವದಕ್ಕಾಗಿ ಸ್ವಪಕ್ಷಾಂಧರಾಗಿ ಸ್ವರಾಜ್ಯವಾದಿಗಳಿಗೆ ಅಗ್ಗಿ ಕೆಡವಿದ ಅನೇಕ ಉದಾಹರಣೆಗಳನ್ನು ಭಾರತೀಯರೆಲ್ಲರೂ ಅರಿತಿರುವರು. ಸ್ವತಂತ್ರರ ಮನವೊಲಿಕೆಗಾಗಿ ಸ್ವರಾಜ್ಯವಾದಿಗಳು ಮಾಡಿದ ಯತ್ನಗಳನ್ನೂ, ಸ್ವತಂತ್ರರು ಅವನ್ನು ಧಿಕ್ಕರಿಸಿದ ಹಕೀಕತನ್ನೂ ನೆನಿಸಿದರೆ, ಸ್ವತಂತ್ರರಂಥ ಸ್ವತಂತ್ರ ವಿಚಾರಿಗಳಿರುವ ವರೆಗೆ ಭರತ ಖಂಡದ ಸೌಭಾಗ್ಯವು ಎಂದೂ ಉದಯವಾಗಲಾರದೆಂದು ಸೂಜ್ಞರು ಹೇಳದಿರರು

ಈ ಸಮಯ ಪಂಡಿತ ಮೋತೀಲಾಲ ನೆಹರೂರವರು ಸ್ವತಂತ್ರರ ಸಾಹಚರ್ಯಕ್ಕಾಗಿ ಹೆಣಗಾಡಿದರೂ, ಸ್ವತಂತ್ರರ ಸ್ವತಂತ್ರ ವಿಚಾರಗಳಿಗೆ ಬಲಿಬೀಳದೆ ತಮ್ಮ ಪಕ್ಷದ ತತ್ವಗಳನ್ನು ಕಾಯ್ದುಕೊಂಡ ಬಗ್ಗೆ ನಮಗೆ ಸಂತೋಷವಾಗುತ್ತದೆ. ಕಾನಪೂರದ ರಾಷ್ಟ್ರೀಯ ಸಭೆಯ ತೀರ್ಮಾನಿನಂತೆ ಹಿಂದುಸ್ಥಾನ ಸರಕಾರವು ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ಸ್ವರಾಜ್ಯ—ಸ್ವತಂತ್ರರ ಸಹಕಾರದಿಂದ, ಸಪ್ಟಂಬರದಲ್ಲಿ ಮಂಜೂರಾದ ಠರಾವಿನಂತೆ, ರಾಜ್ಯಪದ್ಧತಿಯಲ್ಲಿ ತಿದ್ದುಪಾಟು ಮಾಡುವ ಸಂಕಲ್ಪವನ್ನು ಜಾಹೀರ ಮಾಡದಿದ್ದರೆ, ಸ್ವರಾಜ್ಯವಾದಿಗಳು ಸಮಸ್ತ ರಾಷ್ಟ್ರೀಯ ಸಭಾಭಿಮಾನಿಗಳು ಕೌನ್ಸಿಲುಗಳನ್ನು ತ್ಯಜಿಸಲು ಕರ್ತವ್ಯಬದ್ಧರಾಗಿರುವರು. ಸ್ವರಾಜ್ಯವಾದಿಗಳು ಸ್ವತಂತ್ರರ ಸಾಹಚರ್ಯದಿಂದ ರಾಷ್ಟ್ರಪುರುಷನ ಆಜ್ಞೆಯನ್ನು ಪಾಲಿಸಿ ರಾಷ್ಟ್ರಪುರುಷನಿಗೆ ಮಾಡಿದ ಧಿಕ್ಕಾರವನ್ನು ಪ್ರದರ್ಶಿಸಬೇಕೆಂದು ಯತ್ನಮಾಡಿದರು. ಇದು ವಿಚಾರಿ ಸ್ವತಂತ್ರರಿಗೆ ಮಾನ್ಯವಾಗಲಿಲ್ಲ. ಆದರೂ, ಪಂಡಿತ ಮೋತಿಲಾಲ ನೆಹರೂರವರು ರಾಷ್ಟ್ರಪುರುಷನ ನಿರ್ಧಾರದಂತೆ ಕಾಯಿದೆ ಕೌನ್ಸಿಲುಗಳನ್ನು ಬರಿದುಮಾಡಲು ತಯಾರಿಮಾಡಿರುವರು. ಪ್ರಾಂತಿಕ ಕಾಯಿದೆ ಕೌನ್ಸಿಲುಗಳೊಳಗಿನ ಸ್ವರಾಜ್ಯವಾದಿಗಳಿಗೂ ಇದೇ ಫರ್ಮಾನು ಹೊರಡಿಸಲ್ಪಡುವದು.

ಈ ಹೊತ್ತು ಸೋಮವಾರಕ್ಕೆ ನಡೆಯುವ ಚಮತ್ಕಾರದ ಮಾತು ಹಾಗಿರಲಿ; ಕಳೆದ ಗುರುವಾರಕ್ಕೆ ನಡೆದ ಪ್ರಸಂಗವನ್ನೊಂದು ವಾಚಕರು ಕೇಳಬೇಕು. ಸೋಮವಾರ ತಾರೀಖು ೧ ನೇಗೆ ಹಿಂದುಸ್ಥಾನ ಸರಕಾರದ ಕೋಶಮಂತ್ರಿಗಳಾದ ಸರ್ ಬೆಸಿಲ್ ಬ್ಲೆಕೆಟ್ಟರವರು ಹಿಂದುಸ್ಥಾನ ಸರಕಾರದ ಆಯ-ವ್ಯಯ ಪತ್ರಿಕೆಯನ್ನು ಸಾದರಪಡಿಸಿದರು. ಈ ವರುಷ ಹಿಂದುಸ್ಥಾನ ಸರಕಾರವು ಇನ್ನು ಹೊಸ ಕರಗೆಯನ್ನು ಹೇರುವದಿಲ್ಲ; ಹೊಸದಾಗಿ ಏರಿಸಿದ ಹಳೇ ಕರಗಳನ್ನೂ ತಗ್ಗಿಸುವದಿಲ್ಲ. ಕಾರ್ಡಿಗೆ ೩ ಬಿಲ್ಲಿ, ಕವ್ಹರಿಗೆ ೧ ಆಣೆ, ನಾವು ತೆರಲೇಬೇಕು, ಸೈನ್ಯ ಖರ್ಚು ಹಿಂದಿನ ವರುಷ ಅಂದಾಜು ಪತ್ರಿಕೆಯಲ್ಲಿ ಮಂಜೂರು ಮಾಡಿಕೊಂಡದ್ದಕ್ಕಿಂತ ೩ ಲಕ್ಷ ಹೆಚ್ಚಾಯಿತು; ಈ ವರುಷ ೫೪ ಕೋಟಿ, ೮೮ ಲಕ್ಷ ಸೈನ್ಯ ಖರ್ಚು ಬೇಕೆಂದು ಅಂದಾಜು ಪತ್ರಿಕೆಯಲ್ಲಿ ತೋರಿಸಲಾಗಿದೆ. ಕಳೆದ ವರುಷಕ್ಕಿಂತ ೧॥ ಕೋಟಿ ಕಡಿಮೆಯೆಂದು ತೋರಿದರೂ, ಈ ಖರ್ಚು ಸರಕಾರವು ನೇಮಿಸಿದ ಇಂಚಕೇಪ ಕಮೀಟಿಯ ಶಿಫಾರಸಿನ ರಕಮಿಗೆ ಮಿಕ್ಕಿರುವದು. ಇಂಚಕೇಪ ಕಮೀಟಿಯವರು ೫೦ ಕೋಟಿ ರೂಪಾಯಿಯೊಳಗೆ ಈ ಖರ್ಚನ್ನು ಬಿಗಿಹಿಡಿಯಬೇಕೆಂದು ಶಿಫಾರಸು ಮಾಡಿದರೂ, ಹಿಂದುಸ್ಥಾನ ಸರಕಾರವು ಅದಕ್ಕೊಪ್ಪಿಕೊಂಡರೂ, ಸೈನ್ಯ ಖರ್ಚೇನು ಕುಗ್ಗುವದಿಲ್ಲ. ಇಂಚಕೇಪ ಕಮೀಟಿಯವರಿಗೆ ಚೌಕಶಿ ಮಾಡಲಿಕ್ಕೆ ಕೊಟ್ಟ ಹಣವೊಂದು ಈ ಖರ್ಚಿಗೆ ಪುರವಣಿ. ಇರಲಿ. ಈ ಜಮಾಖರ್ಚಿನ ಪತ್ರಿಕೆಗಳ ಸ್ಥೂಲ ಸ್ವರೂಪವನ್ನೂ, ಸೂಕ್ಷ್ಮ ಸ್ವರೂಪವನ್ನೂ ಎಷ್ಟು ಚರ್ಚಿಸಿದರೂ, ಗೋಡೆ ಕೊಳೆದಷ್ಟು ಮಣ್ಣೇ ಮಣ್ಣು. ಸರಕಾರವೇನು ತಿದ್ದುವದಿಲ್ಲ; ನಮ್ಮ ದನಿ ಮಾತ್ರ ಬೀಳುತ್ತದೆ.

ಇಂಥ ಪ್ರಸಂಗದಲ್ಲಿ ಆಯ-ವ್ಯಯ ಪತ್ರಿಕೆಯನ್ನು ಚರ್ಚಿಸಿ ಫಲವೇನು! ಗುರುವಾರ, ಶುಕ್ರವಾರ ಈ ಎರಡು ದಿನ ಜಮಾಖರ್ಚಿನ ಪತ್ರಿಕೆಯನ್ನು ಚರ್ಚಿಸಬೇಕೆಂದು ವರಿಷ್ಠ ಕಾಯಿದೆ ಕೌನ್ಸಿಲಿನ ಕಾರ್ಯಕ್ರಮವಿತ್ತು. ಸ್ವರಾಜ್ಯ ಪಕ್ಷದವರು ಮೌನವ್ರತ ಹಿಡಿದು ಸ್ತಬ್ಧರಾಗಿ ಕೂತುಕೊಂಡರು. ಸ್ವತಂತ್ರರು ತಮ್ಮ ಸಭೆ ಸೇರಿಸಿ, ಸ್ವರಾಜ್ಯ ಪಕ್ಷದವರು ತ್ಯಾಗಿಗಳಾದಾಗ, ತಮ್ಮಂಥ ಅಲ್ಪಸಂಖ್ಯಾಕರು ಯುಕ್ತಿವಾದ ಮಾಡುವದು ನಿರರ್ಥಕವೆಂದು ಗ್ರಹಿಸಿ ಸುಮ್ಮಗುಳಿದರು. ಇದರಿಂದ ಎರಡು ದಿವಸ ನಡೆಯಲಿಕ್ಕಿದ್ದ ಚರ್ಚೆಯು ೨-೨॥ ತಾಸಿನಲ್ಲಿ ಮುಗಿಯಿತು. ಇಂದು ಸೋಮವಾರಕ್ಕೆ ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ಸ್ವರಾಜ್ಯ-ಸ್ವತಂತ್ರರು ರಾಷ್ಟ್ರಪುರುಷನ ಸ್ವಾಭಿಮಾನಪಾಲನೆಕ್ಕಾಗಿ, ರಾಷ್ಟ್ರಪುರುಷನ ಬಂಧವಿಮೋಚನಕ್ಕಾಗಿ ಯಾವ ಯಾವ ಉಪಾಯಯೋಜನೆ ಮಾಡಲಿಕ್ಕಿದ್ದಾರೆಂದು ಜಾಹೀರಾಗುವದು. ಸ್ವತಂತ್ರರು ಸ್ವರಾಜ್ಯವಾದಿಗಳಿಗೆ ನೆರವಾದರೆ, ಹಾಲಿನಲ್ಲಿ ಸಕ್ಕರೆ ಬಿದ್ದಂತಾಗುವದೆಂದು ನಾವು ಹೇಳಬೇಕೇನು? ಕಳೆದ ಸಪ್ಟಂಬರದಲ್ಲಿ ಮಂಜೂರಾದ ನಿರ್ಣಯಕ್ಕೆ ಸ್ವತಂತ್ರರ ಬೆಂಬಲವಿದ್ದುದರಿಂದ ಈ ಸಮಯ ಸ್ವತಂತ್ರರು ನೆರವಾಗುವರು; ಸ್ವಾಭಿಮಾನವು ಸ್ವತಂತ್ರರ ವಿಚಾರವೇನಿರುವದೆಂದು ಇಂದಿಗೆ ಜಾಹೀರಾಗುವದು

— 'ಮುಂಬಯಿ ಕ್ರಾನಿಕಲ್' ಪತ್ರಿಕೆಯ ಸಂಪಾದಕ ಸ್ಥಾನವನ್ನು ಮಿ॥ ಬೆಂಜಾಮಿನ್ ಗಾಯ್ ಹೊರ್ನಿಮನ್ನರವರು ಸ್ವೀಕರಿಸುವರು. ಕಂಪನಿಯ ಡೈರೆಕ್ಟರರಿಗೂ ಮಿ॥ ಹೊರ್ನಿಮನ್ನರವರಿಗೂ ಪತ್ರಿಕೆಯ ಆಡಳಿತದ ಕುರಿತು ಮತಭೇದವಾದ್ದರಿಂದ ಮಿ॥ ಹೊರ್ನಿಮನ್ನರು ಪತ್ರಿಕೆಯನ್ನು ತ್ಯಜಿಸಬೇಕಾಯಿತು ಈಗ ಸಂಧಾನ ಮಾತುಕತೆ ನಡೆದಿದೆ.

ಸ್ಫುಟ ಸೂಚನೆಗಳು.

೧. ಹಿಂದುಸ್ಥಾನ ಸರಕಾರಕಕ್ಕೂ, ಜಪಾನರಾಷ್ಟ್ರಕ್ಕೂ ವ್ಯಾಪಾರದ ವಾಕಾರಣದಲ್ಲಿ ಯುದ್ಧವಾಗುವ ಚಿಹ್ನಗಳು ತಲೆದೋರುತ್ತಿವೆ. ನಮ್ಮ ಬ್ರಿಟಿಶ ಅರಸರು ಬ್ರಿಟಿಶ ವರ್ತಕರ ಹಿತ್ಲಕವಾಗುವಂತೆ ಸಮಾವಾಗಲೂ ಉಪಾಯಯೋಜನೆ ಮಾಡಬಯಸುತ್ತಾರೆ. ಜಪಾನದಿಂದ ಹಿಂದುಸ್ಥಾನಕ್ಕೆ ನೂಲು ಹಾಗು ಅರಿವೆಯು ಹೇರಳವಾಗಿ ಆಮದಾಗುತ್ತದೆ. ಇದೊಂದು ಬ್ರಿಟಿಶ ವರ್ತಕರಿಗೆ ದೊಡ್ಡದೊಂದು ತೊಂದರೆಯಾಗಿದೆ. ಇದರ ಪರಿಹಾರಕ್ಕಾಗಿ ಹಿಂದುಸ್ಥಾನ ಸರಕಾರವು ಜಪಾನದಿಂದ ಆಮದಾಗುವ ನೂಲು ಹಾಗು ಅರಿವೆ-ಅಂಚಡಿಗಳ ಮೇಲೆ ಕರಗಳನ್ನು ಹೇರುವ ಆಲೋಚನೆಯಲ್ಲಿದೆ. ಈ ಉಪಾಯದಿಂದ ಜಪಾನದ ಅರಿವೆ-ಅಂಚಡಿಗಳು ತುಟ್ಟಿ ಬೀಳುವವು; ಬ್ರಿಟಿಶ ವರ್ತಕರಿಗೆ ತಮ್ಮ ಸಾಮಗ್ರಿಗಳನ್ನು ಹಿಂದುಸ್ಥಾನದ ಪೇಟೆಗಳಲ್ಲಿ ಅಗ್ಗವಾಗಿ ಮಾರಾಟ ಮಾಡಲು ಅನುಕೂಲವಾಗುವದು.

---

೨. ಈ ತುಹಕಕ್ಕೆ ಜಪಾನದವರು ಇದಿರಾಗುವ ಪ್ರಕಾರ ನೋಡಿರಿ! ಹಿಂದುಸ್ಥಾನದಲ್ಲಿ ಹುಟ್ಟುವ ಅರಳೆಯಲ್ಲಿ ಸರಿಅರ್ಧದಷ್ಟು ಗಂಟುಗಳು ಜಪಾನ ದೇಶಕ್ಕೇ ಹೋಗುತ್ತವೆ. ಜಪಾನ ದೇಶದ ಸಾಮಗ್ರಿಗಳ ಮೇಲೆ ಹಿಂದುಸ್ಥಾನ ಸರಕಾರವು ಕೂಡ್ರಿಸುವ ತೆರಿಗೆಗಳಿಗೆ ಪ್ರತಿಯಾಗಿ, ಹಿಂದುಸ್ಥಾನದಿಂದ ಜಪಾನದೇಶಕ್ಕೆ ರಫ್ತಾಗುವ ಅರಳೆಯ ಮೇಲೆ ಅವರಿಗೆ ತೆರಿಗೆಗಳನ್ನು ಕೂಡ್ರಿಸಲಿಕ್ಕೂ ಉಪಾಯವಿಲ್ಲ. ಯಾಕೆಂದರೆ, ಜಪಾನ ದೇಶದಲ್ಲಿ ಗಿರಣಿಗಳಿಗೆ ಸಾಕಷ್ಟು ಅರಳೆಯನ್ನು ಇತರ ಕಡೆಗಳಿಂದ ಪ್ರಾಪ್ತಿಸಿಕೊಳ್ಳುವದು ಸಾಧ್ಯವಿಲ್ಲ. ಹಿಂದುಸ್ಥಾನದ ಅರಳೆಯ ಮೇಲೆ ಜಪಾನದವರು ತೆರಿಗೆಯನ್ನು ಕೂಡ್ರಿಸಿದರೆ, ಆ ತೆರಿಗೆ, ಮತ್ತು ಹಿಂದುಸ್ಥಾನದಲ್ಲಿ ಹೇರಲ್ಪಡುವ ತೆರಿಗೆ, ಹೀಗೆ ಎರಡು ತೆರಿಗೆಗಳಿಂದ ಜಪಾನದಲ್ಲಿ ತಯಾರಾಗುವ ಅರಿವೆಯು ಮತ್ತೂ ತುಟ್ಟಿಯಾಗುವದು. ಅದರಿಂದ ಚೀನ, ಮಂಚೂರಿಯಾ ಇತ್ಯಾದಿ ನೆರೆಹೊರೆಯ ಪ್ರದೇಶಗಳಲ್ಲಿ ತಯಾರಾಗುವ ಅರಳೆಯನ್ನು ಆದಷ್ಟು ಹೆಚ್ಚು ದರದಿಂದ ಜಪಾನದವರು ಖರೇದಿ ಮಾಡಿ, ಅರಳೆಯ ಬೆಳವಣಿಗೆಗೆ ಉತ್ತೇಜನ ಕೊಡುವರು. ಹೆಚ್ಚು ದರದಿಂದ ಖರೇದಿ ಮಾಡಿ ನಷ್ಟ ಹೊಂದಿದ ವರ್ತಕರಿಗೆ ಭರಪಾಯಿ ಮಾಡಲು ಹಿಂದು ನಿಧಿಯು ಏರ್ಪಾಟಾಗಿದೆ. ಹಿಂದುಸ್ಥಾನದ ಅರಳೆಯನ್ನು ಆದಷ್ಟು ಕಡಿಮೆ ದರದಿಂದ ಖರೇದಿ ಮಾಡಬೇಕಾಗಿಯೂ ಜಪಾನ ವರ್ತಕರ ಧೋರಣವಿದೆ. ಜಪಾನದವರು ಹಿಂದುಸ್ಥಾನದ ದೊಡ್ಡ ಅರಳೆ ಗಿರಾಕಿಗಳಾದ್ದರಿಂದ, ಅವರು ಅರಳೆ ಪೇಟೆಯೊಳಗಿಂದ ಮೈಕಿತ್ತುಕೊಂಡರೆ, ಅರಳೆಯ ದರವು ಶೇಕಡಾ ೩೦-೪೦ ರಷ್ಟು ಸಹ ಕುಗ್ಗುವದೆಂದು ಬಲ್ಲವರು ಹೇಳುತ್ತಾರೆ. ಅರಳೆಗೆ ಹೊಸ ಗಿರಾಕಿ ದೊರಕುವ ವರೆಗೆ ಜಪಾನದವರು ಹೇಳಿದಷ್ಟು ದರದಿಂದ ಹಿಂದುಸ್ಥಾನದವರು ಅರಳೆಯನ್ನು ಮಾರಬೇಕಾಗುವದು. ತೆರಿಗೆ ಹೇರುವದರಿಂದ ಆಗುವ ನಷ್ಟವು ದಳ ಇಳಿದು ತಾಗಬಹುದು. ಜಪಾನದವರು ಚೀನ, ಮಂಚೂರಿಯಾ ದೇಶಗಳಲ್ಲಿ ಅರಳೆಯ ಹುಟ್ಟುವಳಿ ಮಾಡಲು ನಿಧಿಯನ್ನು ಹುಟ್ಟುಗೊಳಿಸಿರುವರು. ನಮ್ಮ ಅರಸರ ಸ್ವಾರ್ಥಪರ ಯೋಜನೆಗೆ ಜಪಾನದವರು ಇದಿರಾಗುವ ಬಗೆಯಿದು!!

---

೩. ಹಿಂದುಸ್ಥಾನ ಸರಕಾರವು ಈ ಯೋಜನೆಯನ್ನು ಕೈಕೊಳ್ಳುವಾಗ, ಇದು ನಮ್ಮ ಹಿಂದುಸ್ಥಾನದೊಳಗಿನ ಗಿರಣಿಯವರ ಹಿತಕ್ಕಾಗಿ ಎಂದು ಜಾಹೀರುಪಡಿಸಿ, ಈ ಯೋಜನೆಗೆ ಗಿರಣಿ ಸಾವುಕಾರರ ಬೆಂಬಲವನ್ನು ಸಂಪಾದಿಸತೊಡಗಿರುವರು. ಹಿಂದುಸ್ಥಾನದ ಗಿರಣಿಗಳಲ್ಲಿ ತಯಾರಾಗುವ ಸಾಮಗ್ರಿಗಳ ಸಮೂನೆಗಳನ್ನೂ, ಜಪಾನದಿಂದ ಆಮದಾಗುವ ಸಮೂನೆಗಳನ್ನೂ, ವಿಲಾಯತಿಯಿಂದ ಬರುವ ಪ್ರಕಾರಗಳನ್ನೂ ವಿಚಾರಿಸಿದರೆ, ಅರಸರು ಜಪಾನದ ಅರಿವೆಗಳ ಮೇಲೆ ಹೇರುವ ತೆರಿಗೆಯು ಬ್ರಿಟಿಶ ವರ್ತಕರ ಉಪಕಾರಕ್ಕಾಗಿಯೇ ಎಂದು ಸ್ಪಷ್ಟವಾಗುತ್ತದೆ. ವಿಲಾಯತಿಯಿಂದ ಆಮದಾಗುವ ಮಾಲೂ, ಜಪಾನದಿಂದ ಬರುವ ಮಾಲೂ ಸಮಾನವಾಗಿ ಹಿಂದೇ ಪ್ರತಿಯವಿದ್ದು, ಜಪಾನದ ಮೇಲೆ ತೆರಿಗೆ ಹೇರುವದರಿಂದ ಬ್ರಿಟಿಶರಿಗೆ ಮಾತ್ರ ಲಾಭವಾಗಬೇಕಲ್ಲದೆ, ಹಿಂದೀ ಗಿರಣಿ ಸಾವುಕಾರರಿಗೆ ಲಾಭವೇನಿರುವದಿಲ್ಲ. ಹೀಗಿದ್ದು, ನಮ್ಮ ಗಿರಣಿ ಸಾವುಕಾರರು ಈ ಯೋಜನೆಯನ್ನು ಹೇಗೆ ಪುರಸ್ಕರಿಸಬಲ್ಲರೆಂದು ನಮಗೆ ತಿಳಿಯದ ಮಾತು. ಜಪಾನ ಹಾಗು ಬ್ರಿಟಿಶ ವರ್ತಕರ ಯಾದವಿಯಿಂದ ಅರಳೆ ಬಿತ್ತಿ ಬೆಳೆಸುವ ಭಾರತೀಯ ದೇಸಾಯಗಾರರಿಗೆ ಮಾತ್ರ ಕೊನೆಗೆ ನಷ್ಟ. ಜಪಾನದವರ ನಷ್ಟವು ಕುಗ್ಗಿದ ದರದಿಂದ ತುಂಬಿ ಬರುವದು; ಹಿಂದುಸ್ಥಾನ ಸರಕಾರಕ್ಕೆ ತೆರಿಗೆಯ ಹುಟ್ಟುವಳಿ ಸಿಗುವದು; ಬ್ರಿಟಿಶ ವರ್ತಕರು ತಮ್ಮಷ್ಟಕ್ಕೆ ಗಂಟುಕಟ್ಟಿಕೊಳ್ಳುವರು; ಯಾರ ಗೊಡವೆಗೂ ಹೋಗದೆ, ಅರಳೆ ಬಿತ್ತಿ ಬೆಳೆಸುವ ನಮ್ಮ ಬಡದೇಸಾಯಗಾರರಿಗೆ ಮಾತ್ರ ಕೊನೆಗೆ ನಷ್ಟ. ದ್ರೋಣಸಮರದಲ್ಲಿ ಬಡ ಪಿಂಡಾಟನಿಗೆ ಕೇಳುವವರಾರು?

---

೪. ಮುಂಬಯಿಯ ಕಾಯಿದೆ ಕೌನ್ಸಿಲಿನಲ್ಲಿ ಮಿ|ಜೇ. ಎಲ್. ರಯ್ಯರವರು ಮುಂಬಯಿ ಪ್ರಾಂತದೊಳಗಿನ ಯುರೋಪಿಯನ್ ಹುಡುಗರ ಶಿಕ್ಷಣಕ್ಕಾಗಿ ೭ ಲಕ್ಷ, ೮೩ ಸಾವಿರ ರೂಪಾಯಿಗಳನ್ನು ಬೇಡಲು, ಮಿ| ನರಿಮಾನ್‌ರವರು ಅವನ್ನು ೧೩ ಸಾವಿರ ರೂಪಾಯಿಗಳಿಂದ ತಗ್ಗಿಸಬೇಕೆಂದು ಸೂಚಿಸಿದರು. ಸೂಚನೆಯು ಬಹುಮತದಿಂದ ಬಿದ್ದುಹೋದರೂ, ಆ ಸಮಯ ನಡೆದ ಚರ್ಚೆಯು ಬೋಧಪ್ರದವಿದೆ. ಪ್ರಾಂತದೊಳಗಿನ ಹಿಂದೀ ವಿದ್ಯಾರ್ಥಿಗಳ ಪ್ರಾಥಮಿಕ, ಮಾಧ್ಯಮಿಕ ಹಾಗು ಉಚ್ಚ ಶಿಕ್ಷಣಗಳಿಗೆಲ್ಲ ಕೂಡಿ ಸರಕಾರವು ೧೯೨೩-೨೪ ನೇ ಇಸ್ವಿಯಲ್ಲಿ ರೂ. ೧೩೫೦,೨೯,೨೫೧ ನ್ನು ಖರ್ಚು ಮಾಡಿತು; ಅದೇ ವರುಷ ಯುರೋಪಿಯನ್ ಹುಡುಗರಿಗಾಗಿ ರೂಪಾಯಿ ೫,೩೪,೯೭೭ ಖರ್ಚಾದವು. ಆದರೆ, ಹಿಂದೀ ವಿದ್ಯಾರ್ಥಿಗಳಿಗಾಗಿ ಸರಕಾರವು ತಲೆಗೆ ೧೪ ಆಣೆಯಂತೆ ಖರ್ಚು ಮಾಡಿದರೆ, ಯುರೋಪಿಯನ್‌ರಿಗಾಗಿ ತಲೆಗೆ ೧೫ ರಿಂದ ೩೦ ರೂಪಾಯಿಗಳ ವರೆಗೆ ಖರ್ಚು ಮಾಡಿರುತ್ತದೆಂದು ತಿಳಿಯುವ ಹಾಗಿದೆ. ಈ ವರುಷ ಅವನ್ನು ಮತ್ತೂ ೧|| ಲಕ್ಷ ರೂಪಾಯಿಗಳಿಂದ ಸರಕಾರವು ಏರಿಸಲುದ್ಯುಕ್ತವಾಗಿರುವಾಗ ಮಿ|| ನರಿಮಾನರವರು ೧೩ ಸಾವಿರ ರೂಪಾಯಿಗಳನ್ನು ತಗ್ಗಿಸಹೇಳಿದರೆ, ಪ್ರಾಂತಿಕ ಕಾಯಿದೆ ಕೌನ್ಸಿಲು ಈ ರಕಮನ್ನು ಕಿತ್ತುಗೆದರೆ ಪ್ರಾಂತಾಧಿಪರು ಈ ರಕಮನ್ನು ಪುನರುದ್ಧರಿಸುವರೆಂದು ಪ್ರಾಂತಿಕ ಸರಕಾರದ ತರ್ಫೆಯಿಂದ ಸರ್ ಲೊರೆನ್ಸರವರು ಬೆದರಿಸಿದರು. ಪ್ರಾಂತಾಧಿಪರು ಹಾಗೆಯೇ ಮಾಡಿ ಮೊಂಟೆಗ್ಯೂ ಸ್ವರಾಜ್ಯದ ನಿಷ್ಫಲತೆಯನ್ನು ಪ್ರತ್ಯಕ್ಷವಾಗಿ ಸಿದ್ಧಗೊಳಿಸಬೇಕೆಂದು ಮಿ| ನರಿಮಾನರವರು ಆಹ್ವಾನ ಮಾಡಿದರು. ದುರ್ದೈವದಿಂದ ಉಪಸೂಚನೆಯು ಬಿದ್ದು ಹೋದದ್ದರಿಂದ ಈ ಪರೀಕ್ಷೆ ಮಾಡಲಿಕ್ಕೆ ಅನುಕೂಲವಾಗಲಿಲ್ಲ.

---

೫. ಇನ್ನೊಂದು ವಿಷಯವು ಈ ಚರ್ಚೆಯಲ್ಲಿ ಹೊರಬಿತ್ತು. ಹಿಂದೀ ದಿವಾಣರು ಹಿಂದೀ ಪ್ರಜೆಗಳ ಉಚ್ಚ ತರಗತಿಯ ಶಿಕ್ಷಣವನ್ನು ಕೈಕೊಳ್ಳಲಿಕ್ಕೆ ಅರ್ಹರಿದ್ದಾಗ, ಯುರೋಪಿಯನ್ ಹುಡುಗರ ಸಾಮಾನ್ಯ ಶಿಕ್ಷಣವನ್ನು ಸರಕಾರವು ಅವರ ಸ್ವಾಧೀನಪಡಿಸುವದಿಲ್ಲ. ಅಷ್ಟೇಕೆ?— ಕಾದಿಟ್ಟ ಖಾತೆಗಳಿಗೆ ನೇಮಿಸಿದ ಹಿಂದೀ ಸಭಾಸದರ ಸ್ವಾಧೀನಕ್ಕೂ ಯುರೋಪಿಯನ್ ಹುಡುಗರ ಶಿಕ್ಷಣ ದೊರಕುವದಿಲ್ಲ. ಇಷ್ಟು ವರ್ಣಭೇದವೇಕೆ? ಎಂದು ಪ್ರಶ್ನಿಸಿದರೆ, ಮೊಂಟೆಗ್ಯೂ ಸ್ವರಾಜ್ಯದ ಕಾಯಿದೆ, ಅದಕ್ಕೋಸ್ಕರವಷ್ಟು ಮಾಡಿದ ನಿಯಮಗಳು, ಭಾರತ ಮಂತ್ರಿಗಳ ಸಮ್ಮತಿ ಇತ್ಯಾದಿಗಳ ಕಡೆಗೆ ಬೊಟ್ಟು ತೋರಿಸಿ, ಪ್ರಾಂತಿಕ ಸರಕಾರವು ಬ್ರಿಟಿಶರ ವರ್ಣದ್ವೇಷವನ್ನು ಬಚ್ಚಿಡಲೆತ್ನಿಸಿತು. ಮೊಂಟೆಗ್ಯೂ 'ಸ್ವರಾಜ್ಯ' ಕಾಯಿದೆಯನ್ನು ಮಾಡಿದವರು ಬ್ರಿಟಿಶರೇ; ಅದಕ್ಕೋಸ್ಕರವಷ್ಟು ಆ ನಿಯಮಗಳಿಗಾದರೂ ಅವರೇ ಕಾರಣರು. ಹೀಗಿರುವಾಗ, ಅವುಗಳಿಗೆ ಬೊಟ್ಟು ತೋರಿಸಿ ಫಲವೇನು? ಇನ್ನೊಂದು ಹಾಸ್ಯಾಸ್ಪದ ಪ್ರಕಾರವು ಕೌನ್ಸಿಲಿನಲ್ಲಿ ತಿಳಿದುಬಂತು. ಪ್ರಾಂತಿಕ ಸರಕಾರದ ಗರ್ಭಾಗಾರದೊಳಗಿನ ಹಿಂದೀ ಸಭಾಸದರಿಗೆ ಕೆಲಸ ಬಹಳ. ಅವರಿಂದ ಯುರೋಪಿಯನ್‌ರ ಶಿಕ್ಷಣ ಖಾತೆಯನ್ನು ನಡಿಸಲಿಕ್ಕೆ ಹಿಂದೀ ಸಭಾಸದರಿಗೆ ಸಮಯವಿಲ್ಲ. ಹಿಂದೀ ಸಭಾಸದರ ಬಹಳ ಕೆಲಸದಿಂದ ಕೆಲವು ಕೆಲಸವನ್ನು ಯುರೋಪಿಯನ್ ಸಭಾಸದರು ತೆಗೆದುಕೊಂಡು, ಯುರೋಪಿಯನ್ ಹುಡುಗರ ಶಿಕ್ಷಣದ ಕೆಲಸವನ್ನು ಅವರಿಗೆ ವಹಿಸಲಿಕ್ಕೇನಡ್ಡಿಯಿದೆ? ಸಾವಿರ ಸುತ್ತು ಸುತ್ತಿದರೂ ಬೀಳುವದು ಒಂದೇ ಗಂಟು! ಬ್ರಿಟಿಶರಿಗೆ ತಮ್ಮ ಹುಡುಗರ ಶಿಕ್ಷಣವನ್ನು ಹಿಂದುಸ್ಥಾನದಲ್ಲಿ ಹಿಂದೀಯರು ನಡಿಸುವದು ಅಪಮಾನಾಸ್ಪದವೆಂದು ತೋರುತ್ತದೆ. ಯುರೋಪಿಯನ್ ಹುಡುಗರಿಗೆ ಹಿಂದೀ ಜನರ ಕುರಿತು ಅದರಭಾವವು ಉಂಟಾಗುವ ಸಂಭವವಿದೆ; ಅದಕ್ಕಾಗಿ ಮೊಂಟೆಗ್ಯೂ ಸ್ವರಾಜ್ಯವು ಯುರೋಪಿಯನ್‌ರ ಶಿಕ್ಷಣವನ್ನು ಕಾದಿಟ್ಟ ಖಾತೆಯಲ್ಲಿಯೇ ಸೇರಿಸಿತು. ಕಾದಿಟ್ಟ ಖಾತೆಗಳಲ್ಲಿಯೂ ಈ ಶಿಕ್ಷಣವು ಹಿಂದೀ ಜನರ ಕೈವಶವಾಗದಂತೆ, ಹಿಂದೀ ಸಭಾಸದರಿಗೆ ಬಹಳ ಕೆಲಸಕೊಟ್ಟು, ಯುರೋಪಿಯನ್ ಸಭಾಸದರಿಗೆ ಕಡಿಮೆ ಕೆಲಸ ಕೊಟ್ಟು ಯುರೋಪಿಯನ್‌ರ ಶಿಕ್ಷಣವು ಯುರೋಪಿಯನ್‌ರ ಕೈಯಲ್ಲಿಯೇ ಇರುವಂತೆ ಏರ್ಪಾಟಾಗಿದೆ! ತಮ್ಮ ವರ್ಣಶ್ರೇಷ್ಠತೆಯನ್ನು ಪಾಲಿಸಲು ಇಷ್ಟು ಚಕ್ರವ್ಯೂಹವು ರಚಿಸಲ್ಪಟ್ಟಾಗ, ಅಂಥ ರಾಜ್ಯಪದ್ಧತಿಯಲ್ಲಿ ಹಿಂದುಸ್ಥಾನದೊಳಗಿನ ವಿಚಾರಿ ಪುರುಷರೆಂದು ಮೆರೆಯುವವರು ಪ್ರವೇಶಗೊಳ್ಳುವದು ದೇಶದ ದುರ್ಭಾಗ್ಯವಲ್ಲವೇ?

[redacted]

೬. ೭೦ ವರ್ಷದ ಮುದುಕರೂ ವಕೀಲರಾದ ವೇರ್ಣಕಲ್ಲು ಶ್ರೀ ವಿಶ್ವೇಶ್ವರ ಗಣೇಶ ಹೆಗಡೆ, ಬಿ. ಎ., ಎಲ್. ಎಲ್. ಬಿ., ಯವರು ಕಳೆದ ಫೆಬ್ರುವರಿ ತಿಂಗಳ ೧೫ ನೇ ತಾರೀಖಿಗೆ ಕೈಲಾಸವಾಸಿಗಳಾದರೆಂದು ತಿಳಿಸಲು ವ್ಯಸನವಾಗುತ್ತದೆ. ಶ್ರೀ ಹೆಗಡೆಯವರು ವಿದ್ಯಾವ್ಯಾಸಂಗಿಗಳೂ, ಕಾಯಿದೆ ಪಂಡಿತರೂ, ಶೀಲವಂತರೂ, ಶಾಂತ ವೃತ್ತಿಯವರೂ ಆಗಿದ್ದರು. ಸಂಸ್ಕೃತ ಭಾಷೆಯಲ್ಲಿಯೂ ಶ್ರೀ ವಿಶ್ವೇಶ್ವರ ಹೆಗಡೆಯವರು ನಿಪುಣರೆಂದು ಖ್ಯಾತಿಗೊಂಡಿದ್ದರು. ಕರ್ನಾಟಕ ವಾಙ್ಮಯದಲ್ಲಿ ಇವರು ಬಹಳ ಪರಿಶ್ರಮ ಮಾಡಿದವರು. ವಿದ್ಯಾವ್ಯಾಸಂಗವೇ ಅವರಿಗೆ ಬಹಳ ಪ್ರಿಯವಾಗಿದ್ದದರಿಂದ, ಅದಕ್ಕಾಗಿ ಅವರು ಮಾಡಿದ ಪರಿಶ್ರಮದಿಂದಲೇ ಅವರ ಆರೋಗ್ಯವು ಕೆಟ್ಟು, ೬-೭ ವರ್ಷಗಳಿಂದ ಅವರು ಹಾಸಿಗೆ ಹಿಡಿದಿದ್ದರು. ಇಂಥ ಸತ್ಪುರುಷರು ಕಾಲಾಧೀನವಾದದ್ದಕ್ಕಾಗಿ ನಮ್ಮ ಉತ್ತರ ಕಾನಡಾ ಜಿಲ್ಲಾ ನಿವಾಸಿಗಳು ಮರುಗುತ್ತಾರೆ. ಕೈಲಾಸವಾಸಿಗಳಿಗೆ ಸದ್ಗತಿಯು ಪ್ರಾಪ್ತವಾಗಲೆಂದು ನಾವು ಬಯಸಿ, ಈ ಚಿಕ್ಕ ಲೇಖವನ್ನು ಮುಗಿಸುವೆವು.

ಸ್ಥಾನಿಕ ವೃತ್ತಾಂತ.

ಕುಮಟಾ— ತಕ. ಮಾಮವೆ-ಮಾಂಜರಗಳ ಗದ್ದಲ.

ಜಿಲ್ಲಾ ಲೋಕಲ್ ಬೋರ್ಡಿಗೆ ಮುಸಲ್ಮಾನರ ಕ್ಷೇತ್ರದಿಂದ ನಿಂತಿದ್ದ ದಿವಾನ್ ಹಸನ್ ಸಾಹೇಬ ಭಟಕಳರವರೂ, ಕುಮಟಾ ತಾಲೂಕಾ ಲೋಕಲ್‌ಬೋರ್ಡಿಗೆ ಮಿ| ಅಬಿದಿನ ಮ| ಇಬ್ರಾಹಿಮ ಸಾಹೇಬ ಕುಮಟಾರವರೂ ಪ್ರತಿಸ್ಪರ್ಧಿಗಳಿಲ್ಲದೆ ಆರಿಸಿ ಬಂದಿರುವರು.

ಕರ್ನಾಟಕ ಸಿನೆಮಾ ಕಂಪನಿಯವರು ಸಂತುಗಡ ಆಕಸ್ಮಿಕ ಲಗ್ನ ಇತ್ಯಾದಿ ಚಿತ್ರಪಟಗಳನ್ನು ತೋರಿಸಿ ಜನರ ಮನರಂಜನ ಮಾಡುತ್ತಿರುವರು.

ನಮ್ಮ ಮ್ಯುನಿಸಿಪಾಲಿಟಿಯು ದೀಪಗಳು ಗಗನ ಮಂಡಲದೊಳಗಿನ ಚಿಕ್ಕೆಗಳಂತೆ ಮಿನುಗುತ್ತವೆ. ಕೈಯಲ್ಲಿ ಕಂದೀಲಿದ್ದರೆ, ಬೆಳಕಿಗೆ ಅಡ್ಡಿಯಿಲ್ಲ.

ಸಾಭಾರ ಸ್ವೀಕಾರ.

ನಂದಿನೀ— ಮಾಸಪತ್ರಿಕೆ ಮಾಘ ಮಾಸದ ಸಂಚಿಕೆ. ಸಂಪಾದಕ - ಶ್ರೀ|| ನಾರಾಯಣ ಸುಬ್ರಹ್ಮಣ್ಯ ಶಾಸ್ತ್ರಿ, ಶ್ರೀ ಕ್ಷೇತ್ರ ಗೋಕರ್ಣ ವಾರ್ಷಿಕ ವರ್ಗಣಿ ಅಂಚೆವೆಚ್ಚ ಸೇರಿ ರೂಪಾಯಿ ೧-೦-೦.

ಲೋಕರಹಸ್ಯ— ದ್ವಿತೀಯ ವರ್ಷದ ಪ್ರಥಮ ಸಂಚಿಕೆ. ಸಂಪಾದಕ—ಶ್ರೀ|| ಕೇ ನಾರಾಯಣರಾವ, ವೀರರಾಜೇಂದ್ರಪೇಟೆ, ಕೊಡಗು ವಾರ್ಷಿಕ ವರ್ಗಣಿ ರೂಪಾಯಿ ೨-೮-೦

ತಾರಕೋದಯ— ಜಗದ್ಗುರು ಸೇವಾಸಮಾಜದ ಕರ್ನಾಟಕ ಶಾಖೆಯಿಂದ ಹೊರಡುವ ಮಾಸಪತ್ರಿಕೆ, ಸಂಪುಟ ೯, ಸಂಚಿಕೆ ೧. ಸಂಪಾದಕರು—ಶ್ರೀ. ಕೇ ವೆಂಕಟರಾಮಯ್ಯ ಬಸವನಗುಡಿ, ಬೆಂಗಳೂರು. ವಾರ್ಷಿಕ ವರ್ಗಣಿ ಅಂಚೆವೆಚ್ಚ ಸೇರಿ ರೂಪಾಯಿ ೧-೦-೦.

The Volunteer— Monthly. February issue, Edited and published by Dr N S Hardiker, at the "Voluteer" Office, Hubli. Annual subscription Rs. 1-8-0 only.

ಹೊನ್ನಾವರ— ವ್ಯಾಪಾರಸ್ಥರೊಬ್ಬರು ತಾ ೬-೩-೧೯೩೬ ನೇಗೆ ಪತ್ರ ಬರೆದು ತಿಳಿಸುವದೇನಂದರೆ.— ಗೇರುಸೊಪ್ಪೆ ವ್ಯಾಪಾರಿಗಳ ಕಳಸಿಯು ಪ್ರಸಿದ್ಧವಾಗಿದೆ ೬ ಕಳಸಿಗೆ ನಮ್ಮ ಊರ ಅಳತೆಯಿಂದ ೭೦ ಕೊಳಗ ಆಗಬೇಕು ; ಈಗ ೫೭-೫೮ ಆದರೆ, ನಮ್ಮ ಪುಣ್ಯ. ಹೀಗೆ ೬ ಕಳಸಿಯ ಬೆಲೆ ೧ಕ್ಕೆ ೫ ೩ ಕೊಳಗ ಧಾನ್ಯ ಕಡಿಮೆ ಬಂದರೆ, ವ್ಯಾಪಾರಸ್ಥರು ತಡೆಯುವ ಬಗೆ ಹೇಗೆ? ಕಳಸಿಯನ್ನು ಸರಿಪಡಿಸಿರೆಂದು ಗೇರುಸೊಪ್ಪೆಯ ವರ್ತಕರಿಗೆ ಪುನಃ ಪುನಃ ತಿಳಿಸಿದಾಗ್ಯೂ ಅವರು ಅದಕ್ಕೆ ಕಿವಿಗೊಡಲಿಕ್ಕಿಲ್ಲ, ಕೇವಲ ಸ್ವಾರ್ಥಾಂಧರಾಗುತ್ತಾರೆ ಮೇಲಧಿಕಾರಿಗಳು ಈ ಬಗ್ಗೆ ಕಾಳಜಿ ವಹಿಸಲಿ. ಕೈಕೊಂಡು ಸಮಗ್ರ ಕಾಯಬೇಕು ಗೇರುಸೊಪ್ಪೆಯಂತೆ ಉಪ್ಪಿನಪಟ್ಟಣ, ಕುಮಟಾ ಮುಂತಾದ ಬಂದರಗಳಲ್ಲಿಯೂ ಧಾನ್ಯದ ಸಾಮಾನು ಇಳಿಯುತ್ತದೆ, ಆದರೆ, ಅಲ್ಲಿ ಅಳತೆ ಮತ್ತು ತಕರಾರು ಕೇಳಿಬರುವದಿಲ್ಲ. ಇಲ್ಲಿ ಮಾತ್ರ ಕಳಸಿಗೆ ೭೦ ಕೊಳಗದ ಅಂದಾಜು ? ಹಿಂದೆ ತಕರಾರು ಆದಾಗ ಕಳಸಿಗಳು ಸರಿಯಾಗಿದ್ದವು ಸರಕಾರದ ಕಳಸಿಗಳಿಗೆ ಹೋಲಿಸಿ ನೋಡಿ ಈ ಮೋಸದ ವ್ಯವಹಾರವನ್ನು ನಿಲ್ಲಿಸಬೇಕೆಂದು ಇತ್ಯಾದಿ ಬರೆಯುತ್ತಾರೆ

ಬಿಣಗೆ— ಶ್ರೀ ರಘುನಾಥ ವಾಸುದೇವ ಕಾಮತ ಇವರು ತಾ ೪-೩-೧೯೩೬ನೇಗೆ ಪತ್ರ ಬರೆದು ತಿಳಿಸುವದೇನಂದರೆ—ಇಲ್ಲಿಯ ಶ್ರೀ ರಾಮಚಂದ್ರ ದೇವಸ್ಥಾನದ ಪ್ರತಿಷ್ಠೆಯ ಕುರಿತು ಕೆಲವು ಅಪಾರ್ಥದ ಹಕೀಕತು ಪ್ರಸಿದ್ಧವಾಗಿರುತ್ತದೆ. ಆ ಕುರಿತು ವಾಸ್ತವ ಸಂಗತಿಯೇನಂದರೆ ಕೈ| ವಾ| ಬಾಲಕೃಷ್ಣ ದೇಸಾಯಿಯವರು ಶ್ರೀ ರಾಮಚಂದ್ರ ದೇವಸ್ಥಾನದ ಪ್ರತಿಷ್ಠೆ ಮಾಡುವ ಉದ್ದೇಶದಿಂದ ೫೫ ವರ್ಷಗಳ ಹಿಂದೆ ಯಜ್ಞ ಹೋಮಾದಿಗಳ ವ್ಯವಸ್ಥೆ ಮಾಡುವ ತಯಾರಿ ಮಾಡಿದ್ದರು. ವಿಧಿಘಟನೆಯಿಂದ ದುರ್ದೈವದಿಂದ ಅಷ್ಟರಲ್ಲಿ ಶ್ರೀ ಬಾಲಕೃಷ್ಣ ದೇಸಾಯಿಯವರು ಕೈಲಾಸವಾಸಿಗಳಾದರು. ಕೈ| ವಾ| ಗಳಿಗೆ ಪುತ್ರಸಂತತಿಯಿಲ್ಲದ್ದರಿಂದ ಈ ಕಾರ್ಯವು ಹಾಗೆಯೇ ನಿಂತಿತ್ತು ಕೆಲ ಕಾಲವಾದ ಬಳಿಕ ಕೈ| ವಾ| ಗಳ ಧರ್ಮಪತ್ನಿಯರು ತಮ್ಮ ಮಗಳ ಮಗನನ್ನು ದತ್ತಕ ಮಾಡಿಕೊಂಡರು. ದತ್ತಕ ಮಗನಿದ್ದರೂ ಶ್ರೀ ಭವಾನಿಶಂಕರ ದೇಸಾಯಿಯವರೂ ಅಪ್ರಾಪ್ತವಯಸ್ಕರು ಆದದ್ದರಿಂದ ಈ ಕಾರ್ಯವು ಮತ್ತೆ ತಡೆಯಬೇಕಾಯಿತು. ದತ್ತಕ ಮಗನಿಗೆ ಪ್ರಾಪ್ತವಯಸ್ಕ ಬಂದಬಳಿಕ ದತ್ತಕ ತಂದೆಯ ಸಂಕಲ್ಪವನ್ನು ಪೂರ್ತಿಗೊಳಿಸಲು ಮನಸ್ಸಾಗಿ ನಮ್ಮೆಲ್ಲರ ಅನುಮೋದನೆ ಪಡೆದು ನಮ್ಮಲ್ಲಿ ಉಳಿಕೊಂಡು ನವಗ್ರಹ ಮಂಟಪ ದೇವಾಲಯ ೬-೭ ತಿಂಗಳಿನಿಂದ ಶ್ರೀ ದೇವಸ್ಥಾನದ ಮರಾಮತ್ತು ಕೆಲಸವನ್ನು ನೆರವೇರಿಸಿ ಕಳೆದ ಫಾಲ್ಗುಣ ಶುದ್ಧ ೫ಮಿಗೆ ಶ್ರೀದೇವರ ಪ್ರತಿಷ್ಠೆ ಮಾಡಿದರು. ಕೈ| ವಾ| ಬಾಲಕೃಷ್ಣ ದೇಸಾಯಿಯವರು ಸಂಗ್ರಹಿಸಿದ ಗ್ರಂಥಸಮೂಹ ಇತ್ಯಾದಿ ಪ್ರಾಪ್ತಿಯು ಸಾಹಿತ್ಯಗಳೂ ಈ ಪ್ರತಿಷ್ಠೆಯ ಮಹಾಕಾರ್ಯದ ಉಪಯೋಗಕ್ಕೆ ಬಿದ್ದವಂದು, ತಿಳಿದು ಕೈ| ವಾ| ಗಳಿಗೆ ಸಮಾಧಾನವಾಗುವದು ಹೀಗೆ ನಿಜಸ್ಥಿತಿಯಿದ್ದು, ಕೈ| ವಾ| ಬಾಲಕೃಷ್ಣ ದೇಸಾಯಿಯವರು ಶ್ರೀದೇವರ ಪ್ರತಿಷ್ಠೆಗಾಗಿ ಯಾರೊಬ್ಬರ ಕಡೆಗೆ ೧೦೦೦ ರೂಪಾಯಿ ಇಟ್ಟಿದ್ದರು ಅವನ್ನು ಅವರು ನುಂಗಿದರು ಇತ್ಯಾದಿ ಸತ್ಯದೂರವಾದ ವಿಧಾನಗಳನ್ನು ಬೀರುವದು ಅಯೋಗ್ಯವು.

ಮುಡೇಶ್ವರ— ಈ ಊರಲ್ಲಿ ಹವೆಯು ಚಲೋದು ಇದ್ದದರಿಂದ ಪರ ಊರಿನಿಂದ ಬಹಳ ಜನರು ಹವೆಗಾಗಿ ಬಂದು ಉಳಿದಿರುತ್ತಾರೆ. ಈಗ ೩-೪ ದಿವಸಗಳಿಂದ ಸ್ವಲ್ಪ ಚಳಿ ಊರಲ್ಲಿ ಸಿಡುಬಿನ ಹೊರ್ತು ಬೇರೆ ರೋಗವಿಲ್ಲ. ಏನೂ ಇಲ್ಲ.

ತಾಲೂಕಾ ಲೋಕಲ್‌ಬೋರ್ಡಿಗೆ ಮಾವಳ್ಳಿ ಗ್ರಾಮಕ್ಕೆ ನಾಲ್ಕು ಜನ ಉಮೇದವಾರರು ನಿಂತಿರುತ್ತಾರೆ. ಅವರಲ್ಲಿ ತಾಲೂಕಾ ಬೋರ್ಡಿಗೆ ರಾಷ್ಟ್ರೀಯ ಪಕ್ಷದವರೇ ಆರಿಸಿ ಬಂದಾರೆಂಬ ಧೋರಣವದೆ

೧ ರಾ| ಪಾಂಡುರಂಗ ರಾಮಪ್ಪಾ ಕೊಪ್ಪಿಕರ, ಮಾವಳ್ಳಿ, ಶಿರಾಲಿ, (ಸೂರ್ಯ) ೨. ಸಂಜೀವ ರಾಮರಾವ ಚಂದಾವರಕರ, ಮುಡೇಶ್ವರ (ಧ್ವಜ) ೩. ರಾಜಾರಾಮ ಗಣಪತರಾವ ನಾಡಕರ್ಣಿ, ಮುಡೇಶ್ವರ (ಗಿಣಿ) ೪. ಸಂಜೀವ ಕಾಂತಮಾಸ್ತರ ಬೈಲೂರ, ಬೈಲೂರ (ಕೈ)

ಇಲ್ಲಿ ಕುಚ್ಚಿಗೆ ಅಕ್ಕಿ ಕೊಪ್ಪರ ಮುಡಿಗೆ (ಜಡ್ಡು) ೩ ೮-೦, ಮುಗ್ಗಿನ ಬೆಳದು ಅಕ್ಕಿಗೆ ೮-೪-೦, ಚಿಕ್ಕಿ ಚಿಂತಾಮಣಿ ಅಕ್ಕಿ ಮುಡಿ ೧ಕ್ಕೆ ೮-೧೨-೦. ಜೋಳ ಬೆಳದ ರೇವರಾತಿ, ಕೊಯ್ಲು ಬಾಯ್ತು ದೊಡ್ಡ ತೆಂಗಿನಕಾಯಿ ೧೦೦೦ಕ್ಕೆ ರೂ ೩೦—೮೦ ತೆಂಗಿನ ಎಣ್ಣೆ ಗಾಂವಟಿ ಮಾಡಿಗೆ ರೂ ೧೬—೧೭|| ಹೇಳುತ್ತಾರೆ. ಬೆಲ್ಲ ಮಣ್ಣ ೧ಕ್ಕೆ ರೂ ೧—೧೨-೦ ರಿಂದ ರೂ. ೨-೦-೦ ಗಟ್ಟಿ ಬೆಲ್ಲ ಮುದ್ದೆ ಮಣ ೧ಕ್ಕೆ ರೂ. ೨-೮-೦ ಯಂತೆ ಬಜಾರ ಧಾರಣೆ ಅದೆ

ಜಾಹೀರ ವಿನಂತಿ.

ಸಿದ್ದಾಪುರ ತಾಲೂಕ ಲೋಕಲ್ ಬೋರ್ಡ ಮತದಾರರಿಗೆ ವಿನಂತಿ—

ತಾಲೂಕ ಮತ್ತು ಜಿಲ್ಲಾ ಲೋಕಲ್ ಬೋರ್ಡ ಮೆಂಬರರ ಹೊಸ ಚುನಾವಣೆಯು ನಡೆದಿರುವದಷ್ಟೇ. ಸಿದ್ದಾಪುರ ತಾ| ಲೋ| ಬೋರ್ಡಿಗೆ ಸಿದ್ದಾಪುರ ಗ್ರಾಮಕ್ಕೆ ಮತ್ತು ಜಿಲ್ಲಾ ಲೋಕಲ್‌ಬೋರ್ಡಿಗೆ ಸಿದ್ದಾಪುರ ತಾಲೂಕ ತರ್ಫೆಯಿಂದ ನಾನು ಉಮೇದವಾರನಾಗಿ ನಿಂತಿರುತ್ತೇನೆ. ನಾನು ಆರಿಸಿ ಬಂದಲ್ಲಿ ನನ್ನಿಂದ ಶಕ್ಯವಿದ್ದಷ್ಟು ಮಟ್ಟಿಗೆ ಜನರ ಸೇವೆಯನ್ನು ಮಾಡಬೇಕೆಂದು ನಿಶ್ಚಯಿಸಿದ್ದೇನೆ. ನಾನು ಇಷ್ಟು ದಿವಸಗಳವರೆಗೆ ಮಾಡಿದ ಕೆಲಸಗಳ ಮೇಲಿಂದ ಈ ತಾಲೂಕಿನ ಜನರಿಗೆ ನನ್ನ ಪರಿಚಯವಿರುವದರಿಂದ ಈಗ ಹೆಚ್ಚು ಬರೆಯುವದು ಅವಶ್ಯಕತೋರುವದಿಲ್ಲ. ಮತಕೊಡುವದು ಪವಿತ್ರವಾದ ಕೆಲಸವಿರುವದರಿಂದ ಇದ್ದ ಉಮೇದವಾರರಲ್ಲಿ ತಮಗೆ ಯೋಗ್ಯ ಕಂಡ ಉಮೇದವಾರರಿಗೆ ಮತ ಕೊಡಬೇಕಾಗಿ ವಿನಂತಿ.

ಸಿದ್ದಾಪುರ ೨೬-೨-೩೬.

ತಮ್ಮ ಸೇವಕ,

ಗೋಪಾಲ ರಾಮಚಂದ್ರ ದೇಸಾಯಿ

ವೃತ್ತಸಾರ,

— ಶಸ್ತ್ರಸನ್ಯಾಸ ಪರಿಷತ್ತಿನ ಸಭಾಸದರಾದ ಅಮೇರಿಕೆಯವರು ೩೫ ಕೋಟಿ ರೂಪಾಯಿ ಗಳನ್ನು ಖರ್ಚುಮಾಡಿ ೧೨೦ ಯುದ್ಧದ ಹಡಗು ಪಡೆಗಳನ್ನು ೫ ವರುಷಗಳಲ್ಲಿ ತಯಾರಿಸಲಿರುವರು. ಇದಕ್ಕಿಂತ ಹೆಚ್ಚು ಶಸ್ತ್ರಸನ್ಯಾಸ ಇನ್ನಾವುದಿದೆ?

— ಅಮೇರಿಕೆಯವರು ಮದ್ಯಪಾನವನ್ನು ಸಂಪೂರ್ಣವಾಗಿ ನಿರ್ಮೂಲಿಸುವದಕ್ಕಾಗಿ, ಸರಕಾರ ಪ್ರಕಾರದ ವ್ಯಾಪಾರ ಮದ್ಯವನ್ನು ಸ್ವೀಕರಿಸಿಕೊಳ್ಳುವರು.

— ಅಜಮೀರ ಶೇರಿಪಟ್ಟಣದಲ್ಲಿ ಮೇ ೧೯ನೇ ತಾರೀಖಿಗೆ ಸಮಸ್ತ ಮುಸಲ್ಮಾನರ ಪರಿಷತ್ತು ಸೇರುವದೆ. ಆ ಸಭೆಯು ಖಿಲಾಫತಿನ ಚಳವಳಿಯಾಗುವದಿದೆ

— ಪಂಜಾಬದೊಳಗಿನ ಹೋಶಿಯಾರಪುರದ ಪೋಲೀಸರು ಸ್ಥಳದ ಫೌಜದಾರರ ಕೋಣೆಯಲ್ಲಿ ಬಳಸುತ್ತಿದ್ದ ಬಾಕಿಯನ್ನುಗುಂಡುಗಳನ್ನು ಅಪಹರಿಸಿದರು ಕಳ್ಳರು ಕಡೆಗೆ ಸಿಕ್ಕಿದ್ದಾರು!

— ಮುಂಬಯಿಯೊಳಗಿನ ಕಳ್ಳತನದಿಂದ ಸುಮಾರು ಹತ್ತು ಸಾವಿರ ೪|| ಲಕ್ಷ ರೂಪಾಯಿಗಳ ನಷ್ಟ !

— ಹಾವೇರಿಯ ಮುನಿಸಿಪಾಲಿಟಿಯವರು ಮುನಿಸಿಪಾಲಿಟಿಯ ಹದ್ದಿನೊಳಗೆ ವಕೀಲರು ವರ್ಷಕ್ಕೆ ರೂಪಾಯಿ ೩೦ರಂತೆ ಶಂದಾಯ ಕೊಡಬೇಕಾಗಿ ನಿರ್ಣಯಿಸಿರುವರು. ಹೊಸ ಹೊಸ ತೆರಿಗೆ!

— ಕರಾಚಿಯಿಂದ ಲಂಡನಿಗೆ ವಿಮಾನದ ಮೂಲಕ ೫ ದಿನಗಳಲ್ಲಿ ಪ್ರಯಾಣ ಮಾಡುವಂತೆ ಒಂದು ಮಾರ್ಗವು ವಿಮಾನಪತ್ರ ತಯಾರಾಗುತ್ತಲಿದೆ.

— ಶ್ರೀ ಜಮಖಂಡಿ ಭೀಮರಾಯರೂ, ಶ್ರೀ ಗುಂಡೂರಾವರೂ ಮೈಸೂರ ಪ್ರಾಂತದಲ್ಲಿ ಖಾದಿಯ ಪ್ರಸಾರ ಮಾಡುವದಕ್ಕಾಗಿ ಸಂಚರಿಸುತ್ತಿದ್ದಾರೆ.

— ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಮಂಡಳದವರು ಧಾರವಾಡದ ರಾಷ್ಟ್ರೀಯ ವಿದ್ಯಾಲಯ ಹಾಗು ಪ್ರಾಂತಿಕ ಖಾದೀ ಮಂಡಳಗಳಿಗೆ ರೂಪಾಯಿ ೩೦೦ ರಂತೆಯೂ, ಗದಗ ಬ್ರಾಹ್ಮಣ ಹಾಗು ಹಾನಗಲ್ಲ ರಾಷ್ಟ್ರೀಯ ಶಾಲೆಗಳಿಗೆ ೫೦ ರಂತೆಯೂ ಸಹಾಯ ಮಾಡಿರುವರು. ಖಾದಿಯ ಪ್ರಸಾರಕ್ಕಾಗಿ ಬೆಳಗಾವಿಯ ಪ್ರದರ್ಶನದಿಂದ ಲೋಕಶಿಕ್ಷಣ ಕೊಡುವದೆ ಉಪಕರಣಗಳನ್ನು ತರಿಸಲು ರೂಪಾಯಿ ೩೦೦ ಮಂಜೂರು ಮಾಡಲ್ಪಟ್ಟಿವೆ. ಕರ್ನಾಟಕದ ಏಕೀಕರಣದ ಕುರಿತು ಯತ್ನಮಾಡಲಿಕ್ಕೆ ನಿರ್ಧಾರವಾಗಿಯದೆ.

— ಮುಂಬಯಿಯ ಕಾಯಿದೆ ಕೌನ್ಸಿಲಿಗೆ ಜಿರಿಸ್ಟನ ಮೆಸ್ಟ್ರಿಸ್ಟರವರ ಬದಲಿಗೆ ಸ್ವರಾಜ್ಯ ಪಕ್ಷದ ಶ್ರೀ ಬಾಳಾಭಾಯಿ ದೇಸಾಯಿಯವರು ಆರಿಸಿ ಬಂದಿರುವರು.

— ಕೌನ್ಸಿಲು ಭವನದಲ್ಲಿ ಖಾದೇಕರ ಕಂಚಿನ ಮೂರ್ತಿಯನ್ನು ಪ್ರಾಂತಾಧಿಪರು ಅನಾವರಣ ಮಾಡಿದರು. ಈ ಮೂರ್ತಿಯನ್ನು ಕೌನ್ಸಿಲು ಸಭಾಸದರಾದ ಆಮೋದದ ಖಾಕೋರ ಸಾಹೇಬರು ಅರ್ಪಿಸಿರುವರು.

— ತತಿಕೋರಿನದಲ್ಲಿ ಮುತ್ತು ತೆಗೆಯಲಾರಂಭಿಸಿರುವರು. ವಿಶೇಷ ತರಗತಿಯ ಮುತ್ತು ದೊರಕುವದಿಲ್ಲವಂತೆ! ಮುತ್ತಿನ ಮೀನುಗಳನ್ನು ಸಾವಿರಕ್ಕೆ ೫೦ ರೂಪಾಯಿಗಳಂತೆ ಮಾರಾಟ ಮಾಡುತ್ತಿರುವರು.

— ಪ್ರತಿ ವರ್ಷ ಪರದೇಶಕ್ಕೆ ವ್ಯಾಪಾರಕ್ಕಾಗಿ ೪ ಲಕ್ಷ ದನಗಳು ರಫ್ತಾಗುತ್ತವೆ. ಮಾಂಸ ನಿಮಿತ್ತವಾಗಿ ೩ ಲಕ್ಷ ದನಗಳ ಕೊಲೆಯಾಗುತ್ತದೆ. ಗೋವಧೆ ನೋಡಿರಿ!

— ಡಾ॥ ಸವಣೂರ ಹಾಗೆ ಬಾತ್ರೀ ಇವರ ಪರಿಶ್ರಮದಿಂದ ಬೆಳಗಾವಿಯಲ್ಲಿ ಆಯುರ್ವೇದ ಶಾಲಾಶಾಲೆ ಹಾಗು ಧರ್ಮಾರ್ಥ ದವಾಖಾನೆಗಳು ಸ್ಥಾಪನೆಯಾಗಲಿಕ್ಕಿವೆ. ಜಿಲ್ಲಾ ಬೋರ್ಡಿನವರು ಈ ಕುರಿತು ೧೫೦೦ ರೂಪಾಯಿಗಳನ್ನು ಅರ್ಪಿಸಿರುವರು.

— ತಮ್ಮ ಸಂಸ್ಥಾನದಲ್ಲಿ ಸೆರೆಬಿದ್ದ ಅಕಾಲಿ ಕೈದಿಗಳೆಲ್ಲ ಪತಿಯಾಳಾ ಮಹಾರಾಜರವರು ಬಂಧಮುಕ್ತ ಮಾಡಿರುವರು.

— ಕೊಲ್ಹಾಪುರದ ಶ್ರೀಮಂತ ವರ್ತಕರೊಬ್ಬರ ಸೇಟ ಕಳುವಿನ ಖೂನಿ ಮಾಡುವವರಿಗೆ ಯಾರೋ ಒಬ್ಬರು ಕೊಂದು ತುಂಡು ತುಂಡು ಮಾಡಿ ಅವನ್ನು ಟ್ರಂಕಿನಲ್ಲಿ ತುಂಬಿ ಸಕ್ಕರೆಯ ಸ್ಟೇಶನಿನದಲ್ಲಿ ಇಂದಿಟ್ಟರು! ಭಯಂಕರ!!

— ಮುಂಬಯಿಯ ಗಿರಗಾಂವ ಪೋಲೀಸ ಕೋರ್ಟಿನಲ್ಲಿ ಕಳೆದ ಶುಕ್ರವಾರ ನಾಲ್ಕು ಮಂದಿ ಮುಸಲ್ಮಾನರ ಮೇಲೆ ನಡೆದ ಖಟ್ಲೆಯ ಸುನಾವಣಿಯಾಗಿ ಮೆಜಿಸ್ಟ್ರೇಟರು ತೀರ್ಪು ಹೇಳುತ್ತಿದ್ದರು. ಅಷ್ಟರಲ್ಲಿ ಒಬ್ಬ ಆರೋಪಿಯು ಹಲ್ಲು ಕಿರಿದು ಮೆಜಿಸ್ಟ್ರೇಟರ ಮೇಲೆ ಮೆಟ್ಟು ಒಗೆದನು. ಮೆಟ್ಟು ಮೆಜಿಸ್ಟ್ರೇಟರ ತನಕ ಮುಟ್ಟಲಿಲ್ಲ. ಉಳಿದ ಮೂವರೂ ಹಲ್ಲು ಕಿರಿದು ಪೋಲೀಸರ ಕೈಯಲ್ಲಿದ್ದ ಬಡಿಗೆಗಳನ್ನು ಕಸಕೊಂಡು ಕೋರ್ಟಿನಲ್ಲಿ ದೊಂಬಿ ಮಾಡ ಬಯಸಿದರು. ವಕೀಲರೂ, ಜನರೂ ಗಾಬರಿಯಾದರು. ಕೊನೆಗೆ ಎಲ್ಲರೂ ಸುತ್ತುಗಟ್ಟಿ ಅವರನ್ನು ಸೆರೆಹಿಡಿದರು. ಭಯಂಕರ ಪ್ರಸಂಗ.

— ಗೋಧ್ರಾ ಜಿಲ್ಲೆಯ ಚಾಸವಾರಿಗೆ ಗ್ರಾಮದಲ್ಲಿ ಒಬ್ಬ ಬ್ರಾಹ್ಮಣಗಿತ್ತಿಗೆ ವಿಚಿತ್ರ ಕೂಸು ಹುಟ್ಟಿತು. ಕೂಸಿಗೆ ಎರಡು ತಲೆ, ಮೂರು ಕೈ, ನಾಲ್ಕು ಕಣ್ಣು, ಒಂದು ಬಾಲ, ಹೀಗೆ ಅವಯವ ವಿಶೇಷವಿದೆ. ಕೂಸು ಹುಟ್ಟಿದಾಗಲೇ ಮೃತಹೊಂದಿತ್ತು. ಅದನ್ನು ಅಲ್ಲಿಯ ಚಿಕಿತ್ಸಾಲಯದಲ್ಲಿ ಪ್ರದರ್ಶನಕ್ಕಿಟ್ಟಿರುವರು.

— ಅಮೇರಿಕೆಯ ಏಲಿಂಗ್ಟನ್ ಎಂಬವನು ತನ್ನ ಒಂದು ಕುದುರೆಯನ್ನು ೩ ಲಕ್ಷ ರೂಪಾಯಿಗಳಿಗೆ ಮಾರಿದನು!

— ಗುಜರಾಥದ ಅಬಲಗಳ ಯಾತ್ರಸ್ಥರಿಗೆ ಬರೋಡ ಸರಕಾರದವರು ಸಾಲಿದು ೧೦೦೦೦ ರೂಪಾಯಿಗಳ ಒಡವೆಗಳ ಕೊಟ್ಟಿದ್ದಾರೆ.

— ಹೊಸ ಸರ್ವಾಧಿಪತಿಗಳು ಇದೇ ಬರುವ ಮಾರ್ಚ ೧೮ ನೇ ತಾರೀಖಿಗೆ ಹೊರಟು ಏಪ್ರಿಲ ತಾರೀಖು ೩ನೇಗೆ ಮುಂಬಯಿಗೆ ಬಂದು ತಲ್ಪುವರು.

— ಕಳೆದ ತಾರೀಖು ೨೮-೩-೧೯೩೬ನೇಗೆ ಮುಂಬಯಿಯ ಗೌಡಸಾರಸ್ವತ ಹೈಸ್ಕೂಲಿನ ವಿದ್ಯಾರ್ಥಿಗಳ ಸಭೆಸೇರಿ, ಮೈಲಾಪುರದ ದುಃಖಭಾಗರ ನಿಧನದ ಕುರಿತು ಶೋಕಪ್ರದರ್ಶನದ ಠರಾವಿಟ್ಟು; ಶಿಗಿನ ನಿಯಮದಂತೆ ಸ್ತ್ರೀಯ ಮಂಡಳದವರು ತಯಾರಿಸಿದ ನಿಯಮಗಳ ಮಂಜೂರಾದವು. 'ಮುಂಬಯಿ ಕ್ರಾನಿಕಲ' ಪತ್ರಿಕೆಯ ಸಂಪಾದಕ ನಗರದೊಳಗಿನ ಶ್ರೀ ರಾಮಚಂದ್ರ ಕೃಷ್ಣ ಪ್ರಭುಗಳವರು ಸಭಾಪತಿಗಳಾಗಿದ್ದರು. ನಿರರ್ಥಕ ಚರ್ಚೆಯನ್ನು ಅಧ್ಯಕ್ಷರು ಅಲ್ಲಿಂದಲ್ಲೇ ತಪ್ಪಿಸಿ ಸಭಾ ಕಾರ್ಯವನ್ನು ನೆರವೇರಿಸಿದ್ದು ಪ್ರಶಂಸನೀಯವೆಂದು ಸಭಾಸದರೆಲ್ಲರು ತಿಳಿಸ ಬ್ಯಾರೆ.

— ಇಂದೂರಿನ ಮಹಾರಾಜರಾದ ತುಕೋಜಿ ಹೋಳಕರರವರು ಮುಮತಾಜ ಪ್ರಕರಣದ ಮೂಲಕ ರಾಜತ್ಯಾಗ ಮಾಡಿರುವರು. ಇವರನ್ನು ಕೇಳಿ ಮಹಾರಾಜಳವರಿಗೆ ಹದಿಮೂರು ವಯಸ್ಸಿನವರು ಈಗ ಮಹಾರಾಜರವರು ಅಮೃತಸರದ ೨೮ ವರ್ಷ ಪ್ರಾಯದ ಮಿ॥ ಅಸ್ಟಿರರ ಹಲವಾನರವರಿಗೆ ಮದುವೆಯಾಗಿರುವಳು. ಮಿ॥ ರಾಜವಾನಸನವರು ದೊಡ್ಡ ಚರ್ಮದ ವ್ಯಾಪಾರಿಗಳು; ಮುನಿಸಿಪಾಲ ಕಮಿಶನರಿರುವರು. ದಂಪತಿಗಳು ಯುರೋಪಕ್ಕೆ ವಿಹಾರ ಮಾಡಲಿರುವರು. ಪಟ್ಟದ ಮೇಲೆ ತುಕೋಜಿ ಹೋಳಕರ ಮಹಾರಾಜರ ಮಗಂದಿರನ್ನು ಕೂಡ್ರಿಸುವ ಸಮಾರಂಭವು ಗುರುವಾರಕ್ಕೆ ನೆರವೇರುವದಿದೆ

ಚೆವರಲೆಟ್

ಮೊಟಾರಕಾರ್ ಏಜನ್ಸಿ, ಕೆನರಾ,



ನಾವು ಹೊಸ ಚೆವರಲೆಟ್ ಮೋಟಾರ ಗಾಡಿಗಳನ್ನು ಗಿರಾಕಿಗಳಿಗೆ ಅನುಕೂಲವಾಗುವಂತೆ ತರಿಸಿ ಕೊಡುತ್ತೇವೆ. ಅಪೇಕ್ಷೆಯುಳ್ಳವರು ಸಮಕ್ಷಮ ಅಥವಾ ಪತ್ರದ್ವಾರಾ ಮಾಹಿತಿ ತಿಳಕೊಳ್ಳಬಹುದು.

ಸೋಲಏಜಂಟ:—ಎಸ್ ಎಲ್ ಫಡಕೆಪ್ಪ ಮತ್ತು ಬ್ರದರ್ಸ ಶಿರಸಿ

ಕುಮಟಾ ಏಜಂಟ.- ಜಿ. ಡಿ. ಮಾಳಗಿಕರ ಎಂಡ್ ಕೋ,

ಜಿ. ಓ. ಪಿ. ಪೆಟ್ರೋಲ ನಮ್ಮಲ್ಲಿ ಬೇಕಷ್ಟು ಸಿಗುತ್ತದೆ; ಡನ್‌ಲೊಪ್ ಹಾಗು ಮಿಚಲಿನ ಮೋಟಾರ ಸಾಗೆ ಸಾಯಿಕಲ್ ಟಾಯರ-ಟ್ಯೂಬ ಇತ್ಯಾದಿ ಸಾಮಗ್ರಿಗಳು ಯೋಗ್ಯ ದರದಿಂದ ಪೂರೈಸುತ್ತೇವೆ.

ಸೂಚನೆ:—ನಮ್ಮಲ್ಲಿ ಗುಡ್ ಆರ್ಡರನೊಳಗಿದ್ದ ಚೆವರ್‌ಲೆಟ್ ಕಾರ ೧, ಹಿಂದಲೆಂಡ ಮೋಟಾರ ಲಾರಿ ೧, ಮಾರಾಟಕ್ಕೆ ಸಿದ್ಧವಿವೆ ಬೇಕಾದವರು ಕೆಳಗಿನ ಪತ್ತೆಗೆ ಬರಕೊಳ್ಳಬಹುದು.

G. D. Malgikar & Co,
KUMTA.

ಮದ್ದಾನೆಗೆ ಅಂಕುಶ!

ಆಳರಸರ ಮೇಲೆ ಮುಂಬಯಿ ಹ್ಯಾಕೋರ್ಟಿನಲ್ಲಿ ದಾವೆ!

ಮುಂಬಯಿಯ ಕಾಯದೆ ಕೌನ್ಸಿಲಿನ ಸಭಾಸದರಾದ ಶ್ರೀ ರಾಮಚಂದ್ರ ಸೋಮಣ ಮುಂತಾದ ಸಭಾಸದರು ಮುಂಬಯಿ ಸರಕಾರದ ಕೋಶಾಧಿಕಾರಿಗಳಾದ ಸರ ಹೆನ್ಸಿ ಎಸ್. ಲಾರೆನ್ಸರವರ ಮೇಲೆ ಮುಂಬಯಿ ಹ್ಯಾಕೋರ್ಟಿನಲ್ಲಿ ಅರ್ಜಿ ದಾಖಲ ಮಾಡಿರುವರು. ಪ್ರಾಂತಾಧಿಪರಿಗೆ ವೇತನ ಸದಾರಂಭ ಹಾಗು ಪ್ರಯಾಣಗಳಿಗಾಗಿ ಕೊಡ ಲಿಕ್ಕಿದ್ದ ರೂಪಾಯಿ ೧೯೨೦೦೦ಗಳನ್ನು ಕೌನ್ಸಿಲು ಸಭಾಸದರ ಮತಕ್ಕೆ ಹಾಕಲು ಯದ್ರದಾರನಿಗೆ ಅಜ್ಞೆಯಾಗಬೇಕಾಗಿ ಅರ್ಜಿದಾರರ ಅರಿಕೆಯದೆ. ಮೋಂಟೆಗ್ಯೂ ಸ್ಪರ್ಡ್ಸ ಕಾಯಿದೆಯಂತೆ ನಡೆಯುವ ರಾಜ್ಯಪದ್ಧತಿಯಲ್ಲಿ ಯದ್ರದಾರನು ಕೋಶಾಧಿಕಾರಿಯಾಗಿದ್ದು ಅವನು ೩೫ನೇ ನಿಯಮದಂತೆ ನಡೆಯಲಿಕ್ಕೆ ಬದ್ಧನಿದ್ದಾನೆ. ಆ ಕಾಯಿದೆಯಂತೆ ೧ ಲಕ್ಷ ೨೮ ಸಾವಿರ ರೂಪಾಯಿ ವರೆಗಿನ ಪ್ರಾಂತಾಧಿಪರ ಸಂಬಳವು ಕೌನ್ಸಿಲಿನ ಸ್ವಾಧೀನವಿರುವದಿಲ್ಲ. ಅದರ ಹೊರತು ಸದಾರಂಭ ಹಾಗು ಪ್ರಯಾಣ ಖರ್ಚು ಕೌನ್ಸಿಲಿನ ಮಂಜೂರಿಯ ಮೇಲೆ ಅವಲಂಬಿಸಿದ್ದು ೧೯೨೪-೨೫ ಸಾಲಿನ ಬಜೆಟಿನಲ್ಲಿ ಆ ಪ್ರಕಾರ ತೋರಿಸಿ ಕೌನ್ಸಿಲು ಮಂಜೂರ ಆ ರಕಮುಗಳು ಮಂಜೂರಾಗಿವೆ. ಈ ವರುಷ ಪ್ರಾಂತಾಧಿಪರ ಸಂಬಳದ ಲೆಕ್ಕಕ್ಕೆ ೧೨೦೦೦೦ ರೂಪಾಯಿಗಳು ತೋರಿಸಲ್ಪಟ್ಟಿವೆ ವೇತನ ಸದಾರಂಭಕ್ಕೆ ರೂಪಾಯಿ ೨೯೦೦೦ ಪ್ರಯಾಣ ಖರ್ಚಿಗೆ ರೂಪಾಯಿ ೮೦೦೦೦ ಹೀಗೆ ಒಂದು ರೂಪಾಯಿ ೨,೨೯೦೦೦ಗಳನ್ನು ಕೌನ್ಸಿಲು ಮಂಜೂರಿಗಿರಲಿಲ್ಲ. ಪ್ರಾಂತಾಧಿಪರ ಸಲುವು ಕೌನ್ಸಿಲಿನ ಮಂಜೂರಿಯ ಮೇಲೆ ಅವಲಂಬಿಸಿರುವದಿಲ್ಲ. ಉಳಿದ ರೂಪಾಯಿ ೧೯೨೦೦೦ಗಳನ್ನು ಕೌನ್ಸಿಲಿಗೆ ಒಪ್ಪಿಸುವಂತೆ ಯದ್ರದಾರನಿಗೆ ಹುಕುಮು ಆಗಬೇಕಾಗಿ ಅರ್ಜಿದಾರರ ಬೇಡಿಕೆಯದೆ. ಎಲ್ಲ ರಕಮು ರೂಪಾಯಿ ೩೨೯೦೦೦ಗಳು ಪ್ರಾಂತಾಧಿಪರ ಸಂಬಳವೆಂದು ಕೋರ್ಟ ಅಭಿಪ್ರಾಯ. ಅದಲ್ಲಿ ೧೨೮೦೦೦ ರೂಪಾಯಿಗಳಿಗೆ ನಿಶ್ಚಿತ ರಕಮನ್ನು ಕೌನ್ಸಿಲು ಮಂಜೂರಿಗಿಡಲು ಯದ್ರದಾರನು ಬದ್ಧನಿದ್ದಾನೆ. ಕಾರಣ ೧೦,೧೦೦೦ ರೂಪಾಯಿಗಳ ಮಂಜೂರಿಯನ್ನು ದವಾ ಕೌನ್ಸಿಲಿಗೆ ಸ್ವಾಧೀನಪಡಿಸಬೇಕಾಗಿಯೂ ಅರ್ಜದಾರರ ಬೇಡಿಕೆಯದೆ. ನ್ಯಾಯಮೂರ್ತಿ ತಾರಾಪೂರವಾಲಾರವರು ಅರ್ಜಿಗೆ ಉತ್ತರ ಕೊಡಲು ಯದ್ರದಾರರ ಮೇಲೆ ಸಮನ್ಸ ಹೊರಡಿಸಿರುವರು. ಅರ್ಜಿಯ ವಿಚಾರವು ತಾ. ೧೧ನೇ ಗುರುವಾರಕ್ಕೆ ನಡೆಯುವದು.

ಪ್ರಯಾಣಿಕರಿಗೆ

ವಿಶೇಷ ಅನುಕೂಲ!

ನೇಮಿಸಿದ ಹೊತ್ತಿಗೆ ಮೋಟರಿನ ವ್ಯವಸ್ಥೆ

ಹಾಗೂ

ಅತಿಗೆ, ಊಟ, ವಾಸದ ಬಗ್ಗೆ ಯೋಗ್ಯ ವ್ಯವಸ್ಥೆ

ಈ ಕೆಳಗಿನಂತೆ ಮೋಟಾರ ವ್ಯವಸ್ಥೆಯಿದೆ:—

ಗೋಕರ್ಣದಿಂದ ಕುಮಟಾ, ಹೊನ್ನಾವರ, ಭಟ್ಕಳ; ಗೋಕರ್ಣದಿಂದ ಕುಮಟಾ, ಶಿರ್ಸಿ, ಹುಬ್ಬಳ್ಳಿ ಗೋಕರ್ಣದಿಂದ ಅಂಕೋಲಾ, ಕಾರವಾರ.

ಟೀಪು:—ಟಿಕೇಟು ಮುಂದಾಗಿ ಪಡಕೊಳ್ಳಲಿಚ್ಛಿಸುವವರು ಈ ಕೆಳಗಿನ ಪತ್ತೆಗೆ ಪತ್ರವ್ಯವಹಾರ ಮಾಡತಕ್ಕದ್ದು

ಅನಂತ ಮಂಗೇಶರಾವ ಸಶಿಹಿತ್ತಲ,

ಮೋಟರ ಏಜಂಟ,

ಕುಮಟಾ, (ಉತ್ತರ ಕನ್ನಡ)

ಮಹಾತ್ಮರ ಆತ್ಮಚರಿತ್ರ.

(೧೧) ವಿಲಾಯತಿಗೆ ಹೋಗುವ ತಯಾರಿ.

೧೮೮೭ನೇ ಇಸ್ವಿಯಲ್ಲಿ ನಾನು ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದೆನು. ಆ ಕಾಲದಲ್ಲಿ ಅಹಮ್ಮದಾಬಾದ ಹಾಗು ಮುಂಬಯಿ ಈ ಎರಡು ಕೇಂದ್ರಗಳಲ್ಲಿ ಈ ಪರೀಕ್ಷೆಯು ನಡೆಯುತ್ತಿತ್ತು. ದೇಶದೊಳಗಿನ ಸಾಮಾನ್ಯ ದಾರಿದ್ರ್ಯದ ಮೂಲಕ ಕಾಠೇವಾಡದೊಳಗಿನ ವಿದ್ಯಾರ್ಥಿಗಳು ಸಮೀಪದ ಹಾಗು ಅಗ್ಗದ ಕೇಂದ್ರ (ಅಹಮದಾಬಾದ)ವನ್ನೇ ಆರಿಸುತ್ತಿದ್ದರು. ನಮ್ಮ ಮನೆತನದ ಬಡತನದ ಮೂಲಕವಾಗಿಯೂ ನಾನು ಇದನ್ನೇ ಹಿಂಬಾಲಿಸಬೇಕಾಯಿತು. ರಾಜಕೋಟದಿಂದ ಅಹಮ್ಮದಾಬಾದಕ್ಕೆ ಹೋದದ್ದು ಇದೇ ಸಲ. ಮತ್ತು ಒಬ್ಬಂಟಿಗನಾಗಿ ನಾನು ಹೋಗಬೇಕಾಯಿತು.

ಮೆಟ್ರಿಕ್ಯುಲೇಶನ್ ಪರೀಕ್ಷೆಯಾದ ಬಳಿಕ, ಕಾಲೇಜದಲ್ಲಿ ನಾನು ಅಭ್ಯಾಸ ಮಾಡಬೇಕೆಂದು ಹಿರಿಯರ ಅಪೇಕ್ಷೆಯಿತ್ತು. ಮುಂಬಯಿಯಲ್ಲಿದ್ದಂತೆ, ಭಾವನಗರದಲ್ಲಿ ಒಂದು ಕಾಲೇಜಿತ್ತು. ಭಾವನಗರದೊಳಗಿನ ಖರ್ಚು ಕಡಿಮೆ. ಅದರಿಂದ ಅಲ್ಲಿ ಹೋಗಿ ಸಾಮಳದಾಸ ಕಾಲೇಜಿನಲ್ಲಿ ದಾಖಲಾಗಬೇಕೆಂದು ನಾನು ನಿರ್ಣಯಿಸಿದೆನು. ಅಲ್ಲಿ ನಾನು ದಿಗಿಲುಬಿದ್ದೆ: ಪ್ರತಿಯೊಂದು ಸಂಗತಿಯೂ ನನಗೆ ಕಠಿಣವೆನಿಸಿತು. ಅಧ್ಯಾಪಕರ ಭಾಷಣಗಳ ಅರ್ಥ ನನಗೆ ತಿಳಿಯದಾಯಿತು ಅಂದ ಮೇಲೆ ವಿಷಯ ಗ್ರಹಣದ ಮಾತು ಎಲ್ಲಿಯದು? ಅಧ್ಯಾಪಕರ ತಪ್ಪಿಲ್ಲ. ಆ ಕಾಲೇಜಿನೊಳಗಿನ ಅಧ್ಯಾಪಕರು ಶ್ರೇಷ್ಠ ತರಗತಿಯವರೆಂದು ಖ್ಯಾತಿಗೊಂಡಿದ್ದರು. ನಾನೇ ದಡ್ಡನು. ಮೊದಲನೇ ಟರ್ಮ ಮುಗಿಸಿ, ನಾನು ಮನೆಗೆ ತಿರಿಗಿ ಬಂದೆನು.

ಮಾವಜಿ ದವೇ ಎಂಬೊಬ್ಬ ವಿದ್ವಾನ್ ಹಾಗು ವ್ಯವಹಾರಕುಶಲ ಬ್ರಾಹ್ಮಣರು ನಮ್ಮ ಮನೆತನದ ಮಾರ್ಗದರ್ಶಿಗಳೂ ಹಾಗು ಆಲೋಚಕರು. ನಮ್ಮ ತಂದೆಯು ತೀರಿಹೋದ ಬಳಿಕ ನಮ್ಮ ಮನೆತನದೊಡನೆ ತಮ್ಮ ಸ್ನೇಹಭಾವವನ್ನು ಅವರು ಅವ್ಯಾಹತವಾಗಿ ಇಟ್ಟಿದ್ದರು. ಸೂಟಿಯ ದಿನಗಳಲ್ಲಿ ಅವರು ನಮ್ಮ ಮನೆಗೆ ಬರುತ್ತಿದ್ದರು. ನನ್ನ ತಾಯಿ ಹಾಗು ಅಣ್ಣನೊಡನೆ ಮಾತಾಡುವಾಗ, ನನ್ನ ಅಭ್ಯಾಸದ ಕುರಿತು ವಿಚಾರ ಮಾಡಿದರು. ನಾನು ಸಾಮಳದಾಸ ಕಾಲೇಜಿನಲ್ಲಿದ್ದೇನೆಂದು ತಿಳಿದು ಅವರು ನುಡಿದದ್ದೇನಂದರೆ:-ಹಿಂದಿನ ಸ್ಥಿತಿಯು ಈಗಿಲ್ಲ. ಯೋಗ್ಯ ಶಿಕ್ಷಣ ಪಡೆದ ಹೊರತು, ನಿಮ್ಮ ತಂದೆಯ ಗಾದಿಯನ್ನು ನೀವು ಪಡೆದು ನಡೆಯಲಾರಿರಿ. ಈ ಹುಡುಗನು ಅಭ್ಯಾಸ ಕ್ರಮವನ್ನು ಮುಂದರಿಸುತ್ತಿದ್ದಾನೆ. ಆ ಗಾದಿಯ ಪರಂಪರೆಯನ್ನು ಆತನ ಕಡೆಯಿಂದ ನೀವು ಕಾಯ್ದುಕೊಳ್ಳತಕ್ಕದ್ದು. ಕಾದು ಕೊಳ್ಳುವ ಉಪಾಯವನ್ನು ನೀವು ಕೈಕೊಳ್ಳಬೇಕು. ಬಿ. ಏ. ಪದವಿಯನ್ನು ಪಡೆಕೊಳ್ಳಲಿಕ್ಕೆ ೪-೫ ವರ್ಷಗಳು ತಗಲುವವು; ಬಿ. ಏ. ಪದವಿಯಿಂದ ಹೆಚ್ಚೆಂದರೆ, ೬೦ ರೂಪಾಯಿ ಸಂಬಳದ ನೌಕರಿಸಿಕ್ಕೀತು. ದಿವಾನ ಪದವೇನು ದೊರಕದು. ನನ್ನ ಮಗನಂತೆ ಆತನು ಕಾಯಿದೆ ಕಲಿಯಹತ್ತಿದರೆ, ಅದಕ್ಕೆ ಇನ್ನೂ ಹೆಚ್ಚು ವರುಷಗಳು ತಗಲುವವು. ಅಷ್ಟರಲ್ಲಿ ಹೇರಳ ವಕೀಲರು ಕಾಯಿದೆ ಪಂಡಿತರಾಗಿ ದಿವಾನಪದಕ್ಕೆ ಉಮೇದವಾರರಾಗಿ ಬರುವರು. ಬೆರಿಸ್ಟರರಾಗುವದು ತೀರ ಸುಲಭವೆಂದು ನನ್ನ ಮಗನಾದ ಕೇವಲ ರಾಮನ ಹೇಳಿಕೆ. ೩ ವರುಷಗಳಲ್ಲಿ ಅವನು ಮರಳಿ ಬರುವನು. ಖರ್ಚ ೪-೫ ಸಾವಿರಕ್ಕೆ ಮಿಕ್ಕುವಂತಿಲ್ಲ. ಸದ್ಯಕ್ಕೆ ಇಂಗ್ಲಂಡದಿಂದ ಮರಳಿಬಂದ ಬೆರಿಸ್ಟರರ ಸಂಭ್ರಮ ನೋಡಿರಿ! ಅವರಿಗೆ ಬೇಕಾದಾಗ ದಿವಾನಪದವು ಸಿಗುವಂತಿದೆ. ಇದೇ ವರುಷವೇ ಮೋಹನದಾಸನನ್ನು ನೀವು ಇಂಗ್ಲಂಡಕ್ಕೆ ಕಳುಹಲೇಬೇಕು. ಇಂಗ್ಲಂಡದಲ್ಲಿ ನಮ್ಮ ಕೇವಲ ರಾಮನ ಅನೇಕ ಮಿತ್ರರಿರುವರು. ಅವರಿಗ ಪತ್ರ ಬರೆದು ಅವನು ಮೋಹನದಾಸನ ಪರಿಚಯ ಮಾಡಿಕೊಡುವನು. ಅದರಿಂದ ಮೋಹನದಾಸನಿಗೆ ಅಲ್ಲಿ ಏನೊಂದೂ ಕಷ್ಟವಾಗಲಿಕ್ಕಿಲ್ಲ."

ಮುದುಕ ಮಾವಜಿ ದವೇಯವರಿಗೆ ನಾವು ಜೋಷಿಜೀಯವರೆಂದು ಕರೆಯುತ್ತಿದ್ದೆವು. ಜೋಷಿಜಿಯವರಿಗೆ ತಮ್ಮ ಹೇಳಿಕೆಯು ನನಗೆ ಮಾನ್ಯವಾಗುವದೆಂದು ನಿಶ್ಚಯವಾಗಿ, ಅವರು ನುಡಿದದ್ದೇನಂದರೆ:-"ಇಲ್ಲಿ ಅಭ್ಯಾಸ ಮಾಡುವದಕ್ಕಿಂತ ನೀನು ಇಂಗ್ಲಂಡಕ್ಕೆ ಹೋಗಲಾರಿಯೋ?" ನನಗೆ ಪರಮಾನಂದವಾಯಿತು. ಅಭ್ಯಾಸವು ಕಠಿಣವೆಂದು ನಾನು ಬಹಳ ವಿಚಾರದಲ್ಲಿ ಬಿದ್ದಿದ್ದೆ. ಆದ ರಿಂದ ಈ ಸೂಚನೆಯನ್ನು ನಾನು ಒಮ್ಮೆಲೇ ಮನ್ನಿಸಿ ಶೀಘ್ರವೇ ಹೋದರೆ ಒಳಿತೆಂದು ನಾನು ಹೇಳಿದೆನು. ಪರೀಕ್ಷೆಗಳಲ್ಲಿ ಬೇಗಬೇಗನೆ ಉತ್ತೀರ್ಣನಾಗುವದು ಸುಲಭವಲ್ಲ. ವೈದ್ಯಕೀ ಅಭ್ಯಾಸಕ್ಕಾಗಿ ನನಗೆ ಕಳಿಸಲಿಕ್ಕೆ ಬಾರದೆ? ನನ್ನ ಅಣ್ಣನು ಇದಕ್ಕೆ ನುಡಿದದ್ದೇನಂದರೆ:- "ಅದು ತಂದೆಗೆ ಎಂದೂ ಸೇರುತ್ತಿದ್ದಿಲ್ಲ. ವೈಷ್ಣವರಾದ ನಮಗೆ ಶವಗಳ ಮೇಲೆ ಪ್ರಯೋಗಮಾಡುವದು ಸಲ್ಲದೆಂದು ತಂದೆ ನಿನ್ನನ್ನು ಉದ್ದೇಶಿಸಿ ಮಾತಾಡುತ್ತಿದ್ದನು. ನೀನು ವಕೀಲನಾಗಬೇಕೆಂದು ತಂದೆಯ ಮನಸ್ಸಿನಲ್ಲಿತ್ತು."

ಜೋಷಿಜಿಯವರು ಈ ಅಭಿಪ್ರಾಯಕ್ಕೆ ಸಮ್ಮತಿಸಿ ನುಡಿದದ್ದೇನಂದರೆ, "ಗಾಂಧಿಜಿ ನನ್ನ ಹಾಗೆ ವೈದ್ಯಕೀ ಅಭ್ಯಾಸಕ್ಕೆ ನನ್ನ ವಿರೋಧವಿಲ್ಲ ಇದಕ್ಕೆ ನಮ್ಮ ಶಾಸ್ತ್ರ ವಿರೋಧವಿಲ್ಲ. ಆದರೆ, ವೈದ್ಯಕೀಯ ಪದವಿಯಿಂದ ನೀನು ದಿವಾನನಾಗಲಾರೆ. ನೀನು ದಿವಾನನಾಗಬೇಕು, ಅಥವಾ ಅದಕ್ಕೂ ಹೆಚ್ಚು ತರಗತಿಯವನಾಗಬೇಕು, ಎಂದು ನನ್ನ ಇಚ್ಛೆಯಿದೆ. ಈ ಉಪಾಯದಿಂದಲೇ ನಿನ್ನ ದೊಡ್ಡ ಮನೆತನವನ್ನು ನೀನು ಸಂರಕ್ಷಣ ಮಾಡಬಹುದು. ಕಾಲವು ಶೀಘ್ರವಾಗಿ ಬದಲಿಸುತ್ತಿದೆ. ದಿನಗಳು ಕಠಿಣವಾಗುತ್ತಿವೆ. ಅದರಿಂದ ಬೆರಿಸ್ಟರನಾಗುವದು ತೀರ ಜಾಣತನವು." ನನ್ನ ತಾಯಿಯ ಬಳಿಗೆ ಅವರು ಹೇಳಿದ್ದೇನಂದರೆ - "ನಾನೀಗ ಹೊರಡುವೆ; ನಾನು ಹೇಳಿದ ಮಾತಿನ ವಿಚಾರಮಾಡಿರಿ. ನಾನು ಇನ್ನೊಮ್ಮೆ ಬಂದಾಗ, ನೀವು ವಿಲಾಯತಿಯ ಪ್ರವಾಸದ ತಯಾರಿ ಮಾಡಿದ ಸುದ್ದಿಯನ್ನು ನಾನು ಕೇಳಬೇಕು. ಯಾವದೇ ರೀತಿಯಿಂದ ನಿಮಗೆ ಅಡಚಣಿಗಳಿದ್ದು, ನನ್ನ ಸಹಾಯ ಬೇಕಾದರೆ, ತಪ್ಪದೆ ನನಗೆ ತಿಳಿಸಿರಿ."

ಜೋಷಿಜಿಯವರು ಹೊರಟರು. ನಾನು ಮನೋರಾಜ್ಯವನ್ನು ರಚಿಸ ತೊಡಗಿದೆನು.

ನನ್ನ ಹಿರೇಅಣ್ಣನು ಬಹಳ ವಿಚಾರದಲ್ಲಿ ಮಗ್ನನಾದನು. ನನಗೆ ಕಳುಹಲು ಹಣ ಸಂಪಾದಿಸುವ ಬಗೆ ಹೇಗೆ? ನನ್ನಂಥ ತರುಣನವನಿಗೆ ಒಬ್ಬಂಟಿಗನಾಗಿ ಪರದೇಶಕ್ಕೆ ಕಳುಹುವದು ಸುರಕ್ಷಿತವಿರುವದೇನು?

ನನ್ನ ತಾಯಿಗಂತೂ ಬಹಳ ಗೊಂದಲವಾಯಿತು. ನನ್ನ ವಿಯೋಗದ ವಿಚಾರವು ಅವಳಿಂದ ಸಹಿಸಲಾಗಲಿಲ್ಲ. ವಿಚಾರವನ್ನು ಮುರಿಸುವದಕ್ಕಾಗಿ ಅವಳು ನುಡಿದದ್ದೇನಂದರೆ-"ಈಗ ಚಿಗಪ್ಪನು ಕುಟುಂಬದಲ್ಲಿ ಹಿರೇಯವನು. ಅವನ ಆಲೋಚನೆಯನ್ನು ಮೊಟ್ಟಮೊದಲು ಪಡಕೊಳ್ಳಬೇಕು. ಅವನ ಅನುಮತಿ ಬಿದ್ದರೆ, ನಾವು ವಿಚಾರ ಮಾಡುವಾ."

ನನ್ನ ಅಣ್ಣನಿಗೆ ಇನ್ನೊಂದು ಕಲ್ಪನೆಯು ಸೂಚಿಸಿತು. "ಪೋರಬಂದರದ ಸಂಸ್ಥಾನದಲ್ಲಿ ಒಂದು ಪ್ರಕಾರದ ನಮ್ಮ ಹಕ್ಕು ಇದೆ. ಮಿ| ಲಿಲಿಯವರು ಅಲ್ಲಿಯ ಕಾರಭಾರಿಗಳು. ನಮ್ಮ ಮನೆತನದ ಮೇಲೆ ಅವರಿಗೆ ಪೂಜ್ಯಭಾವವಿದೆ. ಚಿಗಪ್ಪನ ಮೇಲೆಯೂ ಅವರಿಗೆ ವಿಶೇಷ ಪ್ರೀತಿ ಇದೆ. ವಿಲಾಯತಿಯೊಳಗಿನ ನಿನ್ನ ಶಿಕ್ಷಣಕ್ಕಾಗಿ ಸಂಸ್ಥಾನದವರು ಸಹಾಯ ಮಾಡಬೇಕೆಂದು ಅವರು ಶಿಫಾರಸು ಮಾಡುವ ಸಂಭವವಿದೆ." ಇದನ್ನು ಕೇಳಿ ನನಗೆ ಬಹಳ ಸಂತೋಷವಾಯಿತು. ಪೋರಬಂದರಕ್ಕೆ ಹೋಗಲು ನಾನು ಸಿದ್ಧನಾದೆ. ಆ ಕಾಲದಲ್ಲಿ ಉಗಿಬಂಡಿಯಿರಲಿಲ್ಲ; ಎತ್ತಿನ ಬಂಡಿಯ ಮೇಲೆ ೫ ದಿನದ ಪ್ರಯಾಣ. ನಾನು ಪುಕ್ಕನೆಂದು ಈ ಮುಂಚೆಯೇ ಹೇಳಿರುವೆನು. ಆದರೆ, ಆ ಸಮಯ ನನ್ನ ಪುಕ್ಕತನವೆಲ್ಲ ನಷ್ಟವಾಯಿತು. ಇಂಗ್ಲಂಡಕ್ಕೆ ಹೋಗಲು ನಾನು ಅತ್ಯಾತುರನಾಗಿದ್ದೆ. ಧೋರಾಜಿಯ ವರೆಗೆ ಒಂದು ಬಂಡಿಯನ್ನು ಬಾಡಿಗೆ ಮಾಡಿದೆನು. ಧೋರಾಜಿಯಿಂದ ಪೋರಬಂದರಕ್ಕೆ ಒಂಟೆಯ ಮೇಲೆ ಹೋದರೆ, ಒಂದು ದಿನ ಮುಂಚೆ ಮುಟ್ಟಬಹುದಾದ್ದರಿಂದ ಅಲ್ಲಿಂದ ಒಂಟೆಯ ಮೇಲೆ ಕೂತುಹೋದೆ. ಒಂಟೆಯ ಮೇಲೆ ಸವಾರಿಯಾದದ್ದು ಇದೇ ಪ್ರಥಮ ಬಾರಿ.

ಕೊನೆಗೆ ನಾನು ಪೋರಬಂದರಕ್ಕೆ ಹೋಗಿ ಮುಟ್ಟಿದನು. ಚಿಗಪ್ಪನವರಿಗೆ ನಮಸ್ಕಾರ ಮಾಡಿ, ವೃತ್ತಾಂತವನ್ನೆಲ್ಲ ತಿಳಿಸಿದೆನು. ಅವನು ಕೆಲಸ ಹೊತ್ತು ವಿಚಾರಮಾಡಿ ಹೇಳಿದ್ದೇನಂದರೆ:-"ಇಂಗ್ಲಂಡದಲ್ಲಿ ಒಕ್ಕೊಂದು ಧರ್ಮ ಪಾಲನ ಮಾಡುವದು ಶಕ್ಯವೆಂದು ನಾನ ಹೇಳಲಾರೆ. ಕೇಳುವ ಸುದ್ದಿಗಳ ಮೇಲಿಂದ ನನಗೆ ಸಂಶಯ ಬರುತ್ತದೆ. ಅಂಥ ದೊಡ್ಡ ದೊಡ್ಡ ಬೆರಿಸ್ಟರರನ್ನು ನೋಡಿದಾಗ, ಅವರಿಗೂ, ಯುರೋಪಿಯನ್ನರಿಗೂ ಭೇದವೇನೂ ತೋರುವದಿಲ್ಲ. ಆಹಾರದ ಧರ್ಮಬಂಧನಗಳನ್ನು ಅವರು ಸಂಪೂರ್ಣವಾಗಿ ಮರೆಯುತ್ತಿರುವರು. ಚುಟ್ಟಗಳು ಯಾವಾಗಲೂ ಅವರ ಬಾಯಲ್ಲಿ ಇದ್ದೇ ಇರುತ್ತವೆ. ಅವರ ಪೋಷಾಕಂತು ಪ್ರತ್ಯಕ್ಷ ಇಂಗ್ಲಿಷರದೇ. ಇದೆಲ್ಲ ನಮ್ಮ ಕುಟುಂಬದ ಪರಂಪರೆಗೆ ಉಚಿತವಾಗಿರುವದಿಲ್ಲ. ಆದರೆ, ನಿನಗೆ ನಾನು ವಿಘ್ನ ಮಾಡಬಯಸುವದಿಲ್ಲ. ಸದ್ಯಕ್ಕೆ ನಾನು ಯಾತ್ರೆಗೆ ಹೋಗುವವನಿದ್ದೇನೆ. ನನ್ನ ಬಾಳ್ವೆಯು ಮುಗಿಯುತ್ತ ಬಂತು. ನನ್ನ ಈ ಕೊನೆಯದಲ್ಲಿ ಇಂಗ್ಲಂಡದಂಥ ದೂರದೇಶಕ್ಕೆ ಹೋಗಲು ನಿನಗೆ ನಾನು ಹೇಗೆ ಅಪ್ಪಣೆ ಕೊಡಲಿ? ಆದರೆ, ನಾನು ನಿನಗೆ ವಿಘ್ನ ಮಾಡಲಾರೆ. ನಿನ್ನ ತಾಯಿಯ ಅಪ್ಪಣೆಯೇ ಮುಖ್ಯವಾದದ್ದು. ಅವಳ ಅಪ್ಪಣೆ ದೊರೆತರೆ, ನೀನು ಸಂತೋಷದಿಂದ ಹೋಗಬಹುದು. ನನ್ನ ಅಡ್ಡಿಯೇನಿಲ್ಲವೆಂದು ಅವಳಿಗೆ ಹೇಳು. ನಿನಗೆ ನನ್ನ ಆಶೀರ್ವಾದವಿದೆ.

ಇದಕ್ಕಿಂತ ನನಗ ಬೇಕಾದದ್ದೇನು? ಈಗ ನಾನು ತಾಯಿಯ ಮನವೊಲಿಸುತ್ತೇನೆ. ಮಿ| ಲಿಲಿಯವರಿಗೆ ನನ್ನ ಶಿಫಾರಸು ಮಾಡುವಿರೇನು? ಎಂದು ನಾನು ಕೇಳಿದೆನು.

"ಹಾಗೆ ನಾನು ಹೇಗೆ ಹೇಳಲಿ? ಸಾಹೇಬರು ಒಳ್ಳೇ ಮನುಷ್ಯರು, ನಿನ್ನ ಸಂಬಂಧವನ್ನು ಹೇಳಿ ಸಾಹೇಬರೊಡನೆ ಭೆಟ್ಟಿಯ ಸಮಯವನ್ನು ನಿಶ್ಚಯಿಸಿಕೋ. ಅಂದರೆ ಸಾಹೇಬರು ನಿನಗೆ ಸಹಾಯ ಮಾಡುವರು."

ಶಿಫಾರಸಿನ ಪತ್ರವನ್ನು ಕಕ್ಕನವರು ಯಾಕೆ ಕೊಡಲಿಲ್ಲವೆಂದು ನಾನು ಹೇಳಲಾರೆ. ಇಂಗ್ಲಂಡಕ್ಕೆ ಹೋಗುವದು ಅಧರ್ಮ ಕೃತ್ಯವೆಂದು ಅವರ ಅಭಿಪ್ರಾಯವಾದ್ದರಿಂದ, ಆ ಕರಿತು ಪ್ರತ್ಯಕ್ಷ ಸಹಾಯ ಮಾಡಲಿಕ್ಕೆ ಅವರು ಹಿಂಜರಿದಂತೆ ತೋರುತ್ತದೆ.

ಮಿ| ಲಿಲಿಯವರಿಗೆ ನಾನು ಪತ್ರ ಬರೆದೆನು. ಅವರು ನನಗೆ ತಮ್ಮ ಮನೆಯಲ್ಲಿ ಭೆಟ್ಟಿಯಾಗ ಹೇಳಿದರು. ನಾನು ಹೋದಾಗ ಅವರು ನಿಚ್ಚಣಿಕೆಯನ್ನು ಹತ್ತುತ್ತಿದ್ದರು. ಅಲ್ಲಿಯೇ ನನಗೆ ಅವರ ಭೆಟ್ಟಿಯಾಯಿತು. "ಮೊದಲು ಬಿ. ಏ. ಪರೀಕ್ಷೆಯನ್ನು ತೇರ್ಗಡೆಹೊಂದು, ಬಳಿಕ, ನನ್ನ ಭೆಟ್ಟಿಗೆ ಬಾ; ಈಗ ನಿನಗೇನೂ ಸಹಾಯ ದೊರೆಯಲಾರದು" ಇಷ್ಟು ಮಾತಾಡಿ, ಅವರು ನಿಚ್ಚಣಿಕೆಯನ್ನು ಬೇಗ ಬೇಗನೆ ಹತ್ತಿ ನಡೆದರು.

ಸಾಹೇಬರಿಗೆ ಭೆಟ್ಟಿಯಾಗಲು ನಾನು ಬಹಳ ತಯಾರಿ ಮಾಡಿದ್ದೆ, ಕೆಲವು ವಾಕ್ಯಗಳನ್ನು ಜಾಗ್ರತೆಯಿಂದ ಕಲಿತುಕೊಂಡಿದ್ದೆ, ಕೆಳಕ್ಕೆ ಬಗ್ಗಿ ಎರಡೂ ಕೈಗಳಿಂದ ಅವರಿಗೆ ನಮಸ್ಕಾರ ಮಾಡಿದೆ. ಇದರ ಎಲ್ಲವೂ ನಿರರ್ಥಕವಾಯಿತು.

ಬಳಿಕ ನನಗೆ ನನ್ನ ಹೆಂಡತಿಯ ಚಿನ್ನದ ವಿಚಾರ ಬಂತು. ಹಿರೇ ಅಣ್ಣನ ಮೇಲೆ ನನ್ನ ಭಕ್ತಿ ವಿಶೇಷ ಅವನು ಬಹಳ ಔದಾರ್ಯವಂತನು, ನನ್ನನ್ನು ತನ್ನ ಮಗನಂತೆ ಅವನು ಪ್ರೀತಿಸುತ್ತಿದ್ದನು. ಪೋರಬಂದರದಿಂದ ರಾಜಕೋಟ

ನ್ನು ನಾನು ಮುಗಿಸಿಬಂದು ಅಲ್ಲಿಯ ವೃತ್ತಾಂತವನ್ನೆಲ್ಲ ಅರುಹಿದೆನು. ಜೋಷಿಜಿಯವರೊಡನೆ ಈ ಕುರಿತು ವಿಚಾರ ಮಾಡಿದೆನು. ಅವಶ್ಯವಿದ್ದರೆ ಸಾಲ ತೆಗೆಯಬೇಕೆಂದೂ ಅವರ ಅಭಿಪ್ರಾಯವಾಯಿತು. ನನ್ನ ಹೆಂಡತಿಯು ಬಸ್ಸದ ಮೂರಾಟ ಮಾಡಿದರೆ, ೨-೩ ಸಾವಿರ ರೂಪಾಯಿ ಸಿಗಬಹುದೆಂದು ನಾನು ಸೂಚಿಸಿದೆನು; ಏನಾದರೂ ಬರುಬಯ ವಾದಿ ಹಣವನ್ನು ಒದಗಿಸಿ ಕೊಡುತ್ತೇನೆಂದು ನನ್ನ ಅಣ್ಣನು ವಚನ ಕೊಟ್ಟನು.

ಆದರೂ, ನನ್ನ ತಾಯಿಯು ಒಪ್ಪಲಿಲ್ಲ. ಅವಳು ಸೂಕ್ಷ್ಮವಾಗಿ ಶೋಧ ಮಾಡುತ್ತಿದ್ದಳು. ಇಂಗ್ಲೆಂಡಕ್ಕೆ ಹೋದ ಎಳೆ ಪ್ರಾಯದವರು ಪತಿತರಾಗುತ್ತಾರೆಂದು ಒಬ್ಬನು ಅವಳಿಗೆ ಹೇಳಿದನು; ಮತ್ತೊಬ್ಬನು ಅ ಮಾಂಸಭಕ್ಷಣ ಮಾಡುತ್ತಾರೆಂದು ಸುದ್ದಿ ಕೊಟ್ಟನು. ಸರಾಯಿ ಕುಡಿದ ಹೊರತು ಅಲ್ಲಿ ಬಾಳಿಕೆ ಆಗುವದಿಲ್ಲೆಂದು ಇನ್ನೊಬ್ಬನು ಹೇಳಿದನು. “ನಿನಗೆ ನನ್ನ ನಂಬಿಗೆಯಿಲ್ಲವೋ? ನಿನ್ನೊಡನೆ ನಾನು ಸುಳ್ಳು ಹೇಳಲಿಕ್ಕಿಲ್ಲ. ಅವನ್ನು ಸ್ಪರ್ಶ ಮಾಡುವದಿಲ್ಲೆಂದು ನಾನು ಪ್ರತಿಜ್ಞೆ ಮಾಡುತ್ತೇನೆ. ಅಂಥ ಭೀತಿಯಿದ್ದರೆ, ಜೋಷಿಜಿಯವರು ನನಗೆ ಅಲ್ಲಿ ಹೋಗಗೊಡುತ್ತಿದ್ದರೇ?” ಎಂದು ನಾನು ಉತ್ತರಿಸಿದೆನು. ನಾನು ನಿನ್ನನ್ನು ನಂಬುತ್ತೇನೆ: ದೂರ ದೇಶದಲ್ಲಿ ನಿನಗೆ ನಂಬುವ ಬಗೆ ಹೇಗೆ? ನನಗೇನೂ ತೋಚುವದಿಲ್ಲ ನಾನು ಬೇಚರಜಿ ಸ್ವಾಮಿಯವರಿಗೆ ಕೇಳುವೆನು.

ಬೇಚರಜಿ ಸ್ವಾಮಿಯವರು ಮೊಟ್ಟಮೊದಲು ಮೋಢ ವೈಶ್ಯ ಜಾತಿಯವರು; ಈಗ ಅವರು ಜೈನಸನ್ಯಾಸಿಗಳಾಗಿದ್ದರು. ಜೋಷಿಯವರಂತೆ, ಅವರೂ ನಮ್ಮ ಮನೆತನದ ಸಲಹೆಗಾರರು. ಅವರು ನನಗೆ ನೆರವಾದರು. “ನಾನು ಈ ಹುಡುಗನ ಕಡೆಯಿಂದ ಮೂರು ಪ್ರತಿಜ್ಞೆಗಳನ್ನು ಕೊಳ್ಳುತ್ತೇನೆ, ಬಳಿಕ, ಅವನಿಗೆ ಹೋಗಗೊಡುವದು” ಅವರು ಪ್ರತಿಜ್ಞೆಯ ವಚನವನ್ನು ಹೇಳಿದರು; ಮತ್ತು ನಾನು ಮದ್ಯ ಮಾಂಸ ಹಾಗು ಸ್ತ್ರೀಸಂಗವನ್ನು ವರ್ಜಿಸಲಿಕ್ಕಿಲ್ಲೆಂದು ಪ್ರತಿಜ್ಞೆ ಕೊಂಡೆನು. ಇದಾದ ಬಳಿಕ, ನನ್ನ ತಾಯಿಯು ಅಪ್ಪಣೆಯನ್ನು ಕೊಟ್ಟಳು.

ಹೈಸ್ಕೂಲಿನಲ್ಲಿ ನನ್ನ ಗೌರವಕ್ಕಾಗಿ ಒಂದು ಸಮಾರಂಭವಾಯಿತು. ರಾಜಕೋಟದ ಒಬ್ಬ ಯುವಕನು ಇಂಗ್ಲೆಂಡಕ್ಕೆ ಹೋಗುವದು ಅಸಾಮಾನ್ಯ ಕೆಲಸವಾಗಿತ್ತು. ಅಭಿವಂದನೆಗಾಗಿ ನಾನು ನಾಲ್ಕು ಶಬ್ದಗಳನ್ನು ಬರೆಕೊಂಡು ಹೋಗಿದ್ದೆ. ಅವನ್ನು ಸಭೆಯಲ್ಲಿ ಓದಬೇಕಾದರೆ, ನನಗೆ ಬಹಳ ಪ್ರಯಾಸವಾಯಿತು. ಅವನ್ನು ಓದುವದಕ್ಕಾಗಿ ನಿಂತಾಗ ನನ್ನ ತಲೆ ತಿರುಗಿತು. ಮೈ ನಡುಗುತ್ತಿತ್ತು.

ಹಿರಿಯರ ಆಶೀರ್ವಾದ ಪಡೆದು ನಾನು ಮುಂಬಯಿಗೆ ಹೊರಟೆ ರಾಜಕೋಟದಿಂದ ಮುಂಬಯಿಗೆ ಹೋದದ್ದು ಇದೇ ಮೊದಲನೇ ಸರ್ತಿ. ಅಣ್ಣನು ನನ್ನ ಜೊತೆಗೆ ಬಂದಿದ್ದನು ಆದರೆ, ಅನಪೇಕ್ಷಿತವಾಗಿ ಕಾರ್ಯಗಳಲ್ಲಿ ವಿಘ್ನಗಳುಂಟಾಗುತ್ತವೆ ಮುಂಬಯಿಯಲ್ಲಿ ಕೆಲವು ಉಪದ್ರವಗಳುಂಟಾದವು.

(೧೨) ಜಾತಿಬಹಿಷ್ಕಾರ.

ನನ್ನ ತಾಯಿಯ ಅಪ್ಪಣೆಯನ್ನೂ, ಆಶೀರ್ವಾದಗಳನ್ನೂ ಪಡೆದು ನಾನು ಆನಂದಭರಿತನಾಗಿ, ಮುಂಬಯಿಗೆ ಹೊರಟನು ನನ್ನ ಹೆಂಡತಿ ಹಾಗು ಕೆಲವು ತಿಂಗಳ ಹಿಂದೆ ಹುಟ್ಟಿದ ಕೂಸು, ಇವರಿಬ್ಬರಿಗೂ ಮನೆಯಲ್ಲಿ ಇಟ್ಟೆನು. ಮುಂಬಯಿಗೆ ಹೋದ ಬಳಿಕ, ಜೂನ-ಜುಲೈ ತಿಂಗಳಲ್ಲಿ ಹಿಂದೀ ಮಹಾಸಾಗರವು ಕ್ಷುಬ್ಧ ವಿರುತ್ತದಾಗಿಯೂ, ಇದೇ ನನ್ನ ಮೊದಲಿನ ಸಮುದ್ರ ಪ್ರಯಾಣವಾದ್ದರಿಂದ ನವೆಂಬರದ ವರೆಗೆ ನನಗೆ ಹೋಗಗೊಡಬಾರದಾಗಿಯೂ ಗೆಳೆಯರು ನನ್ನ ಅಣ್ಣನಿಗೆ ಹೇಳಿದರು. ಬಿರುಗಾಳಿಯಲ್ಲಿ ಒಂದು ಹಡಗವು ಮುಳುಗಿ ಹೋಯಿತೆಂದು ಒಬ್ಬನು ಸುದ್ದಿ ಹೇಳಿದನು. ಇದರಿಂದ ನನ್ನ ಅಣ್ಣನು ಗಾಬರಿಯಾಗಿ ಕೂಡಲೆ ಹೋಗಗೊಡುವದು ಗಂಡಾಂತರದ್ದೆಂದು ಅಭಿಪ್ರಾಯಪಟ್ಟನು. ಮುಂಬಯಿಯಲ್ಲಿ ಒಬ್ಬ ಗೆಳೆಯನ ಜೊತೆಗೆ ನನ್ನನ್ನಿಟ್ಟು ಅಣ್ಣನು ತನ್ನ ಕೆಲಸಕ್ಕಾಗಿ ರಾಜಕೋಟಿಗೆ ಮರಳಿದನು; ನನ್ನ ಪ್ರಯಾಣ ಖರ್ಚಿನ ರಕಮನ್ನು ನಮ್ಮೊಬ್ಬ ಭಾವನ ಸ್ವಾಧೀನ ಮಾಡಿ, ನನಗೆ ಬೇಕಾದ ಸಹಾಯ ಮಾಡಲಿಕ್ಕೆ ಕೆಲ್ಲ ಗೆಳೆಯರಿಗೆ ಹೇಳಿಹೋದನು.

ಮುಂಬಯಿಯಲ್ಲಿ ನನ್ನ ಹೊತ್ತು ಹೋಗದಾಯಿತು. ಇಂಗ್ಲೆಂಡಕ್ಕೆ ಹೋಗುವ ಸ್ವಪ್ನಗಳು ನನಗೆ ಆಗಿಂದಾಗ ಬೀಳುತ್ತಿದ್ದವು.

ಅಷ್ಟರಲ್ಲಿ ಪರದೇಶಸಂಚಾರದ ಕುರಿತು ಜಾತಿಯವರು ಗಡಿಬಿಡಿ ಮಾಡಹತ್ತಿದರು. ಈ ವರೆಗೆ ಮೋಢ ವೈಶ್ಯ ಜಾತಿಯವರ್ಯಾರೂ ಇಂಗ್ಲೆಂಡಕ್ಕೆ ಹೋಗಿದ್ದಿಲ್ಲ; ನಾನು ಹೋಗುವ ಸಾಹಸ ಮಾಡಿದರೆ, ನನಗೆ ತಕ್ಕ ಶಾಸನ ಮಾಡಬೇಕು. ಜಾತಿಯ ಕೂಟವು ಸೇರಿಸಲ್ಪಟ್ಟಿತು. ಅಲ್ಲಿ ಹಾಜರಾಗಲು ನನಗೆ ಅಪ್ಪಣೆಯಾಯಿತು ನಾನು ಹೋದೆನು; ಈ ಸಾಹಸವನ್ನು ಕೈಕೊಳ್ಳಲಿಕ್ಕೆ ಧೈರ್ಯ ಶಕ್ತಿಯು ಎಲ್ಲಿಂದ ಬಂತೆಂದು ನಾನು ಕೇಳಲಾರೆ. ಎದೆಗಟ್ಟಿ ಮಾಡಿ, ನಿಶ್ಚಯ ಬುದ್ಧಿಯಿಂದ ಸಭೆಯಲ್ಲಿ ನಾನು ಹಾಜರಾದೆನು. ಜಾತಿಯ ಮುಖ್ಯಸ್ಥರಾದ ಶೇಠಜೀಯವರು ನನಗೆ ದೂರಿನ ಆಪ್ತರು ನನ್ನ ತಂದೆಯವರಿಗೂ, ಶೇಠಜೀಯವರಿಗೂ ಬಹಳ ಸ್ನೇಹಭಾವವಿತ್ತು. ಅವರು ನುಡಿದದ್ದೇನೆಂದರೆ:—

“ಇಂಗ್ಲೆಂಡಕ್ಕೆ ನೀನು ಹೋಗುವದು ಅನಿಷ್ಟವೆಂದು ಜಾತಿಯವರ ಹೇಳಿಕೆ ಪರದೇಶಸಂಚಾರಕ್ಕೆ ನಮ್ಮ ಧರ್ಮಶಾಸ್ತ್ರದಲ್ಲಿಯೂ ಪ್ರತಿಬಂಧವಿದೆ ಧರ್ಮಾಚಾರಗಳನ್ನು ಉಲ್ಲಂಘಿಸಿದ ಹೊರತು, ವಿಲಾಯತಿಯಲ್ಲಿ ಬಾಳಕೊಳ್ಳುವದಿಲ್ಲೆಂದು ನಾವು ಕೇಳಿರುತ್ತೇವೆ. ಯುರೋಪಿಯನರೊಡನೆ ತಿಂದುಣ್ಣಬೇಕಾಗುತ್ತದೆ.”

“ಇಂಗ್ಲೆಂಡಕ್ಕೆ ಹೋಗುವದು ಧರ್ಮಶಾಸ್ತ್ರವಿರುದ್ಧವೆಂದು ನನಗೆ ತೋರುವದಿಲ್ಲ. ವಿದ್ಯಾರ್ಜನಕ್ಕಾಗಿ ನಾನು ಅಲ್ಲಿ ಹೋಗಬಯಸುತ್ತೇನೆ ನೀವು ಗಾಬರಿಯಾಗುವ ಮೂರು ವಸ್ತುಗಳ ಸ್ಪರ್ಶ ಮಾಡುವದಿಲ್ಲೆಂದು ನಾನು ಪ್ರತಿಜ್ಞಾಪೂರ್ವಕವಾಗಿ ನನ್ನ ತಾಯಿಗೆ ವಚನ ಕೊಟ್ಟಿದ್ದೇನೆ, ಪ್ರತಿಜ್ಞೆಯಿಂದ ರಕ್ಷಿತನಾಗುವೆನೆಂದು ನಾನು ನಂಬಿರುವೆನು,” ಎಂದು ನಾನು ಹೇಳಿದೆನು.

ಇದಕ್ಕೆ ಶೇಠಜಿಯವರು ಹೇಳಿದ್ದೇನೆಂದರೆ —“ಧರ್ಮಾಚಾರಗಳನ್ನು ಅಲ್ಲಿ ಪಾಲಿಸುವದು ಎಂದೂ ಶಕ್ಯವಿಲ್ಲೆಂದು ನಾವು ನಿನಗೆ ಸಾರಿ ಹೇಳುತ್ತೇವೆ ನಿನ್ನ ತಂದೆಯೊಡನೆ ನನಗಿರುವ ಆಪ್ತತ್ವನ್ನು ನೀನು ಬಲ್ಲೆ ನನ್ನ ಮಾತನ್ನು ನೀನು ಕೇಳಬೇಕು.”

“ಆಪ್ತತ್ವವನ್ನು ನಾನು ಬಲ್ಲೆನು. ನೀವು ನನ್ನ ಹಿರಿಯರೆಂಬ ನನ್ನ ಭಾವನೆ ಆದರೆ, ನನ್ನ ಉಪಾಯವಿಲ್ಲ ಇಂಗ್ಲೆಂಡಕ್ಕೆ ಹೋಗುವ ನಿರ್ಧಾರವನ್ನು ನಾನು ಬದಲಿಸಲಾರೆ. ನನ್ನ ತಂದೆಯ ಮಿತ್ರರೂ, ಸಲಹೆಗಾರರೂ ಆದ ವಿದ್ವಾಂಸ ಬ್ರಾಹ್ಮಣರು ಇಂಗ್ಲೆಂಡಕ್ಕೆ ಹೋಗಲು ಆಕ್ಷೇಪಿಸುವದಿಲ್ಲ. ನನ್ನ ತಾಯಿಯೂ, ಅಣ್ಣನೂ ನನಗೆ ಅಪ್ಪಣೆ ಕೊಟ್ಟಿರುವರು,” ಎಂದು ನಾನು ಹೇಳಲು, “ಜಾತಿಯ ಆಜ್ಞೆಯನ್ನು ನೀನು ತಿರಸ್ಕರಿಸುತ್ತೀಯೋ?” ಎಂದು ಶೇಠಜಿಯವರ ಪ್ರಶ್ನೆಗೆ “ನನ್ನ ಉಪಾಯವಿಲ್ಲ. ಈ ವಿಷಯದಲ್ಲಿ ಜಾತಿಯವರು ಕೈ ಹಾಕಬಾರದೆಂದು ನನಗೆ ತೋರುತ್ತದೆ, ಎಂದು ನಾನು ಹೇಳಿದೆನು.

ಈ ಮಾತು ಕೇಳಿ, ಶೇಠಜೀಯವರು ಕ್ರುದ್ಧರಾದರು. ಧರ್ಮಭ್ರಷ್ಟನೆಂದು ನನಗೆ ಛೀಮಾರಿದರು. ಆದರೂ, ನಾನು ಸ್ಥೈರ್ಯದಿಂದ ಕೂತುಕೊಂಡೆ. ಬಳಿಕ, ಶೇಠಜೀಯವರು ಹುಕುಮು ಮಾಡಿದ್ದೇನಂದರೆ—“ಈ ಹೊತ್ತಿನಿಂದ ಈ ಹುಡುಗನಿಗೆ ಬಹಿಷ್ಕಾರ ಹಾಕಿಟ್ಟಿದೆ. ಅವನಿಗೆ ಸಹಾಯ ಮಾಡುವವರಿಗೆ ಅಥವಾ ಧಕ್ಕೆಯ ಮೇಲೆ ಅವನಿಗೆ ಮುಟ್ಟಿಸಹೋಗುವವರಿಗೆ ೧। ರೂಪಾಯಿಯಂತೆ ದಂಡ ವಿಧಿಸಲಾಗುವದು.”

ನನ್ನ ಮಟ್ಟಿಗೆ ಈ ಹುಕುಮು ನಿರರ್ಥಕವಾಯಿತು. ನಾನು ಶೇಠಜೀಯವರ ಅಪ್ಪಣೆ ಪಡೆದು ಮರಳಿದೆನು. ಆದರೆ, ನನ್ನ ಅಣ್ಣನು ಏನನ್ನುತ್ತಾನೆಂದು ನಾನು ಚಿಂತೆಯುಳ್ಳವನಾದೆನು. ಸುದೈವದಿಂದ ಅವನೂ ದೃಢವಾಗಿದ್ದನು; ಶೇಠಜೀಯ ಹುಕುಮು ಇದ್ದಾಗ್ಯೂ, ನಾನು ಹೋಗಲಡ್ಡಿಯಿಲ್ಲವಾಗಿ ನನಗೆ ಬರೆದನು.

ಈ ಸಂಗತಿಯು ಹೋಯಿತು ಆದಷ್ಟು ಬೇಗನೆ ಪ್ರಯಾಣ ಮಾಡಲು ನಾನು ಆತುರನಾದೆ. ಅಣ್ಣನಿಗೆ ಅವರು ಒತ್ತಾಯ ಮಾಡಿದರೆ, ಮುಂದೆ ನನ್ನ ಗತಿಯೇನು? ಅನಿರೀಕ್ಷಿತವಾಗಿ ಅನಿಷ್ಟ ಒದಗಿದರೆ — ನನ್ನ ಸ್ಥಿತಿಯು ಕುರಿತು ಆಲೋಚಿಸುವದರಲ್ಲಿ, ಸಪ್ಟೆಂಬರ ೪ನೇ ತಾರೀಖಿಗೆ ಹೊರಡುವ ಹಡಗದಿಂದ ಜುನಾಗಢದ ವಕೀಲರೊಬ್ಬರು ಕಾಯಿದೆಯ ಅಭ್ಯಾಸಕ್ಕಾಗಿ ಇಂಗ್ಲೆಂಡಕ್ಕೆ ಹೋಗುವವರಿದ್ದಾರೆಂದು ನನಗೆ ತಿಳಿಯಿತು. ಅಣ್ಣನು ನನಗೆ ಸಹಾಯ ಮಾಡಹೇಳಿದ ಗೆಳೆಯರಿಗೆ ನಾನು ಭೆಟ್ಟಿಯಾದೆ; ಇಂಥವರ ಜೊತೆಗೆ ಹೋಗುವ ಪ್ರಸಂಗವನ್ನು ಬಿಡಬಾರದೆಂದು ಅವರೂ ಅಭಿಪ್ರಾಯಪಟ್ಟರು. ಸಮಯವು ಹೆಚ್ಚರಲಿಲ್ಲ. ಅಣ್ಣನಿಗೆ ತಂತಿ ಮಾಡಲು, ಆತನು ಹೋಗಲಪ್ಪಣೆ ಕೊಟ್ಟನು. ಭಾವನವರಿಗೆ ಹಣ ಕೊಡಹೇಳಲು, ಆತನು ಶೇಠಜೀಯವರ ಹುಕುಮಿಗೆ ಬೆದರಿ (ನನಗೆ ಹಣಕೊಟ್ಟರೆ) ತಾನು ಜಾತಿಭ್ರಷ್ಟನಾಗಲಾರೆನೆಂದು ಹೇಳಿದನು. ಬಳಿಕ, ನಾನು ನಮ್ಮ ಮನೆಯ ಗೆಳೆಯರೊಬ್ಬರಿಗೆ ಪ್ರಯಾಣ ಖರ್ಚಿನ ಪೂರ್ತ ನನಗೆ ಸಾಲ ಕೊಡಬೇಕಾಗಿಯೂ, ಆ ಸಾಲವನ್ನು ಅಣ್ಣನು ತೀರಿಸುವನಾಗಿಯೂ ಹೇಳಿದೆನು. ಈ ಸ್ನೇಹಿತರು ನನ್ನ ಬಿನ್ನಹವನ್ನು ಮನ್ನಿಸಿದ್ದಲ್ಲದೆ, ನನಗೆ ಉತ್ತೇಜನವನ್ನಿತ್ತರು. ನನಗೆ ಬಹಳ ದೊಡ್ಡ ಉಪಕಾರವಾಯಿತು. ಕೂಡಲೆ, ಟಿಕೀಟನ್ನು ತೆಗೆದುಕೊಂಡೆನು. ನಾನು ಪ್ರಯಾಣದ ತಯಾರಿ ಮಾಡಬೇಕಾಗಿತ್ತು. ಈ ವಿಷಯದ ಅನುಭವವಿದ್ದ ಒಬ್ಬ ಮಿತ್ರರಿದ್ದರು. ಉಡಿಗೆ-ತೊಡಿಗೆ ಇತ್ಯಾದಿ ಸಾಮಗ್ರಿಗಳನ್ನು ಅವರು ಸಿದ್ಧಗೊಳಿಸಿದರು. ಕೆಲವು ಉಡಿಗೆ-ತೊಡಿಗೆಗಳು ನನಗೆ ಸೇರಿದವು, ಕೆಲವು ನನಗೇನು ಸೇರಲಿಲ್ಲ. ನೆಕ್‌ಟಾಯ್‌ಯಾನೆ ಕೊರಳವಸ್ತ್ರವನ್ನು ತೊಟ್ಟುಕೊಳ್ಳುವದು ಈಗ ನನ್ನ ರೂಢಿಗೆ ಆನಂದವಾಗಿದ್ದರೂ, ಆಗ ನನ್ನ ಮನಸ್ಸು ಹೇಸಿತು. ಗಿಡ್ಡ ಜಾಕೀಟು ಅಸಭ್ಯವೆಂದು ನನ್ನ ಅಭಿಪ್ರಾಯ. ಆದರೆ, ಇಂಗ್ಲೆಂಡಕ್ಕೆ ಹೋಗಲು ನಾನು ಆತ್ಯಾತುರನಾಗಿದ್ದೆ. ಆ ಮೂಲಕ ಇದೆಲ್ಲ ಬೇಸರವು ಕ್ಷುಲ್ಲಕವಾಯಿತು. ಪ್ರಯಾಣಕ್ಕಾಗಿ ಬೇಕಷ್ಟು ತಿಂಡಿಗಳು ನನ್ನ ಜೊತೆಗೆ ಇದ್ದವು. ಮಿತ್ರರು ಜುನಾಗಢದ ವಕೀಲರಾದ ತ್ರ್ಯಂಬಕರಾಯ ಮುಜುಮದಾರರ ಕೋಣೆಯಲ್ಲಿಯೇ ನನಗೆ ಜಾಗಮಾಡಿಕೊಟ್ಟರು: ಗೆಳೆಯರು ಅವರಿಗೆ ನನ್ನ ಗುರುತನ್ನು ಮಾಡಿಕೊಟ್ಟರು. ಇವರು ಪ್ರೌಢವಯಸ್ಕರಿದ್ದು, ಅನುಭವಿಕರೂ, ವ್ಯವಹಾರಜ್ಞರೂ ಆಗಿದ್ದರು. ನಾನು ಒಬ್ಬ ೧೮ ವರುಷದ ಹುಡುಗ, ನನಗೆ ಪ್ರಪಂಚದ ಅನುಭವವೇನೂ ಇರಲಿಲ್ಲ: ನನ್ನ ಬಗ್ಗೆ ಚಿಂತೆ ಬೇಡವೆಂದು ಶ್ರೀ ಮುಜುಮದಾರರು ನನ್ನ ಗೆಳೆಯರಿಗೆ ಹೇಳಿದರು

ಕೊನೆಗೆ ಸಪ್ಟೆಂಬರ ೪ನೇ ತಾರೀಖಿಗೆ ನಾನು ಮುಂಬಯಿಯಿಂದ ಹೊರಟೆನು.

S. U. NARAYANACHARYA & CO.

Chaukamba, BENARES CITY.



ನಮ್ಮಲ್ಲಿ ಎಲ್ಲಾ ತರದ ರೇಷ್ಮೆ ಪೀತಾಂಬರ, ಜರಿ ಕಣ ಜರಿ ಸೀರೆ, ಕಾಶ್ಮೀರ್ ಶಾಲು, ಕರವಾಂಡ ರುದ್ರಾಕ್ಷಿ, ಸಾಲಿಗ್ರಾಮ, ಲಿಂಗಗಳೂ, ಸ್ಫಟಿಕಮಣಿ ಮೊದಲಾದ ಸಾಮಾನುಗಳು ಸಿಗುತ್ತವೆ ಕ್ಯಾಟಲಾಗ ಕೇಳುವವರಿಗೆ ಉಚಿತವಾಗಿ ಕಳಿಸಲಾಗುವದು.

ವಿಳಾಸ— ಶಿರೋಮಣಿ ನಾರಾಯಣಾಚಾರ್ಯ

ಕಂಪನಿ, ಚೌಕಂಬಾ, ಕಾಶಿ.

ರೋಗದಿಂದ ನರಳಬೇಡಿರಿ.

ನಮ್ಮಲ್ಲಿ ಬಂಕು ಕುಲಾಬು, ಪಿತ ಬುಲಾಬು, ಎಲ್ಲ ತರದ ಜ್ವರ, ಜ್ವರಗಡ್ಡೆ, ಚಳಿಜ್ವರ, ಕಾಮಿಲೆ, ದಮ್ಮು, ಕೆಮ್ಮು, ಕಫ, ಅಗ್ನಿಮಾಂದ್ಯ, ಮಲಬದ್ಧತೆ ಮೂಲವ್ಯಾಧಿ, ನರ ವಾತ, ತಲೆನಡತ, ಪ್ರದರ, ಗರ್ಭಾಶಯದ ಎಲ್ಲ ರೋಗ, ಪ್ರಮೇಹ, ಉಪದಂಶ ಗರ್ಮಿ) ಬಾಲಗ್ರಹ ಖಜ್ಜಿ, ಗಜಕರ್ಣಗಳಿಗೆ ಖಂಡಿತ ಗುಣ ಬರುವ ಜರ್ಮನ ಅಮೇರಿಕನ. ಫ್ರೇಂಚ ಇಂಗ್ಲಿಷ ಮತು ದೇಶಿ ಪೇಟಂಟ ಔಷಧಗಳ. ಬಹಳ ಅಗ್ಗವಾಗಿ ಸಿಗುವವು.

ಇದಲ್ಲದೆ ಎಲ್ಲ ತರದ ಸುಗಂಧಿ ಪದಾರ್ಥಗಳು, ಸ್ನಾನದ ಸಾಬೂನು, ಓಲ್ಡಸ್ಪ್ರಿಂಗ ವಾಚ, ಮೋರಿಸ ಮೊಟಾರ ಬಂಡಿಗಳು, ಸುಲಭದ ದರದಿಂದ ಸಿಗುವವು ನಮ್ಮಲ್ಲಿಲ್ಲದ ನಿಮಗೆ ಅವಶ್ಯವಿರುವ ಸಾಮಾನು ಬೇರೆ ದೇಶದಿಂದ ತರಿಸಿಕೊಡಲಾಗುವದು.

ಎಸ್ ಎಲ್ ಧಾಕಪ್ಪ ಮತ್ತು ಬ್ರದರ,

ಶಿರಸಿ.

ಸುಲಭ ಕ್ರಯ! ಸುಲಭ ಕ್ರಯ!!

ಡಾಕ್ಟರ ಜೀ. ಬೀ ಯವರ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಷ್ಟು ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪಿನಸಿ, ಒಂಟತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಮೇಲ್ಪಟ್ಟ ಈ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನು ಹೆಚ್ಚು ಮಾಡುತ್ತದೆ. ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಗೆ ಸ್ಪಕ್ಕಟ ಕಳಿಸಲಾಗದು.

ಬುಡ್ಡಿ ಒಂದಕ್ಕೆ ಕ್ರಯ ರೂ ೦ ೪-೦, ವ್ಹಿ. ಪಿ ೪ ಆಣೆ ಡಜನ್ ೧ ಕ್ಕೆ ರೂ. ೨-೮-೦. ವ್ಹಿ. ಪಿ. ೦-೮-೦ ಮಾಡಿ ನಿಮ್ಮ ಹೆಸರನ್ನೂ ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ —ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪೋ. ಬಾ. ೫೧೦, ಪಾರ್ಕಟೌನ, ಮದರಾಸ

ಸರಕಾರದಿಂದ ಪೇಟಂಟ ಪಡೆದ

ಮಲ್ಹಾರ ಕಪ್ಪಲಿ.

ತೋಟಿಗರಿಗೆ ಬಹು ಅನುಕೂಲವಾಗಿರುವದು.

ಇದು mild steelವೆಂಬ ಜಾತಿಯ ಉಕ್ಕಿನ ತಗಡಿನಿಂದ ಮಾಡಲ್ಪಟ್ಟಿರುವದು. ಎತ್ತುಗಳಿಗೆ ಬಹಳೇ ಹಗರು ಹೋಗುತ್ತದೆ ಇದರೊಳಗಿಂದ ಒಂದು ಹನಿ ಸಹ ನೀರು ಕೆಳಗೆ ಬೀಳದಂತೆ ಏರ್ಪಾಡು ಮಾಡಲ್ಪಟ್ಟಿರುವದು. ಕಪ್ಪಲಿ ಬಾಯಿಂದ ನೀರು ಡೋಣಿಯಲ್ಲಿ ಬೀಳುವ ಕಾಲಕ್ಕೆ ಎತ್ತುಗಳಿಗೆ ಭಾರವಾಗದಂತೆ ರಚನೆಯಲ್ಲಿ ಸುಧಾರಣೆಯನ್ನು ಮಾಡಿರುತ್ತೇವೆ.

ಬೆಲೆಯ ಬಗ್ಗೆ ಬರೆದು ತಿಳಿದುಕೊಳ್ಳಿರಿ

ಕಿರ್ಲೋಸ್ಕರ ವಾರ್ತೆ —ಜನವರಿ ಸಂಚಿಕೆಯು

ಹೊರಬಿದ್ದಿರುವದು. ವಾರ್ಷಿಕ ವರ್ಗಣಿ ರೂ. ೧-೪-೦

ಕಿರ್ಲೋಸ್ಕರ ಬಂಧು ಲಿಮಿಟೆಡ್; { ಕಿರ್ಲೋಸ್ಕರವಾಡಿ, ಜಿಲ್ಲಾ ಸಾತಾರಾ.

ವಿಶೇಷ] ಅನುಭವಸಿದ್ಧ [ಪಥ್ಯವಿಲ್ಲ.

ವನೌಷಧಿಮೂಲಿಕೆಗಳು

ವಾಯುದುಮ್ಮಾನ (ನೆಮೋನಿಯಾ) ವಾಂತಿ ಭ್ರಾಂತಿ (ಕೋಲರಾ) ಅರ್ಧಾಂಗವಾಯು (ಪೆರಾಲಿಸಿಸ್) ಹುಚ್ಚು ನಾಯಿ ನರಿ ಕಡತ, ಸರ್ಪಸುತು ಹೊಟ್ಟೆಯಲ್ಲಿ ಕತ್ರಿಮ ವಿಷಹಾಕಿದ್ದು (ಕೈಮದ್ದು) ವಗೈರೆ ರೋಗಗಳಿಗೆ ಒಂದೆ ಒಂದು ಮೂಲಿಕೆಯಿಂದ ಖಾತ್ರಿಯಾಗಿ ತೀವ್ರ ಗುಣಬರುವದು ಇವು ಬಹುಕಾಲದಿಂದ ಅನುಭವ ತಕ್ಕೊಂಡು ಹಾಗು ಪ್ರತಿನಿತ್ಯ ಈಕಡೆಗೆ ಬಳಕೆಯಲ್ಲಿದ್ದು ಸಿಗಬೇಕಾಗುವ ಔಷಧಿಗಳ ತಾಜಾ ಮೂಲಿಕೆಗಳು! ಒಮ್ಮೆ ತರಿಸಿ ಅನುಭವ ತಕ್ಕೊಂಡರೆ ಖಾತ್ರಿಯಾದೀತು. ಕೋಲರಾ ಔಷಧಿಗಳ ದ್ರಾವಕ (Tincture) ಸಹ ಆಗಾವು ಪೂರೈಸಿದರೆ ಕಳುಹುವೆವು.

ವಾಯುದುಮ್ಮಾನದ ಬಗ್ಗೆ ಔಷಧಿ ಮೂಲಿಕೆ ತೊಲೆ ೧ ಕ್ಕೆ ೦-೨-೦.

ಕೊಲೆರಾದ ಬಗ್ಗೆ „ „ „ ೦ ೨ ೦

ಅರ್ಧಾಂಗ ವಾಯುವಿನಬಗ್ಗೆ

೧ ಇಸಮಿಗೆ ಸಾಲುವಷ್ಟು ॥ ಶೇರು ೧ ೮ ೦

ಪ್ರಕೃತಿ ತಿಳಿಸಬೇಕು.

ನಾಯಿ ಕಡತದಬಗ್ಗೆ ೦-೪-೦

ಸರ್ಪಸುತ್ತಿನ ಬಗ್ಗೆ ೦ ೨ ೦

ಹೊಟ್ಟೆಯಲ್ಲಿ ಕತ್ರಿಮ ಔಸಧಿ ಬಿದಬಗ್ಗೆ

ತೊಲೆ ೧೦ ಕ್ಕೆ ೦-೮-೦

ರಕ್ತಶುದ್ಧಿ ವ ಮಲಶೋಧನೆ ಬಗ್ಗೆ

ಮೂಲಿಕೆ ರಾತ್ತಲ ಕ್ಕೆ ೧-೮ ೦

ಮೋರಾವಳಾ (ನೆಲ್ಲಿಕಾಯಿ ಗುಳಂಬ)

ರಾತ್ತಲ ೧ ಕ್ಕೆ ೧-೦ ೦

ರಾತಲಗಟ್ಟಲೆ ಯಾ ಅದಕ್ಕೂ ಹೆಚ್ಚು ತರಿಸಿಕೊಳುವವರಿಗೆ ಕಡಿಮೆ ದರದಿಂದ ಕಳಿಸಲ್ಪಡುವದು. ಟಪಾಲ ಖರ್ಚು ಪ್ರತ್ಯೇಕ. ವಿಶೇಷ ಮಾಹಿತಿ ಪತ್ರ ದ್ವಾರಾ. ಅನುಪಾನಪತ್ರ ಔಷಧೀ ಸಂಗಡ.

ಎನ್. ಜಿ. ಹೆಗಡೆ, ಮಾಸ್ತೇರಿ,

ಪೋಸ್ಟ—ಬಂಕಿಕೋಡ್ಲ. ಜಿ. ಉತ್ತರ ಕಾನಡಾ

ಅಮೃತಾಂಜನ.

ಇದರ ಉಪಯೋಗದಿಂದ, ವಾತವೇದನೆ, ಉಳುಕು ಇತ್ಯಾದಿ ವ್ಯಾಧಿಗಳಮೇಲೆ, ರಾಮಬಾಣದಂತಾಗಿರುವದು. ಕಳೆದ ೩೫ ವರ್ಷಗಳಿಂದ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗುತದೆ. ಲಕ್ಷಗಟ್ಟಲೆ ಕುಟುಂಬಗಳು ಅಮೃತಾಂಜನವನು ಉಪಯೋಗಿಸುತ್ತಿರುವವು. ಆದದರಿಂದ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಬೇಗು, ಸಂಧಿವಾತ ಮೊದಲಾದ ಎಷ್ಟೋ ವ್ಯಾಧಿಗಳಮೇಲೆ ಇದು ಗುಣಕಾರಿಯೆಂದು ಅರಿಯದವರು ಅದು ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು. ಕಿಮ್ಮತು ೧೦ ಆಣೆ ವ್ಹಿ. ಪಿ. ಖರ್ಚು ಬೇರೆ.

ಅಮೃತಾಂಜನ ಡಿಪೋ, ಫೋರ್ಟ, ಮುಂಬಯಿ.

Printed and Published by Krishnarao Keshav Shenvi (Editor) at his Star of Kanara Press Kumta.

ವರ್ಷ ೧೦.

ಕಾನಡಾವೃತ್ತ.

THE KANARA NEWS.

ಸಂಚಿಕೆ ೨೩.

ಪತ್ರದ ವರ್ಗಣಿ.
ಕುಮಟೆಯಲ್ಲಿ ಅಗಾವು
ರೂಪಾಯಿ 2-4-0.
ಮನೆಯವಾರ್ತರಿಯಿಂದ
ರೂ. 3-0-0.
ಹಿ ಅಂಚೆವೆಚ್ಚ ಸೇರಿ
ರೂಪಾಯಿ 3-2-0.
ಬಿಡಿ ಸಂಚಿಕೆಗೆ 0-1-0.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಜಾಹಿರಾತುಗಳ ದರ
ಕನ್ನಡ, ಇಂಗ್ಲಿಷ ಪೈಕಾ
ಟೈಪಿನ (೧೫ ಎಮ್ ಉದ್ದ)
೫ ಸಾಲುಗಳವರೆಗೆ ರೂ. 1-0-
ಆ ನಂತ್ರ ಪ್ರತಿಸಾಲಿಗೆ 0-2-0.
ಹಡಿಂಗದ ಸಾಲು ಎಷ್ಟು
ದೊಡ್ಡದಿರುವದೋ ಆ ಮಾಪ
ದಿಂದ ಅಷ್ಟು ಸಾಲುಗಳು ಹಿಡಿ
ಯಲ್ಪಡುವವು.
ಬಾಕಿ ಜಾಹಿರಾತುಗಳ ಬಗ್ಗೆ
ಪತ್ರದ್ವಾರ ಯಾ ಸಮಕ್ಷ ತೀರ್ಮಾ
ನಲ್ಪಡುವವು.

(ಕುಮಟಾ—ಕಾನಡಾವೃತ್ತ ಸೋಮವಾರ, ತಾರೀಖು ೧೫ ಮಾಹೆ ಮಾರ್ಚ ಸನ್ ೧೯೨೬ ನೇ ಇಸವಿ.)

हिंदुस्थानांतील रहिवाशास ज्याप्रमाणे हिंदुस्थानची हवा मानमानवेच हें औषध हिंदुस्थानांतील लोकांस ज्यास्त फायदेशीर आहे.

द्राक्षासव- दीड रतलची किंमत २ रुपये.

रामबाण औषधें

सर्दि घालविणारें,
भूक वाढविणारें,
शौच्यास साफ करणारें,
झोंप आणणारें,
शक्ति देणारें,
तेजस्वीपणा आणणारें,

विश्वास रुचिकर

कचाटखाना मागवा,

संडुफार्मास्युटिकलवर्क्स लिमिटेड,

मुंबई नं: १२

एजंट— मेसर्स पंडित आणि कंपनी,

तीर्थहळळी

ಬೇಕಾದ ಚಿನ್ನಾಭರಣಗಳು ನಮಗೆ ಆರ್ಡರ ಕೊಟ್ಟಲ್ಲಿ ಯೋಗ್ಯ ಮುದ್ದತ್ತಿನಲ್ಲಿ ಕೊಡುವೆವು.

R. S. KASARGOD. B. A.

Jewellers, KUMTA.

ಆರ್. ಎಸ್. ಕಾಸರಗೋಡ, ಬಿ. ಎ.,
ರತ್ನಾಭರಣ ವ್ಯಾಪಾರಿ, ಕುಮಟಾ.

ಯಾವದೇ { ಆಕಾರದ / ನಕ್ಷೆಯ / ಸಂಖ್ಯೆಯ } ಗಡಿಯಾರವನ್ನು

ಬರೇ ೭ ರೂಪಾಯಿಗಳಿಗೆ ಕೊಡುತ್ತೇವೆ.
ಮೂಲ ಬೆಲೆ ರೂಪಾಯಿ ೧೪, ಅರ್ಧ ಬೆಲೆ ರೂಪಾಯಿ ೭,



ಬರೇ ಒಂದು ತಿಂಗಳ ಬಗ್ಗೆ, ನಾವು ಈ ದರವನ್ನು ಹೊಸ ವರ್ಷದಲ್ಲಿ ಮಾತ್ರ ಕೊಡುತ್ತೇವೆ. ಎಲ್ಲಾ ಗಡಿಯಾರಗಳನ್ನು ಅರ್ಧ ಬೆಲೆಗೆ ಮಾರುತ್ತೇವೆ. ಅತ್ಯುತ್ಕೃಷ್ಟ ಚಲನೆ I ನಿರ್ದೋಷ ಯಂತ್ರರಚನೆ II ಧರಿಸುವದಕ್ಕೆ ಯೋಗ್ಯ ಹಾಗು ರಮ್ಯ III ಎಲ್ಲಾ ಗಡಿಯಾರಗಳಿಗೆ ಗ್ಯಾರಂಟಿ ಇರುತ್ತದೆ. ಯಾವದೇ ಆಕಾರದ, ನಕ್ಷೆಯ, ಸಂಖ್ಯೆಯ ಗಡಿಯಾರವನ್ನು ಉತ್ಕೃಷ್ಟ ರೇಶಿಮೆ ಪಟ್ಟಿಯ ಸಹಿತ ಉಚಿತವಾಗಿ ಕೊಡುತ್ತೇವೆ ಬೆಲೆ ರೂಪಾಯಿ ೭ ಮಾತ್ರ!

ಅಲ್ಪವೇ ಇವೆ; ಈಗಲೇ ಬರೆಯಿರಿ.

ವಿ:— Swan House: P B 503 P T Madras

ಅತ್ಯಲ್ಪವಿವೆ! ಕೇವಲ ಉಚಿತ!



ಉಚಿತ! ಉಚಿತ! ಕೇವಲ ಉಚಿತ!

ತಾ. ೧ ರ ವರೆಗೆ ಇಸ್ಪತ್ತೆ ಪೋಕೆಟ್ ವಾಚ್ಗಳು ೧೮ ಕೆರೆಟ್ ರೋಲ್ಡ ಗೋಲ್ಡಿನವು. ಬಹುಬಾಳ್ಕೆಯ ಮೇಲೆ ೫ ವರ್ಷದ ಗ್ಯಾರಂಟಿ ಇರುವದೆಂದು ಗಡಿಯಾರಗಾರರು ಲೆಕ್ಕ ಹೊರಡಿರುವರು. ಈ ಗಡಿಯಾರಗಳನ್ನು ಕೊಂಡುಕೊಳ್ಳುವವರಿಗೆ ನಾವು ನಮ್ಮ "ಸಿ" ರಿಜಿಸ್ಟರ್ಡ ಟೈಂಪೀಸನ್ನು ಉಚಿತವಾಗಿ ಕೊಡುತ್ತೇವೆ. ಇದೊಂದು ಅಪೂರ್ವ ಕಾಣಿಕೆ ಕೆಲವೇ ಗಡಿಯಾರಗಳಿವೆ. ಬನ್ನಿ ಕೊಂಡು ನೋಡಿರಿ! ಉಚಿತವಾಗಿ ಸಿಗುವ ಟೈಂಪೀಸು ಹಾಗು "ತಾಜಾ" ಲೀವರ ರಿಜಿಸ್ಟರ್ಡ ೧೮ ಕೆರೆಟ್ ರೋಲ್ಡ ಗೋಲ್ಡಿನ ಪೋಕೆಟ್‌ವಾಚ್ ಗಡಿಯಾರಗಳಿಗೆ ಕೂಡಿ ಬರೇ ರೂಪಾಯಿ ೫.

CAPTAIN WATCH CO., P. B. 365, MADRAS.

ದರ ಕಡಿಮೆ! ಮಾಡಿರುವೆವು!

ಸುಸಂಧಿ!

ನಮ್ಮ ಸುಪ್ರಸಿದ್ಧ ಇಂಗ್ಲಿಷ ಮೋಡ

ಸಾಯಕಲ

ವೆಲಿಂಗ್ಟನ

ಸಾಯಕಲ ಮತ್ತು ಮೋಟಾರ ಕಂಪನಿ, ಹೊರ್ನಬಿ ರೋಡ, ಮುಂಬಯಿ ನಂಬರ ೧.

ಅರ್ಸೆನಲ ರೋಡ, ಪುಣೆ.

ಯುಗಾದಿ ಹುಣ್ಣಿವೆಯಿಂದ ೪ನೇ ವರ್ಷ ಪ್ರಾರಂಭ

ಸಚಿತ್ರ ಜಯಕರ್ನಾಟಕ ಮಾಸಪತ್ರಿಕೆ

ಸಂಪಾದಕ— ಆಲೂರ ವೆಂಕಟರಾಯರು.

ಇದರಲ್ಲಿ ವಾಙ್ಮಯಾತ್ಮಕ ಸಾಹಿತ್ಯ, ಧಾರ್ಮಿಕ ಸಾಮಾಜಿಕ ರಾಜಕೀಯ ಆರ್ಥಿಕ ಇತ್ಯಾದಿ ವಿಷಯಗಳು ಬರುವವು. ಪ್ರಪಂಚ ಪರಿಚಯ, ಜೀನಸಾಟ್ಟು ಹುಟ್ಟಿಕಾರಿಗಳು ಕೊಡಲ್ಪಡುವವು. ಪ್ರತಿ ಸಂಚಿಕೆಯಲ್ಲಿಯೂ ಸುಂದರ ಚಿತ್ರಗಳೂ ಬರುತ್ತವೆ. ವೊದಲ ರಾಯ್ಯಲ್ ಆಕಾರದ ೩೦ ಪುಟಗಳು. ವರ್ಗಣಿ. ರು. ೫-೮-೦

ಕಾರ್ಯದರ್ಶಿ ಜಯಕರ್ನಾಟಕ, ಧಾರವಾಡ.

ಎಲ್ಲಾ ನೊವುಗಳಿಗೆ ದಿವ್ಯೌಷಧ

ವಾತಹಾರಿ ತೈಲ.

ತೈಲದ ೫ ತೊಲೆ ಬಾಟ್ಲಿ ೧ ಕ್ಕೆ ೦—೧೨—೦. ಕಾಂಚಿ ಸುವಾಸಿಕ ಕಾಬೂಲಿ ಹಿಂಗು ೧೨ ತೆ ಡಬ್ಬಿ ೧ ಕ್ಕೆ ೧—೮—೦. ಹಿಂಗಿನ ಅರ್ಕ ೧ ತೊಲೆಯ ಬಾಟ್ಲಿ ೧ ಕ್ಕೆ ೦—೮—೦. ರಕ್ತಶುದ್ಧಿಕಾರಕ ಧಾತು ಪೌಷ್ಟಿಕ, ಶಕ್ತಿವರ್ಧಕ ಹಲವಾ ೨೦ ತೊಲೆಯ ಡಬ್ಬಿ ೧ ಕ್ಕೆ ೧—೪—೦. ೧ ತೊಲೆಯ ಹಿಂಗಿನ ಡಬ್ಬಿಗಳು ಡಜನ್ ೧ ಕ್ಕೆ ೨—೦—೦, ತಲೆಗೆ ಹಾಕುವ ಸುವಾಸಿಕ ಮಕರಂದ ತೈಲ ೫ ತೊಲೆಯ ಬಾಟ್ಲಿ ೧ ಕ್ಕೆ ೦—೧೨—೦. ಹುಳದ ವೊಡು ತೊಲೆ ೧ ಕ್ಕೆ ೦—೮—. ಇದಲ್ಲದೆ, ನೀಲಗಿರಿ ತೈಲ, ಎಲ್ಲಾ ತರದ ಊದಿನ ಊದುಬತ್ತಿಗಳು ಯೋಗ್ಯ ಕಿಂಮತಿಗೆ ಸಿಗುವವು. ಟಪಾಲ ಖರ್ಚ ಪ್ರತ್ಯೇಕ.

ಕೆರೇಕರ ಕಾಬೂಲೀ ಹಿಂಗಿನ ದುಕಾನ,

ಜವಳಿಬಾಜಾರ, ಕುಮಟಾ.

ರಾಗದ ಪೆಟ್ಟಿಗೆಗಳು.

ತಬಲೆ ಜೋಡಿ ಇತ್ಯಾದಿ ಗಾಯನ ಸಾಮಾನು.

೧. ರಾಗದ ಕೈಪೆಟ್ಟಿಗೆ ಕಿಂ. ೩೦, ೪೦, ೬೦, ೭೫, ೧೦೦.

೨. „ ಕಾಲು ಪೆಟ್ಟಿಗೆ ಕಿಂ. ೬೫, ೭೫, ೧೨೦, ೧೪೦

೩. ತಬಲೆ ಜೋಡಿ ಕಿಂ. ೧೩, ೧೮, ೨೦, ೨೫.

೪. ಹಾರ್ಮೋನಿಯಮ ಗ್ಯಾಡ (ಮರಾಠಿ) ಕಿಂ. ೧೫, ತಬಲೆ ಗ್ಯಾಡ ಕಿಂ. ೧೨ ೮.

ವಿಶೇಷ ಮಾಹಿತಿಬಗ್ಗೆ ನಮ್ಮ ಮರಾಠಿ ಕ್ಯಾಟಲಾಗ ಧಕ್ಕೆ ಕೊಡುವೆವು.

ಪತ್ರವ್ಯವಹಾರ ಮರಾಠಿಯಿಂದ ಇಲ್ಲವೆ ಇಂಗ್ರಜಿಯಿಂದ ಮಾಡಬೇಕು.

ಪತ್ತೆ:-ಗೋಪಾಳ ಸಖಾರಾಮ ಮತ್ತು ಕಂಪನಿ, ವಿಠ್ಠಲವಾಡಿ ಎದುರಿಗೆ ೩೨೩ ಕಾಳಬಾದೇವಿ, ಮುಂಬಯಿ

ಟಿ. ಎಸ್. ಮೋಟರ ಸರ್ವಿಸ, ಶಿವಮೊಗ್ಗಾ.

ಗೇರಸಪ್ಪಾ ಜೋಗಿಗೆ ರೆಗ್ಯೂಲರ್ ಸರ್ವಿಸ್



ಶಿವರಾತ್ರಿಯ ಸಮಯದಲ್ಲಿ ಗೋಕರ್ಣಕ್ಕೆ ಸ್ಪೆಶಲ್ ಲಾರಿಗಳು

(೧) ಹುಬ್ಬಳ್ಳಿ- ಯಲ್ಲಾಪುರ- ಅಂಕೋಲಾ- ಕಾರವಾರ (೨) ಹುಬ್ಬಳ್ಳಿ- ಮುಂಡಗೋಡ- ಶಿರಸಿ- ಕುಮಟಾ- ಹೊನ್ನಾವರ- ಭಟ್ಕಳ (೩) ಕುಮಟಾ- ಶಿರಸಿ- ಸಿದ್ದಾಪುರ- ಗೇರಸಪ್ಪಾ- ಜೋಗ) Gersappa Falls) ಸಾಗರ ಶಿವಮೊಗ್ಗಾ—ಈ ಲೈನುಗಳಲ್ಲಿ ರೆಗ್ಯೂಲರ್ ಸರ್ವಿಸ ನಡೆಯುತ್ತದೆ

ಪ್ರಯಾಣಿಕರಿಗೆ ಅನುಕೂಲವಾಗುವದಕ್ಕೆ ಎಲ್ಲಾ ಸ್ಟೇಶನ್ನುಗಳಲ್ಲೂ ವ್ಯವಸ್ಥೆ ಮಾಡಿದೆ.

ಹೆಚ್ಚಿನ ಮಾಹಿತಿಯನ್ನು ಆಫೀಸಿನಲ್ಲಿ ತಿಳಿದುಕೊಳ್ಳಬಹುದು

THE

INDIA PROVIDENT COMPANY LTD:

ESTABLISHED 1910.

Dividend declared 1912 — 20 per cent.

Dividend declared 1922 — 30 per cent.

Dividend declared previous year 15-20 per cent.

The Safest office for Life Insurance of the poor. Premium Re. 1 As. 8 per mensem.

Apply at once to.-

PADMANABH GOPAL KAMAT,

Agent, ANKOLA. N. Kanara

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕಿಟಗಳು ಮತ್ತು ಸುವರ್ಣಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು.

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ.

ಈ ಮಧುವು ಮಹೌಷಧಿಯಾಗಿದ್ದು ಬಹಳ ರುಚಿಯಾಗಿಯೂ ಪುಷ್ಟಿಕರವಾಗಿಯೂ ಇರುತ್ತದೆ. ಮಧುನ ಸೇವನದಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ವಿಕೃತಿಯಿಂದಾದ ಬೇನೆಯು ಹೋಗು... ೬೦ ೭೦ ವರ್ಷದ ಮುದುಕರ ಕಾಮುಕಾರ ... ಹರುಷದಂತೆ ಪ್ರವರ್ಧಮಾನವಾಗುವದು. (ನಿಜ... ಒಂದೇ ಸಪ್ತಕದಲ್ಲಿ ಅನುಭವಕ್ಕೆ ಬರುವದು) ಜನನೇಂದ್ರಿಯದೊಳಗಿನ ಶಕ್ತಿಯು ಹೋ... ನಷ್ಟ... ವಾಗುವದು. ಮೂತ್ರವಿಸರ್ಜನದ ... ಅಥವಾ ಶಡಗಿ ಹೋಗುವ ... ವು ಬಂದಾಗುವದು.— ಪರಮಾ ಹಾಗೂ ಕಾಸಿಂದ ದೂಷಿತವಾದ ಶರೀರವು ನಿರೋಗವಾಗುವದು. ... ದಿವಸದಲ್ಲಿ ಗುಣಬರುವದು. ತರುಣ ಸ್ತ್ರೀಪುರುಷರು ಈ ದ್ರಾಕ್ಷಾರ್ಕ ಮಧುನ ಸೇವನ ಮಾಡಿ ಅದರೊ... ಗುಣ ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ, ಉದರರೋಗ ದಮ್ಮು ಇವುಗಳು ಶಾಂತವಾಗು... ದಿವಸದಲ್ಲಿ ಮೂರಾವರ್ತಿ ಊಟಮಾಡಿದರೂ ಅನ್ನ ಪಚನವಾಗಿ ಹಸಿವೆ ಚನ್ನಾಗಿ ಆಗುತ್ತದೆ. ಅದರ... ಭವವು ಮೊದಲನೇ ದಿವಸವೇ ಬರುವದು. ಶೌಚ ಸಾಫ ಆಗುವದು. ಮೈಯಲ್ಲಿ ಎಷ್ಟೇ ದಿವಸದ ... ಇದ್ದರೂ ಒಂದು ವಾರದಲ್ಲಿ ಶಾಂತವಾಗುವದು. ಈ ವಿಷಯಕ್ಕೆ ಸಂದೇಹವಿಲ್ಲ. ಸ್ತ್ರೀಸಂಭೋಗ ವಿಷಯದ ಕಾರಣ... ಹೊಸಬೇನೆ ಇದ್ದರೆ ೧೦ ದಿವಸ ನಡೆಯುವ ಒಂದು ಬಾಟಲಿಯಿಂದ ಗುಣಬರುವದು. ಹಳೇ ರೋಗದ್ದಕ್ಕೆ ... ಬಾಟಲಿಯಿಂದ ಗುಣಬರುವದು. ಒಂದು ಬಾಟ್ಲಿಯ ಕಿಮ್ಮತು ೧| ರೂಪಾಯಿ ಮೂರು ಬಾಟಲಿಯ ಕಿ... ೩—೦—೦ ಮೂರು ಬಾಟಲಿಗಳನ್ನು ಒಂದೇ ಪಾರ್ಸಲಿನಲ್ಲಿ ಕಳಿಸುವೆವು. ಅಂದರೆ ಟಪಾಲಖರ್ಚ ... ಬೀಳುವದಿಲ್ಲ. ಆರು ಬಾಟಲಿಗಳ ಕಿಮ್ಮತು ೧೨—೧—೦ ಮತ್ತು ೧ ಬಾಟಲಿ ಪುಕ್ಕಟ ಸಿಗುವದು. ... ಖರ್ಚ ಬೇರೆ ಬೀಳುವದು. ಏಜಂಟರ ಕಡೆಯಿಂದ ೧ ಬಾಟ್ಲಿಗೆ ೧—೦—೦ ೩ ಬಾಟ್ಲಿಗೆ ೩—೦—೦ ... ೧೩—೯—೦

ವ್ಯವಸ್ಥಾಪಕ— ದ್ರಾಕ್ಷಾರ್ಕಮಧು ಆಫೀಸ. ಪೋ. ವಿಶ್ರಾಂತ. ಜಿ ಬೆಳಗಾವಿ

...ತ್ತಿಗೆಯಲ್ಲಿ ಹೊಸ ಹೋಳೀ ಹಬ್ಬ.

ವಿದ್ಯಾರ್ಥಿಗಳ ಅಪೂರ್ವ ಉತ್ಸಾಹ!
ನಾಗರಿಕರ ಸಂಪೂರ್ಣ ಸಹಾನುಭೂತಿ!!

ಯಾವದಾದರೊಂದು ಕಾರ್ಯದ ಯೋಗ್ಯಾಯೋಗ್ಯತೆಯನ್ನು ಪರೀಕ್ಷಿಸಬೇಕಾದರೆ, ನಾವು ಮೊದಲು ಅದರ ಕಾರಣ ಮತ್ತು ಪರಿಣಾಮದ ಕಡೆಗೆ ನೋಡಬೇಕಾಗುತ್ತದೆ. ಅದರ ನಮ್ಮ ಹಿಂದೂ ಸಮಾಜದಲ್ಲಿ ನಡೆಗೊಂಡಿರುವ ಹೋಳೀ ಹಬ್ಬದ ಗುಣಾವಗುಣಗಳನ್ನು ನಿರೀಕ್ಷಿಸಬೇಕಾದರೆ, ಅದರ ಕಾರ್ಯಕ್ರಮ ವ ಪರಿಣಾಮದ ಕಡೆಗೆ ವಿಶೇಷ ಲಕ್ಷಗೊಡಬೇಕಾಗುವದು. ಯಾಕಂದರೆ, ಈ ಹಬ್ಬದ ಉತ್ಪತ್ತಿಯ ಕಾರಣದ ವಿಷಯದಲ್ಲಿ ಭಿನ್ನ ಭಿನ್ನ ಜನರ ಅಭಿಪ್ರಾಯಗಳು ಭಿನ್ನಭಿನ್ನವಾಗಿರುವವು. ಈ ಹಬ್ಬದ ಒಂದು ವೇಳೆ ಅದರ ಮೂಲ ಉದ್ದೇಶವು ಆಗಿನ ಕಾಲಮಾನಕ್ಕೆ ಅನುಕೂಲವಾಗಿದ್ದರೂ, ಕಾಲಾನುಸಾರ ವಾಗಿ ಅದರಲ್ಲಿ ಅವಿಚಾರದ ಎಷ್ಟೋ ವಿಷಯಗಳು ಸೇರಿದ್ದು, ಈಗಿನ ಪರಿಸ್ಥಿತಿಗೆ ಅದು ತೀರ ಪ್ರತಿಕೂಲವಾಗಿರುತ್ತದೆಂಬ ಬಗ್ಗೆ ಶಂಕೆಯೇನೂ ಇದ್ದಿಯಿಲ್ಲ. ಆದ್ದರಿಂದ ಸಾರಾಸಾರ ವಿಚಾರಶೂನ್ಯರಾಗಿ "ಗತಾನುಗತಿಕೋ ಲೋಕಃ" ಎಂಬಂತೆ ನಮ್ಮ ಹಿಂದಿನವರ ಅಂಧ-ಅನುಕರಣ ಮಾಡದೆ ಈ ಹೋಳೀ ಹಬ್ಬದ ಗುಣಾವಗುಣಗಳನ್ನು ವಿಚಾರಿಸುವಾ.

ಈ ವರೆಗೆ ನಮ್ಮಲ್ಲಿ ನಡೆಯುತ್ತಿದ್ದ ಹೋಳೀ ಹಬ್ಬದ ಕಾರ್ಯಕ್ರಮವನ್ನು ಎಷ್ಟು ವರ್ಣಿಸಿದರೂ ತೀರದು. ಅದನ್ನು ಕಲ್ಪಿಸಿದಂದಿನಿಂದ ಎಲ್ಲಿ ನೋಡಿದರೂ, ರಣಮಾದ್ಯವೂ, ಲಬೋ ಲಬೋ ಹೊಯ್ಕೊಳ್ಳುವದೂ, ಅಸಭ್ಯ ಕಠಿಣ ಶಬ್ದಗಳೂ ಕೇಳಬರುತ್ತಿದ್ದವು. ಹುಡುಗರು ಮನಬಂದಂತೆ ವೇಷಗಳನ್ನು ಹಾಕಿಕೊಂಡು ಸ್ವೇಚ್ಛಾಚಾರಿಗಳಾಗಿ ಬೀದಿ ಬೀದಿ ತಿರುಗಾಡುತ್ತಿದ್ದರು. ಉಳಿದ ಕಾಲದಲ್ಲಿ ಬಂಧು-ಬಾಂಧವರಂತೆ ಪ್ರೇಮದಿಂದ ವರ್ತಿಸುತ್ತಿದ್ದ ಭಿನ್ನ ಭಿನ್ನ ಜಾತಿಯವರು ಈ ಹಬ್ಬದ ಮುಖ್ಯ ಕಲಗೇರಿ ದಿನ, "ಎಡಕ್ಕೆ-ಬಲಕ್ಕೆ, ನಮ್ಮ ಗಡಿ-ನಿಮ್ಮ ಗಡಿ, ಹುಲ್ಲು ಕರಗಿ ಮೊದಲಾದ ಕ್ಷುಲ್ಲಕ ಸಂಗತಿಗಳನ್ನು ಮುಂದೆ ಮಾಡಿಕೊಂಡು, ತಮ್ಮತಮ್ಮೊಳಗೆ ಬಡದಾಡಿ, ತಲೆ-ತಲೆ ಒಡಕೊಂಡ ಉದಾಹರಣೆಗಳು ಎಷ್ಟೋ ಇವೆ. ಇಷ್ಟೇ ಅಲ್ಲ, ವಿಷಯಲಂಪಟರಾದ ಕೆಲವು ಯುವಕರೂ, ಗಡ್ಡ-ಮೀಸೆಗಳು ಹಣ್ಣಾಗಿ ತಲೆಯ ಕೂದಲೆಲ್ಲ ಉದುರಿಹೋಗಿದ್ದರೂ ಕಾಮಭಕ್ತಿಯು ಮಾತ್ರ ಕಡಿಮೆಯಾಗದ ಹಲವು ವೃದ್ಧರೂ ಬಾಲಕರನ್ನು ಸಹ ಕೂಡಿಕೊಂಡು ರಾತ್ರಿಯಲ್ಲಿ ಅಡ್ಡಾಡಿದವರಂತೆ ಸೂಳೆಯರ ಮನೆಗಳ ಸುತ್ತಲೂ ಸುಳಿಯುತ್ತ ಬೀಭತ್ಸ ಶಬ್ದಗಳನ್ನಾಡಿ ಅವರಿಂದ "ಥೂ, ಥೂ" ಅನಿಸಿಕೊಂಡು ಧನ್ಯರಾಗುತ್ತಿದ್ದರೆ, ಇನ್ನು ಕೆಲವರು ಬೇಕೆಂತ ಕರೆದೊಯ್ದಿಕೊಂಡ ವೇಶ್ಯಾಸ್ತ್ರೀಯರನ್ನು ಕೂಡಿದ ಸಭೆಯಲ್ಲಿ ಅಸಭ್ಯಕರವಾದ ತಮ್ಮ ವಾಕ್ಪಾಂಡಿತ್ಯದಿಂದ ನಾಚಿಕೆಯ ಮೂಲಕ ತಲೆತಗ್ಗಿಸಲು ಹಚ್ಚಿ ಕೃತಕೃತ್ಯರಾಗುತ್ತಿದ್ದರು.

ಮಾನ-ಮರ್ಯಾದೆಗಳನ್ನು ಮಾರಿಕೊಂಡವರೆಂದು ಅನಿಸಿಕೊಳ್ಳುವ ವಾರಾಂಗನೆಯರ ಗತಿಯೇ ಹೀಗಾದ ಮೇಲೆ, ಕುಲೀನರೂ, ಸುಶೀಲರೂ, ವಿನಯಶಾಲಿಗಳೂ ಆದ ನಮ್ಮ ಮಾತೃ-ಭಗಿನಿಯರ ಪಾಡೇನು? ಅವರು ಅಂಥ ಕರ್ಣಕಠೋರವಾದ ನಿರ್ಲಜ್ಜ ಶಬ್ದಗಳನ್ನು ಕೇಳುವದಕ್ಕಿಂತ ಕಾಮನ ಹಬ್ಬದ ಪೂರ್ತಿಗೆ ದೇವರು ತಮ್ಮನ್ನು ಕಿವುಡರನ್ನಾಗಿ ಮಾಡಿದ್ದರೆ ಒಳಿತಾಗುತ್ತಿತ್ತೆಂದು ಭಾವಿಸಿದರೆ ಆಶ್ಚರ್ಯವೇನು? ಒಟ್ಟಿನಲ್ಲಿ ಈ ವರೆಗೆ ಹೋಳೀಹಬ್ಬವೆಂಬುದು ಜನರ ಶೀಲವನ್ನು ಪರೀಕ್ಷಿಸುವ ಒರೆಗಲ್ಲಾಗಿತ್ತು. "ಏಸ ಕೇನ ಪ್ರಕಾರೇಣ ಪ್ರಸಿದ್ಧಃ ಪುರುಷೋ ಭವ" ಎಂಬ ತತ್ವದವರೇ ಅದರಲ್ಲಿ ಪ್ರತಿಷ್ಠೆ ಪಡೆಸಿಕೊಳ್ಳುತ್ತಿದ್ದರು. ಮತ್ತು ಇಂಥ ಸಂಗತಿಗಳಿಂದ ಸಮಾಜದಲ್ಲಿ ದ್ವೇಷ, ದುರ್ವ್ಯಸನ, ವ್ಯಭಿಚಾರಾದಿಗಳು ಹೆಚ್ಚುತ್ತ ಬಾಲಕರನ್ನು ದುರ್ಮಾರ್ಗಕ್ಕೆ ಹಚ್ಚಿದಂತಾಗುತ್ತದೆಂಬುದು ಅವರ ಲಕ್ಷಕ್ಕೆ ಬರುತ್ತಿದ್ದಿಲ್ಲ. ಇದಲ್ಲದೆ ಕಾಮನನ್ನು ಸುಡುವ ಕಾಲಕ್ಕೆ ಈ ಕಾಮಭಕ್ತರು ಕಸಬರಿಗೆ ಮೊದಲಾದ ಉಪಕರಣಗಳಿಂದ ಹೊಡೆಯುತ್ತಿದ್ದ ಹುಚ್ಚಾಟವನ್ನಂತೂ ವರ್ಣಿಸುವದು ಅಶಕ್ಯವೇ ಸರಿ! ಈ ರೀತಿಯಲ್ಲಿ ಅನೀತಿಗೆ ಕಾರಣವಾದ ಈ ಹಬ್ಬಕ್ಕೆ ಯಾವ ಧರ್ಮಕ್ಕೂ ಆಧಾರವಿಲ್ಲ. ಯಾಕಂದರೆ, ಜಾತಿಗೆ ಭೇದವಾದರೂ, ನೀತಿಗೆ ಭೇದವುಂಟೇ?

ಆದ್ದರಿಂದ ಇಂಥ ಅನರ್ಥಗಳನ್ನು ಹೋಗಲಾಡಿಸಿ, ಹುಡುಗರ ನೈತಿಕ, ಮಾನಸಿಕ, ಶಾರೀರಿಕ ಸುಧಾರಣೆಗಳನ್ನುಂಟುಮಾಡುವದಕ್ಕಾಗಿ ಕಳೆದ ಹೋಳೀ ಹಬ್ಬದ ಕಾಲಕ್ಕೆ ನಮ್ಮ ಸಂಸ್ಥೆಯ ಕಡೆಯಿಂದ ಬಿಡಾರ ವೈಲಲ್ಲಿ ಹುಡುಗರ ಕರ್ಮಕ್ಕನ ಆಟ ಮೊದಲಾದವುಗಳನ್ನಿಟ್ಟಿತ್ತು. ಮತ್ತು ಅದರ ಕಾರ್ಯಕ್ರಮವು ಈ ಕೆಳಗೆ ಕಾಣಿಸಿದಂತಾಗಿತ್ತು:—

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ.

ಕಾಮಿನಿಯಾ ತೈಲ. ರಿಜಿಸ್ಟರ್ಡ

ಕುಡುಮಾತ, ಗುಂಗುರು ಗುಂಗುರಾಗಿರುವ ನೀಲಿಮಯಿಂತ ವಿಪುಲವಾದ ಕೇಶವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು? ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾದರೋ.

ಕಾಮಿನಿಯಾ ಆಯಿಲ್ ರಿಜಿಸ್ಟರ್ಡ

ಈ ಆಯಿಲ್ ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತದೆಯೋ ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ. ಈ ಆಯಿಲ್ ಹಚ್ಚಿಕೊಳ್ಳುವದರಿಂದ ಮಸ್ತಕದ ಬೇನೆಯು ಕಡಿಮೆಯಾಗಿ ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಅದರ ಬುಡದಿಂದ ತೊಡಗಿದ ಬಳಿಕ ಎಂದಿಗೂ ಉದುರಿ ಬಿದ್ದು ಹೋಗುವದಿಲ್ಲ. ಅದರೆ, ಅವು ಸೊಂಪಾಗಿ ಬೆಳೆದು ಸಮೃದ್ಧವಾಗುವವು. ಅದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವದು.

ಕೀಳು ತರದ ಎಣ್ಣೆಗಳನ್ನು ಕೊಂಡುಕೊಂಡು ತಮ್ಮ ಹಣವನ್ನು ಕಳೆಯುವದಕ್ಕಿಂತ ಒಂದೇಯೊಂದು ಸಾರಿ "ಕಾಮಿನಿಯಾ ಆಯಿಲ್" ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ನಮಗೆ ಒಂದು ಪ್ರದರ್ಶನದಲ್ಲಿ "ಸರ್ಟಿಫಿಕೇಟ ಆಫ್ ಮೆರಿಟ್" ಅಥವಾ ಯೋಗ್ಯತಾಪತ್ರವು ಅದರ ಸಾವಿರಾರು ಗ್ರಾಹಕರು ಉಪಯೋಗಿಸಿ ಮಾನಪತ್ರಗಳನ್ನು ಕೊಟ್ಟರು.

ಕ್ರಯ:— ಸೀಸೆಗೆ ರೂಪಾಯಿ 1-0-0, ಸೀಸೆ ೩ಕ್ಕೆ ರೂಪಾಯಿ 2-10 0; ವಿ. ಪಿ. ಖರ್ಚ 0-14-0.

ಅತಿ ಮನೋಹರವಾದ ಸುರಭಿಯು!

ಒಟ್ಟೋದಿಲ್ ಬಹಾರ್ !! (ರಿಜಿಸ್ಟರ್ಡ.)

ಈ ಸುಗಂಧದ್ರವ್ಯವು ಮಧುರ, ಕೋಮಲ, ಚಿರಸ್ಥಾಯಿ ಮತ್ತು ಅತ್ಯುತ್ತಮವು ಆಗಿ ಪರೀಕ್ಷಿಸಿ ಅಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧಪಡಿಸಲ್ಪಟ್ಟಿದೆ. ಇದರಲ್ಲಿ ಮದಿರೆಯು (ಆಲ್ಕೋಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ವಸ್ತ್ರದಲ್ಲಿ ಅಥವಾ ಅಂಗದಲ್ಲಿ ಈ ದ್ರವ್ಯದ ಕೆಲವು ಹನಿಗಳನ್ನು ಹಚ್ಚಿದರೆ ನಿಮ್ಮ ಮನಸ್ಸು ಸ್ವರ್ಗೀಯವಾದೊಂದು ಪುಷ್ಪವಾಟಿಕೆಯ ಅನುಭವವಾಗುವದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ, ಈ ಒಟ್ಟೋದಿಲ್ ಬಹಾರ್‌ದ ಗಂಧವು ಅವೆಲ್ಲವುಗಳನ್ನು ವಿಜಯಿ ಮನಸ್ಸಿನ ಶಕ್ತಿಯಿಂದ ಕಳಕೊಳ್ಳುವವು. ಒಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ.

ಕ್ರಯ. ಸೀಸೆ 1 ಕ್ಕೆ 0 8 0; 1 ಡ್ರಾಮಿನ (ಮಿಡಿಯಂ) ಸೀಸೆ 1 ಕ್ಕೆ 0 12 0; ½ ಔನ್ಸಿನ ದೊಡ್ಡ ಸೀಸೆ 1 ಕ್ಕೆ 2 0 0. ಅಂಚೆಯ ವೆಚ್ಚ ಬೇರೆ 0 4 0.

ಒಟ್ಟೋದಿಲ್ ಬಹಾರ್ ಪರಿಮಳ ಕಾಡಿಗಳು ಡಜನ್ 1 ಕ್ಕೆ 0 12 0.

Address: **The Anglo Indian Drug & Chemical Co.**
16 Market, BOMBAY 2.

ಶುಕ್ರವಾರ ತಾ. ೨೬-೩-೧೯೨೬.

ಮುಂಜಾನೆ ೮-೧೦:- ೧ ಪೋಲ್ ಪ್ಲೋಯಿಂಗ್, ೨ ಸ್ಪೂನ್ ರೇಸ್, ೩ ಥ್ರೀಲೆಗ್ಡ್ ರೇಸ್, ೪ ಪೋ

ಮಧ್ಯಾಹ್ನ ೪-೬:- ೧ ಪ್ರಿನ್ಸ್ ಆಫ್ ಫೋರ್ಟ್, ೨ ರಸ್ಲಿಂಗ್, ೩ ಫುಟಬಾಲ್ ಮ್ಯಾಚ್.

ಶನಿವಾರ ತಾ. ೨೭ ೩ ೧೯೨೬.

ಮುಂಜಾನೆ ೮-೧೦:-, ೧ ರನಿಂಗ್, ೨ ಲಾಂಗ್‌ಜಂಪ್, ೩ ಫ್ಲ್ಯಾಗ್ ರೇಸ್,

ಮಧ್ಯಾಹ್ನ ೩-೬ (ಸ್ಪೆಶಲ್, ೧ ಜಂಪಿಂಗ, ೨ ಸ್ಯಾಕಲ್ ರೇಸ್, ೩ ಸ್ಯಾಕ್ ರೇಸ್, ೪ ಟಗ್ ಆಫ್ ವಾರ, ೫ ಪೋಲ್ ಕ್ಲೈಂಬಿಂಗ, ೬ ಸ್ಲೋ ರೇಸ್, ೭ ಒಬ್ಸ್ಟಾಕಲ್ ರೇಸ್.

ಆದಿತ್ಯವಾರ ತಾ ೨೮-೩-೧೯೨೬.

ಮಧ್ಯಾಹ್ನ ೩-೬:- ೧. ಸ್ಯಾಕಲ್ ಫಸ್ಟ್ ಏಡ್, ೨ ಸಂವಾದಗಳು, ೩ ಮದ್ಯಪಾನ ನಿಷೇಧಪರ ನಾಟಕ, ೪ ಭಾಷಣ, ೫ ಇನಾಮು ಹಂಚುವದು.

ಇವೆಲ್ಲ ಮೊದಲೇ ಜಾಹೀರಾದ್ದರಿಂದ ನಾಗರಿಕರೆಲ್ಲ ಕಾಮನನ್ನು ಕಾಡ್ರಿಸುವದನ್ನೇ ಬಿಟ್ಟುಬಿಟ್ಟದ್ದಲ್ಲದೆ, ತನು-ಮನ-ಧನಗಳಿಂದ ಈ ಹೊಸ ಉತ್ಸವಕ್ಕೆ ನೆರವಾದರು. ಇಷ್ಟೇ ಅಲ್ಲ, ನಮ್ಮ ಶಹರ ಮ್ಯುನಿಸಿಪಾಲಿಟಿಯವರು ಸಹ ಇಂಥ ಸಾರ್ವಜನಿಕ ಸತ್ಕಾರ್ಯದ ಮಹತ್ವವನ್ನರಿತು, ನಮಗೆ ಅಡಿಗಡಿಗೆ ಸಹಾಯ ಮಾಡಿದ್ದಲ್ಲದೆ, ಬಾದರ ಅಂಗೀಕರಣದಿಂದ ೨೫ ರೂಪಾಯಿಗಳನ್ನು ಅರ್ಪಿಸಿ, ಪ್ರತಿ ವರ್ಷವೂ ಹೋಳೀ ಹಬ್ಬದ ಉತ್ಸವವು ಇದೇರೀತಿಯಲ್ಲಿ ನಡೆಯಲೆಂಬ ತಮ್ಮ ಅಭಿಲಾಷೆಯನ್ನು ವ್ಯಕ್ತಪಡಿಸಿದರು. ಈ ಉತ್ಸವಕ್ಕಾಗಿ ತಂಡತಂಡಾಗಿ ಬರುತ್ತಿದ್ದ ಪ್ರೇಕ್ಷಕರು ಹುಡುಗರ ಕಲೋತ್ತಿನ ಆಟ ಮೊದಲಾದವುಗಳನ್ನು ಕಂಡು ಬೆರಗಾಗಿ ಹೋಗುತ್ತಿದ್ದರು. ಹೋಳೀ ಹಬ್ಬವೆಂಬುದು ನೀತಿಗೆ ವಿರೋಧವೂ, ಕಲಹಕ್ಕೆ ಕಾರಣವೂ, ಆರೋಗ್ಯಕ್ಕೆ ಹಾನಿಕರವೂ ಆಗಿದ್ದು, ಅದು ಶಾಸ್ತ್ರಸ್ಮೃತಿಯಲ್ಲಿದ್ದ ಹಾಗೆ ಜನರು ಮಾತ್ರ ಆಚರಿಸಲು ಶಕ್ಯವಿದ್ದಾಗಿರುವದು. ಆದ್ದರಿಂದ ೨೦ನೇ ಶತಮಾನದ ಇಂಥ ಜಾಗ್ರತಿಯ ಕಾಲದಲ್ಲಿ ಇತರ ಕಡೆಯ ಜನರೂ ನಮ್ಮಂತೆಯೇ ಐಕ್ಯವನ್ನು ಬೆಳಿಸಿ, ನೈತಿಕ, ಮಾನಸಿಕ, ಶಾರೀರಿಕ, ಉನ್ನತಿಯನ್ನುಂಟುಮಾಡುವ ಹಾಗೆ ಕಲ್ಯಾಣಿಸಿದಂತೆ ಹೊಸ ರೀತಿಯಲ್ಲಿ ಹೋಳೀ ಹಬ್ಬವನ್ನು ಮಾಡಲು ಪ್ರಯತ್ನಿಸುವದು ಉಚಿತವಲ್ಲವೇ?

ನಮ್ಮ 'ಸತ್ಯಾಕ್ರಮ'ವೆಂಬ ನಮ್ಮ ಸಂಸ್ಥೆಯು ಸ್ಥಾಪನವಾಗಿ ೬-೭ ವರ್ಷಗಳಾಗಿದ್ದು, ಅದರ ಧರ್ಮಾರ್ಥ ಪುಸ್ತಕಾಲಯದ ಲಾಭವನ್ನು ನೂರಾರು ಜನರು ಪಡೆಯುತ್ತಿರುವರು. ಇದಲ್ಲದೆ, ಅಹಿಂಸಾದ ಕಾರ್ಯದಲ್ಲಿ ನಾವು ಮಾಡುತ್ತಿರುವ ಪ್ರಯತ್ನವನ್ನು ಎಷ್ಟೋ ಜನರು ಅರಿತಿರಬಹುದು. ಮತ್ತು ಈ ಹೊಸ ಹೋಳೀ ಉತ್ಸವವು ನಮ್ಮ ಪ್ರಥಮ ಪ್ರಯತ್ನವಾಗಿದ್ದು, ಈ ಕಾರ್ಯಕ್ಕೆ ಪ್ರತ್ಯಕ್ಷಾಪ್ರತ್ಯಕ್ಷ ರೀತಿಯಿಂದ ನೆರವಾದ ಎಲ್ಲರ, ವಿಶೇಷವಾಗಿ ಮ್ಯುನಿಸಿಪಾಲಿಟಿಯವರ ಆಭಾರವನ್ನು ಮನ್ನಿಸಿ, ಈ ಉತ್ಸವವು ಪ್ರತಿ ವರ್ಷವೂ ಹೆಚ್ಚೆಚ್ಚು ಉತ್ಸಾಹದಿಂದ ಸಾಗಲೆಂದು ಶ್ರೀ ದೇವರನ್ನು ಪ್ರಾರ್ಥಿಸಿ, ಈ ಚಿಕ್ಕ ಲೇಖವನ್ನು ಮುಗಿಸುತ್ತೇನೆ.

ಸತ್ಯಾಕ್ರಮ, ಶಿರ. } ತಮ್ಮ,
ವಿಠ್ಠಲ ಅನಂತ ಹೊದ್ದೈ
ತಾ. ೮-೩-೧೯೨೬ } ಸೆಕ್ರೆಟರಿ

— ವೈಸರಾಯ ಪಟ್ಟಣದಲ್ಲಿ ಮ್ಯುನಿಸಿಪಾಲಿಟಿಯವರು ಎತ್ತುವಳಿ ಮಾಡುವ ತೆರಿಗೆಯು ಪ್ರಮಾಣವು ಸರಾಸರಿ ತಲೆ ೧ರ ರೂಪಾಯಿ ೩ ರಂತೆ ಬೀಳುತ್ತದೆ ಇದು ಬಲೀ ಮ್ಯುನಿಸಿಪಾಲಿಟಿಯ ಕರ.

— ಶಾಹಪೂರದ ಮ್ಯುನಿಸಿಪಾಲಿಟಿಯವರು ತಮ್ಮ ಅಧಿಕಾರ ಕಕ್ಷೆಯಲ್ಲಿ ಎತ್ತು, ಹಾಲುಹಿಂಡುವ ಆಕಳು-ಕರು ಇತ್ಯಾದಿಗಳ ಕೊಲೆ ಮಾಡಬಾರದೆಂದು ಬಹುಮತದಿಂದ ನಿರ್ಣಯಿಸಿರುವರು, ಮಹಮ್ಮದೀಯ ಸಭಾಸದರು ವಿರೋಧಿಸಿದರು! ಏಳ ಇಷ್ಟು ಪಕ್ಷಾಂಧತೆ!!

ಕ್ಷಯ ಸಂವತ್ಸರದ ಫಲ

ರವಿ ೪ ಚಂದ್ರ ೭ ಬುಧ ೯			ರಾಹು ೩
	ಕ್ಷಯ ವರ್ಷಾರಂಭದ ಗ್ರಹಚಕ್ರ.		
ಗುರು ೪ ಮಂ ೧೧ ಶುಕ್ರ ೪			
ಕೇತು ೯	ಶನಿ ೪		

ಈ ಸಂವತ್ಸರದಲ್ಲಿ ಚಂದ್ರನು ಅರಸನು. ಅದರಿಂದ "ಧಾನ್ಯಪ್ರೋಕ್ತಿವಯಃಸೋಽಧಿಕದೋಹಃ ವ್ರಾಣಿನಾಂ ಬಲವಶಾತ್ಮಣಘೋಷಃ। ಭೂಭೃತೋ ವಿಹಿತಸತ್ ದ್ವಿಜಪೂಜಾ ಜಾಯತೇ ಹಿಮಕರೋ ಯದಿ ರಾಜಾ ।" ಎಂಬ ವಚನದಂತೆ ದನಗಳಿಗೆ ತುಂಬಾ ಹಾಲು, ಅರಸರಿಗೆ ಸುಖ, ಕಾಲಕ್ಕೆ ಮಳೆಬಿದ್ದು ಧಾನ್ಯವೃದ್ಧಿಯಾಗಿ ಜನರಿಗೆ ಸುಖವಾಗಬೇಕು. ಆದರೆ, ಚಂದ್ರನು ಸಿಂಹ ರಾಶಿಯಲ್ಲಿ ನೀಚ ಶತ್ರುವಾದ ಬುಧನನ್ನು ಜೊತೆಗೆ ಕರಕೊಂಡದ್ದರಿಂದ ನಿಸ್ತೇಜನಾಗಿದ್ದಾನೆ. ಆದರಿಂದ ಪ್ರಜೆಗಳಿಗೆ ಕಷ್ಟ-ಸುಖಗಳು ಮಿಶ್ರವಾಗಿ ಫಲಿಸುವವು

ಶುಕ್ರನು ಧನಸಪ್ತಮಾಧಿಪತ್ಯವನ್ನು ಪಡೆದಿದ್ದಾನೆ. ಲಗ್ನಾಧಿಪನಾಗಿ ಉಚ್ಚ ರಾಶಿಯಲ್ಲಿರುವ ಅಂಗಾರಕನನ್ನೂ, ಬೃಹಸ್ಪತಿಯನ್ನೂ ಕೂಡಿಕೊಂಡು ದಶಮ ಸ್ಥಾನದಲ್ಲಿದ್ದಾನೆ; ಅರಸನಾದ ಚಂದ್ರನಿಂದ ಏಕಾದಶ ಸ್ಥಾನದಲ್ಲಿದ್ದಾನೆ. ವ್ಯಾಪಾರವೃದ್ಧಿಯಾಗುವದು; ನವೀನ ಪ್ರಕರಣಗಳು ತುಂಬೆತ್ತುಗಳು ವವು; ಹಿಪ್ಪಣವರಿಗೆ, ಅಧಿಕಾರಸಂಪನ್ನರಿಗೆ ಲಾಭವಿದೆ; ರಾಜಕಾರಣಧುರಂಧರರಿಗೂ ಈ ಸಂವತ್ಸರವು ಅತ್ಯಂತ ಉತ್ತೇಜಕವಿದೆ.

ಭಾಗ್ಯವ್ಯಯಾಧಿಪತಿಯು ಬೃಹಸ್ಪತಿಯು ಮಕರ ರಾಶಿಯಲ್ಲಿದ್ದಾನೆ. "ಅಶಕ್ರುಪ್ರೋಃ ಜನಾಧಾಕ್ರೀಪೂರ್ಣಾ ಸಸ್ಯಾರ್ಥವೃಷ್ಟಿಭಿಃ। ವಿಹಿತರೋಗಭಯಾಃ ಸರ್ವೇ ಮಕರಸ್ಥೇ ಸುರಾಚಾರ್ಯೇ॥" ಅಂದರೆ, ಪ್ರಜೆಗಳೊಳಗಿನ ಶತ್ರುತ್ವವು ನಷ್ಟವಾಗುವದು, ಭೂಮಿಯಲ್ಲಿ ಧನಧಾನ್ಯಾದಿಗಳು ಸಮೃದ್ಧಿಯಾಗಿ ಬೆಳೆಯುವವು; ವೃಷ್ಟಿ ವಿಶೇಷ; ಜನರಿಗೆ ರೋಗಭಯವಿಲ್ಲ. ಈ ಕುರಿತು ಇನ್ನೊಂದು ಗ್ರಂಥದಲ್ಲಿ ಇನ್ನೊಂದು ವಚನವಿದೆ "ಮಕರೇ ಚ ಗುರುಶ್ಚೈವ ದುರ್ಭಿಕ್ಷಂ ಘೋರದಾರುಣಂ। ರಾಜ್ಞಾಂ ಪರಸ್ಪರ ಯುದ್ಧಂ ತ್ರಿಮಾಸಾಂತೇ ಶುಭಂ ಭವೇತ್॥" ಕೆಲವು ದೇಶಗಳಲ್ಲಿ ಭಯಂಕರವಾದ ಬರಗಾಲವು ಬೀಳುವದು; ಅರಸರೊಳಗೆ ಪರಸ್ಪರ ಯುದ್ಧವಾಗುವದು. ಈ ವಚನಗಳು ಮಕರ ರಾಶಿಯಲ್ಲಿರುವ ಬೃಹಸ್ಪತಿಯ ಫಲಗಳು ನಿಜ ಚೈತ್ರ ಶುದ್ಧ ೧೫ಮಿಗೆ ಗುರುವು ಕುಂಭ ರಾಶಿಯನ್ನು ಪ್ರವೇಶಿಸುತ್ತಾನೆ, ಕುಂಭ ರಾಶಿಯ ಫಲಗಳಲ್ಲಿಯೂ ಮತಭೇದವಿದೆ "ಸಂರಕ್ಷತಿ ಜನೈರ್ಧಾತ್ರೀ ಸಂಪೂರ್ಣಾ ಧ್ಯಃ ಸುವೃಷ್ಟಿಭಿಃ। ರಾಜಾನಾಂ ಕುಂಭಗೇ ಜೀವೇ ವೀತರೋಗಾಶ್ಚ ನಿರ್ಜಯಾಃ॥" ಉತ್ತಮವಾದ ಮಳೆ ಬಿದ್ದೀತು; ಜನರು ಧನಸಂಪನ್ನರಾಗುವರು, ಪರಮಾತ್ಮನ ಭಜನೆ ಮಾಡುವರು; ನರಾಧಿಪರಿಗೆ ಸುಖವಾಗುವದು. ಬೇರೊಂದು ವಚನವೇನಂದರೆ:-" ಕುಂಭರಾಶಿಗತೇ ಜೀವೇ ಮೇಘೋಽ ಸ್ವಲ್ಪಂಬು ವರ್ಷತಿ। ಕೃಷಿನಾಶಂ ಚ ದುರ್ಭಿಕ್ಷಂ ಪ್ರಾಣವೇ ದೇಶೇ ಮಹರ್ಘತಾ॥" ಅಲ್ಪವೃಷ್ಟಿ, ಕೃಷಿನಾಶ, ಬರಗಾಲ, ಪೂರ್ವ ದೇಶಗಳಲ್ಲಿ ಮಹರ್ಘತೆ; ಆದರೆ, ಬೃಹಸ್ಪತಿಗೆ ಉಚ್ಚಾಂಶವಿದ್ದದರಿಂದ ಲಗ್ನಾಧಿಪ ಅಂಗಾರಕನನ್ನೂ, ಧನಸಪ್ತಮಾಧಿಪತಿ ಶುಕ್ರನನ್ನೂ ಕೂಡಿಕೊಂಡಿರುವದರಿಂದ ಗುರುವಿನ ರಾಶಿಸ್ಥಾನದಿಂದ ವಿಶೇಷ ಕೆಡಕು ಸಂಭವಿಸಲಾರದು. ಅಂಗಾರಕನು ರಾಜಕೀಯ ವಾತಾವರಣದಲ್ಲಿ ಅಕಲ್ಪಿತವಾದ ಸ್ಥಿತ್ಯಂತರಗಳನ್ನು ಘಟಿಸುವನು. ಲೋಕದಲ್ಲಿ ನೂತನವಾದ ಶಿದ್ಧುಖಾಟಗಳು ಘಟಿಸುವವು. ಅರಸರಿಗೆ ಹೊಸ ಪ್ರದೇಶಗಳು ಸಿಗುವ ಸಂಭವವಿದೆ. ಪ್ರಜೆಗಳು ಕ್ರೋಧವಶರಾಗಿ ಅಪಕೃತ್ಯಗಳನ್ನಾಚರಿಸುವರು.

ದಶಮ ಲಾಭಾಧಿಪತಿಯು ಶನಿಯು; ವೃಶ್ಚಿಕ ರಾಶಿಯಲ್ಲಿರುವನು "ಅಲಿಸ್ಥಿತೇ ರೋಗಭಯಂ ಜನಾನಾಂ ಭವೇತ್ ಪಶೂನಾಂ ಮೃತಿರರ್ಕಪುತ್ರೇ। ಶ್ರೇಣೀಕುಲಾನಾಂ ಚ ಜನಸ್ಯ ನಾಶೋ ಮಹೀಪತೀನಾಂ ಉಪಜೀವಿನಃ ಸ್ಯುಃ॥" ರೋಗದಿಂದ ಪಶು-ಜನಗಳ ನಾಶವಾಗುವದು, ಅರಸರಲ್ಲಿ ಮೋಸವು ವಿಶೇಷವಾಗಿ ತಲೆದೋರುವದು. ಇದೇ ಬರುವ ಎಪ್ರಿಲ್ ತಿಂಗಳ ೨೩ನೇ ತಾರೀಖಿಗೆ ಅಂಗಾರಕನೂ, ಬೃಹಸ್ಪತಿಯೂ ಒಂದೇ ರಾಶಿಯಲ್ಲಿ, ಒಂದೇ ಅಂಶದಲ್ಲಿ ಮಿಲಿತರಾಗುತ್ತಾರೆ. ಈ ಗ್ರಹಸಮ್ಮಿಲನದಿಂದ ನರಾಧಿಪರಿಗೆ ಬಹಳ ಅನುಕೂಲವಿದೆ, ರಾಜ್ಯವಿಸ್ತಾರಕ್ಕೆ, ಅಧಿಕಾರಬಲಕ್ಕೆ ಅನುಕೂಲ ಯೋಗವಿದು. ಹಿಂದುಸ್ಥಾನದಲ್ಲಿಯೂ, ಪಶ್ಚಿಮ ದೇಶದಲ್ಲಿಯೂ ಇದರಿಂದ ಗುಡುಗು, ಮಿಂಚು, ಗಾಳಿ, ಮಳೆ, ನೆರೆ, ಭೂಕಂಪ ಮುಂತಾದ ಅರಿಷ್ಟಗಳು ಸಂಭವಿಸುವವು.

ಸಾಮಾನ್ಯ ಕ್ಷಯ ಸಂವತ್ಸರದ ಫಲವೇನಂದರೆ- "ಭೂಭೃತಃ ಪರಸ್ಪರ ಯುದ್ಧಕಾರಕಾಶ್ಚೋರಭೀತಿಬಲಿನಾ ಬಹುಹತಾಃ। ಇಕ್ಷುತೂಲಮಧುಧಾನ್ಯನಾಶನಂ ಸ್ಯಾತ್ ಕ್ಷಯೇ ಖಲು ಲೋಕಜೀವನಂ॥" ಅರಸರೊಳಗೆ ಯುದ್ಧವಾಗಬೇಕು; ಕಳ್ಳರ ಭೀತಿ, ಕಂದಮೂಲಾದಿ ಬೆಳೆನಾಶ, ಜನರ ಲೋಕಜೀವನ ಎಂಬುವರ ಮೇಲಿನ ಲೋಕಧಾರಣಕ್ಕೆ ಅವಶ್ಯವಿದ್ದಷ್ಟು ಸಾಮಗ್ರಿಯು ದೊರೆಯುವದು.

ಈ ಸಂವತ್ಸರದಲ್ಲಿ ಎಣ್ಣೆ, ತುಪ್ಪ, ಬೆಲ್ಲ, ಕಬ್ಬು, ಅಕ್ಕಿ ಮುಂತಾದವುಗಳ ಧಾರಣೆ ತೇಜ; ಹತ್ತಿಯ ಧಾರಣೆ ಮಂದಿ

[ಮುಂಬಯಿಯ ಜ್ಯೋತಿಷಶಾಸ್ತ್ರ ಪಂಡಿತರಾದ ರಾ ಎಮ್. ಬಾಳಕೃಷ್ಣ ದೀಕ್ಷಿತ ಇವರು "ಕಂಠೀರವ" ಪತ್ರಿಕೆಯಲ್ಲಿ ಬರೆದ ಲೇಖದ ಆಧಾರದಿಂದ.]

S U. NARAYANACHARYA & CO
Chaukamba, BENARES CITY.



ನಮ್ಮಲ್ಲಿ ಎಲ್ಲಾ ತರದ ರೇಶ್ಮೆ ಪೀತಾಂಬರ, ಜರಿಕಣ, ಜರಿ ಸೀರೆ, ಕಾಶ್ಮೀರ್ ಶಾಲು, ತರವಾರ ದ್ರಾಕ್ಷಿ, ಕಸ್ತೂರಿ, ಲಿಂಗಗಳೂ ಸ್ಫಟಿಕಮಣಿ ಮೊದಲಾದವುಗಳು ಸಿಗುತ್ತವೆ ಕ್ಯಾಟಲಾಗ ಕೇಳಿದವರಿಗೆ ಇನಾಮಾಗಿ ಕಳಿಸಲಾದೀತು.

ವಿಳಾಸ— ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪನಿ, ಚೌಕಂಬಾ, ಕಾಶೀಕ್ಷೇತ್ರ

ವಿನಂತಿ.

ಹೊನ್ನಾವರ ತಾಲೂಕ ಡಿಸ್ಟ್ರಿಕ್ಟ ಲೋಕಲ್ ಬೋರ್ಡ ಮತದಾರರನ್ನುದ್ದೇಶಿಸಿ:—

ಕರ್ಕಿ ಮಂಜುನಾಥ ದೇವರ ಭಟ್ಟನ ವಿನಂತಿ. ಹೊನ್ನಾವರ ತಾಲೂಕ ಪರವಾಗಿ ಡಿಸ್ಟ್ರಿಕ್ಟ ಲೋಕಲ್ ಬೋರ್ಡ ಮೆಂಬರಿ ಬಗ್ಗೆ ನಾನು ಉಮೇದ್ವಾರನಾಗಿ ನಿಂತಿರುವೆನು. ಆರಿಸುವ ಕೆಲಸವು ತಾ. ೨೬-೩-೧೯೨೬ ನೇ ದಿವಸ ಆಗುವದು. ಹೊಸ ಡಿಸ್ಟ್ರಿಕ್ಟ ಲೋಕಲ್ ಬೋರ್ಡ ಕಾಯಿದೆಯ ಅನ್ವಯದಂತೆ ಈಗ ಸ್ಥಾಪನೆಯಾಗುವ ಡಿಸ್ಟ್ರಿಕ್ಟ ಲೋಕಲ್ ಬೋರ್ಡಿನ ಮೇಲೆ ಜಿಲ್ಹೆಯ ವಿದ್ಯಾ, ದೇಸಾಯ, ಆರೋಗ್ಯ ಮುಂತಾದ ಸೌಕರ್ಯವಿಷಯಕ ಜವಾಬದಾರಿಯು ಹೆಚ್ಚು ಇರುತ್ತದೆ. ಇದಲ್ಲದೆ, ಜಿಲ್ಹೆಯ ಜನರ ಮೇಲೆ ಹೊಸ ಕರವನ್ನು ಕೂಡ್ರಿಸುವ ಅಧಿಕಾರವೂ ಇರುತ್ತದೆ. ನಮ್ಮ ತಾಲೂಕಿನ ಪುಟ್ಟಿಗೆ ನಿಮ್ಮೊಳಿರ ಪರವಾಗಿ ಆ ವಿಷಯಗಳ ಮೇಲೆ ಹೆಚ್ಚು ಮನಸ್ಸು ಹಾಕಿ ನಿಮ್ಮ ಹಿತಕ್ಕೆ ದುಡಿಯುವ ಮೆಂಬರರನ್ನೇ ನೀವು ಆರಿಸಿ ಕಳುಹಿಸಿಕೊಡಬೇಕು. ಹೊನ್ನಾವರ ತಾಲೂಕ ಪರವಾಗಿ ೩ ಮೆಂಬರರನ್ನು ನೀವು ಆರಿಸಿಕೊಡಬೇಕಾಗುವದು. ಒಟ್ಟಿಗೆ ೬ ಜನರು ಉಮೇದ್ವಾರರಾಗಿ ನಿಂತಿರುವರು. ಅವರಲ್ಲಿ ನಾನೊಬ್ಬನು ಪ್ರತಿ ಒಬ್ಬ ಮತದಾರನಿಗೆ ೩ ಮತ ಇರುವವು. ನಿಮ್ಮ ಪ್ರತಿನಿಧಿಯಾಗಿ ಸದ್ರಿ ಬೋರ್ಡಿನಲ್ಲಿ ದುಡಿಯಲಿಕ್ಕೆ ನಾನು ಯೋಗ್ಯನೆಂತ ನಿಮಗೆ ಕಂಡರೆ, ನೀವು ನಿಮ್ಮ ಮೂರು ಮತಗಳನ್ನು ಇಲ್ಲವೆ ನಿಮಗೆ ಯುಕ್ತಕಾಣುವಷ್ಟು ಮತವನ್ನು ನನಗೆ ಕೊಟ್ಟು ನಾನು ಆರಿಸಿಬರುವಂತೆ ಮಾಡಬೇಕು. ಸಾರ್ವಜನಿಕ ಕೆಲಸದಲ್ಲಿ ನಾನು ಎಷ್ಟು ದುಡಿದಿದ್ದೇನೆಂಬ ಸಂಗತಿ ನಿಮಗೆ ತಿಳಿದೇ ಇರುವದರಿಂದ ಆ ವಿಷಯಕ್ಕೆ ಹೆಚ್ಚಿಗೆ ಬರೆದು ನನ್ನ ಪೌರುಷವನ್ನು ಕೊಚ್ಚಿಕೊಳ್ಳಲಿಕ್ಕೆ ನನಗೆ ಖುಷಿಯಿಲ್ಲ. ನೀವು ನನ್ನನ್ನು ಆರಿಸಿದರೆ ಶಕ್ಯವಿರುವಷ್ಟರ ಮಟ್ಟಿಗೆ ನಮ್ಮ ತಾಲೂಕಿನ ಸೇವೆಯನ್ನು ತತ್ಪರತೆಯಿಂದ ಮಾಡುವೆನು.

ಮುಂಬಯಿ, ೬-೬-೨೬. } ಮಂಜುನಾಥ ದೇವರಭಟ್ಟ, ಕರ್ಕಿ

— ಮುಂಬಯಿಯ ವಿಸ್ತಾರ ಯೋಜನೆಯ ಮೇಲೆ ಇಂಜಿನಿಯರರಾದ ಸರ್ ಬುಕಾನನರವರ ಹೆಸರನ್ನು ಬ್ರಿಟಿಶ ಇಂಜಿನಿಯರು ಸಂಘದವರು ತಮ್ಮ ಐಟಿಕ ಮೇಲಿಂದ ತೆಗೆದುಬಿಟ್ಟಿದ್ದಾರೆ. ಈ ಸಂಗತಿಯನ್ನು ಮುಂಬಯಿ ಸರಕಾರವು ಮೊದಲು ಒಪ್ಪಿಕೊಳ್ಳಲಿಲ್ಲ. ಮಿ। ನರಿಮಾನರವರು ಬಹಳ ಒತ್ತಾಯ ಮಾಡಲು ಅದನ್ನು ಒಪ್ಪಿಕೊಳ್ಳಬೇಕಾಯಿತು! ಬಹಳ ದೊಡ್ಡ ಇಂಜಿನಿಯರರು ಮುಂಬಯಿ ಸರಕಾರಕ್ಕೆ ಲಭಿಸಿದ್ದರು. ಈ ಯೋಜನೆಯ ತಪ್ಪನ್ನು ಯೋಜಕರ ಮೇಲೆ ಹೊರಿಸಬೇಕೆಂದು ಪಾರ್ಲಿಮೆಂಟಿನ ಒಬ್ಬ ಸಭಾಸದರು ಸೂಚಿಸಲು, ಭಾರತ-ಮಂತ್ರಿಗಳು ಒಲ್ಲೆಂದರು.

— ನಿಜಾಮ ರಾಜ್ಯದೊಳಗೆ ಹುಸೇನಸಾಗರವೆಂಬುದೊಂದು ದೊಡ್ಡ ಕೆರೆಯಿದೆ. ಕೆರೆಯ ದಂಡೆಗಳು ಮೈಲು ದೂರವಿವೆ. ಈ ಕೆರೆಯನ್ನು ಒಂದೇ ಸಲವೆ ಯಾರೂ ಈಸಿಹೋಗಿದ್ದಿಲ್ಲ. ಹೌಲವಿ ಮುಜುಮುಸೇನ? ಸಾಹೇಬ ಎಂಬೊಬ್ಬ ೭೫ ವರ್ಷದ ಮುದುಕ ಆಟ್ಟಯು ೨॥ ತಾಸುಗಳಲ್ಲಿ ದಂಡೆಗೆ ಹೋಗಿ ಮುಟ್ಟಿಬಂದನು. ೨॥ ತಾಸುಗಳಲ್ಲಿ ೮ ಮೈಲು!! ಈ ಸಾಹಸವನ್ನು ಇದುವರೆಗೂ ಯಾರೂ ಕೈಕೊಂಡಿದ್ದಿಲ್ಲ. ಶಾಭಾಸ್!!

ಪ್ರಕಟನೆ.

ದಿ ಏಶಿಯಾಟಿಕ್ ಗೌರ್ವಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂಪನಿ, ಬೆಂಗಳೂರ.

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತುವ ಕ್ರಮಾಂಕ ೧೯೨೬ನೆಯ ಇಸ್ವಿ ಜನೇವರಿ ೩೧ನೇ ತಾರೀಖಿನ ದಿವಸ ಸಾಯಂಕಾಲ ೫-೩೦ ಘಂಟೆಗೆ ಈ ಕಂಪನಿಯ ಹೆಡ್ ಆಫೀಸಿನಲ್ಲಿ ಬಹಿರಂಗವಾಗಿ ಚುನಾಯಿಸಲ್ಪಟ್ಟ ಬೋರ್ಡ್ ಆಫ್ ಡಾಯರೆಕ್ಟರ್ಸ ಚೇರಮನ್ನರಾದ ರಾವಸಾಹೇಬ ಡಾ। ಕೆ. ಎಸ್ ಶ್ಯಾಸ್ತ್ರಿ L.R.C.P. M. R. C. S. ಇವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ಬಡ್ಡಿ ಮತ್ತು ಖರ್ಚ ಇಲ್ಲದೆ ೧೦೦೦ ರೂಪಾಯಿಗಳ ಸಾಲವು ದೊರೆಯಬೇಕೆಂದು ನಿರ್ಣಯವಾಯಿತು.

(೧)	ಬಾಂಡ ನಂಬರ ೫೬೮೦	ಮಿ। ವಿಠ್ಠಲ ಜೆಟ್ಯಾಜಿ ನೇಟ್ ಕಲಾನ್ ಅಲಿಬಾಗ ಮುಂಬ್ಯೆ ...	೧೦೦೦
(೨)	ಬಾಂಡ ನಂ। ೧೩೬೦೬	ಮಿ। ರಂಗಪ್ಪ ಶ್ಯಾನಭೋಗ ಹುಲಿಕುಂಟೆ, ಪೋಸ್ಟ ಸಿರಾ. ತಾಲೂಕ ಸಿರಾ, ಜಿಲ್ಹಾ ಟುಮಕೂರ. ...	೧೦೦೦
(೩)	ಬಾಂಡ ನಂ। ೧೯೯೯೬	ಮಿ। ವೆಂಕಟರಮಣ ವೆಂಕಟರಮಣ ಹೆಗಡೆ, ಕೇಶ್ವರಿ, ಹಳ್ಳಿ-ಗೇರಿ, ಹೊನ್ನಾವರ ಪೋ। (ನಾರ್ಥ ಕ್ಯಾನರಾ) ಜಿಲ್ಹಾ. ...	೧೦೦೦
(೪)	L. B. C. " ೧೮೭೩	ಮಿ। ಜಿ. ವೆಂಕಟಪ್ಪ ಮರ್ಚಂಟ ಮತ್ತು ಜಮೀನದಾರ. ಬ್ರಾಹ್ಮಣಪೇಟ, ಬಳ್ಳಾರಿ.	೧೦೦೦
(೫)	" ೨೫೦	ಮಿ। ರಾಮಚಂದ್ರ ಮಾಧುನ್ ಕಾಂಡೇಕರ C/o ಶಾಲೂಸ್ಕರ ಮಾಮಾ, ಪ್ಯಾಲೇಸ ರೋಡ, (ಬರೋಡಾ.)	೧೦೦೦
(೬)	" ೧೮೪೦	ಮಿ। ಆರ್. ಎಚ್ ನಾಟೇಶನ್, ಮಾಸ್ತರ, ಗವರ್ನಮೆಂಟ ಸಿಟಿ ಹಾಯಸ್ಕೂಲ, ಹೈದರಾಬಾದ (ಡೆಕ್ಕನ.)	೧೦೦೦

ಬಿ. ಎನ್. ಆರಾಧ್ಯ.

ಮುಂಬಯಿ ಇಲಾಖೆಯ, ಚೀಫ್ ಏಜಂಟ, ಹುಬ್ಬಳ್ಳಿ.

ಅತ್ಯದ್ಭುತ! ಅಮೇರಿಕಾ ಖಂಡದ ಅತ್ಯದ್ಭುತ!!

ಪ್ರಸಿದ್ಧ ಡಾಕ್ಟರನೊಬ್ಬನು ಕಂಡು ಹಿಡಿದ ಸಿದ್ಧೌಷಧ!

ಸರ್ವರೋಗ ನಿವಾರಣೆಯಾಗುವ ಸಂಜೀವನೌಷಧವನ್ನು ಕಂಡು ಹಿಡಿಯುವದಕ್ಕಾಗಿ ಅಮೇರಿಕಾ ಖಂಡದ ಪ್ರಖ್ಯಾತ ಡಾಕ್ಟರನೊಬ್ಬನು ಅನೇಕ ವರ್ಷಗಳಿಂದ ಬಹು ಧನ ನಷ್ಟ ಮಾಡಿಕೊಂಡು ಪರಿಶೋಧನೆಗಳನ್ನು ಮಾಡಿ ಕೊನೆಯಲ್ಲಿ

ಎಲೆಕ್ಸಿರ್ ಆಫ್ ಲೈಫ್

ಅಥವಾ

ಜೀವನಾಧಾರ

ಎಂಬ ಔಷಧವನ್ನು ಸಿದ್ಧಗೊಳಿಸಿರುವನು. ಅನುಪಾನಭೇದದಿಂದ ಅನೇಕ ರೋಗಗಳಿಗೆ ಎಂದರೆ, ಅಗ್ನಿಮಾಂದ್ಯ, ಅಜೀರ್ಣ, ಹೊಟ್ಟೆ ಅಥವಾ ತಲೆ ಭಾರವಾಗಿರುವದು, ಅತಿಸಾರ, ವಾಂತಿ, ಭೇದಿ ಅಥವಾ ಕಾಲರಾ, ತಲೆನೋವು, ನೆಗಡಿ, ಮಲೇರಿಯಾ ಜ್ವರ, ಇತರ ವಿವಿಧವಾದ ಜ್ವರಗಳು, ಮಾನಸಿಕ ದೌರ್ಬಲ್ಯ, ಕಲ್ಲು ಮತ್ತು ಕಿವಿನೋವು, ಮೂಲವ್ಯಾಧಿ, ನಾಯಿಕೆಮ್ಮು, ಸ್ತ್ರೀವ್ಯಾಧಿ ಮುಂತಾದ ಎಲ್ಲಾ ಬಗೆಯ ಸಾಂಕ್ರಾಮಿಕ ರೋಗಗಳಿಗೆ, (ಇನ್‌ಫ್ಲೂಯೆಂಜಾ, ಪ್ಲೇಗು) ಹಾವು, ಚೇಳು, ಮುಂತಾದ ವಿಷ ಜಂತುಗಳ ಕಡಿತಕ್ಕೆ, ಬಾಲಗ್ರಹ ಇವೇ ಮುಂತಾದವುಗಳಿಗೆ ಈ ಜೀವನಾಧಾರವನ್ನು ಕೊಟ್ಟು ಗುಣಪಡಿಸಿರುತ್ತಾನೆ. ಊರಲ್ಲಿ ಸಾಂಸರ್ಗಿಕ ರೋಗವಿರುವಾಗ ಇದನ್ನು ಅಲ್ಪ ಪ್ರಮಾಣದಲ್ಲಿ ಉಪಯೋಗಿಸುತ್ತಿದ್ದರೆ ಯಾವ ರೋಗವೂ ಅಂಟುವದಿಲ್ಲ. ಈ ಜೀವನಾಧಾರವೆಂಬ

ಸಂಜೀವನೌಷಧ

ಒಂದು ಸೀಸೆಯು ಪ್ರತಿ ಮನೆಯಲ್ಲಿ ಅಥವಾ ಪ್ರತಿ ಒಬ್ಬನ ಜೇಬಿನಲ್ಲಿದ್ದರೆ ಅನುಭವಸ್ಥನಾದ ಡಾಕ್ಟರನೊಬ್ಬನು ಹತ್ತಿರವಿದ್ದಂತೆಯೇ, ಡಾಕ್ಟರರಿಗೆ ಕೊಡಬೇಕಾದ ಫೀಜುಗಳನ್ನು ಈ "ಜೀವನಾಧಾರ"ವೆಂಬ ಡಾಕ್ಟರರಿಗೆ ಕೊಡಬೇಕಾಗಿಲ್ಲ. ಸೀಸೆ ಒಂದಕ್ಕೆ ರೂ. ೧-೮-೦ ಟಪಾಲು ಖರ್ಚ ಪ್ರತ್ಯೇಕ ಅಲಾಯಿದಾ ಬೀಳುವದು

ಜೀವನಾಧಾರ ಡಿಪೋ,

ಮೈಸೂರು.

ಬ್ರಾಂಚ:- **ಜೀವನಾಧಾರ ಡಿಪೋ,**

ಹುಬ್ಬಳ್ಳಿ.

ಪ್ರಯಾಣಿಕರಿಗೆ

ವಿಶೇಷ ಅನುಕೂಲ!

ನೇಮಿಸಿದ ಹೊತ್ತಿಗೆ ಮೋಟರಿನ ವ್ಯವಸ್ಥೆ

ಹಾಗೂ

ಅಡಿಗೆ, ಊಟ, ವಾಸದ ಬಗ್ಗೆ ಯೋಗ್ಯ ವ್ಯವಸ್ಥೆ!

ಈ ಕೆಳಗಿನಂತೆ ಮೋಟಾರ ವ್ಯವಸ್ಥೆಯಿದೆ:-

ಗೋಕರ್ಣದಿಂದ ಕುಮಟಾ, ಹೊನ್ನಾವರ, ಭಟ್ಕಳ; ಗೋಕರ್ಣದಿಂದ ಕುಮಟಾ, ಶಿರಸಿ, ಹುಬ್ಬಳ್ಳಿ; ಗೋಕರ್ಣದಿಂದ ಅಂಕೋಲಾ, ಕಾರವಾರ.

ಟೀಪು:—ಟಿಕೇಟು ಮುಂದಾಗಿ ಪಡಕೊಳ್ಳಲಿಚ್ಛಿಸುವವರು ಈ ಕೆಳಗಿನ ಪತ್ತೆಗೆ ಪತ್ರವ್ಯವಹಾರ ಮಾಡತಕ್ಕದ್ದು.

ಅನಂತ ಮಂಗೇಶರಾವ ಶಿಶಿಹಿತ್ಲು,

ಮೋಟರ ಏಜಂಟ,

ಕುಮಟಾ, (ಉತ್ತರ ಕನ್ನಡ)

ಕಾನಡಾವೃತ್ತ.

ಮಿತಿ ಕ್ಷಯ ಸಂ। ಅಧಿಕ ಚೈತ್ರ ಶು॥ ೧, ಸೋಮವಾರ

ಯುಗಾದಿ.

ಇಂದು ಅಕ್ಷಯ ಸಂವತ್ಸರದ ಪ್ರತಿಪದೆಯ ಶುಭ ಮುಹೂರ್ತವು. ಸನಾತನ ಧರ್ಮಾಭಿಮಾನಿಗಳೆಲ್ಲರೂ ದೇಶ-ಕಾಲ-ರೂಢಿಯಂತೆ ಯುಗಾದಿಯ ಹಬ್ಬವನ್ನು ಆನಂದದಿಂದಲೂ, ಉಲ್ಹಾಸದಿಂದಲೂ ಪಾಲಿಸಿ, ಅಕ್ಷಯ ಸಂವತ್ಸರದಲ್ಲಿ "ಸರ್ವೇ ಜನಾಃ ಸುಖಿನೋ ಭವಂತು" ಎಂದು ಈಶಪ್ರಾರ್ಥನೆ ಮಾಡಿ, ಈ ವರುಷದಲ್ಲಿ ಕೈಕೊಳ್ಳಬೇಕಾದ ನೂತನ ಕಾರ್ಯಕ್ರಮವನ್ನು ನಿರ್ಧರಿಸುವರು. ನಮ್ಮ ರಾಷ್ಟ್ರಪುರುಷನಾದರೋ, ಅದೇ ಭಕ್ತಿಭಾವದಿಂದ ಸಮಸ್ತ ಪ್ರಜೆಗಳ ಸುಖಸಂತೋಷಕ್ಕಾಗಿ ಯುಗಾದಿಯ ಶುಭ ಮುಹೂರ್ತದಲ್ಲಿ ಕೈಕೊಂಡ ಕಾರ್ಯಕ್ರಮವನ್ನು ನಾವಿಂದಿಗೆ ನಿವೇದಿಸುವೆವು.

ಪೂರ್ವಸಂಕೇತದಂತೆ, ರಾಷ್ಟ್ರೀಯ ಸಭೆಯ ಲೋಕನಾಯಕರಾದ ಪಂಡಿತ ಮೋತಿಲಾಲ ನೆಹರೂರವರು ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ಕಳೆದ ಮಾರ್ಚ ೮ನೇ ತಾರೀಖಿಗೆ ರಾಷ್ಟ್ರಪುರುಷನ ಅಂಬೋಣವನ್ನು ಸರಕಾರಕ್ಕೆ ಜಾಹೀರ ಪಡಿಸಿದರು. ಕೌನ್ಸಿಲಿನಲ್ಲಿ ಆಳರಸರು ರಾಷ್ಟ್ರಪುರುಷನಿಗೆ ಮಾಡಿದ ಅಪಮಾನಗಳನ್ನೂ, ಅತ್ಯಾಚಾರಗಳನ್ನೂ ಮರೆಮಾಚದೆ ಹೊರಗೆಡಹಿ, ಇನ್ನು ಮುಂದೆ ಸ್ವಾಭಿಮಾನಿ ರಾಷ್ಟ್ರಪುರುಷನು ಕಾಯಿದೆ ಕೌನ್ಸಿಲಿನಲ್ಲಿ ಆಳರಸರೊಡನೆ ಸಹಕಾರಿಯಾಗಿ ರಾಷ್ಟ್ರಪುರುಷನ ಅಭಿವೃದ್ಧಿಗಾಗಿ ದುಡಿಯುವದು ಅಸಾಧ್ಯ ಮಾತೆಂದರು. ಆಳರಸರಿಗೆ ನಮ್ಮ ಸಹಕಾರ ಬೇಡ, ಕರಣಿ ಬೇಕು; ಕರಣಿ ಹೊಡೆಯುವದು ರಾಷ್ಟ್ರಪುರುಷನಿಗೆ ಲಾಂಛನಾಸ್ಪದವು; ಆತ್ಮಘಾತಕವು. ಸ್ವಾಭಿಮಾನಿ ಪುರುಷರಿಗೆ ಸ್ವಾಭಿಮಾನ ಕಾಯ್ದುಕೊಂಡು ದೇಶೋದ್ಧಾರ ಮಾಡಲು ಈ ಕೌನ್ಸಿಲಿನಲ್ಲಿ ಇಂಬಿರುವದಿಲ್ಲ. ಇಂಥ ಪ್ರಸಕ್ತಿಯಲ್ಲಿ ನಾವು ದೇಶೋದ್ಧಾರ ಮಾಡಲು ಅಸಮರ್ಥರಾದೆವೆಂದು ಒಪ್ಪಿಕೊಂಡು, ಕಾನಪುರದ ರಾಷ್ಟ್ರೀಯ ಸಭೆಯ ಠರಾವಿನಂತೆ, ಕೌನ್ಸಿಲುಗಳಿಗೆ ರಾಮರಾಮ ಹೊಡೆಯುತ್ತೇವೆ. ನಮ್ಮ ಕೌನ್ಸಿಲು ಪ್ರವೇಶದಿಂದ ಪ್ರಜಾಕಲ್ಯಾಣವಾಗುವದೆಂಬ ಭಾವನೆಯಿಂದ ನಾವು ಸೇರಿದ್ದೆವು; ಆ ಕುರಿತು, ರಾಷ್ಟ್ರೀಯ ಸಭಾಭಿಮಾನಿಗಳೊಳಗೆ ಇತ್ತಂಡಗಳಾಗಿದ್ದವು; ಆದರೂ ಕೌನ್ಸಿಲು ಪ್ರವೇಶವನ್ನು ನಂಬಿಕೊಂಡು, ಸ್ವಾಭಿಮಾನಪೂರ್ವಕವಾದ ಸಾಹಚರ್ಯದಿಂದ ಸಂಪಾದಿಸಬಹುದಾದಷ್ಟು ಪ್ರಜಾಕಲ್ಯಾಣವನ್ನು ಸಂಪಾದಿಸುವ ಆಲೋಚನೆಯಿಂದ ನಾವು ಕೌನ್ಸಿಲುಗಳನ್ನು ಸೇರಿಕೊಂಡಿದ್ದೆವು; ನಮ್ಮ ಆಶೆಯು ವ್ಯರ್ಥವಾಯಿತು; ಮೋಹಪಟಲವು ದೂರವಾಯಿತು; ಕೌನ್ಸಿಲಿನಲ್ಲುಳಿದು ಹೇಳತಕ್ಕಂಥ ಪ್ರಜಾಕಲ್ಯಾಣ ಮಾಡುವದು ಕಷ್ಟಸಾಧ್ಯ ಮಾತು. ಅದರಿಂದ ನಾವು ರಾಷ್ಟ್ರಪುರುಷನ ಆಜ್ಞೆಯನ್ನು ಶಿರಸಾ ವಹಿಸಿ, ಇಂದಿಗೇ ಕಾಯಿದೆ ಕೌನ್ಸಿಲಿಗೆ ರಾಮರಾಮ ಹೊಡೆಯುತ್ತೇವೆ. ಈಶಸಂಕೇತವಿದ್ದರೆ, ಹೊಸ ಇಲೆಕ್ಷನ್ನಿನಲ್ಲಿ ನಮ್ಮ ಸಂಖ್ಯಾಬಲವನ್ನು ಮತ್ತೂ ಭದ್ರಪಡಿಸಿಕೊಂಡು, ನಿಮಗೆ ಆಳರಸರಿಗೆ ಇದಿರಾಗಲು ನಾವು ಬರುವೆವೆಂದು ಹೇಳಿ, ಪಂಡಿತ ಮೋತಿಲಾಲರವರು ೪೦ಕ್ಕೆ ಮಿಕ್ಕಿ ಲೋಕನಾಯಕರೊಡನೆ ವರಿಷ್ಠ ಕಾಯಿದೆ ಕೌನ್ಸಿಲಿನಿಂದ ಹೊರಗೆದ್ದು ಬಂದ ನೋಟವು ಅತ್ಯಂತ ಪ್ರೇಕ್ಷಣೀಯವಾಯಿತೆಂದು, ದಿಲ್ಲಿಯೊಳಗಿನ ಭಾಗ್ಯವಂತ ಪ್ರೇಕ್ಷಕರು ತಿಳಿಸುತ್ತಾರೆ. ರಾಷ್ಟ್ರಪುರುಷನ ತಿರಸ್ಕಾರವನ್ನು ಗೌರವದಿಂದಲೂ, ಸ್ಪಷ್ಟೋಕ್ತಿಗಳಿಂದಲೂ ವ್ಯಕ್ತಗೊಳಿಸಿದ ಬಗ್ಗೆ ರಾಷ್ಟ್ರಪುರುಷನು ಪಂಡಿತ ಮೋತಿಲಾಲರವರಿಗೆ ಅಂತಃಕರಣಪೂರ್ವಕವಾಗಿ ಆಶೀರ್ವದಿಸುವನು.

ಸ್ವರಾಜ್ಯ ಪಕ್ಷದ ಸಭಾಸದರಾಗಿ ವರಿಷ್ಠ ಕಾಯಿದೆ ಕೌನ್ಸಿಲಿನ ಅಧ್ಯಕ್ಷಸ್ಥಾನಾಪನ್ನರಾಗಿದ್ದ ಶ್ರೀ। ವಿಠ್ಠಲಭಾಯಿ ಪಟೇಲರವರು ಪ್ರದರ್ಶಿಸಿದ ಆದರವನ್ನೂ ರಾಷ್ಟ್ರಪುರುಷನು ಎಂದೂ ಮರೆಯನು. ಪಂಡಿತ ಮೋತಿಲಾಲ ನೆಹರೂರವರಂಥ ಲೋಕನಾಯಕರ ಕೌನ್ಸಿಲು ತ್ಯಾಗದಿಂದ, ಮೊಂಟೆಗ್ಯೂ ಸ್ವರಾಜ್ಯದ ಕಲ್ಪನೆಯಂತೆ, ವರಿಷ್ಠ ಕಾಯಿದೆ ಕೌನ್ಸಿಲು ಈಗ ಪ್ರಾತಿನಿಧಿಕವಾಗಿರುವದಿಲ್ಲೆಂದು ಶ್ರೀ। ಪಟೇಲರು ಉದ್ಗರಿಸಿ, ಇನ್ನು ಮುಂದೆ ಸರಕಾರವು ಈ ಸ್ಥಿತಿಯಲ್ಲಿ ವಿವಾದಾತ್ಮಕ ಯೋಜನೆಗಳನ್ನು ಕಾಯಿದೆ ಕೌನ್ಸಿಲಿನಲ್ಲಿ ಮುಂದೊಡ್ಡಬಾರದೆಂದೂ, ಮುಂದೊಡ್ಡಿದ್ದಲ್ಲಿ ಅಖಿಲ ಭಾರತೀಯ ಪ್ರಜೆಗಳ ಹಿತರಕ್ಷಣೆಗಾಗಿ ಕೌನ್ಸಿಲು ಸಭೆಯನ್ನು ತಾವು ಮುಂದೆ ವಿಸರ್ಜಿಸಬೇಕಾಗುವದೆಂದೂ ಮುಂಜಾಗ್ರತೆಯನ್ನಿತ್ತು, ಸ್ವರಾಜ್ಯ ಪಕ್ಷದ ಕೌನ್ಸಿಲು ತ್ಯಾಗದ ದುಃಖಸ್ಮರಣಕ್ಕಾಗಿ ಸೋಮವಾರದ ಅಧಿವೇಶನವನ್ನು ಒಪ್ಪತ್ತಿನಲ್ಲಿಯೇ ವಿಸರ್ಜಿಸಿದರು.

ಸ್ವರಾಜ್ಯ ಪಕ್ಷಕ್ಕೆ ಅಧ್ಯಕ್ಷರು ಇಷ್ಟು ಮಾನಕೊಟ್ಟದ್ದು ಆಳರಸರಿಗೆ ಸಹನವಾಗದೆ, ಈ ಕುರಿತು ಸೋಮವಾರಕ್ಕೆ ದೊಡ್ಡ ಕೋಲಾಹಲವು ಸರ್ವಾಧಿಪತಿ ರೀಡಿಂಗ ದೊರೆಗಳ ಗರ್ಭಾಗಾರದಲ್ಲಿ ನಡೆಯಿತಂತೆ! ಸರಕಾರದ ನಿರಂಕುಶ ಕಾರಭಾರವನ್ನು ಕೌನ್ಸಿಲಿನ ಕ್ಷೇತ್ರದಲ್ಲಿ ನಿಯಂತ್ರಿಸುವ ಅಧಿಕಾರವು ಸಭಾಪತಿಗಳಿಗೆ ಎಷ್ಟರ ಮಟ್ಟಿಗಿರುವದೆಂಬ ಚರ್ಚೆಯೂ ನಡೆಯಿತಂತೆ. ಇತ್ತ ಸ್ವರಾಜ್ಯ ಪಕ್ಷೀಯರ ಪ್ರಜಾಪ್ರತಿನಿಧಿಗಳು ಶ್ರೀ। ವಿಠ್ಠಲಭಾಯಿಯವರ ಉದ್ಗಾರಗಳಿಂದ ತಮ್ಮ ಪ್ರತಿನಿಧಿ ಅಸ್ತಿತ್ವಕ್ಕೆ ಅಪಮಾನವಾಯಿತೆಂದೂ ಗದ್ದಲವನ್ನೆಬ್ಬಿಸಿ, ಶ್ರೀ। ಪಟೇಲರ ಭೆಟ್ಟಿಯನ್ನು ಕೊಂಡರು. ತಮ್ಮ ಭಾಷಣದಲ್ಲಿ ಯಾರದೂ ಅಪಮಾನ ಮಾಡುವ ಇರಾದೆ ಇರಲಿಲ್ಲೆಂದೂ, ಸರಕಾರಕ್ಕೆ ಬೆದರಿಸುವ ಇರಾದೆ ಇರಲಿಲ್ಲೆಂದೂ ಮಾನನೀಯ ಶ್ರೀ। ಪಟೇಲರು ಸ್ಪಷ್ಟವಾಗಿ ಹೇಳಿ, ಸಮಸ್ತರಿಗೂ ಸಮಾಧಾನ ಪಡಿಸಿದರು. ಅಂತು ಕ್ರೋಧನ ಸಂವತ್ಸರದೊಡನೆ ರಾಷ್ಟ್ರೀಯರ ಕೌನ್ಸಿಲು ಪ್ರವೇಶದ ರಾಜಕಾರಣವು ಅಂತ್ಯವಾಯಿತು.

ಅಕ್ಷಯ ಸಂವತ್ಸರದಲ್ಲಿ ರಾಷ್ಟ್ರೀಯ ಸಭೆಯು ಪ್ರಜೆಗಳೊಡನೆ ಪ್ರಜಾಸಂಘಟನೆಯ ಕಾರ್ಯವನ್ನು ಕೈಕೊಳ್ಳುವದು. ರಾಷ್ಟ್ರೀಯ ಸಭೆಯ ಕಾನಪುರದ ಅಧಿವೇಶನದಲ್ಲಿ ನಿರ್ದೇಶಿಸಿದಂತೆ, ಪ್ರಜಾಪ್ರಮುಖರು ಅಲ್ಲಲ್ಲಿ ಗ್ರಾಮಸಂಘಟನೆ, ಖಾದಿಯ ಪ್ರಸಾರ, ರಾಷ್ಟ್ರೀಯ ಶಿಕ್ಷಣ ಇತ್ಯಾದಿ ಕಾರ್ಯಗಳನ್ನು ಕೈಕೊಂಡು ಪ್ರಜಾಸಾಮರ್ಥ್ಯವನ್ನು ಬೆಳಿಸುವರು. ವೀರ ಭಾಷಣಗಳ ಪ್ರಭಾವದಿಂದ ಈಗ ಆಳರಸರು ಕರಗುವದಿಲ್ಲ; ಸವಿ ನುಡಿಗಳಿಂದ, ಯುಕ್ತಿವಾದಗಳಿಂದ ಅವರು ವಶರಾಗುವದಿಲ್ಲ; ಭಾರತೀಯರು ತಮಗೆ ಶರಣಾಗತರಾಗಬೇಕು; ಎಂಬ ಹಟಕೆ ಹಿಡಿದು, ಅವರು ಭಾರತೀಯರಿಗೆ ದಣಿಸುತ್ತಾರೆ. ಲೋಕನಾಯಕರ ಸಂಧಾನಕ್ಕೆ ಅವರು ಕಿವಿಗೊಡುವದಿಲ್ಲ. ಅವರಿಗೆ ಬಗ್ಗುಬಡಿಯಬೇಕಾದರೆ, ಪ್ರಜಾಸಂಘಟನೆಯು ಒಂದೇ ಉಪಾಯವಿರುವದು. ಪಂಡಿತ ಮೋತಿಲಾಲರು ನುಡಿದಂತೆ, ಲೋಕನಾಯಕರು ತನು-ಮನ-ಧನದಿಂದ ಪ್ರಜಾಸಂಘಟನೆಯ ಕಾರ್ಯವನ್ನು ನೆರವೇರಿಸಿ, ರಾಷ್ಟ್ರಪುರುಷನ ವಿಮೋಚನ ನಿರ್ಧಾರವನ್ನು ಕೃತಿಯಲ್ಲಿ ರೂಪಾಂತರಿಸಲು ಅವಶ್ಯವುಳ್ಳ ಸಾಮರ್ಥ್ಯವನ್ನು ಸಂಪಾದಿಸಿದರೆ, ಲೋಕನಾಯಕರ ಅಂಬೋಣವನ್ನು ಧಿಕ್ಕರಿಸುವ ಧೈರ್ಯವು ಆಳರಸರಿಗೆಂದೂ ಇರದು. ನಾವು ದುರ್ಬಲರು; ಉತ್ತರ ಕುಮಾರನಂತೆ ವೀರ ನುಡಿಗಳನ್ನಾಡುವವರು, ಧಿಕ್ಕರಿಸಿದರೆ, ಬಗ್ಗು ಬಡಿಯುವಷ್ಟು ಸಾಮರ್ಥ್ಯವು ನಮ್ಮಲ್ಲಿಲ್ಲ; ಎಂಬ ಗ್ರಹಿಕೆಯು ಆಳರಸರಲ್ಲಿ ಬೇರೂರಿ ಹೋಗಿರುವದರಿಂದಲೇ ನಮಗೆ ಅಡಿಗಡಿಗೂ ಅಪಮಾನಪ್ರಸಂಗವಾಗುತ್ತದೆ; ಪಾರತಂತ್ರ್ಯಶೃಂಖಲೆಯು ಭದ್ರವಾಗುತ್ತ ನಡೆದಿದೆ; ಆಳರಸರೂ ಮದಾಂಧರಾಗಿರುವರು; ಇಂಥ ಪ್ರಸಕ್ತಿಯಲ್ಲಿ ಲೋಕನಾಯಕರು ಆಳರಸರ ಮನವೊಲಿಸುವದೂ, ಬಿಸಿಲುಗುದುರೆಯ ಬೆನ್ನಟ್ಟುವದೂ ಒಂದೇ ಮಾದರಿಯದೆಂಬ ಸ್ವಾನುಭವದಿಂದ ಮನಗಂಡು, ಪ್ರಜಾಪ್ರಜೆಗಳಿಗೆ ಸಾಮರ್ಥ್ಯವಂತರಾಗಲು ಉಪಾಯವನ್ನೇ

ಚನೆ ಮಾಡುತ್ತಿರುವರು. ಪ್ರತ್ಯಕ್ಷವಾಗಿ ನಾವು ಬಾಳಬೇಕಾದರೆ, ಅಕ್ಷಯವಾಗಿ ಭರತಭೂಮಿಯ ದಿಗಂತ ಕೀರ್ತಿಯೂ, ಸಂಸ್ಕೃತಿಯೂ ಹಬ್ಬಬೇಕಾದರೆ, ಅಕ್ಷಯ ಸಂವತ್ಸರದ ಯುಗಾದಿಯ ಶುಭ ಮುಹೂರ್ತದಲ್ಲಿ ಲೋಕನಾಯಕರು ವಿಧಿಸಿದ ರಾಷ್ಟ್ರಬಲಸಂವರ್ಧಕ ಕಾರ್ಯಕ್ರಮವನ್ನು ನೆರವೇರಿಸಲು ಸಮಸ್ತ ಪ್ರಜೆಗಳಿಗೆ ಬುದ್ಧಿಯನ್ನೂ, ಸಾಮರ್ಥ್ಯವನ್ನೂ ಅಕ್ಷಯ ಮೂರುತಿಯಾದ ಜಗಚ್ಚಾಲಕನು ದಯಪಾಲಿಸಲೆಂದು ನಾವು ಅನನ್ಯಭಾವದಿಂದ ಪ್ರಾರ್ಥಿಸುವೆವು.

ಸ್ಫುಟ ಸೂಚನೆಗಳು.

೧. ಸ್ವರಾಜ್ಯ ಪಕ್ಷದ ಪ್ರಾಂತಿಕ ಕಾಯಿದೆ ಕೌನ್ಸಿಲು ಸಭಾಸದರು ಅಖಿಲ ಭಾರತೀಯ ಕಾಂಗ್ರೆಸ ಕಮೀಟಿಯ ಆಜ್ಞೆಯಂತೆ, ಮುಂಬಯಿ, ಬಂಗಾಲ, ಮಧ್ಯಪ್ರಾಂತ, ಪಂಜಾಬ ಮುಂತಾದ ಕಾಯಿದೆ ಕೌನ್ಸಿಲುಗಳೊಳಗಿಂದ ತಮ್ಮ ತಮ್ಮ ಸ್ಥಾನಗಳನ್ನು ತ್ಯಜಿಸಿದರೆಂದು ಜಾಹೀರಾಗಿದೆ. ಮುಂಬಯಿಯ ಕಾಯಿದೆ ಕೌನ್ಸಿಲಿನಲ್ಲಿ ಸ್ವರಾಜ್ಯ ಪಕ್ಷದವನೊಡನೆ ನಮ್ಮ ಕಾನಡಾ ಜಿಲ್ಲೆಯ ಪ್ರತಿನಿಧಿಗಳಾದ ಶ್ರೀ ಮಂಜನಾಥಭಟ್ಟ ಕರ್ಕಿಯವರು ರಾಷ್ಟ್ರಧಿಕ್ಕಾರದಲ್ಲಿ ಪ್ರವೇಶಗೊಳ್ಳಲಿಲ್ಲೆಂಬ ತಿಳಿದು ನಮಗೆ ವ್ಯಸನವಾಗುತ್ತದೆ. ಶ್ರೀ ಕರ್ಕಿಯವರು ನಿಜವಾದಂತೆ ಸ್ವರಾಜ್ಯ ಪಕ್ಷದಲ್ಲಿ ಸೇರಲಿಲ್ಲವೆಂಬುದನ್ನು ನಾವು ಒಪ್ಪುವೆವು. ಹಿರೇ ಎಸೋಸಿಯೇಟ ಯಾನೆ ಸಹಕಾರಿಗಳಾಗಿಯೇ ಸ್ವರಾಜ್ಯ ಪಕ್ಷದಲ್ಲಿ ಅವರು ಸೇರಿಕೊಂಡಿದ್ದರು. ಆದರೆ, ಆಲೆಕ್ಷನಿನ ಸಮಯ ಶ್ರೀ ಕರ್ಕಿಯವರು ರಾಷ್ಟ್ರೀಯ ಪಕ್ಷದವರೆಂದು ಅವರಿಗೆ ಆರಿಸಿಕೊಡಲಾಗಿತ್ತು. ಅದೊಂದೇ ಕಾರಣದಿಂದ ಅವರಿಗೆ ಜಿಲ್ಲೆಯೊಳಗಣ ಮತದಾರರು ಉತ್ಸಾಹದಿಂದ ಬೆಂಬಲವನ್ನಿತ್ತಿದ್ದರು. ವ್ಯಕ್ತಿಶಃ ಶ್ರೀ ಕರ್ಕಿಯವರ ಕಾರ್ಯಕ್ರಮವನ್ನು ಮತದಾರರು ನಂಬಿಕೊಂಡು ಮತದಾನ ಮಾಡಿದ್ದರೆಂದು ನಾವು ಹೇಳಲಾರೆವು. ಇಂಥ ಪ್ರಸಕ್ತಿಯಲ್ಲಿ ಶ್ರೀ ಕರ್ಕಿಯವರು, ಶ್ರೀ ಲಕ್ಷ್ಮಣರಾವ ಘೋಲಪಟಕರ, ಶಂಕರರಾವ ದೇವ ಮೊದಲಾದ ಸಹಕಾರಿಗಳೊಡನೆ ಕೌನ್ಸಿಲುತ್ಯಾಗ ಮಾಡಿದ್ದರೆ, ನಮ್ಮ ಜಿಲ್ಲೆಗೆ ಅದೊಂದು ಭೂಷಣವಾಗಿತ್ತೆಂದು ನಮಗೆ ತೋರುತ್ತದೆ. ದೀರ್ಘವಿಚಾರ ಮಾಡಿದರೆ, ಶ್ರೀ ಕರ್ಕಿಯವರಿಗೂ ಇದು ಹೊಳೆಯುವಂತಿದೆ. Better late than never (ಕಾರ್ಯವನ್ನು ಮಾಡದಿರುವದಕ್ಕಿಂತ, ತಡವಾಗಿಯಾದರೂ ಮಾಡುವದು ಶ್ರೇಯಸ್ಕರವು) ಎಂಬ ವಚನದಂತೆ, ಈಗಲಾದರೂ ಶ್ರೀ ಕರ್ಕಿಯವರು ಸ್ವರಾಜ್ಯ ಪಕ್ಷದ ಸಹಕಾರಿಗಳನ್ನು ಹಿಂಬಾಲಿಸುವದುಚಿತ.

---

೨. ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ಸ್ವರಾಜ್ಯ ಪಕ್ಷದ ಸ್ಥಾನತ್ಯಾಗದಿಂದ ಉಂಟಾದ ಸ್ವತಂತ್ರರ ಅಧಃಪಾತವು ಪ್ರೇಕ್ಷಣೀಯವಿದೆ. ವಿರೋಧಿವೀರರು ಎದ್ದೆದ್ದು ಚರ್ಚೆ ಮಾಡಿದರೂ, ಅಳರಸರು ಅವರ ಸೂಚನೆಗಳನ್ನೆಲ್ಲ ಸುಲಭವಾಗಿ ದೂರಸಾರಿ, ತಾವು ಹಿಡಿದ ಮೊಲಕ್ಕೆ ಮೂರೇ ಕಾಲು ಎಂಬಂತೆ, ತಮ್ಮ ಮನಬಂದಂತೆ ಅಂದಾಜು ಪತ್ರಿಕೆಯೊಳಗಿನ ರಕಮುಗಳನ್ನೆಲ್ಲ ಮಂಜೂರ ಮಾಡಿಕೊಳ್ಳುತ್ತಿರುವರು. ಸಭಾಸದರು ಸೂಚಿಸಿದ ಸೂಚನೆಗಳನ್ನೆಲ್ಲ ಸೂಚಕರೇ ಹಿಂತೆಗೆದುಕೊಳ್ಳುತ್ತಿರುವರು; ಅಥವಾ ಸೂಚನೆಗಳು ಬಿದ್ದು ಹೋಗುತ್ತಿವೆ. ಕಳೆದ ಗುರುವಾರಕ್ಕೊಂದು ಚಮತ್ಕಾರವು ಸಂಭವಿಸಿತು. ಬೆರಿಸ್ಟರ ಜಿನ್ನಾರವರು ಕಾರ್ಯಕಾರಿ ಕೌನ್ಸಿಲಿನ ಸಭಾಸದರ ಸಂಬಳವನ್ನು ಚರ್ಚಿಸುವಾಗ ಪುನಃ ಹಿಂದುಸ್ಥಾನದೊಳಗಿನ ರಾಜ್ಯಪದ್ಧತಿಯನ್ನು ತಿದ್ದುಪಡಿಮಾಡಬೇಕೆಂದು ಸೂಚಿಸಿದರು. ಬೆರಿಸ್ಟರ ಜಿನ್ನಾರವರು ಸ್ವರಾಜ್ಯ ಪಕ್ಷದವರಿಗೆ ಕ್ಷುದ್ರಪ್ರಾಣಿಗಳೆಂದು ಸಂಬೋಧಿಸಿ, ತಮ್ಮ ದೊಡ್ಡಸ್ತಿಕೆಯನ್ನೂ, ರಾಜನಿಷ್ಠೆಯನ್ನೂ ಹೊಗಳಿ, ತಮ್ಮ ಅಂಜಿಕೆಯೊಡನೆ, ಅಳರಸರು ಸಾರ್ವಭೌಮ ಚೌಕಶಿ ಮಂಡಳವನ್ನು ನೇಮಿಸಿ, ರಾಜ್ಯಘಟನೆಯ ತಿದ್ದುಪಡಿಯನ್ನು ವಿಚಾರಿಸಬೇಕೆಂದರು. ಪ್ರಜಾಪ್ರತಿನಿಧಿಕ ಪರಿಷತ್ತಿನ ವಿದ್ಯಮಾನ ಭಾರತೀಯ ರಾಜ್ಯಘಟನೆಯ ವಿಚಾರ ಮಾಡಬೇಕೆಂದು ಪಂಡಿತ ಮೋತಿಲಾಲ ನೆಹರೂರವರೊಡನೆ ಜೊತೆಗಾರರಾಗಿ ಕಳೆದ ಸಪ್ಟಂಬರದಲ್ಲಿ ಅಳರಸರ ಪ್ರತಿಕಾರವನ್ನು ಲೆಕ್ಕಿಸದೆ ಠರಾವನ್ನು ಮಂಜೂರ ಮಾಡಿಕೊಂಡ ವೀರ ಬೆರಿಸ್ಟರ ಜಿನ್ನಾರವರು ೫-೬ ತಿಂಗಳುಗಳಲ್ಲಿ ನಿರರ್ಥಕವಾದ ಸಾರ್ವಭೌಮ ಬಾದಶಾಹೀ ಕಮೀಶನ್ನು ಬೇಡುವಷ್ಟು ಅಧಃಪತನ ಹೊಂದಿದ್ದು ನಿಜವಾಗಿ ಶೋಚನೀಯವು! ಮಾನಧನ ಮಾನವನಿಗೆ, ಸ್ವತಂತ್ರ ಲೋಕನಾಯಕರೆಂದು ಮೆರೆಯುವವರಿಗೆ ವಿಚಾರಪೂರ್ವಕ ಕೈಕೊಂಡ ನಿರ್ಧಾರಗಳನ್ನು, ಅಲ್ಪಾವಕಾಶದಲ್ಲಿ ನವ ತರ್ಕ ಕಾರಣಗಳನ್ನೀಯದೆ, ಬದಲಿಸುವದು ಎಂದೂ ಶ್ರೇಯಸ್ಕರವಲ್ಲೆಂದು ನಾವಾಗಿ ಹೇಳಬೇಕಾಗಿಲ್ಲ. ಈ ಸೂಚನೆಯನ್ನು ಸರಕಾರವೂ ಧಿಕ್ಕರಿಸಿತು; ನೇಮಕರೂ ಧಿಕ್ಕರಿಸಿದರು. ಹೀಗೆ ಸ್ವತಂತ್ರರು ಸೋತುಹೋದರು. ಸ್ವರಾಜ್ಯ ಪಕ್ಷದವರೊಡನೆ ಸ್ವತಂತ್ರರು ಕೌನ್ಸಿಲುತ್ಯಾಗ ಮಾಡುವದು ಒಂದು ಪಕ್ಷ; ನೇಮಕರೊಡನೆ, ಸರಕಾರದೊಡನೆ ಸೇರಿದರೂ ಗುಮಾನಿ ಇಂದು ಪಕ್ಷ; ಇತ್ತ ಇದೂ ಇಲ್ಲ, ಅತ್ತ ಅದೂ ಇಲ್ಲ. ಸ್ವತಂತ್ರರು ತ್ರಿಶಂಕ ಸ್ಥಿತಿಯಂತೆ ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ಜೋತಾಡುತ್ತಿರುವರು; ಅಳರಸರ ಕಾರಭಾರವು ನಿರಾತಂಕವಾಗಿ ನಡೆದಿದೆ. ಸ್ವತಂತ್ರರಿಗೆ ವಚನಭ್ರಷ್ಟವಾದ ಶೋಚನೀಯವಾದವು ಮಾತ್ರ ಕೊನೆಗೆ ಬಂತು. ಶಕ್ತಿಶೂನ್ಯ, ಸ್ವಾಭಿಮಾನಶೂನ್ಯ ಮಾನವರ ಗತಿಯಿದು!

---

೩. "ಮುಂಬಯಿ ಕ್ರಾನಿಕಲ್" ಪತ್ರಿಕೆಯ ಸಂಪಾದಕಸ್ಥಾನವನ್ನು ಮಿ|| ಹೊರ್ನಿಮನ್‌ರವರು ವಹಿಸಿಕೊಂಡು ಕೆಲವು ದಿನಗಳೆಯುವಷ್ಟರಲ್ಲಿ, ಮಿ|| ಹೊರ್ನಿಮನ್‌ರವರಿಗೆ "ಕ್ರಾನಿಕಲ್" ಪತ್ರಿಕೆಯ ಕಂಪನಿಯವರು ಮೊದಲು ನಡೆದ ಕರಾರಿನ ವಿರೋಧವಾಗಿ ಅವರನ್ನು ಥಟ್ಟನೆ ಪದಚ್ಯುತ ಮಾಡಿದರೆಂದು ತಿಳಿಸಲು ಖೇದವೆನಿಸುತ್ತದೆ. "ಕ್ರಾನಿಕಲ್" ಪತ್ರಿಕೆಯ ಸಂಪಾದಕವರ್ಗದವರನ್ನು ಇವರು ನಮ್ಮ, ಜಿತಮನ ತಮ್ಮ ಸ್ವಾಧೀನವಿಡಬೇಕೆಂದೂ, ಕಂಪನಿಯ ಡ್ಯಾರೆಕ್ಟರ ಮಂಡಳದಲ್ಲಿ ತಮಗೊಂದು ಸ್ಥಾನವಿರಬೇಕೆಂದೂ ಮಿ|| ಹೊರ್ನಿಮನ್‌ರವರ ಕರಾರಿತ್ತು. "ಕ್ರಾನಿಕಲ್" ಪತ್ರಿಕೆಗಾಗಿ ಮಿ|| ಹೊರ್ನಿಮನ್‌ರವರು ಮಾಡಿದ ಅಪರಿಮಿತ ಸೇವೆ, ಪತ್ರಿಕೆಯನ್ನು ಭದ್ರಪಡಿಸಲು ಮಿ|| ಹೊರ್ನಿಮನ್‌ರು ಕೈಕೊಂಡ ಉಪಾಯಯೋಜನೆ ಮುಂತಾದವುಗಳ ವಿಚಾರದಿಂದ ಮಿ|| ಹೊರ್ನಿಮನ್‌ರವರಿಗೆ "ಕ್ರಾನಿಕಲ್" ಪತ್ರಿಕೆಯಲ್ಲಿ ವಿಶೇಷ ಪ್ರಾಮುಖ್ಯತೆಯನ್ನು ಪಡೆಯುವ ಅಧಿಕಾರವಿದೆ. ಹೀಗಿದ್ದು, ಮಿ|| ಬೆಳಗಾಂವವಾಲಾರವರಂಥ ಡ್ಯಾರೆಕ್ಟರರು ವಿವೇಕಶೂನ್ಯರಾಗಿ ಮಿ|| ಹೊರ್ನಿಮನ್‌ರವರಿಗೆ ಥಟ್ಟನೆ ಪದಚ್ಯುತ ಮಾಡಿದ್ದು ಅಕ್ಷಮ್ಯವೆಂದು ನಮ್ಮ ಮತವಿದೆ. ಮಿ|| ಹೊರ್ನಿಮನ್‌ರ ವಿಯೋಗದಿಂದ "ಕ್ರಾನಿಕಲ್" ಪತ್ರಿಕೆಯ ಗೌರವವೂ, ಪ್ರತಿಷ್ಠೆಯೂ ಬಹು ಮಟ್ಟಿಗೆ ಕುಗ್ಗುವದೆಂದು ನಾವು ಹೇಳಬೇಕಾಗಿಲ್ಲ. ಮಿ|| ಹೊರ್ನಿಮನ್‌ರವರು "ನೆಶನಲ್ ನ್ಯೂಸಪೇಪರ್ಸ" ಎಂಬ ಹೊಸ ಕಂಪನಿಯೊಂದನ್ನು ಸ್ಥಾಪಿಸಿ, ಹೊಸ ವೃತ್ತಪತ್ರವನ್ನು ಹೊರಡಿಸಲಿರುವರು. ಮಿ|| ಹೊರ್ನಿಮನ್‌ರವರು ಹೊಸ ವೃತ್ತಪತ್ರವನ್ನು ಹೊರಡಿಸಿದರೆ, "ಕ್ರಾನಿಕಲ್" ಪತ್ರಿಕೆಯಲ್ಲಿ ಹೊರ್ನಿಮನ್‌ರ ಪರಂಪರೆಯನ್ನು ಕಾಯ್ದ ಸಂಪಾದಕವರ್ಗದವರೂ "ಕ್ರಾನಿಕಲ್" ಪತ್ರಿಕೆಯನ್ನು ತ್ಯಜಿಸಿ, ಮಿ|| ಹೊರ್ನಿಮನ್‌ರವರ ಹೊಸ ಪತ್ರಿಕೆಯನ್ನು ಸೇರುವರು. ಹೀಗೆ, ಅವರೂ "ಕ್ರಾನಿಕಲ್" ಪತ್ರಿಕೆಯನ್ನು ತ್ಯಜಿಸಿದರೆ, "ಕ್ರಾನಿಕಲ್" ಪತ್ರಿಕೆಯ ಗೌರವವು ಸಂಪೂರ್ಣವಾಗಿ ನಷ್ಟವಾಗುವದು. ಪತ್ರಿಕೆಯ ಡ್ಯಾರೆಕ್ಟರರು ಇದನ್ನು ವಿಚಾರ ಮಾಡಿ, "ಕ್ರಾನಿಕಲ್" ಪತ್ರಿಕೆಯ ಕೀರ್ತಿಗೆ ಕಲಂಕ ತಗಲದಂತೆ ಮಿ|| ಹೊರ್ನಿಮನ್‌ರವರನ್ನು ಸಂತೈಸಿ, ವಚನಪಾಲನ ಮಾಡಬೇಕಾಗಿ ನಮ್ಮದೊಂದು ಅಪೇಕ್ಷೆ.

---

೪. ಸಾಣೆಕಟ್ಟೆಯ ಉಪ್ಪಿನ ಸಹಕಾರಿ ಸಂಘದವರು "ವೃತ್ತ"ದ ಮೇಲೆ ಮಾಡಿದ ಮಾನನಷ್ಟದ ಫಿರ್ಯಾದಿಯಲ್ಲಿ ಇಲ್ಲಿಯ ೧ನೇ ವರ್ಗದ ಮೇಜಿಸ್ಟ್ರೇಟರು ೧೫೦ ರೂಪಾಯಿ ದಂಡವನ್ನು ವಿಧಿಸಿದ್ದರಷ್ಟೇ. ಈ ತೀರ್ಪಿನ ಮೇಲೆ ಕಾರವಾರ ಸೇಶನ್ಸ ಜಡ್ಜರಲ್ಲಿ ಮಾಡಿದ ಅಪೀಲು ಸುನಾವಣೆಯು ಕಳೆದ ತಾ. ೬-೮ನೇಗೆ ನಡೆದು, ಕಳೆದ ಶನಿವಾರ ತಾ. ೧೩ನೇಗೆ ತೀರ್ಪು ಹೇಳಲ್ಪಟ್ಟಿತು. ಸೇ|| ಜಡ್ಜರು ಮೇಜಿಸ್ಟ್ರೇಟರ ಅರ್ಥವನ್ನು ಅಲ್ಲಗಳೆದು, "ವೃತ್ತ"ವನ್ನು ದೋಷಮುಕ್ತ ಮಾಡಿರುವರೆಂದು ತಿಳಿಸಲು ತುಂಬಾ ಸಂತೋಷವಾಗುತ್ತದೆ. ಸೇ|| ಜಡ್ಜರ ತೀರ್ಪಿನ ನಕಲು ಇನ್ನೂ ನಮ್ಮ ಕೈಸೇರದ್ದರಿಂದ, ಈ ಕುರಿತು ವಿಸ್ತೃತ ಚರ್ಚೆಯನ್ನು ಯಥಾವಕಾಶ ಮಾಡಬೇಕಾಗಿದೆ. ಸದ್ಯಕ್ಕೆ ಪ್ರೀತಿಪೂರ್ವಕವಾಗಿ "ವೃತ್ತ"ದ ವಕೀಲಿಯನ್ನು ಮಾಡಿದ ಡಿಸ್ಟ್ರಿಕ್ಟ ಕೋರ್ಟಿನ ವಕೀಲರಾದ ರಾ|| ವೆಂಕಟರಾವ ಹಳದೀಪುರಕರ ಹಾಗು ಮಾಧವರಾವ ಅಣ್ಣಿಭಾಗ ಇವರೀರ್ವರ ಉಪಕಾರ ಮನ್ನಿಸುವೆವು. ಮೇಜಿಸ್ಟ್ರೇಟ ಕೋರ್ಟಿನಲ್ಲಿ ಕಾಲಕಾಲಕ್ಕೆ ಶಿರಸಿಯಿಂದ ಬಂದು ತತ್ಪರತೆಯಿಂದ "ವೃತ್ತ"ದ ವಕೀಲಿಯನ್ನು ನಡೆಸಿದ ರಾ|| ಬಿಳಗಿ ಅನಂತರಾಯರಿಗೂ "ವೃತ್ತ"ವು ಕೃತಜ್ಞತೆಯನ್ನು ಪ್ರದರ್ಶಿಸುತ್ತದೆ. ಕೊನೆಗೆ ಸೇ|| ಜಡ್ಜರಾದ ಮಿ|| ಕಿಂಡರ್ಸ್ಲೇಯವರು ವಿಚಾರದಿಂದ ಲೇಖದ ಸ್ವಾಭಾವಿಕ ಅರ್ಥವನ್ನು ಗ್ರಹಿಸಿ, "ವೃತ್ತ"ವನ್ನು ದೋಷಮುಕ್ತ ಮಾಡಿದ ಬಗ್ಗೆ ನ್ಯಾಯಮೂರ್ತಿಗಳ ಉಪಕಾರವನ್ನೂ ನಾವು ಸ್ಮರಿಸುವೆವು.

— ಬೆಲ್ಲಿಯಲ್ಲಿ ಒಂದು ರೋಗ ಹತ್ತಿದೆ. ಒಂದು ಪ್ರಕಾರದ ಎಣ್ಣೆಯಂಥ ಉರಿಯುವ ಜ್ವಾಲೆಯನ್ನು ನೀರಿನಲ್ಲಿ ಮುಳುಗಿಸಿದರೂ ಆರುವದಿಲ್ಲ. [illegible] ತಗಿಯುವರೆಂದು ಶ್ರೀ [illegible] ಇಲ್ಲ!

ಸ್ಥಾನಿಕ ವೃತ್ತಾಂತ.

ಕುಮಟಾ—'ವೃತ್ತ'ಕರ್ತರಾದ ರಾ|| ಕೃಷ್ಣರಾವ ಕೇಶವ ಶೆಣ್ವಿಯವರ ಮೇಲೆ ಸಾಣೀಕಟ್ಟೆಯ ಉಪ್ಪಿನ ಸಹಕಾರಿ ಸಂಘದವರು ಮಾಡಿದ ಮಾನನಷ್ಟದ ಫಿರ್ಯಾದಿ ಕಿ ಪಿ ನ ಮೇಲೆ 'ವೃತ್ತ'ಕಾರರು ಕಾರವಾರ ಡಿಸ್ಟ್ರಿಕ್ಟ ಕೋರ್ಟಿನಲ್ಲಿ ಮಾಡಿದ ಅಪೀಲು 'ವೃತ್ತ'ಕಾರರಿಗೆ ಅನುಕೂಲವಾಗಿ ನಿಕಾಲೀಯಾಗಿದೆ. ವೃತ್ತಕಾರರ ತರ್ಫೆನಿಂದ ವಕೀಲರಾದ ವೆಂಕಟರಾವ ರಾಮಚಂದ್ರಯ್ಯಾ ಹಳದೀಪೂರ ಹಾಗು ಮಾಧವರಾವ ಮಂಜುನಾಥ ಶಾನಭಾಗ ಇವರು ಕೆಲಸ ನಡಿಸಿದರು. ಸರಕಾರದ ತರ್ಫೆನಿಂದ ಪಿ|| ಪ್ರಾಸಿಕ್ಯೂಟರವರು, ಉಪ್ಪಿನ ಸಂಘದ ತರ್ಫೆನಿಂದ ರಾ| ಶಿವರಾವ ಕಾಯ್ಕಿಣಿ, ಮಂಜುನಾಥಯ್ಯಾ ಮುರ್ಡೇಶ್ವರ, ಶಂಕರರಾವ ನಾಗರಕಟ್ಟೆ ಇವರೂ ಕೆಲಸ ನಡಿಸಿದರು. ವಕೀಲರ ತರ್ಕಗಳು ತಾ| ೬-೮ ಶನಿವಾರ-ಸೋಮವಾರ ನಡೆದವು. ಜಡ್ಜರಾದ ವಿ|| ಕಿಂಡರ್ಸ್ಲೇಯವರ ತೀರ್ಪನ್ನು ಶನಿವಾರ ತಾರೀಖು ೧೩ ನೇಗೆ ... 'ವೃತ್ತ'ಕಾರರನ್ನು ದೋಷಮುಕ್ತ ಮಾಡಿದರು.

ಕರ್ನಾಟಕ ಸಿನೇಮಾ ಕಂಪನಿಯವರು ಶ್ರೀ "ಕೃಷ್ಣ ಜನ್ಮ" ಚಿತ್ರಪಟವನ್ನು ಈ ಹೊತ್ತು ತೋರಿಸುವರು. ನಾಳೆ "ಸತೀ ಅಂಜನೀ" ಚಿತ್ರಪಟವನ್ನು ತೋರಿಸಿ, ಹೊನ್ನಾವರಕ್ಕೆ ತೆರಳುವರು.

ತಾಲೂಕ ಲೋಕಲ್ ಬೋರ್ಡಿನ ಇಲೆಕ್ಷನ್ ಮಾರ್ಚ ೨೧ ನೇ ಮಂಗಳವಾರಕ್ಕೆ ಕಾಗಾಲ-ಮಿರ್ಜಾನ-ಕತಗಾಲಗಳಲ್ಲಿ ನಡೆಯುವದು.

ಡ್ಯೂಟಿ ತಂಬಿಟ್ಟ ತಂದ ಉರಣ ಉಪ್ಪನ್ನು ಉಪಯೋಗಕ್ಕಾಗಿ ಅಂಕೋಲಾ-ಹೊನ್ನಾವರ ಕಡೆಗೆ ಒಯ್ಯಲು ಕಷ್ಟವು ಅಧಿಕಾರಿಗಳ ಕಣ್ಣಿಗೆ ಬಿದ್ದಂತೆ ತೋರಿದ್ದಲ್ಲಿ, ಅವರು ಅದಕ್ಕೆ ಕಿವಿಗೊಡುವದಿಲ್ಲವಾಗಿ ಉರಣ ಉಪ್ಪಿನ ವರ್ತಕರಾದ ಗುಂಡಬಾಳೆಯ ರಾ| ರಾಮಚಂದ್ರ ಅನಂತ ಪೈ ಇವರು ತಿಳಿಸುತ್ತಾರೆ. ಡ್ಯೂಟಿ ತುಂಬಿ ತಂದ ಉಪ್ಪನ್ನು ಜಿಲ್ಲೆಯೊಳಗೆ ಹಬ್ಬಿಸಲು ಕಷ್ಟವು ಅಧಿಕಾರಿಗಳು ದಣಿಸುವದೇಕೆ? ಉಪ್ಪಿನ ಮೇಲೆ ಕರ ಹೇರುವದು ಮೊಟ್ಟ ಮೊದಲ ಅನ್ಯಾಯವು. ಅದರೊಳಗೂ ಇಂಥ ಪ್ರತಿಬಂಧಗಳನ್ನು ಹಚ್ಚಿ ಉಪ್ಪಿನ ಮೇಲಿನ ಕರಕ್ಕೆ ಕುಂಟೆ ಕಟ್ಟುವದು ಮತ್ತೊಂದು ಅನ್ಯಾಯವು. ಅಧಿಕಾರಿಗಳು ಇತ್ತ ಲಕ್ಷ ಕೊಡುವರೇನು?

ಸಾಭಾರ ಸ್ವೀಕಾರ.

ಜಯಕರ್ನಾಟಕ— ಹೋಳೀ ಹುಣ್ಣಿಮೆಯ ಸಂಚಿಕೆ. ಸಂಪಾದಕ ಮತ್ತು ಪ್ರಕಾಶಕ:— ಶ್ರೀ ಆಲೂರ ವೆಂಕಟರಾಯರು. ಸಾಧನಕೇರಿ, ಧಾರವಾಡ. ಚಂದಾ ಅಂಚೆ ವೆಚ್ಚ ಸೇರಿ ರೂಪಾಯಿ ೫-೮-೦.

ತುಲಸೀದಾಸ ರಾಮಾಯಣ—(ಸಚಿತ್ರ) ಭಾಗ ೩. ಶ್ರೀಯುತ ಗೋಸ್ವಾಮಿ ತುಲಸೀದಾಸ ರಾಮಾಯಣದ ಅನುವಾದ. ಲೇಖಕ:— ಶ್ರೀ ದತ್ತಾತ್ರೇಯ ಕೃಷ್ಣ ಭಾರದ್ವಾಜ, 'ಆನಂದಾಶ್ರಮ, ಬಸವನಗುಡಿ, ಬೆಂಗಳೂರು ಸಿಟಿ ಗ್ಲೇಜ ಕಾಗದದ ಪ್ರತಿಗೆ ರೂಪಾಯಿ ೫-೦-೦. ಸಾಧಾರಣ ಕಾಗದದ ಪ್ರತಿಗೆ ರೂಪಾಯಿ ೪-೦-೦. ಬಿಡಿ ಪ್ರತಿಗೆ ೦-೮-೦.

ಸುಬೋಧ—ಸಚಿತ್ರ ಮಾಸಪತ್ರಿಕೆ. ಪುಷ್ಪ ಸಂಚಿಕೆ. ಸಂಪಾದಕ ಮತ್ತು ಪ್ರಕಾಶಕ.— ರಾ| ಎನ್. ರಾಮರಾವ. ಸುಬೋಧ ಮುದ್ರಣಾಲಯ ಬೆಂಗಳೂರು ಸಿಟಿ. ವಾರ್ಷಿಕ ಚಂದಾ ಅಂಚೆ ವೆಚ್ಚ ಸೇರಿ ರೂ. ೧-೮-೦.

ಕಾರವಾರ— ೧ನೇ ವರ್ಗದ ಸಬಜಡ್ಜರು ಇನ್ನೂ ಬಂದಿಲ್ಲ ಅದರಿಂದ ಪಕ್ಷಿಗಾರರ ಗೋಳು. ಡಿಸ್ಟ್ರಿಕ್ಟ ಕೋರ್ಟಿನಲ್ಲಿ ದಾವೆಗಳ ವಿಚಾರವಾಗುತ್ತಿದ್ದರೂ, ಅವು ಲಂಬಾರಿಗಳ ಅವ್ಯವಸ್ಥೆ ಅವುಗಳಿಗೆ ಹುಕುಮು ಮಾಡುವವರಿಲ್ಲ ಅವನ್ನು ಡಿಸ್ಟ್ರಿಕ್ಟ ಕೋರ್ಟಿಗೆ ವರ್ಗಾಯಿಸಿದರೆ ಅಷ್ಟೊಂದು ಅನುಕೂಲವಾಗುತ್ತಿತ್ತು. ಬೇಗನೆ ಪಕ್ಷಿಗಾರರ ಉಪಕಾರಕ್ಕೆ ಸಬಜಡ್ಜರನ್ನು ಕಳಿಸಿ, ಇಲ್ಲಿಯ ಪಕ್ಷಿಗಾರರಿಗೆ ತೊಂದರೆ

ಸಿರ್ಸಿ— ಇಲ್ಲಿಯ ಕಟ್ಟಿಗೆ ಡೀಪೋವಿನಿಂದ ಸರಕಾರಕ್ಕೆ ಲುಕ್ಸಾನು ಬಗಹತ್ತಿದ್ದರಿಂದ ಈಗ ಪರಮೀಟಿನ ಪದ್ಧತಿಯು ಪ್ರಾರಂಭವಾಗಿದೆ.

ಈ ಊರಲ್ಲಿ ೨-೩ ಕೆರೆಗಳಿದ್ದರೂ ಅದರಲ್ಲಿ ಒಂದೂ ಉಪಯೋಗದ್ದಿಲ್ಲ. ಹೀಗಾಗಿ ಊರವರಿಗೂ, ಪರಸ್ಥಳದಿಂದ ಬರುವವರಿಗೂ ನೀರಿನ ಅಡಚಣೆಯು ಬಹಳವಾಗಿದೆ. ಇದು ಇರಿಗೇಶನ್ ಖಾತೆಯವರ ಲಕ್ಷ್ಯಕ್ಕೆ ಬಂದಿಲ್ಲವೇ?

ಶ್ರೀ ಟಿ ಎಸ್ ನಾಯ್ಕರವರು ಸಾಹಿತ್ಯ ಪತ್ರಿಕೆಯಲ್ಲಿ ೩ ವರ್ಷಗಳನ್ನು ಕಳೆದು, ಈಗ ಹುಬ್ಬಳ್ಳಿ ಆಶ್ರಮದಲ್ಲಿ ದೇ| ಗಂಗಾಧರರಾವ ದೇಶಪಾಂಡೆಯವರೊಂದಿಗೆ ಕೆಲಸ ಮಾಡುತ್ತಿರುವರು

ಊರಿನ ಬೀದಿ ಉಪ್ಪಿನ ಪ್ರಸಾರವು ವಿಶೇಷವಾಗಿದೆ.

ಕಳೆದ ಶನಿವಾರ ೩ನೇ ತಾರೀಖಿನ ದಿವಸ, ಗದಗ, ರಾಣೇಬೆನ್ನೂರ, ಗೋಕಾಕ, ದಾವಣಗೇರಿ ಮೊದಲಾದ ಕಡೆಗೆ ಹೋಗಿ ಜಯಿಸಿ ಬಂದ ಹಾವೇರಿಯ ಫುಟ್‌ಬಾಲ ಟೀಮಿಗೂ, ಇಲ್ಲಿಯ ಫುಟ್‌ಬಾಲ ಟೀಮಿಗೂ ಮ್ಯಾಚ್ ಆಗಿ ಅದರಲ್ಲಿ ಸಿರ್ಸಿಯ ಟೀಮೇ ಗೆದ್ದರು. ಇಲ್ಲಿ ಆಡಿದವರೆಂದರೆ; ಮಿ| ಕಾಸರಕೋಡ L.M.E (ಕ್ಯಾಪ್ಟನ್) ಡಾ| ಉತ್ತಂಗಿ, G.B.V.C ಮಿ| ಅಯ್ಯಂಗಾರ, ಕೇಶವ, ಧಾಕಪ್ಪ, ಹೆಗಡೆ, ಬಾಸ್ಕರ ಶಿವಮೊಗ್ಗಿ, ನಾಯ್ಕ, ಚಂದ್ರಕಾಂತ, ಮತ್ತು ಸೋಸವಾಗಿ ಇವರಲ್ಲಿ ಡಾ| ಉತ್ತಂಗಿಯವರ ಬ್ಯಾಕಿನ ಹೊಡತಗಳನ್ನೂ, ಮಿ| ಭಾಸ್ಕರ ಇವರ ಚಲನೆಯ ಚಾಪಲ್ಯವನ್ನೂ ಕಂಡು ಪ್ರೇಕ್ಷಕರೆಲ್ಲ ತಲೆದೂಗುತ್ತಿದರು. ರೆಫರಿ ಆದಂಥ ಮಿ| ಮುರ್ಡೇಶ್ವರ B.S.C. ಇವರ ಉತ್ಸಾಹವೂ, ನಿಷ್ಪಕ್ಷಪಾತ ಬುದ್ಧಿಯು ಪರಪಕ್ಷದವರನ್ನು ಸಹ ಮೋಹಿಸಿಬಿಟ್ಟಿತು. ಒಟ್ಟಿನಲ್ಲಿ ಇದು ಟೀಮಿಗೂ, ವಿಶೇಷವಾಗಿ ಶ್ರೀ ಮಾರಿಕಾಂಬಾ ಹೈಸ್ಕೂಲಿಗೂ ಭೂಷಣಾಸ್ಪದವೇ ಸರಿ!

ಸಿದ್ದಾಪುರ— ಹಣದ ಅಡಚಣಿಯಿದ್ದದರಿಂದ ಇಲ್ಲಿಯ ಚಿಕಿತ್ಸಾಲಯದಲ್ಲಿ ದಾದಿಯನ್ನಾಗಲೀ, ಹೆಣ್ಣು ನೌಕರಿಯನ್ನಾಗಲೀ ಇಡಲಿಕ್ಕೆ ಪ್ರಾಂತಿಕ ಸರಕಾರವು ಒಪ್ಪದಿಲ್ಲವಾಗಿ ಶ್ರೀ| ಕರ್ಕಿಯವರಿಗೆ ಪ್ರಾಂತಿಕ ಸರಕಾರವು ಉತ್ತರಕೊಟ್ಟಿದೆ. ಕೌನ್ಸಿಲ ಮೆಂಬರರ ರೂಪಾಯಿ ಖರ್ಚು ಮಾಡಲಿಕ್ಕೆ ಹಣದ ಅನುಕೂಲತೆ! ನೂರಾರು ರೂಪಾಯಿಗೆ ಬಹಳ ಅಡಚಣಿ!!

ವೃತ್ತಸಾರ.

— ಮುಂಬಯಿಯ ಶಾಸನ ಕೌನ್ಸಿಲಿನ ಸಭಾಸದರು ಕೋರ್ಟು ಅಧಿಕಾರಿಗಳಾದ ಸರ್ ಜನ್ನಿ ಬೋರಿನ್ಸರವರ ಮೇಲೆ ಮಾಡಿದ ದಾವೆಯು ಶಾಸನದ ಕೆಲವು ದುರುಸ್ತಿಯ ಮೂಲಕ ಕಿತ್ತಲ್ಪಟ್ಟಿದೆ

— ಅಖಿಲ ಭಾರತೀಯ ಪತ್ರಿವಾಡಿ ಆಗರವಾಲಾ ಮಹಾಜನ ಸಭೆಯವರು ದಿಲ್ಲಿಯಲ್ಲಿ ನೆರಿಸಿದ ಖಾದಿ ಪ್ರದರ್ಶನಾಲಯದಲ್ಲಿ ಆಂಧ್ರ ಸ್ತ್ರೀಯೋರ್ವಳು ೧೦೦೦ಕ್ಕೆ ಮಿಕ್ಕಿದ ನಂಬರದ ನೂಲನ್ನು ತೆಗೆದಳು. ಖಾದಿಪ್ರತಿಷ್ಠಾನದ ಮಿ| ಉಸ್ಮಾನರವರು ತಾಸಿಗೆ ೫೦೦ ಗಜ ನೂಲನ್ನು ನೂತರು, ಬಿಹಾರದ ನೇಕಾರರು ಕಂಡು ಒಬ್ಬ ದ ಖಾದಿಯನ್ನು ನೇದರು; ರಾಜಪೂತಸ್ಥಾನದವರು ೧೨ ಇಂಚು ಅರಿವೆಯನ್ನು ನೇಯ್ದರು.

— ಸಿಂಧ ಪ್ರಾಂತದಲ್ಲಿ ಒಂದು ಹಿಂದೂ ಕಾಲೇಜನ್ನು ಸ್ಥಾಪಿಸುವದಕ್ಕಾಗಿ ದಿವಾನ ಬಹದ್ದೂರರು ಸುಮಾರು ೫೦,೦೦೦ ರೂಪಾಯಿಗಳನ್ನಿತ್ತಿರುವರು!

ಬ್ರಿಟಿಶರ ರಾಜನೀತಿಯ ಮಾದರಿ.

[೧ನೇ ಪಾನಿನಿಂದ ಮುಂದರಿಸಿದ್ದು.]

ವನ್ನೇ ಸರಕಾರಕ್ಕೆ ಕಳುಹವೇಕು. ಆದರೆ, ಯಾವ ಪತ್ರವನ್ನು ನೀವು ಕಳುಹುತ್ತೀರೆಂದು ದಯವಾಡಿ ನನಗೆ ತಿಳಿಸಬೇಕು ಅಂದರೆ, ನನ್ನ ಫ್ಯಾಯಿಲಿನಲ್ಲಿ ಆದರಂತೆ ನಮೂದಾಗಬೇಕಾಗಿದೆ.

ನಿಮ್ಮ ಸ್ನೇಹಿತ,
ಜೋನ ಬುಲಹನಿ

ಬದಲಿಸಿದ ಪತ್ರ.

ಈ ನಂಬರು ಮತ್ತು ಈ ತಾರೀಖು ಇರುವ ಪತ್ರವಿದ್ದ ಸ್ಥಳದಲ್ಲಿ ಈ ಪತ್ರವನ್ನಿಡಬೇಕು

ಗುಪ್ತ ಪತ್ರ ಅಲಿಪೂರ ಸೆಂಟ್ರಲ್ ಜೈಲಿನ ಸುಪರಿಂಟೆಂಡೆಂಟರಿಂದ ಬಂಗಾಲದ ಜೈಲುಗಳ ಇನ್ಸಪೆಕ್ಟರ ಜನರಲ್‌ರವರಿಗೆ—

ನಂಬರು ೪೧೩೯-೫೪-೧, ಆಲಿಪೂರ, ೨೪-೯-೧೯೧೫

ಅಯ್ಯಾ,

೧೭-೯-೧೯೧೫ ನೇಗೆ ಬಂದ ಸರಕಾರಿ ಪತ್ರ ನಂ. ೧೧೩೩೪-ಬಿ. ನೇ ಪತ್ರದ ನಕಲಿನಲ್ಲಿಯೂ, ಅದರ ಮೇಲೆ ನಾನು ತಾ. ೨೨-೯-೧೯೧೫ ನೇಗೆ ಬರೆದ ಪತ್ರ ನಂ. ೬೪೧-ಡಿ ನೇದರಲ್ಲಿಯೂ ೧೮೧೮ ನೇ ಇಸ್ವಿಯ ೩ ನೇ ರೆಗ್ಯುಲೇಶನಿನ ೬ನೇ ಕಲಮಿನನ್ವಯ ಈ ಸೆರೆಮನೆಯಲ್ಲಿದ್ದ ರಾಜಕೀಯ ಕೈದಿಗಳ ಬಂದೋಬಸ್ತಿನ ಕುರಿತು ಕೇಳಿದಂತೆ ನಾನು ರಿಪೋರ್ಟು ಮಾಡುವದೇನೆಂದರೆ:—

(ಅ) ರಾಜಕೀಯ ಕೈದಿಗಳ ಬಂದೋಬಸ್ತು ಕಠಿಣ (*strict*) ವಿದೆ. ಈ ವರೆಗೆ ಯಾವ ಪ್ರವೃತ್ತಿಯೂ ಕಂಡಿಲ್ಲ.

(ಬ) ಅವರಿಗಾಗಿ ಇಲ್ಲಿ ಮಾಡಿದ ವ್ಯವಸ್ಥೆಯು ಅವರ ದರ್ಜೆಗೆ ತಕ್ಕಂತೆ ಇರುತ್ತದೆ. ಅವರ ಇಚ್ಛೆಗಳನ್ನೆಲ್ಲ ನಾವು ಪೂರೈಸಿದ್ದೇವೆ. ಇಬ್ಬರೂ ಜೈಲಿನೊಳಗಿನ ವರ್ತನೆಯಿಂದ ಸಮಾಧಾನವಾಗಿರುವರು.

ಚೆವರಲೆಟ್
ಮೋಟಾರಕಾರ್ ಏಜನ್ಸಿ, ಕೆನರಾ.



ನಾವು ಹೊಸ ಚೆವರಲೆಟ್ ಮೋಟಾರ ಗಾಡಿಗಳನ್ನು ಗಿರಾಕಿಗಳಿಗೆ ಅನುಕೂಲವಾಗುವಂತೆ ತರಿಸಿಕೊಡುತ್ತೇವೆ. ಅಪೇಕ್ಷೆಯುಳ್ಳವರು ವಿವರಕ್ಕಾಗಿ ಪತ್ರದ್ವಾರಾ ವಿಚಾರಿಸಿ ತಿಳಕೊಳ್ಳಬಹುದು.

ಸೋಲ ಏಜಂಟ:—**ಎಸ್. ಎಲ್. ಧಾಕಪ್ಪ ಮತ್ತು ಬ್ರದರ್ಸ ಶಿರ್ಸಿ.**

ಕುಮಟಾ ಏಜಂಟ:— **ಜಿ. ಡಿ. ಮಳಗಿಕರ ಎಂಡ್ ಕೋ,**

ಬಿ. ಪಿ. ಸಿ. ಪೆಟ್ರೋಲ ನಮ್ಮಲ್ಲಿ ದೊರೆಯುತ್ತದೆ; ಡನ್‌ಲೊಪ್ ಹಾಗು ಮಿಶಲಿನ ಮೋಟಾರ ಹಾಗು ಸಾಯಕಲ್ ಟಾಯರ-ಟ್ಯೂಬ ಇತ್ಯಾದಿ ಸಾಮುಗ್ರಿಗಳು ಯೋಗ್ಯ ದರದಿಂದ ದೊರೆಯುತ್ತವೆ.

ಸೂಚನೆ:—ನಮ್ಮಲ್ಲಿ ಗುಡ್ ಕಂಡೀಶನಿನಲ್ಲಿದ್ದ ಚೆವರಲೆಟ್ ಕಾರು, ಸಿವರಲೆಂಡ ಮೋಟಾರ ಲಾರಿಗಳು ಮಾರಾಟಕ್ಕೆ ಸಿದ್ಧವಿವೆ. ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆಯಬಹುದು.

G. D. Malgikar & Co.,
KUMTA.

ಬ್ರಿಟಿಶರ ರಾಜನೀತಿಯ ಮಾದರಿ!

ಸರಕಾರಿ ಅಧಿಕಾರಿಗಳ ಪ್ರಜಾವಂಚಕ ಸುಳ್ಳಾಟಿಕೆ.

ಹಿಂದುಸ್ಥಾನದೊಳಗಿನ ಸರಕಾರಿ ಅಧಿಕಾರಿಗಳು ತಮ್ಮ ಪಾಪವನ್ನು ಮುಚ್ಚಲು ಖೊಟ್ಟಿ ಕಾಗದಪತ್ರಗಳನ್ನು ಹೇಗೆ ತಯಾರಿಸುತ್ತಾರೆಂಬುದು ಈ ಕೆಳಗಿನ ಹಕೀಕತ್ತಿನಿಂದ ವಿದಿತವಾಗುವದು :—

ಬಂದೀ ಜೈಲ ಕಮಿಟಿಯ ೧೯೧೯-೨೦ ರ ರಿಪೋರ್ಟಿನ ಎರಡನೇ ಭಾಗದ ೩೬ನೇ ಪುಟ ತಾರೀಖು ೨-೯-೧೯೧೯ ನೇಗೆ ಹೊಸ ಅಲಿಪುರ ಜೈಲಿನ ಸುಪರಿಂಟೆಂಡೆಂಟರಾದ ಲೆಫ್ಟನೆಂಟ ಕರ್ನಲ್ ಮುಲವನಿಯವರು ಕೊಟ್ಟ ಜಬಾನಿಯ ತಾತ್ಪರ್ಯ :—

ಸದ್ಯಕ್ಕೆ ಸರಕಾರವು ಸೆರೆಯಾಳುಗಳನ್ನು ನಡಿಸಿಕೊಳ್ಳುವ ರೀತಿಯ ಕುರಿತು ಅನೇಕ ಆಕ್ಷೇಪಗಳನ್ನು ಪರಿಹರಿಸಬೇಕಾಯಿತು. ಸರಕಾರಿ ಮಾಹಿತಿಗಳ ಮೇಲಿಂದ ದೂರುಗಳೆಲ್ಲ ನಿರಾಧಾರವೆಂದು ಸರಕಾರವು ಸಿದ್ಧ ಪಡಿಸಿದೆ. ಆದರೂ, ಆಕ್ಷೇಪಗಳು ಸಾಧಾರವೆಂದು ನನ್ನ ತಿಳಿಕೆಯಿದೆ. ರಾಜ್ಯಕ್ರಾಂತಿಯ ಚಳವಳಿಯ ಪ್ರಾರಂಭದಿಂದ ಕಲಕತ್ತೆಯ ನೆರೆಹೊರೆಯ ಬಂದಿಖಾನೆಯ ಸೆರೆಮನೆಯಲ್ಲಿ ನಾನು ಇದ್ದೇ ಇರುವೆನು. ನನ್ನಷ್ಟು ಜೈಲಿನ ಕೈದಿಗಳ ಅನುಭವವಿದ್ದವರು ಇನ್ನ್ಯಾರಿಲ್ಲ. ರಾಜದ್ರೋಹಿ ಕೈದಿಗಳಿಗೆ ನಡಿಸಿಕೊಳ್ಳುವ ರೀತಿಯು ಕಠಿಣವಿದ್ದಾಗ್ಯೂ ಬುದ್ಧ್ಯಾ ಸರಕಾರಕ್ಕೆ ವಸ್ತುಸ್ಥಿತಿ ವಿಪರ್ಯಾಸವಾದ ರಿಪೋರ್ಟುಗಳು ಸುಳ್ಳು ಮಾಡಲಾದವು. ಈ ವಿಧಾನವನ್ನು ನಾನು ಬುದ್ಧಿಪೂರ್ವಕವಾಗಿ, ವಿಚಾರಪೂರ್ವಕವಾಗಿಯೇ ಮಾಡಿರುವೆನು. ಈ ಕಾಲದ ವ್ಯಾಪಾರದಲ್ಲಿ ನಾನು ಕೈಕೊಂಡ ಅಪಕೃತ್ಯವು ಎಂದೆಂದಿಗೂ ತೊಳೆದು ಹೋಗಲಾರದು. ರಾಜದ್ರೋಹಿ ಸೆರೆಯಾಳುಗಳಿಗೆ ನಡಿಸಿಕೊಳ್ಳುವ ಕ್ರೂರ ಪ್ರಕಾರದಿಂದ ನನ್ನ ಮನಸ್ಸು ನೊಂದಿತು. ಆದರೂ, ನಾನು ಅದನ್ನು ಮುಚ್ಚುವಂತೆ ಮಾಡಬೇಕಾಗಿತ್ತು. ಈ ಕುರಿತು ನಾನು ಆಗಿಂದಾಗ ದೂರಿಕೊಂಡರೂ ಪ್ರಯೋಜನವಾಗಲಿಲ್ಲ. ಆದರಿಂದ ೧೯೧೫ನೇ ಇಸ್ವಿಯ ಸಪ್ಟಂಬರದಲ್ಲಿ ಸರಕಾರಕ್ಕೆ ಸತ್ಯಸ್ಥಿತಿಯನ್ನರುಹಬೇಕೆಂದು ನಿರ್ಧಾರ ಮಾಡಿ ನಾನು ರಿಪೋರ್ಟನ್ನು ಕಳುಹಿದೆನು. ರಾಜದ್ರೋಹಿ ಕೈದಿಗಳ ಬಂದಿವಾಸವು ನಿಷ್ಠುರವಿದೆ; ಆರೋಗ್ಯಕ್ಕೆ ಹಾನಿಕಾರಕವಿದೆ; ಕೈದಿಗಳ ಕಾಯಿದೆಯಂತೆ, ಅಥವಾ ಜೈಲು ನಿಯಮಗಳಂತೆ ೭ ದಿನಕ್ಕೆ ಮಿಕ್ಕಿ ಏಕಾಂತವಾಸದ ಶಿಕ್ಷೆಯನ್ನು ವಿಧಿಸಬಾರದೆಂದಿದ್ದಾಗ್ಯೂ, ೩ನೇ ರೆಗ್ಯುಲೇಶನ್ ಪ್ರಕಾರ ದಸ್ತಗಿರಿಯ ಕಾನೂನಿನನ್ವಯ ಸೆರೆ ಹಾಕಿದ ಕೈದಿಗಳಿಗೆ ಇದಕ್ಕೆ ಮಿಕ್ಕಿ ಏಕಾಂತವಾಸವನ್ನನುಭವಿಸಬೇಕಾಗುತ್ತದೆ. ಈ ರಿಪೋರ್ಟಿನಿಂದ ಒಂದೇ ನನ್ನ ಅಧಿಕಾರತ್ಯಾಗವಾಗಬೇಕು; ಅಥವಾ ಕೈದಿಗಳಿಗೆ ನನ್ನಿಂದ ಅನುಭವಿಸಬೇಕಾದ ಕ್ರೂರ ಕರ್ಮಗಳ ಪರಿಹಾರವಾಗಬೇಕು, ಎಂಬ ಆಲೋಚನೆಯಿಂದ ನಾನು ಇನ್ಸಪೆಕ್ಟರ ಜನರಲ್‌ರಿಗೆ ರಿಪೋರ್ಟು ಮಾಡಿದೆ. ಆದರೆ, ನನ್ನ ಪತ್ರವು ನನಗೆ ತಿರುಗಿ ಬಂತು. ಹಿಂದುಸ್ಥಾನ ಸರಕಾರಕ್ಕೆ ಈ ರಿಪೋರ್ಟು ಮುಟ್ಟಿದರೆ ಕೋಲಾಹಲವಾಗುವದೆಂದು ನನಗೆ ತಿಳಿಸಲಾಯಿತು. ದಸ್ತಗಿರಿಯ ಕಾನೂನಿನನ್ವಯ ಸೆರೆಹಿಡಿದ ಕೈದಿಗಳಿಗೆ ಪೋಲೀಸರ ಜುಲುಮಿನಂತೆ ಸಾವು ದಣಿಸಲು ಸಿದ್ಧರಿರುವೆನೆಂದೂ ಹೇಳಲಾಯಿತು. ಆದರಿಂದ ಸೆರೆಯಾಳುಗಳಿಗೆ ಏಕಾಂತವಾಸದಲ್ಲಿಟ್ಟರು. ಅವರಿಗೆ ದಿನಾ ವ್ಯಾಯಾಮ ಮಾಡಲು ಅಪ್ಪಣೆಯಿದೆ. ಅವರು ಉಲ್ಲಸಿತರಿರುವರು; ಅವರ ಆರೋಗ್ಯವು ನೆಟ್ಟಗಿದೆ. ಇತ್ಯಾದಿ" ಬರೆದು ಹೊಸ ಪತ್ರ ಕಳುಹಲು ಇನ್ಸಪೆಕ್ಟರ ಜನರಲ್‌ರು ನನಗೆ ತಿಳಿಸಿದರು. ನನ್ನ ಅನುಮತಿಯಿದ್ದರೆ, ನನ್ನ ಹಿಂದಿನ ಪತ್ರವನ್ನು ರದ್ದುಪಡಿಸಿ, ಮುಂಚಿನ ತಾರೀಖು ಹಾಕಿ ಹೊಸ ಪತ್ರವನ್ನು ಮೇಲ್ಕಂಡ ಸೂಚನೆಯಂತೆ ಬರೆದು ಕಳುಹಲು ನನಗೆ ಅಪ್ಪಣೆಯಾಯಿತು. ನಾನೇನು ಮಾಡಲಿ? ಹಿಂದುಸ್ಥಾನ ಸರಕಾರವು ನನ್ನ ಅಭಿಪ್ರಾಯವನ್ನು ಬೇಡಿತ್ತು; ಅದರಂತೆ ನಾನು ನನ್ನ ಅಭಿಪ್ರಾಯವನ್ನು ಆದಷ್ಟು ಸೌಮ್ಯ ಶಬ್ದಗಳಿಂದ ಬರೆದು ಕಳುಹಿದ್ದೆ. ರಾಜಕೀಯ ಕೈದಿಗಳು ನಮ್ಮ ಬಂದಿವಾಸದ ಪ್ರಕಾರದಿಂದ ಭ್ರಾಂತರಾಗುವ ಸಂಭವ ಸಹ ಇರುವದೆಂದು ನನ್ನ ಮತವಿದೆ. ನಿಮ್ಮ ಅಪ್ಪಣೆಯಂತೆ ಹಿಂದುಸ್ಥಾನ ಸರಕಾರದ ಪ್ರಶ್ನೆಗೆ ಸಮಾಧಾನಕರ ಉತ್ತರ ಕೊಡದೆ, ನಿಮ್ಮ ಅಪ್ಪಣೆಯಂತೆಯೇ ರಿಪೋರ್ಟು ಕಳುಹಿದ್ದೇನೆ. ಹಿಂದುಸ್ಥಾನ ಸರಕಾರಕ್ಕೆ ನನ್ನ ರಿಪೋರ್ಟು ಸಮಾಧಾನಕರವೆಂದು ತೋರಲಿಕ್ಕಿಲ್ಲ, ಅವರು ಪುನಃ ನನಗೆ ಬರೆಯುವರು. ಆದರೂ, ಹಿಂದುಸ್ಥಾನ ಸರಕಾರಕ್ಕೆ ನನ್ನ ಮೂಲ ಪತ್ರವನ್ನೇ ಕಳುಹಿದರೆ ನೆಟ್ಟಗೆ. ಇತ್ಯಾದಿ ಬರೆಕೊಂಡೆನು. ಆದರೂ, ಎರಡನೇ ಪತ್ರವೇ ಮುಂದೆ ಹೋಯಿತು. ಹಿಂದುಸ್ಥಾನ ಸರಕಾರಕ್ಕೆ ನನ್ನ ಪತ್ರದೊಳಗಿನ ಗುರುತು ತಿಳಿಯಲಿಲ್ಲ. ಇನ್ನು ಮುಂದೆ ಈ ಸೆರೆಯಾಳುಗಳಿಗೆ ದಣಿಸುವ ಕುರಿತು ನನಗೆ ಬಂದ ಹುಕುಮುಗಳನ್ನು ನಾನು ಪಾಲಿಸಲಿಕ್ಕೆ ನಿರಾಕರಿಸಿದೆನು.

ಲೆಫ್ಟನೆಂಟ ಕರ್ನಲ್ ಮುಲವನಿಯವರಿಗೂ, ಬಂಗಾಲ ಜೈಲ ಇನ್ಸಪೆಕ್ಟರ ಜನರಲ್‌ರಾದ ಮಿ। ಬುಕಾನನರವರಿಗೂ ನಡೆದ ಪತ್ರವ್ಯವಹಾರ:—

ಗುಪ್ತ ಪತ್ರ, ನಂ. ೪೧೩೯–೨೪–೧
ಅಲಿಪುರ, ೨೪–೯–೧೯೧೫

ಹೊಸ ಅಲಿಪುರ ಜೈಲಿನ ಸುಪರಿಂಟೆಂಡೆಂಟರವರಿಂದ ಬಂಗಾಲದ ಕೈದಖಾನೆಗಳ ಇನ್ಸಪೆಕ್ಟರ ಜನರಲ್‌ರವರಿಗೆ—

ಅಯ್ಯಾ,

೧೬—೯—೧೯೧೫ನೇಗೆ ಬಂದ ಸರಕಾರಿ ಪತ್ರ, ನಂ. ೧೧೨೭–೬ ನೇ ಪತ್ರದ ನಕಲಿನಲ್ಲಿಯೂ ಅದರ ಮೇಲೆ ತಾವು ತಾ ೨೨-೯-೧೯೧೫ ನೇಗೆ ಬರೆದ ಶರಾ ನಂ ೩೪೧–೩ ನೇ ದರಲ್ಲಿಯೂ ೧೮೧೮ ನೇ ಇಸ್ವಿಯ ೩ನೇ ರೆಗ್ಯುಲೇಶನಿನ ೬ನೇ ಕಲಮಿನನ್ವಯ ಈ ಸೆರೆಮನೆಯಲ್ಲಿದ್ದ ರಾಜದ್ರೋಹಿ ಕೈದಿಗಳ ಬಂದಿವಾಸದ ಕುರಿತು ಕೇಳಲಾದಂತೆ ನಾನು ರಿಪೋರ್ಟು ಮಾಡುವದೇನೆಂದರೆ :—

(ಅ) ರಾಜಕೀಯ ಕೈದಿಗಳಿಗೆ ಕೊಡುವ ಬಂದಿವಾಸವು ಬಹಳ ನಿಷ್ಠುರತನದ್ದಿದ್ದು, ಅದರಿಂದ ಪ್ರಕೃತಿ ಕೆಡತಕ್ಕದ್ದೆಂದು ನನ್ನ ಮತವಿದೆ. ಬಂದಿವಾಸವು ಕಠಿಣವಾದ ಏಕಾಂತವಾಸವಿದೆ. ಕೈದಿಗಳ ಕಾಯಿದೆ ಅಥವಾ ಜೈಲು ನಿಯಮಗಳನ್ವಯ ವಿಧಿಸುವ ಏಕಾಂತವಾಸದ ಶಿಕ್ಷೆಗಿಂತ ಈ ಶಿಕ್ಷೆಯು ಕಠಿಣವಿದೆ. ಈ ಎರಡು ಕಾಯಿದೆಗಳಂತೆ, ೭ ದಿನಗಳಿಗೆ ಮಿಕ್ಕಿ ಯಾವದೇ ಪ್ರಸಂಗದಲ್ಲಿ ಏಕಾಂತವಾಸದ ಶಿಕ್ಷೆಯನ್ನು ವಿಧಿಸಬಾರದೆಂದು ಇಟ್ಟಪ್ಪಣೆಯಿದೆ. ಈ ವರೆಗೆ ಇಲ್ಲಿದ್ದ ಇಬ್ಬ ಕೈದಿಗಳ ಪ್ರಕೃತಿಯು ಕೆಡಲಿಲ್ಲ. ಇಬ್ಬರೂ ಉಲ್ಲಸಿತರಾಗಿರುವರು. ಬಾಬು ವಿಜಯಗೋಪಾಲ ರೊಯ್‌ರವರ ತೂಕವು ೧೫೯ ರತ್ತಲಿನಿಂದ ೧೬೭ ರತ್ತಲಿಗೆ ಏರಿದೆ. ಬಾಬು ಸುಧಾಂಶುಭೂಷಣ ಮುಕರ್ಜಿಯವರ ತೂಕವು ೧೬೬ ರತ್ತಲಿನಿಂದ ೧೬೦ ಕ್ಕೆ ಇಳಿದಿದೆ.

(ಬ) ಅವರಿಗಾಗಿ ಇಲ್ಲಿ ಮಾಡಿದ ವ್ಯವಸ್ಥೆಯು ಅವರ ದರ್ಜೆಗೆ ತಕ್ಕಂತೆ ಇರುತ್ತದೆ. ಅವರ ಇಚ್ಛೆಗಳನ್ನೆಲ್ಲ ನಾವು ಪೂರೈಸಿದ್ದೇವೆ ಇಬ್ಬರೂ ದೈಲಿನೊಳಗಿನ ಸಹಾಯಿಯಿಂದ ಸಮಾಧಾನವಾಗಿರುವರು.

ಈ ಪತ್ರಕ್ಕೆ ಇನ್ಸಪೆಕ್ಟರ ಜನರಲ್‌ರು ತಾ. ೨೬. ರಂದರೆ, ಖಾಸಗಿ ಸ್ವರೂಪದ ಸರಕಾರಿ ಪತ್ರವನ್ನು ಬರೆದು. ಈ ಪತ್ರವನ್ನು ಮರಳ ಕಳಿಸಿದರು. ಆ ಪತ್ರವೇನಂದರೆ:—

ತಾ. ೨೬. ೨೭-೯-೧೯೧೫ ನೇಗೆ ಹೊಸ ಅಲಿಪುರ ಜೈಲಿನ ಸುಪರಿಂಟೆಂಡೆಂಟರಿಗೆ ಬಂಗಾಲದ ಇನ್ಸಪೆಕ್ಟರ ಜನರಲ್‌ರವರ ಕಡೆಯಿಂದ—

ಪ್ರಿಯ ಮುಲವನಿಯವರಿಗೆ—

ಈ ಪತ್ರವನ್ನು ನೀವು ಪುನಃ ವಿಚಾರ ಮಾಡಬೇಕು. ಈ ಪತ್ರವು ಸಿಮಲಾಕ್ಕೆ ಹೋಗಬೇಕೆಂಬುದನ್ನು ಧ್ಯಾನದಲ್ಲಿಡಿರಿ. ಅಲ್ಲಿ ಹೋದರೆ, ಅವರು ಸಿಟ್ಟಾಗುವರು. ಈ ಕೈದಿಗಳನ್ನು ಬೇರೆ ಕೈದಿಗಳೊಡನೆ ಸೇರದಂತೆಯೂ, ತಮ್ಮ ತಮ್ಮೊಳಗೆ ಸಹ ಅವರು ಕೂಡದಂತೆಯೂ ಅವರಿಗೆ ವಿಧಿಸಬೇಕಾದ ಏಕಾಂತವಾಸದ ಶಿಕ್ಷೆಯನ್ನು ಕೊಡಬೇಕೆಂತ ಪೋಲೀಸರು ನಮಗೆ ಹುಕುಂ ಮಾಡುತ್ತಾರೆ. ಕೈದಿಗಳು ಏಕಾಂತವಾಸದಲ್ಲಿರುವರು. ದಿನಾ ವ್ಯಾಯಾಮ ಮಾಡಲು ಅವರಿಗೆ ಅಪ್ಪಣೆಯಿದೆ; ಇಬ್ಬರೂ ಸಂತೋಷದಲ್ಲಿರುವರು ಯಾರ ಪ್ರಕೃತಿಯೂ ಕೆಡಲಿಲ್ಲ, ಎಂಬರ್ಥದ ಶಬ್ದಗಳನ್ನು ನೀವು ಬರೆದು ಕಳುಹಬಹುದಾಗಿ ನನಗೆ ತೋರುತ್ತದೆ. ನಿಮ್ಮ ರಿಪೋರ್ಟು ಸಿಮಲಾಕ್ಕೆ ಹೋಗುವದು. ಚೀಫ ಸೆಕ್ರೆಟರಿಯವರಿಗೆ ನಿಮ್ಮ ಮೂಲ ಪತ್ರವನ್ನು ತೋರಿಸಿ, ಏಕಾಂತವಾಸ ಶಿಕ್ಷೆಯ ಪ್ರಮಾಣವನ್ನು ತಿಳಿಸಿ, ಆ ಕುರಿತು ಶೀಘ್ರವೇ ತಿದ್ದುಪಾಟು ಮಾಡುವ ಉಪಾಯ ಮಾಡುತ್ತೇನೆ. ಆದರೆ, ೨೪ ನೇ ತಾರೀಖಿನ ನಿಮ್ಮ ಪತ್ರವು ಸಿಮಲಾ ಪಟ್ಟಣಕ್ಕೆ ಹೋದರೆ, ತಿದ್ದುಪಾಟುಗಳಿಗೆ ಹುಕುಮುಗಳಾಗುವವು. ಅದನ್ನು ನಮ್ಮಷ್ಟಕ್ಕೆ ನಾವೇ ಮಾಡಬಲ್ಲೆವು.

ನಿಮ್ಮ ಸ್ನೇಹಿತ;
ಡಬ್ಲ್ಯು. ಬುಕಾನನ.
ಜೈಲುಗಳ ಇನ್ಸಪೆಕ್ಟರ ಜನರಲ್‌ರು.

(ನಿಮ್ಮ ಸಮ್ಮತಿಯಿದ್ದರೆ, ೨೪ರ ನಿಮ್ಮ ೪೧೩೯ನೇ ನಂಬರವನ್ನು ನಿಮ್ಮ ಪುಸ್ತಕದಲ್ಲಿ ರದ್ದುಮಾಡಿ, ಅದರ ಬದಲು ಬೇರೊಂದಿಡಿರಿ. ಡಬ್ಲ್ಯು. ಜೀ. ಬಿ.)

ಗುಪ್ತ ಪತ್ರ ತಾ. ಬಿ. ನಂ. ೪೧೩೯. (ಬಿ)
ಅಲಿಪುರ ಜೈಲ, ೨೮-೯-೧೯೧೫.

ಪ್ರಿಯ ಕರ್ನಲ್‌ರೇ,

೨೬ ನೇ ತಾರೀಖಿನ ನಿಮ್ಮ ಡಿ. ಒ. ಪತ್ರದಿಂದ ನನ್ನ ಸ್ಥಿತಿಯು ಚಮತ್ಕಾರಿಕವಾಗಿದೆ. ಹಿಂದುಸ್ಥಾನ ಸರಕಾರವು ೩ನೇ ರೆಗ್ಯುಲೇಶನಿನ ೬ನೇ ಕಲಮಿನನ್ವಯ ನನ್ನ ಅಭಿಪ್ರಾಯವನ್ನು ಕೇಳಿರುವರು. ನಾನು ಆದಷ್ಟು ಸೌಮ್ಯ ಶಬ್ದಗಳಿಂದ ನನ್ನ ಅಭಿಪ್ರಾಯವನ್ನು ಸಮರ್ಪಿಸುತ್ತೇನೆ. ನನ್ನ ಪತ್ರದಲ್ಲಿ ನಮೂದಿಸಿದ್ದಕ್ಕಿಂತ ವಸ್ತುಸ್ಥಿತಿಯು ವಿಶೇಷವಿದೆ. ನನಗೆ ತೋರಿದರೆ, ಈ ಬಂದಿಗಳಿಗೆ ವಿಧಿಸಿದ ಬಂದಿವಾಸವು ತೀರ ಕಠಿಣವಿದೆ. ಸಾಮಾನ್ಯರು ಅದರಿಂದ ಭ್ರಾಂತರಾಗುವರು. ಒಬ್ಬ ಕೈದಿಯು ಖೊಟ್ಟಿ ಮನಸ್ಸಿನವನು; ಅನ್ನೊಬ್ಬನೇನೂ ಹಾಗಿಲ್ಲ. ಮುಖ್ಯವಾಗಿ ನನ್ನ ಪತ್ರಮದಿಂದಲೂ, ಮಿ। ಎಟಕಿನಸನ್‌ರವರ ಯುಕ್ತಿಯಿಂದಲೂ ಅವನು ಉಲ್ಲಸಿತನಿರುವನು. ಸ್ಪಷ್ಟವಾಗಿ ಬರೆದ ಬಗ್ಗೆ ನನ್ನನ್ನು ಕ್ಷಮಿಸಬೇಕು. ಈ ಹೊಲಸು ವ್ಯಾಪಾರದಲ್ಲಿ ನಾನು ಸೇರಿದ ಬಗ್ಗೆ ನನಗೆ ಬಹಳ ವ್ಯಸನವಾಗುತ್ತದೆ. ನಿಮ್ಮ ಅಪೇಕ್ಷೆಯಂತೆ ನಡೆಯಬೇಕಾದರೆ, ಸರಕಾರಿಗೆ ಪ್ರತ್ಯಕ್ಷ ಸುಳ್ಳು ನಾನು ಹೇಳಲಾರೆ. ಹೀಗೆ ಮಾಡುವದು ಅತ್ಯಂತ ವ್ಯಸನಕರವು. ಆದರೂ, ಅದರ ಜೊತೆಗೆ ಕಳುಹಿಸಿದ ಪತ್ರದಲ್ಲಿ (ನಿಮ್ಮ ಅಪೇಕ್ಷೆಯಂತೆ) ಬರೆದು ಕಳುಹಿರುವೆನು ಸಿಮಲಾದೊಳಗಿನ ಅಧಿಕಾರಿಗಳಿಗೆ ಈ ದೋಷವು ಕಂಡುಬರುವದು. ಅದರ ಬದಲು ಇನ್ನೊಂದು ರಿಪೋರ್ಟು ಕೇಳುವರು. ಅನಂತರ ಈ ಹುಕುಮುಗಳು ತಿದ್ದುಪಡಿಯಾಗುವವು. ನನ್ನ ಮತವನ್ನೇ ಕೇಳುವದಾದರೆ, ಮುಂಚೆ ಕಳುಹಿದ ಪತ್ರ

[ಅನೇ ಹಾಸನದಮೇಲೆ ಮುಂದರಿಸಿದೆ.]

ಮಹಾತ್ಮರ ಆತ್ಮಚರಿತ್ರ.

(೧೩) ಕಟ್ಟಕಡೆಗೆ ಲಂಡನ್ ನಿವಾಸ

ನನಗೆ ಹಡಗದಲ್ಲಿ ಪ್ರಯಾಣ ಮಾಡುವಾಗ ವಾಕರಿಕೆ ಬರಲಿಲ್ಲ, ಆದರೆ, ದಿನ ಹೋದಹಾಗೆ ನನ್ನ ಮನಸ್ಸು ಚಂಚಲವಾಯಿತು. ನಮ್ಮ ಊಟದ ವ್ಯವಸ್ಥೆ ಮಾಡುವವರೊಡನೆ ಮಾತ ಕಥೆಯಾಡುವಷ್ಟು ಸಹ ನನಗೆ ಉತ್ಸಾಹವಿರಲಿಲ್ಲ ನನಗೆ ಇಂಗ್ಲಿಷ ಮಾತಾಡುವ ಅಭ್ಯಾಸವು ತೀರ ಕಡಿಮೆ. ಶ್ರೀ ಮುಜುಮುದಾರರ ಹೊರತು ನಮ್ಮ ಎರಡನೇ ಉಪ್ಪರಿಗೆಯ ಮೇಲಿದ್ದ ಪ್ರಯಾಣಿಕರೆಲ್ಲ ಇಂಗ್ಲಿಷರೇ ಅವರೊಡನೆ ನನ್ನಿಂದ ಮಾತಾಡುವದಾಗಲಿಲ್ಲ ಅವರು ಮಾತಾಡಿದರೆ, ಅವರ ಉದ್ಗಾರಗಳೇ ನನಗೆ ತಿಳಿಯುತ್ತಿರಲಿಲ್ಲ. ತಿಳಿದಾಗ್ಯೂ, ಅವಕ್ಕೆ ಉತ್ತರ ಕೊಡಲಿಕ್ಕಾಗುತ್ತಿದ್ದಿಲ್ಲ ಮನಸ್ಸಿನಲ್ಲಿ ಪ್ರತಿಯೊಂದು ವಾಕ್ಯವನ್ನು ಮೊದಲು ರಚಿಸಿಕೊಂಡು, ಆ ಮೇಲೆ ನಾನು ಮಾತಾಡಬೇಕಾಗುತ್ತಿತ್ತು. ಮುಳ್ಳು-ಚಾಕುಗಳಿಂದ ನನಗೆ ಊಟಮಾಡಬರುತ್ತಿದ್ದಿಲ್ಲ ಯಾವ ಪಕ್ವಾನ್ನಗಳಲ್ಲಿ ಮಾಂಸವಿದ್ದಿಲ್ಲವೆಂದು ವಿಚಾರ ಮಾಡುವಷ್ಟು ಬುದ್ಧಿಯು ನನ್ನಲ್ಲಿರಲಿಲ್ಲ ಆದರಿಂದ ನಾನು ಸಾರ್ವಜನಿಕ ಟೇಬಲದ ಮೇಜಿಗೆ ಹೋಗದೆ, ನನ್ನ ಕೋಣೆಯಲ್ಲಿಯೇ ಉಣ್ಣುತ್ತಿದ್ದೆ ಮುಖ್ಯವಾಗಿ ನನ್ನೊಡನೆ ತಂದ ಮಿಠಾಯಿ, ಹಣ್ಣು-ಹಂಪಲಗಳನ್ನು ನಾನು ತಿನ್ನುತ್ತಿದ್ದೆನು ಶ್ರೀ ಮುಜುಮುದಾರರಿಗೆ ಯಾವುದೂ ಕಷ್ಟವಾಗುತ್ತಿರಲಿಲ್ಲ. ಅವರು ಎಲ್ಲರೊಡನೆ ಕೂಡಿ ನಡೆಯುತ್ತಿದ್ದರು, ಅಂತಸ್ತಿನ ಮೇಲೆ ಅವರು ಅತ್ತಿತ್ತ ಸಂಕೋಚವಿಲ್ಲದೆ ಅಡ್ಡಾಡುತ್ತಿದ್ದರು ನಾನು ಇಡೀ ದಿನ ನನ್ನ ಕೋಣೆಯಲ್ಲೇ ಅಡಗಿಕೊಳ್ಳುತ್ತಿದ್ದೆ ಜನರು ಇಲ್ಲದಾಗ ಮಾತ್ರ, ನಾನು ಹೊರಬೀಳುತ್ತಿದ್ದೆ ಪ್ರಯಾಣಿಕರೊಡನೆ ಸೇರಿಕೊಂಡು ಅವರೊಡನೆ ಸಂಕೋಚವಿಲ್ಲದೆ ಮಾತುಕಥೆಯಾಡಬೇಕೆಂದು ಶ್ರೀ ಮುಜುಮುದಾರರು ನನಗೆ ಆಗಾಗ ಹೇಳುತ್ತಿದ್ದರು. ವಕೀಲರು ವಾಚಾಲರಿರಬೇಕೆಂದು ಅವರ ಹೇಳಿಕೆ ತಮ್ಮ ವಕೀಲಿಯ ಕೆಲವು ಅನುಭವಗಳನ್ನೂ ಅವರು ನನಗೆ ತಿಳಿಸಿದರು. ಇಂಗ್ಲಿಷಿನಲ್ಲಿ ಮಾತಾಡುವ ಯಾವದೇ ಪ್ರಸಂಗವನ್ನು ಹೋಗಗೊಡಿಸಬಾರದೆಂದು ನನಗೆ ಅವರು ಉಪದೇಶಿಸಿದರು ತಪ್ಪಾದರೆ, ಚಿಂತೆಯಿಲ್ಲವಾಗಿಯೂ, ಪರಭಾಷೆಯಿದ್ದಾಗ ತಪ್ಪುಗಳಾಗುವದು ಅಪರಿಹಾರ್ಯವೆಂತಲೂ ಅವರು ನನಗೆ ತಿಳಿಸಿಹೇಳಿದರು ಆದರೂ, ನನ್ನ ನಾಚಿಕೆಯು ದೂರವಾಗಲಿಲ್ಲ.

ನನ್ನಮೇಲೆ ಒಬ್ಬ ಇಂಗ್ಲಿಷ ಪ್ರಯಾಣಿಕರು ಪ್ರಸನ್ನರಾಗಿ ನನಗೆ ಸಂಭಾಷಣ ಮಾಡಹತ್ತಿದರು. ನನಗಿಂತ ಅವರು ಹಿರಿಯರಾಗಿದ್ದರು ನನ್ನ ತಿಂಡಿಯೇನು? ನನ್ನ ಉದ್ಯೋಗವೇನು? ನಾನು ಹೋಗುವದೆಲ್ಲಿಗೆ? ಹೀಗೆ ನಾನು ನಾಚಿಕೆಪಡುವ ಕಾರಣವೇನು? ಇತ್ಯಾದಿ ಪ್ರಶ್ನೆಗಳನ್ನು ಅವರು ನನಗೆ ಕೇಳಿದರು ಸಾರ್ವಜನಿಕ ಟೇಬಲದಲ್ಲಿ ಸೇರಲು ಅವರು ನನಗೆ ಕರೆದರು ಮಾಂಸಭಕ್ಷಣದಿಂದ ಅಲಿಪ್ತವಾಗಿರುವ ನನ್ನ ಆಗ್ರಹವನ್ನು ಕೇಳಿ ಅವರು ನಕ್ಕು ಸ್ನೇಹಭಾವದಿಂದ ನುಡಿದದ್ದೇನೆಂದರೆ— "ಇಲ್ಲಿಯವರೆಗೆ, ಅಂದರೆ ಪೋರ್ಟಸಯ್ಯದಕ್ಕೆ ಮುಟ್ಟುವವರೆಗೆ ಇದೆಲ್ಲ ನೆಟ್ಟಗೆ, ಆದರೆ, ಬಿಸ್ಕೇ ಉಪಸಾಗರದಲ್ಲಿ ಸೇರಿದ ಮೇಲೆ ನಿನ್ನ ನಿರ್ಧಾರವನ್ನು ತಿದ್ದುಪಡಿ ಮಾಡಬೇಕಾಗುವದು. ಇಂಗ್ಲಂಡಿನಲ್ಲಂತು ವಿಪರೀತ ಚಳಿ, ಮಾಂಸ ತಿಂದ ಹೊರತು ಅಲ್ಲಿ ಉಳಿಯುವದು ಶಕ್ಯವೇ ಇಲ್ಲ."

"ಮಾಂಸಭಕ್ಷಣ ಮಾಡದೆ ಅಲ್ಲಿ ಉಳಕೊಳ್ಳಬಹುದೆಂದು ನಾನು ಕೇಳಿದ್ದೇನೆ," ಎಂದು ನಾನು ಹೇಳಿದೆ. "ಅದು ತೀರ ಹುಸಿ ಮಾತೆಂದು ಖಂಡಿತ ತಿಳಿ ಅಲ್ಲಿದ್ದವರಲ್ಲಿ ಮಾಂಸ ತಿನ್ನದವರು ಒಬ್ಬರೂ ಇಲ್ಲವೆಂದು ನನ್ನ ಅನುಭವವಿದೆ. ನಾನು ಮದ್ಯ ಸೇವಿಸುತ್ತಿದ್ದಾಗ್ಯೂ ನಿನಗೆ ಮದ್ಯ ಸೇವಿಸಲು ನಾನು ಹೇಳುವದಿಲ್ಲ. ಆದರೆ, ನೀನು ಮಾಂಸ ತಿನ್ನಲೇಬೇಕೆಂದು ನನ್ನ ಆಗ್ರಹವಿದೆ ಮಾಂಸ ತಿಂದ ಹೊರತು, ಅಲ್ಲಿ ಉಳಕೊಳ್ಳಲಿಕ್ಕಾಗುವದಿಲ್ಲ."

"ನೀವು ಮಾಡಿದ ಅನುಗ್ರಹಕ್ಕಾಗಿ ನಿಮ್ಮ ಉಪಕಾರ ಮನ್ನಿಸುತ್ತೇನೆ, ಮಾಂಸದ ಸ್ಪರ್ಶ ಮಾಡಲಿಕ್ಕಿಲ್ಲೆಂದು ತಾಯಿಯ ಸಾನ್ನಿಧ್ಯದಲ್ಲಿ ನಾನು ಪ್ರತಿಜ್ಞೆ ಮಾಡಿರುವದರಿಂದ, ಅದರ ಸೇವನೆಯ ವಿಚಾರ ಮಾಡುವದು ನನಗೆ ಶಕ್ಯವಿಲ್ಲ ಅದರ ಹೊರತು ಅಲ್ಲಿ ಉಳಿಯುವದು ಅಶಕ್ಯವಾದರೆ, ಮಾಂಸ ಸೇವಿಸಿ, ಅಲ್ಲಿ ಉಳಿಯುವದಕ್ಕಿಂತ ನಾನು ಹಿಂದ ಸ್ಥಾನಕ್ಕೇ ಮರಳಿ ಬರುವೆನು."

ನಾವು ಬಿಸ್ಕೇ ಉಪಸಾಗರವನ್ನು ಸೇರಿದೆವು. ಮಾಂಸದ ಯಾ ಮದ್ಯದ ಗರಜು ನನಗೆ ತೋರಲಿಲ್ಲ. ಮಾಂಸಭಕ್ಷಣ ಮಾಡದಿದ್ದ ಬಗ್ಗೆ ಕೆಲವು ಸರ್ಟಿಫಿಕೇಟು ಯಾನೆ ಪ್ರಮಾಣಪತ್ರಗಳನ್ನು ಸಂಗ್ರಹಿಸಬೇಕೆಂದು ಒಬ್ಬರು ನನಗೆ ಹೇಳಿದ್ದರು. ಅವರಿಂದ ಇಂಗ್ಲಿಷ ಗೆಳೆಯರಿಗೆ ಒಂದು ಪ್ರಮಾಣಪತ್ರವನ್ನು ಕೊಡೆಂದು ನಾನು ಕೇಳಿದೆನು. ಅವರು ಸಂತೋಷದಿಂದ ಅದನ್ನು ಕೊಟ್ಟರು. ಕೆಲವು ಕಾಲದ ವರೆಗೆ ಆ ಪ್ರಮಾಣಪತ್ರವನ್ನು ನಾನು ಜೋಕೆ ಮಾಡಿ ಇಟ್ಟೆನು ಆದರೆ, ಮಾಂಸ ತಿನ್ನುವವರೂ ಕೂಡ, ಮಾಂಸ ತಿನ್ನದೆ ಅಲಿಪ್ತರಿದ್ದ ಬಗ್ಗೆ ಪ್ರಮಾಣಪತ್ರಗಳನ್ನು ದೊರಕಿಸುವ ಸಂಗತಿಗಳನ್ನು ನಾನು ಕಣ್ಣಾರೆ ಕಂಡೆನು ಆಗ ಈ ಪ್ರಮಾಣಪತ್ರದ ಮೇಲಿನ ಭಕ್ತಿಯು ನಷ್ಟವಾಯಿತು. ನನ್ನ ವಚನದ ಮೇಲೆ ವಿಶ್ವಾಸವಿಲ್ಲದಿದ್ದರೆ, ಆ ಕಾರಣ ಪ್ರಮಾಣಪತ್ರವನ್ನಿಟ್ಟುಕೊಂಡು ಫಲವೇನು? ಇರಲಿ.

ನಾವು ಸೌಥಂಪ್ಟನ್‌ಕ್ಕೆ ಮುಟ್ಟಿದಾಗ ಅಂದು ಶನಿವಾರವಿತ್ತೆಂಬಂತೆ ತೋರುತ್ತದೆ. ಹಡಗದ ಮೇಲಿದ್ದಾಗ ನಾನು ಕಪ್ಪು ವರ್ಣದ ಉಡಿಗೆ-ತೊಡಿಗೆಗಳನ್ನು ಧರಿಸಿದ್ದೆ. ಗೆಳೆಯರು ಕೊಟ್ಟ ಬಿಳೇ ಫ್ಲನಲಿನ ಉಡಿಗೆ-ತೊಡಿಗೆಗಳನ್ನು ಹಡಗದಿಂದಿಳಿದ ಬಳಿಕ ಹಾಕಿಕೊಳ್ಳಬೇಕೆಂದು ನಾನು ಹಾಗೇ ಇಟ್ಟಿದ್ದೆ ದಂಡೆಯಿಂದಿಳಿದ ಬಳಿಕ, ಬಿಳೇ ಅರಿವೆಗಳೇ ನನಗೆ ಹೆಚ್ಚು ಶೋಭಿಸುವವೆಂದು ನನ್ನ ವಿಚಾರವಾಗಿ, ನಾನು ಅವನ್ನೇ ಧರಿಸಿದೆನು ಇದು ಸೆಪ್ಟಂಬರ ತಿಂಗಳಿನ ಅಂತ್ಯದಲ್ಲಾಗಿತ್ತು. ಇಂಥ ಅರಿವೆಗಳನ್ನು ನಾನೊಬ್ಬನೇ ಧರಿಸುವವನಾಗಿದ್ದೆ ಗ್ರಿಂಡಲೇ ಕಂಪನಿಯ ಏಜಂಟರ ಸ್ವಾಧೀನದಲ್ಲಿ ನನ್ನ ಪೆಟ್ಟಿಗೆಯನ್ನೂ, ಕೀಲಿಯನ್ನೂ ನಾನು ಕೊಟ್ಟೆನು ಅನೇಕರು ಹಾಗೆಯೇ ಮಾಡಿದ್ದರಿಂದ, ಅವರಂತೆಯೇ ನಾನೂ ನಡಕೊಳ್ಳಬೇಕೆಂದು ನನ್ನ ಗ್ರಹಿಕೆಯಾಯಿತು. ಡಾ|| ಪಿ. ಜೇ. ಮೇಥಾ, ಶ್ರೀ ದಲಪತರಾಮ ಶುಕ್ಲ, ರಾಜಶ್ರೀ ರಣಜಿತಸಿಂಗಜಿ ಹಾಗು ದಾದಾಭಾಯಿ ನವರೋಜಿ, ಹೀಗೆ ನಾಲ್ವರಿಗೆ ನಾನು ಪರಿಚಯಪತ್ರಗಳನ್ನು ಒಯ್ದಿದ್ದೆ. ಲಂಡನಿನೊಳಗಿನ ವಿಕ್ಟೋರಿಯಾ ಹೊಟೆಲ್ ಯಾನೆ ಖಾನಾವಳಿಯಲ್ಲಿ ಉಳಕೊಳ್ಳಲು ಹಡಗದ ಮೇಲೆ ಯಾರೋ ಒಬ್ಬರು ಹೇಳಿದ್ದರು ಅದರಂತೆ ನಾನೂ ಶ್ರೀ ಮುಜುಮುದಾರರೂ ಅಲ್ಲಿ ಹೋದೆವು. ಬಿಳೇ ಉಡಿಗೆ-ತೊಡಿಗೆಗಳನ್ನು ಧರಿಸಿದವನು ನಾನೊಬ್ಬನೇ ಎಂಬುದರಿಂದ ದೊಡ್ಡ ನಾಚಿಕೆಯು ನನಗಾಗಿತ್ತು ಹೊಟೆಲಿಗೆ ಹೋದ ಮೇಲೆ ಮಾರನೇ ದಿನ ರವಿವಾರವಿದ್ದ ಕಾರಣ ಗ್ರಿಂಡಲೇಯವರ ಕಡೆಯಿಂದ ನನ್ನ ಸಾಮಾನು ನನಗೆ ಸಿಗುವದಿಲ್ಲೆಂದು ತಿಳಿಯಿತು. ಆಗಂತು ನನಗೆ ಬಹಳ ಬೇಸರವಾಯಿತು

ಸೌಥಂಪ್ಟನ್‌ದಿಂದ ಡಾ|| ಮೇಥಾರವರಿಗೆ ನಾನು ತಂತಿ ಮಾಡಿದ್ದೆ. ಅವರು ಅದೇ ದಿನ ಸಾಯಂಕಾಲ ೮ ಘಂಟೆಯ ಸುಮಾರಕ್ಕೆ ನಾನಿದ್ದಲ್ಲಿಗೆ ಬಂದರು. ಮನಃಪೂರ್ವಕವಾಗಿ ಅವರು ನನಗೆ ಆಶೀರ್ವಾದವನ್ನಿತ್ತರು. ನನ್ನ ಬಿಳೇ ಫ್ಲ್ಯಾನೆಲ್‌ನ್ನು ನೋಡಿ ಅವರು ನಕ್ಕರು. ನಾವು ಮಾತಾಡುತ್ತಿದ್ದಾಗ ಸಹಜವಾಗಿ ನಾನು ಅವರ ಟೋಪ್‌ಹೆಟ ಯಾನೆ ಟೊಪ್ಪಿಗೆಯನ್ನು ತೆಗೆದುಕೊಂಡು ಅದು ಎಷ್ಟು ನಣುಪಾಗಿರುವದೆಂದು ನೋಡಲು ಅದರ ಮೇಲೆ ಕೈಯಾಡಿಸಿದೆನು ಸರಿಯಾಗಿ ಕೈಯಾಡಿಸಲು ನನಗೆ ಬಾರದ್ದರಿಂದ, ಟೊಪ್ಪಿಗೆಯ ಕೂದಲುಗಳು ಗಲಿಬಿಲಿಯಾದವು ನಾನು ಹೀಗೆ ಮಾಡುವದನ್ನು ನೋಡಿ, ಡಾ|| ಮೇಥಾರವರಿಗೆ ಸ್ವಲ್ಪ ಸಿಟ್ಟು ಬಂತು. ಅವರು ಅಲ್ಲಿಂದ[illegible] ನನಗೆ ತಡೆಸಿದರು; ಆದರೆ, ಅವರು ಹೇಳುವ ಮು[illegible] ಯೇ ನನ್ನ ಪ್ರಮಾದವಾಗಿತ್ತು. ಇದೊಂದು ಪಾಠ[illegible] ವಾಯಿತು. ಯುರೋಪಿಯನ್‌ರ ಆಚಾರದ ಪ್ರಥ[illegible] ಪಾಠವಿದು. ಡಾ|| ಮೇಥಾರವರು ವಿನೋದದಿಂದ ಯುರೋಪಿಯನ್‌ರ ಆಚಾರಗಳ ವಿವರ ಹೇಳಿದರು. "ಪ[illegible] ವಸ್ತುಗಳನ್ನು ಮುಟ್ಟಬೇಡ; ಮೊಟ್ಟಮೊದಲು ಪರಿಚ[illegible] ವಾದೊಡನೆ ನಾವು ಹಿಂದುಸ್ಥಾನದಲ್ಲಿ ಕೇಳುವ ವಾಡಿ[illegible] ಯಿದ್ದಂತೆ, ಯಾರಿಗೂ ಪ್ರಶ್ನೆಗಳನ್ನು ಕೇಳಬೇಡ; ಗ[illegible] ಯಾಗಿ ಮಾತಾಡಬೇಡ, ಹಿಂದುಸ್ಥಾನದಲ್ಲಿ ಹೇಳುವ[illegible] ಜನರೊಡನೆ ಮಾತಾಡಬೇಕಾದರೆ, ಸರ್ ಎಂದು ಕರೆ[illegible] ಬೇಡ, ಸೇವಕರೂ, ಕೆಳವರ್ಗದವರೂ ತಮ್ಮ ಯಜಮಾನರೊಡನೆ 'ಸರ್' ಶಬ್ದವನ್ನು ಉಪಯೋಗಿಸುತ್ತಾರೆ." [illegible] ತ್ಯಾದಿ ಅವರು ನನಗೆ ಹೇಳಿಕೊಟ್ಟರು ಹೊಟೇಲಿನ[illegible] ಉಳಕೊಳ್ಳುವದು ಬಹಳ ಖರ್ಚಿನದೆಂದು ಹೇಳಿ, ಖ[illegible] ಸಗಿಯವರೊಂದು ಖಾಸಗಿ ಬಿಡಾರದಲ್ಲಿ ಉಳಕೊಳ್ಳಲು [illegible] ನಗೆ ಸೂಚಿಸಿದರು ಸೋಮವಾರಕ್ಕೆ ಈ ವಿಚಾರ ಮಾ[illegible] ವೆಂದು ನಾವು ಹೇಳಿದೆವು. ಶ್ರೀ ಮುಜುಮುದಾರರಿಗೂ ನನಗೂ ಹೊಟೇಲಿನಲ್ಲಿ ನಿಲ್ಲುವದು ಕಷ್ಟವಾಗಿತ್ತು. [illegible] ಗು ಖರ್ಚು ವಿಪರೀತ. ಮಾಲ್ಟಾದಿಂದ ಸಿಂಧೀ ಪ್ರಯಾಣಿಕರೊಬ್ಬರು ನಮ್ಮೊಡನೆ ಬಂದಿದ್ದರು. ಅವರೂ, ಶ್ರೀ [illegible] ಜುಮುದಾರರೂ ಹಡಗದ ಮೇಲೆ ಗೆಳೆಯರಾಗಿದ್ದ[illegible] ಅವರು ಲಂಡನ್‌ಕ್ಕೆ ಬರ-ಹೋಗುವಂಥವರು. ನಮ್ಮ[illegible] ಗಿ ಕೋಣೆಗಳನ್ನು ಸಂಪಾದಿಸಿಕೊಡುತ್ತೇವೆಂದು ಅವ[illegible] ತಾವಾಗಿ ಹೇಳಿದರು, ನಾವು ಅದಕ್ಕೆ ಒಪ್ಪಿಕೊಂಡ[illegible] ಸೋಮವಾರಕ್ಕೆ ನಮ್ಮ ಸಾಮಾನು ಸಿಕ್ಕಿದೊಡನೆ ಹೊ[illegible] ಟೆಲಿನೊಳಗಿನ ನಮ್ಮ ಬಿಲುಗಳನ್ನು ಕೊಟ್ಟು, ಸಿಂಧೀ [illegible] ಯರು ಬಾಡಿಗೆಗೆ ಮಾಡಿದ ಕೋಣೆಗೆ ಹೋದೆವು. ಖಾ[illegible] ವಳಿಯಲ್ಲಿ ನನ್ನ ಬಿಲು ೩ ಪವನಾದಂತೆ ನನಗೆ ಜ್ಞಾಪ[illegible] ವಿದೆ, ಇದನ್ನು ನೋಡಿದೊಡನೆ ನನ್ನ ಎದೆಯಾರಿತು [illegible] ಹಣಕೊಟ್ಟೂ ನಾನು ತೆಗೆದದ್ದು ಉಪವಾಸವೇ; ಯಾವ[illegible] ಪದಾರ್ಥವು ನನಗೆ ರುಚಿಸುತ್ತಿದ್ದಿಲ್ಲ. ಒಂದು ಪದಾರ್ಥ[illegible] ಸೇರದೆಂದು ಇನ್ನೊಂದನ್ನು ತರಿಸಿದರೆ, ಎರಡರ [illegible] ಯನ್ನೂ ನಾನು ತೆರಬೇಕಾಗಿತ್ತು. ಮುಂಬಯಿಯ[illegible] ಜೊತೆಗೆ ತಂದ ಸಾಮಗ್ರಿಗಳನ್ನು ತಿಂದು ನಾನು [illegible] ಹರಣ ಮಾಡಿದೆ.

ಹೊಸ ಕೋಣೆಯಲ್ಲಿಯೂ ನನಗೆ ಸಮಾಧಾನವಿ[illegible] ಆಗಿಂದಾಗ ನನಗೆ ಮನೆ ಹಾಗು ದೇಶಗಳ ಸ್ಮರಣೆಯಾ[illegible] ತಿತ್ತು. ನನಗೆ ಅಕ್ಕರತೆಯಿಂದ ಸಲಹಿದ ತಾಯಿಯ [illegible] ನೆಯು ಆಗಿಂದಾಗ ನನಗೆ ಹೊಳೆಯುತ್ತಿತ್ತು. ರಾತ್ರಿ [illegible] ಯು ಮನೆ ಕಡೆಯ ವಿಷಯಗಳೆಲ್ಲ ಜ್ಞಾಪಕಕ್ಕೆ ಬಂ[illegible] ಕಣ್ಣೀರು ಸುರಿದು, ನಿದ್ರೆಯೇ ಬೀಳುತ್ತಿರಲಿಲ್ಲ ನನ್ನ[illegible] ಕಷ್ಟಗಳನ್ನು ಇಲ್ಲಿ ಕೇಳುವದು ಯಾರಿಗೆ? ಹಾಗೆ ಹೇಳಿ[illegible] ಪ್ರಯೋಜನವೇನು? ಏತರಿಂದ ಸಮಾಧಾನವಾಗುವ[illegible] ದು ನನಗೆ ತೋಚಲಿಲ್ಲ. ಜನರೂ ವಿಚಿತ್ರ; ಅವರ [illegible] ರಗಳೂ ವಿಚಿತ್ರ ಅವರ ಮನೆಗಳೂ ವಿಚಿತ್ರ, ಎ[illegible] ವಿಚಿತ್ರ ' ಇಂಗ್ಲಿಷ ಆಚಾರ-ವಿಚಾರಗಳಂತು ನನಗೆ [illegible] ಯುತ್ತಿರಲಿಲ್ಲ. ಆದರಿಂದ ನಾನು ಬಹಳ ಜಾಗ್ರತೆ[illegible] ದ ನಡಕೊಳ್ಳಬೇಕಾಗಿತ್ತು. ವನಸ್ಪತ್ಯಾಹಾರದ ಪ್ರ[illegible] ಯಿಂದ ಇನ್ನೊಂದು ಅಡಚಣಿಯುಂಟಾಗಿತ್ತು. [illegible] ತಿನ್ನಬಹುದಾದ ಪಕ್ವಾನ್ನಗಳಿಗೆ ರುಚಿಯೇ ಇ[illegible] ಹಾಗೂ ಕಷ್ಟ, ಹೀಗೂ ಕಷ್ಟ! ಇಂಗ್ಲಂಡದಲ್ಲಿರು[illegible] ಆಶ್ಯ ಹಿಂದುಸ್ಥಾನಕ್ಕೆ ಮರಳುವದೂ ಆ[illegible] ಈಗ ನಾನು ಹ್ಯಾಗೂ ಬಂದು ಕೊಂಡಿದ್ದೇನೆ, [illegible] ರ್ಷಗಳನ್ನು ಕಳೆದು ಹೋದರಾಯಿತು, ಎಂದು [illegible] ಸ್ಫೂರ್ತಿಯಾಗುತ್ತಿತ್ತು.

— ಅಹಮ್ಮದಾಬಾದ ಮ್ಯುನಿಸಿಪಾಲಿಟಿಯ ಉ[illegible] ರೂ, ಸ್ಕೂಲ ಬೋರ್ಡಿನ ಅಧ್ಯಕ್ಷರೂ ಆದ ರಾ|| [illegible] ಯ ಠಾಕೋರರವರು ಮ್ಯುನಿಸಿಪಾಲಿಟಿಗೆ ಸಭೆಗಾಗಿ [illegible] ಗುತ್ತಿರುವಾಗ ಮುಸಲ್ಮಾನ ಅಧಮನೊಬ್ಬನು [illegible] ಹೊಡೆದನು!

ಬೆಸ್ಟ ಅಲಾರಂ ಟೈಂಪೀಸು.



ಈ ಗಡಿಯಾರುಗಳು ಜರ್ಮನ್ ದೇಶದಲ್ಲಿ ತಯಾರಿಸಿದ್ದು ಮೇಲುಗಡೆ ಎಂದೂ ಕೆಟ್ಟಗದಂಥ ನಿಕ್ಕಲ್ ಜಳ್ಳಿಯುಳ್ಳವುಗಳಿರುವವು. ಇದಕ್ಕೆ ಒಂದಾವರ್ತಿ ಬೀಗ ಕೊಟ್ಟರೆ, ೩೦ ಗಂಟೆಯ ಕಾಲ ನಡೆಯುವದು. ಮತ್ತು ಬರಾಬರ ಗಂಟೆಯನ್ನು ತೋರಿಸುವದು. ಗಡಿಯಾರದ ಎತ್ತರ ೬ ಅಂಗಲ ವಿರುವದ ಗಂಟೆ ತೋರಿಸುವ ಪಟ್ಟಿಯು ೪ ಅಂಗಲವಿರುವವು. ಇದರಲ್ಲಿ ಬಾರೀಕ ಗಲಿ, ಬಹುಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಇದು ಅಂಗಡಿ, ಸ್ಕೂಲು, ಮನೆ, ರೀಡಿಂಗ ರೂಮು, ಗುಡಿ ಮುಂತಾದವುಗಳಲ್ಲಿ ಇಡಲು ಬಹು ಲಾಯಕದ್ದು. ಇವಕ್ಕೆ ಖಾತ್ರಿಯಾದ ೫ ವರ್ಷದ ಗ್ಯಾರಂಟಿ ಕೊಡುವೆವು. ಕ್ರಯ ೧ಕ್ಕೆ ರೂ. ೫-೪-೦ ಅಲಾರಂ ಇಲ್ಲದ್ದು ೧ಕ್ಕೆ ರೂ ೪-೪-೦.

...ಇಮಿಟೇಶನ ರೇಶ್ಮೆ ಸೀರೆಗಳು

ಈ ಸೀರೆಗಳನ್ನು ಹೆಸರಾದ ... ದೊಡ್ಡ ಕಂಪನಿಯವರಿಂದ ತಯಾರಿಸಿದ್ದು ೧೮ ಮೊಳ ಉದ್ದವೂ, ೨॥ ಮೊಳ ಅಗಲವೂ ಇರುವದ. ಇವನ್ನು ಲಂಡನ್ ಪಟ್ಟಣದ ಹೆಸರ್ ಗೆಟ್ಟಿಯಾದ ... ರೇಶಮೆಯಿಂದಲೂ ತಯಾರಿಸಿವೆ. ... ಅಂಚೂ, ಸುಂದರವಾದ ಸೆರಗೂ ಇರುವದು ... ರೇಶಮೆಯಂತೆ ಕಾಣುವವು ಎಲ್ಲಾ ... ನಿಕ್ಕಲವು ಮತ್ತು ಎಲ್ಲಾ ... ಕ್ರಯ ನಂ ೧ಕ್ಕೆ ರೂ ... ೧ಕ್ಕೆ ರೂ ... ಸರಿಗ ಸೀರೆ ೧ಕ್ಕೆ ರೂ ...

... ಎಂ. ಬೆನ್ಸನ್ ಎಂಡ್ ಕೋ.
೫೦೪, ಜಾರ್ಜಟೌನ, ಮದರಾಸ

ಸುಗಂಧಿ ತಾಂಬೂಲೀ ಜರ್ದಾ

ಈ ಜರ್ದಾ ತಿನ್ನಲಿಕ್ಕೆ ಕಡಕವಿದ್ದು, ಸುವಾಸಿತವಿರುತ್ತದೆ ಇದರ ಸೇವನದಿಂದ ಬಾಯಿಯ ... ವೇದನೆ, ಹುಳ ಇವು ನಾಶವಾಗಿ ಹಲ್ಲುಗಳು ... ಘಟ್ಟಿಯಾಗುತ್ತವೆ. ಇದರ ಸೇವನದಿಂದ ... ಕಫ ಮುಂತಾದ ವಿಕಾರಗಳುಂಟಾಗುವ ... ಭೀತಿಯಿಲ್ಲ. ಕಾರಣ, ತಂಬಾಕು ಸೇವಿಸುವರು, ಅವಶ್ಯವಾಗಿ ಅನುಭವ ಕೊಳ್ಳಬೇಕು ೧ ಡಬಿ ಕಿಂ ರೂ ೦-೧-೬, ... ೦-೯-೦, ... ಕಿಂ ರೂ. ೧೦-೦; ೧೦೦೦ ... ರೂ ೧೭-೦-೦, ವ. ಪೆ. ಖರ್ಚು ಪತ್ಯೇಕ

...ಗಂಧಿ ನಶ್ಯ:—ಈ ನಶ್ಯವು ಒಳ್ಳೇ ತಂಬಾಕಿನಿಂದ ಮಾಡಿದ್ದದ್ದು, ಇದರಿಂದ ಕೃತ್ಯ, ಥಂಡಿ, ... ಮುಂತಾದವುಗಳು ಕೂಡಲೆ ... ತಲೆಯು ಭಾರವಾಗಿದ್ದರೂ ಹಗುರವಾಗಿ ... ಚಪಲತೆಯು ಪ್ರಾಪ್ತವಾಗುವದ ... ಯಾವದೇ ಕೆಲಸವನ್ನು ... ಉಂಟಾಗುತ್ತದೆ. ಒಮ್ಮೆ ಪರೀಕ್ಷಿಸಿ ಖಾತ್ರಿ ... ೧ ಡಬ್ಬಿ ಕಿಂ. ರೂ ೦-೪-೦; ೧ ಡಜ ... ಕಿಂ ರೂ ೩-೦-೦. ವ. ಪೋ. ಖರ್ಚು ಬೇರೆ

...ತ್ತಮ ಬೀಡಿಗಳು:—... ತಂಬಾಕಿನಿಂದ ... ತಯಾರಿರುತ್ತವೆ ಕಿಮ್ಮತ್ತಿನ ವಿಷಯಕ್ಕೆ ... ಪ್ರರವತ್ ನೋಡಿ ವಪ್ಪಾಲಿಗೆ ಆರ್ಡರ ಕೊಡ ... ಇದರ ಹೊರತು, ನಮ್ಮಲ್ಲಿಯ ಬಾಜಾರ ... ಎಲ್ಲ ಪ್ರಕಾರಗಳ ತಂಬಾಕು ಸಿಗುತ್ತದೆ. ಬೇ... ತಂಬಾಕನ್ನು ಯೋಗ್ಯ ದರದಿಂದ ಖರೇದಿ ಮಾಡಿಕೊಳ್ಳುವೆವು. ವಿಶೇಷ ... ಬಗ್ಗೆ ಪತ್ರವ್ಯವಹಾರ ಮಾಡಿದರೆ, ಕೂಡಲೆ ಉತ್ತರ ಬರೆಯುವೆವು.

ಪತ್ತೆ:— ಎಸ್ ಬಿ. ಕದಂ,
... ಮತ್ತು ತಂಬಾಕು ಜರ್ದಾ ದುಕಾನ.
ಮು. ಪೋ. ನಿಪ್ಪಾಣಿ, ಜಿ. ಬೆಳಗಾಂವ

"ಚಾಟಾನೂಗಾ" ಕಬ್ಬಿನ ಗಾಣ!

ಜಗತ್ತಿನಲ್ಲಿ ಸರ್ವೋತ್ಕೃಷ್ಟವೆಂದೇ ಇದು ಇಷ್ಟು ಪ್ರಖ್ಯಾತಿ ಹೊಂದಿತು

ನಂ ೧೩, ರೂ. ೧೪೫
,, ೧೭, ರೂ ೧೮೫.
,, ೩೩, ರೂ. ೧೯೦.
,, ೩೭, ರೂ ೨೬೮.

ಸಪ್ಪಾಲು ಮುಂಬಯಿ ಡೇಲಿವ್ಹರಿ ಸ್ಟೇಶನ್ನಿನ ವರೆಗೆ ಕಿಂಮತು ಕೊಡತಕ್ಕದ್ದು



ಇದರ ರೋಲುಗಳು ಶುದ್ಧ ಕಬ್ಬಿಣದಿಂದ ಮಾಡಿದ್ದಿರುತ್ತವೆ. ಕಬ್ಬಿನೊಳಗಿನ ಹನಿ ಹನಿ ರಸವನ್ನೂ ಕೂಡ ಹಿಂಡಿ ತೆಗೆಯುವ ವ್ಯವಸ್ಥೆ ಮಾಡಲಾಗಿರುತ್ತದೆ. ಗಾಣದ ಎರಡೂ ಬದಿಗಳ ... ಬದಿಯ ... ಕೊಡಬಹುದು.

ಆರ್ಡರಿನ ಸಂಗಡಲ್ಲಿ ಹಣವನ್ನು ಡಿಪೋಜಿಟ್ಟಾಗಿ ಕಳಿಸಬೇಕು.

ಕ್ಯಾಟಲಾಗು "ಡಬ್ಲ್ಯು ೧೧೩" ಪುಕ್ಕಟೆ!

ಮೆಕ್‌ಬೆಥ ಬ್ರದರ್ಸ ಮತ್ತು ಕಂಪನಿ, ಲಿಮಿಟೆಡ್.
ಕೋಡಾಕ ಹೌಸ, ಹೊರ್ನಬಿ ರೋಡ, ಮುಂಬಯಿ.



ಏಜಂಟರು ಬೇಕು! ಏಜಂಟರು ಬೇಕು!!

ನಮ್ಮಲ್ಲಿ
ಅತಿ ಮನೋಹರವಾದ
ಶೀಶೆ ಕಟ್ಟಿಗೆಯ
ದೇವರ ಮಂಟಪಗಳೂ,
ಶಂಗಪರ ಸೌಭಾಗ್ಯವತಿ ಪೆಟ್ಟಿಗೆಗಳೂ, ಡಿಕ್ಸನರೀ ಪೆಟ್ಟಿಗೆಗಳೂ, ಆಫೀಸ ಬಾಕ್ಸಗಳೂ, ರೋಕಿಂಗ ಖುರ್ಚಿಗಳೂ ಹಾಗೂ ಯಾವತ್ತೂ ತರದ ಮನೇ ಸಾಮಾನು ಸಿಗುತ್ತದೆ.

ನಮ್ಮ ವಿಳಾಸ:—
ದಿ ನೊರ್ಥ ಕೆನರಾ ಟ್ರೇಡಿಂಗ ಕಂಪನಿ,
ಶಾಂತಿ ಭುವನ,
ಕಾರವಾರ

धातु क्षीणता व कमजोरपणा यांसाठी
मदन मंजरी गोळ्या. (रजिस्टर्ड.)
या दिव्य गोळ्या रक्त व वीर्य सुधारून त्याची चांगली वाढ करतात. पचन शक्ति सुधारून परसाकडे साफ होते. त्याचप्रमाणे प्रत्येक प्रकारची अशक्तता दूर होऊन शरीर तेजदार व बळवान होतें. कि. ४० गोळ्यांच्या डबीस रु. १.

रमण विलासिनी गोळ्या. रात्रौ फक्त १ गोळी दुधाबरोबर खाल्यानें इच्छेप्रमाणे वीर्यस्तंभन होतें. कि. डबीस रु. १

नपुंसकत्वारी घृत. हा लेप पुरुषांच्या गुह्यभागावर लावला असतां सर्व रोग नाश पाऊन खरें पुरुषत्व प्राप्त होतें. कि. डबीस रु. १.

कुमटा एजंट :— माधव सत्तप्पा शेणवी बेलेकेरी.
राजवैद्य नारायणजी केशवजी ब्रँचः— १९३ काळबादेवी रोड मुंबई २

ರೋಗದಿಂದ ನರಳಬೇಡಿರಿ.

ನಮ್ಮಲ್ಲಿ ಜಂತು ಗುಳಿಗೆ, ಪಿತ್ತ ಗುಳಿಗೆ, ಎಲ್ಲ ತರದ ಜ್ವರ, ಜ್ವರಗಡ್ಡೆ, ಛಳಿಜ್ವರ, ಕಾಮಿಲೆ, ದಮ್ಮು, ಕೆಮ್ಮು, ಕಫ, ಅಗ್ನಿಮಾಂದ್ಯ, ಮಲಬದ್ಧತೆ, ಮೂಲವ್ಯಾಧಿ, ಸರ, ವಾತ, ತಲೆಶೂಲೆ, ಪ್ರದರ, ಗರ್ಭಾಶಯದ ಎಲ್ಲ ರೋಗ, ಪ್ರಮೇಹ, ಉಪದಂಶ (ಗರ್ಮಿ) ಬಾಲಗ್ರಹ ಖಜ್ಜಿ, ಗಜಕರ್ಣಗಳಿಗೆ ಖಂಡಿತ ಗುಣ ಬರುವ ಜರ್ಮನ, ಅಮೇರಿಕನ, ಫ್ರೆಂಚ ಇಂಗ್ಲಿಷ ಮತ್ತು ದೇಶಿ ಪೇಟಂಟ ಔಷಧಗಳು ಬಹಳ ಅಗ್ಗವಾಗಿ ಸಿಗುವವು.

ಇದಲ್ಲದೆ ಎಲ್ಲ ತರದ ಹಾರ್ಮೋನಿ, ಪೆಟ್ಟಿಗೆ, ಸ್ಟೇಶನರಿ ಸಾಮಾನು, ಟಿಲ್ಲ ಸ್ಟೋವ್ಹು, ಲೋಕರಿ, ಪೋರಿಸ ಮೋಟಾರ ಬಂಡಿಗಳು, ಸಂಬಂಧಿಸಿದ ಸಾಮಾನು ಕಡಿಮೆ ದರದಿಂದ ಸಿಗುವವು ನಮ್ಮಲ್ಲಿಲ್ಲದ ನಿಮಗೆ ಅವಶ್ಯವಿರುವ ಸಾಮಾನು ಬೇರೆ ದೇಶದಿಂದ ತರಿಸಿಕೊಡಲಾಗುವದು.

ಎಸ್ ಎಲ್ ಧಾಕಪ್ಪ ಮತ್ತು ಬ್ರದರ,

ಶಿರಸಿ.

ಸುಲಭ ಕ್ರಯ! ಸುಲಭ ಕ್ರಯ!

ಡಾಕ್ಟರ ಜೀ. ಬೀ. ಯವರ

ಸುಗಂಧ ನಶ್ಯದ ಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲಟ್ಟು ಸಾವಿರಾರು ಮಂ[illegible]

(Registered Trade Mark)

ಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರ[illegible] ಗಳನ್ನು ಕೊಟ್ಟಿರುವರು ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವ[illegible] ವಾಗುವ ವ್ಯಾಧಿಗಳು ಯಾವವಂದರೆ— ಪಿನಶಿ, ಒಂಟತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾ[illegible] ಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವ[illegible] ಲ್ಲದೆ, ಕಣ್ಣಿಗೆ ಹೊಟ್ಟೆ ಗೆ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾ[illegible] ಕ ಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಪೆಟ್ಟಿನ ಸಾಧ[illegible] ರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂ[illegible] ಚಟಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು. ಇ[illegible] ನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದ[illegible] ರಿ ಪುಕ್ಕಟೆ ಕಳಿಸಲಾಗುವದು

ಒಂದು ಡಬ್ಬಿ ಕ್ರಯ ರೂ ೦-೪-೦, ವ್ಹಿ. ಪಿ ೪ ಆಣೆ ಡಜನ್ ೧ ಕ್ಕೆ ರೂ. ೨-೮-೦. ವ್ಹಿ. ಪಿ. ೦-೮.

ದಯಮಾಡಿ ನಿಮ್ಮ ಹೆಸರನ್ನೂ ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ—ಗುರುಬಸವ ಅಂಡ್ ಕಂ. ಲಿಮಿಟೆಡ್ ಪೋ ಬಾ ೫೧೧, ಪಾರ್ಕಟೌನ, ಮದರಾ[illegible]

ವಿಶೇಷ] ಅನುಭವಸಿದ್ಧ [ಪಥ್ಯವಿಲ್ಲ.

ವನೌಷಧಿಮೂಲಿಕೆಗಳು

ವಾಯುದುಮ್ಮಾನ (ನೆಮೋನಿಯಾ) ವಾಂತಿ ಭ್ರಾಂತಿ (ಕಾಲರಾ) ಅರ್ಧಾಂಗವಾಯು (ಪೆರಾಲೆಸಿಸ್)ಹುಚ್ಚುನಾಯಿ ಸಾದಾ ನಾಯಿಕಡಿತ, ಸರ್ಪಸುತ್ತು, ಹೊಟ್ಟೆಯಲ್ಲಿ ಕೃತ್ರಿಮ ವಿಷಹಾಕಿದ್ದು (ಕೈಮದ್ದು) ವಗೈರೆ ರೋಗಗಳಿಗೆ ಒಂದೆ ಒಂದು ಮೂಲಿಕೆಯಿಂದ ಖಾತ್ರಿಯಾಗಿ ತೀವ್ರ ಗುಣಬರುವದು ಇವು ಬಹುಕಾಲದಿಂದ ಅನುಭವ ತಕ್ಕೊಂಡು ಹಾಗೂ ಪ್ರತಿನಿತ್ಯ ಉಪಯೋಗದಲ್ಲಿದ್ದು ಖರ್ಚಾಗುವ ಔಷಧಿಗಳ ತಾಜಾ ಮೂಲಿಕೆಗಳು! ಒಮ್ಮೆ ತರಿಸಿ ಅನುಭವ ತಕ್ಕೊಂಡರೆ ಖಾತ್ರಿಯಾದೀತು. ಕಾಲರಾ ಔಷಧಿಗಳ ದ್ರಾವಕ (Tincture) ಸಹ ಆಗಾವು ಸೂಚಿಸಿದರೆ ಕಳುಹುವೆವು.

ವಾಯುದುಮ್ಮಾನದ ಬಗ್ಗೆ ಔಷಧಿ ಮೂಲಿಕೆ ತೊಲೆ ೧ ಕ್ಕೆ ೦-೨-೦.

ಕಾಲರಾದ ಬಗೆ „ „ „ ೦ ೨ ೦

ಅರ್ಧಾಂಗ ವಾಯುವಿನಬಗ್ಗೆ

೧ ಇಸಮಿಗೆ ಸಾಲುವಷ್ಟು ॥ ಶೇರು ೧ ೮-೦

ಪ್ರತ್ಯೇಕ ತಿಳಿಸಬೇಕು.

ವಾಯು ಕಡಿತದಬಗ್ಗೆ ೦-೪-೦

ಸರ್ಪ ಸುತ್ತಿನ ಬಗ್ಗೆ ೦ ೨ ೦

ಹೊಟ್ಟೆಯಲ್ಲಿ ಕೃತ್ರಿಮ ಔಷಧಿ ಬಿದಬಗ್ಗೆ ತೊಲೆ ೧೦ ಕ್ಕೆ ೦-೮-೦.

ರಕ್ತಶುದ್ಧಿ ವ ಮಲಶೋಧನೆ ಬಗ್ಗೆ ಮೂಲಿಕೆ ರಾತ್ತಲು ಕ್ಕೆ ೧-೦-೦

ಮೋರಾವಳಾ (ನೆಲ್ಲಿಕಾಯಿ ಗುಳಂಬ) ರಾತ್ತಲು ೧ ಕ್ಕೆ ೧-೦-೦

ರಾತ್ತಲುಗಟ್ಲೆ ಯಾ ಅದಕ್ಕೂ ಹೆಚ್ಚು ತರಿಸಿಕೊಳು ವವರಿಗೆ ಕಡಿಮೆ ದರದಿಂದ ಕಳಿಸಲ್ಪಡುವದು. ಟಪಾಲ ಖರ್ಚು ಪ್ರತ್ಯೇಕ. ವಿಶೇಷ ಮಾಹಿತಿ ಪತ್ರ ದ್ವಾರಾ. ಅನುಪಾನಪತ್ರ ಔಷಧೀ ಸಂಗಡ.

ಎನ್. ಜಿ. ಹೆಗಡೆ, ಮೂಸ್ಕೇರಿ,

ಪೋಸ್ಟ—ಬಂಕಿಕೊಳ್ಳ, ಉತ್ತರ ಕಾನಡಾ

ಸರಕಾರದಿಂದ ಪೇಟಂಟ ಪಡೆದ

ಮಲ್ಹಾರ ಕಪ್ಪಲಿ.

ತೋಟಿಗರಿಗೆ ಬಹು ಅನುಕೂಲವಾಗಿರುವದು.

ಇದು mild steelವೆಂಬ ಜಾತಿಯ ಉಕ್ಕಿನ ತಗಡಿನಿಂದ ಮಾಡಲ್ಪಟ್ಟಿರುವದು ಎತ್ತುಗಳಿಗೆ ಬಹಳ ಹಗುರು ಹೋಗುತ್ತದೆ ಇದರೊಳಗಿಂದ ಒಂದು ಹನಿ ಸಹ ನೀರು ಕೆಳಗೆ ಬೀಳದಂತೆ ಏರ್ಪಾಡು ಮಾಡಲ್ಪಟ್ಟಿರುವದು ಕಪ್ಪಲಿ ಬಾಯಿಂದ ನೀರು ದೋಣಿಯಲ್ಲಿ ಬೀಳುವ ಕಾಲಕ್ಕೆ ಎತ್ತುಗಳಿಗೆ ಭಾರವಾಗದಂತೆ ರಚನೆಯಲ್ಲಿ ಸುಧಾರಣೆಯನ್ನು ಮಾಡಿರುತ್ತೇವೆ

ಬೆಲೆಯ ಬಗ್ಗೆ ಬರೆದು ತಿಳಿದುಕೊಳ್ಳಿರಿ

ಕಿರ್ಲೋಸ್ಕರ ವಾರ್ತೆ —ಜನವರಿ ಸಂಚಿಕೆಯು

ಹೊರಬಿದ್ದಿರುವದು ವಾರ್ಷಿಕ ಚಂದಾ ರೂ. ೧ ೪-೦

ಕಿರ್ಲೋಸ್ಕರ ಬಂಧು ಲಿಮಿಟೆಡ್; { ಕಿರ್ಲೋಸ್ಕರವಾಡಿ, ಜಿಲ್ಹಾ ಸಾತಾರಾ

ಅಮೃತಾಂಜನ.



೪. ಇಲ್ಲಿಯ ನಾಟಕಾಂಕಿತ 'ವಕೀಲರಾದ' ಶ್ರೀ। ಗಣೇಶ ಗಣಪತ ಶಾಸ್ತ್ರಿಗಳವರು ಅನಪೇಕ್ಷಿತವಾಗಿ ನಿನ್ನೆ ಸಾಯಂಕಾಲಕ್ಕೆ ತಮ್ಮ ಇಹಲೋಕಯಾತ್ರೆಯನ್ನು ತೀರಿಸಿ, ಪರಲೋಕವನ್ನೈದಿದರೆಂದು ತಿಳಿಸಲು ಬಹಳ ವ್ಯಸನವಾಗುತ್ತದೆ. ಶೈಶವಾಗಳು ಮೊದಲು ತೀರ ಬಡವರಾಗಿದ್ದು, ಸ್ವಪರಾಕ್ರಮದಿಂದ ಸಂತತಿ-ಸಂಪತ್ತಿಗಳನ್ನು ಸಂಪಾದಿಸಿಕೊಂಡು ಕೀರ್ತಿಶೇಷರಾಗಿರುವರು. ಶ್ರೀ। ಶಾಸ್ತ್ರಿಗಳಂಥ ಪುಣ್ಯಾತ್ಮರು ದೊರಕುವದು ದುರ್ಲಭ. ಪ್ರಾಪಂಚಿಕ ಧಂದೆಯನ್ನು ಪರೋಪಕಾರ ಬುದ್ಧಿಯಿಂದ ಶ್ರೀ। ಶಾಸ್ತ್ರಿಗಳು ಸಾಗಿಸಿ ಲೋಕಪ್ರೀತಿಯನ್ನೂ, ಧನಾರ್ಜನೆಯನ್ನೂ ಮಾಡಿದರು. ಮ್ಯುನಿಸಿಪಾಲಿಟಿ, ಸಹಕಾರಿ ಸಂಘ, ಕೊಂಗ್ರೆಸ ಕಮಿಟಿ ಮುಂತಾದ ಸಾರ್ವಜನಿಕ ಸಂಸ್ಥೆಗಳಲ್ಲಿಯೂ ಶ್ರೀ। ಶಾಸ್ತ್ರಿಗಳು ನಿಸ್ಪೃಹವಾಗಿ ಮಾಡುತ್ತಿದ್ದ ಸೇವೆಯನ್ನು ಕುಂಭಾಪುರದ ಸಕಲರೂ ಅರಿತಿರುವರು. ಶ್ರೀ। ಶಾಸ್ತ್ರಿಗಳು ಈಗ ಇನ್ನೊಂದೆರಡು ವರ್ಷ ತಮ್ಮ ವಕೀಲಿ ಧಂದೆಯನ್ನು ನಡಿಸಿ, ಬಳಿಕ, ಅದನ್ನು ತಮ್ಮ ಪುತ್ರರ ಸ್ವಾಧೀನಕೊಟ್ಟು ಸಾರ್ವಜನಿಕ ಸೇವೆಯನ್ನೂ, ಪರಮಾರ್ಥ ಸಾಧನೆಯನ್ನೂ ಮಾಡಬೇಕನ್ನುತ್ತಿದ್ದರು. ಅಷ್ಟರಲ್ಲಿ, "ದೈವಮನ್ಯತ್ ಚಿಂತಯೇತ್" ಎಂಬಂತೆ, ನಾಲ್ಕಾರು ದಿವಸ ಚಳಿಜ್ವರ ಬಂದು, ಮುಂದೆ ಕಾಯಿಲೆಯು ಕಠಿಣವಾಗಿ, ನಿನ್ನೆ ಅನಪೇಕ್ಷಿತವಾಗಿ ಆಪ್ತೇಷ್ಟ-ಮಿತ್ರ-ಬಂಧು-ಬಾಂಧವರನ್ನಗಲಿ ಅವರು ಕಾಲಾಧೀನರಾದರು. ಶ್ರೀ। ಶಾಸ್ತ್ರಿಗಳವರು ಇಲ್ಲಿಯ ವಕೀಲ ವರ್ಗಕ್ಕೊಂದು ಭೂಷಣರಾಗಿದ್ದರು. ಚಿಕ್ಕವರೊಡನೆ ಚಿಕ್ಕವರಂತೆಯೂ, ಹಿರಿಯರೊಡನೆ ಹಿರಿಯರಾಗಿಯೂ, ವಿದ್ವಜ್ಜನರೊಡನೆ ವಿದ್ವಾಂಸರಂತೆಯೂ ಅವರು ನಡೆದುಕೊಳ್ಳುವ ಕೌಶಲ್ಯವನ್ನೂ, ಪ್ರಸಂಗಾವಧಾನವನ್ನೂ, ಸಮಯಸೂಚಕತೆಯನ್ನೂ ಚಾತುರ್ಯವನ್ನೂ ಅನೇಕರು ಅನುಭವಿಸಿರುವರು. ಶಾಂತ ಸ್ವಭಾವವೂ, ವಾತ್ಸಲ್ಯಬುದ್ಧಿಗಳೂ ಅವರ ವಿಶೇಷ ಗುಣಗಳಾಗಿದ್ದವು. ಇಂಥ ಗುಣ ಸಮುಚ್ಚಯಗಳಿಂದ ಕೂಡಿಕೊಂಡ ಹಿಬ್ಬರೇ ಸತ್ಪುತ್ರರನ್ನು "ಪರಮೇಕೋ ಗುಣೀ ಪುತ್ರಃ" ಎಂಬ ವಚನದಂತೆ ಪಡೆಯುವ ಭಾಗ್ಯವಂತ ಶ್ರೀ। ಗಣಪತಿ ಶಾಸ್ತ್ರಿಗಳ ಸಂತತಿಯಲ್ಲಿಯೇ ಶ್ರೀ। ಗಣೇಶ ಶಾಸ್ತ್ರಿಗಳು ತೀರಿಕೊಂಡದ್ದು ದುರ್ಭಾಗ್ಯದ ಪರಮಾವಧಿಯಲ್ಲವೇ? ಶ್ರೀ। ಗಣಪತಿ ಶಾಸ್ತ್ರಿಗಳ ಪುತ್ರಶೋಕಕ್ಕೆ ಈಗ ಪಾರಾವಾರವಿದೆಯೇ! "ವೃತ್ತ"ಕ್ಕಂತೂ

ಆಪ್ತನನ್ನು ಕಳಕೊಂಡಷ್ಟು ದುಃಖಾವೇಗವುಂಟಾಗಿದೆ. 'ವೃತ್ತ'ವು ಸಂಕಟಕ್ಕೊಳಗಾದ ಸಮಯ ನಿರಪೇಕ್ಷ ಬುದ್ಧಿಯಿಂದ ಪ್ರೀತಿಪೂರ್ವಕವಾಗಿ ಅವರು ಬಂಟನಂತೆ ನೆರವಾಗಿ, 'ವೃತ್ತ'ಕ್ಕೆ ಕೊಟ್ಟ ಆಶ್ರಯವನ್ನು 'ವೃತ್ತ'ವು ಎಂದೆಂದಿಗೂ ಮರೆಯಲಾರದು. ಕೈ। ವಾ। ಗಳು ನೂತನವಾಗಿ ಸ್ಥಾಪನೆಯಾಗಲಿಕ್ಕಿದ್ದ ಜಿಲ್ಲಾ ಲೋಕಲ್ ಬೋರ್ಡಿನಲ್ಲಿ ಸಹಕಾರಿ ಮಿತ್ರರೊಡನೆ ಕೆಲಸ ಮಾಡಬೇಕೆಂಬ ಸದ್ಹೇತುವಿನಿಂದ ಪ್ರತಿಸ್ಪರ್ಧಿಗಳಿದ್ದರೆ ಆರಿಸಿಬಂದಿದ್ದರು. ಇಂಥ ಸಮಯದಲ್ಲಿ ಕೈ। ವಾ। ಗಳು ದೈವಾಧೀನರಾದದ್ದು ನಮ್ಮೆಲ್ಲರ ದುರ್ದೈವವು. ಕೈ। ವಾ। ಗಳ ಹೆಂಡರು-ಮಕ್ಕಳೊಡನೆಯೂ, ಮುದುಕ ತಂದೆಯವರೊಡನೆಯೂ ನಮ್ಮ ಸಹತಾಪವನ್ನು ವ್ಯಕ್ತಗೊಳಿಸಿ, ಈ ಅಪಾರ ಶೋಕವನ್ನು ಸಹಿಸಲು ತಕ್ಕ ಸಾಮರ್ಥ್ಯವನ್ನು ಗಣಪಾಂ...ನು ಅವರೆಲ್ಲರಿಗೆ ದಯಪಾಲಿಸಲೆಂದೂ, ಕೈ। ವಾ। ಗಳಿಗೆ ಸದ್ಗತಿಯುಂಟಾಗಲೆಂದೂ, ಕೈ। ವಾ। ಗಳ ಪುತ್ರರಿಗೆ ತಂದೆಯವರ ಪರಂಪರೆಯನ್ನು ಅಪ್ರತಿಹತವಾಗಿ ನಡಿಸಲು ಬುದ್ಧಿಸಾಮರ್ಥ್ಯವನ್ನೂ, ಔದಾರ್ಯವನ್ನೂ ಅನುಗ್ರಹಿಸಲೆಂದೂ ನಾವು ಅನನ್ಯ ಭಾವದಿಂದ ಬೇಡಿಕೊಳ್ಳುವೆವು. ಕಾಲಚಕ್ರಕ್ಕೆ ಕಡೆಹಾಕುವ ನರ ವ್ಯಕ್ತಿ ಹಾವುದರಲ್ಲಿಲ್ಲದವ?

ಸ್ಥಾನಿಕ ವೃತ್ತಾಂತ.

ಕುಮಟಾ — ಕೈ। ವಾ। ಶ್ರೀ। ಶಾಸ್ತ್ರಿಗಳ ದಹನವಿಧಿಯು ನಿನ್ನೆ ರಾತ್ರೆ ನಾಂಗವಾಯಿತು. ಸ್ಮಶಾನಯಾತ್ರೆಗೆ ಆಪ್ತೇಷ್ಟರೂ, ಸಬಜಜ್ಜರೂ, ಸರಕಾರಿ ವಕೀಲರೂ ಹೋಗಿದ್ದರು. ಅನಪೇಕ್ಷಿತ ನಿಧನ! ಎಷ್ಟು ಒಳ್ಳೇ ಮನುಷ್ಯರು! ಎಂದು ಎಲ್ಲರೂ ಹಳಹಳಿಸುವವರೇ. ಕೈ। ವಾ। ಗಳಿಗೆ ಮರಣ ಸಮಯ ೫೨ ವರುಷ ಪ್ರಾಯ! ಅವರ ತಂದೆಯವರು ೮೬ ವರ್ಷದ ಮುದುಕರು. ಈಶೇಚ್ಛೆ!

ನಮ್ಮ ಶಿರ್ಶಿ ಡಿವಿಜನಿಗೆ ರಾ। ಆರ್. ಆರ್. ದಿವೇಕರರವರು ಡೆಪ್ಯುಟಿ ಕಲೆಕ್ಟರರಾಗಿ ನೇಮಿಸಲ್ಪಟ್ಟಿರುವರು. ಇಲ್ಲಿಯ ಸಬಜಜ್ಜ ರಾ। ಜಿನಮುಳಗುಂದರವರಿಗೆ ಮುಂಬಯಿ ಕಾಯಿದೆಯ ಖಾತೆಯಲ್ಲಿ ಸೇರಿಸಿಕೊಂಡಿದ್ದಿದ್ದು, ಅವರ ಬದಲು ರಾ। ಮಂಗಳವೇಢೇಕರ ಎಂಬವರು ನೇಮಿಸಲ್ಪಟ್ಟಿದ್ದಾರೆ. ಪೋಲೀಸ ಇಸ್ಸಪೆಕ್ಟರರಾಗಿದ್ದ ರಾ। ಗುಡಿಯವರಿಗೆ ಬೆಳಗಾಂವ ಜಿಲ್ಹೆಯಲ್ಲಿ ಫೌಜದಾರಿ ಜಾಗೆಯ ಮೇಲೆ ವರ್ಗವಾಗಿದೆ.

ಮುಂಬಯಿಯ ಸ್ಟೀಮ ನೆವಿಗೇಶನ್ ಕಂಪನಿಯವರು ಮಾರ್ಮುಗೋವಾ ಮಾರ್ಗವಾಗಿ ಸಾವಂತವಾಡಿ— ಹುಬ್ಬಳ್ಳಿ— ಬೆಳಗಾಂವ ಈ ಸ್ಥಳಗಳಿಗೆ ಒರ-ಹೋಗುವ ಪ್ರಯಾಣಿಕರಿಗೆ ಇಲ್ಲಿಯ ವರೆಗೆ ಎಲ್ಲ ಬಂದರಗಳಲ್ಲಿ ಟಿಕೇಟು ಸಿಗುವ ವ್ಯವಸ್ಥೆ ಮಾಡಿರುವರು. ಪೋರ್ತುಗೀಜ ಸರಕಾರದವರಿಂದ ಇಂಥ ಪ್ರಯಾಣಿಕರಿಗೆ ಸೋಂಕು ರೋಗದ ಪ್ರತಿಬಂಧಕ ಯೋಜನೆಯಿಂದ ತೊಂದರೆಯಾಗದಂತೆಯೂ ವ್ಯವಸ್ಥೆಯಾಗಿರುವದಾಗಿ ಕಂಪನಿಯ ಇನ್ಸಪೆಕ್ಟರರು ತಿಳಿಸುತ್ತಾರೆ.

ಸಾಭಾರ ಸ್ವೀಕಾರ.

ನಂದಿನೀ— ಕ್ರೋಧನ ಸಂ। ಫಾಲ್ಗುಣ ಮಾಸದ ಸಂಚಿಕೆ. ಸಂಪಾದಕ ಮತ್ತು ಪ್ರಕಾಶಕ – ಶ್ರೀ। ನಾರಾಯಣ ಶಾಸ್ತ್ರೀ ಭಡತಿ, ಶ್ರೀ ನಂದಿನೀ ಮುದ್ರಣಾಲಯ, ಗೋಕರ್ಣ. ವಾರ್ಷಿಕ ಚಂದಾ ಅಂಚೆ ವೆಚ್ಚ ಸೇರಿ ರೂಪಾಯಿ ೨-೦-೦

ಕಿರ್ಲೋಸ್ಕರ ವಾರ್ತೆ—ಮಾರ್ಚ ತಿಂಗಳ ಸಂಚಿಕೆ. ಸಂಪಾದಕ ಮತ್ತು ಪ್ರಕಾಶಕ – ಶ್ರೀ। ಲ. ಕೃ. ಬಾಗಲ, ವಾಙ್ಮಯಪ್ರಕಾಶಕ, ಕಿರ್ಲೋಸ್ಕರವಾಡಿ. (ಜಿಲ್ಹಾ ಸಾತಾರಾ) ವಾರ್ಷಿಕ ಚಂದಾ ರೂ. ೧-೪-೦

ಮುಂದಾಳು— ವರ್ಷ ೧, ಸಂಚಿಕೆ ೧-೨. ವಿಜಾಪುರದಲ್ಲಿ ಪ್ರತಿ ಶುಕ್ರವಾರವೂ ಹೊರಡುವ ನೂತನ ಸಾಪ್ತಾಹಿಕ ಪತ್ರಿಕೆ. ಸಂಪಾದಕ- ಶ್ರೀ। ವ್ಹಿ. ಎಸ್. ಗುಡಗುಂಟಿ, ವಿಜಾಪುರ. ವಾರ್ಷಿಕ ಚಂದಾ ರೂಪಾಯಿ. ೩-೮-೦ ಮಾತ್ರ.

The Volunteer — Monthly. March issue. Edited and published by Dr. N. S. Hardiker, at the "Volunteer" Office, Hubli. Yearly subscription Rs. 3-0-0. only.

ಕಾರವಾರ—ಸ್ಕೂಲಬೋರ್ಡಿಗೆ ರಾ. ಎಮ್. ಟಿ. ಪಿಟ್ರೆ, ವಕೀಲ ಇವರು ಚೆಅರಮನ್‌ರಾಗಿಯೂ, ರಾ. ಎಸ್. ಎಚ್. ನಾಯ್ಕ, ವಕೀಲ ಹೊನ್ನಾವರ ಇವರು ವ್ಹಾಯಿಸ ಚೇರಮನ್‌ರಾಗಿಯೂ ಆರಿಸಲ್ಪಟ್ಟಿರುವರು. ಇಬ್ಬರೂ ತಮ್ಮ ತಮ್ಮ ಅಧಿಕಾರಗಳನ್ನು ದಕ್ಷತೆಯಿಂದ ನಿರ್ವಹಿಸುವರೆಂದು ಕೋರಿಕೆ.

ಕಾರವಾರ ಹಾಗು ಚೆಂಡಿಯೆಗಳಲ್ಲಿ ಜರುಗಿದ ಖೂನಿಗಳ ಪತ್ತೆಯು ಇನ್ನೂ ಹತ್ತಿಲ್ಲ. ಪೋಲೀಸರು ಮುಖ್ಯರಿದ್ದರೆ, ಗುಪ್ತ ಪೋಲೀಸರನ್ನು ನೇಮಿಸಿಕೊಂಡು ತಪಾಸಮಾಡಬೇಕು. ಖೂನಿಗಳು ಹೀಗೆ ಬಚ್ಚಿಡಲ್ಪಡುತ್ತಿದ್ದರೆ ಜನರ ಕಲ್ಪನೆಯೇನಾದರೆ, ಅನರ್ಥವೊದಗುವದು.

ಕಕ್ಷಿಗಾರರು ಬಿನ್ನಹದಿಂದ ತಿಳಿಸುವದೇನೆಂದರೆ:-ಇಲ್ಲಿಯ ಸಬಜಜ್ಜರ ಕೋರ್ಟಿನಲ್ಲಿ ಸಬಜಜ್ಜರಿಲ್ಲದೆ ಒಳಕ್ಕೊಂದರೆ ರೂ. ೫೦ ರಿಂದ ೫೦೦ ರ ವರೆಗಿನ ಸ್ಮಾಲ ಕೋಜ ಡಿಕ್ರಿಗಳ ಅಮಲಬಜಾವಣಿಗೆ ಹುಕುಮು ಮಾತ್ರ ಬರದೆ ರಾಶಿಯಾಗಿ ಬಿದ್ದಿವೆ. ಮೊದಲು ದಾವೆ ಖರ್ಚು, ಈಗ ಅಮಲಬಜಾವಣಿಗೆ ಖರ್ಚು, ಇಷ್ಟು ಮಾಡಿದರೂ, ಅಮಲಬಜಾವಣಿಯ ಅರ್ಜಿ ಮುಂದರಿಯುವಷ್ಟು ನ್ಯಾಯಖಾತೆಯವರು ಇಲಾಜ ಕೈಕೊಳ್ಳದಿದ್ದರೆ, ಡಿಕ್ರಿಪಡೆದು ಪ್ರಯೋಜನವೇನು? ಈಗ ಬೆಳೆ ಕೈಸೇರುವ ಹಂಗಾಮು. ಅಮಲಬಜಾವಣಿಯಾದಲ್ಲಿ ಹಣ ವಸೂಲಾಗುವ ದಿನಗಳಿವು. ಇಂಥ ಪ್ರಸಂಗದಲ್ಲಿ ನಮ್ಮ ಅರ್ಜಿಗಳಿಗೆ ಹುಕುಮವಾಗದಿದ್ದರೆ ನಾವು ಇನ್ನೊಂದು ವರುಷದವರೆಗೆ ಕಾಯುತ್ತ ಕೂಡ್ರಬೇಕು. ಹುಕುಮು ಮಾಡುವ ಅಧಿಕಾರವನ್ನು ಡಿಸ್ಟ್ರಿಕ್ಟ ಜಜ್ಜರಿಗೆ ಕೊಟ್ಟರೆ, ನಮ್ಮ ಮೇಲೊಂದು ಉಪಕಾರವಾಗುವದು. ಇತ್ಯಾದಿ ಬರೆಯುತ್ತಾರೆ. ಸಬಜಜ್ಜರಾದ ರಾ. ಪಾಶಿಯವರಿಗೆ ಜೆಕ್ಕೋಡಿಗೆ ವರ್ಗವಾಯಿತು.

ಹೊನ್ನಾವರ— ನಮ್ಮ ಜಿಲ್ಹಾ ಕೊಂಗ್ರೆಸ ಕಮೀಟಿಯ ಅಧ್ಯಕ್ಷರಾದ ಹಾಗು ಕೊಂಗ್ರೆಸ ಪಕ್ಷದಿಂದ ಮುಂಬೈ ಕೌನ್ಸಿಲದ ನಮ್ಮ ಜಿಲ್ಹೆಯ ಸಭಾಸದರಾದ ಶ್ರೀ। ಮಂಜನಾಥ ದೇವರ ಭಟ್ಟ ಕರ್ಕಿಯವರು ಕಳೆದ ತಾ. ೬-೩-೧೯೨೬ನೇಗೆ ದಿಲ್ಲಿಯಲ್ಲಿ ನಡೆದ ಅ. ಭಾ. ಕೊಂಗ್ರೆಸ ಕಮೀಟಿಯ ಠರಾವಿನನ್ವಯ ಇತರ ಸ್ವರಾಜಿಸ್ಟ ಸಭಾಸದರು ಕೌನ್ಸಿಲು ತ್ಯಾಗ ಮಾಡಿ ಹೊರಗೆ ಬಂದಿರುತ್ತ, ಇವರು ಮಾತ್ರ ಕೌನ್ಸಿಲತ್ಯಾಗ ಮಾಡದಿರುವದರಿಂದ ಈ ಕುರಿತು ವಿಚಾರ ಮಾಡುವರೆ ಹಾಗೂ ಜಿಲ್ಹಾ ಕಮೀಟಿ ಪಕ್ಷದಿಂದ ಜಿಲ್ಹಾ ಲೋಕಲ ಬೋರ್ಡಿಗೆ ಉಮೇದವಾರರಾಗಲು ಅರ್ಜಿ ಕೊಟ್ಟ ಸ್ವಾಗೆಂಬವರ ಕುರಿತು ವಿಚಾರ ಮಾಡುವ ಬಗ್ಗೆ ಸಹ ಜಿಲ್ಹಾ ಕೊಂಗ್ರೆಸ ಕಮೀಟಿಯ ಕಾರ್ಯಕಾರಿ ಮಂಡಳದ ಸಭೆಯು ಹೊನ್ನಾವರದಲ್ಲಿ ತಾ. ೨೪-೩-೧೯೨೬ನೇ ಬುಧವಾರಕ್ಕೆ ಕೂಡುವದು. ಹಾಗೂ ಅದೇ ಸಮಯ ಜಿಲ್ಹಾ ಬೋರ್ಡಿನ ಮತದಾರರ ಸಭೆಯು ತಾಲೂಕಾ ಕೊಂಗ್ರೆಸ ಕಮೀಟಿ ವಿದ್ಯಮಾನ ಟಪ್ಪಾಲ ಹೊಲಿನಲ್ಲಿ ಕೂಡುವದುಂಟೆಂತೆ.

ಹಳದೀಪುರದ ಹತ್ತು ಸಮಸ್ತರ ಮೇಲೆ ಆಫಿಯರ್ ಪಿಯಲ್ಲಿ ಹತ್ತು ಸಮಸ್ತರು ನಿರ್ದೋಷಿಗಳಾಗಿ ವಿಮೋಚನ ಹೊಂದಿದರು.

ಹೇರಂಗಡಿ ಕೊಂಗ್ರೆಸ ಕಮಿಟಿಯಲ್ಲಿ ಪಾಸಾದ ಠರಾವುಗಳು:—

ಠರಾವ ನಂ. ೧.

ತಾ. ೬ ನೇ ದಿವಸ ದಿಲ್ಲಿಯಲ್ಲಿ ಕೂಡಿದ ಅಖಿಲ ಭಾರತೀಯ ಕೊಂಗ್ರೆಸ ಕಮಿಟಿ ಠರಾವಿನಂತೆ ಮುಂಬಯಿ ಕೌನ್ಸಿಲಿನ ಸ್ವರಾಜಿಸ್ಟ ಸಭಾಸದರು ಕೌನ್ಸಿಲು ಬಿಟ್ಟು ಹೊರಗೆ ಬಂದಿರುವಲ್ಲಿ,ನಮ್ಮ ಜಿಲ್ಹೆಯ ಕೌನ್ಸಿಲ ಮೆಂಬರರಾದ ಶ್ರೀ। ಕರ್ಕಿಯವರು ಸ್ವತಂತ್ರ ಪಕ್ಷದವರೆನ್ನಿಸಿಕೊಂಡು, ಸ್ವರಾಜಿಸ್ಟ ಸಭಾಸದರೊಡನೆ ಕೌನ್ಸಿಲುಬಿಟ್ಟು ಹೊರಗೆ ಬಾರದೆ ಅ. ಭಾ. ಕೊಂ. ಕಮಿಟಿ ಠರಾವಿನ ವಿರುದ್ಧ ವರ್ತನೆ ಮಾಡಿರುವರಾಗಿ ವೃತ್ತಪತ್ರಗಳಿಂದ ತಿಳಿದುಬರುತ್ತಿರುವದರಿಂದ ಶ್ರೀ। ಕರ್ಕಿಯವರ ಈ ವರ್ತನದ ಬಗ್ಗೆ ಈ ಸಭೆ ಅತಿಶಯ ಖೇದವಾಗುತ್ತದೆ.

(ಅ) ಶ್ರೀ। ಕರ್ಕಿಯವರು ನಮ್ಮ ಜಿಲ್ಹಾ ಕೊಂಗ್ರೆಸ ಕಮೀಟಿ ಅಧ್ಯಕ್ಷರಿದ್ದು ಅಖಿಲ ಭಾರತೀಯ ಕೊಂಗ್ರೆಸ ಕಮೀಟಿ ಠರಾವು ಮನ್ನಿಸದೇ ಇದ್ದಷ್ಟು ತೀರ ವಿಸಂಗತನದಂತೆ ಈ ಸಭೆಯು ಮಾನವಿದ್ದು, ಅವರು ಇನ್ನಾದರೂ ಸ್ವರಾಜಿಸ್ಟ ಸಭಾಸದರಿಗೆ ಬಂದು ಕೂಡಬೇಕಾಗಿ ಈ ಸಭೆಯು ವಿನಂತಿ ಮಾಡುತ್ತದೆ.

(ಬ) ಲೋಕಲ್ ಬೋರ್ಡ ಇಲೆಕ್ಶನ ತೀರ ಸಮೀಪ ದಲ್ಲಿ, ಜಿಲ್ಹಾ ಕಮೀಟಿ ಠರಾವಿನಂತೆ ಶ್ರೀ। ಕರ್ಕಿಯವರು ಒಬ್ಬರ ಕೊಂಗ್ರೆಸ ಪಕ್ಷದ ಸಭಾಸದರಾಗಿ ಉಮೇದ್ವಾರರಾಗಲು ಆರಿಸಲ್ಪಟ್ಟಿದ್ದರಷ್ಟೇ. ಆದರೆ, ಅವರು ಕಮಿಟಿಯವರಿಗೆ ಕಳುಹಿಸಿದ ವಿನಂತಿ ಪತ್ರದಲ್ಲಿ ಇವರ ಉಲ್ಲೇಖ ಸಹ ಇಲ್ಲದೇ ಇದ್ದದರಿಂದಲೂ ಹಾಗೂ ಕೌನ್ಸಿಲಿಯ ವರ್ತನೂಕಿನಿಂದ ಅ. ಭಾ. ಕೊಂ. ಕಮಿಟಿಯ ಠರಾವು ಮನ್ನಿಸದಲ್ಲೆ ಜಿಲ್ಹಾ ಕಮಿಟಿಯ ಅಧ್ಯಕ್ಷರಾಗಿ ಅವರದೆ ವರ್ತನೂಕ ಮಾಡಿದ್ದರಿಂದ ಇವರು ಕೊಂಗ್ರೆಸ ಪಕ್ಷದಿಂದ ಜಿಲ್ಹಾ ಲೋಕಲ್ ಬೋರ್ಡಿಗೆ ಉಮೇದ್ವಾರರಾಗಲು ಅರ್ಹರೋ ಅಲ್ಲವೆಂಬ ಬಗ್ಗೆ ಇವರ ಬದಲು ಕೊಂಗ್ರೆಸ ಪಕ್ಷದಿಂದ ಯಾರನ್ನು ಆರಿಸಬೇಕೆಂದು ಕೂಡಾ ವಿಚಾರ ಮಾಡುವ ಬಗ್ಗೆ ಜಿಲ್ಹಾ ಕೊಂಗ್ರೆಸ ಕಮಿಟಿ ಮಹಾಸಭೆ ಅಥವಾ ಕಾರ್ಯಕಾರಿ ಮಂಡಳದ ಸಭೆ ಆದಷ್ಟು ತ್ವರಿತ ಕೂಡಿಸಬೇಕಾಗಿ ಜಿಲ್ಹಾ ಕಮಿಟಿಗೆ ಈ ಸಭೆಯು ವಿನಂತಿ ಮಾಡುತ್ತದೆ.

ಠರಾವ ನಂ ೨.

ಹೇರಂಗಡಿ ಗ್ರೂಪಿಗೆ ತಾಲೂಕ್ ಬೋರ್ಡಿಗೆ ಇಬ್ಬರನ್ನು ಆರಿಸಬೇಕಾಗಿದ್ದು ಸದ್ರಿ ಜಾಗೆಗೆ ಕೊಂಗ್ರೆಸ ಪಕ್ಷದಿಂದ ಗಣೇಶ ನಾರಾಯಣ ಹೆಗಡೆ ಹಾಗೂ ಮಂಜುನಾಥ ಸುಬ್ರಾಯ ನಾಯ್ಕ ಇವರೀಗೆ ಆರಿಸುವ ಬಗ್ಗೆ ಮತದಾರರಲ್ಲಿ ಪ್ರಚಾರ ಮಾಡುವ ಬಗ್ಗೆ ಒಂದು ಕಮಿಟಿ ನೇಮಿಸಿ ಮಹಾಬಲೇಶ್ವರ ನಾಡಕರ್ಣಿ, ವಿಷ್ಣು ಹೆಗಡೆ ಹನ್ನಿಗುಂಡ, ರಾಮಚಂದ್ರರಾವ ದೇಶಪಾಂಡೆ ಹಮ್ಮದ ಸ್ಕೂಲು, ಗಣೇಶ ರಾಮ ಹೆಗಡೆ ಮಾವಿನಕೋಡ ಈ ಐವರು ಕಮಿಟಿ ಸಭಾಸದರಾಗಿ ಕೆಲಸ ಮಾಡಬೇಕಾಗಿ ಠರಾಯಿಸಲ್ಪಟ್ಟಿತು.

ಹೇರಂಗಡಿ, ತಾ. ೧೯-೩-೧೯೨೬.

M. P. NADKARNI,
ಅಧ್ಯಕ್ಷ, ಹೇರಂಗಡಿ ಕೊಂಗ್ರೆಸ ಕಮಿಟಿ

ವೃತ್ತಸಾರ.

ಸಂಯುಕ್ತ ಪ್ರಾಂತದಲ್ಲಿ ಪ್ರಾಥಮಿಕ ಶಿಕ್ಷಣವನ್ನು [illegible]ಯರಿಂದ ಕೊಡಬೇಕೆಂಬ ಕಾನೂನು ಮಂಜೂರಾಗಿದೆ

[illegible]ಲ್ಲಿಯ ಶೇಟ ಮೋತಿಲಾಲ ಜಂಝುನವಾಲಾರವರು [illegible]ಕ್ಕಾಗಿ ೧ ಲಕ್ಷ ರೂಪಾಯಿಗಳನ್ನು ಅರ್ಪಿಸಿದರು.

[illegible]ಲ್ಲಿ ನಿಷ್ಣಾತರಾಗಿ ಬೊಂಬು ಹೊಡೆ[illegible]ವ ಅಭ್ಯಾಸ ಮಾಡುತ್ತಿದ್ದಾಗ ಧಕ್ಕನೆ ವಿಮಾನವು [illegible]ದು ಇಬ್ಬ ಆಫೀಸರರು ಮೃತರಾದರು!

[illegible] ಜಿಲ್ಲೆಯಲ್ಲಿ ಅದ್ಭುತ ಬಿರುಗಾಳಿ! ನೂರಾರು [illegible]ನೆಗಳು ಕುಸಿದು ಬಿದ್ದು ನೂರಾರು ಜನರು ನಿರಾಧಾರಿ[illegible]ಗಿರುವರು.

ಮದರಾಸಿನಲ್ಲಿ ಶ್ರೇಷ್ಠ ತರಗತಿಯ 'ಉದಯ' ಎಂಬ [illegible]ಪತ್ರಿಕೆಯು ಉದಯವಾಗುವದಿದೆ!

ಮದರಾಸಿನ ವಿಶ್ವವಿದ್ಯಾಲಯದವರು ಶ್ಯಾಸ್ತ್ರಗಳ [illegible] ವಿದ್ಯಾಭ್ಯಾಸವನ್ನು ದೇಶೀ ಭಾಷೆಗಳಲ್ಲಿ ಕಲಿಸಬೇಕು [illegible] ಶೀವಣಿಗಳಿಗೆ ಮದ್ರಾಸ ಸರಕಾರವು ಅನುಮತಿ [illegible] ಮುಂಬಯಿಯ ವಿಶ್ವ ವಿದ್ಯಾಲಯದವರು [illegible]ದಾಗಲಿ.

ಮೈಸೂರಿನ ಶ್ರೀಮನ್ಮಹಾರಾಜರವರು ಉತ್ತರ ದೇಶದ [illegible]ತ್ರೆಯನ್ನು ತೀರಿಸಿಕೊಂಡು ಕಳೆದ ತಾರೀಖು [illegible] ಮುರಳಿ ಮೈಸೂರಿಗೆ ಸೇರಿದರು.

ನಿಜಾಮ ರಾಜ್ಯಕ್ಕೆ ಸೇರಿದ ಬೇದರ ಜಿಲ್ಲೆಯಲ್ಲಿ [illegible]ಯನ ರಾಜ್ಯ! ೨೦ ಕ್ಕೆ ಮಿಕ್ಕಿ ಜನರ ಆಹುತಿ ಬಿತ್ತು. [illegible] ಪ್ರಜೆಗಳಿಗೆ ಕಾಯಿಲ ಸಮರ್ಥರಾಗಿರುವ [illegible] ಬೇಸಾಯಗಾರರು ತಮ್ಮ ಕೆಲಸವನ್ನು [illegible] ತೀರಿಸಿಕೊಂಡು ಮಲಗಿಕೊಳ್ಳುತ್ತಾರೆ.ಏನು!!

ಕೋಚೀನದ ಶಾಯಿದೆ ಕೌನ್ಸಿಲು ಸಭೆಯಲ್ಲಿ ಅನಾಥ[illegible] ಮುದುಕರಿಗೂ, ದುಃಖಿಗಳಾದ ವಿಧವೆಯರಿಗೂ [illegible]ಕಾರವು ಭತ್ತಾಂಶ ಕೊಡಬೇಕೆಂದು ಶ್ರೀ ನಾರಾಯ[illegible]ಯ್ಯರರು ತಂದ ಸೂಚನೆಯು ಬಿದ್ದು ಹೋಯಿತು.

ಮುಂಬಯಿಯಿಂದ ಜಾಂಗಳಾರಿಗೆ ಹೋದ ಹಡಗ[illegible] ಮೀಲೆ ಯಾವ ಬದಿಯಿಂದಲೋ ಏನೋ ಒಂದು ಹುಲಿ [illegible] ಹಾರಿ ಕಾಲಿಯಾಳುಗಳನ್ನು ಭಯಪಡಿಸಿತು [illegible] ಗುಂಡಿನಿಂದ ಕೊಲ್ಲಬೇಕಾದರೆ ಸಾಕಾಬೇಕಾ[illegible]!

ಕಳೆದ ರವಿವಾರಕ್ಕೆ ಹುಬ್ಬಳ್ಳಿಯಲ್ಲಿ ನಡೆದ ಜಟ್ಟಿಗಳ [illegible]ಗಳನ್ನು ನೋಡಲು ಬಹಳ ಜನರು ಸೇರಿದ್ದರು. [illegible]ಲ್ಲಿದ್ದ ಕರ್ನಾಟಕ ಪ್ರೆಸ್ಸಿನ ಅಗಸಿಗಳ ಛಪ್ಪರದ [illegible] ಜನರು ಕೂತುಕೊಂಡಿದ್ದರು. ಧಕ್ಕನೆ ಮಾಡು [illegible] ಕಳಬದಿಗಿದ್ದ ೩೦—೪೦ ಜನರಿಗೆ ಘಾಯಗ[illegible]

ಒಂದು ವಿಚಿತ್ರ.

[illegible]ಂಗಳೂರಿನಿಂದ ರಾ। ರಾ। ಮಂಗೇಶ್ಪ ದಾರೇಕ್ರ [illegible]ವರು ತಿಳಿಸುವದೇನೆಂದರೆ:— ನಾನು ಕಾಯಿಲೆ[illegible]ಯಿಂದ ಇಲ್ಲಿಯ ಆಸ್ಪತ್ರಿ ನಂಬರು ೧ನೇ ವಾರ್ಡಿನಲ್ಲಿ [illegible] ೧೦ ನೇ ದಿನ ಒಂದು ಕೇಸು ಬಂದಿತ್ತು. [illegible] ಪ್ರಾಯಸ್ಥ ಗಂಡಸು ಹುಬ್ಬಳ್ಳಿ ಕಡೆಯವ[illegible] ಡಾಕ್ಟರರಿಗೆ ತನ್ನ [illegible] ಹೇಳಿ [illegible] ಮರೆಮಾಡಿ ತನ್ನಾಗಿ ವಿಚಾರಿಸು[illegible] —೮ ವರುಷದಲ್ಲಿ ಹುಡುಗಿ ಲಗ್ನವಾಯಿತು. ೧೨ [illegible]ರುಷಕ್ಕೆ ರಜಸ್ವಲಾ ಆದಳು. ಗಂಡನೊಂದಿಗೆ ಸುಖ[illegible] ೧೫ನೇ ವಯಸ್ಸಿಗೆ ಯೋನಿ ಮೇಲ್ಗಡೆ ಉದ[illegible] ಪುರುಷಯೋನಿಯು ಸಂಪೂರ್ಣವಾಗಿರುವದು. [illegible] ಮೂತ್ರಗಳು ಸ್ತ್ರೀಯೋನಿಯಿಂದ ಸಂಭವಿಸು[illegible] ದಿವಸಗಳಲ್ಲಿ ಸ್ತ್ರೀಸಂಭೋಗದ ಇಚ್ಛೆಯಾದ್ದ[illegible] ಪುರುಷೇಂದ್ರಿಯವನ್ನು ಆಪರೇಶನ ಮಾಡಿಕೊಳ[illegible] ಫೋಟೋದಲ್ಲಿದ್ದನು. ಫೋಟೋ ಪಡ್ಕರ ತೆಗೆ[illegible]ದ್ದರಿಂದ ಡಾಕ್ಟರರು ನಾಳೆಗೆ ಬಾ ಎಂದು ಹೇಳಿದ [illegible] ಬರಲಿಲ್ಲ. (ತಾರೀಖು ೧೫—೩—೧೯೨೬)

ಬ್ರಿಟಿಶ ರಾಜನೀತಿಯ ಮಾದರಿ

[ನ್ಯೂ ಅಲಿಪೂರ ಜೈಲಿನ ಸುಪರಿಂಟೆಂಡೆಂಟರಾದ ಲೆಫ್ಟನಂಟ ಕರ್ನಲ [illegible] ಮಾಲವನಿಯವ ರಿಗೂ, ಬಂಗಾಲದ ಜೈಲ ಇನ್ಸಪೆಕ್ಟರ ಜನರಲ್‌ರಾದ ಮಿ। ಬುಚಾನನ [illegible]ವರಿಗೂ ನಡೆದ ಪತ್ರವ್ಯವಹಾರದೊಳಗಿನ ಮೂಲ ಪತ್ರ ಹಾಗು ಬದಲಿಸಿದ ಪತ್ರಗಳು.]

ಮೂಲ ಪತ್ರ.

ಗುಪ್ತ ಪತ್ರ ನಂ. ೪೧೭೯—೨೪—೮

ಅಲಿಪೂರ, ೨೪—೯—೧೯೧೫.

ಹೊಸ ಅಲಿಪೂರ ಜೈಲಿನ ಸುಪರಿಂಟೆಂಡೆಂಟರವರಿಂದ

ಬಂಗಾಲದ ಕೈದುಖಾನೆಗಳ ಇನ್ಸಪೆಕ್ಟರ

ಜನರಲ್‌ರವರಿಗೆ —

ಅಯ್ಯಾ,

೧೭—೯—೧೯೧೫ ನೇಗೆ ಬಂದ ಸರಕಾರಿ ಪತ್ರ ನಂ. ೧೧೩೨೪— ಪಿ. ನೇ ಪತ್ರದ ನಕಲಿನಲ್ಲಿಯೂ, ಅದರ ಮೇಲೆ ತಾವು ತಾ. ೨೨—೯—೧೯೧೫ ನೇಗೆ ಬರೆದ ಕರಾ ನಂ. ೩೪೧— ಡಿ. ನೇ ದರಲ್ಲಿಯೂ ೧೮೧೮ ನೇ ಇಸ್ವಿಯ ೩ನೇ ರೆಗ್ಯುಲೇಶನಿನ ೬ನೇ ಕಲಮಿನನ್ವಯ ಈ ಸೆರೆ ಮನೆಯಲ್ಲಿದ್ದ ರಾಜದ್ರೋಹಿ ಕೈದಿಗಳ ಬಂದಿವಾಸದ ಕುರಿತು ಕೇಳಿಕೊಂಡಂತೆ ನಾನು ರಿಪೋರ್ಟು ಮಾಡು ವದೇನಂದರೆ:—

(ಅ) ರಾಜಕೀಯ ಕೈದಿಗಳಿಗೆ ಕೊಡುವ ಬಂದಿವಾಸ ವು ಬಹಳ ನಿಷ್ಠುರವಿದ್ದು, ಅದರಿಂದ ಪ್ರಕೃತಿ ಕೆಡುತ್ತದೆಂಬ ನನ್ನ ಮತವಿದೆ. ಬಂದಿವಾಸವು ಕಠಿ ಣವಾದ ಏಕಾಂತವಾಸವಿದೆ. ಕೈದಿಗಳ ಕಾಯಿದೆ ಅಥವಾ ಜೈಲ ನಿಯಮಗಳನ್ವಯ ವಿಧಿಸುವ ಏಕಾಂತ ವಾಸದ ಶಿಕ್ಷೆಗಿಂತ ಈ ಶಿಕ್ಷೆಯು ಕಠಿಣವಿದೆ. ಈ ಏರ ಡು ಕಾಯಿದೆಗಳಂತೆ, ೩ ದಿನಗಳಿಗೆ ಮಿಕ್ಕಿ ಯಾವದೇ ಪ್ರಸಂಗದಲ್ಲಿ ಏಕಾಂತವಾಸದ ಶಿಕ್ಷೆಯನ್ನು ವಿಧಿಸಬಾರ ದೆಂದು ಕಟ್ಟಪ್ಪಣೆಯಿದೆ. ಈ ವರೆಗೆ ಇಲ್ಲಿದ್ದ ಅಷ್ಟು ಕೈದಿಗಳ ಪ್ರಕೃತಿಯು ಕೆಡಲಿಲ್ಲ. ಇಷ್ಟರೂ ಉಲ್ಲಸಿತ ರಾಗಿರುವರು. ಬಾಬು ವಿಜಯ ಗೋಪಾಲ ರೋಯ್ ರವರ ತೂಕವು ೧೫೯ ರತ್ತಲಿನಿಂದ ೧೬೩ ರತ್ತಲಿಗೆ ಏರಿದೆ ಬಾಬು ಸುಧಾಂಶು ಭೂಷಣ ಮುಖರ್ಜಿಯವ ರ ತೂಕವು ೧೬೬ ರತ್ತಲಿನಿಂದ ೧೬೦ ಕ್ಕೆ ಇಳಿದಿದೆ.

(ಬ) ಅವರಿಗಾಗಿ ಇಲ್ಲಿ ಮಾಡಿದ ವ್ಯವಸ್ಥೆಯು ಅವರ ಪಡೆಗೆ ತಕ್ಕಂತೆ ಇರುತ್ತದೆ. ಅವರ ಇಚ್ಛೆಗಳನ್ನೆಲ್ಲ ನಾವು ಪೂರೈಸಿದ್ದೇವೆ. ಇಷ್ಟರೂ ಜೈಲಿನೊಳಗಿನ ನಡಾವಳಿಯಿಂದ ಸಮಾಧಾನವಾಗಿರುವರು.

ಬದಲಿಸಿದ ಪ[illegible]

ಈ ನಂಬರು ಮತ್ತು ಈ ತಾರೀಖು ಇರುವ ಪತ್ರವಿದ್ದ ಸ್ಥಳದಲ್ಲಿ ಈ ಪತ್ರವನ್ನಿಡಬೇಕು

ಗುಪ್ತ ಪತ್ರ- ಅಲಿಪೂರ ಸೆಂಟ್ರಲ [illegible]ಜೈಲಿನ ಸುಪರಿಂಟೆಂ ಡೆಂಟರಿಂದ ಬಂಗಾಲದ ಜೈಲುಗಳ [illegible]ಸ್ಪೆಕ್ಟರ

ಜನರಲ್‌ರವರಿಗೆ—

ನಂಬರು ೪೧೩೯—೨೪—೧, ಅಲಿ[illegible] ೨೪—೯—೧೯೧೫.

ಅಯ್ಯಾ,

೧೭—೯—೧೯೧೫ ನೇಗೆ ಬಂದ ಸರಕಾರಿ ಪತ್ರ ನಂ. ೧೧೩೨೪— ಪಿ. ನೇ ಪತ್ರದ ನ[illegible]ಲಿನಲ್ಲಿಯೂ, ಅದರ ಮೇಲೆ ತಾವು ತಾ. ೨೨—೯—೧೯೧[illegible] ನೇಗೆ ಬರೆದ ಕರಾ ನಂ. ೩೪೧-ಡಿ ನೇದರಲ್ಲಿಯೂ [illegible]೮ ನೇ ಇಸ್ವಿಯ ೩ನೇ ರೆಗ್ಯುಲೇಶನಿನ ೬ನೇ ಕ[illegible]ನನ್ವಯ ಈ ಸೆರೆ ಮನೆಯಲ್ಲಿದ್ದ ರಾಜದ್ರೋಹಿ ಕೈ[illegible]ಗಳ ಬಂದಿವಾಸದ ಕುರಿತು ಕೇಳಿಕೊಂಡಂತೆ ನಾನು [illegible]ಪೋರ್ಟು ಮಾಡು ವದೇನಂದರೆ:—

(ಅ) ರಾಜಕೀಯ ಕೈದಿಗಳ [illegible]ವಾಸವು ಕಠಿಣ *(strict)* ವಿದೆ ಈ ವರೆಗೆ [illegible]ರ ಪ್ರಕೃತಿಯೂ ಕೆಡಲಿಲ್ಲ. ಇಷ್ಟರೂ ಉಲ್ಲಸಿತ[illegible]ರುವರು. ಬಾಬು ವಿಜಯಗೋಪಾಲ ರೋಯ್‌ರವ[illegible] ತೂಕವು ೧೫೯ ರತ್ತಲಿನಿಂದ ೧೬೩ ರತ್ತಲಿಗೆ [illegible] ಬಾಬು ಸುಧಾಂಶುಭೂಷಣ ಮುಖರ್ಜಿಯವ[illegible] ತೂಕವು ೧೬೬ ರತ್ತಲಿನಿಂದ ೧೬೦ ಕ್ಕೆ ಇಳಿದಿದೆ

(ಬ) ಅವರಿಗಾಗಿ ಇಲ್ಲಿ ಮಾಡಿದ [illegible]ವಸ್ಥೆಯು ಅವರ ಪಡೆಗೆ ತಕ್ಕಂತೆ ಇರುತ್ತದೆ. [illegible] ಇಚ್ಛೆಗಳನ್ನೆಲ್ಲ ನಾವು ಪೂರೈಸಿದ್ದೇವೆ. ಇಷ್ಟ[illegible] ಜೈಲಿನೊಳಗಿನ ನಡಾವಳಿಯಿಂದ ಸಮಾಧಾನವ[illegible]ರು.

ಚವರಲೆಟ್
ಮೋಟಾರಕಾರ್ ಏಜನ್ಸಿ, ಕೆನರಾ.

ನಾವು ಹೊಸ ಚವರಲೆಟ್ ಮೋಟಾರ ಗಾಡಿ ಗಳನ್ನು ಗಿರಾಕಿಗಳಿಗೆ ಅನುಕೂಲವಾಗುವಂತೆ ತರಿಸಿ ಕೊಡುತ್ತೇವೆ. ಅಪೇಕ್ಷೆಯುಳ್ಳವರು ಸದುಸ್ತರು ಅಥ ವಾ ಪತ್ರದ್ವಾರಾ ಮಾಹಿತಿ ತಿಳಕೊಳ್ಳಬಹುದು.

ಸೋಲಏಜಂಟ— ಎಸ್. ಎಲ್. ಧಾಕಪ್ಪ ನಮತ್ತು ಬ್ರದರ್ಸ ಶಿರಸಿ.

ಕುಮಟಾ ಏಜಂಟ:- ಜಿ. ಡಿ. [illegible]ಳಗಿಕರ ಎ[illegible] ಕೋ.,

ಬಿ. ಓ. ಸಿ. ಪೆಟ್ರೋಲ ನಮ್ಮ[illegible] [illegible]ಕನ್ನು ಸಿಗು ತ್ತದೆ; ಡನ್‌ಲೋಪ್ ಹಾಗು ಪಿ[illegible] [illegible] ಮೋಟಾರ ಹಾಗು ಸಾಯಕಲ್ ಟಾಯರ- [illegible]ಬ ಇತ್ಯಾದಿ ಸಾಮಗ್ರಿಗಳು ಯೋಗ್ಯದರದಲ್ಲಿ [illegible]ರೈಸುತ್ತೇವೆ.

ಸೂಚನೆ:— ನಮ್ಮಲ್ಲಿ ಟ್ಯಾ[illegible] [illegible] ಕೆಲಸವು ಉತ್ತಮವಾಗಿಯೂ, ಟ್ಯಾಮಲಿ[illegible] [illegible]ವಲೂ ಮಾಡಿ ಕೊಡಲ್ಪಡುತ್ತದೆ. ಅದಲ್ಲದೆ, ನಮ್ಮ[illegible] [illegible]ಮಂಗಳೂರಿನ ಪ್ರಸಿದ್ಧ ರೇಗೋ ಕಂಪನಿಯ ಉತ್ತ[illegible] [illegible] ಬಂಚುಗಳೂ ಪೂರೈಸಲ್ಪಡುತ್ತವೆ. ಅಗತ್ಯವಿದ್ದವರು [illegible]ಕ್ಷವಾ ಅಥವಾ ಪತ್ರದ್ವಾರಾ ಮಾಹಿತಿ ತಿಳಕೊಳ್ಳಬಹು[illegible]

G. D. Malgik[illegible] & Co,
[illegible]MTA.

ಮಹಾತ್ಮರ ಆತ್ಮಚರಿತ್ರ.

(೧೪) ಧ್ಯೇಯನಿಶ್ಚಯ.

ಡಾ॥ ಮೇಹತಾ ಅವರು ವಿಕ್ಟೋರಿಯಾ ಹೊಟೇಲಿನಲ್ಲಿ ನಾನಿರುವೆನೆಂಬ ಆಲೋಚನೆಯಿಂದ ಸೋಮವಾರಕ್ಕೆ ಅಲ್ಲಿ ಹೋದರು. ನಾವು ಅಲ್ಲಿಂದ ಬಿಟ್ಟು ಬೇರೆ ಕಡೆಗೆ ಹೋಗಿದ್ದೇವೆಂದು ಅವರಿಗೆ ತಿಳಿಯಿತು ಅವರು ನನ್ನ ಹೊಸ ವಿಳಾಸವನ್ನು ಪಡಕೊಂಡು ನಾವಿದ್ದಲ್ಲಿಗೆ ಬಂದು ಮುಟ್ಟಿದರು. ಸಮುದ್ರ ಪ್ರಯಾಣದ ಸಮಯದ ಹುಚ್ಚು ನನ್ನ ಮೂರ್ಖತನದಿಂದ ನನಗೆ ದದ್ದಿನ ಸಂಸರ್ಗವಾಯಿತು. ಉಪ್ಪು ನೀರಿನಿಂದ ನಾವು ಅಂವೆಗಳನ್ನು ತೊಳೆಯುತ್ತಿದ್ದೆವು; ಜಳಕ ಮಾಡುತ್ತಿದ್ದೆವು. ಸಾಬೂನವು ಉಪ್ಪು ನೀರಿನಲ್ಲಿ ಕರಗುವದಿಲ್ಲ; ಆದರೂ, ಸಾಬೂನ ಹಚ್ಚಿಕೊಂಡು ಜಳಕ ಮಾಡುವದು ಸುಧಾರಣೆಯ ಲಕ್ಷಣವೆಂದು ಗ್ರಹಿಸಿ ನಾನು ಅದನ್ನು ಉಪಯೋಗಿಸಹತ್ತಿದೆನು. ಅದರಿಂದ ಚರ್ಮವು ಮಡಿಯಾಗುವ ಬದಲು ಸ್ನಿಗ್ಧವಾಗುತ್ತಿತ್ತು. ಹೀಗೆ ದದ್ದು ಉಂಟಾಯಿತು. ಡಾ॥ ಮೇಹತಾ ಅವರಿಗೆ ಅದನ್ನು ತೋರಿಸಲು, ಅವರು 'ಎಸಿಟಿಕ್ ಎಸಿಡ್' ಎಂಬ ಆಮ್ಲವನ್ನು ಹಚ್ಚ ಹೇಳಿದರು. ಆ ಆಮ್ಲವು ದದ್ದನ್ನು ಸುಡುತ್ತಿರುವಾಗ ನನಗುಂಟಾದ ವೇದನೆಗಳು ನನಗಿನ್ನೂ ಜ್ಞಾಪಕದಲ್ಲಿವೆ. ಡಾ॥ ಮೇಹತಾ ಅವರು ನನ್ನ ಕೋಣೆಯನ್ನು, ಅದರೊಳಗಿನ ಸಾಮಗ್ರಿಗಳನ್ನೂ ನೋಡಿ ತಮ್ಮ ಅಸಮ್ಮತಿಯನ್ನು ಪ್ರದರ್ಶಿಸಿ ನುಡಿದದ್ದೇನಂದರೆ:— "ಈ ಸ್ಥಳವು ಉಪಯೋಗವಿಲ್ಲ. ಇಂಗ್ಲಂಡಕ್ಕೆ ಬರುವದು ಅಭ್ಯಾಸಕ್ಕಾಗಿ ಅಷ್ಟು ಅಲ್ಲ; ಇಂಗ್ಲಿಷರ ನಡೆ-ನುಡಿಗಳನ್ನು ಕಲಿಯುವದಕ್ಕಾಗಿ ಬರುವದು. ಇದಕ್ಕಾಗಿ ನೀನು ಒಂದು ಕುಟುಂಬದಲ್ಲಿ ಉಳಕೊಳ್ಳಬೇಕು. ಅದಕ್ಕೂ ಮುಂಚಿತವಾಗಿ ನೀನು ಕೆಲವು ಕಾಲ ಒಂದೆಡೆಗೆ ಕೆಲಸ ಕಲಿತುಕೊಳ್ಳುವದು ಒಳಿತು. ನಾನು ನಿನಗೆ ಒಂದೆಡೆಗೆ ಒಯ್ಯುವೆನು."

ಕೃತಜ್ಞತಾಪೂರ್ವಕವಾಗಿ ಆ ಸೂಚನೆಯನ್ನು ನಾನು ಮನ್ನಿಸಿ, ಸ್ನೇಹಿತನಿದ್ದಲ್ಲಿಗೆ ಹೋದೆನು. ಆತನು ಬಹಳೇ ದಯಾರ್ದ್ರ ಬುದ್ಧಿಯವನು. ನನಗಾತ ಬಹಳ ಜಾಗ್ರತೆ ಕೊಂಡನು. ತನ್ನ ಸಹೋದರನಂತೆ ಆತನು ನನಗೆ ನಡಿಸಿ, ಇಂಗ್ಲಿಷರ ನಡೆ-ನುಡಿಗಳ ಪಾಠ ಹೇಳಿಕೊಟ್ಟನು. ಇಂಗ್ಲಿಷ ಭಾಷೆಯಿಂದ ಮಾತನಾಡಲಿಕ್ಕೆ ಕಲಿಸಿದನು. ನನ್ನ ಆಹಾರದ್ದೇ ಒಂದು ದೊಡ್ಡ ಪ್ರಶ್ನೆ. ಬೇಯಿಸಿದ ಕಾಯಿಪಲ್ಲೆಗಳಿಗೆ ಬೇಯಿಸುವಾಗ ಉಪ್ಪು, ಖಾರ ಹಾಕಿದ ಹೊರತು ನನಗೆ ಸೇರುತ್ತಿದ್ದಿಲ್ಲ; ಮನೆಯ ಯಜಮಾನಿ ನನಗಾಗಿ ಹ್ಯಾಗೆ ಅಡಿಗೆ ಮಾಡಬೇಕೆಂದು ತಿಳಿಯುತ್ತಿದ್ದಿಲ್ಲ. ತೋಳ ಗೋಧಿಹಿಟ್ಟಿನ ಅಂಬಲಿಯನ್ನು ಬೆಳಗಿನ ಸಮಯ ಮಾಡುತ್ತಿದ್ದರು. ಅದರಿಂದ ಸ್ವಲ್ಪ ಹೊಟ್ಟೆ ತುಂಬುತ್ತಿತ್ತು. ಆದರೆ, ಮಧ್ಯಾಹ್ನದ ಊಟವಾಗಲಿ, ನಡುವಿನ ಉಪಹಾರವಾಗಲಿ ನನಗೇನೂ ಮೆಚ್ಚುತ್ತಿದ್ದಿಲ್ಲ. ನಾನು ಮಾಂಸಭಕ್ಷಣ ಮಾಡಬೇಕೆಂದು ಗೆಳೆಯನು ನನಗೆ ಪರಿಪರಿಯಿಂದ ಹೇಳಿದನು. ಆದರೆ, ನನ್ನ ಪ್ರತಿಜ್ಞೆಯ ಹಕೀಕತನ್ನು ಹೇಳಿ ನಾನು ಸುಮ್ಮಗಾಗುತ್ತಿದ್ದೆನು. ಉಪಹಾರಕ್ಕೂ, ಊಟಕ್ಕೂ ರೊಟ್ಟಿ, ಸೀರಣಾಯನ, ಬಸಳೆಯ ಒಂದು ತರದ ಪದಾರ್ಥ ಬಡಿಸುತ್ತಿದ್ದರು. ನನಗೆ ತಿನ್ನಲಿಕ್ಕೆ ಬಹಳ ಬೇಕಾಗಿತ್ತು; ಹೊಟ್ಟೆಯೂ ಘಟ್ಟಿಯಿತ್ತು. ಆದರೆ, ಎರಡು-ಮೂರು ರೊಟ್ಟಿ ತುಂಡುಗಳಿಗಿಂತ ಹೆಚ್ಚು ತುಂಡು ಬೇಡಿಕೊಂಡು ತಿನ್ನುವದು ನನಗೆ ಅಯೋಗ್ಯವೆನಿಸುತ್ತಿತ್ತು. ಉಪಹಾರಕ್ಕಾಗಲಿ, ಮಧ್ಯಾಹ್ನದ ಊಟಕ್ಕಾಗಲಿ ಹಾಲು ದೊರೆಯುತ್ತಿದ್ದಿಲ್ಲ. ಗೆಳೆಯನಿಗೆ ಈ ಸ್ಥಿತಿ ನೋಡಿ ಒಮ್ಮೆ ಬೇಸರವಾಗಿ ನುಡಿದದ್ದೇನಂದರೆ:— "ನೀನು ನನ್ನ ಸಹೋದರನಾಗಿದ್ದರೆ, ನಿನಗೆ ಗಂಟು ಮೂಟೆ ಕಟ್ಟಿ ನಾನು ಕಳಿಸುತ್ತಿದ್ದೆ. ನಿರಕ್ಷರ ತಾಯಿಯೊಡನೆ ಇಲ್ಲಿಯ ಸ್ಥಿತಿಗತಿ ತಿಳಕೊಳ್ಳದೆ ಮಾಡಿದ ಪ್ರತಿಜ್ಞೆಯ ಕಿಮ್ಮತ್ತೇನು? ಅದು ಪ್ರತಿಜ್ಞೆಯೇ ಅಲ್ಲ. ಕಾಯಿದೆಯಂತೆ ಪ್ರತಿಜ್ಞೆಯೆಂದು ಅದು ಎಣಿಸಲ್ಪಡುವದಿಲ್ಲ. ಇಂಥ ವಚನಗಳನ್ನು ಪಾಲಿಸುವದು ಕೇವಲ ಮೂಢತನವು. ಹೀಗೆ ಹಟಹಿಡಿದರೆ, ಇಲ್ಲಿ ನಿನಗೆ ಏನೂ ಲಾಭವಾಗಲಿಕ್ಕಿಲ್ಲೆಂದು ನಾನು ಹೇಳುತ್ತೇನೆ. ನೀನು ಮಾಂಸವನ್ನು ರುಚಿಯಿಂದ ತಿಂದಿರುವೆಯೆಂದು ನಿನಗೆ ಒಪ್ಪಿಗೆಯಿದೆ. ಎಳ್ಳಷ್ಟೂ ಅವಶ್ಯಕತೆಯಿಲ್ಲದಾಗ ನೀನು ಮಾಂಸವನ್ನು ಸೇವಿಸಿದಿ; ಅತ್ಯವಶ್ಯಕವಿದ್ದಾಗ ಅದನ್ನು ಸೇವಿಸಲು ನಿರಾಕರಿಸುವಿ! ಎಂಥ ದುಃಖಕರ!"

ಆದರೆ, ನನ್ನ ನಿಶ್ಚಯವು ಇದರಿಂದ ಚ್ಯುತವಾಗಲಿಲ್ಲ. ಹಗಲಿರುಳು ಗೆಳೆಯನು ಈ ಕುರಿತು ನನ್ನೊಡನೆ ತರ್ಕವಾದ ಮಾಡುತ್ತಿದ್ದನು. ನಾನು ಯಾವಾಗಲೂ ಆತನಿಗೆ "ನಾ ಒಲ್ಲೆನೆ"ಂದು ಹೇಳುತ್ತಿದ್ದೆನು. ಆತನು ತರ್ಕ ಮಾಡಿದ ಹಾಗೆ ನಾನು ದೃಢಮನಸ್ಕನಾದೆನು. ಪರಮಾತ್ಮನಿಗೆ ನನ್ನ ದೋಷದ ಮಾಫಿ ನಿತ್ಯವೂ ಪ್ರಾರ್ಥಿಸಿ ಆತನಿಂದ ರಕ್ಷಣೆಯನ್ನು ಪಡಕೊಳ್ಳುತ್ತಿದ್ದೆ. ನನಗೆ ಆ ಸಮಯ ಪರಮಾತ್ಮನ ಕಲ್ಪನೆಯಿಲ್ಲೆಂದು ನಾನು ಹೇಳುವದಿಲ್ಲ. ಭಕ್ತಿಯೇ ಇದಕ್ಕೆ ಕಾರಣವಾಗಿತ್ತು. ಈ ಭಕ್ತಿಯ ಬೀಜಾರೋಪಣವು ಕೂಲ ರಂಭಾ ನಿಂದ ಒದಗಿಬಂದಿತ್ತು.

ಒಂದು ದಿನ ಆ ಗೆಳೆಯನು ಬೆಂಥಮನ "ಥಿಯರಿ ಆಫ್ ಯುಟಿಲಿಟಿ" ಎಂಬ ಆಧಿಭೌತಿಕ ಸುಪ್ರಸಿದ್ಧ ಗ್ರಂಥವನ್ನು ನನಗೆ ಓದಿ ಹೇಳಹತ್ತಿದನು. ನಾನು ದಿಗಿಲು ಬಿದ್ದೆ. ಗ್ರಂಥದ ಭಾಷೆಯು ಬಹಳ ಕಠಿಣವಿತ್ತು. ಅದನ್ನು ನನ್ನಿಂದ ಗ್ರಹಿಸಲಾಗಲಿಲ್ಲ. ಆತನು ಅದನ್ನು ನನಗೆ ವಿವರಿಸಹತ್ತಿದನು. ಆಗ ನಾನು ಉದ್ಗರಿಸಿದ್ದೇನಂದರೆ, "ದಯಮಾಡಿ ನನ್ನನ್ನು ಕ್ಷಮಿಸು, ಈ ಗೂಢ ತತ್ವಗಳಲ್ಲಿ ನನ್ನ ತಲೆಹೋಗದು. ಮಾಂಸ ತಿನ್ನುವದು ಅವಶ್ಯವೆಂದು ನಾನು ಒಪ್ಪುತ್ತೇನೆ. ಆದರೆ, ನನ್ನ ಪ್ರತಿಜ್ಞೆಯನ್ನು ನಾನು ಭಂಗಪಡಿಸೆನು. ಈ ಕುರಿತು ನಿನ್ನೊಡನೆ ನಾನು ಚರ್ಚೆ ಮಾಡಲಾರೆನು. ತರ್ಕವಾದಿ ನಿನ್ನನ್ನು ನಾನು ಹಿಮ್ಮೆಟ್ಟಿಸಲಾರೆನು. ನಾನು ಮೂರ್ಖನೆಂದು ತಿಳಿ; ಅಥವಾ ಹಟವಾದಿಯೆಂದು ಎಣಿಸು, ಆದರೆ ನನ್ನ ಸುದ್ದಿಯನ್ನೇ ಬಿಟ್ಟುಬಿಡು. ನಿನಗೆ ನನ್ನ ಮೇಲೆ ವಿಶೇಷ ಪ್ರೀತಿಯಿರುವದೆಂದೂ, ನೀನು ನನ್ನ ಹಿತಚಿಂತಕನೆಂದೂ ನನ್ನ ಗ್ರಹಿಕೆಯು. ನನಗೆ ಒಳಿತಾಗಬೇಕೆಂಬ ಇಚ್ಛೆಯಿಂದಲೇ ಪುನಃ ಪುನಃ ನೀನು ಈ ಮಾತನ್ನು ನನಗೆ ಹೇಳುತ್ತಿರುವಿಯೆಂದು ನಾನು ಒಪ್ಪುವೆನು. ಆದರೆ, ನನ್ನ ಉಪಾಯವಿಲ್ಲ, ಪ್ರತಿಜ್ಞೆಯನ್ನು ಒಮ್ಮೆ ಕೊಂಡ ಬಳಿಕ, ಅದನ್ನು ಪಾಲಿಸಲೇಬೇಕು. ಅದನ್ನು ಮೀರಲಾಗದು."

ಇದನ್ನು ಕೇಳಿ, ಗೆಳೆಯನಿಗೆ ಆಶ್ಚರ್ಯವಾಯಿತು. ಗ್ರಂಥವನ್ನು ಮುಚ್ಚಿ, "ಹಾಗಾದರೆ, ಇನ್ನು ಮುಂದೆ ನಿನ್ನೊಡನೆ ನಾನು ತರ್ಕಿಸಲಾರೆನೆ"ಂದು ಹೇಳಿದನು. ನನಗೆ ಸಂತೋಷವಾಯಿತು. ಬಳಿಕ, ಆ ವಿಷಯವನ್ನು ಆತನು ಎಂದೂ ಚರ್ಚಿಸಲಿಲ್ಲ. ಆದರೂ, ಆಗಿಂದಾಗ ಆ ಕುರಿತು ನನಗೆ ಉಪದ್ರವ ಕೊಡುತ್ತಿದ್ದನು. ಗೆಳೆಯನು ಬೀಡಿ ಸೇದುತ್ತಿದ್ದನು, ಮದ್ಯ ಕುಡಿಯುತ್ತಿದ್ದನು; ಅವನ್ನು ಸೇವಿಸಲು ನನಗೆ ಮಾತ್ರ ಎಂದೂ ಹೇಳಲಿಲ್ಲ; ಇವೆರಡರಿಂದಲೂ ಅಲಿಪ್ತನಾಗಿರಲಿಕ್ಕೆ ಆತನು ನನಗೆ ಹೇಳಿದನು. ಮಾಂಸ ತಿನ್ನದಿದ್ದರೆ, ನಾನು ಅಶಕ್ತನಾಗಿ ಇಂಗ್ಲಂಡದಲ್ಲಿ ಸ್ವಸ್ಥ ಚಿತ್ತದಿಂದಿರುವದು ಅಸಾಧ್ಯವಾಗಬಹುದೆಂದು ಆತನು ಅಂಜುತ್ತಿದ್ದನು.

ಹೀಗೆ ೧ ತಿಂಗಳ ವರೆಗೆ ನಾನು ಇಂಗ್ಲಿಷ ನಡೆ-ನುಡಿಗಳ ಪಾಠಗಳನ್ನು ಕಲಿತುಕೊಂಡೆ. ಗೆಳೆಯನ ಮನೆಯು ರಿಚ್‌ಮಂಡದಲ್ಲಿತ್ತು. ವಾರಕ್ಕೆ ಒಂದು ಸಲ ಯಾ ಎರಡು ಸಲಕ್ಕಿಂತ ಹೆಚ್ಚಾಗಿ ಲಂಡನಿಗೆ ಹೋಗುವದು ಅಸಾಧ್ಯವಿತ್ತು. ಆದ್ದರಿಂದ ಡಾ॥ ಮೇಹತಾ ಹಾಗು ಶ್ರೀ॥ ದಳಪತರಾಮ ಶುಕ್ಲರವರು, ಒಂದು ಕುಟುಂಬದೊಡನೆ ನನಗಿಡಬೇಕೆಂದು ನಿರ್ಧರಿಸಿದರು. ಶ್ರೀ॥ ಶುಕ್ಲರವರು ವೆಸ್ಟ್ ಕೆನಸಿಂಗಟನ್‌ದೊಳಗೆ ಒಬ್ಬ ಎಂಗ್ಲೋ ಇಂಡಿಯನ್‌ನ ಮನೆಯನ್ನು ಹುಡುಕಿ ತೆಗೆದು ಅಲ್ಲಿ ನನ್ನನ್ನಿಟ್ಟರು. ಮನೆಯು ಯಜಮಾನಿಯು ಮುದುಕಿ ವಿಧವೆಯು. ಪ್ರ ಜ್ಞೆಯನ್ನು ಅವಳಿಗೆ ತಿಳಿಸಿದೆನು. ನನ್ನ ಅ ತಕ್ಕದಾಗಿ ನಡಿಸುತ್ತೇನೆಂದು ಅವಳು ಹೇಳಿದ ನಾನು ಅವಳಲ್ಲಿ ಉಳಕೊಂಡೆನು. ಇಲ್ಲಿಯೂ ಅಪ್ರತ್ಯಕ್ಷವಾಗಿ ಉಪವಾಸ ತೆಗೆಯಬೇಕಾಗುತ್ತಿತ್ತು. ನೆಯಿಂದ ಮಿಠಾಯಿ-ತಿಂಡಿ ಮುಂತಾದವುಗಳನ್ನು ಕಳಿಸಹೇಳಿದ್ದೆ; ಆದರೆ, ಈ ವರೆಗೆ ಯಾವದೂ ಮುಟ್ಟಿದ್ದಿಲ್ಲ. ಇಲ್ಲಿಯ ಪದಾರ್ಥಗಳಿಗೆ ರುಚಿಯೇ ಊಟವು ನನಗೆ ಮೆಚ್ಚುತ್ತದೇನೆಂದು ಮುದು ದಿನಾ ನನಗೆ ಕೇಳುತ್ತಿದ್ದಳು. ಅವಳದೇನು ನನಗೆ ಬಡಿಸಿದ್ದಷ್ಟನ್ನೇ ನಾನು ತಿನ್ನುತ್ತಿದ್ದೆ. ಹೆಚ್ಚು ವಷ್ಟು ಧೈರ್ಯವು ನನಗಿರಲಿಲ್ಲ; ಅಷ್ಟು ನಾನು ದ್ದೆ. ಅವಳಿಗೆ ಇಬ್ಬ ಮಗಳಂದಿರಿದ್ದರು. ಅವರು ನನಗೆ ಒಂದೆರಡು ರೊಟ್ಟಿಯ ತುಂಡುಗಳನ್ನು ಬಡಿಸ ಹಚ್ಚುತ್ತಿದ್ದರು. ಆದರೆ, ಇಡೀ ರೊಟ್ಟಿ ತಿಂದ ಹೊರತು ನನ್ನ ಹೊಟ್ಟೆ ತುಂಬುತ್ತಿದ್ದಿಲ್ಲವೆಂಬ ರಿಗೇನು ಗೊತ್ತು?

ಇದರಿಂದ ನನಗೊಂದು ಆಧಾರ ದೊರಕಿತು. ನಾ ಅಭ್ಯಾಸವನ್ನು ಪ್ರಾರಂಭಿಸಿದ್ದಿಲ್ಲ. ಆದೀಗಲೇ ನಾನು ತ್ತಪತ್ರಗಳನ್ನು ಓದಹತ್ತಿದ್ದೆ. ಈ ಬಗ್ಗೆ ನಾನು ಶ್ರೀ॥ ರ ಉಪಕಾರ ಮನ್ನಿಸಬೇಕು. ಹಿಂದುಸ್ಥಾನದಲ್ಲಿ ದೂ ವರ್ತಮಾನಪತ್ರವನ್ನು ಓದಿದ್ದಿಲ್ಲ. ನಿಯಮಿತ ವೃತ್ತಪತ್ರಗಳನ್ನು ಓದುವದರಿಂದ ಅವುಗಳ ಸಾ ನನಗೆ ಸೇರಹತ್ತಿತು. 'ಡೇಲಿ ನ್ಯೂಜ,' 'ಡೇಲಿ ಟೆಲಿಗ್ರಾ' 'ಪೋಲ ಮೋಲ ಗೆಝೆಟ' ಪತ್ರಿಕೆಗಳನ್ನು ನಾನು ಗಲೂ ಓದುತ್ತಿದ್ದೆ. ಅದಕ್ಕೆ ಸಾಧಾರಣ ಒಂದು ತಗಲುತ್ತಿತ್ತು. ಉಳಿದ ಹೊತ್ತಿನಲ್ಲಿ ನಾನು ಅತ್ತಿತ್ತ ತುತ್ತಿದ್ದೆ. ಕಾಯಿಪಲ್ಲೆಯ ಪದಾರ್ಥಗಳನ್ನು ಪೂರೈ ಹೊಟೇಲಿನ ಶೋಧಾರ್ಥವಾಗಿ ನಾನು ಹೋಗುತ್ತಿ ಪಟ್ಟಣದಲ್ಲಿ ಇಂಥ ಹೊಟೇಲುಗಳಿರುವವೆಂದು ಮನೆಯ ಯಜಮಾನಿಯು ನನಗೆ ಹೇಳಿದ್ದಳು. ೧೦-೧೨ ಮೈಲು ಹೋಗಿ ಅಗ್ಗವಾದ ಹೊಟೇಲಿ ಹೊಟ್ಟೆತುಂಬ ರೊಟ್ಟಿ ತಿನ್ನುತ್ತಿದ್ದೆ; ಆದರೂ, ಸಮಾಧಾನವಾಗುತ್ತಿದ್ದಿಲ್ಲ. ಹೀಗೆ ಅತ್ತಿತ್ತ ತಿರುಗಾಡುವಾಗ, ಒಮ್ಮೆ ಫೆರಿಂಗಡನ್ ಬೀದಿಯೊಳಗಿನ ಕಾಯಿ ಯ ಹೊಟೇಲು ನನ್ನ ಕಣ್ಣಿಗೆ ಬಿತ್ತು. ಮಕ್ಕಳಿಗೆ ಸ್ತುವು ದೊರಕಿದ ಕೂಡಲೆ ಆಗುವಷ್ಟು ಆನಂ ಈ ಹೊಟೇಲಿನ ದರ್ಶನದಿಂದ ನನಗುಂಟಾಯಿತು. ಲಿನ ಸಮೀಪದಲ್ಲಿಯೇ ಗಾಜಿನ ಕಿಡಕಿಯ ಕೆಳಗೆ ರಾಟಕ್ಕಾಗಿ ಇಟ್ಟ ಪುಸ್ತಕಗಳನ್ನು ನಾನು ನೋಡಿ ವನಸ್ಪತ್ಯಾಹಾರ ಕ್ರಮದ ಸಮರ್ಥನೆ ಮಾಡುವ ಲ್ಟರ ಪುಸ್ತಕವನ್ನೊಂದು ನೋಡಿದೆನು. ಒಂದು ಶಿ ಕೊಟ್ಟು ಅದನ್ನು ಕೊಂಡು, ನೆಟ್ಟಗೆ ಭೋಜನಾಲ ಹೋದೆನು. ಇಂಗ್ಲಂಡಕ್ಕೆ ಬಂದಂದಿನಿಂದ ಹೊಟ್ಟೆ ಯಥೇಷ್ಟ ಉಂಡದ್ದೆಂಬುದು ಇದೇ ಸಲ. ಅಂತು ಪ ತ್ಮನು ನನಗೆ ನೆರವಾದನು.

ಸಾಲ್ಟರವರ ಪುಸ್ತಕವನ್ನು ನಾನು ಮೊದಲಿಂದ ಕಡೆತನಕ ಓದಿದೆನು. ಮನಸ್ಸು ಬಹಳ ಉಲ್ಲಸಿತವಾಯಿ ಅಂದಿನಿಂದ ನಾನು ಬುದ್ಧಿಪೂರ್ವಕವಾಗಿ ವನಸ್ಪತ್ಯಾಹಾರಿಯಾಗಿದ್ದೇನೆ. ತಾಯಿಯವರ ಸಾಕ್ಷಿಯಾಗಿ ಪ್ರ ಯನ್ನು ಕೊಂಡ ಮುಹೂರ್ತವನ್ನು ನಾನು ಹರಸು ಈ ವರೆಗೆ ಸತ್ಯಪಾಲನಕ್ಕಾಗಿ, ವಚನಪಾಲನಕ್ಕಾಗಿ ಸದಿಂದ ನಾನು ಅಲಿಪ್ತನಾಗಿದ್ದರೂ, ಪ್ರತಿಯೊಬ್ಬ ಭಾ ಯನು ಮಾಂಸಭಕ್ಷಕನಾಗಬೇಕೆಂದು ನನ್ನ ಬಯ ಕ್ತು. ಒಂದು ದಿನ ನಾನೂ ಸ್ವತಂತ್ರವಾಗಿ, ಸಾರ್ವ ವಾಗಿ ಮಾಂಸಭಕ್ಷಣ ಮಾಡಬೇಕೆಂದೂ, ಮಾಂಸ ಣ ಪಂಥದಲ್ಲಿ ಇತರರನ್ನೂ ಸೇರಿಸಿಕೊಳ್ಳಬೇಕೆಂ ನಾನು ಮನಃಪೂರ್ವಕವಾಗಿ ಬಯಸುತ್ತಿದ್ದೆ. ಅಂದು ನಾನು ವನಸ್ಪತ್ಯಾಹಾರಿಯಾಗಿರಬೇಕೆಂದು ಧ್ಯೇಯ ನಿಶ್ಚಯವಾಯಿತು. ಅಂದಿನಿಂದ ಅದನ್ನು ಪ ಸುವದು ನನ್ನ ಉದ್ದೇಶವಾಯಿತು.

ನಿಕ್ಕಲ ಅಲಾರಂ ಟೈಂಪೀಸು.

ಈ ಗಡಿಯಾರುಗಳು ಜರ್ಮನ್ ದೇಶದಲ್ಲಿ ತಯಾರಿಸಿದ್ದು ಮೇಲುಗಡೆ ಎ-ಡೊ ಕಿಟ್ಟಿಗದಂಥ ನಿಕ್ಕಲ್ ಪಾಲಿಷು ಮಾಡಲ್ಪಟ್ಟಿರುವದು. ಇದಕ್ಕೆ ಒಂದಾವರ್ತಿ ಕೀಲಿ ಕೊಟ್ಟರೆ, ೩೦ ಗಂಟೆಯ ವರೆಗೆ ನಡೆಯುವದು. ಮತ್ತು ಬಾರು ಗಂಟೆಯನ್ನು ತೋರಿಸುವದು. ಗಡಿಯಾರದ ಎತ್ತರ ೬ ಅಂಗುಲ ಇರುವದ ಗಂಟೆ ತೋರಿಸಯಲು ೪ ಅಂಗಲವಿರುವದು ಇದರಲ್ಲಿ ಯಾರೇನಿ, ಬೇಕಾದವರಿಗೆ ಗಂಟೆಯನ್ನು ಗುರುತು ಹಿಡಿಯಬಹುದು. ಇದು ಅಂಗಡಿ, ಕಚೇರಿ, ಮನೆ, ರೀಡಿಂಗ ರೂಮ, ಗುಡಿ ಮುಂತಾದವುಗಳಲ್ಲಿ ಇಡಲು ಬಹು ಉಪಯುಕ್ತ ಇವಕ್ಕೆ ಮಾತ್ರ ೫ ವರ್ಷದ ಗ್ಯಾರಂಟಿ ಕೊಡುತ್ತೇವೆ. ಕ್ರಯ ೧ಕ್ಕೆ ರೂ. ೫-೪-೦. ಅಲಾರಂ ಸಹ್ವ ೧ಕ್ಕೆ ರೂ. ೪-೪-೦.

ಸರ್ಪವಿಂಟೇಜ ರೇಶ್ಮೆ ಸೀರೆಗಳು

ಈ ಸೀರೆಗಳನ್ನು ಹೆಸರುವಾಸಿ ಜೊಂಡಿ ದೊಡ್ಡ ಕಂಪನಿಯವರಿಂದ ತಯಾರಿಸಿದ್ದು, ೧೮ ಮೊಳ ಉದ್ದವು, ೫೦ ಮೊಳ ಅಗಲವು ಇರುವದು. ಇವನ್ನು ಲಂಡನ್ ಪಟ್ಟಣದ ಹಸನ್ ಗಟ್ಟಿಯಾದ ಸಣ್ಣ ನೂಲಿನಿಂದಲೂ ರೇಶಿಮೆಯಿಂದಲೂ ತಯಾರಿಸಿದೆ. ಚಂದವಾದ ಅಂಚೂ, ಸುಂದರವಾದ ಸೆರಗೂ ಇರುವವು ಮತ್ತು ದೊಡ್ಡವರಿಗೂ ರೇಶಿಮೆಯಂತೆ ಇರುವವು. ಎಲ್ಲಾ ಬಣ್ಣಗಳಲ್ಲಿಯೂ ಸಿಕ್ಕುತ್ತವೆ. ಮತ್ತು ಎಲ್ಲಾ ಮಹಿಳೆಯರಿಗೂ ಉಪಯುಕ್ತ. ಕ್ರಯ ೩೦ ೧ಕ್ಕೆ ರೂ. ೮-೮-೦. ೨ಕ್ಕೆ ರೂ. ೭-೮-೦; ೨ಸೆರಗಿನ ಸೀರೆ ೧ಕ್ಕೆ ರೂ. ೧೨-೮-೦

ವಿಳಾಸ.- ಎಂ. ಬೆನ್ಸನ್ ಎಂಡ್ ಕೋ.

೫೦೪, ವೋಲ್‌ಟೈರ್, ಮದರಾಸ

ಸುಗಂಧಿ ತಾಂಬೂಲೀ ಜರ್ದಾ

ಈ ಜರ್ದಾ ತಿನ್ನಲಿಕ್ಕೆ ಕಡಕವಿದ್ದು, ಸುವಾಸಿತವಾಗುತ್ತದೆ. ಇದರ ಸೇವನದಿಂದ ಬಾಯಿಯ ಹೊಲಸು, ಪೀಡನೆ, ಹುಳ ಇವು ನಾಶವಾಗಿ ಹಲ್ಲುಗಳು ಗಟ್ಟಿಯಾಗುತ್ತವೆ. ಇದರ ಸೇವನದಿಂದ ಕಫ ಮುಂತಾದ ವಿಕಾರಗಳುಂಟಾಗುವ ಸ್ವಲ್ಪವೂ ಭೀತಿಯಿಲ್ಲ. ಕಾರಣ, ತಂಬಾಕು ಸೇವಿಸುವವರು ಅವಶ್ಯವಾಗಿ ಅನುಭವ ತೊಳ್ಳಬೇಕು. ೧ ಡಬ್ಬಿ ತೊ. ೧೦ ರೂ. ೦-೬-೦, ೨ ಡಬ್ಬಿ ರೂ. ೦-೯-೦, ೫೦೦ ತೊ. ರೂ. ೧-೦-೮; ೧೦೦೦ ಡಬ್ಬಿಗಳ ತೊ. ರೂ. ೧೨-೦-೦, ವಿ. ಪಿ. ಖರ್ಚು ಬೇರೆ ಪ್ರತ್ಯೇಕ.

ಸುಗಂಧಿ ನಶ್ಯ:—ಈ ನಶ್ಯವು ಒಳ್ಳೇ ತಂಬಾಕಿನಿಂದ ಮಾಡಿದ್ದು, ಇದರಿಂದ ಶೀತ, ಥಂಡಿ, ಅರೆತಲೆನೋವು ಮುಂತಾದವುಗಳು ಕೂಡಲೆ ಬರಾಬರವಾಗಿ ತಲೆಯು ಭಾರವಾಗಿದ್ದರೂ ಹಗುರವಾಗಿ ವಿಚಾರಶಕ್ತಿಗೆ ಚಪಲತೆಯು ಪ್ರಾಪ್ತವಾಗುವದರಿಂದ ಯಾವದೇ ಕೆಲಸವನ್ನು ಕೈಕೊಳ್ಳಲಿಕ್ಕೆ ಸಹಜ ತಿಳಿಯುಂಟಾಗುತ್ತದೆ. ಒಮ್ಮೆ ಪರೀಕ್ಷಿಸಿ ಖಾತ್ರಿ ಮಾಡಿಕೊಳ್ಳಿರಿ. ೧ ಡಬ್ಬಿ ತೊ. ರೂ. ೦-೪-೦; ೧ ಡಜನ್ ಡಬ್ಬಿ ರೂ. ೨-೦-೦. ವಿ. ಪೋ. ಖರ್ಚು ಬೇರೆ.

ಉತ್ತಮ ಬೀಡಿಗಳು:—ಅತ್ಯುತ್ತಮ ಪ್ರತಿಯ ತಂಬಾಕಿನಿಂದ ಚನ್ನಾಗಿ ಕಟ್ಟಿದ ಬೀಡಿಗಳು ನಮ್ಮಲ್ಲಿ ತಯಾರಾಗುತ್ತವೆ ಕಿಮ್ಮತ್ತಿನ ವಿಷಯಕ್ಕೆ ಬರೆದ ,ಪ್ರತವಾಗಿ ನೋಡಿ ವಸ್ತುಗಳ ಆರ್ಡರ ಕೊಡಬಹುದು. ಇದರ ಹೊರತು, ನಮ್ಮಲ್ಲಿಯ ಬಾಜಾರದಲ್ಲಿ ಎಲ್ಲಾ ಪ್ರಕಾರಗಳ ತಂಬಾಕು ಬರುತ್ತದೆ, ಬೇಕಾದ ನಮೂನೆಯ ತಂಬಾಕನ್ನು ಯೋಗ್ಯ ದರದಲ್ಲಿ ಕೊಂಡು, ಖರೀದಿ ಮಾಡಿಕೊಳ್ಳುವವು. ವಿಶೇಷ ಮಾಹಿತಿ ಬಗ್ಗೆ ಪತ್ರವ್ಯವಹಾರ ಮಾಡಿದವರಿಗೆ ಕೂಡಲೆ ಉತ್ತರ ಬರೆಯುವೆವು.

ಪತ್ತೆ:- ಎಸ್ ಬಿ. ಕದಂ,

ಬೀಡಿ ಮತ್ತು ತಂಬಾಕು ಜರ್ದಾ ದುಕಾನೆ,

ಮು· ಪೋ. ನಿಪ್ಪಾಣಿ, ಜಿ. ಬೆಳಗಾಂವ

"ಚಾಟಾನೂಗಾ" ಕಬ್ಬಿನ ಗಾಣ!



ಜಗತ್ತಿನಲ್ಲಿ ಸರ್ವೋತ್ಕೃಷ್ಟವೆಂದೇ ಇದು ಇಷ್ಟು ಪ್ರಖ್ಯಾತಿ ಹೊಂದಿತು

ನಂ. ೧೬, ರೂ. ೧೪೫

,, ೧೩, ರೂ. ೧೮೫,

,, ೨೨, ರೂ. ೧೯೦,

,, ೩೭, ರೂ. ೩೪೮,

ಗಾಣಗಳು ಮುಂಬಯಿ ರೇಲ್ವೆ ಸ್ಟೇಶನ್ನಿನ ವರೆಗೆ ತಂದು ಕೊಡಲ್ಪಡುವವು.

ಇದರ ರೋಲುಗಳು ಶುದ್ಧ ಕಬ್ಬಿಣದಿಂದ ಮಾಡಿದ್ದಿರುತ್ತವೆ. ಕಬ್ಬಿನೊಳಗಿನ ಹನಿ ಹನಿ ರಸವನ್ನು ಕೂಡ ಹಿಂಡಿ ತೆಗೆಯುವ ವ್ಯವಸ್ಥೆ ಮಾಡಬರುತ್ತದೆ. ಗಾಣದ ಎರಡೂ ಬದಿಗಳ ಯಾವದೇ ಬದಿಯಿಂದ ಕಬ್ಬು ಕೊಡಬಹುದು

ಆರ್ಡರಿನ ಸಂಗಡಲ್ಲಿ ಹಣವನ್ನು ಡಿಪೋಝಿಟ್ಟಾಗಿ ಕಳಿಸಬೇಕು·

ಕ್ಯಾಟಲಾಗು "ಡಬ್ಲ್ಯೂ ೧೧೨" ಪುಕ್ಕಟೆ!

ಮೆಕ್‌ಬೆಥ ಬ್ರದರ್ಸ ಮತ್ತು ಕಂಪನಿ, ಲಿಮಿಟೆಡ್.

ಕೋಡಾಕ ಹೌಸ, ಹೊರ್ನಬಿ ರೋಡ, ಮುಂಬಯಿ.



ನಿಜವಿದು ನೋಡು! ಖಚಿತವಿದು ನೋಡು!!

ನಮ್ಮಲ್ಲಿ

ಅತಿ ಮನೋಹರವಾದ

ಶೀಶೆ ಕಟ್ಟಿಗೆಯ

ದೇವರ ಮಂಟಪಗಳೂ,

ಹೆಂಗಸರ ಸೌಭಾಗ್ಯವತಿ ಪೆಟ್ಟಿಗೆಗಳೂ, ಡ್ರೆಸ್ಸಿಂಗ ಪೆಟ್ಟಿಗೆಗಳೂ, ಆಫೀಸ ಬಾಕ್ಸಗಳೂ, ರೊಕಿಂಗ ಖುರ್ಚಿಗಳೂ ಹಾಗೂ ಯಾವತ್ತು ತರದ ಮನೆ ಸಾಮಾನು ಸಿಗುತ್ತದೆ.

ನಮ್ಮ ವಿಳಾಸ:—

ದಿ ನೋರ್ಥ ಕೆನರಾ ಟ್ರೇಡಿಂಗ ಕಂಪನಿ,

ಶಾಂತಿ ಭುವನ,

ಕಾರವಾರ.

धातु क्षीणता व कमजोरपणा यांसाठीं

मदन मंजरी गोळ्या. (रजिस्टर्ड.)

या दिव्य गोळ्या रक्त व वीर्य सुधारून त्यांची चांगली वाढ करतात पचन शक्ति सुधरून परसाकडे साफ होतें. त्याचप्रमाणें प्रत्येक प्रकारची अशक्तता दूर होऊन शरीर तेजदार व बळवान होतें. कि. ४० गोळ्यांच्या डबीस रु. १.

रमण विलासिनी गोळ्या. रात्रीं फक्त १ गोळी दुधाबरोबर खाल्यानें इच्छेप्रमाणें वीर्यस्तंभन होतें. किं. डबीस रु. १

नपुंसकत्वारी घृत. हा लेप पुरुषाच्या गुह्यभागावर लावला असतां सर्व रोग नाश पाऊन खरें पुरुषत्व प्राप्त होतें. किं. डबीस रु. १.

कुमटा एजंट :— माधव स. तप्पा शेणवी बेलेकेरी.

राजवैद्य नारायणजी केशवजी यांचे:— १९१ काळबादेवी रोड मुंबई २

ರೋಗದಿಂದ ನರಳಬೇಡಿರಿ.

ನಮ್ಮಲ್ಲಿ ಜಂತು ಜುಲಾಬು, ಹಿಕ ಜುಲಾಬು, ಎಲ್ಲ ತರದ ಜ್ವರ, ಜ್ವರಗಡ್ಡೆ, ಚಳಿಜ್ವರ, ಕಾಮಿಲೆ, ದಮ್ಮು, ಕೆಮ್ಮು, ಕಫ, ಅಗ್ನಿಮಾಂದ್ಯ, ಮಲಬದ್ಧತೆ ಸ್ಥೂಲವ್ಯಾಧಿ, ನರ, ವಾತ, ತಲೆನೋವು, ಪ್ರದರ, ಗರ್ಭಾಶಯ ಮುಂತಾದ ಎಲ್ಲ ರೋಗ (ಪ್ರಮೇಹ ಉಪದಂಶ ಗಳು ಸಹ) ಬಾಲಗ್ರಹ, ಬಜ್ಜೆ ಗಡುಕರ್ಣಗಳಿಗೆ ಒಂದೇ ತ ಗುಣ ಬರುವ ಜರ್ಮನ ಅಮೇರಿಕನ, ಫ್ರೆಂಚ ಇಂಗ್ಲಿಷ ಮ ತು ದೇಶಿ ಪೇಟಂಟ ಔಷಧಗಳು ಬಹಳ ಅಗ್ಗವಾಗಿ ಸಿಗುವವು

ಇದಲ್ಲದೆ ಎಲ್ಲ ತರದ ಸೇಕಸರಿ ಸರಪ್ಲ್ಯಾಯರಿ ಸ್ಯಾಕಲ ಸಾಮಾನು ಹಿಲ್ಡ ಸ್ಕೂಬ್ರ್ಯಾಲ ಸುವರಲೆ ಟ, ಮೋರಿಸ ಮೋಟಾರ ಬಂಡಿಗಳು ಸವಲತಿನ ದರ ದಿಂದ ಸಿಗುವವು ನಮ್ಮಲ್ಲಿಲ್ಲದ ನಿಮಗೆ ಅವಶ್ಯವಿರುವ ಸಾಮಾನು ಬೇರೆ ದೇಶದಿಂದ ತರಿಸಿಕೊಡಲಾಗುವದು

ಎಸ್ ಎಲ್ ಧಾಕಪ್ಪ ಮತ್ತು ಬ್ರದರ,

ಸಿರಸಿ.

ವಿಶೇಷ] **ಅನುಭವಸಿದ್ಧ** [ವೈದ್ಯಕೀಯ

ವನೌಷಧಿಮೂಲಿಕೆಗಳು

ವಾಯುಬದುವನ್ನಾನ (ನೆಮೋನಿಯಾ) ವಾಂತಿ ಭ್ರಾಂತಿ (ಕೋಲೆರಾ) ಅರ್ಧಾಂಗವಾಯು (ಪೆರಾ ಲೆಸಿಸ್)ಹುಚ್ಚು ನಾಯಿ ಕಡಿತ, ಸರ್ಪಸುತ್ತು, ಹೊಟ್ಟೆಯಲ್ಲಿ ಕತ್ರಿಮ ವಿಷವಾಕಿದ್ದು (ಕೈಮುಸಗು) ವಗೈರೆ ರೋಗಗಳಿಗೆ ಒಂದೆ ಒಂದು ಮೂಲಿಕೆ ಯಿಂದ ಖಾತ್ರಿಯಾಗಿ ತೀವ್ರ ಗುಣಬರುವದು ಇವು ಬಹುಕಾಲದಿಂದ ಅನುಭವ ತಕ್ಕೊಂಡು ಹಾಗು ಪ್ರತಿನಿತ್ಯ ಈಕಡೆಗೆ ಒಳಿಕೆಯಲ್ಲಿದ್ದು ಖರ್ಚಾಗುವ ಔಷಧಿಗಳ ತಾಜಾ ಮೂಲಿಕೆಗಳು! ಒಮ್ಮೆ ತರಿಸಿ ಅನುಭವ ತಕ್ಕೊಂಡರೆ ಖಾತ್ರಿಯಾದೀತು ಕೋಲೆರಾ ಔಷಧಿಗಳ ದ್ರಾವಕ (Tincture) ಸಹ ಆಗಾವ್ಯ ಸೂಚಿಸಿದರೆ ಕಳುಹುವೆವು

ವಾಯುದುಮ್ಮನದ ಬಗ್ಗೆ ಔಷಧಿ ಮೂಲಿಕೆ ತೊಲೆ ೧ಕ್ಕೆ	೦-೨-೦
ಕೋಲೆರಾದ ಬಗೆ ,, ,, ,,	೦-೨-೦
ಅರ್ಧಾಂಗ ವಾಯುವಿನಬಗ್ಗೆ ೧ ಇಸಮಿಗೆ ಸಾಲುವಷ್ಟು ॥ ಸೇರು	..೧-८-೦
ಪ್ರಕೃತಿ ತಿಳಿಸಬೇಕು	
ನಾಯಿ ಕಡಿತದಬಗ್ಗೆ ...	೦-४-೦
ಸರ್ಪಸುತ್ತಿನ ಬಗ್ಗೆ . .	೦-೨-೦
ಹೊಟ್ಟೆಯಲ್ಲಿ ಕತ್ರಿಮ ಔಷಧಿ ಬದಬಗ್ಗೆ ತೊಲೆ ೧೦ ಕ್ಕೆ	೦-८-೦
ರಕ್ತಶುದ್ಧಿ ವ ಮಲಶೋಧನೆ ಬಗ್ಗೆ ಮೂಲಿಕೆ ರಾತ್ತಲ ೧ಕ್ಕೆ	೧-೦-೦
ಮೋರಾವಳಾ (ನೆಲ್ಲಿಕಾಯಿ ಗುಳುಂಬ) ರಾತ್ತಲ ೧ ಕ್ಕೆ	೧-೦-೦

ರಾತಗಟ್ಟೆ ಯಾ ಅದಕ್ಕೂ ಹೆಚ್ಚು ತರಿಸಿಕೊಳು ವವರಿಗೆ ಕಡಿಮೆ ದರದಿಂದ ಕಳಿಸಲ್ಪಡುವದು. ಟಪಾಲ ಖರ್ಚು ಪ್ರತ್ಯೇಕ ವಿಶೇಷ ಮಾಹಿತಿ ಪತ್ರ ದ್ವಾರಾ ಅನುಪಾನಪತ್ರ ಔಷಧೀ ಸಂಗಡ

ಎನ್. ಜಿ. ಹೆಗಡೆ, ಮಾಸ್ತೇರಿ,

ಪೋಸ್ಟ—ಬಂಕಿಕೋಡ್ಲ ಜಿ ಉತ್ತರ ಕಾನಡಾ

ಸುಲಭ ಕ್ರಯ! ಸುಲಭ ಕ್ರಯ!

ಡಾಕ್ಟರ ಜೀ. ಬೀ ಯವರ

ಸುಗಂಧ ನಶ್ಯದ ಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲಟ್ಟು ಸಾವಿರಾರು ಮಂದಿ

ಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾ ಪತ್ರ ಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥ ವಾಗುವ ವ್ಯಾಧಿಗಳು ಯಾವವೆಂದರೆ— ಪಿನಶಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿ ಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದ ಲ್ಲದೆ, ಕಂಠಕ್ಕೆ ಸೇಲ್ಪಟ್ಟ ಸಕಲ ವ್ಯಾಧಿಗಳನ್ನೂ ಸ್ವಸ್ಥ ಪಡಿಸಿ ಜ್ಞಾಪ ಕ ಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಪೆಟ್ಟಿನ ಸಾಧಾ ರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು. ಇದ ನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸಿಸೆ ಪುಕ್ಕಟೆ ಕಳಿಸಲಾಗದೀತು

ಬುದ್ದಿ ಒಂದಕ್ಕೆ ಕ್ರಯ ರೂ ೦-४-೦ ವ್ಹಿ. ಪಿ ೪ ಆಣೆ ಡಜನ್ ೧ ಕ್ಕೆ ರೂ ೨-೮-೦. ವ್ಹಿ. ಪಿ. ೩-೮-೦ ಮಾಡಿ ನಿಮ್ಮ ಹೆಸರನ್ನೂ ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತ—ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪೋ. ಬಾ. ೫೧೦, ಪಾರ್ಕಟೌನ, ಮದರಾಸ

ಸರಕಾರದಿಂದ ಪೇಟಂಟ ಪಡೆದ

ಮಲ್ಹಾರ ಕಪ್ಲಿ.

ತೋಟಿಗರಿಗೆ ಬಹು ಅನುಕೂಲವಾಗಿರುವದು.

ಇದು mild steelವೆಂಬ ಜಾತಿಯ ಉಕ್ಕಿನ ತಗಡಿನಿಂದ ಮಾಡಲ್ಪಟ್ಟಿರುವ ದು ಎತ್ತುಗಳಿಗೆ ಬಹಳೇ ಹಗರು ಹೋಗುತ್ತದೆ ಇದರೊಳಗಿಂದ ಒಂದು ಹನಿ ಸಹ ನೀರು ಕೆಳಗೆ ಬೀಳದಂತೆ ಏರ್ಪಾಡು ಮಾಡಲ್ಪಟ್ಟಿರುವದು ಕಪ್ಲಿ ಬಾಯಿಂದ ನೀರು ಡೋಣಿಯಲ್ಲಿ ಬೀಳುವ ಕಾಲಕ್ಕೆ ಎತ್ತುಗಳಿಗೆ ಭಾರವಾಗದಂತೆ ರಚನೆಯಲ್ಲಿ ಸುಧಾರ ಣೆಯನ್ನು ಮಾಡಿರುತ್ತೇವೆ

ಬೆಲೆಯ ಬಗ್ಗೆ ಬರೆದು ತಿಳಿದುಕೊಳ್ಳಿರಿ

ಕಿರ್ಲೋಸ್ಕರ ವಾರ್ತೆ —ಜನವರಿ ಸಂಚಿಕೆಯು

ಹೊರಬಿದ್ದಿರುವದು ವಾರ್ಷಿಕ ಚಂದಾ ರೂ ೧-४-೦

ಕಿರ್ಲೋಸ್ಕರ ಬಂಧು ಲಿಮಿಟೆಡ್;{ ಕಿರ್ಲೋಸ್ಕರವಾಡಿ, ಜಿಲ್ಹಾ ಸಾತಾರಾ

ಅಮೃತಾಂಜನ.

ಇದರ ಉಪಯೋಗದಿಂದ, ವಾತವೇದನೆ, ಉಳುಕು ಇತ್ಯಾದಿ ವ್ಯಾಧಿ ಗಳಮೇಲೆ, ರಾಮಬಾಣದಂತಾಗಿರುವದು, ಕಳೆದ ೩೫ ವರ್ಷಗಳಿಂದ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗುತದೆ ಲಕ್ಷಗಟ್ಟಲೆ ಕುಟುಂ ಬಗಳು ಅಮೃತಾಂಜನವನು ಉಪಯೋಗಿಸುತ್ತಿರುವದೆ ಸಾಕ್ಷಿ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ನೆಗಡಿ, ಸಂಧಿವಾತ ಮೊದಲಾದ ವ್ಯಾಧಿಗಳಮೇಲೆ ಇದು ಗುಣಕಾರಿಯೆಂದು ಅರಿಯದವರು ಇದರ ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು ಕಿಮ್ಮತು ೧೦ ಆಣೆ ವ್ಹಿ ಪಿ ಖರ್ಚು ಬೇರೆ.

ಅಮೃತಾಂಜನ ಡಿಪೋ, ಫೋರ್ಟ, ಮುಂಬಯಿ

Printed and Published by Krishnarao Keshav Shenvi (Editor) at his Star of Kanara Press Kumta.

Reg. NO. B 1270

ವರ್ಷ ೧೦.

ಕಾನಡಾವೃತ್ತ.

THE KANARA NEWS.

ಸಂಚಿಕೆ ೨೫.

ವರ್ಗಣಿ.

ಮುಂಚಿಯಲ್ಲಿ ಆಗಾವು
ರೂಪಾಯಿ 2-8-0.
ವರ್ಷಾರ್ಧದಲ್ಲಿ
ರೂ. 3-0-0.
ಅಂಚೆವೆಚ್ಚ ಸೇರಿ
ರೂಪಾಯಿ 3-2-0.
ಬಿಡಿ ಸಂಚಿಕೆಗೆ 0-1-0.

जरत्वविदितकर्मा दैव्यतां याति लोके जनपदहितकर्ता त्यज्यते पार्थिवेन्द्रैः।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಜಾಹಿರಾತುಗಳ ದರ
ಇಂಗ್ಲಿಷ ಮತ್ತು ಕನ್ನಡ (೧೫ ಎಟ್ ಉದ) ಸಾಲುಗಳವರೆಗೆ ರೂ. 1-0-
ಆ ನಂತರ ಪ್ರತಿಸಾಲಿಗೆ 0-1-0.
ಹೆಚ್ಚಿನ ಸಾಲು ಎಷ್ಟು ಹೊತ್ತು ಬರುವದೋ ಆ ಮೇಲಿಂದ ಅಷ್ಟು ಸಾಲುಗಳು ಸಿಗಿ ಯಲ್ಪಡುವವು.
ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿ ಸಲ್ಪಡುವವು.

(ಕುಮಟಾ—ಕಾನಡಾವೃತ್ತ ಸೋಮವಾರ, ತಾರೀಖು ೨೯ ಮಾಹೆ ಮಾರ್ಚ ಸನ್ ೧೯೨೬ ನೇ ಇಸವಿ.)

हिंदुस्थानातील रहिवाश्यांस ज्याप्रमाणें हिंदुस्थानची हवा त्याप्रमाणेंच हें औषध हिंदुस्थानातील लोकांस ज्यास्त फायदेशीर आहे.

द्राक्षासव- दीड रतलाची किंमत २ रुपये,

रामबाण औषधें
सर्दी घालविणारें,
भूक वाढविणारें,
श्वासोच्छ्वास साफ करणारें,
झोंप आणणारें,
शक्ति देणारें,
तेजस्वीपणा आणणारें,

विश्वास ठेविचकर.
कृपा करून मागवा,

हिंदुफार्मास्युटिकलवर्क्स लिमिटेड,
मुंबई नं. १२

एजंट— मेसर्स पंडित आणी कंपनी,
तीर्थहळ्ळी

ಬೇಕಾದ ಚಿನ್ನಾಭರಣಗಳು ನಮಗೆ ಆರ್ಡರ ಕೊಟ್ಟಲ್ಲಿ ಯೋಗ್ಯ ಮುದ್ದತ್ತಿನಲ್ಲಿ ಕೊಡುವೆವು.

R. S. KASARGOD. B. A.

Jewellers, KUMTA.

ಆರ್. ಎಸ್. ಕಾಸರಗೋಡ, ಬಿ. ಎ.

ರತ್ನಾಭರಣ ವ್ಯಾಪಾರಿ, ಕುಮಟಾ.

ಯಾವದೇ { ಆಕಾರದ / ನಕ್ಷೆಯ / ಸಂಚಿನ } ಗಡಿಯಾರವನ್ನು

ಬರೇ ೬ ರೂಪಾಯಿಗಳಿಗೆ ಕೊಡುತ್ತೇವೆ.

ಮೂಲ ಬೆಲೆ ರೂಪಾಯಿ ೧೨, ಅರ್ಧ ಬೆಲೆ ರೂಪಾಯಿ ೬,



ಒಂದೇ ಒಂದು ತಿಂಗಳ ಬಗ್ಗೆ ನಾವು ಈ ದರವನ್ನು ಹೊಸ ವರ್ಷದಲ್ಲಿ ಮಾತ್ರ ಕೊಡುತ್ತೇವೆ. ಎಲ್ಲಾ ಗಡಿಯಾರಗಳನ್ನು ಅರ್ಧ ಬೆಲೆಗೆ ಮಾರುತ್ತೇವೆ ಅತ್ಯುತ್ತಮ ಚಲನೆ! ನಿರ್ದೋಷ ಯಂತ್ರರಚನೆ !! ಧರಿಸುವದಕ್ಕೆ ಯೋಗ್ಯ ಹಾಗು ರಮ್ಯ !!! ಎಲ್ಲಾ ಗಡಿಯಾರಗಳಿಗೆ ಗ್ಯಾರಂಟಿ ಇದೆ. ಚಿತ್ರದ ಯಾವದೇ ಆಕಾರದ, ನಕ್ಷೆಯ, ಸಂಚಿನ ಗಡಿಯಾರವನ್ನು ಉತ್ಕೃಷ್ಟ ರೇಶ್ಮೆ ಪಟ್ಟಿಯ ಸಹಿತ ಉಚಿತವಾಗಿ ಕೊಡುತ್ತೇವೆ ಬೆಲೆ ರೂಪಾಯಿ ೬ ಮಾತ್ರ!

ಅಲ್ಪವೇ ಇವೆ; ಈಗಲೇ ಬರೆಯಿರಿ.

ಪತ್ತೆ.— **Swan House: P B 603 P T Madras**

ಅತ್ಯಲ್ಪವಿವೆ! ಕೇವಲ ಉಚಿತ!

ಉಚಿತ! ಉಚಿತ! ಕೇವಲ ಉಚಿತ

"ತಾರಾ" ಲೀವರ ರಿಚಿಸ್ಟರ್ಡ ಫ್ರೀಕೆಟ್ ವಾಚು ೧೮ ಕೆರೆಟ್ ರೋಲ್ಡ ಗೋಲ್ಡಿನದು. ಮುಖಪಟ್ಟಿಯು ಮೇಲೆ ೫ ವರ್ಷದ ಗ್ಯಾರಂಟಿ ಇರುವದೆಂದು ಗಡಿಯಾರದವರು ಅಚ್ಚು ಹೊಡೆದಿರುವರು ಈ ಗಡಿಯಾರವನ್ನು ಕೊಂಡುಕೊಳ್ಳುವವರಿಗೆ ನಾವು ನಮ್ಮ "ಸಿ" ರಜಿಸ್ಟರ್ಡ ಟೈಂಪೀಸನ್ನು ಉಚಿತವಾಗಿ ಕೊಡುತ್ತೇವೆ ಇದೊಂದು ಅಪೂರ್ವ ಕಾಣಿಕೆ ಕೆಲವೇ ಗಡಿಯಾರಗಳಿವೆ ಒಮ್ಮೆ ಕೊಂಡು ನೋಡಿರಿ! ಉಚಿತವಾಗಿ ಸಿಗುವದು ಹಾಗು "ತಾರಾ" ಲೀವರ ರಿಜಿಸ್ಟರ್ಡ ೧೮ ಕೆರೆಟ್ ರೋಲ್ಡ ಗೋಲ್ಡಿನ ಫ್ರೀಕೆಟ್‌ವಾಚ್ ಗಡಿಯಾರಗಳಿಗೆ ಕ್ರಯ ಬರೇ ರೂಪಾಯಿ ೫

CAPTAIN WATCH CO., P. B. 365, MADRAS.

ರೋಗದಿಂದ ನರಳಬೇಡಿರಿ.

ನಮ್ಮಲ್ಲಿ ಚಂದು ಗುಲಾಬು, ಪಿತ ಗುಲಾಬು, ಎಲ್ಲ ತರದ ಜ್ವರ, ಜ್ವರಗಡ್ಡೆ, ಚಳಿಜ್ವರ, ಕಾಮಿಲೆ, ದಮ್ಮು, ಕೆಮ್ಮು, ಕಫ, ಅಗ್ನಿಮಾಂದ್ಯ, ಮಲಬದ್ಧತೆ, ವಾತವ್ಯಾಧಿ, ನರ, ದಾಹ, ತಲೆನೋವು, ಪ್ರದರ, ಗರ್ಭಾಶಯದ ಎಲ್ಲ ರೋಗ, ಪ್ರಮೇಹ, ಉಪದಂಶ ಗರ್ಮಿ) ಬಾಲಗ್ರಹ, ಕುಷ್ಟ, ಗಜಕರ್ಣಗಳಿಗೆ ಖಂಡಿತ ಗುಣ ಬರುವ ಜರ್ಮನ, ಅಮೇರಿಕನ, ಫ್ರೇಂಚ ಇಂಗ್ಲಿಷ ಮತ್ತು ದೇಶಿ ಔಷಧಗಳು ಬಹಳ ಅಗ್ಗವಾಗಿ ಸಿಗುವವು.

ಇದಲ್ಲದೆ ಎಲ್ಲ ತರದ ಸೇಶನರಿ, ಪರಪ್ಯೂಮರಿ ಸ್ಕೂಲ ಸಾಮಾನು, ಹಲ್ಲಿನ ಬ್ರಶ್, ಸುವಾಸಿಕ, ಮೋರಿನ ಮೊಹಾರ ಬಾಟ್ಲಿಗಳು, ಸವಲತ್ತಿನ ದರದಿಂದ ಸಿಗುವವು ನಮ್ಮಲ್ಲಿಲ್ಲದ ನಿಮಗೆ ಅವಶ್ಯವಿರುವ ಸಾಮಾನು ಬೇರೆ ದೇಶದಿಂದ ತರಿಸಿಕೊಡಲಾಗುವದು.

ಎಸ್ ಎಲ್ ಧಾಕಪ್ಪ ಮತ್ತು ಬ್ರದರ,
ಸಿರಸಿ

[illegible] ಹುಣ್ಣಿಮೆಯಿಂದ ೪ನೇ ವರ್ಷ ಪ್ರಾರಂಭ

ಸಚಿತ್ರ ಜಯಕರ್ನಾಟಕ ಮಾಸಪತ್ರಿಕೆ

ಸಂಪಾದಕ--ಆಲೂರ ವೆಂಕಟರಾಯರು

ಇದರಲ್ಲಿ ವಾಙ್ಮಯಾತ್ಮಕ ಸಾಹಿತ್ಯ, ಧಾರ್ಮಿಕ ಸಾಮಾಜಿಕ ಐತಿಹಾಸಿಕ ಆರ್ಥಿಕ ಇತ್ಯಾದಿ ವಿಷಯಗಳು ಬರುವವು. ಪ್ರಪಂಚ ಪರಿಚಯ, ಜೀವನಚರಿತ್ರೆ, ನಾಟಕ ಕಾದಂಬರಿಗಳು ಕೊಡಲ್ಪಡುವವು. ಪ್ರತಿ ಸಂಚಿಕೆಯಲ್ಲಿ ಸುಂದರ ಚಿತ್ರಗಳೂ ಬರುತ್ತವೆ. ಡೆಮಿ ರಾಯಲ್ ಆಕಾರದ ೬೦ ಪುಟಗಳು ವರ್ಗಣಿ ರೂ ೫-೮-೦

ಕಾರ್ಯದರ್ಶಿ ಜಯಕರ್ನಾಟಕ, ಧಾರವಾಡ.

ಎಲ್ಲಾ ನೋವುಗಳಿಗೆ ದಿವ್ಯೌಷಧ

ವಾತಹಾರಿ ತೈಲ.

ಕ್ರಯ ೫ ತೊಲೆ ಬಾಟ್ಲಿ ೧ ಕ್ಕೆ ೦—೧೨—೦ ಕುಂಚಿ ಸುವಾಸಿಕ ಕಾಬೂಲಿ ಹಿಂಗು ತೊಲೆ ಡಬ್ಬಿ ೧ ಕ್ಕೆ ೧—೮—೦. ಹಿಂಗಿನ ಅರ್ಕ ॥ ತೊಲೆಯ ಬಾಟ್ಲಿ ೧ ಕ್ಕೆ ೦—೮—೦ ರಕ್ತಶುದ್ಧಿಕಾರಕ ಧಾತು ಪೌಷ್ಟಿಕ, ಶಕ್ತಿವರ್ಧಕ ಚಲವಾ ೩೦ ತೊಲೆಯ ಡಬ್ಬಿ ೧ ಕ್ಕೆ ೧—೪—೦. ೧ ತೊಲೆಯ ಹಿಂಗಿನ ವಡಿಗಳು ಡಜನ್ ೧ ಕ್ಕೆ ೨—೦—೮. ತಲೆಗೆ ಹಾಕುವ ಸುವಾಸಿಕ ಮಕರರಾಜ ತೈಲ ೫ ತೊಲೆಯ ಬಾಟ್ಲಿ ೧ ಕ್ಕೆ ೮—೧೨—೦ ಹುರದ ಪ್ರೇಮ ತೊಲೆ ೧ ಕ್ಕೆ ೦—೮—. ಇದಲ್ಲದೆ, ನೀಲಗಿರಿ ತೈಲ, ಎಲ್ಲಾ ತರದ ಊದಿನ ಊದುಬತ್ತಿಗಳು ಯೋಗ್ಯ ಕಿಂಮತಿಗೆ ಸಿಗುವವು ಟಪಾಲ ಖರ್ಚ ಪ್ರತ್ಯೇಕ.

ಕೆರೇಕರ ಕಾಬೂಲೀ ಹಿಂಗಿನ ದುಕಾನ,
ಜವಳಿಬಾಜಾರ, ಕುಮಟಾ.

ರಾಗದ ಪೆಟ್ಟಿಗೆಗಳು.

ತಬಲೆ ಜೋಡಿ ಇತ್ಯಾದಿ ಗಾಯನ ಸಾಮಾನು.

೧ ರಾಗದ ಕೈಪೆಟ್ಟಿಗೆ ಕಿಂ. ೩೦, ೪೦, ೬೦, ೭೫, ೧೦೦.
೨ ,, ಕಾಲು ಪೆಟ್ಟಿಗೆ ಕಿಂ. ೬೫, ೭೫, ೧೨೦, ೧೪೦.
೩ ತಬಲೆ ಜೋಡಿ ಕಿಂ. ೧೬, ೧೮, ೨೦, ೨೫.
೪. ಹಾರ್ಮೋನಿಯಮ ಗ್ಯಾಡ (ಮರಾಠಿ) ಕಿಂ. ೧॥, ತಬಲೆ ಗ್ಯಾಡ ಕಿಂ. ೧॥ ೮.

ವಿಶೇಷ ಮಾಹಿತಿಬಗ್ಗೆ ನಮ್ಮ ಮರಾಠಿ ಕ್ಯಾಟಲಾಗ ಫ್ರೀ ಕೊಡುವೆವು.

ಪತ್ರವ್ಯವಹಾರ ಮರಾಠಿಯಿಂದ ಇಲ್ಲವೆ ಇಂಗ್ರಜಿಯಿಂದ ಮಾಡಬೇಕು.

ಪತ್ತೆ–ಗೋಪಾಳ ಸಖಾರಾಮ ಮತ್ತು ಕಂಪನಿ, ವಿಠ್ಠಲವಾಡಿ ಎದುರಿಗೆ ೩೬೩ ಕಾಳಬಾದೇವಿ, ಮುಂಬಯಿ

ಟಿ. ಎಸ್. ಮೋಟೇರ ಸರ್ವಿಸ, ಶಿವಮೊಗ್ಗಾ.

ಗೇರಸಪ್ಪಾ ಜೋಗಿಗೆ ರೆಗ್ಯುಲರ್ ಸರ್ವಿಸ್

ಶಿವರಾತ್ರಿಯ ಸಮಯದಲ್ಲಿ ಗೋಕರ್ಣಕ್ಕೆ ಸ್ಪೆಶಲ್ ಲಾರಿಗಳು

(೧) ಹುಬ್ಬಳ್ಳಿ- ಯಲ್ಲಾಪುರ- ಅಂಕೋಲಾ- ಕಾರವಾರ (೨) ಹುಬ್ಬಳ್ಳಿ- ಮುಂಡಗೋಡ- ಶಿರ್ಶಿ- ಕುಮಟಾ- ಹೊನ್ನಾವರ- ಭಟ್ಕಳ (೩) ಕುಮಟಾ- ಶಿರ್ಶಿ- ಸಿದ್ದಾಪುರ- ಗೆರಸಪ್ಪಾ- ಜೋಗ) Gersappa Falls) ಸಾಗರ ಶಿವಮೊಗ್ಗಾ—ಈ ಲೈನುಗಳಲ್ಲಿ ರೆಗ್ಯುಲರ್ ಸರ್ವಿಸ ನಡೆಯುತ್ತದೆ.

ಪ್ರಯಾಣಿಕರಿಗೆ ಅನುಕೂಲವಾಗುವದಕ್ಕೆ ಎಲ್ಲಾ ಸ್ಟೇಶನ್ನುಗಳಲ್ಲೂ ವಸ್ತಿ ವಿಚಾರಣೆ ಮಾಡಿದೆ.

ಹೆಚ್ಚಿನ ಮಾಹಿತಿಯನ್ನು ಆಫೀಸಿನಲ್ಲಿ ತಿಳಿದುಕೊಳ್ಳಬಹುದು

THE,

INDIA PROVIDENT COMPANY LTD:

ESTABLISHED 1910.

Dividend declared 1912 20 per cent.
Dividend declared 1922 30 per cent.
Dividend declared previous year 15-20 per cent

The Safest office for Life Insurance of the poor Premium Re. 1 o As 8 per mensem

Apply a once to -

PADMANABH GOPAL KAMAT,
Agent, ANKOLA N. Kanara

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕಿಟಗಳು ಮತ್ತು ಸುವರ್ಣಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು.

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ.

ಈ ಮಧುವು ಮಹೌಷಧಿಯಾಗಿದ್ದು ಬಹಳ ಸಿಹಿಯಾಗಿಯೂ ರುಚಿಕರವಾಗಿಯೂ ಇರುತ್ತದೆ. ಈ ಮಧುವಿನ ಸೇವನದಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ವಿಕೃತಿಯಿಂದಾದ ಬೇನೆಯು ಹೋಗುವದು ೬೦ ೭೦ ವರ್ಷದ ಮುದುಕರ ಕಾಮುಕರ [illegible] ತರುಣರಂತೆ ಪ್ರವರ್ಧಮಾನವಾಗುವದು. (ನಿಜವಾಗಿ ಒಂದೇ ವಾರದಲ್ಲಿ ಅನುಭವಕ್ಕೆ ಬರುವದು) ಜನನೇಂದ್ರಿಯದೊಳಗಿನ ಶಕ್ತಿಯು ಹೋಗಿ [illegible] ನಪುಂಸಕತ್ವವು ಇಲ್ಲದಂತಾಗುವದು. ಮೂತ್ರಸರ್ಜನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ ಧಾತುವು ಬಂದಾಗುವದು.— ಪರಮಾ ಹಾಗೂ ಕಾಸಿನಿಂದ ದೂಷಿತವಾದ ಶರೀರವು ನಿರ್ದೋಷವಾಗುವದು ಮೂರೇ ದಿವಸದಲ್ಲಿ ಗುಣಬರುವದು. ತರುಣ ಸ್ತ್ರೀಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಇದರೊಳಗಿನ ಗುಣ ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ, ಉದರರೋಗ ದಮ್ಮು ಇವುಗಳು ನಾಶವಾಗುವವು ದಿವಸದಲ್ಲಿ ಮೂರಾವರ್ತಿ ಊಟಮಾಡಿದರೂ ಅನ್ನ ಪಚನವಾಗಿ ಹಸಿವೆ ಚನ್ನಾಗಿ ಆಗುತ್ತದೆ ಇದರ ಅನುಭವವು ಮೊದಲನೇ ದಿವಸವೇ ಬರುವದು. [illegible] ಸುಖ ಆಗುವದು. ಮೈಯಲ್ಲಿ ಎಷ್ಟೇ ದಿವಸದ [illegible] ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ವಿಷಯಕ್ಕೆ ಸಂಶಯವಿಲ್ಲ. ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ. [illegible] ಇದ್ದರೆ ೧೦ ದಿವಸ [illegible] ಒಂದು ಬಾಟಲಿಯಿಂದ ಗುಣಬರುವದು. ಹಳೇ ರೋಗವಿದ್ದರೆ ೩ ಬಾಟಲಿಯಿಂದ ಗುಣಬರುವದು. ಒಂದು ಬಾಟ್ಲಿಯ ಕಿಮ್ಮತ್ತು ೧॥ ರೂಪಾಯಿ ಮೂರು ಬಾಟಲಿಯ ಕಿಮ್ಮತ್ತು ೪—೦—೦ ಮೂರು ಬಾಟಲಿಗಳನ್ನು ಒಂದೇ ಪಾರ್ಸಲಿನಲ್ಲಿ ಕಳಿಸುವೆವು. ಅಂದರೆ ಟಪಾಲಖರ್ಚ ಹೆಚ್ಚು ಬೀಳುವದಿಲ್ಲ. [illegible] ಬಾಟಲಿಗಳ ಕಿಮ್ಮತ್ತು ೧೨—೦—೦ ಮತ್ತು ೧ ಬಾಟಲಿ ಪುಕ್ಕಟ ಸಿಗುವದು. ಟಪಾಲ ಖರ್ಚ ಬೇರೆ ಬೀಳುವದು ವಿ.ಪಿ. [illegible] ೧ ಬಾಟ್ಲಿಗೆ ೧—[illegible]—೦ ೩ ಬಾಟ್ಲಿಗೆ ೩—೧—೦ ಡಜನಿಗೆ ೧೩—೧—೦

ಮ್ಯಾನೇಜರ— ದ್ರಾಕ್ಷಾರ್ಕಮಧು ಆಫೀಸ, ಶ್ರೀ ನಿವಾಸ [illegible] ಬೆಳಗಾಂವ

ಕ್ರೈಸ್ತರ ಸ್ಥಿತಿ.

ಅಯ್ಯಾ, ವರ್ತಮಾನ ಪತ್ರಕರ್ತರೇ, ಇದರಡಿಯಲ್ಲಿ ಬರೆದ ಕೆಲವು ಪಂಕ್ತಿಗಳಿಗೆ ನಿಮ್ಮ ಪತ್ರದ ಮುಂದಿನ ಅಂಕದಲ್ಲಿ ಸ್ಥಳ ದೊರೆಯಬೇಕಾಗಿ ಕೇಳುತ್ತೇನೆ.

ಎಲೈ ಕ್ರಿಸ್ತ ಬಂಧುಗಳೇ, ಇನ್ನಾದರೂ ನಾವು ಎಚ್ಚತ್ತು ಒಕ್ಕಟ್ಟಿನಿಂದಲೂ, ಪರಸ್ಪರ ಪ್ರೀತಿಯಿಂದಲೂ ಕೂಡಿದ್ದು, ನಮ್ಮ ಸಮಾಜವೃದ್ಧಿಯನ್ನು ಮಾಡಿಕೊಳ್ಳಬೇಕಾಗಿದೆ ನಾವು ಕನಿಷ್ಟ ೪೦೦ ವರ್ಷಗಳ ಹಿಂದೆ ಧರ್ಮಾಂತರ ಪಟ್ಟು ಕ್ರಿಸ್ತೀಯನ್ನರಾಗಿ ಇನ್ನು ವರೆಗೆ ನಾವು ವಿದ್ಯಾಹೀನರೂ, ಧನಹೀನರೂ ಆಗಿರುವದು ಲಾಂಛನವೇ ಸರಿ. ಆದರೆ, ನಮ್ಮ ಪೂರ್ವಜರ ಸ್ಥಿತಿಯು ಹೀಗಿದ್ದಿಲ್ಲ ಟೀಪು ಸುಲ್ತಾನನಂಥ ಬಲಿಷ್ಟನಾದ ಅರಸರು ಸಹ ನಮ್ಮ ಪೂರ್ವಜರ ಲಕ್ಷ್ಯ ಪಡೆಯುತ್ತಿದ್ದನು. ಇವರು ಇಂಗ್ಲಿಷರಿಗೆ ಗಪ್ತ ಸಹಾಯ ಮಾಡಿದರೆಂಬ ಸಂಶಯದಿಂದ, ಸನ್ ೧೭೮೪ನೇ ಇಸವಿಯ ಬೂದಿ ಬುಧವಾರ ದಿವಸ ಮುದುಕರನ್ನು, ಚಿಕ್ಕಮಕ್ಕಳನ್ನು ಬಿಟ್ಟು, ಉಳಿದ ೬೦೦೦೦ ಜನರನ್ನು ಸೆರೆಹಿಡಿದು ಬಲವಾದ ಸೈನ್ಯದೊಡನೆ ಮೈಸೂರಿಗೆ ಒಯ್ದನು ಮತ್ತು ಅವರ ಸ್ಥಿರ ಆಸ್ತಿಯನ್ನು ಪರಧರ್ಮೀಯರಿಗೆ ಕೊಟ್ಟು, ಗುರಾಸ್ತ್ರಿಯನ್ನು ಮೋಕ್ಷಕ್ಕೆ ಸೇರಿಸಿ ತಾನು ಸಾಯುವಲ್ಲಿಯವರೆಗೆ, ಅಂದರೆ ೧೫ ವರ್ಷಗಳವರೆಗೆ ಅವರನ್ನು ಪರಿಪರಿಯಿಂದ ಕಾಡಿದನು. ಅವನು ಇಂಗ್ಲಿಷರಿಂದ ಯುದ್ಧದಲ್ಲಿ ಮಡಿದ ನಂತರ ಉಳಿದ ೩೦೦೦ ಕೆಥೋಲಿಕರು ಮಾತ್ರ ತಿರುಗಿ ಉತ್ತರ ಕಾನಡಾಕ್ಕೆ ಬಂದು, ಏನೂ ಗತಿಯಿಲ್ಲದವರಾಗಿ ವಾಸಿಸಹತ್ತಿದರು. ಅಂದಿನಿಂದ ಈ ಹೊತ್ತಿನ ವರೆಗೆ ನಮ್ಮ ಸಮಾಜದ ಅಧೋಗತಿಯು ಕಾಲವೇ ಸರಿ

ನಮ್ಮ ಈ ಉತ್ತರ ಕಾನಡಾ ಜಿಲ್ಲೆಯನ್ನು ಮುಂಬಯಿ ಇಲಾಖೆಗೆ ಕೂಡಿಸಿದ್ದರಿಂದಂತು, ಮದ್ರಾಸ ಇಲಾಖೆಯ ಲಗಿನ ಕ್ಷೇತ್ರಪ್ರಸಂಗದ ಲಾಭವೂ ನಮಗೆ ತಪ್ಪಿತು. ಮೊದಲು ನಮ್ಮ ಆರ್ಜಿತ ಸ್ಥಿತಿಯಲ್ಲಿ ಉತ್ತರ-ದಕ್ಷಿಣ ಕಾನಡಾ ಕೆಥೋಲಿಕರೆಲ್ಲರು ಕಾನಡಾ ಸಂಸ್ಥಾನದ ಕೊಂಕಣಿ ಕೆಥೋಲಿಕರೆಂಬ ಅಭಿಧಾನದಿಂದ ಕರೆಯಲ್ಪಡುತ್ತಿದ್ದರು ಹೀಗೆ ನಾವು ಮತ್ತು ದಕ್ಷಿಣ ಕಾನಡಾದ ಕೆಥೋಲಿಕರು ೧೪೦ ವರ್ಷಗಳ ಹಿಂದೆ ಒಂದೇ ಧರ್ಮದವರೂ, ಒಂದೇ ಕುಲದವರೂ, ಒಂದೇ ಮಾತೃಭಾಷೆಯವರೂ, ಒಂದೇ ದೇಶದವರೂ, ಒಂದೇ ಸ್ಥಿತಿಗತಿಯವರೂ, ಆಗಿದ್ದವು. ಆದರೆ, ನಮ್ಮ ಜಿಲ್ಲೆಯು ಮುಂಬೈ ಇಲಾಖೆಯ ಭಾಗವಾದಂದಿನಿಂದ ಅಲ್ಪಸಂಖ್ಯಾಕ ಕೆಥೋಲಿಕರಾದ ನಮಗೆ ದಕ್ಷಿಣ ಕಾನಡಾದ ಬಹುಸಂಖ್ಯಾಕ ಕೆಥೋಲಿಕರ ಸಂಬಂಧವು ಕಡಿದುಹೋಯಿತು ಇಷ್ಟೇ ಅಲ್ಲ, ನಾವು ಇಂಗ್ಲಿಷ ಸರಕಾರದ ಪ್ರಜೆಗಳಾದರೂ, ಇಂಗ್ಲಿಷ ಸಂಸ್ಕೃತಿಯಿಂದ ತೀರ ಭಿನ್ನವಾದ ಗೋವಾ ಮಿಶನರಿ ಕೈಕೆಳಗೆ ನಮ್ಮ ವಿದ್ಯಾಪ್ರಸಾರಕ್ಕೆ ಏನೂ ಉತ್ತೇಜನ ದೊರೆಯಲಿಲ್ಲ ಹೀಗಾಗಿ ಸದ್ಯಕ್ಕೆ ಉತ್ತರ-ದಕ್ಷಿಣ ಕಾನಡಾದ ಕೆಥೋಲಿಕರ ಸ್ಥಿತಿಗತಿಯಲ್ಲಿ ಮಹದಂತರವುಂಟಾಗಿ, ಅವರು ನಮಗೆ ತೀರ ಪರಕೀಯರಂತೆ ನಡಿಸಿಕೊಳ್ಳುವರು ಅವರಂತೆಯೇ, ನಾವು ಸುಧಾರಿಸಿ ಮೇಲೆ ಬಂದರೆ, ಈಗಿನಂತೆ ನಮಗೆ ಮುಂದೆ ಬೇಕಾದ ಧಾಮಗಳ ಮೇಲೆಯೂ, ಜನರ ಮೇಲೆಯೂ ಸರ್ವಾಧಿಕಾರ ನಡೆಸಲಿಕ್ಕೆ ಸಿಗಲಾರದೆಂದು ತಿಳಿದು ಒಳಗಿಂದೊಳಗೆ ಗೋವಾ ಯಾತ್ರಿಗಳು ಸಹ ನಮ್ಮನ್ನು ಅಮುಕುತ್ತಿರುವರೋ?

ವ್ಯಕ್ತಿಶಃ ಜನರಿಗೆ ಗತಿಯಿಲ್ಲದಿದ್ದರೂ, ಜನರ ಫಂಡುಗಳಿಂದ ವಿದ್ಯಾಪ್ರಸಾರಕ್ಕಾಗಿ ಪ್ರತಿ ವರ್ಷ ಬಹಳ ಹಣ ಹೊರಡಿಸಬಹುದು. ಒಂದೇ ಸಾಂಕೇರಿ ಚರ್ಚಿನ ಸಾವಿರಾರು ರೂಪಾಯಿ ಪ್ರತಿವರ್ಷ ಸಹಾಯದಿಂದ ಇದೇ ಊರಿನ ಹುಡುಗರನ್ನು, ಸಹಾಯ ಮುಖಾಂತರ ವಕೀಲರನ್ನು ಇಷ್ಟು ದಿವಸ ತಯಾರಿಸಬಹುದಾಗಿತ್ತು; ಮತ್ತು ಇಂಥ ಸಹ್ಯಾಯಾರ್ಥ್ಯ ಜನರ ಸಹಾಯವನ್ನು ಪಡೆಯಬಹುದಾಗಿತ್ತು. ಆದರೆ, ಹೊಸ ಹೊಸ ಸ್ಥಾನಿಕ ಹಬ್ಬಗಳ ಯೋಜನೆಯ ಮೂಲಕ ಅಜ್ಞಜನರು ಮುಗ್ಧ ಹಬ್ಬಗಳ ಸೆರೆಗುದಳಗಳನ್ನು, ದುಂದುಗಾರಿಕೆಗೂ ಗುರಿಯಾಗುತ್ತಿರುವರು. ಕಾರಣ ನಮ್ಮ ಪ್ರಿಯ ಬಾಂಧವರೇ, ಈಗ ನಮ್ಮನ್ನು ನಾವೇ ಉದ್ಧರಿಸುವಂಥ ಕಾಲವು ಬಂದೊದಗಿದೆ ಆದರಿಂದ ಹೊನ್ನಾವರ, ಶಿರ್ಸಿ, ಕುಮಟೆ, ಕಾರವಾರ ಕೋಡ, ಸಾಂಕೇರಿ ಮೊದಲಾದ ಸಣ್ಣ ದೊಡ್ಡ ಊರೊಳಗಿನ ಕ್ರಿಸ್ತಜನರು ತಮ್ಮತಮ್ಮ ಸಂಘ ಮಾಡಿಕೊಂಡು, ಕಾಲಕಾಲಕ್ಕೆ ಸಭೆಸೇರಿಸಿ, ತಮ್ಮ ತಮ್ಮ ಸ್ಥಿತಿಗತಿಯನ್ನೂ, ಈವರೆಗೆ ತಮ್ಮ ಪ್ರಗತಿಯಾಗದಿರುವ ಕಾರಣವನ್ನು, ಪ್ರಗತಿಗೆ ಇನ್ನು ಮುಂದೆ ಅವಶ್ಯವಿರುವ ಸಂಗತಿಗಳನ್ನು ಕುರಿತು ಯೋಚಿಸಿ ಯೋಗ್ಯ ಠರಾವುಗಳನ್ನು ಮಾಡಿ ಸರಕಾರಕ್ಕೂ, ವರ್ತಮಾನಪತ್ರಗಳಿಗೂ ಜಾಹೀರುಪಡಿಸಬೇಕು. ತಮ್ಮೆಲ್ಲ ಚಿಕ್ಕಮಕ್ಕಳಿಗೆ ಶಾಲೆಗೆ ಕಳಿಸುವಂತೆಯೂ, ಶಿಕ್ಷಣದಲ್ಲಿ ಮತ್ತು ಸರಕಾರಿ ನೌಕರಿಯಲ್ಲಿ ಸರಕಾರದವರು ಇಷ್ಟಲಾಗಿ ನಮಗೆ ದಯಮಾಲಿಸತ ಸವಲತ್ತಿನ ಫಾಯಿದೆ

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ.

ಕಾಮಿನಿಯಾ ತೈಲ. ರಿಜಿಸ್ಟರ್ಡ

ಮನೋಹರ, ಗುಂಗುರು ಗುಂಗುರಾಗಿರುವ ನೀಲಿಮೆಯಿಂದ ನಿಬಿಡವಾದ ಕೇಶದ ಮವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು? ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕದ್ದು ಉಪಕರಣವಾವದೋ.

ಕಾಮಿನಿಯಾ ಆಯಿಲ್ ರಿಜಿಸ್ಟರ್ಡ

ಈ ಆಯಿಲ್ ಸ್ತ್ರೀಯರಿಗೆ. ಅವರಿಗೆ ಸೌಭಾಗ್ಯಾಲಂಕಾರವನ್ನು. ಹೇಗೆ ಕೊಡುವದಯೋ ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುವದು ಈ ಆಯಿಲ್ ಹಚ್ಚಿಕೊಳ್ಳುವದರಿಂದ ಮಸ್ತಕದ್ದ ನೆಯೂ ಶಾಂತವಾಗಿ ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತದೆ. ಕೂದಲುಗಳು ಇದನು ಹಚ್ಚುವ ತೊಡಗಿದ ಬಳಿಕ ಎಂದಿಗೂ ಉದುರಿ ಬಿದ್ದು ಹೋಗಲಾರವು, ಆದರೆ, ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು.

ಕೀಳು ತರದ ಎಣ್ಣೆಗಳನ್ನು ಕೊಂಡುಕೊಂಡು ತಮ್ಮ ಹಣವನ್ನೂ ಕೂದಲನ್ನೂ ಹಾಳುಮಾಡಿಕೊಳ್ಳುವದಕ್ಕಿಂತ ಒಂದೇಯೊಂದು ಬಾರಿ "ಕಾಮಿನಿಯಾ ಆಯಿಲ್" ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ನಮಗೆ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಆಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ ಅನೇಕ ನೂರಾರು ಗೃಹಸ್ಥರು ಅಭಿಮಾನಪೂರ್ವಕ ಮಾನಪತ್ರಗಳೂ ದೊರೆತಿವೆ.

ಕ್ರಯ:— ಸೀಸೆಗೆ ರೂಪಾಯಿ 1 0-0, ಸೀಸೆ 3ಕ್ಕೆ ರೂಪಾಯಿ 2-10 0 ವಿ. ಪಿ. ಖರ್ಚು 0-14-0

ಅತಿ ಮನೋಹರವಾದ ಸುರಭಿಯು !

ಒಟ್ಟೋ-ದಿಲ್ ಬಹಾರ್ !! (ರಿಜಿಸ್ಟರ್ಡ.)

ಈ ಸುಗಂಧದ್ರವ್ಯವು ಮಧುರ, ಕೋಮಲ, ಚಿರಸ್ಥಾಯಿಯಾಗಿರುವ ಅತ್ಯುತ್ತಮವು ಹನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧಮಾಡಿದ್ದು. ಇದರಲ್ಲಿ ಮದಿರೆಯ (ಅಲ್ಕೋಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈ ಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವ್ಯದ ಕೆಲವು ಹನಿಗಳನು ಚಿಮುಕಿಸಿದರೆ ನಿಮ್ಮ ಸುತ್ತಲು ಸ್ವರ್ಗೀಯವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ, ಈ ಒಟ್ಟೋದಿಲ್ ಬಹಾರಿನ ಗಂಧವು ಅವಲ್ಲವುಗಳನ್ನು ಎಲ್ಲಾ ಮನಸ್ಸನು ಹನ ಶಕ್ತಿಯಿಂದ ಸೆಳೆಕೊಳ್ಳುವುದು, ಒಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ

ಸಣ್ಣ ಸೀಸೆ 1 ಕ್ಕೆ 0 8 0; 1 ಡ್ರಾಮಿನ (ಮಿಡಿಯಂ) ಸೀಸೆ 1 ಕ್ಕೆ 0 12 0; ½ ಔನ್ಸಿನ ದೊಡ್ಡ ಸೀಸೆ 1 ಕ್ಕೆ 2 0 0. ಅಂಚೆಯ ವೆಚ್ಚ ಬೇರೆ 0 4 0
ಒಟ್ಟೋ-ದಿಲ್ ಬಹಾರ್ ಪರಿಮಳ ಕಾಡುಗಳು ಡಜನ್ 1 ಕ್ಕೆ 0 12 0

Address: **The Anglo Indian Drug & Chemical Co**
16, Market, **BOMBAY 2**

ಯನ್ನು ತಕ್ಕೊಳ್ಳುವಂತೆಯೂ ಎಲ್ಲರಿಗೆ ಪ್ರೋತ್ಸಾಹವನ್ನು ಕೊಡಬೇಕು. ಈ ಜಿಲ್ಹೆಯಲ್ಲಿ ೫೦೦೦ ಜನಸಂಖ್ಯೆಯುಳ್ಳ ನಾಡೋರ ಜನರೂ,೧೨೦೦೦ ಜನಸಂಖ್ಯೆಯುಳ್ಳ ಕೊಂಕಣ ಮರಾಠಿ ಜನರೂ ನಮಗಿಂತ ಎಷ್ಟೋ ಪಾಲು ಹಿಂದಿನವರಾಗಿ ರುತ್ತಿದ್ದರೂ, ಅವರು ಸಂಘದ್ವಾರ ಇನ್ನೂ ತಮ್ಮ ಪ್ರಗತಿ ಮಾಡಿಕೊಳ್ಳುತ್ತಿರುವರು. ಅಂದ ಮೇಲೆ ೧೬೦೦೦ ಜನ ಸಂಖ್ಯೆಯುಳ್ಳ ನಾವು ಯೋಗ್ಯ ಅಭಿಮಾನವನ್ನು ತಾಳಿ ಇನ್ನು ಮುಂದಾದರೂ ಸಂಘಶಕ್ತಿಯಿಂದ ನಮ್ಮ ಸಮಾಜ ಸುಧಾರಣೆ ಮಾಡಲು ಯತ್ನಿಸಬಾರದೇ?

ನಮ್ಮ ಸಮಾಜಸುಧಾರಣೆಗೆ ಸದಾಶಿವಗಡ ಕ್ರಿಸ್ತೀ ಸಂಘದವರು ಯೋಚಿಸಿದ ಉಪಾಯಗಳನ್ನು ಮೇ॥ ಕೊಲಿನ್ಸ ಸಾಹೇಬರ ಮುಂದೆ ಇಟ್ಟು ಇಂಗ್ಲಿಷ ಎಜ್ಯುಕೇಶನ್ ಫಂಡಿಗೆ ಉದಾರಾಶ್ರಯವನ್ನು ಬೇಡಲು,ಅವರು ೨೦೦ ರೂಪಾಯಿ ದಾನ ಕೊಟ್ಟು ಅದಕ್ಕೆ ಪಾಯದ ಕಲ್ಲನ್ನು ಹಾಕಿದರು ಇಷ್ಟೇ ಅಲ್ಲ, ಅದರ ಪ್ರಗತಿಯನ್ನು ಕಾಲಕಾಲಕ್ಕೆ ತಮಗೆ ತಿಳಿಸಬೇಕೆಂದು ಸಂಘಕ್ಕೆ ಕೇಳಿದ್ದರ ಮೇಲಿಂದ ನಮ್ಮ ಉತ್ಕರ್ಷದ ಬಗ್ಗೆ ಅವರ ಮನಸ್ಸಿನ ಕಳಕಳಿಯು ಗೊತ್ತಾಗುತ್ತದೆ ಇದರ ಮೇಲಿಂದಾದರೂ ನಮ್ಮ ಸಮಾಜಸಂಘಟಣೆಯು ಅತ್ಯವಶ್ಯವೆಂಬುದು ನೆರೆ ನಂಬಿ ಅಭಿಮಾನದಿಂದ ಎಲ್ಲರೂ ಕೈಲಾದಷ್ಟು ನೆರವಾಗುವಂಥ ಕಾಲವು ಪ್ರಾಪ್ತವಾಗಿರುವದು ಇದರಿಂದ ಇಷ್ಟು ದಿವಸ ನಮ್ಮನೊ॥ ಕೆ॥ ಕ್ರಿಸ್ತೀ ಸಮಾಜದ ಮೇಲೆ ಇದ್ದ ಪರಕೀಯರ ಆರೋಪಗಳು ನಮ್ಮನ್ನು ತೊಲಗಿ ದೂರ ಸರಿದು, ನಾವು ಸುಧಾರಣೆಯು ಮೆಟ್ಟು ಹತ್ತತೊಡಗುವೆವು. ದೇವರ ಕೃಪಾಬಲದಿಂದ ಇದು ಬೇಗನೇ ಒದಗಿಬರಲಿ ಮತ್ತು ಇದರಿಂದ ಕೊಲಿನ್ಸ ಸಾಹೇಬರ ಉಪಕಾರಸ್ಮರಣೆಯು ನಮ್ಮ ಸಮಾಜದಲ್ಲಿ ಚಿರಕಾಲವಿರಲಿ ಯಾಕಂದರೆ ದೊಡ್ಡವರು ತಲೆದೂಗಿ ಯಾವದೇ ಒಂದು ದೊಡ್ಡ ಕೆಲಸಕ್ಕೆ ತಮ್ಮ ಉದಾರಾಶ್ರಯ ಕೊಟ್ಟ ಹೊರತು ಅದು ಆರಂಭಿಸಲ್ಪಡುವದೇ ಇಲ್ಲ

ಸದಾಶಿವಗಡ ಕ್ರಿಸ್ತ ಸಂಘದ ಸೆಕ್ರೆಟರಿಗೆ ಬರೆದಲ್ಲಿ ಸಂಘಸ್ಥಾಪನೆಯು ಎಲ್ಲ ಮಾಹಿತಿಯು ದೊರೆಯುವದು ವರ್ತಮಾನಪತ್ರಗಳನ್ನು ಓದುವ ಚಟವು ನಮ್ಮ ಸಮಾಜದಲ್ಲಿ ತೀರ ದುರ್ಲಭವು ಇದರ ತಮ್ಮ ವಿಚಾರಗಳನ್ನು ಮೇಲಿಂದ ಮೇಲೆ ಇಡೀ ಸಮಾಜಕ್ಕೆ ತಿಳಿಸುವದೂ, ಪರರ ವಿಚಾರಗಳನ್ನು ತಿಳಿದುಕೊಳ್ಳುವದೂ ವರ್ತಮಾನ ಪತ್ರಗಳಿಂದಲೇ ಸಾಧ್ಯವು. ನಮಗೆ ಹೆಚ್ಚು ಅನುಕೂಲವಾದ ಯಾವದೊಂದು ವೃತ್ತಪತ್ರವನ್ನು ಆರಿಸಿಕೊಂಡೊಂದ ರಂತೆಯಾದರೂ ಓಳವರ್ಗಣಿದಾರರಾಗಿ ಸಹಾಯಕ್ಕೆ ತಂದು ಕೊಳ್ಳಿರಿ.

ಬಂಧು

ನೊ॥ ಕೆ॥ ಕ್ರಿಸ್ತಬಂಧು.

ದರ ಕಡಿಮೆ. ಮಾಡಿರುವೆವು !

ಸುಸಂಧಿ!

ನಮ್ಮ

ಸುಪ್ರಸಿದ್ಧ

ಇಂಗ್ಲಿಷ ಮೋಡ

ಸಾಯಕಲ

ವೆಲಿಂಗ್ಟನ

ಸಾಯಕಲ ಮತ್ತು ಮೋಟಾರ

ಕಂಪನಿ, ಹೊರ್ನಬೀ ರೋಡ, ಮುಂಬಯಿ ನಂಬರ ೧.

ಅರ್ಸೆನಲ ರೋಡ, ಪುಣೆ

ಶ್ರೀ॥ ಕರ್ಕಿಯವರ ಖುಲಾಸೆ.

ಆಯ್ಯಾ,

ತಾ ೧೫-೩ ೨೬ ನೇ 'ಕಾನಡಾವೃತ್ತ'ದಲ್ಲಿ ನನ್ನ ವಿಷಯಕ್ಕೆ ಅಧ್ದ ಗೃಹಿಕೆಯಿಂದ ಕೆಲವು ಸಂಗತಿಗಳ ಬಗ್ಗೆ ಉಲ್ಲೇಖವಾದದ್ದು ನಿನ್ನೆ ತಾರೀಕಿನ ದಿವಸ ನನ್ನ ತಿಳುವಳಿಕೆಗೆ ಬಂತು ಆ ಬಗ್ಗೆ ಇದರಡಿಯಲ್ಲಿ ಬರೆದ ಮಜಕೂರನ್ನು ತಮ್ಮ ಮಾನ್ಯ ಪತ್ರದಲ್ಲಿ ಮುದ್ರಿಸಬೇಕಾಗಿ ವಿನಂತಿ ನಾನು ರಾಷ್ಟ್ರೀಯನೆಂದು ಅರಿಸಲ್ಪಟ್ಟದ್ದು ನಿಜ. ಅಖಿಲ ಭಾರತೀಯ ರಾಷ್ಟ್ರೀಯ ಸಭೆಯು ರರಾವು ಸ್ವರಾಜ್ಯಸ್ವರನ್ನು ಉದ್ದೇಶಿಸಿರುತ್ತವೆಂಬುವನ್ನು ನಾನು ಪ್ರತ್ಯೇಕ ಹೇಳಬೇಕಾಗಿಲ್ಲ ಮುಂಬೈ ಶಾಯಿದ ಕೌನ್ಸಿಲ ಸ್ವರಾಜ್ಯ ಪಕ್ಷದ ಮೆಂಬರನು ನಾನಿರಲಿಲ್ಲ ನನ್ನನ್ನು ಸೇರಿಸಿಕೊಳ್ಳಲಿಲ್ಲ ನಾನು ಶ್ರೀ ಶಂಕರರಾವ ದೇವ, ಜೋಗ ವಗೈರೆ ೧೨ ಜನರು ಆ ಪಾರ್ಟಿಯ ಸಂಗಡಿಗರಾಗಿ ಮಾತ್ರ ಸೇರಿಕೊಂಡಿದ್ದೆವು ಆ ಭಾ ಕಾಂ ಕಮಿಟಿ ಠರಾವ ಪ್ರಕಾರ ಮುಂಬೈ ಕಾಯಿದೆ ಕೌನ್ಸಿಲ್ಲ ಸ್ವರಾಜ್ಯ ಪಾರ್ಟಿಯವರು ಹೊರಬೀಳುವ ಪೂರ್ವದಲ್ಲಿ ತಮ್ಮ ಸಂಗಡಿಗರಾದ ೧೨ ಜನರಾದ ನಮ್ಮನ್ನು ಕೌನ್ಸಿಲತ್ಯಾಗದ ಕೆಲಸದಿಂದ ಮೋಕಳೀಕ ಮಾಡಿ ನಮ್ಮ ಸಹಕಾರಿತ ಬಗ್ಗೆ ಕೃತಜ್ಞತೆಯನ್ನು ವ್ಯಕ್ತಪಡಿಸಿದರು ನಾವು ೧೨ ಮಂದಿಯಾದರೂ ಕೌನ್ಸಿಲ ಮುಂದೆ ಬರಬಹುದಾದ ವಿಷಯಗಳ ಮೇಲೆ ಜನರ ಹಿತದ ಸಲುವಾಗಿ ಮಾತಾಡಲು ಉಳಿಯಬೇಕೆಂದು ಹೇಳಿಕೆ ಅದ್ದರಿಂದ ಕೌನ್ಸಿಲದಲ್ಲಿ ೧೨ ಮಂದಿ ಬಿಟ್ಟಬೆಂದ ಉಳಿಯ ಬೇಕಾಯಿತು ಸ್ವರಾಜ್ಯಸ್ವ ಪಾರ್ಟಿ ಸಂಗಡಿಗರು (ಸಹಕಾರಿಗಳು) ಯಾರೂ ಹೊರಬೀಳಲಿಲ್ಲ ಸಹಕಾರಿಗಳಾದ ಶ್ರೀ॥ ಲಕ್ಷ್ಮಣರಾವ ಧೋಪಟಕರ ಶ್ರೀ॥ ಶಂಕರರಾವ ದೇವ ಇವರಂತೆ ಶ್ರೀ॥ ಕರ್ಕಿಯವರೂ ಸಹ ಕೌನ್ಸಿಲ ಹೊರಬಿದ್ದರೆ ಕಾಸರಾ ಜಿಲ್ಹೆಗೆ ಭೂಷಣವಿತ್ತೆಂಬ ತಮ್ಮ ಬರಿಯುತ್ತೀರಿ ಇದು ಖರಾಬವ ಅಲ್ಲ ಶ್ರೀ॥ ಜೋಪಟಕರ ಇವರು ಸ್ವರಾಜ್ಯಸ್ಥರು. ಇವರು ಸಹಕಾರಿಗಳಲ್ಲ ಇವರು ಕೌನ್ಸಿಲತ್ಯಾಗ ಮಾಡಿದ್ದು ಸ್ವರಾಜ್ಯಸ್ಥನಾಯಿಂದ ಆಗಿರುತ್ತವೆ ಶ್ರೀ॥ ಶಂಕರರಾವ ದೇವರು ಸಹಕಾರಿಗಳು (ಸಂಗಡಿಗರು) ಎಂಬುವದು ನಿಜ ಆದರು ಹೊರಬೀಳಲೇ ಇಲ್ಲ ನಾನೂ ಅವರೂ, ಇನ್ನು ಕೆಲವರು ಬಿಟ್ಟಬೆಂದ ಉಳಿದೆವು ಇದು ಕೌನ್ಸಿಲ ಪ್ರೊಸೀಡಿಂಗ್ಸ ಓದುತ್ತಿದ್ದ ತಮ್ಮ ತಿಳುವಳಿಕೆಯಲ್ಲಿ ಹ್ಯಾಗೆ ಬರಲಿಲ್ಲೆಂಬ ಸಂಗ್ತಿ ಬಗ್ಗೆ ಆಶ್ಚರ್ಯ ತೋರುತ್ತದೆ ಸಂಗಡಿಗರ ಕೂಟದಲ್ಲಿ ಸೇರಿದ್ದ ನಾನಾವರೂ ಉಳಿದೆ ಬರುವದೆಂತು? ಕೌನ್ಸಿಲತ್ಯಾಗದ ಪ್ರಶ್ನದಲ್ಲಿ ಟೀಕಿಸಲು ದಲಿಕ್ಕೆ ಅನರ್ಹನೆಂದು ನನಗೆ ತೋರುತ್ತದೆ ಕೌನ್ಸಿಲತ್ಯಾಗದ ವಿಷಯದಲ್ಲಿ ತಮ್ಮ ಟೀಕೆಯನ್ನು ಓದಿದ ಜನರಿಗೆ ನನ್ನ ವಿಷಯಕ್ಕೆ ಆಗಿರಬಹುದಾದ ತಪ್ಪುಗ್ರಹಿಕೆಯು ಇದರಿಂದ ದೂರಾದೀತಾಗಿ ಕೋರುತ್ತೇನೆ ಮುಂಬೈ ಕ್ರಾನಿಕಲ್ ಪತ್ರಿಕೆಯಲ್ಲಿ ಈ ವಿಷಯು ತಪ್ಪು ಉಲ್ಲೇಖವಾದದ್ದರ ಸಂಧಿ ಸಾಧಿಸಿ ಶೀಘ್ರಬುದ್ಧಿಗಳಾದ ಕೆಲವರು ನನ್ನ ಮೇಲೆ ಎದ್ದುಬಿದ್ದಾರೆಂಬ ಭಾವನೆ ಬಂದು ಆ ಬಗ್ಗೆ ನಾನು ಆ ಪತ್ರಕ್ಕೆ ಪತ್ರಬರೆದು ಖುಲಾಸೆ ಮಾಡಿರುತ್ತೇನೆ ಪತ್ರಿಕೆಯಲ್ಲಿ ಆದ ತಪ್ಪನ್ನು ಸಹ ಅವರೇ ಕಾರಣೇರಿನ ದುರುಸ್ತಿ ಸಹ ಮಾಡಿರುತ್ತಾರೆ ಹೀಗಿದ್ದರೂ ಇಲ್ಲಿಯ ಕಾಂಗ್ರೆಸ ಕಮಿಟಿಯೂ ನನ್ನ ಮೇಲೆ ಕಾರಣವಿದ್ದದರಿಂದ ಪುನಃ ನನ್ನ ಸಮರ್ಥನೆಯನ್ನು ಅಲ್ಲಿ ಸಹ ಮಾಡಿಕೊಳ್ಳುವ ಪ್ರಸಂಗ ಬದಗಿತು. ಪ್ರೀತಿ ಇರಲಿ.

ಹೊನ್ನಾವರ, ೨೫-೩—೨೬

ವೆಂಕಟನಾದ ದೇವರಭಟ್ಟ ಕರ್ಕಿ. ಎಮ್. ಎಲ್. ಸಿ, ಕಾನಡಾ

— ಜೋಧಪುರದ ಮಹಾರಾಜರ ಕಟಪ್ಪಣಿ! ವೇಶ್ಯಾ ಸ್ತ್ರೀಯರ ಸಹವಾಸ ಮಾಡುವ ಸಂಸ್ಥಾನದ ಅಧಿಕಾರಿಗಳಿಗೆ ಒಂದು ತಿಂಗಳ ಪಗಾರದಷ್ಟು ದಂಡ ವಿಧಿಸುವ ಶಾಸನ ಹೊರಟಿದೆ. ಪತ್ರ ಹಚ್ಚಿದ ಬಗೆ ಹೇಗೆ?

— ಕೊಲ್ಹಾಪುರದ ಮಹಾರಾಜರು ಕರುಕರಿಗೆ ಸೇವುಗಿಗಳ ಶಿಕ್ಷ್ಯವಾಗದಂತೆ ಹುಕುಮವನ್ನು ಹೊರಡಿಸಿರುವರು.

ಪ್ರಶ್ನಮಾಲಿಕೆ.

ಕರ್ನಾಟಕ ವಿದ್ಯಾಪೀಠದ ಬಗ್ಗೆ

(೧) ಭಾಷಾನುಕ್ರಮವಾಗಿ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಬೇಕೆಂಬ ತತ್ವವು ನಿಮಗೆ ಮಾನ್ಯವಿರುವದೋ? ಮಾನ್ಯವಿದ್ದರೆ, ಕರ್ನಾಟಕದಲ್ಲಿ ಈ ತರದ ವಿಶ್ವವಿದ್ಯಾಲಯವನ್ನು ಸ್ಥಾಪಿಸುವ ಸಮಯವು ಈಗ ಬಂದಿರುವದೆಂದು ನಿಮಗೆ ತೋರುವದಿಲ್ಲವೋ? (ಈ ಸಂದರ್ಭದಲ್ಲಿ ಮುಂಬೈ ಸರಕಾರದವರು ಈ ತತ್ವವನ್ನು ಒಪ್ಪಿಕೊಂಡಿರುವರೆಂಬವನ್ನು ಅವರ ವಿಶ್ವವಿದ್ಯಾಲಯದ ಸುಧಾರಣಾ ಕಮಿಟಿ (೧೯೨೪-೧೯೨೫ ಯ ವರದಿಯ ಪುಟ ೪೬ ಪರಿಚ್ಛೇದ ೫೯ರಲ್ಲಿ ನೋಡಬಹುದು ಮುಂಬೈ ವಿಶ್ವವಿದ್ಯಾಲಯದವರೂ ಈ ತತ್ವವನ್ನು ಒಪ್ಪಿಕೊಂಡಿರುವರು.) (೨) ಬ್ರಿಟಿಶ ಕರ್ನಾಟಕಕ್ಕೆ, ಅಂದರೆ ಮುಂಬೈ-ಮದ್ರಾಸ ಇಲಾಖೆಗಳೊಳಗಿನ ಕರ್ನಾಟಕ ಭಾಗ ಹಾಗೂ ಕೊಡಗು ಪ್ರಾಂತಗಳಿಗೆ ಒಂದು ಪ್ರತ್ಯೇಕ ವಿಶ್ವವಿದ್ಯಾಲಯವು ಇರುವದು ಯೋಗ್ಯವಾಗುವದೆಂದು ನಿಮಗೆ ತೋರುವದೋ? (೩) ಭಾವೀ ಕರ್ನಾಟಕ ವಿಶ್ವವಿದ್ಯಾಲಯವು ಯಾವ ಮಾದರಿಯದಿರಬೇಕೆಂದು ನಿಮ್ಮ ಅಭಿಪ್ರಾಯವು? ಅದು ಯುನಿಟರಿ ಅಂದರೆ, ಒಂದೇ ಕೇಂದ್ರದಲ್ಲಿ ಎಲ್ಲ ಕಾಲೇಜುಗಳಿದ್ದು ಕಲಿಸುವ ಜವಾಬ್ದಾರಿಯನ್ನು ಸಹ ಹೊತ್ತು, ಅಥವಾ ಫೆಡರೇಟೆಡ್ ಅಂದರೆ ಬೇರೆ ಬೇರೆ ಕೇಂದ್ರಗಳಲ್ಲಿ ಕಾಲೇಜುಗಳಲ್ಲಿದ್ದು ಅವು ತಮ್ಮ ತಮ್ಮ ವ್ಯವಸ್ಥೆಯನ್ನು ನೋಡಲಿಕ್ಕೆ ಸ್ವತಂತ್ರವಿದ್ದರೂ,ಅವೆಲ್ಲವೂ ಒಂದೇ ಮಧ್ಯಸ್ಥ ಶೈಕ್ಷಣಿಕ ಮೇಲ್ವಿಚಾರಕ ಮಂಡಳಿಗೆ ಒಳಪಟ್ಟ ಅಥವಾ ಅಫಿಲಿಯೇಟೆಡ್ ಅಂದರೆ ಈಗಿರುವ ಮುಂಬೈ ವಿಶ್ವವಿದ್ಯಾಲಯಗಳಂತೆ ಕೇವಲ ಪರೀಕ್ಷಕ ವಿದ್ಯಾಲಯವಿರಬೇಕೋ? (೪) ಬ್ರಿಟಿಶ ಕರ್ನಾಟಕಕ್ಕೆ ಒಂದು ಪ್ರತ್ಯೇಕ ವಿಶ್ವವಿದ್ಯಾಲಯವನ್ನು ಸ್ಥಾಪಿಸುವದು ಶಕ್ಯವಿಲ್ಲದಿದ್ದರೆ, ಸದ್ಯಕ್ಕೆ ಮೈಸೂರ ವಿಶ್ವವಿದ್ಯಾಲಯವನ್ನೇ ಅಖಿಲ ಕರ್ನಾಟಕ ವಿಶ್ವವಿದ್ಯಾಲಯವನ್ನಾಗಿ ಮಾಡಿಕೊಳ್ಳುವದು ಯೋಗ್ಯವಾಗುವದೋ?ಹಾಗಾದ ಪಕ್ಷದಲ್ಲಿ ಅದನ್ನು ಯಾವ ಕರಾರುಗಳ ಮೇಲೆ ಮಾಡಿಕೊಳ್ಳಬೇಕು? (೫) ಈ ಎರಡು ವಿಶ್ವವಿದ್ಯಾಲಯಗಳಲ್ಲಿ ಇಡೀ ಬ್ರಿಟಿಶ ಕರ್ನಾಟಕಕ್ಕೆ ಯಾವದು ಹೆಚ್ಚು ಮಾನ್ಯವಾಗುವದು? (೬) (ಅ) ಬ್ರಿಟಿಶ ಕರ್ನಾಟಕ ವಿಶ್ವವಿದ್ಯಾಲಯವನ್ನು ಸ್ಥಾಪಿಸಬೇಕೆಂದು ನಿಮ್ಮ ಅಭಿಪ್ರಾಯವಿದ್ದರೆ, ಅದನ್ನು ಸ್ಥಾಪಿಸಲಿಕ್ಕೆ ಯಾವ ಉಪಾಯಗಳನ್ನು ಸೂಚಿಸುವಿರಿ? (ಬ) ಮೈಸೂರ ವಿಶ್ವವಿದ್ಯಾಲಯವನ್ನು ಅಖಿಲ ಕರ್ನಾಟಕ ವಿಶ್ವವಿದ್ಯಾಲಯವನ್ನು ಮಾಡಿಕೊಳ್ಳಬೇಕೆಂದು ನಿಮ್ಮ ಮತವಿದ್ದರೆ ಅದರ ಸಂಬಂಧ ಯಾವ ಉಪಾಯಗಳನ್ನು ನೀವು ಸೂಚಿಸುವಿರಿ? (೭) ಎಲ್ಲ ವಿಷಯಗಳಲ್ಲಿಯೂ ಕರ್ನಾಟಕದ ಏಳಿಗೆಯಾಗಬೇಕಾದರೆ ಕರ್ನಾಟಕವು ಒಂದು ಪ್ರತ್ಯೇಕ ಪ್ರಾಂತವಾಗುವದು ಅವಶ್ಯವಿರುವದೆಂದು ತಮಗೆ ತೋರುವದಿಲ್ಲವೇ? (೮) ಒಂದು ಏಕೀಕೃತ ಕರ್ನಾಟಕ ಪ್ರಾಂತವಾಗಬೇಕೆಂಬ ಧ್ಯೇಯವನ್ನು ಸಾಧಿಸಿಕೊಳ್ಳಲಿಕ್ಕೆ ಯಾವ ಸಾಧನಗಳನ್ನು ತಾವು ಸೂಚಿಸುವಿರಿ? (೯) ಈ ಏಕೀಕರಣದ ಬಗ್ಗೆ ತಮ್ಮ ಆಕ್ಷೇಪಗಳೇನಾದರೂ ಇವೆಯೋ? ಇಲ್ಲವಾದರೆ ಯಾವ ಆಕ್ಷೇಪಗಳಿಗಾದರೂ ಆಸ್ಪದವಿರುವದೋ? (೧೦) ಈ ವಿಷಯದ ಬಗ್ಗೆ ಪ್ರಶ್ನೋತ್ತರದಲ್ಲಿ, ಪ್ರಶ್ನೆಗಳು ತಮ್ಮ ಲಕ್ಷ್ಯದಲ್ಲಿಕ್ಕೆ ಬರುವವೋ? ಬಂದರೆ ಅವುಗಳನ್ನು ಬರೆದು ಅವುಗಳಿಗೆ ದಯವಿಟ್ಟು ಉತ್ತರಗಳನ್ನು ಕೊಡಬೇಕು.

ವಿವಿಧ ಸಂಗ್ರಹ.

ಅದ್ಭುತ ಗಜಯುದ್ಧ.

ಜೆಮಶೇಟಪುರದಿಂದ ೩೨ ಮೈಲು ದೂರವಿರುವ 'ರಾಖಾ ಮೈನ್ಸ್' ಎಂಬಲ್ಲಿ ದೊಡ್ಡದೊಂದು ಗಜಯುದ್ಧವಾಯಿತು. ಕಾರಣವೇನು ತಿಳಿಯದು. ಮಾರ್ಚ ೧೪ ನೇ ತಾರೀಖಿನ ಹಗಲು ಸಮಯ ಎರಡು ಆನೆಗಳೊಳಗೆ ಕಲಹವೆದ್ದಿತು. ಕೆಲ ಹೊತ್ತು ಗುಡ್ಡದ ಮೇಲೆ ತಿಕ್ಕಾಟವಾಗಿ, ಎರಡೂ ಆನೆಗಳು ಗುಡ್ಡದ ಕೆಳಕ್ಕಿಳಿದವು. ಕೆಳಗೆ ತಾಮ್ರದ ಗಣಿಗಳಿವೆ. ಅಲ್ಲಿ ಗಣಿಗಳಲ್ಲಿ ಕೆಲಸಮಾಡುವ ಕೂಲಿಯಾಳುಗಳ ಮನೆಗಳಿವೆ. ಮಬ್ಬಿನ ಸಮಯ ಎರಡೂ ಆನೆಗಳೊಳಗೆ ಘನಘೋರ ಸಂಗ್ರಾಮವು ನಡೆಯಿತು. ಸಂಗ್ರಾಮದ ಸಮಯ ಎರಡೂ ಆನೆಗಳು ನಡಿಸುವ ಚೀರಾಟವನ್ನು ಕೇಳಿ, ಜನರೆಲ್ಲರೂ ಹಾಹಾಕಾರ ಮಾಡಹತ್ತಿದರು. ಆನೆಗಳು ಪರಸ್ಪರ ಸಾಗಿಕೊಂಡವು. ಇಡೀ ರಾತ್ರೆ ಈ ಸಂಗ್ರಾಮವು ನಡೆಯಿತು. ಜನರೇನು ಭಯಗ್ರಸ್ತರಾಗಿದ್ದರು. ಮನೆಗಳ ಬದಿಗೆ ಆನೆಗಳು ರಣಕ್ಷೇತ್ರಕ್ಕಾಗಿ ಕೊಡುವಷ್ಟು ಬಂದರೆ, ಅರಿವೆಗಳಂತೆ ಜನರಿಗೆ ಪ್ರಾಣತ್ಯಾಗವಾಗುವ ಪ್ರಸಂಗವೇ. ಕಟ್ಟಕಡೆಗೆ, ಹ್ಯಾಗೂ ಮಾಡಿ ರಾತ್ರೆಗಳೆದರು. ಬೆಳಗಾದ ಬಳಿಕ ನೋಡುತ್ತಾರೆ, ಒಂದು ಆನೆಯು ಒಂದು ಕೊಳದಲ್ಲಿ ಬಿದ್ದಿದೆ; ಮೈಮೇಲೆಲ್ಲ ನೆತ್ತರವು ತುಂಬಿಹೋಗಿದೆ; ಗಾಯಗಳಾಗಿವೆ; ತಲೆಯು ಜಜ್ಜಿದೆ. ಅನೇಕರು ಆ ಆನೆಯ ಕೋರೆಹಲ್ಲುಗಳನ್ನು ಕಿತ್ತು ತಾವು ಪಡೆಯಬೇಕೆಂದು ಬಯಸಿ ಹುಡುಕಿದರೆ, ಕೋರೆ ಹಲ್ಲುಗಳೆಲ್ಲಿಯೂ ಸಿಗಲಿಲ್ಲ. ಯಾರೋ ಒಬ್ಬರು ಆನೆಗಳ ಕಾದಾಟ ನೋಡುತ್ತ ಇಡೀ ರಾತ್ರಿ ಕಾದು ಕೂತು ಈ ಆನೆ ಸತ್ತ ಸಂಧಿ ಸಾಧಿಸಿ, ರಾತ್ರಿಯೇ ಕೋರೆ ಹಲ್ಲುಗಳನ್ನು ಕಡಿದೊಯ್ದರೆಂದು ಅನೇಕರು ಅನುಮಾನಿಸಿದರು. ಜನರೆಲ್ಲರೂ ಗುಂಪು ಗುಂಪಾಗಿ ಸೇರುತ್ತಿದ್ದರು. ಅತ್ತ ಕಾಡಿನೊಳಗಿಂದ ಎರಡನೇ ಆನೆಯು ಚೀರುತ್ತಿತ್ತು. ಆದುದರಿಂದ ಯಾರೂ ಮುಂದೆ ಹೋಗಲು ಧೈರ್ಯಪಡುತ್ತಿದ್ದಿಲ್ಲ. ಮೂರನೇ ದಿವಸ ಆ ಆನೆಯು ೧೦ ಮೈಲು ದೂರ ಸತ್ತು ಬಿದ್ದ ಸುದ್ದಿ ಹತ್ತಿತು. ಅಲ್ಲಿ ಹೋಗಿ ನೋಡಿದರೆ, ಆನೆಗೆ ೪ ಕೋರೆ ಹಲ್ಲುಗಳಿದ್ದವು. ೨ ಆ ಆನೆಯ ಸ್ವಂತ ಹಲ್ಲುಗಳು. ಇನ್ನೆರಡು ಮುಂಚಿನ ದಿವಸ ಸತ್ತುಬಿದ್ದ ಆನೆಯವು. ಈ ಎರಡೂ ಹಲ್ಲುಗಳು ಸೊಂಡಿಲು ಬದಿಯಿಂದ ಕಣ್ಣಿನವರೆಗೆ ಸೇರಿ ಒಳಗೆ ತುಂಡಾಗಿದ್ದವು. ಹೀಗೆ ಈ ಯುದ್ಧದಿಂದ ಎರಡೂ ಆನೆಗಳು ಸತ್ತುಹೋದವು. ಭಯಂಕರ ಪ್ರಕಾರ!!

ಖಾದಿಯ ಪ್ರದರ್ಶನ

ದಿಲ್ಲಿಯಲ್ಲಿ ಸೇರಿದ ಅಗರವಾಲಾ ಮಹಾಸಭೆಯವರು ಸೇರಿಸಿದ ಖಾದಿಯ ಪ್ರದರ್ಶನವು ಕಳೆದ ೧೫ ನೇ ತಾರೀಖಿಗೆ ಲಾಲಾ ಲಜಪತರಾಯರವರಿಂದ ತೆರೆಯಲ್ಪಟ್ಟಿತು. ಅದು ತಾರೀಖು ೨೨ ನೇ ವರೆಗೆ ತೆರೆದಿತ್ತು. ಪ್ರದರ್ಶನದಲ್ಲಿ ಸಮಸ್ತ ಪ್ರಾಂತಗಳಲ್ಲಿ ಹುಟ್ಟಿನ ಖಾದಿಯು ಇಡಲ್ಪಟ್ಟಿತ್ತು. ಖಾದಿಯಲ್ಲಿ ಸರತರದ ಪ್ರಕಾರಗಳಿದ್ದವು. ಸಮಸ್ತ ಪ್ರಕೃತಿಯ ಮಂದಿಗಳಿಗೆ ಯೋಗ್ಯವಾದ ಖಾದಿಯು ಪ್ರದರ್ಶನದಲ್ಲಿ ಇಡಲ್ಪಟ್ಟಿತ್ತು. ೭೦೦ ನಂಬರದ ವರೆಗಿನ ನೂಲೂ ಇತ್ತು. ಹಳೆಯ ಮೊಗಲಾಯಿ ಕಾಲದ ಉಡುಪುಗಳೂ, ಢಾಕ್ಕಾ ಮಲಮಲುಗಳೂ, ಸ್ವದೇಶದಲ್ಲಿ ತಯಾರಾದ ನಯನ ಮನೋಹರವಾದ ಚಿತ್ರಗಳು ಪ್ರದರ್ಶಿಸಲ್ಪಟ್ಟಿದ್ದವು. ಅಖಿಲ ಭಾರತೀಯ ಕೈರಾಟ ಸಂಘದ ಭಂಡಾರದವರೂ, ಪಂಜಾಬದ ಖಾದಿ ಬೋರ್ಡಿನವರೂ, ಬಂಗಾಲದ ಖಾದಿ ಪ್ರತಿಷ್ಠಾನದವರೂ, ಬಿಹಾರದ ಖಾದಿ ಪುಟ್ಟರದವರೂ ತಮ್ಮ ತಮ್ಮ ಸಂಸ್ಥೆಗಳಿಂದ ನಡೆಯುವ ಖಾದಿಪ್ರಸಾರ ಕಾರ್ಯವನ್ನು ಸಪ್ರಯೋಗ ಸಿದ್ಧಪಡಿಸುತ್ತಿದ್ದರು. ಬಂಗಾಲದ ಖಾದಿ ಪ್ರತಿಷ್ಠಾನದ ಕೈರಾಟಿಯ ಮೇಲೆ ವಿ| ಉಸ್ಮಾನ ಅಲ್ಲಿಯವರು ತಾಸಿಗೆ ೧೩ ೦೦ ದ ೧೮ ನಂಬರಿನ ೧೫೦ ಗಜ ವೇಗದಿಂದ ನೂಲುವ ಪ್ರಯೋಗವು ಅತ್ಯದ್ಭುತವಾಗಿತ್ತು. ಇದನ್ನು ನೋಡಿ, ಪ್ರೇಕ್ಷಕರೆಲ್ಲರೂ ಚಕಿತರಾದರು. ಇದಲ್ಲದೆ, ಪ್ರತಿಷ್ಠಾನದವರು ಮೆಜಿಕ್ ಲ್ಯಾಂಟರ್ನಿನ ಚಿತ್ರಗಳನ್ನು ತೋರಿಸಿ, ದಿನಾ ಸಾಯಂಕಾಲಕ್ಕೆ ಖಾದಿಯ ಪಾಠಗಳನ್ನು ಹೇಳಿಕೊಡುತ್ತಿದ್ದರು. ಅವನ್ನು ನೋಡಲಿಕ್ಕೆ ನೂರಾರು ಮಂದಿಗಳು ಸೇರುತ್ತಿದ್ದರು.

ಪ್ರಕಟನೆ.

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರೆನ್ಸ ಕಂಪನಿ, ಬೆಂಗಳೂರ.

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೩೬ನೆಯ ಇಸ್ವಿ ಜನೇವರಿ ೩೧ನೆಯ ತಾರೀಖಿನ ದಿವಸ ಸಾಯಂಕಾಲ ೫-೩೦ ಘಂಟೆಗೆ ಈ ಕಂಪನಿಯ ಹೆಡ್ ಆಫೀಸಿನಲ್ಲಿ ಸಾರ್ವಜನಿಕವಾಗಿ ಚುನಾಯಿಸಲ್ಪಟ್ಟ ಬೋರ್ಡ್ ಆಫ್ ಡಾಯರೆಕ್ಟರ್ಸ್ ಚೇರಮನ್ನರಾದ ರಾವಸಾಹೇಬ ಡಾ| ಕೆ. ಎಸ್. ಭಾಸ್ಕರ L. R. C. P M. R. C S. ಇವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ಬದ್ಧಿ ಮುತ್ತು ಜತೆ ಇದ್ದದ ೧೦೦೦ ರೂಪಾಯಿಗಳ ಮೊತ್ತವು ದೊರೆಯಬೇಕೆಂದು ನಿರ್ಣಯವಾಯಿತು.

(೧)	ಬಾಂಡ ನಂಬರ ೫೬೮೦	ಮಿ| ವಿಠ್ಠಲ ಬಸ್ಯಾಡ ಸೇಠ್ ಕೆಲಾಫ್ ಅಲಿಬಾಗ ಮುಂಬೈ	...	೧೦೦೭
(೨)	ಬಾಂಡ ನಂ| ೧೩೬೦೬	ಮಿ| ರಂಗಪ್ಪ ಶ್ಯಾನಭೋಗ ಹುಲಿಕುಂಟೆ, ಪೋಸ್ಟ ಸಿರಾ. ತಾಲೂಕ ಸಿರಾ, ಜಿಲ್ಲಾ ತುಮಕೂರ.	...	೧೨೦೦
(೩)	ಬಾಂಡ ನಂ| ೧೪೯೯೬	ಮಿ| ವೆಂಕಟರಮಣ ವೆಂಕಟರಮಣ ಹೆಗಡೆ, ಸ್ವೇಶ್ವರಿ, ಹೆಬ್ಬಳ್ಳಿ, ಹೊನ್ನಾವರ ಪೋ| (ನಾರ್ಥ ಕ್ಯಾನರಾ) ಜಿಲ್ಲಾ.	...	೧೦೦೦
೪)	L. B. C. " ೧೮೭೩	ಮಿ| ಜಿ. ವೆಂಕಟಪ್ಪ ಮರ್ಚಂಟ ಮತ್ತು ಜಮೀನದಾರ. ಬ್ರೂಸಪೇಟ, ಬಳ್ಳಾರಿ		೩೬೦೦
(೫)	" ೨೫೨	ಮಿ| ರಾಮಚಂದ್ರ ಮಾಮನ್ ಕಾಂಚೀಕರ C/o ಕಾಲೂಸ್ಕರ ಮಾಡಾ, ಮ್ಯುಲೇಸ ರೋಡ, (ಪುಣೇ.)		೧೦೦೦
(೬)	" ೧೮೪೦	ಮಿ| ಆರ್. ಎಚ್ ನಾಟೆಕರ್, ಮಾಸ್ತರ, ಗವರ್ನಮೆಂಟ ಸಿಟಿ ಹಾಯಸ್ಕೂಲ, ಹೈದರಾಬಾದ (ದಕ್ಷಿಣ.)		೯೦೦೯

ಬಿ. ಎನ್. ಆರಾಧ್ಯ,

ಮುಂಬಯಿ ಇಲಾಖೆಯ, ಚೀಫ್ ಏಜಂಟ, ಹುಬ್ಬಳ್ಳಿ.

ಅತ್ಯದ್ಭುತ! ಅಮೇರಿಕಾ ಖಂಡದ ಅತ್ಯದ್ಭುತ!!

ಪ್ರಸಿದ್ಧ ಡಾಕ್ಟರನೊಬ್ಬನು ಕಂಡು ಹಿಡಿದ ಸಿದ್ಧೌಷಧ!

ಸರ್ವರೋಗ ನಿವಾರಣೆಯಾಗುವ ಸಂಜೀವನೌಷಧವನ್ನು ಕಂಡು ಹಿಡಿಯುವದಕ್ಕಾಗಿ ಅಮೇರಿಕಾ ಖಂಡದ ಪ್ರಖ್ಯಾತ ಡಾಕ್ಟರನೊಬ್ಬನು ಅನೇಕ ವರ್ಷಗಳಿಂದ ಬಹು ಧನ ನಷ್ಟ ಮಾಡಿಕೊಂಡು ಪರಿಶೋಧನೆಗಳನ್ನು ಮಾಡಿ ಕೊನೆಯಲ್ಲಿ

ಎಲಿಕ್ಝಿರ್ ಆಫ್ ಲೈಫ್

ಅಥವಾ

ಜೀವನಾಧಾರ

ಎಂಬ ಔಷಧವನ್ನು ಸಿದ್ಧಗೊಳಿಸಿರುವನು. ಅನುಭವಿಕರಿಂದ ಅನೇಕ ರೋಗಗಳಿಗೆ ಎಂದರೆ, ಅಗ್ನಿಮಾಂದ್ಯ, ಅಜೀರ್ಣ, ಹೊಟ್ಟೆ ಅಥವಾ ತಲೆ ಭಾರವಾಗಿರುವುದು, ಅತಿಸಾರ, ವಾಂತಿ, ಭೇದಿ ಅಥವಾ ಕಾಲರಾ, ತಲೆನೋವು, ನೆಗಡಿ, ಮಲೇರಿಯಾ ಜ್ವರ, ಇತರ ವಿವಿಧವಾದ ಜ್ವರಗಳು, ಮಾನಸಿಕ ದೌರ್ಬಲ್ಯ, ಕಣ್ಣು ಮತ್ತು ಕಿವಿ ನೋವು, ಮೂಲವ್ಯಾಧಿ, ನಾಯಿಕೆಮ್ಮು, ಸ್ತ್ರೀವ್ಯಾಧಿ ಮುಂತಾದ ಎಲ್ಲ ಬಗೆಯ ಸಾಂಕ್ರಾಮಿಕ ರೋಗಗಳಿಗೆ, (ಇನ್‌ಫ್ಲುಯೆಂಜಾ, ಪ್ಲೇಗ) ಹಾವು, ಚೇಳು, ಮುಂತಾದ ವಿಷ ಜಂತುಗಳ ಕಡಿತಕ್ಕೆ, ಬಾಲಗ್ರಹ ಇವೇ ಮುಂತಾದವುಗಳಿಗೆ ಈ ಜೀವನಾಧಾರವನ್ನು ಕೊಟ್ಟು ಗುಣಪಡಿಸಿರುತ್ತಾನೆ. ಊರಿನಲ್ಲಿ ಸಾಂಕ್ರಾಮಿಕ ರೋಗವಿರುವಾಗ ಇದನ್ನು ಅಲ್ಪ ಪ್ರಮಾಣದಲ್ಲಿ ಉಪಯೋಗಿಸುತ್ತಿದ್ದರೆ ಯಾವ ರೋಗವೂ ಅಂಟುವದಿಲ್ಲ. ಈ ಜೀವನಾಧಾರವೆಂಬ

ಸಂಜೀವನೌಷಧ

ಒಂದು ಸೀಸೆಯು ಪ್ರತಿ ಮನೆಯಲ್ಲಿ ಅಥವಾ ಪ್ರತಿ ಒಬ್ಬನ ಜೇಬಿನಲ್ಲಿದ್ದರೆ ಅನುಭವಸ್ಥನಾದ ಡಾಕ್ಟರನೊಬ್ಬನು ಹತ್ತರವಿದ್ದಂತೆಯೇ, ಡಾಕ್ಟರರಿಗೆ ಕೊಡಬೇಕಾದ ಫೀಜುಗಳನ್ನು ಈ "ಜೀವನಾಧಾರ"ವೆಂಬ ಡಾಕ್ಟರರಿಗೆ ಕೊಡಬೇಕಾಗಿಲ್ಲ. ಸೀಸೆ ಒಂದಕ್ಕೆ ರೂ. ೧-೪-೦ ಟಪಾಲು ಖರ್ಚು ಪ್ರತ್ಯೇಕ ಆಲಾಯಿದಾ ಬೀಳುವುದು.

ಜೀವನಾಧಾರ ಡಿಪೋ,
ಮೈಸೂರು.

ಬ್ರಾಂಚ:- **ಜೀವನಾಧಾರ ಡಿಪೋ,**
ಹುಬ್ಬಳ್ಳಿ

ಕಾನಡಾವೃತ್ತ.

ಶ್ರೀ ಶುಕ್ಲನಾಮ ಸಂ॥ ಅಧಿಕ ಚೈತ್ರ ಶು॥ ೨ನೇ, ಸೋಮವಾರ

ಕುಟಿಲ ನೀತಿ.

ನಮ್ಮ ಆಳರಸರ ಕುಟಿಲ ನೀತಿಯು ಲೀಲೆಗಳನ್ನು ಬಣ್ಣಿಸುವದು ಬಹಳ ಕಠಿಣವು. ನಾರಂಗನೆಯಂತೆ ಸ್ಥಿತ್ಯಂತರಗಳಲ್ಲಿ ಕುಟಿಲ ನೀತಿಯು ರೂಪಾಂತರ ಹೊಂದುತ್ತದೆ. ಇಂದಿನ ಗೆಳೆಯನೋಪಾದಿಯಲ್ಲಿ ನಮಗೆ ನೆರವಾಗುವದು ನಾಳೆ ಶತ್ರುವಾಗಿ ಇದಿರಾಗುವದು. ಘಳಿಗೆಗೆ ತ್ರಯಸ್ಥನಂತೆ ಪ್ರೇಕ್ಷಕಸ್ಥಾನವನ್ನು ಆಕ್ರಮಿಸಿಕೊಂಡು ಅಲಿಪ್ತವಾಗಿ ಆಸನಸ್ಥವಾಗುವದು, ಕ್ಷಣಾರ್ಧದಲ್ಲಿ ಪರೋಪಕಾರದ ಸೋಗು ಹಾಕಿಕೊಳ್ಳುವದು, ಅರಪಳಿಗೆಯಲ್ಲಿಯೇ ಪಿತೃದ್ರೋಹ ಮಾಡಿ ಕತ್ತಿಗೆಯನ್ನು ಹಿಚುಕಿ ಕ್ರೂರ ಕೊಲೆ ಮಾಡುವದು. ಸಮಯ ವಿಶೇಷದಲ್ಲಿ ಮಂಥರೆಯಂತೆ ಸ್ವಕಲ್ಯಾಣದ ದುರುಪದೇಶ ಕೊಟ್ಟು, ಪ್ರಜೆಗಳಲ್ಲಿ ಬುದ್ಧಿಭೇದವನ್ನುಂಟು ಮಾಡುವದು. ಕುಟಿಲ ನೀತಿಯ ಪ್ರಯೋಗಗಳನ್ನು ಭಾರತೀಯರು ಪ್ರಸಂಗ ವಿಶೇಷದಲ್ಲಿ ಅನುಭವಿಸಿರುವರು. ಇಂದಿಗೆ ಇದೇ ಪ್ರಕಾರದ ಒಂದು ಪ್ರಸಂಗವನ್ನು ವಾಚಕರಿಗೆ ನಿವೇದಿಸಲಿಚ್ಛಿಸುವೆವು.

ಮುಂಬಯಿಯ ಕಾಯಿದೆ ಕೌನ್ಸಿಲಿನಲ್ಲಿ ಕಳೆದ ತಾರೀಖು ೧೯-೨೦ ನೇಗೆ ಪ್ರಶ್ನೋತ್ತರಗಳ ಸಮಯ ಶಿಕ್ಷಣ ಮಂತ್ರಿಗಳಾದ ನಾ॥ ಭಾಸ್ಕರರಾವ ಜಾಧವರವರಿಗೂ, ಕೌನ್ಸಿಲು ಸಭಾಸದರಿಗೂ ನಡೆದ ತಿಕ್ಕಾಟವನ್ನು ನಾವೆಲ್ಲರೂ ಪರಾಂಬರಿಸತಕ್ಕದ್ದು. ಕಳೆದ ಡಿಸೆಂಬರ ತಿಂಗಳಿನಲ್ಲಿ ನಾ॥ ಜಾಧವರವರು ಬ್ರಾಹ್ಮಣೇತರ ಪರಿಷತ್ತಿನ ಮದ್ರಾಸ ಅಧಿವೇಶನದ ಅಧ್ಯಕ್ಷರಾಗಿದ್ದರು. ಆ ಸಮಯ ಬ್ರಾಹ್ಮಣೇತರರ ಜಾಗೃತಿಯನ್ನು ಮುಂಬಯಿಯ ಪ್ರಾಂತಾಧಿಪರು ಆಸಕ್ತಿಯಿಂದ, ಕೌತುಕದಿಂದ ನಿರೀಕ್ಷಿಸುತ್ತಿದ್ದರೆಂದೂ, ಪ್ರಾಂತಾಧಿಪರ ನಿರೀಕ್ಷಣೆಯ ಕಕ್ಷೆಯು ಮುಂಬಯಿ ಪ್ರಾಂತದ ಸೀಮೆಯನ್ನೇ ವ್ಯಾಪಿಸಿರದೆ, ಇತ್ತ ಮದ್ರಾಸ, ಅತ್ತ ವರ್ಹಾಡದ ವರೆಗೆ ಹಬ್ಬಿರುವದೆಂದೂ ನಾ॥ ಭಾಸ್ಕರರಾಯರು ಹೇಳಿದರು. ಮತ್ತೊಂದು ಮಾತನ್ನೂ ನಾ॥ರವರು ಹೇಳಿದರು. ವರ್ಹಾಡದಲ್ಲಿ ಬ್ರಾಹ್ಮಣೇತರರ ಪ್ರತ್ಯೇಕ ಬಿಡಾರ ಸ್ಥಾಪಿಸುವದಕ್ಕೆ ತಮಗೆ ಪ್ರಾಂತಾಧಿಪರು ನೇಮಿಸಿದ್ದರೆಂದೂ ನಾ॥ ಜಾಧವರವರು ಹೇಳಿದರು. ಮುಂಬಯಿಯ ಪ್ರಾಂತಾಧಿಪರಾದ ನಾ॥ ವಿಲ್ಸನ್ ದೊರೆಗಳು ಅಧಿಕಾರಸೂತ್ರಗಳನ್ನು ಕೈಕೊಂಡು ಬಹುಕಾಲ ಕಳೆಯಲಿಲ್ಲ. ಅಷ್ಟರಲ್ಲಿ ಬ್ರಾಹ್ಮಣೇತರರ ಸುಖ-ದುಃಖಗಳ ಅರಿವುಂಟಾಗಿ ತಮ್ಮ ದಿವಾಣರನ್ನು ಆ ಕಾರ್ಯಕ್ಕಾಗಿ ನೇಮಿಸುವ ಬಗೆ ಹೇಗೆ? ರಾಷ್ಟ್ರ ಬಲ ಸಂವರ್ಧಕ ಕಾರಭಾರವನ್ನು ಏಕಾಗ್ರಚಿತ್ತದಿಂದ ಲೋಕಮತಪ್ರವಾಹಕ್ಕನುಕೂಲವಾಗಿ ನಡಿಸಬೇಕೆಂದು ದಿವಾಣಪದಗಳು ಜನ್ಮವನ್ನೆತ್ತಿದ್ದವು. ಆ ಕಾರ್ಯವನ್ನು ಅಷ್ಟಕ್ಕೇ ಬಿಟ್ಟುಕೊಟ್ಟು, ಆ ಕಾರ್ಯಕ್ಕಾಗಿ ನೇಮಿಸಿದ ತಲಬನ್ನು ತಿಂದು, ಮದ್ರಾಸ ವರ್ಹಾಡ ಪ್ರಾಂತಗಳಲ್ಲಿ ಬ್ರಾಹ್ಮಣೇತರ ಜಾಗೃತಿಯೆಂಬ ಪ್ರಜೆಗಳಲ್ಲಿ ಬುದ್ಧಿಭೇದ ಜನಿಸುವ ಉಪಾಧಿಯನ್ನು ರಚಿಸಲು ಪ್ರಾಂತಾಧಿಪರಂಥ ಭಾರತೀಯ ರಾಷ್ಟ್ರಕಲ್ಯಾಣಕರ್ತರು, ಸಾರ್ವಭೌಮರ ಪ್ರತಿನಿಧಿಗಳು ದುರುಪದೇಶ ಮಾಡುವ ಬಗೆ ಹೇಗೆ? ಈ ಕುರಿತು ವೃತ್ತಪತ್ರಗಳಲ್ಲಿ ಟೀಕೆಯಾಗಲು, ನಾ॥ ಜಾಧವರವರು ಹಾವು ಸಾಯುವಂತೆ, ಕೋಲು ಮುರಿಯದಂತೆ ಒಂದು ಖುಲಾಸೆಯನ್ನು ಪ್ರಕಟಿಸಿದರು. ಆದರಿಂದ ಯಾರಿಗೂ ಸಮಾಧಾನವಾಗದಿದ್ದರೆ ಆಶ್ಚರ್ಯವೇನಿಲ್ಲ. ನಾ॥ ಜಾಧವರಂಥ ದೂರದೃಷ್ಟಿಯಿಲ್ಲದ ಸೂತ್ರಗೊಂಬೆಗಳಿಗೆ ಪ್ರಾಂತಾಧಿಪರೇ ಸ್ವಾರ್ಥಾಂಧರಾಗಿ ಕುಣಿಸುತ್ತಾರೆಂಬ ಕಲ್ಪನೆಯು ಮಾತ್ರ ದೃಢವಾಯಿತು.

ನಮ್ಮ ಪ್ರಾಂತಿಕ ಕಾಯಿದೆ ಕೌನ್ಸಿಲಿನಲ್ಲಿ ರಾ॥ ಶಂಕರರಾವ ದೇವರವರು ಈ ಕುರಿತು ಪ್ರಶ್ನೆಗಳನ್ನು ಕೇಳಿದರು; ಇತರರೂ ಈ ಉತ್ತರಗಳೊಳಗಿನ ಅಸ್ಪಷ್ಟತೆಯನ್ನು ಹೋಗಲಾಡಿಸಲಿಕ್ಕಾಗಿ ಪ್ರಶ್ನೋತ್ತರಗಳ ಶಾಬ್ದಿಕ ಸಂಗ್ರಾಮದಲ್ಲಿ ಪ್ರವೇಶಗೊಂಡರು. ಮದ್ರಾಸದ ಅಧಿವೇಶನದಲ್ಲಿ ಭಾಷಣ ಮಾಡುವಾಗ ವರ್ಹಾಡ ಪ್ರಾಂತದಲ್ಲಿ ಬ್ರಾಹ್ಮಣೇತರ ಜಾಗೃತಿಯ ಬೀಜಾರೋಪಣ ಮಾಡುವದು ಪ್ರಾಂತಾಧಿಪರಿಂದ ತಮ್ಮ ಯೋಜನೆಯಾಗಿತ್ತೆಂಬ ಪ್ರಕಟವಾದದ್ದು ನಿಜವಿರುವದೇನೆಂದು ರಾ॥ ರಘುನಾಥರಾವ ಪರಾಂಜಪೆಯವರು ಪ್ರಶ್ನಿಸಲು, ಅದು ಸುಳ್ಳೆಂದು ನಾ॥ ಜಾಧವರವರೇ ಹೇಳಿದರು. ವರ್ತಮಾನಪತ್ರಗಳಲ್ಲಿ ಪ್ರಕಟವಾದ ಈ ವಿಧಾನವನ್ನು ನೀವು ಯಾಕೆ ತಿದ್ದಲಿಲ್ಲ? ಎಂದು ಕೇಳಲು, "ಹಾಗೆ ತಿದ್ದುವದವಶ್ಯವೆಂಬ ಅಭಿಪ್ರಾಯವು ತಮ್ಮದಿದ್ದಿಲ್ಲ"ವೆಂಬ ದೊಡ್ಡಸ್ತಿಕೆಯ ನೆವ ಹೇಳಿ, ನಾ॥ ಜಾಧವರವರು ಮೌನಾಗಲಕ್ಷಿಸಿದರು. "ಈಗಲಾದರೂ ತಿದ್ದಿರಿ," ಎಂದು ರಾ॥ ಪರಾಂಜಪೆಯವರು ಒತ್ತಾಯಪಡಿಸಲು, "ಬಹಳ ಹಳಸಿಹೋಯಿತು, ಈಗ ಏನೂ ಪ್ರಯೋಜನವಿಲ್ಲ," ಎಂಬರ್ಥದ ನುಡಿಗಳನ್ನಾಡಿ, ನಾ॥ರರು ಕುಶ್ಯಾರವನ್ನು ಕಳೆದರು.

ಶನಿವಾರಕ್ಕೆ ಪುನಃ ಈ ವಿಷಯ ಇನ್ನೊಂದು ಪ್ರಶ್ನೆಯಿಂದ ಚರ್ಚೆಯಾಯಿತು. ಪ್ರಾಂತಾಧಿಪರು ವರ್ಹಾಡಕ್ಕೆ ತಮಗೆ ಹೋಗಗೊಟ್ಟರು ಎಂಬದೊಂದು ವಿಧಾನ ಬಿಟ್ಟು, ಬ್ರಾಹ್ಮಣೇತರ ಚಳವಳಿಗೆ ಪ್ರಾಂತಾಧಿಪರ ಸಹಾನುಭೂತಿಯ ವಿಷಯ ಮದ್ರಾಸಿನ ಭಾಷಣದಲ್ಲಿ ಮಾಡಿದ ಉಲ್ಲೇಖಗಳನ್ನೆಲ್ಲ ನಾ॥ ಜಾಧವರವರು ಹಿಂತೆಗೆದುಕೊಳ್ಳುತ್ತಾರೇನೆಂದು ಪ್ರತ್ಯಕ್ಷ ಪ್ರಶ್ನಿಸಲು, ಯಾವುದನ್ನು ಹಿಂತೆಗೆದುಕೊಳ್ಳುವದಿಲ್ಲವಾಗಿ ನಾ॥ ಜಾಧವರವರು ಗಟ್ಟಿ ಹೇಳಿದರು. ಪ್ರಾಂತಾಧಿಪರು ಪ್ರಾಂತದೊಳಗಿನ ಹಾಗು ಇತರ ಪ್ರಾಂತಗಳೊಳಗಿನ ಬ್ರಾಹ್ಮಣೇತರರ ಚಟುವಟಿಕೆಯನ್ನು ನಿರೀಕ್ಷಿಸುತ್ತಿದ್ದರೆಂಬ ವಿಧಾನವು ಸಟೆಯೋ, ದಿಟವೋ? ಎಂದು ಶ್ರೀ॥ ದೇವರವರು ಪುನಃ ಪ್ರಶ್ನಿಸಿದರು. "ಪ್ರಾಂತಾಧಿಪರಿಗೂ, ನನಗೂ ಒಂದು ಖಾಸಗಿ ಸಂಭಾಷಣೆ ನಡೆದಿತ್ತು," ಎಂದು ನಾ॥ ಜಾಧವರವರು ಉದ್ಗರಿಸಲು, "ಪ್ರಶ್ನೆಗೆ ಇದು ಉತ್ತರವಲ್ಲ; ನನ್ನ ಪ್ರಶ್ನೆಗೆ ಉತ್ತರ ಕೊಡಿರಿ," ಎಂದು ಶ್ರೀ ದೇವರವರು ಪುನಃ ಪೃಚ್ಛೆ ಮಾಡಿದರು. "ಪ್ರಾಂತಾಧಿಪರೊಡನೆ ನಡೆದ ಖಾಸಗಿ ಸಂಭಾಷಣೆಯೊಳಗಿನ ವಿವರಗಳನ್ನು ಹೇಳುವದು ಅಪ್ರಶಸ್ತವೆಂ"ದು ನಾ॥ ಜಾಧವರವರು ಕೈಮುಗಿಸಿಕೊಳ್ಳ ಹವಣಿಸಲು, ತಮ್ಮ ಪ್ರಶ್ನೆಗೆ ಉತ್ತರ ಕೊಡಲೇಬೇಕೆಂದು ಶ್ರೀ॥ ದೇವರವರು ಹಟಹಿಡಿದರು. ನಾ॥ ಜಾಧವರವರಿಗೆ ನಿರುಪಾಯವಾಯಿತು. ಕೊನೆಗೆ ನಗಾರಘಂಟೆಯನ್ನು ಬಾರಿಸಿ, ನಾ॥ರರು ಆಸನಸ್ಥರಾದರು.

ಈ ಚರ್ಚೆಯು ಬೋಧಪ್ರದವಿದೆ. ಪ್ರಾಂತಾಧಿಪರಿಗೂ, ನಾ॥ ಜಾಧವರವರಿಗೂ ಬ್ರಾಹ್ಮಣೇತರ ಚಳವಳಿಯ ಬಗ್ಗೆ ಸಂಭಾಷಣೆ ನಡೆದದ್ದು ನಿರ್ವಿವಾದವೆಂದು ಸೂಕ್ಷ್ಮ ರೀತಿಯಿಂದ ಪರ್ಯಾಲೋಚಿಸುವವರಿಗೆ ಹೊಳೆಯದಿರದು. ಇಲ್ಲದಿದ್ದರೆ, ನಾ॥ ಜಾಧವರವರು ಅಂಥ ವಿಧಾನವನ್ನು ಮದ್ರಾಸದ ಅಧಿವೇಶನದಲ್ಲಿ ಎಂದೂ ಮಾಡುತ್ತಿದ್ದಿಲ್ಲ; ಮುಂಬಯಿ ಕಾಯಿದೆ ಕೌನ್ಸಿಲಿನಲ್ಲಿ ಶ್ರೀ॥ ದೇವರವರ ಸವಾಲಿಗೆ ಖಾಸಗಿ ಸಂಭಾಷಣೆಯ ಅಡ್ಡ ಪರದೆಯನ್ನು ಮುಂದೆ ಮಾಡಿ, ಪಾರಾಗಲೆತ್ನಿಸುತ್ತಿದ್ದಿಲ್ಲ. ಅಕಲ್ಪಿತವಾಗಿ ಒದಗಿಬಂದ [illegible]ವನ್ನು ಮುಚ್ಚಿಡುವದಕ್ಕಾಗಿ ಉಪಾಯ ಕಾಣದೆ, ನಾ॥ರರು ನಗಾರಘಂಟೆಯನ್ನು ಬಾರಿಸಿ ಕೂತುಕೊಳ್ಳಬೇಕಾಯಿತೆಂದು ಬಲ್ಲವರು ಬಲ್ಲರು. ಅದೇನೂ ಇರಲಿ, ಈ ಚರ್ಚೆಯ ಮೇಲಿಂದ ಆಳರಸರು ನಾ॥ ಜಾಧವರಂಥ ಮಂದಿಗಳನ್ನು ತಮ್ಮೊಳಗೆ ಬರಮಾಡಿಕೊಂಡು, ಮಂಥರೆಯು ಕೈಕೇಯಿ ದೇವಿಗೆ ರಾಜಮಾತೆಯಾಗಲು ಬೋಧಿಸಿದಂತೆ, ಬ್ರಾಹ್ಮಣೇತರರಿಗೆ ತಮ್ಮ ಬಗಲಲ್ಲಿ ಸೇರಿಸಿಕೊಂಡ ಹಾಗೆ ಮಾಡಿ, ಇದೇ ಭಾರತದೇಶವನ್ನು ನಿರಂತರವಾಗಿ ನಿಷ್ಪಕ್ಷಪಾತಿ, ಲೋಕೋಪಕಾರಿ ಬ್ರಿಟಿಶ ರಾಜತಂತ್ರ್ಯದಲ್ಲಿಯೇ ಕಾಪಾಡಬಯಸುತ್ತಾರೆಂದು ಸ್ಪಷ್ಟವಾಗು

ವದಿಲ್ಲವೇ? ಬ್ರಿಟಿಶರ ಕುಟಿಲ ನೀತಿಯ ತರತರದ ಬಣ್ಣಗಳನ್ನು ನಾವು ಕಣ್ಣಾರೆ ಕಂಡುಕೊಂಡು, ಅವನ್ನು ಅನುಭವಿಸುತ್ತಿರುವಾಗ, ಅವರ ಮಾಯಾಜಾಲದಲ್ಲಿ ಪುನಃ ಸಿಲುಕಿಕೊಳ್ಳುವದು ಕೇವಲ ಮೂರ್ಖತನವಲ್ಲವೇ? ನಾಡಬಾಂಧವರವರು ದಿವಾಣದಾರೂಢರಾಗಿದ್ದು, ಸಾಮಾನ್ಯ ವ್ಯವಹಾರಜ್ಞಾನವು ಅವರಿಗಿಲ್ಲವೆಂದು ನಾವು ಹೇಳಲಾರೆವು. ಆದರೂ, ಅವರಂಥ ಪುಣ್ಯಾತ್ಮರು ಈ ಸೋಗುಗಳಿಗೆ ಬಲಿಬಿದ್ದು ಪ್ರತ್ಯಕ್ಷೇತರ ಚಳವಳಿಯ ಚಿಕ್ಕಿನ ಬಿಡಾರಗಳನ್ನು ಅಲ್ಲಲ್ಲಿ ಪ್ರಾಣಪ್ರತಿಷ್ಠೆ ಮಾಡುವದೂ ಆ ಕುರಿತು ದೇಶಬಾಂಧವರೊಡನೆ ಕಲಹಕ್ಕೀಡಾಗುವದೂ ದೇಶದ ದುರ್ಭಾಗ್ಯವಲ್ಲವೇ? ಕುಟಿಲ ನೀತಿಯ ಗರ್ಭಾಗಾರದಲ್ಲಿದ್ದ ನಾಡಬಾಂಧವರವರು ಕುಟಿಲ ನೀತಿಯ ರೂಪಭೇದಗಳನ್ನು ಅರಿಯದಿದ್ದ ಬಗೆ ಹೇಗೆ? ಅಥವಾ ಅವರು ಅರಿತಿದ್ದರೆ, ಅರಿತುಕೊಳ್ಳುವಷ್ಟು ಚತುರರಾಗಿದ್ದರೆ, ಖಾಸಗಿ ಸಂಭಾಷಣದಲ್ಲಿ ಗೌಪ್ಯವಾಗಿ ಪ್ರಾಂತಾಧಿಪರು ಹೇಳಿದ ಸುದ್ದಿಗಳನ್ನು ಮದ್ರಾಸಿನ ಅಧಿವೇಶನದಲ್ಲಿ ಬಹಿರಂಗಪಡಿಸುತ್ತಿದ್ದರೇನು? ಇಂಥ ಮಂದಿಗಳಿಗೆ ಅಧಿಕಾರ ಪ್ರಾಪ್ತವಾದದ್ದೊಂದು ದೇಶದ ದುರ್ಭಾಗ್ಯವೇ.

ಸ್ಫುಟ ಸೂಚನೆಗಳು.

೧. ಕರ್ನಾಟಕ ವಿದ್ಯಾಪೀಠದ ಕುರಿತು ಪ್ರಾಂತಿಕ ಕಾಂಗ್ರೆಸ ಕಮಿಟಿಯ ಅಧ್ಯಕ್ಷರಾದ ಶ್ರೀ. ಕೌಜಲಗಿ ಶ್ರೀನಿವಾಸರಾಯರು ಕಳುಹಿದ ಪ್ರಶ್ನಮಾಲಿಕೆಯನ್ನು ಇನ್ನೊಂದೆಡೆಯಲ್ಲಿ ಪ್ರಕಟಿಸಿರುವೆವು. ಪ್ರಶ್ನೆಗಳು ಬಹಳ ಗಹನವಾಗಿದ್ದು, ಅವನ್ನು ಪ್ರಮುಖ ಕರ್ನಾಟಕಸ್ಥರು ಒಟ್ಟಿಗೆ ಸೇರಿ ವಾದ-ವಿವಾದದಿಂದ ಇತ್ಯರ್ಥಗೊಳಿಸಿಕೊಳ್ಳುವದೇ ಉತ್ತಮ ಉಪಾಯವೆಂದು ನಮ್ಮ ಮತವು. ಕರ್ನಾಟಕದ ಸದ್ಯಸ್ಥಿತಿ, ಮೈಸೂರ-ಕೊಡಗು ದೇಶಗಳ ಸ್ಥಿತಿ ಇತ್ಯಾದಿಗಳನ್ನು ಅರಿತುಕೊಂಡ ಅನುಭವಿಕ ಪ್ರಮುಖರೇ ಈ ಪ್ರಶ್ನಮಾಲಿಕೆಗೆ ಉತ್ತರವನ್ನೀಯಬಲ್ಲರು. ಅದೇ ದೂರದೃಷ್ಟಿಯಿಂದ ಶ್ರೀ ಶ್ರೀನಿವಾಸರಾಯರು ಈ ಪ್ರಶ್ನೆಗಳನ್ನು ಕಲ್ಪಿಸಿರುವರು. ವಿದ್ಯಾಪೀಠಸ್ಥಾಪನೆಯು ಇಷ್ಟವಾದರೂ, ಅದನ್ನು ಸ್ಥಾಪಿಸುವ ಯೋಜನೆಯ ವಿಚಾರವು ಬಹಳ ಕಷ್ಟಕರವಾಗಿರುತ್ತದೆಂದು ಈ ಪ್ರಶ್ನಮಾಲಿಕೆಯಿಂದಲೇ ತಿಳಿಯುವ ಹಾಗಿದೆ. ಆದರಿಂದ ಪ್ರಶ್ನೆಗಳಿಗೆ ಪ್ರತ್ಯಪ್ರತ್ಯೇಕ ಉತ್ತರವನ್ನೀಯುವ ಹವ್ಯಾಸಕ್ಕೆ ಬೀಳದೆ, ನಮಗೆ ಹೊಳೆಯುವ ಕೆಲವು ವಿಚಾರಗಳನ್ನು ನಾಡಿಂದಿಗೆ ನಮೂದಿಸಲಿಚ್ಛಿಸುವೆವು.

---

೨. ಕರ್ನಾಟಕಕ್ಕೆ ಪ್ರತ್ಯೇಕ ವಿಶ್ವವಿದ್ಯಾಲಯವನ್ನು ಸ್ಥಾಪಿಸುವದು ಇಷ್ಟವು. ಈ ಬಗ್ಗೆ ಯಾವದೂ ಮತಭೇದವಿರಲಿಕ್ಕಿಲ್ಲ. ಕರ್ನಾಟಕ ವಿದ್ಯಾಪೀಠದ ಕಕ್ಷೆಯಲ್ಲಿ ಸಮಸ್ತ ಕರ್ನಾಟಕ ದೇಶವು ಸೇರಿಕೊಂಡಿರಬೇಕೆಂದು ನಮ್ಮ ಮತವಿರುತ್ತದೆ. ನಿಜಾಮ, ಮೈಸೂರ, ಮುಂಬಯಿ, ಮದ್ರಾಸ, ಕೊಡಗು ಇತ್ಯಾದಿ ಕನ್ನಡ ನುಡಿಯನ್ನಾಡುವ ಸಮಸ್ತ ಕರ್ನಾಟಕ ಪ್ರದೇಶಗಳೂ ಈ ವಿದ್ಯಾಪೀಠದಲ್ಲಿ ಪ್ರವೇಶಗೊಳ್ಳಬೇಕು. ಕರ್ನಾಟಕ ಪ್ರಾಂತವು ಬ್ರಿಟಿಶ ಹಾಗು ನಿಜಾಮ-ಮೈಸೂರ ಸಂಸ್ಥಾನಗಳೊಳಗೆ ಹಂಚಿಹೋದಾಗ್ಯೂ, ಕರ್ನಾಟಕ ಸಂಸ್ಕೃತಿಯೂ, ಪರಂಪರೆಯೂ ಸಮಸ್ತ ಕರ್ನಾಟಕಸ್ಥರಿಗೆ ಸಾಮಾನ್ಯವಾಗಿರುವ ಮೂಲಕ ವಿದ್ಯಾಪೀಠವ್ಯಾಪ್ತಿಯು ಆ ಪ್ರದೇಶಕ್ಕೆಲ್ಲ ಹಬ್ಬಿರಬೇಕು. ವಿದ್ಯಾಪೀಠವು ಈಗಿನ ಮುಂಬಯಿ ವಿಶ್ವವಿದ್ಯಾಲಯದಂತೆ ಪರೀಕ್ಷಕ ವಿಶ್ವವಿದ್ಯಾಲಯವಾಗಿರುವದಕ್ಕಿಂತ ಫೆಡರಲ್ ಯಾನೆ ಬೇರೆ ಬೇರೆ ಕೇಂದ್ರಗಳಲ್ಲಿ ಕಾಲೇಜುಗಳಿದ್ದು, ಅವುಗಳಿಗೆ ತಮ್ಮ ತಮ್ಮ ವ್ಯವಸ್ಥೆಯನ್ನು ನೋಡಿಕೊಳ್ಳಲು ಸ್ವಾತಂತ್ರ್ಯವಿರಬೇಕು. ಆದರೆ, ಆ ಕಾಲೇಜುಗಳೆಲ್ಲ ವಿದ್ಯಾಪೀಠದ ಮೇಲ್ವಿಚಾರಕ ಮಂಡಳದ ಅಧೀನವಾಗಿರಬೇಕು. ವಿದ್ಯಾಪೀಠದ ಈ ವ್ಯವಸ್ಥೆಯಿಂದ ಅಲ್ಲಲ್ಲಿ ಕಾಲೇಜುಗಳನ್ನು ಹೊರಡಿಸಲಿಕ್ಕೆ ವಿಶೇಷ ಉತ್ಸಾಹ ಬರುವದೆಂದೂ, ಅಂತಃಕಾರಭಾರವೆಲ್ಲ ಸ್ಥಳೀಕರ ಸ್ವಾಧೀನವಾಗಿರುವದರಿಂದ ಕಾರಭಾರವು ಆಸ್ಥೆಯಿಂದ ನಡೆಯುವದೆಂದೂ ನಮಗೆ ತೋರುತ್ತದೆ. ರಾಜ್ಯಪದ್ಧತಿಯಲ್ಲಿಯೂ ಇದೇ ಧೋರಣವು ಇತ್ತೀಚೆ ಲೋಕಮಾನ್ಯವಾಗಹತ್ತಿದೆಂದು ವಾಚಕರು ಅರಿಯದ ಮಾತಲ್ಲ. ಸಂಕ್ಷಿಪ್ತವಾಗಿ ಹೇಳಬೇಕಾದರೆ, ನಮ್ಮ ಗ್ರಾಮ ಪಂಚಾಯತುಗಳು ಹೇಗೆ ಗ್ರಾಮಾಧಿಕಾರವನ್ನು ನಡಿಸಿ ಮಧ್ಯವರ್ತಿ ಸರಕಾರಕ್ಕೆ ಹೇಗೆ ಅಧೀನವಾಗಿದ್ದವೋ, ಹಾಗೆಯೇ ಈ ಕಾಲೇಜುಗಳಾದರೂ, ಕರ್ನಾಟಕ ವಿದ್ಯಾಪೀಠಕ್ಕೆ ಅಧೀನವಾಗಿರಬೇಕು. ಮೈಸೂರು ವಿಶ್ವವಿದ್ಯಾಲಯವನ್ನು ಪ್ರಚಲಿತ ಪರಿಸ್ಥಿತಿಯಲ್ಲಿ ಅಖಿಲ ಕರ್ನಾಟಕ ವಿಶ್ವವಿದ್ಯಾಲಯವನ್ನಾಗಿ ಪರಿಣಮಿಸಿಕೊಳ್ಳುವ ಶಕ್ಯಾಶಕ್ಯತೆಯನ್ನು ನಾವು ಹೇಳಲಾರೆವು. ಮೈಸೂರಿನ ವಿಶ್ವವಿದ್ಯಾಲಯಕ್ಕೆ ಕರ್ನಾಟಕಸ್ಥರು ಅಧೀನರಾಗುವದು ನಮಗೆ ಇಷ್ಟ ತೋರುವದಿಲ್ಲ. ಈ ಪ್ರಶ್ನೆಯು ಬಹಳ ವ್ಯಾಪಕವಿದೆ. ಸ್ವತಂತ್ರ ಕರ್ನಾಟಕ ವಿದ್ಯಾಪೀಠವನ್ನು ಸ್ಥಾಪಿಸಲಿಕ್ಕೆ ದ್ರವ್ಯನಿಧಿಯು ಬೇಕು; ವಿದ್ವಜ್ಜನರು ಬೇಕು. ವಿದ್ಯಾಪೀಠದಲ್ಲಿ ಕಲಿಯುವ ವಿದ್ಯಾರ್ಥಿಗಳು ಬೇಕು. ಇವೆಲ್ಲ ಪ್ರಾಪ್ತವಾದರೂ, ಇವನ್ನೆಲ್ಲ ಹೊಂದಿಸಿ ವಿದ್ಯಾಪೀಠವನ್ನು ಸ್ಥಾಪಿಸುವ ಪುಣ್ಯಾತ್ಮನು ಬೇಕು. ಸದ್ಯಸ್ಥಿತಿಯಲ್ಲಿ ವಿದ್ಯಾಪೀಠದ ಸಾಹಸವನ್ನು ಕೈಕೊಂಡು ಮುಂದಾಗುವ ಕರ್ನಾಟಕ ಪುರುಷನ್ಯಾರೂ ನಮಗೆ ಕಾಣುವದಿಲ್ಲ. ಇದನ್ನು ನಮೂದಿಸಲು ನಮಗೆ ಅತ್ಯಂತ ವ್ಯಸನವಾಗುತ್ತದೆ. ಆದರೂ, ನಾವು ಈ ಮೊದಲೇ ಸೂಚಿಸಿದಂತೆ, ಕರ್ನಾಟಕಸ್ಥ ಪುರುಷರು ವಿದ್ಯಾಪೀಠದ ಕುರಿತು ವಿಚಾರ ಮಾಡುವರೆ ವಿಶೇಷ ಸಭೆಯನ್ನು ಸೇರಿಸಬೇಕು. ಅಥವಾ ಚೌಕಶಿ ಮಂಡಳವನ್ನೊಂದು ನೇಮಿಸಿಕೊಂಡು, ಅಖಿಲ ಕರ್ನಾಟಕದಲ್ಲಿ ಸಂಚರಿಸಿ, ಲೋಕಮತವನ್ನೂ ಸೂಚನೆಗಳನ್ನೂ ಸಂಗ್ರಹಿಸಿ ವಿಚಾರಿಸಬೇಕು.

---

೩ ಕೌನ್ಸಿಲುತ್ಯಾಗದ ಸಮಯ ಕೌನ್ಸಿಲು ಮಾಯೆಯ ಲೀಲೆಗಳನ್ನು ನೋಡುವದು ಚಿತ್ತಾಕರ್ಷಕವು. ವ್ಯಕ್ತಿಗಳ ಪ್ರತಿಷ್ಠೆಗಾಗಿ, ರಾಜನಿಷ್ಠೆಗಾಗಿ ರಾಜನಿಷ್ಠರು ಕೌನ್ಸಿಲಗಳನ್ನು ಬಿಡಲೊಲ್ಲರು. ಕೌನ್ಸಿಲು ದೇಶಹಿತದ ಸಾಧನವೆಂಬ ಕಲ್ಪನೆಯಿಂದ ಸ್ವತಂತ್ರರು ಆತ್ಮವಂಚನ ಮಾಡಿಕೊಂಡು, ಕೌನ್ಸಿಲು ಖುರ್ಚಿಗಳಿಗೆ ಅಂಟಿಕೊಂಡಿರುವರು. ಮತ್ತೊಂದು ಪ್ರಕಾರವು ಪಂಜಾಬದಲ್ಲಿ ಒದಗಿಬಂದಿದೆ. ಪ್ರೊಫೆಸರ ರುಚಿರಾಮ ಸಹಾನಿ ಎಂಬ ಪಂಜಾಬ ಕಾಯಿದೆ ಕೌನ್ಸಿಲಿನ ಸಭಾಸದರು ಸ್ವರಾಜ್ಯಪಕ್ಷದ ತರ್ಫೆನಿಂದ ಆರಿಸಿಬಂದಿದ್ದರು. ರಾಷ್ಟ್ರಾಜ್ಞೆಯಂತೆ ಪಂಜಾಬದ ಕಾಯಿದೆ ಕೌನ್ಸಿಲನ್ನು ಅವರು ಸಹಕಾರಿಗಳೊಡನೆ ತ್ಯಜಿಸಿದರು. ಮಾರನೇ ದಿನ ಪುನಃ ಕೌನ್ಸಿಲಿನಲ್ಲಿ ಬಂದು ಸೇರಿದರು. ಸೇರುವ ಕಾರಣವನ್ನು ಪ್ರಶ್ನಿಸಲು, ಅವರು ನುಡಿದದ್ದೇನಂದರೆ:— 'ನಾನು ವಿಶ್ವವಿದ್ಯಾಲಯ ಮತದಾರ ಸಂಘದಿಂದ ಆರಿಸಿ ಬಂದವನು; ನನ್ನ ಮತದಾರರ ಅಭಿಪ್ರಾಯವೇನಿರುವದೆಂದು ತಿಳಕೊಳ್ಳದೆ, ನಾನು ಹೊರಹೋಗಿದ್ದೆ. ಅದನ್ನು ತಿಳಕೊಳ್ಳದೆ ಹೊರಹೋಗುವದು ಮತದಾರರ ದ್ರೋಹವಾಗುವದು.' ಇತ್ಯಾದಿ. ಇದನ್ನು ಕೇಳಿದೊಡನೆ ೧೫ ಮಂದಿ ಮತದಾರರು ಕೂಡಲೆ ಪತ್ರ ಬರೆದು, ಸ್ವರಾಜ್ಯಪಕ್ಷದ ಕಾರ್ಯಕ್ರಮವನ್ನು ಮನ್ನಿಸಿಕೊಂಡು ನೀವು ಆರಿಸಿ ಬಂದಿದ್ದರಿಂದ, ರಾಷ್ಟ್ರಾಜ್ಞೆಯನ್ನು ಮನ್ನಿಸಲು ತಾವು ಬದ್ಧರಿರುತ್ತೀರೆಂದು ತಿಳಿಸಿದರು. ಪ್ರೊ|| ರುಚಿರಾಮ ಸಹಾನಿಯವರು ಗಾಳಿಗೆ ಬಿದ್ದರು. ಈಗಲಾದರೂ, ಪ್ರೊ|| ಸಹಾನಿಯವರು ಉಳಿದ ಮತದಾರರ ಸೊಲ್ಲ ಕೇಳದೆ, ರಾಷ್ಟ್ರಾಜ್ಞೆಯನ್ನು ಮನ್ನಿಸುವದು ಶ್ರೇಯಸ್ಕರವು. ವಿಶ್ವವಿದ್ಯಾಲಯದ ಮತದಾರರು ಕೂಡಲೆ ತಮ್ಮ ಪ್ರತಿನಿಧಿಗಳಿಗೆ ಎಚ್ಚರಿಕೆ ಕೊಟ್ಟ ಬಗ್ಗೆ ಅವರನ್ನು ನಾವು ಮನಃಪೂರ್ವಕ ಅಭಿನಂದಿಸುವೆವು. ಮತದಾರರೆಲ್ಲರೂ ತಮ್ಮ ತಮ್ಮ ಪ್ರತಿನಿಧಿಗಳ ಚಾಪಲ್ಯವನ್ನು ಅಲ್ಲಿಂದಲ್ಲೇ ನಿಯಂತ್ರಿಸುವಷ್ಟು ಜಾಗರೂಕರಾಗಿದ್ದರೆ, ಸ್ವರಾಜ್ಯಪ್ರಾಪ್ತಿಗೆ ಬಹಳ ಅನುಕೂಲವಾಗುವದೆಂದು ನಾವು ಹೇಳಬೇಕೇನು?

---

೪. ಮತದಾರರು ಜಾಗರೂಕರಾಗಿದ್ದರೆ, ಪ್ರತಿನಿಧಿಗಳಿಗೆ ಒದಗುವ ಪೇಚಾಟವನ್ನು ನಮ್ಮಲ್ಲಿ ಕಣ್ಣಾರೆ ಕಾಣುವ ಪ್ರಸಂಗವೊಂದು ಪ್ರಾಪ್ತವಾಗಿದೆ. ನಮ್ಮ ಪ್ರಾಂತಿಕ ಕಾಯಿದೆ ಕೌನ್ಸಿಲಿನೊಳಗಿನ ಪ್ರತಿನಿಧಿಗಳಾದ ಶ್ರೀ ಕರ್ಕಿಯವರ ಕೌನ್ಸಿಲು ಮಾಯೆಯನ್ನು ನಾವು ಈ ಮುಂಚೆಯೇ ಉಲ್ಲೇಖಿಸಿರುವೆವು. ಶ್ರೀ ಕರ್ಕಿಯವರು ಪ್ರಕೃತ ಸ್ಥಿತಿಯಲ್ಲಿ ಕೌನ್ಸಿಲುತ್ಯಾಗ ಮಾಡುವದುಚಿತವೆಂದೂ ನಾವು ಪ್ರತಿಪಾದಿಸಿದ್ದೆವು. ಈ ಕುರಿತು ಶ್ರೀ ಕರ್ಕಿಯವರು ಕೊಟ್ಟ ಖುಲಾಸೆಯನ್ನು ಬೇರೊಂದೆಡೆಯಲ್ಲಿ ಪ್ರಕಟಿಸಿರುವೆವು. ಶ್ರೀ ಗಂಗಾಧರರಾವ ದೇಶಪಾಂಡೆಯವರು ಶ್ರೀ ಲಕ್ಷ್ಮಣರಾವ ಭೋಪಟಕರರೊಡನೆ ಕೌನ್ಸಿಲು ತ್ಯಾಗ ಮಾಡಿದರೆಂಬ ವಿಧಾನವು ತಪ್ಪೆಂದು ನಾವು ಒಪ್ಪುವೆವು. ಆದರೆ, ಶ್ರೀ ದೇಶಪಾಂಡೆಯವರ ಕೌನ್ಸಿಲು ನಿಷ್ಠೆಯಿಂದ ಶ್ರೀ ಕರ್ಕಿಯವರು ಕೌನ್ಸಿಲಿನಲ್ಲಿ ಉಳಕೊಂಡದ್ದು ಸರಿಯೆಂದು ಸಿದ್ಧವಾಗುವದಿಲ್ಲ. ಶ್ರೀ ಕರ್ಕಿಯವರು ಸ್ವರಾಜ್ಯಪಕ್ಷದಲ್ಲಿ ಸೇರಿಹೋಗದೆ, ಎಸೋಸಿಯೇಟ ಯಾನೆ ಸಹಯೋಗಿಗಳಾಗಿ ಕೌನ್ಸಿಲು ಕಾರ್ಯವನ್ನು ನಡಿಸುತ್ತಿದ್ದರೆಂದು ಒಪ್ಪಿಕೊಂಡಾಗ್ಯೂ, ಸ್ವರಾಜ್ಯಪಕ್ಷದವರು ರಾಷ್ಟ್ರಾಜ್ಞೆಯನ್ನು ಮನ್ನಿಸಿ ಕೌನ್ಸಿಲುಗಳು ನಿರರ್ಥಕವೆಂದು ಎದ್ದುಹೋದಾಗ, ಸಂಗ

[illegible]ಗಾದ ಶ್ರೀ|| ಕರ್ಕಿಯವರು ಕೌನ್ಸಿಲಿನಲ್ಲಿ ಉಳಿಯುವದು ಶೋಭಿಸುವದಿಲ್ಲ. ಅಖಿಲ ಭಾರತೀಯ ಕಾಂಗ್ರೆಸ ಕಮಿಟಿಯವರು ಸ್ವರಾಜ್ಯ ಪಕ್ಷಕ್ಕೆ ಕೌನ್ಸಿಲು ತ್ಯಾಗದ ಕಟ್ಟಪ್ಪಣೆಯನ್ನಿತ್ತಾಗಲೇ ಅದೊಂದು ಸಮಸ್ತ ರಾಷ್ಟ್ರೀಯ ಸಭಾಭಿಮಾನಿಗಳಿಗಾಗಿ ಹೊರಡಿಸಿದ ಆಜ್ಞಾರೂಪವೆಂದು ನಾವು ಎಣಿಸುವೆವು. ಶ್ರೀ|| ಕರ್ಕಿಯವರು ಎಚ್ಚರವಾಗಿದ್ದರೆ ಅವರಿಗೂ ಕೊನೆಯ [illegible] ಸ್ವರಾಜ್ಯ ಪಕ್ಷೇತರ ಸಭಾಸದರಿಗೆ [illegible] ಅವರಿಗೆ ಮಾಡಿದ ಹುಕುಮು [illegible]

[illegible]ಲಿಸಿಕೊಳ್ಳುವದೆಂದರೆ ಸಂಸ್ಥೆಯಲ್ಲಿ ರಾಷ್ಟ್ರೀಯ ಸಭೆಯ ನಿಷ್ಠೆಯನ್ನಷ್ಟು ಪ್ರದರ್ಶಿಸಿ ಮನೋ[illegible] ಸ್ವತಂತ್ರ ವಿಚಾರ ಇತ್ಯಾದಿ ವೇದಾಂತವ[illegible] ಸ್ವೇಚ್ಛಾಚಾರಿಗಳಾಗಿ ಇವರು ನಡೆ[illegible]

ತ್ತಾರೆ. ಇಂಥವರಿಗೆ ಏನಾದರೂ ಹಾಕುವದು ಅ[illegible]ವೆಂದು ಹಿಡಿದು [illegible] ಕೌನ್ಸಿಲ ತ್ಯಾಗದ ಶೀ[illegible] ಸ್ವರಾಜ್ಯ ಸಿನ [illegible]ಲ್ಲಿ ಸಂಗಡಿಗರಾದ ರಾಷ್ಟ್ರೀಯ ಸಭೆಯವರಿಗೆ [illegible]ನಾಗಲಿಲ್ಲ. ಶ್ರೀ|| ಸತ್ಯಮೂರ್ತಿಯವರು ಈ ಮಾತನ್ನು ತಮ್ಮ ಮುಲಾ[illegible]ವಲ್ಲಿ ಸ್ಪಷ್ಟ ಮಾಡಿ ಹೇಳಿರುವರು. ಇಂಥ ಸ್ಥಿತಿ[illegible]ಲ್ಲಿ ಸಂಗಡಿಗರ [illegible] ಸ್ವರಾಜ್ಯ ಪಕ್ಷದ ಸಂಗಡಿಗರಾಗಿ ವರ್ತಿಸುವದು [illegible] ಲಕ್ಷಣವು ರಾಷ್ಟ್ರೀಯ ಸಭೆಯ ಆಜ್ಞೆಗಳನ್ನು ಸ್ವಯಂಸ್ಫೂರ್ತಿಯಿಂದ ಪಾಲಿಸುವದು [illegible] ಭೂಷಣವು. ಸಂಗಡಿಗರೆಂದು ಹೇಳುವದು, [illegible] ಸಂಗಡಿಗರಾಗಿ ವರ್ತಿಸುವದು ಬೇರೆ [illegible] ಅಲ್ಲಿ ಸಂಗಡಿಗ ಧರ್ಮವೂ ಇಲ್ಲ. [illegible] ಎಲ್ಲ ವಿಚಾರಗಳಲ್ಲಿಯೂ ಸಂಗಡಿಗರು ನೆ[illegible]ಗದಿದ್ದರೆ ಇಂಥ ಸಂಗಡಿಗರಿದ್ದು ಫಲವೇನು? [illegible]ವರಿಗಿಂತ ಮುಂದೆ ಕಳುವವರಿಗಿಂತ ಹಿಂದೆ [illegible] ಇಲೆಕ್ಷನಿನ ಪ್ರಸಂಗದಲ್ಲಿ ನಾವು ರಾಷ್ಟ್ರೀಯ ಸಭೆಯ ಸಂಗಡಿಗರೆಂದು ಬೇರೆ ಬೇರೆ ವೇಷದಲ್ಲಿ ರಾಷ್ಟ್ರೀಯ ಸಭೆಯವರ ಬೆಂಬಲ ಪಡೆಯಲಿಕ್ಕೂ ಸಂಗಡಿಗರು ತಯಾರು. ಕೌನ್ಸಿಲುಗಳನ್ನು ಸೇರಿದ ಬಳಿಕ [illegible]ಚಾರಿಗಳಾಗಿ ಸ್ವರಾಜ್ಯ ಪಕ್ಷದವರಷ್ಟು ತಾವು ಪಟುವಾರಿಗ[illegible] ಸರಕಾರಕ್ಕೆ ಪ್ರದರ್ಶಿಸಿ [illegible] ಸ್ವತಂತ್ರ ಚಾರದ ಮುತ್ಸದ್ದಿಗಳೆಂದು [illegible] ಪಡಿಸಲಿಕ್ಕೂ ಇವರು ತಯಾರು!!

[illegible] ಕಾರ್ಯಸಾಧಕ ಪುರುಷರು ಈಗಿನ ಇಕ್ಕಟ್ಟಿನ ಕಾದಾಟದ ಸಂದರ್ಭದಲ್ಲಿ ನಿರರ್ಥಕರಿರುವರು. ಶ್ರೀ|| ಕರ್ಕಿಯವರ ಖುಲಾಸೆಯಿಂದ ಯಾರಿಗೂ ಸಮಾಧಾನವಾಗುವಂತಿಲ್ಲ. "ಕ್ರಾನಿಕಲ್" ಪತ್ರಿಕೆಯವರಿಗೂ ಸಮಾಧಾನವಾಗಲಿಲ್ಲ. "Mr. Karki explains" (ಶ್ರೀ|| ಕರ್ಕಿಯವರು ವಿವರ ಹೇಳುತ್ತಾರೆ) ಎಂಬ ಸವರು ಕೊಟ್ಟು 'ಕ್ರಾನಿಕಲ್' ಪತ್ರಿಕಾಕರ್ತರು ಶ್ರೀ|| ಕರ್ಕಿಯವರ ಖುಲಾಸೆಯನ್ನು ಪ್ರಕಟಿಸಿದ್ದರು. ಈ ಸವರಿನ ಮೇಲಿಂದ "ಕ್ರಾನಿಕಲ್" ಕರ್ತರಿಗೆ ಖುಲಾಸೆಯು ಸಮಾಧಾನಕರ[illegible]ತೆಂದು ಶ್ರೀ|| ಕರ್ಕಿಯವರ ಮತವಿರುವದೇನು? [illegible] ಖುಲಾಸೆಗಳಿಂದ ತಮ್ಮ ವರ್ತನವನ್ನು ಶ್ರೀ|| ಕರ್ಕಿಯವರು ಸಮರ್ಥಿಸಲೆತ್ನಿಸಬಾರದು. "ರಾಷ್ಟ್ರೀಯ ಸಭೆಯ ಧೋರಣವು ನನಗೆ ಮಾನ್ಯವಿಲ್ಲ. ಅದನ್ನನುಸರಿಸಿದರೆ ನನ್ನ ಕಾನಡಾ ಜಿಲ್ಲೆಗೆ ಬಹಳ ಹಾನಿಯಾಗುವದು. ಕೌನ್ಸಿಲ ತ್ಯಾಗ ಮಾಡಿದರೆ, ಅನರ್ಥವೊದಗುವದು. ಕೌನ್ಸಿಲುತ್ಯಾಗ ಮಾಡದೆ ಕೌನ್ಸಿಲಿನಲ್ಲಿ ಉಳಕೊಂಡದ್ದರಿಂದ ಈ ಅಧಿವೇಶನದಲ್ಲಿ ಬಹಳ ಫಾಯಿದೆಯಾಯಿತು, ಮುಂದೆ ಮತ್ತೂ ಲಾಭವಾಗುವದಿದೆ, ರಾಷ್ಟ್ರದ ಆಂದೋಲನದಲ್ಲಿ ನಾವು ಸಿಲುಕಿ ನಷ್ಟಹೊಂದಬಾರದು" ಇತ್ಯಾದಿ ತಾತ್ವಿಕ ವಿಚಾರಗಳನ್ನೂ, ಲೌಕಿಕ ಆಲೋಚನೆಗಳನ್ನೂ ಮತದಾರರಿಗೆ ಹೇಳಬೇಕು, ಫಾಯಿದೆಯ ರಾಶಿಯನ್ನು ತೋರಿಸಬೇಕು, ಅಂದರೆ ಮಾತ್ರ ಸಂಗಡಿಗರಿಗೆ ಮಾಡಿದ ದ್ರೋಹದ ಪರಿಮಾರ್ಜನವಾಗುವದು, ರಾಷ್ಟ್ರಮತವನ್ನು ಅವಮಾನ್ಯ ಮಾಡಿದ ಪಾಪ ಕ್ಷಾಲನವಾಗುವದು. ಶ್ರೀ|| ಕರ್ಕಿಯವರು ಇಂಥ ಖುಲಾಸೆಗಳನ್ನು ಮಾಡಿ ಮತದಾರರಿಗೆ ತಂಗಿಸುವ ಹವ್ಯಾಸಕ್ಕೆ ಬಲಿಬೀಳದೆ, ಆತ್ಮನಿರೀಕ್ಷಣೆಯನ್ನು ಮಾಡಿ, ಕೌನ್ಸಿಲು ಸ್ಥಿತಿಯನ್ನು ತಿಳಕೊಂಡು, ಪಶ್ಚಾತ್ತಾಪವನ್ನು ಇನ್ನಾದರೂ ಪ್ರದರ್ಶಿಸಲಿ.

[illegible] ಟೋಲ ತೆರುವ ವಿಷಯ ಸರಕಾರವು ಸದ್ಯ ಕೆಲ್ಯಾಂದು ಹುಕುಮನ್ನು ಹೊರಡಿಸಿದೆ. ಗಾಡಿಕಾರರು ಒಂದೇ ಮಾರ್ಗದ ಮೇಲೆ, ಹಿಂದೇ ದಿನ ಎರಡು ಯಾ ಅದಕ್ಕೂ ಹೆಚ್ಚು ಟೋಲ ನಾಕೆಗಳನ್ನು ದಾಟಿದರೆ ಒಂದು ಟೋಲನಾಕೆಯ ಟೋಲು ಮಾತ್ರ ಕೊಡಬೇಕಲ್ಲದೆ, ಎಲ್ಲ ಟೋಲ ನಾಕೆಗಳಲ್ಲಿ ಟೋಲು ಕೊಡುವದವಶ್ಯವಿಲ್ಲ. ಈ ಹುಕುಮು ತಮಗಿನಿಗಳಿಗೆ [illegible] ಇಲ್ಲಿ ಗಾಡಿಕಾರರು ಜಾಗರೂಕರಾಗಿ ಸರಕಾರದ ಅನುಗ್ರಹದ ಲಾಭ ಪಡೆಯಬೇಕು.

ಸ್ಥಾನಿಕ ವೃತ್ತಾಂತ.

ಕುಮಟಾ—ಕಳೆದ ೩೧ನೇ ತಾರೀಖಿಗೆ ಕುಮಟಾ ಮ್ಯುನಿಸಿಪಾಲಿಟಿಯ ವಿಶೇಷ ಸಭೆಯಲ್ಲಿ ಕೈ|| ವಾ|| ಶ್ರೀ|| ಗಣೇಶ ಶಾಸ್ತ್ರಿಗಳ ವಿಷಯ ದುಃಖಪ್ರದರ್ಶಕ ಠರಾವು ಪಾಸಾಯಿತು. ಕಾಯಿದೆಯ ಅಧ್ಯಯನ [illegible] ದಿನ ಕಾರ್ಯಕ್ರಮ ಪತ್ರಿಕೆಯೊಳಗಣ ಯಾವ ಕಾರ್ಯವೂ ನೆರವೇರಲಿಲ್ಲ.

ಶನಿವಾರಕ್ಕೆ ಇಲ್ಲಿಯ ಕುಮಟಾ ಕೋರ್ಟಿನಲ್ಲಿಯೂ ಶ್ರೀ|| ಶಾಸ್ತ್ರಿಗಳ ನಿಧನದ ಕುರಿತು ಸಬಜಡ್ಜರೂ, ವಕೀಲರೂ ದುಃಖೋದ್ಗಾರಗಳನ್ನು ತೆಗೆದರು.

ಗುಂಡಬಾಳೆಯ ರಾ|| ರಾಮಚಂದ್ರ ಅನಂತಪ್ಪೈಯವರಿಗೆ ಕರಣಿಕ ಉದ್ದ[illegible] ಬಲವಾಗಲೆಂದು ಬ[illegible] ಲೂಪ್ರಿನ ಖಾತೆಯವರಿಂದ ಅಪ್ಪಣೆ ದೊರಕಿರುವದಾಗಿಯೂ, ಈ ಕುರಿತು ನ್ಯಾಮಕತ್ಯೆಯು ಸರಕಾರಕ್ಕೂ [illegible] ಮಾಡುವೆವಾಗಿಯೂ ರಾ|| ರಾಮಚಂದ್ರ ಪೈಯವರು ತಿಳಿಸುತ್ತಾರೆ.

[illegible] ನಾಟಕ ಮಂಡಳಿಯವರು ಇಲ್ಲಿ ಬಂದು ೨-೩ ಪ್ರಯೋಗಗಳನ್ನಾಡಿದರು. ನ್ಯೂ ಇಂಡಿಯನ್ ಸರ್ಕಸ್ ಕಂಪನಿಯವರು ಸದ್ಯಕ್ಕೆ ಬರುವವರಿದ್ದಾರೆ.

[illegible]ಗಾಲ ಗ್ರೂಪಿನೊಳಗಣ ರಾ|| ವೆಂಕಟ್ರಮಣ ಗಣಪ ಹೆಗಡೆ ಇವರು ತಮ್ಮ ಅರ್ಜಿಯನ್ನು ಹಿಂತೆಗೆದುಕೊಂಡದ್ದರಿಂದ ಈ ಗ್ರೂಪಿಗೆ ರಾ|| ಮಾಧವ ಗಣಪಯ್ಯಾ ಶ್ಯಾನಭಾಗ ಹೆಗಡೇಕರ ಹಾಗು ಗೋಪಾಲಕೃಷ್ಣ ಸುಬ್ರಾಯ ಹೆಗಡೆ ಇವರು ಪ್ರತಿಸ್ಪರ್ಧಿಗಳಿಲ್ಲದೆ ಆರಿಸಿ ಬಂದರು. ಕುಮಟಾ ಗ್ರೂಪಿನಲ್ಲಿ ರಾ|| ಊರಕೇರಿ ಸದ್ಭಾವ ಭಟ್ಟ ಮತ್ತು ಅತ್ತಿ[illegible] ಭಟ್ಟರು ತಮ್ಮ ಅರ್ಜಿಗಳನ್ನು ಪರತ ತೆಗೆದುಕೊಂಡದ್ದರಿಂದ ಆ ಗ್ರೂಪುಗಳ ತರ್ಫೆಯಿಂದ ರಾ|| ರಾಮಚಂದ್ರ ಶ್ರೀನಿವಾಸ ಪೈ, ಹೊಳೆಗದ್ದೆ ಮತ್ತು ಗೋಪಾಲಕೃಷ್ಣ ರಾಮಕೃಷ್ಣ ಕಡೇಕೋಡಿ ಇವರು ಆರಿಸಿ ಬಂದರು. ಬಾಡಕಾನ ಗ್ರೂಪಿನ ಚುನಾವಣೆಯು ಮಾತ್ರ ಉಳಿಯಿತು.

ಸಾಭಾರ ಸ್ವೀಕಾರ

ರಂಗಭೂಮಿ—ಕರ್ನಾಟಕ ನಾಟಕ ಮಂಡಳಿಗಳ ಆಶ್ರಯದಲ್ಲಿ ಹೊರಡುವ ಸಚಿತ್ರ ಮಾಸಪತ್ರಿಕೆ. ೭ನೇ ಸಂಚಿಕೆ ಸಂಪಾದಕ—ಶ್ರೀ|| ದತ್ತಾತ್ರೇಯ ಕೃಷ್ಣ ಭಾರದ್ವಾಜ, ಬಸವನಗುಡಿ, ಬೆಂಗಳೂರು. ವಾರ್ಷಿಕ ವರ್ಗಣಿ ರೂ. ೩-೦-೦.

ವಾಗ್ಭೂಷಣ—ಡಿಸಂಬರ-ಜನವರಿ ತಿಂಗಳ ಸಂಚಿಕೆ, ಸಂಪಾದಕ—ಶ್ರೀ|| ಎಸ್. ಎಸ್. ಬಸವನಾಳ, ಎಂ. ಎ., ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ. ವಾರ್ಷಿಕ ವರ್ಗಣಿ ಅಂಚೆವೆಚ್ಚ ಸೇರಿ ರೂ. ೩-೦-೦.

ಕಾರವಾರ— ಕುಮಟೆಯ ರಾ|| ಪಾಂಡುರಂಗ ಶ್ರೀನಿವಾಸ ಶ್ಯಾನಭಾಗ ಗುಮಾಸ್ತ ಇವರು ವಾದಿಯಾಗಿ ಕುಮಟೆಯ ಸಬಜಡ್ಜ ರಾ|| ಜಿನಮುಳಗುಂದ ಇವರ ಮೇಲೆ ಹಾಕಿದ ಮಾನನಷ್ಟದ ದಾವೆಯ ವಿಚಾರವು ಇಲ್ಲಿಯ ಡಿಸ್ಟ್ರಿಕ್ಟ ಕೋರ್ಟಿನಲ್ಲಿ ಕಳೆದ ತಾ. ೨೨ ನೇ ಸೋಮವಾರದಿಂದ ಶನಿವಾರ ತಾ. ೨೭ ನೇ ವರೆಗೆ ೬ ದಿನ ನಡೆಯಿತು. ಸುನಾವಣಿಯು ಕೈಕೋರ್ಟಿನಿಂದಲೇ ನಡೆಯಿತು. ವಾದಿಯ ತರ್ಫೆಯಿಂದ ರಾ|| ಮಾಧವ ಮಂಜುನಾಥ ಶ್ಯಾನಭಾಗರೂ, ಸಬಜಡ್ಜರ ತರ್ಫೆಯಿಂದ ಮಿ|| ಎಲ್. ಎಸ್. ಕಮ್ಮನೋ, ಹಾಗು ರಾ|| ವೆಂಕಟರಾವ ರಾಮಚಂದ್ರಯ್ಯಾ ಹಳದೀಪುರಕರರವರೂ, ಉಳಿದ ಪ್ರತಿವಾದಿಯ ತರ್ಫೆಯಿಂದ ರಾ|| ಆರ್. ವ್ಹಿ. ಗಂಗೊಳ್ಳಿಯವರೂ ಕೆಲಸ ನಡಿಸಿದರು. ವಿಚಾರದ ದಿನಗಳಲ್ಲಿ ಕೋರ್ಟು ತುಂಬು ಜನರು ಸೇರುತ್ತಿದ್ದರು. ತೀರ್ಪು ಇನ್ನೆರಡು—ಮೂರು ದಿನಗಳಲ್ಲಿ ಸಿಗಬಹುದು.

ವೃತ್ತಸಾರ.

— ಅಮೇರಿಕೆಯ ನ್ಯೂಯೋರ್ಕದೊಳಗಣ ಪ್ರಾಣಿ ಸಂಗ್ರಹಾಲಯದ ಮೇಲೆ ಅಗ್ನಿಪ್ರಳಯದ ಕಟಾಕ್ಷವಾಗಿ ಅನೇಕ ಪ್ರಾಣಿಗಳು ಬೆಂದು ಬೆಂಡಾದವು ಪಾಪ!

— ವಿಲಾಯತಿಯಲ್ಲಿ ಕೂಲಿ ನ್ಯಾಯದಾನ ಮಾಡುವವರಿಗೆ ಕಲಬಿನ ಅರ್ಧ [illegible]ವನ್ನು ಭರತಖಂಡವು ತೆರಬೇಕೆಂಬ ಸರಕಾರಿ ಸೂಚನೆಯು ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ರದ್ದಾಗಿತ್ತು. ಅದೇ ಸೂಚನೆಯನ್ನು ನಾಮದಾರ ಮಾದಸಾಹೇಬ ಮುಸಲ್ಮಾನರು ಹಿರಿಯರ ಸಭೆಯಲ್ಲಿ ಸೂಚಿಸಿ ಸರಕಾರಕ್ಕೆ ನೆರವಾದರು. ನಾಮದಾರ ಮುಸಲ್ಮಾನರು ಲೋಕಮಾನ್ಯರಲ್ಲವು, ಸ್ವಸಹಕಾರವಾದಿಗಳು!

— ಮಹಾತ್ಮರು ಎಪ್ರಿಲ್ ತಿಂಗಳಲ್ಲಿ ಪ್ರಕೃತಿಸ್ವಾಸ್ಥ್ಯಕ್ಕಾಗಿ ಮಸೂರಿಗೆ ಹೋಗಲಿರುವರು. ಯುರೋಪದ ಪ್ರವಾಸ ಮಾಡಿದಂದಿನಿಂದ ಮಹಾತ್ಮರ ತೂಕವು ೩ ರತ್ತಲು ಮಿಗಿಲಾಗಿದೆ. ಮಹಾತ್ಮರ ತೂಕವು ೧೦೨ ರತ್ತಲು ಇರುತ್ತದೆ.

— ಮಧ್ಯಪ್ರಾಂತದ ಚೋದಾ ಗ್ರಾಮದಲ್ಲಿ ಕಳೆದ ತಾರೀಖು ೬ ನೇಗೆ ಮಾವಿನಕಾಯಿಯಷ್ಟು ದೊಡ್ಡದಾದ ಆಣೆಕಲ್ಲು ಬಿದ್ದು, ಅನೇಕ ಮನೆಗಳ ಹೆಂಚು ಒಡೆದುಹೋದವು. ಬೆಳೆಯೂ ನಷ್ಟವಾಯಿತು. ಹಸೇಬರಹ

— ಕವಿಶ್ರೇಷ್ಠ ರವೀಂದ್ರನಾಥ ಠಾಗೋರರವರು ಅಸ್ವಸ್ಥರಿರುವರು.

— ಶ್ರೀ ಹೊನ್ನಾಪುರದ ಕ ಗದಿಗೆಯ್ಯನವರು ಕನ್ನಡ ಸ್ವಂದೇಶೀಯ ವಾರಪತ್ರಿಕೆಯನ್ನು ಪುನಃ ಹೊರಡಿಸುವ ನಿರ್ಧಾರ ಮಾಡಿರುವರು. ಸ್ವಾಗತವಿರಲಿ

— ನಮ್ಮ ಪ್ರಾಂತಾಧಿಕಾರಾದ ವಿಲ್ಸನ್ ದೊರೆಗಳು ನಾಲ್ಕು ತಿಂಗಳ ರಜೆ ಕೊಂಡು ವಿಲಾಯತಿಗೆ ಹೋದರು. ಅವರ ಸ್ಥಳದಲ್ಲಿ ಕಾರ್ಯಕಾರಿ ಮಂಡಳದ ಸಭಾಸದರಾದ ಸರ್ ಲೊರೆನ್ಸರವರು ನೇಮಿಸಲ್ಪಟ್ಟರು. ಈ ನೇಮಣೂಕಿ ಯಾಗುವ ಬಂಚಿಯಿ [illegible] ಕಾಯಿದೆ ಕೌನ್ಸಿಲಿನೊಳಗಿನ ೫ ಮಂದಿ ಬ್ರಾಹ್ಮಣೇತರ ಸಭಾಸದರು ಕೂಡಿ ಸೇರಿ ಬರಲಿ ಪ್ರಾಂತಾಧಿಪರಿಗೆ ನಿಷ್ಠೆಯನ್ನು ಪ್ರಕಟಿಸಿದರು. ಇಷ್ಟು ಸಾಕು ಮಾಕ?

ಪರೀಕ್ಷೆಯ ಫಲಗಳು ನೋಡಿರಿ. ಮೋನಪ್ಪನೆಂಬುವನು ಮಂಗಳೂರಿನ ಒಂದು ಕಾಲೇಜದ ವಿದ್ಯಾರ್ಥಿಯು ಇಂಟರ್ಮೀಜಿಯೆಟ್ ವರ್ಗದಲ್ಲಿ ಕಲಿಯುತ್ತಿದ್ದನು. ಪರೀಕ್ಷೆಯು ಸಮೀಪಿಸಿ ಹಿಂತೆಂದು ಜಗಲಿಯೊಳು ಒಂದು ಸವೆ ಓದುತ್ತಿದನು. ಇದರಿಂದ ಅವನು ಭ್ರಮಿಷ್ಟನಾಗಿ ಕಳೆದ ೧೫ನೇ ತಾರೀಖಿಗೆ ಅವನು ಎಲ್ಲಿಯೋ ಹೋದನು ಮಾರನೇ ದಿನ ಅವನ ಹೆಣವು ಸೆರೆಯ ನದಿಯಲ್ಲಿ ಸಿಕ್ಕಿತು. ಹಾ! ಎಂಥ ಪರೀಕ್ಷೆ! ಎಲ್ಲಿಯ ಅಭ್ಯಾಸ!

ಕಲಕತ್ತೆಯ ಮುನಿಸಿಪಾಲಿಟಿಯ ಮೇಲೆ ಒಂದು ವಿಚಿತ್ರ ದಾವೆ. ನರೇಂದ್ರ ಕೀಟ ಎಂಬ ವಕೀಲರು ಮುಂಬಯಿಯ ಮುನಿಸಿಪಾಲಿಟಿಯ ಸಭಾಸದರು. ಅವರು ಒಂದು ದಿನ ಮುನಿಸಿಪಾಲಿಟಿಯ ಉಪ್ಪರಿಗೆಯ ಮೇಲೆ ತಿರುಗಾಡುವಾಗ ಕೆಳಕ್ಕನೆ ಕಾಲು ಜಾರಿಬಿದ್ದರು. ಸ್ವಸ್ಥರಾಗಲು ವಕೀಲರಿಗೆ ನಾಲ್ಕು ತಿಂಗಳು ಕಳೆದವು. "ನಾನು ನಿತ್ಯದಂತೆ ತಿರುಗಾಡುತ್ತಿದ್ದೆ. ಮೇಲುಪ್ಪರಿಗೆಯ ನೆಲವನ್ನು ಎಣ್ಣೆ ಹಚ್ಚಿ ಜಿಗುಟಾಗಿ ಮಾಡಿದ್ದರಿಂದ ನಾನು ಕಾಲು ಜಾರಿಬೀಳಬೇಕಾಯಿತು. ನಾಲ್ಕು ತಿಂಗಳು ನಿರರ್ಥಕವಾಗಿ ಕಳೆದ ಕಾರಣ ನನಗೆ ೧೧೦೦೦ ರೂಪಾಯಿಗಳ ನಷ್ಟವಾಯಿತು" ಎಂದು ವಕೀಲರು ಮುನಿಸಿಪಾಲಿಟಿಯ ಮೇಲೆ ದಾವೆ ಹೂಡಿರುವರು

— ಸರ್ ಶಂಕರನ್ ನಾಯರ ಶ್ರೀನಿವಾಸ ಶಾಸ್ತ್ರಿ ಕೇಳಕರ ಬಿಳ್ಗುಂಟಿ ವಾಮದಾರ ಮುಂತಾದ ಬಿನ್ನಭಿನ್ನ ಪ್ರಕೃತಿಯ ಭಿನ್ನಬಿನ್ನ ಮತಗಳ ಜನರು "ಭಾರತೀಯ ರಾಷ್ಟ್ರೀಯ ಪಕ್ಷ" ಎಂಬ ಹೊಸ ಪಕ್ಷದ ಪ್ರಾಣಪ್ರತಿಷ್ಠೆಯ ಸಮಾರಂಭಕ್ಕಾಗಿ ಮುಂಬಯಿಯಲ್ಲಿ ಇದೇ ಬರುವ ಏಪ್ರಿಲ ತಾರೀಖು ೩ನೇಗೆ ಸಂಬಂಧರು. ಹೊಸ ಇಲೆಕ್ಷನಿನಲ್ಲಿ ಸ್ವರಾಜ್ಯಪಕ್ಷಕ್ಕೆ ಇದಿರಾಗಿ ಇದೊಂದು ಹಂಚಿಕೆ! ಜಾತದಾರರೇ ಎಚ್ಚರಿಕೆ!

ಬ್ರಹ್ಮದೇಶದಲ್ಲಿ ದೇಶಬಂಧು ದಾಸರವರ ಸ್ಮಾರಕನಿಧಿಗೆ ಶ್ರೀ ಮಹಿಲಾಲ ಕೊಠಾರಿಯವರು ೪೫೦೦೦ ಸಾವಿರ ರೂಪಾಯಿಗಳನ್ನು ಸಂಗ್ರಹಿಸಿದರು

೧೯೧೧ರಿಂದ ೧೯೨೧ರ ವರೆಗಿನ ಜನಗಣನೆಯ ಲೆಕ್ಕದ ಮೇಲಿಂದ ಪ್ರತಿವರ್ಷ ೧೧೦೦೦ ಕ್ಷಯರೋಗಿಗಳು ಹೆಚ್ಚಾಗುತ್ತಿಲುವರೆಂದು ತಿಳಿದು ಬರುತದೆ

ಮುಂಬಯಿಯೊಳಗಿನ ಸರದಾರಗೃಹದಲ್ಲಿ ಕರ್ನಾಟಕಸ್ಥರು ಜಮೆಸೇರಿ ಕರ್ನಾಟಕ ಏಕೀಕರಣದ ವಿಚಾರ ಮಾಡಿದರು. ಅಧ್ಯಕ್ಷರಾದ ಶ್ರೀ ಸರದೇಸಾಯಿ ಶ್ರೀನಿವಾಸರಾವ ಕೌಜಲಗಿ, ರಾಮಚಂದ್ರ ಕಂಬಳಿ ಶ್ರೀ ಜೋಗಿ, ಕರ್ಕಿ ಇವರ ಉಪನ್ಯಾಸಗಳಾಗಿ ಏಕೀಕರಣದ ಯೋಜನೆಯನ್ನು ತಯಾರಿಸಲು ರಾಮಚಂದ್ರ ಕಂಬಳಿ ಶ್ರೀ ಕೌಜಲಗಿ ಮಾಗು ಕರ್ಕಿಯವರದೊಂದು ಮಂಡಳವು ನೇಮಿಸಲ್ಪಟ್ಟಿತು. ಈ ಕಮೀಟಿಯು ಯೋಜನೆಯನ್ನು ತಯಾರಿಸಿ ಅದನ್ನು ಇದೇ ಮೇ ತಿಂಗಳಲ್ಲಿ ಕರ್ನಾಟಕ ಪ್ರಾಂತಿಕ ಪರಿಷತ್ತಿನ ಬಳ್ಳಾರಿಯ ಅಧಿವೇಶನದ ಜೊತೆಗೆ ಸೇರಲಿಕ್ಕಿದ್ದ ಏಕೀಕರಣ ಪರಿಷತ್ತಿಗೆ ಸಾದರಪಡಿಸಬೇಕೆಂದು ತೀರ್ಮಾನವಾಗಿರುವದೆ

ದೇಶಬಂಧು ಚಿತ್ತರಂಜನ ದಾಸರವರ ಸ್ಮರಣಾರ್ಥವಾಗಿ ಈ ಗಾಲ ಪ್ರಾಂತದವರು ೧೦ ಲಕ್ಷ ರೂಪಾಯಿಗಳ ನಿಧಿಗೂಡಿಸಬೇಕೆಂದು ಸಂಕಲ್ಪಮಾಡಿದ್ದರು. ೮ ಲಕ್ಷ ರೂಪಾಯಿಗಳು ಈ ವರೆಗೆ ಸಂಗ್ರಹವಾದವು. ಕಲಕತ್ತೆಯೊಳಗಿನ ದೇಶಬಂಧುಗಳ ಮನೆಯಲ್ಲಿ "ಚಿತ್ತರಂಜನ ಸೇವಾಸದನ" ವೆಂಬ ಚಿಕಿತ್ಸಾಲಯವು ತಾ ೨೧-೩-೧೯೨೬ನೇಗೆ ಸ್ಥಾಪನೆಯಾಯಿತು

ಹಿಂದುಸ್ಥಾನದ ಕರಾವಳಿಯ ಹಿಂದುಸ್ಥಾನದ ಸಂರಕ್ಷಣ ಮಾಡುವದಕ್ಕಾಗಿ ಬ್ರಿಟಿಶ ನೌಕಾಸೇನಾ ಖಾತೆಗೆ ೧೫ ಲಕ್ಷ ರೂಪಾಯಿಗಳು ಕೊಡಲಾಗುತ್ತಿವೆ. ಹೊಸ ನೌಕಾಸೇನೆಯ ನಿರ್ಮಾಣವಾದರೂ ಈ ರಕಮು ತೆರಬೇಕಾಗುವದೆಂದು ವಿ. ಬ್ರಿಜಮೋಹನವರು ಪಾರ್ಲಿಮೆಂಟಿನಲ್ಲಿ ಹೇಳಿದರು! ಬ್ರಿಟಿಶರ ಉಪಕಾರ ನೋಡಿರಿ

ಆಕಸ್ಮಾದಾಬಾದದ ಕಂಡನಿವಾಲಾ ಮಾರ್ಕೇಟಿಗೆ ಬೆಂಕಿಹತ್ತಿದ ಉದ್ದೇಶದಿಂದ ಇದ್ದರು. ೪೦೦೦೦ ಸಾವಿರ ರೂಪಾಯಿ ಬೆಲೆಯ ಸಾಮಗ್ರಿಯಿದ್ದ ಉಗ್ರಾಣಗಳಿಗೆ ಬೆಂಕಿಹತ್ತು ಸದನ್ನು ಕಂಡು ಅವರಿಗೆ ಸರಕಾರದ ಬಟ್ಟೆ ಮಾರೋಣವಾಯಿತು. ಆಕಸ್ಮಾದಾಬಾದದ ನೆಕ್ಸ ಜಿಲ್ಹಾದ ಮಿ ಕ್ಲಾಮೆಂಟ್ಲರವರು ೫-೫ ವರ್ಷಗಳ ಕಠಿಣಶಿಕ್ಷೆ ಹಾಗು ೫೦೦-೫೦೦ ರೂಪಾಯಿಗಳ ದಂಡ ವಿಧಿಸಿದರು! ಮಾಲಿಕರಿಗೆ ಪಲೋ ಶಿಕ್ಷೆಯಾಗಬೇಕು

ಭಸೋಲ ಜಿಲ್ಹೆಯ ಭಾರ್ಗವ ಬ್ರಾಹ್ಮಣಜಾತಿಯ ಮುಂಬಯಿ ಹ್ಯಾಕೋರ್ಟಿನ ಎಡ್ವೋಕೇಟರಾದ ರಾ| ಕೆ ಎನ್ ಮುನ್ಷಿಯವರು ಜೈನ ಜಾತಿಯ ವಿಧವೆಯೊಡನೆ ವಿವಾಹ ಮಾಡಿದ ಬಗ್ಗೆ ಭಾರ್ಗವ ಜಾತಿಯವರು ರಾ| ಮುನ್ಷಿಯವರಿಗೆ ಬಹಿಷ್ಕರಿಸಿರುವರು

— ಪೇಶೀನ ಪಟ್ಟಣದಲ್ಲಿ ಚೀನಿ ವಿದ್ಯಾರ್ಥಿಗಳು ಪ್ರತೀಕಾರಕ್ಕಾಗಿ ಕಚೇರಿಯ ಮೇಲೆ ಸಾಗಿಹೋದರಂತೆ ಕಾವಲುಗಾರರು ಗುಂಡು ಹಾಕಿ ೫೦ ಮಂದಿಗಳನ್ನು ಕೊಂದರು ೩೦ ಜನರನ್ನು ಘಾಯಪಡಿಸಿದರು

— ತ್ರಿಚನಾಪಳ್ಳಿಯಲ್ಲಿ ಶ್ರೀ ರಂಗನ ದೇವಾಲಯವಿದೆ. ಒಂದು ೨೫ ೩೦ ವರ್ಷ ಪ್ರಾಯದ ಬ್ರಾಹ್ಮಣನೊಬ್ಬನು ಪೂಜಾರಿಗಳಿಗೆ ಶ್ರೀ ದೇವರ ಪೂಜೆಮಾಡಬೇಕೆನು ಧೂಪಾರತೀಯ ಸಮಯ ಅದನಮಾಡ ಕತ್ತಿಯಿಂದ ಕುತ್ತಿಗೆಯನ್ನು ಕೊಯ್ದುಕೊಂಡ ಶ್ರೀ ದೇವರಿಗೆ ಆತ್ಮಾರ್ಪಣ ಮಾಡಿದನು! ಇಂಥ ಆತ್ಮಹತ್ಯೆ!!

— ಧ ಬಳಿಯೊಳಗಿನ ಪೇರಿಯಲ್ಲಿ ಎರಡು ಕಾಡು ಹಂದಿಗಳು ಹಾವಳಿಯನ್ನೆಬ್ಬಿಸಿ ಒಬ್ಬ ಹೆಂಗಸಿಗೆ ಹಾಗು ಇಬ್ಬರು ಹುಡುಗರಿಗೆ ಘಾಯಪಡಿಸಿದವು. ಒಂದು ಹಂದಿಯನ್ನು ಯುರೋಪಿಯನ್ ಅಧಿಕಾರಿಗಳು ಮಾರನೇ ದಿನಕ್ಕೆ ಕೊಂದರು. ಕಾಡು ಪ್ರಾಣಿಗಳು ಬೇಟೆಯಲ್ಲಿ ಬರಹತ್ತಿದವೇನ?

— ಕಾಯಿದೆಯನ್ನು ಉಲ್ಲಂಘನ ಮದ್ಯ ಕಮೋಹಿಸುವವನ ಬೌಕಾ ಮಾಡಲಿಕ್ಕಾಗಿ ಅಡಿಕಾರಿ ಜನ್ನಪೆಕ್ಟರರಾದ ರಾ ರಾಘವಾಚಾರ್ಯರವರು ಮದ್ರಾಸ ಪ್ರಾಂತದ ನರಸಾಪುರಕ್ಕೆ ಹೋದಾಗ ಮದ್ಯ ಕಮೋಹಿಸುವವನೊಬ್ಬನು ಆಯುಧದಿಂದ ರಾ| ರಾಘವಾಚಾರ್ಯರವರ ಶಿರಚ್ಛೇದ ಮಾಡಿದನು. ಕೊಲೆಗಡುಕನನ್ನು ಸೆರೆ ಹಿಡಿದಿರುವರು. ಮದ್ಯದ ಮಹಿಮೆ ನೋಡಿರಿ

— ಶ್ರೀ ಹರಿಶ್ಚಂದ್ರಸೇನ ಎಂಬ ಬಂಗಾಲದ ಶ್ರೀಮಂತ ಗೃಹಸ್ಥರೊಬ್ಬರು ೮೦ ಸಾವಿರ ರೂಪಾಯಿಗಳನ್ನು ಹಿಂದೂ ಹುಡುಗಿಯರ ವಿವಾಹ ವಿಧವೆ ರೋಗಗ್ರಸ್ತ ಸ್ತ್ರೀ ಪುರುಷರಿಗೆ ಸಹಾಯ ಮಾಡಬೇಕಾಗಿ ನಿಕ್ಷೇಪ ಮಾಡಿಕೊಟ್ಟಿರುವರು

— ಸರ್ವದೇಶದಿಂದ ವನಸ್ಪತಿಗಳ ಹೃದಯಕ್ರಿಯೆಯ ಮೇಲೆ ಒದಗುವ ಪರಿಣಾಮವನ್ನು ಪ್ರಸಿದ್ಧ ವನಸ್ಪತಿಶಾಸ್ತ್ರಜ್ಞರಾದ ಸರ್ ಜಗದೀಶ ಚಂದ್ರ ಬೋಸರವರು ಶೋಧಿಸಿರುವರು. ಈ ಶೋಧದ ಸಹಾಯದಿಂದ ಸರ್ವದೇಶದಿಂದ ಪ್ರಾಣಿಗಳಿಗೆ ಗುಣಪಡಿಸುವ ಉಪಾಯವನ್ನು ಶೋಧಿಸುತ್ತಿರುವರು

— ಹೊಸ ಸರ್ವಾಧಿಕಾರಿಗಳಾದ ವೈತ್ ನೆಕರಗಳು ಹಿಂದಿನ ತಾ ೧ ನೇಗೆ ಪ ಅಧಿಕಾರಗೆ ಬಂದಿರುವರು. ೩ ನೇ ತಾರೀಖಿಗೆ ಸರ್ವಾಧಿಪತಿಸೂತ್ರಗಳನ್ನು ಕೈಕೊಳ್ಳುವರು. ಲೇಡಿಂಗ ದೊರೆಗಳು ಇದೇ ಸಮಯ ತನ್ನ ಅಧಿಕಾರಸೂತ್ರಗಳನ್ನು ಒಪ್ಪಿಸ....

— ರಂಗೂನದಿನ ಕಿಮೋಹೀನ ಎಂಬಲ್ಲಿ ಬೆಂಕಿ ಹತ್ತಿ ೧೦೦೦ ಕ್ಕೆ ಮಿಕ್ಕಿ ಮನೆಗಳು ಸುಟ್ಟವು. ೩ ಲಕ್ಷ ರೂಪಾಯಿಗಳ ನಷ್ಟ

— ಲಖನೌ ವಿಶ್ವವಿದ್ಯಾಲಯದವರು ಖಾದೀಯ ಕ್ರಮವನ್ನು ಕಾಲೇಜುಗಳೊಳಗಿನ ವಿದ್ಯಾರ್ಥಿಗಳಲ್ಲರೂ ಒಪ್ಪಿಯದಿಂದ ಸರಬರಾಯಬೇಕಾಗಿ ತೀರ್ಮಾನಿಸಿರುವರು

— ಹುಬ್ಬಳ್ಳಿಯಲ್ಲಿ ಒಬ್ಬ ಮಾರವಾಡಿಯು ಹಳೆ ಗಿರಾಕಿಗೆ ನಾಣ್ಯಗಳ ಸಿಕಲ ನಾಣ್ಯವನ್ನು ಕೊಟ್ಟನು. ಅದೇ ಮೊಟ್ಟೆಯಿಂದ ಗಿರಾಕಿಯು ತಿರುಗಿ ಕೊಡಲು, ಮಾರವಾಡಿ ನಿಕಲ ನಾಣ್ಯವನ್ನೇ ಕೊಟ್ಟನ, ಅದೂ ಸಟ್ಟಿದೆ. ಆ ಗಿರಾಕಿಯು ಮರಳಿ ಬಂದನು, ಮತ್ತೊಂದನ್ನು ಕೊಟ್ಟನು. ಅದೂ ಖೊಟ್ಟಿ ಹೀಗೆ ನಡೆಯಲು, ಒಳಿಯಲ್ಲಿದ್ದ ಪೋಲೀಸರಿಗೆ ಸಂಶಯ ಬಂತು. ಅವರು ಅಂಗಡಿಯನ್ನು ಶೋಧ ಮಾಡಿದರು. ಆಗ ೩೦ ರೂಪಾಯಿಗಳ ಖೊಟ್ಟಿ ನಿಕಲ ನಾಣ್ಯಗಳು ದೊರೆತವು! ಮಾರವಾಡಿಯು ಸೆರೆಮನೆ ಸೇರಿರುವನು

— ಮುಂಬಯಿಯ ಪ್ರಾಂತದಲ್ಲಿ ಪರದೇಶದಿಂದ ೧೯೨೪ ೨೫ನೇ ಸಾಲಿನಲ್ಲಿ ೫೧೮೭೩೭೭ ರೂಪಾಯಿಗಳ ವಿಷದ್ರವ್ಯಗಳು ಆಮದಾದವು! ಆರ್ಯಋಷಿಗಳ ದಿವ್ಯವನಸ್ಪತಿಗಳಿಂದ ಕಾಣಿಸಿದ ಭರತಖಂಡದಲ್ಲಿ ಈ ಪ್ರಕಾರ ಒಂದೇ ಒಂದು ಸಾಲಿನಲ್ಲಿ ವಾರ್ಷಿಕ ೧ ಕೋಟಿ ರೂಪಾಯಿ ಬಿಟ್ಟರೆ ಪ್ರತ್ಯಕ್ಷವಾಗುವದು ನಮ್ಮ ದುರ್ದೈವವಲ್ಲವೇ!

— ಅಮೇರಿಕೆಯ ಬೋಸ್ಟನ್ ಎಂಬಲ್ಲಿ ಉಗಿಬಂಡಿಯೊಂದು ೧೦೦೦ ಪ್ರವಾಸಿಕರನ್ನು ಕುಳ್ಳಿರಿಸಿಕೊಂಡು ಸಂಚಾರ ಮೇಲಿಂದ ಓಡುತ್ತಿತ್ತು. ಧಕ್ಕನೆ ಕಂಬ ತಪ್ಪಿತು. ಎರಡು ಡಬ್ಬಿಗಳು ಹೊಳೆಯಲ್ಲಿ ಬಿದ್ದು ೨೪ ಜನರು ಜಲದಲ್ಲೇ ಕಡೆಯುಸಿರೆಳೆದರು. ೯೩ ಜನರು ಘಾಯಪಟ್ಟಿರುವರು. ಉಗಿಬಂಡಿಯು ೫೦ ಅಡಿ ಹಾರಿಕೊಂಡಿತ್ತು. ಅನರ್ಥ

— ಫ್ರಾನ್ಸ ದೇಶದ ಟೂಲೋನ್ ಎಂಬಲ್ಲಿ ಒಂದು ಉಗ್ರಾಣಕ್ಕೆ ಬೆಂಕಿಬಿದ್ದು ೫೦ ಲಕ್ಷ ಫ್ರಾಂಕುಗಳ ಹಾನಿ. ಮತ್ತು ಹತ್ತಿ ನಷ್ಟ! ಉಗ್ರಾಣದ ಕಟ್ಟೋಣವು ಕುಸಿದುಬಿದ್ದಾಗ ೧೭ ಜನರು ಸತ್ತರು

— ಇಂಗ್ಲಂಡಿನಿಂದ ಹಿಂದುಸ್ಥಾನಕ್ಕೆ ಬರುವ ಪತ್ರಗಳಿಗೆ ೧½ ಆಣೆ ಸ್ಟಾಂಪು, ಹಿಂದುಸ್ಥಾನದಿಂದ ಇಂಗ್ಲಂಡಕ್ಕೆ ... ಹಾಕುವದಾದರೆ ೩ ಆಣೆ ತೆರಬೇಕು! ಇಂಗ್ಲಂಡದಲ್ಲಿ ಸ್ವರಾಜ್ಯ! ಹಿಂದುಸ್ಥಾನದಲ್ಲಿ ಮೊಂಟೆಗ್ಯೂ ಸ್ವರಾಜ್ಯ

— ದೆಹಲಿ ಬಳ್ಳಿಮರದ ಹಾಳ ಹತ್ತಿರ ಸಂದಿ ಗೃಹದಲ್ಲಿ ಹೊಟ್ಟೆ ಪಂಚಾರಕ್ಕಾಗಿ ಮದ್ದು ಗುಂಡುಗಳನ್ನು ತಯಾರಿ ಮಾಡುತ್ತಿದ್ದಾಗ ಧಕ್ಕನೆ ಸ್ಫೋಟವಾಗಿ ಅಪಘಾತ ಮಡಿದರು. ಅವರೊಡನೆ ಒಳಿಯಲ್ಲಿದ್ದ ಒಬ್ಬ ಹುಡುಗನೂ ಸೇರಿಕೊಂಡಿತು ಪಾಪ!!

— ೧೯೨೪ನೇ ಮಾರ್ಚ ಅಖೈರಿಗೆ ಅಂತ್ಯವಾಗುವ ವರ್ಷದಲ್ಲಿ ಮೈಸೂರ ದರಬಾರಿಗೆ ಪ್ರಜೆಗಳ ಹೆಂಡಕಾತದ ಆ|| ದಿಂದ ೬೫ ಲಕ್ಷ ರೂಪಾಯಿಗಳ ಉತ್ಪನ್ನವಾಯಿತು.

— ... ನ ಕೋಟು ಹೆಮ ಎಂಬ ಬ್ರಿಟಿಶ ನೌಕಾಸೇನಾ ಪತ್ನಿಯ ಅಫ್ರಿಕೆಯ ದಕ್ಷಿಣ ತುದಿಯಾದ ಕೇಪಟೌನಿನಿಂದ ಹೊರಟು, ಗ್ರೀಸ ಪಿಸಾಲಿಯೋದ ಮಾರ್ಗವಾಗಿ ಲಂಡನಕ್ಕೆ ತಾ ೧೩ನೇಗೆ ಮುಟ್ಟಿರುವರು. ೧೫ ಸಾವಿರ ಮೈಲು ಪ್ರವಾಸ ಮಾಡಲಿಕ್ಕೆ ಪ್ರವಾಸಿಕರಿಗೆ ೧೫ ದಿವಸಗಳು ಕಳೆದವು. ದಿನಕ್ಕೆ ಸರಾಸರಿ ೧೦೦೦ ಮೈಲು ಹಾರ್‍ಯಾಟ

— ರಾಷ್ಟ್ರಋಣವನ್ನು ತಗ್ಗಿಸುವದಕ್ಕಾಗಿ ನಮ್ಮ ಬ್ರಿಟಿಶ ಯುವರಾಜರು ಸತ್ಕಾರಕ್ಕಾಗಿ ಜರುಗಲಿಕ್ಕಿದ್ದ ಸಂ ... ನ ಸಮಾರಂಭವನ್ನು ರದ್ದುಪಡಿಸಿದರು. ಆದರೆ ಹಿಂದುಸ್ಥಾನದಲ್ಲಿ ಸರ್ವಾಧಿಪತಿ - ಪ್ರಾಂತಾಧಿಪತಿಗಳ ವಿಲಾಸಗಳು ಅಪ್ರತಿಹತವಾಗಿ ನಡೆದಿವೆ. ಮೇಲೆ ಅವರಿಗೆ ಬದಿಕೊಡಬೇಕೆಂಬ ಕ್ಕಾದೆಯಾಗಿ ಇಷ್ಟಿಷ್ಟು ಖರ್ಚು — ಈ ವರುಷ ಬ್ರಿಟಿಶ ದೇಶದ ಸೈನ್ಯಖರ್ಚು ೩೦ ಲಕ್ಷ ಪಾಉಂಡ ಅಂದರೆ ೩ ಕೋಟಿ ರೂಪಾಯಿ ಕಡಿಮೆ ಯಾಯಿತು

ಮಹಾತ್ಮರ ಆತ್ಮಚರಿತ್ರ

([illegible]) ಸಭ್ಯತೆಯ ತಾಲೀಮು.

ವನಸ್ಪತ್ಯಾಹಾರದ ಮೇಲಿನ ಆಸಕ್ತಿಯು ಕ್ರಮವಾಗಿ ಬೆಳೆಯುತ್ತ ನಡೆಯಿತು. ಸಾಲ್ಟರವರ ಪುಸ್ತಕದ ಆಹಾರ ವಿಷಯದ ಕುರಿತು ಹೆಚ್ಚೆಚ್ಚು ಪರೀಕ್ಷಿಸ ಮಾಡುವ ಜಿಜ್ಞಾಸೆಯುಂಟು ಮಾಡಿತು. ವನಸ್ಪತ್ಯಾಹಾರದ ವಿಷಯ [illegible] ಪುಸ್ತಕಗಳನ್ನೆಲ್ಲ ಕೊಂಡು ನಾನು ಓದಿದೆನು [illegible] ವಿಲಿಯಮ್ಸ [illegible] ಎಂಬ ಪುಸ್ತಕದಲ್ಲಿ [illegible] ಈ ವರೆಗೆ [illegible] ಚರಿತ್ರಾತ್ಮಕ [illegible] ಸಂಗ್ರಹವಾಗಿದೆ. ಪಿಥಾಗೋರಸ ಹಾಗು ಯೇಸು ಕ್ರಿಸ್ತ ಇವರ [illegible] ಈ ವರೆಗಿನ ತತ್ವಜ್ಞಾನಿಗಳು [illegible] ವನಸ್ಪತ್ಯಾಹಾರಿಗಳಾಗಿದ್ದರೆಂದು ಗ್ರಂಥಕಾರರು ಪ್ರತಿಪಾದಿಸಿರುವರು. ಡಾ [illegible] ಕಿಂಗ್ಸಫರ್ಡರ [illegible] ಕರಗತಿಯ [illegible] ಗ್ರಂಥವೂ ಚಿತ್ತಾಕರ್ಷಕವಿತ್ತು. [illegible] ಎಲಿನ್ಸನ ರವರು [illegible] ಲೇಖನಗಳಿಂದ ನನಗೆ ಬಹಳ ಸಹಾಯವಾಯಿತು. [illegible] ರೋಗಿಗಳ [illegible] ಆಹಾರದಿಂದ [illegible] ಲೇಖದಲ್ಲಿ ಪ್ರತಿಪಾದಿಸಿದ್ದಾರೆ. [illegible] ವನಸ್ಪತ್ಯಾಹಾರಿಗಳು ತಮ್ಮ [illegible] ವನಸ್ಪತ್ಯಾಹಾರವನ್ನೇ [illegible] ಇವೆಲ್ಲ ಗ್ರಂಥಗಳ ವಾಚನದಿಂದ ಆಹಾರದ ಪ್ರಯೋಗಗಳು ತೀರ ಮಹತ್ವದ್ದಾಗಿ ಪರಿಣಮಿಸಿದವು. ಮೊಟ್ಟಮೊದಲು, ಆರೋಗ್ಯಸಾಧನಕ್ಕಾಗಿ ಈ ಪ್ರಯೋಗಗಳನ್ನು ನಾನು ಕೈಕೊಂಡೆನು. ಮುಂದೆ ಧರ್ಮಸಾಧನವೇ ಪ್ರಧಾನ ಕಾರಣವಾಗಿ ಪರಿಣಮಿಸಿತು.

ನನ್ನ ಗೆಳೆಯನಂತು ನನಗಾಗಿ ಬಹಳ ಚಿಂತಿಸುತ್ತಿದ್ದನು. ಮಾಂಸಾಹಾರವನ್ನು ಕೊಳ್ಳದಿದ್ದರೆ ನನ್ನ ಶರೀರ [illegible] ಶಕ್ತಿಯು ಕುಗ್ಗುವದೆಂದು [illegible] ನಾನು [illegible] ಇಂಗ್ಲಿಷ ಸಮಾಜದಲ್ಲಿ ನನಗೆ [illegible] ಇದ್ದ [illegible] ಪ್ರೇಮದಿಂದಲೇ ಹೀಗೆ [illegible] ವನಸ್ಪತ್ಯಾಹಾರದ ಗ್ರಂಥಗಳ [illegible] ಅಶಕ್ತಿ [illegible] ದ್ದೇನೆಂದು [illegible] ಅಷ್ಟಷ್ಟು [illegible] ಒಂದು [illegible] ಪ್ರಯೋಗ ಮಾಡುವದರಲ್ಲಿ [illegible] ನಾನು ಮೂರ್ಖನಾಗುವೆನೆಂದೂ [illegible] ಗ್ರಹಿಸಿದನು. ಆದ್ದರಿಂದ ನನ್ನನ್ನು [illegible] ಸರಿಪಡಿಸುವದಕ್ಕಾಗಿ ಕೊನೆಯ ಯತ್ನವೊಂದನ್ನು ಮಾಡಿದನು. ನಾಟಕಕ್ಕೆ ಹೋಗುವದಕ್ಕಾಗಿ ನನ್ನನ್ನು [illegible] ಕರೆಕೊಂಡನು. [illegible] ಮುಂಚೆ ಹೋಲ್‌ಬರ್ನ ಭೋಜನಮಂದಿರದಲ್ಲಿ ನಾವು ಊಟ ಮಾಡುವದಿತ್ತು. ಭೋಜನ ಮಂದಿರವು ದೊಡ್ಡ ಅರಮನೆಯಂತಾಗಿತ್ತು. ವಿಕ್ಟೋರಿಯಾ ಹೊಟೇಲು ಬಿಟ್ಟಂದಿನಿಂದ ನಾನು ನೋಡಿದ ದೊಡ್ಡ ಭೋಜನಗೃಹವು ಇದೇ. ವಿಕ್ಟೋರಿಯಾ ಹೊಟೇಲಿನಲ್ಲಿ ಉಳಕೊಂಡಿದ್ದರಿಂದ ನನಗೇನೂ ಲಾಭವಾಗಲಿಲ್ಲ ಯಾಕೆಂದರೆ ಅಲ್ಲಿ ನಾನು ಆಗ ಜಂಜಾಲದಲ್ಲಿದ್ದೆ. ಈ ಭೋಜನಗೃಹಕ್ಕೆ ಹೋದರೆ ನಾನು ದಾಕ್ಷಿಣ್ಯಕ್ಕೊಳಪಟ್ಟು ಯಾವದೂ ಪ್ರಶ್ನೆ ಮಾಡದೆ ತಂದಿಟ್ಟದ್ದನ್ನು ತಿನ್ನುವೆನೆಂಬ ಕಲ್ಪನೆಯಿಂದ ಗೆಳೆಯನು ನನಗೆ ಉಪಾಯದಿಂದ ಈ ಭೋಜನ ಮಂದಿರಕ್ಕೆ ಕರೆಕೊಂಡಿದ್ದನು. ಬಹಳ ಜನರು ಅಲ್ಲಿ ಊಟ ಮಾಡುತ್ತಿದ್ದರು. ನಾನೂ ಗೆಳೆಯನೂ ಒಂದು ಮೇಜನ್ನು ವ್ಯಾಪಿಸಿ ಕೂಡುಕೊಂಡೆವು. ಮೊಟ್ಟಮೊದಲು, ಸೂಪ್ ಎಂಬ (ಮಾಂಸಮಿಶ್ರಿತ ರಸಾಯನ) ವು ಬರಿಸಲ್ಪಟ್ಟಿತು. ಅದನ್ನು ಯಾತರಿಂದ ತಯಾರಿಸುತ್ತಾರೆಂದು ತಿಳಿಯಲು ನಾನು ಆತುರಪಟ್ಟೆ. ಆ ಕುರಿತು ಗೆಳೆಯನಿಗೆ ಪ್ರ[illegible]ಸಲು ಸನ್ನಿಧಾನಗಳಿಲ್ಲ. ಆದ್ದರಿಂದ ವೇಟರ್ (ಊಟ ಬಡಿಸುವವನಿಗೆ) ನಾನು ಸನ್ನೆ ಮಾಡಿದೆನು. ಗೆಳೆಯನು ನನ್ನ ಎದುರಿಗೆ ಕೂತಿದ್ದನು. ಗೆಳೆಯನು ನನ್ನ ಸಂಜ್ಞೆಯನ್ನು ನೋಡಿದನು. ಕೋಪಾವಿಷ್ಟನಾಗಿ "ಏನಾಯಿತು?" ಎಂದು ಗದರಿಸಿದನು. ಬಹಳ ಅನುಮಾನ ಪಡಿದು, ನಾನು ಹೇಳಿದೆನೆಂದರೆ: "ಸೂಪವು ವನಸ್ಪತಿಯಿಂದ ಮಾಡಿರುವದೋ ಹೇಗೆಂದು ನನಗೆ ಗೊತ್ತು ಮಾಡಬೇಕಾಗಿದೆ" ಎಂದೆನು. "ಸಭ್ಯ ಸಮಾಜದ ಸಹವಾಸಕ್ಕೆ ನೀನು ಅನರ್ಹನು, ತಕ್ಕದ್ದಾಗಿ ನಡಕೊಳ್ಳಲಿಕ್ಕೆ ಬಾರದಿದ್ದರೆ ನೀನು ಹೊರಹೋಗು, ಬೇರೆ ಯಾವದಾದರೂ ಭೋಜನಾಲಯದಲ್ಲಿ ಹೊಟ್ಟೆ ತುಂಬಿಕೊಂಡು ಹೊರಗೆ ನನ್ನ [illegible] ಮಾಡುತ್ತಿರು" ಎಂದು ನನ್ನ ಮೇಲೆ ಹಾರಿ ಹೇಳಿದನು. ಇದನ್ನು ಕೇಳಿ ನನಗೆ ಸಂತೋಷವಾಯಿತು. ನಾನು ಕೂಡಲೆ ಹೊರಗೆ ಹೋಗಿಬಿಟ್ಟೆ. ಹತ್ತಿರವೇ ವನಸ್ಪತ್ಯಾಹಾರದ ಒಂದು ಭೋಜನಾಲಯವಿತ್ತು. ಆದರೆ, ಅದು [illegible] ಆದ್ದರಿಂದ ನಾನು ಆ ರಾತ್ರಿ ಉಪವಾಸ [illegible] ಗೆಳೆಯನ ಜೊತೆಗೆ ನಾನು ನಾಟಕಕ್ಕೆ ಹೋದೆ [illegible] ಸಂಭವಿಸಿದ ಪ್ರಸಂಗದ ಕುರಿತು ಗೆಳೆಯನೇ [illegible] ಮಾತಾಡಲಿಲ್ಲ ನಾನಂತು ಈ ಕುರಿತು ಸುಮ್ಮನೇ ಉಳಕೊಂಡೆ.

ಇದೇ ನಮ್ಮೊಳಗಿನ ಕೊನೆಯ ಗೆಳೆತನದ ಕಲಹವಾಗಿತ್ತು. ಇದರಿಂದ ನಮ್ಮ ಗೆಳೆತನಕ್ಕೆ ಎಳ್ಳಷ್ಟೂ ಬಾಧೆ [illegible] ನನ್ನ ಗೆಳೆಯನ ಯತ್ನಗಳೆಲ್ಲ ಪ್ರೇಮಮೂಲಕವಾಗಿ ನಡೆದಿದ್ದವೆಂದು ನಾನರಿತಿದ್ದೆ. ಆದರಿಂದ ನನ್ನ [illegible] ಆಚಾರ – ವಿಚಾರಗಳ ಭೇದವಿದ್ದರೂ ನನ್ನ ಆದರ [illegible] ಕಳೆಗುಂದಲಿಲ್ಲ.

ಆದರೂ, ಇತರ ಪ್ರಕಾರದಿಂದ ನನ್ನ ಗೆಳೆಯನ [illegible] ಸಮಾಧಾನಪಡಿಸಬೇಕೆಂದು ನಾನು ನಿಶ್ಚಯಿಸಿದೆನು. ಇನ್ನು ಮುಂದೆ ಅಸಭ್ಯತೆಯನ್ನು ಬಿಟ್ಟು ನಾನು ಸಭ್ಯನಾಗಿ [illegible] ವನಸ್ಪತ್ಯಾಹಾರದಿಂದ ಉಂಟಾದ ದೋಷಗಳನ್ನು [illegible] ಸಭ್ಯತೆಯ ಲಕ್ಷಣಗಳಿಂದ ಮುಚ್ಚಬೇಕೆಂದು [illegible] ಇಂಗ್ಲಿಷ ಸಭ್ಯ ಗೃಹಸ್ಥನು [illegible] ಸಂಕಲ್ಪ ಮಾಡಿದೆನು.

ಮುಂಬಯಿಯಲ್ಲಿ ಹೊಲಿಸಿದ ಅರಿವೆಗಳನ್ನು ನಾನು ಹಾಕಿಕೊಳ್ಳುತ್ತಿದ್ದೆ. ಅವು ಇಂಗ್ಲಿಷ ಸಮಾಜಕ್ಕೆ ಅನರ್ಹವೆಂದು ನನ್ನ ವಿಚಾರವಾಯಿತು. ಆದರಿಂದ [illegible] ಎಂಬಲ್ಲಿಂದ ಹೊಸ ಅರಿವೆಗಳನ್ನು ತಂದೆನು. [illegible] ಬಹಳ [illegible] ಕೊಟ್ಟು ನನಗೊಂದು ಟೊಪ್ಪಿಗೆಯನ್ನು [illegible] ಬಾಂಡ ಸ್ಟ್ರೀಟ ಎಂಬುದು ಆಡಂಬರದ ವ್ಯಾಪಾರದ ಸ್ಥಳ. ಅಲ್ಲಿ ಸಂಧ್ಯಾಕಾಲದ ಪೋಷಾಕಿಗಾಗಿ ಹತ್ತು ಪವನನ್ನು ನಿರರ್ಥಕವಾಗಿ ತೆತ್ತೆನು. ಸ್ನೇಹಿತನಾದ [illegible] ಅಣ್ಣನಿಗೆ ಬರೆದು [illegible] ಚಿನ್ನದ ಸರಪಳಿಯನ್ನು ತರಿಸಿದೆನು. ತಯಾರಿಸಿಟ್ಟ ಕೊರಳ ವಸ್ತ್ರವನ್ನು ಧರಿಸುವದು ಅಷ್ಟು ಸಭ್ಯತೆಯಲ್ಲ. ಆದರಿಂದ ನಾನು ಅದನ್ನು ಕಟ್ಟಿಕೊಳ್ಳುವ ಕಲೆಯನ್ನು ಕಲಿತೆನು. ಹಿಂದೆ ಸ್ವದೇಶದಲ್ಲಿದ್ದಾಗ ಕ್ಷೌರವನ್ನು ಮಾಡಿಸಿಕೊಳ್ಳುವ ಸಮಯದ ಮಾತ್ರ ಕನ್ನಡಿ ನೋಡುವ ಸುಸಂಧಿ ಪ್ರಾಪ್ತವಾಗುತ್ತಿತ್ತು. ಕೊರಳ ವಸ್ತ್ರವನ್ನು ಕಟ್ಟಿಕೊಳ್ಳಲಿಕ್ಕೂ ತಲೆಗೂದಲುಗಳನ್ನು ಸರಿಪಡಿಸಿಕೊಳ್ಳಲಿಕ್ಕೂ ದೊಡ್ಡ ಕನ್ನಡಿಯ ಮುಂದೆ ನಿಂತು ನನಗೆ [illegible] ಕಳೆಯಬೇಕಾಗುತ್ತಿತ್ತು. ನನ್ನ ತಲೆಗೂದಲು ಅಷ್ಟೇನು ಮೃದುವಾಗಿರಲಿಲ್ಲ. ಆದರಿಂದ ಅವನ್ನು [illegible] ಕೂಡಲು ಬೇಕಾಗುವ ಬ್ರಶ್‌ಗಳು, ಕೂದಲುಗಳಿಗೂ [illegible] ದೊಡನೆ ಕಾದಾಟವಾಗುತ್ತಿತ್ತು. ಟೊಪ್ಪಿಗೆಯನ್ನು ಹಾಕಿಕೊಳ್ಳುವಾಗ ಹಾಗು ತೆಗೆದಾಗ, ಯಂತ್ರದಂತೆ ನನ್ನ ಕೈಯು ತಲೆಯ ಮೇಲ್ಬದಿಗೆ ಹೋಗಿ ಕೂದಲುಗಳನ್ನು [illegible]ತ್ತಿತ್ತು. ಅದಲ್ಲದೆ, ಶಿಷ್ಟಸಮಾಜದಲ್ಲಿ ನಾನು ಕುಳಿತಾಗ ಪುನಃ ಪುನಃ ಕೈಯು ತಲೆಗೂದಲುಗಳ ಮೇಲೆ [illegible]ತಿರುಗುತ್ತಿತ್ತು. ಹೀಗೆ ಕೈಯಾಡಿಸುವದು ಒಂದು ಸಭ್ಯತೆಯ ಲಕ್ಷಣವು.

ಇಷ್ಟು ಬೆಡಗಿನಿಂದಲೂ ನನಗೆ ಸಾಕೆನಿಸಲಿಲ್ಲ. ಇಂಗ್ಲಿಷ ಸಭ್ಯ ಗೃಹಸ್ಥನಾಗಲು ಅನ್ಯ ಕೆಲವು ಗುಣಗಳನ್ನು ಸಂಗ್ರಹಿಸಬೇಕೆಂದು ನನ್ನ ಕಲ್ಪನೆಯಾಗಿ, ನಾನು ಹೆಣಗಾಡಹತ್ತಿದೆನು. ನರ್ತನ, ಫ್ರೆಂಚ ಭಾಷಾಜ್ಞಾನ ಹಾಗು ವಾಕ್ಚಾತುರ್ಯಗಳನ್ನು ಕಲಿಯುವದಗತ್ಯವೆಂದು ನನಗೆ ಹೇಳಲಾಯಿತು. ಫ್ರೆಂಚ ಭಾಷೆಯು ನೆರೆಯ ಫ್ರಾನ್ಸ ದೇಶದ ಭಾಷೆಯು, ಹಾಗೆಯೇ ಇಡೀ ಯುರೋಪ ಖಂಡದ ರಾಷ್ಟ್ರಭಾಷೆಯು. ಯುರೋಪ ಖಂಡದಲ್ಲಿ ಪ್ರಯಾಣ ಮಾಡುವ ನನ್ನ ಇಚ್ಛೆ ಇತ್ತು. ನರ್ತನ ವರ್ಗದಲ್ಲಿ ದಾಖಲಾಗಿ ನರ್ತನ ಕಲಿಯುವ ನಿಶ್ಚಯಮಾಡಿ, [illegible] ತಿಂಗಳಿಗಾಗಿ [illegible] ಪವನು ಫೀ ತುಂಬಿದೆನು. [illegible] ವಾರಗಳಲ್ಲಿ [illegible] ಪಾಠಗಳನ್ನು ಕಲಿತಿರಬೇಕು, ಆದರೆ, ತಾಳಕ್ಕೆ [illegible] ಯಾಗಿ ನರ್ತನ ಮಾಡುವದು ನನಗೇನು ಶಕ್ಯವಾಗದು. ರಾಗದ ಪೆಟ್ಟಿಗೆಯು ಬಾರಿಸಲ್ಪಡುತ್ತಿತ್ತು, ಆ ಸ್ವರ ಭೇದವೇನು ನನಗೆ ತಿಳಿಯುತ್ತಿದ್ದಿಲ್ಲ. 'ಒಂದು,' 'ಎರಡು' 'ಮೂರು' ಹೀಗೆ ಅನ್ನುತ್ತಿದ್ದರು. ಅವುಗಳೊಳಗಿನ ಭೇದವನ್ನು ರಾಗದ ಪೆಟ್ಟಿಗೆಯು ಹೇಳುತ್ತಿತ್ತು. ಆದರೆ, ನನಗೇನು ತಿಳಿಯುತ್ತಿದ್ದಿಲ್ಲ. ಮುಂದೇನು ಮಾಡುವದು? [illegible] ಹೇಳಿದಂತೆ, ಮೂಷಕಪರಿಹಾರಕ್ಕಾಗಿ ಮಾರ್ಜಾಲಪಾಲನ, ಮಾರ್ಜಾಲ ಪೋಷಣಕ್ಕಾಗಿ ಧೇನುಪಾಲನ, ಧೇನುಪಾಲನಕ್ಕಾಗಿ ಸೇವಕಪಾಲನ, ಹೀಗೆ ಸನ್ಯಾಸಿಯ ಪರಿವಾರ ಬೆಳೆದಂತೆ, ನನ್ನ ಮಹತ್ವಾಕಾಂಕ್ಷೆಯ ವ್ಯಾಪವು ಬೆಳೆಯಿತು. ಪಾಶ್ಚಾತ್ಯ ತಾಳ-ಸ್ವರಗಳ ಜ್ಞಾನವಾಗಬೇಕಾದರೆ ಸಾರಂಗಿಯನ್ನು ಕಲಿಯಬೇಕೆಂದು ನನ್ನ ಕಲ್ಪನೆಯಾಯಿತು. [illegible] ಪವನು ಕೊಟ್ಟು ಒಂದು ಸಾರಂಗಿಯನ್ನು ಖರೀದಿ ಮಾಡಿದೆನು, ಹಾಗಾಗಿ ಮತ್ತಿಷ್ಟಂತು ತೆರಬೇಕು. ವಾಕ್ಚಾತುರ್ಯವನ್ನು ಕಲಿಸುವದಕ್ಕಾಗಿ ಬಂದೊಬ್ಬ ಶಿಕ್ಷಕರ ಕೋರಹಚ್ಚಿ ಅವರಿಗೆ ಪ್ರಥಮ ದಕ್ಷಿಣೆಯೆಂದು [illegible] ಗಿನಿಯನ್ನು ಕೊಟ್ಟೆನು. ಬೆಲ್ ದವರ ಸ್ಟಾಂಡರ್ಡ ಇಲೋಕ್ಯೂಶನಿಸ್ಟ ಎಂಬ ಗ್ರಂಥವನ್ನು ಶಿಕ್ಷಕರ ಹೇಳಿಕೆ ಮೇರೆಗೆ ಕೊಂಡುಕೊಂಡು ಪಿಟ್‌ನವರ ಭಾಷಣವನ್ನು ಪಾಠಮಾಡಹತ್ತಿದೆನು.

ಆದರೆ ಬೆಲ್ ಸಾಹೇಬರು ನನಗೆ ಘಂಟೆ ಬಾರಿಸಿದಂತೆ ಎಚ್ಚರಿಕೆ ಮಾಡಿದರು. "ಇಂಗ್ಲಂಡದಲ್ಲಿ ನಾನೇನು ಇಡೀ ಆಯುಷ್ಯವನ್ನು ಕಳೆಯುವದಿಲ್ಲ. ವಾಕ್ಚಾತುರ್ಯವನ್ನು ಕಲಿತು ನಾನೇನು ಮಾಡಬೇಕು? ನರ್ತನದಿಂದ ನಾನು ಹೇಗೆ ಸಭ್ಯಗೃಹಸ್ಥನಾಗುವೆ? ಸಾರಂಗಿಯನ್ನು ಹಿಂದುಸ್ತಾನದಲ್ಲಿಯೂ ಕಲಿಯಬಹುದು. ನಾನೊಬ್ಬ ವಿದ್ಯಾರ್ಥಿ. ನಾನು ನನ್ನ ಅಭ್ಯಾಸಕ್ರಮವನ್ನು ಮುಂದರಿಸಬೇಕು. [illegible]ಗಳಲ್ಲಿ ಸೇರಿಕೊಳ್ಳಲು ತಕ್ಕ ಪಾತ್ರತೆಯನ್ನು ಪಡೆದಿರಬೇಕು. ನನ್ನ ಶೀಲದ ಮೇಲಿಂದ ನಾನು ಸಭ್ಯ ಸ್ಥರನೆಂದು [illegible] ಇಲ್ಲದಿದ್ದರೆ ಆ ಆಸೆಯನ್ನೇ ನಾನು ತೊರೆಯಬೇಕಾದರ" ಇತ್ಯಾದಿ ವಿಚಾರಗಳಿಂದ ನಾನು [illegible] ವಾಕ್ಚಾತುರ್ಯದ ಶಿಕ್ಷಕರಿಗೆ ಈ ವಿಚಾರಗಳನ್ನೆಲ್ಲ ಬರೆದು ತಿಳಿಸಿ ಒಂದು ಪತ್ರ ಬರೆದೆನು. ಇನ್ನು ಮುಂದೆ ಅವರಲ್ಲಿ ಪಾಠ ಕಲಿಯ ಬರಲಿಕ್ಕೆ ನನ್ನನ್ನು ಕ್ಷಮಿಸಬೇಕಾಗಿಯೂ ಬೇಡಿಕೊಂಡೆನು. [illegible] ವಾರಗಳನ್ನಷ್ಟೇ ಕಲಿತಿದ್ದೆನು. ನರ್ತನ ಶಿಕ್ಷಕರಿಗೂ ಇದೇ ರೀತಿ ಬರೆದೆ. ಸಾರಂಗಿಯ ಶಿಕ್ಷಕಳ ಬಳಿಗೆ ಸ್ವತಃ ಹೋಗಿ ಬಂದ ಬೆಲೆಗೆ ಸಾರಂಗಿಯನ್ನು ಮಾರಾಟಮಾಡಬೇಕೆಂದು ವಿನಂತಿ [illegible] ಮಾಡಿಕೊಂಡೆ. ಆ ಶಿಕ್ಷಕರೊಳಗೆ ನನ್ನ ಮೇಲೆ ವಿಶ್ವಾಸವಿದ್ದುದರಿಂದ ನಾನು ದಿಕ್ಕು ತಪ್ಪಿಬಿದ್ದೆನೆಂದು ನನಗೆ ಅನಿಸಿದ ಬಗೆ [illegible] ಅವಳಿಗೆ ತಿಳಿಸಿದೆನು. ಈ ತೊಡಕಿನಿಂದ ವಿಮೋಚನ ಹೊಂದಲು ಅವಳೂ ಪ್ರೋತ್ಸಾಹಿಸಿದಳು. ಈ ಮೋಹಕಾಲದಲ್ಲಿ [illegible] ತಿಂಗಳು ಕಳೆದವು. ಅಂದಿನಿಂದ ನಾನು ವಿದ್ಯಾರ್ಥಿಯಾಗಿ [illegible] ವ್ಯಾಪಾರವು [illegible] ಬಹಳ ಕಾಲದ [illegible]

ಚೆವರಲೆಟ್

ಮೋಟಾರಕಾರ್ ಏಜನ್ಸಿ, ಕುಮಟಾ



ನಾವು ಹೊಸ ಚೆವರಲೆಟ್ ಮೋಟಾರ ಗಾಡಿಗಳನ್ನು ಗಿರಾಕಿಗಳಿಗೆ ಅನುಕೂಲವಾಗುವಂತೆ ತರಿಸಿಕೊಡುತ್ತೇವೆ. ಅಪೇಕ್ಷೆಯುಳ್ಳವರು ಸಮಕ್ಷಮ ಅಥವಾ ಪತ್ರದ್ವಾರಾ ಮಾಹಿತಿ ತಿಳಕೊಳ್ಳಬಹುದು.

ಸೋಲಏಜಂಟ — **ಎಸ್. ಎಲ್ ಧೋಕಪ್ಪ ಮತ್ತು ಬ್ರದರ್ಸ, ಶಿರ್ಸಿ.**

ಕುಮಟಾ ಏಜಂಟ- **ಜಿ. ಡಿ. ಮಾಳಗಿಕರ ಎಂಡ್ ಕೋ,**

ಜಿ. ಓ. ಸಿ. ಪೆಟ್ರೋಲ ನಮ್ಮಲ್ಲಿ ಬೇಕಷ್ಟು ಸಿಗುತ್ತದೆ. ವನ್‌ಲಿಓಯ್ ಹಾಗು ಮಿಚಲಿನ ಮೋಟಾರ ಹಾಗು ಸಾಯಿಕಲ್ ಟಾಯರ-ಟ್ಯೂಬ ಇತ್ಯಾದಿ ಸಾಮಗ್ರಿಗಳು ಯೋಗ್ಯಕಿಮ್ಮತಿನಿಂದ ಪೂರೈಸುತ್ತೇವೆ.

ಸೂಚನೆ:— ನಮ್ಮಲ್ಲಿ ರಿಪೇರಿಂಗ ಕೆಲಸವು ಉತ್ತಮವಾಗಿಯೂ, ಯಾಂತ್ರಿಕ ರೀತಿಯಿಂದಲೂ ಮಾಡಿಕೊಡಲ್ಪಡುತ್ತದೆ. ಅದಲ್ಲದೆ, ನಮ್ಮಲ್ಲಿಂದ ಮೋಟರುಗಳ ಪ್ರಸಿದ್ಧ ರೇಗೋ ಕಂಪನಿಯ ಉತ್ತಮ ಹಂಚುಗಳು ಪೂರೈಸಲ್ಪಡುತ್ತವೆ. ಅಗತ್ಯವಿದ್ದವರು ಸಮಕ್ಷಮ ಅಥವಾ ಪತ್ರದ್ವಾರಾ ಮಾಹಿತಿ ತಿಳಕೊಳ್ಳಬಹುದು.

G. D. Malgikar & Co,
KUMTA

(Registered Trade Mark.)

ಸುಲಭ ಕ್ರಯ! ಸುಲಭ ಕ್ರಯ!

ಡಾ ಕ್ಟರ ಜೀ ಬೀ ಯಾದವ

ಸುಗಂಧ ನಶ್ಯದ ಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪಿನಸಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಹೋಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂಗು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪುಕ್ಕಟೆ ಕಳಿಸಲಾಗುವದಿಲ್ಲ.

ಬುದ್ದಿ ಒಂದಕ್ಕೆ ಕ್ರಯ ರೂ ೦-೪-೦, ವ್ಹಿ. ಪಿ. ೪ ಆಣೆ. ಡಜನ್ ೧ ಕ್ಕೆ ರೂ. ೨-೮-೦. ವ್ಹಿ. ಪಿ. ೦-೮-೦ ದಯಮಾಡಿ ನಿಮ್ಮ ಹೆಸರನ್ನೂ ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ — ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪೋ. ಬಾ. ೫೧೦, ಜಾರ್ಜಟೌನ, ಮದರಾಸ

ಸರಕಾರದಿಂದ ಪೇಟಂಟ ಪಡೆದ

ಮಲ್ಹಾರ ಕಪ್ಪಲಿ.

ತೋಟಿಗರಿಗೆ ಬಹು ಅನುಕೂಲವಾಗಿರುವದು.

ಇದು **mild steel**ವೆಂಬ ಜಾತಿಯ ಉಕ್ಕಿನ ತಗಡಿನಿಂದ ಮಾಡಲ್ಪಟ್ಟಿರುವದು ಎತ್ತುಗಳಿಗೆ ಬಹಳೇ ಹಗರು ಹೋಗುತ್ತದೆ. ಇದರೊಳಗಿಂದ ಒಂದು ಹನಿ ಸಹ ನೀರು ಕೆಳಗೆ ಬೀಳದಂತೆ ಏರ್ಪಾಡು ಮಾಡಲ್ಪಟ್ಟಿರುವದು. ಕಪ್ಪಲಿ ಬಾಯಿಂದ ನೀರು ಪತ್ಥಣಿಯಲ್ಲಿ ಬೀಳುವ ಕಾಲಕ್ಕೆ ಎತ್ತುಗಳಿಗೆ ಭಾರವಾಗದಂತೆ ರಚನೆಯಲ್ಲಿ ಸುಧಾರಣೆಯನ್ನು ಮಾಡಿರುತ್ತೇವೆ.

ಬೆಲೆಯ ಬಗ್ಗೆ ಬರೆದು ತಿಳಿದುಕೊಳ್ಳಿರಿ

ಕಿರ್ಲೋಸ್ಕರ ವಾರ್ತೆ —ಜನವರಿ ಸಂಚಿಕೆಯು

ಹೊರಬಿದ್ದಿರುವದು ವಾರ್ಷಿಕ ವರ್ಗಣಿ ರೂ ೧-೪-೦

ಕಿರ್ಲೋಸ್ಕರ ಬಂಧು ಲಿಮಿಟೆಡ್; { ಕಿರ್ಲೋಸ್ಕರವಾಡಿ, ಜಿಲ್ಹಾ ಸಾತಾರಾ

ಪ್ರಯಾಣಿಕರಿಗೆ

ವಿಶೇಷ ಅನುಕೂಲ!

ನೇಮಿಸಿದ ಹೊತ್ತಿಗೆ ಮೋಟರಿನ ವ್ಯವಸ್ಥೆ ಹಾಗೂ

ಬಿಡಿಗೆ, ಊಟ, ವಾಸದ ಬಗ್ಗೆ ಯೋಗ್ಯ ವ್ಯವಸ್ಥೆ.

ಈ ಕೆಳಗಿನಂತೆ ಮೋಟಾರ ವ್ಯವಸ್ಥೆಯಿದೆ —

ಗೋಕರ್ಣದಿಂದ ಕುಮಟಾ, ಹೊನ್ನಾವರ, ಭಟ್ಕಳ, ಗೋಕರ್ಣದಿಂದ ಶಿರಸಿ, ಶಿರ್ಸಿ, ಹುಬ್ಬಳ್ಳಿ, ಗೋಕರ್ಣದಿಂದ ಅಂಕೋಲಾ, ಕಾರವಾರ

ಟಿಪ್ಪಣಿ — ಟಿಕೇಟು ಮುಂದಾಗಿ ಪಡಕೊಳ್ಳಬಿಡಿ ಸುವವರು ಈ ಕೆಳಗಿನ ಪತ್ತೆಗೆ ಪತ್ರವ್ಯವಹಾರ ಮಾಡತಕ್ಕದ್ದು

ಅನಂತ ಮಂಗೇಶರಾವ ಪಶಿಹಿತ್ತಲ,
ಮೋಟರ ಏಜಂಟ,
ಕುಮಟಾ, (ಉತ್ತರ ಕನ್ನಡ)

S U, Narayanacharya & CO
Chaukamba, BENARES CITY

ನಮ್ಮಲ್ಲಿ ಎಲ್ಲಾತರದ ರೇಷ್ಮೆ ಪೀತಾಂಬರ, ಜರಿ ಕಣ ಜರಿ ಸೀರೆ ಕಾಶ್ಮೀರ್ ಶಾಲು, ಕರವಸ್ತ್ರ ರುದ್ರಾಕ್ಷಿ, ಕಸ್ತೂರಿ, ಲಿಂಗಗಳೂ, ಸ್ಫಟಿಕಮಣಿ ಮೊದಲಾದ ಮಾಲುಗಳು ಸಿಗುತ್ತವೆ. ಕ್ಯಾಟಲಾಗ ಕೋರುವವರಿಗೆ ಉಚಿತವಾಗಿ ಕಳಿಸಲಾಗುವದು.

ವಿಳಾಸ— ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪನಿ, ಚೌಕಂಬಾ, ಕಾಶೀಕ್ಷೇತ್ರ

ಅಮೃತಾಂಜನ.

ಇದರ ಉಪಯೋಗದಿಂದ, ವಾತವೇದನ, ಗುಳುಗುಳು ಇತ್ಯಾದಿ ವ್ಯಾಧಿಗಳೆಲ್ಲರೆ, ಧಾರುಣಾದಂತಾಗಿರುವದು. ಕಳೆದ ೩೫ ವರ್ಷಗಳಿಂದ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗುತದೆ. ಲಕ್ಷಗಟ್ಲೆ ಕುಟುಂಬಗಳು ಅಮೃತಾಂಜನವನ್ನು ಉಪಯೋಗಿಸುತ್ತಿರುವವು. ಅದರಿಂದ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಬೇನೆ, ಸಂಧಿವಾತ ಮೊದಲಾದ ಎಷ್ಟೋ ವ್ಯಾಧಿಗಳ ಮೇಲೆ ಇದು ಗುಣಕಾರಿಯೆಂದು ಅರಿಯುವರನ್ನು ಇದು ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು. ಕಿಮ್ಮತು ೧೦ ಆಣೆ ವ್ಹಿ. ಪಿ. ಖರ್ಚು ಬೇರೆ.

ಅಮೃತಾಂಜನ ಡಿಪೋ, ಫೋರ್ಟ. ಮುಂಬಯಿ.

ಬೆಸ್ಟ ಅಲಾರಂ ಟೈಂಪೀಸು.



ಈ ಗಡಿಯಾರುಗಳು ಜರ್ಮನ್ ದೇಶದಲ್ಲಿ ತಯಾರಿಸಿದ್ದು ಮೇಲುಗಡೆ ಎಂದೂ ಕೆಡ್ಬಾಗದಂಥ ನಿಕ್ಕಲ್ ಬಳ್ಳಿಯುಮುಚ್ಚಳವಿರುವದು. ಇದಕ್ಕೆ ಒಂದಾವರ್ತಿ ಬೀಗ ಕೊಟ್ಟರೆ, ೩೦ ಗಂಟೆಯು ಕಾಲ ನಡೆಯುವದು. ಮತ್ತು ಬರಾಬರ ಗಂಟೆಯನ್ನು ತೋರಿಸುವದು. ಗಡಿಯಾರದ ಎತ್ತರ ೬ ಅಂಗಲ ವಿರುವದು ಗಂಟೆ ತೋರಿಸುವ ತಯಲು ೪ ಅಂಗಲವಿರುವದು. ಇದರಲ್ಲಿ ಯಾರೇ ಆಗಲಿ, ಬೇಕಾಬೇಗನ ಗಂಟೆಯನ್ನು ಗರು[illegible] ಹಿಡಿಯಬಹುದು. ಇದು ಅಂಗಡಿ, ಸ್ಕೂಲು, ಮನೆ [illegible] ರೂಮು, ಗುಡಿ ಮಂ[illegible]ಗಳಲ್ಲಿ ಇಡಲು ಬಹು ಲಾಯಖಾದದ್ದು. ಇವಕ್ಕೆ [illegible] ವರ್ಷದ ಗ್ಯಾರಂಟಿ ಕೊಡುವೆವು ಕ್ರಯ ೧ಕ್ಕೆ ರೂ [illegible] ಅಲಾರಂ ಇಲ್ಲದ್ದು ೧ಕ್ಕೆ ರೂ. ೪-೪-೦

ಸ್ಟ್ ಇಮಿಟೇಶನ್ ರೇಶ್ಮೆಸೀರೆಗಳು

ಈ ಸೀರೆಗಳನ್ನು ಹೆಸರುವಾಸಿ ಹೊಂದಿದ ದೊಡ್ಡ ಕಂಪನಿಯವರಿಂದ ತಯಾರಿಸಲ್ಪಟ್ಟಿವೆ [illegible] ಉದ್ದವೂ [illegible] ಅಗಲವೂ ಇರುವದ ಇವನ್ನು [illegible] ಪಟ್ಟೇದ ಹದನ್ ಗಟ್ಟಿಯಾದ [illegible] ರೇಶಿಮೆಯಿಂದಲೂ ತಯಾರಿಸಿದ ಅಂದವಾದ ಅಂಚೂ, ಸುಂದರವಾದ ಸೆರಗೂ ಇರುವದು ಇವು ಯಾವಾಗೂ ರೇಶಿಮೆಯಂತೆ [illegible] ಎಲ್ಲಾ [illegible]ಗಳಲ್ಲಿಯೂ ಸಿಕ್ಕುವವು ಮತ್ತು ಎಲ್ಲಾ ಮಹಜರಿಗೂ [illegible] ಕ್ರಯ ನಂ ೧ಕ್ಕೆ ರೂ [illegible] ನಂ. ೨ಕ್ಕೆ ರೂ [illegible]

ವಿಳಾಸ - **ಎಂ. ಬೆನ್ಸನ್ ಎಂಡ್ ಕೋ**
೫೦೪, ಪೋರ್ಟಟೌನ, ಮದರಾಸ

ಸುಗಂಧಿ ತಂಬಾಕೂ ಜರ್ದಾ

ಈ ಜರ್ದಾ ತಿನ್ನಲಿಕ್ಕೆ ಕಡಕ ವಿದ್ದು, ಸುವಾಸಿಕವಿರುತ್ತದೆ ಇದರ ಸೇವನದಿಂದ ಬಾಯಿಯು ಹೊಲಸು, ವೇದನೆ, ಹುಳ ಇವು ನಾಶವಾಗಿ ಹಲ್ಲುಗಳು ಒಳ್ಳೇ ಘಟ್ಟಿಯಾಗುತ್ತವೆ ಇದರ ಸೇವನದಿಂದ [illegible] ವಿಕಾರಗಳುಂಟಾಗ[illegible] ಭೀತಿಯಿಲ್ಲ. ಕಾರಣ, ತಂಬಾಕು ಸೇವಿಸುವವರು ಅವಶ್ಯವಾಗಿ ಅನುಭವ ಕೊಳ್ಳಬೇಕು. [illegible] ರೂ. ೦-೦-೬, [illegible] ರೂ. ೦-೯-೦, [illegible] ರೂ ೧-೦-೦, [illegible] ಹುಡಿಗಳ [illegible] ರೂ ೧೬-೦-೦, ಟ. ಪೆ. ಖರ್ಚು ವಗೈರೆ ಪ್ರತ್ಯೇಕ

ಸುಗಂಧಿ ನಶ್ಯ.—ಈ ನಶ್ಯವು [illegible] ತಂಬಾಕಿನಿಂದ ಮಾಡಿದ್ದಿದು ಇದರಿಂದ [illegible] ಘಂಡಿ [illegible] ಮುಂತಾದವುಗಳು [illegible] ಕಳೆಯು ಭಾರವಾಗಿದ್ದರೂ ಹಗುರವಾಗಿ [illegible] ಚಪಲತೆಯು [illegible] ಯಾವದೇ ಕೆಲಸವನ್ನು ಕೈಕೊಳ್ಳಲಿಕ್ಕೆ [illegible] ಉಂಟಾಗುತ್ತದೆ. ಒಮ್ಮೆ ಪರೀಕ್ಷಿಸಿ [illegible] ೧ ಡಬ್ಬಿ ಕಿಂ. ರೂ ೦-೪-೦; ೧ [illegible] ಡಬ್ಬಿ ಕಿಂ ರೂ ೩-೦-೦ ವಿ. ಪೋ [illegible]

ಉತ್ತಮ ಬೀಡಿಗಳು:—ಅತ್ಯುತ್ತಮ ಪ್ರತಿಯ ತಂಬಾಕಿನಿಂದ ಹನ್ನಾಗಿ ಕಟ್ಟಿದ ಬೀಡಿಗಳ ನಮ್ಮಲ್ಲಿ ತಯಾರಿರುತ್ತವೆ ಕಿಮ್ಮತ್ತಿನ ವಿಷಯಕ್ಕೆ ಬರೆದ [illegible] ಸೋಡಿ ಮಾಲಿಗ ಆರ್ಡರ ಕೊಡಬಹುದು. ಇದರ ಹೊರತು, ನಮ್ಮಲ್ಲಿಯು ಬಾಜಾರದಲ್ಲಿ ಎಲ್ಲಾ ಪ್ರಕಾರಗಳ ತಂಬಾಕು ಬರುತ್ತದೆ. [illegible] ತಂಬಾಕವನ್ನು ಯೋಗ್ಯ ದರದಲ್ಲಿ ಕೊಂಡು, ಖರೇದಿ ಮಾಡಿಕೊಳ್ಳುವೆವು. ವಿಶೇಷ ಮಾಹಿತಿ ಬಗ್ಗೆ ಪತ್ರವ್ಯವಹಾರ ಮಾಡಿದರೆ ಕೂಡಲೆ ಉತ್ತರ ಬರೆಯುವೆವು

ಪತ್ರ,— **ಎಸ್ ಬಿ. ಕದಂ,**
ಬೀಡಿ ಮತ್ತು ತಂಬಾಕು ಜರ್ದಾ ದುಕಾನ,
ಮು: ಪೋ: ನಿಪ್ಪಾಣಿ, ಜಿ ಬೆಳಗಾವ

"ಚಾಟಾನೂಗಾ" ಕಬ್ಬಿನ ಗಾಣ!



ಜಗತ್ತಿನಲ್ಲಿ ಸರ್ವೋತ್ಕೃಷ್ಟವೆಂದೇ ಇದು ಇಷ್ಟು ಪ್ರಖ್ಯಾತಿ ಹೊಂದಿತು!

ನಂ ೧೩, ರೂ. ೧೪೫
,, ೧೫, ರೂ ೧೮೫.
,, ೨೨, ರೂ ೧೯೦.
,, ೨೯ ರೂ ೨೪೮.

ಪಟ್ಟಾಲು ವ ಇಂಡಿಯ ರೇಲ್ವೆ ಸ್ಟೇಶನ್ನಿನ ವರೆಗೆ ತಂದು ಕೊಡಲ್ಪಡುವದು.

ಇದರ ರೋಲುಗಳು ಶುದ್ಧ ಕಬ್ಬಿಣದಿಂದ ಮಾಡಿದ್ದಿರುತ್ತವೆ. ಕಬ್ಬು ನೊಳಗಿನ ಹನಿ ಹನಿ ರಸವನ್ನೂ ಕೂಡ ಹಿಂಡಿ ತೆಗೆಯುವ ವ್ಯವಸ್ಥೆ ಮಾಡಬರುತ್ತದೆ. ಗಾಣದ ಎರಡೂ ಬದಿಗಳ ಯಾವದೇ ಬದಿಯಿಂದ ಕಬ್ಬು ಕೊಡಬಹುದು

ಆರ್ಡರಿನ ಸಂಗಡ ೩ ಹಣವನ್ನು ಡಿಪೋಝಿಟ್ಟಾಗಿ ಕಳಿಸಬೇಕು.

ಕ್ಯಾಟಲಾಗು "ಡಬ್ಲ್ಯು ೧೧೩" ಪುಕ್ಕಟೆ!

ಮಿರ್ಲೆಸ ಬ್ರದರ್ಸ ಮತ್ತು ಕಂಪನಿ, ಲಿಮಿಟೆಡ್.

ಕೋಡಾಕ ಹೌಸ, ಹೋರ್ನಬಿ ರೋಡ, ಮುಂಬಯಿ.



ಏನಂಟೆಬು ಬೇಕು! ಏನಂಟೆರು ಬೇಕು!

ನಮ್ಮಲ್ಲಿ

ಅತಿ ಮನೋಹರವಾದ ಶೀಶೆ ಕಟ್ಟಿಗೆಯ

ದೇವರ ಮಂಟಪಗಳೂ,

ಹೆಂಗಸರ ಸೌಭಾಗ್ಯವತಿ ಪೆಟ್ಟಿಗೆಗಳೂ, ತಿಕ್ಷನೇರಿ ಪೆಟ್ಟಿಗೆಗಳೂ, ಅಪೀಸ ಬಾಕ್ಸಗಳೂ, ರೋಕಿಂಗ ಖುರ್ಚಿಗಳೂ ಹಾಗೂ ಯಾವತ್ತೂ ತರದ ಮನೇ ಸಾಮಾನು ಸಿಗುತ್ತದೆ.

ನಮ್ಮ ವಿಳಾಸ:—

ದಿ ನೋರ್ಥ ಕೆನರಾ ಟ್ರೇಡಿಂಗ ಕಂಪನಿ,
ಶಾಂತಿ ಭುವನ,
ಕಾರವಾರ.

धातु क्षीणता व कमजोरपणा यांसाठीं

मदन मंजरी गोळ्या. (रजिस्टर्ड.)

या दिव्य गोळ्या रक्त व वीर्य सुधारून त्यांची चांगली वाढ करतात पचन शक्ति सुधरून नरसाकडे साफ होतें. त्याचप्रमाणे प्रत्येक प्रकारची अशक्तता दूर होऊन शरीर तेजदार व बलवान होतें. किं. ४० गोळ्यांच्या डबीस रु १.

रमण विलासिनी गोळ्या. रात्री फक्त १ गोळी दुधाबरोबर खाल्यानें [illegible]मागें अचिन्तमन होत. किं. डबीस रु. १

नपुंसकत्वारी घृत. हा लेप पुरुषाच्या गुह्यभागावर लावला असतां सर्व रोग नाश पाऊन खरें पुरुषत्व प्राप्त होतें. किं. डबीस रु. १.

कुमठा एजंट :— शाश्वत स. तम्मा शेणवी बेलेकेरी.

राजवैद्य नारायणजी केशवजी वैद्यः— ३९३ काळबादेवी रोड मुंबई २

Printed and Published by Krishnarao Keshav Shenvi (Editor) at his Star of Kanara Press Kumta

ವರ್ಷ ೧೮.

ಕಾನಡಾವೃತ್ತ.

THE KANARA NEWS.

ಪತ್ರದ ವರ್ಗಣಿ.
ಕುಮಟೆಯಲ್ಲಿ ಅಗಾವು ರೂಪಾಯಿ 2-4-0.
ಕುಮಟೆಯ ಹೊರಗಿನಿಂದ ರೂ. 3-0-0.
[illegible] ರೂಪಾಯಿ 3-2-0.
[illegible] ಸಂಚಿಕೆಗೆ 0-1-0.

सर्वपांतहितकर्ता [illegible] इति महति विरोधे वर्तमाने समाजे [illegible] कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಸಂಚಿಕೆ ೫೬

ಜಾಹಿರಾತುಗಳ ದರ [illegible]

—(ಕುಮಟಾ—ಕಾನಡಾವೃತ್ತ, ಸೋಮವಾರ, ತಾರೀಖು ೫ ಮಾಹೆ ಎಪ್ರಿಲ್ ಸನ್ ೧೯೩೬ ನೇ ಇಸವಿ)—

हिंदुस्थानातील रहिवाशास ज्याप्रमाणे हिंदुस्थानची हवा त्याप्रमाणेच हे औषध हिंदुस्थानातील लोकास ज्यास्त फायदेशीर आहे.

द्राक्षासव- तीन रतलची किंमत २ रुपये;

रामबाण औषधे
सर्दी घालविणारे,
भूक वाढविणारे
शौचास साफ करणारे,
झोप आणणारे,
शक्ति देणारे,
तरतरीतपणा आणणारे.

फिर्याज काविका
कॅटलॉग मागवा,

संडु फार्मास्युटिकल वर्क्स लिमिटेड,
मुंबई नं. १३

एजंट— मेसर्स पंडित आणि कंपनी.
तीर्थहळ्ळी

ಎಲ್ಲಾ ನೋವುಗಳಿಗೆ ದಿವ್ಯೌಷಧ

ವಾತಹಾರಿ ತೈಲ.

[illegible]

[illegible] ಕುಮಟಾ.

ಬೇಕಾದ ಚಿನ್ನಾಭರಣಗಳು ನಮಗೆ ಆರ್ಡರ ಕೊಟ್ಟಲ್ಲಿ ಯೋಗ್ಯ ಮುದ್ದತ್ತಿನಲ್ಲಿ ಕೊಡುವೆವು.

R. S. KASARGOD, B. A.

Jewellers, KUMTA.

ಆರ್. ಎಸ್. ಕಾಸರಗೋಡ, ಬಿ. ಎ.,
ರತ್ನಾಭರಣ ವ್ಯಾಪಾರಿ, ಕುಮಟಾ.

ಯಾವದೇ [illegible] ಗಡಿಯಾರವನ್ನು

ಬರೇ ೭ ರೂಪಾಯಿಗಳಿಗೆ ಕೊಡುತ್ತೇವೆ.



[illegible]

ಅಲ್ಪವೇ ಇವೆ: ಕೂಡಲೇ ಬರೆಯಿರಿ.

ವಿ — Swan House: P B 608 P T Madras.

ಅತ್ಯಲ್ಪಬೆಲೆ! ಉಚಿತ!

ಕೇವಲ ಉಚಿತ!



ಉಚಿತ್ ಕೇವಲ

[illegible]

ಬರೇ ರೂಪಾಯಿ ೫

CAPTAIN WATCH CO., P. B 365. MADRAS

ಗೌರೀಹುಣ್ಣಿವೆಯಿಂದ ೪ನೇ ವರ್ಷ ಪ್ರಾರಂಭ

ಸಚಿತ್ರ ಜಯಕರ್ನಾಟಕ ಮಾಸಪತ್ರಿಕೆ

ಸಂಪಾದಕ--ಆಲೂರ ವೆಂಕಟರಾಯರು

ಇದರಲ್ಲಿ [illegible] ಸಾಹಿತ್ಯ, [illegible] ಇತ್ಯಾದಿ ವಿಷಯಗಳು ಬರುವವು. ಪ್ರಬಂಧ ಪರೀಕ್ಷೆಯೂ, [illegible] ಪ್ರತಿ ಸಂಚಿಕೆಯಲ್ಲಿ [illegible] ಚಿತ್ರಗಳೂ ಬರುತ್ತವೆ. [illegible] ಧಾರವಾಡ.

ರೋಗದಿಂದ ನರಳಬೇಡಿರಿ.

[illegible] ಜ್ವರ, ಜ್ವರಗಳ್ಳೆ, ಚಳಿಜ್ವರ, [illegible] ಕಫ, ಅಗ್ನಿಮಾಂದ್ಯ, [illegible] ಪ್ರದರ, [illegible]

[illegible]

ಎಸ್ ಎಲ್ ಘಾಟಕಪ್ಪ ಮುತ್ತು ಬ್ರದರ,
ಶಿರಶಿ.

ಟಿ. ಎಸ್. ಮೋಟರ ಸರ್ವಿಸ. ಶಿವಮೊಗ್ಗಾ.

ಗೇರಸಪ್ಪಾ ಜೋಗಿಗೆ ರೆಗ್ಯೂಲರ್ ಸರ್ವಿಸ್



ಶಿವರಾತ್ರಿಯ ಸಮಯದಲ್ಲಿ ಗೋಕರ್ಣಕ್ಕೆ ಸ್ಪೆಶಲ್ ಲಾರಿಗಳು

(೧) ಹುಬ್ಬಳ್ಳಿ 'ಯಲ್ಲಾಪುರ- ಅಂಕೋಲಾ- ಕಾರವಾರ (೨) ಹುಬ್ಬಳ್ಳಿ- ಮುಂಡಗೋಡ- ಶಿರ್ಶಿ ಕುಮಟಾ- ಹೊನ್ನಾವರ- ಭಟ್ಕಳ (೩) ಕುಮಟಾ- ಶಿರ್ಶಿ- ಸಿದ್ದಾಪುರ- ಗೆರಸಪ್ಪಾ- ಜೋಗ) Gersappa Falls)ಸಾಗರ ಶಿವಮೊಗ್ಗಾ—ಈ ಲೈನುಗಳಲ್ಲಿ ರೆಗ್ಯೂಲರ್ ಸರ್ವಿಸ ನಡೆಯುತ್ತದೆ.
[illegible] ಎಲ್ಲಾ ಸ್ಟೇಶನ್ನುಗಳಲ್ಲೂ [illegible]
[illegible] ತಿಳಿದುಕೊಳ್ಳಬಹುದು

M. Manjappa
Proprietor

धातू क्षीणता व कमजोरपणा यांसाठीं

मदन मंजरी गोळ्या. (रजिस्टर्ड.)

या दिव्य गोळ्या रक्त व वीर्य सुधारून त्यांची चांगली वाढ करतात. पचन शक्ति सुधारून मलाकडे साफ होतें. त्याचप्रमाणें प्रत्येक प्रकारची अशक्तता दूर होऊन शरीर तेजदार व बलवान होतें. किं. ८० गोळ्यांच्या डबीस रु. १.

रमणी विलासिनी गोळ्या. रात्रीं फक्त १ गोळी दुधाबरोबर खाल्यानें इच्छेप्रमाणें स्तंभन होतें. किं. डबीस रु. १

नपुंसकत्वांगी घृत. हा लेप पुरुषाच्या गुह्यभागावर लावला असतां सर्व रोग नाश पावून खरें पुरुषत्व प्राप्त होतें. किं. डबीस रु. १.

कुमटा एजंट.— माधव [illegible] शेणवी वेलेकर

राजवैद्य नारायणजी केशवजी मेघः— ३९३ कलबादेवी रोड मुंबई २

ಸರಕಾರದಲ್ಲಿ ರಜಿಸ್ಟರ ಆದಂಥ

[illegible] ಸರ್ಟಿಫಿಕೆಟುಗಳು ಮತ್ತು ಸುವರ್ಣಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು.

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ

ಈ ಮಧುವು [illegible] ಈ ಮಧುವಿನ ಸೇವನದಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ [illegible] (ನಿಜವಾಗಿ [illegible] ಅನುಭವಕ್ಕೆ ಬರುವದು) [illegible] ತರುಣ ಸ್ತ್ರೀಪುರುಷರು ಈ ದ್ರಾಕ್ಷಾರ್ಕಮಧುವಿನ ಸೇವನ ಮಾಡಿ [illegible] ಇದರಿಂದ ಕ್ಷಯರೋಗ, ಉದರರೋಗ ಮೊದಲಾದವುಗಳು [illegible] ಸ್ತ್ರೀಸಂಭೋಗ [illegible] ಗುಣಬರುವದು. [illegible]

ವ್ಯಾನೇಜರ— ದ್ರಾಕ್ಷಾರ್ಕಮಧು ಆಫೀಸ, ಪೋ. [illegible] ಬೆಳಗಾಂವ

ರಾಗದ ಪೆಟ್ಟಿಗೆಗಳು.

ತಬಲ ಜೋಡಿ ಇತ್ಯಾದಿ ಗಾಯನ
ಸಾಮಾನು

೧ ರಾಗದ ಪೆಟ್ಟಿಗೆ ಕಿಂ. ೩೦, ೪೦, [illegible]
[illegible] ಪೆಟ್ಟಿಗೆ ಕಿಂ [illegible]
೩. ತಬಲ ಜೋಡಿ ಕಿಂ. [illegible]
[illegible] ಗ್ರ್ಯಾಮ [illegible] ಕಿಂ [illegible]
[illegible]

ವಿಶೇಷ ಮಾಹಿತಿಬಗ್ಗೆ ನಮ್ಮ [illegible]

[illegible]

[illegible] ಕಂಪನಿ, ವಿಠ್ಠಲವಾಡಿ ಎದುರಿಗೆ
[illegible] ಕಾಳಬಾದೇವಿ ಮುಂಬಯಿ

ಪ್ರಶ್ನಮಾಲಿಕೆ

ಕರ್ನಾಟಕ ಏಕೀಕರಣದ ಬಗ್ಗೆ.

(೧) ಹಿಂದುಸ್ಥಾನದಲ್ಲಿ ಭಾಷಾನುಕ್ರಮವಾಗಿ ಪ್ರಾಂತ ರಚನೆಯಾಗಬೇಕೆಂಬ ತತ್ವಕ್ಕೆ ತಮ್ಮ ಒಪ್ಪಿಗೆ ಇದೆಯೋ?

(೨) ಸದ್ಯಸ್ಥಿತಿಯ ಬ್ರಿಟಿಶ ಪ್ರಾಂತಗಳ ರಚನೆಯು ಭಾಷಾನುಕ್ರಮವಾಗಿ ಮಾಡಲ್ಪಟ್ಟಿಲ್ಲವೆಂಬುದನ್ನು ತಾವು ಒಪ್ಪುವಿರೋ?

(೩) ಬ್ರಿಟಿಶ ಪ್ರಾಂತವು ಮುಂಬಯಿ, ಮದ್ರಾಸು, ಕೊಡಗು ಎಂಬ ಮೂರು ಬೇರೆ ಬೇರೆ ಅಧಿಕಾರಗಳಿಗೆ ಒಳಗಾಗಿದೆಯೆಂಬುದು ತಮಗೆ ಗೊತ್ತಿರುವುದೋ?

(೪) ಬ್ರಿಟಿಶ ಕರ್ನಾಟಕವು ಹೀಗೆ ಮೂರು ಭಾಗಗಳಲ್ಲಿ ಹರಿದು ಹಂಚಲ್ಪಟ್ಟದ್ದರಿಂದ ಕರ್ನಾಟಕದ ಸಾಂಸ್ಕೃತಿಕ, ರಾಜಕೀಯ, ವಿದ್ಯೆಯ, ಆರ್ಥಿಕ ಪ್ರಗತಿಗೆ ಬಾಧೆಯುಂಟಾಗಿರುವುದೆಂದು ನಿಮಗೆ ತೋರುವದಿಲ್ಲವೋ?

(೫) ಹಿಂದುಸ್ಥಾನದಲ್ಲಿ ಬಂಗಾಲ ಹಾಗೂ ಆಸಾಮು ಪ್ರಾಂತಗಳು ಭಾಷಾನುಕ್ರಮವಾಗಿ ರಚಿಸಲ್ಪಟ್ಟಿರುವ ಸಂಗತಿಯೂ ಒರಿಸಾ ಹಾಗೂ ಆಂಧ್ರ ಪ್ರಾಂತಗಳು ಅದರ ಸಲುವಾಗಿಯೇ ಚಳವಳಿ ಮಾಡುತ್ತಿರುವವೆಂಬ ಸಂಗತಿಯೂ ತಮಗೆ ಗೊತ್ತಿರುವುದಷ್ಟೆ?

(೬) ಭಾಷಾನುಕ್ರಮವಾದ ಪ್ರಾಂತರಚನೆ ಮಾಡಬೇಕೆಂಬ ತತ್ವವನ್ನು ಬ್ರಿಟಿಶ ಸರಕಾರದವರು ಒಪ್ಪಿಕೊಂಡಿರ ವರೆಂಬ ದನ್ನು ತಾವು ಅರಿತಿರುವಿರೋ?

(ಇಂಡಿಯನ ಕಾನ್ಸ್ಟಿಟ್ಯೂಶನಲ್ ರಿಫಾರ್ಮಿನ ಮಾಂಟೆ ಗ್ಯೂ ಚೆಮ್ಸ್‌ಫೋರ್ಡ ಸಾಹೇಬರು ಮಾಡಿದ ರಿಪೋರ್ಟಿನ ಪರಿಚ್ಛೇದ [illegible] ನೋಡಬೇಕು)

(೭) ಭಾರತೀಯ ರಾಷ್ಟ್ರಸಭೆಯು (ಕಾಂಗ್ರೆಸ್ಸು ಈ ತತ್ವಕ್ಕೆ ಒಪ್ಪಿಗೆಯನ್ನಿತ್ತು ೧೯೨೦ರಲ್ಲಿ ಅದರ ನಾಗಪುರ ಅಧಿವೇಶನದಲ್ಲಿ ಭಾಷಾನುಕ್ರಮವಾಗಿ ಕಾಂಗ್ರೆಸ್ ಪ್ರಾಂತಗಳನ್ನು ಮಾಡಿ ಕರ್ನಾಟಕಕ್ಕೆ ಒಂದು ಪ್ರತ್ಯೇಕ ಕಾಂಗ್ರೆಸ ಪ್ರಾಂತವನ್ನು ಕೊಟ್ಟಿದ್ದು ತಮಗೆ ಗೊತ್ತಿರುವದೋ?

(೮) ನಮ್ಮ ಕರ್ನಾಟಕದ ಸದ್ಯದ ವಿಚ್ಛಿನ್ನ ಸ್ಥಿತಿಯನ್ನು ಲಕ್ಷ್ಯಕ್ಕೆ ತಂದರೆ ಈಗ ನಾವು ನಮ್ಮ ಕರ್ನಾಟಕವನ್ನು ಏಕೀಕರಿಸಿ ಭಾಷಾನುಕ್ರಮವಾದ ಒಂದು ಪ್ರಾಂತವನ್ನಾಗಿ ಮಾಡಿಕೊಳ್ಳದಿದ್ದರೆ ನಮ್ಮ ನೆರೆಹೊರೆಯ ಪ್ರಾಂತಗಳಲ್ಲಿ ನಾವು ಸಮಾನಿಷ್ಟರಾಗಿ ಹೋಗುವೆವೆಂದು ನಿಮಗೆ ತೋರುವದಿಲ್ಲವೋ?

(೯) ಎಲ್ಲ ವಿಷಯಗಳಲ್ಲಿಯೂ ಕರ್ನಾಟಕದ ಏಳ್ಗೆಯಾಗಬೇಕಾದರೆ ಕರ್ನಾಟಕವು ಒಂದು ಪ್ರತ್ಯೇಕ ಪ್ರಾಂತವಾಗುವದು ಅವಶ್ಯವಿರುವದೆಂದು ತಮಗೆ ತೋರುವದಿಲ್ಲವೋ?

(೧೦) ಒಂದು ಏಕೀಕೃತ ಕರ್ನಾಟಕ ಪ್ರಾಂತವಾಗಬೇಕೆಂಬ ಧ್ಯೇಯವನ್ನು ಸಾಧಿಸಿಕೊಳ್ಳಲಿಕ್ಕೆ ಯಾವ ಸಾಧನಗಳನ್ನು ತಾವು ಸೂಚಿಸುವಿರಿ?

(೧೧) ಈ ಏಕೀಕರಣದ ಬಗ್ಗೆ ತಮ್ಮ ಆಕ್ಷೇಪಗಳೇನಾದರೂ ಇವೆಯೋ? ಇಲ್ಲವಾದರೆ ಯಾವ ಆಕ್ಷೇಪಗಳಿಗಾದರೂ ಆಸ್ಪದವಿರುವದೋ?

(೧೨) ಈ ವಿಷಯದ ಬಗ್ಗೆ ವರ್ತಮಾನಪತ್ರ ಪ್ರಶ್ನೆಗಳು ತಮ್ಮ ಜ್ಞಾಪಕಕ್ಕೆ ಬರುವವೋ? ಬಂದರೆ, ಅವುಗಳನ್ನು ಬರೆದು ಅವುಗಳಿಗೆ ದಯವಿಟ್ಟು ಉತ್ತರಗಳನ್ನು ಕೊಡಬೇಕು.

ಹವ್ಯಕ ಸಮಾಜ.

ಕಾವ್ಯ ತ್ರಿಲೋಕ ಧಾರೇಶ್ವರದ ಕರ್ನಾಟಕ ಸಂಸ್ಕೃತ ರತ್ನಮಾಲೆಯ ಕಾರ್ಯಕರ್ತರು ಬರೆಯುವದೇನಂದರೆ,—

(೧) ಹವ್ಯಕರ ಮಠಗಳಾವವು? ಎಲ್ಲಿವೆ?

(೨) ಪ್ರತಿಯೊಂದು ಮಠವು ಯಾರಿಂದ, ಎಂದು ಸ್ಥಾಪಿಸಲ್ಪಟ್ಟಿತು?

(೩) ಈ ವರೆಗೆ ಪ್ರತಿಯೊಂದು ಮಠದಲ್ಲಿ ಶ್ರೀಗುರುಪರಂಪರೆಗಳಾವವು? (ಪೂರ್ವಾಶ್ರಮಾಭಿಧಾನ, ದೀಕ್ಷಾ ಮತ್ತು ಸಂನ್ಯಾಸ, ಕಾಲ ಸಹಿತ)

(೪) ಪ್ರತಿಯೊಂದು ಮಠಕ್ಕೆ ಈ ವರೆಗೆ ದೊರೆತಿರುವ ಮಹಾತ್ಮ್ಯವುಳ್ಳ ಶ್ರೀಗಳ ಕಾಲದಲ್ಲಿ ಎಂದೆಂದು, ಏನೇನು ಸನದು (ತಾಮ್ರ ಶಾಸನಾದಿ)ಗಳು ದೊರೆತವು ಇರುತ್ತವೆ? ಮತ್ತು ಅವುಗಳ ಯಥಾ ಪ್ರತಿ (ನಕಲು) ಗಳು. ಪ್ರತಿಗಳನ್ನು ಬರೆಯಲು ಸಾಧ್ಯವಿಲ್ಲದೆ ಪಾದುಕೆಗಳ ಫೋಟೋ (ಚಿತ್ರ), (ಇವು ಅವಶ್ಯವಾಗಿ ಗ್ರಂಥದಲ್ಲಿ ಸೇರಿಸಲು ಬೇಕಾಗಿವೆ)

(೫) ಹವ್ಯಕರ ವಸತಿಗಳಿದ್ದ ಗ್ರಾಮದ ಹೆಸರು, ಮನೆಗಳ ಸಂಖ್ಯಾ ಮತ್ತು ಜನಸಂಖ್ಯಾ, ಬೇಕಾಗಿ ದಯವಿಟ್ಟು ತಿಳಿಸಬೇಕು.

ಪಿ. ಹೆಚ್.— ಆಯಾ ಊರಿನ ಹವ್ಯಕ ಮಹಾಶಯರು ಈ ವಿಷಯದ ಬಗ್ಗೆ ಹೆಚ್ಚಿನ ಮಾಹಿತಿಯನ್ನು ದಯಮಾಡಿ ಕಳಿಸಬೇಕಾಗಿ ವಿನಂತಿ.

ಇಂತು ಬಿನ್ನವಿಸುವ, ಸಜ್ಜನವಿಧೇಯ
ಕಾರ್ಯದರ್ಶಿ, ಕರ್ನಾಟಕ ಸಂಸ್ಕೃತ ರತ್ನಮಾಲಾ,
ಪೋ. ಧಾರೇಶ್ವರ, (ತಾ. ಕುಮಟಾ ಉ. ಕ.)

ಸ್ತ್ರೀಯರಿಗೆಲ್ಲಕ್ಕೂ ಭೂಷಣಾವೇ ಭೂಷಣ

ಕಾಮಿನಿಯಾ ತೈಲ. ರಿಜಿಸ್ಟರ್ಡ

ಮೃದುವಾದ, ಗುಂಗುರು ಗುಂಗುರಾಗಿರುವ ನೀಲಿಮಯದ ನಿಬಿಡವಾದ ಕೇಶವನ್ನು ಯಾವ ನಾರಿಯು ತಾನೇ ವಾಂಛಿಸದೆ ಇಲ್ಲಳು? ಅಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡುವುದು ಉಪಕರಣವಾಗಿದೆ.

ಕಾಮಿನಿಯಾ ಆಯಿಲ್ ರಿಜಿಸ್ಟರ್ಡ

ಈ ಆಯಿಲ್ ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತದೆಯೋ ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅತ್ಯಾವಶ್ಯಕ ಸಹಕಾರಿಯಾಗಿರುತ್ತದೆ. ಈ ಆಯಿಲ್ ಹಚ್ಚಿಕೊಳ್ಳುತ್ತಲೇ ಮಸ್ತಕದ ಬೇನೆಯು [illegible] ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ಹಚ್ಚುವದರಿಂದ ಬೆಳೆಯುತ್ತವೆ [illegible] ಉದುರಿ ಬಿದ್ದು ಹೋಗಲಾರವು, ಅಲ್ಲದೆ, ಅದು [illegible] ತಣ್ಣಗಿರುವದರಿಂದ [illegible] ಸುಗಂಧವಾದದ್ದರಿಂದ ಮಸ್ತಕವು ಶಾಂತವಾಗಿರುತ್ತದೆ.

ಕೀಳು ತರದ ಎಣ್ಣೆಗಳನ್ನು ಕೊಂಡುಕೊಂಡು ಹಣವನ್ನೂ ಕಳೆದುಕೊಳ್ಳುವದಕ್ಕಿಂತ ಒಂದಾವರ್ತಿ "ಕಾಮಿನಿಯಾ ಆಯಿಲ್" ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯು [illegible] ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಆಫ್ ಮೆರಿಟ್" ಅದರ ಯೋಗ್ಯತಾಪತ್ರವು [illegible] ಗೃಹಸ್ಥರು [illegible] ಪ್ರಶಂಸಾಪತ್ರಗಳನ್ನು ಕೊಟ್ಟಿರುವರು.

ಕ್ರಯ:— ಸೀಸೆಗೆ ರೂಪಾಯಿ 1-0-0, ಸೀಸೆ 3ಕ್ಕೆ ರೂಪಾಯಿ 2-10 0 [illegible] ಖರ್ಚು 0-14-0.

ಅತಿ ಮನೋಹರವಾದ ಸುಗಂಧಿ ಸು!

ಒಟ್ಟೋ-ದಿಲ್ ಬಹಾರ್ !! (ರಿಜಿಸ್ಟರ್ಡ)

ಈ ಸುಗಂಧದ್ರವ್ಯವು ಮಲ್ಲಿಗೆ, ಕೇದಗೆ, ಜಾಜಿ ಮುಂತಾದ [illegible] ಹೂವುಗಳಿಂದ ತಯಾರಿಸಿ ಬಹಳ ತಗಲಿ ಸೌಗಂಧಿಕ ಸುವಾಸನೆಯಿಂದ [illegible] ಅವರಲ್ಲಿ ಮದುವೆಯ (ಅಥವಾ ಹಬ್ಬದ) ಸಂದರ್ಭದಲ್ಲಿ ಒಂದೇ ಒಂದು ಸಲ ನಿಮ್ಮ ಕರವಸ್ತ್ರದಲ್ಲಿ ಅಥವಾ ಅಂಗಿಯಲ್ಲಿ ಈ ದ್ರವ್ಯದ ಕೆಲವು ಹನಿಗಳನ್ನು [illegible] ನಿಮ್ಮ ಸುತ್ತಲು ನೈಸರ್ಗಿಕವಾದ ಒಂದು ಪುಷ್ಪವಾಟಿಕೆಯು ಅರಳಿದಂತಾಗುವದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಬೇಗನೆ ಆರಿ, ಈ ಒಟ್ಟೋ-ದಿಲ್ [illegible] ಸುಗಂಧವು ಅನೇಕ ದಿನಗಳವರೆಗೆ ಇದ್ದು ಮನಸ್ಸನ್ನು ತಣಿಯಿಂದ ಹೊಗಳಿಕೊಳ್ಳುವದು. ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ

ಸಣ್ಣ ಸೀಸೆ 1 ಕ್ಕೆ 0 8 0; 1 ಡ್ರಾಮಿನ (ಮಿಡಿಯಂ) ಸೀಸೆ 1 ಕ್ಕೆ 0 12 0; ½ ಔನ್ಸಿನ ದೊಡ್ಡ ಸೀಸೆ 1 ಕ್ಕೆ 2 0 0. ಅಂಚೆಯ ಖರ್ಚು [illegible]

ಒಟ್ಟೋ-ದಿಲ್ ಬಹಾರ್ ಪರಿಮಳ ಕಾಡಿಗೆಗಳು ಡಜನ್ 1 ಕ್ಕೆ 0 12 0.

Address: **The Anglo Indian Drug & Chemical Co.**
16, Market, BOMBAY 2

ವಿವಿಧ ಸಂಗ್ರಹ.

ಹುಲಿಯೂ, ಕುರಿಮರಿಯೂ

ಮಯೂರಭಂಜ ಸಂಸ್ಥಾನದಲ್ಲಿ ಓದಾಮ್‌ಪಹಾಡ ಗ್ರಾಮವಿದೆ. ಅಲ್ಲಿ ಹುಲಿಗಳ ಹಾವಳಿ ಬಹಳ. ಹುಲಿಗಳನ್ನು ಹಿಡಿಯುವದಕ್ಕಾಗಿ ಜನರು ಬಲೆಹಾಕಿದರು. ಹುಲಿಯು ಬಲೆಯಲ್ಲಿ ಸಿಲುಕಬೇಕೆಂದು ಬಲೆಯೊಳಗೆ ಒಂದು ಕೊಬ್ಬಿದ ಕುರಿಮರಿಯನ್ನೂ ಸೇರಿಸಿದರು. ಹುಲಿಯು ಕುರಿಮರಿಯನ್ನು ತಿನ್ನಬಂತು. ಸಂಕೇತದಂತೆ ಅದು ಬಲೆಯಲ್ಲಿ ಸಿಕ್ಕಿಕೊಂಡಿತು. ಆದರೆ, ಬಳಿಯಲ್ಲಿದ್ದ ಕುರಿಮರಿಯನ್ನು ತಿನ್ನಲಿಲ್ಲ. ಹುಲಿಯು ಆರ್ಭಟಿಸ ಮಾಡುತ್ತಿತ್ತು. ಆದರಿಂದ ಜನರು ಬಳಿಯಲ್ಲಿ ಹೋಗಲು ಬಹಳ ಬೆದರುತ್ತಿದ್ದರು. ೮ ದಿವಸಗಳ ವರೆಗೆ ಹುಲಿಯೂ, ಕುರಿಮರಿಯೂ ಒಂದೇ ಬಲೆಯಲ್ಲಿ ಉಳಿದುಕೊಂಡವು. ಹುಲಿಗೆ ನಿರಾಹಾರ ಉಪೋಷಣವಾದರೂ, ಹುಲಿಯು ಕುರಿಮರಿಯನ್ನೇನು ಸ್ಪರ್ಶಿಸಲಿಲ್ಲ; ಮೇಲೆ, ಕುರಿಮರಿಯನ್ನು ಪ್ರೀತಿಯಿಂದ ನೆಕ್ಕುತ್ತಿತ್ತು! ಕುರಿಮರಿಯು ಪ್ರತಿಯಾಗಿ ಹುಲಿಯನ್ನು ನೆಕ್ಕುತ್ತಿತ್ತು!! ೮ನೇ ದಿವಸಕ್ಕೆ ಜನರು ದೂರಿಯಿಂದ ಹುಲಿಯನ್ನು ಇರಿಯಹತ್ತಿದರು. ಆಗ ವೇದನೆಗಳಿಂದ ಹುಲಿಯು ಹಾರ್ರ್ಯಾಡಹತ್ತಿತು. ಪಕ್ಕದ ಬದಿ ಆ ಕುರಿಮರಿಯ ಮೇಲೆ ಬಿದ್ದು ಕಾಲುಬಿದ್ದ, ಕುರಿಮರಿಯು ಸತ್ತುಹೋಯಿತು. ಇಷ್ಟು ವೇದನೆ ಪಡುತ್ತಿದ್ದರೂ ಅದೇ ಪ್ರಕಾರ ಹುಲಿಯು ಕುರಿಮರಿಯನ್ನು ಸ್ಪರ್ಶಿಸಲೊಲ್ಲಲಿಲ್ಲ. ಜನರು ಕುರಿಮರಿಯು ಪಟ್ಟ ಅಪಘಾತದಿಂದ ಸಾಯಬಾರದೆಂದು ಮಾರನೇ ದಿವಸವೇ ಉಪಾಯದಿಂದ ಕುರಿಮರಿಯನ್ನು ಹೊರತೆಗೆದರು. ಪಾರತಂತ್ರ್ಯದಲ್ಲಿ ಸಿಲುಕಿಕೊಂಡಾಗ ಭಯಂಕರ ಕ್ರೂರ ಮೃಗವಾದ ಉಗ್ರಸ್ವರೂಪದ ವ್ಯಾಘ್ರನೂ ಕೂಡ ಕುರಿಮರಿಯೊಡನೆ ಸ್ನೇಹ ಬೆಳಿಸುವಷ್ಟು ಮೆತ್ತನ್ನ ಸ್ವಭಾವದವನಾಗುವಾಗ, ಪಾರತಂತ್ರ್ಯದಲ್ಲಿ ಸಿಲುಕಿದಂತ ಭಾರತೀಯನ ಶಾಸ್ತ್ರವು ಪ್ರಸನ್ನವಾಗಿ ಕಂಡುಬ ನಡೆದರೆ, ಆಶ್ಚರ್ಯವೇನಿದೆ?

***

ಸಿಂಹ ದೊರೆಗಳ ವಿಚಾರಗಳು.

ಸಿಂಹ ದೊರೆಗಳು ಬಂಗಾಲದ ದೊಡ್ಡ ಪುರುಷರು. ದೊಡ್ಡ ದೊಡ್ಡ ಸರಕಾರಿ ಅಧಿಕಾರಸ್ಥಾನಗಳನ್ನು ಅಲಂಕರಿಸಿ ಖ್ಯಾತಿಹೊಂದಿದ ಗೃಹಸ್ಥರು. ಇವರೀಗ ಪೆನ್ಶನ್ ಪಡೆಯುತ್ತಿರುವರು. ಈ ಪ್ರಾಯದಲ್ಲಿ ದೊರೆಗಳು ಪ್ರದರ್ಶಿಸಿದ ವಿಚಾರಗಳು ಮಹತ್ವದ್ದಿವೆ. ಅವನ್ನು ಕಲಕತ್ತೆಯ "ಅಮೃತ ಬಝಾರ" ಪತ್ರಿಕಾಕರ್ತರು ಪ್ರಕಟಿಸಿರುವರು. ದೊರೆಗಳ ವಿಚಾರ ವಿಷಯವು ಪ್ರಜಾಶಿಕ್ಷಣವು. ಗ್ರಾಮಗಳೊಳಗಿನ ಶಿಕ್ಷಣಾಲಯಗಳಲ್ಲಿ ಕಥೆ, ಪುರಾಣ, ಚರಿತ್ರೆ ಇತ್ಯಾದಿ ವಿಷಯಗಳನ್ನು ಕಲಿಸಬೇಕು. ಚಿಕ್ಕಂದಿನಲ್ಲಿ ಇಂಗ್ಲಿಷ ಭಾಷೆಯನ್ನು ಕಲಿಸಬಾರದು. ದೊರೆಗಳು ಸ್ವಗ್ರಾಮದಲ್ಲಿ ೩೦ ವರುಷಗಳಿಂದ ಒಂದು ಶಾಲೆಯನ್ನು ನಡಿಸುತ್ತಿರುವರು. ಅದಕ್ಕಾಗಿ ೪೦ ಸಾವಿರ ರೂಪಾಯಿಗಳ ವರೆಗೆ ಖರ್ಚು ಮಾಡಿರುವರು. ಅದನ್ನು ಇಂಗ್ಲಿಷ ಶಾಲೆಯಲ್ಲಿ ರೂಪಾಂತರಿಸಬೇಕೆಂದು ಅನೇಕರು ಆಗ್ರಹ ಮಾಡಿದರೂ, ದೊರೆಗಳು ಅದಕ್ಕೊಂದೆಂದೂ ಕಿವಿಗೊಡಲಿಲ್ಲವಂತೆ. ಶಾಲೆಯಲ್ಲಿ ಕಲಿತಷ್ಟು ಗಣಿತಜ್ಞಾನದಿಂದ ವ್ಯಾಪಾರೋದ್ಯೋಗದಲ್ಲಿ ತೀರ ಸಂಕೀರ್ಣ ಪಟ್ಟಿಗಳನ್ನು ಕೂಡ ತಾವು ನಡಿಸಿದ್ದೇವೆಂದು ಹೇಳಿ, ಅದಕ್ಕೂ ಹೆಚ್ಚಿಗೆಯಾಗಿ ಗಣಿತವನ್ನು ಕಲಿಯುವದು ಸಾಮಾನ್ಯ ವ್ಯವಹಾರಕ್ಕೆ ಅವಶ್ಯವಿಲ್ಲೆಂದು ದೊರೆಗಳು ಪ್ರತಿಪಾದಿಸುತ್ತಾರೆ. ಸಾಮಾನ್ಯ ವ್ಯವಹಾರಕ್ಕೂ, ಪ್ರಚಲಿತ ಶಿಕ್ಷಣಕ್ಕೂ ನಿಕಟ ಸಂಬಂಧವಿಲ್ಲೆಂದು ದೊರೆಗಳ ಹೇಳಿಕೆ. ಈಗಿನ ಶಿಕ್ಷಣಕ್ರಮದಲ್ಲಿ ನಿರುಪಯೋಗಿ ಜ್ಞಾನವೇ ತುಂಬಿಕೊಂಡಿದೆ. ಅದರ ಸಂಗ್ರಹಕ್ಕಾಗಿ ಪ್ರಜೆಗಳ ಸಾಮರ್ಥ್ಯವು ವ್ಯಯಹೊಂದುತ್ತಿದೆ. ಪರಸ್ಥ ವಾಙ್ಮಯ, ಪರಸ್ಥ ಭಾಷೆ ಇವುಗಳ ಮುಖ್ಯಸ್ಥಿಕೆಯಿಂದ ಕೊಡುತ್ತಿರುವ ಶಿಕ್ಷಣವು ನಿರರ್ಥಕವಿದೆ. ವಿದ್ಯಾರ್ಥಿಗಳಿಗೆ ರಾಮಾಯಣವಾಗಲಿ, ಮಹಾಭಾರತವಾಗಲಿ ಗೊತ್ತಿರುವದಿಲ್ಲ, ಶೇಕ್ಸಪಿಯರ, ಮಿಲ್ಟನ್‌ರಂಥ ಪರಕೀಯ ಕವಿಗಳ ಪರಿಚಯವೇ ವಿಶೇಷ. ಇದರಿಂದ ವಿದ್ಯಾರ್ಥಿಗಳ ಮನೋಭೂಮಿಯು ಸಫಲವಾಗುವದಿಲ್ಲ. ಸ್ವದೇಶದ ಇತಿಹಾಸವನ್ನು ಅರಿಯದವರು ಯುರೋಪ ಖಂಡದ ಇತಿಹಾಸವನ್ನು ಅರಿತು ಮಾಡುವರೇನು? ಶಿಕ್ಷಣ ಪದ್ಧತಿಯಿಂದ ನಮ್ಮ ನೈತಿಕ, ಮಾನಸಿಕ ಅವನತಿಯಾಗುವಂತೆ ಶಾರೀರಿಕ ಅವನತಿಯೂ ಆಗುತ್ತಲಿದೆ. [illegible] ಕೆಲಸಕ್ಕೆ ಈಗಿನ ಶಿಕ್ಷಣಕ್ರಮದಲ್ಲಿ ವಿಶೇಷ ಉತ್ತೇಜನ! ವಿದ್ಯಾರ್ಥಿಗಳ ದೇಹದ ಪರಿವೆಯು ವಿದ್ಯಾಧಿಕಾರಿಗಳಿಗಿಲ್ಲ. ಹುಡುಗಿಯರ ಪ್ರಕೃತಿಯಂತೂ ಇಂಗ್ಲಿಷ ಶಿಕ್ಷಣದಿಂದ ತೀರ ಕೆಟ್ಟಿದೆ. ಹುಡುಗೆಯೆಂಬುದು ಸಾಮಾನ್ಯ ವೇಷವಾಗಿದೆ, ವೇಷದೊಳಗಿನ ಸ್ಥಿತ್ಯಂತರಗಳನ್ನು ನೋಡಿ, ಅವಕ್ಕನುಗುಣವಾಗಿ ಹುಡುಗಿಯರಿಗೆ ಶಿಕ್ಷಣ ಕೊಡುತ್ತಾರೆ, ಪ್ರಾಥಮಿಕ ಶಿಕ್ಷಣದ ನೆಲಗಟ್ಟು ಭದ್ರವಾಗಿರುವದಿಲ್ಲ. ಅಂಥ ಪ್ರಸಕ್ತಿಯಲ್ಲಿ ಮಾಧ್ಯಮಿಕ ಹಾಗು ಉಚ್ಚ ಶಿಕ್ಷಣಗಳ ಕಟ್ಟಡವು ಹೇಗೆ ಭದ್ರವಾಗಿ ನಿಂತೀತು? ವಿಶ್ವವಿದ್ಯಾಲಯಗಳ ಪದವೀಧರರು ಹಿಂದುಸ್ಥಾನಕ್ಕೆ ಈಗ ಬೇಕಾಗಿಲ್ಲ. ಬೇಸಾಯ, ಆರೋಗ್ಯಪಾಲನ ಮುಂತಾದ ಪ್ರಾಪಂಚಿಕ ಶಿಕ್ಷಣವನ್ನು ಸ್ವೋದಾಹರಣದಿಂದ ಉಪದೇಶದಿಂದ ಮನಮುಟ್ಟಿ ಕಲಿಸುವ ಪುಣ್ಯಾತ್ಮರು ಭರತಖಂಡಕ್ಕೆ ಬೇಕಾಗಿರುವರು. ಇತ್ಯಾದಿ ದೊರೆಗಳ ವಿಚಾರಗಳು ಮನನೀಯವಿವೆ. ಅಧಿಕಾರ ಪ್ರಾಪ್ತಿಯಾದಾಗ ಈ ವಿಚಾರಗಳನ್ನು ಕೃತಿಯಲ್ಲಿ ರೂಪಾಂತರಿಸಲು ದೊರೆಗಳು ಉಪಾಯಯೋಜನೆ ಮಾಡಿದ್ದೇನು ನಮಗೆ ಕಂಡುಬರಲಿಲ್ಲ. ಅಧಿಕಾರತ್ಯಾಗವಾದ ಬಳಿಕ, ದೊರೆಗಳಿಗೆ ಈ ವಿಚಾರಗಳು ಸೂಚಿಸುವ ಕಾರಣವೇನು? ಅಥವಾ ಹೊಸ ಸರ್ವಾಧಿಪತಿಗಳು ಬೇಸಾಯ, ಶಿಕ್ಷಣ ಹಾಗು ಗ್ರಾಮೋದ್ಧಾರ ಮಂತ್ರಗಳನ್ನು ಜಪಿಸುತ್ತ ಹಿಂದುಸ್ಥಾನಕ್ಕೆ ಬಂದಿಳಿಯುವ ಸಮಯ ನೋಡಿ ದೊರೆಗಳು ಈ ವಿಚಾರಗಳನ್ನು ಪ್ರದರ್ಶಿಸಿದವರೇನು? ಸರ್ವಾಧಿಪತಿ ರೀಡಿಂಗ ದೊರೆಗಳ ನ್ಯಾಯದ ಡಂಗುರವು ಮೊನ್ನೆ ಶನಿವಾರಕ್ಕೆ ಹರಿದುಹೋಗಿ, ಅದೇ ದಿನ ಹೊಸ ಸರ್ವಾಧಿಪತಿಗಳ ಬೇಸಾಯ ಶಿಕ್ಷಣ, ಗ್ರಾಮೋದ್ಧಾರ ಮುಂತಾದ ಸಾಮಾನ್ಯ ಪ್ರಜಾಕಲ್ಯಾಣದ ಹೊಸ ಡಂಗುರವು ಬಾರಿಸಹತ್ತಿದೆ. ಈ ಸಮಯ ಬೊಬ್ಬುಳಿಗಳಂತೆ ಗ್ರಾಮೋದ್ಧಾರಕರು, ಬೇಸಾಯ ಕಲ್ಯಾಣಕರ್ತರು, ಶಿಕ್ಷಣ ಪ್ರಸಾರಕರು ಹಿಂದುಸ್ಥಾನದಲ್ಲೆಲ್ಲ ಎದ್ದೇಳುವರು. ಸಿಂಹ ದೊರೆಗಳ ವಿಚಾರಗಳೂ ಈ ಸ್ಥಿತಿಯ ಪೂರ್ವಸೂಚನೆಯೆಂದು ತಿಳಿಯಬಹುದಲ್ಲವೇ?

***

ಇದೊಂದು ಚಮತ್ಕಾರವು!

ಕಲಕತ್ತೆಯ 'ಫಾರವರ್ಡ' ಪತ್ರಿಕೆಯು ಕಲಕತ್ತೆಯಲ್ಲಿ ಸಂಭವಿಸಿದ ಚಮತ್ಕಾರವೊಂದನ್ನು ಪ್ರಕಟಿಸಿದೆ. ಡಿಂಗ್ರೀ ಎಂಬುವಳು ಚೀನೀ ಹೆಂಗಸು. ಇವಳು ಕಲಕತ್ತೆಯಲ್ಲಿದ್ದಳು. ತಾನೊಬ್ಬ ಗಂಡಸೆಂದು ಜನರಿಗೆ ತೋರಿಸಿ, ಅಲ್ಲಿ ಕ್ಷೌರಿಕನ ಕೆಲಸ ಮಾಡುತ್ತಿದ್ದಳು. ಪ್ರಾಯಸ್ಥಳಾದ ಬಳಿಕ, ಅವಳು 'ಕಿಂಟಾಲಿ' ಜಾತಿಯ ಹುಡುಗಿಯನ್ನು ಮದುವೆ ಮಾಡಿಕೊಂಡಳು. ಹೆಂಡತಿಯಾದ ಕಿಂಟಾಲಿ ಜಾತಿಯ ಹುಡುಗಿಗೆ ತನ್ನ ಗಂಡನು ಗಂಡಸಲ್ಲೆಂದು ಕೂಡಲೆ ತಿಳಿದುಬಂತು. ಆದರೂ, ಧರ್ಮಚಾರಿಣಿಯು ಧರ್ಮವನ್ನು ಕೊನೆತನಕ ಪಾಲಿಸಿದಳು. ಪತಿಯನ್ನು ಭಕ್ತಿಭಾವದಿಂದ ಪತಿವ್ರತಾ ಧರ್ಮದಂತೆ ಸೇವಿಸಿದಳು. ಒಳಗುಟ್ಟನ್ನು ಯಾರಿಗೂ ಹೇಳಲಿಲ್ಲ. ಗಂಡ-ಹೆಂಡರು ಸುಖದಿಂದ ಕಾಲಕ್ಷೇಪ ಮಾಡಿದರು. ಸೃಷ್ಟಿಶಾಸ್ತ್ರದಂತೆ ಈ ದಂಪತಿಗಳಿಗೆ ಅಪತ್ಯಸುಖವು ಪ್ರಾಪ್ತವಾಗಲಿಲ್ಲ. ಅನೇಕ ವರುಷಗಳಾದ ಬಳಿಕ, ಹೆಂಡತಿಯು ಕಾರಣಾಂತರದಿಂದ ಮೃತಹೊಂದಿದಳು. ಗಂಡನಾದ ಡಿಂಗಳಿಗೆ ಅಪಾರ ಪತ್ನಿವಿಯೋಗ ದುಃಖವಾಯಿತು. ಪತ್ನಿವಿರಹದಿಂದ ಡಿಂಗಳು ಬೆಂದು ಬೆಂಡಾದಳು. ಕಡೆಗೆ ಡಿಂಗಳು ೭೪ ವರುಷ ಪ್ರಾಯದಲ್ಲಿ ಮಡಿದಳು. ಆಗ ಡಿಂಗಳು ಹೆಂಗಸೆಂದು ಜಾಹೀರಾಯಿತು. ಹೆಂಗಸು ಗಂಡಸೆಂದು ಹುಡುಗಿಯಿದ್ದಾಗ ವೇಷ ಧರಿಸಬಹುದು; ಪತ್ನಿಯಾದ ಕಿಂಟಾಲಿ ಹುಡುಗಿಯು ಪತಿಭಕ್ತಿಯಿಂದ ಒಳಗುಟ್ಟನ್ನು ಹೊರಗೆಡಹದೆ, ಸಾಯುವದೂ ಸಾಧ್ಯವಿದೆ. ಅಶಕ್ಯವಾಗದಿರುವದಂತು ಸೃಷ್ಟಿಕ್ರಮವೇ; ಡಿಂಗಳು ಪ್ರಾಯಕ್ಕೆ ಬಂದ ಬಳಿಕ, ಸಾಯುವ ವರೆಗೆ ಗಂಡಸಿನ ವೇಷವನ್ನು ಧರಿಸಿಕೊಂಡು ಮೆರೆಯುವ ಬಗೆ ಹೇಗೆ? ಪ್ರಾಯದಂತೆ ಅಂಗ-ಉಪಾಂಗಗಳ ಬೆಳವಣಿಗೆಯಾಗಿ ನಿಜ ವೇಷವು ಸ್ಫುಟವಾಗುವದು ಸೃಷ್ಟಿಕ್ರಮವಿರುವಾಗ, ಸೃಷ್ಟಿಕ್ರಮವನ್ನೇ ನಿಯಂತ್ರಿಸಿ ಹೆಂಗಸು ಗಂಡಸಾಗಿ ಜನರಲ್ಲಿ ಮೆರೆಯುವದು ಹೇಗೆ ಸಾಧ್ಯವೆಂಬುದು ಒಂದು ಪ್ರಶ್ನೆ. ಇದೇ ಒಂದು ಚಮತ್ಕಾರ!

***

ಆಳರಸರ ಕದ್ದ ಪ್ರಸಾದ!

ಕೌನ್ಸಿಲ್ ಆಫ್ ಸ್ಟೇಟ ಎಂಬ ಹಿರಿಯರ ಸಭೆಯಲ್ಲಿ ಮುಂಬಯಿಯ ಶೇಟ ಮನಮೋಹನದಾಸ ರಾಮಜಿಯವರು ಆಳರಸರಿಗೆ ಕೊಡುವ ಪ್ರಯಾಣ ಭತ್ತೆಯ ಕುರಿತು ಕೆಲವು ಸವಾಲುಗಳನ್ನು ಕೇಳಿ ಪಡೆಕೊಂಡ ಮಾಹಿತಿಯು ಬೋಧಪ್ರದವಿದ್ದ, ಪ್ರಜಾಕಲ್ಯಾಣಕರ್ತರಾದ ಆಳರಸರು ನಮ್ಮನ್ನು ಹೇಗೆ ಹೇಗೆ ಸುಲಿಯುತ್ತಾರೆಂದು ತಿಳಿಯುವ ಹಾಗಿದೆ. ಲೀ ಕಮಿಶನಿನಿಂದ ಆಳರಸರಿಗೆ ಹೆಚ್ಚಿಚ್ಚ ದ್ರವ್ಯಪ್ರಾಪ್ತಿಯ ಮಾರ್ಗಗಳು ದೊರೆತವು; ಸಂಬಳದ ಏರಿಕೆಯಾಯಿತು; ಭತ್ತೆಗಳ ಕಲ್ಪನೆಯಾಯಿತು; ಇದೆಲ್ಲ ಕಾಯಿದೆಯಂತೆ ದೊರೆತ ದೇವರ ಪ್ರಸಾದಗಳು. ಇವರ ಹೊರತು 'ಕದ್ದ ಪ್ರಸಾದವಿದೆ! ಆಳರಸರು ಸ್ವದೇಶಕ್ಕೆ ಹೋಗಿ-ಬರುವದ ಪ್ರಯಾಣ ಖರ್ಚು ತೆರುತ್ತಾರೆ. ಆ ಖರ್ಚನ್ನು 'ಪಿ. ಎಂಡ್ ಓ.' ಕಂಪನಿಯು ಫಸ್ಟ್ ಕ್ಲಾಸ ಟಿಕೇಟಿನಷ್ಟು ಕೊಡಬೇಕೆಂದು ಕಾನೂನ, ನಿಯಮಗಳಾಗಿವೆ 'ಪಿ. ಎಂಡ್

ಶಿರ್ಸಿ— ತಾ. ೨೭ನೇ ಸೋಮವಾರಕ್ಕೆ ಇಲ್ಲಿಯ ಶ್ರೀ ಮಾರಿಕಾಂಬಾ ಹೈಸ್ಕೂಲಿನಲ್ಲಿ ೭ನೇ ಇಯತ್ತೆಯನ್ನು ಪ್ರಾರಂಭಿಸುವ ಸಮಾರಂಭವು ಜರುಗುವದಿದೆ, ಇನಾಮು ಸಮಾರಂಭವೂ ಜರಗುವದು. ಜಿಲ್ಲಾ ಡಿಪ್ಯುಟಿಗಳಾದ ಮಿ| ಮೊಂಗೊಮೇರಿಯ ವರು ಇದೆರಡೂ ಸಮಾರಂಭಗಳ ಯಜಮಾನರು. ಇವುಗಳಿಗಾಗಿ ಮ್ಯುನಿಸಿಪಾಲಿಟಿಯವರು ರೂಪಾಯಿ ೫೦ನ್ನು ಮಂಜೂರು ಮಾಡಿರುವರು. ಮಾರಿಕಾಂಬಾ ಹೈಸ್ಕೂಲಿನ ಚಾಲಕರಾದ ರಾ| ಬಿ| ಪಂಡಿತ, ಹೆಡ್ ಮಾಸ್ತರರಾದ ರಾ| ಅಮ್ಮೆಂಬಳರವರಿಗೂ, ಇತರೇ ಶಿಕ್ಷಕರಿಗೂ ಶಾಲಾ ಅಭಿವೃದ್ಧಿಯಲ್ಲಿ ನಡೆದ ಅನ್ಯಾಯದ ಮೂಲಕ ಪ್ರಸಿದ್ಧವಾಗಿರುವದು. ಇದರಿಂದ ಹಾಲಕ್ಕಿ ಶಿಕ್ಷಕರು ಈ ಸಮಾರಂಭದಲ್ಲಿ ಪ್ರವೇಶಗೊಳ್ಳಲಿಕ್ಕಿಲ್ಲವಾಗಿ ಕಂಡಿತು. ಕನ್ನಡ ಶಾಲೆಗಳೊಳಗಿನ ವಿದ್ಯಾರ್ಥಿಗಳ ಕಡೆಯಿಂದ ಸಮಾರಂಭಗಳ ಸಮಯ ಪದ್ಯಗಳನ್ನು ಹಾಡಿ ತೋರಿಸುವ ವಿಚಾರವಿತ್ತಂತೆ. ಹುಡುಗರ ಗಾಂಧಿ ಟೊಪ್ಪಿಗೆಯ ಮೂಲಕ ಆ ವಿಚಾರವು ರದ್ದವಾಗಬೇಕಾಯಿತಂತೆ. ಇನ್ನೂ ಗಾಂಧಿ ಟೊಪ್ಪಿಗೆಯ ಭಯವು ಹೋಗದಿದ್ದದೊಂದು ಆಶ್ಚರ್ಯವು.

ಇಲ್ಲಿಯ ಕಾರುಮಲ ಕಟ್ಟೆಗೆ ಡಿಪೋವನ್ನು ತೆಗೆದು ಹಾಕಿರುವರು. ಪರಮಿಟ ಪದ್ಧತಿಯಿಂದ ಕಟ್ಟಿಗೆಯನ್ನು ಪೂರೈಸಿಕೊಳ್ಳಬೇಕೆಂದು ಹುಕುಮು ಹೊರಟಿದೆ. ಪರಮಿಟು ಕೊಡಬೇಕಾದರೆ, ಸೋಂದೆ ಫೊರೆಸ್ಟರರ ಸಹಾಯ ಕಾರ್ಯಸಬೇಕು; ಅವರು ಶಿರ್ಸಿಯ ಬಜಾರದಲ್ಲಿ ಸಿಗುವದು ಅಪರೂಪ. ಈ ಕುರಿತು ಮೇಲಾಧಿಕಾರಿಗಳು ಬಂದೋಬಸ್ತ ಮಾಡಬೇಕಾಗಿ ಹಬ್ಬರು ತಿಳಿಸುತ್ತಾರೆ.

ಜಿಲ್ಲಾ ಲೋಕಲ್ ಬೋರ್ಡಿಗೆ ರಾ| ಸೀತಾರಾಮ ಗಣೇಶ ಹೆಗಡೆ ಹಾಗು ರಾ| ಬಸಪ್ಪಾ ಜನ್ನಪ್ಪಾ ಕೋರಾವರ ಇವರು ಸಭಾಸದರಾಗಿ ಆರಿಸಲ್ಪಟ್ಟಿರುವರು.

ಕಾರವಾರ— ಹೊಸ ಜಿಲ್ಲಾ ಬೋರ್ಡಿನ ಮೊದಲನೇ ಸಭೆಯು ಮೇ ೫ ನೇ ತಾರೀಖಿಗೆ ಸೇರುವದಿದೆ.

ಇಲ್ಲಿಯ ಆಸ್ಪತ್ರೆಯಲ್ಲಿ ಉಪಚಾರಕ್ಕಾಗಿ ಹಂಡಬೆಯ ಬಸ್ತ್ರ ವೀರ ಮಹಮ್ಮದೀಯರೊಬ್ಬರು ಸತ್ತುಹೋದರು. ಅಡವಿಯಲ್ಲಿ ಹಂದಿ ಹುಲಿಯು ಅಜಾಘ್ರತೆಯಿಗೆ ಹಿಡಿದಿತ್ತು. ಅದನ್ನು ಇವರು ತಪ್ಪಿಸ ಹೋದಾಗ ಹುಲಿಗೂ, ಇವರಿಗೂ ಕಾದಾಟ ನಡೆದು, ಇವರಿಗೆ ಬಹು ದೊಡ್ಡ ಘಾಯಗಳಾಗಿದ್ದವು. ಹುಲಿಗೆ ಕೆಲವರು ಬಿಕ್ಕಟ್ಟಾಗಿ ಕೊಂದರು. ಅನಾಥ ಅಬಾಪ್ರಸ್ತನ ರಕ್ಷಣಕ್ಕಾಗಿ ಹೋದ ಪರೋಪಕಾರಿಯು ೧೫ ದಿನಗಳಲ್ಲಿ ಇಹಲೋಕದ ಯಾತ್ರೆಯನ್ನು ಮುಗಿಸಿದನು.

ಇಲ್ಲಿಯ ಜೊಯಿಂಟ ಸಬ ಜಡ್ಜರಾದ ಮಿ| ಸಂಶಿಯವರಿಗೆ ಬೆಳಗಾವಿಗೆ ಖಾಯಂವಂತೆ ಹೋದುದ ನಿರೀಕ್ಷಣ ಮೇಲಿದ್ದರು. ಕೊನೆಗೆ ಕಳೆದ ೧೫ ನೇ ತಾರೀಖಿಗೆ ತಮ್ಮ ಅಲ್ಪಾವಧಿಯ ಕಾರಭಾರವನ್ನು ಮುಗಿಸಿ ತಾ ೧೫–೪–೧೯೩೬ ನೇಗೆ ಚಾರ್ಜ ಕೊಟ್ಟರು. ಕ್ರೈಸ್ತೊಂದ ಕೆಲಸವನ್ನೆಲ್ಲ ಮುಗಿಸಿ ೧೬ನೇ ತಾರೀಖಿಗೆ ಬೆಳಗಾಂವ ಕಡೆಗೆ ಪ್ರಯಾಣ ಬೆಳೆಸಿದರು.

ರಾ| ಎಮ್. ಟಿ. ಶೆಟ್ಟಿ, ವಿ| ಶೇಕ ಅದಮ, ರಾ| ಜೋಗಸ್ಸಾಕ, ಮಿ| ಎಸ್. ಪಿ. ಫಿಲಿಫೋಸ ಹಾಗು ಮಿ| ಜೆ. ಎ. ಕೋಯಿಲೋ ಇವರಿಗೆ ಸರಕಾರದವರು ಜಿಲ್ಲಾ ಬೋರ್ಡಿಗೆ ನೇಮಿಸಿರುವರು. ಮುಹಮ್ಮದೀಯರಿಗೆ ಒಂದು ಪ್ರತ್ಯೇಕ ಪ್ರತಿನಿಧಿ ಆರಿಸಿಬಂದಿರುತ್ತ ಮಿ| ಶೇಕ ಅದಮರವನ್ನು ನೇಮಿಸುವ ಕಾರಣ ತಿಳಿಯಲಿಲ್ಲ. ರಾ| ಜೋಗಸ್ಸಾಕರು ಕೊಂಕಣ ಮರಾಠೆಯರಿದ್ದು, ಅವರ ಸಮಾಜದ ರಾ| ದತ್ತಾತ್ರಯ ಸುಬ್ಬನ್ನಾಕರವರು ಆರಿಸಿಬಂದಿರುತ್ತಾ, ರಾ| ಜೋಗನ್ನಾಕರಿಗೆ ನೇಮಿಸಿದ್ದು ಇತರ ಸಮಾಜಗಳ ಅನ್ಯಾಯವು. ಮಿ| ಫಿಲಿಫೋಸ ಹಾಗು ಮಿ| ಕೋಯಿಲೋ ಇವರಿಬ್ಬರೂ ಕ್ರಿಶ್ಚನರಿದ್ದು, ಅ

[illegible]

ಅಂಕೋಲಾ— [illegible]

[illegible]

ಹೊನ್ನಾವರ— [illegible]

[illegible]

— [illegible]

— [illegible]

'A Reminder to Government.'

[Continued from Page 5.]

benevolence of Mr. Koundinya and displays an unnatural apprehension that, under a different Chitnis with no axe of his own to grind, the backwards will suffer seriously! If Mr. Koundinya really possesses all the things so generously claimed for him, surely he deserves to be exported to a higher region.

More pitiable still are the irrelevant comments and lamentations of the Kanara Leader which feels perturbed as if its own Guardian Angels are proposed to be torn away from it out of their deep-set moorings. For the present my limited space does not allow me to answer them all. Neither is it necessary for the decision of the main question in controversy. If, as it argues, the Saraswat predominance in this District had nothing to do at any time with their predominance in the public services, and if nobody would feel as 'fish out of water' by the exit of these officers, my 'Reminder to Government' should have been a matter of indifference to the Kanara Leader On the other hand, this 'Nationalist' organ which professes to abhor communalism has devoted five of its precious columns with a view to uphold and, if possible, perpetuate a communal bureaucracy in Kanara! It has gone to the length of advertising its emphatic opinion based, as it claims, on its vast experience not only of this but other Districts as well that Saraswat Officers as a class are good, just and fair to all! In fact, I concede that, in the absence of such an instrument as a 'Hearto-meter,' every officer of whatever class or community is exactly so until he is proved to be otherwise! As for the K L's certificate to the Saraswat Officers alone, I have no doubt that people who know it to be a Saraswat controlled organ with a soft Havik as an eyewash, will not fail to judge such certificates and other comments on the subject at their proper value. Lastly, the same K. L. has the hardihood to accuse the *Kanara News* of encouraging 'communalism' (!) in that it was good enough to extend the hospitality of its columns to me. I can recall having recently read an article exactly similer to my 'Reminder,' calling the attention of Government to Parsi predominance in the Bombay High Court and published by such an avowed Nationalist daily as the *Bombay Chronicle* with a true Parsi Nationalist as the Managing Director who would not fret and fume as the K L. under a Saraswat Managing Director has done! It is time that the K. L. revise its conceptions of Communalism and Nationalism

In conclusion, let me make it perfectly clear that my intention in publishing the letter was to bring it to the notice of the Government its failure to observe the healthy G. Rs irrespective of all castes and creeds. Saraswat Officers came in for special attention as they were found to man almost all the higher offices in this district.

Ankola, 22-4-26. 'CITIZEN.'

ಮಹಾತ್ಮರ ಆತ್ಮಚರಿತ್ರ.

(೧೯) ಅಸತ್ಯರೋಗ.

ನಾಲ್ವತ್ತು ವರುಷಗಳ ಹಿಂದೆ ವಿಲಾಯತಿಯಲ್ಲಿದ್ದ ಹಿಂದೀ ವಿದ್ಯಾರ್ಥಿಗಳ ಸಂಖ್ಯೆಯು ಈಗಿನ ಪ್ರಮಾಣದಿಂದ ತೀರ ಕಡಿಮೆ. ಮದುವೆಯಾಗಿದ್ದರೂ ಬ್ರಹ್ಮಚಾರಿಗಳಂತೆ ಈ ವಿದ್ಯಾರ್ಥಿಗಳು ನಟಿಸುತ್ತಿದ್ದರು. ವಿಲಾಯತಿಯೊಳಗಿನ ಶಾಲಾ ವಿದ್ಯಾರ್ಥಿಗಳೂ ಕಾಲೇಜಿನ ವಿದ್ಯಾರ್ಥಿಗಳೂ ಬ್ರಹ್ಮಚಾರಿಗಳು. [illegible] ವಿದ್ಯಾರ್ಥಿಗಳಾಗಲಿ ಅನರ್ಹವೆಂಬುವೊಂದು ಅಲ್ಲಿ ಗ್ರಹಿಕೆ. ನಮ್ಮ [illegible] ಕಾಲದಲ್ಲಿ ನಮ್ಮವೂ ಅದೇ ಪರಂಪರೆಯಾಗಿತ್ತು. [illegible] ಕಾಲಕ್ಕೆ ವಿದ್ಯಾರ್ಥಿಗಳಿಗೆ ಬ್ರಹ್ಮಚಾರಿಗಳೆಂದು ಸಂಬೋಧಿಸುತ್ತಿದ್ದರು. ಈಗಿನ ಕಾಲದಲ್ಲಿ ಸಮಾಜದಲ್ಲಿ [illegible] ಪ್ರಚಾರವಾಗಿದೆ. ಇಂಗ್ಲೆಂಡದಲ್ಲಿ ಆ ಪದ್ಧತಿಯು ಇಲ್ಲ. ಆದರಿಂದ ಇಂಗ್ಲೆಂಡದಲ್ಲಿರುವ ಹಿಂದೀ [illegible] ಗಳು ತಾವು ಗೃಹಸ್ಥರಾಗಿದ್ದೇವೆಂದು ಒಪ್ಪಿಕೊಳ್ಳಲು ನಾಚಿಕೆಪಡುತ್ತಿದ್ದರು. [illegible] ಮದುವೆಯಾದ [illegible] ಕಾರ್ಯಕ್ಕೆ [illegible] ಹುಡುಗಿಯರೊಡನೆ ಅತ್ಯಂತ ಸ್ವತಂತ್ರ [illegible] ಆದರೊಡನೆ ಚೇಷ್ಟೆ ಮಾಡಲಿಕ್ಕೆ ಆಗಲೀ [illegible] ಮತ್ತು [illegible] ಹೀಗೆ ನಡೆಸಿಕೊಳ್ಳಲು ತಾಯಿ ತಂದೆಗಳು [illegible] ಹುಡುಗಿಯರಿಗೆ [illegible] ಅಲ್ಲಿನ ಯುವಕರು [illegible] ಆದ್ದರಿಂದ ಇಂಥ ಸಹವಾಸವು ಅಲ್ಲಿ [illegible] ಯುವಕರಿಗೆ ಸಹಜವಾದ ಚೇಷ್ಟೆಗಳನ್ನು [illegible] ಕೊಂಡರೆ ಪರಿಣಾಮವು ಭಯಂಕರವಾಗುವದು ಎಂದು [illegible] ಜಾಲದಲ್ಲಿ ನಮ್ಮ ಹುಡುಗರು [illegible] ಬೀಳುತ್ತಿದ್ದರು. ಇಂಗ್ಲೆಂಡಿನ ಸಹವಾಸದಿಂದ ನಡೆಯುತ್ತಿದ್ದರಿಂದ ನನಗೆ ಕಂಡುಬಂದ ಇಂಥ ಸಹವಾಸದಿಂದ [illegible] ಇಂಗ್ಲೆಂಡಿನ ಯುವಕರಿಗೆ [illegible] ತಪ್ಪುತ್ತಿದ್ದಿಲ್ಲವಾದರೂ ಹಿಂದೀ [illegible] ಪ್ರಲೋಭಕ್ಕೆ [illegible] ನಾನು ಈ ಸಂಸರ್ಗದೊಳಕ್ಕೆ ಬಿದ್ದೆನು. [illegible] ನನಗೊಂದು [illegible] ನಾನು ಬ್ರಹ್ಮಚಾರಿ ಎಂದು [illegible] ಅದರ ಆ ಸಂಕೋಚವೇ [illegible] ಮತ್ತು [illegible] ಸ್ವಭಾವದಿಂದ ನಾನು ಅಳವಾದ ನೀರಿನಲ್ಲಿ [illegible] ನಾನು ಪ್ರಾಮಾಣಿಕನಾಗಿದ್ದರೆ [illegible] ಆಗಲೀ ಹೋಟೆಲಿನಲ್ಲಾಗಲೀ ಯಾವ ಹುಡು[illegible]ಗೂ ಸಂತೋಷವಾಗುತ್ತಿರಲಿಲ್ಲ.

ನಾನು ಮೌನಿಯಾಗಿದ್ದಂತೆ ಧೈರ್ಯವಾಗಿದ್ದೆ. ವೆಂಟನೋರದಲ್ಲಿ ನಾನು ಇಳಕೊಂಡಿದ್ದ ಅಂಥ ಕುಟುಂಬಗಳಲ್ಲಿ ಯಜಮಾನಿಯ ಹುಡುಗಿಯು ಅತಿಥಿಗಳೊಡನೆ ಸಂಚಾರಕ್ಕಾಗಿ ಹೋಗುತ್ತಿದ್ದಳು. ನನ್ನ ಯಜಮಾನಿಯ ಹುಡುಗಿಯು ವೆಂಟನೋರದ ಬಳಿ ಇದ್ದ ಸುಂದರವಾದ ಗುಡ್ಡ ಪ್ರದೇಶಕ್ಕೆ ಒಂದು ದಿನ ನನ್ನನ್ನೊಯ್ದಳು. ನಾನೇನು ಮಂದ ಗತಿಯವನಲ್ಲ; ನನ್ನ ಜೊತೆಗಾತಿಯೂ ನನಗಿಂತಲೂ ಶೀಘ್ರವಾಗಿ ನಡೆಯುತ್ತಿದ್ದಳು. ನನಗೆ ಎಳಕೊಳ್ಳುತ್ತ, ನನ್ನೊಡನೆ ಹರಟೆ ಹೊಡೆಯುತ್ತ ರಭಸದಿಂದ ಸಾಗುತ್ತಿದ್ದಳು. "ಹೌದು" ಯಾ "ಇಲ್ಲ" ಅಥವಾ ಹೆಚ್ಚೆಂದರೆ, "ಹೌದು ಬಹಳ ಚೆಲುವಾದದ್ದು" ಎಂದು ನಾನು ಒಮ್ಮೊಮ್ಮೆ ಉದ್ಗರಿಸುತ್ತಿದ್ದೆ. ಅವಳು ಒಂದು ಪಕ್ಷಿಯಂತೆ ಹಾರ್ಯಾಡುತ್ತಿದ್ದಳು. ನನಗೆ ಮರಳಿ ಯಾವಾಗ ಮುಟ್ಟುವೆನೆಂದು ನಾನು ದಿಗಿಲುಬಿದ್ದಿದ್ದೆ. ಕೊನೆಗೆ ನಾವಿಬ್ಬರೂ ಬೆಟ್ಟದ ತುದಿಗೆ ಹೋಗಿ ಮುಟ್ಟಿದೆವು. ಇಳಿಯುವ ಬಗೆ ಹೇಗೆ? ಆ ಹುಡುಗಿಯು ಎತ್ತರವಾದ ಹಿಮ್ಮಡಿಗಳಿದ್ದ ಬೂಟುಗಳನ್ನು ಹಾಕಿಕೊಂಡಿದ್ದಳು. ಅವಳಿಗೆ ೨೫ ವರ್ಷ ವಯಸ್ಸು. ಬಹಳ ಚಪಲೆ! ಗುಡ್ಡದ ತುದಿಯ ಮೇಲಿಂದ ಮಿಂಚಿನಂತೆ ಕೆಳಕ್ಕೆ ಬಂದಳು. ನನಗೆ ಬಹಳ ನಾಚಿಕೆಯಾಯಿತು. ಕೆಳಗಿಳಿಯಲು ಒದ್ದಾಡುತ್ತಿದ್ದೆ. ಅವಳು ಕೆಳಗೆ ನಗುತ್ತ ನಿಂತಿದ್ದಳು. ನನಗೆ ಹುರಿದುಂಬಿಸುತ್ತಿದ್ದಳು. ಬೇಕಾದರೆ ತಾನು ಬಂದು ಎಳಕೊಂಡು ಕೆಳಗಿಳಿಸುತ್ತೇನಾಗಿಯೂ ಹೇಳುತ್ತಿದ್ದಳು. ನಾನು ಇಷ್ಟು ಹೆಗ್ಗ ಪುಕ್ಕನಾದೆ! ಬಹಳ ಪ್ರಯಾಸದಿಂದ ಕೆಲವೆಡೆಗಳಲ್ಲಿ ಅಂಬೆಗಾಲಿಕ್ಕುತ್ತ ಹ್ಯಾಗಾದರೂ ಮಾಡಿ ನಾನು ಕೆಳಗಿಳಿದಾಗ "ಭಾಪುರೆ" ಎಂದು ಅವಳು ಉದ್ಗರಿಸಿ ಕೊಟ್ಟಿನ ಚಪ್ಪಾಳೆ ನನಗೆ ಬಹಳ ನಾಚಿಕೆಯುಂಟಾಯಿತು.

ಆದರೆ ಪ್ರತಿಯೊಂದೆಡೆಯಲ್ಲಿಯೂ ನಾನು ಸುರಕ್ಷಿತನಾಗಿ ಪಾರಾಗಲಾರೆ. ಈಶ್ವರನು ಕೇಳಿದಂತೆ ನನ್ನ ಅಸತ್ಯರೋಗವು ಪರಿಹಾರವಾಗುವದಿತ್ತು. ವೆಂಟನೋರದಂತೆ ಬ್ರಾಯ್ಟನದಲ್ಲಿಯೂ ಒಂದು ಜಲಾಶಯವಿದೆ. ಅಲ್ಲಿ ನಾನು ಒಮ್ಮೆ ಹೋಗಿದ್ದೆ. ಒಂದು ಉಪಾಹಾರ ಗೃಹದ [illegible] ವಯಸ್ಸಿನ ವಿಧವೆಯು ಸಿಕ್ಕಿದಳು. ಈ ಹಕೀಕತು ಇಂಗ್ಲೆಂಡಕ್ಕೆ ಹೋದ ವರ್ಷದ್ದು. ಉಪಾಹಾರ ಪದಾರ್ಥದ ಟಿಪ್ಪಣಿಗಳೆಲ್ಲ ಫ್ರೆಂಚ ಭಾಷೆಯಲ್ಲಿದ್ದವು. ಫ್ರೆಂಚ ನನಗೆ ಬರುತ್ತಿದ್ದಿಲ್ಲ. [illegible] ನನ್ನ ಬಳಿಯಲ್ಲಿಯೇ ಉಪಾಹಾರಕ್ಕೆ ಕುಳಿತುಕೊಂಡಿದ್ದಳು. ನಾನೊಬ್ಬ ಪರದೇಶಿ, ಗೊಂದಲದಲ್ಲಿ ಸಿಕ್ಕಿದ್ದೇನೆ ಎಂದು ಅವಳು ಅರಿತುಕೊಂಡು ನನಗೆ ಸಹಾಯಕ್ಕೆ ಬಂದಳು. ಅವಳು ನುಡಿದದ್ದು "[illegible] ಪರದೇಶಿಯಂತೆ ಕಾಣುತ್ತೀರಿ, ಗೊಂದಲದಲ್ಲಿದ್ದಂತೆ ತೋರುತ್ತದೆ. ಉಪಾಹಾರ ಪದಾರ್ಥಗಳನ್ನೇನೂ ತರಿಸಲಿಲ್ಲವೇಕೆ?" ನಾನು ಟಿಪ್ಪಣಿಯನ್ನು ಓದಿಕೊಂಡು ಸೇವಕನ ಕಡೆಯಿಂದ ಪದಾರ್ಥಗಳ ಹೆಸರುಗಳನ್ನು ಕೇಳುತ್ತಿದ್ದೆ. ಅಷ್ಟರಲ್ಲಿ ಆ ಮುದುಕಿಯು ನನ್ನ ಸಮಾಚಾರ ಕೇಳಹತ್ತಿದಳು. ನಾನು ಅವಳಿಗೆ ಉಪಕಾರ ಮನ್ನಿಸಿ ನನಗೆ ಫ್ರೆಂಚು ಬಾರದ್ದರಿಂದ ಯಾವ ಪದಾರ್ಥ ತಿನ್ನತಕ್ಕಂಥವು, ವನಸ್ಪತಿಗಳಿಂದ ತಯಾರಿಸಲ್ಪಟ್ಟಿವೆ ಎಂದು ತಿಳಿಯದ ಗೊಂದಲದಲ್ಲಿ ಬಿದ್ದಿದ್ದೇನೆಂದು ನಾನು ಹೇಳಿದೆನು.

ನಾನು ನಿನಗೆ ಸಹಾಯ ಮಾಡುತ್ತೇನೆ. ಆ ಟಿಪ್ಪಣಿಯನ್ನು ನಿನಗೆ ಓದಿ ಹೇಳಿ ನೀನು ತಿನ್ನಬಹುದಾದ ಪದಾರ್ಥಗಳನ್ನು ತೋರಿಸುತ್ತೇನೆ ಎಂದು ಅಂದಳು. ಅವಳ ಸಹಾಯವನ್ನು ನಾನು ಕೃತಜ್ಞತೆಯಿಂದ ಅಂಗೀಕರಿಸಿದೆನು. ಈ ಪರಿಚಯದಿಂದಲೇ ನಮ್ಮೊಳಗಿನ ಸ್ನೇಹಭಾವವು ಬೆಳೆದು, ನಾನು ಇಂಗ್ಲೆಂಡದಲ್ಲಿ ಇರುವ ವರೆಗೆ ಮಾತ್ರ ಬಹಳ ಸ್ನೇಹಭಾವದಿಂದಿದ್ದವು. ಆ ಬಳಿಕವೂ ಈ ಗೆಳೆತನವು ಬಹಳ ಕಾಲ ಉಳಿಯಿತು. ಲಂಡನ್ನಿನೊಳಗಿನ ತನ್ನ ಪತ್ತೆಯನ್ನು ನನಗೆ ಕೊಟ್ಟು ಪ್ರತಿ ರವಿವಾರಕ್ಕೆ ತನ್ನಲ್ಲಿ ಊಟ ಮಾಡಲು ನಿಮಂತ್ರಿಸಿದಳು. [illegible] ಪ್ರಸಂಗಗಳಲ್ಲಿಯೂ ಅವಳು ನನಗೆ ಆಮಂತ್ರಿಸುತ್ತಿದ್ದಳು. ನಾಚಿಕೆಯ ಸ್ವಭಾವವನ್ನು ತ್ಯಜಿಸಲಿಕ್ಕೆ ನನಗೆ ನೆರವಾಗುತ್ತಿದ್ದಳು. ಎಳೆ ಹುಡುಗಿಯರೊಡನೆ ನನಗೆ ಪರಿಚಯ ಮಾಡಿಕೊಟ್ಟು ಅವರೊಡನೆ ನನಗೆ ಸಂಭಾಷಣ ಮಾಡಹಚ್ಚುತ್ತಿದ್ದಳು. ಈ ಸಂಭಾಷಣದಲ್ಲಿ ವಿಶೇಷವಾಗಿ ಒಬ್ಬ ಎಳೆ ಹುಡುಗಿಯು ಭಾಗವಹಿಸುತ್ತಿದ್ದಳು. ಅವಳು ಮುದಿ ವಿಧವೆಯೊಡನೆ ಇರುತ್ತಿದ್ದಳು. ಆನೇಕಾವರ್ತಿ ನನ್ನನ್ನೂ ಹರೆಯ ಹುಡುಗಿಯನ್ನೂ ಒಕ್ಕಟ್ಟಿಗೆ ಬಿಟ್ಟು ಅವಳು ಹೋಗುತ್ತಿದ್ದಳು.

ಮೊದಮೊದಲು ಇದರಿಂದ ನನಗೆ ಬಹಳ ಕಷ್ಟವೆನಿಸುತ್ತಿತ್ತು. ಸಂಭಾಷಣವನ್ನು ಪ್ರಾರಂಭಿಸಲಿಕ್ಕೆ ನನಗೆ ಬರುತ್ತಿದ್ದಿಲ್ಲ; ಚೇಷ್ಟೆ ಮಾಡಲಿಕ್ಕೂ ಬರುತ್ತಿದ್ದಿಲ್ಲ. ಆದರೆ ಅವಳು ಈ ವಿಷಯವನ್ನು ನನಗೆ ಹೇಳಿಕೊಡಹತ್ತಿದಳು. ನಾನು ಒಂದೊಂದಾಗಿ ಕಲಿಯಹತ್ತಿದೆನು. ಕಾಲಾಂತರದಲ್ಲಿ ಪ್ರತಿ ರವಿವಾರವನ್ನು ಹಾರೈಸಹತ್ತಿದೆ, ಮತ್ತು ಎಳೆ ಗೆಳತಿಯೊಡನೆ ಸಂಭಾಷಣ ಮಾಡಲು ಸಂತೋಷವಾಗಹತ್ತಿತು.

ದಿನ ಹೋದ ಹಾಗೆ ಮುದಿ ವಿಧವೆಯು ತನ್ನ ಬಲೆಯನ್ನು ಹೆಚ್ಚು ವಿಸ್ತಾರವಾಗಿ ಪಸರಿಸಹತ್ತಿದಳು. ನಾವಿಬ್ಬರು ಒಟ್ಟಿನಲ್ಲಿ ಬಳಕೊಳ್ಳುವದನ್ನು ನೋಡುವದೇ ಅವಳಿಗೆ ಪ್ರೀತಿಯಾಯಿತು. ನಮ್ಮ ಬಗ್ಗೆ ಅವಳ ಹಂಚಿಕೆ ಏನಾದರೂ ಇದ್ದಿರಬೇಕು, ನಾನು ದಿಗಿಲು ಬಿದ್ದೆ. 'ನಾನು ಆ ಅಮ್ಮನಿಗೆ ನನ್ನ ಮದುವೆಯಾಗಿತ್ತೆಂದು ಹೇಳಿದರೆ ಸಾಕು, ಎಂದು ನನಗೆ ಅನಿಸಿತು. "ನಮ್ಮಿಬ್ಬರನ್ನು ಪ್ರಣಯ ಜೋಡಿಸಲು ಅವಳು ಇಚ್ಛಿಸುತ್ತಿರಲಿಲ್ಲ; ಈಗಲಾದರೂ ಸಮಯ ಮೀರಿ ಹೋಗಲಿಲ್ಲ, ಸತ್ಯಸ್ಥಿತಿಯನ್ನರುಹಿದರೆ ಮುಂದೊದಗುವ ಕಷ್ಟಗಳಾದರೂ ತಪ್ಪುವವು" ಈ ವಿಚಾರದಿಂದ ನಾನು ಹುರಿದುಂಬಿಗೊಂಡು ಪತ್ರ ಬರೆದೆನು. ಅದರ ತಾತ್ಪರ್ಯವೇನೆಂದರೆ:—

"ಬ್ರಾಯ್ಟನದಲ್ಲಿ ನೀವು ನನಗೆ ಸಿಕ್ಕಿದಂದಿನಿಂದ ನೀವು ನನಗೊಳ್ಳೇ ರೀತಿಯಿಂದ ನಡಿಸಿಕೊಳ್ಳುತ್ತೀರಿ, ಪುತ್ರವಾತ್ಸಲ್ಯದಿಂದ ನನ್ನ ಜೋಪಾನ ಮಾಡುತ್ತೀರಿ. ನನಗೆ ಮದುವೆ ಮಾಡಬೇಕೆಂಬ ವಿಚಾರದಿಂದ ನೀವು ಪ್ರಾಯದ ಹುಡುಗಿಯರೊಡನೆ ನನ್ನ ಪರಿಚಯ ಮಾಡಿಕೊಡುತ್ತೀರಿ, ಹೀಗೆ ಮುಂದರಿಯುವದು ಇಷ್ಟವಲ್ಲ, ನಿಮ್ಮ ಪ್ರೀತಿಯನ್ನು ಪಡೆಯಲಿಕ್ಕೆ ಪಾತ್ರನಲ್ಲೆಂದು ನಾನು ಒಪ್ಪಿಕೊಳ್ಳುತ್ತೇನೆ. ನಿಮ್ಮ ಬಳಿ ನಾನು ಹೋಗಹತ್ತಿದಾಗ ನನಗೆ ಮದುವೆಯಾಗಿತ್ತೆಂದು ನಾನು ಹೇಳಬೇಕಾಗಿತ್ತು. ಇಂಗ್ಲೆಂಡದೊಳಗಿನ ಹಿಂದೀ ವಿದ್ಯಾರ್ಥಿಗಳು ತಮ್ಮ ಮದುವೆಯಾದ ಸಂಗತಿಯನ್ನು ಬಚ್ಚಿಡುತ್ತಿದ್ದರು, ಮತ್ತು ನಾನು ಅವರನ್ನೇ ಹಿಂಬಾಲಿಸಿದೆನು. ಹೀಗೆ ನಾನು ಮಾಡಬಾರದಿತ್ತೆಂದು ಈಗ ನನಗೆ ತಿಳಿಯುತ್ತದೆ. ನಾನು ಚಿಕ್ಕವನಿರುವಾಗಲೇ ಮದುವೆಯಾಗಿತ್ತು, ಒಬ್ಬ ಹುಡುಗನೂ ಹುಟ್ಟಿರುವನು. ಈ ವರೆಗೆ ಈ ಸಂಗತಿಯನ್ನು ನಿಮಗೆ ತಿಳಿಸದೆ ಇದ್ದ ಬಗ್ಗೆ ನನಗೆ ದುಃಖವಾಗುತ್ತದೆ. ಈಗಲಾದರೂ ಸತ್ಯವನ್ನರುಹಲು ಪರಮಾತ್ಮನು ಧೈರ್ಯ ಕೊಟ್ಟ ಬಗ್ಗೆ ನನಗೆ ಸಂತೋಷವಾಗುತ್ತದೆ. ನೀವು ನನಗೆ ಕ್ಷಮಿಸಬೇಕು. ನೀವು ಸದ್ಬುದ್ಧಿಯಿಂದ ನನಗೆ ಪರಿಚಯ ಮಾಡಿಕೊಟ್ಟ ಎಳೆ ಹುಡುಗಿಯೊಡನೆ ನಾನು ಯಾವದೇ ಪ್ರಕಾರ ಅಸಭ್ಯ ವರ್ತನ ಮಾಡಲಿಲ್ಲೆಂದು ನಿಮಗೆ ಆಶ್ವಾಸನವನ್ನೀಯುತ್ತೇನೆ. ನನ್ನ ಅಧಿಕಾರ ಕಕ್ಷೆಯನ್ನು ನಾನು ಅರಿತಿದ್ದೆ. ನನಗೆ ಮದುವೆಯಾದ ಹಕೀಕತು ನಿಮಗೆ ಗೊತ್ತಿಲ್ಲದ್ದರಿಂದ ನಾವಿಬ್ಬರೂ ಗಂಡ-ಹೆಂಡರಾಗಬೇಕಾಗಿ ನಿಮಗೆ ಇಚ್ಛೆಯಾಯಿತು. ಈ ಪರಿಸ್ಥಿತಿಯು ಇನ್ನೂ ಮುಂದರಿಯುವದು ಇಷ್ಟವಲ್ಲದ್ದರಿಂದ ನಾನು ಸತ್ಯವನ್ನು ಹೇಳಬೇಕಾಗಿದೆ.

"ಈ ಪತ್ರ ತಲುಪಿದ ಬಳಿಕ, ನಿಮ್ಮ ಬಳಿ ಇದರಾತಿಥ್ಯವನ್ನು ಸ್ವೀಕರಿಸಲು ನಾನು ಅನರ್ಹನೆಂದು ನಿಮಗನಿಸಿದರೆ, ಅದರಿಂದ ನಾನೇನು ವಿಕಲ್ಪವೆಂದೆಣಿಸಲಾರೆ. ನಿಮ್ಮ ಔದಾರ್ಯದಿಂದ ನನಗೆ ಬಹಳ ಉಪಕಾರವಾಗಿದೆ. ಈ ಪತ್ರ ಒದಿ ನನಗೆ ಆತಿಥ್ಯವನ್ನೀಯಲು ನಾನು ಪಾತ್ರನೆಂದು ನಿರ್ಣಯಿಸಿದರೆ, ನನಗೆ ಬಹಳ ಸಂತೋಷವಾಗುವದು. ಅದೊಂದು ನಿಮ್ಮ ವಿಶೇಷ ಔದಾರ್ಯದ ದ್ಯೋತಕವಾಗಿರುವದು."

ಇಂಥ ಪತ್ರವನ್ನು ನಿಮಿಷದಲ್ಲಿ ಬರೆಯಲಾಗುತ್ತಿದ್ದಿಲ್ಲ. ಅನೇಕಾವರ್ತಿ ಬರೆದು ತಿದ್ದುಪಡಿ ಮಾಡಿರಬೇಕು. ಆದರೆ ಇದರಿಂದ ನನ್ನ ಮನಸ್ಸಿನ ಮೇಲಿದ್ದ ದೊಡ್ಡದೊಂದು ಬಜ್ಜೆಯು ಕೆಳಗಿಳಿದಂತಾಯಿತು. ಅವಳ ಉತ್ತರವು ಮರುಟಪಾಲಿಗೆ ಬಂದಿತ್ತು. ಅದೇನೆಂದರೆ —

"ನೀನು ಸ್ಪಷ್ಟವಾಗಿ ಬರೆದ ಪತ್ರವು ನನ್ನ ಕೈಸೇರಿತು. ಅದನ್ನೋದಿ ನಮ್ಮಿಬ್ಬರಿಗೆ ಬಹಳ ಸಂತೋಷವಾಯಿತು. ಖುಲ್ಲಾ ಹರಿದ ನಮಗೆ ನಗೆ ಬಂತು. ನೀವು ಅಸತ್ಯವೇಷ ಮಾಡಿ ಅಪರಾಧಿಯಾಗಿದ್ದೀರೆಂದು ಬರೆಯುತ್ತೀರಿ. ಈ ಅಪರಾಧ ಕ್ಷಮ್ಯವಿದೆ. ಸದರಿ ಸತ್ಯಸ್ಥಿತಿಯನ್ನು ತಿಳಿಸಿದ್ದು

ಬಹಳ ಬೆಳೆಯಿತು. ನಿನಗೆ ಅಶಕ್ತನಲ್ಲ ನಿಮಂತ್ರಣ ವಿತ್ತ ಬರುವ ರವಿವಾರಕ್ಕೆ ನಿನ್ನ ನಿರೀಕ್ಷಣದಲ್ಲಿರುತ್ತೇನೆ. ನಿನ್ನ ಬಾಲವಿನೋದದ ಕಥೆಯನ್ನು ಕೇಳಿ ನನಗೆ ತುಷ್ಟವಾಗಿ ವಿನೋದ ಆಡಬೇಕೆಂದಿದ್ದೇನೆ. ಅದರಿಂದ ನನ್ನ ಗೆಳೆಯನಿಗೆ ಏನೂ ಬಾಧೆಯಿಲ್ಲವೆಂದು ನಿನಗೆ ಆಶ್ವಾಸನೆ ಕೊಡುತ್ತೇನೆ.

ಹೀಗೆ ಅನಿಷ್ಟರೋಗದಿಂದ ನನ್ನ ಪರಿಹಾರವಾಯಿತು. ಅವಶ್ಯವಿದ್ದಾಗ ನನಗೆ ಮಡದಿಯಾದ ಅಶೋಕನನ್ನು ಕೇಳಲಿಕ್ಕೆ ಆ ಬಳಿಕ ನಾನು ಎಂದೂ ಹಿಂಜರಿಯಲಿಲ್ಲ.

ಜನ್ಮದಿಂದ ಒಂದು ಕೋಟಿ ಜನ ಅಷ್ಟು ಬಟ್ಟು ವಸಂತಲಿಕ್ಕೆ ೧೨೦೦ ಬಾರಿ ಹಿಂದೆಯಂತೆ ತಿರುಗಬೇಕಾಗುತ್ತದೆ. ಒಂದು ಬಾರಿಗೆ ಅರ್ಧ ನಿಮಿಷ ಹಿಡಿದರೂ ೨೦ ವರ್ಷ ಪ್ರಯಾಸವಾಯಿತೆಂದು ಶಾಸ್ತ್ರಜ್ಞರು ಲೆಕ್ಕ ಮಾಡಿರುವರು.

ಉತ್ತಮ ವಸ್ತುಗಳು! ಉತ್ತಮ ವಸ್ತುಗಳು!!

ಮಂಗಳೂರ ಹಂಚು!

ನಮ್ಮಲ್ಲಿ ಮಂಗಳೂರ ಬೋರ್ಡ ಟೈಲ ಫ್ಯಾಕ್ಟರಿಯ ಉತ್ತಮ ಪ್ರತಿಯ ಮಂಗಳೂರ ಹಂಚುಗಳು ಮಾರಾಟಕ್ಕೆ ಸಿದ್ಧವಾಗಿವೆ. ಬೇಳಿಕೆಯಲ್ಲಿ ಇವಕ್ಕೆ ಉತ್ತಮ ಹಂಚುಗಳಿಲ್ಲ! ದೇಶಾಂತರವನ್ನು ನೋಡಿ ದರದಾರ ತಿಳಕೊಳ್ಳಬಹುದು. ದರವಾರ ಸವಲತ್ತು ಮಾಡಿರುವೆವು. ಒಮ್ಮೆ ಪರೀಕ್ಷಿಸಿ ನೋಡಿರಿ!

ವಿಳಾಸ.— ಶಾಫಿ ಅಬ್ದುಲ್ ಕಾದರ,
ಮರ್ಚಂಟ್ ಕೋರ್ಟ ಸಮೀಪ, ಕುಮಟಾ.

ಸುಗಂಧಿ ತಾಂಬೂಲ ಜರ್ದಾ!

ಈ ಜರ್ದಾ ಕಿತ್ತಲಿಕ್ಕೆ ಕಡಕ ವಿದ್ದು, ಸುವಾಸಿಕ ವಿರುತ್ತದೆ. ಇದರ ಸೇವನದಿಂದ ಬಾಯಿಯ ಹೊಲಸು, ವೇದನೆ ಹಳ ಇವು ನಾಶವಾಗಿ ಹಲ್ಲುಗಳು ಬಲ್ಲೇ ಘಟ್ಟವಾಗುತ್ತವೆ. ಇದರ ಸೇವನದಿಂದ ದಮ್ಮು, ಕಫ ಮುಂತಾದ ವಿಕಾರಗಳುಂಟಾಗುವ ಸಂಭವವು ಇಲ್ಲ. ಕಾರಣ ತಂಬಾಕು ಸೇವಿಸುವವರು ಅವಶ್ಯವಾಗಿ ಅನುಭವ ಕೊಳಬೇಕು. ೧ ಪ್ರತಿ ಕಿಂ. ೦-೧-೦, ೬ ತೊಲ ಕಿಂ. ರೂ. ೦-೯-೦, ೧೨ ತೊಲ ಕಿಂ. ರೂ. ೧-೦-೦, ೫೦೦ ಪ್ರತಿಗಳ ಕಿಂ. ರೂ. ೯-೦-೦, ೧೦೦೦ ೧೬-೦-೦, ಪ. ಪೈ. ಖರ್ಚು ಗ್ರಾಹಕರ ಪ್ರತ್ಯೇಕ.

ಸುಗಂಧಿ ನಸ್ಯ. ಈ ನಸ್ಯವು ಒಳ್ಳೇ ತಂಬಾಕಿನಿಂದ ಮಾಡಿದ್ದಾಗಿ, ಇದರಿಂದ ಶೈತ್ಯ, ಧೂಳಿ, ಅರೆತಲೆನೋವು ಮುಂತಾದವುಗಳು ಕೂಡಲೆ ವಾಸಿಯಾಗಿ ತಲೆಯು ಹಗುರವಾಗಿ ಹಗುರವಾಗಿ ವಿಚಾರಶಕ್ತಿಗೆ ಚಪಲತೆಯು ಪ್ರಾಪ್ತವಾಗುವದರಿಂದ ಯಾವದೇ ಕೆಲಸವನ್ನು ಕೈಕೊಳ್ಳಲಿಕ್ಕೆ ಸ್ಫೂರ್ತಿಯುಂಟಾಗುತ್ತದೆ. ಒಮ್ಮೆ ಪರೀಕ್ಷಿಸಿ ಖಾತ್ರಿಮಾಡಿಕೊಳ್ಳಿರಿ. ೧ ಡಬ್ಬಿ ಕಿಂ. ರೂ. ೦-೪-೦; ೧ ದೊಡ್ಡ ಡಬ್ಬಿ ಕಿಂ ರೂ ೧-೦-೦. ಪೋ. ಖರ್ಚ ಬೇರೆ.

ಉತ್ತಮ ಬೀಜಗಳು:— ಅತ್ಯುತ್ತಮ ಪ್ರತಿಯ ತಂಬಾಕಿನಿಂದ ಹಾಗೆ ಕಟ್ಟಿದ ಬೀಡಿಗಳು ನಮ್ಮಲ್ಲಿ ತಯಾರಿರುತ್ತವೆ. ಕಿಮ್ಮತ್ತಿನ ವಿಷಯಕ್ಕೆ ಬರೆದ ಪುರವಣಿ ನೋಡಿ ವಹಾಲಿಗೆ ಅರ್ಜ ಕೊಡಬಹುದು. ಇದಲ್ಲದೆ ಹೊರತು, ನಮ್ಮಲ್ಲಿಯ ಬಾಜಾರ ದಲ್ಲಿ ಎಲ್ಲಾ ಪ್ರಕಾರಗಳ ತಂಬಾಕು ಬರುತ್ತದೆ. ಬೇಕಾದ ನವಯುವಕರು ತಂಬಾಕನ್ನು ಯೋಗ್ಯ ದರದಿಂದ ಕೊಂಡು ಒಯ್ಯಬಹುದು. ವಿಶೇಷ ಮಾಹಿತಿ ಬಗ್ಗೆ ಪತ್ರವ್ಯವಹಾರ ಮಾಡಿದರೆ, ಕೂಡಲೆ ಉತ್ತರ ಬರೆಯುವೆವು.

ವಿಳಾಸ:- **ಎಸ್. ಬಿ. ಕದಂ,**
ಬೀಡಿ ಮತ್ತು ತಂಬಾಕು ಜರ್ದಾ ಮಾರಾಟ.
ಮು: ಪೋ: ಸಿಪ್ಪಾಣಿ, ಜಿ. ಬೆಳಗಾಂವ

ಪ್ರಕಟನೆ.

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂಪನಿ, ಬೆಂಗೂರ.

ಈ ಕಂಪನಿಯು ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಪ್ರಯುಕ್ತ ೧೯೨೬ನೆಯ ಇಸ್ವಿ ಜನೇವರಿ ೩೧ನೆಯ ತಾರೀಖಿನ ದಿವಸ ಸಾಯಂಕಾಲ ೫—೩೦ ಕ್ಕೆ ಕಂಪನಿಯ ಹೆಡ್ ಆಫೀಸಿನಲ್ಲಿ ಮೂಲಕವಾಗಿ ಆ ಸಾಯಿ ಸ ಲ್ಲಿಟ್ಟ ಬೋರ್ಡ ಆಫ್ ಡಾಯರೆಕ್ಟರ್ಸ ಚೇರಮನ್ನರಾದ ರಾವಸಾಹೇಬ ಡಾ: ಕೆ. ಎಸ್ ಮ್ಯಾಕ್ಸರ L.R.C.P. M.R.C.S. ಅವರ ಅಧ್ಯಕ್ಷತೆಯಲ್ಲಿ ಸಹದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ಒತ್ತಿ ಮತ್ತು ಅಕ್ಕ ಇಲ್ಲದೆ ೧೦೨೦ ರೂಪಾಯಿಗಳ ಸಾಲವು ದೊರೆಯಬೇಕೆಂದು ನಿರ್ಣಯವಾಯಿತು.

(೧) ಬಾಂಡ ನಂಬರ ೫೬೭೦	ಮಿ: ವಿಠ್ಠಲ ಚಿಮ್ಮಾಜಿ ಸೇಟ್ ಕಲಾಲ್ ಅರಿಬಾಗೆ ಮುಂಬೈ	...	೧೦೦೦
(೨) ಬಾಂಡ ನಂ। ೧೩೩೭೭	ಮಿ: ರಂಗಪ್ಪ ಜ್ಯಾನಭೋಗ ಹುಲಿಕುಂಟೆ, ಪೋಸ್ಟ ಸಿರಾ. ತಾಲೂಕ ಸಿರಾ, ಜಿಲ್ಲಾ ಟುಮಕೂರ	...	೧೦೦೦
(೩) ಬಾಂಡ ನಂ। ೧೪೯೯೬	ಮಿ: ವೆಂಕಟನರಸಿಂಹ ವೆಂಕಟರಾಯ ಹೆಗಡೆ. ಕೇಶ್ವರಿ, ತಮ್ಮ-ಣಕೇರಿ, ಹೊನ್ನಾವರ ತಾ। (ಸಾಥರ ಕ್ಯಾನರಾ) ಜಿಲ್ಲಾ.	...	೧೦೦೦
(೪) L. B. C. " ೧೮೩೩	ಮಿ: ಜಿ. ವೆಂಕಟಪ್ಪ ಮುಚ್ಚಂಟ ಮತ್ತು ಜಮೀನದಾರ. ಪ್ರಸಿಡೆಂಟ, ಬಳ್ಳಾರಿ.		೧೦೦೦
(೫) " ೨೫೨	ಮಿ: ರಾಮಚಂದ್ರ ನಾಯಕ್ ಕಾಂಚೀಕರ C/o ಕಾಲೂಸ್ಕರ ವಾಡಾ, ಮ್ಯಾಲೇಸ ರೋಡ, (ಬರೋಡಾ)		೧೦೦೦
(೬) " ೧೮೪೦	ಮಿ: ಆರ್. ಎಚ್ ನಾಟೇಕರ್, ಮಾಸ್ತರ, ಗವರ್ನಮೆಂಟ ಸಿಟಿ ಹಾಯಸ್ಕೂಲ, ಹೈದರಾಬಾದ (ಡೆಕ್ಕನ)		೧೦೦೦

ಬಿ. ಎನ್. ಆರಾಧ್ಯ,
ಮುಂಬಯಿ ಇಲಾಖೆಯ, ಚೀಫ್ ಏಜಂಟ, ಹುಬ್ಬಳ್ಳಿ.

ಅತ್ಯದ್ಭುತ! ಅಮೇರಿಕಾ ಖಂಡದ ಅತ್ಯದ್ಭುತ!!

ಪ್ರಸಿದ್ಧ ಡಾಕ್ಟರನೊಬ್ಬನು ಕಂಡು ಹಿಡಿದ ಸಿದ್ಧೌಷಧ!

ಸರ್ವರೋಗ ನಿವಾರಣೆಯಾಗುವ ಸಂಜೀವನೌಷಧವನ್ನು ಕಂಡು ಹಿಡಿಯುವದಕ್ಕಾಗಿ ಅಮೇರಿಕಾ ಖಂಡದ ಪ್ರಖ್ಯಾತ ಡಾಕ್ಟರನೊಬ್ಬನು ಅನೇಕ ವರ್ಷಗಳಿಂದ ಬಹು ಧನ ನಷ್ಟ ಮಾಡಿಕೊಂಡು ಪರಿಶೋಧನೆಗಳನ್ನು ಮಾಡಿ ಕೊನೆಯಲ್ಲಿ

ಎಲಿಕ್ಸಿರ್ ಆಫ್ ಲೈಫ್

ಅಥವಾ

ಜೀವನಾಧಾರ

ಎಂಬ ಔಷಧವನ್ನು ಸಿದ್ಧಿಗೊಳಿಸಿರುವನು. ಅನುಭವದಿಂದ ಅನೇಕ ರೋಗಗಳಿಗೆ, ಎಂದರೆ ಅಗ್ನಿಮಾಂದ್ಯ ಅಜೀರ್ಣ, ಹೊಟ್ಟೆ ಆಫರಿಸುವಿಕೆ ಇವುಗಳಿಂದಾಗಿರುವದು, ಅತಿಸಾರ, ವಾಂತಿ, ಭೇದಿ ಅಥವಾ ಕಾಲರಾ, ತಲೆನೋವು ನೆಗಡಿ, ಮಲೇರಿಯಾ ಜ್ವರ, ಇತರ ವಿವಿಧವಾದ ಜ್ವರಗಳು, ಮಾನಸಿಕ ದೌರ್ಬಲ್ಯ, ಕೆಮ್ಮು ಮತ್ತು ಕಿವಿ ನೋವು, ದುರ್ಬಲತೆ, ನಾಯಿಕೆಮ್ಮು, ಸ್ತ್ರೀವ್ಯಾಧಿ ಮುಂತಾದ ಎಲ್ಲಾ ಬಗೆಯ ಸಾಂಕ್ರಾಮಿಕ ರೋಗಗಳಿಗೆ, (ಇನ್‌ಫ್ಲುಯೆಂಜಾಗೆ, ಪ್ಲೇಗಿಗೆ,) ಹಾವು, ಚೇಳು, ಮುಂತಾದ ವಿಷ ಜಂತುಗಳ ಕಡಿತಕ್ಕೆ, ಬಾಲಗ್ರಹ ಅವೇ ಮುಂತಾದವುಗಳಿಗೆ ಈ ಜೀವನಾಧಾರವನ್ನು ಕೊಟ್ಟು ಗುಣಪಡಿಸಿದ್ದನ್ನು ಅನೇಕರು ಬಲ್ಲರು. ಸಾಂಸರ್ಗಿಕ ರೋಗವಿರುವಾಗ ಅಥವಾ ಇಲ್ಲದ ಪ್ರಸಂಗದಲ್ಲಿ ಉಪಯೋಗಿಸತಕ್ಕದ್ದರ ಯಾವ ರೋಗವು ಅಂಟುವದಿಲ್ಲ. ಈ ಜೀವನಾಧಾರವೆಂಬ

ಸಂಜೀವನೌಷಧ

ವು ಒಂದು ಸೀಸೆಯು ಪ್ರತಿ ಮನೆಯಲ್ಲಿ ಅಥವಾ ಪ್ರತಿ ಒಬ್ಬನ ಜೇಬಿನಲ್ಲಿದ್ದರೆ ಅನುಭವಸ್ಥನಾದ ಡಾಕ್ಟರನೊಬ್ಬನು ಹತ್ತರವಿದ್ದಂತೆಯೇ. ಡಾಕ್ಟರರಿಗೆ ಕೊಡಬೇಕಾದ ಫೀಜುಗಳನ್ನು ಈ "ಜೀವನಾಧಾರ"ವೆಂಬ ಡಾಕ್ಟರನಿಗೆ ಕೊಡಬೇಕಾದ್ದಿಲ್ಲ. ಸೀಸೆ ಒಂದಕ್ಕೆ ರೂ ೧-೪-೦ ಟಪಾಲು ಖರ್ಚು ಪ್ರತ್ಯೇಕ. ಆಲಾಯಿದಾ ಬೇಕಾದವರು

ಜೀವನಾಧಾರ ಡಿಪೋ, ಮೈಸೂರು

ಬ್ರಾಂಚ:- **ಜೀವನಾಧಾರ ಡಿಪೋ,** ಹುಬ್ಬಳ್ಳಿ.

ಏಜಂಟರು ಬೇಕು! ಏಜಂಟರು ಬೇಕು!!

ನಮ್ಮಲ್ಲಿ

ಅತಿ ಮನೋಹರವಾದ ಶೀಶೆ ಕಟ್ಟಿಗೆಯ ದೇವರ ಮಂಟಪಗಳೂ,

ಹೆಂಗಸರ ಸೌಭಾಗ್ಯದ ಪೆಟ್ಟಿಗೆಗಳೂ, ಡಿಕ್ಸನೇರಿ ಪೆಟ್ಟಿಗೆಗಳೂ, ಆಫೀಸ ಬಾಕ್ಸಗಳೂ, ರೋಕಿಂಗ ಖುರ್ಚಿಗಳೂ ಹಾಗೂ ಯಾವತತ್ತು ತರದ ಮನೆ ಸಾಮಾನು ಸಿಗುತ್ತದೆ.

ನಮ್ಮ ವಿಳಾಸ—

ದಿ ನೊರ್ಥ ಕೆನರಾ ಟ್ರೇಡಿಂಗ ಕಂಪನಿ,
ಶಾಂತಿ ಭುವನ,
ಕಾರವಾರ.

ಚವರಲೆಟ್
ಮೋಟಾರಕಾರ್ ಏಜನ್ಸಿ, ಕೆನರಾ.

ನಾವು ಹೊಸ ಚವರಲೆಟ್ ಮೋಟಾರ ಗಾಡಿಗಳನ್ನು ಗಿರಾಕಿಗಳಿಗೆ ಅನುಕೂಲವಾಗುವಂತೆ ತರಿಸಿಕೊಡುತ್ತೇವೆ. ಅಪೇಕ್ಷೆಯುಳ್ಳವರು ಸವಿಸ್ತರ ಮಾಹಿತಿ ತಿಳಿದುಕೊಳ್ಳಬಹುದು.

ಏಜಂಟ್ರು —**ಎಸ್. ಎಲ್. ಧಾಕಪ್ಪ ಮತ್ತು ಬ್ರದರ್ಸ, ಶಿರ್ಸಿ.**

ಸಬ್ ಏಜಂಟ್ರು **ಜಿ. ಡಿ. ಮಳಗಿಕರ ಎಂಡ್ ಕೋ,**

ಡಿ. ಕಿ. ಸಿ ಪೆಟ್ರೋಲ ನಮ್ಮಲ್ಲಿ ದೊರೆಯುತ್ತದೆ; ಡನ್‌ಲಪ್ ಹಾಗು ಇತರ ಮೋಟಾರ ಸಾಮಾನು ಇತ್ಯಾದಿ ಸಾಮಗ್ರಿಗಳು ಯೋಗ್ಯ ದರದಲ್ಲಿ ದೊರೆಯುತ್ತವೆ.

ಸೂಚನೆ:— ನಮ್ಮಲ್ಲಿ ಮೋಟಾರ ರಿಪೇರಿ ಮಾಡಿಕೊಡುತ್ತೇವೆ. ... ವಿಸ್ತಾರವಾದ ಮಾಹಿತಿ ತಿಳಿದುಕೊಳ್ಳಬಹುದು.

G. D. Malgikar & Co,
KUMTA.

ಪ್ರಯಾಣಿಕರಿಗೆ
ವಿಶೇಷ ಅನುಕೂಲ!

ಗಿರಿಸಿದ ಮೋಟಾರ ಸಿರ್ವಿಸ ವ್ಯವಸ್ಥೆ ಹಾಗೂ

ಶಿರ್ಸಿ, ಕುಮಟಾ, ಹೊನ್ನಾವರ, ... ಕಾರವಾರ

ಟಿಕೇಟು ಮುಂದಾಗಿ ... ಹೊನ್ನಾವರ ... ಶಿರ್ಸಿ ... ಅಂಕೋಲಾ, ಕಾರವಾರ.

ವಿಳಾಸ— ಟಿಕೇಟು ಮುಂದಾಗಿ ... ವಿಚಾರಿಸಬೇಕು.

ಅನಂತ ಪಾಂಡುರಂಗ ...
ಮೋಟಾರ ಏಜಂಟ,
ಕುಮಟಾ (ಉತ್ತರ ಕನ್ನಡ)

S. U. Narayanacharya & CO.
Chaukamba, BENARES CITY

ನಮ್ಮಲ್ಲಿ ಎಲ್ಲ ತರದ ರೇಷ್ಮೆ ಪೀತಾಂಬರ, ಜರಿಕಠ, ಜರಿ ಸೀರೆ, ಶಾಲು, ಕರವಂದ ರುದ್ರಾಕ್ಷಿ, ಶಾಳಿಗ್ರಾಮ ಲಿಂಗಗಳೂ ಸ್ಫಟಿಕಮಣಿ ಮೊದಲಾದ ವಸ್ತುಗಳು ಸಿಗುತ್ತವೆ. ಕ್ಯಾಟಲಾಗ ಕೋರುವವರಿಗೆ ಉಚಿತವಾಗಿ ಕಳಿಸಲಾಗುವದು.

ವಿಳಾಸ— ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪನಿ, ಚೌಕಂಬಾ, ಕಾಶಿಕ್ಷೇತ್ರ

ಸುಲಭ ಕ್ರಯ! ಸುಲಭ ಕ್ರಯ!!

ಡಾಕ್ಟರ ಜೀ. ಬೀ ಯವರ
ಸುಗಂಧ ನಶ್ಯದ ಪುಡಿ.

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪೀನಸಿ, ಒಂಟಿತಲೆನೋವು, ತಲೆಯಲ್ಲಿಯು ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ, ಕಂಠಕ್ಕೆ ಹೇಳಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥ ಪಡಿಸಿ ಜಾಪಕ ಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಪೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಜನರುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪುಕ್ಕಟೆ ಕಳಿಸಲಾಗದು.

ಬುದ್ದಿ ಒಂದಕ್ಕೆ ಕ್ರಯ ರೂ ೦-೪-೦, ವ್ಹಿ. ಪಿ ಇ ಆಣೆ ಡಜನ್ ೧ ಕ್ಕೆ ರೂ ೩-೮-೦. ವ್ಹಿ. ಪಿ. ೦-೮-೦ ದಯಮಾಡಿ ನಿಮ್ಮ ಹೆಸರನ್ನೂ ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ

ಪತ್ತೆ— ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪೋ. ಬಾ ೫೧೦, ಮೇಕರ್ಸ ಟೌನ್, ಮದ್ರಾಸ



ಸರಕಾರದಿಂದ ಪೇಟಂಟ ಪಡೆದ
ಮಲ್ಹಾರ ಕಪ್ಪಲಿ.

ತೋಟಿಗರಿಗೆ ಬಹಳ ಅನುಕೂಲವಾಗಿರುವದು.

ಇದು **mild steel** ವೆಂಬ ಜಾತಿಯ ಕಬ್ಬಿಣ ತಗಡಿನಿಂದ ಮಾಡಲ್ಪಟ್ಟಿರುವದು. ಎತ್ತುಗಳಿಗೆ ಬಹಳೇ ಹಗುರು ಹೋಗುತ್ತದೆ. ಇದರೊಳಗಿನ ಒಂದು ಹನಿ ಸಹ ನೀರು ಕೆಳಗೆ ಬೀಳದಂತೆ ಏರ್ಪಾಡು ಮಾಡಲ್ಪಟ್ಟಿರುವದು. ಕಪ್ಪಲಿ ಬಾಯಿಂದ ನೀರು ದೋಣಿಯಲ್ಲಿ ಬೀಳುವ ಕಾಲಕ್ಕೆ ಎತ್ತುಗಳಿಗೆ ಭಾರವಾಗದಂತೆ ರಚನೆಯಲ್ಲಿ ಸುಧಾರಣೆಯನ್ನು ಮಾಡಿರುತ್ತೇವೆ.

ಬೆಲೆಯ ಬಗ್ಗೆ ಬರೆದು ತಿಳಿದುಕೊಳ್ಳಿರಿ

ಕಿರ್ಲೋಸ್ಕರ ವಾರ್ತೆ — ಉತ್ಸಾಹ, ಉದ್ಯೋಗ, ಉನ್ನತಿಯ ಕನ್ನಡ ಮಾಸಪತ್ರಿಕೆ.

ಸಂಪಾದಕ— **ಶ್ರೀ| ಬಾಗಲ ಲಕ್ಷ್ಮಣರಾಯರು,** ವಾಙ್ಮಯ ವಿಶಾರದ

ಮಾದರಿ ಸಂಚಿಕೆ ಪುಕ್ಕಟೆ ದೊರೆಯುವದು ವಾರ್ಷಿಕ ವರ್ಗಣಿ ರೂ, ೧-೪-೦

ಕಿರ್ಲೋಸ್ಕರ ಬಂಧು ಲಿಮಿಟೆಡ್; { ಕಿರ್ಲೋಸ್ಕರವಾಡಿ, ಜಿಲ್ಲಾ ಸಾತಾರಾ.

ಅಮೃತಾಂಜನ.

ಇದರ ಉಪಯೋಗದಿಂದ, ಮಾಕವೇದನೆ, ಉಳುಕು ಇತ್ಯಾದಿ ವ್ಯಾಧಿಗಳೆಲ್ಲ, ದಾಹ ಶಮನವಾಗುವದು. ಕಳೆದ ೩೫ ವರ್ಷಗಳಿಂದ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗಿರುವದು. ಲಕ್ಷಗಟ್ಟಲೆ ಕುಟುಂಬಗಳು ಅಮೃತಾಂಜನವನ್ನು ಉಪಯೋಗಿಸುತ್ತಿರುವದು ಇದರಿಂದ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಬೇಗು, ಸಂಧಿವಾತ ಮೊದಲಾದ ಎಷ್ಟೋ ವ್ಯಾಧಿಗಳ ಮೇಲೆ ಇದು ಗುಣಕಾರಿಯೆಂದು ಅರಿಯಬಹುದು. ಇದು ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು. ಕಿಮ್ಮತು ೧೦ ಆಣೆ ವ್ಹಿ. ಪಿ. ಖರ್ಚು ಬೇರೆ.

ಅಮೃತಾಂಜನ ಡಿಪೋ, ಫೋರ್ಟ. ಮುಂಬಯಿ

Printed and Published by Krishnarao Keshav Shenvi (Editor) at his Star of Kanara Press Kumta

ವರ್ಷ ೧೦.

ಕಾನಡಾವೃತ್ತ.

THE KANARA NEWS.

ಸಂಚಿಕೆ ೪೦.

ವರ್ಗಣಿ ದರ.

ಕುಮಟೆಯಲ್ಲಿ ಅಗಾವು ರೂಪಾಯಿ 3-4-0.

ಹಿನೆಯಮಾರ್ಗದಿಂದ ರೂ. 3-0-0.

ವ್ಹಿ. ಪಿ. ಯಿಂದ ವಸೂಲಿ ರೂಪಾಯಿ 3-2-0.

ಬಿಡಿ ಸಂಚಿಕೆಗೆ 0-1-0

ನ्यायनिष्ठुरकर्ता श्रेष्ठकर्ता भाति लोके अनवद्यहितकर्ता लभ्यते वार्थिवेन्द्रैः। इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಜಾಹಿರಾತುಗಳ ದರ

ಕನ್ನಡ, ಇಂಗ್ಲಿಷ ಪ್ರತಿ ಲ್ಯಾಯಿನ (೧೫ ಎಕ್ಸ್ ಲಯಿ) ಆ ಸಾಲುಗಳವರೆಗೆ ರೂ. ೭-೦-

ಆ ನಂತರ ಪ್ರತಿಸಾಲಿಗೆ 0-೭-0.

ಜಹಿರಂಗದ ಸಾಲು ಎಷ್ಟು ದೊಡ್ಡದಿರುವದೋ ಆ ಮಾಪ ದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.

ಬೇರೆ ಜಾಹಿರಾತುಗಳ ಬಗ್ಗೆ ಪತ್ರದ್ವಾರ ದರ ಠರಾವಿಸಲ್ಪಡುವದು.

-*(ಕುಮಟಾ—ಕಾನಡಾವೃತ್ತ ಸೋಮವಾರ, ತಾರೀಖು ೪ ಮಾಹೆ ಮೇ ಸನ್ ೧೯೩೬ ನೇ ಇಸವಿ.)*—

हिंदुस्थानातील रहिवाशांस उपायकारी हिंदुस्थानची हवा मानवणारे हे औषध हिंदुस्थानातील लोकांस उपास्त फायदेशीर आहे.

द्राक्षासव-

शीव रसकनी किंमत १ रुपये;

रामबाण औषधें

सर्दि घालविणारें,
भूक वाढविणारें,
श्वासोच्छ्वास साफ करणारें,
झोप आणणारें,
शक्ति देणारें,
तेजस्वीपणा आणणारें,

विश्वास ठेविकर कमाइडास मागवा,

संडु फार्मास्युटिकल वर्क्स लिमिटेड, मुंबई नं: १३

एजंट— मेसर्स पंडित आणी कंपनी, तीर्थहळ्ळी.

ಎಲ್ಲಾ ನೋವುಗಳಿಗೆ ದಿವ್ಯೌಷಧವು

ವಾತಹಾರಿ ತೈಲ.

ಕ್ರಯ ೫ ತೊಲಿ ಬಾಟ್ಲಿ ೧ಕ್ಕೆ ೦—೭೬—೨. ಗಾಂಜಿ ಸುವಾಸಿಕ ಕಾಬೂಲಿ ಹಿಂಗು ೧೦ ತೊಲಿ ಡಬ್ಬಿ ೧ಕ್ಕೆ ೧—೮—೦. ಹಿಂಗಿನ ಅರ್ಕ ೧. ತೊಲೆಯ ಬಾಟ್ಲಿ ೧ಕ್ಕೆ ೦—೮—೦. ರಕ್ತಶುದ್ಧಿಕಾರಕ ಧಾತು ಪೌಷ್ಟಿಕ, ಶಕ್ತಿವರ್ಧಕ ಹಲವಾ ೨೦ ತೊಲೆಯ ಡಬ್ಬಿ ೧ಕ್ಕೆ ೧—೪—೦. ೧ ತೊಲೆಯ ಹಿಂಗಿನ ಡಬ್ಬಿಗಳು ಡಜನ್ ೧ಕ್ಕೆ ೨—೦—೦. ತಲೆಗೆ ಹಾಕುವ ಸುವಾಸಿಕ ಮುಕ್ತರಾಜ ತೈಲ ೫ ತೊಲಿಯ ಬಾಟ್ಲಿ ೧ಕ್ಕೆ ೦—೧೨—೦. ಹುಳಗ ಪುಡಿ ತೊಲಿ ೧ಕ್ಕೆ ೦—೮—. ಇದಲ್ಲದೆ, ನೀಲಗಿರಿ ತೈಲ, ಎಲ್ಲಾ ತರದ ಊದುಬತ್ತಿಗಳು ಯೋಗ್ಯ ಕಿಂಮತಿಗೆ ಸಿಗುವವು. ಟಪಾಲ ಖರ್ಚ ಪ್ರತ್ಯೇಕ.

ಕರೀಂಖಾನ ಕಾಬೂಲೀ ಹಿಂಗಿನ ಮಕಾನ, ಜನರಲ್ ಬಾಜಾರ, ಕುಮಟಾ.

ಬೇಕಾದ ಚಿನ್ನಾಭರಣಗಳು ನಮಗೆ ಆರ್ಡರ ಕೊಟ್ಟಲ್ಲಿ ಯೋಗ್ಯ ಮುದ್ದತ್ತಿನಲ್ಲಿ ಕೊಡುವೆವು.

R. S. KASARGOD, B. A.

Jewellers, KUMTA.

ಆರ್. ಎಸ್. ಕಾಸರಗೋಡ, ಬಿ ಎ.,

ರತ್ನಾಭರಣ ವ್ಯಾಪಾರಿ, ಕುಮಟಾ.

ಯಾವದೇ { ಆಕಾರದ / ನಕ್ಷೆಯ / ನಂಬರಿನ } ಗಡಿಯಾರವನ್ನು

ಬರೇ ೭ ರೂಪಾಯಿಗಳಿಗೆ ಕೊಡುತ್ತೇವೆ.

ಮೂಲ ಬೆಲೆ ರೂಪಾಯಿ ೧೪, ಅರ್ಧ ಬೆಲೆ ರೂಪಾಯಿ ೭,



ಒಂದೇ ಒಂದು ತಿಂಗಳ ಬಗ್ಗೆ ಮಾತ್ರ ಈ ದರವನ್ನು ಹೊಸ ವರ್ಷದಲ್ಲಿ ಜಾರಿ ಮಾಡುತ್ತೇವೆ. ಎಲ್ಲಾ ಗಡಿಯಾರಗಳನ್ನು ಅರ್ಧ ಬೆಲೆಗೆ ಮಾರುತ್ತೇವೆ. ಅತ್ಯುತ್ತಮ ಚಲನ! ನಿರ್ದೋಷ ಯಂತ್ರರಚನೆ !! ಧರಿಸುವದಕ್ಕೆ ಯೋಗ್ಯ ಹಾಗು ರಮ್ಯ!!! ಎಲ್ಲಾ ಗಡಿಯಾರಗಳಿಗೆ ಗ್ಯಾರಂಟಿ ಇರುತ್ತದೆ. ಯಾವದೇ ಆಕಾರದ, ನಕ್ಷೆಯ, ನಂಬರಿನ ಕೈ ಗಡಿಯಾರವನು ಉತ್ಕೃಷ್ಟ ಲೇದರ ಪಟ್ಟಿಯ ಸಹಿತ ಉಚಿತವಾಗಿ ಕೊಡುತ್ತೇವೆ. ಬೆಲೆ ರೂಪಾಯಿ ೭ ಮಾತ್ರ!

ಅಲ್ಪವೇ ಇವೆ; ಈಗಲೇ ಬರೆಯಿರಿ.

ಪತ್ತೆ:— Swan House: P B 503 P T Madras

ಅತ್ಯಲ್ಪನಿವೆ!

ಕೇವಲ

ಉಚಿತ



ಉಚಿತ

ಉಚಿತ

ಕೇವಲ

ಉಚಿತ

"ತಾರಾ" ಲೀವರ ರಿಜಿಸ್ಟರ್ಡ ಪೊಕೆಟ್ ವಾಚು ೧೮ ಕೆರೆಟ್ ರೋಲ್ಡ ಗೋಲ್ಡಿನದು ಮುಖಬೆಲೆಯ ಮೇಲೆ ೫ ವರ್ಷದ ಗ್ಯಾರಂಟಿ ಇರುವದೆಂದು ಗಡಿಯಾರಗಾರರು ಅಷ್ಟು ಹೊಡೆದಿರುವರು. ಈ ಗಡಿಯಾರವನ್ನು ಕೊಂಡುಕೊಳ್ಳುವವರಿಗೆ ನಾವು ನಮ್ಮ "ಸಿ" ರಿಜಿಸ್ಟರ್ಡ ಪ್ಯಾಂಡೀನನ್ನು ಉಚಿತವಾಗಿ ಕೊಡುತ್ತೇವೆ. ಇದು ಬಹು ಅಪೂರ್ವ ಜಾತಿಯ ಕೆಲವೇ ಗಡಿಯಾರಗಳಿವೆ. ಒಮ್ಮೆ ಕೊಂಡು ನೋಡಿರಿ! ಉಚಿತವಾಗಿ ದೊರೆವ ಹಾಗು "ತಾರಾ" ಲೀವರ ರಿಜಿಸ್ಟರ್ಡ ೧೮ ಕೆರೆಟ್ ರೋಲ್ಡ ಗೋಲ್ಡಿನ ಪೊಕೆಟ್‌ವಾಚ್ ಗಡಿಯಾರಗಳಿಗೆ ಕೇವಲ ಬರೇ ರೂಪಾಯಿ ೫.

CAPTAIN WATCH CO., P. B. 265, MADRAS

ಗೌರೀಹುಣ್ಣಿಮೆಯಿಂದ ೪ನೇ ವರ್ಷ ಪ್ರಾರಂಭ

ಸಚಿತ್ರ ಜಯಕರ್ನಾಟಕ ಮಾಸಪತ್ರಿಕೆ

ಸಂಪಾದಕ— ಆಲೂರ ವೆಂಕಟರಾಯರು.

ಇದರಲ್ಲಿ ವಾಙ್ಮಯಾತ್ಮಕ ಸಾಹಿತ್ಯ, ಧಾರ್ಮಿಕ ಸಾಮಾಜಿಕ ಐತಿಹಾಸಿಕ ಆರ್ಥಿಕ ಇತ್ಯಾದಿ ವಿಷಯಗಳು ಬರುವವು. ಪ್ರಪಂಚ ಪರಿಚಯ, ಜೀವನಹುಟ್ಟು ಜಾನಪದ ಇವು ಕೊಡಲ್ಪಡುವವು. ಪ್ರತಿ ಸಂಚಿಕೆಯಲ್ಲಿ ಸುಂದರ ಚಿತ್ರಗಳು ಬರುತ್ತವೆ. ಪುಸ್ತಕ [illegible] ಆಕಾರದ ೩೦ ಪುಟಗಳು. ವರ್ಗಣಿ. ರೂ. ೫-೮-೦

ಕಾರ್ಯದರ್ಶಿ ಜಯಕರ್ನಾಟಕ, ಧಾರವಾಡ.

ಟಿ. ಎಸ್. ಮೋಟರ ಸರ್ವಿಸ, ಶಿವಮೊಗ್ಗಾ.

ಗೇರಸಪ್ಪಾ ಜೋಗಿಗೆ ರೆಗ್ಯೂಲರ್ ಸರ್ವಿಸ್



ಶಿವರಾತ್ರಿಯ ಸಮಯದಲ್ಲಿ ಗೋಕರ್ಣಕ್ಕೆ ಸ್ಪೆಶಲ್ ಲಾರಿಗಳು

(೧) ಹುಬ್ಬಳ್ಳಿ- ಯಲ್ಲಾಪುರ- ಅಂಕೋಲಾ- ಕಾರವಾರ (೨) [illegible] ಮುಂಡಗೋಡ ಶಿರ್ಶಿ- ಕುಮಟಾ- ಹೊನ್ನಾವರ ಭಟ್ಕಳ (೩) ಕುಮಟಾ- ಶಿರ್ಶಿ- ಸಿದ್ದಾಪುರ- ಗೆರಸಪ್ಪಾ- ಜೋಗ (Gersappa Falls) ಸಾಗರ ಶಿವಮೊಗ್ಗಾ— ಈ ಲೈನುಗಳಲ್ಲಿ ರೆಗ್ಯೂಲರ್ ಸರ್ವಿಸ ನಡೆಯುತ್ತದೆ.

ಪ್ರಯಾಣಿಕರಿಗೆ [illegible] ಎಲ್ಲಾ ಸ್ಟೇಶನುಗಳಲ್ಲೂ ವ್ಯವಸ್ಥೆ ಮಾಡಲಾಗಿದೆ.

ಹೆಚ್ಚಿನ ಮಾಹಿತಿಯನ್ನು ಆಫೀಸಿನಲ್ಲಿ ತಿಳಿದುಕೊಳ್ಳಬಹುದು

M. Manjappa
PROPRIETOR.

अगदीं फुकट.

वैद्यविद्या.

आरोग्यसंपत्ति आणि पूर्ण सुखाचा सरळ रस्ता दाखविणारे "वैद्यविद्या" नावाचा मोठा आयुर्वेदीक पुस्तकाची नवीन आवृत्ति बाहेर पडली आहे, हें पुस्तक कींमत व पोष्ट खर्च वेगळा मिवाय अगदीं फुकट पाठविण्यांत येते. तरी हें पुस्तक आजच मागवा.

समहावर रामबाण औषध.

मेहमर्दनचूर्ण.

हें चूर्ण फक्त तीन दिवस जागोपाठ घेत-ल्याने लवकर होणारी आग, लघवी थांबून थांबून होणें व्याधि या औषधाच्या सेवनानें एकदम बरे होतात.

रु. १० तोळ्याच्या डब्यास रु. १.

राजवैद्य नारायणजी केशवजी, जामनगर (काठेवाड).

कुमटा एजन्ट– माधव सांतप्पा शेणवी, बेलकेरी.

ರೋಗದಿಂದ ನರಳಬೇಡಿರಿ.

ನಮ್ಮಲ್ಲಿ ಜಂತು ಉಪದ್ರವ, ವಿಷ ಜ್ವರವು, ಎಲ್ಲ ತರದ ಜ್ವರ, ಜ್ವರಗಡ್ಡೆ, ಬಿಳಿಸ್ರಾವ, ಕಾಮಿಲೆ, ದಮ್ಮು, ಕೆಮ್ಮು, ಕಫ, ಅಗ್ನಿಮಾಂದ್ಯ, ಮಲಬದ್ಧತೆ ಮೂಲವ್ಯಾಧಿ, ನರ, ವಾತ, ಅತಿಸಾರ, ಪ್ರದರ, ಗರ್ಭಾಶಯದ ಎಲ್ಲ ರೋಗ, ಪ್ರಮೇಹ ಉಪದಂಶ ಗರ್ಮಿ) ಬಾಲಗ್ರಹ, ಮಡ್ಡು, ಗಜಕರ್ಣಗಳಿಗೆ ಖಂಡಿತ ಗುಣ ಬರುವ ಜರ್ಮನ, ಅಮೇರಿಕನ, ಫ್ರೆಂಚ ಇಂಗ್ಲಿಷ ಮತ್ತು ದೇಶಿ ಪೇಟಂಟ ಔಷಧಗಳು ಬಹಳ ಅಗ್ಗವಾಗ್ಗಿಸಿಗುವವು.

ಇದಲ್ಲದೆ ಎಲ್ಲ ತರದ ಹೆಶರಿ, ಪರಿಮಳದ್ರವ್ಯ ಸ್ನಾನದ ಸಾಮಾನು, ಹಲ್ಲಿನ ಪೌಡರ್, ಸುವಾಸಿ [illegible] ಬೋರಿಕ ಪೌಡರ ಬಂಡಿಗಳು, ಕಿರಾಣಿ [illegible] ದಿಂದ ಸಿಗುವವು ನಮ್ಮಲ್ಲಿದ್ದ ನಿಮಗೆ ಅವಶ್ಯವಿರುವ ಸಾಮಾನು ಬೇರೆ ದೇಶದಿಂದ ತರಿಸಿಕೊಡಲಾಗುವದು.

ಎಸ್ ಎಲ್. ಧಾಕಪ್ಪ ಮತ್ತು ಬ್ರದರ, ಶಿರಶಿ.

ರಾಗದ ಪೆಟ್ಟಿಗೆಗಳು.

ತಬಲೆ ಜೋಡಿ ಇತ್ಯಾದಿ ಗಾಯನ ಸಾಮಾನು.

೧ ರಾಗದ ಕೈಪೆಟ್ಟಿಗೆ ಕಿಂ. ೩೦, ೪೦, ೫೦, ೬೦, ೭೫, ೧೦೦.
೨ , ಕಾಲು ಪೆಟ್ಟಿಗೆ ಕಿಂ. ೬೫, ೭೫, ೧೫೦, ೧೭೦.
೩. ತಬಲೆ ಜೋಡಿ ಕಿಂ. ೧೬, ೧೮, ೩೦, ೩೫.
೪. ಹಾರ್ಮೋನಿಯಮ ಗ್ಯಾಡ (ಸ.ರಾಬಿ) ಕಿಂ. ೧॥
ತಬಲೆ ಗ್ಯಾಡ ಕಿಂ. ೧॥ ೮.

ವಿಶೇಷ ಮಾಹಿತಿಗೆ ನಮ್ಮ ಮರಾಠಿ ಕನ್ನಡ ಸೂಚಿಪತ್ರ ಕೊಡುವೆವು.

ಪತ್ರವ್ಯವಹಾರ ಮರಾಠಿಯಿಂದ ಇಲ್ಲವೆ ಇಂಗ್ರಜಿಯಿಂದ ಮಾಡಬೇಕು.

ಪತ್ತೆ:-ಗೋಪಾಳ ಸಖಾರಾಮ ಮತ್ತು ಕಂಪನಿ, ವಿಠ್ಠಲವಾಡಿ ಎದುರಿಗೆ ೩೩ ಕಾಳಬಾದೇವಿ ಮುಂಬಯಿ

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕೇಟುಗಳು ಮತ್ತು ಸುವರ್ಣಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು.

ಆರೋಗ್ಯ ಮತ್ತು ಧಾತುವೃದ್ಧಿ ಕಾರಕ.

ಈ ಗುಣವು [illegible] ಬಹಳ ಸೀಯಾಗಿಯೂ ರುಚಿಕರವಾಗಿಯೂ ಇರುತ್ತದೆ. ಈ ಮಧುವ ಸೇವನದಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ಮಿಶ್ರಣದಿಂದಾದ ಬೇನೆಯು ಹೋಗುವದು [illegible] ವರ್ಷದ ಮುದುಕರ ಕಾಮುಕಾರ [illegible] ತರುಣರಂತೆ ಪ್ರವರ್ಧಮಾನವಾಗುವದು. (ನಿಜವಾಗಿ ಒಂದೇ ಸಪ್ತಕದಲ್ಲಿ ಅನುಭವಕ್ಕೆ ಬರುವದು) ಜನನೇಂದ್ರಿಯದೊಳಗಿನ ಶಕ್ತಿಯು ಹೋಗಿ ದ್ರವ್ಯನಾಶ ಸ್ವಪ್ನದೋಷ [illegible] ಇಲ್ಲದಂತಾಗುವದು. ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ತರುವಾಯ ಹೋಗುವ ಧಾತು ಬಂದಾಗುವದು.— ಬಲವೂ ಹಾಗೂ ಕಾಂತಿ ಬಂದು ಶರೀರವು ನಿರೋಗವಾಗುವದು. ಮೂರೇ ದಿನಗಳಲ್ಲಿ ಗುಣ ತೋರುವದು. ತರುಣ ಸ್ತ್ರೀ ಪುರುಷರು ಈ ದ್ರಾಕ್ಷಾರ್ಕ ಮಧುವ ಸೇವನ ಮಾಡಿ ಅದರೊಳಗಿನ ಗುಣ ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ, ಉದರರೋಗ ದಮ್ಮು ಇವುಗಳು ನಾಶವಾಗುವವು [illegible] ದಿವಸದಲ್ಲಿ ಮೂರುಸಲ ಊಟಮಾಡಿದರೂ ಅನ್ನ ಪಚನವಾಗಿ ಹಸಿವೆ ಹೆಚ್ಚಾಗಿ ಆಗುವದು, ಇದರ ಅನುಭವವು ಮೊದಲನೇ ದಿವಸವೇ ಬರುವದು. ಶೌಚ ಸಾಫ ಆಗುವದು. ಬಾಟ್ಲಿಯಲ್ಲಿ ಎಷ್ಟೇ ದಿವಸದ ತನಕ ಇದ್ದರೂ ಒಂದು ಸಾರೆಯಲ್ಲಿ ನಾಶವಾಗುವದು. ಈ ಔಷಧಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗಕ್ಕೆ ಯಾವ ಕಾರಣವಿಲ್ಲ. ಹೊಸಬೇನೆ ಇದ್ದರೆ ೧೦ ದಿವಸ ಸಾಲುವ ಒಂದು ಬಾಟಲಿಯಿಂದ ಗುಣ ಬರುವದು. ಹಳೇ ರೋಗವಿದ್ದರೆ ೩ ಬಾಟಲಿಯಿಂದ ಗುಣ ಬರುವದು. ಒಂದು ಬಾಟ್ಲಿಯ ಕಿಮ್ಮತ್ತು ೧॥ ರೂಪಾಯಿ ಮೂರು ಬಾಟಲಿಯ ಕಿಮ್ಮತ್ತು ೪—೦ ಮೂರು ಬಾಟಲಿಗಳನ್ನು ಒಂದೇ ಪಾರ್ಸಲಿನಲ್ಲಿ ಕಳಿಸುವೆವು. ಅಂದರೆ ಟಪಾಲುಖರ್ಚ ಹೆಚ್ಚು ಬೀಳುವದಿಲ್ಲ. [illegible] ಬಾಟಲಿಗಳ ಕಿಮ್ಮತ್ತು ೧೬—೦—೦ ಮತ್ತು ೧ ಬಾಟಲ ಪುಕ್ಕಟೆ ಸಿಗುವದು. ಟಪಾಲು ಖರ್ಚ ಬೇರೆ ಬೀಳುವದು. ಟಪಾಲಿನ ಖರ್ಚಿಯಿಂದ ೧ ಬಾಟ್ಲಿಗೆ ೧—೦—೦ ೩ ಬಾಟ್ಲಿಗೆ ೪—೦—೦ [illegible] ೧೬—೧—೦

ವ್ಯವಸ್ಥಾಪಕ— ದ್ರಾಕ್ಷಾರ್ಕಮಧು ಆಫೀಸ, ಪೋ. ನಿಪ್ಪಾಣಿ ಜಿ ಬೆಳಗಾಂವ

ಕೇವಲ ಧಾರ್ಮಿಕ ವಿಧಿಯಿಂದ

[ಅನು.-ವಾಮನ-ಅಜ್ಜಂಪುರ.]

(ಮಹಾತ್ಮಾ ಗಾಂಧಿಯವರ ಲೇಖದ ಅನುವಾದ)

ಸತ್ಯಾಗ್ರಹಾಶ್ರಮದ ಆದರ್ಶವು ಅಖಂಡ ಬ್ರಹ್ಮಚರ್ಯವಿದ್ದಾಗ್ಯೂ, ಈ ಆಶ್ರಮದ ಕ್ಷೇತ್ರದಲ್ಲಿ ಕೆಲವು ವಿವಾಹಗಳಾಗಿ ಹೋದವು. ಈ ವಿವಾಹಗಳು ಶಿಕ್ಷಣೀಯವಾಗಿ ಯೋಗ್ಯವಿದ್ದದರಿಂದ ಇವುಗಳ ಬಗ್ಗೆ "ನವಜೀವನದಲ್ಲಿ" ನಾನು ಉಲ್ಲೇಖ ಮಾಡಿಬಿಟ್ಟಿದ್ದೇನೆ. ಬ್ರಹ್ಮಚರ್ಯವೇ ಆದರ್ಶವಿದ್ದ ಈ ಆಶ್ರಮದಲ್ಲಿ ವಿವಾಹಕ್ಕೆ ಈ ರೀತಿ ಉತ್ತೇಜನ ಕೊಡುವದು ಹ್ಯಾಗೆ ತಾನೇ ಯೋಗ್ಯವಾದೀತೆಂಬ ಪ್ರಶ್ನೆಯು ಮಿತ್ರರೊಂದಿಗೆ ಚರ್ಚಿಸಲ್ಪಟ್ಟು ಹೋಗಿದ್ದರೂ, ಆಶ್ರಮದ ಎಲ್ಲ ಪ್ರವೃತ್ತಿಗಳನ್ನು ಕುರಿತು ತಿಳಕೊಳ್ಳಲು ಉತ್ಸುಕರಾದ ವಾಚಕವರ್ಗಕ್ಕೆ ಕೂಡ, ಸಂಕ್ಷಿಪ್ತದಲ್ಲಿ ಈ ಪ್ರಶ್ನೆಯ ಉತ್ತರ ಕೊಡುವದು ಅವಶ್ಯವಾಗಿದೆ.

(೧) ಸತ್ಯಾಗ್ರಹಾಶ್ರಮದ ಬ್ರಹ್ಮಚರ್ಯದ ಆದರ್ಶವನ್ನು ಸಾಧ್ಯಮಾಡಿಕೊಳ್ಳಲಿಚ್ಛಿಸುವ ಯಾವನಾದರೂ, ಕೇವಲ ವಿವಾಹವಿಧಿಯನ್ನು ನೋಡುವ ಮಾತ್ರದಿಂದಲೇ ಅಸ್ವಸ್ಥ (ಗಾಬರಿ)ನಾಗಿ ಹೋದ ಪಕ್ಷಕ್ಕೆ ಅಂಥವನು ಅಖಂಡಿತ ಬ್ರಹ್ಮಚರ್ಯ ಪಾಲನ ಮಾಡಲು ಸಮರ್ಥನಾಗಲಾರನೆಂಬ ನನ್ನ ಅಭಿಪ್ರಾಯವು. ಈ ಪ್ರಶ್ನೆಯಂಗದ ದಾಖಲೆಯಂತೂ ಪ್ರಸಿದ್ಧವೇ ಇದೆ. ಯಾವ ವಸ್ತುವಿನಿಂದ ಮನುಷ್ಯನು ದೂರ ಇರಲಿಚ್ಛಿಸುತ್ತಾನೋ, ಆ ವಸ್ತುವಿನ ಹಿಂದೆ ಮನಸ್ಸು ಓಡುತ್ತಿದ್ದಾಗ್ಯೂ, ತಾನು ದೂರ ಇದ್ದೇನೆಂಬ ಮಿಥ್ಯಾ ಗ್ರಹಿಕೆ ಮಾಡಿಕೊಳ್ಳುತ್ತಾನೋ ಅಂಥವನ ಸಂಯಮವು ಬಹಳ ದಿನಗಳ ವರೆಗೆ ತಾಳಲಾರದು. ಪ್ರತ್ಯಕ್ಷ, ತನ್ನ ಮುಂದೆ ಬಂದು ನಿಂತ ವಿಪರೀತ ಪ್ರಸಂಗಗಳಿಗೆ ಎದುರಾಗಿ ನಿಂತು ಯುದ್ಧ ಮಾಡುವ ತಯಾರಿಯನ್ನು ಬ್ರಹ್ಮಚಾರಿಯು ಯಾವಾಗಲು ಇಟ್ಟಿರಬೇಕು. ಯಾವ ಬ್ರಹ್ಮಚಾರಿಯು ಮನಸ್ಸು ತನ್ನ ದಾರ್ಢ್ಯ (ಧೃಢತೆ)ವನ್ನು ಕಳಕೊಳ್ಳುತ್ತಿರುವ ಆತನ ಬ್ರಹ್ಮಚಾರಿಯೆಂದೆನಿಕಲ್ಪಡಲಾರನು. ಸ್ವೇಚ್ಛಾಪೂರ್ವಕವಾಗಿ ಪಾಲಿಸಲ್ಪಟ್ಟ ಸಂಯಮವೇ ಕಡೆ ತನಕ ತಾಳಬಲ್ಲದು. "ವೈರಾಗ್ಯರಹಿತ ತ್ಯಾಗವು ಟಿಕಲಾರದು." (त्याग न टके वैराग्यबिना) ಎಂಬ ನಿಷ್ಕುಳಾನಂದರ ಸೂಕ್ತದ ಅರ್ಥವಾದರೂ ಇದೇ. ಯಾವಾತಗೆ ತನ್ನ ಸಂಯಮವು ಆನಂದದಾಯಕವೂ, ಪ್ರಿಯಕರವೂ ಎನಿಸುತ್ತದೆಯೋ, ಅಂಥವನ ಪ್ರತಿಕೂಲ ಪ್ರಸಂಗಗಳಿಂದ ಮೋಹಿತನಾಗಲಾರನು. ಆವರೆಗೆ ಅಂಥ ಪ್ರಸಂಗಗಳಲ್ಲಿ ಉದಾಸೀನನಿರಬೇಕು.

(೨) ಇದಲ್ಲದೆ ಸತ್ಯಾಗ್ರಹಾಶ್ರಮದಲ್ಲಿ, ಬಾಲಕ-ಬಾಲಿಕೆಯರು, ಶಿಕ್ಷಣ-ಶಿಕ್ಷಣ ಪಡೆಯುತ್ತಲಿದ್ದಾರೆ. ಅವರಿಗಾದರೋ ಬಲಾತ್ಕಾರದಿಂದ ಬ್ರಹ್ಮಚಾರಿಗಳಾಗಿಸುವ ಇರಾದೆಯು ಆಶ್ರಮದ್ದಿಲ್ಲ. ಅವರೆಲ್ಲರಿಗೆ, ಅಖಂಡಿತ ಬ್ರಹ್ಮಚರ್ಯಪಾಲನೆಯು ಅಸಂಭವವೆಂದು ತೋರಿದಾಗ್ಯೂ, ಅಂಥವರಿಗೆ ವಿವಾಹ ಮಾಡಿಕೊಳ್ಳಲು ಮುಕ್ತತೆ ಮಾಡುವದು ಆಶ್ರಮದ ಧರ್ಮವಾಗುವದು.. ಮೇಲಾಗಿ ಆಶ್ರಮದ ಜೀವನದಲ್ಲಿ ಅಧಿಕಾರಿಯು ಎಷ್ಟೋ ಮಿತ್ರರಿರುವರು. ಅವರ ಹುಡುಗರ ವಿವಾಹವನ್ನು ಶೈಲಾದ ಹುಟ್ಟಿಗೆ ಆದರ್ಶರೂಪ, ಮಾಡುವದರಲ್ಲಿ ಅವರಿಗೆ ಸಹಾಯ ಮಾಡುವದು ಕೂಡ ಆಶ್ರಮವಾಸಿಗಳಿಂದ ತಮ್ಮ ಕರ್ತವ್ಯವೆಂದೆಣಿಸಲ್ಪಡುತ್ತದೆ ಮತ್ತು ಈ ರೀತಿಯ ವಿವಾಹವು ಆಶ್ರಮದ ಆಶ್ರಯದಲ್ಲಿರುವಿದರೂ ಅದರಿಂದ ಆಶ್ರಮದ ಬ್ರಹ್ಮಚರ್ಯದ ಆದರ್ಶಕ್ಕೆ ಬಾಧೆ ತಗಲಾರದ್ದರಿಂದ ಅದಕ್ಕೆ ನನ್ನ ಮಾನ್ಯತೆಯಿದೆ.

(೪) ಇಂಥ ಒಂದು ವಿವಾಹವು, ಆಶ್ರಮದಲ್ಲೇ ಬೆಳೆದ ಒಬ್ಬ ಹುಡುಗಿಯದು ಸ್ವಲ್ಪ ದಿವಸಗಳ ಹಿಂದೆ ಆಗಿಹೋಗಿತ್ತು. ಶ್ರೀ ಲಕ್ಷ್ಮೀದಾಸ ಪುರುಷೋತ್ತಮ ಆಸರ-ಇವರು "ನವಜೀವನ"ದ ವಾಚಕರ್ಗೆ ಪರಿಚಯದವರೇ ಇರುತ್ತಾರೆ. ಇವರ ಜ್ಯೇಷ್ಠಕನ್ಯೆಯ ವಿವಾಹವು ಭರೂಚ ಶಿಕ್ಷಣ ಮಂದಿರದ ನಾಚಕೋಲಾಲ ಜೋಶಿ

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ.

ಕಾಮಿನಿಯಾ ತೈಲ. (ರಿಜಿಸ್ಟರ್ಡ)

ಮುದುವಾದ ಗುಂಗುರು ಗುಂಗುರಾಗಿರುವ ನೀಳವಾಯಿಂದ ನಿಬಿಡವಾದ ಕೇಶವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು? ಅಂಥ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡಲು ಉಪಕರಣವಾದರೋ

ಕಾಮಿನಿಯಾ ಆಯಿಲ್ ರಿಜಿಸ್ಟರ್ಡ

ಈ ಆಯಿಲ್ ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುವದೆಯೋ ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ. ಈ ಆಯಿಲ್ ಹಚ್ಚಿಕೊಳ್ಳುವದರಿಂದ ಮಸ್ತಿಷ್ಕದ ಬೇನೆಯು ತಣ್ಣಗಾಗಿ ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಅದರ ಪೋಷಣೆಯಿಂದ ಎಂದಿಗೂ ಉದುರಿ ಬಿದ್ದು ಹೋಗಲಾರವು, ಅದಲ್ಲದೆ, ಅವು ದಟ್ಟವಾಗಿ ಬೆಳೆದು ಮೃದುವಾಗುತ್ತವೆ. ಇದರ ಸುಗಂಧವಾದರೋ ಮಧುರವೂ ಮನೋಹರವೂ ಆಗಿರುತ್ತದೆ.

ಕೀಳು ತರದ ಎಣ್ಣೆಗಳನ್ನು ಕೊಂಡುಕೊಂಡು ಹಣವನ್ನೂ ಕೂದಲನ್ನೂ ಹಾಳುಮಾಡಿಕೊಳ್ಳುವದಕ್ಕಿಂತ ಒಂದೇಸಾರೆ "ಕಾಮಿನಿಯಾ ಆಯಿಲ್" ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ಬಗೆಯಿಂದ ನಮಗೆ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಆಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ ಅನೇಕ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಸ್ತುತಿಪತ್ರಗಳೂ ದೊರೆತಿವೆ.

ಕ್ರಯ:— ಸೀಸೆಗೆ ರೂಪಾಯಿ 1-0-0, ಸೀಸೆ 3ಕ್ಕೆ ರೂಪಾಯಿ 2-10 0 ವಿ. ಪಿ. ಖರ್ಚ 0-14-0.

ಅತಿ ಮನೋಹರವಾದ ಸುರಭಿಯು!

ಒಟ್ಟೋ-ದಿಲ್ ಬಹಾರ್ !! (ರಿಜಿಸ್ಟರ್ಡ)

ಈ ಸುಗಂಧದ್ರವ್ಯವು ಮಧುರ, ಕೋಮಲ, ಚಿರಸ್ಥಾಯಿ ಮತ್ತು ಅತ್ಯುತ್ತಮವು ಆಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾಗಿದೆ. ಇದರಲ್ಲಿ ಮದಿರೆಯು (ಆಲ್ಕೊಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈ ವಸ್ತ್ರದಲ್ಲಿ ಅಥವಾ ಅಂಗಿಯಲ್ಲಿ ಈ ದ್ರವ್ಯದ ಕೆಲವು ಹನಿಗಳನ್ನು ಚಿಮುಕಿಸಿದರೆ ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ, ಈ ಒಟ್ಟೋ-ದಿಲ್ ಬಹಾರಿನ ಗಂಧವು ಎಲ್ಲವುಗಳನ್ನು ವಿಶಾಲ ಮನಸ್ಸಿನ ಶಕ್ತಿಯಿಂದ ಸೆಳಕೊಳ್ಳುವುದು. ಒಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ.

ಸಣ್ಣ ಸೀಸೆ 1 ಕ್ಕೆ 0 8 0; 1 ತ್ರಾಮಿನ (ಮಿಡಿಯಂ) ಸೀಸೆ 1 ಕ್ಕೆ 0 12 0; ½ ಔನ್ಸಿನ ದೊಡ್ಡ ಸೀಸೆ 1 ಕ್ಕೆ 2 0 0. ಅಂಚೆಯ ವೆಚ್ಚ ಬೇರೆ 0 4 0

ಒಟ್ಟೋ-ದಿಲ್ ಬಹಾರ್ ಪರಿಮಳ ಕಾರ್ಡುಗಳು ಡಜನ್ 1 ಕ್ಕೆ 0 12 0.

Address: **The Anglo Indian Drug & Chemical Co**
16, Market, **BOMBAY**

ಇವರೊಡನೆ ಹಿಂದು ಕಿಂಗ್ಸ್ ಕಿಂದೆ ಆಯಿತು. ಈ ವಿವಾಹದಲ್ಲಿ ಬಿ ಮ ಪ್ಮ ಸಹ ಭೋಜನಗಳೇ ಇಷ್ಟಿಲ್ಲ. ಛಾಟಿಯಾ ಜ್ಞಾತಿಯವರಲ್ಲಿ ಇಂಥ ವಿವಾಹವಾಗುವದು ಅತಿ ಅಪರೂಪವೆ ಮ. ನಾನು ಕೇಳುತ್ತೇನೆ ಈ ವಿವಾಹವು ಸ್ವಯಂವರವಿಕೆಂದು ಹೇಳಲಿಕ್ಕೂ ಅಡ್ಡಿಯಿಲ್ಲ. ಯಾಕೆಂದರೆ, ವೊದಲು ಅನುಮತಿಸಿದವರ ತಾಯಿ-ತಂದೆಯವರಿದ್ದರೂ, ಕೊನೆಗೆ ಸ್ವತಃ ವಧೂವರರೇ ಅನುಮತಿಸಿದ್ದರಿಂದ ವಿವಾಹವಾಗಿತ್ತು ಮತ್ತು ಯಾವಾಗ ವಧೂವರರು ವಿವಾಹಬಂಧನದಿಂದ ಕೂಡಿಕೊಳ್ಳಲಿಕ್ಕೆ ಇಚ್ಛಿಸುತ್ತಾರೆಂದು, ಹಾಗೇನಿಗೂ ಅನಿಸಿಕೊಳ್ಳದ ಅಗಲೇ ಕನ್ಯಾದಾನ ಮಾಡಲ್ಪಟ್ಟಿತು. ಮಿತ್ರವರ್ಗದ ಹೊರತು ಮಿಕ್ಕವರಿಗೆ ವಿವಾಹಕ್ಕೆ ಆಮಂತ್ರಣವಿದ್ದಿಲ್ಲ. ವಧೂ-ವರರಿಬ್ಬರೂ ತಮ್ಮ ಸಿಕ್ಕದ ಖಾದೀ ಪೋಷಾಕನ್ನೇ ಧರಿಸಿದ್ದರು. ಶೃಂಗಾರಾದಿ ವಸ್ತುಗಳು ಬಿಟ್ಟಿದ್ದರ್ವಕ ಸ್ವೀಕರಿಸಲ್ಪಟ್ಟಿದ್ದವು. ಈ ವರ್ತನೂ ಖಾದಿಗ್ರಹಣ ವಿಧಿಯಾಗದ ತನಕ ಉಪೋಷಣವನ್ನು ಆಚರಿಸಿದ ವಿವಾಹದಲ್ಲಿ ಪ್ರಾಚೀನ ಶಾಸ್ತ್ರೋಕ್ತ ಕರ್ಮಗಳನಷ್ಟೇ ಆಚರಿಸಲ್ಪಟ್ಟವು. ವರನ ಕನ್ಯಸಿಂದ ವಧುವಿಗೆ ಏನೊಂದೂ ಕಳಿಸಲ್ಪಟ್ಟದ್ದಿಲ್ಲ. ಹೀಗೆ ತಾಯಿ-ತಂದೆಯವರೇ ಅಪೇಕ್ಷಿಸಿದ್ದರು. ಜಗತ್ತಿನಲ್ಲಿ ಎರಡೂ ಪಕ್ಷಗಳಲ್ಲಿ ಒಂದಕ್ಕೂ ಕೂಡಾ ಒಂದು ರೂಪಾಯಿಗಳ ವೇಚ ಖರ್ಚು ಆಗುವದಿಲ್ಲವೋ ಅಂಥ ವಿವಾಹವನ್ನು ಹಿಂದುಸ್ಥಾನದಲ್ಲಿ ಕಾಣುವದು ಅಪರೂಪವೆ ಸರಿ.

(೧) ಈ ಪ್ರಕಾರ ಜರುಗಿದ ವಿವಾಹವನ್ನು ಸ್ವಚ್ಛಂದವೆಂತಾಗಲೀ, ವಿಷಯೋಪಭೋಗದ ಸಾಧನವೆಂತಾಗಲೀ ನಾವು ಎಣಿಸಬಾರದು, ಅದು ಬ್ರಹ್ಮಚರ್ಯದಂತೆ, ಒಂದು ಪ್ರಕಾರದ ಸಂಯಮವೇ ಆಗುತ್ತದೆ ..   ಧಾರ್ಮಿಕ ಭಾವನೆಯುಳ್ಳ ಕೆಲವು (ಛಾಟಿಯಾ) ಗಳು ಈ ವಿವಾಹದ ಅನುಕರಣ ಮಾಡತೊಡಗಿದರು, ಈ ವಿವಾಹಕ್ಕೆ ಇಷ್ಟು ಪ್ರಸಿದ್ಧಿ ಕೊಟ್ಟಿರುತ್ತೇನೆ.

(೨) ಪೂರ್ಣವಾಗಿ ಅಂಧಶ್ರದ್ಧೆಯಿಂದ, ಇದೇ ಪ್ರಕಾರದ ವಿವಾಹವು ಅತ್ಯಲ್ಪದ ಅತ್ಯಲ್ಪದಲ್ಲಿ ಕಳೆದ ರವಿವಾರ ದಿನ ಅದು ನಡೆಯಿತು. ಜ್ಞಾತಿಯ ಶ್ರೀ ಬನುಸಾಲಿ ಒಜಾಜ ಇವರು ತಮ್ಮ ಜ್ಯೇಷ್ಠ ಕನ್ಯೆಯನ್ನು ಗುಜರಾಥ ವಿದ್ಯಾಪೀಠದಲ್ಲಿ ಶಿಕ್ಷಣಕೊಡುತ್ತಿದ್ದ ಶ್ರೀ ರಾವಜೀಭಾಯಿ ಪ್ರಸಾದ ಇವರಿಗೆ ವಿವಾಹ ಮಾಡಿ ಕೊಟ್ಟರು. ಈ ವಿವಾಹದಲ್ಲಿಯೂ, ಎರಡೂ ಪಕ್ಷದವರು ಶ್ರೀಮಂತರಾಗಿದ್ದ ಮೇಲೆಯೂ, ಕೇವಲ ಧಾರ್ಮಿಕ ವಿಧಿಯಿಂದಲೇ, ವಿವಾಹವನ್ನು ಮಾಡಿಸಲು ಕಟಾಳಿ ಕೇವಲ ಎರಡೂ ಕುಟುಂಬದವರ ವಿಷಯದಲ್ಲಿ ಸಲ್ಲಬೇಕಾದ ಮಾನ್ಯತೆಗಿಲ್ಲ. ಇಷ್ಟು ಸಾಮಾನ್ಯ ರೀತಿಯಿಂದ ಮಾಡಲಾದ ಜ್ಞಾತಿಯಲ್ಲಿ ಈ ಹೊತ್ತಿನ ವರೆಗೆ ಒಂದೂ ವಿವಾಹವಾದ ಉದಾಹರಣೆ ಗೊತ್ತಿಲ್ಲ. ಸಾಮಾನ್ಯವಾಗಿ ಈ ವಿವಾಹವು ಮಧ್ಯಾಹ್ನದಲ್ಲಿ, ಇಲ್ಲವೆ ಮುಂಜಿಯಿಂದ ಲ್ಲಿ ನೆರವೇರಬೇಕಾಗಿತ್ತು. ಆದರೆ, ಶ್ರೀಯುತ ಬಜಾಜರ ಉದ್ದೇಶವಾದರೋ, ವಿವಾಹವನ್ನು ಆದಷ್ಟು ಆಡಂಬರರಹಿತ ಮಾಡುವದೂ ಮತ್ತು ಅದರ ಸಂಗಡಲೇ ವಧೂವರರಿಗೆ, ವಿವಾಹದ ರಹಸ್ಯ ತಿಳಿಯಬೇಕೆಂತಲೂ, ವಿವಾಹವು ಕೇವಲ ಧಾರ್ಮಿಕ ಕ್ರಿಯೆ ಇರುತ್ತದೆಂಬ ಸಂಗತಿಯು ವಧೂವರರಿಗೆ ಹೊಳೆಯಬೇಕೆಂತಲೂ, ಮತ್ತು ತಮ್ಮಿಬ್ಬರ ಪರಸ್ಪರ ಕರ್ತವ್ಯಧರ್ಮವೇನಿರುತ್ತೆಂಬದನ್ನು ಸಹ ಸ್ಪಷ್ಟ ತಿಳಕೊಳ್ಳಬೇಕೆಂತಲೂ ಶ್ರೀ ಬಜಾಜರ ಅಭಿಲಾಷೆ ಇತ್ತು. ಆದರೆ, ವರ ಪಕ್ಷದವರ ಸಮ್ಮತಿ ಸಿಗದಿದ್ದರೆ, ಈ ಧಾರ್ಮಿಕ ಸಧಾರಣೆಯು ಆಗುವದು ಶಕ್ಯವಿದ್ದಿಲ್ಲ. ಆದರೆ, ಶ್ರೀ ರಾವಜೀಭಾಯಿ ಪ್ರಸಾದರವರ ಮಾತೋಶ್ರೀಯವರಿಗೂ, ಹಿರಿಯರಿಗೂ ಸಮಜೂತಿ ಕೊಟ್ಟು ಎಲ್ಲರ ಸಮ್ಮತಿ ದೊರಕಿಸಲ್ಪಟ್ಟಿತು.

ಈ ವಿವಾಹದಲ್ಲಾದರೋ, ಕೇವಲ ಮಿತ್ರವರ್ಗದವರಿಗೆ ಮಾತ್ರ ನಿಮಂತ್ರಣವಿತ್ತು. ಲಗ್ನಪತ್ರಿಕೆಗಳನ್ನು ಕಳಿಸುವ ಸರ್ವಸಾಧಾರಣ ರೂಢಿಯು ಸಹ ತ್ಯಜಿಸಲ್ಪಟ್ಟಿತ್ತು. ಭೋಜನ ಸಮಾರಂಭಕ್ಕೆ ಸ್ಥಾನ ಕೊಡಲಿಲ್ಲ. ಪರಸ್ಪರ ಕೊಡು-ಕೊಳ್ಳುವ ಮಾತು ಇದ್ದಿಲ್ಲ. ಅಥವಾ ಕೇವಲ ಪ್ರಾಚೀನ ಧಾರ್ಮಿಕ ವಿಧಿಯಷ್ಟೇ ಈ ವಿವಾಹದಲ್ಲಿ ದೃಗ್ಗೋಚರವಾಗಿತ್ತು. ವಧೂವರರಿಬ್ಬರೂ ಖಾದಿಯನ್ನೇ ಧರಿಸಿದ್ದರು.

ಎರಡೂ ವಿವಾಹಗಳಲ್ಲಿ ವಧೂವರರು, 'ಸಪ್ತಪದೀ'ಯ ಕಾಲಕ್ಕೆ ಕೇಳಿಕೊಳ್ಳುವ ಪ್ರತಿಜ್ಞೆಯನ್ನು ತಮ್ಮ ತಮ್ಮ ಮಾತೃಭಾಷೆಯಲ್ಲಿ ನನ್ನ ಮನುಷ್ಯದಲ್ಲಿ ಮತ್ತೆ ನನ್ನ ಹಿಂದೆ ತೆಗೆದುಕೊಂಡಿದ್ದರು.

ಆ ಸಪ್ತಪದಿಯೂ ಮತ್ತು ವರನ ಅಂತಿಮ ಪ್ರತಿಜ್ಞೆಯೂ ಇಲ್ಲಿಯೇ ಇದೆ-

ಸಪ್ತಪದೀ:—

ವರನು ಕನ್ಯೆಗೆ ಹೇಳುತ್ತಾನೆ- (೧) "ಇಷ ಏಕಪದೀ भव सा मामनुव्रता भव।" (ಇಚ್ಛಾಶಕ್ತಿಯನ್ನು ಪ್ರಾಪ್ತ ಮಾಡಿಕೊಳ್ಳುವದರ ಸಲುವಾಗಿ ಒಂದು ಹೆಜ್ಜೆ ಇಟ್ಟೆ. ನನ್ನ ವ್ರತವನ್ನು ಪೂರ್ಣಮಾಡುವದರಲ್ಲಿ ನನಗೆ ಸಹಾಯವಾಗು.)

ಕನ್ಯಾ— "ನಾನು ತಮ್ಮ ಪ್ರತಿಯೊಂದು ಸತ್ಯ ಸಂಕಲ್ಪದಲ್ಲಿ ತಮಗೆ ಸಹಾಯವಾಗುತ್ತೇನೆ.

೨ ವರ— "ऊर्जे द्विपदी भव। सा मामनुव्रता भव।" (ತೇಜಸ್ಸನ್ನು ಪ್ರಾಪ್ತಮಾಡಿಕೊಳ್ಳುವದರ ಸಲುವಾಗಿ ಎರಡನೇ ಹೆಜ್ಜೆ ಇಟ್ಟೆ. ನನ್ನ ವ್ರತ ಪೂರ್ಣ ಮಾಡುವದರಲ್ಲಿ ಸಹಾಯವಾಗು.)

ಕನ್ಯಾ— "ನಾನು ತಮ್ಮ ಪ್ರತಿಯೊಂದು ಸತ್ಯ ಸಂಕಲ್ಪದಲ್ಲಿ ತಮಗೆ ಸಹಾಯವಾಗುತ್ತೇನೆ.

೩ ವರ— "रायस्पोषाय त्रिपदी भव। सा मामनुव्रता भव।" (ಧನ್ಯಧಾನ್ಯವೃದ್ಧಿಗೋಸ್ಕರ ಮೂರನೇ ಹೆಜ್ಜೆ ಇಟ್ಟೆ. ನನ್ನ ವ್ರತ ಪೂರ್ಣಮಾಡುವದರಲ್ಲಿ ನನಗೆ ಸಹಾಯ ಮಾಡು.)

ಕನ್ಯಾ— ನಾನು ತಮ್ಮ ಸುಖದಿಂದ ಸುಖೀ, ತಮ್ಮ ದುಃಖದಿಂದ ದುಃಖಿ ಇರುವೆನು.

೪ ವರ— "मायो भवाय चतुष्पदी भव। सा मामनुव्रता भव।" (ಆನಂದಮಯರಾಗಿರುವುದಕ್ಕೋಸ್ಕರ ನಾಲ್ಕನೇ ಹೆಜ್ಜೆ ಇಟ್ಟೆ)

ಕನ್ಯಾ— ಸದಾ ಕಾಲದಲ್ಲಿ ತಮ್ಮ ಭಕ್ತಿಯಲ್ಲಿ ತತ್ಪರಳಾಗಿರುವೆನು. ಯಾವಾಗಲೂ ಪ್ರಿಯವಾಗಿ ಮಾತಾಡುವೆನು. ಸತತ ತಮ್ಮ ಅನಂದವನ್ನೇ ಬಯಸುವೆನು.

೫ ವರ— "प्रजाभ्य पंचपदी भव। सा मामनुव्रता भव।" (ಸಂತತಿಯ ಸೇವೆಗೋಸ್ಕರ ಐದನೇ ಹೆಜ್ಜೆ ಇಟ್ಟೆ. ನನ್ನ ವ್ರತ ಪೂರ್ಣ ಮಾಡುವದಕ್ಕೆ ನನಗೆ ಸಹಾಯ ಮಾಡು)

ಕನ್ಯಾ— ತಮ್ಮ ಸಂತತಿಸೇವೆಯಲ್ಲಿ ಅಡಿಗಡಿಗೆ ತಮ್ಮ ಸಹಾಯಕಳಾಗಿರುವೆನು.

೬ ವರ— "ऋतुभ्यः षट्पदी भव। सा मामनुव्रता भव।" (ನಿಯಮಪಾಲನೆಗೋಸ್ಕರ ಆರನೇ ಹೆಜ್ಜೆಯನ್ನಿಟ್ಟು. ನನ್ನ ವ್ರತ ಪೂರ್ಣ ಮಾಡುವದರಲ್ಲಿ ನನಗೆ ಸಹಾಯ ಮಾಡು.)

ಕನ್ಯಾ— ಯಮ-ನಿಯಮಾದಿಗಳ ಪಾಲನೆಯಲ್ಲಿ ತಮ್ಮ ಅನುಚರೀಯಾಗಿರುವೆನು.

೭ ವರ— "सखा सप्तपदी भव। सा मामनुव्रता भव" (ನಮ್ಮಿಬ್ಬರಲ್ಲಿಯೂ ಮೈತ್ರಿ ಇರಬೇಕು ಇದಕ್ಕೋಸ್ಕರ ಏಳನೇ ಹೆಜ್ಜೆ ಇಟ್ಟು. ನನ್ನ ವ್ರತವನ್ನು ಪೂರ್ಣ ಮಾಡುವದರಲ್ಲಿ ನನಗೆ ಸಹಾಯ ಮಾಡು.)

ಕನ್ಯಾ— ತಾವು ನನ್ನ ಪತಿಯಾಗಿ ಲಭಿಸಿದಿರಿ, ಇದು ನನ್ನ ಪುಣ್ಯವು ತಾವು ನನ್ನ ಪರಮ ಮಿತ್ರರಿರುತ್ತೀರಿ, ಪರಮ ಗುರು ಇರುತ್ತೀರಿ, ಪರಮ ದೇವತಾ ಇರುತ್ತೀರಿ.

ಕನ್ಯೆಯ ತಂದೆ ಹೇಳುತ್ತಾನೆ:-

"धर्मेच अर्थेच चारितव्य: सोनयासह।
धर्मे चार्थे च कामे च नातिचरितव्या॥"

(ನೀನೇನು ಧರ್ಮಾಚರಣೆ ಮಾಡುವದಿರುತ್ತದೋ, ಅದನ್ನು ಇವಳಿಂದ ಸಹಿತನಾಗಿಯೇ ಆಚರಿಸತಕ್ಕದ್ದು. ಧರ್ಮದಲ್ಲಿಯಾಗಲಿ, ಅರ್ಥದಲ್ಲಿಯಾಗಲಿ, ಕಾಮದಲ್ಲಿಯಾಗಲಿ ಇವಳನ್ನು ಅತಿಕ್ರಮಿಸಕೂಡದು.)

ವರ— "नातिचरामि नातिचरामि नातिचरामि" (ಧರ್ಮ, ಅರ್ಥ, ಕಾಮಗಳಲ್ಲಿ (ಇವಳನ್ನು) ಅತಿಕ್ರಮಿಸುವದಿಲ್ಲ.

ಇತರರು ಈ ವಿವಾಹದ ಅನುಕರಣ ಮಾಡಿದರೆ ಎಷ್ಟು ಧನ ಉಳಿಯುವದು, ಎಷ್ಟು ಆಡಂಬರವು ಕಡಿಮೆಯಾಗುವದು, ಎಷ್ಟು ತೊಂದರೆಗಳೊಳಗಿಂದ ನಾವು ತಪ್ಪುವೆವು; ಎಂಥ ರೀತಿಯಿಂದ ಎಷ್ಟು ಧನವೃದ್ಧಿಯಾಗುವದು!

— ಅಮೆರಿಕಾ ದೇಶದ ಪೋಲ್ಡ್ ನದಿಗೆ ನೆರೆ ಬಂದು, ಹೋದ ವಷ್ಟ ೧೦ ಅಳು ನೀರು ಏರಿತ್ತು. ಅದೇ ಗ್ರಾಮಗಳು ನೀರಿನಲ್ಲಿ ಮುಳುಗಿಕೊಂಡಿದ್ದವು. ಗಿರಣಿ ಮುಚ್ಚಿದೆ; ಸಂಕಗಳು ಮುರಿದವೆ.

ಶೀವಿ ಕೆನ್ವ್ಹಾಸರಳು ಬೇಕು!

ಅರಿವೆ ಕತ್ತರಿಸುವ ಹಾಗು ಹೊಲಿಯುವ ಕೆಲಸದಲ್ಲಿ ನುರಿತ ಹಿಂದೂ ಶೀವಿ ಕೆನ್ವ್ಹಾಸರಳೊಳ್ಳಳು ಗೋವೆಯಲ್ಲಿ ಸಿಂಗರ ಮಶೀನುಗಳನ್ನು ವಿಕ್ರಯಿಸಲು ಬೇಕಾಗಿರುವಳು. ವಿಶೇಷ ಮಾಹಿತಿ ಬಗ್ಗೆ ಕೆಳಗಿನ ಕತ್ತಿಗೆ ಬರೆಕೊಳ್ಳಿರಿ.

Singer Sewing
Machine Company.
PANJIM. (GOA)

ಶ್ರೀ ಕರ್ಕಿಯವರು ಸೋಲುವ ಕಾರಣಗಳು.

ಕರ್ನಾಟಕವೃತ್ತ 'ಪತ್ರಕರ್ತ'ರಿಗೆ —

ಅಯ್ಯಾ— ಹೊನ್ನಾವರ ತಾಲೂಕಿನಲ್ಲಿ ನಡೆದ ಡಿಸ್ಟ್ರಿಕ್ಟ್ ಲೋಕಲ್ ಬೋರ್ಡ ಚುನಾವಣೆಯಲ್ಲಿ ಮಂಜುನಾಥ ಭಟ್ಟ ಕರ್ಕಿಯವರು ಸೋತದ್ದರ ಕಾರಣಗಳು ಇನ್ನೂ ಜನತೆಯು ಮುಂದೆ ಇಟ್ಟುಕೊಳ್ಳದ್ದರಿಂದ ಜನರಿಗೆ ಸರಿ ಗೊತ್ತು ತಿಳಿಯಲಿಲ್ಲ. ವೃತ್ತಪತ್ರಗಳಲ್ಲಿ ಇಲ್ಲದ ವಿಧಾನಗಳನ್ನು ಹಾಕಿದ್ದು ತಿಳಿಯುವವರಿಂದ ಅವೆಲ್ಲ ಬೈಲಾಗಲಿಕ್ಕೆ ಸರಿ ಸಂಗತಿಗಳನ್ನು ಮುಂದಿಡುವೆನು.

೧ ಕೌನ್ಸಿಲ್ಲ ಹೊರಬರಬೇಕಾಗಿ ಶ್ರೀ ಮಂಜುನಾಥ ಭಟ್ಟರಿಗೆ ತಿಳಿಸಿದೆ, ಜಿಲ್ಲಾ ಕಾಂಗ್ರೆಸ ಕಮಿಟಿ ಅಧ್ಯಕ್ಷರ ಗಿದ್ದ ಅವರನ್ನು ಕೇಳದೇ ಉಮೇದ್ವಾರ ಶ್ರೀ ಕಾಕ್ತಿಯವರ ಸಹಿ ಪಡೆಕೊಂಡು ಅಲ್ಲದ ವಿಧಾನಗಳನ್ನು ಹಾಕಿ ಚುನಾವಣೆ ಆಗದ ಸಮಯದಿಂದ ಜಿಲ್ಲಾ ಕಾಂಗ್ರೆಸ್ಸಿನ ಕಾರ್ಯಕಾರಿ ಮಂಡಲದ ಸಭೆ ಅಲಿದು ವೃತ್ತಪತ್ರಗಳಲ್ಲಿ ಆದನ್ನು ಪ್ರಕಟಿಸಿದ್ದು.

೨ ಡಿಸ್ಟ್ರಿಕ್ಟ್ ಕಾಂಗ್ರೆಸ್ ಕಮಿಟಿ ಅಧ್ಯಕ್ಷ ಶ್ರೀ ಕರ್ಕಿಯವರ ನಡತೆ ಬಗ್ಗೆ ಆ ಕಮಿಟಿಗೆ ಬರೆದಿಟ್ಟ ಕಾರಣಗಳಿಂದ ಪ್ರಾಂತಿಕ ಕಮಿಟಿಯು ಮಾಡಿದ ಠರಾವಿನ ಪ್ರತ ಟಿಕ.

೩ ಹೊನ್ನಾವರದ ಟಾಸ್ಕಿಯವರನು ಕಾಂಗ್ರೆಸ್ ಕಮಿಟಿಯಿಂದ ಆರಿಸದ ಅಧ್ಯಕ್ಷ ಶ್ರೀ ಮಾವಿನಕುರ್ವೆಯವರನ್ನು ಶ್ರೀ ಕರ್ಕಿಯವರ ಬದಲಾಗಿ ನೇಮಿಸುವ ಬಗ್ಗೆ ತಕರಾರು ನಡೆದದ್ದು, ಎಂಬ ಅನ್ಯಾಯವಾಗುವ ಹಾಗೆ ಆದ ಸಮಯದಲ್ಲಿ ಕಳುಹಿಸಿದ ಟಾಸ್ಕಿ ಪ್ರಕಟಣೆ ಅವರ ವಿರುದ್ಧ ಇರುವ ಈ ೩ ಪ್ರಕಟಣೆಗಳು ಒಮ್ಮೆಗೇ ಕಾನಡಾ ಧುರೀಣ ಪತ್ರಿಕೆಯಲ್ಲಿ ಅವರ ಪ್ರತಿಷ್ಠೆಗೆ ಅನುಕೂಲವಾಗುವ ಹಾಗೆ ಮೊದಲಿಗೆ ಹೊರಬಿದ್ದದ್ದು.

೪ ತಾರೀಖು ೨೪ನೇ ಜನವರಿ ನಡೆದ ಕಾಂಗ್ರೆಸ್ ಕಾರ್ಯಕಾರಿ ಮಂಡಲದಲ್ಲಿ ಶ್ರೀ ಕರ್ಕಿಯವರು ತಮ್ಮ ಸಮರ್ಥನೆ ಮಾಡಿಕೊಂಡ ನಂತರ ಶ್ರೀ ಕಾರ್ನಾಡರವರ ಅವರು ಶ್ರೀ ಕರ್ಕಿಯವರು ಕೌನ್ಸಿಲ್ಲ ಹೊರಗೆ ಬರದೇ ಇದ್ದದ್ದು ಸ್ವಾದೇಶ್ರಕಾರ ಮಾಡು ಅಡ್ಡಲೇ ತಪ್ಪಾಗುವದಿಲ್ಲೆಂತಲೂ, ಅಪ್ಪಿಕ ದೃಷ್ಟಿಯಿಂದ ಮಾತ್ರ ಅವರು ಹೊರಬೀಳಬೇಕೆಂತಲೂ ಹೇಳಿದ ವಿಧಾನಗಳು. ಚುನಾವಣೆ ಪೂರ್ವದಲ್ಲಿ ಪ್ರಕಟವಾಗದೇ ಇದ್ದದ್ದು.

೫ ಎಷ್ಟೋ ಪೋಲಿಂಗ ಸೆಂಟರುಗಳಲ್ಲಿ ಅವರ ಏಜಂಟರು ಕರ್ಕಿಯವರ ಜಾತಿಯವರು, ಭಿನ್ನ ಜಾತಿಯವರು, ಪಕ್ಷಪಾತದಿಂದ ಮಾಡಿಯೇ ಇದ್ದದ್ದು ಅವರ ಜೊತೆಗಾರಿ ಪೋಲಿಂಗ ಏಜಂಟರಿಗೆ ಶ್ರೀ ಕರ್ಕಿಯವರ ಬಗ್ಗೆ ಮಾಡಿಯುವದು ಅವರ ಪಕ್ಷಗೆ ಹಿತಕರವಲ್ಲೆಂದು ಶ್ರೀ ಡಿ. ಎಸ್. ಶಾಸ್ತ್ರಿಯವರು ಹಿರಂಗವಾಗಿ ಒತ್ತಿ ಹೇಳಿದ ಹೇಳಿಕೆಯು.

೬ ಶ್ರೀ ರಾಮಕೃಷ್ಣ ಹೈಸ್ಕೂಲ ಪತ್ರದಿಂದ ನಿಯಮಿತ ದಿನ್ನದ ಪೂರ್ವದಲ್ಲಿ ಅಂದರೆ ತಾ ೨೮-೧-೩೬ನೇ ದಿವಸ ಶ್ರೀ ಕರ್ಕಿಯವರ ಸಮರ್ಥನೆಯನ್ನೊಳಗೊಂಡ ತಾರೀಖು ೩೦-೧-೧೯೩೬ ನೇ ದಿನ್ನದ ಕಾನಡಾ ಧುರೀಣ ಪತ್ರಿಕೆಯ ಅಚ್ಚಿನ ಪ್ರತಿಗಳನ್ನು ಹಡಕೊಂಡು ಕರ್ಕಿಯವರ ವಿರುದ್ಧ ಕೆಲಸ ಮಾಡುವವರಿಗೆ ಹಂಚಿದ್ದು. ಮತ್ತು ಆ ಪ್ರತಿಗಳಲ್ಲಿರುವ ಅವರ ಸಮರ್ಥನೆಯ ಕೆಲವು ಭಾಗಗಳನ್ನು ಓದಿ ಕರ್ಕಿಯವರಿಗೆ ಮತ ಕೊಡಬಾರದೆಂದು ಮತದಾರರ ಮನೆ ಬಾಗಿಲುಗಳಲ್ಲಿ ಹೇಳಿದ್ದು. ಈ ಕೆಲಸವನ್ನು ಡಿ. ಎಸ್. ಶಾಸ್ತ್ರಿಗಳ ಅವರು ಪಾಳೆಯದವರಲ್ಲಿ ಒಬ್ಬರಿಗೆ ಮಾಡಿಸಿದರು. ಶ್ರೀ ಹುಗೆಹರ ಜೋಯಿಸರು ಪತಿ ನೆಬಳ ಹಾದ್ಯಕ್ಕೆ ಹೊನ್ನಾವರದಿಂದ ಆ ಪತ್ರಿಕೆಯನ್ನು ಒಯ್ದು ಕರ್ಕಿಯವರ ವಿರುದ್ಧ ಕೆಲಸ ಸಾ

ದಿದರು ಹೇರಂಗವಾಯಿತಲ್ಲದೆ ಶ್ರೀ ಕರ್ಕಿಯವರಿಗೆ ಮತ ಕೊಟ್ಟರೆ ಮತ ಕೊಟ್ಟವರ ಸಂಗಡ ಪ್ರತಿದ್ವೇಷ ಉಂಟಾದೀತೆಂದು ಮತದಾರರಿಗೆ ಹೇಳಿದ್ದು.

೭ ಕೃಷ್ಣ ರಾವ ಶ್ರೀ ಕರ್ಕಿಯವರಿಗೆ ಮಾಡಬಾರದೆಂಬ ಮತಗಳು ಅವರ ಮನೆಗೆ ಹೋಗದೇ ಇದ್ದದ್ದು ಉದಾಹರಣಾರ್ಥ ಕರ್ಕಿಯವರ ಏಜಂಟರು ಮಂಕಿ ರಾಜ್ಯದಲ್ಲಿ ಅವರಿಗೆ ೬೦ ಮತಗಳಿಗೆ ಕಡಿಮೆ ಬಾರದಷ್ಟು ಮತಗಳು ಬಿದ್ದದ್ದಾಗಿ ನಿಶ್ಚಯವಾಗಿ ಹೇಳಿಕೊಂಡದ್ದು ಇರುವಾಗ, ಅಲ್ಲಿ ಬರೇ ೧೩ ಮತಗಳು ಅವರಿಗೆ ಹೇಗೆ ಯಾರು ಕಳ್ಳಿಸಿದರು?

೮ ಶ್ರೀ ಕರ್ಕಿಯವರಿಗೆ ಸಿಗಬಹುದಾದ ಮತಗಳನ್ನು ಪ್ರತಿಫಲದ ಆಶೆ ತೋರಿಸಿ ತಪ್ಪಿಸಿದ್ದು.

೯ ಉಮೇದವಾರರಿಂದ, ವ್ರತಿಭಟನ, ಸಮಾಜೋಗಳನ್ನು ಅನ್ನಿಸಿಕೊಳ್ಳುವವರೇ ಜಾತಿಪ್ರೇಮಯನ್ನು ಮುಂದಿಟ್ಟುಕೊಂಡು ಅನೇಕ ಮತಗಳು ಬಿಟ್ಟರೆ ತಕ್ಕೆ ಬಿಟ್ಟಗೊಡಬೇಕಾಗಿ ರಾತ್ರಿ-ಹಗಲು ದುಡಿದದ್ದು.

ಇನ್ನೂ ಅನೇಕ ಸಣ್ಣ ಕಾರಣಗಳಿವೆ.

ಇಂಥ ಬಿಕ್ಕಟ್ಟಿನ ಪ್ರಸಂಗದಲ್ಲಿ ಸಹ ಕರ್ಕಿಯವರಿಗೆ ೩೦೦ ರ ಮೇಲ್ಪಟ್ಟು ಮತಗಳು ಬಿಟ್ಟವು. ಇದಕ್ಕೆ ಸೋಲೆನ್ನಬೇಕೆ ? ಸೂರ್ಯನು ಗ್ರಹಣ ಹಿಡಿದಾಗ್ಯೂ ಸೂರ್ಯನೇ ಸರಿ. ಆಜ್ಞ ಮಾಡಿದವರನ್ನು ಪಡೆಯುವ ದೇವ ಶಿ ತೀರ್ಥಯ ಕೀರ್ತಿಯ ಲ್ಲ ಇಂಥ ಪ್ರಸಂಗದಲ್ಲಿ ಆದ ಸೋಲು ಸೋಲಲ್ಲ. ಇದು ಜನತೆಗೆ ತಿಳಿದಿರಲಿ. ಕರ್ಕಿಯವರಿಗೆ ಕೊಡಲಿಕ್ಕಿದ್ದ ಮತಗಳು ಅವರಿಗೆ ಸಿಗದೇ ದುರುಪಯೋಗವಾದದ್ದಕ್ಕೆ ಪಶ್ಚಾತ್ತಾಪವಾಗಬೇಕು ಅವರು.

'ಓರ್ವ ಮತದಾರನು.'

ಗೋಕರ್ಣದ ಸುಗ್ಗಿ!

ರಾ। ರಾ। ಕರ್ನಾಟಕವೃತ್ತ ಕರ್ತರ ಸನ್ನಿಧಿಗೆ.

ವಿ ವಿ ಈ ಕೆಳಗಿನ ಹಕೀಕತವನ್ನು ತಮ್ಮ ಪತ್ರದಲ್ಲಿ ಪ್ರಕಟಿಸಿ ಉಪಕರಿಸಬೇಕಾಗಿ ಪ್ರಾರ್ಥನೆಯು.

ವಾರ್ಷಿಕ ಮಹಾಶಿವರಾತ್ರಿಯ ನಮ್ಮ ಊರ ಶ್ರೀ ಮಹಾಬಲೇಶ್ವರ ದೇವಸ್ಥಾನದಲ್ಲಿ ಕಳೆದ ರವಿವಾರ ರಾತ್ರಿ ಸುಗ್ಗಿಯ ಉತ್ಸವವಿತ್ತು. ಅರಮನೆಗೆ ಸಾಗುವ ಮಹಾಬಲೇಶ್ವರ ಮಂದಿರದೊಳಗೆ ನಡೆದ ಅಪ್ಪಾರಿಗಳ ಮೂಲಕ ನಮ್ಮ ಊರ ಪೋಲೀಸರು ನಡಿಸಿದ ಪ್ರಕರಣದಲ್ಲಿ ಅತ್ಯಂತಗಳ ಮೇಲೆಯೂ ಸುಗ್ಗಿ ಕಟ್ಟಿಕೊಂಡಿಯುತಂತೆ ಡಿ.ಮ್ಯಾಜಿಸ್ಟ್ರೇಟರ ಸಾಹೇಬರು ಕಲೆಕ್ಟರರು ಶ್ರೀ ವೃಂದಗಳ ರಸ್ತೆಯ ಹುಡುಕು ಕೊಟ್ಟಿದ್ದರು. ಇದರಿಂದ ನಮಗೆಲ್ಲರಿಗೆ ಬಹಳ ವ್ಯಸನವಾಯಿತು. ಶಿವ ಇಬ್ಬರಿಗೆ ರು ಶ್ರೀ ದೇವಸ್ಥಾನದ ಭಕ್ತರಿದ್ದು, ಈ ಉತ್ಸವದ ಮೇಲೆ ಬಹಳ ಪ್ರೀತಿ. ಈ ಉತ್ಸವ ನಿಂತು ಹೋದರೆ ಅವರಿಗೆ ಸುಖವಿಲ್ಲ, ಶುಭ ಕಾರ್ಯಗಳನ್ನು ಮಾಡಲಿಕ್ಕೆ ಪ್ರತಿಬಂಧ. ಇಂಥ ಸ್ಥಿತಿಯಲ್ಲಿ ಇತ್ತೀಚಿನಲ್ಲಿ ಸ್ಥಾಗುತ ಗಣ ರಾಜವಾಡಿ ಸುಗ್ಗಿಯನ್ನು ನೆರವೇರಿಸಬೇಕೆಂದು ಆಲೋಚನೆ ನಡೆದಿತ್ತು. ರಾವಸಾಹೇಬ ಕಲೆಕ್ಟರವರಿಗೆ ಸಂಪ್ರಾರ್ತಿಸಿ ನಿಮಂತ್ರಿಸಿದಂತೆ ಹೋಗಿತ್ತು. ನಿಮ್ಮ ಕುಟುಂಬಿಯ ರಾಜಕುಮಾರದಂಥ ಕಲ್ಯಾಣಪುರಕರ ಹಾಗು ರಾ। ದೀಕ್ಷಿತ ಪಕೀಲರ ಮಹಾಶಿವರಾತ್ರಿ ರವಿವಾರ ಸಾಯಂಕಾಲಕ್ಕೆ ಇಲ್ಲಿ ಆಮಂತ್ರಿಸಿದ್ದರು. ದೇವಸ್ಥಾನದ ಸುಗ್ಗಿಯ ಜ್ಞಾ ಅವರಿಗೆ ಯಾವ ಸಂಬಂಧ ವಿರುತ್ತದೆಂಬುದನ್ನು ನಾನರಿಯೆ.

ನಮ್ಮ ದೇವಸ್ಥಾನದ ವಿವಾದೆನಂತೆ ಮುಖ್ಯ ಶ್ರೀಗಳ ರಾತ್ರಿಗೆ ಕಾಮದಹನದ ಉತ್ಸವವು ಮುಗಿಯಬೇಕು. ಆ ಹಾಕದಿಂದ ಶ್ರೀ ದೇವಸ್ಥಾನದ ಅರ್ಚಕರಾದ ವೇ। ಮೂ। ಹಿರೇ ಭಟ್ಟರು ೩ ಘಂಟೆಗೆ ಸ್ನಾನಮಾಡಿ ಉತ್ಸವ ಕಾರ್ಯಕ್ಕೆ ತಯಾರಾಗಿ ಬಂದಿದ್ದರು. ೬ ದಿನ ಪ್ರದೋಷ ಅರ್ಚಕರು ಉಪೋಷಣೆಯಿಂದಿದ್ದರು. ಉತ್ಸವ ಹೊರಡಿಸಲು ಸಿದ್ಧತೆ ಪ್ರಾರಂಭದಲ್ಲಿ ಒಳ್ಳೆಯ ರೀತಿ ಪ್ರಸ್ತಾಪ ನಡೆಯುತ್ತಿದೆ; ಉತ್ಸವ ಹೊರಡಿಸಲು ತಡಿಸಬೇಕಾಗಿ ದೇವಸ್ಥಾನದಲ್ಲಿ ಹೇಳಿ ಕಳಿಸಲಾಯಿತು. ಉತ್ಸವ ಕಾರ್ಯ ಅಷ್ಟಕ್ಕೇ ನಿಂತಿತು. ಪಂಚಾಯತಿಯು ಮಧ್ಯರಾತ್ರಿ ವರೆಗೆ ನಡೆಯಿತು. ಪಂಚಾಯತಿ ಮುಗಿಸಿ, ರಾ। ಸಾ। ಕಲೆಕ್ಟರರು, ಮೊಕ್ತೇಸರ ಮುಂತಾದವರು ಶ್ರೀ ಮಹಾಬಲೇಶ್ವರ ದೇವಸ್ಥಾನಕ್ಕೆ ಬಂದರು. ಬಂದ ರಾ। ಸಾ। ಕಲ್ಯಾಣಪುರಕರ ಹಾಗು ರಾ। ದೀಕ್ಷಿತ ವಕೀಲರ ಬಂದರು ಉತ್ಸವ ಹೊರಡಿಸಬೇಕೆಂದು ಅಪ್ಪಣೆಯಾಯಿತು. ಆಗ ಅರ್ಚಕರು ಅಲ್ಲಿದ್ದಿಲ್ಲ. ಕಾರು ಕಾರು ಹುಡುಕಬೇಕಾಯಿತು. ಅವರು ಹೊರಟು ಹೋಗಿದ್ದರು. ಸ್ನಾನಮಾಡಿ ಬರಬೇಕಾಗಿತ್ತು. ಸ್ವಲ್ಪ ತಡವಾಯಿತು. ಪಂಚ ಮಂಡಳಿಯು ಬರುವದರೊಳಗೆ ಅವರು ಶ್ರೀ ದೇವಸ್ಥಾನದಲ್ಲೇ ಹಾದಿ ಕಾಯುತ್ತ ಕುಳಿತಿರುವರು. ನಿರಾಶೆಯಾಗಿ ಹೊರಟು ಹೋಗಿದ್ದರು. "ನಾವು ಬಂದರಿಂದ ಅರ್ಚಕರು ಬಹಳ ಬೇಸರಕ್ಕೆ ಹೋದರು; ಇವರು ಮನಸ್ಸಾದರೆ ಪಡಿಯಬೇಕು. ಇಲ್ಲವಾದರೆ ನಾವು ಬಿಡುವದಿಲ್ಲ, ಇನ್ನೇ ಕಾರಣ ಮೇಲಿಂದ ಅರ್ಚಕರಿಗೆ ಡಿಸ್ಮಿಸ್ ಮಾಡಬೇಕು" ಇತ್ಯಾದಿ ತಮ್ಮ ಅಧಿಕಾರದ ಗರ್ಜನೆಗಳನ್ನು ರಾ। ಸಾ। ಕಲ್ಯಾಣಪುರಕರರು ಬಳಿಸಿದರು. ಇದರಿಂದ ಒಳ್ಳೆಯ ಕಾರ್ಯ ಹೇಗಿದ್ದು ಹೋಯಿತಲ್ಲ! ಉತ್ಸವ ಮಾಡುತ್ತ ಹೊರಡಿಸಲು ಅಪ್ಪಣೆಯಾದಾಗ ಎಲ್ಲ ಒಳ್ಳೆಯ ಸಮಯವಾಗಿ ಬಂದಿಲ್ಲ. ಅನಕ ಪರಿಗೂ ಕಡಿಮೆ ಬೇಕಾಗಿತ್ತು.

ಈ ಗಡಬಡಿಯಲ್ಲಿ ಕರ್ಮ ಧರ್ಮಸಂಯೋಗದಿಂದ ಬಿಡುವಸೋ ಒಬ್ಬ ಸುಮಗಧಾರಿ ಮಾತಿಯಾದರು ನಂದಿಮಂಟಪದಲ್ಲಿ ಸೇರಿದರು. ಅದನ್ನು ಹೊನ್ನಾವರದ ಒಬ್ಬರು ನೋಡಿ ದುಡಿಗಾರಿ ಕಟ್ಟಲು ಚಂದ್ರಶಾಲೆಯ ಮೇಲೆ ಕಡ ಮೊಕ್ತೇಸರ, ಮಹಾಬಲೇಶ್ವರ ಮುಂತಾದವರಿಗೆ ಹೇಳಿದರು. ರಾ। ಸಾ। ಕಲ್ಯಾಣಪುರಕರರು ಒಳಗೆಯಲ್ಲಿದ್ದರು, ರಾ। ದೀಕ್ಷಿತಯವರೆಂದು ಅಲ್ಲೇ ಇದ್ದರು. ಶ್ರೀ ದೇವಸ್ಥಾನದ ಮಹಿಮಾಟಿಯಂತೆ ಘೋಷ್ಯಾ ಹಾಕುವ ಪ್ರಸಂಗ ಬಂತು. ಅದಕ್ಕೆ ಸೂಕ್ಷ್ಮವಾಗಿ ತಾಪೂಡರಿಗೆ ಹೇಗಲುಕ್ತದೆ. ಅರ್ಚಕರು ಈ ಕಾರ್ಯಕ್ಕಾಗಿ ಶ್ರೀ ದೇವಸ್ಥಾನದಲ್ಲಿ ಹೋದರು. ರಾವಬಹಾದ್ದೂರರಿಗೆ ಸುದ್ದಿಗೆ ಕಾತ್ರಲಿಕ್ಕಾಗಲಿಲ್ಲ. "ಇದೆಲ್ಲ ಸುಳ್ಳೇ ವಿಷಯದೇ ಮಾತು ಹುಡುಕು" ಮುಂತಾದ ವಿಚಾರಣೆಗಳನ್ನಾದಿ ರಾ। ಸಾ। ರವರು ತಮ್ಮ ದೊಡ್ಡಸ್ತಿಕೆಯನ್ನೂ ಸಿಟ್ಟನ್ನೂ ತೋರಿಸಿದರು. ಮೊಕ್ತೇಸರರಿಂದ ರಾ। ಕೃಷ್ಣ ಪ್ರಸಾದರವರು "ಇದು ಅರ್ಚಕರ ತಪ್ಪಲ್ಲ. ಪರಿಸ್ಥಿತಿಯದು" ಈ ಬುದ್ಧಿ ಹೇಳಿದ್ದು ಅದನ್ನು ಸ್ವೀಕರಿಸಿ ಗ್ರಹಿಸಿ ನಾವೇ ಮುಕ್ತಾಯಿತ ಕಾರ್ಯ ಮಾಡಬೇಕೆಂದಿರಬೇಕು ಹಾಗಿಲ್ಲ" ಮುಂತಾದ ವಿವರ ಹೇಳಿದರು. ನಾವು ಹೇಳಿದ್ದು ಮತ್ತೇ ನಡೆದೀತು ಆಗಬಹುದೆಂದು ಹುಡುಗರೆಲ್ಲರಿಗೆ ತೋರಿ, ಮಾತು ಬೆಳೆಸಬಾರದೆಂದು ಹೇಳಿ, ಅನ್ನ ಕಾರ್ಯಕ್ಕಾಗಿ ಅಲ್ಲಿಂದ ಎದ್ದು ನಡೆದರು. ಆಗ ರಾ। ದೀಕ್ಷಿತರವರು "ಇದು ಮೂರು ಮಿನಿಟುಗಳಲ್ಲಿ ಆಗುವ ಕೆಲಸ, ಬೇಕಾದರೆ ತಡ ಮಾಡುತ್ತಾರೆ" ಮುಂತಾಗಿ ತಾವು ಮುಖದಿಂದ ಉತ್ತರಿಸಿ, ಶ್ರೀ ದೇವಸ್ಥಾನದ ವೈದಿಕರ ವಿಷಯ ತಮಗಿರುವ ತಿರಸ್ಕಾರವನ್ನು ವ್ಯಕ್ತಪಡಿಸಿದರು; ರಾ। ದೀಕ್ಷಿತರವರು ವಕೀಲರೆಂದು ಹೇಳುತ್ತಾರೆ, ಅವರ ಈ ಜ್ಞಾನಪ್ರದರ್ಶನದಿಂದ ಇವರು ದೊಡ್ಡ ವೈದಿಕರೆಂದು ದೇವಸ್ಥಾನದಲ್ಲಿದ್ದ ಗೌಡರಿಗೆಲ್ಲ ತಿಳಿಯಿತು.

ಅನಂತರ ಸುಗ್ಗಿಯ ಉತ್ಸವವು ರಾಜೋಪಚಾರದಿಂದ ಸಾಂಗವಾಗಿ ಸದಾಚಾರದಿಂದ ನೆರವೇರಿತು.

ಗೋಕರ್ಣ, ತಾರೀಖು ೬೯-೨-೩೬.

ಶ್ರೀ ಕೃಷ್ಣ.

ಕಾನಡಾವೃತ್ತ.

ಮಿತಿ ಕ್ಷಯ ಸಂವತ್ಸರದ ಚೈತ್ರ ಬಹುಳ ೬ ಸೋಮವಾರ

ಶುಭಶಕುನ.

ದಕ್ಷಿಣ ಆಫ್ರಿಕೆಯೊಳಗೆ ನಡೆಯುತ್ತಿದ್ದ ಭಾರತೀಯರ ಪೀಡನೆಗೆ ಕೆಲವು ಕಾಲದ ವರೆಗೆ ತಡೆಬಿದ್ದಿರುವದು. ದಕ್ಷಿಣ ಆಫ್ರಿಕೆಯ ಸರಕಾರಕ್ಕೂ, ಹಿಂದುಸ್ಥಾನ ಸರಕಾರಕ್ಕೂ [illegible] ನಡೆದ ವಾದ-ವಿವಾದಗಳು ಕೊನೆಗೆ ಭಾರತೀಯರಿಗೆ ಅನುಕೂಲವಾಗಿ ಪರಿಣಮಿಸುವ ಶುಭ ಕುರುಹುಗಳು ಕಾಣಹತ್ತಿವೆ. ದಕ್ಷಿಣ ಆಫ್ರಿಕೆಯ [illegible] ಶಿಷ್ಟಮಂಡಳವು ಹಿಂದುಸ್ಥಾನದಲ್ಲಿ ಸಂಗ್ರಹಿಸಿದ ಲೋಕಮತದ ಬೆಂಬಲದಿಂದ ಹಿಂದುಸ್ಥಾನ ಸರಕಾರವು ದಕ್ಷಿಣ ಆಫ್ರಿಕೆಯಲ್ಲಿ ಕಳುಹಿದ [illegible] ಮಂಡಳದ ಪ್ರಯತ್ನವು [illegible] ಅಂದ್ರ್ಯೂಸರವರು ದಕ್ಷಿಣ ಆಫ್ರಿಕೆಯಲ್ಲಿ ಭಾರತೀಯರ ತರ್ಫಿನಿಂದ ಕೈಕೊಂಡ ಯತ್ನಗಳೂ ಫಲದಾಯಕವಾಗಿ [illegible] ದಕ್ಷಿಣ ಆಫ್ರಿಕೆಯ ಸರಕಾರವು ಬಹಳ ಒಪ್ಪಿಗೆ ಕೊಟ್ಟು [illegible] ಪ್ರಮುಖರ ಪರಿಷತ್ತಿಗೆ ಒಪ್ಪಿಕೊಟ್ಟಿದೆ. ಇದೊಂದು ದೊಡ್ಡ ಸಂತೋಷದ ಮಾತು.

ವಾಚಕರು ಬಲ್ಲಂತೆ [illegible] ದಕ್ಷಿಣ ಆಫ್ರಿಕೆಯಲ್ಲಿ ನಡೆಯುತ್ತಿರುವ [illegible] ನಾವು [illegible] ತಪ್ಪಿದರೆ [illegible] ಪ್ರತಿನಿಧಿ ಮಂಡಳದಲ್ಲಿ ಭಾರತೀಯರ [illegible] ಚರ್ಚೆ ಯಾಗುವದು. ಹಿಂದುಸ್ಥಾನ ಸರಕಾರವು ಯಾವದೇ ಪ್ರಕಾರದಿಂದ ಪರಿಷತ್ತಿನ ಚರ್ಚೆಗೆ ನಿಯಂತ್ರಿಸಲು ಒಪ್ಪಲಿಲ್ಲ. ದಕ್ಷಿಣ ಆಫ್ರಿಕೆಯ ಸರಕಾರವಾದರೂ ಇದಕ್ಕೆ ತಲೆತೂಗಿಸಿ [illegible] ಈ ಪರಿಷತ್ತಿನಲ್ಲಿ ಭಾರತೀಯರ ಪ್ರಶ್ನೆಯನ್ನು ಬಿಡಿಸುವ ಕಲ್ಪನೆಗಳ, ಉಪಾಯಗಳ ಸವಿಸ್ತರ ಚರ್ಚೆಯಾಗುವದು. ಎರಡೂ ಸರಕಾರಗಳ ತೊಡಕುಗಳನ್ನರಿತುಕೊಂಡು ಅವನ್ನು ಪರಿಹರಿಸಲು ಉಪಾಯಯೋಜನೆಯಾಗುವದು. ಹೀಗೆ ಪರಿಷತ್ತಿನ ಕೈಕಾಲುಗಳನ್ನು ಕಟ್ಟಿಹಾಕದೆ ಸಂಪೂರ್ಣ ಸ್ವಾತಂತ್ರ್ಯವನ್ನಿತ್ತ ಬಗ್ಗೆ ಭಾರತೀಯರೆಲ್ಲರೂ ಹಿಂದುಸ್ಥಾನ ಸರಕಾರಕ್ಕೆ ಅಭಿನಂದಿಸುವರು. ದಕ್ಷಿಣ ಆಫ್ರಿಕೆಯ ಸರಕಾರವಾದರೂ ಹಟಮಾರಿಯಾಗದೆ, ಅಂತರ್ವ್ಯವಸ್ಥೆಯ ನೆವ ಹೇಳದೆ ತನ್ನಲ್ಲಿಯ ಭಾರತೀಯ ಪ್ರಜೆಗಳ ಸುಖ-ದುಃಖದ ಪ್ರಶ್ನೆಯನ್ನು ಹಿಂದುಸ್ಥಾನ ಸರಕಾರ ಹಾಗು ದಕ್ಷಿಣ ಆಫ್ರಿಕೆಯ ಸರಕಾರಗಳ ಪ್ರತಿನಿಧಿ ಪರಿಷತ್ತಿನಲ್ಲಿ ಚರ್ಚಿಸಿ, ಇತ್ಯರ್ಥ ಮಾಡಿಕೊಳ್ಳುವ ಸ್ಪಷ್ಟ ಔದಾರ್ಯ ತೋರಿಸಿದ ಬಗ್ಗೆ ಅವರನ್ನು, ದಕ್ಷಿಣ ಆಫ್ರಿಕೆಯ ಸರಕಾರವನ್ನೂ ಅಭಿನಂದಿಸುವೆವು.

ಪರಿಷತ್ತಿನ ಘಟನೆಯ ಹಾಗು ಸಾಮರ್ಥ್ಯದ ಕುರಿತು ಚರ್ಚೆ ಮಾಡುವಾಗ ಒಂದು ಮಾತನ್ನು ನಮೂದಿಸುವದುಚಿತವು. ಹಿಂದುಸ್ಥಾನ ಸರಕಾರವು ಪರಿಷತ್ತಿನ ಕೈಕಟ್ಟಲು ಒಪ್ಪದಿದ್ದಾಗ್ಯೂ ಒಂದು ತರದಿಂದ ಪರಿಷತ್ತಿನ ಕೈಕಟ್ಟಿದಂತಾಗಿದೆ. "ನ್ಯಾಯ ಹಾಗು ಯೋಗ್ಯ ಉಪಾಯಗಳಿಂದ ಪಾಶ್ಚಾತ್ಯ ಜೀವನಕ್ರಮವನ್ನು ದಕ್ಷಿಣ ಆಫ್ರಿಕೆಯಲ್ಲಿ ಕಾಪಾಡಲಿಕ್ಕೆ ಧಕ್ಕೆ ಬಾರದಂತೆ ಪರಿಷತ್ತಿನ ನಿರ್ಣಯವಾಗಬೇಕು." ಈ ವಾಕ್ಯದ ಅರ್ಥವು ತೀರ ವ್ಯಾಪಕವಿರುತ್ತದೆ. ಪಾಶ್ಚಾತ್ಯರ ಜೀವನಕ್ರಮಕ್ಕೆ, ಭಾರತೀಯರು ಉಳಕೊಳ್ಳುವದರಿಂದ ಬಾಧೆಯಾಗುತ್ತಿದ್ದಲ್ಲಿ ಅವರನ್ನು ಹೊರದೂಡಬೇಕೆಂದು, ಸಹ ಅರ್ಥಮಾಡಬಹುದು. [illegible] ಧೋರಣವು ಅದೇ. ದಕ್ಷಿಣ ಆಫ್ರಿಕೆಯ ಸರಕಾರದ ಧೋರಣವೂ ಅದೇ. ಭಾರತೀಯರನ್ನು ಹೊರಹಾಕುವಾಗ ಅದಷ್ಟು ಕಷ್ಟವಾಗಗೊಡದಂತೆ ವ್ಯವಸ್ಥೆ ಮಾಡಲು ದಕ್ಷಿಣ ಆಫ್ರಿಕೆಯ ಸರಕಾರವು ಉಪಾಯಯೋಜನೆ ಮಾಡಲು ತೊಡಗಿತ್ತು. ಈ ಕೃತಿಯನ್ನು ನಾವು ಉದಾಹರಿಸುವೆವು. ಶರೀರದ ಯಾವದೇ ಅಂಗವು ಅಥವಾ ಭಾಗವು ಶರೀರಕ್ಕೆ ನಿರುಪಯೋಗವಾದಲ್ಲಿ; ಅದು ಶರೀರದ ಬೆಳವಣಿಗೆಗೆ ಹಾನಿಪಡಿಸುತ್ತಿದ್ದಲ್ಲಿ, ಅದನ್ನು ಶರೀರದಿಂದ ಪ್ರತ್ಯೇಕ ಮಾಡಬೇಕಾದರೆ [illegible] ತಪ್ಪಿಸಲಿಕ್ಕೆ ರಸಾಯನವನ್ನು ಮೇಲಿಗೆ ಹಚ್ಚುತ್ತಾರೋ, ಅದೇ ಪ್ರಕಾರ ದಕ್ಷಿಣ ಆಫ್ರಿಕೆಯ ಸರಕಾರವು ಭಾರತೀಯರಿಗೆ, ನೋವಾಗದಂತೆ, ದಕ್ಷಿಣ ಆಫ್ರಿಕೆಯೊಳಗಿಂದ ಹೊರದೂಡುವ ಆಲೋಚನೆಯಲ್ಲಿದೆ. ಅದೇ ವಿಚಾರದಿಂದ ಈ ಕಟ್ಟುಯೋಜನೆಯಾಗಬೇಕೆಂದು ಬಲ್ಲವರು ಹೇಳುತ್ತಾರೆ. ಹಾಗಿದ್ದರೆ, ನಮ್ಮ ಹಿಂದುಸ್ಥಾನ ಸರಕಾರವು ಇದಕ್ಕೊಪ್ಪಿಕೊಂಡು ದೊಡ್ಡದೊಂದು ತಪ್ಪು ಮಾಡಿರುವದೆಂದು ನಾವು ಹೇಳಬೇಕಾಗಿದೆ. ಮಹಾತ್ಮರೂ ಒಂದು ಉದಾಹರಣೆಯನ್ನಿತ್ತಿರುವರು. ದಕ್ಷಿಣ ಆಫ್ರಿಕೆಯ 'ಸುಪ್ರೀಮ ಕೋರ್ಟ' ಎಂಬ ನ್ಯಾಯಾಸನದೊಳಗಿನ ರಜಿಸ್ಟ್ರಾರರ ಮುಂದೆ ಕೆಲಸ ಮಾಡುವ ಕಾರಕೂನರು ಗೌರಕಾಯದವರೇ ಇರಬೇಕೆಂಬದೊಂದು ನಿಯಮವಿದೆ. ಇಂಥ ಪ್ರಕಾರಗಳಿಂದ ಪಾಶ್ಚಾತ್ಯರ ಜೀವನಕ್ರಮವನ್ನು ಕಾಪಾಡುವದಿದ್ದರೆ, ಪರಿಷತ್ತಿನಿಂದ ಲಾಭವೇನೂ ಆಗಲಿಕ್ಕಿಲ್ಲೆಂದು ಮಹಾತ್ಮರು ಅಭಿಪ್ರಾಯಪಟ್ಟಿರುವರು. ಆದರೂ, ಪೂರ್ವಗ್ರಹವನ್ನೊಂದು ಹಿಡಕೊಂಡು ಪರಿಷತ್ತಿನ ಕಾರ್ಯಕ್ಕೆ ಯಾವದೇ ಪ್ರಕಾರದಿಂದ ವಿಘ್ನ ತರಬಾರದೆಂದೂ ಧರ್ಮಾತ್ಮರಾದ ಮಹಾತ್ಮರ ಆಜ್ಞೆ ಇದೆ.

ಮಹಾತ್ಮರು ಈ ಕಟ್ಟುಯೋಜನೆಯ ಅರ್ಥವನ್ನು ಔದಾರ್ಯದಿಂದ ಗ್ರಹಿಸಬೇಕೆಂದು ಹೇಳಿರುವರು. ಆರೋಗ್ಯ ಪಾಲನ ಹಾಗು ಆರ್ಥಿಕ ಉನ್ನತಿಯಾಗುವಂತೆ ದಕ್ಷಿಣ ಆಫ್ರಿಕೆಯಲ್ಲಿ ಕಾನೂನುಗಳನ್ನೇರ್ಪಡಿಸಿ, ಭಾರತೀಯರೊಳಗಿನ ದೋಷಗಳ ಪರಿಹಾರ ಮಾಡುವಂತಿದ್ದರೆ ಅದಕ್ಕೆ ವಿಚಾರಶೀಲರ್ಯಾರೂ ಆಕ್ಷೇಪಿಸಲಾರರು. ಭಾರತೀಯರು ದಕ್ಷಿಣ ಆಫ್ರಿಕೆಯಲ್ಲಿ ತಮ್ಮ ಜೀವನಕ್ರಮವನ್ನು ಸುಧಾರಿಸಿಕೊಂಡು ಮಾನವೀ ಸಂಸಾರವನ್ನು ಅಭಿವೃದ್ಧಿಗೊಳಿಸಲೆತ್ನಿಸುವ ಕಾನೂನುಗಳಿಗೆ ಎಲ್ಲರೂ ಸಮ್ಮತಿಯನ್ನೀಯುವರು. ಅಂಥ ಯೋಜನೆಗಳಿಂದ ಅಲ್ಲಿಯ ಪಾಶ್ಚಾತ್ಯರಿಗೆ ಹಿತವಾಗುತ್ತಿದ್ದರೆ ಅವನ್ನು ನಾವು ಆನಂದದಿಂದ ಪುರಸ್ಕರಿಸಿ ದೇಶಬಾಂಧವರನ್ನು ಸುಧಾರಿಸಲೆತ್ನಿಸಬೇಕು. ಇದು ನಮ್ಮ ಪ್ರಥಮ ಕರ್ತವ್ಯವು. ಮಹಾತ್ಮರು ಇಚ್ಛಿಸಿದಂತೆ, ಈ ಅರ್ಥವು ಅಭಿಪ್ರೇತವಿದ್ದರೆ ನಮಗೆ ಅತ್ಯಾನಂದವಿದೆ. ಇದೊಂದು ಪರೋಪಕಾರದ ಕಾರ್ಯವೆಂದೆಣಿಸಿ ಅದಕ್ಕೆ ನಾವೆಲ್ಲರೂ ಪುಷ್ಟಿಯನ್ನೀಯುವೆವು.

ಪ್ರತಿನಿಧಿಗಳ ಪರಿಷತ್ತು ಎಲ್ಲಿ ಸೇರಬೇಕೆಂದು ಇನ್ನೂ ನಿಶ್ಚಯವಾಗಲಿಲ್ಲ. ಇನ್ನೂ ಈ ಕುರಿತು ಚರ್ಚೆ ನಡೆದಿದೆ. ದಕ್ಷಿಣ ಆಫ್ರಿಕೆಯ ಸರಕಾರದವರೂ, ಹಿಂದುಸ್ಥಾನ ಸರಕಾರದವರೂ ಆಲೋಚನೆ ನಡಿಸಿ, ಪರಿಷತ್ತಿನ ಕಾರ್ಯನಿರ್ವಾಹಕ ಸ್ಥಳವನ್ನು ನಿರ್ಧರಿಸುವವರಿದ್ದಾರೆ. ಹಿಂದುಸ್ಥಾನದ ಪ್ರತಿನಿಧಿಗಳನ್ನಾರಿಸುವ ಕೆಲಸವು ಔದಾರ್ಯದಿಂದ ಜರುಗಬೇಕೆಂದು ದೇಶನಾಯಕರಾದ ಶ್ರೀನಿವಾಸ ಶಾಸ್ತ್ರಿಗಳು ಮುಂಜಾಗ್ರತೆಯನ್ನಿತ್ತಿರುವರು. ದಕ್ಷಿಣ ಆಫ್ರಿಕೆಯಲ್ಲಿ ಲೋಕಜಾಗೃತಿಯನ್ನು [illegible] ನಡಿಸಿ, ಲೋಕಾದರಕ್ಕೆ ಪಾತ್ರರಾದ ಸೌಭಾಗ್ಯವತಿ ಸರೋಜಿನೀ ದೇವಿಯವರನ್ನು ಪ್ರತಿನಿಧಿಗಳಾಗಿ ಹಿಂದುಸ್ಥಾನ ಸರಕಾರವು ನೇಮಿಸುವದು ಉಚಿತವು. ದುರ್ದೈವದಿಂದ ಪರಿಷತ್ತು ಹಿಂ[illegible]ಲ್ಲಿ ಸೇರುವದಾದರೆ, ದಕ್ಷಿಣ ಆಫ್ರಿಕೆಯಲ್ಲಿ ಭಾರತೀಯರ ಕಾದಾಟವನ್ನು ತ್ಯಾಗಬುದ್ಧಿಯಿಂದಲೂ, ಸಾಹಸದಿಂದಲೂ, ಧೈರ್ಯದಿಂದಲೂ ನಡಿಸಿ, ಭಾರತೀಯರ [illegible]ರೆಂದು ಖ್ಯಾತಿಗೊಂಡ ಮಹಾತ್ಮರನ್ನು ಸರಕಾರವು ಯಾವದೇ ಶರ್ತು ಹಿಡಿಯದೆ ನೇಮಿಸಿದರೆ,

ಸಂಕಾರದ ಉದಾರ ಅಂತಃಕರಣವು ಸ್ಫುಟವಾಗಿ ಪರ ಕಾರಣಕ್ಕೆ ಒಂದು ಪ್ರಕಾರದ ಸ್ಥಿತಿಯಾವು ಪ್ರಾಪ್ತವಾಗುವದು. ಲೋಕಪಕ್ಷದ ಬೆಂಬಲವಿಲ್ಲದಿರುವ ಭಾರತೀಯ ಪ್ರತಿನಿಧಿಗಳ ಹೇಳಿಕೆಗೆ ದಕ್ಷಿಣ ಆಫ್ರಿಕೆಯವರು ಬಗ್ಗಬೇಕಾಗುವದು. ಮಹಾತ್ಮರು ಹೇಳಿದಂತೆ, ಹೀನಬಂಧ ಎಂದವ್ಯವಹಾರದವರಿಗೂ ಈ ಪರಿಷತ್ತಿನಲ್ಲಿ ಸೇವಿಸಲು ವಿಶೇಷ ಕೆಲಸವಿದೆ. ಪರಿಷತ್ತಿನ ನಿರ್ಣಯದ ಮೇಲಿಂದ ನಾವು ಹಿಂದುಳಿಯೋಗದೇ ನಮ್ಮ ಕೆಲಸವನ್ನು ಮಹಾತ್ಮರು ವಿಧಿಸಿದಂತೆ ಜಾಗ್ರತೆಯಿಂದ ನಡಿಸಿ, ದಕ್ಷಿಣ ಆಫ್ರಿಕೆಯೊಳಗಿನ ಭಾರತೀಯರ ಮೇಲಿನಗದ ಸಂಕಟಪರಂಪರೆಯನ್ನು ಪರಿಹರಿಸಿಕೊಳ್ಳಲು ಮುಕ್ತ ಸಾಹಸ ಮಾಡಬೇಕಾಗಿ ನಮ್ಮ ವಿಜ್ಞಾಪನೆ ಇದೆ. ಪರಿಷತ್ತಿನ ಪ್ರತಿನಿಧಿಗಳ ಕಾರ್ಯದ ಮೇಲೆಯೇ ದಕ್ಷಿಣ ಆಫ್ರಿಕೆಯಲ್ಲಿಗಣ ಭಾರತೀಯರ ಭವಿಷ್ಯತೆಯು ಸರ್ವಥಾ ಅವಲಂಬಿಸಿರುತ್ತದೆಂಬದನ್ನು ನಾವರಿತುಕೊಂಡು ದುಡಿದರಾಯಿತು. ಸದ್ಯಕ್ಕೆ ಇಷ್ಟೇ ಸಾಕು.

ಸ್ಫುಟ ಸೂಚನೆಗಳು.

೧. ತುರ್ಕಸ್ಥಾನ ಪ್ರದೇಶದ ಸ್ಥಿತಿಯು ಚಿಂತಾಜನಕವಾಗಹತ್ತಿದೆ. ದಾರ್ಡನೇಲ್ಸ ಸಾಮುದ್ರಧುನಿಯು ತುರ್ಕಸ್ಥಾನದ ಮರ್ಮ ಪ್ರದೇಶವಾಗಿದ್ದು, ಅದರೊಳಗಿಂದ ಕಪ್ಪು ಸಮುದ್ರದಲ್ಲಿ ಸೇರಿದರೆ, ಕಪ್ಪುಗಳಿಗೆ ಕಾನಸ್ಟಾಂಟಿನೋಪಲ್ ಪಟ್ಟಣವನ್ನು ನಿಮಿಷಾರ್ಧದಲ್ಲಿ ಕೃಪಕವಾಡಿಕೊಂಡು ಇಡೀ ತುರ್ಕಸ್ಥಾನದ ಮರ್ಮಘಾತ ಮಾಡಬಹುದು. ತುರ್ಕಸ್ಥಾನದ ಮುರ್ಕವಸ್ಥರೆ ಇಟಾಲಿ ಹಾಗು ಗ್ರೀಸ ದೇಶದೊಳಗಣ ನಿರಂಕುಶ ಪ್ರಭುಗಳಾದ ಮುಸೋಲಿನಿ ಹಾಗು ವೆನಿಗೋಲಾಸರವರು ತುರ್ಕಸ್ಥಾನವನ್ನು ಹಣ್ಣಿಗೆ ತಂದು ಮುಸ್ತಾಫಾ ಕೆಮಾಲ ಪಾಶಾರವರ ಅಧಿರಾಜ್ಯವನ್ನು ನಷ್ಟಪಡಿಸಿ, ಸ್ವಸಾಮ್ರಾಜ್ಯವನ್ನು ಅಭಿವೃದ್ಧಿಗೈಯುವ ತಯಾರಿಯಲ್ಲಿರುವರು. ಇಟಾಲಿಯು ಪೂರ್ವದಿಕ್ಕಿನ ಆಡ್ರಿಯಾಟಿಕ್ ಸಮುದ್ರವು ದಾರ್ಡಾನೇಲ್ಸ ಸಾಮುದ್ರಧುನಿಯ ವರೆಗೆ ಹರಿಯುತ್ತಿದ್ದು ಗ್ರೀಕದ ವೆನಿಗೋಲಾಸ್‌ರವರ ಹೊಗನ ಮತ್ತಿಂದ ಈ ಸಮುದ್ರದ ಮೇಲಿನ ಸಂಪೂರ್ಣ ಅಧಿಕಾರವನ್ನು ಇಟಾಲಿಯು ಮುಸೋಲಿನಿಯವರು ಪ್ರಾಪ್ತಮಾಡಿಕೊಂಡಿರುವರು. ಮೇಲಾಗಿ ಗ್ರೀಕರು ದಾರ್ಡನೇಲ್ಸ ಸಾಮುದ್ರಧುನಿಯ ಮುಖದಲ್ಲಿರುವ ದ್ವೀಪಗಳ ಹಿಡಿದಿರು. ಅವುಗಳಲ್ಲಿ ಸೈನ್ಯವನ್ನು ಸಂಗ್ರಹಿಸಿ ತುರ್ಕರ ಮೇಲೆ ಸಾಗಿಹೋಗುವ ತಯಾರಿಯನ್ನು ಅವರು ಮಾಡಿರುವರು. ಹೀಗೆ ಇಟಾಲಿಯನ್ನರೂ, ಗ್ರೀಕರೂ ಒತ್ತಟ್ಟಿಗೆ ಸೇರಿ, ದಾರ್ಡಾನೇಲ್ಸ ಸಾಮುದ್ರಧುನಿಯ ಮೇಲೆ ಸಾಗಿಹೋಗುತ್ತಿರುವಾಗ ಅವರನ್ನಡ್ಡಗಟ್ಟಲು ಸಾಮರ್ಥ್ಯವಂತವಿಷ್ಟ. ರಾಷ್ಟ್ರಗಳು ಫ್ರೆಂಚರು ಹಾಗು ಬ್ರಿಟಿಶರು. ಫ್ರೆಂಚರ ಗೃಹಸ್ಥಿತಿಯು ಸ್ಥಿರ ಕೆಟ್ಟಿದೆ. ಆತಂಕರಭಾರವನ್ನು ನಡಿಸುವದಕ್ಕೆ ಅವರಿಗೆ ಹಣವಿಲ್ಲದೇ ಪೇಚಾಟ ನಡೆದಿದೆ. ಬ್ರಿಟಿಶರಿಗೆ ಮತ್ತೊಂದು ಉಪಾಧಿಯು ಜನಿಸುತ್ತಿದೆ. ಆಕ್ಸ್‌ಫರ್ಡಲಿಯದ ಕೆಳಗಿನ ಕಾಲೋನಿಗಳಲ್ಲಿ ಅಸಮಾಧಾನ ಹೆಚ್ಚಾಗಿ ಅಲ್ಲಿ ಯಾವಾಗ ಸಂಪು ಆಗುವದೇನೋ ಎಂದು ದೊಡ್ಡ ಭೀತಿ. ಸಂಪು ಆದರೆ ಬ್ರಿಟಿಶರ ಸೊಂಟಮುರಿಯಿತು; ಇಟಾಲಿಯನ್-ಗ್ರೀಕರ ಕೂಟ್ಟ ಪುಷ್ಟದಲ್ಲಿದೆ. ಇದೇ ಸಂಧಿಯನ್ನು ಇಬ್ಬರೂ ಒತ್ತಟ್ಟಿಗೆ ತುರ್ಕಸ್ಥಾನದ ಮೇಲೆ ಸಾಗಿಹೋದರೆ, ತುರ್ಕರು ದಾರ್ಡನೇಲ್ಸ ಸಾಮುದ್ರಧುನಿಯನ್ನು ರಾಷ್ಟ್ರಸಂಘದ ಅನಷ್ಠಾನ ಹರಿಸಿ, ನಿಶ್ಶಸ್ತ್ರವಾಗಿಟ್ಟ ಫಲ ಉಂಡರಾಯಿತು. ಈ ಸ್ಥಿತಿಯನ್ನು ಮುಸ್ತಾಫಾ ಕೆಮಾಲ ಪಾಶಾರವರು ಅರಿತಿದ್ದು, ಅವರು ಈಗಿನಿಂದಲೇ ಸಾಮುದ್ರಧುನಿಗಂಟ ಭದ್ರ ಕೋಟೆಗಳನ್ನು ಕಟ್ಟಿಸುತ್ತಿರುವರಾಗಿ ಸುದ್ದಿ. ಅಂತು ತುರ್ಕಸ್ಥಾನದ ಪ್ರದೇಶವು ರಣಭೂಮಿಯು ಯುದ್ಧಕ್ಷೇತ್ರವಾಗುವದೆಂದು ಗ್ರಹಸ್ಥಿತಿಯ ಮೇಲಿಂದ ಹೇಳಬಹುದು.

---

೨. ಸಾಬರಮತಿಯ ಒಡಂಬಡಿಕೆಯಿಂದ ಸ್ವರಾಜ್ಯಪಕ್ಷದಲ್ಲಿ ವಿಶೇಷ ಗಡಿಬಿಡಿಯುಂಟಾಗಿದೆ. ಮದ್ರಾಸ ಕೋಲಾಹಲಕ್ಕೆ ರಾಷ್ಟ್ರೀಯ ಪಕ್ಷವು ಕಟ್ಟಿಬಗ್ಗಿಕೊಂಡು ಇಡೀ ರಾಷ್ಟ್ರೀಯ ಸಭೆಯನ್ನು ಅಧಮಾವಸ್ಥೆಗಿಳಿಸಿದರೆಂದು ಮುದ್ರಾಸ ಮುಂತಾದ ಪ್ರಾಂತಗಳಲ್ಲಿ ದೊಡ್ಡದೊಂದು ಗಲಭೆ. ಈ ಕುರಿತು ಕಾಮಸ್ತರಿಗೂ ಪಂಡಿತ ಮೋತೀಲಾಲರು "ತಾಳ್ಮೆ! ತಾಳ್ಮೆ!! ತಾಳ್ಮೆ!!!" ಎಂದು ಮೊರೆಯಿಟ್ಟು ಹೇಳಿ ಅಖಿಲ ಭಾರತೀಯ ಕೊಂಗ್ರೆಸ ಕಮೀಟಿಯ ಅಧಿವೇಶನದ ವರೆಗೆ ಬಾಯಿಗೆ ಬೀಗಹಾಕಲು ಬೋಧಿಸಿರುವರು. ಪಂಡಿತ ಮೋತೀಲಾಲರವರು ಮಾಡಿದ ವಿವರವನ್ನು ವಾಚಕರೆಲ್ಲರೂ ಪರಾಂಬರಿಸಬೇಕೆನ್ನುತ್ತ. ಪ್ರಚಲಿತ ಮೊಂಟೆಗ್ಯೂ ಸುಧಾರಣೆಯಲ್ಲಿ ದಿವಾನಪದಗಳನ್ನು ಸ್ವೀಕರಿಸಿ ಆಂಗ್ರೆಜರ ಸಹಕಾರಿಗಳಾಗಲು ಈ ಒಡಂಬಡಿಕೆಯಿಂದ ಇಂಬು ಕೊಟ್ಟಂತಾದಿಲ್ಲ. ಪ್ರತಿ ಸಹಕಾರಿಗಳಿಗೆ ರಾಷ್ಟ್ರೀಯ ಸಭೆಯು ಸ್ವಾಭಿಮಾನಶೂನ್ಯವಾಗಿ ಕಲಿಬಗ್ಗಿಸಿತೆಂದು ಆಕ್ಷೇಪಿಸುವವರು ಈ ಸ್ಪಷ್ಟೀಕರಣವನ್ನು ಲಕ್ಷ್ಯಕ್ಕೆ ತರತಕ್ಕದ್ದು. ಹಾಗಾದರೆ ಅಧಿಕಾರಸ್ಥಾನಗಳನ್ನು ಅಂಗೀಕರಿಸುವ ಅಧಿಕಾರವು ರಾಷ್ಟ್ರೀಯ ಸಭೆಯವರಿಗೆ ಈ ಒಡಂಬಡಿಕೆಯಿಂದ ಎಂದು ಪ್ರಾಪ್ತವಾಗುತ್ತದೆ, ಎಂದು ವಾಚಕರು ಪ್ರಶ್ನಿಸಬಹುದು. ಇದು ಮೃಗಜಲವೇನು? ಎಂದೂ ವಾಚಕರು ಕೇಳಬಹುದು. ಅದಕ್ಕೇ ಮೋತೀಲಾಲರು ಸ್ಪಷ್ಟೀಕರಣ ಮಾಡಿರುವರು. ಸಂಪೂರ್ಣ ಸ್ವರಾಜ್ಯಾಧಿಕಾರಪ್ರಾಪ್ತಿ ಹಾಗು ಆ ಸ್ವರಾಜ್ಯ ಪ್ರಾಪ್ತಿಯ ಏಕ್ಯದ ದಾರಿ ಇವುಗಳಲ್ಲಿ ಭೇದವಿರುತ್ತದೆಂದು ಎಲ್ಲರೂ ಒಪ್ಪತಕ್ಕಂಥ ಮಾತು. ಸಂಪೂರ್ಣ ಸ್ವರಾಜ್ಯಾಧಿಕಾರಗಳನ್ನು ಪಡೆಯುವುದಕ್ಕೆ ಸ್ವರಾಜ್ಯ ಕಾಯಿದೆಯಂತೆ ಈಗಲೇ ಕೊಡಲು ಅನುಕೂಲವಿಲ್ಲದಿದ್ದಾಗ್ಯೂ, ಈ ಕಾಯಿದೆಯನ್ವಯ ಮಾಡಿದ ನಿಯಮಗಳನ್ನು ತಿದ್ದುಪಡಿಮಾಡಿ, ದಿವಾನರಿಗೆ ಸಾಕಷ್ಟು ಸ್ವತಂತ್ರತೆಯನ್ನು ಕೊಡಬಹುದು. ಅವರ ಖಾತೆಗಳ ಜವಾಬ್ದಾರಿಯನ್ನು ಅವರೇ ತಯಾರಿಸಬಹುದು. ಅವರ ಖಾತೆಗೆ ಬೇಕಾಗುವಷ್ಟು ಹಣವನ್ನು ಅವರ ಹೇಳಿಕೆಯಂತೆ ಖರ್ಚು ಮಾಡುವ ಗೊಂದಲಗಳಾಗಿದೆ, ಪ್ರತ್ಯೇಕ ಮಾಡಿದ ಖಾತೆಗಳಿಗೆ ಪ್ರತ್ಯೇಕವಾಗಿ ಕೊಟ್ಟ ಹಣವನ್ನು ಪ್ರತ್ಯೇಕವಾಗಿ ನೇಮಿಸಿದ ದಿವಾನರು ತಮಗೆ ಇಷ್ಟವಿದ್ದಂತೆ ಖರ್ಚುಮಾಡುವಷ್ಟು ಅಧಿಕಾರವನ್ನು ಈ ಕಾಯಿದೆಯ ಪ್ರಕಾರವೇ ನಿಯಮಗಳ ತಿದ್ದುಪಡಿಯಿಂದ ಸರಕಾರವು ಕೊಡಬಹುದು. ಇಂಥ ಸ್ಥಿತಿಯಲ್ಲಿ ದಿವಾನರನ್ನು ಕಾಯಿದೆ ಕೌನ್ಸಿಲುಗಳಿಗೆ ಸ್ವಾಧೀನರಾಗಿ ನೇಮಿಸಬಹುದು. ಅಂದರೆ ಕಾಯಿದೆ ಕೌನ್ಸಿಲಿನ ಬಹುಮತದ್ದರೆ ದಿವಾನರ ದಿವಾನಾಧಿಕಾರವು ನಡೆಯುವದು. ದಿವಾನರು ಬಹುಮತದ ಅನುಮತಿಯಂತೆ, ಬಹುಮತಕ್ಕೆ ಇಷ್ಟವಾಗುವಂತೆ ತಮಗೆ ಪ್ರಾಪ್ತವಾದ ನಿಧಿಯನ್ನು ಖರ್ಚುಮಾಡಿ ರಾಷ್ಟ್ರಸಂವರ್ಧನ ಖಾತೆಗಳಿಂದ ರಾಷ್ಟ್ರಸಂವರ್ಧನ ಮಾಡುವರು. ದಿವಾನರಿಗೆ ಪ್ರಾಪ್ತವಾಗುವ ಸ್ವಾಯತ್ತಾಧಿಕಾರವು ಸಂಪೂರ್ಣ ಸ್ವರಾಜ್ಯವಲ್ಲದಿದ್ದರೂ ಸ್ವರಾಜ್ಯಮಂದಿರಕ್ಕೆ ಹೋಗುವ ಮೆಟ್ಟಿಗಿನ ದಾರಿಯೆಂದು ಪಂಡಿತ ಮೋತೀಲಾಲರವರು ಅಭಿಪ್ರಾಯಪಟ್ಟು ಇಂಥ ಸ್ಥಿತಿಯಲ್ಲಿ ರಾಷ್ಟ್ರೀಯ ಸಭೆಯವರಿಗೆ ರಾಜ್ಯಾಧಿಕಾರಗಳನ್ನು ಪಡೆಯುವ ಅಧಿಕಾರವಿದೆಂದು ಒಪ್ಪಿ ಸಾಬರಮತಿಯಲ್ಲಿ ಒಡಂಬಡಿಕೆಗೆ ಸಹಿ ಹಾಕಿರುವರು. ಯಾವದೇ ಪ್ರಕಾರದಿಂದ ಪ್ರತಿಸಹಕಾರಿಗಳಾಗಲೀ, ರಾಷ್ಟ್ರೀಯ ಸಭೆಯವರಾಗಲೀ ರಾಷ್ಟ್ರತತ್ವಗಳಿಂದ ಚ್ಯುತರಾಗಲಿಲ್ಲದು ಸಮಸ್ತರೂ ತಿಳಿದಿರಲಿ; ಮುಕ್ತ ಒಂದು ಮಾತು. ದಿವಾನರಿಗೆ ಸಾಕಷ್ಟು, ದೇಶಷ್ಟು ಅಧಿಕಾರಕೊಟ್ಟರೂ, ರಾಷ್ಟ್ರೀಯ ಸಭೆಯವರು ಸಾಬರಮತಿಯ ಒಪ್ಪಂದದಂತೆ ಅಧಿಕಾರಸ್ಥಾನಗಳನ್ನಾಕ್ರಮಿಸಲು ಬದ್ಧರಾಗಬೇಕಾದರೆ, ಇನ್ನೂ ಒಂದು ಸ್ಪಷ್ಟೀಕರಣಾಗಬೇಕು. ಆ ಪ್ರಾಂತದಲ್ಲಿ ಆರಿಸಿದ ನಡಿಸುತ್ತಿರುವ ಅತ್ಯಾಚಾರಗಳೂ ಪ್ರಜಾಪೀಡನೆಗಳೂ ನಷ್ಟವಾಗಬೇಕು. ಪಂಡಿತ ಮೋತೀಲಾಲರ ಉದಾಹರಣೆಯನ್ನೇ ಕೊಡುವೆವು. ಬಂಗಾಲ ಪ್ರಾಂತದಲ್ಲಿ ದಿವಾನರಿಗೆ ಸ್ವರಾಜ್ಯಪ್ರಾಪ್ತವಾಯಿತೆಂದು ಕಲ್ಪಿಸುವಾ. ಆದರೂ ರಾಷ್ಟ್ರೀಯ ಸಭೆಯವರು ಸ್ವಾಭಿಮಾನದಿಂದ ದಿವಾನಪದವನ್ನು ಸ್ವೀಕರಿಸಬೇಕಾದರೆ ಬಂಗಾಲಿಕೆಯ ಕಾನೂನಿನನ್ವಯ ಪ್ರತಿಬಂಧಿಸಿದ ದೇಶಸೇವಕರನ್ನು ಒಂದೇ ಬಿಡುಗಡೆ ಮಾಡಬೇಕು; ಅಥವಾ ಅವರು ಅಪರಾಧಿಗಳಿದ್ದಲ್ಲಿ ನ್ಯಾಯದೆಯಂತೆ ಅವರ ವಿಚಾರವಾಗಿ ಅವರಿಗೆ ಶಿಕ್ಷೆಯಾಗಿ ಸೆರೆಯಲ್ಲಿಡಬೇಕು. ಅವರ ವರೆಗೆ ರಾಷ್ಟ್ರೀಯ ಸಭೆಯವರು ದಿವಾನ ಅಧಿಕಾರಗಳನ್ನು ಒಪ್ಪಿಗೊಳ್ಳಬಾರದು. ಇದಕ್ಕೆ ಸಂಬಂಧಿಸಿದ ಈ ಸ್ಥಿತಿಯಲ್ಲಿ ಸಹಯೋಗಿಗಳೇನು ಬೇಕು? ಸರಕಾರದ ಅಂತಃಕರಣವು ಪ್ರಜಾನುರಂಜಕವಾದ ದೆಸೆಯಲ್ಲಿ ಒಲವೆಂದು ನಾವು ತಿಳಿಯಬಹುದಲ್ಲವೇ? ಪ್ರಜಾನುರಂಜನದ ಲಕ್ಷಣ ತೋರಿಸಿದ್ದಲ್ಲಿ, ಮಹಾತ್ಮರು ಕೊಟ್ಟ ವಚನದಂತೆ ಸ್ವಾಭಿಮಾನ ಪೂರ್ವಕವಾಗಿ ಅಳಿಕಾರರೊಡನೆ ಹಸ್ತಾಂದೋಲನ ಮಾಡಲು ನಾವು ತಯಾರಾಗದೆ ಇಲ್ಲವೇ? ರಾಷ್ಟ್ರೀಯ ಸಭೆಯವರು ಪ್ರಕೃತಿ ಭೇದದಂತೆ ಸಾಬರಮತಿಯ ಒಡಂಬಡಿಕೆಯು ಗ್ರಹಿಸಿಮಾಡಿಕೊಂಡುದವನ್ನು ಸಾರುವದರಿಂದ ರಾಷ್ಟ್ರದಲ್ಲಿ ಬುದ್ಧಿಭೇದವುಂಟಾಗಿ ಸಂಘಟನೆಗೆ ತೊಡಕುಗಳುಂಟಾಗುತ್ತವೆ. ಇದನ್ನು ಸಮಸ್ತರೂ ಲಕ್ಷದಲ್ಲಿಟ್ಟು ದೇಶ್ಯರ ದೃಷ್ಟಿಯಿಂದ ತೀಕ್ಷ್ಣವ ಮುಂದೆ ಅಖಿಲ ಭಾರತೀಯ ಕಾಂಗ್ರೆಸ ಕಮೀಟಿಯ ನಿರೀಕ್ಷಣೆ ಮಾಡಿರುವದು ಉತ್ತಮ! ಪಕ್ಷವು ಕೋಪನಾಯಕರು ಕೈಕೊಂಡ ಯಾವದೇ ನಿರ್ಣಯದ ಮೇಲೆ ಗಾಬರಿಯಾದ ಪ್ರತಿಕೂಲ ಮತಪ್ರದರ್ಶನ ಮಾಡದೆ ತಾಳ್ಮೆ ಹಿಡಿಯುವದಾಗಿ ನಮ್ಮದೊಂದು ಸಾಮಾನ್ಯ ವಿಜ್ಞಾಪನೆ.

---

೩. ಕೊಪ್ಪನವರದ ಹಿರಿಯ ಲೋಕಲಬೋರ್ಡಿನ ಅಲೆಕ್ಷನದಲ್ಲಿ ಕೆಲವು ಕಾರ್ಯಕರ್ತೃಗಾರರು ನಾಕವಿಷ

'ದೇಶಭಕ್ತ'ರೆಂದು ಬಿರುದು ಪಡೆದೊಂದು, ಅವರು ಇದ್ದವರಿಂದಲೇ ಹೊನ್ನಾವರದ ಜಿಲ್ಲಾ ಕಾಂಗ್ರೆಸ್ಸಿನ ತಾಲೂಕ ರಾಷ್ಟ್ರ ಪ್ರತಿಷ್ಠೆಯನ್ನು ಭರತ ಖಂಡಕ್ಕೆ ಸಾರಿದೆಂದು 'ಕ್ರಾನಿಕಲ್' ಪತ್ರಿಕೆಯ ಪ.ತ.ದಿ ಯಿಂದ ಊದಿರುವರು. ಇನ್ನೊಂದೆಡೆಯಲ್ಲಿ "ಸುವರ್ಣ ಮಹೋದಾರರು" ಕೊಟ್ಟ ಕಾರಣಗಳನ್ನು ಪ್ರಕಟಿಸಿರುವೆವು. ಅವುಗಳಲ್ಲಿ ಕೆಲವು ಕಾರಣಗಳ ಕುರಿತು ಸ್ಪಷ್ಟೀಕರಣ ಮಾಡುವದೆ ಸಂಬಂಧಪಟ್ಟವರಿಗೆ ಇಂಬುಗೊಡುವದು ಉಚಿತವು. ಆದರಿಂದ ಆ ಕುರಿತು ಇಂದಿಗೆ ನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲನುವಿಲ್ಲ. ಸದ್ಯಕ್ಕೆ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮೀಟಿಯ ಚಿಕ್ಕಶಬಾಸದರಾದ ಶ್ರೀ| ಸಿದ್ಧರಾವ ಪೂಜಾರರವರು ಅದ್ವಾತಿ ಪ್ರಕಟಿಸಿದ ಅನುಭವಗಳನ್ನು ಉಲ್ಲೇಖಿಸುವೆವು.

> ನಾನು ತಮ್ಮ ಜಿಲ್ಲೆಯಲ್ಲಿ ತಿರುಗಾಡಹತ್ತಿ ಮೂರು ವಾರಗಳಾದವು. ಖಾದಿಯ ಹಾಗು ಕಾಂಗ್ರೆಸಿನ ಲೆಕ್ಕ ಪತ್ರಗಳನ್ನು ಸಂಪಾದಿಸಿ ನೋಡಿ, ಅದರ ಸಂಬಂಧವನ್ನು ಅವರ ಕಾರ್ಯಕರ್ತರ ಎದೆ ಒಡೆದು ಹೋಗಿಬಿಟ್ಟಿತು. ಕಾಂಗ್ರೆಸಿನ ವಿಷಯವಾಗಿ ಕಮೀಟಿಗಳು ಯಾವವೂ ಅಸ್ತಿತ್ವದಲ್ಲಿಲ್ಲ. ಗೋಡೆಗಳಲ್ಲಿ ಮುಚ್ಚಿದ ಆಫೀಸಿನ ಬಾಗಿಲುಗಳು ಎಲ್ಲಿಯೂ ತೆರೆದಿಲ್ಲ. ಲೆಕ್ಕಪತ್ರಗಳಲ್ಲಿ ಯಾರೂ ನೋಂದು ಮಾಡಿರಲಿಲ್ಲ. ಸಂಸ್ಥೆಯ ಒಂದು ಹಣವನ್ನು ವಸೂಲ ಮಾಡಿಲ್ಲ. ಹೊಸ ವರ್ಷವು ಪ್ರಾರಂಭವಾಗಿ ೪ ತಿಂಗಳಾಯಿತು. ಎಲ್ಲಿಯೂ ಅದರ ಗಲಾಟೆಯೇ ಇಲ್ಲ. ಲೋಕಲ್ಬೋರ್ಡ ಚುನಾವಣೆಗೆ ಮಾತ್ರ ಕೆಲವರು ತಾವು ಕಾಂಗ್ರೆಸ ಪಕ್ಷದಿಂದ ನಿಂತವರೆಂದು ಹೇಳಿ ಆರಿಸಿಬಂದರಂತೆ! ಕೆಲವರನ್ನು ಕಾಂಗ್ರೆಸ ಪಕ್ಷದವರು ವಿರೋಧಿಸಿದರಂತೆ! ಗ್ರಾಮ ಯಾ ತಾಲೂಕು ಯಾ ಜಿಲ್ಲೆಯ ಕಮೀಟಿಗಳೇ ಅಸ್ತಿತ್ವದಲ್ಲಿಲ್ಲ. ಅಂದ ಬಳಿಕ ಅವರ ಪ್ರತಿನಿಧಿತ್ವವೂ, ವಿರೋಧಿಗಳ ವಿರೋಧವೂ ಪ್ರಮೋದಜನಕವಾದವುಗಳಲ್ಲವೆಂದು ನನ್ನ ಅಲ್ಪಬುದ್ಧಿಗೆ ತೋರುತ್ತದೆ. ಅವು ವ್ಯಕ್ತಿಪರವಾದವುಗಳೆಂದು ಹೇಳಲು ಪ್ರತ್ಯವಾಯವಿಲ್ಲ."

ಶ್ರೀ| ಸಿದ್ಧರಾವ ಪೂಜಾರರವರು ಸರ್ಕ್ಯುಲರ್ ಕಳೆಯಿಂದ ಪ್ರಕಟಿಸಿದ ಅಭಿಪ್ರಾಯವಿದು. 'ಕ್ರಾನಿಕಲ್' ಪತ್ರಿಕೆಯು ತನ್ನ ಸಾರಿಕೊಂಡ ಹೊನ್ನಾವರದೊಳಗಿನ "ಸುವರ್ಣ ದೇಶಭಕ್ತರು" ನಡೆಸಿದ ಚಾವಳಿಯಲ್ಲಿ ವ್ಯಕ್ತಿವಿಷಯವಾದದ್ದೆಂಬ ನಮ್ಮ ಹೇಳಿಕೆಗೆ ಶ್ರೀ| ಸಿದ್ಧರಾವ ಪೂಜಾರರಂಥ ಪ್ರಾಮಾಣಿಕರು ಕಲೆಯಾಗಿ ಇಲ್ಲಿಯ ದೇಶಭಕ್ತರ ನಿಜರೂಪವನ್ನು ಹೊರಗೆ ತರುವರು. 'ದೇಶಭಕ್ತರು' ಗೋಮುಖವ್ಯಾಘ್ರರನ್ನು ನಾವು ಒಪ್ಪಿಕೊಳ್ಳುವದು ತಪ್ಪೆಂದು ದೇಶಭಕ್ತರಿಗೆ ಹೇಳುವೆ. ನಮ್ಮ ಹಕ್ಕಿ ಗೊಂಡುಹಾದಿದ್ದ ಉಪಕಾರದ ಮಾಗ್ರವು: ಶ್ರೀ| ತಡಿಯವರು ಸೋತದ್ದು- ಸಾಧಕವಾಗುವದು.

ಸ್ಥಾನಿಕ ವೃತ್ತಾಂತ.

ಕುಮಟಾ— ಹಳೆ, ಬಿಸಿಲು ತಾಪ, ಮೋಡ ಬೀಳುತ್ತವೆ.

ತಾಲೂಕ ಲೋಕಲ್ಬೋರ್ಡಿಗೆ ಶ್ರೀ ಕಂಠರಾಜ ಬಿದ್ದಾ ಶೇಟ, ರಾ| ಪೋಲಿಸಪ್ಪಾ ದೇವಪ್ಪ ನಾಯ್ಕ ಇವರುಗಳು ಮಾಮಲೇದಾರರನ್ನು ಸರಕಾರವು ನೇಮಿಸಿದೆ.

ಶ್ರೀ ದತ್ತ ಮಂಡಳಿಯವರು 'ಬಾಲ ಶಂಕರಾ' ಪ್ರಯೋಗವನ್ನಾಡಿ ಬಂದ ಉತ್ಪನ್ನವನ್ನು ಶ್ರೀ ಕಾಮೇರಿ ಕಾಮಾಕ್ಷಿ ದೇವಸ್ಥಾನದ ಕಟ್ಟಡ ನಿಧಿಗೆ ಕೊಟ್ಟರು.

ಗೋಕರ್ಣದ ಸುಗ್ಗಿಯ ಉತ್ಸವವು ಬಜಾರ-ಹುಲ್ಸೇಕೇರಿ ಪಕ್ಷಗಳಲ್ಲಿ ಸಂಧಾನವಾದ್ದರಿಂದ ನಿರ್ವಿಘ್ನತೆಯಿಂದ ನೆರವೇರಿತು.

ನಾಸಿಕದ ಸುಪ್ರಸಿದ್ಧ ರಾ| ಕೃಷ್ಣಶಾಸ್ತ್ರಿ ದೇವಧರ ಇವರ ಆಯುರ್ವೇದಿಕ ಔಷಧಾಲಯದಲ್ಲಿ ೫ ವರುಷಗಳ ವರೆಗೆ ಅಭ್ಯಾಸ ಮಾಡಿ ಉತ್ತೀರ್ಣವಾದ ಒಂದ ಶ್ರೀ| ಗಜಾನನ ಅಪ್ಪುಭಟ್ಟ ವೇದೇಶ್ವರರವರು ಗೋಕರ್ಣದಲ್ಲಿ ಆಯುರ್ವೇದಿಕ ಔಷಧಾಲಯವನ್ನು ತೆರೆದಿರುವರು. ಇವರ ಚಿಕಿತ್ಸಾ ಕ್ರಮವು ಲೋಕಪ್ರಿಯವಾಗುತ್ತಿದೆ.

ಶ್ರೀ| ಗಂಗಾಧರರಾವ ದೇಶಪಾಂಡೇ, ಶ್ರೀನಿವಾಸರಾವ ಕೌಜಲಗಿ, ರಂಗನಾಥ ದಿವಾಕರ ಮೊದಲಾದ ಕರ್ನಾಟಕ ಪ್ರಮುಖರು ಇಲ್ಲಿ ನಾಳೆ ಬರಲಿರುವರು. ನಾಳೆ ಸಾಯಂಕಾಲ ೪ ಘಂಟೆಗೆ ಶ್ರೀ ಕಾಂಚೇರಿ ಕಾಮಾಕ್ಷಿ ದೇವಾಲಯದಲ್ಲಿ ಜಾಹೀರ ಸಭೆ ನೇರುವದಿದೆ. ಸಮಸ್ತರೂ ಬಂದು ಲೋಕನಾಯಕರ ಉಪನ್ಯಾಸದ ಲಾಭ ಪಡೆಯಬೇಕಾಗಿ ಪ್ರಾರ್ಥನೆ.

ಪತ್ರಸ್ವೀಕಾರ.

'JUSTICE' — Too late for this issue.

ಸಾಭಾರ ಸ್ವೀಕಾರ.

ರಂಗಭೂಮಿ—ನಿಜ ಚೈತ್ರ ಮಾಸದ ಸಂಚಿಕೆ. ಸಂಪಾದಕ ಮತ್ತು ಪ್ರಕಾಶಕ- ಶ್ರೀ| ದತ್ತಾತ್ರಯ ಕೃಷ್ಣ ಭಾರದ್ವಾಜ. ಅನಂದಾಶ್ರಮ, ಬಸವನಗುಡಿ ಬೆಂಗಳೂರು. ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ರೂಪಾಯಿ ೩ ೦-೦.

ಜಯಕರ್ನಾಟಕ—ಪಡೆದ ಹುಣ್ಣಿವೆಯ ಸಂಚಿಕೆ. ಸಂಪಾದಕ ಮತ್ತು ಪ್ರಕಾಶಕ-ಶ್ರೀ| ಆಲೂರ ವೆಂಕಟರಾಯರು. ಧಾರವಾಡ. ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ರೂಪಾಯಿ ೫ ೮-೦.

ಶಿರಸಿ— ಹವೆ ಹನಾಗಿದೆ. ಶ್ರೀ ಮಾರಿಕಾಂಬಾ ಹೈಸ್ಕೂಲಿನಲ್ಲಿ ೭ನೇ ಇಯತ್ತೆಯನ್ನು ಪ್ರಾರಂಭಿಸುವ ಸಮಾರಂಭವು ಜಿಲ್ಲಾಧಿಕಾರ ಅಧ್ಯಕ್ಷತೆಯಲ್ಲಿ ನಿರ್ವಿಘ್ನತೆಯಿಂದ ನೆರವೇರಿತು. ಅಧ್ಯಾಪಕರಿಗೂ ಬಾಲಕರಿಗೂ ನಡೆದ ಕಲಹವು ನಿವಾರಣೆಯಾದ್ದರಿಂದ ಸಮಸ್ತ ಅಧ್ಯಾಪಕವರ್ಗವು ಸಮಾಧಾನದ ಉತ್ಸಾಹದಿಂದ ಸೇರಿಕೊಂಡಿತು. ವಿದ್ಯಾರ್ಥಿಗಳಿಗೆ ಅನಾನುಕೂಲಗಳು ಹಚ್ಚಲ್ಪಟ್ಟವು.

ಇಲ್ಲಿ ಎಲ್ಲಿಯೂ ಖಾದಿಯು ಕಾಣಿಸುವದಿಲ್ಲ. ಒಂದು ಅಂಗಡಿಯಲ್ಲಿ ಮಾತ್ರ ಮೂಲೆಯಲ್ಲಿ ಕೆಲ ಖಾದಿಯು ಭದ್ರವಾಗಿ ಇಡಲ್ಪಟ್ಟಿದೆ. ಅಂಗಡಿಕಾರರು ಖಾದಿಗೆ ಮುಂಭಾಗದಲ್ಲಿ ಸ್ವಲ್ಪ ಸ್ಥಳ ಕೊಟ್ಟರೆ ಖಾದಿ ಪ್ರಚಾರಕ್ಕೆ ಉತ್ತೇಜನ ಕೊಟ್ಟ ಪುಣ್ಯ ಬಂದೀತು!

ಟಪಾಲಿನ ಅವ್ಯವಸ್ಥೆ ಕೇಳಬೇಕು. ಇಲ್ಲಿಂದ ಹಾವೇರಿಗೆ ಟಾಂಗೆಗಳ ಮೇಲಿಂದ ಟಪಾಲ ಹೋಗುವಾಗ ಟಪಾಲನ್ನು ೩ ಘಂಟೆಗೆ ಕಟ್ಟುತ್ತಿದ್ದರು. ಮೋಟಾರು ಪ್ರಾರಂಭವಾದ ಬಳಿಕ ೫ ಘಂಟೆಗೆ ಟಪಾಲು ಗಂಟು ಕಟ್ಟಲಾರಂಭವಾಯಿತು. ಇತ್ತೀಚೆ ೪ ಘಂಟೆಗೇ ಟಪಾಲು ಕಟ್ಟಾಗುತ್ತದೆ. ಇದ್ದಾಗಿ, ಹಾವೇರಿಗೆ ಇಲ್ಲಿಂದ ಟಪಾಲು ಮುಟ್ಟುವ ಸಮಯವು ಮುಂಚಿನಂತೆ ಮಾರನೇ ದಿನ ೧೧ ಘಂಟೆಯು. ಟಪಾಲ ಗಾಡಿಗೇ! ಕುಮಟೆಯಿಂದ ಇತ್ತ ಬರುವ ಟಪಾಲಿಗೆ ೩ ದಿನ ತಗಲುತ್ತವೆ. ಟಪಾಲ ಪೇಟಿಗಳ ಕಾಲದಲ್ಲಿ ದಿನ ಬೆಳಗಾಗುವದರೊಳಗೆ ಟಪಾಲು ಸಿಗುತ್ತಿತ್ತು. ಮೋಟಾರಿನಿಂದ ಪತ್ರಕರ್ತರಿಗುಂಟಾದ ತೊಂದರೆಗಳಿವು. ಇತ್ತ ಕಡೆ ಟಪಾಲ ಅಧಿಕಾರಿಗಳು ಲಕ್ಷ್ಯಕೊಡಲಿ; ಟಪಾಲು ಪೇಟಿಗಳನ್ನು ಉದ್ಧರಿಸಲಿ.

ಕುಮಟೆಗೆ ಹೋಗುವ ಮಾರ್ಗವು ತೀರ ಕೆಟ್ಟಿದೆ. ನಡುಮಧ್ಯದಲ್ಲಿ ದೊಡ್ಡ ದೊಡ್ಡ ಕುಳಿಗಳು ಬಿದ್ದು ಪ್ರಯಾಣಿಕರಿಗೆ ಬಹಳ ಆಯಾಸವಾಗುತ್ತದೆ. ಕೆಲವೆಡೆ ಎರಡೂ ಬದಿಗಳಲ್ಲಿ ಕಲ್ಲು ಗುಂಡು ರಾಶಿ ಹಾಕಿರುವದರಿಂದ ಪ್ರಯಾಣಿಕರಿಗೂ ವಾಹನಗಳಿಗೂ ಅಪಾಯ ಸಂಭವಿಸುವ ಹಾಗಿದೆ. ಇತ್ತ ಕಡೆ ಇಂಜನಿಯರ ಖಾತೆಯವರು ಲಕ್ಷ್ಯಗೊಡಲಿ.

ಶ್ರೀ| ರುಂಬನಾಥ ದೇವರ ಭಟ್ಟ ಶಿಕ್ಷಕರಿಯವರು ಇಲ್ಲಿಯ ನಾಗರಿಕರ ಆಗ್ರಹದಿಂದ ಈ ವರ್ಷ ಮುಂಬಯಿ ಕಾಯಿದೆ ಕೌನ್ಸಿಲಿಗೆ ನಮ್ಮ ಜಿಲ್ಲೆಯ ಪ್ರತಿನಿಧಿಗಳಾಗಿ ನಿಲ್ಲಲಿಕ್ಕೆ ತಯಾರಿದ್ದೇವಾಗಿ ಪ್ರಾಂತಿಕ ಕಾಂಗ್ರೆಸ ಕಮೀಟಿಗೆ ತಿಳಿಸಿದ್ದಾರೆ.

ಚೆಂಡಿಯೆ— ಇಂದಿನ ವರೆಗೆ ಮಧ್ಯಸ್ಥ ಸ್ಥಳವೆಂದೆನಿಸುವ ಚೆಂಡಿಯೆಯು ಕನ್ನಡ ಶಾಲೆ ಸಮೀಪದಲ್ಲಿದ್ದ ಪೋಸ್ಟ ಆಫೀಸು ಅಲ್ಲಿಂದ ಸುಮಾರು ೧ ಮೈಲು ದೂರ ಹೋಗಿ ಸುಮಾರು ೩ ತಿಂಗಳಾದವು. ವಿಂಚೋಲಿ ಶಿರವಾಡ ಪೋಸ್ಟಿನ ಪೇಟೆಯಲ್ಲಿ ಸಹ ಅಗದೆ ಜನರ ಪೇಚಾಟ. ಹೋಗುವ ದಾರಿಯು ಮುಳ್ಳು ಕಲ್ಲುಗಳಿಂದ ತುಂಬಿದ್ದಿರುತ್ತದೆ. ಇದಲ್ಲದೆ ಅಶ್ಚರ್ಯದ ಸಂಗತಿಯೆಂದರೆ, ಚೆಂಡಿಯೆಯಲ್ಲಿದೇ ಪೋಸ್ಟ ಇನ್ಸಪೆಕ್ಟರರ ಮುಕ್ಕಾಂ ಇದ್ದಾಗ ಮಾಸ್ತರರು ಅಂಥ ತ್ರಾಸದಾಯಕ ಸ್ಥಳದಲ್ಲಿ ಒಯ್ಯುತ್ತಾರೆ. ಸದ್ಯಕ್ಕೆ ಪೋಸ್ಟಮನ್ನನು ಲೀವ ಇದ್ದಾನೆ. ಮಾಸ್ತರರು ಇನ್ನೊಬ್ಬರನ್ನು ನೇಮಿಸಿಕೊಂಡಿಲ್ಲ. ಈಗ ಮೂರು ನಾಲ್ಕು ದಿವಸಗಳಾದವು ಕಾಗದಪತ್ರಗಳು ಸರಿಯಾಗಿ ಸಿಗುತ್ತಿಲ್ಲ. ಜನರ ಪೇಚಾಟ!

ವೃತ್ತಸಾರ.

— ಇರಾಣ ದೇಶದ ರಾಜಧಾನಿಯಾದ ತೆಹರಾಣ ಪಟ್ಟಣದಲ್ಲಿ ರೇಝಾಖಾನರಿಗೆ ಪೇಹಲವಿಯೆಂಬಾಗಿ ಪಟ್ಟಾಭಿಷೇಕವಾಯಿತು. ಮುಸಲ್ಮಾನಿಯರೂ, ಮುಸಲ್ಮಾನೇತರರೂ ಸಮಾರಂಭಕ್ಕೆ ಭಕ್ತಿಯಾಗಿ ರಾಜನಿಷ್ಠೆಯನ್ನು ಪ್ರದರ್ಶಿಸಿ ಕಾಣಿಕೆಗಳನ್ನರ್ಪಿಸಿದರು.

— ಬಿಹಾರ ಪ್ರಾಂತಿಕ ಕಾಯಿದೆ ಕೌನ್ಸಿಲಿನ ಸಭಾಸದರಾದ ಶ್ರೀ| ಸಹಾಯರವರು ಸರಕಾರವು ನಿಯಮಿಸಿದ ಮಿಶ್ರ ಪ್ರಯೋಗ ಭಕ್ತಿಯಿಂದ ಕಾಯಿದೆ ಕೌನ್ಸಿಲಿಗೆ ಒಪ್ಪಿಸಿದ್ದ ಬಗ್ಗೆ ಗವ್ಹರ್ನರರ ಮೇಲೆ ನಡೆಸಿದ ದಾವೆಯು ವಿಚಾರಕ್ಕೆ ಹೈಕೋರ್ಟಿಗೆ ಅಧಿಕಾರವಿಲ್ಲದ್ದರಿಂದ ತೀರ್ಮಾನವಾಗಿದೆ.

— ಕಲಕತ್ತೆಯ 'ಫ್ರೊರವರ್ಡ' ಪತ್ರಿಕೆಯ ಕಾರ್ಯದರ್ಶಿಗಳಾದ ಶ್ರೀ| ಮನಮೋಹನ ಭಟ್ಟಾಚಾರ್ಯರವರು ಅವರ ಮನೆಯಲ್ಲೇ ಸಂಶಯದ ಸಹಿತ ಸೈದಿಸಲ್ಪಟ್ಟರು!

— ಮುಂಬಯಿಯ 'ನವಾಕಾಳ' ಪತ್ರಿಕೆಯಲ್ಲಿ ಸೋಲಾಪುರ ಪೋಲೀಸ ಸುಪರಿಂಟೆಂಡೆಂಟರಾದ ಮಿ| ಜಂಕನ್ ರವರು ಮಹಮ್ಮದೀಯ ಸೂಳೆಯನ್ನಿಟ್ಟುಕೊಂಡು ಮುಸಲ್ಮಾನ ಪಕ್ಷಪಾತಿಯಾಗಿ ತಮ್ಮ ಅಧಿಕಾರ ಪ್ರಯೋಗ ಮಾಡುತ್ತಾರೆಂದು ಪ್ರಕಟಿಸಿದ್ದಕ್ಕಾಗಿ 'ನವಾಕಾಳ' ಪತ್ರಿಕೆಯ ಮೇಲೆ ನಡೆದ ಮಾನನಷ್ಟದ ಫೌಜದಾರಿ ಮೊಕದ್ದಮೆಯಲ್ಲಿ ಪತ್ರಿಕೆಗೆ ೩೦೦ ರೂಪಾಯಿ ದಂಡವಾಗಿದೆ!

— ರಶಿಯಾ ಹಾಗು ಜರ್ಮನ್ ದೇಶಗಳೊಳಗೆ ಒಪ್ಪಂದವಾಗಿರುವದು. ಈ ಒಪ್ಪಂದದಂತೆ ಈ ರಾಷ್ಟ್ರಗಳು ... ವರ್ಷಗಳ ವರೆಗೆ ಪರಸ್ಪರ ಶತ್ರುಗಳಾಗಿ ಹೋರಾಡಬಾರದೆಂದು ನಿರ್ಧರಿಸಲಾಗಿದೆ.

— ಬಂಗಾಲ ಪ್ರಾಂತದ ... ಗ್ರಾಮದಲ್ಲಿ ... ಪ್ರಸಂಗಗಳಲ್ಲಿ ... [illegible]

— ... [illegible]

— ಜಪಾನ್ ದೇಶದ ... [illegible]

— ... [illegible]

— ... [illegible]

— ಬಂಗಾಲ ಸರಕಾರವು ... [illegible]

— ನಿಜಾಮ ... [illegible]

— ಭಾರತದ ... [illegible]

— ಬೆಳಗಾಂವ ಜಿಲ್ಲೆಯ ... [illegible]

— ... [illegible]

— ಆಮೇರಿಕೆಯ ... [illegible]

— ... [illegible]

— ... [illegible]

— ... [illegible]

— ... [illegible]

— ... [illegible]

— ... [illegible]

— ಕರ್ನಾಟಕ ಪ್ರಾಂತಿಕ ಕಾಂಗ್ರೆಸ ... [illegible]

— ಶ್ರೀ ... [illegible]

— ಧಾರವಾಡದ ಸಂಸ್ಥೆಯ ... [illegible]

— ... [illegible]

— ... [illegible]

— ... ಆರೋಗ್ಯ ಖಾತೆಯ ಅಧಿಕಾರಿಗಳು ... [illegible]

ಬೆಸ್ಟ ಅಲಾರಂ ಟೈಂಪೀಸು.



ಈ ಗಡಿಯಾರಗಳು ಜರ್ಮನ್ ದೇಶದಲ್ಲಿ ತಯಾರಿಸಿದ್ದು ... [illegible] ... ಗಂಟೆಯನ್ನು ... [illegible]

ಹರ್ಕ್ಯುಲಿಸ್ ... ಸೀರೆಗಳು.

ಈ ಸೀರೆಗಳನ್ನು ... [illegible]

ವಿಳಾಸ:- ಎಂ. ಬೆಸ್ಟನ್ ಎಂಡ್ ಕೋ.,
... ಪೋಸ್ಟ ಟೌನ, ಮದರಾಸು.

ಮಹಾತ್ಮರ ಆತ್ಮಚರಿತ್ರ.

(೨೦) ಧರ್ಮಪರಿಚಯ.

ಇಂಗ್ಲಂಡದಲ್ಲಿ ಉಳಕೊಂಡ ಎರಡು ವರುಷ ಮುಗಿಯುತ್ತಿರುವಾಗ ನನಗೆ ಇಬ್ಬರು ಥಿಯೊಸೊಫಿ ಮತದವರ ಪರಿಚಯವಾಯಿತು. ಇಬ್ಬರೂ ಸಹೋದರರಾಗಿದ್ದು ಅವಿವಾಹಿತರಿದ್ದರು. ಗೀತಾಗ್ರಂಥದ ಕುರಿತು ನನಗೂ ಅವರಿಗೂ ಮಾತುಕತೆಯಾಯಿತು. ಅವರಿಬ್ಬರೂ ಸರ್ ಎಡ್ವಿನ್ ಆರ್ನೋಲ್ಡರವರು ಮಾಡಿದ ಇಂಗ್ಲಿಷ ಭಾಷಾಂತರವನ್ನು ಓದುತ್ತಿದ್ದರು. ಮೂಲ ಗ್ರಂಥವನ್ನೋದಲು ಅವರು ನನಗೆ ನಿಮಂತ್ರಿಸಿದರು. ನನಗೆ ಬಹಳ ನಾಚಿಕೆಯಾಯಿತು. ನಾನು ಮೂಲ ಸಂಸ್ಕೃತ ಗೀತಾಗ್ರಂಥವನ್ನು ಓದಿರಲಿಲ್ಲ. ಅದರ ದೇಶೀ ಭಾಷೆಯ ಭಾಷಾಂತರವನ್ನೂ ಓದಿರಲಿಲ್ಲ. ಗೀತೆಯನ್ನು ನಾನು ಓದಿಲ್ಲವೆಂದು ನಾನು ಹೇಳುವ ಪ್ರಸಂಗ ಬಂತು. ಆದರೆ ನಾನು ಅವರೊಡನೆ ಗೀತೆಯನ್ನು ಓದಲಿಕ್ಕೆ ಹರುಷದಿಂದ ಬರುವೆನೆಂದೆನು. ಸಂಸ್ಕೃತ ಜ್ಞಾನವು ಅಲ್ಪಮಟ್ಟಿಗೆ ಇದ್ದರೂ ಇಂಗ್ಲಿಷ ಭಾಷಾಂತರವನ್ನೂ ಮೂಲ ಗ್ರಂಥವನ್ನೂ ಹೋಲಿಸಿ ನೋಡಿ ಭಾಷಾಂತರದಲ್ಲಿ ವ್ಯಕ್ತವಾಗದ ಅರ್ಥವನ್ನು ಹೇಳಲಿಕ್ಕೆ ನನಗೆ ಖಚಿತವಾಗಿ ಬರುವದೆಂದು ಹೇಳಿದೆನು. ಭಗವದ್ಗೀತೆಯ ಒಂದು ಭಾಷಾಂತರವೆಂದು ಮಾತ್ರ ಸರ್ ಎಡ್ವಿನ್ ಆರ್ನೋಲ್ಡರವರ ಪರಿಚಯ. ಮೂಲ ಗೀತೆಯನ್ನು ನಾನು ಓದಲಾರಂಭಿಸಿದೆನು. ಎರಡನೇ ಅಧ್ಯಾಯದೊಳಗಿನ —

ಸಂಗಾತ್ಸಂಜಾಯತೇ ಕಾಮಃ ।
ಕಾಮಾತ್ ಕ್ರೋಧೋಭಿಜಾಯತೇ ।
ಕ್ರೋಧಾದ್ಭವತಿ ಸಂಮೋಹಃ
ಸಂಮೋಹಾತ್ಸ್ಮೃತಿವಿಭ್ರಮಃ ।
ಸ್ಮೃತಿಭ್ರಂಶಾದ್ಬುದ್ಧಿನಾಶೋ ।
ಬುದ್ಧಿನಾಶಾತ್ಪ್ರಣಶ್ಯತಿ ॥

ಈ ಶ್ಲೋಕಗಳಿಂದ ನನ್ನ ಮನಸ್ಸಿನ ಮೇಲೆ ಬಹಳ ಪರಿಣಾಮವಾಯಿತು. ಈಗಲೂ ಆ ಶ್ಲೋಕಗಳು ನನ್ನ ಕಿವಿಯಲ್ಲಿ ಗುಣುಗುಟ್ಟುತ್ತಿರುತ್ತವೆ. ಗ್ರಂಥವಂತೂ ಅಮೂಲ್ಯವೆಂದೆನಿಸಿತು. ದಿನ ಹೋದ ಹಾಗೆ ಅದರ ಶ್ರೇಷ್ಠತೆಯು ನನಗೆ ಹೆಚ್ಚಾಗಿ ಹೊಳೆಯಹತ್ತಿತು. ಸತ್ಯದ ಸಾಕ್ಷಾತ್ಕಾರಕ್ಕಾಗಿ ಇದರಷ್ಟು ಶ್ರೇಷ್ಠ ಗ್ರಂಥವು ಇನ್ನೊಂದಿಲ್ಲ. ಕಷ್ಟಕಾಲದಲ್ಲಿ ನನಗೆ ಈ ಗ್ರಂಥದಿಂದ ಅಮೂಲ್ಯ ಸಹಾಯ ದೊರೆತಿದೆ. ಈ ಗ್ರಂಥದ ಎಲ್ಲ ಇಂಗ್ಲಿಷ ಭಾಷಾಂತರಗಳನ್ನು ನಾನು ಓದಿದ್ದೇನೆ. ಸರ್ ಎಡ್ವಿನ್ ಆರ್ನೋಲ್ಡರವರ ಭಾಷಾಂತರವು ಎಲ್ಲಕ್ಕೂ ಶ್ರೇಷ್ಠವಾದದ್ದು. ಗ್ರಂಥದ ಸತ್ಯಾರ್ಥಗಳನ್ನೇ ಅವರು ಕಾಪಾಡಿಕೊಂಡಾಗ್ಯೂ ಭಾಷಾಂತರವೆಂದು ಅದು ಭಾಸವಾಗುವದಿಲ್ಲ. ಈ ಮಿತ್ರರೊಡನೆ ನಾನು ಗೀತೆಯನ್ನು ಓದಿದಾಗ್ಯೂ, ಆಗ ಅದರ ಅಭ್ಯಾಸಮಾಡಿದೆನೆಂದು ನಾನು ಹೇಳಲಾರೆ. ಕೆಲವು ವರ್ಷಗಳಾದ ಮೇಲೆ ಈ ಗ್ರಂಥವನ್ನು ನಾನು ನಿತ್ಯವೂ ಪಠಿಸಹತ್ತಿದೆನು.

ಈ ಸಹೋದರರು ಸರ್ ಎಡ್ವಿನ್ ಆರ್ನೋಲ್ಡರವರ "ಲೈಟ ಆಫ ಏಶಿಯಾ" ಎಂಬ ಗ್ರಂಥವನ್ನು ಓದಹೇಳಿದರು. ಈ ಗ್ರಂಥವನ್ನು ಭಗವದ್ಗೀತೆಗಿಂತ ಹೆಚ್ಚು ಉತ್ಸಾಹದಿಂದ ನಾನು ಓದಿದೆನು. ಒಮ್ಮೆ ಅದನ್ನು ಓದಲಾರಂಭಿಸಿದ ಬಳಿಕ ನನ್ನಿಂದ ಅದು ಬಿಡಲಾಗಲಿಲ್ಲ. ಅವರು "ಬ್ಲೆವೆಟ್ಸ್ಕೀ ಲಾಜ್" ಎಂಬಲ್ಲಿಗೆ ಒಮ್ಮೆ ನನ್ನನ್ನೊಯ್ದು, ಬ್ಲೆವೆಟ್ಸ್ಕೀ ಹಾಗೂ ಬೆಸೆಂಟ ಅಮ್ಮನವರೊಡನೆ ನನಗೆ ಪರಿಚಯ ಮಾಡಿಕೊಟ್ಟರು. ಬೆಸೆಂಟ ಅಮ್ಮನವರು ಥಿಯೊಸೊಫಿ ಸಂಸ್ಥೆಯಲ್ಲಿ ಆಗಲೇ ಧರ್ಮಾಂತರಹೊಂದಿದ್ದರು. ಅವರ ಧರ್ಮಾಂತರದ ಹಕೀಕತಿನ ವಾರ್ತೆಯನ್ನು ನಾನು ಬಹು ಆತುರತೆಯಿಂದ ಓದುತ್ತಿದ್ದೆ. ಈ ಸಂಸ್ಥೆಯಲ್ಲಿ ಸೇರಲು ನನಗೆ ಗೆಳೆಯರ ಉಪದೇಶವಾಯಿತು. "ನನಗೆ ಸ್ವಧರ್ಮದ ಜ್ಞಾನವು ತೀರ ಅಲ್ಪವಿದೆ. ಇಂಥ ಸ್ಥಿತಿಯಲ್ಲಿ ಯಾವದೇ ಧರ್ಮಸಂಸ್ಥೆಗೆ ಸೇರಲು ನನಗೆ ಒಪ್ಪಿಗೆ ಇಲ್ಲ" ಎಂದು ಹೇಳಿ, ನಾನು ಆದರದಿಂದ ಅವರ ಸೂಚನೆಯನ್ನು ನಿರಾಕರಿಸಿದೆನು. ಸಹೋದರರ ಹೇಳಿಕೆಯ ಮೇರೆಗೆ ಬ್ಲೆವೆಟ್ಸ್ಕೀ ಅಮ್ಮನವರ "ಥಿಯೊಸೊಫಿಯ ಕುಂಜೀ"ಯೆಂಬ ಗ್ರಂಥವನ್ನು ಓದಿದ ನೆನಪು ಆಗುತ್ತದೆ. ಈ ಗ್ರಂಥ ವಾಚನದಿಂದ ಹಿಂದೂ ಧರ್ಮ ಗ್ರಂಥಗಳನ್ನೋದುವ ಬುದ್ಧಿಯು ನನಗುಂಟಾಯಿತು. ಹಿಂದೂ ಧರ್ಮದಲ್ಲೆಲ್ಲ ಮೂಢಬುದ್ಧಿಯೇ ತುಂಬಿರುವದೆಂಬ ಪಾದ್ರಿಗಳ ಹೇಳಿಕೆಯು ಈ ಗ್ರಂಥವಾಚನದಿಂದ ತಪ್ಪಾಯಿತು. ಅದೇ ಸಮಯ ಮಂಚೆಸ್ಟರದೊಳಗಿನ ಸುಶೀಲ ಕ್ರೈಸ್ತ ಧರ್ಮದವನೊಬ್ಬನು ವನಸ್ಪತ್ಯಾಹಾರ ಭೋಜನಗೃಹದಲ್ಲಿ ನನಗೆ ಸಿಕ್ಕಿದನು. ಕ್ರೈಸ್ತ ಧರ್ಮದ ಕುರಿತು ಅವನು ನನ್ನೊಡನೆ ಮಾತಾಡಿದನು. ರಾಜಕೋಟಿನಲ್ಲಿ ನನ್ನಲ್ಲುಂಟಾದ ವಿಚಾರಗಳನ್ನು ನಾನು ಹೇಳಿದೆನು. ಅವನ್ನು ಕೇಳಿ ಅವನಿಗೆ ಬಹಳ ವ್ಯಥೆಯಾಯಿತು. "ನಾನು ವನಸ್ಪತ್ಯಾಹಾರಿ, ಮದ್ಯ ಕುಡಿಯುವದಿಲ್ಲ, ಅನೇಕ ಕ್ರೈಸ್ತರು ಮಾಂಸಭಕ್ಷಕರಿದ್ದಾರೆ, ಮದ್ಯವನ್ನು ಸೇವಿಸುತ್ತಾರೆ. ಇದರೊಳಗೆ ಸಂದೇಹವಿಲ್ಲ. ಆದರೆ ಧರ್ಮಶಾಸ್ತ್ರಗಳಲ್ಲಿ ಮಾಂಸಭಕ್ಷಣ, ಮದ್ಯಸೇವನಗಳು ವಿಧಿಸಲಾಗಿಲ್ಲ" ಬಾಯಬಲ್ ಗ್ರಂಥವನ್ನು ಮನಃಪೂರ್ವಕ ಓದಿರೆಂದು ಅವನು ಹೇಳಿದನು. ಅವನ ಸೂಚನೆಯನ್ನು ನಾನು ಮನ್ನಿಸಿ, ನಾನು ಬಾಯ್ಬಲ್ ಪ್ರತಿಯನ್ನು ಕೊಂಡುಕೊಂಡೆ. ಬಾಯ್ಬಲ್ ಗ್ರಂಥಗಳನ್ನು ಅವನೇ ಮಾರುತ್ತಿದ್ದನೆಂದು ನನಗೆ ತೋರುತ್ತದೆ. ನಕಾಶೆ, ಅನುಕ್ರಮಣಿಕೆ ಮುಂತಾದ ಸಾಧನಗಳಿದ್ದ ಪ್ರತಿಯೊಂದನ್ನು ನಾನು ಅವನ ಕಡೆಯಿಂದ ಕೊಂಡುಕೊಂಡೆ. ಅದನ್ನು ನಾನು ಓದಲಾರಂಭಿಸಿದೆನು. ಓಲ್ಡ್ ಟೆಸ್ಟಮೆಂಟ ಎಂಬ ಹಳೇ ಒಡಂಬಡಿಕೆಯು ನನ್ನಿಂದ ಓದಲಿಕ್ಕಾಗಲಿಲ್ಲ. ಜೆನಿಸಿಸ್ ಎಂಬ ಸೃಷ್ಟಿನಿರ್ಮಾಣದ ಅಧ್ಯಾಯವನ್ನು ನಾನು ಓದಿದೆನು. ಆದರೆ ಅದರ ಮುಂದಿನ ಅಧ್ಯಾಯವನ್ನು ಓದಲಾರಂಭಿಸಿದ ಕೂಡಲೆ ನನಗೆ ನಿದ್ದೆ ಹತ್ತುತ್ತಿತ್ತು. ಓದಿದ್ದೇನೆಂದು ನನಗೆ ಹೇಳಬರಬೇಕೆಂದು ಉಳಿದ ಅಧ್ಯಾಯಗಳನ್ನು ಬಹಳ ಆಯಾಸದಿಂದ ಓದಿದೆನು. ನನಗೆ ಅವುಗಳ ವಾಚನಾಭಿರುಚಿ ಇದ್ದಿಲ್ಲ. ಅವು ನನಗೆ ತಿಳಿಯಲೂ ಇಲ್ಲ. ನಂಬರ್ಸ ಎಂಬ ಅಂಕಿಗಳ ಅಧ್ಯಾಯವು ನನಗೆ ಸೇರಲಿಲ್ಲ.

ಆದರೆ ನ್ಯೂ ಟೆಸ್ಟಮೆಂಟ ಎಂಬ ಹೊಸ ಒಡಂಬಡಿಕೆಯ ವಾಚನದಿಂದ ಭಿನ್ನ ಪರಿಣಾಮವುಂಟಾಯಿತು. ಆ ಪರ್ವತದ ಮೇಲಿನ ಜ್ಞಾನೋಪದೇಶವು ನೆಟ್ಟಗೆ ಅಂತಃಕರಣದಲ್ಲಿ ಹೊಕ್ಕಿತು. ನಾನು ಅದನ್ನು ಭಗವದ್ಗೀತೆಯೊಡನೆ ಹೋಲಿಸಿದೆನು.

"ಕೇಡಿಗೆ ಇದಿರಾಗಬೇಡ, ಬಲಕೆನ್ನೆಯ ಮೇಲೆ ಹೊಡೆಯುವವನಿಗೆ ಎಡ ಕೆನ್ನೆಯನ್ನು ಕೊಡು, ನಿನ್ನ ಅಂಗಿಯನ್ನು ದೋಚುವವರು ಕದ್ದೊಯ್ದರೆ ಅವನಿಗೆ ನಿಲುವಂಗಿಯನ್ನು ಕೊಡು."

ಇಂಥಾದ ವಚನಗಳಿಂದ ನನಗೆ ಬಹಳ ಆನಂದವುಂಟಾಯಿತು. ಇದನ್ನೋದಿ "ಒಂದು ಹನಿ ನೀರು ಕೊಡುವವನಿಗೆ ಹೊಟ್ಟೆ ತುಂಬ ಊಟ ಹಾಕಬೇಕೆಂಬ" ವಚನದ ನೆನಪಾಯಿತು. ಗೀತೆ, ಲೈಟ ಆಫ ಏಶಿಯಾ ಹಾಗು ಈ ಜ್ಞಾನೋಪದೇಶಗಳೊಳಗಿನ ಹಿತೋಕ್ತಿಗಳನ್ನು ಪರಿಶೋಧಿಸಲು ನನ್ನ ಬಾಲಬುದ್ಧಿಯು ಯತ್ನಿಸಿತು. ತ್ಯಾಗವೇ ಶ್ರೇಷ್ಠಧರ್ಮವೆಂದು ತಿಳಿದು ನನಗೆ ಆನಂದವಾಯಿತು.

ಈ ವಾಚನದಿಂದ ಬೇರೆ ಧರ್ಮಪ್ರಸಾರಕರ ಚರಿತ್ರೆಗಳನ್ನು ಓದಲು ನನಗೆ ಆಸಕ್ತಿಯುಂಟಾಯಿತು. ಕಾರ್ಲೈಲನ "ಹೀರೋ ಹಾಗು ಹೀರೋ ವರ್ಶಿಪ್" ಎಂಬ ಗ್ರಂಥವನ್ನೋದಲು ನನಗೆ ಗೆಳೆಯನೊಬ್ಬನು ಹೇಳಿದನು. ಪೈಗಂಬರರ ಅಧ್ಯಾಯವನ್ನು ನಾನು ಓದಿ ಅವರ ಮಹತ್ವವನ್ನು, ಶೌರ್ಯವನ್ನು, ಕಷ್ಟಕರವಾದ ಜೀವನವನ್ನು ತಿಳಕೊಂಡೆನು.

ಆ ಸಮಯ ಇದಕ್ಕಿಂತ ಹೆಚ್ಚಿಗೆ ಧರ್ಮಪರಿಚಯ ಮಾಡಿಕೊಳ್ಳಲು ನನಗೆ ಅನುಕೂಲವಿದ್ದಿಲ್ಲ. ಪರೀಕ್ಷೆಯ ಅಭ್ಯಾಸದ ಮೂಲಕ ಇತರ ವಿಷಯಗಳನ್ನೋದಲು ಸಮಯ ಸಿಗುತ್ತಿರಲಿಲ್ಲ. ಆದರೆ, ಇನ್ನೂ ಧರ್ಮಗ್ರಂಥಗಳನ್ನೋದಿ ಸಮಸ್ತ ಪ್ರಮುಖ ಧರ್ಮಗಳ ಪರಿಚಯ ಮಾಡಿಕೊಳ್ಳಬೇಕಾಗಿರುವದೆಂದು ಮನಸ್ಸಿನಲ್ಲೊಂದು ನಿರ್ಧಾರ ಮಾಡಿಕೊಂಡೆನು.

ನಾಸ್ತಿಕ ಮತವನ್ನು ತಿಳಕೊಳ್ಳದೆ ನಾನು ಹೇಗೆ ಇರಬಲ್ಲೆ? ಭರತಖಂಡದಲ್ಲಿ ಬ್ರಾಡ್‌ಲೋರವರ ಖ್ಯಾತಿ. ಅವರು ನಾಸ್ತಿಕ ಮತದವರೆಂದೂ ಖ್ಯಾತಿಗೊಂಡಿದ್ದರು. ಈ ಮತದ ವಿಷಯ ನಾನೊಂದು ಪುಸ್ತಕವನ್ನೋದಿದೆನು. ಆ ಪುಸ್ತಕದ ಹೆಸರು ಈಗ ನನಗೆ ನೆನಪಿಲ್ಲ. ಅದರಿಂದ ನನಗೇನೂ ಬೋಧವಾಗಲಿಲ್ಲ. ನಾಸ್ತಿಕ ಮತದ ಮರುಪ್ರದೇಶವನ್ನು ನಾನು ಈ ಮೊದಲೇ ದಾಟಿಹೋಗಿದ್ದೆ. ಬೆಸೆಂಟ ಅಮ್ಮನವರ ಹೆಸರು ಆಗ ಬಹಳ ಮುಂದೆ ಬಂದಿತ್ತು. ಅವರು ನಾಸ್ತಿಕ ಮತದಿಂದ ಆಸ್ತಿಕ ಮತದಲ್ಲಿ ಸೇರಿದ್ದರು. ನಾಸ್ತಿಕ ಮತದ ಪ್ರತಿಕೂಲ ಅಭಿಪ್ರಾಯವಾಗಲಿಕ್ಕೆ ಇದು ಒಂದು ಕಾರಣವಾಯಿತು. "ನಾನು ಹೇಗೆ ಥಿಯೊಸೊಫಿಗೆ ಸೇರಿದೆ?" ಎಂಬ ಪುಸ್ತಕವನ್ನು ನಾನು ಓದಿದ್ದೆನು.

ಅದೇ ಸಮಯ ಬ್ರಾಡ್‌ಲೋರವರು ತೀರಿಕೊಂಡರು. ಅವರಿಗೆ "ವೋಕಿಂಗ ಸಿಮೆಟ್ರಿ"ಎಂಬ ಸಮಾಧಿಸ್ಥಾನದಲ್ಲಿ ಹೂಳಿದರು. ನಾನು ಸ್ಮಶಾನಯಾತ್ರೆಗೆ ಹೋಗಿದ್ದೆ. ಲಂಡನದೊಳಗಿನ ಭಾರತೀಯರೆಲ್ಲರೂ ಹೋಗಿರಬೇಕು. ಕೆಲವು ಸಂದರ್ಭಗಳನ್ನರಿಯಲು ಕೆಲವು ಕ್ರೈಸ್ತ ಧರ್ಮೋಪದೇಶಕರೂ ಬಂದಿದ್ದರು. ಸ್ಮಶಾನಯಾತ್ರೆಯನ್ನು ಮುಗಿಸಿ, ನಾವು ಮರಳಿ ಹೋಗುವಾಗ ಉಗಿಬಂಡಿಯ ನಿರೀಕ್ಷಣೆ ಮಾಡುತ್ತ ಸ್ಟೇಶನಿನಲ್ಲಿ ನಾವು ಉಳಕೊಳ್ಳಬೇಕಾಯಿತು. ಜನಸಂದಣಿಯೊಳಗಿನ ನಾಸ್ತಿಕ ಮತದ ವೀರನೊಬ್ಬನು ಪಾದ್ರಿಗಳೊಬ್ಬರಿಗೆ ಗೊಂದಲದಲ್ಲಿ ಹಾಕಲೆತ್ನಿಸಿದನು.

"ಒಳ್ಳೇದು, ತಾವಿದೇ, ದೇವರು ಇದ್ದಾನೆಂದು ತಮ್ಮ ನಂಬಿಗೆ ಇರುವದಲ್ಲವೇ?"

"ಹೌದು" ಎಂದು ಆ ಸುಶೀಲ ಪುರುಷನು ಸಾವಧಾನದಿಂದ ಹೇಳಿದನು.

"ಭೂಮಿಯು ಪರಿಧಿಯು ೨೮ ಸಾವಿರ ಮೈಲು ಇರುತ್ತದೆ, ಹೌದಲ್ಲವೋ?" ಎಂದು ಆ ನಾಸ್ತಿಕನು ತನ್ನಷ್ಟಕ್ಕೆ ಮುಗುಳು ನಗೆ ನಗುತ್ತ ಕೇಳಿದನು.

"ಹೌದು"

"ಹಾಗಾದರೆ, ನಿಮ್ಮ ದೇವರ ಉದ್ದಳತೆಯನ್ನು ಹೇಳಿರಿ, ಅವನು ಎಲ್ಲಿರಬಹುದೆಂಬುದನ್ನು ಹೇಳಿರಿ"

"ಒಳ್ಳೇದು ನಮಗೆ ತಿಳಕೊಳ್ಳುವ ಸಾಮರ್ಥ್ಯವಿದ್ದರೆ ಅವನು ನಮ್ಮಿಬ್ಬರ ಅಂತಃಕರಣಗಳಲ್ಲಿ ವಾಸಮಾಡುತ್ತಾನೆ"

"ಹೋ, ಹೋ, ನಾನೇನು ಚಿಕ್ಕ ಬಾಲಕನೆಂದು ತಿಳಿದುಕೊಂಡಿರಿ," ಎಂದು ಆ ಶೂರವೀರನು ನಮ್ಮ ಕಡೆಗೆ ಗೆದ್ದವನಂತೆ ದಿಟ್ಟಿಸಿ ನೋಡಿ ಹೇಳಿದನು.

ಪಾದ್ರಿಗಳು ವಿನಯಶೀಲರಾಗಿ ಸುಮ್ಮನಾದರು. ಈ ಸಂಭಾಷಣೆಯಿಂದಲೂ ನಾಸ್ತಿಕ ಮತದ ತಿರಸ್ಕಾರವು ಮತ್ತೂ ಮಿಗಿಲಾಯಿತು.

—ಕಲಕತ್ತೆಯ ದೊಂಬಿಯ ಮೂಲಕ ೨ ಕೋಟಿ ರೂ. ಬೆಲೆಯ ದ್ರವ್ಯನಾಶವಾಯಿತು. ಬೇಂಕು ಮುಂತಾದ ಸಂಸ್ಥೆಗಳಿಗೆ ರೂ. ೫—೬ ಕೋಟಿಗಳ ನಷ್ಟ. ಸುಲಿಗೆಯಿಂದ ಮುಸಲ್ಮಾನರ ೧೭ ಲಕ್ಷಗಳ ಸಾಮಾನು ಹೋಯಿತು, ಹಿಂದೂ ಅಂಗಡಿಕಾರರಿಗೆ ೫ ಲಕ್ಷ ರೂಪಾಯಿ ನಷ್ಟ. ೫ ಲಕ್ಷ ಕೂಲಿಕಾರರು ಒಂದು ವಾರದ ವರೆಗೆ ನಿರುದ್ಯೋಗಿಯಾಗಿ ಕುಳಕೊಳ್ಳಬೇಕಾಯಿತು. ಈಗ ಕಲಕತ್ತೆಯಲ್ಲಿ ಅನೇಕ ಫೌಜದಾರಿ ಮೊಕದ್ದಮೆಗಳು ಉದ್ಭವವಾಗಿವೆ.

— ಬಂಗಾಲದ ಕಮೀಟಿಯವರು ಕಲಕತ್ತೆಯಲ್ಲಿ ಸೇರಬೇಕಾಗಿದ್ದ ಕಾಂಗ್ರೆಸ್ಸಿಗಾಗಿ ಅಧ್ಯಕ್ಷೀಯ ಉಮೇದವಾರರನ್ನು ನಿಲ್ಲಿಸಬಾರದಾಗಿ ನಿರ್ಣಯಿಸಿರುವರು.

[illegible] ಗಾರೀಕನ ಮುಯ್ಯು! ಹುಬ್ಬಳ್ಳಿ ಪ್ಯಾಂಟನ ಪ್ಲಾಟ್‌ಫಾರದಲ್ಲಿ ಒಬ್ಬ ಹೆಂಗಸು ಅನೆಯೊಬ್ಬನ ಮಗು [illegible] ಬಾಕಿ ಹೆಸರು ಹೇಗಿದೆ! ಅಷ್ಟರಲ್ಲಾಗಿ ಅವ [illegible] ಒಬ್ಬ ಸ್ತ್ರೀ ಸಿಕ್ಕಳು; ಹುಡುಗನು ಅವಳ್ಕ ಹುಷ್ಟ್ಪನು. ಹುಡ್ಡರಾತ್ರಿಗೆ ಅನೆಯ ಮರದ [illegible] ನಡೆದಿತ್ತು. ಆ ಸಮಯ ಅಸಹಾಯಕರಿಯೊಳಗಿಂ [illegible] ಹುಡುಗನನ್ನು ಹುಡುಕಿ ತೆಗೆದು ಅನೆಯ [illegible] ಸಲಕ್ಕೆ ಅಪ್ಪಿಸಿದರು. ಇದೆಂಥ ವ್ಯಾಪಾರ!!

— [illegible]ಯಲ್ಲಿ ಸಾಹುಕಾರಿಯ ರಾಜರು, ಸಹೋದ[illegible] ಕಿಡ್ನಾಪ್ ಎಪೋರ್ಟರರೊಡನೆ ಬೇಟೆಯಾಡ ಹೋ[illegible]ಗಿದರು. ಆ ಬೇಟೆಯಲ್ಲಿ ಒಂದು ಸುಂದರವಾದ ಹುಲಿ [illegible] ಅಯಾಚಿತ್ತವಾಗಿ ಸಿಕ್ಕಿಬಿದ್ದದು ಹೋಯಿತು!

— ಆ ದಿಯೊಳಗೆ ಹತ್ತಿಯ ಉದ್ಯಾನಕ್ಕೆ ಬೆಂಕಿಹತ್ತಿ [illegible] ಗಂಟೆ ಗಳು ಹೊಟ್ಟು ಹೋದು!

ಉತ್ತಮ ವಸ್ತುಗಳು! ಉತ್ತಮ ವಸ್ತುಗಳು!!

ಮಂಗಳೂರ್ ಹಂಚು!

ನಮ್ಮಲ್ಲಿ ಮಂಗಳೂರ ಬೋರ್ಡ ಮ್ಯಾಲ ಪಶ್ಚಿಮ ಉತ್ತಮ ಪ್ರತಿಯ ಮಂಗಳೂರ ಹಂಚುಗಳು ಮಾರಾಟಕ್ಕೆ ಸಿದ್ಧವಾಗಿವೆ. ಬೇರೆ ಕಡೆಗಳಲ್ಲಿ ಇವಕ್ಕೆ ಉತ್ತಮ ಕಾರಖಾನೆಗಳಿಲ್ಲ! ಬೇಕಾದವರು ವಸ್ತುಗಳನ್ನು ನೋಡಿ ದರ ತಿಳಕೊಳ್ಳಬಹುದು. ದರವಾರ ಕವಲತ್ತಿ ದಿರುವವು. ಒಮ್ಮೆ ಪರೀಕ್ಷಿಸಿ ನೋಡಿರಿ!

ಪತ್ತೆ— **ಕಾಫಿ ಅಬ್ದುಲ್ ಕಾದರ,**
ಮುನಸೀಫ ಕೋರ್ಟ ಸಮೀಪ, ಕಾರವಾರ.

ಸುಗಂಧಿ ತಾಂಬೂಲೀ ಪದಾರ್ಥ!

ಈ ಪದಾರ್ಥ ತಿನ್ನಲಿಕ್ಕೆ ರುಚಿಕರವಿದ್ದು, ಸುವಾಸಿಕ [illegible]ವುತ್ತದೆ. ಇದರ ಸೇವನದಿಂದ ಬಾಯಿಯ ಹೊ[illegible], ವೇದನೆ, ಹುಳ ಇವು ನಾಶವಾಗಿ ಹಲ್ಲುಗಳು [illegible] ಘಟ್ಟಿಯಾಗುತ್ತವೆ ಇದರ ಸೇವನದಿಂದ [illegible], ಕಫ ಮುಂತಾದ ವಿಕಾರಗಳುಂಟಾಗುವ [illegible] ಭೀತಿಯಿಲ್ಲ. ಕಾರಣ, ತಂಬಾಕು ಸೇವಿಸು[illegible]ವರು ಅವಶ್ಯವಾಗಿ ಅನುಭವ ತೊಗೊಳ್ಳಬೇಕು. ೧ [illegible] ಕಿಂ. ರು. ೦-೦-೩, ೨೫ರ ಕಿಂ. ರೂ. ೦-೯-೦, [illegible]೦೦ ಕಿಂ ರೂ. ೩-೩-೦; ೫೦೦ ಪುಡಿಗಳ ಕಿಂ. [illegible] ೯-೦-೦; ೧೦೦೦ ೧೭-೦-೦, ಟ. ಪೆ. ಖರ್ಚ [illegible] ಗೃರ ಪ್ರತ್ಯೇಕ.

ಸುಗಂಧಿ ನಶ್ಯ:— ಈ ನಶ್ಯವು ಒಳ್ಳೇ ತಂಬಾಕಿನಿಂದ ಮಾಡಿದ್ದದು, ಇದರಿಂದ ಶ್ಲೇಷ್ಮ, ಥಂಡಿ, [illegible] ಮುಂತಾದವುಗಳು ದೂರಾಗಿ ಮಸ್ತಕ[illegible]ಗಿ ತಲೆಯು ಭಾರವಾಗಿದ್ದರೂ ಹಗುರವಾಗಿ [illegible]ಶಕ್ತಿಗೆ ಚಪಲತೆಯು ಪ್ರಾಪ್ತವಾಗುವದ[illegible] ಯಾವದೇ ಕೆಲಸವನ್ನು ಕೈಕೊಳ್ಳಲಿಕ್ಕೆ ಸ್ಫೂರ್ತಿ[illegible]ಯುಂಟಾಗುತ್ತದೆ. ಒಮ್ಮೆ ಪರೀಕ್ಷಿಸಿ ಖಾತ್ರಿಮಾಡಿ[illegible]ಕೊಳ್ಳಿರಿ. ೧ ಡಬ್ಬಿ ಕಿಂ ರೂ. ೦-೪-೦; ೧ ಡಜ ಡಬ್ಬಿ ಕಿಂ ರೂ ೩-೦-೦. ವ್ಹಿ. ಪೋ. ಖರ್ಚ ಬೇರೆ

ಉತ್ತಮ ಬೀಡಿಗಳು:— ಅತ್ಯುತ್ತಮ ಪ್ರತಿ ತಂಬಾಕಿನಿಂದ ಹಾನಿಗಿ ಕಟ್ಟಿದ ಬೀಡಿಗಳ[illegible] ತಯಾರಿರುತ್ತವೆ. ಕಿಮ್ಮತ್ತಿನ ವಿಷಯಕ್ಕೆ [illegible], ಪುರವಠ್ ನೋಡಿ ವರಾಗೆ ಆರ್ಡರ ಕೊಡ[illegible]ದು. ಇದರ ಹೊರತು, ನಮ್ಮಲ್ಲಿಯ ಬಾಜಾರ [illegible] ಎಲ್ಲಾ ಪ್ರಕಾರಗಳ ತಂಬಾಕು ಬರುತ್ತದೆ. ಬೇ[illegible] ನಮೂನೆಯ ತಂಬಾಕನ್ನು ಯೋಗ್ಯ ದಲಾಲಿ[illegible]ಂದು, ಖರೀದಿ ಮಾಡಿಕೊಳ್ಳುವೆವು. ವಿಶೇಷ [illegible] ಬಗ್ಗೆ ಪತ್ರವ್ಯವಹಾರ ಮಾಡಿದರೆ, ಕೂಡ[illegible]ತ್ತರ ಬರೆಯುವೆವು.

ವಿಳಾಸ:— **ಎಸ್. ಬಿ. ಕದಂ,**
[illegible] ಮತ್ತು ತಂಬಾಕು ಪದಾರ್ಥ ದುಕಾನ,
ಮು। ಪೋ। ನಿಪ್ಪಾಣಿ, ಜಿ ಬೆಳಗಾಂವ

ಪ್ರಕಟನೆ.

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂಪನಿ, ಬೆಂಗಳೂರ.

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಪ್ರಯುಕ್ತ ೧೯೩೩ನೆಯ ಇಸ್ವಿ [illegible] ತಾರೀಖಿನ ದಿವಸ ಸಾಯಂಕಾಲ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನಲ್ಲಿ ಸಾರ್ವಜನಿಕವಾಗಿ ಯುನಾಯಿಟ ಬೋರ್ಡ ಆಫ್ ಡಾಯರೆಕ್ಟರ್ಸ ಚೇರಮನ್ನರಾದ ರಾಜಸಭಾಭೂಷಣ ಡಾ। ಕೆ ಎನ್ [illegible] L.R.C.P. *M.R.C.S.* ಅವರ ಅಧ್ಯಕ್ಷತೆಯಲ್ಲಿ ಜರುಗಿದ ಚೀಟಿಗೆ ಈ ಕೆಳಗೆ ಕಾಣಿಸಿದ ನಂಬರುಗಳಿಗೆ ಒಟ್ಟು ಮುಖ್ಯ ಒಕ್ಕೆ ಇಲ್ಲದೆ ೧೦೦೦ ರೂಪಾಯಿಗಳ ಬಹುಮಾನ ಕೊಡಬೇಕೆಂದು ನಿರ್ಣಯವಾಯಿತು.

(೧)	ಬಾಂಡ ನಂಬರ	೫೬೭೦	ಮಿ। ವಿಠ್ಠಲ ಚಿಮ್ಮಾಜಿ ಸೇಟ್ ಕಲಾಕ್ ಅಬಕಾರಿ ಮುಂಬೈ ...	೧೦೦೦
(೨)	ಬಾಂಡ ನಂ।	೧೫೬೦೩	ಮಿ। ರಂಗಪ್ಪ ಸ್ಕೂಲಮಾಸ್ತರ ಹುಲಿಕುಂಟೆ, ಪೋಸ್ಟ ಸಿರಾ. ತಾಲೂಕ ಸಿರಾ, ಜಿಲ್ಲಾ ತುಮಕೂರ ...	೧೦೦೦
(೩)	ಬಾಂಡ ನಂ।	೧೪೯೯೮	ಮಿ। ವೆಂಕಟರಾಮ ವೆಂಕಟರಮಣ ಹೆಗಡೆ, [illegible] ಹೊನ್ನಾವರ ತಾ। (ನಾರ್ಥ ಕ್ಯಾನರಾ) ಜಿಲ್ಲಾ. ...	೧೦೦೦
(೪)	L. B. C. "	೧೧೦೩೩	ಮಿ। ಜಿ. ವೆಂಕಟಪ್ಪ [illegible] ಬಳ್ಳಾರಿ.	೧೦೦೦
(೫)	"	೩೫೧	ಮಿ। ರಾಮಚಂದ್ರ ನಾರಾಯಣ ಕಾಂಬಳೆ c/o ಕಾಲೂಸ್ಕರ [illegible], (ಪುಣೆ.)	೧೦೦೦
(೬)	"	೧೨೪೦	ಮಿ। ಆರ್. ಎಚ್ [illegible], ಗವರ್ನಮೆಂಟ ಸಿಟಿ ಹಾಯಸ್ಕೂಲ, ಹೈದರಾಬಾದ (ದಕ್ಷಿಣ)	೧೦೦೦

ಬಿ ಎಸ್. ಆರಾಧ್ಯ,
ಮುಂಬಯಿ ಇಲಾಖೆಯ, ಚೀಫ್ ಏಜಂಟ, ಹುಬ್ಬಳ್ಳಿ.

ಅತ್ಯದ್ಭುತ! ಅಮೇರಿಕಾ ದೇಶದ ಅತ್ಯದ್ಭುತ!

ಪ್ರಸಿದ್ಧ ಡಾಕ್ಟರನೊಬ್ಬನು ಕಂಡು ಹಿಡಿದ ಸಿದ್ಧೌಷಧ.

ಸರ್ವರೋಗ ನಿವಾರಣೆಯಾಗುವ ಸಂಜೀವನೌಷಧವನ್ನು ಕಂಡು ಹಿಡಿಯುವುದಕ್ಕಾಗಿ ಅಮೇರಿಕಾ ದೇಶದ ಪ್ರಖ್ಯಾತ ಡಾಕ್ಟರನೊಬ್ಬನು ಅನೇಕ ವರ್ಷಗಳಿಂದ ಬಹು ಧನ ನಷ್ಟ ಮಾಡಿಕೊಂಡು ಪರಿಶೋಧನೆಗಳನ್ನು ಮಾಡಿ ಕೊನೆಯಲ್ಲಿ

ಎಲೆಕ್ಷಿರ್ ಆಫ್ ಲೈಫ್

ಅಥವಾ

ಜೀವನಾಧಾರ

ಎಂಬ ಔಷಧವನ್ನು ಸಿದ್ಧಗೊಳಿಸಿರುವನು ಅನುಭವದಿಂದ ಅನೇಕ ರೋಗಗಳಿಗೆ, ಎಂದರೆ ಅಗ್ನಿಮಾಂದ್ಯ, ಅಜೀರ್ಣ, ಹೊಟ್ಟೆ ಅಥವಾ ಎಲ್ಲ ಭಾಗದಲ್ಲಿರುವ ಶೂಲೆ, ಅತಿಸಾರ, ವಾಂತಿ, ಬೇಧಿ ಅಥವಾ ಕಾಲರಾ, ತಲೆನೋವು, ನೆಗಡಿ, ಮಲೇರಿಯಾ ಜ್ವರ, ಇತರ ವಿವಿಧವಾದ ಜ್ವರಗಳು, ಮಾನಸಿಕ ದೌರ್ಬಲ್ಯ, ಕಣ್ಣು ಮತ್ತು ಕಿವಿ ನೋವು, ಮೂಲವ್ಯಾಧಿ, ನಾಯಿಕೆಮ್ಮು, ಸ್ತ್ರೀವ್ಯಾಧಿ ಮುಂತಾದ ಎಲ್ಲಾ ಬಗೆಯ ಸಾಂಕ್ರಾಮಿಕ ರೋಗಗಳಿಗೆ, (ಅಸ್ವಸ್ಥ್ಯೆಯಿಂದ ಬಾವಿಗೆ ಪ್ಲೇಗಿಗೆ,) ಹಾವು, ಚೇಳು, ಮುಂತಾದ ವಿಷ ಜಂತುಗಳ ಕಡಿತಕ್ಕೆ, ಬಾಲಗ್ರಹ ಇವೇ ಮುಂತಾದುವುಗಳಿಗೆ ಈ ಜೀವನಾಧಾರವನ್ನು ಕೊಟ್ಟು ಗುಣಪಡಿಸಿರುತ್ತಾನೆ. ಊರಲ್ಲಿ ಸಾಂಕ್ರಾಮಿಕ ರೋಗವಿದ್ದಾಗ ಇದನು ಅಲ್ಪ ಪ್ರಮಾಣದಲ್ಲಿ ಉಪಯೋಗಿಸುತ್ತಿದ್ದರೆ ಯಾವ ರೋಗವೂ ಅಂಟುವದಿಲ್ಲ. ಈ ಜೀವನಾಧಾರವೆಂಬ

ಸಂಜೀವನೌಷಧ

ಒಂದು ಸೀಸೆಯು ಪ್ರತಿ ಮನೆಯಲ್ಲಿ ಅಥವಾ ಪ್ರತಿ ಒಬ್ಬನ ಜೇಬಿನಲ್ಲಿದ್ದರೆ ಅನುಭವಸ್ಥನಾದ ಡಾಕ್ಟರನೊಬ್ಬನು ಹತ್ತರವಿದ್ದಂತೆಯೇ ಡಾಕ್ಟರರಿಗೆ ಕೊಡಬೇಕಾದ ಫೀಜುಗಳನ್ನು ಈ "ಜೀವನಾಧಾರ"ವೆಂಬ ಡಾಕ್ಟರರಿಗೆ ಕೊಡ ಬೇಕಾದ್ದಿಲ್ಲ ಸೀಸೆ ಒಂದಕ್ಕೆ ರೂ. ೧-೮-೦ ಟಪಾಲು ಹಾಶಿಲ ಪ್ರತ್ಯೇಕ ಅರ್ಜಿಯಿದ್ದು ಬೇಕಾದರು

ಜೀವನಾಧಾರ ಡಿಪೋ, ಮೈಸೂರು.

ಬ್ರಾಂಚ:— **ಜೀವನಾಧಾರ ಡಿಪೋ, ಹುಬ್ಬಳ್ಳಿ.**



ಏಜಂಟರು ಬೇಕು! ಏಜಂಟರು ಬೇಕು!!

ನಮ್ಮಲ್ಲಿ

ಅತಿ ಮನೋಹರವಾದ

ಶೀಶೆ ಕಟ್ಟಿಗೆಯ

ದೇವರ ಮಂಟಪಗಳೂ,

ಶೃಂಗಾರ ಸೌಭಾಗ್ಯವತಿ ಪೆಟ್ಟಿಗೆಗಳೂ, ತಿಜೋರಿ ಪೆಟ್ಟಿಗೆಗಳೂ, ಆಫೀಸ ಬಾಕ್ಸಗಳೂ, ರೈಟಿಂಗ ಟೇಬಲಗಳೂ ಹಾಗೂ ಯಾವತ್ತು ತರದ ಮನೇ ಸಾಮಾನು ಸಿಗುತ್ತದೆ.

ನಮ್ಮ ವಿಳಾಸ:—

ದಿ ನೋರ್ಥ ಕೆನರಾ ಟ್ರೇಡಿಂಗ ಕಂಪನಿ.

ಶಾಂತಿ ಭುವನ,

ಕಾರವಾರ.

ಚೆವರಲೆಟ್
ಮೋಟಾರಕಾರ್ ಏಜನ್ಸಿ, ಕುಮಟಾ.

ನಾವು ಹೊಸ ಚೆವರಲೆಟ್ ಮೋಟಾರ ಗಾಡಿಗಳನ್ನು ಗಿರಾಕಿಗಳಿಗೆ ಅನುಕೂಲವಾಗುವಂತೆ ಮಾರಿಸಿಕೊಡುತ್ತೇವೆ. ಅಪೇಕ್ಷೆಯುಳ್ಳವರು ಸಮಕ್ಷದು ಅಥವಾ ಪತ್ರದ್ವಾರಾ ಮಾಹಿತಿ ತಿಳಕೊಳ್ಳಬಹುದು

ಸೋಲಏಜಂಟ — **ಎಸ್. ಎಲ್ ಧಾಕಪ್ಪ ಮತ್ತು ಬ್ರದರ್ಸ, ಶಿರ್ಸಿ.**

ಕುಮಟಾ ಏಜಂಟ **ಜಿ ಡಿ. ಮಳಗಿಕರ ಎಂಡ್ ಕೋ.,**

ಬಿ. ಓ ಸಿ. ಪೆಟ್ರೋಲ ನಮ್ಮಲ್ಲಿ ಬೇಕಷ್ಟು ಸಿಗುತ್ತದೆ; ಡನ್‌ಲೊಪ್ ಹಾಗು ಮಿಚಲಿನ ಮೋಟಾರ ಹಾಗು ಸಾಯಕಲ್ ಟಾಯರ ಟ್ಯೂಬ ಇತ್ಯಾದಿ ಸಾಮಗ್ರಿಗಳ ಯೋಗ್ಯದರದಲ್ಲಿ ಪೂರೈಸುತ್ತೇವೆ

ಸೂಚನೆ:— ನಮ್ಮಲ್ಲಿ ಟ್ಯಾಕ್ಸಿಟಂಗ ಕೆಲಸವು ಉತ್ತಮವಾಗಿಯೂ, ಆಧುನಿಕ ರೀತಿಯಿಂದಲೂ ಮಾಡಿಕೊಡಲ್ಪಡುತ್ತದೆ ಅಲ್ಲದೆ, ನಮ್ಮಲ್ಲಿಂದ ಮಂಗಳೂರ ಪ್ರಸಿದ್ಧ ರೇಗೋ ಕಂಪನಿಯ ಉತ್ತಮ ಹಂಚುಗಳೂ ಪೂರೈಸಲ್ಪಡುತ್ತವೆ. ಅಗತ್ಯವಿದ್ದವರು ಸಮಕ್ಷದು ಅಥವಾ ಪತ್ರದ್ವಾರಾ ಮಾಹಿತಿ ತಿಳಕೊಳ್ಳಬಹುದು

G. D. Malgikar & Co,
KUMTA.

ಪ್ರಯಾಣಿಕರಿಗೆ
ವಿಶೇಷ ಅನುಕೂಲ

ನೇಮಿಸಿದ ಹೊತ್ತಿಗೆ ಮೋಟಾರ ವ್ಯವಸ್ಥೆ ಹಾಗೂ
ಬಡಿಗೆ, ಊಟ, ವಾಸದ ಒಗ್ಗ ಯೋಗ್ಯ ವ್ಯವಸ್ಥೆ
ಈ ಕೆಳಗಿನಂತೆ ಮೋಟಾರ ವ್ಯವಸ್ಥೆಯಿದೆ -
ಗೋಕರ್ಣದಿಂದ ಕುಮಟಾ, ಹೊನ್ನಾವರ, ಭಟ್ಕಳ, ಗೋಕರ್ಣದಿಂದ ಕುಮಟಾ, ಶಿರ್ಸಿ, ಹುಬ್ಬಳ್ಳಿ, ಗೋಕರ್ಣದಿಂದ ಅಂಕೋಲಾ, ಕಾರವಾರ

ಟಿಪ್ಪ — ಟಿಕೇಟ ಮುಂದಾಗಿ ಪಡಕೊಳ್ಳಲಿಚ್ಛಿಸುವವರು ಈ ಕೆಳಗಿನ ಪತ್ತೆಗೆ ಪತ್ರವ್ಯವಹಾರ ಮಾಡತಕ್ಕದ್ದು.

ಅನಂತ ಪಾಂಡುರಂಗ ಸಟಿಹಿತ್ತಲ,
ಮೋಟರ ಏಜಂಟ,
ಕುಮಟಾ (ಉತ್ತರ ಕನ್ನಡ)

S. U. Narayanacharya & CO
Chaukamba, BENARES CITY

ನಮ್ಮಲ್ಲಿ ಎಲ್ಲಾತರದ ರೇಶ್ಮೆ ಪೀತಾಂಬರ, ಜರಿಕಾಠ ಜರಿ ಸೀರೆ, ಕಾಶ್ಮೀರ ಶಾಲು, ಕರವಸ್ತ್ರ, ರುದ್ರಾಕ್ಷಿ, ಕಸ್ತೂರಿ, ಲಿಂಗಗಳೂ, ಸ್ಫಟಿಕಮಣಿ ಮೊದಲಾದ ಮಾಲೆಗಳ ಸಿಗುತ್ತವೆ ಕ್ಯಾಟಲಾಗ ಬೇಕಾಗುವವರಿಗೆ ಉಚಿತವಾಗಿ ಕಳಿಸಲಾಗುವುದು.

ವಿಳಾಸ—ಶಿರೋಮಣಿ ನಾರಾಯಣಾಚಾರ್ಯ
ಮತ್ತು ಕಂಪನಿ, ಚೌಕಂಬಾ, ಕಾಶೀಕ್ಷೇತ್ರ

ಸುಲಭ ಕ್ರಯ! ಸುಲಭ ಕ್ರಯ!!

ತಾ॥ ೩೧ ಡಿಸೆಂಬರ ವರೆಗೆ

ಸುಗಂಧ ನಶ್ಯದ ಪುಡಿ

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪೀನಸಿ, ಒಂದುತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಡಬ್ಬಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಕಿಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪುಕ್ಕಟೆ ಕಳಿಸಲಾದೀತು

ಬುದ್ಧಿ ಒಂದಕ್ಕೆ ಕ್ರಯ ರೂ ೦-೪ ೦, ವ್ಹಿ. ಪಿ ಆದರೆ ಡಜನ್ ೧ ಕ್ಕೆ ರೂ. ೩-೮-೦, ವ್ಹಿ. ಪಿ. ೬-೮-೦ ದಯವಿಟ್ಟು ನಿಮ್ಮ ಹೆಸರನ್ನೂ ಪತ್ರಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ— ಗುರುಬುಸವ ಅಂಡ್ ಕಂಪನಿ ಲಿಮಿಟೆಡ್ ಪ್ರೋ ಬಾ ೫೧ ಗೌರೀಶಂಕರ, ಮದರಾಸ

ಸರಕಾರದಿಂದ ಪೇಟಂಟ ಪಡೆದ



ಮಲ್ಹಾರ ಕಪ್ಪಲಿ.

ತೋಟಿಗರಿಗೆ ಬಹು ಅನುಕೂಲವಾಗಿರುವದು.

ಇದು mild steelವೆಂಬ ಜಾತಿಯ ಕಬ್ಬಿಣ ತಗಡಿನಿಂದ ಮಾಡಲ್ಪಟ್ಟಿರುವದು ಎತ್ತುಗಳಿಗೆ ಬಹಳೇ ಹಗುರು ಹೋಗುತ್ತದೆ ಇದರೊಳಗಿನ ಒಂದು ಹನಿ ಸಹ ನೀರು ಕೆಳಗೆ ಬೀಳದಂತೆ ವಿರಚನೆ ಮಾಡಲ್ಪಟ್ಟಿರುವದು. ಕಪ್ಪಲಿ ಬಾಯಿಂದ ನೀರು ಡೋಣಿಯಲ್ಲಿ ಬೀಳುವ ಕಾಲಕ್ಕೆ ಎತ್ತುಗಳಿಗೆ ಭಾರವಾಗದಂತೆ ರಚನೆಯಲ್ಲಿ ಸುಧಾರಣೆಯನ್ನು ಮಾಡಿರತ್ತೇವೆ

ಬೆಲೆಯ ಬಗ್ಗೆ ಬರೆದು ತಿಳಿದುಕೊಳ್ಳಿರಿ.

ಕಿರ್ಲೋಸ್ಕರ ವಾರ್ತೆ — ಉತ್ಸಾಹ, ಉದ್ಯೋಗ, ಉನ್ನತಿಯ ಕನ್ನಡ ಮಾಸಪತ್ರಿಕೆ.

ಸಂಪಾದಕ— ಶ್ರೀ ಬಾಗಲ ಲಕ್ಷ್ಮಣರಾಯರು, ವಾಙ್ಮಯ ವಿಶಾರದ

ಮಾದರಿ ಸಂಚಿಕೆ ಪುಕ್ಕಟೆ ದೊರೆಯುವದು ವಾರ್ಷಿಕ ಚಂದಾ ರೂ. ೧-೪-೦

ಕಿರ್ಲೋಸ್ಕರ ಬಂಧು ಲಿಮಿಟೆಡ್; { ಕಿರ್ಲೋಸ್ಕರವಾಡಿ, ಜಿಲ್ಲಾ ಸಾತಾರಾ.

ಅಮೃತಾಂಜನ.

ಇದರ ಉಪಯೋಗದಿಂದ, ತಲೆನೋವು, ಉಳುಕು ಇತ್ಯಾದಿ ವ್ಯಾಧಿಗಳಮೇಲೆ, ರಾಮಬಾಣದಂತಾಗಿರುವದು. ಕಳೆದ ೨೫ ವರ್ಷಗಳಿಂದ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗುತದೆ. ಲಕ್ಷಗಟ್ಟಲೆ ಜನಗಳು ಅಮೃತಾಂಜನವನ್ನು ಉಪಯೋಗಿಸುತ್ತಿರುವರು. ಇದರಿಂದ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಬೀಗು, ಸಂಧಿವಾತ ಮೊದಲಾದ ಎಷ್ಟೋ ವ್ಯಾಧಿಗಳಮೇಲೆ ಇದು ಗುಣಕಾರಿಯೆಂದು ಅರಿಯಬೇಕು ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು. ಕಿಮ್ಮತು ೧೦ ಆಣೆ ವ್ಹಿ. ಪಿ. ಖರ್ಚು ಬೇರೆ.

ಅಮೃತಾಂಜನ ಡಿಪೋ, ಫೋರ್ಟ. ಮುಂಬಯಿ.

Printed and Published by Krishnarao Kesha Shenvi (Editor) at his Star of Kanara Press Kumta.

Reg. No. B 1270

Monday May 10th, 1926.

ವರ್ಷ ೧೦.

ಕಾನಡಾವೃತ್ತ.

THE KANARA NEWS.

ಸಂಚಿಕೆ ೩೧.

[illegible]

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಮುಂಗಡ ವರ್ಗಣಿ.

ರೂ. 3-0-0.

0-1-0

(ಕುಮಟಾ—ಕಾನಡಾವೃತ್ತ, ಸೋಮವಾರ, ತಾರೀಖು ೧೦ ನೆಯ ಮೇ ಸನ್ ೧೯೨೬ ನೇ ಇಸವಿ.)

द्राक्षासव-

[illegible]

फार्मास्युटिकल वर्क्स लिमिटेड,

मुंबई नं: १२

[illegible]

ನೋವುಗಳಿಗೆ ದಿವ್ಯೌಷಧವು

ವಾತಹಾರಿ ತೈಲ.

[illegible]

ಬೇಕಾದ ಚಿನ್ನಾಭರಣಗಳು ನಮಗೆ ಆರ್ಡರ ಕೊಟ್ಟಲ್ಲಿ ಯೋಗ್ಯ ಮುದ್ದತ್ತಿನಲ್ಲಿ ಕೊಡುವೆವು.

R. S. KASARGOD, B. A.

Jewellers, KUMTA.

ಆರ್. ಎಸ್. ಕಾಸರಗೋಡ, ಬಿ. ಎ.,

ರತ್ನಾಭರಣ ವ್ಯಾಪಾರಿ, ಕುಮಟಾ.

ಯಾವದೇ ಆಕಾರದ / ನಕ್ಷೆಯ / ನಂಬರಿನ ಗಡಿಯಾರವನ್ನು

ಬರೇ ೭ ರೂಪಾಯಿಗಳಿಗೆ ಕೊಡುತ್ತೇವೆ.



[illegible]

ಅಲ್ಪವೇ ಇವೆ; ಈಗಲೇ ಬರೆಯಿರಿ.

ಪತ್ತೆ — Swan House: P B 603 P T Madras

ಅತ್ಯಲ್ಪವಿವೆ!

ಕೇವಲ

ಉಚಿತ



ಉಚಿತ

ಉಚಿತ

ಕೇವಲ

ಉಚಿತ

[illegible]

ಗೋಂಕಣ್ಣವರಿಯಿಂದ ಹೊಸ ವರ್ಷ ಪ್ರಾರಂಭ

ಸಚಿತ್ರ ಜಯಕರ್ನಾಟಕ (ಮಾಸಪತ್ರಿಕೆ)

ಸಂಪಾದಕ- [illegible]

ಇದರಲ್ಲಿ [illegible] ಇತ್ಯಾದಿ ವಿಷಯಗಳು ಬರುವವು [illegible]. ಪ್ರತಿ ಸಂಚಿಕೆಯಲ್ಲಿ [illegible] ಚಿತ್ರಗಳು ಬರುತ್ತವೆ [illegible] ೩೦ ಪುಟಗಳು. [illegible] ೫-೦-೦ [illegible] ಧಾರವಾಡ.

ರೋಗದಿಂದ ನರಳಬೇಡಿರಿ.

ನಮ್ಮಲ್ಲಿ [illegible], ಎಲ್ಲ ತರದ ಜ್ವರ, [illegible], [illegible], ದಮ್ಮು, ಕೆಮ್ಮು, ಕಫ, ಅಗ್ನಿಮಾಂದ್ಯ [illegible], [illegible] ಮುಂತಾದ ಎಲ್ಲ ರೋಗಗಳ [illegible] ಔಷಧಗಳು [illegible] ಸಿಗುವವು.

ಹಾಗೂ ಎಲ್ಲ ತರದ [illegible], [illegible], [illegible] ಬೇರೆ ಬೇರೆ ಊರಿನಿಂದ [illegible].

ಎನ್ ಎಲ್ ಧಾರಕಪ್ಪ ಮತ್ತು ಬ್ರದರ್ಸ,

ಶಿರಸಿ.

ಟಿ. ಎಸ್. ಮೋಟರ ಸರ್ವೀಸ, ಶಿವಮೊಗ್ಗಾ.

ಗೇರಸಪ್ಪಾ ಜೋಗಿಗೆ ರೆಗ್ಯೂಲರ್ ಸರ್ವಿಸ್

ಶಿವರಾತ್ರಿಯ ಸಮಯದಲ್ಲಿ ಗೋಕರ್ಣಕ್ಕೆ ಸ್ಪೆಶಲ್ ಲಾರಿಗಳು

(೧) ಹುಬ್ಬಳ್ಳಿ- ಯಲ್ಲಾಪುರ- ಅಂಕೋಲಾ- ಕಾರವಾರ (೨) ಹುಬ್ಬಳ್ಳಿ- ಮುಂಡಗೋಡ ಶಿರಸಿ ಕುಮಟಾ- ಹೊನ್ನಾವರ ಧಕ್ಕೆ (೩) ಕುಮಟಾ- ಶಿರಸಿ- ಸಿದ್ದಾಪುರ- ಗೇರಸಪ್ಪಾ- ಜೋಗ (Gersappa Falls) ಸಾಗರ ಶಿವಮೊಗ್ಗಾ— ಈ ಲೈನುಗಳಲ್ಲಿ ರೆಗ್ಯುಲರ್ ಸರ್ವಿಸ ನಡೆಯುತ್ತದೆ. ಪ್ರಯಾಣಿಕರಿಗೆ [illegible] ಎಲ್ಲಾ ಸ್ಟೇಶನ ಗಳಲ್ಲೂ [illegible] ಮಾಡಿದೆ.

ಹೆಚ್ಚಿನ ಮಾಹಿತಿಯನ್ನು ಆಫೀಸಿನಲ್ಲಿ ತಿಳಿದುಕೊಳ್ಳಬಹುದು

M. Manjappa

PROPRIETOR.

अगदीं फुकट.

वैद्यविद्या.

आरोग्यसंपत्ति आणि पूर्ण सुखाचा सरळ रस्ता दाखविणारे "वैद्यविद्या" नावाचा मोठा आयुर्वेदीक पुस्तकाची नवीन आवृत्ति बाहेर पडली आहे. हे पुस्तक कींमत व पोष्ट खर्च घेतल्या सिवाय अगदी फुकट पाठविण्यात येते. तरी हे पुस्तक आजच मागवा.

प्रमेहावर रामबाण औषध.

मेहमर्दनचूर्ण.

हें चूर्ण फक्त तीन दिवस लागोपाठ घेत ल्याने लत्तीम होणारी आग, लघवी थांबु थांबुन होणें व्याधि या औषधाच्या सेवना एकदम बरे होतात.

कि. १० तोळ्याच्या डब्यास रु. १.

राजवैद्य नारायणजी केशवजी, जामनगर (काठेवाड).

कुमटा एजन्ट— माधव सोतप्पा शेणवी, बेलेकेरी.

ರಾಗದ ಪೆಟ್ಟಿಗೆಗಳು.

ತಬಲೆ ಜೋಡಿ ಇತ್ಯಾದಿ ಗಾಯನ ಸಾಮಾನು



೧ ರಾಗದ [illegible] ಪೆಟ್ಟಿಗೆ ಕಿಂ. ೩೦, ೪೦, ೬೦, ೭೫, ೧೦೦.

೨ „ ಕಾಲು ಪೆಟ್ಟಿಗೆ ಕಿಂ. ೩೫, ೭೫, ೧೨೦, ೧೫೦

೩. ತಬಲ ಜೋಡಿ ಕಿಂ. ೧೩, ೧೮, ೨೦, ೨೫.

೪. ಹಾರ್ಮೋನಿಯಮ ಗ್ರಂಥ (ಮರಾಠಿ) ಕಿಂ. ೧॥

ತಬಲ ಗ್ರಂಥ ಕಿಂ. ೧॥

ವಿಶೇಷ ಮಾಹಿತಿಬಗ್ಗೆ ನಮ್ಮ ಮರಾಠಿ [illegible] ಕೇಳುವದು.

ಪತ್ರವ್ಯವಹಾರ ಮರಾಠಿಯಿಂದ ಇಲ್ಲವೆ ಇಂಗ್ರಜಿಯಿಂದ ಮಾಡಬೇಕು.

ಪತ್ತೆ:-ಗೋವಿಂದ ಸಖಾರಾಮ [illegible] ಕಂಪನಿ, ವಿಠ್ಠಲವಾಡಿ ಎದುರಿಗೆ ೨೬೩ ಕಾಳಬಾದೇವಿ ಮುಂಬಯಿ

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕೇಟುಗಳು ಮತ್ತು ಸುವರ್ಣಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು.

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ

ಈ ಮಧುವು ಮಹೌಷಧಿಯಾಗಿದ್ದು ಬಹಳ ರುಚಿಯಾಗಿಯೂ [illegible] ಇರುತ್ತದೆ. ಮಧುವ ಸೇವನದಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ [illegible] ರೋಗ [illegible] ವರ್ಷದ ಮುದುಕರ [illegible] ಹರುಷಾಂತ ವೃದ್ಧರು [illegible]. ([illegible] ಒಂದೇ ಸಪ್ತಾಹದಲ್ಲಿ ಅನುಭವಕ್ಕೆ ಬರುವದು) [illegible] ಜನನೇಂದ್ರಿಯ [illegible] [illegible] — [illegible] ದಿವಸಗಳಲ್ಲಿಯೇ [illegible]. ಈ ದ್ರಾಕ್ಷಾರ್ಕ ಮಧುವ ಸೇವನ ಮಾಡಿ [illegible] ಪರೀಕ್ಷೆ ಮಾಡಬೇಕು. ಅದರಿಂದ ಕ್ಷಯರೋಗ, ಉದರರೋಗ ಮತ್ತು [illegible] ದಿವಸದಲ್ಲಿ [illegible] ಅನ್ನ ಪಚನವಾಗಿ ಹಸಿವೆ [illegible] ಆಗುತ್ತದೆ. [illegible] ದಿವಸದೇ ಬರುವದು. [illegible] ಆಗುವದು. [illegible] ಎಷ್ಟೋ ದಿವಸದ [illegible] ಒಂದು ವಾರದಲ್ಲಿ ನಾಶವಾಗುವದು. [illegible] ಪಥ್ಯವಿಲ್ಲ. ಸ್ತ್ರೀಸಂಭೋಗ [illegible] ೧೦ ದಿವಸ [illegible] ಒಂದು ಬಾಟಲಿಯಿಂದ ಗುಣಬರುವದು. ಹಳೇ ರೋಗದ್ದು [illegible] ಬಾಟಲಿಯಿಂದ ಗುಣಬರುವದು. ಒಂದು ಬಾಟ್ಲಿಯ ಕಿಮ್ಮತ್ತು ೧। ರೂಪಾಯಿ ಮೂರು ಬಾಟಲಿಯ [illegible] ೩—೦ ಮೂರು ಬಾಟಲಿಗಳನ್ನು ಒಂದೇ ಪಾರ್ಸಲಿನಲ್ಲಿ ಕಳಿಸುವೆವು. [illegible] ಬೀಳುವದಿಲ್ಲ. [illegible] ಬಾಟಲಿಗಳ ಕಿಮ್ಮತ್ತು ೧೩—೦—೦ ಮತ್ತು ೧ ಬಾಟಲಿ ಪುಕ್ಕಟೆ ಕಳಿಸುವದು. [illegible] ಬೇರೆ ಬೀಳುವದು. ವಿ.ಪಿ. [illegible] ೧ ಬಾಟ್ಲಿಗೆ ೧—-—೦ [illegible] ಬಾಟ್ಲಿಗೆ ೩—೦—೦ [illegible] ೧೩—೧—೦

ಮ್ಯಾನೇಜರ— ದ್ರಾಕ್ಷಾರ್ಕಮಧು ಆಫೀಸ, [illegible] ಬೆಳಗಾಂ

ಕರ್ನಾಟಕ ಲೋಕನಾಯಕರ ಜಂಗಲ ಖಾತೆಯ ನಿಷೇಧ.

ಕರ್ನಾಟಕದ ಲೋಕನಾಯಕರಾದ ಶ್ರೀ ಗಂಗಾಧರರಾವ ದೇಶಪಾಂಡೆ, ಶ್ರೀನಿವಾಸರಾವ ಕೌಜಲಗಿ [illegible] ಹನುಮಂತರಾವ ಕೌಜಲಗಿ, [illegible] ... ಶ್ರೀ [illegible] ದೇಶಪಾಂಡೆಯವರ [illegible] ... ಜಂಗಲ ಕಟ್ಟಳೆ [illegible] ... ಜಂಗಲ ಕಮಿಟಿಯ [illegible] ...

[illegible] ... ಜಂಗಲ ಕಮಿಟಿಯು [illegible] ... ಶ್ರೀ ದೇಶಪಾಂಡೆ [illegible] ...

ದೇಶಪಾಂಡೆಯವರ ಭಾಷಣ.

ಶ್ರೀ ದೇಶಪಾಂಡೆಯವರು [illegible] ...

[illegible] ... ಜಂಗಲ ಕಮಿಟಿ [illegible] ...

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ.



ಕಾಮಿನಿಯಾ ತೈಲ (ರಿಜಿಸ್ಟರ್ಡ್)

[illegible] ...

ಕಾಮಿನಿಯಾ ಆಯಿಲ್ [illegible]

[illegible] ...

[illegible] ... "ಕಾಮಿನಿಯಾ ಆಯಿಲ್" [illegible] ...

ಕ್ರಯ :— ಸೀಸೆಗೆ ರೂಪಾಯಿ 1-0-0, ಸೀಸೆ 3 ಕ್ಕೆ ರೂಪಾಯಿ 2-10-0 ವಿ. ಪಿ. ಖರ್ಚು 0-14-0.

ಅತಿ ಮನೋಹರವಾದ ಸುವಾಸನೆಯು !

ಒಟ್ಟೋ-ದಿಲ್ ಬಹಾರ್ !! (ರಿಜಿಸ್ಟರ್ಡ್.)

[illegible] ...

ಸೀಸೆ 1 ಕ್ಕೆ 0 8 0; 1 ಡ್ರಾಮಿನ (ಮಿಡಿಯಂ) ಸೀಸೆ 1 ಕ್ಕೆ 0 12 0; [illegible] ಸೀಸೆ 1 ಕ್ಕೆ 2 0 0. ಅಂಚೆಯ ವೆಚ್ಚ ಬೇರೆ 0 4 0

ಒಟ್ಟೋ-ದಿಲ್ ಬಹಾರ್ ಪರಿಮಳ [illegible] ಡಜನ್ 1 ಕ್ಕೆ 0 12 0.

'ress: **The Anglo Indian Drug & Chemical Co**

ರೈತರ ಆಸ್ತಿ ಅಪಹಾರಕ್ಕಾಗಿ ಜಂಗಲ ಖಾತೆಯವರ ಕುಹಕಗಳು.

[illegible]

ಶ್ರೀ ... ರಾವ ದೇವರವರ ಭಾಷಣ

[illegible]

... ಬಹಳ ಆನಂದವಾಯಿತು. ದೇಶಸೇವೆಗೆಂದು ... ವರ್ಷಗಳ ... ನಾನು ಧನ್ಯನಾಗಿರುವೆನು.

ಮೂರನೇ ವಿಷಯವೆಂದರೆ, ಜಂಗಲ ಕಮಿಟಿಯ ... ಶ್ರೀ ಗಂಗಾಧರರಾಯರು ... [illegible]

ಶ್ರೀ ಶ್ರೀನಿವಾಸರಾವ ಕೌಜಲಗಿಯವರ ಭಾಷಣ.

[illegible]

ಮತ್ತೊಂದು ಮಾತು ಹೇಳುತ್ತೇನೆ. ... [illegible]

ಅಧ್ಯಕ್ಷರಾದ ಶ್ರೀ|| ಶಿವರಾವ ಶಾಸ್ತ್ರಿಗಳ ದಬ್ಬಾಳಿಕೆ!

ನಮ್ಮ ಬ್ರಿಟಿಶ ಸರಕಾರದ ಲಕ್ಷಣವನ್ನೆಂದು ಹೇಳಬಹು ದು? " ಬಿತ್ತಿದರೆ, ಕಾಯುತ್ತ; ಕಾದರೆ, ಬಿತ್ತಲ್ಲ. " ಸರಕಾರಕ್ಕೆ ನಾವು ಬುದ್ಧಿ ಹತ್ತಿದರೆ, ಸರಕಾರವು ಸರಿಯು ನಮಗೆ ಸ್ವಲ್ಪ ಮಾಡಿಕೊಡುತ್ತದೆ. ನಾವು ಸರಕಾರಕ್ಕೆ ಸ್ವಲ್ಪ ಮಾಡಿಕೊಡದ ಆಲೋಚನೆಯಿಂದ ಸರಿಯುತ್ತಿದರೆ, ಅದು ನಮಗೆ ಬುದ್ಧಿ ಹತ್ತುತ್ತದೆ. ಇದನ್ನು ಜನ್ಯಾಗಿ ಲಕ್ಷದಲ್ಲಿಟ್ಟುಕೊಳ್ಳಿರಿ. ರಾಷ್ಟ್ರೀಯ ಸಭೆಯ ಸಭಾಸದರು ೧೦ ನಿಮ್ಮ ಜಿಲ್ಲೆಯಲ್ಲಿ ೫|| ಲಕ್ಷ ಪ್ರಜಾ ಜನರಿರುವರು ... ಕಾಯಿದೆ ಕೌನ್ಸಿಲುಗಳಿಗೆ ... ಪ್ರಶ್ನೆಗಳು ೧೬—೧೯ ... ರಾಷ್ಟ್ರೀಯ ಸಭೆಗೆ ಹೀಗೆ ಆರಿಸಿಬಂದರೆ ... ಸಭಾಸದರಾಗಿರಿ; ಕಾಂಗ್ರೆಸ ಕಮಿಟಿಗಳನ್ನು ಸಂಘಟಿಸಿ ... ನಿಮಗೆ ಬೇಕಾದದ್ದನ್ನು ಕೇಳಿರಿ, ಅಂದರೆ, ನಿಮ್ಮ ದುಃಖವನ್ನು ಅಲ್ಲಗಳೆಯುವ ಸಾಮರ್ಥ್ಯ ಸರಕಾರಕ್ಕಿರುವದಿಲ್ಲ. ... ನಿಮ್ಮ ಜಿಲ್ಲೆಯೋ ... ನಿಮಗೆ ... ಯನ್ನು ... ಹೋಗಿದೆ. ... ನಿಮಗೆ ... ಬೇಕು; ... ಬೇಕು; ... ಜ್ವಲಿಸಿದ್ದ ... ಮಾಡಬೇಕು; ... ಮಾಡಬೇಕು. ... ಅರ್ಥವಾಗಿದ್ದಿಲ್ಲ. ನಿಮ್ಮ ಜಂಗಲ ಹಕ್ಕಿಗಾಗಿ ... ದಿಂದ ಕಾಯಿದೆಗಳಿಗೆ ... ಪ್ರಶ್ನವಾಗುವದು; ದೇಶಭಕ್ತರ ಸಂಖ್ಯೆಯಲ್ಲಿ ... ಕಾಯಿದೆಗಳು ... ರಾಜದ್ರೋಹವಲ್ಲ. ಶಾಸ್ತ್ರಿಗಳ ವಿಚಾರ ಮಾಡಿದರೆ ... ರಾಜನಿಷ್ಠೆಯೋ, ಪ್ರಜಾಕಲ್ಯಾಣ ಮಾಡಲು ... ತಿಳಿಯದಾಗ ಕಾಯಿದೆಗಳನ್ನು ಮುರಿದು ... ಪ್ರಜಾಕಲ್ಯಾಣ ಮಾಡತಕ್ಕವರು ರಾಜದ್ರೋಹವಾಗ ದು."

ಬಳಿಕ, ಶ್ರೀ ಶ್ರೀನಿವಾಸರಾಯರು ಕರ್ನಾಟಕದ ಏಕೀಕರಣದ ಕುರಿತು ಸಾಧ್ಯ ಮಾತಾಡಿದರು. ನಮ್ಮ ಕರ್ನಾಟಕಕ್ಕೆ ಜಂಗಲದ ಮಹಾರಾಷ್ಟ್ರೀಯರು ದಕ್ಷಿಣ ಮಹಾರಾಷ್ಟ್ರವೆಂದು ಕರೆಯೋದಿಸಿ ಕರ್ನಾಟಕದ ಸಂಸ್ಕೃತಿಯು ... ಅಲ್ಲ ವರದೆ ಹೇಳುತ್ತಿರುವರೆಂದೂ, ಇಂದು ಇದಿ ... ಅವರಿದ್ದರು, ಇನ್ನೊಂದು ಒಡಿಯ ... ನಮ್ಮನ್ನು ... ಕರ್ನಾಟಕ ಸಂಸ್ಕೃತಿಯನ್ನು ಸ್ಮರಿಸಿ ಅದನ್ನು ಉದ್ಧರಿಸದೆ ಕರೆದು ನಮ್ಮ ... ಕರ್ನಾಟಕ ಸಂಸ್ಕೃತಿಯು ... ನಷ್ಟವಾಗುತ್ತಿರುವಾಗ ಕರ್ನಾಟಕಸ್ಥರು ಕೈಕಾಲು ... ಕುಳಿತುಕೊಳ್ಳುವದು ... ರಾಷ್ಟ್ರೀಯತೆಯಿಂದಲೂ ಹಿಂದುಸ್ಥಾನದ ರಾಜ್ಯಸಭೆ ... ಭಿನ್ನ ಭಿನ್ನ ಭಾಷೆಗಳ ಪ್ರಾಂತಗಳ ಸಂಯುಕ್ತ ... ವಾಗುವದೆಂದೂ ಪ್ರತಿಪಾದಿಸಿ, ಕರ್ನಾಟಕ ಏಕೀಕರಣಕ್ಕಾಗಿ ... ಕರ್ನಾಟಕ ಭಾಷೆಯನ್ನು ... ಅಭಿಮಾನ ... ಕನ್ನಡ ಭಾಷೆಯ ಏಳ್ಗೆಗಾಗಿ ... ಬೋಧಿಸಿ, ತಮ್ಮ ಚಿಕ್ಕ ... ಭಾಷಣವನ್ನು ಚಪ್ಪಾಳೆಗಳ ಕೋಲಾಹಲದಲ್ಲಿ ಮುಗಿಸಿದರು.

ಕರೆಯಬಂದಿಗೆ ರಾ|| ಗುಲ್ವಾಡಿರ ಅಪ್ರಸ್ತುತ ಸವಾಲು..

ಬಳಿಕ, ಅಧ್ಯಕ್ಷರಾದ ಶ್ರೀ|| ಶಿವರಾವ ಶಾಸ್ತ್ರಿಗಳವರು ... ಕರ್ಕಿಯವರನ್ನು ಭಾಷಣ ಕೊಡಲು ವಿನಂತಿಸಿ ... ಶ್ರೀ ಕರ್ಕಿಯವರು ಕಾಂಗ್ರೆಸ ಜಂಗಲ ಕಮಿಟಿಯ ಸಭಾಸದರಿದ್ದಾಗ, ಸರಕಾರವು ನೇಮಿಸಿದ ಜಂಗಲ ಕಮಿಟಿಯಲ್ಲಿ ಸಭಾಸದರಾಗಿದ್ದದ್ದು ಸರಿಯಾಗಿಲ್ಲೆಂದು ... ಅಧ್ಯಕ್ಷರು ತಮ್ಮ ... ಶ್ರೀ ... ಎರಡೂ ಕಮಿಟಿಗಳಲ್ಲಿ ಸಭಾಸದರಾಗು ... ವಿಸಂಗತವೆಂದು ನಮಗೆ ತೋರುವದಿಲ್ಲವಾಗಿಯೂ,

ಕಾಂಗ್ರೆಸ ಜಂಗಲ ಕಮಿಟಿಯವರು ನಿರ್ಧರಿಸಿದ ಯೋಜನೆಯನ್ನೇ ಸರಕಾರಿ ಜಂಗಲ ಕಮಿಟಿಯಲ್ಲಿ ಪುರಸ್ಕರಿಸಲು ತಾವು ಅವಕಾಶವಿದ್ದುದರಿಂದ ಹೋಗಿ, ಇದರೊಳಗೆ ವಿಸಂಗತವಾದದ್ದೇನೆಂದು ಪ್ರಶ್ನೆ ಮಾಡಿ, ಜಂಗಲ ಕಮಿಟಿಯ ಪರವಾಗಿ ಸಾಧ್ಯ ಮಾತು ಗಳನ್ನಾಡಿದರು. ಕೆಲವರು ಕಮಿಟಿಯನ್ನು ಬಹಿಷ್ಕರಿಸು ವ ಧೋರಣವನ್ನಿಟ್ಟಾಗ, ಶ್ರೀ ಗಂಗಾಧರರಾವ ದೇಶಪಾಂಡೆ ಯವರು ... ಕಮಿಟಿಯಲ್ಲಿ ... ಆಕ್ಷೇಪ ... ಹೇಳಿದರು. ... ಶ್ರೀ|| ದೇವರವರ ದೈಶದ ... ಹೇಳಿದರು. ಬಳಿಕ ರಾ|| ಗುಲ್ವಾಡಿಯವರು ಶ್ರೀ ಕರ್ಕಿಯವರ ... ಕಾರವಾರ ಜಿಲ್ಲೆಯಲ್ಲಿ ... ಶ್ರೀ ಕರ್ಕಿಯವರು ... ಯೋಜನೆಗಿಂತ ಹೆಚ್ಚು ಈ ಕಮಿಟಿಯಲ್ಲಿ ನೀವೇನು ಮಾಡಬಲ್ಲಿರಿ?" ಎಂಬರ್ಥದ ಪ್ರಶ್ನೆಯನ್ನು ರಾ|| ಗುಲ್ವಾಡಿಯವರು ಕೇಳಿದರು. ಶ್ರೀ ಕರ್ಕಿಯವರು ಅದ ರಿಂದ ತಮಗೆ ... ಆ ಯೋಜನೆಯಾದ ಬಳಿ ಕ ... ಅದನ್ನು ನಾವು ವಿಚಾರ ಮಾಡಬೇಕು. ಮುಂತಾಗಿ ಹೇಳಿ ತಮ್ಮ ಭಾಷಣವನ್ನು ಮುಗಿಸಿದರು.

ಬಳಿಕ, ರಾ|| ಗೋವಿಂದರಾಯರು ಭಾಷಣ ಕೊಟ್ಟರು. ... ಕಮಿಟಿಯಲ್ಲಿ ... ಆಗ ಮಾಡಬೇಕು; ... ಕಮಿಟಿಯಾಗಿರುವದು; ... ಆ ಸಭೆಯಲ್ಲಿ ರಾ|| ನರಸಿಂಹ ... ಶ್ರೀ ಕರ್ಕಿಯವರು ... ಅಧ್ಯಕ್ಷರಿಗೆ ತಿಳಿಸಿ ಅವರ ಅಪ್ಪಣೆ ಬೇಡಿದರು. ಅಧ್ಯಕ್ಷರು ... ಬಳಿಕ, ರಾ|| ಎಸ್. ಎನ್. ... ಅಧ್ಯಕ್ಷರ ... ರಾ|| ... ಅಧ್ಯಕ್ಷರು ಅವರಿಗೆ ... ಬಳಿಕ, ಎಲ್ಲ ... ಯು ವಿಸರ್ಜನವಾಯಿತು.

ಅಧ್ಯಕ್ಷಸ್ಥಾನವನ್ನು ಬಿಟ್ಟು ಬಂದ ಬಳಿಕ, ರಾ|| ಕ್ಯಾನ ಭಾಗರವರಿಗೂ, ಶ್ರೀ|| ಶಾಸ್ತ್ರಿಗಳಿಗೂ ವಾದವಾಯಿತು. ರಾ|| ಕ್ಯಾನಭಾಗರು ಶ್ರೀ|| ಶಾಸ್ತ್ರಿಗಳ ವರ್ತನವನ್ನು ನಿಷೇಧಿಸು ... "ನೀವು ಗುಲ್ವಾಡಿಯವರಿಗೆ ... ಅವಕಾಶ ಸಿಗುವದಿಲ್ಲ; ... ಎಂದು ರಾ|| ಕ್ಯಾನಭಾಗರು ಪ್ರಶ್ನಿಸಲು, ಶ್ರೀ|| ಶಾಸ್ತ್ರಿಗಳು ... ಹೇಳಿದರು. ... ರಾ|| ಕ್ಯಾನಭಾಗರು ... ಪ್ರಶ್ನೆ ಕೇಳಿದರು. "ನೀವು ಸಭ್ಯ ಗೃಹಸ್ಥರಿದ್ದೀರಿ, ... ಗೃಹಸ್ಥ ... ಉತ್ತರ ... ಎಂದರು. ... ಶಾಸ್ತ್ರಿಗಳವರು ... ಶ್ರೀ ದೇವಾಲಯ ... "ನಿಮ್ಮ ... ಅಧ್ಯಕ್ಷರ ... " ಎಂದು ಕೆಲವರು ... ಐದು ನಿಮಿಷಗಳ ವರೆಗೆ ...

ಬಿದ್ದರೆ ಅಧ್ಯಕ್ಷರು ಅಧಿಕಾರಯುತರಾಗಿ ... ಕೆಲವರು ... ಆಕ್ಷೇಪಿಸಿದರು. ... ಅಧ್ಯಕ್ಷರು ... ವಿಸರ್ಜನ ಹೊಂದಿತು. ದೇಶಭಕ್ತರು ಮಾರನೇ ದಿನ ... ದೇಶಭಕ್ತರು ... ಸ್ಥಾಪಿಸಿರುವರು.

ಜಂಗಲ ಕಮಿಟಿ.

ನಮ್ಮ ಮುಂಬಯಿಯ ಪ್ರಾಂತಿಕ ಸರಕಾರವು ನೇಮಿಸಿದ ಜಂಗಲ ಕಮಿಟಿಯ ಸಭಾಸದರು ಇಲ್ಲಿ ಮಂಗಳವಾರಕ್ಕೆ ಬಂದಿದ್ದರು. ಅಧ್ಯಕ್ಷರಾದ ಮಿ|| ... ಶ್ರೀ ... ದೇಶ ... ನಮ್ಮ ಜಿಲ್ಲೆಯ ಕೌನ್ಸಿಲು ಪ್ರತಿನಿಧಿಗಳಾದ ಶ್ರೀ ಮುಂಜುನಾಥ ಭಟ್ಟ ಕರ್ಕಿ ... ಬಂದಿದ್ದರು. ... ರಾ|| ಹೊನ್ನಾವರಿಂದ ... ಬರಲಿಲ್ಲ. ... ಬಂದು ... ಕರ್ಕಿಯವರ ... ಕಮಿಟಿಯು ... ಜಂಗಲ ಖಾತೆಯ ... ಕಮಿಟಿ ... ಮಂಗಳವಾರಕ್ಕೆ ಇಲ್ಲಿಯ ಜಂಗಲ ಖಾತೆ ... ಸತವಿತ್ತು.

ಮಂಗಳವಾರಕ್ಕೆ ಇಲ್ಲಿಯ ... ಕಮಿಟಿಯು ಪ್ರಾರಂಭವಾಯಿತು. ಅಂದು ... ಜಂಗಲ ಹಕ್ಕುಗಳ ನಿರಾಕರಣೆಯನ್ನು ... ಹೊನ್ನಾವರದಿಂದ ... ಮಂದಿಗಳು ಬಂದಿದ್ದರು. ... ಮಂದಿಗಳ ... ಕಮಿಟಿಯವರು ... ಜನರು ತಮ್ಮ ... ಕಮಿಟಿಯವರು ... ರಾ|| ಗುಮ್ಮಕರ ... ಕಮಿಟಿಯವರು ... ಜಂಗಲ ಹಕ್ಕುಗಳನ್ನು ... ಕೂಡಿದ್ದ ... ನಮ್ಮ ಶ್ರೀ ಕರ್ಕಿಯವರ ... ಸಿಕ್ಕ ಹೇಳುತ್ತಿದ್ದರು.

ಮಾರನೇ ದಿನ ಬೆಳಗ್ಗೆ ಕಮಿಟಿಯವರು ... ನೋಡಹೋಗಿದ್ದರು. ... ರಾ|| ... ಕಮಿಟಿಯವರು ... ರಾ|| ... ಗದ್ದೆಗಳನ್ನು ನೋಡಿದರು. ಈ ಗದ್ದೆಗಳು ೧೧ ೧೫ ವರ್ಷಗಳಿಂದ ... ಬಿದ್ದಿವೆ. ... ಮೊದಲು ... ಕಮಿಟಿಯವರು ... ಬೇಕು? ... ಗಳ ... ಗದ್ದೆಗ ... ಒಳ ... ಹರ!

ಬಳಿಕ, ಕಮಿಟಿಯವರು ... ರಾ|| ಸುಬ್ರಾಯ ... ಹೋದರು. ... ಇಲ್ಲಿ ... ೨೦ ವರ್ಷಗಳಿಂದ ... ದಿನೇ ದಿನೇ ... ಈ ಹೊಲಗಳಿಗೆ ... ರು. ... ರಾ|| ... ಅವರನ್ನು

(ಮುಂದಿನ ...)

ಕಾನಡಾವೃತ್ತ.

ಮಿತಿ ಕ್ಷಯ ಸಂ॥ ನಿಜ ಚೈತ್ರ ಬ॥ ೧೩, ಸೋಮವಾರ

ಮನಸ್ಯನ್ಯದ್ವಚಸ್ಯೇಕಂ!

ಸಾಬರಮತಿಯ ಸಂಧಾನದ ಅರ್ಥಗೊಂದಲ.

ಸಾಬರಮತಿಯಲ್ಲಿ ಸ್ವರಾಜ್ಯ ಪಕ್ಷದವರೊಳಗೂ, ಪ್ರತಿಸಹಕಾರಿಗಳೊಳಗೂ ಮಹಾತ್ಮರ ಸಾನ್ನಿಧ್ಯದಲ್ಲಿ ಸಂಧಾನವಾದ ಆನಂದದಾಯಕ ಸಂಗತಿಯನ್ನು ಸಾರಿ ಒಂದು ಪಕ್ಷ ಮುಗಿಯುವಷ್ಟರಲ್ಲಿ, ಪುನಃ ಇತ್ತಂಡಗಳೂ ಭಿನ್ನವಾದವೆಂದು ಹೇಳಲು ಒಂದು ಪರಿಯಿಂದ ವ್ಯಸನವಾಗುತ್ತದೆ; ಇನ್ನೊಂದು ಪರಿಯಿಂದ ಸಂತೋಷವಾಗುತ್ತದೆ. ಸಾಬರಮತಿಯ ಒಪ್ಪಂದವನ್ನು ಅಖಿಲ ಭಾರತೀಯ ಕೊಂಗ್ರೆಸ ಕಮೀಟಿಯಲ್ಲಿ ಮಂಜೂರು ಮಾಡಿಕೊಳ್ಳುವರೆ ಕಮೀಟಿಯ ಅಧಿವೇಶನವು ಸಾಬರಮತಿಯ ಆಶ್ರಮದಲ್ಲಿ ಕಳೆದ ಮಂಗಳವಾರ.ಬುಧವಾರಕ್ಕೆ ಸೇರಿ ಸಾಬರಮತಿಯ ಕರಾರು ತನ್ನಷ್ಟಕ್ಕೆ ಬಿದ್ದುಹೋಯಿತು. ಸಾಬರಮತಿಯ ಕರಾರನ್ನು ನಿರರ್ಥಕಗೊಳಿಸಿದ ಪಾಪವನ್ನು ಪ್ರತಿಸಹಕಾರಿಗಳು ಪಂಡಿತ ಮೋತಿಲಾಲರವರ ಮೇಲೆ ಹೊರಿಸಿ, ತಮ್ಮ ಪ್ರಾಮಾಣಿಕತನವನ್ನೂ, ದೇಶಸೇವೋತ್ಸಾಹವನ್ನೂ, ಸ್ವರಾಜ್ಯ ಪಕ್ಷದ ಹಟಮಾರಿತನವನ್ನೂ ಸಾರುವ ತಯಾರಿಯಲ್ಲಿದ್ದುದರಿಂದ ಈ ಕುರಿತು ನಡೆದ ಹಕೀಕತನ್ನು ವಾಚಕರು ಅರಿತುಕೊಳ್ಳುವದು ಅತ್ಯಂತ ಅವಶ್ಯವಿದೆ. ಕಾಯಿದೆ ಕೌನ್ಸಿಲುಗಳ ಚುನಾವಣೆಯಲ್ಲಿ ಸಾಬರಮತಿಯ ವಚನಭಂಗದ ಉಲ್ಲೇಖವು ಪ್ರಾಮುಖ್ಯವಾಗಿ ಮಾಡಲ್ಪಡುವದರಿಂದ ಮತದಾರರೆಲ್ಲರೂ ಕಾರ್ಯಕಾರಣವನ್ನು ಮುಂದಾಗಿ ತಿಳಿದುಕೊಂಡರೆ, ಸತ್ಯಸ್ಥಿತಿಯನ್ನು ಗ್ರಹಿಸಿ, ಪಾಪಭಾಗಿಗಳನ್ನು ಕಂಡುಹಿಡಿಯಲು ಬಹಳ ಅನುಕೂಲವಾಗುವದು

ಸಾಬರಮತಿಯ ಒಪ್ಪಂದವನ್ನು ಭದ್ರಪಡಿಸಲು ಅಖಿಲ ಭಾರತೀಯ ಕೊಂಗ್ರೆಸ್ ಕಮೀಟಿಯ ಅಧಿವೇಶನವನ್ನು, ಮುದ್ದಾಂ ನಿಮಂತ್ರಿಸಿದಾಗ, ಈ ಅಧಿವೇಶನದಲ್ಲಿ ಸಾಬರಮತಿಯ ತಹನಾಮೆಯೇ ಚರ್ಚೆಗೆ ಬರಲಿಲ್ಲ. ಇದರ ಕಾರಣವೇನೆಂದು ವಾಚಕರು ಪ್ರಶ್ನಿಸಬಹುದು. ಪ್ರತಿಸಹಕಾರಿಗಳೂ ಇದೇ ಕಾರಣದಿಂದ ಕಾರ್ಯಕಾರಿ ಮಂಡಳದಲ್ಲಾಗಲೀ, ಕೊಂಗ್ರೆಸ ಕಮೀಟಿಯ ಹೊಸ್ತಿಲನ್ನಾಗಲೀ ಪ್ರವೇಶಿಸಲು ಒಪ್ಪಲಿಲ್ಲ. ಪ್ರಕಟವಾದ ಇತ್ತಿಚ್ಚಿನ ಪತ್ರವ್ಯವಹಾರದ ಮೇಲಿಂದ ಪ್ರತಿಸಹಕಾರಿಗಳು ಇದನ್ನೇ ಪ್ರಾಮುಖ್ಯವಾಗಿ ಆಶ್ರಯಿಸಿ, ಸೌಭಾಗ್ಯವತಿ ಸರೋಜಿನೀದೇವಿ ಮುಂತಾದವರೂ, ಪಂಡಿತ ಮೋತಿಲಾಲ ನೆಹರೂರವರೂ. "ಕಮೀಟಿಗೆ ಬನ್ನಿರಿ, ನಿಮ್ಮ ಹೇಳಿಕೆಗಳನ್ನು ಕೇಳಿರಿ. ನಾವೂ ನೀವೂ ಕೂಡಿ, ಬೇಕಾದ ತಿದ್ದುಪಡಿ ಮಾಡಿಕೊಳ್ಳುವಾ" ಎಂದು ಪರಿಪರಿಯಿಂದ ಹೇಳಿದರೂ, ಶ್ರೀ ಜಯಕರ-ಕೇಳಕರಾದಿಯವರು ವಚನಭಂಗವಾಗುತ್ತದೆಂಬ ದೊಡ್ಡ ನೆವ ಮಾಡಿ, ಬುದ್ಧ್ಯಾ ತಮಗೆ ಸಾಬರಮತಿಯ ಮರೆಗೆ ಎಳತಂದರೆಂದು ದೊಡ್ಡ ಆರೋಪ ಹೊರಿಸಿ ಮುನಿದು ಕೂತರು. ಸಾಬರಮತಿಯ ಒಪ್ಪಂದದ ಶಬ್ದಯೋಜನೆಯಲ್ಲಿ ಶಬ್ದವನ್ನು ಕೂಡ ತಿದ್ದುಪಡಿ ಮಾಡದೆ, ಇದ್ದಕ್ಕಿದ್ದ ಹಾಗೆಯೇ ಸಂಧಾನ ಕರಾರನ್ನು ಮಂಜೂರು ಮಾಡಬೇಕೆಂದೂ, ಬಳಕ ಶಬ್ದಗಳಿಗೆ ಭಿನ್ನ ಪ್ರಕೃತಿಯವರು ಭಿನ್ನ ಮತಸ್ಥರು ಕೊಡಬಹುದಾದ ಟೀಕಾತ್ಮಕ ಅರ್ಥದ ಗೊಂದಲದಲ್ಲಿ ರಾಷ್ಟ್ರವನ್ನ ಸಿಲುಕಿ ಹಾಕಿ, ಚತುರ್ವೇದಗಳ ಟೀಕೆಗಳಿಂದ ಸನಾತನ ಧರ್ಮದಲ್ಲುಂಟಾದ ಸಂಪ್ರದಾಯಗಳಂತೆ ಸಾಬರಮತಿಯ ಕರಾರಿನಿಂದ ಸಮಸ್ತ ಪಂಥದವರಿಗೆ ತಮ್ಮ ತಮ್ಮ ಮತದ ಅರ್ಥವನ್ನು ಕಲ್ಪಿಸಿ, ಪುರಸ್ಕರಿಸಲು ಇಂಬಾಗಬೇಕೆಂದೂ, ಶ್ರೀ ಜಯಕರ-ಕೇಳಕರಾದಿಗಳು ಹೊಂಚು ಹಾಕಿದಂತೆ ತೋರುತ್ತದೆ. ನೂತನವಾಗಿ ರಾಷ್ಟ್ರೀಯ ಪಕ್ಷವೆಂಬ ಮನಮೋಹಕ ನಾಮಾಭಿಧಾನದಿಂದ ಹೊರಬಂದ ನೇಮುಸ್ತ್ವಾದಿ ಸಹಕಾರಿಗಳೂ ಇದೇ ಆಲೋಚನೆಯಲ್ಲಿದ್ದರು. ಆದರೆ, ಪಂಡಿತ ಮೋತಿಲಾಲರು ವಚನಭಂಗದ ಮಿಥ್ಯಾರೋಪಕ್ಕೆ ಬಲಿಬೀಳದೆ ಸಂಶಯಕ್ಕೆ ಕಾರಣಭೂತವಾದ ಶಬ್ದಯೋಜನೆಯನ್ನು ಇದ್ದಕ್ಕಿದ್ದ ಹಾಗೆಯೇ ಮಂಜೂರಿಗೊಡದೆ ತತ್ವನಿಷ್ಠೆಯನ್ನೂ, ರಾಷ್ಟ್ರೀಯ ಸ್ವಾಭಿಮಾನವನ್ನೂ ಪ್ರದರ್ಶಿಸಿ, ಪ್ರತಿಸಹಕಾರಿಗಳ ಕುಹಕಗಳನ್ನೆಲ್ಲ ನಿರರ್ಥಕಗೊಳಿಸಿ, ರಾಷ್ಟ್ರೀಯ ಸಭೆಯ ನಿಜರೂಪವನ್ನೂ, ಪ್ರತಿಸಹಕಾರಿಗಳ ನಿಜರೂಪವನ್ನೂ, ಪ್ರಜೆಗಳಿಗರುಹಿರುವರು. ಇದೊಂದು ದೊಡ್ಡ ರಾಷ್ಟ್ರಸೇವೆಯು ಇದಕ್ಕಾಗಿ ಪಂಡಿತ ಮೋತಿಲಾಲ ನೆಹರೂರವರನ್ನು ಅಂತಃಕರಣಪೂರ್ವಕವಾಗಿ ಅಭಿನಂದಿಸಿ, ಸಾಬರಮತಿಯ ಸಂಧಾನದ ಅರ್ಥಗೊಂದಲವನ್ನು ವಿವರಿಸುವೆವು.

ಸಾಬರಮತಿಯ ಸಂಧಾನದಲ್ಲಿ ರಾಷ್ಟ್ರೀಯ ಸಭೆಯವರು ಸರಕಾರಿ ಅಧಿಕಾರಗಳನ್ನು ಸ್ವೀಕರಿಸಲು ಒಪ್ಪಿಗೆಯನ್ನಿತ್ತಿರುವರು. ಪ್ರಾಂತಿಕ ಪರಿಸ್ಥಿತಿಯು ಸ್ವಾಯತ್ತತೆಗೆ ಅನುಕೂಲವಾದಲ್ಲಿ, ಕೌನ್ಸಿಲಿನೊಳಗಿನ ರಾಷ್ಟ್ರೀಯ ಸಭಾಸದರು ಹಾಗೆ ನಿರ್ಧರಿಸಿದ್ದಲ್ಲಿ, ಈ ನಿರ್ಧಾರವು ಪಂಡಿತ ನೆಹರು ಹಾಗು ಶ್ರೀ॥ ಜಯಕರರವರಿಗೆ ಮಾನ್ಯವಾದಲ್ಲಿ; ರಾಷ್ಟ್ರೀಯ ಸಭೆಯವರು ಸರಕಾರಿ ಅಧಿಕಾರಗಳನ್ನು ಸ್ವೀಕರಿಸಲಡ್ಡಿಯಿಲ್ಲ. ಈ ಶಬ್ದಯೋಜನೆಗೆ ಪಂಡಿತ ಮೋತಿಲಾಲರೂ ಒಪ್ಪಿಗೆಯನ್ನಿತ್ತಿದ್ದರು; ಈಗಲೂ ಒಪ್ಪಿಗೆಯನ್ನೀಯಲು ತಯಾರಿರುವರು. ಪ್ರತಿಸಹಕಾರಿಗಳಂತು ಈ ಶಬ್ದಯೋಜನೆಯನ್ನು ವೇದವಾಕ್ಯಗಳಂತೆ ಪ್ರಮಾಣ ಮಾಡಲು ಒಗ್ಗಲಿನ ಮೇಲೆ ತಯಾರಿರುವರು. ಪ್ರತಿಸಹಕಾರ ಪಕ್ಷದಲ್ಲಿಯೂ ಹೀಗೆ ತೀರ್ಮಾನವು ಕೂಡ ಆಗಿರುವದು. ಹಾಗಾದರೆ, ಇತ್ತಂಡದವರೂ ಸಂಧಾನಕ್ಕೆ ತಯಾರಿದ್ದರೆ ವಿವಾದವೆಲ್ಲಿ! ಸಂಧಾನದ ಶಬ್ದಯೋಜನೆಯು ಅದೇ; ಒಬ್ಬರ ಅರ್ಥವು ದ್ವೈತವು; ಇನ್ನೊಬ್ಬರ ಅರ್ಥವು ಅದ್ವೈತವು; ಕ[illegible]ತ್ತೀವೆ. ಕೇಳಿರಿ.

ಪಂಡಿತ ನೆಹರೂರವರು ನುಡಿಯುವದೇನೆಂದರೆ:— ಅಧಿಕಾರಸ್ಥಾನಗಳನ್ನು ಸ್ವೀಕರಿಸುವ ಮುಂಚೆ ಪರಿಷತ್ ಕಾಯಿದೆ ಕೌನ್ಸಿಲಿನಲ್ಲಿ ಸ್ವರಾಜ್ಯ-ಸ್ವತಂತ್ರ ಪಕ್ಷದವರು ಒಕ್ಕಟ್ಟಾಗಿ ನಿರ್ಧರಿಸಿದ ತೀರ್ಮಾನವನ್ನು ಸರಕಾರವು ಅಂಗೀಕರಿಸಿ, ಅವಶ್ಯವುಳ್ಳ ತಿದ್ದುಪಾಟುಗಳನ್ನು ಕೈಕೊಳ್ಳಬೇಕು; ರಾಜಕೀಯ ಸೆರೆಯಾಳುಗಳನ್ನು ವಿಮೋಚಿಸಬೇಕು; ರಾಜಕೀಯ ಸೆರೆಯಾಳುಗಳಾಗಿ ಹೊರಬಂದ ದೇಶಸೇವಕರ ಮೇಲಿರುವ ಸಮಸ್ತ ಪ್ರತಿಬಂಧಗಳನ್ನೂ ಪರಿಹರಿಸಬೇಕು. ಸಾಬರಮತಿಯ ಸಂಧಾನಕ್ಕೆ ಪಂಡಿತ ಮೋತೀಲಾಲರವರು ಜೋಡಿಸಿದ ಅರ್ಥಬೋಧಕ ಟಿಪ್ಪಣಿಯಿದು.

ಪ್ರಚಲಿತ ರಾಜ್ಯಪದ್ಧತಿಯನ್ನು ಅದಕ್ಕೆ ತಕ್ಕವಾಗಿ ನಡಿಸಲು ಸರಕಾರಿ ಅಧಿಕಾರಸ್ಥಾನಗಳನ್ನು ಅಂಗೀಕರಿಸಲಿಕ್ಕೆ ಸಾಬರಮತಿಯ ಸಂಧಾನದಿಂದ ತಮಗೆ ಅಧಿಕಾರ ದೊರಕಿರುವದೆಂದು ಪ್ರತಿಸಹಕಾರಿಗಳು ಪ್ರತಿಪಾದಿಸಿದರು. "ಹೊಸ ಟಿಪ್ಪಣಿಯ ಮೇಲೆ ಆಲೋಚನೆ ಮಾಡಿ, ನಿಶ್ಚಯಿಸಿಕೊಳ್ಳುವಾ," ಎಂದು ಪಂಡಿತ ಮೋತಿಲಾಲರವರು ಸ್ನೇಹಭಾವದಿಂದಲೂ, ಬಂಧುಭಾವದಿಂದಲೂ ಮುಂದೆ ನೀಡಿದ ಕೈಯನ್ನು ಪ್ರತಿಸಹಕಾರಿಗಳು ಕೊಳ್ಳದೆ ಧಿಕ್ಕರಿಸಿ, ಸಾಬರಮತಿಯೊಳಗಿಂದ ಬೇರೆ ಕಳಚಿಕೊಂಡು ಹೋದರು. ನೇಮುಸ್ತ್ವಾದಿ "ರಾಷ್ಟ್ರೀಯ" ಪಕ್ಷದ ಸರ್ ಮೋರೋಪಂತ ಜೋಶಿ, ಶ್ರೀ॥ ಬಾಲಕೃಷ್ಣ ಸೀತಾರಾಮ ಕಾಮತ, ದತ್ತಾತ್ರಯ ಬಳವಿ ಮುಂತಾದ ಮಹನೀಯರು ಅಧ್ಯಕ್ಷರಾದ ಸೌ॥ ಸರೋಜಿನಿಯವರ ನಿಮಂತ್ರಣವನ್ನು ಸ್ವೀಕರಿಸಿ ವಿಚಾರವಿನಿಮಯ ಮಾಡಹತ್ತಿದಾಗ, ರಾಷ್ಟ್ರೀಯ ಸಭೆಯ ಅಭಿಮಾನಿಗಳೆಂದು ಹೇಳಿಸಿಕೊಳ್ಳುವ ಪ್ರತಿಸಹಕಾರಿಗಳು ಜಾತ್ರೆ ಕುವಯ ಮಾಳಿಯಲ್ಲಿ ಕೂತು ಚೇಳು ಕಡಿಸಿಕೊಂಡ ಹುಟ

ನಾರಿ ಮುದ್ದಣ್ಣನಂತೆ "ಒಂದು ಶಬ್ದವನ್ನಾದರೂ ಬದಲು ಮಾಡಿದರೆ, ನಮ್ಮ ಒಪ್ಪಿಗೆ ಇಲ್ಲ; ಇದ್ದಕ್ಕಿದ್ದ ಹಾಗೆಯೇ ಸಾಬರಮತಿಯ ಸಂಧಾನವನ್ನು ಮಂಜೂರು ಮಾಡಬೇಕೆಂ"ದು ಹಟ ಹಿಡಿದದ್ದು ಸರ್ವಥಾ ಅನುಚಿತವು; ಲೋಕಹಿಯ ವಿಧ್ವಂಸಕವು. ಅಖಿಲ ಭಾರತೀಯ ಕಾಂಗ್ರೆಸ ಕಮೀಟಿಯ ಮುಂದಾಳುಗಳೆಲ್ಲರೂ ತಮ್ಮ ವಿಚಾರಸ್ವಾತಂತ್ರ್ಯವನ್ನು ಹಟಮಾರಿ ಪ್ರತಿಸಹಕಾರಿಗಳಿಗಾಗಿ ಅಲ್ಲಗಳೆಯುವದು ಚೈತನ್ಯಹೀನರೆಂದೂ, ದುರ್ಬಲಮನಸ್ಕರೆಂದೂ ಶ್ರೀ ಜಯಕರ-ಕೇಳಕರರು ತಿಳಿದರೇನು! ತಮ್ಮ ತೀರ್ಮಾನವನ್ನು ಮಾನ್ಯಮಾಡದ ಬಗ್ಗೆ ತಮ್ಮಂತೆ ರಾಷ್ಟ್ರಹಿತೈಷಿಗಳಾದ ಪಂಡಿತ ಮೋತಿಲಾಲರೊಡನೆ ತಟ್ಟನೇ ಅಸಹಯೋಗ ಮಾಡಲು ತಯಾರಾದ ಪ್ರತಿಸಹಕಾರಿಗಳು, ತಮ್ಮ ಸಾಹಚರ್ಯದಿಂದ ವರಿಷ್ಠವಾಯಿದೆ ಕೌನ್ಸಿಲಿನಲ್ಲಿ ಮಂಜೂರಾದ ಠರಾವನ್ನು ಸರಕಾರವು ಅಲ್ಲಗಳೆಯುವಾಗ ಪ್ರತಿಸಹಕಾರವೆಂಬ ಮನೋಹರ ಶಬ್ದಯೋಜನೆಯಿಂದ ಸಹಕಾರ ಮಾಡುವ ಬಗೆ ಹೇಗೆ? ಆಗ ಅವರ ಸ್ವಾಭಿಮಾನವು ಎಲ್ಲಿ ಹೋಗುತ್ತದೆ? ಅಧಿಕಾರಪ್ರಾಪ್ತಿಯಿಂದ ಸುವರ್ಣ ಸಂಗ್ರಹದಿಂದ ಅಪಮಾನಕ್ಕೆ ಸ್ವಾಭಿಮಾನದ ಪುಟವೇರುತ್ತದೇನು? ಶ್ರೀ ಜಯಕರರಂಥ ವಿಚಾರಿಗಳಿಗೆ ಇಷ್ಟು ವಿವೇಕ ಹುಟ್ಟದಿದ್ದದ್ದು ನಮ್ಮೆಲ್ಲರ ದುರ್ದೈವವು. ಇರಲಿ. ಪ್ರತಿಸಹಕಾರಿಗಳು ಹೇಳುವ ವರೆಗೆ ಎಳೆದದ್ದು ಒಂದು ಪರಿಯಿಂದ ಇಷ್ಟವೇ! ಮನಸ್ಸಿನಲ್ಲಿ ಒಂದು ಕಲ್ಪನೆ ಮಾಡಿ ಶಬ್ದಗಳಿಂದ ಇನ್ನೊಂದು ಅರ್ಥ ಹೊರಡುವ ಸಂದರ್ಭದಲ್ಲಿ, ರಾಷ್ಟ್ರವು ದಿಙ್ಮೂಢವಾಗದಂತೆ ಸ್ವರಾಜ್ಯ ಪಕ್ಷದವರೂ, ಪ್ರತಿಸಹಕಾರಿಗಳೂ ತಮ್ಮ ತಮ್ಮ ಧೋರಣವನ್ನು ಸ್ಪಷ್ಟ ಮಾಡಿದ್ದು ಬಹುಪರಿಯಿಂದ ಒಳಿತಾಯಿತು. ಇಲ್ಲದಿದ್ದರೆ, ಚುನಾವಣೆ ಮುಗಿದು ಕೌನ್ಸಿಲು ಆಸನಗಳನ್ನು ಆಕ್ರಮಿಸಿಕೊಂಡ ಮೇಲೆ ಅರ್ಥದ ಗೊಂದಲವಿದ್ದರೆ, ಅದೊಂದು ದೊಡ್ಡ ಗೊಂದಲವಾಗುತ್ತಿತ್ತು. ಇವರಿಗೆ ಆಸನಗಳನ್ನು ತ್ಯಜಿಸಹೇಳಲಿಕ್ಕೂ ಮಾರ್ಗವಿದ್ದಿಲ್ಲ. ಸಂಧಾನವು ಒಂದೇ ಆದರೂ, ಅರ್ಥಭೇದದಿಂದ ಕಾರ್ಯವಾಗಿ ಐಕ್ಯಭೇದವಾಗುವ ಸಂಭವವಿದ್ದದರಿಂದ ಸಾಬರಮತಿಯ ಸಂಧಾನವು ಈಗಲೇ ಮುರಿದು ಹೋದದ್ದು ಬಹಳ ಕ್ಷೇಮಕರವೇ. ಈಗಿನ ಸ್ಥಿತಿಯಲ್ಲಿ ಯಾವದೇ ಅಧಿಕಾರಸ್ಥಾನಗಳನ್ನು ಆಕ್ರಮಿಸುವದು ಯಾವದೇ ದೃಷ್ಟಿಯಿಂದ ವಿಚಾರಿಸಿದರೂ, ರಾಷ್ಟ್ರಕ್ಕೆ ಅಪಮಾನವು. ಲಾಲಾ ಲಜಪತರಾಯರ ಭಾಷೆಯಲ್ಲಿ ಹೇಳಬೇಕಾದರೆ, ಹೊಸದಾಗಿ ಹುಟ್ಟಿದ ಮನೋಪ್ರವೃತ್ತಿಯು ಘಾತಕವು. ಸದ್ಯದ ರಾಜ್ಯಕಾರಭಾರದಲ್ಲಿ ಸ್ವಾಭಿಮಾನವನ್ನು ಕಾಯ್ದುಕೊಂಡು ಅಳೆಸರೊಡನೆ ಸಹಕಾರ ಮಾಡುವದು ಅನಿಷ್ಟವೆಂದು ರಾಷ್ಟ್ರೀಯ ಸಭೆಯು ಪುನಃ ಪುನಃ ಒತ್ತಿ ಹೇಳಿರುವಾಗ, ಸಾಬರಮತಿಯ ಸಂಧಾನದಲ್ಲಿ ಶ್ರೀ ಜಯಕರ-ಕೇಳಕರಾದಿಗಳು ಸ್ವಾಭಿಮಾನಕ್ಕೆ ಭಂಗ ತರುವ ಅರ್ಥವನ್ನು ಗ್ರಹಿಸುವ ಬಗೆ ಹೇಗೆಂಬುದು ತಿಳಿಯದು. ಮೂಲಭೂತ ತತ್ವಗಳನ್ನು ಗ್ರಹೀತ ಹಿಡಿದು, ಸಾಬರಮತಿಯ ಸಂಧಾನದ ಅರ್ಥ ಮಾಡಬೇಕಲ್ಲದೆ, ಹೊಸದಾಗಿ ಹುಟ್ಟಿದ ಅಧಿಕಾರಪ್ರವೃತ್ತಿಯ ವಿಕಾರಹೇತುವಿನಿಂದ ಅರ್ಥ ಮಾಡಲಾಗದೆಂದು ನಾವು ಹೇಳುವೆವು. ಮತದಾರರಾದರೂ ಇದೇ ಅರ್ಥವನ್ನು ಗ್ರಹಿಸಿ, ಇಲೆಕ್ಷನಿನಲ್ಲಿ ಸ್ವಾಭಿಮಾನಿ ಸ್ವರಾಜ್ಯ ಪಕ್ಷದವರಿಗೆ ಮತದಾನ ಮಾಡುವರೆಂಬದಲ್ಲಿ ಸಂದೇಹವೇನಿಲ್ಲ. "ಮನಸ್ಯನ್ಯದ್ವಚಸ್ಯನ್ಯತ್" ಬುದ್ಧಿಯಿಂದ ವರ್ತಿಸುವ ಪ್ರತಿಸಹಕಾರಿಗಳು ಯತ್ನಮಾಡಿ ನೋಡಬಹುದಲ್ಲವೆ!

ಸ್ಫುಟ ಸೂಚನೆಗಳು.

೧. ಪಾಶ್ಚಾತ್ಯ ಸಂಸ್ಕೃತಿಯ ಮಾಹಾತ್ಮ್ಯವು ದಿನೇ ದಿನೇ ಬಯಲಾಗುತ್ತದೆ. ಪಾಶ್ಚಾತ್ಯ ಸಂಸ್ಕೃತಿಯ ಸ್ತೋತ್ರಪಾಠಗಳನ್ನು ನಾವಿನ್ನೂ ಮಾಡುತ್ತಿರುವ ಸಮಯ ಪಾಶ್ಚಾತ್ಯ ಸಂಸ್ಕೃತಿಯಲ್ಲಿ ಹುಟ್ಟಿ ಬೆಳೆದ ಜನರ ಅಭಿಪ್ರಾಯವನ್ನು ನಾವೆಲ್ಲರೂ ಪರಾಂಬರಿಸತಕ್ಕದ್ದು. ನೌಕಾಧಿಪತಿಯ ಮಗಳಾದಿರುವ ಸ್ಲೇಡ ಭಗಿನಿಯವರು ಮಹಾತ್ಮರ ಸಂದೇಶ ಕೇಳಿ ಮರುಳಾಗಿ ಸಾಬರಮತಿಯ ಆಶ್ರಮದಲ್ಲಿ ಬಂದುಕೊಂಡದ್ದನ್ನು ನಾವೆಲ್ಲರೂ ಅರಿತ ಸಂಗತಿಯೇ. ಅಹಮ್ಮದಾಬಾದ ಗೃಹಿಣೀ ಸಂಘದ ಅಧ್ಯಕ್ಷರಾದ ಶ್ರೀ ವಿದ್ಯಾಗೌರಿ ನೀಲಕಂಠರವರು ಸ್ಲೇಡ ಭಗಿನಿಯವರನ್ನು ನಿಮಂತ್ರಿಸಿ, ಕೆಲವು ಮಾಹಿತಿಯನ್ನು ಪಡೆದರು. ಅವರು ಹೇಳಿದ್ದೇನೆಂದರೆ:— "ವಿಲಾಯತಿಯಲ್ಲಿ ನನಗೆ ಚಿತ್ತಸ್ವಾಸ್ಥ್ಯ ದೊರಕಲಿಲ್ಲ. ಯೂರೋಪಿಯನ್ ಸಂಸ್ಕೃತಿಯ ಸ್ಥಿತಿ ನೋಡಿ ನನ್ನ ಕಳವಳ ಹೆಚ್ಚಿತು. ಮಹಾಯುದ್ಧದ ಅಂತ್ಯದಲ್ಲಿಯೂ ಶಾಂತಿಯು ಪ್ರಾಪ್ತವಾಗಲಿಲ್ಲ. ಮಾನವೀ ಸಂಸಾರಕ್ಕೆ ತಗಲುವ ಉಪಭೋಗ ಸಾಮಗ್ರಿಗಳ ಸಂಖ್ಯೆಯು ಹೆಚ್ಚಿದಷ್ಟೂ ಭೂಮಂಡಲದಲ್ಲಿ ದೊಡ್ಡ ಕೋಲಾಹಲವೆದ್ದಿದೆ. ದಿನ ಹೋದ ಹಾಗೆ ಚಿತ್ತಚಾಂಚಲ್ಯವು ಹೆಚ್ಚಾಯಿತು. ಮಹಾತ್ಮರ ಉಪದೇಶ ಕೇಳಿ ಸ್ವಲ್ಪ ಸಮಾಧಾನವಾಯಿತು. ಸಂಸಾರವನ್ನು ಕೈಲಾದಷ್ಟು ಸಾಧಾರಣ ತರಗತಿಗೆ ಇಳಿಸಿ, ನಮ್ಮ ಸಂಸಾರಕ್ಕೆ ತಗಲುವ ಸಾಮಗ್ರಿಗಳ ಸಂಖ್ಯೆಯನ್ನು ಇಳಿಸಬೇಕೆಂಬ ಉಪದೇಶವು ನನ್ನ ಮನಸ್ಸಿನ ಮೇಲೆ ಬಿಂಬಿದೆ. ಇದಕ್ಕೆ ಮರುಳಾಗಿ ನಾನು ಇಲ್ಲಿ ಬಂದಿದ್ದೇನೆ." ಸ್ಲೇಡ ಭಗಿನಿಯವರ ಉದ್ಗಾರಗಳನ್ನು ಕೇಳಿರಿ; ವಿಚಾರಿಸಿ ಬರೇ ಪಾಶ್ಚಾತ್ಯ ಸಂಸ್ಕೃತಿಯ ಅನುಕರಣ ಮಾಡಿರಿ. ಪಾಶ್ಚಾತ್ಯರ ಸಹವಾಸದಿಂದ ನಮ್ಮ ಸಂಸಾರವು ತೀರ ಸಂಕೀರ್ಣವಾಗಿದೆ. ಚಹಾ ಬೇಕು; ಬಿಸ್ಕಿಟ ಬೇಕು; ಅಂಗಿ ಬೇಕು, ಒಳಗೆ ಬನಿಯನ ಬೇಕು; ಕಾಲರ ಬೇಕು; ಗಂಜಿಫ್ರಾಕು ಬೇಕು; ನೆಕ್‌ಟೈ ಬೇಕು; ಬಿರುಕೋಡಯಕ್ಕೆ ಚಹಾ ಬೇಕು; ಅಪರಾಹ್ನಕ್ಕೆ ಪುನಃ ಚಹಾ ಬೇಕು; ಊಟ ಯಥಾಪ್ರಕಾರ ನಡೆಯಬೇಕು. ಅದಕ್ಕೆ ತಕ್ಕಂತೆ ಶರೀರದ ಅಸುಖಗಳಿಗಾಗಿ ಔಷಧಪಾನವು ಬೇಕು. ದಿನ ಹೋದ ಹಾಗೆ, ಫೆಶನು ಬದಲಾದಂತೆ, ಹೊಸ ಹೊಸ ಫೆಶನಿನ, ಹೊಸ ಹೊಸ ಬಜಾರಿಯ ಪೋಷಾಕು, ತಿಂಡಿತಿನಸುಗಳು ಬೇಕು. ಧರ್ಮಬೋಧದ ಕೇಳಬೇಡಿ. ಸ್ವಾತಂತ್ರ್ಯ, ಐಹಿಕ ಸುಖೋಪಭೋಗ ಇವುಗಳ ಹೆಸರಿನಿಂದ ಬೇಕಾದ ಹಾಗೆ ಮುಂದುಗಾರಿಕೆ ಮಾಡಲು ನಾವು ಕಲಿತಿದ್ದೇವೆ; ಇದೊಂದು ಸುಧಾರಣೆಯ ಲಕ್ಷಣವೆಂದೂ ನಾವು ಅಭಿಮಾನ ಹಿಡಿಯುತ್ತೇವೆ. ಪಾಶ್ಚಾತ್ಯರ ಬಿಸ್ಕೀಟಿಗೆ ಬಹಳ ರುಚಿ; ಪಾಶ್ಚಾತ್ಯರ ಉಡುಪಿಗೆ ಬಹಳ ಸೌಂದರ್ಯ; ಪಾಶ್ಚಾತ್ಯರ ಭಾಷೆಯು ಉಚ್ಚ ತರಗತಿಯದು; ಎಂಬ ರಾಷ್ಟ್ರಹಾನಿಕಾರಕ ಐಹಿಕ ನಿರರ್ಥಕತೆಯ ಆಚಾರ-ವಿಚಾರಗಳು ನಮ್ಮಲ್ಲಿ ರೂಢವಾಗಿದ್ದಾಗ, ಸ್ಲೇಡ ಭಗಿನಿಯವರು ಪ್ರಕಟಿಸಿದ ವಿಚಾರಗಳನ್ನು ನಾವೆಲ್ಲರೂ ಮನನ ಮಾಡಿ, ಪಾಶ್ಚಾತ್ಯ ಸಂಸ್ಕೃತಿಯನ್ನು ತಟ್ಟನೇ ತಿರಸ್ಕರಿಸಿ, ಚಿತ್ತಸ್ವಾಸ್ಥ್ಯಕರವಾದ ಪೌರ್ವಾತ್ಯ ಧರ್ಮಸಂಸ್ಕೃತಿಯನ್ನು ಸಂಗ್ರಹಿಸಲುದ್ಯುಕ್ತರಾಗಬೇಕು. ಇದೇ ನಮ್ಮ ಸುಧಾರಣೆ. ಇದರಿಂದಲೇ ಇಹದಲ್ಲಿ ನಮಗೆ ಚಿತ್ತಸ್ವಾಸ್ಥ್ಯವು ಪ್ರಾಪ್ತವಾಗುವದು; ಪರದಲ್ಲಿ ಆತ್ಮಸ್ವಾಸ್ಥ್ಯವು ಪ್ರಾಪ್ತವಾಗುವದು.

---

೨. ಅಖಿಲ ಭಾರತೀಯ ಕಾಂಗ್ರೆಸ ಕಮೀಟಿಯ ಅಧಿವೇಶನದಲ್ಲಿ ಸಾಬರಮತಿಯ ಸಂಧಾನವು ಬಿದ್ದುಹೋದರೂ, ಕೆಲವು ಇತರೇ ತೀರ್ಮಾನುಗಳಾಗಿವೆ. ಹಿಂದುಸ್ಥಾನ ಸರಕಾರವೂ, ದಕ್ಷಿಣ ಆಫ್ರಿಕೆಯ ಸರಕಾರವೂ, ಭಾರತೀಯರ ವಿಷಯದ ಕಾನೂನನ್ನು ಸದ್ಯಕ್ಕೆ ತಹಕೂಬ ಮಾಡಿದ ಬಗ್ಗೆ ಅಭಿನಂದನವಾಯಿತು; ದೀನಬಂಧು ಎಂಡ್ರೂಜರ ಉಪಕಾರಮನ್ನಣೆ ಮಾಡಲಾಯಿತು; ತಮ್ಮ ಪ್ರಯತ್ನಗಳನ್ನು ಆಸ್ಥೆಯಿಂದ ನಡಿಸಲು ಭಾರತೀಯರಿಗೆ ಬೋಧಿಸಲಾಯಿತು. ಕಲಕತ್ತೆಯ ದೊಂಬಿಯ ಕುರಿತು ಅಖಿಲ ಭಾರತೀಯ ಕಾಂಗ್ರೆಸ ಕಮೀಟಿಯು ಮರುಗಿ, ಅಖಿಲ ಭಾರತೀಯ ಲೋಕನಾಯಕರೂ, ಕಲಕತ್ತೆಯ ನಾಗರಿಕರೂ ಇಂಥ ಶೋಚನೀಯ ಪ್ರಕಾರಗಳು ಮುಂದೊದಗದಂತೆ ಉಪಾಯಯೋಜನೆ ಮಾಡಬೇಕೆಂದು ತೀರ್ಮಾನವಾಗಿದೆ. ಪಂಡಿತ ನೆಹರೂರವರು ಸಾಬರಮತಿಯಲ್ಲಿ ಪ್ರತಿಸಹಕಾರಿಗಳೊಡನೆ ಒಪ್ಪಂದ ಮಾಡಿಕೊಳ್ಳಲು ಮಾಡಿದ ದೇಶಾಭಿಮಾನಿ ಯತ್ನಗಳ ಬಗ್ಗೆ ಕಮೀಟಿಯವರು ಪಂಡಿತ ಮೋತೀಲಾಲರವರ ಆಭಾರಮನ್ನಣೆ ಮಾಡಿದರು. ಪಂಡಿತ ಮದನ ಮೋಹನ ಮಾಲವೀಯರವರು ರಾಷ್ಟ್ರೀಯ ಸಭೆಯ ವಿಶೇಷ ಅಧಿವೇಶನವನ್ನು ಸೇರಿಸಿ, ಸ್ವರಾಜ್ಯಪಕ್ಷ ಹಾಗು ಪ್ರತಿಸಹಕಾರಿಗಳೊಳಗೆ ಉಂಟಾದ ವಾದವನ್ನು ಇತ್ಯರ್ಥಪಡಿಸಿಕೊಳ್ಳುವದು ಒಳಿತೆಂದರು. ರಾಷ್ಟ್ರೀಯ ಪಕ್ಷದವರೂ ಸಹಾನುಭೂತಿಯಿಂದ ಪಂಡಿತ ಮಾಲವೀಯರ ಸೂಚನೆಯನ್ನು ಎತ್ತಿ ಹಿಡಿದರು. ವಿಶೇಷ ಅಧಿವೇಶನದ ತೀರ್ಮಾನುಗಳನ್ನು ಸಮಸ್ತರೂ ಶಿರಸಾ ವಹಿಸಲೊಪ್ಪಿದರೆ ವಿಶೇಷ ಅಧಿವೇಶನದ ವಿಚಾರ ಮಾಡಬಹುದೆಂದು ರಾಷ್ಟ್ರೀಯ

ಸಭೆಯವರು ಹೇಳಿದರು. ಇದಕ್ಕೆ ರಾಷ್ಟ್ರೀಯ ಪಕ್ಷದವರು ಒಪ್ಪದ್ದರಿಂದ ಈ ಸೂಚನೆಯು ವಿಶೇಷ ಚರ್ಚೆಯಾಗಲಿಲ್ಲ. ಅಖಿಲ ಭಾರತೀಯ ಕಾಂಗ್ರೆಸ ಕಮೀಟಿಯಲ್ಲಿ ರಾಷ್ಟ್ರೀಯ ಪಕ್ಷದ ಸರ್ ಮೋರೋಪಂತ ಜೋಶಿ, ರಾ| ಶಾವಂತ, ರಾ| ಪಳವಿ, ಮಿ| ಭಗವಾ ಮುಂತಾದವರು ತಮ್ಮ ವಿಚಾರಗಳನ್ನು ಪ್ರದರ್ಶಿಸಿದರು. ಸಾಬರಮತಿಯ ಸಂಧಾನವು ಬಿದ್ದುಹೋದರೂ, ಈ ಆಧಿವೇಶನದಲ್ಲಿ ಪ್ರಕಟವಾದ ಸ್ನೇಹಭಾವದಿಂದ ರಾಷ್ಟ್ರದಲ್ಲಿ ಐಕ್ಯಬೀಜವು ಬಿತ್ತಲ್ಪಟ್ಟಿತೆಂದು ಅಭಿಪ್ರಾಯಪಟ್ಟರು.

ಸ್ಥಾನಿಕ ವೃತ್ತಾಂತ.

ಕುಮಟೆ— ಇಲ್ಲಿಯ ಶಕ. ಹೆರವಟ್ಟೆಯ ರಾ| ಎಸ್. ಎಸ್. ಕಿಣಿ ಹಾಗು ನೆಲ್ಲೀಕೇರಿಯ ರಾ| ಜಿ. ಪಿ. ಪೈಯವರು ಇಂಟರಮಿಜಿಯೆಟ್ ಪರೀಕ್ಷೆಯಲ್ಲಿ ಪ್ರಥಮ ವರ್ಗದಲ್ಲಿ ಉತ್ತೀರ್ಣರಾಗಿ ಅನುಕ್ರಮವಾಗಿ ೨-೪ನೇ ನಂಬರಗಳನ್ನು ಪಡೆದಿರುವರು.

ಕಕ್ಕಗಾರ ನಾಕೆಯ ಪೋಲೀಸ ಶಿಪಾಯಿ ಆದ ಸೋಮರು ಎಂಬಾತನು ಮೋಟಾರ ಪ್ರೊಪ್ರಾಯಟರರಾದ ರಾ| ಶೇಷಗಿರಿ ರಮಣ ಕಾಮತ ಇವರಿಗೆ ಮಾನನಷ್ಟಕರ ಮಾತಾಡಿದ ಬಗ್ಗೆ ಆದ ಫಿರ್ಯಾದಿ ಪ್ರಕರಣದಲ್ಲಿ ಆರೋಪಿಯು ಟೆಕ್ಮಿ ಮಾಫಿ ಬೇಡಿದ್ದರಿಂದ ಫಿರ್ಯಾದಿಯು ರಾಜಿಯಿಂದ ನಿಕಾಲಿಯಾಯಿತು.

ಕಿಲಿಕ್ ನಿಕ್ಸನ್ ಕಂಪನಿಯ ಕಡೇ ಪತ್ತಾಲು ಆಗಬೋಟಿಯು ಮುಂಬಯಿಯಿಂದ ತಾ. ೧೪ನೇಗೆ ಹೊರಡುವದು, ಮ್ಯಾನೇಜರ ಬೋಟಿಯು ತಾ. ೧೦ನೇಗೆ ಹೊರಡುವದೆಂದೂ ಇಲ್ಲಿಯ ಏಜಂಟರು ತಿಳಿಸುತ್ತಾರೆ.

ಈ ಹೊತ್ತು ಇಲ್ಲಿಯ ೨ನೇ ವರ್ಗದ ಮೆಜಿಸ್ಟ್ರೇಟರಾದ ರಾ| ಶೇಷಗಿರಿ ನೀಲಕಂಠ ನ್ಯಾಕ ಇವರ ಕೋರ್ಟದಲ್ಲಿ ಶಿಂಕಪ್ಪ ಶೆಟ್ ದ. ಗ್ರಾ ಶಿಕ್ಷಕ. ಮಿರ್ಜಾಂ ದಂಗ ಶ್ರೀನಿವಾಸ ಕ್ಯಾಸಭಾಗ ಗಡಾಳ ಇವರ ಮೇಲೆ ಹೊಡೆದ ಬಗ್ಗೆ ಮಾಡಿದ ಫಿರ್ಯಾದಿಯು ನಿಕಾಲಿ ಹೇಳಲ್ಪಟ್ಟಿತು. ನ್ಯಾಯಮೂರ್ತಿಗಳು ಆರೋಪಿಗೆ ೨-೬-೦ ದಂಡ ವಿಧಿಸಿ, ಅದರೊಳಗಿಂದ ರೂ ೧-೬-೦ಯನ್ನು ಫಿರ್ಯಾದಿಗೆ ಖರ್ಚಿನ ಬಗ್ಗೆ ಕೊಡಿಸಿದರು. ಹೀಗೆ ಇಲ್ಲಿಯ ಮುನಸೀಫರಾಗಿದ್ದ ಮಿ| ಬಿಳಗುಳಗುಂದರವರ ಮೇಲೆ ಮಾಡಿದ ದಾವೆಯು ಪೂರ್ತವಾಗಿ ನಿಕಾಲಿಯಾಯಿತು. ಇನ್ನೊಂದು ಕಟ್ಟೆಯು ಹೀಗೆನವೂ ನ್ಯಾಯಮೂರ್ತಿಗಳು ಹೇಳಿದರು. ಗೋಕರ್ಣದ ಪೇಟೆಯಲ್ಲಿ ಅಂಗಡಿಯ ಮುಂದೆ ಅಶಿಕ ನೀರು ಹಾಕಿದ ಬಗ್ಗೆ ಗೋಕರ್ಣದ ಪೋಲೀಸರು ೧೪ ವರ್ಷ ಪ್ರಾಯದ ಶಿರೋಡಕರ ವಾಸುದೇವ ವೈಂಬ ಹುಡುಗನ ಮೇಲೆ ಸಾರ್ವಜನಿಕ ಆರೋಗ್ಯಭಂಗವಾಗುವದೆಂದು ಗೋಕರ್ಣ ಗ್ರಾಮದ ಹವೆ ಕೆಡಿಸಿದ ಆರೋಪ ಹೊರಿಸಿ ಇಂಡಿಯನ್ ಪಿನಲ್‌ಕೋಡ ಕಲಮು ೨೭೮ರನ್ವಯ ತಂದ ಖಟ್ಲೆಯಲ್ಲಿ ಆರೋಪಿ ಬಾಲಕನಿಗೆ ರೂಪಾಯಿ ೨ ದಂಡ ವಿಧಿಸಿ, ಸಾರ್ವಜನಿಕ ಆರೋಗ್ಯರಕ್ಷಣೆಯ ಬಗ್ಗೆ ಪಾಪ್ಯಕ್ಷರುವ ತತ್ಪರತೆಯನ್ನು ಪ್ರದರ್ಶಿಸಿದರು. ಶ್ರೀ ಗೋಕರ್ಣ ಕ್ಷೇತ್ರಸ್ಥರು ಈ ಬಗ್ಗೆ ಮೆಜಿಸ್ಟ್ರೇಟರ ಕೌತುಕ ಮಾಡಿದರು.

ಸಾಭಾರ ಸ್ವೀಕಾರ.

ಕಿರ್ಲೋಸ್ಕರ ಖಬರ— (ಸಚಿತ್ರ ಮಾಸಿಕ) ಮೇ ತಿಂಗಳ ಸಂಚಿಕೆ. ಸಂಪಾದಕ ಮತ್ತು ಪ್ರಕಾಶಕ- ಶ್ರೀ| ಶ. ವಾ. ಕಿರ್ಲೋಸ್ಕರ, ಕಿರ್ಲೋಸ್ಕರವಾಡಿ, ಸಾತಾರಾ. ವಾರ್ಷಿಕ ಚಂದಾ ಅಂಚೆವೆಚ್ಚ ಸಹಿತ ರೂಪಾಯಿ ೧-೪-೦.

ಸುಬೋಧ— ಸಚಿತ್ರ ಕನ್ನಡ ಮಾಸಪತ್ರಿಕೆಯ ನಿಜ ಚೈತ್ರ ಮಾಸದ ಸಂಚಿಕೆ. ಸಂಪಾದಕ ಮತ್ತು ಪ್ರಕಾಶಕ:- ಶ್ರೀ| ಎಂ. ರಾಮರಾವ. ಬೆಂಗಳೂರ ವಾ.ವ. ಅಂಚೆವೆಚ್ಚ ಸೇರಿರೂ. ೧-೪-೦

ಬೋಧಾಮೃತ— ಶ್ರೀ ಸದ್ಗುರು ಸಿದ್ಧಾರೂಢ ಸ್ವಾಮಿಗಳ ಬೋಧಾಮೃತ. ಸಂಪಾದಕ.- ಶ್ರೀ ಶಿವಪುತ್ರಸ್ವಾಮಿ. ಪ್ರಕಾಶಕ:- ಶ್ರೀ| ಶಿವರಾಮ ಲಕ್ಷ್ಮಣ ಚಂದ್ರಗಿರಿ, ಶ್ರೀ ಸಿದ್ಧಾಶ್ರಮ, ಹುಬ್ಬಳ್ಳಿ.

ಅಂಕೋಲಾ—ಬುಧವಾರಕ್ಕೆ ರಾತ್ರಿ ೯ ಘಂಟೆ ಸುಮಾರು ಇಲ್ಲಿಯ ಶ್ರೀ| ಶಾಮರಾವ ಕೃಷ್ಣ ಶೇಣ್ವಿ ಇವರ ಮನೆಯಲ್ಲಿ ಬ್ರಹ್ಮಚಾರಿ ವೇಷಧಾರಿ ಯುವಕನೊಬ್ಬನು ಒಳಹೊಕ್ಕು ಬಹಳ ಗಲಾಟೆ ಮಾಡಿದನ. ಶ್ರೀ| ಶೇಣ್ವಿಯವರು ಊಟಕ್ಕೆ ಕೂತುಕೊಂಡಿದ್ದರು: ಅವರು ಊಟ ಬಿಟ್ಟು, ತಡೆಯಲಿಕ್ಕೆ ಓಡುವಷ್ಟರಲ್ಲಿ, ಅವನು ಹೊಸ್ತಲು ದಾಟಿ ಒಳಸೇರಿದ್ದನು. "ನೀನು ಯಾಕೆ ಬಂದಿದ್ದೀ? ಎಲ್ಲಿ ಬಂದಿದ್ದೀ? ನಿನು ಬೇಕು?" ಎಂದು ಕೇಳಿದ್ದಕ್ಕೆ "ನನ್ನದೇ ಮನೆ ನನಗೆ ಇಲ್ಲಿ ಪ್ರವೇಶಿಸುವ ಅಧಿಕಾರವಿದೆ" ಇತ್ಯಾದಿ ಉದ್ಧಟತನದ ಉತ್ತರ ಕೊಟ್ಟು ಹೀಗೆ ಆಸನ ಹಾಕಿ ಕೂತುಬಿಟ್ಟನ. ಆಗ ಶ್ರೀ| ಶೇಣ್ವಿಯವರು, "ಹೊರಹೋಗಿ ಅಂಗಳದೊಳಗಣ ಕಟ್ಟೆಯ ಮೇಲೆ ಕೂತುಕೊಳ್ಳಿರಿ. ನಿಮಗೆ ಬೇಕಾದ್ದನ್ನು ಕೊಡುತ್ತೇನೆ" ಎಂದು ಬಹಳವಾಗಿ ಹೇಳಿದರೂ ಕೇಳಲಿಲ್ಲ. "ಪೋಲೀಸರಿಗೆ ಕರೆದು ನಿಮಗೆ ಹೊರತಳ್ಳಬೇಕಾಗುವದು" ಎಂದು ಹೇಳಿದ ಕೂಡಲೆ, ಬ್ರಹ್ಮಚಾರಿ ಸಾಧುವು ಉಗ್ರರೂಪವನ್ನು ಧರಿಸಿ ಥಕ್ಕನೆ ಶ್ರೀ| ಶೇಣ್ವಿಯವರ ಮೈಮೇಲೆ ಧಾವಿಸಿ ಬಂದನು. ಆಗ ಅವರು ನಿರುಪಾಯವಾಗಿ ಸಾಧುವಿಗೆ ಹಿಡಿದು ಅಂಗಳದಲ್ಲಿ ತಂದರು ಮತ್ತು ಪೋಲೀಸರಿಗೆ ಹೇಳಿ ಕಳುಹಿದರು. ಅಷ್ಟರಲ್ಲಿ ಅವನು ಶ್ರೀ| ಶಾಮರಾಯರ ಕುತ್ತಿಗೆಯ ನಾಳವನ್ನು ಹಿಡಿದು ಹಿಚುಕಿದನು. ಶ್ರೀ| ಶಾಮರಾಯರು ಯುಕ್ತಿಯಿಂದ ಬಿಡಿಸಿಕೊಂಡರು. ಆ ಮೇಲೆ ಅವನು ಬಹಳ ಕೀಡಲಿಕ್ಕೆ ಹತ್ತಿದನು. ಪೋಲೀಸರು ಬಂದು ಅವನಿಗೆ ಕೇಳಲು; "ಜಮಾನಾ ಅಧಿಕಾರಿ ಕ್ಯಾ" ಎಂಬ ಉತ್ತರ ಕೊಟ್ಟನು. ಇಷ್ಟು ಆದ ತರುವಾಯ, ಅನ್ನ ಬೇಡಿದನು; ಅನ್ನ ಕೊಟ್ಟನು. ಅಂಗಳದಲ್ಲೇ ಮಲಗುತ್ತೇನೆಂದು ಹೇಳಲು, ಶ್ರೀ| ಶಾಮರಾಯರು ಒಪ್ಪಿಕೊಂಡರು. ಪೋಲೀಸರು ಕಾವಲು ಮಾಡುತ್ತಿದ್ದರು. ಇನ್ನೂ ರಾತ್ರಿ ಇರುವಾಗ ಅವನು ಇಚ್ಛಾಪೂರ್ವಕ ಹೋಗುತ್ತೇನೆಂದು ಪೋಲೀಸರಿಗೆ ಹೇಳಿದ್ದರಿಂದ ಪೋಲೀಸರು ಅವನಿಗೆ ಹೋಗಗೊಟ್ಟರಂತೆ. ಇದೇ ಯುವಕನು ಬೆಣಗೆಯಲ್ಲಿಯೂ ಹಾರವಾಡ-ಅವರ್ಸೆಯಲ್ಲಿಯೂ ಇದೇ ಪ್ರಕಾರದ ದಾಂಧಲ ಮಾಡಿದ್ದನೆಂದು ತಿಳಿದುಬರುತ್ತದೆ. ಹೀಗಿದ್ದು, ಪೋಲೀಸರು ಕೈಗೆ ಸಿಕ್ಕವನಿಗೆ ಬಿಟ್ಟುಕೊಟ್ಟದ್ದು ಬಹಳ ತಪ್ಪು. ಮೇಲಾಧಿಕಾರಿಗಳು ಚೌಕಶಿ ಮಾಡಿ ಈ ಯುವಕನ ಯೋಗ್ಯ ಬಂದೋಬಸ್ತು ಮಾಡದೇ ಇದ್ದ ಪೋಲೀಸರ ವರ್ತನದ ಬಗ್ಗೆ ಚೌಕಶಿಯಾಗಬೇಕು.

ಕಾರವಾರ—ಸಾತಾರೆಯ ಬ್ರಹ್ಮಚಾರಿ ಮಹಾರಕರರವರು ಇಲ್ಲಿ ಬಂದು ೧೦ ೧೫ ದಿನಗಳಾದವು. ಜೊತೆಗೆ ೪೧ ಮಂದಿ ಶಿಷ್ಯರು ಬಂದಿರುವರು. ಎಲ್ಲರೂ ಬ್ರಹ್ಮಚಾರಿಗಳೇ. ಇವರು ಶೇಟ ತುಳಸೀದಾಸರವರ ಮೇಲುಪ್ಪರಿಗೆಯ ಮೇಲೆ ಉಳಕೊಂಡಿರುವರ. ನಿತ್ಯವೂ ಶ್ರೀ ರಾಧಾಕೃಷ್ಣ ದೇವಾಲಯದ ಪಶ್ಚಿಮ ಪಟಾಂಗಣದಲ್ಲಿ ಒಂದು ತಾಸು ಭಗವದ್ಗೀತೆಯ ಮೇಲೆ ಪ್ರವಚನ ನಡಿಯುತ್ತಿತ್ತು. ಪ್ರವಚನಕ್ಕೆ ಬಹಳ ಜನರು ಕೂಡುತ್ತಿದ್ದರು. ಕೊನೆಯ ಪ್ರವಚನದಲ್ಲಿ ರಾಮದಾಸಸ್ವಾಮಿಗಳ ದಾಸಬೋಧ ಗ್ರಂಥದ ೧ ಲಕ್ಷ ಪ್ರತಿಗಳನ್ನು ಉಚಿತವಾಗಿ ಹಂಚುವ ಕಾರ್ಯಕ್ಕಾಗಿ ನಿಧಿಸಂಚಯ ಮಾಡಿದರು, ಗುರುವಾರಕ್ಕೆ ದೊಡ್ಡ ಸಹಸ್ರಭೋಜನವಾಯಿತು. ಬ್ರಹ್ಮಚಾರಿಗಳೆಲ್ಲರೂ ಊರಲ್ಲಿ ಭಿಕ್ಷಾಟನ ಮಾಡಿ ತಮಗೆ ಅವಶ್ಯವಿರುವ ಸಾಮುಗ್ರಿಗಳನ್ನು ತರುತ್ತಿದ್ದರು. ಬ್ರಹ್ಮಚಾರಿಗಳಾದ ಮಹಾರಕರರವರು ಕೊನೆಯ ಪ್ರವಚನದಲ್ಲಿ ವಿಶೇಷ ಭಕ್ತರಿಗಳನ್ನು ಬೇಡಿದ್ದರು; ಜನಸ್ತರೂ ಇವನ್ನು ಕೊಡಲೇಬೇಕೆಂದು ಆಗ್ರಹ ಮಾಡಿದ್ದರಿಂದ ಶ್ರೋತೃವೃಂದವು ಕೆಲ ಹೊತ್ತು ಗಾಬರಿಯಾಗಿತ್ತು. ಅವೆ ನಂದರೆ:- (೧) ಪ್ರತಿಯೊಬ್ಬರು ದಿನಾ ಪ್ರಾತಃಕಾಲದಲ್ಲಿ ಎದ್ದು ಕನಿಷ್ಠ ೧೨ ನಮಸ್ಕಾರಗಳನ್ನು ಸೂರ್ಯನಾರಾಯಣನಿಗೆ ಹಾಕಬೇಕು; ತಮ್ಮ ಹುಡುಗ-ಹುಡುಗಿಯರ ಕಡೆಯಿಂದಲೂ ಹಾಕಿಸಬೇಕು (೨) ಪ್ರತಿಯೊಬ್ಬರು ಧರ್ಮಗ್ರಂಥವನ್ನು ನಿತ್ಯವೂ ಪಠಿಸಿ, ಸದುದ್ಯೋಗದಲ್ಲಿ ನಿರತರಾಗಿರಬೇಕು. (೩) ಪ್ರತಿಯೊಬ್ಬ ಹೆಂಗಸು ಮನೆಯ ಯಾವತ್ತು ಕೆಲಸಗಳನ್ನು ಸ್ವತಃ ಮಾಡಬೇಕು.

ಹೊಸ ಲೋಕಲ್ ಬೋರ್ಡ ಕಾಯಿದೆಯನ್ವಯ ಸಂಘಟನೆ ಹೊಂದಿದ ಲೋಕಲ್ ಬೋರ್ಡಿನ ಸಭೆಯು ತಾ. ೫ನೇ ಮುಂಜಾವು ೮ ಘಂಟೆಗೆ ಲೋಕಲ್ ಬೋರ್ಡ ಆಫೀಸಿನಲ್ಲಿ ಸೇರಿತು. ೨ ದಿವಗಳ ಮುಂಚಿತವಾಗಿಯೇ ಎಲ್ಲ ತಾಲೂಕುಗಳೊಳಗಿಂದ ಪ್ರತಿನಿಧಿಗಳು ಬರಹತ್ತಿದ್ದರು. ಲೋಕಲ್ ಬೋರ್ಡಿನ ಅಧಿಕಾರಿಗಳನ್ನು ನೇಮಿಸುವ ಚರ್ಚೆಯು ಪ್ರಾಮುಖ್ಯವಾಗಿ ನಡೆಯುತ್ತಿತ್ತು. ಶ್ರೀ| ಹಳದೀಪುರಕರರ ಮನೆಯಲ್ಲಿ ಮಂಗಳವಾರ ರಾತ್ರಿ ಒಂದು ಸಭೆಯಾಗಿ ಲೋಕಪಕ್ಷೀಯ ಮುಂದಾಳ ಪ್ರಾಣಪ್ರತಿಷ್ಠೆಯಾಯಿತು. ಈ ಸಭೆಯಲ್ಲಿ ಮಾರನೇ ದಿನದ ಕಾರ್ಯಕ್ರಮದ ನಿರ್ಣಯಗಳು ಕೈಕೊಳ್ಳಲ್ಪಟ್ಟವು. ಮಾರನೇ ದಿನ ಸಭೆಗೆ ಒಂದು ೩೧ ಮಂದಿ ಸಭಾಸದರು ಹಾಜರಿದ್ದರು. ಪ್ರೇಕ್ಷಕರ ಸಂಖ್ಯೆಯು ಸುಮಾರು ೧೫೦ ಇತ್ತು. ಮುಂಚಿನ ಅಧ್ಯಕ್ಷರಾದ ಮಿ| ಕೊಯಿಲೋರವರು ಸಭಾಪತಿಸ್ಥಾನವನ್ನು ಅಂಗೀಕರಿಸಿದರು. ಹೊಸ ಸಭಾಸದರನ್ನು ಸ್ವಾಗತೀಕರಿಸಿ, ಸಭಾಸದರಿಗೆ ಈ ಸಭೆಯ ಸಭಾಪತಿಗಳನ್ನಾರಿಸಲು ವಿಜ್ಞಾಪಿಸಿದರು. ಅಂಕೋಲೆಯ ಶ್ರೀ| ವಿಶ್ವನಾಥ ಪ್ರಭುಗಳವರು ಪ್ರತಿಸ್ಪರ್ಧಿಗಳಿಲ್ಲದೆ ಆರಿಸಿಬಂದರು. ಶ್ರೀ| ಪ್ರಭುಗಳವರು ಸಭಾಪತಿಸ್ಥಾನವನ್ನು ಸ್ವೀಕರಿಸಿ, ಆರು ವರ್ಷಗಳ ವರೆಗೆ ಬೋರ್ಡಿನ ಕೆಲಸವನ್ನು ಉತ್ಸಾಹದಿಂದ ನಡಿಸಿದ ಬಗ್ಗೆ ಮಿ| ಕೊಯಿಲೋರವರ ಉಪಕಾರ ಮನ್ನಿಸಿದರು ಬಳಿಕ,

ಕ್ಷೇತ್ರದ ಅಧ್ಯಕ್ಷರನ್ನಾರಿಸಲು ವಿಜ್ಞಾಪನೆ ಮಾಡಲಾಯಿತು. ಗೋಕರ್ಣದ ಶ್ರೀ|| ಮಹಾಬಲೇಶ್ವರ ಗಣಪತ ಭಟ್ಟ ಗೋಪಿಯವರ ಹೆಸರು ಸೂಚಿಸಲಾಯಿತು. ಇದಕ್ಕೆ ಅನುಮೋದನವೂ ಸಿಕ್ಕಿತು. ಇದನ್ನು ಸೂಚಿಸಲ್ಪಟ್ಟದ್ದರಿಂದ ಶ್ರೀ|| ಗೋಪಿಯವರೇ ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಬಳಿಕ ಶ್ರೀ|| ಪ್ರಭುರವರು, ಶ್ರೀ|| ಗೋಪಿಯವರಿಗೆ ಅಧ್ಯಕ್ಷಸ್ಥಾನವನ್ನು ಒಪ್ಪಿಸಿ, ಮುಂದಿನ ಕಾರ್ಯಕ್ರಮವನ್ನು ನಡಿಸಿಕೊಟ್ಟರು. ಶ್ರೀ|| ಗೋಪಿಯವರು ವೇದಿಕೆ ಮೊದಲು ಕೊಯಿಲೋರರವರಿಗೆ ಧನ್ಯವಾದವನ್ನಿತ್ತು ಮುಂದಾದರು. ಸದಾಶಿವಗಡದ ಶ್ರೀ|| ಗಣಪತ ಸದಾಶಿವ ತ್ಯಾಗಿಯವರು ಪ್ರತಿಸ್ಪರ್ಧಿಗಳಿಲ್ಲದೆ ಉಪಾಧ್ಯಕ್ಷರಾದರು. ಮುಂಬಯಿ ಸರಕಾರವು ಸೇರಿಸಲಿಕ್ಕಿದ್ದ ಸ್ಥಾನಿಕ ಸ್ವರಾಜ್ಯ ಪರಿಷತ್ತಿಗೆ ಶ್ರೀ|| ವಿಶ್ವನಾಥ ಪ್ರಭು, ಸಂಕೋಂದರದ ಉದ್ಯೋಗಿ, ಆರ್. ಜಿ. ಹೆಗಡೆ ಹಾಗು ದೇಸಾಯರವರು ಪ್ರತಿನಿಧಿಗಳಾಗಿ ಆರಿಸಿಬಂದರು. ಹೊನ್ನಾವರದ ಮಿ|| ಫಿಲಿಫೋಸರವರ ಸೂಚನೆಯ ಮೇರೆಗೆ ಈ ಪ್ರತಿನಿಧಿಗಳೆಲ್ಲರೂ ಸ್ವಂತ ಖರ್ಚಿನಿಂದ ಪರಿಷತ್ತಿಗೆ ಹೋಗಬೇಕೆಂದು ನಿರ್ಣಯವಾಯಿತು. ಬಳಿಕ Standing ಕಮೀಟಿಯು ನೇಮಿಸಲಾಯಿತು. ಹೀಗೆ ಸಭೆಯು ವಿಸರ್ಜನ ಹೊಂದಿತು. ಸಾಯಂಕಾಲಕ್ಕೆ ಸ್ಕೂಲ ಬೋರ್ಡಿನ ಉಮೇದ್ವಾರರ ನೇಮಕವಾಯಿತು.

ಮಿ|| ಶ್ಯಾನಭೋಗ ಬಿತಕೋಲ ರವರು ಹೇಳುವದೇನೆಂದರೆ:- ಸರಕಾರವು ಸ್ಥಾನಿಕಸ್ವರಾಜ್ಯ ಸಂಸ್ಥೆಗಳನ್ನು ಪ್ರಜೆಗಳಿಗೆ ಶಿಕ್ಷಣ ಕೊಡುವದಕ್ಕಾಗಿ ಸ್ಥಾಪಿಸಿದೆ. ಈ ಸಂಸ್ಥೆಗಳ ಕಾರ್ಯನಿರ್ವಾಹದಲ್ಲಿ ಆದಷ್ಟು ಹೆಚ್ಚು ಜನರನ್ನು ಸೇರಿಸಿಕೊಳ್ಳತಕ್ಕದ್ದು. ಸ್ಕೂಲ ಬೋರ್ಡ ಮಿ|| ಲೋಕಲಬೋರ್ಡಿಗೆ ಅಧೀನವಾದ ಸಂಸ್ಥೆಯು. ಸ್ಕೂಲ ಬೋರ್ಡಿನ ಸಭಾಸದರನ್ನು ನೇಮಿಸುವ ಅಧಿಕಾರವು ಜಿಲ್ಲಾ ಬೋರ್ಡಿನ ಕೈಯಲ್ಲಿರುವದು. ಇಂಥ ಪ್ರಸಕ್ತಿಯಲ್ಲಿ ಜಿಲ್ಲಾ ಬೋರ್ಡಿನ ಮೆಂಬರರು ಸ್ಕೂಲ ಬೋರ್ಡಿನಲ್ಲಿ ಸೇರಲಿಕ್ಕೆ ಸಲ್ಲದು ಪ್ರಶಸ್ತವಲ್ಲ. ಹಾಗೆ ಸೇರಲಿಚ್ಛಿಸಿದ್ದಲ್ಲಿ ಜಿಲ್ಲಾ ಬೋರ್ಡಿನ ಸಭಾಸದರು ಅಂಥವರಿಗೆ ಮತ ಕೊಡದೆ ಜಿಲ್ಲಾ ಬೋರ್ಡಿನ ಸಭಾಸದರಲ್ಲದವರಿಗೆ ಮತಕೊಟ್ಟು ಆರಿಸಿ ಕಳಿಸಿ ಸ್ಥಾನಿಕ ಸ್ವರಾಜ್ಯದ ಮೂಲ ಉದ್ದೇಶವನ್ನು ಸಾಧಿಸಿದ ಶ್ರೇಯಸ್ಸನ್ನು ಪಡೆಯಬೇಕು.

ಬೆಂಡಿಯಿಂ— ಇಲ್ಲಿಯ ಹೆಡ್ ಮಾಸ್ತರರಾದ ರಾ|| ವಾ. ಮು. ಶೇಟ ಇವರಿಗೆ ಸಿದ್ದಾಪುರಕ್ಕೆ ವರ್ಗವಾಯಿತು. ಇವರು ಮೇ ೧ನೇ ತಾರೀಖಿಗೆ ಚಾರ್ಜ ಕೊಟ್ಟು ನಡೆದರು. ಅಸಿಸ್ಟಂಟ ಮಾಸ್ತರರು ಕವ್ವು ಕಡೆ ಚಾರ್ಜ ಬಂದಾಗಿನಿಂದ ಟಪಾಲ ಆಫೀಸನ್ನು ಶಾಲೆಯ ಸಮೀಪ ಇರುವ ಪ್ರಶಸ್ತ ಸ್ಥಳಕ್ಕೆ ತಂದಿರುವರು. ಅದರಿಂದ ಊರ ಮುಂತಾದ ನೆರೆಹೊರೆಯವರಿಗೆ ಬಹಳ ಅನುಕೂಲವಾಗಿದೆ.

ವೃತ್ತಸಾರ.

— ಮುಗ್ವಾ ಸರಿಮನೆಯ ಮೇಲೆ ಮಿಂಚು ಬಿದ್ದು ೩ ಕ್ಕೂರಿಗಳು ಮಡಿದರು; ೧೦ ಕ್ಕೂರಿಗಳಿಗೆ ಘಾಯವಾಗಿದೆ.

— ಮುಂಬಯಿಯ ಪ್ರಾಂತಾಧಿಪರು ಮಹಾಬಲೇಶ್ವರಕ್ಕೆ ಭೆಟ್ಟಿಗೆ ಕರೆದಿರುವರು. ಮಹಾತ್ಮರು ಮಹಾಬಲೇಶ್ವರಕ್ಕೆ ಹೋಗಲಿರುವರು.

— ನಮ್ಮ ಹಿಂದುಸ್ತಾನದ ನಿವಾಸಿಗಳಾಗಿ ವಿಲಾಯತಿಯ ಬ್ಲಾಕಕೋಂಬ ಬೆರಿಸ್ಟರ ಪರೀಕ್ಷಾಕರಾದವರು ಮಿಡ್ಲ ಟೆಂಪಲಿನ ಸಭಾಸದರಾಗಿರುವರು. ಇವರು ಕಾಲೇಜಿನ ಅಕ್ಷಪದರು. ಕಾಲೇಜಿನ ಸಂಘ ಈಗ ವಿಲಾಯತಿಯಲ್ಲಿ ನಡೆದಿದೆ. ಬೆರಿಸ್ಟರ ಪರೀಕ್ಷಕರಾಗುವವರು ಒಂದು ರಾಜದ್ರೋಹದ ಭಾಷಣ ಮಾಡಿದ ಬಗ್ಗೆ ೬ ತಿಂಗಳ ಕಾರಾಗೃಹವಾಸ ಶಿಕ್ಷೆಯಾಗಿದೆ.

— ಹಾಲೆಂಡ ದೇಶದ ಸರ್ಕಾರವು ಜಾವೆಯ ಗ್ರಾಮದೊಳಗಿನ ೧೫ ಮೂರುತಿಯನ್ನು ಮುಸಲ್ಮಾನ ಅಧಿಕಾರಿಗಳು ಒಡ್ಡುವದರಿಂದು ತಿಳಿಯುತ್ತದೆ.

— ಕೋಲಾಪೂರ ಬಳಿ ಮೈದಾನ ನಡಿಯ ದಂಡೆಯೊಂದು ಕುಸಿದು ಬಿದ್ದು ೨೫ ಕೂಲಿಗಳು ಹುಗಿದು ಬಿದ್ದರು.

— ರಾ|| ಕಂಠಸ್ವಾಮಿ ಚೆಟ್ಟಿಯವರು ಬ್ರಾಹ್ಮಣೇತರ ಪ್ರಮುಖರಾದ ಜನಗಲ ಮದರ ಮೇಲೆ ಮಾಡಿದ ಟೀಕೆಯಿಂದ ನವಂಬರದಲ್ಲಿ ವಾದಿಗೆ ೧೫ ಸಹಸ್ರ ಕೊಡಬೇಕಾಗಿದೆ. ಬ್ರಾಹ್ಮಣೇತರ ವಿರೋಧಕರಿಂದ ಸಂತಾಪ ಪಡೆದು, ಬ್ರಾಹ್ಮಣೇತರ ನಿಂದೆ ಮಾಡುತ್ತಾರೆಂದು ಪ್ರತಿವಾದಿಯು ಹೇಳಿದ ಬಗ್ಗೆ ದಾವೆಯಾಗಿತ್ತು. ವಾದಿಯು ಚೆನ್ನಪಟ್ಟಣದಲ್ಲಿ ಮಾಡಿದ ಭಾಷಣವು ಪ್ರಕ್ಷೋಭಕಾರಕವಿದ್ದು ಅದಕ್ಕೆ ತಿನ್ನೆವೇಲಿಯಲ್ಲಿ ಪ್ರತಿವಾದಿಯು ಪ್ರತ್ಯುತ್ತರಕ್ಕಾಗಿ ಉತ್ತರ ಕೊಟ್ಟದ್ದು, ಈ ಸ್ಥಿತಿಯದ್ದರಿಂದ ರಾಜ್ಯದಲ್ಲಿ ಪ್ರಚಲಿತವಿರುವ ತೀರ ಸಣ್ಣ ನ್ಯಾಯವನ್ನು ವಾದಿಗೆ ಕೊಡಿಸುತ್ತೇನೆಂದು ಹೇಳಿ, ೧೫ಕ್ಕೆ ತೀರ್ಪು ಆಗಿಯದೆ.

— ಸಿಂಧದ ಪ್ರಸಿದ್ಧ ಪೀರ ಗುಲಾಮ ಮುಜದ್ದಿದರವರನ್ನು ಸಿಂಧದ ಪೋಲೀಸರು ಸೆರೆಹಿಡಿದಿರುವರು. ಸರಕಾರಿ ನೌಕರನಿಗೆ ಪ್ರತಿಬಂಧ ಮಾಡಿದರೆಂಬ ಆರೋಪವು ಹೊರಿಸಲ್ಪಟ್ಟಿದೆ.

— ರಂಗೂನಿನ ಪ್ರಕೃತಿ ಕಮುಂತ್ಯಾನ ಗ್ರಾಮದಲ್ಲಿ ಬೆಂಕಿ ಬಿದ್ದು ಸುಮಾರು ೫೦ ಮನೆಗಳು ಸುಟ್ಟು ಹೋದವು! ನೂರು ಕುಟುಂಬಗಳು ನಿರ್ಗತಿಕವಾಗಿರುವರು.

— ಬಾಗಲಕೋಟೆಯಲ್ಲಿ ಅದ್ಭುತ ಬೆಂಕಿ ಬಿದ್ದು ೧೫೦ ಹುಲ್ಲು ಬಣವೆಗಳು ಸುಟ್ಟು ಹೋದವು. ೪೦ ಸಾವಿರ ರೂಪಾಯಿಗಳ ನಷ್ಟ! ಬೇಸಾಯಗಾರರ ಗೋಳು.

— ಭಿಲ್ಲ ಸೇವಾ ಮಂಡಲದವರು ಕರೆದ ಶ್ರೀ ಧನುರ್ಧಾರಿ ರಾಮದೇವರ ಮೂರ್ತಿಪ್ರತಿಷ್ಠೆಯ ಸಮಾರಂಭದಲ್ಲಿ ಭಿಲ್ಲರು ಅರ್ಥವಿಲ್ಲದ ಬಹುಪ್ರದರ್ಶನಗಳನ್ನು ಮಾಡಿ ತೋರಿಸಿದರು. ಮೊದಲಿನಿಂದ ಬಾಣ ಹೊಡೆದು, ಒಂದು ಮರದ ಹಣ್ಣಿನ ತುದಿಗೆ ನಾಟಿಸಲಾಯಿತು. ಅದನ್ನು ನೋಡಿ ಎಲ್ಲರೂ ಬೆರಗಾದರು. ಆತನೇ ಇನ್ನೊಂದು ಪ್ರಯೋಗ ಮಾಡಿ ತೋರಿಸಿದನು. ವ್ಯಾಸಾಯತನು ಬಿಲ್ಲಿನಿಂದ ಬಾಣವನ್ನು ಕಳಿಸಿಬಿಟ್ಟನು. ಮೂವರು ತಾಳ್ಮೆಯಿದ್ದರು ಅದರು ಇದನ್ನು ನೋಡಿ ಮುಂದಿನ ಮೇಲೆ ಬೆಟ್ಟಿಟ್ಟರು ಕಾಡು ಎಂದು ಹೇಳಲ್ಪಡುವ ಭಿಲ್ಲರ ಚಮತ್ಕಾರಗಳನ್ನು ನೋಡಿರಿ.

— ಹಿಂದಿನವರಿಗೆ ಗೃಹದಾನ ಮಾಡುವದಕ್ಕಾಗಿ ಮೈಸೂರಿನ ಶ್ರೀ ಮನ್ಮಹಾರಾಜರವರು ೧೫೦ ಸಾವಿರ ರೂಪಾಯಿಗಳನ್ನು, ಶ್ರೀ ದಿವಾನ ಮಿರ್ಜಾರವರು ೧೦ ಸಾವಿರ ರೂಪಾಯಿಗಳನ್ನು ಅರ್ಪಿಸಿದರು.

— ಧಡೋಟೆ ಜಿಲ್ಲೆಯಲ್ಲಿ ಭಿಲ್ಲರು ಸಭೆಸೇರಿ ಮದ್ಯಪಾನ ಹಾಗು ಮಾಂಸಾಹಾರಗಳನ್ನು ಹೋಗಲಾಡಿಸಲು ಸಂಘ ಸ್ಥಾಪಿಸಬೇಕೆಂದು ನಿರ್ಧರಿಸಿದರು. ಕಾಡು ಭಿಲ್ಲರ ಆಚರಣವನ್ನು ಸುಧಾರಿಸುವದು ಅವಶ್ಯಕವಿರುವದು.

— ಸವದತ್ತಿಯಲ್ಲೊಂದು ಚಮತ್ಕಾರ! ಬಡಿಗ ಜಾತಿಯವರಿಗೆ ಒಂದು ಕರು ಗಂಡು ಕರು ಹುಟ್ಟಿತು. ೨-೩ ತಿಂಗಳಾಗಲಾದರೂ ಸದ್ಯಕ್ಕೆ ತಾಯಿಯ ಮೊಲೆ ಹಾಲಿನಿಂದಲೇ. ಆದರೆ, ಕರುವಿಗೆ ಕಣ್ಣು ಇಲ್ಲದಿದ್ದು ಇನ್ನೊಂದು ಚಮತ್ಕಾರ! ಇದೇ ಕಾಲಕ್ಕೆ ಕಲಕೇರಿ ಗ್ರಾಮದಲ್ಲಿ ಆಕಳಿಗೆ ಒಂದು ಹೋರಿ ಹುಟ್ಟಿದೆ. ಅದಕ್ಕೆ ಮೂರು ಕಣ್ಣುಗಳಿವೆ, ಮೂರನೆ ಕಣ್ಣು ಹಣೆಯಲ್ಲಿದೆ ವಿಲಕ್ಷಣ ಲೀಲೆ!

— ಕಾಶ್ಮೀರ ಸಂಸ್ಥಾನದಲ್ಲಿ ವಿಲಾಯತಿಯ ಜನರಿಗೆ ಮಾತ್ರ ಪ್ರವೇಶ ಸಿಗುವದಾಗಿ ಕಟ್ಟಪ್ಪಣೆಯನ್ನಿತ್ತಿರುವರು. ಮಹಾರಾಜರ ಮಾತೃಭೂಮಿಯ ಮೇಲಿನ ಪ್ರೇಮ ನೋಡಿರಿ!

— ತಿರುವನಂತಪುರದಲ್ಲಿ ಅಂಬಾಳ ಜಾತಿಯ ಧೀರನೊಬ್ಬನು ಹುಲಿಯನ್ನು ಕೈಗಳಿಂದಲೇ ಹಿಡಿದು ಕಲ್ಲುಗಳಿಂದ ತಲೆಯನ್ನು ಜಜ್ಜಿ ಕೊಂದುಹಾಕಿದನು. ಧೀರನಿಗೆ ಏನೊಂದೂ ಘಾಯಗಳಾಗಲಿಲ್ಲ. ಪ್ರಶಂಸನೀಯ ಸಾಹಸ!

— ಮೈ|| ಪಾ|| ಪಂಡಿತ ಮಾಲವೀಯರು ಪ್ರಸಿದ್ಧ ವಕೀಲರು. ಇವರು ೧೯೦೪ರಿಂದ ೧೯೨೫ರ ವರೆಗೆ ೧೨೫ ನಾಟಕಪ್ರಯೋಗ ಮಾಡಿ ೩೦೦೦೦ ರೂಪಾಯಿಗಳನ್ನು ಸಂಪಾದಿಸಿದರು, ೮೦ ಸಾವಿರ ರೂಪಾಯಿಗಳನ್ನು ಧರ್ಮ ಮಾಡಿದರು.

— ಕಲಕತ್ತೆ ಹಾಗು ಬರ್ದ್ವಾನಗಳೊಳಗೆ ಹೊಸ ಮೈಲು ಆಗಿರುವದಿದೆ. ಈ ಅಂತರವನ್ನು ಪಯಣಿಸತಕ್ಕಲ್ಲಿ ೧೬ ತಾಸು ಬೇಕಾಗುವದು. ಈಗ ತಾಸು ೩೫ ಮೈಲು ವೇಗದಿಂದ ಬಂದರು.

— ದಕ್ಷಿಣ ಆಫ್ರಿಕೆಯಲ್ಲಿ ಭಾರತೀಯರ ಕಾದಾಟ ನಡೆಸಿ ಸಾಗಿದ ಹಿಂದಿನ ದೀನಬಂಧು ಆಂಡ್ರ್ಯೂಸರವರು ಹಿಂದುಸ್ಥಾನಕ್ಕೆ ಬಂದಿರುವರು. ಅವರಿಗೆ ಮುಂಬಯಿಯವರು ಸಭೆಸೇರಿ ಉಪಕಾರ ಮನ್ನಿಸಿದರು.

— ಮೈಸೂರಿನ ಮೋಲಕೋಟೆ ಸಂಸ್ಕೃತ ಕಾಲೇಜಿನ ಮುಖ್ಯಾಧ್ಯಾಪಕರಾದ ಮಹಾ ವಿದ್ವಾನ್ ಕರ್ಮಶೀಲ ಲಕ್ಷ್ಮೀನರಸಿಂಹಾಚಾರ್ಯರವರು ತೀರಿಕೊಂಡರೆಂದು ತಿಳಿಸಲು ವ್ಯಸನವಾಗುತ್ತದೆ.

— ಕರಾಚಿ ಮ್ಯುನಿಸಿಪಾಲಿಟಿಯವರು ಸಭಾಮಂದಿರದಲ್ಲಿ ಮಹಾತ್ಮರ ತೈಲಚಿತ್ರವನ್ನಿಡುವ ತೀರ್ಮಾನ ಮಾಡಿರುವರು. ಇದಕ್ಕಾಗಿ ರೂಪಾಯಿ ೩೫೦ ಮಂಜೂರಾಗಿದೆ.

— ಬಿತ್ತ್ರಾಯಿದ ಪ್ರಾಥಮಿಕ ಶಿಕ್ಷಣದ ಶಾಲೆಯಲ್ಲಿರುವ ಶಾಲೆಗಳಿಗೆ ಬರುತ್ತಿರುವ ಬಡ ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನು ಪೂರೈಸುವದಕ್ಕಾಗಿ ಹೈದರಾಬಾದ ಮ್ಯುನಿಸಿಪಾಲಿಟಿಯವರು ೨೦೦೦ ರೂಪಾಯಿಗಳನ್ನು ಮಂಜೂರ ಮಾಡಿರುವರು.

ಜಂಗಲ ಕಮೀಟಿ.

(ಹಿಂದಿನ ವಾರದಿಂದ ಮುಂದುವರಿದದ್ದು.)

ಒಂದು ವರ್ಷದೊಳಗೆ ಕರಿದೊಪ್ಪಾಗಲಿಲ್ಲ. ಬಳಿಕ, ದಾವಿದ್ದ ರದ್ದಾಯಿತು. ಇಲ್ಲಿ ೫೦ ವರ್ಷಗಳ ಹಿಂದೆ ೫೦೦ ಲೋಕರು ಬಾಯಿತ್ತೆಂದು ಹಿಂದಿನ ಪಟೇಲರವರಾದ ರಾ|| ಹೆಬ್ಬಾರರು ಹೇಳಿದರು. ಈಗ ೧೦೮ ಮಂದಿಗಳಿದ್ದಾರೆ. ಎಕ್ರೆಗೆ ೮ ಎಕ್ರೆ ಕಾಡುಕೆ ಕೊಡಲಿಲ್ಲ; ದನ್ಯಾಕರ ಬಿಟ್ಟು ಕೊಟ್ಟರು. ಅದು ಪಟೆ ಲರ ಮನೆಯಿಂದ ೧-೧॥ ಮೈಲು ದೂರವಿದೆ. ಮಹಾತ್ಮ ಊರಿನಿಂದ ೨-೩ ಮೈಲು ದೂರವಾಗಬಹುದು. ಜಂಗಲ ಖಾತೆಯ ಕಾಡಿದ್ದನ್ನು ನೋಡಿ ಜಂಗಲ ಕಮೀಟಿಯವರ ಕಾರು ಕರಗಿದಂತೆ ತೋರಿತು. ಕಮೀಟಿಯವರು ಕಷ್ಟಪರಿಹಾರ ಮಾಡಲು ಉಪಾಯದ ಯೋಜನೆ ಮಾಡಿದರೆ ಮಾತ್ರ ಉಪಯೋಗ!

ಅವರುನ್ನಲ್ಲಕ್ಕೆ ಪುನಃ ಕಮೀಟಿಯ ಕೆಲಸಕ್ಕೆ ಪ್ರಾರಂಭವಾಯಿತು. ರಾ|| ಹೊಂಗೆರೆಮನೆ ಪಾಟೀಲರವರು ಆರಿಸ ಬಂದಿದ್ದರು. ರಾ|| ವಿಶ್ವೇಶ್ವರ ಹೆಗಡೆ ವಕೀಲರು ಜಂಗಲ ಗ್ರಾಮಗಳ ರೈತರ ಕಷ್ಟಗಳನ್ನು ನಿವೇದಿಸಿದರು. ಕಮೀಟಿಯವರೆಲ್ಲರೂ ಅದನ್ನು ಚೆನ್ನಾಗಿ ಗ್ರಹಿಸಿದರು. ಅವನ್ನು ಕೇಳಿದರು ಅದ್ಯಾ ಕಷ್ಟಗಳನ್ನರಿತರು. ಆಲೋಚನೆಯು ಅಷ್ಟಕ್ಕೆ ಮುಗಿಯಿತು. ಈ ವಿಚಾರಣೆಯು ಬಹಳ ಸಂಕ್ಷಿಪ್ತವಾಗಿದ್ದು, ಜಂಗಲ ಹೊಲಗಳ ದುರ್ದಶೆ ಅಲ್ಪತ ಪರಿಶೀಲಿಸಲು ಸಾಕಷ್ಟು ಅವಕಾಶ ದೊರೆಯಲಿಲ್ಲ. ಬಾಯಿ ಪುರಾವೆ ಕೊಳ್ಳುವದಕ್ಕಿಂತ ಕಮೀಟಿಯವರು ಪ್ರತಿ ತಾಲೂಕಿನಲ್ಲಿ ಕೆಲವು ಗ್ರಾಮಗಳನ್ನು ಆರಿಸಿಕೊಂಡು ಸಂದರ್ಶಿಸುವದುತ್ತಮ. ಜಂಗಲ ಕಮೀಟಿಯವರು ಈ ಕುರಿತು ವಿಚಾರ ಮಾಡುವರು. ಕಮೀಟಿಯವರು ಕುಮಟೆಗೆ ಹೊರಟರು.

ಮಹಾತ್ಮರ ಆತ್ಮಚರಿತ್ರ.

(೨೧) ನಿರ್ಬಲನ ಕೇ ಬಲ ರಾಮ!

ಭೂತಲದಲ್ಲಿ ಪ್ರಚಲಿತವಾಗಿರುವ ಧರ್ಮಗಳ ಜ್ಞಾನವನ್ನು ನಾನು ತಕ್ಕಮಟ್ಟಿಗೆ ಪಡಕೊಂಡಿದ್ದರೂ, ಸಂಕಟ ಕಾಲದಲ್ಲಿ ಮಾನವನು ಆಷ್ಟು ಜ್ಞಾನವು ಸಾಲದೆಂದು ನನಗೆ ತಿಳಿಯಬೇಕಾಗಿತ್ತು. ಸಂಕಟಕ್ಕೆ ಸಿಲುಕಿದ ಮಾನವನಿಗೆ ಆ ಜ್ಞಾನವು ಉಪಯೋಗಿಸುವದಿಲ್ಲ. ನಾಸ್ತಿಕ ಮತದವರು ಕಾಲವಶಾತ್ ಬಾರದವರೆಂದು ನುಡಿಯುತ್ತಾರೆ, ಆಸ್ತಿಕರು ಪರಮಾತ್ಮನ ಅನುಗ್ರಹದಿಂದ ಪಾರಾದೆನೆಂದು ಹೇಳುತ್ತಾರೆ. ಧರ್ಮನಿಷ್ಠೆಯ ಬಲದಿಂದಲೂ, ಪಾರಮಾರ್ಥಿಕ ತಪೋಬಲದಿಂದಲೂ ಪರಮಾತ್ಮನ ಅನುಗ್ರಹಪಾತ್ರರಾದೆವೆಂದು ಆಸ್ತಿಕ ಮಾನವರ ಅಭಿಪ್ರಾಯ. ಆದರೆ, ಪಾರಾಗುವ ಸಮಯದಲ್ಲಿ ಪಾರಮಾರ್ಥಿಕ ತಪೋಬಲವು ಸಹಾಯವಾಯಿತೋ? ಇತರ ಕಾರಣವಾಯಿತೋ? ಮಾನವನೇನು ಹೇಳಬಲ್ಲನು. ತಪೋಬಲದ ಗರ್ವ ಹಿಡಿದವರ ಮುಖವನ್ನು ಪರಮಾತ್ಮನು ತಗ್ಗಿಸಿದ ಉದಾಹರಣೆಗಳು ಇರುವವೆನು? ಇಂಥ ಕಷ್ಟಪ್ರಸಂಗಗಳಲ್ಲಿ ಖರೇ ಧರ್ಮಜ್ಞಾನವು ನಿಶ್ಚಯವಾದ ಉಪಯೋಗವಾಗುತ್ತದೆ.

ಧರ್ಮಜ್ಞಾನವನ್ನಷ್ಟೇ ಸಂಗ್ರಹಿಸುವದು ನಿರರ್ಥಕವೆಂದು ನನಗೆ ಇಂಗ್ಲೆಂಡದಲ್ಲಿ ತಿಳಿಯಿತು. ಈ ಮೊದಲು ನಾನು ಪಾರಾದ ಬಗೆಗಳನ್ನು ನಾನು ಹೇಳಲಾರೆ. ನಾನು ತೀರ ಚಿಕ್ಕವನಿದ್ದ, ಬಹುಶಃ ಆವಸ್ಥೆಯಿತ್ತು. ಈಗ ನನಗೆ ೨೦ ವರ್ಷಗಳಾಗಿದ್ದವು. ಆಗ ನಾನು ಒಂದು ಅವಸ್ಥೆಗಳ ಅನುಭವವು ನನಗೆ ಪ್ರಾಪ್ತವಾಗಿತ್ತು.

ಇಂಗ್ಲೆಂಡಿನ ಆಸ್ತ್ಯದಲ್ಲಿ [illegible] ಆ ವಿಲಾಯತಿಯಲ್ಲಿ ನಾನು ಇದ್ದ ಕೊನೆ ವರುಷ ಈ ಸಂವತ್ಸರದಲ್ಲಿ ಪೋರ್ಟ್ಸ ಮೌಥ ಪಟ್ಟಣದಲ್ಲಿ ಶಾಕಾಹಾರಿಗಳ ಪರಿಷತ್ತಿನದು ನೆರೆದಿತ್ತು. ಈ ಸಭೆಗೆ ನನಗೂ, ಇನ್ನೊಬ್ಬ ಭಾರತೀಯ ಗೆಳೆಯರಿಗೂ ಆಮಂತ್ರಣವಿತ್ತು. ಪೋರ್ಟ್ಸ ಮೌಥೆಂದರೆ ಒಂದು ಬಂದರವು. ಅಲ್ಲಿ ಕಡಲ ಕ್ಕೆ ಹೋಗುವ ಜನರು ಮುಂತಾದವರುಗಳ ಮೇಲೆ ಜೀವಿಸುವ ಹೆಂಗಸರು ಹೇರಳವಾಗಿರುವರು. ಇಲ್ಲಿ ವ್ಯಭಿಚಾರ ಹೆಂಗಸರ ಅನೇಕ ವಿಷಯಗಳಿವೆ. ಈ ಹೆಂಗಸರಿಗೆ ವೇಶ್ಯೆ ದವರೆಂದು ಹೇಳಬಹುದು. ಆದರೆ, ಇವರಿಗೆ ನೀತಿಬಂಧನದ ಜಾಗ್ರತೆಯು ಇರುವದಿಲ್ಲ. ಇಂಥ ಒಂದು ಮನೆಯಲ್ಲಿ ನಾವು ಉಳಕೊಳ್ಳಬೇಕಾಯಿತು. ಸ್ವಾಗತ ಮಂಡಳದವರು ಬೇಕೆಂದು ಈ ವ್ಯವಸ್ಥೆ ಮಾಡಿರಲಿಲ್ಲ. ಪೋರ್ಟ್ಸ ಮೌಥದಂಥ ಪಟ್ಟಣಗಳಲ್ಲಿ ನಮ್ಮಂಥವರಿಗೆ ಉಳಕೊಳ್ಳಲು ಯೋಗ್ಯವಾದಂಥ ಬಿಡಾರಗಳನ್ನು ಹುಡುಕುವದೇ ಕಠಿಣ.

ಸಾಯಂಕಾಲಕ್ಕೆ ನಾವು ಪರಿಷತ್ತಿನಿಂದ ಬಂದೆವು. ಊಟ ತೀರಿ. ಬ್ರಿಜ್ ಆಟವನ್ನಾಡಹತ್ತಿದೆವು. ನಮ್ಮ ಮನೆಯ ಯಜಮಾನಿಯೂ ಆಟದಲ್ಲಿ ಸೇರಿದ್ದಳು. ಹೀಗೆ ಅತಿಥಿಗಳೊಡನೆ ಮನೆಯ ಯಜಮಾನಿಯೂ ಆಡುವ ರೂಢಿಯು ಸಭ್ಯ ಮನೆತನಗಳಲ್ಲಿ ಸಹ ಇರುತ್ತದೆ. ಪ್ರತಿಯೊಬ್ಬ ಆಟಗಾರರು ನಿರ್ಮಲವಾಗಿ ನಯವಿನೋದದ ಚೇಷ್ಟೆ ಮಾಡುತ್ತಿದ್ದರು. ನನ್ನ ಜೊತೆಗಾರನೂ, ಮನೆ ಯಜಮಾನಿಯೂ ಅಸಭ್ಯ ಚೇಷ್ಟೆ ಮಾತುಗಳನ್ನಾಡಹತ್ತಿದರು. ಜೊತೆಗಾರನು ಈ ವಿದ್ಯೆಯಲ್ಲಿ ಅಭಿಜ್ಞನೆಂದು ನಾನು ತಿಳಿದಿದ್ದಿಲ್ಲ. ನಾನು ಮೋಹಪಾಶನಾಗಿ ಈ ಆಟದ ಪ್ರಕಾರದಲ್ಲಿ ಸೇರಿಕೊಂಡೆನು. ಇಸ್ಪೀಟಿನ ಎಲೆಗಳನ್ನೂ ಆಟವನ್ನೂ ಒತ್ತಟ್ಟಿಗೆ ಬಿಟ್ಟುಕೊಟ್ಟು ಮೇರೆ ದಾಟಿ ನಾನು ಹೋಗುತ್ತಿದ್ದೆ. ಅಷ್ಟರಲ್ಲಿ ಜೊತೆಗಾರನ ಸ್ವರೂಪದಲ್ಲಿ ಪರಮಾತ್ಮನೇ ಅವತರಿಸಿದಂತೆ, ಜೊತೆಗಾರನು ಮುಂಜಾಗ್ರತೆಯನ್ನಿತ್ತಿದ್ದೇನೆಂದರೆ:— “ಈ ತಗನೇ,

ಆದೆಂಥ ದುರ್ಬುದ್ಧಿ ನಿನಗುಂಟಾಯಿತು? ಹೋಗು; ಜಲ್ದಿ. ಹೋಗು.”

ನನಗೆ ಬಹಳ ನಾಚಿಕೆಯೆನಿಸಿತು. ಮುಂಜಾಗ್ರತೆಯನ್ನು ನಾನು ಪಾಲಿಸಿದೆ. ಮನಃಶಕ್ತಿಯಿಂದಲೇ ನಾನು ಗೆಳೆಯನ ಉಪಕಾರವನ್ನು ಸ್ಮರಿಸಿದೆನು. ನನಗೆ ತಾಯಿಯ ಸಾಕ್ಷಾತ್ ಕೊಂಡ ಪ್ರತಿಜ್ಞೆಯು ನೆನಪಾಗಲಾಯಿತು. ಕೂಡಲೆ ಅಲ್ಲಿಂದ ನಾನು ಓಡಿಬಿಟ್ಟೆನು. ಆದೀ ವ್ಯಾಪಾರ ನಡೆಯುತ್ತಿತ್ತು. ಎದೆ ಹಾರುತ್ತಿತ್ತು. ಬೇಟೆಗಾರನ ಬಾಣಗಳಿಂದ ಪಾರಾದ ಬೇಟೆಯಂತೆ ನಾನು ರಭಸದಿಂದ ನನ್ನ ಕೋಣೆಗೆ ಹೋದೆನು.

ಸ್ವಂತ ಹೆಂಡತಿಯಲ್ಲದ ಹೆಂಗಸು ನನಗೆ ಕಾಮುಕತನವನ್ನು ಹುಟ್ಟಿಸಿದ್ದು ಇದು ಮೊದಲನೇ ಬಾರಿ. ಆ ದಿನ ರಾತ್ರಿ ನನಗೆ ನಿದ್ದೆ ಬೀಳಲಿಲ್ಲ. ನಾನಾ ತರದ ವಿಚಾರಗಳು ನನ್ನನ್ನು ಬಾಧಿಸಹತ್ತಿದವು. ನಾನು ಈ ಬಿಡಾರವನ್ನು ಬಿಡಬೇಕೇ? ಈ ಸ್ಥಳದಿಂದ ಓಡಿ ಹೋಗಲೇ? ನಾನು ಎಲ್ಲಿದ್ದೇನೆ? ನನ್ನ ಚಿತ್ತವು ಚಂಚಲವಾಗಿದ್ದರೆ ಏನನರ್ಥವಾಗುತ್ತಿತ್ತು? ಬಹಳ ಎಚ್ಚರಿಕೆಯಿಂದ ನಾನು ಉಳಕೊಳ್ಳಬೇಕೆಂದು ನಾನು ಅಂದು ನಿರ್ಧರಿಸಿಕೊಂಡೆ. ಮನೆಯನ್ನೇ ಬಿಡಬೇಕು, ಆದರೆ ಸಂಗತ ಪೋರ್ಟ್ಸ ಮೌಥ ಬಿಡಬೇಕು ಪರಿಷತ್ತು ಎರಡು ದಿನಗಳಲ್ಲಿಯೇ ಮುಗಿಯುವದಿತ್ತು. ಮಾರನೇ ದಿನ ಸಂಜೆಗೇ ನಾನು ಪೋರ್ಟ್ಸ ಮೌಥ ಪಟ್ಟಣದಿಂದ ಹೊರಟೆನು. ನನ್ನ ಜೊತೆಗಾರನು ಅಲ್ಲಿ ಕೆಲವು ದಿನಗಳ ವರೆಗೆ ಉಳಕೊಂಡಿದ್ದನು.

ಆಗ ಧರ್ಮದ ಮರ್ಮವನ್ನು ನಾನು ತಿಳಿದಿದ್ದಿಲ್ಲ. ಪರಮಾತ್ಮನ ರಹಸ್ಯವನ್ನು ಅರಿತಿದ್ದಿಲ್ಲ. ಅವನು ನನಗಾಗಿ ಹೇಗೆ ವ್ಯವಸ್ಥೆ ಮಾಡುತ್ತಾನೆಂಬುದು ನನಗೆ ತಿಳಿದಿದ್ದಿಲ್ಲ. ಆ ಪ್ರಸಂಗದಲ್ಲಿ ಪರಮಾತ್ಮನು ನನಗೆ ಪಾರಗಾಣಿಸಿದನೆಂಬುದನ್ನಷ್ಟೇ ಹಾಸರಿತಿದ್ದೆ. ಪರಿ ಪ್ರಸಂಗದ ಪ್ರಸಂಗಗಳಿಂದಲೂ ಆತನು ನನಗೆ ಕಾಪಾಡಿರುವನು. “ಪರಮಾತ್ಮನು ನನಗೆ ಕಾಪಾಡಿದನು” ಎಂಬ ವಾಕ್ಯದ ಅರ್ಥವು ಇಂದಿಗೆ ವಿಶೇಷವಾಗಿ ಹೊಳೆಯುತ್ತದೆ. ಸಂಪೂರ್ಣವಾಗಿ ಇದರ ಅರ್ಥಬೋಧವಾಗಲಿಲ್ಲವೆಂದು ನನಗನಿಸುತ್ತದೆ. ಅನುಭವ ಬಂದ ಹಾಗೆ ಹೆಚ್ಚೆಚ್ಚು ಅರ್ಥಬೋಧವಾಗಬಹುದು. ಆದರೆ ಪಾರಮಾರ್ಥಿಕ ಸ್ವರೂಪದ ಪ್ರಸಂಗಗಳಲ್ಲಿಯೂ ವಕೀಲನಾಗಿ ಮೊಕದ್ದಮೆಗಳನ್ನು ನಡಿಸುವಾಗಲೂ, ರಾಜಕಾರಣದಲ್ಲಿಯೂ “ಪರಮಾತ್ಮನೇ ನನ್ನನ್ನು ಕಾಪಾಡಿದನು” ಎಂದು ನಾನು ನಿಶ್ಚಯಪೂರ್ವಕವಾಗಿ ಹೇಳಬಲ್ಲೆ. ಎಲ್ಲ ಕಡೆಗಳಿಂದಲೂ ನಿರಾಶೆಯಾದಾಗ, ನೆರವಾಗುವಂಥವರಿಲ್ಲದೆ ಮೋಸ ಹೋದಾಗ, ಸುಖದ ವಿಚಾರಗಳು ನಷ್ಟವಾದಾಗ, (ಎಲ್ಲಿಂದಲೋ ಏನೋ) ನನಗೆ ಸಹಾಯವು ಪ್ರಾಪ್ತವಾಗುತ್ತದೆ. ಇಷ್ಟರಿಂದ ನಾನು ಹೇಳಬಲ್ಲೆ. ಯಾಚನೆ, ಪೂಜೆ ಹಾಗು ಭಜನೆಗಳು ಮೂಢ ಕಲ್ಪನೆಗಳಲ್ಲ. ತಿನ್ನುವಂತೆ, ಕುಡಿಯುವಂತೆ ಕಾಮುಕೊಳ್ಳುವಂತೆ ಅವು ಅಷ್ಟು ಸತ್ಯವಾದವುಗಳು. ಅವು ಪ್ರತ್ಯಕ್ಷವಾಗಿಯೂ ಇವೆ; ಅವನ್ನು ಅವು ಪ್ರತ್ಯಕ್ಷವಾಗಿರುವವೆಂದು ನಾನು ಹೇಳುತ್ತೇನೆ. ಅವೇ ನಿತ್ಯವಾದಂಥವು, ಪ್ರತ್ಯಕ್ಷವಾದಂಥವು. ಉಳಿದವಲ್ಲ ಅನಿತ್ಯವಾಗಿರುತ್ತವೆ. ಇದೇನು ಅತಿಶಯೋಕ್ತಿಯಲ್ಲ.

ಇಂಥ ಪೂಜೆಯಾಗಲೀ, ಭಜನೆಯಾಗಲೀ ವಕ್ತೃತ್ವದ ಅತಿಶಯೋಕ್ತಿಯಲ್ಲ. ಅದೇನು ಬಾಯ್ಮಾತಿನವಲ್ಲ. ಅಂತಃಕರಣದೊಳಗಿಂದ ಇವು ಹುಟ್ಟುತ್ತವೆ. ಅಂತಃಕರಣದೊಳಗಿಂದ ನಮ್ಮ ಕಿಲ್ಬಿಷಗಳನ್ನು ಹೋಗಲಾಡಿಸಿ, ನಿಶ್ಚಲ ಪ್ರೇಮಮಯವಾಗಿ ಅರಿತಿಸಿ ಒಮ್ಮೆ ಇಂದ್ರಿಯಗಳನ್ನು ಸ್ವಾಧೀನ ಇಟ್ಟುಕೊಂಡರೆ, ನಮ್ಮ ಜೀವಿತವು ಸಾರ್ಥಕವಾಗುತ್ತದೆ. ಪರಮಾತ್ಮ ಭಜನೆ ಮಾಡುವಾಗಲೂ ಇಂದ್ರಿಯ ನಿಯಮನಗಳನ್ನು, ಪ್ರಾರ್ಥನೆಗೂ ಪರಮಾತ್ಮ ಸಂಬಂಧವಿಲ್ಲ. ಪವಿತ್ರತೆಗಳ ಉಪಕ್ರಮದಿಂದ ಮನಸ್ಸನ್ನು ನಿರ್ಮಲಗೊಳಿಸುವ ಇದು ಪ್ರಾರ್ಥನೆಯೇ ಎಂದು ನಾನು ಹಾರಿಕವಾಗಿ ಹೇಳುತ್ತೇನೆ. ಆದರೆ, ಆ ಸಮಯ ನಾನು ಅತ್ಯಂತ ನಿರಾಧರನಾಗಿದ್ದೆನು.

— ದೋಹದದಲ್ಲಿ ಫಿಲ್ ಸೇವಾಮಂಡಳದವರು ಭಿಲ್ಲರ ಉದ್ಧಾರಕ್ಕಾಗಿ ಧರ್ಮಧುರೀಣರಾದ ಶ್ರೀ ಅನುಮಂಡಲವನ್ನು, ಶ್ರೀ ಕಾಲಾಪಕರ ಸ್ವಾಮಿ ಶ್ರೀ ಭಾರತೀಕೃಷ್ಣತೀರ್ಥರು ಅತ್ಯಂತ ಆದರದಿಂದ ಆ ಭಿಲ್ಲರ ಗುರಿಹೊಡೆಯುವ ಅದ್ಭುತ ಪ್ರಯೋಗಗಳನ್ನು ತೋರಿಸಿದರು.

— ವಿಲಾಯತಿಯಲ್ಲಿ ಕಲ್ಲಿದ್ದಲಿಯ ಗಣಿಗಳ ಕಾರ್ಮಿಕರು ಸಂಪು ಮಾಡಿದರು. ಸಂಪು ಮುಗಿದ ಕೂಡಲೆ ರಾಜ್ಯಕೀಯ ಹೊತ್ತು ಹುಟ್ಟಿತು ಏನೋ!

— ಸಾರ್ವಭೌಮ ಬ್ರಿಟಿಶ ಸಾಮ್ರಾಜ್ಯ ಸರಕಾರದ ಗ ಸ್ಥಳೀಯ ಕಾರಣಗಳ ದೆಸೆಯಿಂದ ಹಿಂದೂ-ಮುಸಲ್ಮಾನರಲ್ಲಿ ಉಂಟಾದ ಹೊಡೆದಾಟಗಳನ್ನು ಮುರಿದು ಶಾಂತಿಪ್ರಿಯ ಪ್ರಜೆಗಳನ್ನು ಪಾಲಿಸಲು ಅಸಮರ್ಥರಾಗಿ ಬಂಗಾಲದ ಪ್ರಾಂತಾಧಿಪರು ಕರ್ತವ್ಯದಿಂದ ಚ್ಯುತರಾದವರಿಂದ ಅವರಿಗೆ ಜಕ್ಕಿನೇ ಸಹಾಯ್ಯಕ ಪಡೆಯುವುದಕ್ಕಾಗಿ ಕಲಕತ್ತೆಯ ‘ಫೊರವರ್ಡ’ ಪತ್ರಿಕೆಯು ಕ್ರಮಿಸಿದೆ

ನೋಟೀಸು.

ಇದರಿಂದ ತಿಳಿಸುವದೇನಂದರೆ:—

ಮಿ। ಗಂಗಾನಾಥ ಮುಕುಂದ ಶ್ಯೆ[illegible]

ಅಂಕೋಲಾ.

ಇವರನ್ನು “ದಿ ಮೆಯಿನಟರ್ ಗವ್ಹರ್ನಮೆಂಟ ಸೆಕ್ಯೂರಿಟಿ ಲಾಯಿಫ ಎಶ್ಯೂರನ್ಸ ಕಂಪನಿ”ಯ ಕಾರವಾರ ಜಿಲ್ಹಾ ಏಜಂಟರನ್ನಾಗಿ ನೇಮಕ ಮಾಡಿದೆ.

ಬಿ. ಎಸ್. ಅರಾಧ್ಯ,
ಜೇಫ ಏಜಂಟ,
ಹುಬ್ಬಳ್ಳಿ.

ಲೇಡಿ ಕೆನ್‍ವ್ಹಾಸರಳು ಬೇಕು!

ಅರಿವೆ ಕತ್ತರಿಸುವ ಹಾಗು ಹೊಲಿಯುವ ಕೆಲಸದಲ್ಲಿ ನುರಿತ ಹಿಂದೂ ಲೇಡಿ ಕೆನ್‍ವ್ಹಾಸರಳೊಬ್ಬಳು ಗೋವೆಯಲ್ಲಿ ಸಿಂಗರ ಮಶೀನುಗಳನ್ನು ವಿಕ್ರಯಿಸಲು ಬೇಕಾಗಿರುವಳು. ವಿಶೇಷ ಮಾಹಿತಿ ಬಗ್ಗೆ ಕೆಳಗಿನವರಿಗೆ ಬರೆಯಲ್ಪಡಿರಿ.

Singer Sewing Machine Company.
PANJIM. (GOA)

ಉತ್ತಮ ವಸ್ತ್ರಗಳು! ಉತ್ತಮ ವಸ್ತ್ರಗಳು!

ಮಂಗಳೂರ ಹಂಚು!

ನಮ್ಮಲ್ಲಿ ಮಂಗಳೂರ ಜೋಡ ಟ್ರಾಮ ಕಪ್ಪೀ ಉತ್ತಮ ಪ್ರತಿಯ ಮಂಗಳೂರ ಹಂಚುಗಳು ಮಾರಾಟಕ್ಕೆ ಸಿದ್ಧವಾಗಿವೆ. ಬಂಗಿಕಟ್ಟಲ್ಲಿ ಇವನ್ನು ಉತ್ತಮ ಹಂಚುಗಳಿಲ್ಲ! ಬೇಕಾದವರು ವಸ್ತ್ರಗಳು ನೋಡಿ ದರವಾರ ತಿಳಕೊಳ್ಳಬಹುದು. ದರವಾರ ಸವಲಿಯದಿರುವವು. ಒಮ್ಮೆ ಪರೀಕ್ಷಿಸಿ ನೋಡಿರಿ!

ಪತ್ತೆ:— **ಕಾಫಿ ಅಬ್ದುಲ್ ಕಾದರ**
ಮುನಸೀಫ ಕೋರ್ಟಿನ ಸನೀಪ, ಕಾ. ಸ.

ಬೆಸ್ಟ ಅಲಾರಂ ಟೈಂಪೀಸು.



[illegible]

ಹರ್ಕ್ಯುಲೀಸ್ [illegible]

[illegible]

ಎಂ. ಬೆಸ್ಟನ್ ಎಂಡ್ ಕೋ,

[illegible], ಮದರಾಸ

ಸುಗಂಧಿ ತಾಂಬೂಲೀ ಜರ್ದಾ!

[illegible] ಇದರ ಸೇವನದಿಂದ [illegible] ಹಲ್ಲುಗಳು [illegible] ಇದರ ಸೇವನದಿಂದ [illegible] ಕಾರಣ, [illegible]

ಸುಗಂಧಿ [illegible]:— [illegible]

ಉತ್ತಮ ಬೀಡಿಗಳು:— [illegible]

ಎಸ್. ಬಿ. ಕದಂ,

[illegible]

ಪ್ರಕಟನೆ.

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯುರಿಟಿ ಲಾಯಿಫ ಅಶ್ಯುರನ್ಸ ಕಂಪನಿ, ಬೆಂಗಳೂರ.

ಈ ಕಂಪನಿಯು [illegible] L.R.C.P. M.R.C.S. [illegible] ೧೦೦೦ ರೂಪಾಯಿಗಳ [illegible]

(೧) [illegible]	ಮಿ॥ [illegible]	...	೧೦೦೦
(೨) [illegible]	ಮಿ॥ [illegible]	...	೧೦೦೦
(೩) [illegible]	ಮಿ॥ [illegible]	...	೧೦೦೦
(೪) L. B. C. [illegible]	ಮಿ॥ [illegible]		೧೦೦೦
(೫) [illegible]	ಮಿ॥ [illegible]		೧೦೦೦
(೬) [illegible]	ಮಿ॥ [illegible]		೧೦೦೦

ಬಿ. ಎಸ್. ಆರಾಧ್ಯ,

[illegible], ಹುಬ್ಬಳ್ಳಿ.

ಅತ್ಯದ್ಭುತ! [illegible] ಅತ್ಯದ್ಭುತ!!

ಪ್ರಸಿದ್ಧ ಡಾಕ್ಟರನೊಬ್ಬನು ಕಂಡು ಹಿಡಿದ ಸಿದ್ಧೌಷಧ.

[illegible]

ಎಲೆಕ್ಷಿರ್ ಆಫ್ ಲೈಫ್

ಅಥವಾ

ಜೀವನಾಧಾರ

[illegible]

ಸಂಜೀವನೌಷಧ

[illegible]

ಜೀವನಾಧಾರ ಡಿಪೋ, ಮೈಸೂರು,

ಬ್ರಾಂಚ:- ಜೀವನಾಧಾರ ಡಿಪೋ, ಹುಬ್ಬಳ್ಳಿ

[illegible]! [illegible]!!

ನಮ್ಮಲ್ಲಿ

ಅತಿ ಮನೋಹರವಾದ

[illegible] ಕಟ್ಟಿಗೆಯ

ದೇವರ ಮಂಟಪಗಳೂ,

[illegible]

ನಮ್ಮ ವಿಳಾಸ:—

ದಿ [illegible] ಟ್ರೇಡಿಂಗ ಕಂಪನಿ,

[illegible],

[illegible]

ಚವರಲೆಟ್
ಮೋಟಾರಕಾರ್ ಏಜನ್ಸಿ, ಕುಮಟಾ

ನಾವು ಹೊಸ ಚವರಲೆಟ್ ಮೋಟಾರ ಗಾಡಿಗಳನ್ನು ಗಿರಾಕಿಗಳಿಗೆ ಅನುಕೂಲವಾಗುವಂತೆ ತರಿಸಿ ಕೊಡುತ್ತೇವೆ. ಅಪೇಕ್ಷೆಯುಳ್ಳವರು ಸಮಕ್ಷಮ ಅಥವಾ ಪತ್ರದ್ವಾರಾ ಮಾಹಿತಿ ತಿಳಕೊಳ್ಳಬಹುದು.

ಸೋಲ್ ಏಜಂಟ:—ಎಸ್. ಎಲ್. ಧಾಕಪ್ಪ

ವಂತೆಪ್ಪ ಬ್ರದರ್ಸ.ಶಿರ್ಸಿ

ಸಬ್ ಏಜಂಟ- ಜಿ ಡಿ. ಮಳಗಿಕರ

ಎಂಡ್ ಕೋ,

ಬಿ. ಪಿ ಸಿ. ಪೆಟ್ರೋಲ ನಮ್ಮಲ್ಲಿ ಹೋಲಸೆಲ್ಲ ಸಿಗುತ್ತದೆ; ವರ್ಕಶಾಪ್ ಹಾಗು ವಿ ಜಲಿನ ಮೋಟಾರ ಹಾಗು ಸಾಯಕಲ್ ಟಾಯರ-ಟ್ಯೂಬ ಇತ್ಯಾದಿ ಸಾಮಗ್ರಿಗಳ ಯೋಗ್ಯ ದರದಲ್ಲಿ ಪೂರೈಸುತ್ತೇವೆ

ಸೂಚನೆ:— ನಮ್ಮಲ್ಲಿ ಬ್ಯಾಟ್ರಿ ಚಾರ್ಜಿಂಗ ಕೆಲಸವು ಉತ್ತಮವಾಗಿಯೂ, ಬ್ಯಾಟರಿ ರಿಪೇರಿ ಮಾಡಲಾಗುತ್ತದೆ ಅಲ್ಲದೆ, ನಮ್ಮಲ್ಲಿಂದ ಮೋಟರು ಪ್ರಸಿದ್ಧ ಕಂಪನಿಯ ಉತ್ತಮ ಹೊಸ ಗಳೂ ದೊರೆಯುತ್ತವೆ. ಅಗತ್ಯವಿದ್ದವರು ಸಮಕ್ಷಮ ಅಥವಾ ಪತ್ರದ್ವಾರಾ ಮಾಹಿತಿ ತಿಳಕೊಳ್ಳಬಹುದು.

G. D. Malgikar & Co,
KUMTA

ಸುಲಭ ಕ್ರಯ! ಸುಲಭ ಕ್ರಯ!!

ಡಾಕ್ಟರ ಜೀ. ಬೀ. ಹುವರ

ಸುಗಂಧ ನಶ್ಯದ ಪುಡಿ

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪಿನಸಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ, ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪುಕ್ಕಟೆ ಕಳಿಸಲಾಗದು.

ಬುದ್ಧಿ ಒಂದಕ್ಕೆ ಕ್ರಯ ರೂ ೦-೪-೦. ವ್ಹಿ. ಪಿ ೪ ಆಣೆ ಡಜನ್ ೧ ಕ್ಕೆ ರೂ. ೨-೮-೦. ವ್ಹಿ.ಪಿ. ೩-೪-೦ ದಯವಿಟ್ಟು ನಿಮ್ಮ ಹೆಸರನ್ನೂ ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ—ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪೋ. ಬಾ. ೫೧೦, ಪಾರ್ಕಟೌನ್, ಮದರಾಸ

ಸರಕಾರದಿಂದ ಪೇಟಂಟ ಪಡೆದ



ಮಲ್ಹಾರ ಕಪ್ಪಲಿ.

ತೋಟಗರಿಗೆ ಬಹು

ಅನುಕೂಲವಾಗಿರುವದು

ಇದು **mild steel** ಎಂಬ ಜಾತಿಯ ಕಬ್ಬಿಣ ತಗಡಿನಿಂದ ಮಾಡಲ್ಪಟ್ಟಿರುವದು ಎತ್ತುಗಳಿಗೆ ಬಹಳೇ ಹಗರು ಹೋಗುತ್ತದೆ. ಇದರೊಳಗಿಂದ ಒಂದು ಹನಿ ಸಹ ನೀರು ಕೆಳಗೆ ಬೀಳದಂತೆ ಏರ್ಪಾಡು ಮಾಡಲ್ಪಟ್ಟಿರುವದು. ಕಪ್ಪಲಿ ಬಾಯಿಂದ ನೀರು ದೋಣಿಯಲ್ಲಿ ಬೀಳುವ ಕಾಲಕ್ಕೆ ಎತ್ತುಗಳಿಗೆ ಭಾರವಾಗದಂತೆ ರಚನೆಯಲ್ಲಿ ಸುಧಾರಣೆಯನ್ನು ಮಾಡಿರುತ್ತೇವೆ.

ಬೆಲೆಯ ಬಗ್ಗೆ ಬರೆದು ತಿಳಿದುಕೊಳ್ಳಿರಿ.

ಕಿರ್ಲೋಸ್ಕರ ವಾರ್ತೆ — ಉತ್ಸಾಹ, ಉದ್ಯೋಗ, ಉನ್ನತಿಯ ಕನ್ನಡ-ಮಾಸಪತ್ರಿಕೆ.

ಸಂಪಾದಕ— ಶ್ರೀ ಬಾಗಲ ಲಕ್ಷ್ಮಣರಾಯರು, ವಾಙ್ಮಯ ವಿಶಾರದ

ಮಾದರಿ ಸಂಚಿಕೆ ಪುಕ್ಕಟೆ ದೊರೆಯುವದು. ವಾರ್ಷಿಕ ವರ್ಗಣಿ ರೂ. ೧-೪-೦

ಕಿರ್ಲೋಸ್ಕರ ಬಂಧು ಲಿಮಿಟೆಡ್; { ಕಿರ್ಲೋಸ್ಕರವಾಡಿ, ಜಿಲ್ಹಾ ಸಾತಾರಾ.

ಪ್ರಯಾಣಿಕರಿಗೆ
ವಿಶೇಷ ಅನುಕೂಲ

ನೇಮಿಸಿದ ಹೊತ್ತಿಗೆ ಮೋಟರಿನ ವ್ಯವಸ್ಥೆ ಹಾಗೂ ಬಡಿಗೆ, ಊಟ, ವಾಸದ ಒಗ್ಗೆ ರೊಂ ವ್ಯವಸ್ಥೆ ಈ ಕೆಳಗಿನಂತೆ ಮೋಟಾರ ವ್ಯವಸ್ಥೆಯಿದೆ-

ಗೋಕರ್ಣದಿಂದ ಕುಮಟಾ, ಹೊನ್ನಾವರ, ಭಟ್ಕಳ; ಗೋಕರ್ಣದಿಂದ ಕುಮಟಾ, ಶಿರ್ಸಿ, ಹುಬ್ಬಳ್ಳಿ; ಗೋಕರ್ಣದಿಂದ ಅಂಕೋಲಾ, ಕಾರವಾರ.

ಟಿಪ್ಪು:— ಟಿಕೇಟು ಮುಂದಾಗಿ ಪಡಕೊಳ್ಳಲಿಚ್ಛಿಸುವವರು ಈ ಕೆಳಗಿನ ಪತ್ತೆಗೆ ಪತ್ರವ್ಯವಹಾರ ಮಾಡತಕ್ಕದ್ದು.

ಅನಂತ ವೆಂಕಟೇಶರಾವ ಹಿಚ್ಕಡ,
ಮೋಟರ ಏಜಂಟ,
ಕುಮಟಾ (ಉತ್ತರ ಕನ್ನಡ)

S. U. Narayanacharya & CO.
Chaukamba, BENARES CITY

ನಮ್ಮಲ್ಲಿ ಎಲ್ಲಾ ತರದ ರೇಷ್ಮಿ ಪೀತಾಂಬರ, ಜರಿ ಶಾಲ, ಜರಿ ಸೀರೆ, ಕಾಶ್ಮೀರ ಶಾಲು, ಕರವಸ್ತ್ರ, ರುದ್ರಾಕ್ಷಿ, ಕಸ್ತೂರಿ, ಲಿಂಗಗಳೂ, ಸ್ಫಟಿಕಮಣಿ ಮೊದಲಾದ ಜಿನಸುಗಳು ಸಿಗುತ್ತವೆ ಕ್ಯಾಟಲಾಗ ಕೇಳುವವರಿಗೆ ಉಚಿತವಾಗಿ ಕಳಿಸಲಾಗುವದು.

ವಿಳಾಸ—ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪನಿ, ಚೌಕಂಬಾ, ಕಾಶೀಕ್ಷೇತ್ರ.

ಅಮೃತಾಂಜನ.

ಇದರ ಉಪಯೋಗದಿಂದ, ವಾತವೇದನೆ, ಉಳುಕು ಇತ್ಯಾದಿ ವ್ಯಾಧಿಗಳ ಮೇಲೆ, ರಾಮಬಾಣದಂತಾಗಿರುವದು, ಕಳೆದ ೩೪ ವರ್ಷಗಳಿಂದ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗಿರುವದು. ಲಕ್ಷಗಟ್ಲೆ ಜನರು ಅಮೃತಾಂಜನವನ್ನು ಉಪಯೋಗಿಸುತ್ತಿರುವರು. ಇದರಿಂದ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಬೀಗು, ಸಂಧಿವಾತ ಮೊದಲಾದ ವ್ಯಾಧಿಗಳ ಮೇಲೆ ಇದು ಗುಣಕಾರಿಯೆಂದು ಉಪಯೋಗಿಸಿದವರು ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು. ಕಿಮ್ಮತು ೧೦ ಆಣೆ ಎಲ್ಲ ಬಜಾರ ಜಿನಸಿ.

ಅಮೃತಾಂಜನ ಡಿಪೋ, ಫೋರ್ಟ. ಮುಂಬಯಿ

Printed and Published by Krishnarao Keshav Shenvi (Editor) at his Star of Kanara Press Kumta

ವರ್ಷ ೧೦.

ಕಾನಡಾವೃತ್ತ.

THE KANARA NEWS.

ಸಂಚಿಕೆ ೪೨.

ಪತ್ರಿಕೆಯ ವರ್ಗಣಿ.

ಕುಮಟೆಯಲ್ಲಿ ಅಗಾವು ರೂಪಾಯಿ 2-4-0.

ಬಳಿಕ ಪೂರ್ತಿ ವರ್ಷದ [illegible] ರೂ. 3-0-0.

. ಅಂಚೆವೆಚ್ಚ ಸೇರಿ ರೂಪಾಯಿ 3-2-0.

ಬಿಡಿ ಸಂಚಿಕೆಗೆ 0-1-0

ಜಾಹಿರಾತುಗಳ ದರ

ಕನ್ನಡ, ಇಂಗ್ಲಿಷ ಮೊದಲ [illegible] (೧೫ ಲೈನ್ [illegible]) ಆ [illegible] ರೂ. 1-0-

ಆ [illegible] 0-2-0.

[illegible] ಎಲ್ಲ [illegible] ಆ [illegible] ಒಂದೇ [illegible] ಮಾಡಲ್ಪಡುವದು.

[illegible] ಅಗ್ರ [illegible] ಮಾಡಲ್ಪಡುವದು.

[illegible]

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

-(ಕುಮಟಾ—ಕಾನಡಾವೃತ್ತ ಸೋಮವಾರ, ತಾರೀಖು ೧೬ ಮಾಹೆ ಮೇ ಸನ್ ೧೯೩೬ ನೇ ಇಸವಿ.)-

हिंदुस्थानांतील हविमानास ज्यानमाणें हिंदुस्थानची हवा मानवलेलें हें औषध हिंदुस्थानांतील लोकांस ज्यास्त फायदेशीर आहे.

द्राक्षासव— वीस रतलची किंमत २ रुपये;

रामबाण औषधें

सर्दी घालविणारें,
भूक वाढविणारें,
खोकल्यास साफ करणारें,
झोंप आणणारें,
शक्ति देणारें,
तरतरीतपणा आणणारें,

विश्वास रुचिकर.

क्याटलाग मागवा,

संयुक्तफार्मास्युटिकलवर्क्स लिमिटेड,
मुंबई नं: १३

एजंट— मेसर्स [illegible] आणी कंपनी,
तीर्थहळ್ಳी.

ಎಲ್ಲಾ ನೋವುಗಳಿಗೆ ದಿವ್ಯೌಷಧವು

ವಾತಹಾರಿ ತೈಲ.

[illegible] ಬಾಟ್ಲಿ ೧ಕ್ಕೆ [illegible]. [illegible] ಸುವಾಸಿಕ [illegible] ೧೦ [illegible] ಡಬ್ಬಿ ೧ಕ್ಕೆ ೧—೮—೦. [illegible] ಬಾಟ್ಲಿ ೧ಕ್ಕೆ ೦—೮—೦. [illegible] ಬಾಟ್ಲಿ ೧ಕ್ಕೆ ೦—೧೨—೦. [illegible] ಡಬ್ಬಿ ೧ಕ್ಕೆ ೧—೪—೦. ೧ [illegible] ಡಜನ್ ೧ಕ್ಕೆ ೨—೦—೦. [illegible] ಸುವಾಸಿಕ [illegible] ತೈಲ [illegible] ಬಾಟ್ಲಿ ೧ಕ್ಕೆ ೦—೧೨—೦. [illegible] ೧ಕ್ಕೆ ೦—೮—. ಇದಲ್ಲದೆ, ನೀಲಗಿರಿ ತೈಲ, ಎಲ್ಲಾ ತರದ [illegible] ಸಿಗುವವು. [illegible]

[illegible] ಕುಮಟಾ.

ಬೇಕಾದ ಚಿನ್ನಾಭರಣಗಳು ನಮಗೆ ಆರ್ಡರ ಕೊಟ್ಟಲ್ಲಿ ಯೋಗ್ಯ ಮುದ್ದತ್ತಿನಲ್ಲಿ ಕೊಡುವೆವು.

R. S. KASARGOD. B. A.

Jewellers, KUMTA.

ಆರ್. ಎಸ್. ಕಾಸರಗೋಡ, ಬಿ. ಎ.,
ರತ್ನಾಭರಣ ವ್ಯಾಪಾರಿ, ಕುಮಟಾ.

ಯಾವದೇ ಆಕಾರದ / ನಕ್ಷೆಯ / ನಂಬರಿನ } ಗಡಿಯಾರವನ್ನು

ಒರೇ ೭ ರೂಪಾಯಿಗಳಿಗೆ ಕೊಡುತ್ತೇವೆ!
ಮೂಲ ಬೆಲೆ ರೂಪಾಯಿ ೧೪; ಅರ್ಧ ಬೆಲೆ ರೂಪಾಯಿ ೭;



[illegible] ಬಗ್ಗೆ. [illegible] ವರ್ಷದಲ್ಲಿ ಮಾತ್ರ ಕೊಡುತ್ತೇವೆ. ಎಲ್ಲಾ ಗಡಿಯಾರಗಳನ್ನು ಅರ್ಧ ಬೆಲೆಗೆ ಮಾರುತ್ತೇವೆ. [illegible]! ನಿರ್ದೋಷ ಯಂತ್ರರಚನೆ !! [illegible] ಯೋಗ್ಯ ಹಾಗು [illegible]!!! ಎಲ್ಲಾ ಗಡಿಯಾರಗಳಿಗೆ ಗ್ಯಾರಂಟಿ ಇರುತ್ತದೆ. ಯಾವದೇ ಆಕಾರದ, ನಕ್ಷೆಯ, ನಂಬರಿನ [illegible] ಗಡಿಯಾರವನ್ನು [illegible] ಸಹಿತ [illegible] ಕೊಡುತ್ತೇವೆ. ಬೆಲೆ ರೂಪಾಯಿ ೭ ಮಾತ್ರ!

ಅಲ್ಪವೇ ಇವೆ; ಈಗಲೇ ಬರೆಯಿರಿ.

ವಿಳಾಸ:— **Swan House: P R 603 P T Madras**

ಅತ್ಯಲ್ಪನಿವೆ!
ಕೇವಲ
ಉಚಿತ



ಉಚಿತ
ಉಚಿತ
ಕೇವಲ
ಉಚಿತ

[illegible] ಪಾಕೆಟ್ [illegible] ಗ್ಯಾರಂಟಿ [illegible] ಗಡಿಯಾರ [illegible] ಉಚಿತವಾಗಿ ಕೊಡುತ್ತೇವೆ. [illegible] ಗಡಿಯಾರಗಳಿವೆ. [illegible] ಉಚಿತವಾಗಿ [illegible] "ತಾರಾ" [illegible] ಪಾಕೆಟ್‌ವಾಚ್ ಗಡಿಯಾರಗಳಿಗೆ [illegible]

CAPTAIN WATCH CO., P. B. 285, MADRAS.

ಗೌರೀಹುಣ್ಣಿಮೆಯಿಂದ ೪ನೇ ವರ್ಷ ಪ್ರಾರಂಭ

ಸಚಿತ್ರ] ಜಯಕರ್ನಾಟಕ [ಮಾಸಪತ್ರಿಕೆ

ಸಂಪಾದಕ- ಆಲೂರ ವೆಂಕಟರಾಯರು

ಇದರಲ್ಲಿ ವಾಙ್ಮಯಾತ್ಮಕ ಸಾಹಿತ್ಯ, ಧಾರ್ಮಿಕ [illegible] ಐತಿಹಾಸಿಕ ಆರ್ಥಿಕ ಇತ್ಯಾದಿ ವಿಷಯಗಳು ಬರುವವು. ಪ್ರಪಂಚ ಪರಿಚಯ, ಜೀವನಚರಿತ್ರೆ [illegible] ಕೊಡಲ್ಪಡುವವು. ಪ್ರತಿ ಸಂಚಿಕೆಯಲ್ಲಿ ಸುಂದರ ಚಿತ್ರಗಳು ಬರುತ್ತವೆ. [illegible] ಆಕಾರದ ೩೦ ಪುಟಗಳು ಇರುತ್ತವೆ. ರೂ ೫-೮-೦

ಜಯಕರ್ನಾಟಕ, ಧಾರವಾಡ

ರೋಗದಿಂದ ನರಳಬೇಡಿರಿ.

ನಮ್ಮಲ್ಲಿ [illegible], ಎಲ್ಲ ತರದ ಜ್ವರ, ಜ್ವರಗಳ್ಳೆ, ಬೇಳ್ಜ್ವರ, [illegible], ದಮ್ಮು, ಕೆಮ್ಮು, ಕಫ, ಅಗ್ನಿಮಾಂದ್ಯ, [illegible] ಮೂಲವ್ಯಾಧಿ, [illegible], ಗರ್ಭಾಶಯದ ಎಲ್ಲ ರೋಗ, ಪ್ರಮೇಹ [illegible] ಬಾಲಗ್ರಹ, [illegible] ಬರುವ ಜರ್ಮನ ಅಮೇರಿಕನ ಫ್ರೆಂಚ ಇಂಗ್ಲಿಷ ಮತ್ತು ದೇಶಿ ಪೇಟಂಟ ಔಷಧಗಳು ಬಹಳ ಅಗ್ಗವಾಗಿ ಸಿಗುವವು

ಇದಲ್ಲದೆ ಎಲ್ಲ ತರದ [illegible] ಸಾಮಾನು, [illegible], ಸುವರ್ಣ [illegible], ಮೋಟಾರ ಬಂಡಿಗಳು, [illegible] ನಮ್ಮಲ್ಲಿದ್ದು ನಿಮಗೆ ಅವಶ್ಯವಿರುವ ಸಾಮಾನು ದೇಶ ದೇಶದಿಂದ ತರಿಸಿಕೊಡಲಾಗುವದು.

ಎಸ್ ಎಲ್ ಧಾಕಪ್ಪ ಮತ್ತು ಬ್ರದರ್,

ಶಿರಸಿ

ರಾಗದ ಪೆಟ್ಟಿಗೆಗಳು.

ತಬಲೆ ಜೋಡಿ ಇತ್ಯಾದಿ ಗಾಯನ ಸಾಮಾನು.



[illegible] ರಾಗದ ಕೈಪೆಟ್ಟಿಗೆ ಕಿಂ [illegible]

[illegible] ಕಾಲುಪೆಟ್ಟಿಗೆ ಕಿಂ [illegible]

[illegible] ತಬಲ ಜೋಡಿ ಕಿಂ [illegible]

[illegible] ಗ್ರಾಮೊಫೋನ [illegible] ಕಿಂ [illegible]

ತಬಲ [illegible] ಕಿಂ [illegible]

ವಿಶೇಷ ಮಾಹಿತಿಗೆ [illegible] ಕೊಡುವೆವು.

ಪತ್ರವ್ಯವಹಾರ [illegible]

ದತ್ತ - ಗೋಪಾಳ ಸಖಾರಾಮ ಮತ್ತು ಕಂಪನಿ, ವಿಠ್ಠಲವಾಡಿ ಎದುರಿಗೆ [illegible] ಕಾಳಬಾದೇವಿ ಮುಂಬಯಿ

ಟಿ. ಎಸ್. ಮೋಟರ ಸರ್ವೀಸ, ಶಿವಮೊಗ್ಗಾ.

ಗೇರಸಪ್ಪಾ ಜೋಗಿಗೆ ರೆಗ್ಯುಲರ್ ಸರ್ವೀಸ್



ಶಿವರಾತ್ರಿಯ ಸಮಯದಲ್ಲಿ ಗೋಕರ್ಣಕ್ಕೆ ಸ್ಪೆಶಲ್ ಲಾರಿಗಳು

(೧) ಹುಬ್ಬಳ್ಳಿ ಯಲ್ಲಾಪುರ- ಅಂಕೋಲಾ- ಕಾರವಾರ (೨) ಹುಬ್ಬಳ್ಳಿ- ಮುಂಡಗೋಡ ಶಿರ್ಸಿ ಕುಮಟಾ- ಹೊನ್ನಾವರ ಭಟ್ಕಳ (೩) ಕುಮಟಾ ಶಿರ್ಸಿ- ಸಿದ್ದಾಪುರ- ಗೇರಸಪ್ಪಾ- ಜೋಗ (Gersappa Falls) ಸಾಗರ ಶಿವಮೊಗ್ಗಾ— ಈ ಲೈನುಗಳಲ್ಲಿ ರೆಗ್ಯುಲರ್ ಸರ್ವೀಸ ನಡೆಯುತ್ತದೆ [illegible] ವ್ಯವಸ್ಥೆ ಮಾಡಿದೆ.

ಹೆಚ್ಚಿನ ಮಾಹಿತಿಯನ್ನು [illegible] ತಿಳಿದುಕೊಳ್ಳಬಹುದು

M. Manjappa

PROPRIE[illegible]

अगदीं फुकट.

वैद्यविद्या

आरोग्यसंपत्ति आणि पूर्ण सुखाचा सरळ रस्ता दाखविणार 'वैद्यविद्या' नावाचा मोठा आयुर्वेदीक पुस्तकाची नवीन आवृत्ति बाहेर पडली आहे. हे पुस्तक कीमत व पोष्ट खर्च घेतल्या शिवाय अगदीं फुकट पाठविण्यात येते तरी हे पुस्तक आजच मागवा.

प्रमेहावर रामबाण औषध.

मेहमर्दनचूर्ण.

हे चूर्ण फक्त तीन दिवस लागोपाल घेतल्याने लघ्वीस होणारी आग, लघवी थांबून थांबुन होणे व्याधि या औषधाच्या सेवनाने एकदम बरे होतात.

कि. १० तोळ्याच्या डब्यास रु. १.

राजवैद्य नारायणजी केशवजी, जामनगर (काठेवाड).

कुमटा एजन्ट माधव सातप्पा शेणवी, बेलेकेरी

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕೆಟುಗಳು ಮತ್ತು ಸುವರ್ಣಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು.

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ

ಈ ಮಧುವು [illegible] ರುಚಿಕರವಾಗಿಯೂ ಇರುತ್ತದೆ. ಈ ಮಧುವ ಸೇವನದಿಂದ [illegible], ಕಫ [illegible] ಬೇನೆಯು ಹೋಗುವದು [illegible] ನಿಜವಾ[illegible] ಅನುಭವಕ್ಕೆ ಬರುವದು) [illegible] ದ್ರಾಕ್ಷಾರ್ಕ ಮಧುವ ಸೇವನ ಮಾಡಿ [illegible] ಕ್ಷಯರೋಗ, ಉದರರೋಗ ದಮ್ಮು [illegible] ಅನ್ನ [illegible] ಆಗುವದು. [illegible] ಈ ಔಷಧಕ್ಕೆ ಪಥ್ಯವಿಲ್ಲ [illegible] ೧೦ ದಿವಸ [illegible] ಬಾಟಲಿಯಿಂದ ಗುಣಬರುವದು. [illegible] ಬಾಟಲಿಗಳನ್ನು ಒಂದೇ [illegible] ಕಳಿಸುವೆವು. [illegible]

ವ್ಯವಸ್ಥಾಪಕ— ದ್ರಾಕ್ಷಾರ್ಕಮಧು ಆಫೀಸ ಶ್ರೀ [illegible] ಬೆಳಗಾಂವ

ಶ್ರೀ ವಿನಾಯಕ ಮಹಾರಾಜರವರ ಗೀತಾಪ್ರವಚನಗಳು.

ಪ್ರಸ್ತಾವನೆ.

ಸೌ.ಕಾ.ರೆ ಜಿಲ್ಲೆಯ [illegible] ಗ್ರಾಮದಲ್ಲಿ ಶ್ರೀ ವಿನಾಯಕ ಮಹಾರಾಜ ಮಹಾರಾಜರವರು ಅತ್ತ ೧೫ ವರ್ಷಗಳಿಂದ ಬ್ರಹ್ಮಚರ್ಯ ವ್ರತವನ್ನು ನಡೆಸುತ್ತಿರುವರು. ಮಹಾರಾಜರವರು ಸುಪ್ರಸಿದ್ಧ ರಾಮದಾಸೀ ಪಂಥದವರು. ದೇಶದಲ್ಲಿ ಧರ್ಮಬೋಧಕ ಕಾರ್ಯವನ್ನು ಪ್ರಸಾರ ಮಾಡಲು ಉದ್ಯುಕ್ತರಾಗಿ, ದೇಶಸಂಚಾರ ಮಾಡುತ್ತಿರುವರು. ಶ್ರೀ ಮಹಾರಾಜರವರು ಕಾರವಾರದಿಂದ ತೀರ್ಥಾಟನಕ್ಕಾಗಿ ಶ್ರೀ ಗೋಕರ್ಣ ಕ್ಷೇತ್ರಕ್ಕೆ ಬಂದಿದ್ದರು. ಕಲವು ಕುಂಭಾಪುರಸ್ಥರ ಬಿನ್ನಹ ಮೇರೆಗೆ ಶ್ರೀ ವಿನಾಯಕ ಮಹಾರಾಜರವರು ತಮ್ಮ ಶಿಷ್ಯವೃಂದದೊಡನೆ ಇಲ್ಲಿ [illegible] ಸಮಯಕ್ಕೆ ಆಗಮಿಸಿದರು. [illegible] ಕುಂಭಾಪುರಸ್ಥರು ಶ್ರೀ ವಿನಾಯಕ ಮಹಾರಾಜರಿಗೂ ಅವರ ಶಿಷ್ಯರಿಗೂ [illegible], [illegible] ಶ್ರೀ [illegible] ದೇವಸ್ಥಾನದಲ್ಲಿ [illegible] ಶ್ರೀ ಮಹಾರಾಜರವರ [illegible] ದಿನ [illegible] ಹೇಳಿದೆ.

ಬ್ರಹ್ಮಚಾರಿ ಆಶ್ರಮ.

ಬ್ರಹ್ಮಚಾರಿ ಆಶ್ರಮದಲ್ಲಿ [illegible] ಶಿಷ್ಯರಿರುವರು [illegible] ವರ್ಷ ವಯಸ್ಸಿನ ಚಿಕ್ಕ ಚಿಕ್ಕ ಬಾಲಕರೂ ಇದ್ದಾರೆ. [illegible] ಅವರೆಲ್ಲರೂ [illegible] ಭಜನೆ [illegible] ಮಾಡಿ [illegible] ಸ್ನಾನ, ಸಂಧ್ಯಾ, ಅಗ್ನಿಕಾರ್ಯಗಳನ್ನು [illegible]

[illegible] ಸಕಲ [illegible] "ಓಂ ಮಿತ್ರಾಯ ನಮಃ" [illegible] ಮಂತ್ರಗಳಿಂದ [illegible] ಸೂರ್ಯನಮಸ್ಕಾರಗಳನ್ನು [illegible] ಶ್ಲೋಕಗಳನ್ನು [illegible] ಭಿಕ್ಷೆ [illegible] ಶ್ರೀ ಸಮರ್ಥ [illegible] ಶ್ರೀ ವಿನಾಯಕ ಮಹಾರಾಜರ [illegible] ಶ್ಲೋಕಗಳನ್ನೂ ಅರ್ಥಮಾಡಿಸಿಗಳು [illegible]

[illegible] ಈ ಆಶ್ರಮದಲ್ಲಿ ಒಂದು ವಿಶೇಷವಿದೆ. ಆಶ್ರಮದಲ್ಲಿ ಸೇರಿದ ಶಿಷ್ಯರೆಲ್ಲರೂ [illegible] ಮನೆಯಲ್ಲಿ [illegible] ಬ್ರಹ್ಮಚಾರಿ [illegible] ಅಗ್ನಿಕಾರ್ಯದ [illegible] ಮಹಾರಾಜರು ಆಶ್ರಮದ ಕಥೆ [illegible] ವಿವರಿಸಿದರು "ಓಂ ತೇಜಸ್ವಿನಾವಧೀತಮಸ್ತು" ಎಂಬಂತಹ ಮಂತ್ರಗ

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ.

ಕಾಮಿನಿಯಾ ತೈಲ. ರಿಜಿಸ್ಟರ್ಡ

[illegible], ಗುಂಗುರು ಗುಂಗುರಾಗಿರುವ ನೀಳವಾದ [illegible] ಕೇಶವನ್ನು [illegible]? ಅಂತಹ ಕೇಶರಾಶಿಯನ್ನು ಸ್ತ್ರೀಯರಿಗೆ [illegible]

ಕಾಮಿನಿಯಾ ಆಯಿಲ್ ರಿಜಿಸ್ಟರ್ಡ

ಈ ಆಯಿಲ್ ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು [illegible] ವಿದ್ಯಾರ್ಥಿಗಳಿಗೂ [illegible] ಈ ಆಯಿಲ್ [illegible]

[illegible] "ಕಾಮಿನಿಯಾ ಆಯಿಲ್" [illegible] "ಸರ್ಟಿಫಿಕೇಟ ಆಫ್ ಮೆರಿಟ್" ಅಥವಾ ಯೋಗ್ಯತಾಪತ್ರವು [illegible]

ಕ್ರಯ — ಸೀಸೆಗೆ ರೂಪಾಯಿ 1-0 0, ಸೀಸೆ 3ಕ್ಕೆ ರೂಪಾಯಿ 2-10 0 ವಿ. ಪಿ ಖರ್ಚ 0-14-0

ಅತಿ ಮನೋಹರವಾದ ಸುರಭಿಯು!

ಒಟ್ಟೋ-ದಿಲ್ ಬಹಾರ್ !! ರಿಜಿಸ್ಟರ್ಡ

ಈ [illegible] ಸೌಗಂಧಿಕ [illegible] ಒಟ್ಟೋ-ದಿಲ್ [illegible]

[illegible] ಸೀಸೆ 1 ಕ್ಕೆ 0 8 0 1 ಡ್ರಾಮಿನ ಮಧ್ಯಮ ಸೀಸೆ 1 ಕ್ಕೆ 0 12 0 ½ ಔನ್ಸಿನ ದೊಡ್ಡ ಸೀಸೆ 1 ಕ್ಕೆ 2 0 0 ಅಂಚೆಯ ವೆಚ್ಚ ಬೇರೆ 0 4 0

ಒಟ್ಟೋ-ದಿಲ್ ಬಹಾರ್ ಪರಿಮಳ ಕಾರ್ಡುಗಳು ಡಜನ್ 1 ಕ್ಕೆ 0 12 0

Address' **The Anglo Indian Drug & Chemical Co.**

ಧರ್ಮಗ್ಲಾನಿಯ ಲಕ್ಷಣ: ಶಿಷ್ಟರ ಧರ್ಮಪ್ರಭ್ರಂಶ, ಅಧರ್ಮಾಚರಣೆ.

ಳಿಂದ ನಿತ್ಯವೂ ನಾವು ತೇಜೋಮೂರ್ತಿಯಾದ ಅಗ್ನಿನಾರಾಯಣನೆಡೆಯಲ್ಲಿ ತೇಜಸ್ಸನ್ನು ಬೇಡುತ್ತೇವೆ. ಪ್ರಪಂಚದಲ್ಲಿ ತೇಜಸ್ಸಿನಿಂದಲೇ ನಾವು ವ್ಯಕ್ತರಾಗಬೇಕು. ತೇಜಸ್ಸಿನಿಂದ ವ್ಯಕ್ತರಾಗಲು ನಾವು ಶಕ್ತರಾಗಬೇಕಾದರೆ, ಶ್ರದ್ಧೆ, ಮೇಧಸ್ಸು, ಯಶಸ್ಸು, ಪ್ರಜ್ಞೆ, ಬುದ್ಧಿ ಮೊದಲಾದ ಬಲಗಳನ್ನು ಅನುಗ್ರಹಿಸಲು ನಾವು ಪ್ರಾರ್ಥಿಸುತ್ತೇವೆ. ಈ ಪ್ರಾರ್ಥನೆಯಿಂದ ಚಿತ್ತಪ್ರವೃತ್ತಿಯು ಸತೇಜವಾಗಲು ಬೇಕಾಗುವ ಸಂಸ್ಕಾರವು ಉಂಟಾಗುತ್ತದೆ.

ಶ್ರೀಮದ್ಭಗವದ್ಗೀತೆಯ ಪೂರ್ವಪೀಠಿಕೆ

ಬ್ರಹ್ಮಚಾರಿ ಶ್ರೀ ವಿನಾಯಕ ಮಹಾರಾಜ ಮಸೂರಕರರವರು ಕಳೆದ ಗುರುವಾರದಿಂದ ಇಲ್ಲಿಯ ಶ್ರೀ ಗಾಂಧೀ ಶಾಸ್ತ್ರಿ ವೇದಶಾಲೆಯಲ್ಲಿ ಶ್ರೀಮದ್ಭಗವದ್ಗೀತೆಯ ವಿಷಯವನ್ನು ನಿರೂಪಿಸುತ್ತಿರುವರು. ಪ್ರವಚನಕ್ಕೆ ನಿತ್ಯ ೨೦೦—೫೦೦ ಜನರು ಸೇರುತ್ತಿದ್ದಾರೆ. ಮಹಾರಾಜರವರು ಗುರುವಾರದ ಪ್ರವಚನವನ್ನು ಮಾಡಿದರೆಂದರೆ —

ಶ್ರೀಮದ್ಭಗವದ್ಗೀತೆಯು ಅತ್ಯಂತ ಶ್ರೇಷ್ಠ ತರಗತಿಯ ಗ್ರಂಥವು. ಇಷ್ಟು ಉತ್ಕೃಷ್ಟವಾದ ಗ್ರಂಥವು ಭೂತಲದಲ್ಲಿ ಯಾವುದೂ ಇರದಿದ್ದೀತು. ಇತ್ತೀಚಿನ ಕ್ರೈಸ್ತ ಧರ್ಮಗ್ರಂಥಗಳಲ್ಲಿರುವಂತೆ ಈ ಗ್ರಂಥದಲ್ಲಿ ಯಾವುದೇ ಒಂದರ ಆಗ್ರಹವಿಲ್ಲ. ಇಂತಹ ವಿಶಿಷ್ಟ ಮಾರ್ಗದಿಂದಲೇ ಮಾನವನು ನಡೆದುಕೊಂಡರೆ ಮಾನವನಿಗೆ ಪಾರಮಾರ್ಥಿಕ ಸಿದ್ಧಿಯು ಪ್ರಾಪ್ತವಾಗುವದೆಂದು ಒತ್ತಾಯದಿಂದ ಹೇಳಲ್ಪಟ್ಟಿಲ್ಲ. ಗೀತೆಯಲ್ಲಿ ಸರ್ವ ಪಂಥಗಳ ನಿರೂಪಣೆ ಮಾಡಲ್ಪಟ್ಟಿದೆ. ಜ್ಞಾನಮಾರ್ಗವಿದೆ, ಭಕ್ತಿಮಾರ್ಗವಿದೆ, ಯೋಗಮಾರ್ಗವಿದೆ. ಯಾವ ಮಾರ್ಗವು ಯಾರಿಗೆ ಪ್ರಿಯವೋ, ಅವರು ಅದನ್ನು ಅನುಸರಿಸಿ ಪಾರಮಾರ್ಥಿಕ ಸಿದ್ಧಿಯನ್ನು ಪ್ರಾಪ್ತಮಾಡಿಕೊಳ್ಳಬಹುದು. ಇಲ್ಲಿ ಪ್ರತ್ಯೇಕ ಪಂಥಗಳ ವೈಮನಸ್ಯ ಇಲ್ಲ. ಈ ಗ್ರಂಥದಲ್ಲಿ ಸಮನ್ವಯಗೊಳಿಸಿದೆ. 'ಯೇ ಯಥಾ ಮಾಂ ಪ್ರಪದ್ಯಂತೇ ತಾಂಸ್ತಥೈವ ಭಜಾಮ್ಯಹಂ' ಎಂಬ ವಚನಗಳಿಂದ ಶ್ರೀ ಕೃಷ್ಣನ ಉದಾರತೆಯೂ ಸಮನ್ವಯದೃಷ್ಟಿಯೂ ಅದರ ಸೌಹಾರ್ದವಾದ ಪಾಶ್ಚಾತ್ಯರೂ ಈ ಗ್ರಂಥದ ವಿಚಾರಮಂಥನಕ್ಕೆ ಮೋಹಿತರಾಗಿ ಪೂರ್ವ ಭಾಷೆಗಳಿಂದ ಈ ಗ್ರಂಥವನ್ನು ಭಾಷಾಂತರಿಸಿ ಅನೇಕ ತತ್ತ್ವಜ್ಞರು ಅದರಲ್ಲಿ ಚರ್ಚೆ ಮಾಡಿದ್ದಾರೆ. ಈ ಗ್ರಂಥವು ಸಾಧಕರಾದವರಿಗೆ ಸಾರ್ವಕಾಲಿಕವಾಗಿ ನಿತ್ಯವೂ ದಾರಿ ತೋರುವದೆಂದು ಶ್ರೀ ಮಹಾರಾಜರವರು ಒತ್ತಿಹೇಳಿದರು.

ಪರಮಾತ್ಮನ ಅವತಾರವು.

ಪರಮಾತ್ಮನು ಭೂತಲದ ಮೇಲೆ ಅವತರಿಸುತ್ತಾನೆಂಬ ಕಲ್ಪನೆಯು ಸರ್ವಮಾನ್ಯವಾಗಿ ಎಲ್ಲ ಧರ್ಮಗಳಲ್ಲಿ ಸಮ್ಮತವಿದೆ. ಕ್ರೈಸ್ತಧರ್ಮದಲ್ಲಿ ಜಿಜಸ್ ಕ್ರೈಸ್ತನು ಒಬ್ಬನೇ ಪರಮಾತ್ಮನ ಪುತ್ರನು, ಎಲ್ಲರ ಪಾಪ ನಾಶ ಮಾಡಲು ಬಂದವನೆಂದು ಹೇಳಲಾಗಿದೆ. ಆ ಕಾಲವು ಬಂತೆಂದು ಆಗಾಗ ಹೇಳಲ್ಪಟ್ಟಿದೆ. ಆದರೆ [illegible] ಅವನ ಪರಮಾತ್ಮನ ಅವತಾರವು ಒಂದೇ ಸಲಕ್ಕೆ ಮುಗಿಯಲಿಲ್ಲ. ಶ್ರೀಮದ್ಭಗವದ್ಗೀತೆಯಲ್ಲಿಯೂ ಪರಮಾತ್ಮನ ಅವತಾರ ಸಮಯವು ನಿರ್ದೇಶಿಸಲ್ಪಟ್ಟಿದೆ. "ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ। ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ॥ ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ। ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ॥" ಧರ್ಮಗ್ಲಾನಿಯಾದಾಗ, ಅಧರ್ಮವು ತಲೆಯೆತ್ತಿದಾಗ ನಾನು ಅವತರಿಸುವೆನೆಂದು ಪರಮಾತ್ಮನು ಸಾರಿದ್ದಾನೆ. ಭಗವಂತನ ಕಾಲವನ್ನು ನಿರ್ದೇಶಿಸಿರುವನು. ಸಾಧುಗಳ ರಕ್ಷಣೆಗಾಗಿ ದುಷ್ಟರ ವಿನಾಶಕ್ಕಾಗಿ, ಧರ್ಮಸಂಸ್ಥಾಪನೆಗಾಗಿ ಪರಮಾತ್ಮನು ಹುಟ್ಟುತ್ತಾನೆ. ಪರಮಾತ್ಮನು ಹುಟ್ಟಬೇಕಾದರೆ ಧರ್ಮಗ್ಲಾನಿಯಾಗಬೇಕು, ಸಾಧುಗಳಿಗೆ ಪೀಡೆಯಾಗಬೇಕು, ದುಷ್ಟರು ಮಾತ್ರ ಸುಖದಿಂದಿರಬೇಕು. ಈ ಸಮಯ ಸಾಧುಗಳ ಪೀಡನೆಯನ್ನು ಪರಿಹರಿಸಿ ಧರ್ಮೋದ್ಧಾರ ಮಾಡಲು ಪರಮಾತ್ಮನು ಜನಿಸುತ್ತಾನೆ. ಧರ್ಮೋದ್ಧಾರವೇ ಪರಮಾತ್ಮನ ಅವತಾರ ಕಾರ್ಯವು. ಧರ್ಮಗ್ಲಾನಿಯೇ ಅವತಾರ ಸಮಯವು.

ಧರ್ಮಗ್ಲಾನಿಯೆಂದರೇನು?

ಧರ್ಮದ ವ್ಯಾಖ್ಯೆಯನ್ನು ನಾವು ಮೊದಲು ತಿಳಕೊಳ್ಳಬೇಕು. 'ಯತೋಭ್ಯುದಯನಿಃಶ್ರೇಯಸಸಿದ್ಧಿಃ ಸ ಧರ್ಮಃ।' ಎಂಬಂತೆ ಅಭ್ಯುದಯ-ನಿಃಶ್ರೇಯಸಗಳನ್ನು ಪ್ರಾಪ್ತಮಾಡಿಕೊಡುವ ಮಾರ್ಗವೇ ಧರ್ಮವು. ಅಭ್ಯುದಯವೆಂದರೆ ಪ್ರಾಪಂಚಿಕ ಸುಖ, ನಿಃಶ್ರೇಯಸವೆಂದರೆ, ಪಾರಮಾರ್ಥಿಕ ಸುಖ. ಪ್ರಾಪಂಚಿಕ ಹಾಗು ಪಾರಮಾರ್ಥಿಕ ಸುಖಗಳು ಯಾವ ಕರ್ಮಾಚರಣೆಯಿಂದ ದೊರಕುತ್ತವೋ ಆ ಎಲ್ಲ ಕರ್ಮಾಚರಣೆಗೆ ಸಮಷ್ಟಿರೂಪದಿಂದ ಧರ್ಮವೆನ್ನುತ್ತಾರೆ. ಸತ್ಯಧೀರ ಹರಿಶ್ಚಂದ್ರ ಮಹಾರಾಜನು ಧರ್ಮಪಾಲನೆಗೋಸ್ಕರವೇ ರಾಜ್ಯತ್ಯಾಗ ಮಾಡಿ ಹೆಂಡರ ಮಕ್ಕಳನ್ನು ಮಾರಿ ಹೊಲೆಯನ ಆಳಾಗಿ ಜೀವಿಸಿದನು. ಯುಧಿಷ್ಠಿರ ಮಹಾರಾಜನು ಕೇವಲ ಧರ್ಮಕ್ಕಾಗಿಯೇ ಸಹಿಸಲಸದಳವಾದ ಕಷ್ಟಗಳನ್ನು ಅನುಭವಿಸಿದನು. ಇವೆಲ್ಲ ಧರ್ಮಪಾಲನದ ಉದಾಹರಣೆಗಳು. ಧರ್ಮಗ್ಲಾನಿಯ ಕಾಲದಲ್ಲಿ ಜನರು ಧರ್ಮಚ್ಯುತರಾಗುವರು. ಲೋಕದಲ್ಲಿ ಅತಿವೃಷ್ಟಿಯಾಗುವದು, ಅನಾವೃಷ್ಟಿಯಿಂದ ಜಲಾಶಯಗಳು ಒಣಗುವವು. ಪಿಡುಗುಗಳು ತಮ್ಮ ಗಹನದ ರೂಪಗಳನ್ನು ತೋರಿಸುವವು. ಮೊದಲು ಹೇಳಿದ ಅವಶ್ಯ ಸಂಗತಿಗಳು ಸ್ವಾಭಾವಿಕವು. ಆದರೆ, ಈ ಸಮಯ ಮನುಷ್ಯನಿಗೆ ಅರಿವೆ ಒಂದದನ್ನು ನಾವು ನೋಡುತ್ತೇವೆ. ಶಿಷ್ಟರು ಧರ್ಮಚ್ಯುತರಾಗುವ ಲಕ್ಷಣವನ್ನು ಶ್ರೀ ಗುರುಗಳು ವಿವರಿಸಿದರು. ಮಹಾಭಾರತದಲ್ಲಿ ಪಿತಾಮಹ ಭೀಷ್ಮಾಚಾರ್ಯರ ನೀತಿವಚನಗಳನ್ನು ನಾವು ಎಲ್ಲರೂ ಕೇಳಿದ್ದೇವೆ. ಭೀಷ್ಮಾಚಾರ್ಯರು ಪ್ರಸಂಗ ಬಂದಾಗ ಪಾಂಡವರ ಸ್ತುತಿಯನ್ನೂ ಧರ್ಮಪರಾಯಣತೆಯನ್ನೂ ಮನಸಾರೆ ಕೊಂಡಾಡುತ್ತಿದ್ದರು. ಆದರೂ, ಅವರ ಕರ್ಮವಿಪಾಕ ನೋಡಿರಿ. ಪಾಂಡವರಿಗೆ ನೆರವಾಗಬೇಕೆಂದಾಗ 'ಅರ್ಥಸ್ಯ ಪುರುಷೋ ದಾಸಃ ದಾಸಸ್ತ್ವರ್ಥೋ ನ ಕಸ್ಯಚಿತ್' ಎಂಬ ವಚನಗಳಿಂದ ಕೌರವರ ಪಕ್ಷಪಾತಿಯಾಗಿ ಭೀಷ್ಮಾಚಾರ್ಯರು ಹೋರಾಡಿದರು. ಗುರು ದ್ರೋಣಾಚಾರ್ಯರ ಹಾಗೂ ಇವೇ ಗುರುಪುತ್ರ ಅಶ್ವತ್ಥಾಮರ ಗತಿಯೂ ಇದೇ! ಧರ್ಮಪಕ್ಷಪಾತಿಯಾಗಿ ಮಾತಾಡದೆ ಅಧರ್ಮಪಕ್ಷಪಾತಿಯಾಗಿ ಹೋರಾಡಿದರು. ಹೀಗೆ ಶಿಷ್ಟರು ಯಾವ ಸಮಾಜದೊಳಗೆ ಶ್ರೇಷ್ಠರೆನಿಸಿಕೊಳ್ಳುವರು ಸಡಕೊಳ್ಳುತ್ತಿರುವರೋ ಆಗ ಧರ್ಮಗ್ಲಾನಿಯಾಯಿತೆಂದು ತಿಳಿಯಬೇಕು. ಸಾಧುಪೀಡನೆಯೂ ಆ ಕಾಲದಲ್ಲಿ ನಡೆದಿತ್ತು. ಸತಿ ದ್ರೌಪದಿ ದೇವಿಯ ಸೆರಗು ಹಿಡಿದು ಭರಸಭೆಗೆ ಎಳೆತಂದದ್ದೂ ಆ ಸಮಯ ಸಭೆಯು ಇದ್ದವರೂ ನಿಷೇಧ ಮಾಡದಿದ್ದದ್ದೂ ಸಾಧುಪೀಡನೆಯ ದರ್ಶಕವು. ಪತಿವ್ರತೆಯ ಪೀಡನೆಯೂ ಸಾಧುಪೀಡನೆಯೇ!

ಗ್ರಂಥದ ಭೂಮಿಕೆಯ ವಿಮರ್ಶೆ

ಗ್ರಂಥದ ಮರ್ಮ ತಿಳಿಯಬೇಕಾದರೆ ಕೃಷ್ಣಾರ್ಜುನರ ಭೂಮಿಕೆಗಳನ್ನು ತಿಳಕೊಳ್ಳಬೇಕು. ಸಮಯ ವ್ಯಾಪ್ತಿಯು ಎರಡೂ ಬದಿಗಳಿಂದ ಯೋಧರು ಯುದ್ಧಕ್ಕೆ ಸನ್ನದ್ಧರಾಗಿದ್ದರು. ಅರ್ಜುನನು ಯೋಧರನ್ನು ನೋಡಬೇಕೆನ್ನುತ್ತ ಎರಡೂ ಸೈನ್ಯಗಳ ಮಧ್ಯದಲ್ಲಿ ರಥವನ್ನು ನಿಲ್ಲಿಸಿ, ನೋಡುತ್ತಿದ್ದನು. ಆ ಸಮಯ ಸೈನ್ಯದಲ್ಲಿ ಪಿತಾಮಹ ಭೀಷ್ಮ, ಗುರು ದ್ರೋಣ, ಗುರುಪುತ್ರ ಅಶ್ವತ್ಥಾಮ, ಕೃಪಾಚಾರ್ಯಾದಿ ಮಹನೀಯರನ್ನು ನೋಡಿದ ಕೂಡಲೆ ಅರ್ಜುನನ ಶರೀರ ಕರಗಿ ನೀರಾಯಿತು. ಬಂಧವರನ್ನೂ ಮಾನನೀಯರಾದ ಪಿತಾಮಹರು, ಆಚಾರ್ಯರನ್ನೂ ಕೊಂದರೆ ಅರ್ಜುನನು ಪಾಪಿಯಾಗುವೆನೆಂದೂ, ನರಕಕ್ಕೆ ಹೋಗುವೆನೆಂದೂ ಅರ್ಜುನನು ಗ್ರಹಿಸಿದನು. ಯುದ್ಧದಿಂದ ಪ್ರಾಣಹಾನಿಗಳಾದ ಹೆಂಗಸರುಗಳು ಮುದಿಯರು, ಹೆಂಡರು-ಮಕ್ಕಳು ಅನಾಥರಾಗುವರು. ಅನಾಚಾರಿಗಳು ದಾಳಿ ಮಾಡಿ ಹೆಂಗಸರನ್ನು ಭ್ರಷ್ಟಗೊಳಿಸುವರು. ಸಮಾಜವು ಪೂರ್ವಪರಂಪರೆಗೆ ಚ್ಯುತವಾಗುವದು. ಪಿತೃಗಳಿಗೆ ಪಿಂಡಪ್ರದಾನ, ತಿಲತರ್ಪಣಾದಿಗಳು ಲೋಪವಾಗುವವು. ಸಮಾಜವು ಧರ್ಮಚ್ಯುತವಾಗುವದು. ತಾನು ಈ ಪಾಪಕ್ಕೆ ಗುರಿಯಾಗುವೆ, ಇಂಥ ಬಂಧುಗಳು ಪರಲೋಕವನ್ನೈದಿದ ಬಳಿಕ ವೈಭವ ಪಡೆದು ಫಲವೇನು? ಪಿತಾಮಹ ಭೀಷ್ಮಾಚಾರ್ಯರಂಥವರನ್ನು ಕೊಂದು ತ್ರೈಲೋಕ್ಯಾಧಿಪತ್ಯವು ದೊರಕುತ್ತಿದ್ದರೂ ತನಗೆ ಬೇಡ. ಶತ್ರುಗಳ ನಾಶ ಮಾಡಿ ಬಳಿಕ ವೈಭವಪ್ರಾಪ್ತಿಯಾದರೂ ಅದಕ್ಕೆ ರುಚಿ ಇಲ್ಲ. ಶತ್ರುಗಳು ಜೀವಂತರಿರಬೇಕು, ಬಂಧುಬಳಗದವರು ಜೀವಂತರಿರಬೇಕು. ಅಂದರೆ ವೈಭವದ ಭೋಗಕ್ಕೆ ವಿಶೇಷ ರುಚಿ ಇದೆ. ಅವೆಲ್ಲವೂ ನಾಶ ಹೊಂದುತ್ತಿರುವಾಗ ನಾನು ಯುದ್ಧ ಮಾಡಿ, ಫಲವಿಲ್ಲೆಂದು ಅರ್ಜುನನು ಯುದ್ಧಕ್ಕೆ ಸನ್ನದ್ಧನಾಗಬೇಕಾದ ಸಮಯ ಮುಗಿದು ಶಿಥಿಲನಾಗುತ್ತಾನೆ. ಶ್ರೀ ಕೃಷ್ಣನಾದರೋ ಬಿಗಿಬಿದ್ದವನು. ಧರ್ಮಗ್ಲಾನಿಯಾಗಿದೆ, ಧರ್ಮೋದ್ಧಾರ ಕಾರ್ಯವು ಅವನಿಂದ ನೆರವೇರಬೇಕಾಗಿದೆ. ಸಾಧುಗಳ ರಕ್ಷಣೆಯಾಗಲಿಕ್ಕೆ ದುರಾಚಾರ ಕೊಳ್ಳೆಯಾಗಲಿಲ್ಲ. ಇಂಥ ಸ್ಥಿತಿಯಲ್ಲಿ ಅರ್ಜುನನು ದೈನ್ಯಾಭಿಭೂತನಾಗಿ ಕಾಲು ಕೊಂಡಿರುವನು. ಈತನಿಗೆ ಯಾವ ತರದಿಂದ ಎಚ್ಚರ ಮಾಡಬೇಕು, ಎಂಬ ವಿವಂಚನೆಯಲ್ಲಿ ಶ್ರೀ ಕೃಷ್ಣನಿದ್ದನು. ಹೀಗೆ ಗೀತಾಶಾಸ್ತ್ರದ ಶ್ರೀ ಕೃಷ್ಣಾರ್ಜುನರ ಮನಃಸ್ಥಿತಿ ಗೀತಾ ಬೋಧನದ ಕಾಲಗಳನ್ನು ನಿರೂಪಿಸಿ, ಶ್ರೀ ಸದ್ಗುರುಗಳು ತಮ್ಮ ಅಂದಿನ ಭಾಷಣವನ್ನು ಮುಗಿಸಿದರು.

ಸ್ವರೂಪಸ್ಥಿತಿಯ ವಿಚಾರ.

ಅರ್ಜುನನು ಸಾಮಾನ್ಯ ಪುರುಷನಲ್ಲ, ಪ್ರಜ್ಞಾವಾದಗಳನ್ನು ಬಾಯಿಯಿಂದ ಹೇಳಿ ಕಾಲಕಳೆಯುವವನಲ್ಲ. "ಚಿತ್ತೇ ವಾಚಿ ಕ್ರಿಯಾಯಾಂ ಚ ಸಾಧೂನಾಮೇಕರೂಪತಾ।" ಎಂಬಂತೆ, ಅರ್ಜುನನು "ಸೀದಂತಿ ಮಮ ಗಾತ್ರಾಣಿ ಮುಖಂ ಚ ಪರಿಶುಷ್ಯತಿ।" ಮುಂತಾಗಿ ಹೇಳಿ, ಗಾಂಡೀವ ಧನುಸ್ಸನ್ನು ಕೆಳಗಿಟ್ಟು, ಅರ್ಜುನನು ಧೊಪ್ಪನೆ ಬಿದ್ದುಬಿಟ್ಟನು. ಶ್ರೀಕೃಷ್ಣ ಪರಮಾತ್ಮನು ಬಿಗಿಬಿದ್ದನು. ಈ ವಿಷಮ ಕಾಲದಲ್ಲಿ ಇದೆಂಥ ದುರ್ಬುದ್ಧಿಯುಂಟಾಯಿತು? ಅವನಿಗೆ ಯಾವ ಉಪದೇಶ ಮಾಡಬೇಕು? ಎಂದು ಆಲೋಚಿಸಿ, « ಅನಾರ್ಯಕೃತ್ಯವಿದು, ಅಸ್ವರ್ಗ್ಯ ಕೃತ್ಯವಿದು, ಅಕೀರ್ತಿಕರವಾದ ಕೃತ್ಯವಿದು," ಎಂದು ಹೀಯಾಳಿಸಿ ನೋಡಿದನು. « ನೀನು ರಣಹೇಡಿಯೆಂದು ಲೋಕಾಪವಾದವಾಗುವದು," ಎಂದೂ ಎಚ್ಚರಿಕೆ ಕೊಟ್ಟನು. "ಕ್ಷತಾತ್ಕಿಲ ತ್ರಾಯತ ಇತ್ಯುದಗ್ರಃ ಕ್ಷತ್ರಸ್ಯ ಶಬ್ದೋ ಭುವನೇಷು ರೂಢಃ।" ಭೂತಲದ ಮೇಲಿನ ಕಷ್ಟಗಳನ್ನು ಪರಿಹರಿಸುವದೇ ಕ್ಷತ್ರಿಯರ ಧರ್ಮವೆಂದು ಶ್ರೀ ಕೃಷ್ಣನು ಧರ್ಮೋಪದೇಶ ಮಾಡಿದನು. ಆದರೂ, ಗುರು-ಹಿರಿಯರನ್ನು ಕೊಂದು ತ್ರೈಲೋಕ್ಯಾಧಿಪತ್ಯವನ್ನು ಅನುಭವಿಸುವದಕ್ಕಿಂತ ಇಹಲೋಕದಲ್ಲಿ ಭಿಕ್ಷೆ ಬೇಡಿ ಜೀವಿಸುವದು ಶ್ರೇಯಸ್ಕರವಾದದ್ದೆಂದು ಅರ್ಜುನನು ಉತ್ತರವನ್ನಿತ್ತು, ಶ್ರೀ ಕೃಷ್ಣ ಪರಮಾತ್ಮನನ್ನು ಸುಮ್ಮನಿರಿಸಲೆತ್ನಿಸಿದನು. ಅರ್ಜುನನು ಇಷ್ಟಕ್ಕೇ ತಡೆಯದೆ, ಶತ್ರುಗಳಾದ ಧಾರ್ತರಾಷ್ಟ್ರರೇ ನನ್ನನ್ನು ಕೊಂದರೆ, ಅದು ತನಗೆ ಕ್ಷೇಮಕರವಾಗುವದೆಂದು ಹೇಳಿಬಿಟ್ಟನು. ಶ್ರೀಕೃಷ್ಣ ಪರಮಾತ್ಮನು ಚಿಂತಾಸಾಗರದಲ್ಲಿ ಬಿದ್ದನು. ಅರ್ಜುನನ ಮನಸ್ಸು ಗಟ್ಟಿ ಇದೆ. ಶಬ್ದ, ಸ್ಪರ್ಶ, ರೂಪ, ರಸ, ಗಂಧ ಮುಂತಾದ ಪ್ರಾಪಂಚಿಕ ಮೋಹಕ್ಕೆ ಅದು ಒಳಗಾಗಿರುವದಿಲ್ಲ. ಆತನಿಗೆ ಬುದ್ಧಿಭ್ರಂಶವಾಗಿ ಆತನು ಪಾರಮಾರ್ಥಿಕ ಮೋಹಜಾಲದಲ್ಲಿ ದಯಾವಶನಾಗುತ್ತಿರುವನು.

ಬಳಿಕ, ಬುದ್ಧಿಭ್ರಂಶದ ಉದಾಹರಣೆಗಳನ್ನು ವಿವರಿಸಿ, ಶ್ರೀ ಕೃಷ್ಣ ಪರಮಾತ್ಮನು ಅರ್ಜುನನಿಗೆ ಆತ್ಮಜ್ಞಾನವನ್ನಿತ್ತು, ಆತನ ಮೋಹಜಾಲವನ್ನು ಹರಿಸಿ ಯುದ್ಧಕ್ಕೆ ಸನ್ನದ್ಧ ಮಾಡಿದ ಬಗೆಯನ್ನು ಮುಂದಿನ ದಿನ ಹೇಳುವೆನಾಗಿ ಹೇಳಿ, ಶ್ರೀ ವಿನಾಯಕ ಮಹಾರಾಜರು ತಮ್ಮ ಶುಕ್ರವಾರದ ಪ್ರವಚನವನ್ನು ಮುಗಿಸಿದರು.

ಆತ್ಮನ ಚಮತ್ಕಾರಗಳು: ಮಿದುಳಿನ ಅದ್ಭುತ!

ಪೂರ್ವಪೀಠಿಕೆ.

ಅನಿವಾರಕ್ಕೆ ಶ್ರೀ ಸದ್ಗುರುಗಳು ಆತ್ಮವಿಚಾರದಲ್ಲಿ ಪ್ರವೇಶಿಸಿದರು. ಅರ್ಜುನನು ಸುಖ ದುಃಖಕ್ಕೊಳಗಾದ ಸಮಯದಲ್ಲಿ ಆಶಾಳಿಸಿದ್ದು, ಗೃಹಸ್ಥಾಶ್ರಮದಲ್ಲಿ ಇಹೀ ಮನವನು ಅಭಿಮಾನಭಂಗದ ಸೇಡು. ಶ್ರೀಕೃಷ್ಣನು ಕೂಡ ಅರ್ಜುನನ ಶಯನ ಗುರುವಿಲ್ಲ. ಇದು ಕಾರಣವೇನು? ತಾನು ಶಸ್ತ್ರಧಾರಿಯಾಗಿ ಶತ್ರುಗಳನ್ನು ಕೊಲ್ಲದಿದ್ದರೆ, ಆದರಿನಂತೆ ಮುಂದೆಯೂ ಅವರು ಬಾಳಿ ಬದುಕುವರೆಂದು ಅರ್ಜುನನು ಗ್ರಹಿಸಿ, ಗುರು ಹಿರಿಯರ ಕೊಲೆ ಪಾತಕವನ್ನು ಸ್ಮರಿಸಿ ಕಳವಳಗೊಳ್ಳುತ್ತಾನೆ. ಅರ್ಜುನನ ಮೋಹದ ಗುಣಸ್ವಭಾವವನ್ನು ಅರಿತಿರುವ ಶ್ರೀಕೃಷ್ಣನು, ಸೃಷ್ಟಿಯು ಉತ್ಪತ್ತಿಯು ಕಾಲವಶದಲ್ಲಿ ಆತ್ಮನ ಭವಿಷ್ಯವು" ಅಂದರೆ, ಮುಂದೆ ಬರುವ ಹೀಗೇನಿಲ್ಲ ಹೀಗಿದ್ದು, ಅರ್ಜುನನೆ ಮಾಡಿಗಿ ಫಲವೇನು? ಆತ್ಮನು ನಿತ್ಯನು, ಅತ್ಮನಿಗೆ ನಾಶವಿಲ್ಲ. ಸ್ಥೂಲ ದೇಹವು ನಾಶವಾಗುತ್ತಿದೆ. ಹೊರತು ಸ್ಥೂಲ ದೇಹದ ಒಳಗಿನ ಆತ್ಮನು ಅಮರನು. ಸ್ಥೂಲ ದೇಹದ ಹಿತಾಮುಹಸಿಗಾಗಿ ಮರಣ್ "ಶ್ರೀ: ಬ್ರೋ?" ಸೂಕ್ಷ್ಮ ದೇಹಿಯಾದ ಹಿತಾಮುಹಸಿಗಾಗಿ ಮರುಗುತ್ತಿಯೋ? ಸ್ಥೂಲ ದೇಹವಾಗಿದ್ದರೆ, ಅದೇನು ನಿತ್ಯವಲ್ಲ. ಒಂದಿಲ್ಲೊಂದು ದಿನ ಆ ದೇಹವು ನಷ್ಟವಾಗಲೇಬೇಕು. ಅದನ್ನು ನೀನು ಬಹುಕಿಸಿಕೊಳ್ಳಲಾರೆ. ಹೀಗಿರಲು, ನಿನ್ನ ಶೋಕ ಸಾಗದು. ಮರುಗಿ ಫಲವೇನು ಎಂದು ಶ್ರೀಕೃಷ್ಣನು ಬೋಧಿಸಿದನು.

ಪ್ರಪಂಚ-ಪರಮಾರ್ಥ ಭೇದ

ಸದ್ಗುರುಗಳು ಪ್ರಪಂಚ-ಪರಮಾರ್ಥಗಳ ಭೇದವನ್ನು ನಿರೂಪಿಸಿದರು. ಪ್ರಪಂಚದಲ್ಲಿಯೂ ಪರಮಾರ್ಥ ಸಾಧನಕ್ಕೆ ತ್ಯಾಗ ಮಾಡಬೇಕು, ಪರಮಾರ್ಥದಲ್ಲಿಯೂ ಮಾನವನು ಸರ್ವಸ್ವದ ತ್ಯಾಗ ಮಾಡಬೇಕು. ಆದರೆ ತ್ಯಾಗದ ವ್ಯತ್ಯಾಸವು ಒಂದೇಯಾದರೂ ಧ್ಯೇಯವು ಮಾತ್ರ ಬೇರೆಯಿದೆ. ಮಾನವನು ತನ್ನ ಪ್ರಾಪಂಚಿಕ ಸುಖೋಪಭೋಗಕ್ಕಾಗಿ, ಹಂಡತಿ ಮಕ್ಕಳ ಸುಖೋಪಭೋಗಕ್ಕಾಗಿ ಸರ್ವಸ್ವದ ಧಾರೆ ಎರೆಯುತ್ತಾನೆ. ಧರ್ಮ ಕಾರ್ಯಗಳಿಗಾದರೋ, ತ್ಯಾಗ ಮಾಡಬೇಕಾದರೆ ಕಷ್ಟವಾಗುತ್ತದೆ. ಈ ಸಮಯ ಮಹಾರಾಜರವರು ವಿಠೋಬ ದರ್ಶನಾದ ಭಕ್ತ ದಾಮಾಜಿಯ ಕಥೆಯನ್ನು ಹೇಳಿದರು. ಭಕ್ತ ದಾಮಾಜಿಯು ಮಾಡದೆ ಪಂಢರಿಗೆ ಹೋಗುವ ಪರಿಗೆ ಒಂದು ಸಲ ತೀರಾ ಮನೆಯಲ್ಲಿದ್ದನು. ಒಂದೇಸಲ ರಾಮ ನಾಗಳ ಪಾದರಕ್ಷೆಗಳ ಬಗ್ಗೆ ಕೇಳಬಾರದೆಂದು ಆತನು ಕೇಸರಿನ ಸ್ಥಳ ಹಾದುಹೋಗುವಾಗ, ೧೦-೫೦ ರಾಜಾಮಾರಿಗಳ ದೇಹದ ಶ್ವಾಸಗಳನ್ನು ಹುಗಿದು, ಅವುಗಳ ಮೇಲೆ ಕಾಲಿಟ್ಟು ತಾನು ನಡೆದಿದ್ದನು. ಅಂಗಿಯು ನಿರಾಗಳನ್ನು ಸಹೋದರನು ಕೇಳಿಸಿದ ಹಾಗೆ ಆ ವಿಠೋಬನ ದರ್ಶನು ಜಗಳಾಡುತ್ತಿದ್ದನು. ಅಂಥ ಭಕ್ತನ ಮನವು ಮರುಮಾಡಿದ ಮೇಲೆ, ಮಕ್ಕಳು ಹುಟ್ಟಿದ ಸಂಕಟ ತಿಳಿಯದು. ಸಂಸಾರದಲ್ಲಿ ಸುಖವಿಲ್ಲವೆಂಬ ಕಲ್ಪನೆ ನೀ ಹೊರತು, ಸಂಸಾರದಲ್ಲಿ ಸುಖವಿಲ್ಲ, ಹೊರತು ಮಾತ್ರಿಗೆ ತಿಸ್ಕಲಿಕೆ ಸಿಗುವದಿಲ್ಲ. ಸಂಸಾರದ ಚಮತ್ಕಾರವೇನೆಂದು ಹೇಳುವದು! ವಿಷಯಗಳನ್ನು ಅನುಭವಿಸಬೇಕಾದರೆ, ವಿಷಯಸುಖಕ್ಕಾಗಿ ವಿಷಯಗಳನ್ನೇ ಹೇಗೆ ಆಹುತಿಯಾಗಿ ಕೊಡಬೇಕಾಗುತ್ತದೆಂಬುದನ್ನು ಭಕ್ತಪದಾಯನ ಉದಾಹರಣೆಯಿಂದ ಗುರುಗಳು ನಿರೂಪಿಸಿದರು. ಭಕ್ತನ ಆಯಸ್ಸು ಸಂಸಾರಕ್ಕಾಗಿ ಮಾಡಿದಷ್ಟೇ ತ್ಯಾಗದಿಂದ ಆತನಿಗೆ ಭಕ್ತಪ್ರಾಪ್ತಿಯಾಗುತ್ತಿತ್ತೆಂದೂ ಸದ್ಗುರುಗಳು ಹೇಳಿದರು. ತ್ಯಾಗದ ವ್ಯಾಪ್ತಿಯು ಅಷ್ಟೇ ಇದ್ದರೂ, ಧ್ಯೇಯ ಒಂದು ಬದಲಾದ್ದರಿಂದ ಭಕ್ತನ ಆಯಸಿಗೆ ಆತ್ಮಪ್ರಾಪ್ತಿ ಸಾಗಲಿಲ್ಲೆಂದೂ ಗುರುಗಳ ಅಭಿಪ್ರಾಯವು.

ಆತ್ಮಚಮತ್ಕಾರ.

ಆತ್ಮವು ವ್ಯಾಗಿರುತ್ತದೆ; ನೋಡಲಿಕ್ಕೆ ಆತ್ಮಸ್ವರೂಪದ ಸಂಗತಿಯು ಸ್ಥೂಲ ದೇಹವನ್ನು ನೋಡಿರಿ, ಎಷ್ಟು ಸಿದ್ಧಿಸ್ಥ ಕೋಟಿಯಲ್ಲಿಯೂ, ಪ್ರಾಣಿಕೋಟಿಯಲ್ಲಿಯೂ ಇರುವ ಆತ್ಮನು ಒಂದೇ. ಆತ್ಮನು ಆನೆಯಲ್ಲಿಯೂ ಇದ್ದಾನೆ; ಅದೇ ಆತ್ಮನು ಇರುವೆಯಲ್ಲಿಯೂ ಇದ್ದಾನೆ. ಇದು ಆತ್ಮನ ಚಮತ್ಕಾರವಲ್ಲವೇ? ಇಂದ್ರಿಯಗಳಿಗೆಲ್ಲ ಆತನೇ ಶಕ್ತಿ ಕೊಡುತ್ತಾನೆ. ಆತನಿಂದ ಆತನ ಜ್ಞಾನವಾಗುವದಿಲ್ಲ. ಅದರೆ, ಚಮತ್ಕಾರ ಜ್ಞಾನಶಕ್ತಿ ಕೊಡುವ ಸುಖ ಸ್ವರೂಪ ಆತನಲ್ಲಿದೆ. ಕಣ್ಣಿನಿಂದ ಆತನಿಗೆ ನೋಡಲಿಕ್ಕೆ ಆಗುವದಿಲ್ಲ. ಕಣ್ಣಿಗೆ ನೋಡುವ ಶಕ್ತಿ ಕೊಡುವವನು ಆತನೇ. ಆತ್ಮನ ಸಾಮರ್ಥ್ಯ ನೋಡಿರಿ. ಒಂದು ಕೂದಲಿನಲ್ಲಿ ಎಷ್ಟು ರಹಸ್ಯ ಜಗತ್ತಿನ ಭಾಗವು, ಇತಿಹಾಸ ಮುಂತಾದ ವಿಷಯಗಳ ವೇದ ವಿಷಯ ಗ್ರಂಥಗಳು ಆ ಮಿದುಳಿನಲ್ಲಿವೆ. ಕಣ್ಣು ಕಲ್ಪನೆ ಕೊಡತಕ್ಕವ. ತುಸುಗೆ ೩೦೦ ವರ್ಷಗಳ ವೇಗದಿಂದ ಹಾರುವ ವಿಮಾನವನ್ನು ನೀವು ನೋಡಿರುವಿರ. ಸೂರ್ಯಕಿರಣಗಳ ವೇಗವೆಷ್ಟು? ಭೂಗೋಲವೆಷ್ಟು? ಸೂರ್ಯಕಿರಣವು ಒಂದು ನಿಮಿಷಕ್ಕೆ ೧೮೬೦೦೦ ಮೈಲು ಗಳ ವೇಗದಿಂದ ಬರುತ್ತದೆ, ೫।। ನಿಮಿಷಗಳಲ್ಲಿ ಭೂಮಿಗೆ ಬರುತ್ತವೆಂದರೆ ಇದೇ ಮಿದುಳಿನಿಂದ ಆತ್ಮನು ಪತ್ತೆ ಹಚ್ಚುತ್ತಾನೆ. ಪೃಥ್ವಿಯು ಸ್ಥಿರ ಕಾಣುತ್ತದೆ, ಸೂರ್ಯನು ಚಲನಾಗಿ ಕಾಣುತ್ತಾನೆ. ಪೃಥ್ವಿಯು ದೊಡ್ಡದಾಗಿ ಕಾಣುತ್ತದೆ, ಸೂರ್ಯನು ಚಿಕ್ಕವನಾಗಿ ಕಾಣುತ್ತಾನೆ. ಸೂರ್ಯನು ಸುತ್ತಲೂ ಭೂಮಿಯು ತಿರುಗುತ್ತದಾಗ ಇದೇ ಮಿದುಳಿನಿಂದ ಆತ್ಮನು ಕೋಟ್ಯಂತರ ಮೈಲುಗಳಷ್ಟು ದೂರವನ್ನು ನೀವು ನೋಡಿರಿ. ಆದರೆ ಅದರ ಹಿಂದೆ ಮುಂದೆ ಕಾರಣ "ವ್ಯಾಧ"ನನ್ನು ನೀವು ತಿಳಿದಿರುವಿರ. ವ್ಯಾಧನ ಆಶ್ರಮದಲ್ಲಿ ಇದೇ ಬ್ರಹ್ಮಾಂಡವೇ ನಾಕ್ಷತ್ರ ಎಂದು ಹೇಳುತ್ತಾರೆ. ಆಶ್ವಿನಿ ನಕ್ಷತ್ರದ ಈ ನಕ್ಷತ್ರವು ಸೂರ್ಯನ ಕಿರಣ ಪಟ್ಟಿಯ ದೊಡ್ಡದಿದೆ. ಆದರ ಕಿರಣಗಳು ನಮ್ಮ ದಿಗೆ ೧ ಲಕ್ಷ ೮೦ ಸಾವಿರದಂತೆ ಬರುತ್ತಿದ್ದರೆ ಭೂಮಿಗೆ ಬರುವ ಮುಟ್ಟಲು ೫೦ ವರ್ಷಗಳು ತಗಲುತ್ತವೆ. ಧ್ರುವ ನಕ್ಷತ್ರವನ್ನು ದಿಸೆ ಸಿಗಲು ಸಪ್ತರ್ಷಿ ಪತಿಗಳ ಪ್ರೇಮ ಧ್ರುವ ನಕ್ಷತ್ರವು ಸ್ಥಿರವಾಗಲಿಕ್ಕೆ ದಂಪತಿಗಳಿಗೆ ತೋರಿಸಲಾಗುತ್ತದೆ. ಧ್ರುವ ನಕ್ಷತ್ರದ ಕಿರಣಗಳು ಭೂಮಿಗೆ ಬರಲು ೪೦ ವರ್ಷಗಳು ಬೇಕು. ಹಿಂದೆ ಇದಕ್ಕಿಂತಲೂ ಹೆಚ್ಚು ವೇಗದ ಕಿರಣ! ನಮ್ಮ ಕಣ್ಣಿಗೆ ಕಾಣದ ಇನ್ನು ಎಷ್ಟೋ ದೊಡ್ಡ ದೊಡ್ಡ ನಕ್ಷತ್ರಗಳ ಸಮೂಹವಿದೆ. ಅವುಗಳ ಕಿರಣಗಳು ಭೂಮಿಗೆ ಬಂದು ಮುಟ್ಟಲು ೧೦೦-೨೦೦-೫೦೦೦ ಗಳ ವರೆಗೆ ವರ್ಷಗಳು ತಗಲುತ್ತವೆಯೆಂದೂ ಜಗತ್ತಿನಲ್ಲಿ ಶೋಧಕರು ಕಂಡು ಹಿಡಿದಿರುವರು. ಇದೊಂದು ದೊಡ್ಡ ಬ್ರಹ್ಮಾಂಡವು. ಬ್ರಹ್ಮಾಂಡದ ವ್ಯಾಪ್ತಿಯನ್ನು ಚಿಕ್ಕ ಕೋಣೆಯಲ್ಲಿ ಕುಳಿತು ಕೊಂಡು ಕಲ್ಪನೆಯಿಂದ ಕಂಡುಹಿಡಿಯುವ ನಮ್ಮ ಮಾನವ ಆತ್ಮನು ಇದ್ದಾನೆ. ಇದು ಚಮತ್ಕಾರವಲ್ಲವೇ! ಆದ್ದರಿಂದಲೇ "ಅತ್ಯತಿಷ್ಠದ್ದಶಾಂಗುಲಂ" ಎಂದು ಗೀತೆಯು ಸಾರುತ್ತಿದೆ.

ಇನ್ನೊಂದು ಅರ್ಥ

"ಅತ್ಯತಿಷ್ಠದ್ದಶಾಂಗುಲಂ" ಎಂಬ ಶ್ಲೋಕದ ಅರ್ಥವನ್ನು ಇನ್ನೊಂದು ರೀತಿಯಿಂದಲೂ ಹೇಳುತ್ತಾರೆ. ಅದೇನೆಂದರೆ, ಆತ್ಮದ ವಿಚಾರ ಮಾಡುವವನು, ಆ ವಿಚಾರವನ್ನು ಕೇಳುವವನು, ಆ ವಿಚಾರವನ್ನು ಹೇಳುವವನು ಆಗಬೇಕು ಎಂಬ ಅರ್ಥವನ್ನೂ ಶ್ರೀ ಗುರುಗಳು ಈ ಕುರಿತು ಮಹಾರಾಜರವರು ಇದರ ಕಥೆ ಹೇಳಿದರು. ಜನಕ ರಾಜನು ಸಭೆ ಭ್ರಮನಿದ್ದಾಗ, ಜನಕನು ಎರಡು ಕುದುರೆ ರಾಜ್ಯದೊಳಗಿನ ಮಹಾಜ್ಞಾನಿಗಳು ಆಸನಸ್ಥರಾಗಿದ್ದರು. ಜನಕರಾಯನ ಪ್ರಶ್ನೆಗಳಿಗೆ ಮಹಾ ಋಷಿಗಳು ಉತ್ತರ ಕೊಡುತ್ತಿದ್ದರು. ಈ ಸಮಯ ಯಾಜ್ಞವಲ್ಕ್ಯ ಮಹರ್ಷಿಗಳು ಬಂದರು. ಅವರ ದೇಹವು ಎಂಟು ಕಡೆ ಡೊಂಕಾದ್ದರಿಂದ ಋಷಿಗಳು ಆತ್ಮವಿವೇಚನ ಮಾಡುತ್ತಿದ್ದರು. ಅತ್ಮವಿವೇಚನ ಮಾಡುತ್ತಿ ದ್ದಾಗ ಮಹರ್ಷಿಗಳು ಜನಕರಾಯನನ್ನೇ ನೋಡುತ್ತ ಕುಳಿತುಕೊಂಡಿದ್ದರು. ಮಹರ್ಷಿಗಳು ಮಹಾರಾಜನ ಸಭೆಗೆ ಸಂಪಾದನೆ ಮಾಡ ಬಂದಿರೆಂದು ಕಲ್ಪನೆಯು ಅಲ್ಲಿದ್ದ ಋಷಿಗಳಲ್ಲುಂಟಾಯಿತು. ಕಲ್ಪನೆಯು ಉಂಟಾಗುವದೇ ತಡ, ನದೀ ತೀರದಲ್ಲಿರುವ ಋಷಿಗಳ ಆಶ್ರಮಗಳಿಗೆ ಬೆಂಕಿ ಬಿದ್ದಿತೆಂಬ ಸುದ್ದಿ ಕೇಳಲ್ಪಟ್ಟಿತು. ಸಭೆಯಲ್ಲಿದ್ದ ಋಷಿಗಳೆಲ್ಲರೂ ಹೆಂಡಿರು ಮಕ್ಕಳು ಗ್ರಂಥಪಠಿತ, ಕಾವಿ ವಸ್ತ್ರ ಕೌಪೀನ ಕಳೆದುಹೋಗುವವೆಂದು ಚಿಂತಾವಿಷ್ಟರಾಗಿ ಋಷಿಗಳು ಗಾಬರಿಯಿಂದ ಎದ್ದು ನಡೆದರು. ಆದರೂ, ಯಾಜ್ಞವಲ್ಕ್ಯರ ಭಾವನೆಯು ನಡೆದಿತ್ತು, ಜನಕರಾಯನು ನಡೆಯಲೆಂದು ಆಜ್ಞಾಪಿಸುತ್ತಿದ್ದನು. ಬೆಂಕಿ ಹತ್ತಿತೆಂದು ಸುದ್ದಿ ಕೊಟ್ಟರೂ ಕೂಡ ಜನಕಮಹಾರಾಜನೇನು ಚಲಿಸಲಿಲ್ಲ, ಯಾಜ್ಞವಲ್ಕ್ಯರು ಆತ್ಮವಿವೇಚನವನ್ನೇನು ಬಿಡಲಿಲ್ಲ. ಋಷಿಗಳು ಹೋಗಿ ನೋಡಿದರೆ ಬೆಂಕಿಯೂ ಇಲ್ಲ, ಅಲ್ಲ. ಪರಮಾತ್ಮನು ಜನಕರಾಯನ ಸತ್ವವನ್ನು, ಋಷಿಗಳ ಸತ್ವವನ್ನು ಸಿದ್ಧಪಡಿಸುವದಕ್ಕಾಗಿ ಈ ಆಟ ಮಾಡಿದ್ದನೆಂದು ಯಾಜ್ಞವಲ್ಕ್ಯರು ವಿವರಿಸಿದರು. ಇಷ್ಟು ಚಮತ್ಕಾರಿ ಆತ್ಮನ. ಆತನ ವಿಚಾರ ಮಾಡುವವರು ವಿರಳರು, ವಿವೇಚಿಸುವವರು ಮತ್ತೂ ವಿರಳರು, ವಿವೇಚನವನ್ನು ಕೇಳುವವರು ಇನ್ನೂ ವಿರಳರು. ಆತನ ಸಾಕ್ಷಾತ್ಕಾರ ಹೊಂದುವವರಂತೂ ಜಗತ್ತಿನಲ್ಲಿ ಸಿಗುವದೇ ದುರ್ಲಭ. ಆದರಿಂದ ಅಂಥ ಆತ್ಮನ ವಿಚಾರವನ್ನು ನಾವು ಕೇಳಬೇಕು, ಮನನ ಮಾಡಬೇಕು, ಧ್ಯಾನ ಮಾಡಬೇಕು. 'ಶ್ರೋತವ್ಯೋ ಮಂತವ್ಯೋ ನಿದಿಧ್ಯಾಸಿತವ್ಯಃ' ಎಂದು ಮಹಾರಾಜರವರು ಶ್ರೀ ಹರಿಗೆ ನಮಸ್ಕಾರ ಮಾಡಿ ತಮ್ಮ ಆದ ಭಾಷಣವನ್ನು ಮುಗಿಸಿದರು.

— ಸಂಬಿನ ಪಹಾಳ ವಿಭಾಯತಿಯಲ್ಲಿ ಹೊಂಟಿ ಪೋಲೀಸರಿಗೂ ಸಂಸ್ಥಾನದವರಿಗೂ ಜಗಳಾಟವಾಗುತ್ತಿದೆ.

— ಪಂಡಿತ ಮೋತಿಲಾಲ ನೇಹರೂರವರು ಮುಂಬಯಿಯಲ್ಲಿ ಕಳೆದ ಬುಧವಾರಕ್ಕೆ ಭಾಷಣಕೊಟ್ಟು ಪ್ರತಿಸಹಕಾರಿಗಳ ತರ್ಕಗಳನ್ನೆಲ್ಲ ಖಂಡಿಸಿಬಿಟ್ಟರು.

— ಮಜೂರರುಗಳ ಸ್ಥಿತಿಯನ್ನು ವಿಚಾರಿಸಿ ಪ್ರಾಂತಿಕ ಸರಕಾರಕ್ಕೆ ವರದಿ ಕೊಡಲು ಮುಂಬಯಿಯ ಸರಕಾರವು ಕಾಉನ್ಸಿಲದೊಳಗಿನ ದೊಡ್ಡ ದೊಡ್ಡ ಎಂಜನಿಯರರ ಒಂದು ಮಂಡಳವನ್ನು ನೇಮಿಸಿದೆ.

— ಜಂಬೂಸರ ಮ್ಯುನಿಸಿಪಾಲಿಟಿಯಲ್ಲಿ ಅಸ್ಪೃಶ್ಯರೊಬ್ಬರು ಆರಿಸಿಬಂದಿರುವರ ಆದರಕ್ಕಾಗಿ ಅಸ್ಪೃಶ್ಯರ ಸ್ಪರ್ಶವಾಗಬಾರದೆಂದು ನಾಲ್ಕು ಹಿಂದೂ ಸಭಾಸದರು ರಾಜೀನಾಮೆ ಕೊಟ್ಟರು. ಉಳಿದವರು ಅವರಿಗೆ ಸ್ಪರ್ಶವಾದಲ್ಲಿ ಜಳಕ ಮಾಡಿ ಶುದ್ಧರಾಗುವ ನಿರ್ಧಾರ ಮಾಡಿ ಉಳಿದಿರುವರು.

ಜಾಹೀರಾತು.

ಪ್ರಸಿದ್ಧ ಕೇರಳ ಜ್ಯೋತಿಷ ಶಾಸ್ತ್ರಜ್ಞರಾದ
ಕೇ. ಸಿ. ನಾರಾಯಣ ಶಾಸ್ತ್ರಿಗಳು
ಶಿರ್ಶಿಯಲ್ಲಿ ಮುಕ್ಕಾಂ ಮಾಡಿರುವರು

ನವಿಸ್ವಸ್ತ ಕಡೆ ಕೇರಳ ಜ್ಯೋತಿಷ್ಯವನ್ನು ಹೇಳಿ ಹೆಸರಾದ ಕೇ ಸಿ ನಾರಾಯಣ ಶಾಸ್ತ್ರಿಗಳು ತಮ್ಮ ದೇಶಸಂಚಾರವನ್ನು ಮುಗಿಸಿ, ಗೆಳೆಯರ ಸೂಚನೆ ಮೇರೆಗೆ ಶಿರ್ಶಿಯಲ್ಲಿ ಮುಕ್ಕಾಂ ಮಾಡಿರುವರು. ಜಾತಕ, ಪ್ರಶ್ನೆ ಮೊದಲಾದವುಗಳನ್ನು ತಿಳಿಯಬೇಕೆನ್ನುವವರು ನಾರಾಯಣ ಶಾಸ್ತ್ರಿಗಳವರಿಗೆ ಭೆಟ್ಟಿಯಾಗಿ ಲಾಭ ಹೊಂದಬೇಕು.

ಪತ್ತೆ - ಕೇ. ಸಿ. ನಾರಾಯಣ ಶಾಸ್ತ್ರೀ, ಕೇರಳ ಜ್ಯೋತಿಷಿ, ಶಿರ್ಶಿ (ಉತ್ತರ ಕಾನಡ)

ಕಾನಡಾವೃತ್ತ.

ಮಿತಿ ಕ್ಷಯ ಸಂ। ಕಾರ್ತಿಕ ಶು ೫ ದಿ, ಸೋಮವಾರ.

ಗೋರಕ್ಷಣ.

ಹಿಂದುಸ್ಥಾನದಲ್ಲಿ ಬೇಸಾಯವೇ ಪ್ರಧಾನ ಜೀವನಾಧಾರವು. ಪ್ರಮುಖ ವ್ಯವಸಾಯವೂ ಅದೇ. ಬೇಸಾಯಕ್ಕೆ ಗೋಪುತ್ರರು ಅವಶ್ಯಕರಿರುತ್ತಾರೆ. ದೇಹದಾರ್ಢ್ಯಕ್ಕೆ ಗೋರಸವು ಅತ್ಯಂತ ಮಹತ್ವದ್ದು. ಹೀಗಿದ್ದು, ನಾವು ಪ್ರತಿ ವರುಷ ೮-೯ ಲಕ್ಷಗಳ ಗೋವುಗಳನ್ನು ರಫ್ತು ಮಾಡುತ್ತೇವೆ. ಗೋಪುತ್ರರ ದೇಶಾಂತರದ ಸಂಖ್ಯೆಯು ಇತ್ತೀಚಿನ ೬-೭ ವರುಷಗಳಿಂದ ಕುಗ್ಗಹತ್ತಿದಾಗ ಈಗ ಒಂದು ಗೋವನ್ನಾಗಲೀ, ಗೋಪುತ್ರರನ್ನಾಗಲೀ ಪರದೇಶಕ್ಕೆ ಕಳುಹುವದು ಮಹಾಪರಾಧವು. ಶ್ರೀ ಸ್ಟು ಜೆ ದೇಸಾಯಿಯವರು ದನಗಳ ಕೊಲೆಯೆಂಬ ಒಂದು ಲೇಖಮಾಲೆಯನ್ನು "ಯಂಗ ಇಂಡಿಯಾ" ಪತ್ರಿಕೆಯಲ್ಲಿ ಬರೆಯಲಾರಂಭಿಸಿರುವರು. ಈ ಲೇಖಮಾಲೆಯಲ್ಲಿ ದನಗಳ ಕೊಲೆಯ ಪ್ರಮಾಣ, ಅದನ್ನು ಪರಿಹರಿಸುವ ಉಪಾಯ, ದನಗಳು ಮಾನವರಿಗೆ ಮಾಡುವ ಉಪಕಾರ ಮುಂತಾದ ಸಂಗತಿಗಳನ್ನು ಸವಿಸ್ತರ ವಿವೇಚಿಸಲ್ಪಟ್ಟಿವೆ. ಇಂದಿನ ದನಗಳ ಜೋಪಾನದಿಂದ ಉಂಟಾಗುವ ಲಾಭಗಳನ್ನೂ ದನಗಳ ನಾಶದಿಂದ ಉಂಟಾಗುವ ಹಾನಿಗಳನ್ನೂ ವಿವರಿಸಲ್ಪಟ್ಟಿವೆ.

ಕಲಕತ್ತೆಯ ಅಖಿಲ ಭಾರತೀಯ ಗೋಸಂಘದ ಅಧ್ಯಕ್ಷರಾದ ಸರ್ ಜಾನ್ ವುಡ್ರೊಫ್‌ರವರು ಸಭಾಧಿಪತಿ ಚೆಮ್ಸ್‌ಫರ್ಡ ದೊರೆಗಳಿಗೆ ಸಾದರಪಡಿಸಿದ ಕೈಫೀಯತಿನೊಳಗಿನ ಸಂಗತಿಗಳನ್ನೆಲ್ಲಾ ಪರಾಂಬರಿಸತಕ್ಕದ್ದು. ಹಿಂದುಸ್ಥಾನದಲ್ಲಿ ಪ್ರತಿ ೧೦೦ ಮಂದಿಗಳಿಗೆ ೫೯ರಂತೆ ದನಗಳ ಪ್ರಮಾಣ ಬೀಳುತ್ತದೆ. ಈ ಅಂಕಿಯನ್ನು ಪರದೇಶಗಳೊಳಗಿನ ದನಗಳ ಸಂಖ್ಯೆಗೆ ತುಲನೆ ಮಾಡಿರಿ. ಡೆನ್ಮಾರ್ಕದಲ್ಲಿ ೭೪, ಅಮೇರಿಕೆಯ ಸಂಯುಕ್ತ ಸಂಸ್ಥಾನಗಳಲ್ಲಿ ೬೯, ಕೆನಡಾ ದೇಶದಲ್ಲಿ ೮೭, ಕೇಪ ಕೊಲೊನಿಯಲ್ಲಿ ೧೧೦, ನ್ಯೂಝಿಲೆಂಡದಲ್ಲಿ ೧೫೦, ಅಜೆಂಟೈನಾ ದೇಶದಲ್ಲಿ ೨೯೯, ಅರ್ಜೆಂಟೈನ ರಿಪಬ್ಲಿಕ್‌ದಲ್ಲಿ ೩೨೩, ಯುರಾಗ್ವೇಯಲ್ಲಂತೂ ೧೦೦ಕ್ಕೆ ೫೦೦ ರಂತೆ ದನಗಳ ಪ್ರಮಾಣವಿದೆ; ಅಂದರೆ, ತಲೆಗೆ ೫ ದನ ಬಿದ್ದಂತಾಗುತ್ತದೆ. ದನಗಳ ಸಂಖ್ಯೆಯು ಕುಗ್ಗಿದ್ದರಿಂದ ನಮ್ಮ ಬೇಸಾಯವು ಕುಗ್ಗುವ ಬಗೆ ನೋಡಿರಿ. ನಮ್ಮಲ್ಲಿಯ ಗೋಪುತ್ರರೀವರು ತೀರ ಕೆಟ್ಟಿಂದರೆ, ೫ ಎಕ್ರೆ ಹೊಲವನ್ನು ಹೂಡಬಲ್ಲರು. ಆದರೆ, ಹೀಗೆ ಹೂಡಿದರೆ ಹಿಂದುಸ್ಥಾನದಲ್ಲಿ ಬರೇ ೬ ಕೋಟಿ ಎಕ್ರೆ ಕ್ಷೇತ್ರವು ಸಾಗು ಆಗಬಲ್ಲದು. ಯಾಕೆಂದರೆ, ಹೂಡಬಲ್ಲಾದ ದನಗಳು ಬರೇ ೨ ಕೋಟಿ ೪೦ ಲಕ್ಷ; ಆದರೆ ಈಗ ಸಾಗು ಆಗುವ ಕ್ಷೇತ್ರವು ೨೨ ಕೋಟಿ, ೬೦ ಲಕ್ಷ. ಇಷ್ಟು ಕ್ಷೇತ್ರವನ್ನು, ಈಗ ಇರುವ ಗೋಪುತ್ರರ ಕಡೆಯಿಂದ ನಾವು ಸಾಗು ಮಾಡಿಸಿಕೊಳ್ಳುವದರಿಂದ ಹುಟ್ಟುವಳಿಯ ಪ್ರಮಾಣವು ಬಹಳ ಕುಗ್ಗುತ್ತದೆ. ಹುಟ್ಟುವಳಿಯ ತುಲನೆ ಮಾಡಿರಿ. ಬ್ರಿಟಿಶ ಹಿಂದುಸ್ಥಾನದಲ್ಲಿ ಎಕರೆಗೆ ೧೧।। ಬುಶೆಲು ಗೋಧಿ ಹುಟ್ಟಿದರೆ, ಫ್ರಾನ್ಸದಲ್ಲಿ ೧೯।।, ಸಂಯುಕ್ತ ಸಂಸ್ಥಾನದಲ್ಲಿ ೧೪, ಕೆನಡಾದಲ್ಲಿ ೧೭, ಡೆನ್ಮಾರ್ಕದಲ್ಲಿ ೨೭, ಹೀಗೆ ಹುಟ್ಟುವಳಿಯ ಪ್ರಮಾಣವಿದೆ. ಹಾಲು ತಲೆಗೆ ಹೇಗೆ ಬೀಳುತ್ತದೆ ನೋಡಿರಿ. ನಮ್ಮ ಹಿಂದುಸ್ಥಾನದಲ್ಲಿ ಆಕಳು ದಿನಾ ಸರಾಸರಿ ೩ ಶೇರು ಹಾಲು, ವರ್ಷದಲ್ಲಿ ಏಳು ತಿಂಗಳುಗಳ ವರೆಗೆ ಕೊಡುತ್ತದೆಂದು ಕಲ್ಪಿಸುವಾ. ೫ ಕೋಟಿ ಹಾಲು ಹಿಂಡುವ ದನಗಳಿವೆ. ಹಿಂದುಸ್ಥಾನದಲ್ಲಿ ೨೫ ಕೋಟಿ ೪೦ ಲಕ್ಷ ಲೋಕಸಂಖ್ಯೆ ಇದೆ. ಈ ಲೆಖ್ಖದಿಂದ ಒಬ್ಬೊಬ್ಬರಿಗೆ ೬-೮ ತೊಲೆ ಹಾಲು ಸಿಕ್ಕಿದರೆ ಮಹಾಪುಣ್ಯ. ಆರೋಗ್ಯಶಾಸ್ತ್ರದಂತೆ ಪ್ರತಿಯೊಬ್ಬನ ಹೊಟ್ಟೆಯಲ್ಲಿ ೩ ಶೇರು ಹಾಲು ಬೀಳಬೇಕು. ಬಂಗಾಲದಲ್ಲಂತೂ ೧೯೧೫ ನೇ ಇಸ್ವಿಯಲ್ಲಿ ತಲೆಗೆ ೫।। ತೊಲೆ ಹಾಲು ಸಿಗುತ್ತಿತ್ತೆಂದು ಬೇಸಾಯ ಖಾತೆಯ ಡಾಯರೆಕ್ಟರರು ಲೆಖ್ಖ ಮಾಡಿರುವರು. ನಾವು ಮೇಲೆ ಕೊಟ್ಟ ಅಂಕೆಗಳಲ್ಲೆಲ್ಲ ಸರಾಸರಿ ಅಂಕೆಗಳಿದ್ದು, ಎಲ್ಲ ಹಾಲು ಸಮಸ್ತರಲ್ಲಿಯೂ ಸಮಾನವಾಗಿ ಹಂಚಿಹೋಗುತ್ತಿದ್ದರೆ ಮಾತ್ರ, ಇಷ್ಟು ಹಾಲಾದರೂ ಸಿಗಬಹುದು. ಆದರೆ ಶ್ರೀಮಂತರು, ಮಧ್ಯಮ ವರ್ಗದವರು ತಮಗೆ ಬೇಕಾದ ಪ್ರಮಾಣಕ್ಕಿಂತ ಹೆಚ್ಚು ಹಾಲನ್ನು ಗ್ರಹಿಸಹತ್ತಿದರೆ, ಬಡಬಗ್ಗರಿಗೆ ಇಡೀ ಜನ್ಮದಲ್ಲಿ ಹಾಲು ಕಾಣದೆ ನಿಜಧಾಮಕ್ಕೆ ತೆರಳಬೇಕಾಗುತ್ತದೆ. ಉಚ್ಚವರ್ಗದಲ್ಲಿಯೂ ಹಾಲಿನ ಪ್ರಮಾಣವು ವಿಶೇಷ ಹೇಳತಕ್ಕಂಥಾದ್ದಿಲ್ಲ. ೧೯೨೪ ನೇ ಇಸ್ವಿಯ ಜನವರಿ ತಿಂಗಳಲ್ಲಿ ಸೇರಿದ ಬೆಂಗಳೂರಿನ ಪ್ರಥಮ ಗೋಪರಿಷತ್ತಿನಲ್ಲಿ ಝ್ಯೂಲ ಕೋಠಾವಾಲಾರವರು ಓದಿದ ಟಿಪ್ಪಣಿಯಲ್ಲಿ ಕೊಟ್ಟ ಅಂಕಿಗಳನ್ನು ಪರಾಂಬರಿಸಿರಿ. ಮುಂಬಯಿ ಪಟ್ಟಣವು ನಮ್ಮಿಕ್ಕಲಕಿ ಶ್ರೀಮಂತ ನಗರಿಯು. ಅಲ್ಲಿ ವ್ಯಾಪ್ತಿಯೂ ವಿಶೇಷ; ಖರ್ಚಿನ ಪ್ರಮಾಣವೂ ಹೆಚ್ಚು. ಇಷ್ಟಾಗಿ ಮುಂಬಯಿ ನಗರವು ವನಸ್ಪತ್ಯಾಹಾರಿಗಳ ನಿವಾಸಸ್ಥಾನವು. ಹೀಗಿದ್ದು, ಅಲ್ಲಿ ಹೆಚ್ಚು-ಕಡಿಮೆ ದಿನಾ ೮ ತೊಲೆಯಂತೆ ಒಬ್ಬೊಬ್ಬನು ಹಾಲು ಸೇವಿಸುತ್ತಾರೆ. ಸಂಯುಕ್ತ ಸಂಸ್ಥಾನದಲ್ಲಿ, ಬ್ರಿಟನದಲ್ಲಿ, ಈ ಪ್ರಮಾಣವು ೬ ಶೇರು ಮತ್ತು ೧।। ಶೇರು ಬೀಳುತ್ತದೆ. ಮುಕ್ತ್ರೊಬ್ಬರು ಹಿಂದುಸ್ಥಾನದೊಳಗಿನ ಆಕಳುಗಳು ದಿನಾ ೪ ಶೇರು ಹಾಲು ಕೊಡುತ್ತವಾಗಿಯೂ ಹೇಳಿರುವರು. ಆ ಲೆಖ್ಖವಾದರೂ ದೊಡ್ಡದಲ್ಲ. ಅಮೇರಿಕೆಯ ಸಂಯುಕ್ತ ಸಂಸ್ಥಾನದಲ್ಲಿ ಆಕಳು ದಿನಾ ೨೦ ಶೇರು ಹಾಲು ಹಿಂಡುತ್ತದೆ; ಬ್ರಿಟನದಲ್ಲಿ ಆಕಳು ೪೦ ಶೇರು ಹಾಲು ಕೊಡುತ್ತದೆ. ಇನ್ನೊಂದು ಲೆಖ್ಖ ನೋಡಿರಿ. ಸರ್ ಜಾನ ವುಡ್ರೊಫ್‌ರವರ ಎಣಿಕೆಯಂತೆ ಹಿಂದುಸ್ಥಾನದೊಳಗಿನ ಆಕಳು ವರ್ಷದಲ್ಲಿ ೭ ತಿಂಗಳು ಹಾಲು ಕೊಡುವದರಿಂದ ಆ ಆಕಳಿಂದ ನಮಗೆ ೬೩೦ ಶೇರು ಹಾಲು ವರ್ಷಕ್ಕೆ ಸಿಗುತ್ತದೆ. ಸಂಯುಕ್ತ ಸಂಸ್ಥಾನದಲ್ಲಿ ೬,೮೨೪ ಶೇರು, ಡೆನ್ಮಾರ್ಕದಲ್ಲಿ ೧೧ ಸಾವಿರ ೬೬೨ ಶೇರು ಸಿಗುತ್ತದೆ.

ಅಂದ ಬಳಿಕ, ಹಿಂದುಸ್ಥಾನದೊಳಗಿನ ದನಗಳ ದೈನ್ಯವನ್ನು ನಾವು ಎಷ್ಟೆಂದು ಬಣ್ಣಿಸುವದು! ಬ್ರಿಟಿಶರು ಮೋಗಲಾಯಿಯನ್ನು ಯಾವಾಗಲೂ ನಿಂದಿಸುತ್ತಿರುತ್ತಾರೆ. ಮೋಗಲಾಯಿಯನ್ನು ಹಳಿಯುವದೆಂದರೆ, ಆಂಗ್ಲಾಯಿಯ ಉಪಾಸಕರಿಗೆ ಹಕ್ಕು ಭೂಷ; "ಐನಿ ಅಕಬರಿ"ಯಲ್ಲಿ ಸಾರ್ವಭೌಮ ಅಕಬರರ ಕಾಲದಲ್ಲಿ ಹಿಂದುಸ್ಥಾನದೊಳಗಿನ ಗೋವುಗಳ ಸ್ಥಿತಿಯು ಬಣ್ಣಿಸಲ್ಪಟ್ಟಿದೆ: ಒಂದು ಆಕಳು ದಿನಾ ೭೪ ಶೇರು ಹಾಲು ಹಿಂಡುತ್ತಿತ್ತು. ಮತ್ತು ಎತ್ತುಗಳು ಕುದುರೆಗಳಿಗಿಂತ ಶೀಘ್ರವಾಗಿ ಓಡುತ್ತಿದ್ದವು. ಆ ಮೋಗಲಾಯಿಯೊಳಗಿನ ಗೋಸಂಪತ್ತೆಲ್ಲಿ! ಆಂಗ್ಲಾಯಿಯೊಳಗಿನ ದನಗಳ ದಾರಿದ್ರ್ಯವೆಲ್ಲಿ?

ದನಗಳ ದೈನ್ಯದಿಂದ ಹಿಂದುಸ್ಥಾನದಲ್ಲಿ ಪೈರು ಕುಗ್ಗಿತು; ಹಾಲು ತುಟ್ಟಿಯಾಯಿತು; ರೋಗದ ವ್ಯಾಪ್ತಿಯೂ ಬೆಳೆಯಿತು; ಇರುವೆಗಳಂತೆ ಜನರು ಮಡಿಯಹತ್ತಿದರು. ಕಳೆದ ೬೦ ವರುಷಗಳಲ್ಲಿ ಕಾಳುಕಡಿಗಳ ದರವು ಆರೇಳು ಪಟ್ಟು ಬೆಳೆದರೆ, ಹಾಲಿನ ದರವು ೪೦ ಪಟ್ಟು ಏರಿತು! ಲಾಲಾ ಸುಖದೇವ ಸಿಂಹರವರು ದಿಲ್ಲಿಯೊಳಗಿನ ದ್ವಿತೀಯ ಅಖಿಲ ಭಾರತೀಯ ಗೋಪರಿಷತ್ತಿನಲ್ಲಿ ಈ ಕುರಿತು ಉಲ್ಲೇಖ ಮಾಡಿದರು. ೧೮೫೭ ನೇ ಇಸ್ವಿಯಲ್ಲಿ ರೂಪಾಯಿಗೆ ೬೯ ಶೇರು ಗೋಧಿ ಸಿಗುತ್ತಿತ್ತು; ರೂಪಾಯಿಗೆ ೪ ಮಣ ಹಾಲು ಸಿಗುತ್ತಿತ್ತು. ಏನು ದುರ್ಭಾಗ್ಯ ನೋಡಿ! ಅದೇ ೧೯೧೮ ನೇ ಇಸ್ವಿಯಲ್ಲಿ ರೂಪಾಯಿಗೆ ೫।। ಶೇರು ಗೋಧಿ, ನಾಲ್ಕು ಶೇರು ಹಾಲು ಸಿಗಹತ್ತಿತು. ನೋಡಿರಿ, ನಮ್ಮ ದುರ್ಭಾಗ್ಯದ ಪರಮಾವಧಿ! ಅಕಬರನ ಕಾಲಕೀರ್ದಿಯಲ್ಲಿ ದಿನಾ ೭೪ ಶೇರು ಹಾಲು ಕೊಡುವ ಆಕಳಿಗೆ ಒಂದು ರೂಪಾಯಿ ಕೊಟ್ಟರಾಯಿತು. ೪೦ ವರ್ಷಗಳಲ್ಲಿ ಇದೇ ಆಕಳಿನ ಬೆಲೆಯು

ರೂಪಾಯಿ ೧೫೦ ಆಯಿತು. ಈಗ ೪೦೦ ರೂಪಾಯಿ ಕೊಟ್ಟರೂ ಈ ಆಕಳು ಸಿಕ್ಕಿದರೆ ನಾವು ಭಾಗ್ಯವಂತರಾದೆವು. ಈ ಸ್ಥಿತಿಯು ದನಗಳ ದೈನ್ಯದ ಮೂಲಕವಾಗಿಯೇ ಎಂದು ಹೇಳಲಿಕ್ಕೆ ಕಾರಣವಿದೆ. ಹಿಂದುಸ್ಥಾನದಲ್ಲಿ ಹಾಲಿನ ದರ ಬೆಳೆದಂತೆ ಅಮೇರಿಕೆಯಲ್ಲಾಗಲೀ, ಬ್ರಿಟನದಲ್ಲಾಗಲೀ ಬೆಳೆಯಲಿಲ್ಲ. ಇಲ್ಲಿಗಿಂತ ಅಲ್ಲಿ ಹಾಲು ೧೫-೧೬ ಪಟ್ಟಿನಿಂದ ಅಗ್ಗವಿದೆ. ಹಾಲಿನ ಮಹರ್ಘತೆಯಿಂದ ಹಿಂದುಸ್ಥಾನದಲ್ಲಿ ಹುಟ್ಟಿದ ಶಿಶುಗಳು ಬಹು ಬೇಗ ಸಾಯುತ್ತವೆ. ನೂರಕ್ಕೆ ಹಂದಷ್ಟು ಶಿಶುಗಳು ಹುಟ್ಟಿದ ಒಂದು ವರುಷದಲ್ಲಿಯೇ ನಿಜಧಾಮಕ್ಕೆ ತೆರಳುತ್ತವೆ. ಮನುಷ್ಯರು ಸಾಯುವ ಪ್ರಮಾಣವೂ ಹೆಚ್ಚು; ಆಯುರ್ಮಾನವೂ ಕಡಿಮೆ. ೧೦ ಲಕ್ಷಕ್ಕೆ ೩೦ ಮಂದಿಗಳಂತೆ ಹಿಂದುಸ್ಥಾನದಲ್ಲಿ ಸತ್ತರೆ, ಬ್ರಿಟನದಲ್ಲಿ ೧೪ ರಂತೆ ಸಾಯುತ್ತಾರೆ. ಹಿಂದುಸ್ಥಾನದಲ್ಲಿ ಆಯುರ್ಮಾನವು ೨೪; ಬ್ರಿಟನದಲ್ಲಿ ೪೬ ವರುಷ.

ಈ ಅನರ್ಥಗಳಿಗೆಲ್ಲ ಕಾರಣವ್ಯಾವದು ಗೋಧನವನ್ನು ನಾವು ಜಾಗ್ರತೆಯಿಂದ ಜೋಪಾನ ಮಾಡುವದಿಲ್ಲ. ಬುದ್ಧಿ ಸುರಾಕೆಯಿಂದ ಕಾಮಧೇನುವಾದ ಗೋವನ್ನು ಕಟುಕರಿಗೆ ಮಾರುತ್ತೇವೆ; ದೇಶಾಂತರಕ್ಕೆ ಕಳುಹುತ್ತೇವೆ. ಸಂಪತ್ತು-ಮಕ್ಕಳಿಗೆ ಹಾಲಿನ ಪೂರೈಕೆ ಮಾಡದೆ ಬೇಗನೇ ಯಮಸದನಕ್ಕಟ್ಟುತ್ತೇವೆ. ವಿರಹತಾಪವನ್ನು ಸಹಿಸಲಿಕ್ಕಾಗದೆ ನಾವೂ ಅವರನ್ನು ಬೇಗನೇ ಬೆನ್ನಟ್ಟುತ್ತೇವೆ. ಈ ಸ್ಥಿತಿಯು ತೀರ ಶೋಚನೀಯವು. ನಮ್ಮ ಹಿರಿಯರು ಗೋಪಾಲನೆಯನ್ನು ನಮಗೆ ವಿಧಿಸಿದ್ದರು. ಗೋವುಗಳ ಪೂಜೆ, ಆವುಗಳ ಸಂರಕ್ಷಣೆಗಳನ್ನು ಮಾಡಲು ನಮಗೆ ಧರ್ಮಬಂಧನವಿತ್ತು. ಇದು ಗೋವುಗಳ ಉಪಕಾರಕ್ಕಾಗಿ ಅಲ್ಲ, ನಮಗಾಗಿಯೇ; ನಮ್ಮ ಹಿತಕ್ಕಾಗಿಯೇ. ಧರ್ಮಬುದ್ಧಿಯನ್ನೂ, ಧರ್ಮಾಜ್ಞೆಯನ್ನೂ ಬಿಟ್ಟುಕೊಟ್ಟರೆ, ಪ್ರಾಪಂಚಿಕ ಸುಖಕ್ಕಾಗಿಯೇ, ಐಹಿಕ ಹಿತಕ್ಕಾಗಿಯೇ ಗೋವುಗಳ ಪಾಲನವನ್ನು ಪುರಸ್ಕರಿಸಲು ನಾವು ಬದ್ಧರಿದ್ದೇವೆ. ಗೋಪಾಲನದಿಂದ ನಾವು ಆಯುಷ್ಮಂತರಾಗುವೆವು; ಆರೋಗ್ಯವಂತರಾಗುವೆವು; ಮಕ್ಕಳುಮರಿಗಳು ಸುಖವಾಗಿರುವರು; ನಮ್ಮ ಹೊಲಗಳು ವಿಶೇಷ ಬೆಳೆ ಕೊಡುವವು; ಒಂದೇ ಶಬ್ದದಿಂದ ಹೇಳಬೇಕಾದರೆ ಸಂತತಿ-ಸಂಪತ್ತುಗಳು ಗೋಪಾಲನೆಯಿಂದ ನಮಗೆ ಪ್ರಾಪ್ತವಾಗುವವು. ಮೇಲೆ ಧರ್ಮಪಾಲನ ಮಾಡಿದ ಶ್ರೇಯಸ್ಸೂ ಪ್ರಾಪ್ತವಾಗುವದು. ಸಕಲ ಪ್ರಕಾರಗಳಿಂದ ಲೂ ಕ್ಷೇಮಕರವಾದ ಗೋಸಂರಕ್ಷಣವನ್ನು ಸಮಸ್ತರೂ ಕೈಕೊಂಡು ಉದ್ಧಾರ ಮಾಡಿಕೊಳ್ಳಬೇಕೆಂದು ನಾವು ಅಗ್ರಹಪೂರ್ವಕ ಬಿನ್ನೈಸುವೆವು.

ಸ್ಫುಟ ಸೂಚನೆಗಳು.

೧. ಸಜ್ಜನರು ಸಹ ಮಹಾತ್ಮರಿಗೆ ಖಾದಿಯ ಮೇಲೆ ಭಕ್ತಿಯೆಂದು ಹೇಳಿಯುವದನ್ನು ನಾವು ನಿಷ್ಯವೂ ನೋಡುತ್ತಿರುತ್ತೇವೆ. ಖಾದಿ ಮರುಳಿನ ಕುರಿತು ಮಿಸ್ಟರ್ 'ಹಿಫ್ ಹಿಲ್' ನೇಶನ್ಸ್, ಅಂದರೆ, ಸಮಸ್ತ ರಾಷ್ಟ್ರಗಳ ಜನರು ಎಂಬ ಲೇಖಮಾಲೆಯಲ್ಲಿ ಪ್ರಕಟಗೊಂಡಿದ ಗ್ರಂಥಮಾಲೆಯಲ್ಲಿ ಹೆಮರ್ಟನ್‍ರವರು ವಿಚಾರಣೀಯವಾದ ಮಾಹಿತಿಯನ್ನು ಪೂರೈಸಿರುವರು. ಆ ಮಾಲೆಯೊಳಗಿನ ಎಳು ಗ್ರಂಥಗಳ ಮೇಲಿಂದ ಕೈಯಿಮಗ್ಗದೊಳಗಿನ ದೇಶಬಾಂಧವರೆಲ್ಲರು ಗಾಂಧಿಯವರ ಖಾದಿಯ ಮರುಳಿನ ಸುಸಂಗತತನವನ್ನು ಸಪ್ರಮಾಣ ಸಿದ್ಧಪಡಿಸಿರುವರು. ಗ್ರೀಸ ದೇಶದೊಳಗಿನ ಕುಮಾರಿಯರು ಅಪ್ಪಾರೂಢರಾಗಲೂ ರೊಗರಿಯ ವೇಳೆ ನೂಲು ತೆಗೆಯುತ್ತಿರುತ್ತಾರೆ. ಕೈ ನೂಲಿನಿಂದ ತಯಾರಾದ ಅರಿವೆಯು ಉತ್ತಮ ಪ್ರತಿಯದೆಂದು ಹೆಮರ್ಟನ್‍ರವರು ಪ್ರಶಂಸೆ ಮಾಡಿರುವರು. ಹಂಗೇರಿಯಲ್ಲಿ ಬೆಟ್ಟ ಪ್ರದೇಶದ ಮೇಲೆ ವಾಸಿಸುವ ಸ್ತ್ರೀಯರು ಕಾರಣಾಂತರಗಳಿಂದ ಬಟ್ಟೆಯನ್ನು ಇಳಿದೇಹವಾಗಲೂ ನೂಲುತ್ತಿರುತ್ತಾರೆ. ಅಯರ್ಲಂಡದೊಳಗಿನ ಗ್ರಾಮಾಂತರಗಳಲ್ಲಿ ಪುರಾತನ ಕಾಲದ ಕೈಮಗ್ಗಗಳು ಇನ್ನೂ ತಿರುಗುತ್ತಿರುತ್ತವೆ. ಇವುಗಳ ಮೇಲೆ ತಯಾರಾದ ನೂಲಿನಿಂದ ನೇಯ್ದ ಅರಿವೆಯನ್ನೂ ಮೆಂಚೆಸ್ಟರದೊಳಗಿನ ಅಧುನಿಕ ಯಂತ್ರಗಳ ಸಾಧನದಿಂದ ತಯಾರಾದ ಅರಿವೆಯನ್ನೂ ಹೋಲಿಸಿ ನೋಡಿದರೆ, ಮೆಂಚೆಸ್ಟರದ ಅರಿವೆಯು ಕೈನೂಲಿನ ಅರಿವೆಯ ಜೊತೆಗೆ ಸೇರಲಿಕ್ಕೆ ಸಹ ಅಯೋಗ್ಯವಾಗಿರುತ್ತದೆಂದೂ, ಇದನ್ನು ನೋಡಿದೊಡನೆ ಬುದ್ಧಿಯು ಸ್ತಂಭಿತವಾಗುತ್ತದೆಂದೂ ಗ್ರಂಥಕಾರರು ಬರೆದಿಟ್ಟಿರುವರು. ಪಾಲೆಸ್ಟೈನದಲ್ಲಿ ಬೆದ್ದೌಯಿನ್ ಎಂಬ ಜಾತಿಯ ಹೆಣ್ಣುಮಕ್ಕಳಿರುವರು. ಇವರು ಯಾತ್ರಿಕರ ಗಡ್ಡವಲ್ಲದ ಹತ್ತಿ ನೂಲು ನೂಲುವ ವ್ರತವನ್ನು ಅಖಂಡವಾಗಿ ನಡೆಸುತ್ತಾರೆ. ಬೇರೂದೇಶದೊಳಗಿನ ಸ್ತ್ರೀಯರು ಸಾಂಸಾರಿಕ ಕಾರ್ಯಗಳನ್ನೆಲ್ಲ ಸಾಗಿಸಿ ಉಳಿದ ಸಮಯದಲ್ಲಿ ನೂಲುತ್ತಾರೆ. ಮತ್ತು ಸಂಸಾರದ ಖರ್ಚಿಗೆ ತಗಲುವ ಅರಿವೆಯನ್ನೆಲ್ಲ ತಾವೇ ಪರಿಶ್ರಮದಿಂದ ನೆಯುತ್ತಾರೆ. ಪೋಲಂಡ ದೇಶದ ನಾಗರ ಜಿಲ್ಹೆಯಲ್ಲಿ ಕೈಮಗ್ಗಗಳೂ, ಕೈಮಗ್ಗಕಸಬಿನ ವಿಶೇಷ ಪ್ರತಿಷ್ಠೆ ಇದೆ. ಅಲ್ಲಿ ಇದೊಂದು ದೊಡ್ಡ ಜೀವನೋಪಾಯವು. ದೇಸಾಯಿಗಾರರಂತು ತಮ್ಮಲ್ಲಿ ನೂತು ನೇಯ್ದ ಅರಿವೆಗಳನ್ನಷ್ಟೇ ಉಪಯೋಗಿಸುತ್ತಾರೆ. ಇದರಿಂದಲೇ ಅಲ್ಲಿಯ ದೇಸಾಯಿಗಾರರು ಖ್ಯಾತಿ ಪಡೆದಿರುವರು. ಹೆಮರ್ಟನ್‍ರವರ ಗ್ರಂಥಾಧಾರದಿಂದ ದೊರೆತ ಮಾಹಿತಿ ಇದು. ಕೈನೂಲಿನ ಮಹತ್ವವು ಎಷ್ಟು? ಅದು ಎಷ್ಟು ಸಾರ್ವತ್ರಿಕವಾಗಬೇಕು? ಅದರಿಂದ ಪ್ರಜೆಗಳಲ್ಲುಂಟಾಗುವ ಸ್ವಾವಲಂಬನದ ಪ್ರವೃತ್ತಿ ಎಷ್ಟು? ಎಂಬುದನ್ನೆಲ್ಲ ಸಜ್ಜನರು ಸಾವಧಾನ ಚಿತ್ತದಿಂದ ಗ್ರಹಿಸಿ, ಖಾದಿಯ ಪ್ರಸಾರವನ್ನು ಕೈಕೊಳ್ಳಬೇಕು. ಖಾದಿಯಿಂದ ಆಗುವ ಲೋಕಕಲ್ಯಾಣವನ್ನು ಬಂಗಾಲದ ವಿಖ್ಯಾತ ಖಾದಿಭಕ್ತರಾದ ಸರ್ ಪಿ. ಸಿ. ರೇರವರು ಪ್ರತ್ಯಕ್ಷ ಸಿದ್ಧಗೊಳಿಸಿ ತೋರಿಸಿರುವರು. ಪಾಶ್ಚಾತ್ಯ ದೇಶಗಳಲ್ಲಿಯೂ ಗಾಂಧಿಯ ಮರುಳು ಇದ್ದೇ ಇದೆ. ಇದರ ಉಪಪತ್ತಿಯನ್ನು ನಾವೆಲ್ಲರೂ ತಿಳಿದುಕೊಂಡು ಖಾದಿಯನ್ನು ಪುರಸ್ಕರಿಸಬೇಕಾಗಿ ನಮ್ಮ ಪ್ರಾರ್ಥನೆ ಇದೆ.

---

೨. ಮದ್ರಾಸದ ಗಾಂಧಿ ಭಕ್ತರಾದ ಶ್ರೀ ಚಕ್ರವರ್ತಿ ರಾಜಗೋಪಾಲಾಚಾರ್ಯರವರು ಆರರಸರ ಪ್ರಜಾಕಲ್ಯಾಣದ ಅಂತರಂಗವನ್ನು ಹೊರಗೆಡಹುತ್ತಿರುವರು. ಹೆಂಡಗುಡುಕತನವು ಮಹಾಪಾಪವೆಂಬುದು ಈಗ ಎಲ್ಲರಿಗೂ ಗೊತ್ತಿಗೆ. ಅದರಿಂದ ಶರೀರನಾಶ, ಬುದ್ಧಿಭ್ರಂಶಗಳುಂಟಾಗಿ ಮಾನವನು ಈಹ-ಪರದಲ್ಲಿಯೂ ನಾಶಹೊಂದುತ್ತಾನೆಂಬುದು ಈಗ ಯಾರಿಗೂ ಹೇಳಬೇಕಾಗಿಲ್ಲ. ಮೊಂಟೆಗ್ಯು ಸ್ವರಾಜ್ಯದಲ್ಲಿ ಆರರಸರು ಆರೋಗ್ಯ ಖಾತೆಯ ಅಧಿಕಾರಸ್ಥಾನಗಳನ್ನು ಕಲ್ಪಿಸಿ ಪ್ರಜಾಕಲ್ಯಾಣದ ವೇಷ ಬರಕೊಂಡರು. ಈ ಅಧಿಕಾರಿಗಳಿಗೆ ಕಾಲರಾ, ಹಳಿಜ್ವರ ಮುಂತಾದ ರೋಗನಿವಾರಣೋಪಾಯಗಳನ್ನು ಪ್ರಜೆಗಳಿಗೆ ಬೋಧಿಸಿ, ಆರೋಗ್ಯಪಾಲನ ಯೋಜನೆಯಾಗಬೇಕಾಗಿ ಸೂಚನೆ ಇತ್ತು. ಕೆಲವು ಅಧಿಕಾರಿಗಳು ಸಹಜವಾಗಿ ಮದ್ಯಪಾನನಿಷೇಧವನ್ನು ಬೋಧಿಸಿದರೆ, ಆರೋಗ್ಯವು ಭದ್ರವಾಗಿರುವದೆಂದು ತಿಳಕೊಂಡು ಮದ್ಯಪಾನದ ಚಾಲಕರಾದ ಆರರಸರಿಗೆ ಈ ಉಪದೇಶವನ್ನು ತಾವು ಬೋಧಿಸಬಹುದೇನು? ಎಂದು ಪ್ರಶ್ನಿಸಿದರು. ಈ ಕುರಿತು ಮದ್ರಾಸ ಪ್ರಾಂತಿಕ ಸರಕಾರವು ಕೊಟ್ಟ ಉತ್ತರವು ಮನನೀಯವಿದೆ; ಹೆಂತನೀಯವಿದೆ. "ಸರಕಾರಿ ಆರೋಗ್ಯ ಖಾತೆಯವರು ಮದ್ಯಪಾನದ ನಿಷೇಧ ಕಾರ್ಯವನ್ನು ಕೈಕೊಳ್ಳಬಾರದೆಂದು ಸರಕಾರದ ಅಭಿಪ್ರಾಯವದೆ." ಹೀಗೆ ಅಭಿಪ್ರಾಯಪಡಲು ಕಾರಣವೇನು? ಆರೋಗ್ಯಖಾತೆಯವರು ಎಲ್ಲಿ ತಪ್ಪಿದ್ದರು? ಎಂಬುವ್ಯಾವುದೂ ವಿವರಿಸಲಾಗಲಿಲ್ಲ. ಮದ್ಯಪಾನವನ್ನು ಸಮರ್ಥಿಸಲು ಉಪಾಯ ಕಾಣದೆ ಮದ್ರಾಸ ಸರಕಾರವು ಸಾಚಿಕೆಗೇಡಿಯಾಗಿ, ಈ ಪರಿಯಿಂದ ಜಡ ಪ್ರಜೆಗಳ ಮೇಲೆ ಅತ್ಯಾಚಾರವನ್ನಾಚರಿಸುವದು ಎಷ್ಟು ಸಲ್ಲದು. ಪ್ರಜೆಗಳ ಕ್ಷೇಮವೇ ರಾಜನ ಕ್ಷೇಮವಾಗಿರುವಾಗ, ಆರರಸರು ೫೬ ಕೋಟಿ ರೂಪಾಯಿ ಆದಾಯಕ್ಕೆ ಹುಚ್ಚಿನಲಿಯ ಆಸೆ ಹಿಡಿದು, ಪ್ರಜೆಗಳನ್ನು ಹೆಂಡಗುಡುಕರನ್ನಾಗಿ ಪರಿಣಮಿಸುವದು ಕರ್ತವ್ಯಹೀನತೆಯು ಇದನ್ನು ಬಿಟ್ಟು ಇವರ ಚಟಕ್ಕೆ ನಿಷೇಧ ಮಾಡಲು ಯಾರಿಗೆ ಸಾಧ್ಯವಿದೆ?

---

೩. ಜಿಲ್ಹಾ ಲೋಕಲ್ ಬೋರ್ಡಿನ ಇಲೆಕ್ಷನದಲ್ಲಿ ಶ್ರೀ ಕರ್ಕಿಯವರು ಸೋತುಹೋದದ್ದು ಕೆಲವು ದೇಶಭಕ್ತರ ಕುಹಕಗಳಿಂದಲೇ. ಈಗ ಎಲ್ಲರಿಗೂ ವಿದಿತವಾದ ಸಂಗತಿಯೇ. 'ಧಾರ್ಮಿಕರು', 'ವೃತ್ತಾಂತ' ಎರಡು ಸ್ಫುಟ ಸೂಚನೆಗಳಿಂದಲೂ, ಹೊಸ್ತಾವರದ ಸಿದ್ದಿ ಪತ್ರಗಳ ಪ್ರಕಟಣೆಯಿಂದಲೂ ಶ್ರೀ ಕರ್ಕಿಯವರಿಗೆ ಸೋಲಾಯಿತೆಂದು ಸಿದ್ಧ ಪಡಿಸಲು ಯತ್ನ ಮಾಡಿರುವರು. ನಿಜವಾಗಿ ನಮ್ಮ ಸ್ಫುಟ ಸೂಚನೆಗಳಿಂದ ಶ್ರೀ ಕರ್ಕಿಯವರು ಸೋತುಹೋಗಿದ್ದರೆ, ನಮಗೆ ಆನಂದವೆಂಬುದಾಗುತ್ತಿತ್ತು. 'ವೃತ್ತಾಂತ'ದ ಘೋರದ ಪ್ರರ್ಯಾಯವನ್ನರಿತು ಮತದಾರರು ಮತವಾನ ಮಾಡಿದ್ದರೆ, ನಮಗೆ ಬಹಳ ಸಂತೋಷವಾಗುತ್ತಿತ್ತು; ಮತದಾರರಿಗೂ ಬಹಳ ಹಿತವಾಗುತ್ತಿತ್ತು. ಆದರೆ, ಹಾಗೆ ಒದಗಲಿಲ್ಲೆಂದು ಉತ್ತರ ಇತಿಹಾಸವು ಹೇಳುತ್ತದೆ. ಜಿಲ್ಹಾ ಕಾಂಗ್ರೆಸ ಕಮಿಟಿ, ಹೇರಂಗಡಿಯ

ಗ್ರೆಸು ಕಮಿಟಿ ಮುಂತಾದ ಕೊಂಗ್ರೆಸ ಕಮಿಟಿಗಳು ...ಷವಾಗಿರುವಾಗ, ಅವುಗಳ ವಿದ್ಯಮಾನ ಶ್ರೀ ಶಾಸ್ತ್ರಿ, ರಾ| ಕೊಪ್ಪಿಕರ, ನಾಡಕರ್ಣಿಗಳವರು ಆ ಕಮಿಟಿಗಳ ಕಾರ್ಯದಿಂದ ನೋಟೀಸ ಗಳನ್ನು ಹೊರಡಿಸಿದ್ದೂ, ಠರಾವುಗಳನ್ನು ಹೊರಡಿಸಿದ್ದೂ ಇವೆಲ್ಲ ಘಟಿಕೋತ್ಸವನ ಪೇಟೆಯೊಳು ಈಗ ... ಈ ಸಭ್ಯ ಗೃಹಸ್ಥರನ್ನು ... ಮತದಾರರಲ್ಲಿ ಜಾಗೃತಿಯುಂಟಾಗಿರುವ ... ನಮೂದಿಸಿದೆವು. ರಾ| ನಾಡಕರ್ಣಿಗಳವರು ... ಸಂಗತಿಗಳನ್ನು ಪ್ರಕಟಿ... ನಾವು ... ಇನ್ನುಮುಂದೆ ತಮ್ಮ ... ಯನ್ನು ಕೊಂಡಿರಾಯಿತು.

---

೪. ... ಶ್ರೀ ಕ್ಯಾನಭಾಗರು ... ಅವರಿಗೆ ಶ್ರೀ ಕರ್ಕಿಯವರ ಸಮರ್ಥನೆಯು ಸಮಾಧಾನಕರವಾಗಿ ತೋರಿದ್ದರೆ, ... ಸಮಾಧಾನಕರವಾಗಿ ತೋರುತ್ತೇನೆ ... ರಾ| ಕ್ಯಾನಭಾಗರು ... ಶ್ರೀ ಕರ್ಕಿಯವರ ... ಸಮಾಧಾನ ... ಎಂದು ... ಈ ಸಂಗತಿ ... ಆಗಲೇ ... ಶ್ರೀ ಕರ್ಕಿಯವರು ... ಅವನವನ್ನು ತೋರಿ ... ಅವರಿಗೆ ... ಅವರಿಗಿಂತ ಕಡಿಮೆ ... ಪ್ರತಿಸ್ಪರ್ಧಿಗಳ ವ್ಯಕ್ತಿದ್ವೇಷ ಹಿಡಿದು ಮತ ಕೊಡುವ ... ಪ್ರತಿಸ್ಪರ್ಧಿಗಳೆಂದು ... ರಾ| ... ಶ್ರೀ ಕರ್ಕಿ ... ಶ್ರೀ ಕರ್ಕಿಯವರು ... ಶ್ರೀ ... ಕರ್ನಾಟಕದೊಳಗಿನ ಪ್ರಮುಖರಲ್ಲಿ, ಅವರು ಸಶಾಸ್ತ್ರ ... ರಾ| ಕ್ಯಾನಭಾಗರ ... ಶ್ರೀ ಕರ್ಕಿಯವರ ... ಅವರ ಹೇಳಿಕೆ ... ಹೊಸ್ತ್ರಾವರದೊಳಗಿನ ... ವಾಚಕರಿಗೆ ... 'ಧುರೀಣ' ... ಹೇಳುವಂತೆ, ... ಇದರೊಳಗೆ ... "... " ಪ್ರಕಟಿಸಿದಂತೆ, ... 'ಧುರೀಣ'ರಾದ ಆಪ್ತ ವ್ಯಕ್ತಿಗಳು ... ಹೊರಗೆ ... ಹಕೀಕತನ್ನು 'ಧುರೀಣ' ... ಸ್ಪಷ್ಟ ಶಬ್ದಗಳಿಂದ ಒಪ್ಪಿಕೊಂಡಿದ್ದರೂ, ಅವರ ಬರ ... ಮೇಲಿಂದ ... ಹೊರಗೆ ಹೋಗಿದ್ದರೆಂದು ಅನುಮಾನಿಸಲ್ಪಡುತ್ತಿಲ್ಲ. 'ಧುರೀಣ' ... ಇನ್ನೂ ... ತೊಡಗಿದ್ದರಿಂದ ... ಇದ್ದದ್ದನ್ನು ನೋಡಿ, ಮುಂದೆ ಯಥಾವಕಾಶ ಬರೆಯಲಿಚ್ಛಿಸುವೆವು.

— ಬೆಂಗಳೂರಿನಲ್ಲಿ ನೀರಿನ ... ಕಾರಗೋ ... ಮ್ಯುನಿಸಿಪಾಲಿಟಿಯವರು ೩೦,೦೦೦ ರೂಪಾಯಿಗಳನ್ನು ಖರ್ಚು ಮಾಡಿ ನೀರಿನ ಪೂರೈಕೆ ಮಾಡುತ್ತಿದ್ದಾರೆ.

ಸ್ಥಾನಿಕ ವೃತ್ತಾಂತ.

ಕುಮಟಾ— ಮುಂಜಾವಿಗೆ ಚಳಿ ಬೀಳಹತ್ತಿದೆ. ಮೋಡಗಳಾಗುತ್ತಿವೆ. ಕೆಲವೆಡೆ ಸಣ್ಣ ಸಣ್ಣ ಮಳೆ ಹನಿಸಿದ ಸುದ್ದಿ ಇದೆ. ನೀರಿನ ಬರಗಾಲವೂ ಈ ವರುಷ ವಿಶೇಷವಾಗಿರುವದು.

ತಾಲೂಕ ಲೋಕಲ್ಬೋರ್ಡಿನ ಸಭೆಯು ಕಳೆದ ೧೨ನೇ ತಾರೀಖಿಗೆ ಸೇರಿ, ಮಿ| ವಿಶ್ವೇಶ್ವರ ತಿಮ್ಮಣ್ಣ ಹೆಗಡೆ, ವಕೀಲ ಇವರಿಗೆ ಅಧ್ಯಕ್ಷರಾಗಿ ಆರಿಸಲಾಗಿದೆ. ಸ್ಟಾಂಡಿಂಗ ಕಮಿಟಿಯೊಂದು ನೇಮಿಸಲಾಯಿತು.

ಮುಕೂರಿನ ಬ್ರಹ್ಮಚಾರಿ ಶ್ರೀ ವಿನಾಯಕ ಮಹಾರಾಯರು ಕಳೆದ ರವಿವಾರಕ್ಕೆ ಗೋಕರ್ಣಕ್ಕೆ ತೀರ್ಥಾಟನ ಮಾಡಿದರು. ಶ್ರೀ ಮಹಾಬಲೇಶ್ವರ ದೇವಸ್ಥಾನದಲ್ಲಿ ಶ್ರೀಮದ್ಭಗವದ್ಗೀತೆಯ ಮೇಲೆ ಪ್ರವಚನ ಕೊಟ್ಟರು.

ನಾಡವರ ಸಂಘದ ೭ನೇ ಮಹಾಸಭೆಯು ರಾ| ಸ. ಉ. ನಾಯಕ ಇವರ ಅಧ್ಯಕ್ಷತೆಯು ಕೆಳಗೆ ಗೊನೆಹಳ್ಳಿಯಲ್ಲಿ ಬುಧವಾರ, ಗುರುವಾರ, ಶುಕ್ರವಾರ ನೆರೆಗುವದು. ದೇಸಾಯಿದ ಉಪನ್ಯಾಸಗಳು, ಗೋಪಾಲನದ ಮಾಹಿತಿ, ದಶಾವತಾರದ ಆಟ ಮುಂತಾದವುಗಳು ನಡೆಯುವವು. ಮಿ| ಎಚ್. ಎಮ್. ನಾಯಕ ಇವರು ಸ್ವಾಗತಾಧ್ಯಕ್ಷರು.

ಸಾಭಾರ ಸ್ವೀಕಾರ.

ಸರಸ್ವತಿ — ೬ನೇ ವರ್ಷದ ಪ್ರಥಮ ಸಂಚಿಕೆ. ಸಂಪಾದಿಕೆ ಮತ್ತು ಪ್ರಕಾಶಿಕೆ—ವಾ. ಕಲ್ಯಾಣಮ್ಮ, ಸರಸ್ವತೀ ಕಾರ್ಯಾಲಯ, ಚಾಮರಾಜಪೇಟೆ ಬೆಂಗಳೂರ ಸಿಟಿ ವಾ. ವರ್ಗಣಿ ರೂ ೩.

ಕೊಡಗಿನ ರಾಮೇಶ್ವರ ಕ್ಷೇತ್ರ— ಪ್ರಕಾಶಕ- ಕೊಡಗಿನ ರಾಮೇಶ್ವರ ದೇವಾಲಯದ ಕಾರ್ಯನಿರ್ವಾಹಕ ಮಂಡಳಿ. ಬೆಲೆ ೧ ರೂ.

ತಪ್ಪು ತಿದ್ದು:—೩ನೇ ಪುಟದಲ್ಲಿ ಬ್ರಹ್ಮಚಾರಿ ಆಶ್ರಮವು ಸ್ಥಾಪನೆಯಾಗಿ ೧೫ ವರ್ಷಗಳಾದವು, ಎಂದು ಬರೆದಿದೆ. ಅದರ ಬದಲು ೩ ವರ್ಷಗಳಾದವೆಂದು ತಿದ್ದಬೇಕು.

ಸಿರಸಿ—ಇಲ್ಲಿಂದ ಕುಮಟೆಗೆ ಹೋಗುವ ಟಪಾಲು ಹಾವೇರಿ-ಹುಬ್ಬಳ್ಳಿ-ಅಂಕೋಲಾ ಮಾರ್ಗವಾಗಿ ಸುತ್ತು ತಿರುಗಿ ಕುಮಟೆಗೆ ಮೋಟಾರಿನಿಂದಲೇ ಹೋಗುತ್ತಿತ್ತು. ಪತ್ರಿಕೆಗಳ ದೂರುಗಳನ್ನು ಲಕ್ಷ್ಯಕ್ಕೆ ತಂದು ಟಪಾಲ ಖಾತೆಯವರು ಕುಮಟೆಗೆ ಹೋಗುವ ಟಪಾಲನ್ನು ಜೂನ ೧ನೇ ಯಿಂದ ಟಪಾಲ ಮೋಟರಿನ ಮುಖಾಂತರ ಕಳಿಸುವ ಹುಕುಮು ಮಾಡಿರುವರು.

ಹಾವೇರಿಗೆ ಹೋಗುವ ಟಪಾಲಿನ ಅನಾನುಕೂಲತೆಯ ಹಿತುಯಕ್ಕೂ ಟಪಾಲಖಾತೆಗೆ ಅರ್ಜಿಗಳಾಗಿವೆ. ಹಾವೇರಿಗೆ ಟಾಂಗೆಯ ಮೇಲೆ ಟಪಾಲು ಹೋಯ್ದುವಾಗ ಇಲ್ಲಿಯ ಟಪಾಲು ಸಾಯಂಕಾಲ ೫|| ಘಂಟೆಗೆ ಬಂದಾಗುತ್ತಿತ್ತು. ಮೋಟಾರಿನಿಂದ ಈಗ ಹೋಗುತ್ತಿರುವಾಗ ೪|| ಘಂಟೆ; ಹಾವೇರಿಗೆ ಮುಟ್ಟುವ ಹೊತ್ತು ಮಾರನೇ ದಿನ ಬೆಳಿಗೆ ೮|| ಗೆ. ಮೋಟಾರಿನಿಂದ ಹಾವೇರಿಗೆ ಮುಟ್ಟಲು ಹೆಚ್ಚೆಂದರೆ ೪ ತಾಸು ತಗಲುತ್ತದೆ. ಹೀಗಿದ್ದು ಟಪಾಲನ್ನು ಇಷ್ಟು ಬೇಗ ಬಂದ ಮಾಡುವ ಕಾರಣವೇನೆಂದು ಹಲ್ಬರು ಸವಾಲು ಮಾಡುತ್ತಾರೆ.

ಅಂಕೋಲಾ— ಇಲ್ಲಿಯ ತಾಲೂಕ ಲೋಕಲ್ ಬೋರ್ಡಿನ ಸಭೆಯು ಕಳೆದ ೧೧-೧೨ ನೇಗೆ ಸೇರಿ

ಮೊದಲನೇ ದಿನ ಅಧ್ಯಕ್ಷ ಹಾಗು ಉಪಾಧ್ಯಕ್ಷರು ಚುನಾಯಿಸಲ್ಪಟ್ಟರು. ರಾ| ಭಾಸ್ಕರ ಶ್ರೀನಿವಾಸ ಮುರ್ಡೇಶ್ವರ ... ದಾರರವರು ಅಧ್ಯಕ್ಷರಾಗಿಯೂ ನೇಮಿಸಲ್ಪಟ್ಟರು. ಮಾರನೇ ದಿನ ಕೆಲವು ವಿಷಯಗಳ ಚರ್ಚೆಯಾಯಿತು. ರಾ| ವಿಠೋಬಾ ಮಂಜುನಾಥ ನಾಯಕ ಗುಂಡಬಾಳೆ ಇವರು ಒಂದು ಮಹತ್ವದ ಠರಾವನ್ನು ಸೂಚಿಸಿದರು. ಬೋರ್ಡಿನ ಸಭಾಸದರೆಲ್ಲರೂ ಸಹಕರಿಸಿದ್ದು, ಪ್ರಚಲಿತ ಸಾಂಪತ್ತಿಕ ಸ್ಥಿತಿಯಲ್ಲಿ ಸಭಾಸದರೆಲ್ಲರೂ ಭತ್ತೆ ಕೊಳ್ಳದೆ ದುಡಿಯಬೇಕೆಂದು ಸೂಚಿಸಿದರು. ಇದಕ್ಕೆ ರಾ| ರಾಮಾ ವೆಂಕಣ್ಣ ನ್ಯಾಕರವರು ಅನುಮೋದಿಸಿದರು. ಇದಾದ ಬಳಿಕ, ಅಧ್ಯಕ್ಷರು ಒಂದು ಕಾಯಿದೆಯ ಅಡ್ಡಿಯನ್ನು ತಂದರು. ಕಾರ್ಯಕ್ರಮ ಪತ್ರಿಕೆಯಲ್ಲಿ ಈ ವಿಷಯದ ಉಲ್ಲೇಖವಿರುವದಿಲ್ಲವಾದ್ದರಿಂದ ಇದನ್ನು ಚರ್ಚಿಸಲಾಗದೆಂದರು. ರಾ| ಶೇಷಗಿರಿ ನಾರಣಪ್ಪ ಕಾಮತರವರು ರಾ| ಮುರ್ಡೇಶ್ವರದಾರರವರ ಹೇಳಿಕೆಗೆ ತಲೆದೂಗಿದರು. ಈ ವಿಷಯವನ್ನು ಅಧ್ಯಕ್ಷರ ಅಪ್ಪಣೆಯಿಂದ ಚರ್ಚಿಸಲು ಕಾರ್ಯಕ್ರಮ ಪತ್ರಿಕೆಯೊಳಗಿನ ಕೊನೆಯ ಕಲಮಿನಿಂದ ಅಧಿಕಾರವಿರುವದೆಂದರು. ಆಗ ಅಧ್ಯಕ್ಷರು ಲೇಖಿ ವಿನಂತಿ ಮಾಡಿಕೊಳ್ಳಬೇಕೆಂದರು. ಕೂಡಲೆ ರಾ| ವಿಠ್ಠಲ ಪ್ರಭು, ವಿಶ್ವನಾಥ ಹೆಗಡೆ, ಜೋಗಿ ನ್ಯಾಕ, ರಾಮ ನ್ಯಾಕ, ಬೀರಣ್ಣ ನ್ಯಾಕ, ಅನಂತನ ವಿಠೋಬ ನ್ಯಾಕ ಇವರು ಲೇಖಿ ಅರ್ಜಿ ಕೊಟ್ಟರು. ಅಧ್ಯಕ್ಷರು ಇದನ್ನು ಮುಂದಿನ ಕಮೀಟಿಯಲ್ಲಿ ಚರ್ಚೆಗಿಡುತ್ತೇವಾಗಿ ಹೇಳಿ, ಪ್ರಸಂಗದೊಳಗಿಂದ ಪಾರಾದರು. ಸಭಾಸದರ ಸ್ವಾರ್ಥತ್ಯಾಗದ ಪರೀಕ್ಷೆಯ ಕಾಲವಿದು,

---

ವೃತ್ತಸಾರ.

— ಪುಣೆಯಲ್ಲಿ ಸ್ವರಾಜ್ಯ ಪಕ್ಷದ ಪ್ರಮುಖರಾದ ಶ್ರೀ|| ಶ್ರೀನಿವಾಸ ಅಯ್ಯಂಗಾರ, ಸತ್ಯಮೂರ್ತಿ, ರಂಗಸ್ವಾಮಿ ಅಯ್ಯಂಗಾರ ಮೊದಲಾದವರು ಆರ್ಯಭೂಷಣ ಥಿಯೇಟರನಲ್ಲಿ ಭಾಷಣ ಮಾಡುತ್ತಿರುವಾಗ ಕ್ರೋಧ್ಯವಂತರು ಒಳಗೆ ಗದ್ದಲೆಬ್ಬಿಸಿದರು. ಮತ್ತೊಮ್ಮೆ ಸಭೆಯಾದಾಗಲೂ ಅದೇ ಹಾದಾಯಿತು. ಇದು ಶೋಚನೀಯವು.

— ಯುವಕಮಾಳದಲ್ಲಿ ಚಿಕ್ಕ ಬಾಲಕರದೊಂದು ನಾಟಕ ಮಂಡಳಿಯು ಪ್ರಯೋಗಗಳು ನಡೆದಿವೆ. ನಾಟಕ ಪಾತ್ರಗಳೆಲ್ಲ ೫ ರಿಂದ ೧೨ ವರ್ಷ ವಯದ ಚಿಕ್ಕ ಬಾಲಕರು. ಮತ್ತು ಮುಸಲ್ಮಾನ ಜಾತಿಯ ಹುಡುಗರು ಹಿಂದೂ ದೇವರಾಗುತ್ತಾರೆ.

— ಮಹಾತ್ಮರು ಅಹಮ್ಮದಾಬಾದಿನಿಂದ ಹೊರಟಿರುವರು. ನಾಳೆ ಬೆಂಗಳೂರ ಬಳಿಗೆ ಮಹಾಬಲೇಶ್ವರಕ್ಕೆ ಹೋಗಿ ಮುಂಬಯಿಯ ಪ್ರಾಂತಾಧಿಪರ ಭೆಟ್ಟಿ ಕೊಳ್ಳುವರು. ಬೇಸಾಯ ಕಮಿಶನಿನ ವಿಷಯ ಚರ್ಚೆಯಾಗುವದು.

— ಪಂಡಿತ ಮಾಲವೀಯರವರು ಹಿಂದೂಗಳ ಸಂರಕ್ಷಣೆಕ್ಕಾಗಿ ಹೊಸ ಪಕ್ಷವನ್ನೊಂದು ಸ್ಥಾಪಿಸಿ ಹೊಸ ಇಲೆಕ್ಷನಿನಲ್ಲಿ ತಮ್ಮ ಉಮೇದ್ವಾರರನ್ನು ಜಾಹೀರಪಡಿಸುವರು. ಅಂತು ಇಲೆಕ್ಷನಿನಲ್ಲಿ ಒಳಗ ಪಕ್ಷಗಳ ಗೊಂದಲವಿವೆ.

— ಮುಂಬಯಿಯೊಳಗಿನ ಒಬ್ಬ ಪುರುಷನು ಹೊಸ ಮದುವೆ ಮಾಡಿಕೊಂಡನು. ಆತನಿಗೆ ಹೆಂಡತಿ ಇದ್ದಳು; ಅವಳ ... ವಿರುದ್ಧವಾಗಿ ಈ ಮದುವೆಯಾಯಿತು. ಆದಿಂದ ಆ ಸ್ತ್ರೀಯು ಮನೆಗೆ ಬೆಂಕಿ ಹಚ್ಚಿಕೊಂಡು ಸ್ವತಃ ಸುಟ್ಟು ಹೋದಳು.

— ಪ್ರಾಥಮಿಕ ಶಾಲೆಗಳಲ್ಲಿ ಹ್ಯಾಂಡ್ ಬಾಲ್‌ಗಳ ಮೇಲೆ ನೋಟ ಕಲಿಸುವದಕ್ಕಾಗಿ ಕೊಯಿಮತ್ತೂರಿನ ಮ್ಯುನಿಸಿಪಾಲಿಟಿಯವರು ಒಬ್ಬ ಉಪಾಧ್ಯಾಯನನ್ನು ನೇಮಿಸಬೇಕೆಂದು ನಿರ್ಣಯ ಮಾಡಿರುವರು.

— ರಂಗೂನಿನ ಹೆದ್ದಾರಿಯ ಗ್ರಾಮದಲ್ಲಿ ಒಂದು ಅನರ್ಥ ಒಬ್ಬ ಹುಡುಗನು ಜೇನು ಹುಟ್ಟಿಗೆ ಬೆಂಕಿ ಕೊಡಲುದ್ಯುಕ್ತನಾಗಿ ದೀಪ ಕೋಲು ಹಿಡಿದಿದ್ದನು. ಜೇನು ನೊಣಗಳು ಅವನಿಗೆ ಕಚ್ಚಹತ್ತಿದವು, ಹುಡುಗನು ಗಾಬರಿಯಾದನು; ಕೈಯಲ್ಲಿದ್ದ ದೀಪವನ್ನು ಬಿಟ್ಟುಬಿಟ್ಟನು. ಅದೊಂದು ಗುಡಿಸಲಿನ ಮೇಲೆ ಬಿತ್ತು. ಗುಡಿಸಲಿಗೆ ಬೆಂಕಿ ಹತ್ತಿತು. ಬೆಂಕಿಯು ಅಲ್ಲಿ-ಇಲ್ಲಿ ಹಬ್ಬಿತು. ೫೭ ಮನೆಗಳು ಸುಟ್ಟು ಹೋದವು. ಹುಡುಗನೂ ಸುಟ್ಟು ಹೋದನು. ನಿರಪರಾಧಿ ಜೇನು ನೊಣಗಳ ಮನೆಯನ್ನು ನಾಶಪಡಿಸಲುದ್ಯುಕ್ತನಾದ ಬಗ್ಗೆ ಈ ಶಿಕ್ಷೆ ಏನು?

— ಬಳ್ಳಾರಿಯಲ್ಲಿ ನಾಳೆಯ ಬುಧವಾರಕ್ಕೆ ಸೇರಲಿಕ್ಕಿದ್ದ ದ್ವಿತೀಯ ಕರ್ನಾಟಕ ಏಕೀಕರಣ ಪರಿಷತ್ತಿಗೆ ಬೆಳಗಾವಿಯ ವಕೀಲರೂ, ಜಿಲ್ಲಾ ಬೋರ್ಡಿನ ಪ್ರೆಸಿಡೆಂಟರೂ ಆಗಿರುವ ಶ್ರೀ ಪಂಡಿತ ರಾಯಪ್ಪ ಚಿಕ್ಕೋಡಿಯವರು ಅಧ್ಯಕ್ಷರಾಗಿ ನೇಮಕಹೊಂದಿರುವರು.

— ಚಹದ ತೋಟದಲ್ಲಿ ಕೆಲಸ ಮಾಡುವ ಧರೆಪ್ಪನೆಂಬ ಕೂಲಿಕಾರನಿಗೆ ವಿಲ್ಸನ್ ಎಂಬ ಒಡೆಯನು ಹೊಡೆದು ಕೊಂದನು. ಖಟ್ಲೆಯಾಗಲು, ೫೦೦ ರೂಪಾಯಿ ದಂಡವಾಯಿತು. ಸರಕಾರದವರು ಹೈಕೋರ್ಟಿಗೆ ಅಪೀಲು ಮಾಡಿ ಖಟ್ಲೆಯನ್ನು ಪುನರ್ವಿಚಾರಣೆಗೆ ತರಿಸಿರುವರು.

— ಪಾಟ್ನಾದಲ್ಲಿ ಬಿಹಾರ ಸರಕಾರದವರು ದೇಶೀ ವೈದ್ಯ ಶಾಸ್ತ್ರದ ಅಭ್ಯಾಸಕ್ಕಾಗಿ ಒಂದು ಆಯುರ್ವೇದಿಕ ಹಾಗು ಒಂದು ಟಿಬ್ಬಿ ಕಾಲೇಜನ್ನು ಜುಲೈ ತಿಂಗಳಲ್ಲಿ ಹೊರಡಿಸುವವರಿದ್ದಾರೆ.

— ಪಂಚಮಹಾಲ ಜಿಲ್ಲಾ ಬೋರ್ಡಿನವರು ಶಾಲಾ ಹುಡುಗ-ಹುಡುಗಿಯರಿಗೆ ಶಾರೀರಿಕ ಶಿಕ್ಷಣ ಕೊಡಲು ಒಂದು ಯೋಜನೆಯನ್ನು ತಯಾರಿಸಿರುವರು ಅದರಂತೆ ಆ ಜಿಲ್ಲೆಯಲ್ಲೆಲ್ಲ ಗರಡೀಮನೆಗಳು ಸ್ಥಾಪಿಸಲ್ಪಟ್ಟವೆ

— ಬೆಳಗಾವಿಯ ಜಿಲ್ಲಾ ಬೋರ್ಡಿನವರು ಅಕ್ಷಯ ಆಯುರ್ವೇದ ಉತ್ತೇಜಕ ಮಂಡಳಕ್ಕೆ ೧೫೦೦ ರೂಪಾಯಿಗಳನ್ನು ಅರ್ಪಿಸುವರು. ಮ್ಯುನಿಸಿಪಾಲಿಟಿಯವರು ೫೦೦ ರೂಪಾಯಿಗಳನ್ನಿತ್ತಿರುವರು. ಆಯುರ್ವೇದ ಉತ್ತೇಜಕ ಮಂಡಳದವರು ಧರ್ಮಾರ್ಥ ಆಯುರ್ವೇದ ಚಿಕಿತ್ಸಾಲಯವನ್ನೂ, ಶಾಲೆಯನ್ನೂ ಸ್ಥಾಪಿಸಲಿರುವರು. ಶಿಕ್ಷಣವು ಆರ್ಯ ಹಾಗು ಆಂಗ್ಲ ಪದ್ಧತಿಯಿಂದ ಕೊಡಲ್ಪಡುವದು; ಕನ್ನಡ ಹಾಗು ಮರಾಠಿಯಿಂದ ಶಿಕ್ಷಣವು ಕೊಡಲ್ಪಡುವದು. ಇಂಗ್ಲಿಷ ಹಾಗು ಸಂಸ್ಕೃತದ ಸಾಮಾನ್ಯ ಜ್ಞಾನವಿದ್ದವರು ಈ ಯೋಜನೆಯ ಲಾಭ ಪಡೆಯಬಹುದು. ಜೂನ ೧೫ನೇ ತಾರೀಖಿನೊಳಗೆ ಬೆಳಗಾವಿಯ ಆಯುರ್ವೇದ ಉತ್ತೇಜಕ ಮಂಡಳದ ಸೆಕ್ರೆಟರಿಯವರಿಗೆ ಬರೆದುಕೊಳ್ಳಬೇಕು.

— ಮದ್ಯಪಾನ ಪ್ರತಿಬಂಧಕ್ಕೆ ವಿಶೇಷ ಖರ್ಚು ತಗಲುವದಿಲ್ಲವಾಗಿಯೂ, ಅದರಿಂದ ಜನರ ಸಾಂಪತ್ತಿಕ ಸ್ಥಿತಿಯು ಸುಧಾರಿಸುತ್ತದಾಗಿಯೂ ಅಮೇರಿಕೆಯ ಸರಕಾರವು ಲೆಕ್ಕದಿಂದ ಸಿದ್ಧಮಾಡಿದೆ.

— ಮೈಸೂರ ಸಂಸ್ಥಾನದೊಳಗಿನ ಜಿಲ್ಲಾ ಕಚೇರಿಗಳಲ್ಲಿಯೂ, ಉಳಿದ ಕೆಳತರಗತಿಯ ಮುಲ್ಕಿ ಕಚೇರಿಗಳಲ್ಲೆಲ್ಲ ಕನ್ನಡ ಭಾಷೆಯನ್ನೇ ಉಪಯೋಗಿಸಬೇಕೆಂದು ಮೈಸೂರ ಸರಕಾರದವರು ಆಜ್ಞಾಪಿಸಿರುವರು.

— ಧಾರವಾಡ ತಾಲೂಕ ಲೋಕಲ್ ಬೋರ್ಡಿನವರು ಲೋಕಲ್ ಫಂಡನ್ನು ಪ್ರಾಥಮಿಕ ಶಿಕ್ಷಣದ ಖರ್ಚಿಗಾಗಿ ಸರಿಸಬಾರದೆಂದು ತೀರ್ಮಾನಿಸಿರುವರು

— ಕರ್ನಾಟಕವಿಶ್ವವಿದ್ಯಾನಿಲಯದ ಸಮ್ಮೇಲನದ ಸಭೆಯು ಇದೇ ತಿಂಗಳ ತಾ. ೨೯ನೇ ರವಿವಾರಕ್ಕೆ ಸೇರುವದಿದೆ. ರಾವಸಾಹೇಬ ಫ. ಗು. ಹಳಕಟ್ಟಿ, ಬಿ.ಎ., ಎಲ್ ಎಲ್. ಬಿ., ಇವರು ಸಭಾಪತಿಗಳು. ಕರ್ನಾಟಕ ವಿಶ್ವವಿದ್ಯಾನಿಲಯದ ಸ್ಥಾಪನೆಯ ಕುರಿತು ಸಾಧಕ-ಬಾಧಕ ಚರ್ಚೆಯಾಗಿ ಅವಶ್ಯವಿದ್ದ ಉಪಾಯಯೋಜನೆ ಮಾಡಲಾಗುವದು.

— ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯವರು ಹಿಂದೀ ಪ್ರಚಾರಕಾರ್ಯವನ್ನು ಕೈಕೊಳ್ಳಲು ಬೇಕಾಗಿ, ಆ ಕುರಿತು ನಿಧಿಯನ್ನಿತ್ತು ಸಹಾಯ ಮಾಡಲು ಶ್ರೀ ದತ್ತಾತ್ರೇಯ ಕೃಷ್ಣ ಭಾರದ್ವಾಜ ಪ್ರಭೃತಿ ಮಹಾಶಯರುಗಳು ಬಿನ್ನೈಸಿಕೊಂಡಿರುವರು.

— ಸೂರತದ ಡೆಪ್ಯುಟಿ ಕಲೆಕ್ಟರರು ಲಂಚ ತಿಂದ ಬಗ್ಗೆ ಅವರಿಗೆ ೧೮ ತಿಂಗಳ ಶಿಕ್ಷೆ ಹಾಗು ೩೧೦೦ ರೂಪಾಯಿ ದಂಡ ಹೀಗೆ ಶಿಕ್ಷೆಯಾಗಿದೆ.

— "ಎಮ್ ಎಲ್" ಎಂಬ ಕಾಯಿದೆ ಪರೀಕ್ಷೆಯನ್ನು ಮದ್ರಾಸ ವಿಶ್ವವಿದ್ಯಾಲಯದವರು ಎಪ್ರಿಲದಲ್ಲಿ ಕೊಳ್ಳದೆ ಜುಲೈ ತಿಂಗಳಲ್ಲಿ ಕೊಳ್ಳಬೇಕೆಂದು ತೀರ್ಮಾನ ಮಾಡಿದರು. ಇದರಿಂದ ಒಬ್ಬ ವಿದ್ಯಾರ್ಥಿ ರೂಪಾಯಿ ೧೦೦ ಮುಟ್ಟಿಗೆ ತನಗೆ ನಷ್ಟವಾಯಿತೆಂದು ವಿಶ್ವವಿದ್ಯಾಲಯದ ಮೇಲೆ ದಾವೆ ಹೂಡಿರುವನು. ಎಪ್ರಿಲದಲ್ಲಿ ಪರೀಕ್ಷೆ ಆಗುವದೆಂದು ಅಭ್ಯಾಸ ಮಾಡಿ ಪರೀಕ್ಷೆಗೆ ಕೂಡ್ರುವ ತಯಾರಿಯಾಯಿತು; ಜುಲೈದಲ್ಲಿ ತನ್ನ ತಯಾರಿ ಇರುವದಿಲ್ಲ ಇತ್ಯಾದಿ ಹೇಳಿ ವಿಶ್ವವಿದ್ಯಾಲಯದವರು ಕರಾರನ್ನು ಮುರಿದರೆಂದೂ ವಿದ್ಯಾರ್ಥಿಯ ಸುಧನ! ಶಾಬಾಸ!

— ಚೀನ ದೇಶದೊಳಗಿನ ಪೆಕಿಂಗದಿಂದ ಶಾಂಘಾಯಿ ಪಟ್ಟಣಕ್ಕೆ ಹೋಗುವ ಉಗಿಬಂಡಿಯು ಥಟ್ಟನೆ ಕಂಬಿಗಳಿಂದ ಜಾರಿ ಬಿತ್ತು. ೫೦ ಕ್ಕೆ ಮಿಕ್ಕ ಪ್ರಯಾಣಿಕರು ಮಡಿದರು. ಅನೇಕರು ಘಾಯಪಟ್ಟರು.

— ಪಂಡಿತ ಮೋತೀಲಾಲ ನೆಹರೂರವರು ಪ್ರಕೃತಿ ಸ್ವಾಸ್ಥ್ಯಕ್ಕಾಗಿ ೬ ತಿಂಗಳ ವರೆಗೆ ಗಿಯಾರದೋಹ ಮಾಡಿರುವರು. ಆ ಸಮಯ ಮದ್ರಾಸದ ಶ್ರೀ ಶ್ರೀನಿವಾಸ ಅಯ್ಯಂಗಾರರವರು ಸ್ವರಾಜ್ಯಪಕ್ಷದ ಚಾಲಕರಾಗುವರು.

— ಕರ್ನಾಟಕ ಪ್ರಾಂತಿಕ ಪರಿಷತ್ತಿನ ಅಧ್ಯಕ್ಷಸ್ಥಾನಕ್ಕೆ ಮದ್ರಾಸಿನ ಸುಪ್ರಸಿದ್ಧ ಸ್ವರಾಜ್ಯಪಕ್ಷದ ನಾಯಕರಾದ ಶ್ರೀ ಶ್ರೀನಿವಾಸ ಅಯ್ಯಂಗಾರರಿಗೆ "ಕರ್ನಾಟಕಪ್ರಾಂತಿಕ ಪರಿಷತ್ತು" ಗ ೦.ವಾರ-೬ ಕ್ಕಾರ ಆ ಎಂಬುದಿನ ನಡೆಯುತ್ತದೆ

— ಮದ್ರಾಸಿನ ಉದಾರ ಮತವಾದಿಗಳು ಅನ್ಯಕೋಮು ಮತ್ತು ದೇಶಾಭಿಮಾನದ ಯಾವ ಪಕ್ಷವನ್ನು ಸ್ಥಾಪಿಸುವ ಆಲೋಚನೆಯಲ್ಲಿರುವರು. ಇಲೆಕ್ಷನು ಪದ್ಧತಿಯಲ್ಲಿ ಪ್ರಜಾಕಲ್ಯಾಣಕ್ಕಾಗಿ ಜಸ್ಟಿಸಿಯಂತ ಪಕ್ಷಗಳು ಪ್ರಾಮುಖ್ಯತೆ ಪಡೆಯುವವು. ಮದ್ರಾಸಿನ ಉದಾರ ಮತವಾದಿಗಳಿಗೆ, ಉದಾರ ಮತವಾದಿಗಳೆಂದು ಹೇಳಿಕೊಳ್ಳದೆ, 'ರಾಷ್ಟ್ರೀಯರೆಂದು' ಕರೆದು ಇಲೆಕ್ಷನಿನಲ್ಲಿ ಹೋರಾಡಬೇಕಾಗಿದೆ. ಮುಂಬಯಿಯಲ್ಲಿ ಸ್ಥಾಪನೆ ಹೊಂದಿದ 'ರಾಷ್ಟ್ರೀಯ ಪಕ್ಷ'ದಲ್ಲಿ ಪ್ರವೇಶಿಸಲಿಕ್ಕೆ ಮನಸ್ಸು ಇದ್ದರೆ ಇಲ್ಲವಂತೆ! ಮದ್ರಾಸರಿಗೆ ವಾರ್ತೆಸಲಿಕ್ಕೆ ಯಾರ್ಯಾರು ಯೋಗ್ಯರೆಂದು ಪರಿಶೀಲಿಸುತ್ತಾರೆ ನೋಡುವ.

— ಫಿರೋಜಪುರ ಮುನಿಸಿಪಲ್ ಕ್ಷೇತ್ರಮಾಸಿಗಳಿಂದ ೬—೧೧ ವರ್ಷದೊಳಗಿನ ಹುಡುಗರು ಪ್ರಾಥಮಿಕ ಶಿಕ್ಷಣವನ್ನು ಉಚಿತವಾಗಿಯೂ ಒತ್ತಾಯದಿಂದಲೂ ಪಡೆಯಬೇಕೆಂದು ಮುನಿಸಿಪಾಲಿಟಿಯ ತೀರ್ಮಾನವಾಗಿದೆ.

— ಮಹಾರಾಷ್ಟ್ರಕ್ಕೆ ಸೇರಿದ ಕನ್ನಡನಾಡಾದ ಸೊಲ್ಲಾಪುರದಲ್ಲಿ ಕನ್ನಡದ ಶಾಲೆಯಿದ್ದಿಲ್ಲ. ಸದ್ಯಕ್ಕೆ ಅಲ್ಲೊಂದು ಕನ್ನಡ ಶಾಲೆಯು ಸ್ಥಾಪನೆಯಾಗಿದೆ.

— ಈಗ ಏಳು ವರುಷಗಳಿಂದ ರಾಷ್ಟ್ರಸ್ಥಾನಗಳಲ್ಲಿ ಹಾವಳಿಮಾಡುತ್ತಿದ್ದ ಚಿತಾರ ಕಳ್ಳರ ಮಾರನಲ್ಲಿ ಬೇಟೆಗಾರರ ಗುಂಡಿಗೆ ಈಡಾಯಿತು. ಈ ಚಿರತೆಯು ೧೨೫ ಜನರನ್ನು ಭಕ್ಷಣ ಮಾಡಿದೆ ಇದರ ಉದ್ದಳತೆಯು ಒಂಬತ್ತು ೭ ಪೂಟು ೧೦ ಇಂಚು.

— ಸಾಧ್ವಿ ಹಾಗು ಸಂಪದಭ್ಯುದಯ ಪತ್ರಿಕಾಕರ್ತರಾದ ಶ್ರೀ ವೆಂಕಟಕೃಷ್ಣಯ್ಯನವರು ಮೈಸೂರಿನ ಅನಾಥಾಲಯದಲ್ಲಿ ಅನೇಕ ವರ್ಷ ಸೇವೆಗೈದ ಅಮಿತಾದ ಕಾರ್ಯಗಾರಿಕೆಗಳಿಗಾಗಿ ತಮ್ಮ ಪತ್ರಿಕೆಯ ಲಾಭವನ್ನು ಕೊಡಲುದ್ಯುಕ್ತರಾಗಿರುವರು!

— ಟಿ. ನರಸೀಪುರದೊಳಗಿನ ಕಣಿಯರು ಶ್ರೀ. ಗುಂಜಾ ನರಸಿಂಹ ಸ್ವಾಮಿಯವರ ದೇವಾಲಯದ ಮುಂದೆ ಸತ್ಯಾಗ್ರಹಕ್ಕೆ ಪ್ರಾರಂಭಿಸಿರುವರು. ಕಣಿಯರು ಶ್ರೀ ದೇವಾಲಯದಲ್ಲಿ ಪ್ರವೇಶ ಸಿಗುವದಕ್ಕಾಗಿ ಸಾಮೋಪಚಾರಗಳಿಂದ ಬಹಳ ಯತ್ನ ಮಾಡಿದರೂ ಕೈಸಾಗದ್ದರಿಂದ ಸತ್ಯಾಗ್ರಹವನ್ನು ಕೈಕೊಂಡಿರುವರು.

— ನಿಜಾಮ ಸರಕಾರವು ಗೋಹತ್ಯದ ಕುರಿತು ಶಾಸನ ಹೊರಡಿಸಿದ ಹಕೀಕತ್ತು ಸುಳ್ಳೆಂದು ತಿಳಿದುಬರುತ್ತದೆ. ಸುಳ್ಳು ಸುದ್ದಿಗಳನ್ನು ಯಾಕೆ ಹಬ್ಬಿಸುತ್ತಾರೆಂದು ತಿಳಿಯುವ ಹಾಗಿ..

— ಕೊಲ್ಹಾಪುರ ಸಂಸ್ಥಾನಕ್ಕೆ ಸೇರಿದ ನರಸೋಬವಾಡಿಯಲ್ಲಿ ಬ್ರಾಹ್ಮಣರು ಯಜ್ಞ ಮಾಡಬೇಕೆಂದು ಮಂಟಪ ಹಾಕಿ ಸಿಂಗರಿಸಿದ್ದರು, ಅಷ್ಟರಲ್ಲಿ ದರಬಾರದವರು ಹಿಂಸೆಯಾಗಬಾರದೆಂಬ ಹುಕುಮನ್ನು ಹೊರಡಿಸಿ, ಯಜ್ಞಕ್ಕೆ ತಡೆಹಾಕಿದರು. ಅಹಿಂಸೆಯ ಪ್ರೀತಿಯಿಂದಾದರೆ ಸ್ತುತ್ಯ

— ಪರಾನಪಲ್ಲೆಯಲ್ಲೊಂದು ಚಮತ್ಕಾರ; ಭೂಕಂಪನಾಗಿ ಬೀಳಿಹೋದ ಅರಮನೆಯ ಕೋಟೆಯ ಕೆಲ ಭಾಗವು ಬಿದ್ದುಕೊಂಡಿತ್ತು. ಅದರ ಜೀರ್ಣೋದ್ಧಾರಕ್ಕಾಗಿ ಗೋಡೆಯ ಬುನಾದಿಯನ್ನಗಿಯಲು ೧೩ ಮಾನವ ದೇಹಗಳು ಕೈಜೋಡಿಸಿ ನಿಂತುಕೊಂಡಿರುವದು ಕಂಡುಬಂತು. ಮನುಷ್ಯಬಲಿಯಿಂದ ಅರಮನೆಯನ್ನು ಶಾಶ್ವತವಾಗಿ ಮಾಡಬೇಕೆಂಬ ಕಲ್ಪನೆಯಿಂದ ಈ ಮನುಷ್ಯರನ್ನು ಹುಗಿದಿರಬೇಕೆಂದು ತರ್ಕ.

— 'ಕರ್ನಾಟಕವೃತ್ತ'ದ ಸಂಪಾದಕರಾದ ಶ್ರೀ ಕೃಷ್ಣರಾವ ಮುದವೇಡಕರರವರು ಗ್ರಾಮಗಳಲ್ಲಿ ನಡೆದಿರುವ ಉಪಯುಕ್ತ ಉದ್ಯೋಗದ ವರ್ಣನೆಯನ್ನು ತಿಳಿಗನ್ನಡದಲ್ಲಿ ಬರೆದು ಕಳಿಸುವವರಿಗೆ ೧೦ ರೂಪಾಯಿಯ ಪಾರಿತೋಷಕವನ್ನಿತ್ತಿರುವರು. ನಿಬಂಧವನ್ನು ಇದೇ ತಿಂಗಳ ಕೊನೆಯ ಒಳಗೆ ಕಳಿಸಬೇಕು.

— ಬಳ್ಳಾರಿಯಲ್ಲಿ ಮೇ ೧೮ನೇ ಯಿಂದ ಜರುಗಲಿಕ್ಕಿದ್ದ ಅನೇಕ ಸಮ್ಮೇಲನಗಳಲ್ಲಿ ಅಖಿಲ ಕರ್ನಾಟಕ ಸಂಪಾದಕರ ಸಮ್ಮೇಲನವನ್ನು ಕೂಡಿಸುವದು ಪ್ರಶಸ್ತವೆಂದು ತೋರಿ, ಆ ಕುರಿತು ವಿಚಾರ ಮಾಡುವರೆ ಶ್ರೀ ರಂಗನಾಥ ರಾಮಚಂದ್ರ ದಿವಾಕರ, ಎಸ್. ವೆಂಕಟಕೃಷ್ಣಯ್ಯ ಮುಂತಾದ ಪ್ರಮುಖರು ನಿವೇದನೆಯನ್ನು ಹೊರಡಿಸಿರುವರು.

— ಜೋಸೆಫ ಮೆನಾರ್ಡ ಎಂಬವರು ತಮ್ಮ ನಾಯಿಗೆ ಉಪವಾಸ ಕೆಡವಿದ ಬಗ್ಗೆ ಖಟ್ಲೆಯಾಗಿ ಒಂದು ತಿಂಗಳು ಕಾರಾಗೃಹವಾಸವಾಗಿದೆ.

— ಪಾಲಘಾಟನಲ್ಲಿ ಅಗ್ರಹಾರವನ್ನು ಪ್ರವೇಶಿಸುತ್ತಿದ್ದ ಪಂಚಮನಿಗೆ ಬ್ರಾಹ್ಮಣನು ಪ್ರತಿಬಂಧ ಮಾಡಿದ ಬಗ್ಗೆ ಬ್ರಾಹ್ಮಣನ ಮೇಲೆ ಖಟ್ಲೆಯಾಗಿ ಬ್ರಾಹ್ಮಣನಿಗೆ ರೂಪಾಯಿ ೧೦ ಜುಲ್ಮಾನೆಯಾಗಿಯದೆ.

— ಅಲಹಾಬಾದದಲ್ಲಿ ಬೆಂಕಿ ಬಿದ್ದು ಸುಮಾರು ಅರ್ಧ ಊರು ಸುಟ್ಟುಹೋಯಿತು.

— ಬರ್ಲಿನದಲ್ಲಿ ಇಬ್ಬರು ೪೫ ದಿನ ಉಪವಾಸ ಮಾಡಿದರು! ಇವರು ಸೋಡಾ ನೀರು ಕುಡಿದು, ಸಿಗರೇಟು ಸೇದಿ ೪೫ ದಿನ ಕಾಲಹರಣ ಮಾಡಿದರು!! ೬೦೦ ಸೋಡಾಬಾಟ್ಲಿಗಳನ್ನೂ, ೧೦೦೦೧ ಸಿಗರೇಟುಗಳನ್ನೂ ೪೫ ದಿನಗಳಲ್ಲಿ ಇಬ್ಬರೂ ಖರ್ಚುಮಾಡಿದರು!!!

ಮಹಾತ್ಮರ ಆತ್ಮಚರಿತ್ರ.

(೨೬) ಬೆರಿಸ್ಟರನಾದ; ಮುಂದೇನು?

[illegible]

ವಿದ್ಯಾರ್ಥಿಗಳು ... [illegible] ... ಗಳನ್ನು ನಾವು ಪಡೆಯುತ್ತಿದ್ದೆವು.

ನಾನು ಮದ್ಯ ಸೇವಿಸುತ್ತಿರಲಿಲ್ಲ ... [illegible] ... ಬಾಟ್ಲಿ ಮದ್ಯ ಕೊಡುತ್ತಿದ್ದರು ... ವಿದ್ಯಾರ್ಥಿಗಳು ನನಗೆ ಜೊತೆಗಾರನಾಗಲು ಕಾತರರಾಗುತ್ತಿದ್ದರು. ಇದರಿಂದ ... ಬಾಟ್ಲಿ ಬರಿದು ಮಾಡಲು ಅನುಕೂಲವಾಗುತ್ತಿತ್ತು. ಅಲ್ಲದೆ ಪ್ರತಿಯೊಂದು ಟರ್ಮಿನಲ್ಲಿ 'ಗ್ರಾಂಡ್ ನೈಟ್' ಎಂಬುದೊಂದು ದಿನ ಪ್ರತ್ಯೇಕ ಭೋಜನ ಸಮಾರಂಭವಿರುತ್ತಿತ್ತು. ಆ ಸಮಯ "ಪೋರ್ಟ್" ಹಾಗು "ಶೆರಿ" ಯಂಥ ಮದ್ಯಗಳ ಹೊರತು "ಶಾಂಪೇನ್" ದಂಥ ಮದ್ಯಗಳೂ ಬರುತ್ತಿದ್ದವು. ಆ ದಿನ ಸಮಾರಂಭಕ್ಕೆ ಹೋ

ಷ್ಟದ ಹಿರಲು ನನಗೆ ಆಗ್ರಹವಾಗುತ್ತಿತ್ತು. ಎಲ್ಲರೂ ನನಗೆ ಕರೆಯುತ್ತಿದ್ದರು.

ಈ ವಿಷ್ಟಾನ್ನ ಭೋಜನಗಳಿಂದ ಕಾಯಿದೆ ಅಭ್ಯಾಸಕ್ಕೆ ವಿದ್ಯಾರ್ಥಿಗಳು ಹ್ಯಾಗೆ ತಯಾರಾಗುತ್ತಾರೆಂಬದು ನನಗೆ ಆಗಲೂ ತಿಳಿಯಲಿಲ್ಲ, ಇನ್ನು ತನಕ ಹೊಳೆಯಲೂ ಇಲ್ಲ. ಪುರಾತನ ಕಾಲದಲ್ಲಿ ಈ ಸಮಾರಂಭಗಳಿಗೆ ಹೋಗುವ ವಿದ್ಯಾರ್ಥಿಗಳ ಸಂಖ್ಯೆಯು ತೀರ ಕಡಿಮೆ ಇತ್ತು. ಆಗ ವಿದ್ಯಾರ್ಥಿಗಳೂ, ಬೆಂಚರರಿಗೂ ಸಂಭಾಷಣೆ ಮಾಡಲು ಅನುಕೂಲವಿತ್ತು. ಆ ಸಮಯ ಉಪನ್ಯಾಸಗಳನ್ನು ಕೊಡುತ್ತಿದ್ದರು. ಈ ಪ್ರಸಂಗಗಳಿಂದ ವಿದ್ಯಾರ್ಥಿಗಳಿಗೆ ವ್ಯಾವಹಾರಿಕ ಜ್ಞಾನವು ದೊರಕುತ್ತಿತ್ತು. ಒಂದು ಪ್ರಕಾರದ ಸಭ್ಯತನವು ಪ್ರಾಪ್ತವಾಗುತ್ತಿತ್ತು. ವಕ್ತೃತ್ವಶಕ್ತಿಯು ಬೆಳೆಯುತ್ತಿತ್ತು. ನಾನು ಹೋದಾಗ ಇಂಥ ಪ್ರಕಾರವು ಅಶಕ್ಯವಿತ್ತು. ಬೆಂಚರರು ಯಾವಾಗಲೂ ವಿದ್ಯಾರ್ಥಿಗಳಿಂದ ದೂರ ಕೂಡ್ರುತ್ತಿದ್ದರು. ಈ ಸಂಸ್ಥೆಯು ಆಗ ನಿರರ್ಥಕವಾಗಿತ್ತು. ಆದಾಗ್ಯೂ ಪುರಾತನ ಪ್ರಿಯರಾದ ಇಂಗ್ಲಂಡವು ಅದನ್ನು ಜೋಪಾನ ಮಾಡಿತು.

ಅಭ್ಯಾಸಕ್ರಮವು ಸುಲಭವಿತ್ತು. ವಿನೋದದಿಂದ ಬೆರಿಸ್ಟರರಿಗೆ ಭೋಜನ ಬೆರಿಸ್ಟರರೆಂದು ಕರೆಯುತ್ತಿದ್ದರು. ಪರೀಕ್ಷೆಗಳು ನಿರರ್ಥಕವೆಂದು ಎಲ್ಲರೂ ಅರಿತಿದ್ದರು. ನನ್ನ ಕಾಲಕ್ಕೆ ಎರಡು ತರ ಪರೀಕ್ಷೆಗಳಾಗುತ್ತಿದ್ದವು. ಒಂದು ರೋಮನ್ ಕಾಯಿದೆಯದ್ದು, ಇನ್ನೊಂದು ಕೋಮನ್ ಕಾಯಿದೆಯದ್ದು. ಈ ಪರೀಕ್ಷೆಗಳಿಗೆ ನಿಯಮಿತ ಪುಸ್ತಕಗಳಿದ್ದವು. ಅವನ್ನು ಬೇರೆ ಬೇರೆಯಾಗಿ ಪರೀಕ್ಷೆ ಕೊಡಬಹುದಿತ್ತು. ಆದರೆ ಅವನ್ನು ಓದುವವರು ಬಹಳ ವಿರಳ. ರೋಮನ್ ಕಾಯಿದೆಯ ಟಿಪ್ಪಣಿಗಳನ್ನು ಒಂದೆರಡು ವಾರಗಳಲ್ಲಿ ಓದಿ, ರೋಮನ್ ಕಾಯಿದೆಯ ಪರೀಕ್ಷೆಯಲ್ಲಿ ಉತ್ತೀರ್ಣರಾಗುತ್ತಿದ್ದರು. ರೋಮನ್ ಕಾಯಿದೆಯ ಟಿಪ್ಪಣಿಗಳನ್ನು ೨—೩ ತಿಂಗಳುಗಳಲ್ಲಿ ಓದಿ ಪರೀಕ್ಷೆಯಲ್ಲಿ ಉತ್ತೀರ್ಣರಾಗುತ್ತಿದ್ದರು. ಪ್ರಶ್ನಪತ್ರಿಕೆಗಳು ಸುಲಭವಿರುತ್ತಿದ್ದವು. ಪರೀಕ್ಷಕರು ಉದಾರರಾಗಿರುತ್ತಿದ್ದರು. ರೋಮನ್ ಕಾಯಿದೆ ಪರೀಕ್ಷೆಯಲ್ಲಿ ೧೦೦ಕ್ಕೆ ೯೫ ರಿಂದ ೯೯ ರವರೆಗೆ ವಿದ್ಯಾರ್ಥಿಗಳು ತೇರ್ಗಡೆ ಹೊಂದುತ್ತಿದ್ದರು. ಕೊನೆಯ ಪರೀಕ್ಷೆಯಲ್ಲಿ ತೇರ್ಗಡೆ ಹೊಂದುವ ಪ್ರಮಾಣವು ೧೦೦ಕ್ಕೆ ೭೫ ರಷ್ಟು ಇತ್ತು. ಆದರಿಂದ ಪರೀಕ್ಷೆಯಲ್ಲಿ ನಪಾಸಾಗುವ ಭಯವು ತೀರ ಕಡಿಮೆ. ವರ್ಷಕ್ಕೆ ನಾಲ್ಕು ಸಲ ಪರೀಕ್ಷೆಗಳಾಗುತ್ತಿದ್ದವು. ಪರೀಕ್ಷೆಗಳ ಅನುಕೂಲತೆಯಿಂದ ಬೇರೆ ಕಷ್ಟವಾಗುತ್ತಿದ್ದು ಕಂಡುಬರುತ್ತಿರಲಿಲ್ಲ.

ಆದರೆ ಈ ಪರೀಕ್ಷೆಗಳನ್ನು ನಾನೇ ಕಠಿಣವಾಗಿ ಮಾಡಿಕೊಂಡೆ. ನೇಮಿಸಿದ ಸಮಸ್ತ ಪುಸ್ತಕಗಳನ್ನು ನಾನು ಓದಿ ತೀರಬೇಕೆಂದು ನನಗನಿಸಿತು. ಅವನ್ನು ಓದದಿರುವದು ಠಕ್ಕತನವೆಂದು ನನ್ನ ಗ್ರಹಿಕೆ ಯಾಯಿತು. ಬಹಳ ಹಣ ಕೊಟ್ಟು ನಾನು ಅವನ್ನು ಕೊಂಡುಕೊಂಡೆ. ರೋಮನ್ ಕಾಯಿದೆಯು ಲೆಟಿನ್ ಭಾಷೆಯ ಪುಸ್ತಕವನ್ನು ಓದಬೇಕೆಂದು ನಾನು ನಿರ್ಧರಿಸಿದೆ. ಲಂಡನ ಮೆಟ್ರಿಕ್ ಪರೀಕ್ಷೆಗಾಗಿ ಕಲಿತ ಲೆಟಿನ್ ಭಾಷಾಜ್ಞಾನದಿಂದ ನನಗೆ ಬಹಳ ಪ್ರಯೋಜನವಾಯಿತು. ದಕ್ಷಿಣ ಆಫ್ರಿಕೆಯಲ್ಲಿ ರೋಮನ್—ಡಚ್ ಕಾಯಿದೆಯು ಪ್ರಚಲಿತವಾಗಿದ್ದರಿಂದ ಈ ಅಭ್ಯಾಸದ ಪ್ರಯೋಜನವು ದಕ್ಷಿಣ ಆಫ್ರಿಕೆಯಲ್ಲಿ ನನಗೆ ವಿಶೇಷವಾಯಿತು. ಜಸ್ಟಿನಿಯನ ಗ್ರಂಥವಾಚನದಿಂದ ದಕ್ಷಿಣ ಆಫ್ರಿಕೆಯ ಕಾಯಿದೆಯನ್ನು ಗ್ರಹಿಸಲು ಬಹಳ ಅನುಕೂಲವಾಯಿತು.

ಇಂಗ್ಲಂಡದ ಕೋಮನ್ ಕಾಯಿದೆಯನ್ನು ಓದಲಿಕ್ಕೆ ಒಂಬತ್ತು ತಿಂಗಳು ವರೆಗೆ ಕಷ್ಟದಿಂದ ದುಡಿಯಬೇಕಾಯಿತು. ಬ್ರೂಮಾರವರ ಕೋಮನ್ ಲಾ—ಗ್ರಂಥವು ಸವಿಸ್ತರವಿದ್ದು, ಚಿತ್ತವೇಧಕವಿದೆ. ಇದನ್ನೋದಲು ಬಹಳ ಹೊತ್ತು ಹಿಡಿಯಿತು, ಸ್ನೆಲರವರ ಇಕ್ವಿಟಿಗ್ರಂಥವು ಚಿತ್ತವೇಧಕವಿದ್ದರೂ, ಗ್ರಹಿಸಲಿಕ್ಕೆ ಕಷ್ಟವಾಗುತ್ತಿದೆ. ವ್ಹಾಯಿಟ್ ಹಾಗು ಟ್ಯೂಡರರವರ ಮುಖ್ಯ ತಂಟೆಗಳನ್ನು ಓದುವಾಗ ಬಹಳ ಉಲ್ಲಸಿತವಾಯಿತು. ಅದರಿಂದ ಜ್ಞಾನವು ದೊರಕಿತು. ವಿಲಿಯಮ್ಸ ಹಾಗು

ಎಡ್ವರ್ಡರವರ ಸ್ಥಾವರಾಸ್ತಿ ಗ್ರಂಥಗಳನ್ನು ರುಚಿಯಿಂದ ಓದಿದೆನು. ಗುಡೀವರವರ ಸ್ವಾಹಾರ್ತ ಆಸ್ತಿಯ ಗ್ರಂಥವನ್ನು ಓದಿದೆನು. ವಿಲಿಯಮ್ಸರವರ ಗ್ರಂಥವು ಕಾದಂಬರಿಯೊಂಬಂತೆ ಭಾಸವಾಗುತ್ತಿತ್ತು. ಇದೇ ಕಂದ ಉತ್ಸಾಹದಿಂದ ಹಿಂದುಸ್ಥಾನಕ್ಕೆ ಮರಳಿ ಬಂದ ಮೇಲೆ ಓದಿದ ಪುಸ್ತಕವೆಂದರೆ ಮೇನ್‌ರವರ ಹಿಂದೂ ಕಾಯಿದೆಯು. ಆದರೆ ಹಿಂದೀ ಕಾಯಿದೆಯ ಗ್ರಂಥಗಳ ಉಲ್ಲೇಖ ಮಾಡುವದು ಇಲ್ಲಿ ಅಪ್ರಾಸಂಗಿಕವು.

ನಾನು ಪರೀಕ್ಷೆಗಳಲ್ಲಿ ಉತ್ತೀರ್ಣನಾದೆನು. ೧೮೯೧ನೇ ಇಸ್ವಿಯ ಜೂನ ೧೦ನೇ ತಾರೀಖಿಗೆ ಬೆರಿಸ್ಟರನಾದೆನು. ಮಾರನೇ ದಿನ ೨।। ಶಿಲಿಂಗು ತುಂಬಿ, ಇಂಗ್ಲಂಡದೊಳಗಿನ ಹಾಯಕೋರ್ಟಿನಲ್ಲಿ ನನ್ನ ಹೆಸರನ್ನು ದಾಖಲ ಮಾಡಿಕೊಂಡೆನು. ಹುರು ದಿನವೇ ಮನೆಗೆ ತೆರಳಿದೆನು.

ಇಷ್ಟು ಅಭ್ಯಾಸ ಮಾಡಿದರೂ, ನಾನು ಬಹಳ ನಿರ್ಬಲನೆಂಬ ಗ್ರಹಿಕೆ ಏನು ಹೋಗಲಿಲ್ಲ. ಇನ್ನು ಹೆದರುತ್ತಿದ್ದೆ. ವಕೀಲಿ ಮಾಡಲು ಇನ್ನು ಪಾತ್ರನಾದೆನೆಂದು ನನಗೆ ಎನಿಸಲಿಲ್ಲ. ನನಗೊದಗಿದ ವ್ಯಥೆಯನ್ನು ಬಿಚ್ಚಿ ಹೇಳಲು ಬೇರೊಂದು ಪ್ರಕರಣ ಬೇಕು.

ಲೇಡಿ ಕೆನ್‌ವ್ಹಾಸರಳು ಬೇಕು!

ಆರಿವೆ ಕತ್ತರಿಸುವ ಹಾಗು ಹೊಲಿಯುವ ಕೆಲಸದಲ್ಲಿ ಸುರಿತ ಹಿಂದೂ ಲೇಡಿ ಕೆನ್‌ವ್ಹಾಸರಳೊಬ್ಬಳು ಗೋವೆಯಲ್ಲಿ ಸಿಂಗರ ಮಶೀನುಗಳನ್ನು ವಿಕ್ರಯಿಸಲು ಬೇಕಾಗಿರುತ್ತಾಳೆ. ವಿಶೇಷ ಮಾಹಿತಿ ಬಗ್ಗೆ ಕೆಳಗಿನ ಪತ್ತೆಗೆ ಬರೆಕೊಳ್ಳಿರಿ.

Singer Sewing Machine Company,
PANJIM. (GOA.)

ನೋಟೀಸು.

ಇದರಿಂದ ತಿಳಿಸುವದೇನಂದರೆ -

ಮಿ। ಗಂಗಾನಾಥ ಮುಕುಂದ ಶೈ, ಅಂಕೋಲಾ.

ಇವರನ್ನು "ದಿ ಏಶಿಯಾಟಿಕ್ ಗವ್ಹರ್ನಮೆಂಟ ಸೆಕ್ಯೂರಿಟಿ ಲಾಯಿಫ ಎಶ್ಯೂರನ್ಸ ಕಂಪನಿ"ಯ ಕಾರವಾರ ಜಿಲ್ಲೆ ಏಜಂಟರನ್ನಾಗಿ ನೆಮಕ ಮಾಡಿದೆ

ಬಿ. ಎನ್. ಆಠವ್ಲೆ.
ಚೀಫ ಏಜಂಟ,
ಹುಬ್ಬಳ್ಳಿ

ಉತ್ತಮ ಮಾಲು! ಉತ್ತಮ ಮಾಲು!!

ಮಂಗಳೂರ ಹಂಚು!

ನಮ್ಮಲ್ಲಿ ಮಂಗಳೂರ ಜೋರ್ಜ ಟೈಲ ಪಕ್ಟರಿಯ ಉತ್ತಮ ಪ್ರತಿಯ ಮಂಗಳೂರ ಹಂಚುಗಳು ಮಾರಾಟಕ್ಕೆ ಸಿದ್ಧವಾಗಿವೆ. ಬೀಳಿಕೆಯಲ್ಲಿ ಇವಕ್ಕಿಂತ ಉತ್ತಮ ಹಂಚುಗಳಿಲ್ಲ! ಬೇಕಾದವರು ಮಾಲು ನೋಡಿ ದರವಾರ ತಿಳಕೊಳ್ಳಬಹುದು. ದರವಂತು ಸವಲತ್ತಿಯದಿರುತ್ತವೆ. ಒಮ್ಮೆ ಪರೀಕ್ಷಿಸಿ ನೋಡಿರಿ!

ಪತ್ತೆ — **ಕಾಜಿ ಅಬ್ದುಲ್ ಕಾದರ,**
ಮುನಸೀಫ ಕೋರ್ಟ ಸಮೀಪ, ಕುಮಟಾ

ಬೆಸ್ಟ ಅಲಾರಂ ಟೈಂಪೀಸು



ಈ ಗಡಿಯಾರುಗಳು ಜರ್ಮನ್ ದೇಶದಲ್ಲಿ ತಯಾರಿಸಿದ್ದು ಮೇಲುಗೆ ಹೆ ಎಂದೂ ಕೆಟ್ಟಾಗದಂಥ ನಿಕ್ಕಲ್ ಬೆಲ್ಲಯುಳ್ಳ ವಾಗಿರುವವು. ಇದಕ್ಕೆ ಒಂದಾವರ್ತಿ ಬೀಗ ಕೊಟ್ಟರೆ, ೩೦ ಗಂಟೆಯು ತಾಸಿನ ನಡೆಯುವದು ಮತ್ತು ಖರೆಯು ಗಂಟೆಯನ್ನು ತೋರಿಸುವದು. ಗಡಿಯಾರದ ಎತ್ತರ ೭ ಅಂಗುಲ ಡಯಲ ಗಂಟೆ ತೋರಿಸುವ ತಮುಲು ೪ ಅಂಗುಲವಿರುವದು. ಇದರಲ್ಲಿ ಯಾರೇ ಗಳಿಗೆ, ಏಳುವೇಗನೆ ಗಂಟೆಯನ್ನು ಗುರುತು ಹಿಡಿಯುಕ ದು. ಇದು ಅಂಗಡಿ, ಶಾಲೆ, ಮನೆ, ರೀಡಿಂಗ ರೂಮ, ಗುಡಿ ಮುಂತಾದವುಗಳಲ್ಲಿ ಇಡಲು ಬಹು ಅನುಕೂಲವಾದದ್ದು. ಇವಕ್ಕೆ ಖಾತ್ರಿಯಾದ ೫ ವರ್ಷದ ಗ್ಯಾರಂಟಿ ಕೊಡುತ್ತೇವೆ. ಕ್ರಯ ೧ಕ್ಕೆ ರೂ. ೩–೮–೦ ಅಂಚೆ ಹಚ್ಚಿದ್ದು ೧ಕ್ಕೆ ರೂ. ४–४–೦.

ಹೆಸರಾಗಿರುವ ಜೇಡ್ರ ರೇಶ್ಮೆ ಹೇರನೆಟ್ಗಳು.

ಈ ಹೇರನೆಟ್ಗಳನ್ನು ಹೆಸರುವಾಸಿ ಹೊಂದಿದ ದೇಶದ ಕಂಪನಿಯವರು ತಯಾರಿಸಿದ್ದು ೧೮ ಇಂಚು ಉದ್ದವೂ, ೨೪ ಇಂಚು ಅಗಲವೂ ಇರುವದು. ಇವನ್ನು ಅಂಚಿನ ಬಿಗಿದ ಜಾಲ ಗಟ್ಟಿಯಾದ ಸಣ್ಣ ನೂಲಿನಿಂದಲೂ ಮಾಡಲ್ಪಟ್ಟಿದೆ ತಯಾರಿಸಿದ ಶ್ರೇಷ್ಠವಾದ ಬಣ್ಣಗಳಿಂದ ಸರಿಗೆಯಾದುವವು ಇವು ಯಾವಾಗೂ ರೀತಿಯು ಅನುಕೂಲವು ಎಲ್ಲಾ ಬಣ್ಣಗಳಲ್ಲಿಯೂ ಸಿಕ್ಕುವವು ಮತ್ತು ಎಲ್ಲಾ ಮಾತಸ್ಥರಿಗೂ ಒಪ್ಪುವವು. ಕ್ರಯ ಸಂ ೧ಕ್ಕೆ ರೂ ೦ ೮ ೦ ೩ ಕ್ಕೆ ರೂ. ೭–೮–೦ ಸೇರಿಗೆ ೧೨ಕ್ಕೆ ರೂ ೧೫–೮–೦

ವಿಳಾಸ:– ಎಂ. ಬೆನ್ಸನ್ ಎಂಡ್ ಕೋ.,
೫೦೪, ಪಾರ್ಕ ಟೌನ, ಮದರಾಸು

ಸುಗಂಧಿ ತಾಂಬೂಲೀ ಜರ್ದಾ!

ಈ ಜರ್ದಾ ತಿನ್ನಲಿಕ್ಕೆ ಕಡಕವಿದ್ದು, ಸುವಾಸಿಕವಿರುತ್ತದೆ. ಇದರ ಸೇವನೆಯಿಂದ್ಲೆ ಬಾಯಿಯು ಹೊಲಸು ವಾಸನೆ ಹುಳ ಇತ್ತ ನಾಶವಾಗಿ ಹಲ್ಲುಗಳ ಬೆಳ್ಳೀ ಘಟ್ಟವಾಗುತ್ತವೆ. ಇದರ ಸೇವನದಿಂದ ದಮ್ಮು, ಕಫ ಮುಂತಾದ ವಿಕಾರಗಳೂ ಆಗುವ ಸ್ವಲ್ಪವೂ ಭೀತಿಯಿಲ್ಲ ಕಾರಣ, ತಂಬಾಕು ಸೇವಿಸುವವರು ಅವಶ್ಯವಾಗಿ ಅನುಭವ ತೊಳಬೇಕ. ೧ ಪುಡಿ ಕಿಂ. ರೂ. ೦–೦–೬, ಎಂಟರ ಕಿಂ. ರೂ. ೦ ೯ ೦, ೧೦೦ ಕಿಂ. ರೂ. ೬–೦–೦, ೫೦೦ ಪುಡಿಗಳ ಕಿಂ. ರೂ ೯–೦–೦, ೧೦೦೦ ೧೭–೦–೦, ಟ್ಪೋ. ಖರ್ಚ ಗ್ರಾಹಿಕರ ಪ್ರತ್ಯೇಕ.

ಸುಗಂಧಿ ನಶ್ಯ:—ಈ ನಶ್ಯವು ಒಳ್ಳೇ ತಂಬಾಕಿನಿಂದ ತಯಾರಿದ್ದದು, ಇದರಿಂದ ಶ್ಲೇಷ್ಮ ಥಂಡಿ, ಅರತಲೆನೋವು ಮುಂತಾದ ವ್ಯಾಧಿಗಳು ಕಡಿಮೆ ಯಾಗಿ ತಲೆಯು ಭಾರವಾಗಿದ್ದರೂ ಹಗುರವಾಗಿ ವಿಚಾರಶಕ್ತಿಗೆ ಚಪಲತೆಯು ಪ್ರಾಪ್ತವಾಗುವದರಿಂದ ಯಾವದೇ ಕೆಲಸವನ್ನು ಕೈಕೊಳ್ಳಲಿಕ್ಕೆ ಸ್ಫೂರ್ತಿಯುಂಟಾಗುತ್ತದೆ. ಒಮ್ಮೆ ಪರೀಕ್ಷಿಸಿ ಖಾತ್ರಿಮಾಡಿಕೊಳ್ಳಿ. ೧ ಡಬ್ಬಿ ಕಿಂ ರೂ ೦–४–೦; ೧ ಡಜನ್ ಡಬ್ಬಿ ಕಿಂ. ರೂ. ೩–೦–೦. ವಿ. ಪೋ. ಖರ್ಚ ಬೇರೆ.

ಉತ್ತಮ ಬೀಡಿಗಳು:—ಅತ್ಯುತ್ತಮ ಪ್ರತಿಯ ತಂಬಾಕಿನಿಂದ ಅನೇಕ, ಕಟ್ಟಿನ ಬೀಡಿಗಳು ನಮ್ಮಲ್ಲಿ ತಯಾರಿರುತ್ತವೆ. ತಿಮ್ಮಿನ್ನ ವಿಷಯಕ್ಕೆ ಒಂದು, ಪುರವಣ್ ಸೋಡಿ ಮಾಡಿಗೆ ಆರ್ಡರ ಕೊಟ್ಟು ನೋಡು. ಇದರ ಹೊರತು, ನಮ್ಮಲ್ಲಿಯ ಎಲ್ಲಾ ಪ್ರಕಾರಗಳ ತಂಬಾಕ ಬರುತ್ತದೆ. ಬೇರೆ ಅಲ್ಲಿ ಎಲ್ಲಾ ಪ್ರಕಾರಗಳ ತಂಬಾಕ. ಬರುತ್ತದೆ. ಬೀಡಿಗಳ ನಮ್ಮೊನೆಯು ತಂಬಾಕನ್ನು ಯೋಗ್ಯ ದಲಾಲಿ ಕೊಟ್ಟು ಖರೀದಿ ಮಾಡಿಕೊಡುವೆವು. ವಿಶೇಷ ಮಾಹಿತಿ ಬಗ್ಗೆ ಪತ್ರವ್ಯವಹಾರ ಮಾಡಿದರೆ, ಕೂಡಲೆ ಉತ್ತರ ಬರೆಯುವೆವು.

ವಿಳಾಸ:- ಎಸ್. ಬಿ. ಕದಂ,
ಬೀಡಿ ಮತ್ತು ತಂಬಾಕು ಜರ್ದಾ ದುಕಾನ,
ಮು. ಪೋ. ವಿಘಾಂವ ಜಿ ಬೆಳಗಾಂವ

ಪ್ರಕಟನೆ.

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂಪನಿ, ಬೆಂಗಳೂರ.

ಈ ಕಂಪನಿಯ, ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೨೩ನೆಯ ಇಸ್ವಿ ಜನೇವರಿ ೩೧ನೆಯ ತಾರೀಖಿನ ದಿವಸ ಸಾಯಂಕಾಲ ४–३೦ ಘಂಟೆಗೆ ಈ ಕಂಪನಿಯ ಹೆಡ್ ಆಫೀಸಿನಲ್ಲಿ ಬಹಿರಂಗವಾಗಿ ಜೆ.ಸಾಯಿ.ಸ ಬ್ಯಾಂಕ್ಟ್ ಬೋರ್ಡ್ ಆಫ್ ಡಾಯರೆಕ್ಟರ್ಸ ಚೇರಮನ್ನರಾದ ರಾಜಸಾಹೇಬ ಡಾ| ಕೆ. ಎಸ್ ಮ್ಯಾಸ್ತ್ರಿ L.R.C.P. *M.R.C.S* ಇವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆ ಕಾಣಿಸಿದ ಪಾಲ್ಸಿದಾರರಿಗೆ ಒಟ್ಟು ಮತ್ತು ಬಡ್ಡಿ ಇಲ್ಲದೆ ೧೦೦೦ ರೂಪಾಯಿಗಳ ಸಂಖ್ಯೆ ದೊರೆಯಬೇಕೆಂದು ನಿರ್ಣಯವಾಯಿತು.

(೧) ಬಾಂಡ ನಂಬರ ೫೩೭೦	ಮಿ| ವಿಠ್ಠಲ ಬೆಸ್ತಾಡಿ ಸೇಟ್ ಕಲಾನ್ ಅಲಿಬಾಗ ಮುಂಬೈ	...	೧೦೦೦
(೨) ಬಾಂಡ ನಂ| ೧೩೩೭೬	ಮಿ| ರಂಗಪ್ಪ ಬ್ಯಾಸಕೋಡಿಗೆ ಹುಲಿಕುಂಟೆ, ಪೋಸ್ಟ ಸಿರಾ. ತಾಲೂಕ ಸಿರಾ, ಜಿಲ್ಲಾ ತುಮಕೂರ.	...	೧೦೦೦
(೩) ಬಾಂಡ ನಂ| ೧೪೯೯೬	ಮಿ| ವೆಂಕಟರಮಣ ವೆಂಕಟರಮಣ ಜಗಡೆ, ಶೀಕ್ಷರಿ, ಹುಲ್ಯಾಳಕೇರಿ, ಹೊನ್ನಾವರ ಪೋ| (ನಾರ್ಥ ಕ್ಯಾನರಾ) ಜಿಲ್ಲಾ.	...	೧೦೦೦
(४) L B C. " ೧೮೩೩	ಮಿ| ಜಿ. ವೆಂಕಟಪ್ಪ ಮಾರ್ಗಪೇಟೆ ಹುದ. ಜಮೀನದಾರ. ಪ್ರಸಪೇಟೆ, ಬಳ್ಳಾರಿ		೧೦೦೦
(೫) " ೫೫೦	ಮಿ| ರಾಮಚಂದ್ರ ಮಾರುತಿ ಕಾಂಡೇಕರ C/o ಕಾಲೇಕ್ಕರ ಮಾಡಿ, ಬ್ಯಾರೇಜ ರೋಡ, (ಬರೋಡಾ)		೧೦೦೦
(೬) " ೧೪೮೪೦	ಮಿ| ಆರ್ ಎಚ್ ಪಾಟೀಲ್, ಮಾಸ್ತರ, ಗವರ್ನಮೆಂಟ ಸಿಟಿ ಹೈಸ್ಕೂಲ, ಹೈದರಾಬಾದ (ಡೆಕ್ಕನ)		೧೦೦೦

ಬಿ ಎಸ್ ಆರಾಧ್ಯ,
ಮುಂಬಯಿ ಇಲಾಖೆಯ, ಚೀಫ್ ಏಜಂಟ, ಹುಬ್ಬಳ್ಳಿ.

ಅತ್ಯದ್ಭುತ! ಅಮೇರಿಕಾ ಖಂಡದ ಅತ್ಯದ್ಭುತ!!

ಪ್ರಸಿದ್ಧ ಡಾಕ್ಟರನೊಬ್ಬನು ಕಂಡು ಹಿಡಿದ ಸಿದ್ಧೌಷಧ.

ಸರ್ವರೋಗ ನಿವಾರಣೆಯಾಗುವ ಸಂಜೀವನೌಷಧವನ್ನು ಕಂಡು ಹಿಡಿಯುವದಕ್ಕಾಗಿ ಅಮೇರಿಕಾ ಖಂಡದ ಪ್ರಖ್ಯಾತ ಡಾಕ್ಟರನೊಬ್ಬನು ಅನೇಕ ವರ್ಷಗಳಿಂದ ಬಹು ದಿನ ನಷ್ಟ ಮಾಡಿಕೊಂಡು ಪರಿಶೋಧನೆಗಳನ್ನು ಮಾಡಿ ಕಡೆಯಲ್ಲಿ

ಎಲಿಕ್ಸಿರ್ ಆಫ್ ಲೈಫ್

ಅಥವಾ

ಜೀವನಾಧಾರ

ಎಂಬ ಔಷಧವನ್ನು ಸಿದ್ಧಗೊಳಿಸಿರುವನು. ಅನುಭವಸ್ಥರಿಂದ ಅನೇಕ ರೋಗಗಳಿಗೆ, ಎಂದರೆ ಅಗ್ನಿಮಾಂದ್ಯ ಅಜೀರ್ಣ, ಹೊಟ್ಟೆ ಅಥವಾ ತಲೆ ಭಾರವಾಗಿರುವದು, ಅತಿಸಾರ, ವಾಂತಿ, ಭೇದಿ ಅಥವಾ ಕಾಲರಾ, ತಲೆನೋವು ಸಗಟು, ಪ ಳೆ ರಿಯಾ ಜ್ವರ, ಇತರ ವಿವಿಧವಾದ ಜ್ವರಗಳು, ಮಾನಸಿಕ ದೌರ್ಬಲ್ಯ, ಕಣ್ಣು ಮತ್ತು ಕಿವಿ ನೋವು, ಮಲಬದ್ಧತೆ, ನಾಯಿಕೆಮ್ಮು, ಸ್ತ್ರೀವ್ಯಾಧಿ ಮುಂತಾದ ಎಲ್ಲಾ ಬಗೆಯ ಸಾಂಕ್ರಾಮಿಕ ರೋಗಗಳಿಗೆ, (ಇನ್ಫ್ಲುಯೆಂಜಾದಿಗಳಿಗೆ,) ಹಾವು, ಚೇಳು, ಮುಂತಾದ ವಿಷ ಜಂತುಗಳ ಕಡಿತಕ್ಕೆ, ಬಾಲಗ್ರಹ ಇವೇ ಮುಂತಾದವುಗಳಿಗೆ ಈ ಜೀವನಾಧಾರವನ್ನು ಕೊಟ್ಟು ಗುಣಪಡಿಸಿರುತ್ತಾನೆ. ಇದರಲ್ಲಿ ಸಾಂಕ್ರಾಮಿಕ ರೋಗವಿದ್ದಾಗ ಇದನ್ನು ಬಳಸಿದಲ್ಲಿ ಆ ವಿಷದ ಗಿಸಿ ಇದ್ದರೆ ಯಾವ ರೋಗವೂ ಅಂಟುವದಿಲ್ಲ. ಈ ಜೀವನಾಧಾರವೆಂಬ

ಸಂಜೀವನೌಷಧ

ಒಂದುಸೀಸೆಯು ಪ್ರತಿ ಮನೆಯಲ್ಲಿ ಅಥವಾ ಪ್ರತಿ ಒಬ್ಬನ ಜೇಬಿನಲ್ಲಿದ್ದರೆ ಅನುಭವಸ್ಥನಾದ ಡಾಕ್ಟರನೊಬ್ಬನು ಹತ್ತರವಿದ್ದಂತೆಯೇ. ಡಾಕ್ಟರರಿಗೆ ಕೊಡಬೇಕಾದ ಫೀಜುಗಳನ್ನು ಈ "ಜೀವನಾಧಾರ"ವೆಂಬ ಡಾಕ್ಟರನಿಗೆ ಕೊಡಬೇಕಾಗಿಲ್ಲ. ಸೀಸೆ ಒಂದಕ್ಕೆ ರೂ ೧–೮–೦ ಟಪಾಲು ಖರ್ಚು ಪ್ರತ್ಯೇಕ ಇಲಾಯಿದಾ ಬೀಳುವದು.

ಜೀವನಾಧಾರ ಡಿಪೋ, ಮೈಸೂರು.

ಬ್ರಾಂಚ:- ಜೀವನಾಧಾರ ಡಿಪೋ, ಹುಬ್ಬಳ್ಳಿ.

ಏಜಂಟರು ಬೇಕು! ಏಜಂಟರು ಬೇಕು!!

ನಮ್ಮಲ್ಲಿ

ಅತಿ ಮನೋಹರವಾದ ಶೀಶೆ ಕಟ್ಟಿಗೆಯ

ದೇವರ ಮಂಟಪಗಳೂ,

ಸಂಗಡದ ಸೌಭಾಗ್ಯವತಿ ಪೆಟ್ಟಿಗೆಗಳೂ, ತಿಜೋರಿ ಪೆಟ್ಟಿಗೆಗಳೂ, ಆಫೀಸ ಬಾಕ್ಸಗಳೂ ರೋಕಿಂಗ ಖುರ್ಚಿಗಳೂ ಹಾಗೂ ಯಾವತ್ತು ತರದ ಮನೇ ಸಾಮಾನು ಸಿಗುತ್ತವೆ.

ನಮ್ಮ ವಿಳಾಸ:—

ದಿ ನೋರ್ಥಕೆನರಾ ಟ್ರೇಡಿಂಗ ಕಂಪನಿ,

ಕಾಂತಿ ಭುವನ,
ಕಾರವಾರ.

ಚೆವರಲೆಟ್
ಮೋಟಾರಕಾರ್ ಏಜನ್ಸಿ, ಕನರಾ.



ಸುಪ್ರಸಿದ್ಧ ಚೆವರಲೆಟ್ ಮೋಟಾರ ಗಾಡಿಗಳನ್ನು ಗಿರಾಕಿಗಳಿಗೆ ಅನುಕೂಲವಾಗುವಂತೆ ಮಾರಿಸಿ ಕೊಡುತ್ತೇವೆ. ಅವೆ ಶ್ರೆಯುಳ್ಳವರು ಸವ ಕ್ರಮ ಅಥವಾ ಕ್ರತ್ಯಕ್ಷವಾಗಿ ವಿಚಾರಿಸಿ ತಿಳಕೊಳ್ಳಬಹುದು.

ಸಬ್ ಏಜಂಟ್—ಎಸ್. ಎಲ್ ಧಾಕಪ್ಪ
ಮತ್ತು ಬ್ರದರ್ಸ, ಶಿರ್ಸಿ

ಕಮಿಶನ್ ಏಜಂಟ ಜಿ. ಡಿ. ಮಳಗಿಕರ
ಎಂಡ್ ಕೋ,

ಜಿ. ಐ. ಪಿ. ರೇಲ್ವೆಯ ಸವ್ವಕ್ಕೆ ದೇಶದ ಕಿ—ತ್ತದೆ, ರಸ್ಟಿಕಾಪ್ ಹಾಗು ಪಿ ಜಲಿನ ಮಂ ಟ ಕಾಗು ಸಾಮಾನ್ ಬಾಯರ—ಬ್ರೆಕ್ ಇತ್ಯಾದಿ ಸಾಮಗ್ರಿ ರೋಗ್ಯ ದರದಲ್ಲಿ ದೊರೆಯುತ್ತವೆ

ಸೂಚನೆ:— ನಮ್ಮಲ್ಲಿ ಟ್ಯಾಟ್ಯೂರಿಂಗ ಕೆಲಸ ಉತ್ತಮವಾಗಿ ... ಕೊಡುತ್ತದೆ. ಅದಲ್ಲದೆ ನಮ್ಮಲ್ಲಿಂದ ... ಪ್ರಸಿದ್ಧ ... ಕಂಪನಿಯ ... ಅವಶ್ಯವಿದ್ದವರು ... ವಿಚಾರಿಸಿ ತಿಳಕೊಳ್ಳಬಹುದು.

G. D. Malgikar & Co,
KUMTA

ಪ್ರಯಾಣಕರಿಗೆ
ವಿಶೇಷ ಅನುಕೂಲ

ಕುಮಟೆಗೆ ಬಂದರೆ ವಸತಿಗೆ ಯೋಗ್ಯ ವ್ಯವಸ್ಥೆ ಇದೆ ... ಕನ್ನಡ ... ಭಟ್ಕಳ, ... ಹೊನ್ನಾವರ

ಸೂಚನೆ — ಟಿಕೇಟು ... ವಸತಿ ... ಪತ್ರವ್ಯವಹಾರ ಮಾಡತಕ್ಕದ್ದು.

ಅನಂತ ಮಂಗೇಶರಾವ ಸಕಿನಿತ್ತಲ,
ಮೋಟರ ಏಜಂಟ,
ಕುಮಟಾ (ಉತ್ತರ ಕನ್ನಡ)

S. U. Narayanacharya & CO
Chaukamba, BENARES CITY.

... ಪಿತ್ತಳೆ ಕಂಚಿನ ... ಶಿಲೆ, ಹಿತ್ತಾಳೆ ... ರುದ್ರಾಕ್ಷಿ ಕಸ್ತೂರಿ ... ಮೊದಲಾದ ... ಕ್ಯಾಟಲಾಗ ಕೇಳುವವರಿಗೆ ಉಚಿತವಾಗಿ ಕಳಿಸಲಾದೀತು.

ವಿಳಾಸ—ಶಿರೋಮಣಿ ನಾರಾಯಣಾಚಾರ್ಯ
ಮತ್ತು ಕಂಪನಿ, ಚೌಕಂಬಾ, ಕಾಶೀಕ್ಷೇತ್ರ.

ಸುಲಭ ಕ್ರಯ! ಸುಲಭ ಕ್ರಯ!!

ಡಾ. ಕ್ವರ ಜೀ. ಬೀ. ಯವರ
ಸುಗಂಧಿ ನಶ್ಯದ ಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪೀನಸ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ, ಮೂಗು ಬಿಟ್ಟನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ... ಪುಕ್ಕಟೆ ಕಳಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ ೦-೪-೦, ಟ. ಪ ೪ ಆಣೆ ಡಜನ್ ೧ ಕ್ಕೆ ರೂ. ೨-೮-೦. ಟ. ಪ. ೦-೮-೦ ದಯಮಾಡಿ ನಿಮ್ಮ ಹೆಸರನ್ನೂ ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ - ಗುರುಬಸವ ಆಂಡ್ ಕಂಪನಿ ಲಿಮಿಟೆಡ್ ... ಬಾ ೫೧೦, ಪೋಸ್ಟಟೌನ, ಮದರಾಸ



ಸರಕಾರದಿಂದ ಪೇಟಂಟ ಪಡೆದ
ನೆಲ್ಲೂರ ಕಪ್ಪಲಿ.

ತೋಟಿಗರಿಗೆ ಬಹು ಅನುಕೂಲವಾಗಿರುವದು

ಇದು **mild steel**ವೆಂಬ ಜಾತಿಯ ಕಬ್ಬಿಣ ತಗಡಿನಿಂದ ಮಾಡಲ್ಪಟ್ಟಿರುವದು. ಎತ್ತುಗಳಿಗೆ ಬಹಳ ಹಗುರು ಹೋಗುತ್ತದೆ. ಇದರೊಳಗಿರುವ ಒಂದು ಹನಿ ಸಹ ನೀರು ಕೆಳಗೆ ಬೀಳದಂತೆ ನಿರ್ಮಾಣ ಮಾಡಲ್ಪಟ್ಟಿರುವದು. ಕಪ್ಪಲಿ ಬಾಯಿಂದ ನೀರು ಚೆಲ್ಲುವಲ್ಲಿ ಬೀಳುವ ಕಾಲಕ್ಕೆ ಎತ್ತುಗಳಿಗೆ ಭಾರವಾಗದಂತೆ ರಚನೆಯಲ್ಲಿ ಸುಧಾರಣೆಯನ್ನು ಮಾಡಿರತ್ತೇವೆ

ಬೆಲೆಯ ಬಗ್ಗೆ ಬರೆದು ತಿಳಿದುಕೊಳ್ಳಿರಿ

ಕಿರ್ಲೋಸ್ಕರ ವಾರ್ತಾ — ಉತ್ಸಾಹ, ಉದ್ಯೋಗ, ಉದ್ಯೋಗ ವಿಷಯಕ ಕನ್ನಡ ಮಾಸಪತ್ರಿಕೆ.

ಸಂಪಾದಕ — ಶ್ರೀ ಬಾಗಲ ಲಕ್ಷ್ಮಣರಾವ ರಾ, ವಾಙ್ಮಯ ವಿಶಾರದ
ಮಾದರಿ ಸಂಚಿಕೆ ಪುಕ್ಕಟೆ ದೊರೆಯುವದು ವಾರ್ಷಿಕ ಚಂದಾ ರೂ ೧—೪—೦

ಕಿರ್ಲೋಸ್ಕರ ಬಂಧು ಲಿಮಿಟೆಡ್; { ಕಿರ್ಲೋಸ್ಕರವಾಡಿ, ಜಿಲ್ಲಾ ಸಾತಾರಾ.

ಅಮೃತಾಂಜನ.

ಇದರ ಉಪಯೋಗದಿಂದ, ನಾಶವೇಗನೆ, ಉಳುಕು ಇತ್ಯಾದಿ ವ್ಯಾಧಿಗಳಮೇಲೆ, ರಾಮಬಾಣದಂತಾಗಿರುವದು. ಕಳೆದ ೨೫ ವರ್ಷಗಳಿಂದ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗುವದು ಲಕ್ಷಗಟ್ಟಲೆ ಕುಟುಂಬಗಳು ಅಮೃತಾಂಜನವನ್ನು ಉಪಯೋಗಿಸುತ್ತಿರುವರು ಇದರಿಂದ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಬೇಗು, ಸಂಧಿವಾತ ಮೊದಲಾದ ಎಷ್ಟೋ ವ್ಯಾಧಿಗಳಮೇಲೆ ಇದು ಗುಣಕಾರಿಯೆಂದು ಅರಿಯುವವರು ಅದ ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು. ಕಿಮ್ಮತು ೧೦ ಆಣೆ ವ್ಹಿ. ಪಿ ಖರ್ಚು ಬೇರೆ.

ಅಮೃತಾಂಜನ ಡಿಪೋ, ಫೋರ್ಟ. ಮುಂಬಯಿ

Printed and Published by Krishnarao Keshav Shenvi (Editor) at his Star of Kanara Press Kumta.

Reg. No. B. 1270

Monday May 24th, 1926.

ವರ್ಷ ೧೦.

ಕಾನಡಾವೃತ್ತ.

ಸಂಚಿಕೆ ೨೨.

THE KANARA NEWS.

ಪತ್ರದ ವರ್ಗಣಿ

ಕುಮಟೆಯಲ್ಲಿ ಅಗಾವು ರೂಪಾಯಿ 2-4-0.
ಮನಿಯಾರ್ಡರಿಯಿಂದ ರೂ. 3-0-0.
ಅಂಚೆವೆಚ್ಚ ಸಹಿತ ರೂಪಾಯಿ 3-2-0.
ಬಿಡಿ ಸಂಚಿಕೆಗೆ 0-1-0

ಜಾಹಿರಾತುಗಳ ದರ

ಕನ್ನಡ, ಇಂಗ್ಲಿಷ ಸ್ಮಾಲ ಪೈಕಾದ (೧೨ ಎಮ್ ಅಗಲ) ೮ ಸಾಲುಗಳವರೆಗೆ ರೂ. 1-0- ೮ ಸಂಕ್ತ ಪ್ರತಿಸಾಲಿಗೆ 0-2-0. ಜಾಹಿರಾತು ಸಾಲು ಎಷ್ಟು ದೊಡ್ಡದಿರುವದೋ ಆ ಮಾಪದಿಂದ ಅಷ್ಟು ಸಾಲುಗಳೆಂದು ತಿಳಿಯಲ್ಪಡುವದು. ಬಾಕಿ ಜಾಹಿರಾತುಗಳ ಬಗ್ಗೆ ಪತ್ರವ್ಯವಹಾರ ಮಾಡಿ ನಿಶ್ಚಯಿಸಲ್ಪಡುವದು.

[illegible]
[illegible]

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

(ಕುಮಟಾ—ಕಾನಡಾವೃತ್ತ ಸೋಮವಾರ, ತಾರೀಖು ೨೪ ಮಾಹೆ ಮೇ ಸನ್ ೧೯೨೬ ನೇ ಇಸವಿ.)

हिंदुस्थानांतील रहिवाशांस ज्याप्रमाणें हिंदुस्थानची हवा मानमानेच हें औषध हिंदुस्थानांतील लोकांस ज्यास्त फायदेशीर आहे.

द्राक्षासव- दीड रतलची किंमत १ रुपये;

रामबाण औषधें —
सर्दि घालविणारें,
भूक वाढविणारें,
श्वासोच्छ्वास साफ करणारें,
झोंप आणणारें,
शक्ति देणारें,
तेजस्वीपणा आणणारें,
— पिण्यास रुचिकर.

कॅटलॉग मागवा,

पंडुफार्मास्युटिकलवर्क्स लिमिटेड,
मुंबई नं. १३

एजंट— मेसर्स पंडित आणी कंपनी,
तीर्थहळ्ळी

ಬೇಕಾದ ಚಿನ್ನಾಭರಣಗಳು ನಮಗೆ ಆರ್ಡರ ಕೊಟ್ಟಲ್ಲಿ ಯೋಗ್ಯ ಮುದ್ದತ್ತಿನಲ್ಲಿ ಕೊಡುವೆವು.

R. S. KASARGOD. B. A.
Jewellers, KUMTA.

ಆರ್. ಎಸ್. ಕಾಸರಗೋಡ, ಬಿ ಎ,
ರತ್ನಾಭರಣ ವ್ಯಾಪಾರಿ, ಕುಮಟಾ.

ಯಾವದೇ { ಆಕಾರದ / ನಕ್ಷೆಯ / ನಂಬರಿನ } ಗಡಿಯಾರವನ್ನು

ಬರೇ ೭ ರೂಪಾಯಿಗಳಿಗೆ ಕೊಡುತ್ತೇವೆ.
ಮೂಲ ಬೆಲೆ ರೂಪಾಯಿ ೧೪; ಅರ್ಧ ಬೆಲೆ ರೂಪಾಯಿ ೭;

ಕೇವಲ ಒಂದು ತಿಂಗಳ ಬಗ್ಗೆ. ನಾವು ಈ ದರವನ್ನು ಹೊಸ ವರ್ಷದಲ್ಲಿ ಮಾತ್ರ ಕೊಡುತ್ತೇವೆ. ಎಲ್ಲಾ ಗಡಿಯಾರಗಳನ್ನು ಅರ್ಧ ಬೆಲೆಗೆ ಮಾರುತ್ತೇವೆ. ಅತ್ಯುತ್ತಮ ಚಲನೆ! ನಿರ್ದೋಷ ಯಂತ್ರರಚನೆ !! ಧರಿಸುವದಕ್ಕೆ ಯೋಗ್ಯ ಹಾಗು ರಮ್ಯ !!! ಎಲ್ಲಾ ಗಡಿಯಾರಗಳಿಗೆ ಗ್ಯಾರಂಟಿ ಇರುತ್ತದೆ. ಯಾವದೇ ಆಕಾರದ, ನಕ್ಷೆಯ, ನಂಬರಿನ ಕೈ ಗಡಿಯಾರವನು ಉತ್ಕೃಷ್ಟ ಲೇಸು ಪಟ್ಟಿಯ ಸಹಿತ ಉಚಿತವಾಗಿ ಕೊಡುತ್ತೇವೆ. ಬೆಲೆ ರೂಪಾಯಿ ೭ ಮಾತ್ರ!

ಅಲ್ಪವೇ ಇವೆ; ಈಗಲೇ ಬರೆಯಿರಿ.

ಪತ್ತೆ:— **Swan House: P B 508 P T Madras**

ಅತ್ಯಲ್ಪವಿವೆ! ಉಚಿತ

ಕೇವಲ ಉಚಿತ



ಉಚಿತ ಕೇವಲ ಉಚಿತ

"ತಾರಾ" ಲೀವರ ರಿಜಿಸ್ಟರ್ಡ ಪಾಕೆಟ್ ವಾಚು ೧೪ ಕೆರೆಟ್ ರೋಲ್ಡ ಗೋಲ್ಡಿನದು. ಜಾಯಬಿಲ್ಲಿಯು ಮೇಲೆ ೫ ವರ್ಷದ ಗ್ಯಾರಂಟಿ ಇರುವದೆಂದು ಗಡಿಯಾರದವರು ಅಚ್ಚು ಹಾಕಿರುತ್ತಾರೆ. ಈ ಗಡಿಯಾರವನ್ನು ಕೊಂಡುಕೊಳ್ಳುವವರಿಗೆ ನಾವು ಪಕ್ಕಾ "ಸಿ" ರಿಜಿಸ್ಟರ್ಡ ಟೈಂಪೀಸನ್ನು ಉಚಿತವಾಗಿ ಕೊಡುತ್ತೇವೆ. ಇದೊಂದು ಅಪೂರ್ವ ಕಾಣಿಕೆ. ಕೆಲವೇ ಗಡಿಯಾರಗಳಿವೆ. ಒಮ್ಮೆ ಕೊಂಡು ನೋಡಿರಿ! ಉಚಿತವಾಗಿ ಸಿಗುವ ಹಾಗು "ತಾರಾ" ಲೀವರ ರಿಜಿಸ್ಟರ್ಡ ೧೪ ಕೆರೆಟ್ ರೋಲ್ಡ ಗೋಲ್ಡಿನ ಪಾಕೆಟ್‌ವಾಚ್ ಗಡಿಯಾರಗಳಿಗೆ ಕೇವಲ ಬರೇ ರೂಪಾಯಿ ೫

ಎಲ್ಲಾ ನೋವುಗಳಿಗೆ ದಿವ್ಯೌಷಧವು

ವಾತಹಾರಿ ತೈಲ.

ಕ್ರಯ ೫ ತೋಲಿ ಬಾಟ್ಲಿ ೧ ಕ್ಕೆ ೦—೧೨—೦. ಉಂಚಿ ಸುವಾಸಿಕ ಕಾಬೂಲಿ ಹಿಂಗು ೧೦ ತೋಲಿ ಡಬ್ಬಿ ೧ ಕ್ಕೆ ೧—೮—೦, ಹಿಂಗಿನ ಅರ್ಕ ... ತೋಲೆಯ ಬಾಟ್ಲಿ ೧ ಕ್ಕೆ ೦—೮—೦ ರಕ್ತಶುದ್ಧಿಕಾರಕ ಧಾತು ಪೌಷ್ಟಿಕ, ಶಕ್ತಿವರ್ಧಕ ಸಬಜಾ ೩೦ ತೋಲಿಯ ಡಬ್ಬಿ ೧ ಕ್ಕೆ ೧—೪—೦, ೧ ತೋಲೆಯ ಹಿಂಗಿನ ವಡಿಗಳು ಡಜನ್ ೧ ಕ್ಕೆ ೨—೦—೦, ತಲೆಗೆ ಹಾಕುವ ಸುವಾಸಿಕ ಮುಷಕರಾಜ ತೈಲ ೫ ತೋಲಿಯ ಬಾಟ್ಲಿ ೧ ಕ್ಕೆ ೦—೧೨—೦ ಹುಂಡ ಪೊಡು ತೋಲಿ ೧ ಕ್ಕೆ ೦—೮—, ಇದಲ್ಲದೆ, ನೀಲಗಿರಿ ತೈಲ, ಎಲ್ಲಾ ತರದ ಊಂಚಿ ಊದಬತ್ತಿಗಳು ಯೋಗ್ಯ ಕಿಂಮತಿಗೆ ಸಿಗುವವು. ಟಪಾಲ ಖರ್ಚ ಪ್ರತ್ಯೇಕ.

ಶಿರೇಶ್ವರ ಕಾಬೂಲೀ ಹಿಂಗಿನ ದುಕಾನ,

ಗಾಂಧೀಪೂರ್ಣಿಮೆಯಿಂದ ೪ನೇ ವರ್ಷ ಪ್ರಾರಂಭ

ಸಚಿತ್ರ | ಜಯಕರ್ನಾಟಕ | ಮಾಸಪತ್ರಿಕೆ

ಸಂಪಾದಕ— ಆಲೂರ ವೆಂಕಟರಾಯರು

ಇದರಲ್ಲಿ ವಾಙ್ಮಯಾತ್ಮಕ ಸಾಹಿತ್ಯ, ಧಾರ್ಮಿಕ ಸಾಮಾಜಿಕ ಐತಿಹಾಸಿಕ ಆರ್ಥಿಕ ಇತ್ಯಾದಿ ವಿಷಯಗಳು ಬರುವವು. ಪ್ರಪಂಚ ವಿಚಾರ, ಜೀವನಚರಿತ್ರ ಮುಂತಾದವುಗಳು ಕೊಡಲ್ಪಡುವವು. ಪ್ರತಿ ಸಂಚಿಕೆಯಲ್ಲಿ ಸುಂದರ ಚಿತ್ರಗಳೂ ಬರುತ್ತವೆ. ರಾಯಲ್ ಆಕಾರದ ೩೦ ಪುಟಗಳು. ವರ್ಗಣಿ. ರೂ ೫-೮-೦ ಮ್ಯಾನೇಜರ ಜಯಕರ್ನಾಟಕ ಧಾರವಾಡ

ರೋಗದಿಂದ ನರಳಬೇಡಿರಿ.

ನಮ್ಮಲ್ಲಿ ಪಂಚ ಜುಲಾಬು, ಶಿಶು ಜುಲಾಬು, ಎಲ್ಲ ತರದ ಜ್ವರ, ಜ್ವರಗಳ್ಳೆ, ಚಳಿಜ್ವರ, ಕಾವಿಳೆ, ದಮ್ಮು, ಕೆಮ್ಮು, ಕಫ, ಅಗ್ನಿಮಾಂದ್ಯ, ಮುಟ್ಟಿನ ರೋಗ, ಪ್ರಾಯವ್ಯಾಧಿ, ನಲ, ವಾತ, ಶರೀರವಾತ, ಪ್ರದರ, ಗರ್ಭಾಶಯದ ಎಲ್ಲ ರೋಗ, ಪ್ರಮೇಹ, ಉಪದಂಶ ಗರ್ಮಿ) ಬಾಲಗ್ರಹ, ಖಜ್ಜಿ, ಗಜಕರ್ಣಗಳಿಗೆ ಖಾತ್ರಿ ಗುಣ ಕೊಡುವ ಜರ್ಮನ, ಅಮೇರಿಕನ, ಫ್ರೆಂಚ ಇಂಗ್ಲಿಷ ಪೇಟಂಟ ಔಷಧಗಳು ಬಹಳ ಅಗ್ಗವಾಗಿ ಸಿಗುತ್ತವೆ.

ಇದಲ್ಲದೆ ಎಲ್ಲ ತರದ ಸ್ಟೇಶನರಿ, ಪರಫ್ಯೂಮರಿ ಸ್ಟೇಷನರಿ ಸಾಮಾನು, ಹಿಂದುಸ್ತಾನದ, ಸುವಾಸನಯುಕ್ತ ಮೋತಿ ಬಣ್ಣದ ಬಾಟಲಿಗಳು, ಸಬಲತೆ ದರದಿಂದ ಸಿಗುವವು ನಮ್ಮಲ್ಲಿದ್ದು ನಿಮಗೆ ಅವಶ್ಯವಿರುವ ಸಾಮಾನು. ಬೇರೆ ದೇಶದಿಂದ ತರಿಸಿಕೊಡಲಾಗುವದು.

ಎಸ್ ಎಲ್ ಧಾರಪ್ಪ ಮತ್ತು ಬ್ರದರ,
ಶಿರಸಿ

ಟಿ. ಎಸ್. ಮೋಟರ ಸರ್ವಿಸ, ಶಿವಮೊಗ್ಗಾ.

ಗೇರಸಪ್ಪಾ ಜೋಗಿಗೆ ರೆಗ್ಯುಲರ್ ಸರ್ವಿಸ್

ಶಿವರಾತ್ರಿಯ ಸಮಯದಲ್ಲಿ ಗೋಕರ್ಣಕ್ಕೆ ಸ್ಪೆಶಲ್ ಲಾರಿಗಳು

(೧) ಹುಬ್ಬಳ್ಳಿ- ಯಲ್ಲಾಪುರ- ಅಂಕೋಲಾ- ಕಾರವಾರ (೨) ಹುಬ್ಬಳ್ಳಿ- ಮುಂಡಗೋಡ ಶಿರ್ಸಿ ಕುಮಟಾ- ಹೊನ್ನಾವರ ಭಟ್ಕಳ (೩) ಕುಮಟಾ ಶಿರ್ಸಿ- ಸಿದ್ದಾಪುರ- ಗೆರಸಪ್ಪಾ- ಜೋಗ (Gersappa Falls) ಸಾಗರ ಶಿವಮೊಗ್ಗಾ— ಈ ಲೈನುಗಳಲ್ಲಿ ರೆಗ್ಯುಲರ್ ಸರ್ವಿಸ ನಡೆಯುತ್ತದೆ. ಪ್ರಯಾಣಿಕರಿಗೆ ಉಳಕೊಳ್ಳ ವದಕ್ಕೆ ಎಲ್ಲಾ ಸ್ಟೇಶನ ಗಳಲ್ಲಿಯು ಪಕ್ಕಾ ಏರ್ಪಾಡು ಮಾಡಿದೆ. ಹೆಚ್ಚಿನ ಮಾಹಿತಿಯನ್ನು ಆಫೀಸಿನಲ್ಲಿ ತಿಳಿದುಕೊಳ್ಳಬಹುದು

M Manjappa
PROPRIETOR.

अगदीं फुकट.

वैद्यविद्या.

आरोग्यसंपत्ति आणि पूर्ण सुखाचा सरळ रस्ता दाखविणारे "वैद्यविद्या" नावाचा मोठा आयुर्वेदीक पुस्तकाची नवीन आवृत्ति बाहेर पडली आहे. हें पुस्तक कीमत व पोष्ट खर्च घेतल्या शिवाय अगदीं फुकट पाठविण्यांत येते. तरी हे पुस्तक आजच मागवा.

प्रमेहावर रामबाण औषध.

मेहमर्दनचूर्ण.

हें चूर्ण फक्त तीन दिवस लागोपाठ घेतल्याने लघवीस होणारी आग, लघवी थांबून थांबून होणें व्याधि या औषधाच्या सेवनानें एकदम बरे होतात.

कि. १० तोळ्याच्या डब्यास रु. १.

राजवैद्य नारायणजी केशवजी, जामनगर (काठेवाड).

कुमटा एजन्ट— माधव मांतप्पा शेणवी, वेलकेरी.

ರಾಗದ ಪೆಟ್ಟಿಗೆಗಳು.

ತಬಲೆ ಜೋಡಿ ಇತ್ಯಾದಿ ಗಾಯನ ಸಾಮಾನು.



೧. ರಾಗದ ಪೆಟ್ಟಿಗೆ ಕಿಂ. ೩೦, ೪೦, ೬೦, ೭೫, ೧೦೦.
೨. ಕಾಲು ಪೆಟ್ಟಿಗೆ ಕಿಂ. ೬೫, ೭೫, ೧೨೦, ೧೫೦.
೩. ತಬಲೆ ಜೋಡಿ ಕಿಂ. ೧೬, ೧೮, ೨೦, ೨೫.
೪. ಹಾರ್ಮೋನಿಯಮ್ ಗೈಡ ಮರಾಠಿ ಕಿಂ. ೧೫, ತಬಲೆ ಗೈಡ ಕಿಂ. ೧೨ ಆ.

ವಿಶೇಷ ಮಾಹಿತಿಬಗ್ಗೆ ನಮ್ಮ ಮರಾಠಿ ಕ್ಯಾಟಲಾಗ್ ಪುಕ್ಕಟೆ ಕೊಡುವೆವು.

ಪತ್ರವ್ಯವಹಾರ ಮರಾಠಿಯಿಂದ ಇಲ್ಲವೆ ಇಂಗ್ರಜಿಯಿಂದ ಮಾಡಬೇಕು.

ಪತ್ತೆ:-ಗೋಪಾಳ ಸಖಾರಾಮ ಮತ್ತು ಕಂಪನಿ, ವಿಠ್ಠಲವಾಡಿ ಎದುರಿಗೆ ೨೬೨ ಕಾಳಬಾದೇವಿ ಮುಂಬಯಿ

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕೇಟುಗಳು ಮತ್ತು ಸುವರ್ಣಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು.

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ

ಈ ಮಧುವು ಮಹೌಷಧಿಯಾಗಿದ್ದು ಬಹಳ ಸೀಯಾಗಿಯೂ ರುಚಿಕರವಾಗಿಯೂ ಇರುತ್ತದೆ. ಈ ಮಧುವ ಸೇವನದಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ವಿಕೃತಿಯಿಂದಾದ ಬೇನೆಯು ಹೋಗುವದು ೬೦ ೭೦ ವರ್ಷದ ಮುದುಕರು ಕೂಡ ಶಕ್ತಿ ತರುಣರಂತೆ ಪ್ರವರ್ಧಮಾನವಾಗುವರು. (ನಿಜವಾಗಿ ಒಂದೇ ಸಪ್ತಕದಲ್ಲಿ ಅನುಭವಕ್ಕೆ ಬರುವದು) ಜನನೇಂದ್ರಿಯದೊಳಗಿನ ಕರಿಯು ಹೋಗಿ ಪ್ರಾಣವಾದ ಪುರುಷತ್ವವು ಇಲ್ಲದಂತಾಗುವದು ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ ಧಾತು ಬಂದಾಗುವದು — ಪರಮ ಹುಗಿಲ ಕಾಸಿಂದ ದೂಷಿತವಾದ ಶರೀರವು ನಿರ್ದೋಷವಾಗುವದು. ಮೂರೇ ದಿವಸದಲ್ಲಿ ಗುಣಬರುವದು ತರುಣ ಸ್ತ್ರೀಪುರುಷರು ಈ ದ್ರಾಕ್ಷಾರ್ಕ ಮಧುವ ಸೇವನ ಮಾಡಿ ಇದರೊಳಗಿನ ಗುಣ ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ, ಉದರರೋಗ ಮುಂತಾದ ಇತರ ರೋಗಗಳು ನಾಶವಾಗುವವು ದಿನಾಲು ಮಧುವ ಸೇವಿಸಿದರೆ ಅನ್ನ ಪಚನವಾಗಿ ಹಸಿವೆ ಹೆಚ್ಚಾಗಿ ಆಗುತ್ತದೆ, ಇದರ ಅನುಭವವು ಕೊಡಲನೇ ದಿವಸವೇ ಬರುವದು. ಶೌಚ ಶುದ್ಧ ಆಗುವದು. ಸ್ವಪ್ನದಲ್ಲಿ ಎಷ್ಟೋ ದಿವಸದ ಧಾತು ಹೋಗುತ್ತಿದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ಔಷಧಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ ಹೊಸಬೇನೆ ಇದ್ದರೆ ೧೦ ದಿವಸ ಸಾಲುವ ಒಂದು ಬಾಟಲಿಯಿಂದ ಗುಣಬರುವದು. ಹಳೇ ರೋಗವಿದ್ದರೆ ೩ ಬಾಟಲಿಯಿಂದ ಗುಣಬರುವದು. ಒಂದು ಬಾಟ್ಲಿಯ ಕಿಮ್ಮತ್ತು ೧। ರೂಪಾಯಿ ಮೂರು ಬಾಟಲಿಯ ಕಿಮ್ಮತ್ತು ೩—೦ ಮೂರು ಬಾಟಲಿಗಳನ್ನು ಒಂದೇ ಪಾರ್ಸಲಿನಲ್ಲಿ ಕಳಿಸುತ್ತೇವೆ. ಅಂದರೆ ಟಪಾಲಖರ್ಚ ಹೆಚ್ಚು ಬೀಳುವದಿಲ್ಲ. ಡಜನ ಬಾಟಲಿಗಳ ಕಿಮ್ಮತ್ತು ೧೨—೦—೦ ಮತ್ತು ೧ ಬಾಟಲಿ ಪುಕ್ಕಟೆ ಕೊಡುವದು. ಟಪಾಲ ಖರ್ಚ ಬೇರೆ ಬೀಳುವದು. ಹಿಂದುಸ್ಥಾನ ಕಡೆಯಿಂದ ೧ ಬಾಟ್ಲಿಗೆ ೧—೦—೦ ೩ ಬಾಟ್ಲಿಗೆ ೩—೦—೦ ಡಜನಿಗೆ ೧೩—೧—೦

ವ್ಯವಸ್ಥಾಪಕ— ದ್ರಾಕ್ಷಾರ್ಕಮಧು ಆಫೀಸ, ಪ್ರೋ. ನಿಪ್ಪಾಣಿ ಜಿ. ಬೆಳಗಾಂವ

ಪುರುಷಾರ್ಥ

ಎರಡು ಚಿತ್ರಗಳು.

[ಲೇಖಕ:— ಅಜ್ಞಾತ.]

[ಶ್ರೀ ಮಹಾದೇವಭಾಯಿ ದೇಸಾಯಿಯವರು ಗುಜರಾಥಿ 'ನವಜೀವನ' ಪತ್ರಿಕೆಯಲ್ಲಿ ಬರೆದ ಲೇಖದ ಅನುವಾದ.]

(೧)

ನಾನು ಇಂದು ಪುರುಷಾರ್ಥದ ಎರಡು ಚಿತ್ರಗಳನ್ನು ಕೊಡಬಯಸುತ್ತೇನೆ. ಒಂದು ಪಾಶ್ಚಾತ್ಯ ಕಥೆಯದು; ಎರಡನೇದು ಹಿಂದುಸ್ಥಾನ ಕಥೆಯದು. ಎರಡೂ ಚಿತ್ರಗಳಲ್ಲಿಯೂ ಬಹಳ ಪ್ರಕಾರದಿಂದ ಗೂಢತ್ವ ತುಂಬಿಕೊಂಡಿದೆ. ಎರಡೂ ಉದಾಹರಣೆಗಳಿಂದ ನಾವು ಬಹಳ ಜ್ಞಾನಾರ್ಜನ ಮಾಡಬಹುದು. ಎರಡರಲ್ಲಿಯೂ ಅಜಗಜಾಂತರವಿದೆ. ಎರಡೂ ಚಿತ್ರಗಳು ಕಲ್ಪನಾಸೃಷ್ಟಿಯೊಳಗಿನವೇ; ಆದರೆ ಕಲ್ಪನಾಸೃಷ್ಟಿಯೊಳಗಿನ ಕಥೆಗಳಲ್ಲ. ಮೊದಲನೇ ಚಿತ್ರವು ಫ್ರಾನ್ಸ ದೇಶದ ರಾಜಧಾನಿಯಾದ ಪ್ಯಾರಿಸ ಪಟ್ಟಣದೊಳಗಿನ ವಿದ್ಯಾಪೀಠದ ಕಾಯಿದೆ ಶಾಸ್ತ್ರದ ಅಧ್ಯಾಪಕರಿಂದ ತೆಗೆದದ್ದು, ಅದನ್ನು ಅವರ ಶಬ್ದಗಳಲ್ಲಿಯೇ ಕೊಡುವೆನು.

"ಮಹಾಶಯರೇ, ಇಲ್ಲಿ ಕ್ಷಮಿಸಬೇಕು; ನನ್ನಿಂದ ಒಂದು ಅಪರಾಧವನ್ನು ಅಂಗೀಕರಿಸಲಾರೆನು; ಕಳೆದ ವರ್ಷ ನಾನು ನನ್ನ ನಗರದಲ್ಲಿ ಇರುತ್ತಿದ್ದೆನು. ಮುಂದಿನ ವರ್ಷಕ್ಕೆ ನಾನು ರಾಜ್ಯಕಟ್ಟನೆಯ ಪರೀಕ್ಷೆಯನ್ನು ನನ್ನ ಮುಂದೆಯೇ ಕೊಡುವವನಿದ್ದೇನೆ.' ಇದನ್ನು ಅರಿದವನು ಒಬ್ಬ ಮೋಟಾರ ನಡಿಸುವವನು. ಅವನ ಮೋಟಾರ ಗಾಡಿಯಲ್ಲಿ ಕೂತು ನಾನು ಮನೆಗೆ ಬಂದೆ. ಅವನಿಗೆ ನಾನು ಇನಾಮು ಕೊಡ ಮಾಡಿದೆ. ಆ ಸಮಯ ಅವನು ಅಂದ ಮಾತುಗಳೆಷ್ಟು! ಮೋಟಾರ ನಡಿಸುವವನು ತ್ರ್ಯೆವ್ಹರನ ಟೊಪ್ಪಿಗೆಯನ್ನು ಧರಿಸಿದ್ದನು. ಸ್ವಲ್ಪ ಅತ್ತಗೆ ಒಟ್ಟು ನೋಡಲು, ಅವನು ನನ್ನ ವಿದ್ಯಾರ್ಥಿಯೆಂದು ತಿಳಿಯಿತು. ಈ ಚಂಚಲ ಎಳೆ ಹುಡುಗನ ಮುಖಚರ್ಯೆಯು ಚಿತ್ತಾಕರ್ಷಕವಿತ್ತು. 'ನನ್ನ ವಿದ್ಯಾರ್ಥಿಯಾಗಿದ್ದೇನೆ' ಎಂದು ಅವನು ಹೇಳಿದನು. ಆ ಸಮಯ ಅವನ ಮೋರೆಯ ಮೇಲೆ ಆನಂದದ ತೆರೆಗಳು ಏಳುತ್ತಿದ್ದವು. ಅವನ ಪೂಜ್ಯಭಾವವನ್ನು ನೋಡಿ, ಅವನಿಗೆ ನಾನು ಮಾರನೇ ದಿನ ನನ್ನಲ್ಲಿ ಊಟಕ್ಕೆ ನಿಮಂತ್ರಿಸಿದೆನು.

'ನನಗೆ ಸ್ವಲ್ಪ ಅಗಲಿಗೆಯಿಂದ ಹೋಗಬೇಕಾಗಿದೆ. ಕೆಲವೊಂದು ಮಹತ್ವದ ಕೆಲಸದ ಮೇಲೆ ನಾನು ಹಾಜರಾಗಬೇಕಾಗಿದೆ,' ಎಂದು ಅವನು ನಮ್ರನಾಗಿ ನುಡಿದು ತೆರಳಿದನು.

ಮಾರನೇ ದಿನ ಅವನು ಊಟಕ್ಕೆ ಬಂದನು. ನಮ್ಮಿಬ್ಬರೊಳಗೆ ಸಂಭಾಷಣವಾಯಿತು. ಈ ಸಂಭಾಷಣವನ್ನು ಶಬ್ದಶಃ ಇದರಲ್ಲಿ ಕೊಟ್ಟಿರುವೆನು.

'ನನಗೆ ವಕೀಲನಾಗುವದಿದೆ; ಕಾಯಿದೆಯಲ್ಲಿ ನನಗೆ ಅಭಿರುಚಿಯಿದೆ; ಆದರೆ ನಾನು ಒಬ್ಬ ದರಿದ್ರ ಅಮಲದಾರನ ಮಗನು, ನನ್ನ ತಂದೆಗೆ ಐದು ಮಕ್ಕಳು; ನಾನು ಎಲ್ಲರಿಗಿಂತಲೂ ಹಿರಿಯನು; ಅವರೆಲ್ಲರಿಗೆ ವಿದ್ಯೆ ಕಲಿಸಲಿಕ್ಕೆ ಯಾವದೂ ಸಾಧನವಿಲ್ಲ. ಮನೆ ಬಿಟ್ಟು ಪ್ಯಾರೀಸದಲ್ಲಿ ಶಿಕ್ಷಣಹೊಂದಲಿಕ್ಕಾಗಿ ಅಲ್ಲಿ ಉಳಿಕೊಳ್ಳಲು ನನಗೆ ಹ್ಯಾಗೆ ಸಾಧ್ಯವು? ನನ್ನ ತಾಯಿಯು ಮನೆಯ ಕೆಲಸಗಳಲ್ಲಿ ಬಹಳ ವ್ಯಗ್ರಳಾಗಿಯೂ, ಮಿತವ್ಯಯದಿಂದಲೂ ನಡೆಯುತ್ತಿದ್ದಾಳೆ. ಇದರ ಕಲ್ಪನೆಯು ಯಾರಿಗೂ ಬರಲಾರದು. ಆದರೂ, ಮನೆಯ ಸಂಸಾರ ನನ್ನ ನಡಿಸಿಕೊಳ್ಳುವದು ಕಠಿಣವಾಗುತ್ತದೆ. ಇಂಥ ಸ್ಥಿತಿಯಲ್ಲಿ ನನ್ನ ವಿದ್ಯಾಭ್ಯಾಸಕ್ಕಾಗಿ ತಂದೆತಾಯಿಯವರು ಹೇಗೆ ನೆರವಾಗಬಲ್ಲರು? ಮೆಟ್ರಿಕದ ಅಭ್ಯಾಸ ಮುಗಿಸಿದೆನು. ಒಬ್ಬ ಆಪ್ತನಿಂದ ಮೋಟಾರ ನಡಿಸಲು ಕಲಿತೆನು. ಮೋಟಾರ ನಡಿಸುವ ಪರವಾನಗಿಯನ್ನು ಸಂಪಾದಿಸಿದೆನು. ಈ ಪ್ರಕಾರ ಮೋಟಾರ ನಡಿಸುತ್ತಿರಲು, ಅನಪೇಕ್ಷಿತವಾಗಿ ನನ್ನ ಉದ್ದಿಷ್ಟ ಕಾರ್ಯವನ್ನು ಸಾಧಿಸುವ ಉಪಾಯವು ನನಗೆ ಹೊಳೆಯಿತು.

'ಪ್ಯಾರೀಸದೊಳಗಿನ ಕಾಯಿದೆಯ ಕಾಲೇಜಿನಲ್ಲಿ ಹೋಗುವದು; ಮೋಟಾರ ಡ್ರ್ಯೆವ್ಹರನ ನೌಕರಿಯಂತೂ ಅಲ್ಲಿ ಸಿಕ್ಕೇ ಸಿಗುತ್ತದೆ. ಅದರಿಂದ ಕಾಲೇಜಿನ ಖರ್ಚು ನಡೆಯುವದು; ಸ್ವ, ಸ್ವ, ನನಗೆ ಜೀವನ ಕಾರ್ಯದ ಕೀಲಿಕೈ ಸಿಕ್ಕಿಹೋಯಿತು, ಎಂದು ನನಗನಿಸಿತು.'

ಆದರೆ, ನಿನಗೆ ಮೋಟಾರನ್ನು ನಡಿಸಬೇಕಾದ್ದರಿಂದ ಕಾಲೇಜಿಗೆ ಹೋಗಲಿಕ್ಕೂ, ಅಭ್ಯಾಸ ಮಾಡಲಿಕ್ಕೂ ಹೊತ್ತು ಹ್ಯಾಗೆ ಸಿಗುತ್ತದೆ?

ಹಾಗೋ, ನನ್ನ ಸಮಯದಕ್ರಮವು. ದಿನಾ ರಾತ್ರಿ ೧೦ ಘಂಟೆಯಿಂದ ಮುಂಜಾವು ೭ ಘಂಟೆಯ ವರೆಗೆ ಮೋಟಾರು ನಡಿಸುತ್ತೇನೆ. ಈ ಪ್ರಕಾರದಿಂದ ಬಹಳ

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ.

ಕಾಮಿನಿಯಾ ತೈಲ. ರಿಜಿಸ್ಟರ್ಡ

ಮೃದುವಾದ, ಗುಂಗುರು ಗುಂಗುರಾಗಿರುವ ನೀಳವಾಯಿಂದ ನಿಬಿಡವಾದ ಕೇಶವನ್ನು ಯಾವ ನಾರಿಯು ತಾನೇ ಬಯಸದೆಯಿಲ್ಲಳು? ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿಕೊಡತಕ್ಕ ಉಪಕರಣವಾವದೆಂದರೆ,

ಕಾಮಿನಿಯಾ ಆಯಿಲ್ ರಿಜಿಸ್ಟರ್ಡ

ಈ ಆಯಿಲ್ ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತದೆಯೋ ಹಾಗೆಯೇ ಮಾನಸಿಕ ಶಾಂತಿಯನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಆಗತ್ಯದ ಸಹಕಾರಿಯಾಗಿರುತ್ತದೆ. ಈ ಆಯಿಲ್ ಹಚ್ಚಿಕೊಳ್ಳುವದೇ ತಡ ಮಸ್ತಕದ ಬೇನೆಯು ಕಣ್ಮರೆಯಾಗಿ ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ಹಚ್ಚುವದರಿಂದ ಬಿಳಿ ಎಂದಿಗೂ ಉದುರಿ ಬಿದ್ದು ಹೋಗಲಾರವು, ಆದರೆ, ಅವು ದೀರ್ಘವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮನೋಹರವೂ ಆಗಿರುತ್ತದೆ.

ಕೀಳು ತರದ ಎಣ್ಣೆಗಳನ್ನು ಕೊಂಡುಕೊಂಡು ತಮ್ಮ ಹಣವನ್ನು ಕಳೆಯುವುದು ಹಾಳುಮಾಡಿಕೊಳ್ಳುವದಕ್ಕಿಂತ ಒಂದೇಯೊಂದು ಬಾರಿ "ಕಾಮಿನಿಯಾ ಆಯಿಲ್" ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯು ಹೆಸರಿಂದ ನಮಗೆ ೧,೫೦೦ ಪ್ರದರ್ಶನದಲ್ಲಿ "ಸರ್ಟಿಫಿಕೇಟ ಆಫ್ ಮೆರಿಟ" ಅಥವಾ ಯೋಗ್ಯತಾಪತ್ರವೂ ಅದರ ಸಾವಿರಾರು ಗೃಹಸ್ಥರು ಉಪಯೋಗಿಸಿ ಕೊಟ್ಟ ಪ್ರಮಾಣಪತ್ರಗಳೂ ದೊರತವೆ.

ಕ್ರಯ:— ಸೀಸೆಗೆ ರೂಪಾಯಿ 1-0-0, ಸೀಸೆ 3ಕ್ಕೆ ರೂಪಾಯಿ 2-10-0. ವಿ. ಪಿ. ಖರ್ಚು 0-14-0.

ಅತಿ ಮನೋಹರವಾದ ಸುರಭಿಯು !

ಒಟ್ಟೋ-ದಿಲ್ ಬಹಾರ್ !! ರಿಜಿಸ್ಟರ್ಡ.

ಈ ಸುಗಂಧದ್ರವ್ಯವು ಮಧುರ, ಕೋಮಲ, ಚಿರಸ್ಥಾಯಿ ಮತ್ತು ಅತ್ಯುತ್ತಮವು ಆಗಿರಲು ಪರೀಕ್ಷಿಸಿ ಅಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧಮಾಡಿದೆ. ಇದರಲ್ಲಿ ಮದಿರೆಯ (ಆಲ್ಕೋಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈ ವಸ್ತ್ರದಲ್ಲಿ ಅಥವಾ ಅಂಗಿಯಲ್ಲಿ ಈ ದ್ರವ್ಯದ ಕೆಲವು ಹನಿಗಳನ್ನು ಹಾಕಿದರೆ ನಿಮ್ಮ ಮಾತಲು ಸ್ವರ್ಗೀಯವಾದೊಂದು ಪ್ರಸನ್ನತೆಯು ಅರಿವಿಗೆ ಬರುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೇ ಇರಲಿ, ಈ ಒಟ್ಟೋ-ದಿಲ್ ಬಹಾರದ ಗಂಧವು ಅವೆಲ್ಲವುಗಳನ್ನು ವಿಶಾಲ ಮನಸ್ಸಿನವನ ಹಾಗೆ ಸೆಳೆಕೊಳ್ಳುವದು. ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ.

ಸಣ್ಣ ಸೀಸೆ 1 ಕ್ಕೆ 0 8 0; 1 ಡ್ರಾಮಿನ ಮಧ್ಯಮ ಸೀಸೆ 1 ಕ್ಕೆ 0 12 0; ½ ಔನ್ಸಿನ ದೊಡ್ಡ ಸೀಸೆ 1 ಕ್ಕೆ 2 0 0. ಅಂಚೆಯ ವೆಚ್ಚ ಬೇರೆ 0 4 0

ಒಟ್ಟೋ-ದಿಲ್ ಬಹಾರ್ ಪರಿಮಳ ಕಾರ್ಡುಗಳು ಡಜನ್ 1 ಕ್ಕೆ 0 12 0.

Address: **The Anglo Indian Drug & Chemical Co**

16, Market, **BOMBAY 2**

ದಾಗುತ್ತದೆಂದು ತಿಳಿಯಬಾರದು ಮುಖ್ಯ ಸಂಗತಿ ಯೆಷ್ಟೇ ನಿಯಮಿತ ಆಹಾರ ನಿಯಮಿತ ನಿದ್ರೆ ಇವಿಷ್ಟು ನಿಶ್ಚಿತಂದರಾಯಿತು. ನನ್ನ ಹೋಟೇಲ ಕೆಲಸ ಮುಗಿಯಿತೆಂದರೆ, ೩ ಘಂಟೆಗೆ ನಾನು ನನ್ನ ಕೋಣೆಗೆ ಬರುತ್ತೇನೆ, ಉಡುಪನ್ನು ಬದಲಿಸುತ್ತೇನೆ, ಮತ್ತು ಸಮೀಪದಲ್ಲಿದ್ದ ಚಿಕ್ಕ ಭೋಜನಗೃಹದಲ್ಲಿ ಹೊಟ್ಟೆತುಂಬ ಊಟ ಮಾಡುತ್ತೇನೆ ಸರಿಯಾಗಿ ೮॥ ಬಡಿಯಿತೆಂದರೆ, ಕಾಲೇಜಿಗೆ ಹೋಗುವೆನು. ಅಲ್ಲಿ ನಾನು ಹೊಸ ಹುರುಪಿನಿಂದಲೂ, ಹೊಸ ಚೈತನ್ಯದಿಂದಲೂ ಕಲಿಯಲು ತಯಾರಿರುವೆನು ವರ್ಗದಲ್ಲಿ ನಾನು ಲಕ್ಷ್ಯವಾಗಲೂ ನಿಯಮಿತ ಹೊತ್ತಿಗಿಂತ ಮುಂಚೆಯೇ ಹೋಗುತ್ತೇನೆ ಇದರಿಂದ ನನಗೆ ಕೂಡ್ರಲು ಉತ್ತಮ ಪ್ರತಿಯ ಸ್ಥಳವು ಸಿಗುತ್ತದೆ. ಬೇಕಷ್ಟು ಟಿಪ್ಪಣಿಗಳನ್ನು ನಾನು ತೆಗೆದುಕೊಳ್ಳುತ್ತೇನೆ ಮೂರೂ ವರ್ಗಗಳಲ್ಲಿ ಅಧ್ಯಾಪಕರ ಭಾಷಣಗಳನ್ನು ಕೇಳಿ, ಮಧ್ಯಾಹ್ನ ೧೨ ಬಡಿಯುತ್ತಲೇ ಮನೆಗೆ ಹೋಗುವೆನು ಊಟ ಮಾಡುವೆನು. [illegible], [illegible] ಬಿಡುವೆನು ಸರಿಯಾಗಿ ರಾತ್ರಿ ೮ ಬಡಿಯುತ್ತಲೇ ಏಳುವೆನು

ಆದರೆ, ಪರೀಕ್ಷೆಯ ಸಲುವಾಗಿ ಹ್ಯಾಗೆ ತಯಾರಿ ಮಾಡುತ್ತೀ?'

ಈ ಪ್ರಶ್ನೆ ನಾನು ಸ್ವಲ್ಪ ಅವಸರ ಮಾಡಬೇಕಾಯಿತು ಬಹಳನ್ನು ನಾನು ಒಪ್ಪುವೆನು ನನಗೆ ಒಳ್ಳೇ ಸ್ಮರಣಶಕ್ತಿ ಇದೆ, ಕಾರಣವೇನೆಂದರೆ, ಪ್ರತಿಯೊಂದು ಸಂಗತಿಯಲ್ಲಿಯೂ ನಾನು ಏಕಾಗ್ರಚಿತ್ತದಿಂದ ದುಡಿಯುತ್ತೇನೆ ನನ್ನ ಹತ್ತರ ಬೇಕಾದಷ್ಟು ಟಿಪ್ಪಣಿಗಳಿವೆ ಅವಕ್ಕೇನು ಕೊರತೆಯಿಲ್ಲ ಇದರಿಂದ [illegible] ಉತ್ತಮ ಅಭ್ಯಾಸದ ಟಿಪ್ಪಣಿಗಳು ತಯಾರು ಇದರಿಂದ ನನಗೆ ಒಳ್ಳೇ ಸಹಾಯವಾಗುತ್ತದೆ ರಾತ್ರಿ ಹೋಟೇಲ ನಡಿಸುವಾಗ ಅಲ್ಲಲ್ಲಿ ಬಹಳ ಸಾರೆ ನಿಲ್ಲಬೇಕಾಗುತ್ತದೆ ಆ ಸಮಯ ಯಾವ ಮಾತೊಂದು [illegible] ಹೋಗಿ ನನ್ನ ಟಿಪ್ಪಣಿಗಳನ್ನೂ ಇತರ ಪುಸ್ತಕಗಳನ್ನೂ ಓದುತ್ತೇನೆ ಕಾಲೇಜಿನ ಟರ್ಮ ಮುಗಿದ ಬಳಿಕ [illegible] ೧ ತಿಂಗಳ ಮುಂಚೆಯಾಗಿ ಪರೀಕ್ಷೆಯ ತಯಾರಿಗೋಸ್ಕರ [illegible] ನಡಿಸುವ ಕೆಲಸಕ್ಕೆ ಬಿಡುತ್ತೇನೆ [illegible] ತೆಗೆದುಕೊಂಡು ಅಭ್ಯಾಸ ಮಾಡುತ್ತೇನೆ ಆದರೆ ಕಾಲೇಜಿನ ಪರೀಕ್ಷೆಯು [illegible] ಕೆಲಸವು [illegible] ತಿಂಗಳಲ್ಲಿ ನಾನು ಉತ್ತೀರ್ಣನಾಗಲಿಲ್ಲ ಮೊನ್ನೆ ಪುನಃ ಪರೀಕ್ಷೆಗೆ ಕೂತುಕೊಂಡು. [illegible] ಈಗ ಎರಡನೇ ವರ್ಷದ ತಯಾರಿ ನಡೆದದೆ ಹೋಟೇಲ ಕೆಲಸವನ್ನು [illegible] ಮುಂದೆ ನಡಿಸುವವನಿದ್ದೇನೆ'

ಹಾಗಾದರೆ ನಿನಗೆ [illegible] ಗಳಲ್ಲಿ [illegible] ಸಿಗುತ್ತದೇನು?'

'ಸರಿ, ಸರಿ, [illegible] ಅದನ್ನು [illegible] ಆಗಿರುವುದು, ಹಾಗೆ ಕೇಳಿದರೇನು? ೧೯೩೪ ನೇ ಇಸವಿಯಿಂದ ೧೯೩೫ ನೇ ಇಸವಿ ೧೫ ನೇ ತಾರೀಖಿನ ವರೆಗೆ ನನಗೆ ೧೨೦೦೦ ಫ್ರಾಂಕ (೧ ಫ್ರಾಂಕ [illegible]) [illegible]'

'ಕಾಲೇಜದ ಪ್ರೊಫೆಸರರ ಸಂಬಳಕ್ಕಿಂತ ಹೆಚ್ಚು!'

ಬಿಟಲ್ ಅದಕ್ಕೂ ಹೆಚ್ಚು ಗಳಿಸುತ್ತಿದ್ದನು ಆದರೆ ಪರೀಕ್ಷೆಯ ಸಲುವಾಗಿ ೨ ತಿಂಗಳ ತನಕ [illegible] ನಿಲ್ಲಿಸಿದನು. ಮತ್ತು ಕೆಲದಿನ [illegible] ಉಪಭೋಗಿಸಿದೆನು. ನನಗೆ ನಾಟಕ ಪ್ರಯೋಗಗಳ ಮೇಲೆ ಬಹಳ ಪ್ರೀತಿ ಹೊಸದ [illegible] ನಾಟಕಗಳನ್ನು ನೋಡುವ [illegible] ಪ್ರೊಫೆಸರ [illegible] 'ಗೋಟಿಯೇ' ಎಂಬ ನಾಟಕ ನೋಡಿದಿರೇನು? ಅದ್ಭುತ! [illegible] ಕೆಲಸ ಮಾಡುತ್ತಾರೆ

'ಹೌದು, ನಾನು ನೋಡಿದ್ದೇನೆ ನೀನು. ಆದರೆ ಹಾಗೆ ನಿನ್ನ ೧೨೦೦೦ ಫ್ರಾಂಕದಷ್ಟು [illegible] ದ ನೀನು ರಾಜವೈಭವವನ್ನು ಉಪಭೋಗಿಸುತ್ತಿದ್ದಿರಬೇಕು

'ಇಲ್ಲ, ರಾಜನಂತು ಅಲ್ಲ ನಾನು ಮಿತವ್ಯಯವನ್ನು [illegible] ನನಗಿಂತ ಹೆಚ್ಚು [illegible] ವಿದ್ಯಾರ್ಥಿಗಳಿಗಿಂತ ನಾನು ಹೆಚ್ಚು [illegible] ತೋರಲು ಬಯಸಲಿಲ್ಲ ಆದ್ದರಿಂದಲೇ ನಾನೂ ತಿಂಗಳಿಗೆ ೩೦೦ ಫ್ರಾಂಕಿನೊಳಗೆ [illegible]'

ಅಂದ ಮೇಲೆ ೮॥ ಸಾವಿರ ಫ್ರಾಂಕು ನೀನು ಉಳಿಸುತ್ತೀ'

'ಇಲ್ಲ, ಆ ನನಗೆ ತಿಂಗಳಿಗೆ ೫೦೦ ಫ್ರಾಂಕು ಕಳಿಸಿಕೊಡುತ್ತೇನೆ ತಂದೆಯ [illegible] ನನ್ನ ಸಂಪಾದನೆ ಹೆಚ್ಚು [illegible] ಅಂದ ಮೇಲೆ ನಾನು ಅವನಿಗೆ [illegible] ಕಳೆದ ಅಕ್ಟೋಬರ ತಿಂಗಳಲ್ಲಿ ನನ್ನ ಕಡೆ ೩೦೦೦ ಫ್ರಾಂಕ ಉಳಿದಿದ್ದವು ಅವುಗಳಿಂದ ನಾನು ಸರಕಾರಿ ಬೊಂಡುಗಳನ್ನು ಕೊಂಡುಕೊಂಡೆನು ಅಂದರೆ [illegible] ಈ ರಕಮನ್ನು ಸಾಲ ಕೊಟ್ಟೆನು. ಸರಕಾರಕ್ಕೆ ಆ ರಕಮು ಅವಶ್ಯವಿರುವ ವರೆಗೆ ಇದನ್ನು ನಾನು ಅವರ ಹತ್ತರ ಕೇಳಲಿಕ್ಕಿಲ್ಲ ಇದರ ಹೊರತು, [illegible] ನಾನು ಸರಕಾರಕ್ಕೆ ತೆರಬೇಕಾಗಿರುವದಿಲ್ಲ ಇದು ನಿಮಗೆ ಗೊತ್ತಿಲ್ಲವೋ? ಇನ್‌ಕಮ್ ಟೆಕ್ಸ ಎಕ್ಸ್ಪರ್ಟರು ನನಗೆ ಬಿಟ್ಟುಕೊಟ್ಟಂತೆ ಕಾಣುತ್ತದೆ'

'ಹಾಗಾದರೆ, ಇದರಂತೆಯೇ ನೀನು ನಿನ್ನ ಗಾಡಿಯನ್ನು ನಡಿಸುವಿಯೋ'

'ನಾ ಮಾತ್ರ ಹಾಗೆ ನನಗೆ ಪರೀಕ್ಷೆಯಲ್ಲಿ ನಾಪಾಸಾಗುವದು ಇಲ್ಲ ಆದ್ದರಿಂದ ಮೇ ತಿಂಗಳ ೧೫ ನೇ ತಾರೀಖಿನಿಂದ ೨ ತಿಂಗಳ ತನಕ ಹೋಟೇಲ ಉದ್ಯೋಗವನ್ನು ನಿಲ್ಲಿಸುವೆನು ಅಲ್ಲಿಯ ವರೆಗೆ ನನ್ನ ವರ್ಗವನ್ನೂ ಉದ್ಯೋಗವನ್ನೂ ಸರಿಯಾಗಿ ನಡಿಸಲಿಕ್ಕೆ ಬೇಕು ಮೇ ೧೫ ನೇ ತಾರೀಖಿನಿಂದ ನಾನು ಮತ್ತು ನನ್ನ ಪುಸ್ತಕವಾಯಿತು [illegible] ಹೊರಬಿದ್ದರೆ ಮನಸ್ಸಿನಲ್ಲಿ ಒಂದು ಸಣ್ಣ ಯೋಜನೆಯನ್ನು ಕಲ್ಪಿಸಿಟ್ಟಿದ್ದೇನೆ ಆಗಸ್ಟ ತಿಂಗಳಲ್ಲಿ ಇಟಲಿ ದೇಶದಲ್ಲಿ ಒಂದು ಪಕ್ಷದ ವರೆಗೆ ಆರಾಮ ಬರುವ ವಿಚಾರವಿದೆ [illegible] ಯಾವ ಪರಿಷತ್ತು ನೋಡುವ ಇಚ್ಛೆ ಇದೆ

[illegible] ಪಟ್ಟಿಲ್ಲ ಹ್ಯಾಗೆ ಒದಗುತ್ತದೆಂದು ತಿಳಿದು [illegible]

ಇದೇ ಹೊತ್ತು ಮಾತ [illegible] ೧೯೩೬ ನೇ [illegible] ನನ್ನ ಅಂದಾಜು ಪತ್ರಿಕೆ ತಿಂಗಳ ೧೨೦೦ ಫ್ರಾಂಕಿನಂತೆ ೬॥ ತಿಂಗಳಿಗೆ ೧೬ ೫೦ ಫ್ರಾಂಕು ಇವು, ೧೨ ತಿಂಗಳ [illegible] ೬೪೦೦ ಫ್ರಾಂಕ ೬೦೦೦ ಫ್ರಾಂಕು ಮನೆಗೆ ಕಳಿಸುವದು, ಇಟಲಿಯೊಳಗಿನ ತಿರುಗಾಟಕ್ಕೆ ೧೩೫೦ ಫ್ರಾಂಕು [illegible] ಇಷ್ಟು ರಕಮು ನನಗೆ ಬೇಕಾಯಿತು. ಯಾಕೆಂದರೆ, ಮುಂಗಲು [illegible] ಮೋಟಾರಗಾಡಿಯ ಪಟ್ಟಿಯಲ್ಲಿ ಕೂತು ನನಗೆ ಪ್ರವಾಸ ಮಾಡಬೇಕಾಗಿಲ್ಲ ದೊಡ್ಡ ದೊಡ್ಡ ಭೋಜನಗೃಹಗಳಲ್ಲಿ ಇಳಕೊಳ್ಳಲಿಕ್ಕೂ ನನ್ನ ಮನಸ್ಸಿಲ್ಲ ಆದರೆ, ಮುಂದೆ ಸರಕಾರಿ ಬೊಂಡುಗಳನ್ನು ಇನ್ನೊಂದ ತೆಗೆದುಕೊಳ್ಳಲಿಕ್ಕಾಗದೆಂದು ನನಗೆ ತೋರುತ್ತದೆ'

ಆ ಬಿಟಲನು ಮತ್ತು ನಮ್ಮ ಸಂಭಾಷಣಕ್ಕೆ ಭಂಗಬಂತು ಯಾಕೆಂದರೆ, ಈ ಹೋಟೇಲ ನಡಿಸುವವನು ಊಟವನ್ನು ಬಡಿಸಿ ತನ್ನ ಕೆಲಸದ ಮೇಲೆ ಹಾಜರಾಗಬೇಕಾಗಿತ್ತು

ನಾನು ಬಿಗಿಲು ಎದ್ದೆನು. ಒಬ್ಬ ಹೋಟೇಲ ಮ್ಯಾನೇಜರನು ಇನ್ನಾವು ಒಳ್ಳೆಯವನಿದ್ದಾನೆ, ಕಾಲೇಜಿನ ಅಭ್ಯಾಸ ಮಾಡುತ್ತಾನೆ, ಸರಕಾರಿ ಬೊಂಡು ತೆಗೆದುಕೊಳ್ಳುತ್ತಾನೆ, ಹೊಸ ನಾಟಕಗಳಲ್ಲಿ ರಸಾಸ್ವಾದ ಮಾಡುತ್ತಾನೆ; ಹೊಸ ದೇಶ ನೋಡಲು ಹೋಗುತ್ತಾನೆ, ತನ್ನ ತಂದೆಗೆ ಪ್ರತಿ ತಿಂಗಳಿಗೆ ತಪ್ಪದೆ ಯೋಗ್ಯ ರಕಮನ್ನು ಕಳಿಸುತ್ತಾನೆ."

ಮುಂದಿನ ಸಂಚಿಕೆಯಲ್ಲಿ ನಮ್ಮಲ್ಲಿಯ ವಿದ್ಯಾರ್ಥಿಗಳ ಚಿತ್ರವನ್ನು ಕೊಡುವೆನು.

ಗೌ॥ ಸಾ॥ ಬ್ರಾ॥ ಸ್ನೇ॥ ಲೀಗ್,
ಮುಂಬಯಿ.

ಈ ಸಂಸ್ಥೆಯ ಕಡೆಯಿಂದ ಶಿಷ್ಯವೃತ್ತಿಯನ್ನು ಪಡೆಯಲಿಚ್ಛಿಸುವ ವಿದ್ಯಾರ್ಥಿಯರು ಸಂಸ್ಥೆಯ ಛಾಪೀ ಫಾರ್ಮುಗಳ ಮೇಲೆಯೇ ತಮ್ಮ ಅರ್ಜಿಯನ್ನು ಮಾಡಿ ಅವುಗಳನ್ನು ಬರುವ ಜೂನ ೧೫ ನೇಯ ತಾರೀಖಿನೊಳಗಾಗಿ ಕೆಳಗೆ ಕೊಟ್ಟ ಪತ್ತೆಗೆ ಮುಟ್ಟುವಂತೆ ಕಳುಹಿಸಿ ಕೊಡಬೇಕು.

Honorary Secretary,
G S B S. LEAGUE
c/o **M. S. Kamat,**
Bank of India Ltd
FORT BOMBAY

ಲೇಡಿ ಕೆನ್‌ವಾಸರಳು ಬೇಕು!

ಅಳಿವೆ ಕತ್ತರಿಸುವ ಹಾಗು ಹೊಲಿಯುವ ಕೆಲಸದಲ್ಲಿ ನುರಿತ ಹಿಂದೂ ಲೇಡಿ ಕೆನ್‌ವಾಸರಳೊಬ್ಬಳು ಗೋವೆಯಲ್ಲಿ ಸಿಂಗರ ಮಶೀನುಗಳನ್ನು ವಿಕ್ರಯಿಸಲು ಬೇಕಾಗಿರುವಳು. ವಿಶೇಷ ಮಾಹಿತಿ ಬಗ್ಗೆ ಕೆಳಗಿನ ಪತ್ತೆಗೆ ಬರಕೊಳ್ಳಿರಿ

Singer Sewing
Machine Company,
PANJIM. (GOA)

ಉತ್ತಮ ಮಾಲು! ಉತ್ತಮ ಮಾಲು!!

ಮಂಗಳೂರ ಹಂಚು!

ನಮ್ಮಲ್ಲಿ ಮಂಗಳೂರ ಬೋರ್ಡ ಮ್ಯಾಲ ಪತ್ರೀ ಉತ್ತಮ ಪ್ರತಿಯ ಮಂಗಳೂರ ಹಂಚುಗಳು ಮಾರಾಟಕ್ಕೆ ಸಿದ್ಧವಾಗಿವೆ. ಬಾಳಿಕೆಯಲ್ಲಿ ಇವಕ್ಕೆ ಉತ್ತಮ ಹಂಚುಗಳಿಲ್ಲ! ಬೇಕಾದವರು ಮಾಲು ನೋಡಿ ದರವಾರ ತಿಳಕೊಳ್ಳಬಹುದು. ದಿವಾಳಿ ಸಮೀಪದಿರ ವವು ಒಮ್ಮೆ ಪರೀಕ್ಷಿಸಿ ನೋಡಿರಿ!

ಪತ್ತೆ — **ಕಾಜಿ ಅಬ್ದುಲ್ ಕಾದರ**
ಮುನಸೀಫ ಕೋರ್ಟ ಸಮೀಪ, ಕುಮಟಾ

ಜಾಹೀರಾತು.

ಪ್ರಸಿದ್ಧ ಕೇರಳ ಜ್ಯೋತಿಷ ಶಾಸ್ತ್ರಜ್ಞರಾದ
ಕೇ. ಸಿ. ನಾರಾಯಣ ಶಾಸ್ತ್ರಿಗಳು
ಶಿರ್ಸಿಯಲ್ಲಿ ಮುಕ್ಕಾಂ ಮಾಡಿರುವರು

ಸಮಸ್ತ ಕಡೆ ಕೇರಳ ಜ್ಯೋತಿಷ್ಯವನ್ನು ಕೆ ಹೆಸರಾದ ಕೇ. ಸಿ. ನಾರಾಯಣ ಶಾಸ್ತ್ರಿಗಳು ತಮ್ಮ ದೇಶಸಂಚಾರವನ್ನು ಮುಗಿಸಿ, ಗೆಳೆಯರ ಸೂಚನೆ ಮೇರೆಗೆ ಶಿರ್ಸಿಯಲ್ಲಿ ಮುಕ್ಕಾಂ ಮಾಡಿರುವರು ಜಾತಕ, ಪ್ರಶ್ನೆ ಮೊದಲಾದವುಗಳನ್ನು ತಿಳಿಯಬೇಕೆನ್ನುವವರು ನಾರಾಯಣ ಶಾಸ್ತ್ರಿಗಳವರಿಗೆ ಭೆಟ್ಟಿಯಾಗಿ ಲಾಭ ಹೊಂದಬೇಕು.

ಪತ್ತೆ:- **ಕೇ. ಸಿ. ನಾರಾಯಣ ಶಾಸ್ತ್ರಿ**
ಕೇರಳ ಜ್ಯೋತಿಷಿ, ಶಿರ್ಸಿ, (ಉತ್ತರ ಕನ್ನಡ

ಕಾರವಾರ ತಾಲೂಕಿನೊಳಗಿನ

ಕ್ರಿಸ್ತೀ ಜನರ ಮೊದಲನೇ ಕಾನ್ಫರನ್ಸ.

ಪ್ರಿಯ ಪತ್ರಕರ್ತರೇ, ಈ ಕೆಳಗೆ ಬರೆದ ಕೆಲವು ಸಾಲುಗಳಿಗೆ ಮುಂದಿನ ಅಂಕದಲ್ಲಿ ಸ್ಥಳ ದೊರೆಯಬೇಕಾಗಿ ಕೋರುತ್ತೇನೆ.

ಇದೇ ಕಳೆದ ತಾರೀಖು ೧೬ನೇ ಸಾಯಂಕಾಲ ೬ ಘಂಟೆಗೆ ಮಿ। ಎಸ್. ಜಿ. ಪಟೀಲ ಎಮ್. ಎ. ಇವರ ಅಧ್ಯಕ್ಷತೆಯು ಕೆಳಗೆ ಖಾರ ಸ್ಟ್ರೀಟ [illegible]ದಲ್ಲಿ ಕೂಡಿತು.

ಅಧ್ಯಕ್ಷರ ಭಾಷಣದ ಸಾರಾಂಶ. — ಸ್ವರಾಜ್ಯಕ್ಕೆ ತಕ್ಕವರಾಗುವಂತೆ ನಿಮ್ಮ ಜೀವನವನ್ನು ಶಿಕ್ಷಣದ್ವಾರಾ ಮಾಡಿಕೊಳ್ಳಬೇಕು. ಈ ಜಿಲ್ಹೆಯ ಉಳಿದ ಸಮಾಜಗಳಿಗಿಂತ ನಿಮ್ಮ ಕ್ರಿಸ್ತೀ ಸಮಾಜವು ವಿದ್ಯೆಯಲ್ಲಿ ತೀರ ಹಿಂದೆ ಬಿದ್ದಿದೆ. ವಿದ್ಯೆಯ [illegible], ವಿದ್ಯೆ ಸಂಪಾದಿಸಬೇಕೆಂಬ ಇಚ್ಛೆಯೂ ನಿಮಗೆ ಇಲ್ಲ. ಕಾಲೇಜುಗಳಲ್ಲಿ ಈ ಜಿಲ್ಹೆಯ ಬೇರೆ ಕೆಲವು ಜಾತಿಯ ಹುಡುಗರಿಗೆ ಮಾಫೀ ಶಿಕ್ಷಣ ದೊರೆಯುತ್ತದೆ, ಅದರಂತೆ ನಿಮಗೆ ಮಾಫೀ ಶಿಕ್ಷಣ ದೊರೆಯುವದಿಲ್ಲ ಇದನ್ನು ಕಂಡು ನೀವು [illegible]ಬೇಕು. [illegible] ನಿಮ್ಮ ವಿದ್ಯಾಭಿವೃದ್ಧಿಯನ್ನು ಮಾಡಿಕೊಳ್ಳಲಿಕ್ಕೆ ಯೋಗ್ಯ ಪ್ರಯತ್ನ ಮಾಡಬೇಕು. ನಿಜವಾಗಿ ಈ ಜಿಲ್ಹೆಯ ಉಳಿದ [illegible] ಜನರಿಗಿಂತ ನಿಮ್ಮ ಬುದ್ಧಿಯು ತೀಕ್ಷ್ಣವಿರುತ್ತದೆ. ಮತ್ತು ವಿದ್ಯೆಯಿಂದ ನಿಮ್ಮ ಸಮಾಜಸುಧಾರಣೆಯು ಬಲು ಬೇಗ ಆಗುವದೆಂದು ನನ್ನ ನಂಬಿಕೆಯುಂಟು.

ನಿಮ್ಮ ಮಿತ್ರರಾದವರೂ ಈ ವರೆಗೆ ನಿಮ್ಮ ವಿದ್ಯಾಭಿವೃದ್ಧಿಯ ಕಡೆಗೆ ಲಕ್ಷ್ಯ ಉತ್ತೇಜನ ಕೊಟ್ಟದ್ದು ತೋರುವದಿಲ್ಲ. ಆದರೆ, ಮುಂಬಯಿ ವಗೈರೆ ಪಟ್ಟಣಗಳಲ್ಲಿ ಮಿತ್ರರು [illegible] ತಮ್ಮ ಜನರ ವಿದ್ಯಾಭಿವೃದ್ಧಿಯ ಕೆಲಸಗಳನ್ನು ಮಾಡುವದು ನಾನು ಕಣ್ಣಾರೆ ನೋಡುತ್ತೇನೆ.

ಹಬ್ಬಗಳ ನೆವದಿಂದ ಮಾತ್ರ ಇಲ್ಲಿಯ ಕ್ರಿಸ್ತೀ ಸಮಾಜಕ್ಕೆ ವಿಪರೀತ ಖರ್ಚಿನ ಭಾರ ಬೀಳುತ್ತದೆಂದು ನನಗೆ ತೋರುತ್ತದೆ. ಅಂಥಾದ್ದೊಂದು ಉದಾಹರಣೆಯು ಇತ್ತ[illegible] ಅನುಭವಕ್ಕೆ ಬಂದಿರುತ್ತದೆ. ಅದೇನಂದರೆ — ನನ್ನೊಬ್ಬ ಬಡ ಕ್ರೈಸ್ತನು [illegible] ಪ್ರೆಸಿಡೆಂಟ ಆಗಿರುವದರಿಂದ ೧೦೦ ರೂಪಾಯಿ ಖರ್ಚು ಮಾಡಬೇಕಾಗಿದೆ. ಕೈಯಲ್ಲಿ ಹಣ ವಿಲ್ಲದ್ದರಿಂದ ಅದನ್ನು ಸಾಲ ತೆಗೆದು ಮಾಡಬೇಕಾಗುವದು. ಇತ್ಯಾದಿ. ಇಂಥ ಮೇಲೆ ಅಂಥ ಜನರ ಉದ್ಧಾರವಾಗುವ ಬಗೆ ಹ್ಯಾಗೆ? ಅದಲ್ಲದೆ, ನಿಮ್ಮಲ್ಲಿ [illegible] ಪದ್ಧತಿಯುಂಟು. ೫೦ ತಿಂಗಳಿಗೆ ಪ್ರತಿ ಹಬ್ಬದ ಅಂಥ ಖರ್ಚಿನೊಳಗಿಂದ ಒಂದೊಂದು ರೂಪಾಯಿ ಉಳಿಸಿದರೆ, ಎಷ್ಟೋ ಸಾವಿರ ರೂಪಾಯಿಗಳ ಫಂಡು ಕೂಡುವದು.

ನಿಮ್ಮ [illegible] ಕಾನ್ಫರನ್ಸ ಕೂಡುವ ಕಾರ್ಯದಲ್ಲಿ ವಿದ್ಯಾ ಶಿಕ್ಷಣ ಫಂಡು [illegible] ವರೆಗೆ ಬೆಳೆಯುವದೆಂದು [illegible] ರೂಪಾಯಿ [illegible] ಜನರು ಅಂಥ ಮಾರ್ಗದಿಂದ ಮುಂದೆ [illegible] ಮೇಲೆ ಸಿಕ್ಕಿದ ಸ್ವರಾಜ್ಯವೇ ಚಿರಂತರವಾಗಿ ಉಳಿಯುವದು. ಕಾರಣ ಅಂಥ ಸ್ವರಾಜ್ಯವೇ ನಮಗೆ ಬೇಕು.

ನೀವು ವಿದ್ಯೆಯಲ್ಲಿ ತೀರ ಹಿಂದಿರುವದನ್ನು ನೋಡಿ ಸರಕಾರದವರು ನಿಮ್ಮ ಹುಡುಗರಿಗೆ ಸ್ಕೂಲ ಫೀ, ಸ್ಕಾಲರ್‌ಶಿಪ್ ವಗೈರೆ ಕೊಟ್ಟು, ನಿಮ್ಮ ಸಮಾಜದ ವಿದ್ಯಾಭಿವೃದ್ಧಿಗೆ ಯೋಗ್ಯ ಸಹಾಯ ಮಾಡುವದು ಸರಕಾರದ ಕರ್ತವ್ಯವಿರುತ್ತದೆ. ಅದಕ್ಕೆ ನೀವು ಇದೇ ಕಾನ್ಫರನ್ಸದಿಂದ [illegible]ರಾಗಬೇಕು, ಬೇರೆ ತಾಲೂಕುಗಳಲ್ಲಿಯೂ ಅಂಥ ಕಾನ್ಫರನ್ಸುಗಳು ಬೇಗನೆ ಕೂಡುವಂತೆ ಮಾಡಿ, ಬರುವ ಡಿಸೆಂಬರ ತಿಂಗಳೊಳಗಾಗಿ ನಿಮ್ಮ ಜಿಲ್ಹಾ ಕಾನ್ಫರನ್ಸು ಕೂಡಿಸಲಿಕ್ಕೆ ಒಳ್ಳೇ ಯತ್ನ ನಡಿಸುವಿರೆಂದು ನಾನು ನಂಬುತ್ತೇನೆ. ಈ ಕಾನ್ಫರನ್ಸದಲ್ಲಿ ಮಾಡಿದ ಠರಾವುಗಳ ಸಾರಾಂಶವು ಇದರ ಕೆಳಗೆ ಬರೆದಿರುತ್ತದೆ:— ಉತ್ತರ ಕಾನಡಾ ಕ್ರಿಸ್ತಿಯನ್ನರ ಪರವಾಗಿ ಮುಂಬಯಿ ಗವರ್ನರ ಮಂಡಳಿಗೆ ಕಳಿಸಲಿಕ್ಕೆ ತಯಾರಿಸಿದ ಅರ್ಜಿಯೊಳಗಿನ ಬೇಡಿಕೆಗಳನ್ನು — ವಿಶೇಷವಾಗಿ ಇಂಗ್ಲಿಷ ಶಾಲೆಗಳಲ್ಲಿ ಕಲಿಯುವ ನಮ್ಮ ಕ್ರಿಸ್ತ ವಿದ್ಯಾರ್ಥಿಗಳಿಗೆ ಫೀ, ಸ್ಕಾಲರ್‌ಶಿಪ್ ವಗೈರೆ ನಮ್ಮ ಸಮಾಜ ಸುಧಾರಣೆಗೆ ಅವಶ್ಯವಿರುವ ಸವಲತ್ತುಗಳನ್ನು ಸರಕಾರವು ದಯಮಾಡಿಸಬೇಕು. ಸರಕಾರಿ ನೌಕರಿಯಲ್ಲಿ, ವಿಶೇಷವಾಗಿ ವಿದ್ಯಾಖಾತೆಯಲ್ಲಿ ಸರಕಾರವು ಉತ್ತರ ಕಾನಡಾ ಕ್ರಿಸ್ತಿಯನ್ನರಿಗೆ ಜಗ್ಗೆಗೆ [illegible] ಸವಲತ್ತುಗಳನ್ನು ಕೊಡಬೇಕು. ತನ್ನ ಸಮಾಜದ ಬಡತನ ಹಾಗು ಅಜ್ಞಾನ [illegible] ಕರ್ತವ್ಯವೆಂದು ತಿಳಿದು ಕಾನಡಾ ಜಿಲ್ಹೆಯ ಕ್ರಿಸ್ತ ಜನರು [illegible] ಎಜ್ಯುಕೇಶನ್ ಫಂಡಿಗೆ ಪ್ರತಿಯೊಬ್ಬ [illegible] ಕ್ರಿಸ್ತೀ ಮನುಷ್ಯನು ಸಹಾಯ ಮಾಡಬೇಕು. ಮಿ॥ ಕೊಲಿನ್ಸ ಸಾಹೇಬರು ಆರಂಭಕ್ಕೆ ೩೦೦ ರೂಪಾಯಿ ದಾನ ಮಾಡಿ ಈ ಫಂಡು ಆರಂಭಿಸಿದ್ದರಿಂದ ಅವರ ಅತ್ಯಂತ ಆಭಾರವನ್ನು ಮನ್ನಿಸಬೇಕು. ಇಂಥ ಕಾನ್ಫರನ್ಸು ಪ್ರತಿಯೊಂದು ತಾಲೂಕಿನಲ್ಲಿ ಬೇಗನೆ ಕೂಡುವಂತೆ ಮಾಡಿ ಬರುವ ಡಿಸೆಂಬರ ತಿಂಗಳೊಳಗಾಗಿ ಜಿಲ್ಹಾ ಕಾನ್ಫರನ್ಸು ಕೂಡಿಸಬೇಕು. ಮುಂಬಯಿ ಜಿ ಆರ್ ಎಫ್ ಡಿ ನಂಬರ [illegible] ನೇಯ [illegible] ಕ್ರಿಸ್ತೀ ಜನರಿಗೆ ಸರಕಾರಿ ನೌಕರಿಯಲ್ಲಿ ಇನ್ನು ಯಾರಿಗೂ ಹಿಂದುಳಿದವರ ಸವಲತ್ತು ಕೊಡಲಿಲ್ಲ; ಅದನ್ನು ಈಗ ಕೊಡಬೇಕು. ಹಾಗು ಈ ಜಿಲ್ಹೆಯಲ್ಲಿರುವ ಗೋವಾನ್ ಹಾಗು ಮಂಗಳೂರಿಯನ್ ವಗೈರೆ ಮುಂದರಿದವರನ್ನು ಎಣಿಸಿ, ಹಿಂದುಳಿದವರು ಯಾರೆಂಬುದನ್ನು ಸ್ಥಾನಿಕ ಅಧಿಕಾರಿಗಳಿಂದ ಠರಾಯಿಸಬೇಕು. ದೊಡ್ಡ ದೊಡ್ಡ ಹಬ್ಬಗಳ ದಿವಸ ಆಟ—ತಮಾಷೆಗಳನ್ನು ಮಾಡಿ, ಮನೆ ಮನೆ ತಿರುಗಿ ಹಣ ಎತ್ತಿ [illegible] ಈ ವರೆಗಿನ ಪದ್ಧತಿಯನ್ನು ಬಿಟ್ಟು, ಅದರ ಬದಲಾಗಿ ಇನ್ನು ಮುಂದೆ ಇಂಥ ಹಬ್ಬಗಳ ದಿವಸಕ್ಕೆ ವಿದ್ಯಾರ್ಥಿಗಳನ್ನು ಸಂಗಡ ತಕ್ಕೊಂಡು ಶಿಕ್ಷಣ ಫಂಡನ್ನು ಕೂಡಿಸಬೇಕು.

ಇವಲ್ಲದೆ ಆಯಾ [illegible] ಜನರಿಂದಲೇ ಚರ್ಚ ಫಂಡುಗಳಾಗಿರುವದರಿಂದ ಬಹುಮತದ ತತ್ವದಂತೆ ಜನರಲ್ ಮೀಟಿಂಗದಲ್ಲಿ ಗೊತ್ತುಪಡಿಸಿದ ಕಮಿಟಿಯಿಂದಲೇ ಫಂಡುಗಳ ಜಮಾಖರ್ಚ ಆಗುವಂತೆಯೂ, ಯಾವತ್ತು [illegible] ಈಗಿನಂತೆ ನಮ್ಮಲ್ಲಿ ಯಾರಿಗೂ ತಿಳಿಯದ ಪೋರ್ತುಗೀಜ ಭಾಷೆಯಲ್ಲಿ ಬರೆಯದೆ ದೇಶ ಭಾಷೆಯಲ್ಲಿ ಬರೆಯುವಂತೆಯೂ, ಚರ್ಚ ಫಂಡುಗಳ ಹೆಚ್ಚಿನ ಉತ್ಪನ್ನವೆಲ್ಲ ನಮ್ಮ ಜನರ ವಿದ್ಯಾಭಿವೃದ್ಧಿಗೆ ವ್ಯಯವಾಗುವಂತೆಯೂ, ಲಗ್ನ ಕಾಲದಲ್ಲಿ ಒಮ್ಮೆಲೆ ವರ್ಗಣಿ ಹಣ ವಸೂಲ ಮಾಡಿ ಜನರಿಗೆ ಸಾಲದಲ್ಲಿ ಹಾಕುವಂಥ ಈ ಪದ್ಧತಿಯನ್ನು ಬಿಟ್ಟು, ಆಯಾ ಸ್ಥಳಕ್ಕೆ ನೇಮಿಸಿದ ಕಮಿಟಿ [illegible] ವರ್ಗಣಿ ಹಣ ವಸೂಲ ಮಾಡುವಂತೆಯೂ, ವರ್ಗಣಿ [illegible] ತೆಗೆದು ಹಾಕಿ, [illegible] ಮಾಡಿ ಆಯಾ ಮೆಂಬರರ ಕಡೆಗೆ ಒಂದೊಂದರಂತೆ ಇಟ್ಟು, ವರ್ಗಣಿ ಹಣ ಕೊಟ್ಟವರಿಗೆ ಕೂಡಲೇ ಪಾವತಿ ಕೊಡುವಂತೆಯೂ, ವಾರ್ಷಿಕ [illegible] ಪ್ರಕಟವಾಗುವಂತೆಯೂ ನಮ್ಮ ರೆ। ಆರ್ಚ ಬಿಷಪ್ ಗೋವಾದವರು ಯೋಗ್ಯ ವ್ಯವಸ್ಥೆಗೊಳಿಸಬೇಕು ಇತ್ಯಾದಿ.

ಆಮೇಲೆ ಅಧ್ಯಕ್ಷರ ಆಭಾರ ಮನ್ನಿಸಿ, ಕಾನ್ಫರನ್ಸು ವಿಸರ್ಜನವಾಯಿತು.

ತಾ. ೨೧-೫-೩೬. | T FERNANDEZ.

— [illegible], ಅದರಂತೆ [illegible] ಸ್ವಾಧೀನಪಡಿಸಿಕೊಳ್ಳಲಿಕ್ಕೆ [illegible] ಅಧಿಕಾರವಿಲ್ಲ [illegible] ಮದ್ರಾಸ [illegible] ಶ್ರೀ ಶ್ರೀನಿವಾಸ ಅಯ್ಯಂಗಾರರವರು ದಾಖಲ ಮಾಡಿರುವರು.

ಬಳ್ಳಾರಿಯ ವೈಭವ!

ಕಳೆದ ವಾರದಲ್ಲಿ ಬಳ್ಳಾರಿಯಲ್ಲಿ ೧೦ ಪರಿಷತ್ತುಗಳು ಸೇರಲಿಕ್ಕಿದ್ದವು. ಕೀರ್ತನ ಸಮ್ಮೇಲನ, ಸಂಪಾದಕರ ಪರಿಷತ್ತು, ಕರ್ನಾಟಕ ಏಕೀಕರಣ ಪರಿಷತ್ತು, ಸ್ವಯಂಸೇವಕರ ಪರಿಷತ್ತು, ಕರ್ನಾಟಕ ವಿಶ್ವವಿದ್ಯಾಲಯದ ಸಮ್ಮೇಲನ, ಕರ್ನಾಟಕ ಪ್ರಾಂತಿಕ ಪರಿಷತ್ತು, ಹೀಗೆ ಪರಿಷತ್ತುಗಳು ಸೇರಲಿಕ್ಕಿದ್ದವು. ಮೇ ೧೯ನೇ ತಾರೀಖಿಗೆ ವೆಂಕಟರಾಜ ಸಭಾಮಂದಿರದಲ್ಲಿ ಕರ್ನಾಟಕ ಏಕೀಕರಣ ಪರಿಷತ್ತು ಜರುಗಿತು. ಶ್ರೀ ಗುರುರಾಜರಾಯರು ಪ್ರತಿನಿಧಿ ಪ್ರೇಕ್ಷಕರ ಸ್ವಾಗತ ಮಾಡುವಾಗ ನಮ್ಮ ನೆರೆಹೊರೆಯ ಆಂಧ್ರರೂ, ಮಹಾರಾಷ್ಟ್ರೀಯರೂ ಕರ್ನಾಟಕದ ಮೇಲೆ ನಡಿಸುತ್ತಿರುವ ದಾಳಿಯನ್ನು ವರ್ಣಿಸಿ, ಕರ್ನಾಟಕದ ಏಕೀಕರಣ ಉಪಾಯಗಳನ್ನು ಸೂಚಿಸಿದರು. ಅಧ್ಯಕ್ಷರಾದ ಶ್ರೀ ಪಂಡಿತ ರಾಯಪ್ಪ [illegible]ಯವರು ತಮ್ಮ ಭಾಷಣದಲ್ಲಿ ಸರಕಾರಿ ದಾಖಲೆಗಳಿಂದಲೇ ಕನ್ನಡ ಭಾಷೆಯನ್ನಾಡುವ ಕರ್ನಾಟಕಕ್ಕೆ ಪ್ರತ್ಯೇಕ ಪ್ರಾಂತವಾಗಿ ಏರ್ಪಡಿಸಲು ಸರಕಾರವು ಬದ್ಧವಿರುತ್ತದೆಂದು ಹೇಳಿದರು. ಕರ್ನಾಟಕದ ವಾಙ್ಮಯ ಸಂಸ್ಕೃತಿಗಳ ಉದ್ಧಾರವಾಗಬೇಕಾದರೆ, ಕರ್ನಾಟಕದ ಏಕೀಕರಣವಾಗಬೇಕೆಂದೂ, ಅದಕ್ಕಾಗಿ ಕರ್ನಾಟಕರು ಚಿಕ್ಕ ಚಿಕ್ಕ ಭೇದಗಳನ್ನು ಮರೆತು ದುಡಿಯಬೇಕೆಂದೂ ಬೋಧಿಸಿದರು.

ರಾಜಸೇವಾಸಕ್ತ ಲಿಂಗರಾಜ ಅರಸರ ಅಧ್ಯಕ್ಷತೆಯಲ್ಲಿ ಕೀರ್ತನ ಸಮ್ಮೇಲನವು ಜರುಗಿತು. ದಿವಾಣ ಬಹಾದ್ದೂರ ಗೋಪಾಲಸ್ವಾಮಿ ಮುದಲಿಯಾರರವರು ಸ್ವಾಗತಾಧ್ಯಕ್ಷರು. ಇವರು ತಮ್ಮ ಭಾಷಣದಲ್ಲಿ ಕೀರ್ತನೆಯಿಂದ ಭಾರತೀಯರಲ್ಲಿ [illegible] ಉಪದೇಶ ಮಾಡುವದು ಸಹಜಸಾಧ್ಯವೆಂದೂ, ಕೀರ್ತನವು ಭಾರತೀಯರ ಪರಂಪರೆಗೆ ಉಚಿತವಾಗಿರತಕ್ಕದ್ದೆಂದೂ ಕೀರ್ತನೆಯಿಂದ ರಾಜಕೀಯ, ಆರ್ಥಿಕ, ಸಾಮಾಜಿಕ ಧ್ಯೇಯಗಳೆಲ್ಲ ಪಾರಮಾರ್ಥಿಕ ಆಧಾರದ ಮೇಲೆಯೇ ರಚನೆಯಾಗಿರತಕ್ಕವೆಂಬುದನ್ನು ತಿಳಿಸಿಕೊಡಲಿಕ್ಕಾಗುತ್ತದೆಂದೂ ಹೇಳಿದರು.

ಸ್ವಯಂಸೇವಕರ ಪರಿಷತ್ತು ಶ್ರೀ ಹೊಸಕೋಟೆ ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಉತ್ಸಾಹದಿಂದ ನೆರವೇರಿತು. ಪರಿಷತ್ತಿನಲ್ಲಿಯೇ ಅಧ್ಯಕ್ಷರು ಸ್ವಯಂಸೇವಕ ಪಡೆಯಲ್ಲಿ ದಾಖಲಾಗಿ ಸ್ವಯಂಸೇವಕತ್ವದ ಪವಿತ್ರ ದೀಕ್ಷೆಯನ್ನು ಹೊಂದಿದರು. ಈ ನೋಟವು ರಮಣೀಯವಿತ್ತು, ಅಧ್ಯಕ್ಷರು ವಿಸ್ತಾರವಾದ ಭಾಷಣ ಮಾಡಿದರು. ಸ್ವಯಂಸೇವಕರ ಆವಶ್ಯಕತೆ, ನಿಸ್ವಾರ್ಥಬುದ್ಧಿಯಿಂದ ರಾಷ್ಟ್ರಪುರುಷನ ಪಾದಾರವಿಂದಗಳಲ್ಲಿ ಸರ್ವಸ್ವದ ಧಾರೆ ಎರೆದ ತ್ಯಾಗಿ ವೀರರ ಆವಶ್ಯಕತೆಯನ್ನು ಅಧ್ಯಕ್ಷರು ಪ್ರತಿಪಾದಿಸಿದರು. ಪ್ರಾಂತಿಕ ಪರಿಷತ್ತಿನ ಅಧ್ಯಕ್ಷರಾದ ಶ್ರೀಮಾನ್ ಶ್ರೀನಿವಾಸ ಅಯ್ಯಂಗಾರರು [illegible] ಸ್ವಯಂಸೇವಕರ ಶಿಸ್ತಿನ ಸೇವೆಯ ಅವಶ್ಯಕತೆಯನ್ನು ಪ್ರತಿಪಾದಿಸಿದರು.

ತಾ. ೨೦ನೇ ಗುರುವಾರಕ್ಕೆ ಧ್ವಜಾರೋಹಣ ಸಮಾರಂಭವು ಪ್ರಾಂತಿಕ ಪರಿಷತ್ತಿನ ಅಧ್ಯಕ್ಷರಾದ

(ಮುಂದೆ ೯ನೇ ಪಾನಿನಮೇಲೆ ನೋಡಿರಿ.)

ಕಾನಡಾವೃತ್ತ.

ಮಿತಿ ಕ್ಷಯ ಸಂ। ವೈಶಾಖ ಶು। ೧೩ ।, ಸೋಮವಾರ.

ವರ್ಣದ್ವೇಷದ ಮರ್ಮ.

ಭಾರತೀಯರು ಬ್ರಿಟಿಶ ಸಾಮ್ರಾಜ್ಯದ ಪ್ರಜೆಗಳಿದ್ದು, ಸಾಮ್ರಾಜ್ಯಪ್ರಿಯರಾದ ಬ್ರಿಟಿಶರು ಭಾರತೀಯರಿಗೆ ದಣಿಸುವ ಪ್ರಕಾರಗಳನ್ನು ಹೇಳಿ ತೀರದು. ಈ ಕುರಿತು ಸಾಮ್ರಾಜ್ಯದ ಚಾಲಕರಾದ ಬ್ರಿಟಿಶರೊಡನೆ ನಾವು ದೂರಿಕೊಂಡರೂ, ಬಹು ಸಹಾನುಭೂತಿಯ ದೊಡ್ಡ ದೊಡ್ಡ ಮಾತುಗಳಷ್ಟೇ ನಮಗೆ ಸಿಗುತ್ತವಲ್ಲದೆ, ದೂರುಗಳೇನು ಪರಿಹಾರ ಹೊಂದುವದಿಲ್ಲ. ನಮ್ಮ ಕಷ್ಟಗಳೇನು ತಪ್ಪುವದಿಲ್ಲ. ಮಾನವ ಧರ್ಮಕ್ಕೆ ಬ್ರಿಟಿಶರು ಕೈಕೊಳ್ಳುವ ಧೋರಣವು ಮಾನ್ಯವಾಗಲಾರದು. ವರ್ಣದ್ವೇಷದಿಂದ ಸಾಮ್ರಾಜ್ಯಪ್ರಿಯರಾದ ಬ್ರಿಟಿಶರು ಹೀಗೆ ಪಶುತುಲ್ಯವಾದ ಕ್ರೂರತನದಿಂದ ನಡಕೊಳ್ಳುವ ಬಗೆಯೇನೆಂದು ಯಾರಿಗಾದರೂ ವಿಚಾರ ಹುಟ್ಟದಿರದು. ದಕ್ಷಿಣ ಆಫ್ರಿಕೆಯೊಳಗಿನ ಪ್ರಕಾರಗಳಿಂದ ನಮ್ಮೆಲ್ಲರ ವಿಚಾರತರಂಗಗಳಿಗೆ ಹೊಸ ಪುಟ ದೊರಕಿದಂತಾಗಿದೆ. ಭಾರತೀಯರು ಬ್ರಿಟಿಶರಿಗಿಂತ ಮಿತವ್ಯಯದಿಂದ ನಡೆಯುತ್ತಿರಬಹುದು. ಮೂಲ ನಿವಾಸಿಗಳೊಡನೆ ಅವರ ವ್ಯಾಪಾರವು ಹೆಚ್ಚುತ್ತಿರಬಹುದು. ಸ್ಥಳೀಕ ಬ್ರಿಟಿಶರಿಗೂ, ಭಾರತೀಯರಿಗೂ ಈ ಕುರಿತು ದ್ವೇಷವಾದದ್ದಿರಬಹುದು. ಆದರೆ, ಇಂಗ್ಲಂಡದೊಳಗಿನ ಬ್ರಿಟಿಶರು ತ್ರಯಸ್ಥರು. ದಕ್ಷಿಣ ಆಫ್ರಿಕೆಯೊಳಗಿನ ಬ್ರಿಟಿಶರೂ, ಭಾರತೀಯರೂ ಅವರ ಪ್ರಜೆಗಳಾಗಿದ್ದು, ಒಬ್ಬರು ಇನ್ನೊಬ್ಬರನ್ನು ಪೀಡಿಸುವಾಗ, ವಿಲಾಯತಿಯೊಳಗಿನ ಸಾಮ್ರಾಜ್ಯವಾದಿಗಳು ಸುಮ್ಮನೆ ಕೂಡ್ರುವ ಬಗೆ ಹೇಗೆ?

ದಕ್ಷಿಣ ಆಫ್ರಿಕೆಯೊಳಗಿನ ಬ್ರಿಟಿಶರು ಇಂಗ್ಲಂಡದೊಳಗಿನ ಬ್ರಿಟಿಶರ ಜಾತಿಯವರೆಂದು ವಾಚಕರು ವಾದಿಸಬಹುದು. ಆದರಿಂದ ವಿಲಾಯತಿಯೊಳಗಿನ ಬ್ರಿಟಿಶರ ಅಂತಃಕರಣವು ಅವರ ಕಡೆಗೇ ಎಳೆಯುತ್ತದೆಂದೂ ವಾಚಕರು ಉತ್ತರವನ್ನೀಯಬಹುದು. ಆದರೆ, ಈ ಕಾರಣವು ಅಷ್ಟೇನು ಕಸುವುಳ್ಳದ್ದಲ್ಲ. ಕೇವಲ ಸವರ್ಣೀಯರೆಂದ, ದಕ್ಷಿಣ ಆಫ್ರಿಕಾ ಮುಂತಾದ ವಸಾಹತುಗಳಲ್ಲಿ ನಡೆಯುವ ಅವಮಾನದ ಪ್ರಕಾರಗಳನ್ನು ಸಾಮ್ರಾಜ್ಯ ಚಾಲಕರಾದ ಬ್ರಿಟಿಶರು ದುರ್ಲಕ್ಷಿಸುವರೆಂದು ತಿಳಿಯಲಾಗದು. ಸಾಮ್ರಾಜ್ಯದ ಚಾಲಕರು ಘೋಷಿಸಿದ್ದು, ಇಷ್ಟು ಕ್ಷುಲ್ಲಕ ಕಾರಣಕ್ಕಾಗಿ ಮಹದನ್ಯಾಯವನ್ನು ಅಲಕ್ಷಿಸಿ, ಲೋಕದಲ್ಲಿ ಅಪಕೀರ್ತಿ ಹೊಂದಲು ಎಂದೂ ತಯಾರಾಗಲಿಕ್ಕಿಲ್ಲ. ಕಾರಣವು ಅಷ್ಟು ಬಲವಾಗಿದ್ದ ಹೊರತು, ಅವರೆಂದೂ ಅಲಕ್ಷ್ಯ ಮಾಡಲಾರರು. ವಸಾಹತುಗಳೊಳಗಿನ ಯಾತನೆಗಳು ಬಹಳ ತೀಕ್ಷ್ಣವಾಗಿದ್ದು, ಅವುಗಳನ್ನು ಅಲಕ್ಷಿಸಬೇಕಾದರೆ, ಅಷ್ಟೇ ದೊಡ್ಡ ಕಾರಣವಿರಬೇಕೆಂದು ವಾಚಕರು ದೀರ್ಘ ಆಲೋಚನೆ ಮಾಡಿದರೆ ತಿಳಿಯುವ ಹಾಗಿದೆ.

ದಕ್ಷಿಣ ಆಫ್ರಿಕಾದಿ ವಸಾಹತುಗಳೊಳಗಿನ ಬ್ರಿಟಿಶರು ಭಾರತೀಯರಿಗೆ ಪರಿಪರಿಯಿಂದ ದಣಿಸುತ್ತಾರೆ. ಭರತಖಂಡದ ಅಧಿಪತಿಗಳಾದ ಸಾಮ್ರಾಜ್ಯದ ಚಾಲಕರು ಯಮಯಾತನೆಗಳನ್ನು ಅರಿತಿದ್ದಾಗ್ಯೂ, ಏನೂ ಅರಿಯದವರಂತೆ, ಸುಮ್ಮಗೇ ಕೂಡ್ರುತ್ತಾರೆ. ಇದಕ್ಕೆ ಕಾರಣವೇನು? ಬೆರಿಸ್ಟರ ನೋಬಲ್ ಎಂಬವರು ಸದ್ಯಕ್ಕೊಂದು ಪತ್ರವನ್ನು ಪ್ರಕಟಿಸಿ, ಈ ವಿಷಯದ ಚರ್ಚೆ ಮಾಡಿರುವರು. ಭಾರತೀಯ ಪಕ್ಷಪಾತಿಯಾಗಿ ನೋಬಲ್‌ರವರು ಈ ಚರ್ಚೆ ಮಾಡಿದ್ದಿಲ್ಲ. ಇಂಗ್ಲಂಡದೊಳಗಿನ ಬ್ರಿಟಿಶರೂ, ವಸಾಹತುಗಳೊಳಗಿನ ಬ್ರಿಟಿಶರೂ ನಡಕೊಳ್ಳುವ ಬಗೆಯನ್ನು ಸೂಚಿಸುವಾಗ ವರ್ಣದ್ವೇಷದ ಮರ್ಮವು ಥಟ್ಟನೆ ಹೊರಬಿದ್ದಿದೆ. ನೋಬಲ್‌ರವರ ವಿಚಾರಧೋರಣವನ್ನು ಪರಾಂಬರಿಸಿರಿ.

ಪೂರ್ವದಲ್ಲಿ ಇಂಗ್ಲಂಡ ದೇಶವು ಸಮೃದ್ಧ ದೇಶವಿತ್ತು. ಅಂದರೆ, ದೇಶದೊಳಗಿನ ಪ್ರಜೆಗಳಿಗೆ ತಗಲುವ ಕಾಳುಕಡಿ, ಉಣ್ಣೆ ಮೊದಲಾದ ಸಾಮಗ್ರಿಗಳು ಇಂಗ್ಲಂಡದಲ್ಲಿಯೇ ತಯಾರಾಗುತ್ತಿದ್ದವು. ಸಾಂಸಾರಿಕ ಸಾಮಗ್ರಿಗಳ ಪೂರೈಕೆಗಾಗಿ ಬ್ರಿಟಿಶರು ಪರಸ್ಥರ ಮೇಲೆ ಅವಲಂಬಿಸಬೇಕಾಗಿದ್ದಿಲ್ಲ. ಯಾಂತ್ರಿಕ ಯುಗವು ಪ್ರಾರಂಭವಾದ ಬಳಿಕ, ಇಂಗ್ಲಂಡದ ಸ್ಥಿತಿಯು ಬದಲಿತು. ಜನಸಂಖ್ಯೆಯು ವಿಶೇಷ ಬೆಳೆಯಿತು. ಅವರಿಗೆಲ್ಲರಿಗೆ ಇಂಗ್ಲಂಡದಲ್ಲಿ ಬೆಳೆಯುವ ಕಾಳು ಕಡಿಯು ಸಾಕಾಗದಾಯಿತು. ಇಂಗ್ಲಂಡವು ಕಚ್ಚಾ ಸಾಮಗ್ರಿಗಳನ್ನು ಪರದೇಶಗಳಿಂದ ಕೊಳ್ಳಹತ್ತಿತು. ಪ್ರತಿಯಾಗಿ ತನ್ನಲ್ಲಿ ತಯಾರಾದ ಪಕ್ಕಾ ಸಾಮಗ್ರಿಗಳನ್ನು ಅವರು ಕೊಳ್ಳಬೇಕೆಂದ. ಸಹಜವಾಗಿ ಇಂಗ್ಲಂಡದ ಬಯಕೆಯಾಯಿತು. ಕಚ್ಚಾ ಸಾಮಗ್ರಿಗಳನ್ನು ಬೇಕಷ್ಟು ಕೊಡಲು ಯಾರೂ ತಯಾರು; ಆದರೆ, ಪಕ್ಕಾ ಸಾಮಗ್ರಿಗಳನ್ನು ಕೊಳ್ಳಲು, ನಾ ಒಲ್ಲೆ, ನೀ ಒಲ್ಲೆ ಎಂದು ಎಲ್ಲರೂ ಹೇಳುವವರೇ. ಇದರಿಂದ ಬ್ರಿಟಿಶರಿಗೆ ದೊಡ್ಡ ಉಪದ್ರವವುಂಟಾಯಿತು. ಪಕ್ಕಾ ಮಾಲು ಪರದೇಶಗಳಲ್ಲಿ ಖರ್ಚಾಗದಿದ್ದರೆ, ಯಾಂತ್ರಿಕ ಬಲದಿಂದ ಬ್ರಿಟಿಶರ ಬಲವು ಹಿಗ್ಗಲಾಗುವ ಬದಲು ಕುಗ್ಗುವದೇ. ಪಕ್ಕಾ ಮಾಲಿಗೆ ಗಿರಾಕಿ ಸಿಕ್ಕದರೆ ಮಾತ್ರ ಯಾಂತ್ರಿಕ ಬ್ರಿಟಿಶರ ಬಾಳ್ವೆ. ಎಲ್ಲ ದೇಶಗಳಲ್ಲಿಯೂ ಯಂತ್ರಗಳ ಪುರಸ್ಕಾರವಾಗಹತ್ತಿದ್ದರಿಂದ ಅಲ್ಲಲ್ಲಿ ಅವರು ತಮತಮಗೆ ಅವಶ್ಯವಿರುವ ಸಾಮಗ್ರಿಗಳನ್ನು ತಮ್ಮಲ್ಲಿಯೇ ಸಿದ್ಧಗೊಳಿಸಲುದ್ಯುಕ್ತರಾಗಿರುವರು. ಇಂಥ ಪ್ರಸಕ್ತಿಯಲ್ಲಿ ವಿಲಾಯತಿಯೊಳಗಿನ ಬ್ರಿಟಿಶರು ಕೆಟ್ಟು ಹೋಗುವ ಪ್ರಸಂಗ ಬಂದದೆ. ಇದರಿಂದ ಬೆರಿಸ್ಟರ ನೋಬಲ್‌ರವರು ಸೂಚಿಸುವದೇನಂದರೆ:— ಇಂಗ್ಲಂಡದೊಳಗಿನ ದೊಡ್ಡ ದೊಡ್ಡ ಸಾವುಕಾರರು ದಕ್ಷಿಣ ಆಫ್ರಿಕೆಯಂಥ ವಸಾಹತುಗಳಲ್ಲಿ ಗಿರಣಿಗಳನ್ನು ಸ್ಥಾಪಿಸಿ, ಅಲ್ಲಿಯೇ ಸಾಮಗ್ರಿಗಳನ್ನು ಪೂರೈಸಲು ಯೋಜಿಸಬೇಕು. ಇದರಿಂದ ಇಂಗ್ಲಂಡದೊಳಗಿನ ಸಾವುಕಾರರಿಗೆ ಹಣದ ಬಡ್ಡಿಯು ದಕ್ಷಿಣ ಆಫ್ರಿಕೆಯೊಳಗಿಂದ ಸಿಗುವದು. ಇಂಗ್ಲಂಡ ದೇಶವು ವಸಾಹತುಗಳಿಂದ ತರಿಸಿದ ಕಚ್ಚಾ ಮಾಲಿನ ದೆಸೆಯಿಂದ ತೆರಬೇಕಾಗುವ ಹಣವನ್ನು ಅಂಶತಃ ಅಲ್ಲಿಂದಲ್ಲೇ ತರಬಹುದು. ಈ ಮಾನದಿಂದ ಇಂಗ್ಲಂಡಗೊಳಗಿನ ದ್ರವ್ಯಶೋಷಣವೂ ಕುಗ್ಗುವದು. ಮತ್ತೊಂದು ಮಾತೇನಂದರೆ - ಇಂಗ್ಲಂಡದೊಳಗಿನ ಪ್ರಜೆಗಳನ್ನು ವಸಾಹತುಗಳಿಗೆ ಕಳಿಸಿ ಅಲ್ಲಿ ಉಳಕೊಳ್ಳಲು ಉತ್ತೇಜಿಸುವದು. ಹೀಗೆ ಉಳಕೊಂಡ ಬ್ರಿಟಿಶರು ಅಲ್ಲಿ ಬ್ರಿಟಿ ಸಾಮಗ್ರಿಗಳನ್ನೇ ಖರೇದಿ ಮಾಡುವರು; ಸುತ್ತುಮುತ್ತಲಿನ ಜನರಿಗೂ ಅವನ್ನೇ ಕೊಂಡುಕೊಳ್ಳಲು ಉಪದೇಶ ಮಾಡಿ ಗಿರಾಕಿಗಳನ್ನು ಸಂಪಾದಿಸುವರೆಂದು ಬೆರಿಸ್ಟರ ನೋಬಲ್‌ರವರ ವಿಚಾರಸರಣಿಯಿದೆ.

ಇಂಗ್ಲಂಡಕ್ಕೂ, ವಸಾಹತುಗಳಿಗೂ ಹೀಗೆ ಅನ್ಯೋನ್ಯ ಆಪ್ತತ್ವವುಂಟಾಗುತ್ತಿರುವಾಗ, ದೇಶಬಾಂಧವರಾದ ಬ್ರಿಟಿಶರು ತಮ್ಮ ದೇಶಬಾಂಧವರನ್ನೇ ಅಭಿವೃದ್ಧಿಗೊಳ್ಳಲು ಹಾಕಿಕೊಡುತ್ತಿದ್ದಾಗ, ವಸಾಹತುಗಳಲ್ಲಿ ಭಾರತೀಯರ ಪಾಳ್ಯವಾಗುವದು ಅನಿಷ್ಟವಲ್ಲವೇ? ಆದ್ದರಿಂದ ಭಾರತೀಯರನ್ನು ಗಂಟುಮೂಟೆ ಕಟ್ಟಿಸಿ ಹೊರದೂಡಲು ಯತ್ನ ನಡೆದಾಗ, ಸ್ವಾರ್ಥಪರಾಯಣ ಸಾಮ್ರಾಜ್ಯದ ಚಾಲಕರಾದ ಬ್ರಿಟಿಶರು ಅದಕ್ಕೆ ತಡೆಹಾಕಬಲ್ಲರೇನು! ದಕ್ಷಿಣ ಆಫ್ರಿಕೆಯೊಳಗಿನ ಪ್ರಶ್ನೆಯನ್ನು ವಿಚಾರಿಸಲು ಪ್ರಾತಿನಿಧಿಕ ಪರಿಷತ್ತು ಸೇರಿ ಚರ್ಚಿಸಿ ವಿಚಾರವಿದ್ದಾಗ ದಕ್ಷಿಣ ಆಫ್ರಿಕೆಯ ಸರಕಾರದವರು 'ಕಲರ ಬಾರ ಬಿಲ್' ಎಂಬ ಕಾಯಿದೆಯನ್ನು ಮಂಜೂರು ಮಾಡಿದ ಸುದ್ದಿ ಬಂದಿದೆ. ಈ ಕಾಯಿದೆಯಂತೆ ಯಾಂತ್ರಿಕ ಕಾರಖಾನೆಗಳಲ್ಲಿ ಕೆಲಸ ಮಾಡುವ ಮೂಲ ನಿವಾಸಿಗಳಿಗೂ, ಏಶಿಯಾ ಖಂಡದವರಿಗೂ ಕಾರಖಾನೆಗಳೊಳಗಿಂದ ಹೊರದೂಡುವರು. ಈ ಕಾಯಿದೆಗೆ ದಕ್ಷಿಣ ಆಫ್ರಿಕೆಯೊಳಗಿನ ಸ್ವಾರ್ಥಿ

ಗಳು ತಮ್ಮ ಸಮ್ಮತಿ ಕೊಡಲಿಲ್ಲೆಂಬ ಗ್ರಹಿಕೆಯಿತ್ತು. ಅದೂ ಈಗ ನಷ್ಟವಾಗಿದೆ. ಭಾರತಮಂತ್ರಿಗಳಾದ ಬರ್ಕನ್ ಹೆಡ್ ದೊರೆಗಳು, ದೊರೆಗಳ ಸಭೆಯಲ್ಲಿ ಈ ಅನುಮಾನವು ನಿರಾಧಾರವೆಂದು ಸ್ಪಷ್ಟವಾಗಿ ಹೇಳಿದರು. ಪ್ರಾತಿನಿಧಿಕ ಪರಿಷತ್ತಿನಲ್ಲಿ ಈ ಕಾಯಿದೆಯು ಚರ್ಚೆಯಾಗಲಿಕ್ಕಿಲ್ಲ. ಅಂಥ ಬಳಿಕ, ಮತ್ತೇನು ಬೇಕು! ದಕ್ಷಿಣ ಅಫ್ರಿಕೆಯಲ್ಲಿ ಮುಂದೊದಗುವ ಪೀಡನೆಯ ಲಕ್ಷಣವಿದು. ಹಿಂದುಸ್ಥಾನ ಸರಕಾರವೂ, ಸರ್ವಾಧಿಪತಿ ರೀಡಿಂಗ ದೊರೆಗಳೂ, ಹೊಸ ಸರ್ವಾಧಿಪತಿಗಳಾದ ಇರ್ವಿನ್ ದೊರೆಗಳೂ ಭಾರತೀಯರಿಗಾಗಿ ಹಗಲಿರುಳು ನಡಿಸಿದ ಪ್ರಯತ್ನಗಳ ಪ್ರತ್ಯಕ್ಷ ಫಲವಿದು. ಇತ್ತ ಸಾಮೋಪಚಾರದ ಕಥೆ ಹೇಳುತ್ತಿರುವದು, ಅತ್ತ ಅನ್ಯಾಯದ ಬಲಂವರೆ ನಡೆಯುತ್ತಿರುವದು; ಇದೊಂದು ಬ್ರಿಟಿಶ ರಾಜನೀತಿಯ ಪ್ರಜಾವಂಚಕ ವೇಷವು. ವರ್ಣದ್ವೇಷದ ಮರ್ಮವೂ ಇದೇ; ಅಚಾರವಿಚಾರಗಳ ಪ್ರಕಾರವೂ ಇದೇ.

ಸ್ಫುಟ ಸೂಚನೆಗಳು.

೧. ಹಿಂದೂ-ಮುಸಲ್ಮಾನರು ಕಾಳೀ ನಗರಿಯಲ್ಲಿ ಎಬ್ಬಿಸಿದ ಹಾವಳಿಯ ಕುರಿತು ತುರ್ಕಸ್ಥಾನದ ಕಾನಸ್ಟಾಂಟಿನೋಪಲ ಶಹರದೊಳಗಿನ "ಮಿಲಿಯೆಟ್" ಪತ್ರಿಕೆಯು ಮನನೀಯ ವಿಚಾರಗಳನ್ನು ಪ್ರಕಟಿಸಿದೆ. "ಮಿಲಿಯೆಟ್" ಪತ್ರಿಕಾಕರ್ತರು ಹಿಂದೂ ಮುಸಲ್ಮಾನರ ದೊಂಬಿಯ ಮೂಲಕ ಒದಗಿದ ಅನರ್ಥವನ್ನು ನಿರ್ದೇಶಿಸಿ ಉದ್ಗರಿಸುವದೇನಂದರೆ:- "ಹಿಂದುಸ್ಥಾನದಲ್ಲಿ ಆಗಿಂದಾಗ ದೊಂಬಿಯಾಗುವ ಕಾರಣವೇನೆಂದು ವಿಚಾರಿಸಿದರೆ, ಧಾರ್ಮಿಕ ದುರಭಿಮಾನದ ಮರುಳು ಹಾಗು ಧರ್ಮಭೇದಗಳು. ಇಬ್ಬರೂ ಒಂದೇ ರಾಷ್ಟ್ರದವರು; ಒಂದೇ ಜನಾಂಗದವರು; ಒಂದೇ ಬಗೆಗಡವರು: ಆದರೆ ಧರ್ಮಭೇದದಿಂದ ಜೀವನಕ್ರಮಭೇದದಿಂದ ಅವರೊಳಗೆ ಇತ್ತಂಡಗಳಾಗಿವೆ. ಇವರಿಗೆ ಧರ್ಮದ ಗ್ರಹಿಕೆ ಇಲ್ಲ; ಪಾವಿತ್ರ್ಯದ ನಿಜರೂಪ ಗೊತ್ತಿಲ್ಲ. ಇದರಿಂದ ಇವರಿಗೆ ಸುತ್ತುಮುತ್ತಲಿನ ಸ್ಥಿತಿಯಷ್ಟೇ ಕಾಣುತ್ತದೆ. ಅದನ್ನು ದಾಟಿ ನೋಡುವ ಸಾಮರ್ಥ್ಯವು ಇವರಲ್ಲಿರುವದಿಲ್ಲ. ರಾಷ್ಟ್ರೀಯ ಸ್ವಾಭಿಮಾನವನ್ನು ಇವರು ಲೆಕ್ಕಿಸುವದಿಲ್ಲ; ತಾವು ಪಾರತಂತ್ರ್ಯದಲ್ಲಿದ್ದೇವೆಂಬ ಅರಿವು ಇವರಿಗಿರುವದಿಲ್ಲ. ತಮ್ಮ ಮನಸ್ಸಿನಲ್ಲಿ ಸಂಚಾರ ಹೊಂದಿದ ಧರ್ಮದ ಕಲ್ಪನೆಯೇ ಅವರಿಗೆ ಸರ್ವಸ್ವವಾಗಿದೆ." "ಮಿಲಿಯೆಟ್" ಪತ್ರಿಕಾಕರ್ತರು ಪ್ರೇಕ್ಷಕರಾಗಿ ದೂರದಿಂದ ನಿಂತು ನೋಡಿ ತೆಗೆದ ಉದ್ಗಾರಗಳಿವು! ರಾಷ್ಟ್ರೀಯ ಸ್ವಾಭಿಮಾನಕ್ಕೋಸ್ಕರ ಪರಕೀಯ ಬಾಂಧವರಿಗೆ ಸಾಧ್ಯಪೋಷಣ ಮೇಲೆ ಕಟಾಕ್ಷ, ನಮ್ಮ ಹಿಂದೂ ಬಾಂಧವರಿಗೆ ವೈರವಣಿಗೆಯನ್ನು ಸಾಧುತ್ತ, ಬಾರಿಸುತ್ತ ಮಸೀದಿಯನ್ನು ದಾಟುವ ಅತ್ಯಾಗ್ರಹ; ವಿಶಿಷ್ಟ ಪರಿಸ್ಥಿತಿಯ ಮೇಲೆ ನಾವು ತೀರ್ಪು ಕೊಡಲಿಚ್ಛಿಸುವದಿಲ್ಲ. ಒಂದು ಕಡೆ ಹಿಂದೂಗಳು ತಪ್ಪಿರಬಹುದು; ಇನ್ನೊಂದು ಕಡೆ ಮುಸಲ್ಮಾನರು ತಪ್ಪಿರಬಹುದು; ಆದರೆ ಉರತೂ ಕಡೆಗಳಲ್ಲಿಯೂ ಒದಗಿಬರುವದು ಹಿಂದೂ-ಮುಸಲ್ಮಾನರ ದೊಂಬಿಯೇ. ಹಿಂದೂ-ಮುಸಲ್ಮಾನರು ಧರ್ಮದ ಮರ್ಮವನ್ನು ಅರಿತಿದ್ದರೆ, ಅನ್ಯೋನ್ಯ ಅಪ್ಪುತ್ವವನ್ನೂ, ಬಂಧುಭಾವವನ್ನೂ ಗ್ರಹಿಸಿದ್ದರೆ, ರಾಷ್ಟ್ರಕ್ಕೊದಗುವ ಅಪಮಾನವನ್ನು ಎಣಿಸಿದ್ದರೆ, ಈ ಪ್ರಕಾರದ ದೊಂಬಿಗಳಾಗುತ್ತಿದ್ದಿಲ್ಲವೆಂದು "ಮಿಲಿಯೆಟ್" ಪತ್ರಿಕಾಕರ್ತರು ಆಡಿದ ಮಾತುಗಳು ಯಥಾರ್ಥವಿರುವವಲ್ಲವೇ?

೨. ದೊಂಬಿಗಳಿಂದ ನಮ್ಮ ಸ್ವಾತಂತ್ರ್ಯಸ್ಫೂರ್ತಿಯು ಮತ್ತೂ ಬಿಗಿಯಾಗುತ್ತದೆ. ಆಳರಸರು ನಮ್ಮ ಹಿತ ತ್ಯಾಗ ಪರಿಹಾರಕ್ಕಾಗಿ ಹೊಂದು ಹಾಕಿಕೊಂಡಿರುವಾಗ ದೊಂಬಿಗಳಿಂದ ಅವರಿಗೆ ಅನಾಯಾಸವಾಗಿ ಪೆಸಗಳು ದೊರಕುತ್ತವೆ. ಕಲಕತ್ತೆಯ ದೊಂಬಿಗಳಿಂದ ಬಂಗಾಲ ಆಳರಸರು ಹೊಸ ಕಾಯದೆಯನ್ನೊಂದು ಸಂಪಾದಿಸಿರುವರು. ಡಿಸ್ಟ್ರಿಕ್ಟ ಮೆಜಿಸ್ಟ್ರೇಟರಿಗೆ ಜನಾವನಾದರೊಬ್ಬನು ಅನಿಷ್ಟ ಮನುಷ್ಯನೆಂದು ತೋರಿದಲ್ಲಿ ಆತನಿಗೆ ೬ ತಿಂಗಳು ಶಿಕ್ಷೆ ಕೊಡತಕ್ಕ ಹೊಸದೊಂದು ಶಸ್ತ್ರದ ಸಂಗ್ರಹವಾಗಿದೆ. ಆಳರಸರ ಶಸ್ತ್ರಾಗಾರದಲ್ಲಿ ತರತರದ ಶಸ್ತ್ರಗಳಿದ್ದಾಗ್ಯೂ, ಅವುಗಳಿಂದ ದೊಂಬಿಗಳನ್ನು ಶಾಂತಗೊಳಿಸುವ ನಿರ್ಧಾರವು ಆಳರಸರಲ್ಲಿದ್ದರ ಬಳಿಕ, ಹೊಸ ಶಸ್ತ್ರದ ಸಾಧನೆಯಾಗುವದೇನು? ನವ ಶಿಕ್ಷೆಯಾಗ ಶಸ್ತ್ರಸಂಗ್ರಹ ಮಾಡಿ, ಮುಂದೆ ಆಳರಸರ ಮೇಲೆ ಪ್ರಜೆಗಳು ಕಾಯಿದೆಯಂತೆ ಜವಾಬುದಾರಿ ಹೊರಿಸಲು ಹೊರಟಾಗ್ಯೂ ಆ ಶಸ್ತ್ರಗಳ ಪ್ರಯೋಗದಿಂದ ಪ್ರಜೆಗಳನ್ನು ಅಡ್ಡಗಟ್ಟಲು ಈ ಉಪಾಯಯೋಜನೆಯಾಗುತ್ತದೆಂದು ಯಾರಾದರೂ ಗ್ರಹಿಸುವದು ವಾಸ್ತವವಲ್ಲೇನು? ೧೫೦-೧೭೦ ವರ್ಷಗಳಿಂದ ಆಳರಸರು, ಕುಶಲರಾದ ಆಳರಸರು ಕಾರಭಾರ ನಡಿಸುತ್ತಿದ್ದಾಗ್ಯೂ ಪಾಶ್ಚಾತ್ಯ ಭೋಗಸದ ಕೀರ್ತಿ ಹಾರಿಸ ಕೂಡಲೇ ಇಂಥ ಪಟ್ಟಣಕ್ಕೆ ಅಗ್ನಿನಾರಾಯಣನ ಸಂಚಾರವಾಗುವದು ಆಳರಸರ ರಾಜ್ಯಭಾರದ ಮೇಲಿನ ಶಾಶ್ವತವಾದ ಕಳಂಕವು. ಇಂಥವರಿಗೆ ಹೆಚ್ಚು ಅಧಿಕಾರ ಕೊಟ್ಟು ಫಲವೇನು? ಇದರಿಂದ ಪ್ರಜಾಕ್ಷೇಮವು ಸಿದ್ಧಿಸಾಗುವದೇನು?

೩. ಬಿಹಾರದೊಳಗಿನ ಆಳರಸರಿಗೆ ಭಯಂಕರ ನಿರಾಶೆಯಾಗಿದೆ. "ಶಾಲೆಯಿಂದ ಹೊರಬಿದ್ದ ಅಪಕ್ವ ಬುದ್ಧಿಯ ಎಳೆ ಹುಡುಗರೂ, ಸ್ವರಾಜ್ಯ ಪಾರ್ಟಿಯಿಂದ ಕೂಲಿ ಪಡೆದು ಉಪನ್ಯಾಸ ಕೊಡುವವರೂ, ರಾಷ್ಟ್ರೀಯ ಶಾಲೆಗಳ ಶಿಕ್ಷಕರೂ ಪಟ್ಟಿಯಲ್ಲಿ ಕಾನೂನಿನನ್ವಯ ಶಿಕ್ಷೆ ಹೊಂದಿದವರೂ ಹೊಸ ಜಿಲ್ಲಾ ಬೋರ್ಡುಗಳಲ್ಲಿ ತುಂಬಿರುವರು. ಇವರಿಂದ ಬಹಳ ಕೆಟ್ಟ ಪರಿಣಾಮವಾಗುವಂತಿದೆ." ಬಿಹಾರದ ಆಳರಸರು ಜಿಲ್ಲಾ ಬೋರ್ಡುಗಳಿಗಾಗಿ ಮರುಮರನೆ ಮರುಗುವದನ್ನು ನೋಡಿ, ನಮ್ಮ ಅಂತಃಕರಣವು ಕಳವಳಿಸುತ್ತದೆ. ಹೊಸ ಜಿಲ್ಲಾ ಬೋರ್ಡಿನ ಚಿಂತೆಯು ಆಳರಸರಿಗೆ ಬೇಡ, ಅದನ್ನು ಬೇಕಾದವರು ಬೇಕಾದ ಹಾಗೆ ನಡಿಸಲಿ. ೬ ಗಾವಿರು ಮೈಲು ದೂರದಿಂದ ಬಂದ ಪರಿಪಕ್ವ ಬುದ್ಧಿಯ ಎಳೆ ಪುರುಷರು ಆಳರಸರ ಸಂಬಳ ತಿಂದು ಆಳರಸರು ಮಾಡುವ ಪ್ರಜಾಕಲ್ಯಾಣದ ಪರಂಪರೆ ಕೇಳುವವರೂ, ಪಾಶ್ಚಾತ್ಯ ಸಂಸ್ಕೃತಿಯ ಪ್ರಸಾರಕರೂ, ಕ್ರೈಸ್ತ ಯುಗಾದಿ ಪಾಸಕರ ಜನ್ಮದಿವಸ ಸಮಯ ನೊಡ್ಡ ದೊಡ್ಡ ಕಿತಾಬುಗಳನ್ನು ಪಡೆದವರೂ ನಡಿಸಿದ ಜಿಲ್ಲಾ ಬೋರ್ಡುಗಳಿಂದ ಉಂಟಾದ ಪ್ರಜಾಕಲ್ಯಾಣವು ನಮಗೆ ಗೊತ್ತಿದೆ; ಬಿಹಾರ ಸರಕಾರಕ್ಕೂ ಗೊತ್ತಿದೆ. ಇದನ್ನರಿತುಕೊಂಡದ್ದರಿಂದಲೇ ಹೊಸ ಜಿಲ್ಲಾ ಬೋರ್ಡುಗಳಲ್ಲಿ ಹೊಸ ಮನ್ವಂತರವು ಪ್ರಾರಂಭವಾಗಿದೆ. ಹೊಸ ಮನ್ವಂತರದಿಂದ ಪ್ರಜೆಗಳಿಗೆ ನಷ್ಟ ಒದಗಿದರೆ ಅದನ್ನು ತಿದ್ದುಕೊಳ್ಳಲು ನಾವೇ ಸಿದ್ಧರಿದ್ದೇವೆ. ಅದರ ಗೊಡವೆ ನಿಮಗೆ ಆಳರಸರಿಗೆ ಬೇಕಾಗಿರುವದಿಲ್ಲ.

೪. ನಮ್ಮ ಶ್ರೀ ಗೋಕರ್ಣ ಕ್ಷೇತ್ರದೊಳಗಿನ ಪೋಲೀಸರು ಕ್ಷೇತ್ರದ ನಿರ್ಮಲ ಹವೆಯ ರಕ್ಷಣೆಕ್ಕಾಗಿ ೧೪ ವರ್ಷ ಪ್ರಾಯದ ವಿಠೋಬಾ ವಾಸುದೇವ ಪೈ ಎಂಬ ಹುಡುಗನನ್ನು ನ್ಯಾಯಮೂರ್ತಿಗಳಾದ ರಾ। ಶೇಷಗಿರಿ ನಾಯ್ಕರ ಮುಂದೆ ಎಳೆತಂದು ಇ. ಪಿ. ಕೋಡ ಕಲಂ ೩೭೮ ರನ್ವಯ ಖಟ್ಲೆ ನಡಿಸಿ, ಕೃತಕೃತ್ಯರಾದ ಹಕೀಕತನ್ನು ನಾವು ಈ ಮೊದಲೇ ಕೊಟ್ಟಿರುವೆವು. ಇದನ್ನು ನೋಡಿ, ಪೋಲೀಸರು ಅಘಟಿತ ಘಟನಾಸಾಮರ್ಥ್ಯವಂತರೆಂದು ಸಮಸ್ತರೂ ಉದ್ಗರಿಸುವರು. ಪೋಲೀಸರ ಹಕೀಕತನ್ನು ನಾವು ಗೃಹೀತ ಹಿಡಿಯುವೆವು; ೧೪ ವರ್ಷದ ಹುಡುಗನು ೬ ಕೊಡ ನೀರು ತುಂಬಿದ ಪಾತ್ರೆಯನ್ನು ತರಲರ್ಹನೆಂದು ನಾವು ತಿಳಿಯುವೆವು; ಅದಕ್ಕೆ ಕೆಟ್ಟ ವಾಸನೆ ಬರುತ್ತಿತ್ತೆಂದೂ ನಾವು ಕಲ್ಪಿಸುವೆವು; ಬಹಳ ಕೆಟ್ಟ ವಾಸನೆ ಬರುತ್ತಿತ್ತೆಂದು ಗ್ರಹಿಸಲಿಕ್ಕೂ ನಾವು ತಯಾರು. ಹಂಚನಾಮೆ ಇಲ್ಲದೆ, ಡಾಕ್ಟರರ ಅಭಿಪ್ರಾಯವಿಲ್ಲದೆ ದುರ್ಗಂಧ ನೀರಿನ ಮಾದರಿ ಇಲ್ಲದೆ ನ್ಯಾಯಮೂರ್ತಿಗಳು ಒಬ್ಬಿಬ್ಬ ಸಾಕ್ಷಿಗಾರರ ಅಭಿಪ್ರಾಯದ ಮೇಲಿಂದ ನ್ಯಾಯಮೂರ್ತಿಗಳ ಸಾರ್ವಜನಿಕ ಆರೋಗ್ಯಭಂಗದ ಮಹಾ ದೊಡ್ಡ ಆರೋಪ ಹೊರಿಸಿ ಚಿಕ್ಕ ಬಾಲಕನಿಗೆ ದಂಡಿಸುವದು ಕಾಯಿದೆಯೋ? ನೀತಿಯೋ? ಸ್ವೇಚ್ಛೆಯೋ? ಆಸ್ಪತ್ರೆಗಿ ಜನರು ತಿನ್ನುವ ಅಡಿಕೆಗಳು ಆ ನೀರಿನಲ್ಲಿದ್ದವು. ಅವುಗಳನ್ನು ತಿಂದರೆ ಆರೋಗ್ಯಕ್ಕೆ ಹಾನಿ ತಪ್ಪುವದಿಲ್ಲೆಂದು ಸಾಕ್ಷಿಗಾರ ತಜ್ಞರ ಅಭಿಪ್ರಾಯವಾಯಿತು. ಇಂಥ ಸ್ಥಿತಿಯಲ್ಲಿ ಶಿಕ್ಷೆಯಾದದ್ದು ಕಾಯಿದೆಯ ವಿಕಾರವೋ? ಪೋಲೀಸರ ಅಲಂಕಾರವೋ? ಆರೋಪಿಯು ಹಕೀಕತವನ್ನು ಕೇಳಿದರೆ, ಇದೇ ಪ್ರಕರಣವು ನೆರೆಯ ಅಂಗಡಿಕಾರರ ದ್ವೇಷದಿಂದ ಉಂಟಾಗಿದೆಂಬ ಕಾಣುವ ಹಾಗಿದೆ. ಆದರೂ, ನಮ್ಮ ನ್ಯಾಯಮೂರ್ತಿಗಳು ೬ ರೂಪಾಯಿ ದಂಡ ವಿಧಿಸಿ, ಪೋಲೀಸರ ಖಟ್ಲೆಯನ್ನು ಸಿದ್ಧಮಾಡಿಬಿಟ್ಟರು. ಇದು ನಿಜವಾಗಿ ಶೋಚನೀಯವು. ಡಿ। ಮೆಜಿಸ್ಟ್ರೇಟರು ಪ್ರಕರಣ ತರಿಸಿಕೊಂಡು ಯುಕ್ತ ಹಿತ ಇದಾಬು ಕೈಕೊಳ್ಳಬೇಕಾಗಿ ನಾವು ಸೂಚಿಸುವೆವು. ದಕ್ಷತೆಯಿಂದ ಮಾಡಿದ ಪೋಲೀಸರಿಗೆ ಒಂದು ಶಿಫಾರಸು ಪತ್ರವನ್ನು ಕೊಡಬಹುದಲ್ಲವೇ!

ಸ್ಥಾನಿಕ ವೃತ್ತಾಂತ.

ಕುಮಟಾ— ಬಿಸಿಲು ಕಾಯುತ್ತದೆ. ಸೆಕೆ ಬಹಳ.

ಬ್ರಹ್ಮಚಾರಿ ಶ್ರೀ ವಿನಾಯಕ ಮಹಾರಾಜ ಮುಸೂರಕರರವರು ಕಳೆದ ತಾರೀಖು ೧೬-೧೭ ನೇಗೆ ಶ್ರೀ ಶಾಂತೇರಿ ಕಾಮಾಕ್ಷಿ ದೇವಸ್ಥಾನದಲ್ಲಿಯೂ ಹತ್ತು ಸಮಸ್ತರ ಮಠದಲ್ಲಿಯೂ ಶ್ರೀಮದ್ಭಗವದ್ಗೀತೆಯ ಮೇಲೆ ಪ್ರವಚನ ಕೊಟ್ಟರು. ಶ್ರೀ ಕೃಷ್ಣ ಪರಮಾತ್ಮನು ಅರ್ಜುನನಿಗೆ ಶೋಕ ಮಾಡದಂತೆ ಹೇಳಿದ ಕಾರಣಗಳನ್ನು ವಿವೇಚಿಸಿದರು. ಶ್ರೀ ಮ. ತಪಸ್ಲೆ

ಮೂರು ಪ್ರಕಾರದ ಮನಸ್ಸು ಹಾಗು ಅವುಗಳ ಲಕ್ಷಣಗಳನ್ನು ನಿರೂಪಿಸಿದರು. ರವಿವಾರದ ಪ್ರವಚನದಲ್ಲಿ ಭಕ್ತಿಮಾರ್ಗವನ್ನು ಬೋಧಿಸಿದ ಬಳಿಕ, ದಾಸಬೋಧ ಗ್ರಂಥದ ಮಹಿಮೆಯನ್ನು ವರ್ಣಿಸಿದರು: ಸಮರ್ಥ ಶ್ರೀರಾಮದಾಸರು ಹಿಂದೂ ಧರ್ಮದ ಗ್ಲಾನಿಯ ಕಾಲದಲ್ಲಿ, ಧರ್ಮಬೋಧಕ್ಕಾಗಿ ಪ್ರಪಂಚ-ಪರಮಾರ್ಥಗಳನ್ನು ಸಾಧಿಸಲನುಕೂಲವಾಗಿ ಈ ಗ್ರಂಥವನ್ನು ರಚಿಸಿರುವರೆಂದು ಹೇಳಿ, ಪ್ರಪಂಚಕ್ಕೆ ಅವಶ್ಯವಿರುವ ಸಮಸ್ತ ಪ್ರಕಾರದ ಮಾಹಿತಿಯು ಈ ಗ್ರಂಥದಲ್ಲಿ ಒಳಗೊಂಡಿರುವದೆಂದು ಹೇಳಿ, ಪ್ರತಿಯೊಬ್ಬರೂ ದಾಸಬೋಧವನ್ನು ಪಠಣ ಮಾಡಬೇಕಾಗಿ ಉಪದೇಶಿಸಿದರು. ಕ್ರೈಸ್ತ ಮತದ ಪಾದ್ರಿಗಳು ದೂರ ದೂರ ದೇಶಗಳಿಂದ ಭರತ ಭೂಮಿಗೆ ಬಂದು ಕೋಟ್ಯವಧಿ ರೂಪಾಯಿಗಳನ್ನು ಧರ್ಮಪ್ರಸಾರ ಕಾರ್ಯಕ್ಕಾಗಿ ವೆಚ್ಚ ಮಾಡುತ್ತಿದ್ದಾಗ ನಾವು ಕಣ್ಣಿಗೆ ಕಾಣುತ್ತಿದ್ದೇವೆ. ಸದ್ಭಕ್ತ ಪಂಡಿತರೂ, ಶ್ರೀ ಮಸೂರಕರರವರ ಶಿಷ್ಯರೂ ಆದ... ದಾಸಬೋಧದ ೧ ಲಕ್ಷ ಪ್ರತಿಗಳನ್ನು ಜನರಿಗೆ ಉಚಿತವಾಗಿ ಹಂಚುವ ಕಾರ್ಯವು ದೊಡ್ಡದಾದರೂ, ಗ್ಲಾನಿಯ ದೃಷ್ಟಿಯಿಂದ ... ಸೇವೆಗೆಂದು ಶ್ರೀ ವಿನಾಯಕ ಮಹಾರಾಜರು ಸಿದ್ಧರಿರುವರು. ಈ ಕಾರ್ಯಕ್ಕಾಗಿ ಎಲ್ಲರೂ ಸಹಾಯ ಮಾಡಬೇಕಾಗಿ ಅವರು ಹೇಳಿದರು. ಕೊನೆಗೆ ಮೂರು ಧರ್ಮಗಳನ್ನು ಬೋಧಿಸಿದರು. (೧) ಸ್ತ್ರೀಯರು ... ದಿನಾ ಪ್ರಾತಃಕಾಲದಲ್ಲಿ ಎದ್ದು ಕನಿಷ್ಠ ೧೩ ಪಾದ್ಯ... ತಮ್ಮ ... ಹಾಕಬೇಕು. ... ನಮಸ್ಕಾರಗಳನ್ನು ಹಾಕಬೇಕು. ... ಶಕ್ತರಾಗಿದ್ದರೆ, ... ಸ್ತ್ರೀಯರ ಮೇಲೆ ಯಾವದೇ ಪ್ರಕಾರದ ... ಮಾಡದೆ, ಬಹುಮಾನವಾಗಿ ... ಸಮರ್ಪಿಸಿದ ... ವಿನಾಯಕನನ್ನು ಶ್ರೀ ... ಹೇಳಿದರು. (೨) ಸನಾತನ ಧರ್ಮದ ಗ್ರಂಥಭಾಂಡಾರವು ದೊಡ್ಡದಿದ್ದು, ಅದನ್ನು ಓದದೆ ನಮಗೆ ... ವಾಗಿದೆ. ... ಕನ್ನಡ ಧರ್ಮಗ್ರಂಥಗಳನ್ನು ಓದಿ ... (೩) ಈಗ ಕೆಲ ... ಸಂಖ್ಯೆಯು ... ಹೆಚ್ಚಿದೆ: ... ವಿಚಾರದಿಂದ ಮನೆಗೆಲಸಗಳಿಗಾಗಿ ಸ್ತ್ರೀಯರು ... ಕೆಲಸಗಳನ್ನು ... ಮಾಡದೆ, ಕಷ್ಟ ಕಷ್ಟ ಮನೆಯ ಯಾವತ್ತು ಕೆಲಸಗಳನ್ನು ಸ್ವತಃ ಮಾಡಬೇಕು. ಇದರಿಂದ ದೇಹಕ್ಕೂ ಹಿತವಿದೆ. ಪ್ರಪಂಚಕ್ಕೂ ಸಾಧಿಸಿದೆ. ಇತ್ಯಾದಿ ಹೇಳಿ, ಶ್ರೀ ವಿನಾಯಕ ಮಹಾರಾಜರು ಶ್ರೀ ... ಪ್ರವಚನವನ್ನು ಮುಗಿಸಿದರು. ಮಂಗಳವಾರಕ್ಕೆ ದಾಸಬೋಧ ಗ್ರಂಥದ ... ಕಾರ್ಯಕ್ಕೆ ಸಹಾಯ ... ಆಶ್ರಮದೊಳಗಿನ ಬ್ರಹ್ಮಚಾರಿಗಳು ... ರು. ಇಲ್ಲಿಯ ಶ್ರೀ ನಾರಾಯಣ ರಾಮಕೃಷ್ಣ ಪಂಡಿತರವರು ಈ ಕಾರ್ಯಕ್ಕೆ ರೂಪಾಯಿ ೧೦೦೧ನ್ನು ಅರ್ಪಿಸಿದರು. ಮಂಗಳವಾರ ಅಪರಾಹ್ನಕ್ಕೆ ಶ್ರೀ ಮಸೂರಕರರವರು ಶಾಖ್ಯೆಯ ಮುಂದಿ ಶಿಷ್ಯರೊಡನೆ ಹೊನ್ನಾವರಕ್ಕೆ ಸಿಮ್ಲಾ ಕ್ಷಣದ ಮೇರೆಗೆ ತೆರಳಿದರು. ಕಾಳಿನ ಶಿಷ್ಯರು ಅಂಕೋಲೆಗೆ ರವಾನೆಯಾದರು. ಶ್ರೀ ವಿನಾಯಕ ಮಹಾರಾಜರವರು ಹೊನ್ನಾವರದಲ್ಲಿ ಒಂದು ದಿನ ಉಳಕೊಂಡು, ಮಾರನೇ ದಿನ ಸಾಯಂಕಾಲಕ್ಕೆ ಅಲ್ಲಿಂದ ಇಲ್ಲಿ ಬಂದು, ಅಂಕೋಲೆಗೆ ಚಿತ್ತೈಸಿದರು.

ಜಿಲ್ಲಾ ಲೋಕಲ್ ಬೋರ್ಡಿನ ಇಲ್ಲಿಯ ಸಭಾಸದರಾದ ಶ್ರೀ ಗಣೇಶ ಗಣಪತ ಶಾಸ್ತ್ರಿಗಳು ತೀರಿಕೊಂಡದ್ದರಿಂದ, ಅವರ ಬದಲಿಗೆ ಸಭಾಸದರನ್ನು ಆರಿಸುವರೆ ಇಲೆಕ್ಷನು ತಾ. ೩೦-೬-೧೯೨೬ ನೇಗೆ ನಮ್ಮ ತಾಲೂಕಿನಲ್ಲಿ ಜರಗುವದು. ತಾ. ೧೪-೬-೧೯೨೬ನೇಗೆ ನೇಮಣೂಕಿ ಪತ್ರಗಳನ್ನು ಕುಮಟಾ ಮಾಮಲೇದಾರರ ಕಡೆಗೆ ಕೊಡಬೇಕೆಂದು ಜಾಹೀರಾಗಿದೆ

ಈ ಕೂಡಿನ ಸಂಚಿಕೆಯೊಡನೆ ಮುದ್ರಾಸಿನ 'ಕೆಸ್ಸ್ಸ್ ಫ್ರೂಟ್ ಕಂಪನಿಯ ಜಾಹೀರಾತನ್ನು ಹಂಚಿದ್ದೇವೆ. ಅವನ್ನು ವಾಚಕರು ಪರಾಂಬರಿಸುವದು.

ಸಾಭಾರ ಸ್ವೀಕಾರ.

Volunteer:-*May issue Editor and Publisher:- Dr. N. S. Hardiker, 'Volunteer' Office, Hubli. Annual Subscription Rs. 3 only.*

ಸ್ವಧರ್ಮ ಗಳಿಸುವ ಗುಂಪಿನಿಂದ ಹೊರಡುವ ಪತ್ರಿಕೆಯ ಚೈತ್ರದ ಸಂಚಿಕೆ. ಸಂಪಾದಕ- ದತ್ತಾತ್ರೇಯ ರಾಮಚಂದ್ರ ಬೇಂದ್ರೆ, ಬಿ. ಎ. ಪ್ರಕಾಶಕ, ಶ್ರೀ ಬಿ ವಿ. ಬುರ್ಲಿ, ಕರ್ನಾಟಕ ಮುಖಾ ವಿದ್ಯಾಲಯ, ನಗರಬುದ್ಧಿ, ಧಾರವಾಡ. ವಾರ್ಷಿಕ ಚಂದಾ ಪ ಟಪಾಲ್ ಸೇರಿ ೩ ರೂಪಾಯಿ.

ಮೈಸೂರ ರಾಜಕೀಯ ಸುಧಾರಣೆಗಳು— ಮೈಸೂರ ಪ್ರಜಾ ಪ್ರತಿನಿಧಿಸಭೆಯ ಪ್ರೋಗ್ರೆಸಿವ್ ಪಾರ್ಟಿಯವರ ವರದಿ.

ಕಾರವಾರ— ಸ್ಕೂಲ ಬೋರ್ಡಿನ ಇಲೆಕ್ಷನು ತಾ. ೧೭ ನೇಗೆ ಇಲ್ಲಿ ಜರುಗಿತು. ಲೋಕಪಕ್ಷೀಯ ಮಂಡಳದ ಸಭೆಯು ಮುನ್ನಾಣ ದಿನವೇ ಕೂಡಿತ್ತು. ಸ್ಕೂಲ ಬೋರ್ಡಿಗೆ ಶಿಕ್ಷಣ ತಜ್ಞರನ್ನು ಆರಿಸುವ ಕುರಿತು ಬಹಳ ವಾಗ್ವಾದವಾಯಿತು. ರಾಷ್ಟ್ರೀಯ ಸಭೆಯ ಅಧಿಪಾರಿಗಳಾದ ಶ್ರೀ ಬಿತಗಣಿ ರಾವು ಹೆಗಡೆ ಹಾಗು ಗೋವಾಲಿಯಾದ ದೇವರವರು ಸರಕಾರಿ ವೈದ್ಯರಾದ ಪಿ. ಹಟ್ಟಂಗಡಿಯವರನ್ನೇ ಆರಿಸಬೇಕೆಂದು ಹಟಹಿಡಿದರು. ಹೊನ್ನಾವರದ ಜಿಲ್ಲಾ ಕಾಂಗ್ರೆಸ ಕಮಿಟಿಯು ಅಭಿಪ್ರಾಯವಾದ ಶ್ರೀ ಶಿವರಾವ ಶಾಸ್ತ್ರಿಗಳವರೂ ಈ ಸಮಯ ಇಲ್ಲಿ ಇದ್ದರು. ಇವರೂ ವೈದ್ಯನವರಿಗೆ ಅಶ್ರಯ ಕೊಟ್ಟರು. ಶ್ರೀ ವಿಶ್ವನಾಥ ಪ್ರಭುಗಳವರು ರಾಷ್ಟ್ರೀಯರಿದ್ದರೂ ಲೋಕಪಕ್ಷೀಯ ಮಂಡಳದ ಸಭಾಸದರಿದ್ದು ಲೋಕ ಪಕ್ಷೀಯ ಮಂಡಳದೊಳಗಿನ ಶ್ರೀ ದೇವ, ರಾಮ ಹೆಗಡೆ ಇತ್ಯಾದಿಗಳು ರಾ| ಹಟ್ಟಂಗಡಿಯವರಿಗೆ ಬೆಂಬಲ ಕೊಡದ ಮುದ್ದಣ್ಣನ ಬಿಜವ ಮೂಲಕ ಈ ಇಲೆಕ್ಷನಿನಲ್ಲಿ ಲೋಕ ಪಕ್ಷೀಯ ಮಂಡಳ ಪ್ರವೇಶಿಸಲಾಗಬೇಕು ತೀರ್ಮಾನವಾಯಿತು. ಲೋಕ ಪಕ್ಷೀಯ ಮಂಡಳವು ಸ್ಕೂಲ ಬೋರ್ಡ ಇಲೆಕ್ಷನಿನಂಥ ಸಂದರ್ಭದಲ್ಲಿ ತಟಸ್ಥವೃತ್ತಿಯನ್ನು ಕೈಕೊಂಡಿದ್ದರೆ ಮೇಲೆ ಬಂದ ಮಂಡಳದ ಸಭಾಸದರಿಗೆ ಲೋಕಪಕ್ಷದ ಅರಿವು ಇಲ್ಲವೆಂದು ಸ್ಪಷ್ಟವಾಗುತ್ತದೆ. ಹೊನ್ನಾವರದ ಶ್ರೀ ಶಿವರಾವ ಶಾಸ್ತ್ರಿಗಳು ಇದ್ದು ವೈದ್ಯನವರಿಗೆ ಬೆಂಬಲ ಕೊಟ್ಟದ್ದರಿಂದ ಜಿಲ್ಲಾ ಕಾಂಗ್ರೆಸ ಕಮಿಟಿಯವರು ಅವರ ಆಭಾರ ಮನ್ನಿಸಬೇಕು. ಮಾರನೇ ದಿನದ ಇಲೆಕ್ಷನಿನಲ್ಲಿ ಸರಕಾರನಿಯುಕ್ತ ಸಭಾಸದರು ಹಾಗು ಶ್ರೀ ದೇವ, ಹೆಗಡೆ, ಆದಿ ೧೩ ಮಂದಿ ಸಭಾಸದರು ಪಿ. ಹಟ್ಟಂಗಡಿಯವರಿಗೆ ಮತ ಕೊಟ್ಟರು. ಶ್ರೀ ವಿಶ್ವನಾಥ ಪ್ರಭುಗಳವರಿಗೆ ೮ ಮತ ಸಿಕ್ಕಿದವು. ಕುಮಟೆಯ ರಾ| ಎಸ್. ಎಸ್. ಕಾಮತರವರಿಗೆ ಒಂದು ಮತ ಸಿಕ್ಕಿತು. ಹೀಗೆ ಸರಕಾರಿ ವೈದ್ಯನವರಾದ ಪಿ| ಹಟ್ಟಂಗಡಿಯವರು ಆರಿಸಿಬಂದರು. ಉಳಿದ ಮತದಾರ ಸಂಘದ ಕಡೆಯಿಂದ ಆರಿಸಿ ಬಂದವರ ಹೆಸರುಗಳು:— ಜೈನುದ್ದೀನ ಹುಸೇನ ಮುಲ್ಲಾ ಕುಮಟಾ; ರೆ| ಎಚ್. ಪಿ. ಫಿಲಿಫ್ಸ್ ಹೊನ್ನಾವರ; ರಾ| ಎಸ್. ಎಚ್ ನಾಯ್ಕ ಹೊನ್ನಾವರ; ಸುಬ್ಬಾ ಬಲೇಶ್ವರ ಜೋಗ ಹಟ್ಟಿ ಕೇರಿಯೆ; ನಾರಾಯಣ ಬಾಬಾಜಿ ಚಿಂಚಣಕರ ಕಾರವಾರ; ಯು. ವ್ಹಿ. ನಾಯ್ಕ ಹೊನ್ನಾವರ; ಎಸ್. ಜಿ. ಭದ್ರಿ ಹಳಿಯಾಳ; ಸಾಮಾನ್ಯ ವರ್ಗದ ಕಡೆಯಿಂದ ರಾ| ಜಿ. ಆರ್. ಯಾಜಿ ಕುಮಟಾ; ಕೇ. ಆರ್. ಹಳದೀಪುರಕರ ಕಾರವಾರ; ಹಾಗು ಬಿ. ಆರ್. ಕೇರಕರ ಹಳಿಯಾಳ ಇವರು ಆರಿಸಿ ಬಂದರು. ರಾ| ಎಸ್. ವಿ. ಕಾಮತ ಕುಮಟಾ ಹಾಗು ಡಿ. ಆರ್. ಕೇರಕರ ಹಳಿಯಾಳ ಇವರಿಗೆ ೧೩-೧೩ ಮತಗಳು ಬಿದ್ದದರಿಂದ ಸೋಡತಿ ಚೀಟಿ ತೆಗೆದು ಅಧ್ಯಕ್ಷರು ರಾ| ದತ್ತಾತ್ರೇಯ ಕೇರಕರರವರು ಆರಿಸಿ ಬಂದರೆಂದು ಜಾಹೀರಪಡಿಸಿದರು. ಸ್ತ್ರೀಯರ ಕಡೆಯಿಂದ ಮಿಸೆಸ್ ರೋಜ ಸಾಚೀಕೋರರವರು ಆರಿಸಿ ಬಂದಿರುವರು.

ಇಲೆಕ್ಷನು ಮುಗಿದ ಬಳಿಕ ಜಿಲ್ಲಾ ಬೋರ್ಡಿನ ಸಾಧಾರಣ ವಿಚಾರ ನಡೆಯಿತು. ಮಂಗಳವಾರ ಬೆಳಿಗ್ಗೆ ಕೆಲಸಕ್ಕಿಂತ ವಾದವೇ ಹೆಚ್ಚಾಯಿತು. ಇತರ ಕೂನನನ್ನು ನೇಮಿಸುವದು, ಶಿಪಾಯಿಯನ್ನು ನೇಮಿಸುವದು, ಕೆಲವೆಡೆಯಲ್ಲಿ ಶಾಲೆಗಳನ್ನು ಸ್ಥಾಪಿಸುವದು ಇತ್ಯಾದಿ ಕ್ಷುಲ್ಲಕ ವಿಷಯಗಳ ಮೇಲೆ ದೊಡ್ಡ ದೊಡ್ಡ ಭಾಷಣಗಳು ನಡೆದವು. ಇಷ್ಟಾಗಿ ವಿಷಯಗಳ ವಿಚಾರವು ಮುಂದೂಡಲ್ಪಟ್ಟಿತು. ಕೆಲವು ಕಿರುಕೋಳ ವಿಷಯಗಳ ಇತ್ಯರ್ಥವಾದ ಬಳಿಕ ಸಭೆಯು ವಿಸರ್ಜನವಾಯಿತು

ಜಿಲ್ಲಾ ಬೋರ್ಡಿನ ಈ ಸಭೆಗೆ ಶಿರ್ಶಿಯ ರಾ| ಕೇಶವರಾವ ಬಸಪ್ಪನವರು ಬಂದಿದ್ದರು. ಇವರು ಬೊಂಬಾಯಿಯಲ್ಲಿ ವಿದೂಷಕ ಪಾತ್ರವನ್ನು ಅಭಿನಯ. ಬಹುಶಃ ಅಧ್ಯಕ್ಷರು ಇವರಿಗೆ ಮುಂದಾಳ್ತನವನ್ನು ಕೊಡಬೇಕಾಯಿತು. ಇವರಿದ್ದರೆ ನಮ್ಮ ಜಿಲ್ಲಾ ಬೋರ್ಡಿಗೆ ಅನುಮೋದನ ಕೊಡುವವರ ಕೊರತೆ ಇಲ್ಲ; ತರಾವ ಸೂಚಿಸಿದ ಕೂಡಲೆ "ಸೆಕಂಡ ಆಯ್" ಎಂದು ಇವರು ಹೇಳುತ್ತಾರೆ. "ಫರ್ಸ್ಟ ಹಿ, ಸೆಕಂಡ ಆಯ್" ಎಂಬ ಇವರ ಒಬ್ಬ ಯೋಜನೆಗಳಿಂದ ಜಿಲ್ಲಾ ಬೋರ್ಡಿನಲ್ಲಿ ನಗೆಯೋ ನಗೆ!

ಇಲ್ಲಿಯ ಮುನಿಸಿಪಾಲಿಟಿಯ ಬ್ಯಾ-ಇಲೆಕ್ಷನಿನಲ್ಲಿ ರಾ| ವೆಂಕಟರಾವ ರಾಮಚಂದ್ರಯ್ಯಾ ಹಳದೀಪುರಕರ ಇವರು ಅಂತಿ ಬರದಿರುವರು.

— ರಾಷ್ಟ್ರೀಯ ವಾರದಲ್ಲಿ ತಮಿಳನಾಡಿನಲ್ಲಿ ರೂಪಾಯಿ ೧೦೬೩೩-೧೧-೧೧ ಬೆಲೆಯ ಖಾದಿಯು ಖರ್ಚಾಯಿತು. ಪಂಜಾಬದಲ್ಲಿ ೧೧೦೦೦ ರೂಪಾಯಿಗಳ ಖಾದಿಯು ಖರ್ಚಾಯಿತು. ಕಾಶೀ ಕ್ಷೇತ್ರದ ಬಾಬು ಶಿವಪ್ರಸಾದ ಗುಪ್ತರವರು ೩೦೦೦ ರೂಪಾಯಿಗಳ ಖಾದಿಯು ಮಾರಾಟ ಮಾಡಿದರು.

ಬಳ್ಳಾರಿಯ ವೈಭವ.

[೫ನೇ ಪಾನಿನಿಂದ ಮುಂದರಿಸಿದ್ದು.]

ಶ್ರೀನಿವಾಸ್ ಶ್ರೀನಿವಾಸ ಅಯ್ಯಂಗಾರರವರ ಹಸ್ತದಿಂದ ನೆರವೇರಿತು. ಬಳ್ಳಾರಿಯ ನಾಗರೀಕರು ಕಂಡುಗಟ್ಟರಿ, ರಾಷ್ಟ್ರಧ್ವಜದ ಮೇಲಿರುವ ತಮ್ಮ ಪ್ರೀತಿಯನ್ನು ಆದರವನ್ನೂ ವ್ಯಕ್ತಪಡಿಸಿದರು. ಬಳ್ಳಾರಿಯ ನಗರಾಧ್ಯಕ್ಷರೂ ಈ ಸಮಾರಂಭಕ್ಕೆ ಹಾಜರಿದ್ದರು.

ತಾ. ೨೧ನೇ ಶುಕ್ರವಾರಕ್ಕೆ ಪ್ರಾಂತಿಕ ಪರಿಷತ್ತು ಸೇರಿತು. ಅಧ್ಯಕ್ಷರಾದ ಶ್ರೀನಿವಾಸ್ ಶ್ರೀನಿವಾಸ ಅಯ್ಯಂಗಾರರವರು ತಮ್ಮ ಆಸನವನ್ನು ಅಲಂಕರಿಸಿ, ೧॥ ತಾಸಿನ ವರೆಗೆ ಅಸ್ಖಲಿತವಾದ ಭಾಷಣ ಮಾಡಿದರು. ಶ್ರೀ॥ ಅಯ್ಯಂಗಾರರವರು ದೇಶದಲ್ಲುಂಟಾದ ರಾಜಕೀಯ ಕಲಹಗಳನ್ನು ಮರೆಗಿದರು. ಸ್ವರಾಜ್ಯ ಪಕ್ಷದ ಕಾರ್ಯಕ್ರಮವನ್ನು ಕೈಕೊಳ್ಳುವರು ವಿಧಾಯಕಪಕ್ಷದ ವರೆಗೆ ಐಕ್ಯವಾಗುವದು ಅಸಂಭವವೆಂದು ಅಧ್ಯಕ್ಷರು ಅಭಿಪ್ರಾಯಪಟ್ಟರು. ಸರಕಾರದ ಅಂತಃಕರಣವು ಬದಲಾಗುವವರೆಗೆ ಅವರ ಕೈಕೆಳಗೆ ಅಧಿಕಾರಸ್ಥಾನಗಳನ್ನು ಸ್ವೀಕರಿಸುವದು, ಕೈಕಟ್ಟಿಕೊಂಡು ಸರಕಾರಕ್ಕೆ ಶರಣು ಹೋಗುವದೆಂದು ಶ್ರೀ॥ ಅಯ್ಯಂಗಾರರು ಉದ್ಗರಿಸಿದರು. ದಿವಾಣರಿಗೆ ಜಿಸ್ ಸರಕಾರಿ ಅಧಿಕಾರಿಗಳೆಂದು ಸಂಬೋಧಿಸಬಹುದು. ಅಥವಾ, ಅಧಿಕಾರಿ ಬಿನ್ನ ಸರಕಾರಿ ಎಂದು ಸಂಬೋಧಿಸಬಹುದು. (Official Non-official or Non-official Official)

ಮೊದಲಿಗರ್ಸು ಸ್ವರಾಜ್ಯದಲ್ಲಿ ದಿವಾಣಪದಗಳನ್ನು ಸ್ವೀಕರಿಸುವದರಿಂದ ಸ್ವರಾಜ್ಯವು ಪ್ರಾಪ್ತಿಯಾಗಲಾರದು. ಮುಂಬಯಿ ಹಾಗು ಕರ್ನಾಟಕದೊಳಗಿನ ಬ್ರಾಹ್ಮಣೇತರರಿಗೆ ಮದ್ರಾಸದ ಬ್ರಾಹ್ಮಣೇತರರಿಂದ ಬೋಧಗಳಿಯು ವಿಜ್ಞಾಪಿಸಿದರು. ಮದ್ರಾಸದೊಳಗಿನ ಕೌನ್ಸಿಲ ಕಮಿಟಿಗಳಲ್ಲಿ ಬ್ರಾಹ್ಮಣೇತರರ ಪ್ರಾಬಲ್ಯವೇ ಹೆಗ್ಗಳಿಕೆಯಾಗಿರುವದೆಂದರು. ಸಾ ಶ್ರೀನಿವಾಸ ಶಾಸ್ತ್ರಿಗಳಿಗೆ ಖಾದಿಯನ್ನು ಧರಿಸಲು ಆಕ್ಷೇಪವಿರುವದಾಗಿಯೂ ಸರಕಾರಿ ಸಮಾರಂಭಗಳಿಗೆ ಹಾಕಿಕೊಂಡು ಬರಬೇಕೆಂದು ಸರಕಾರವು ವಿಧಿಸಿದ ಉಡುಪನ್ನು ಧರಿಸಲಿಕ್ಕೆ ನಮ್ಮದಾದ ಶಾಸ್ತ್ರಿಗಳ ಆಕ್ಷೇಪವಿರುವದಿಲ್ಲವಾಗಿಯೂ ಅಧ್ಯಕ್ಷರು ಹೇಳಿ, ನಾವು ದೇಶದ ಆಕ್ಷೇಪಗಳ, ನಿರ್ಧಾರವಿರುವದೆಂದೂ ತಿಳಿಸಿದರು. ಪರಿಷತ್ತಿನ ಅಧಿವೇಶನವು ಮಾರನೇ ದಿನ ಸೇರಿ ಮಂಜೂರಾದ ಠರಾವುಗಳು ಯಾವವೆಂದರೆ:—

ಕರ್ನಾಟಕ ವಿದ್ಯಮಾನ ರಾಷ್ಟ್ರೀಯ ಸಭೆಯ ಕಡೆಯಿಂದ ಕೌನ್ಸಿಲು ಪ್ರವೇಶ ಮಾಡುವ ಉಮೇದ್ವಾರರು ಖಾದಿಯನ್ನು ಧರಿಸಬೇಕು. ಕರ್ನಾಟಕ ಏಕೀಕರಣ, ಮದ್ಯಪಾನನಿರ್ಬಂಧ, ಖಾದಿ ಹಾಗು ಸ್ವದೇಶಿಗಳ ಪುರಸ್ಕಾರ, ಲಾವಣಿಯಲ್ಲಿ ಹಿಡಿದ ಅನ್ಯಾಯದ ಪರಿಹಾರ, ಜಂಗಲುಗಳಿಂದ ಕೃಷಿಕರ ರಕ್ಷಣ, ಮುದ್ರಾಂಕ ಧರ್ಮಾದಾಯ ಕಾಯಿದೆಯ ತಿದ್ದುವದು, ಅಥವಾ ರದ್ದಾಯಿತಿ ಹಾಗು ಅಸ್ಪೃಶ್ಯತಾನಿವಾರಣಗಳಿಗಾಗಿ ಪ್ರಯತ್ನ ಮಾಡಬೇಕೆನ್ನುವ ಠರಾವಿನಿಂದ ಖಾದಿಯನ್ನು ಪುರಸ್ಕರಿಸಿದ್ದಲ್ಲದೇ ಅರಿವೆಯ ಬಹಿಷ್ಕಾರದಿಂದಾಗಿಯೂ ಬಡಜನರ ದುಃಖ ನಿವಾರಣವಾಗುತ್ತದಾಗಿಯೂ ಪರಿಷತ್ತು ಅಭಿಪ್ರಾಯಪಟ್ಟಿತು. ಖಾದಿಯ ಹುಟ್ಟುವಳಿ ಹಾಗು ವ್ಯಾಪಾರಕ್ಕಾಗಿ ಕರ್ನಾಟಕಸ್ಥರೆಲ್ಲರೂ ಮುಂದೆ ಬರಬೇಕೆಂದು ಕೇಳಲಾಯಿತು. ಆಂಧ್ರ ವಿಶ್ವವಿದ್ಯಾಲಯ ಕಾಯಿದೆಯನ್ವಯ ಬಳ್ಳಾರಿ ಜಿಲ್ಲೆಯನ್ನು ಆಂಧ್ರ ವಿದ್ಯಾಪೀಠದ ಕಕ್ಷೆಯಲ್ಲಿ ಸೇರ್ಪಡಿಸಿದ್ದಕ್ಕೆ ನಿಷೇಧ ಪ್ರದರ್ಶನ ಮಾಡಲಾಯಿತು. ಕರ್ನಾಟಕ ಏಕೀಕರಣಕ್ಕಾಗಿ ಏಕೀಕರಣ ಪರಿಷತ್ತಿಗೆ ನೆರವಾಗಲು ರಾಷ್ಟ್ರೀಯ ಸಂಸ್ಥೆಗಳಿಗೆ ಆಜ್ಞಾಪಿಸಲಾಯಿತು. ಹೀಗೆಲ್ಲ ಠರಾವುಗಳಾಗಿ ಪರಿಷತ್ತು ವಿಸರ್ಜನ ಹೊಂದಿತು.

ಶನಿವಾರ, ರವಿವಾರಕ್ಕೆ ಕರ್ನಾಟಕ ಸಾಹಿತ್ಯ ಸಮ್ಮೇಲನ, ಕರ್ನಾಟಕ ವಿಶ್ವವಿದ್ಯಾಲಯ ಸಮ್ಮೇಲನ, ಮುಂತಾದವುಗಳು ನೆರವೇರುವದಿದ್ದವು. ಶ್ರೀಮತಿ ಕನಕನ ಲಕ್ಷ್ಮಮ್ಮ ಎಸ್. ಪಿ ರವರ ಅಧ್ಯಕ್ಷತೆಯು ಕೆಳಗೆ ಭಗಿನೀ ಮಂಡಳದ ಸಮ್ಮೇಲನವೂ ನೆರವೇರಿತು.

ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯ ಸಭೆ ಸೇರಿ, ಮುಂಬಯಿ ಪ್ರಾಂತಿಕ ಕೌನ್ಸಿಲಿಗೆ ಧಾರವಾಡ ಜಿಲ್ಲೆಯಿಂದ ಶ್ರೀನಿವಾಸರಾವ ಕೌಜಲಗಿ, ವಿಜಾಪುರ ಜಿಲ್ಲೆಯಿಂದ ಶ್ರೀ॥ ಶ್ರೀನಿವಾಸರಾವ ಕೌಜಲಗಿ ಹೀಗೆ ನೇಮಣೂಕಿಯಾಗಿದೆ. ವರಿಷ್ಠ ಕಾಯಿದೆ ಕೌನ್ಸಿಲಿಗೆ ಶ್ರೀ॥ ಪತ್ತೇಪಂತ ಬೆಳವಿಯವರನ್ನು ನೇಮಿಸಿರುವರು.

ಬಳ್ಳಾರಿಯಲ್ಲಿ ಖಾದಿಯ ಪ್ರದರ್ಶನವು ಸೇರಿಸಲಾಗಿದೆ. ತರತರದ ಖಾದಿಯನ್ನು ಪ್ರದರ್ಶನದಲ್ಲಿ ನೋಡಬಹುದು. ನಿತ್ಯ ಅಪರಾಹ್ನಕ್ಕೆ ರಾಟಿಯಿಂದ ನೂಲುವ ಚರ್ಚೆ ಇತ್ತು.

ವೃತ್ತಸಾರ.

— ಶ್ರೀ ವೆಂಕಟರಮಣ ಜೋಶಿಯವರು ಹುಬ್ಬಳ್ಳಿಯ ಶಾಲೆಯಲ್ಲಿ ನಾಲ್ಕಂಗಳವರೆಗೆ ಮಾಡಿದ ಶಿಕ್ಷಣವು ಬ್ರಾಹ್ಮಣ ಹುಡುಗಿಯರಿಗೆ ಅಪಾತ್ರವೆಂದು ಇನಸ್ಪೆಕ್ಟರ ಬಾಯಿಯವರು ಅಭಿಪ್ರಾಯಪಟ್ಟು ಅದನ್ನು ರದ್ದುಪಡಿಸಿರುವರು. ನಮ್ಮ ಸ್ತ್ರೀಯರ ನೀತಿಮತ್ತೆಯು ಬ್ರಾಹ್ಮಣ್ಯ ಅಬ್ರಾಹ್ಮಣ್ಯದ ಮೇಲೆ ಅವಲಂಬಿಸಿರುವದೇನು?

— ಧಾರವಾಡದ ಕರ್ನಾಟಕ ಕಾಲೇಜಿನ ಸಂಸ್ಕೃತ ಶಾಸ್ತ್ರಿಗಳಾದ ಶ್ರೀ॥ ರಂಗಾಚಾರ್ಯ ರಡ್ಡಿಯವರು ಒಂದು ವರ್ಷದಿಂದ ರಜೆಯ ಮೇಲಿದ್ದರು. ರಜೆಯನ್ನು ಹೆಚ್ಚಿಸಿ ಅಧಿಕಾರದಿಂದ ನಿವೃತ್ತರಾಗಿರುವರು. ಶ್ರೀ॥ ರಂಗಾಚಾರ್ಯರು ಪರಿಶ್ರಮದಿಂದ ಸಂಸ್ಕೃತವನ್ನು ಕಲಿಸುತ್ತಿದ್ದರು. ಕನ್ನಡಿಗ ವಿದ್ಯಾರ್ಥಿಗಳಿಗೆ ಗ್ರಹಿಕೆಯಾಗಲು ಬಹಳ ಕಷ್ಟವಾಗುತ್ತಿತ್ತು. ಈ ಕುರಿತು ಮುಖ್ಯಾಧ್ಯಾಪಕರ ವರೆಗೆ ದೂರಿಕೊಂಡರೂ ಪ್ರಯೋಜನವಾಗಲಿಲ್ಲ. ಹೊಸ ಇಸಮನ್ನು ನೇಮಿಸುವಾಗ ಕನ್ನಡ ಬಲ್ಲವರನ್ನೇ ಸರಕಾರವು ನೇಮಿಸಬೇಕು ಹೆಚ್ಚಾಗಿ. ಕರ್ನಾಟಕದಲ್ಲಿ ಸಂಸ್ಕೃತ ಪಂಡಿತರಿಗೇನು ಬರಗಾಲವಿಲ್ಲ.

— ಅಖಿಲ ಭಾರತೀಯ ಸಂಸ್ಕೃತ ಪರಿಷತ್ತಿನ ಅಧಿವೇಶನವು ಕಲಕತ್ತೆಯಲ್ಲಿ ಜುಲೈ ೧೫ನೇ ತಾರೀಖಿನಿಂದ ಜರಗುವದಿದೆ.

— ಗುತ್ತಿಯಲ್ಲಿ ಲಿಂಗಾಯತರಲ್ಲಿ ಔತಣ ಸಮಾರಂಭವಿತ್ತು. ಒಬ್ಬೊಂದೊಬ್ಬ ಬೋಯಿ ಹಾರಿ, ಒಬ್ಬ ಲಿಂಗಾಯತ ಕ್ಷತ್ರಿಯರು ಕೈವೈಕ್ಯರಾದರು. ಇವರ ಅರ್ಧ ಪಟ್ಟೆಗಳು ಬೆಂದಿಯಾಗಿದ್ದವು. ಅರ್ಧ ಪಟ್ಟೆಗಳ ಮೇಲೆ ೫೦೦ ಹಣವು! ಎಂಥ ಅನರ್ಥ!!

— ಸಿಂಧ ಪ್ರಾಂತದ ಹೈದರಾಬಾದದಲ್ಲಿ ಕ್ರಿಕೆಟ್ ಆಡುತ್ತಿರುವಾಗ ರಾ ರಾಮಚಂದ್ರ ನಾರಾಯಣ ಸ್ವಾಮಿಗಳೆಂಬ ಬಿ.ಏ. ರವರು ಹೃದಯವಿಕಾರದಿಂದ ಅಲ್ಲಿಂದೆಲ್ಲೇ ಮೃತಪಟ್ಟರು. ಆಟಕ್ಕೆ ಕಳೆ ಬರಿದಾಗಿ ಹೋದವು: ವಿಧಿಯ ಆಟವೇ ಬೇರೆ!

— ಜಾಲಿಸಲ್ಲಿ ನೀರು ಬಿಡುವವರಿಗೆ ೧೦೦ ರೂಪಾಯಿಗಳಿಂದ ೫೦೦ ರೂಪಾಯಿ ವರೆಗೆ ದಂಡ ವಿಧಿಸಲಾಗುವದೆಂದು ಮದ್ರಾಸ ಸರಕಾರದ ತೀರ್ಮಾನವಾಗಿರುವದು. ನೀರಿನಲ್ಲಿ ಹಾಲು ಬೆರಸಿದರೆ?

— ಯಾವದೊಂದು ವಿಶಿಷ್ಟ ಜಾತಿಯ ಅಭಿವೃದ್ಧಿಗಾಗಿ ಏರ್ಪಡಿಸಿದ ಸಭೆಗಳಿಗೆ ಸರಕಾರಿ ನೌಕರರು ಅಧ್ಯಕ್ಷರಾಗಲೀ, ಕಾರ್ಯಕಾರಿ ಸಭಾಸದರಾಗಲೀ ಆಗಬಾರದೆಂದು ಮುಂಬಯಿ ಸರಕಾರವು ವಿಧಿಸಿರುವದು.

— ಪುಣೆಯಲ್ಲಿ ಸೇರಲಿಕ್ಕಿದ್ದ ಬೇಸಾಯ ಪ್ರದರ್ಶನಕ್ಕೆ ಮೈಸೂರ ಸರಕಾರವು ೧೮೫ ಕಬ್ಬಿನ ನಮೂನೆಗಳನ್ನು ಕಳಿಸಿರುವದು.

— ಆಯುರ್ವೇದ ಔಷಧಗಳ ಶಾಸ್ತ್ರೀಯ ಸಂಶೋಧನ ಮಾಡುವದಕ್ಕಾಗಿ ಮುಂಬಯಿಯಲ್ಲಿ ಆಯುರ್ವೇದ ಮಂಡಳವು ಸ್ಥಾಪನೆ ಹೊಂದಿದೆ. ಆಯುರ್ವೇದಾಭಿಮಾನಿಗಳು ನೆರವಾಗಬೇಕೆಂದು ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ॥ ಡಿ. ವ್ಹಿ. ಸಾಂಡೂರಕರವರು ಬೇಡಿಕೊಳ್ಳುತ್ತಾರೆ.

— ಸಾತಾರಾ ಜಿಲ್ಲಾ ಬೋರ್ಡಿನ ಶಿಕ್ಷಣ ಕಾರಭಾರಿಗಳಾದ ರಾವಸಾಹೇಬ ಜಾಧವರವರು ಜಿಲ್ಲೆಯೊಳಗಿನ ಶಿಕ್ಷಕರಿಗೆಲ್ಲ ಸಾಷ್ಟಾಂಗ ನಮಸ್ಕಾರದ ಪ್ರಭಾವವನ್ನು ತಿಳಿಸಿ, ಶಾಲೆಯ ಅಭ್ಯಾಸಕ್ರಮದಲ್ಲಿ ಸಾಷ್ಟಾಂಗ ನಮಸ್ಕಾರದ ಯೋಜನೆ ಮಾಡಬೇಕಾಗಿ ತಿಳಿಸಿದವರು. ಇಂಥ ಸಂಸ್ಥಾನದಲ್ಲೆಲ್ಲ ಸಾಷ್ಟಾಂಗ ನಮಸ್ಕಾರವು ಪ್ರಸಾರ ಹೊಂದಿರುವದು.

— ಶ್ರೀ ಬಸವನ ಜಯಂತಿಯ ಉತ್ಸವವನ್ನು ವೀರಶೈವರು ಹುಬ್ಬಳ್ಳಿ, ಧಾರವಾಡ, ಶೋಲಾಪುರ, ಯರಗಟ್ಟಿ, ಕರಜಗಿ, ಬೆಳಗಾಂವ, ಚಿಕ್ಕೋಡಿ, ಬಾಗೇವಾಡಿ, ಹೊಂಬಳ, ಕೊಪ್ಪ, ದಾವಣಗೆರೆ ಮುಂತಾದ ಕಡೆಗಳಲ್ಲಿ ಸಂಭ್ರಮದಿಂದ ಜರುಗಿಸಲ್ಪಟ್ಟವು.

— ಮೈಸೂರಲ್ಲಿ ಮ್ಯುನಿಸಿಪಾಲಿಟಿಯು ವಿದ್ಯಮಾನ ಬಡವರಿಗಾಗಿ ಮನೆ ಕಟ್ಟಿಸುವ ನಿರ್ಧಾರ ಮಾಡಿದ್ದಾರೆ. ಈ ಕುರಿತು ಮ್ಯುನಿಸಿಪಾಲಿಟಿಗೆ ೨೫೦೦೦ ರೂಪಾಯಿಗಳನ್ನು ಮಹಾರಾಜರವರು ಕೊಟ್ಟಿರುವರು. ೫೦೦ ರೂಪಾಯಿಗೊಂದು ಮನೆಯಂತೆ ಏರ್ಪಾಟವಾಗುವದಿದೆ.

— ಇಟಾಲಿ ಸರಕಾರದ ನಿಮಂತ್ರಣ ಮೇರೆಗೆ ಕವಿ ಶ್ರೇಷ್ಠ ರವೀಂದ್ರನಾಥ ಠಾಕೂರರವರು ಇಟಾಲಿಗೆ ಹೊರಟರು.

— ಢಾಕೆಯಿಂದ ಬಂಗಳೂರಿಗೆ ಹೋಗುತ್ತಿದ್ದ ಪ್ರವಾಸಿಕರ ಗಾಡಿಗಳು, ಕಳೆದುಕೊಂಡು ಹೋಗುತ್ತಿದ್ದ ಉಗಿಬಂಡಿಗೂ ಅಪಘಾತವಾಗಿ ಇಬ್ಬರು ಮಡಿದರು; ಕೆಲವರಿಗೆ ಘಾಯಗಳಾಗಿವೆ.

— ಶ್ರೀ॥ ವಾಮನರಾವ ಪಾಟೀಲ ಇವರ ವಿಧವೆಯಾದ ಬಾಯಿ ಜೀರಾಬಾಯಿ ಇವರು ಕಾಲವಾದರು. ಇವರು ೩॥ ಲಕ್ಷ ರೂಪಾಯಿಗಳನ್ನು ಧರ್ಮಕಾರ್ಯಗಳಿಗಾಗಿ ವಿನಿಯೋಗಿಸಿರುವರು.

— ಪಂಚಮಹಾಲ ಜಿಲ್ಲೆಯ ಲೋಕಲ್ಬೋರ್ಡಿನ ಶಿಕ್ಷಣ ಮಂಡಳದ ಅಧ್ಯಕ್ಷರಾದ ಶ್ರೀ॥ ಮುಕಾದಮರವರು ತಮ್ಮ ಶಾಲೆಗಳಲ್ಲಿ ಸುಧಾರಣೆಗಳನ್ನು ಉಪಕ್ರಮಿಸಿರುವರು: ಪ್ರಾಥಮಿಕ ಶಾಲೆಗಳಲ್ಲಿ ಭಾರತ ಮಾತೆಯ ಭಾವಚಿತ್ರವನ್ನಿಡಬೇಕು: ನೂಲಲಿಕ್ಕಬೇಕು; ನೇಯಲಿಕ್ಕಬೇಕು; ಕೃಷಿಕ ಪುಸ್ತಕಗಳನ್ನು ಓದಿಸಬೇಕು; ದೊಡ್ಡ ಗ್ರಾಮಶಾಲೆಗಳಲ್ಲಿ ಇಂಗ್ಲಿಷ ವರ್ಗಗಳನ್ನು ಜೋಡಿಸಬೇಕು; ಶಾರೀರಿಕ ಶಿಕ್ಷಣ ಕೊಡಬೇಕು; ಇತ್ಯಾದಿ ಸುಧಾರಣೆಗಳನ್ನು ಕೈಕೊಳ್ಳಲಾರಂಭಿಸಿರುವರು. ನಮ್ಮಲ್ಲಿಯ ಲೋಕಲ್ಬೋರ್ಡುಗಳು ಎಚ್ಚರಾಗಲಿ.

— ಬೇಜವಾಡಾ ಮ್ಯುನಿಸಿಪಾಲಿಟಿಯವರು ಆಂಧ್ರ ವಿಶ್ವವಿದ್ಯಾಪೀಠಕ್ಕಾಗಿ ೧೦೦ ಎಕ್ರೆ ಸ್ಥಳವನ್ನು ಉಚಿತವಾಗಿ ಕೊಡಲಿಕ್ಕಿರುವರು.

— ಮುಸಾಫರ ಅನುಜ್ಞೆಯಂತೆ, ಶ್ರೀ॥ ರಾಮ ರೈವಾದಾಸ ಬಿರ್ಲಾರವರು ಅಸ್ಪೃಶ್ಯರಿಗಾಗಿ ಅಮರಾವತಿಯಲ್ಲಿ ದೇವಾಲಯ ಕಟ್ಟಲು ೨೫೦೦೦ ರೂಪಾಯಿಗಳನ್ನರ್ಪಿಸಿರುವರು. ಧನ್ಯ!

ಮಹಾತ್ಮರ ಆತ್ಮಚರಿತ್ರ

(೨೪) ನನ್ನ ಗೊಂದಲ.

ಬ್ಯಾರಿಸ್ಟರ ಪಟ್ಟವನ್ನು ಪಡೆಯುವದು ಸುಲಭವಿತ್ತು; ಆದರೆ, ಬ್ಯಾರಿಸ್ಟರಿಯನ್ನು ನಡಿಸುವದು ಕಠಿಣವಿತ್ತು. ನಾನು ಕಾಯಿದೆಗಳನ್ನು ಕಲಿತಿದ್ದೆ. ಆದರೆ, ಅವನ್ನು ಆಚಾರದಲ್ಲಿ ತರಲು ನಾನು ಕಲಿತಿದ್ದಿಲ್ಲ. 'ಲೀಗಲ್ ಮ್ಯಾಕ್ಸಿಮ್ಸ್' ಎಂಬ ಕಾಯಿದೆಯ ಗಾದೆ ಮಾತುಗಳನ್ನು ನಾನು ಆಸಕ್ತಿಯಿಂದ ಓದಿದ್ದೆ; ಆದರೆ, ಅವನ್ನು ಪ್ರಯೋಗಿಸಲು ನನಗೆ ತಿಳಿಯುತ್ತಿದ್ದಿಲ್ಲ. "ಪರರ ಸೊತ್ತಿಗೆ ನಷ್ಟ ತರದಂತೆ ನಿನ್ನ ಸೊತ್ತಿನ ಉಪಯೋಗ ಮಾಡು," ಎಂಬುವೊಂದು ಗಾದೆಯಿತ್ತು. ಇದನ್ನು ಪಕ್ಷಗಾರರ ಪ್ರಕರಣಗಳಿಗೆ ಹೇಗೆ ಹಚ್ಚಬೇಕೆಂಬುದು ನನ್ನಿಂದ ಗ್ರಹಿಸಲಾಗಲಿಲ್ಲ. ಈ ಸೂತ್ರದ ಮೇಲಿನ ಪರತರದ ತೀರ್ಪುಗಳನ್ನು ನಾನು ಓದಿಕೊಂಡಿದ್ದೆ. ಆದರೆ ಅವುಗಳಿಂದ ಮುಂದಿನ ಪ್ರಯೋಗದ ಕುರಿತು ನನಗೇನೂ ಬೋಧವಾಗಲಿಲ್ಲ.

ಇದಲ್ಲದೆ, ಹಿಂದೀ ಕಾಯಿದೆಯನ್ನೇನೂ ನಾನು ಕಲಿತಿದ್ದಿಲ್ಲ. ನನಗೆ ಹಿಂದೂ ಕಾಯಿದೆ, ಮುಸಲ್ಮಾನ ಕಾಯಿದೆಗಳ ಕಲ್ಪನೆ ಇದ್ದಿಲ್ಲ. ದಾವೆಯ ಒಕ್ಕಣೆಯು ನನಗೆ ಬರೆಯಬರುತ್ತಿದ್ದಿಲ್ಲ. ನಾನು ಸಂಪೂರ್ಣವಾಗಿ ದಿಗಿಲುಬಿದ್ದೆ. ಸರ್ ಫಿರೋಜಶಾ ಮೇಹ್ತಾರವರು ಕೋರ್ಟುಗಳಲ್ಲಿ ಸಿಂಹಗರ್ಜನೆ ಮಾಡುತ್ತಿದ್ದರೆಂದು ನಾನು ಕೇಳಿದ್ದೆ. ಇಂಗ್ಲಂಡದಲ್ಲಿ ಆ ವಿದ್ಯೆಯನ್ನು ಅವರು ಕಲಿತ ಬಗೆ ಹೇಗೆ? ಅವರಷ್ಟು ಕಾಯಿದೆಯ ಸೂಕ್ಷ್ಮ ಜ್ಞಾನವನ್ನು ಸಂಪಾದಿಸುವ ಪ್ರಶ್ನೆಯಂತೂ ದೂರವೇ ಉಳಿಯಿತು. ಆದರೆ ಈ ಉದ್ಯೋಗದಿಂದ ಹೊಟ್ಟೆತುಂಬಿಕೊಳ್ಳುವಷ್ಟು ಪ್ರಾಪ್ತಿಯನ್ನಾದರೂ ಮಾಡಿಕೊಳ್ಳುವದು ಕಠಿಣವೆಂದು ನನಗನಿಸಿತು.

ಕಾಯಿದೆಯ ಅಭ್ಯಾಸ ಮಾಡುವಾಗ ಈ ಚಿಂತೆಯಿಂದ ನಾನು ಪೀಡಿತನಾದೆ. ಕೆಲ ಗೆಳೆಯರಿಗೆ ನನ್ನ ಸಂಕಟವನ್ನು ಹೇಳಿಕೊಂಡೆ. ದಾದಾಭಾಯಿ ನವರೋಜಿಯವರ ಉಪದೇಶವನ್ನು ನಾನು ಪಡಕೊಳ್ಳಬೇಕೆಂದು ಒಬ್ಬರು ಸೂಚಿಸಿದರು. ಇಂಗ್ಲಂಡಕ್ಕೆ ಹೋಗುವಾಗ ದಾದಾಭಾಯಿಯವರಿಗೆ ನಾನೊಂದು ಪತ್ರವನ್ನು ಒಯ್ದಿದ್ದೆನೆಂದು ಈ ಮೊದಲೇ ಹೇಳಿರುವೆನು. ಬಹಳ ದಿನಗಳ ತರುವಾಯ, ನಾನು ಆ ಪತ್ರದ ಉಪಯೋಗ ಮಾಡಿದೆನು. ಇಂಥ ಮಹಾನುಭಾವರನ್ನು ಕಂಡು ಸಂಭಾಷಣ ಮಾಡುವ ಅಧಿಕಾರವು ನನಗಿಲ್ಲವೆಂದು ನನ್ನ ವಿಚಾರವಾಯಿತು. ಅವರು ಭಾಷಣ ಮಾಡುವವರಿದ್ದಾರೆಂದು ತಿಳಿದ ಕೂಡಲೆ, ನಾನು ಸಭಾಮಂಟಪಕ್ಕೆ ಹೋಗಿ ಒಂದು ಮೂಲೆಯಲ್ಲಿ ಕುಳಿತುಕೊಂಡು ಭಾಷಣವನ್ನು ಕೇಳಿ, ಆ ಮಹಾನುಭಾವರನ್ನು ಕಣ್ತುಂಬ ನೋಡಿಕೊಂಡು ಮರಳುತ್ತಿದ್ದೆ. ವಿದ್ಯಾರ್ಥಿಗಳ ಹಿತಕ್ಕಾಗಿ ಅವರೊಂದು ಸಂಘವನ್ನು ಸ್ಥಾಪಿಸಿದ್ದರು. ನಾನು ಆ ಸಂಘದ ಸಭೆಗಳಿಗೆ ಹೋಗುತ್ತಿದ್ದೆ. ವಿದ್ಯಾರ್ಥಿಗಳಿಗಾಗಿ ದಾದಾಭಾಯಿಯವರು ಪ್ರದರ್ಶಿಸುವ ಹಿತಕಾಂಕ್ಷೆಯನ್ನು ನೋಡಿ ನಾನು ಆನಂದಪಡುತ್ತಿದ್ದೆ. ವಿದ್ಯಾರ್ಥಿಗಳು ಅವರನ್ನು ಪೂಜ್ಯಭಾವದಿಂದ ನಡಿಸಿಕೊಳ್ಳುವದನ್ನು ನೋಡಿ ನನಗೆ ಆನಂದವಾಗುತ್ತಿತ್ತು. ಕೆಲವು ಕಾಲ ಕಳೆದ ಮೇಲೆ, ನಾನು ಒಮ್ಮೆ ಪತ್ರವನ್ನು ಅವರಿಗೆ ಕೊಟ್ಟೆ. 'ನೀನು ಬೇಕಾದಾಗ ಬಂದು ನನ್ನಿಂದ ಸಲಹೆ ಪಡಕೊಳ್ಳಬಹುದು,' ಎಂದು ಅವರು ಹೇಳಿದರು. ಆದರೆ, ನಾನು ಇದರ ಪ್ರಯೋಜನವನ್ನೇನು ಎಂದೂ ಪಡಕೊಳ್ಳಲಿಲ್ಲ. ಅತ್ಯಂತ ಅವಶ್ಯಕತೆಯಿದ್ದ ಹೊರತು, ಅವರಿಗೆ ಉಪದ್ರವ ಕೊಡಬಾರದೆಂದು ನನ್ನ ವಿಚಾರ. ಆದರಿಂದ ದಾದಾಭಾಯಿಯವರಿಗೆ ನನ್ನ ಕಷ್ಟಗಳನ್ನರುಹಬೇಕೆಂದು ಗೆಳೆಯನೊಬ್ಬನು ಹೇಳಿದ ಮಾತನ್ನು ಅಂಗೀಕರಿಸಲಿಕ್ಕೆ ನನ್ನಿಂದಾಗಲಿಲ್ಲ. ಮಿ| ಫ್ರೆಡ್ರಿಕ್ ಪಿಂಕಟರವರ ಭೆಟ್ಟಿಯಾಗಲು ನನಗೆ ಸೂಚಿಸಿದವರು ಅವರೇ; ಈ ಬೇರೆಯವರಿಂದ ನಾನು ಹೇಳಲಾರೆ. ಮಿ| ಫ್ರೆಡ್ರಿಕ್ ಪಿಂಕಟರವರು ಕನ್ಸರ್ವೇಟಿವ್ ಪಕ್ಷದವರು. ಆದರೆ, ಭಾರತೀಯ ವಿದ್ಯಾರ್ಥಿಗಳಿಗೆ ನಿಃಸ್ವಾರ್ಥಬುದ್ಧಿಯಿಂದಲೂ, ನಿರ್ಮಲ ಚಿತ್ತದಿಂದಲೂ ಅವರು ಪ್ರೀತಿಸುತ್ತಿದ್ದರು. ಅನೇಕ ವಿದ್ಯಾರ್ಥಿಗಳು ಅವರೊಡನೆ ಆಲೋಚನೆ ಮಾಡುತ್ತಿದ್ದರು. ನಾನೂ ಒಂದು ದಿನ ಅವರೊಡನೆ ಮಾತಾಡಬಯಸಿದೆನು. ನನ್ನ ವಿನ್ನಪವನ್ನು ಅವರು ಮನ್ನಿಸಿದರು. ಆ ಸಂಭಾಷಣವನ್ನು ನಾನೆಂದೂ ಮರೆಯಲಾರೆ. ಗೆಳೆಯನೋಪಾದಿಯಲ್ಲಿ ಅವರು ನನ್ನ ಸತ್ಕಾರ ಮಾಡಿದರು. ನನ್ನ ನಿರಾಶೆಯನ್ನು ನೋಡಿ ಅವರು ನಕ್ಕರು. ಅವರು ಹೇಳಿದ್ದೇನೆಂದರೆ:— "ಪ್ರತಿಯೊಬ್ಬರು ಫಿರೋಜಶಾ ಮೇಹ್ತಾರವರಂತಾಗಬೇಕೆಂದು ನೀನು ಆಲೋಚಿಸುವೆಯೇನು? ಫಿರೋಜಶಾರವರೂ, ಬದ್ರುದ್ದೀನರವರೂ ದುರ್ಲಭ ಪುರುಷರಿರುವರು. ಸಾಮಾನ್ಯ ವಕೀಲರಾಗಲು ಅಸಾಮಾನ್ಯ ಚಾತುರ್ಯ ಬೇಕಾಗಿಲ್ಲವೆಂದು ಗ್ರಹಿಸಬೇಡಿ. ಸಾಮಾನ್ಯ ಪ್ರಾಮಾಣಿಕತನದಿಂದಲೂ, ಉದ್ಯೋಗದಿಂದಲೂ ನೀವು ಸಂಸಾರ ಮಾಡಬಹುದು. ಎಲ್ಲಾ ಪ್ರಕರಣಗಳು ಸಂಕೀರ್ಣವಾಗಿರುವದಿಲ್ಲ. ಒಳ್ಳೇದು, ಕಾಯಿದೆಯ ಪುಸ್ತಕಗಳ ಹೊರತು, ಸಾಮಾನ್ಯ ವಾಚನವೆಷ್ಟು ಮಾಡಿದ್ದಾಗಿದೆ?" ಎಂದು ಮಿ| ಪಿಂಕಟರವರು ಕೇಳಿದರು.

ನನ್ನ ವಾಚನದ ಸಂಕುಚಿತ ವ್ಯಾಪ್ತಿಯನ್ನು ಅವರಿಗೆ ತಿಳಿಸಿದ ಬಳಿಕ, ಅವರಿಗೆ ನಿರಾಶೆಯಾದಂತೆ ತೋರಿತು. ಕ್ಷಣಮಾತ್ರದಲ್ಲಿಯೇ ಅವರು ಮುಗುಳು ನಗೆ ನಗುತ್ತ ನುಡಿದದ್ದೇನೆಂದರೆ – "ನಿಮ್ಮ ಕಷ್ಟವೇನೆಂದು ನನಗೆ ತಿಳಿಯಿತು. ನಿಮ್ಮ ಸಾಮಾನ್ಯ ವಾಚನವು ತೀರ ಕಡಿಮೆ. ಪ್ರಪಂಚದ ಜ್ಞಾನವು ನಿಮಗಿರುವದಿಲ್ಲ. ವಕೀಲರಿಗೆ ಬೇಕಾದದ್ದೇ ಅದು. ಹಿಂದುಸ್ಥಾನದ ಇತಿಹಾಸವನ್ನು ಕೂಡ ನೀವು ಓದಿರುವದಿಲ್ಲ. ವಕೀಲರು ಮನುಷ್ಯಸ್ವಭಾವವನ್ನು ಅರಿತಿರಬೇಕು. ಮೋರೆಯ ಮೇಲಿಂದ ಮನುಷ್ಯಸ್ವಭಾವವನ್ನು ತಿಳಕೊಳ್ಳಲು ಅವರು ಸಮರ್ಥರಿರಬೇಕು. ಪ್ರತಿಯೊಬ್ಬ ಭಾರತೀಯನಿಗೆ ಭಾರತ ಖಂಡದ ಇತಿಹಾಸವು ಗೊತ್ತಿರಬೇಕು. ವಕೀಲಿಯ ಉದ್ಯೋಗಕ್ಕೂ, ಇದಕ್ಕೂ ಏನೂ ಸಂಬಂಧವಿರುವದಿಲ್ಲ. ಆದರೂ, ಈ ಜ್ಞಾನವನ್ನಷ್ಟು ಸಂಗ್ರಹಿಸುವದುತ್ತಮ. ೧೮೫೭ನೇ ಇಸ್ವಿಯ ದಂಗೆಯ ಇತಿಹಾಸದ ಕುರಿತು ಕೇ ಹಾಗು ಮೆಲಿಸನ್‌ರವರು ಬರೆದ ಗ್ರಂಥವನ್ನು ಕೂಡ ನೀವು ಓದಲಿಲ್ಲವಂತೆ ತೋರುತ್ತದೆ. ಅದನ್ನು ಕೂಡಲೆ ಓದಿರಿ. ಮನುಷ್ಯಸ್ವಭಾವವನ್ನು ಅರಿತುಕೊಳ್ಳಲು ಇನ್ನೆರಡು ಪುಸ್ತಕಗಳನ್ನು ಓದಿರಿ." ಇವು ಮುಖಮುದ್ರೆಯ ಲಕ್ಷಣಗಳ ಕುರಿತು ಲವೇಟರ ಹಾಗು ಶೆಮೆಲ್ ಪೆನಿಕ್‌ರವರು ಬರೆದ ಎರಡು ಪುಸ್ತಕಗಳು.

ಆ ಮಾನ್ಯ ಗೆಳೆಯರಿಗೆ ನಾನು ಬಹಳ ಕೃತಜ್ಞನಾದೆ. ಅವರ ಬಳಿಯಲ್ಲಿದ್ದಾಗ ನನ್ನ ಭೀತಿಯು ಹಾರಿಹೋದಂತೆ ತೋರಿತು, ಹೊರಬಿದ್ದ ನಂತರದಲ್ಲಿ ಪುನಃ ಹಿಂಬಾಲಿಸಹತ್ತಿದೆ. ಮನೆಗೆ ಹೋಗುವಾಗ ಆ ಎರಡು ಪುಸ್ತಕಗಳ ವಿಚಾರ ಮಾಡುತ್ತಿದ್ದೆ. "ಮೋರೆ ನೋಡಿ ಮನುಷ್ಯನ ಪರೀಕ್ಷೆ ಮಾಡಬೇಕು," ಎಂಬುದೊಂದೇ ಪ್ರಶ್ನೆಯು ನನಗೆ ಆಗಿಂದಾಗ ಉಪದ್ರವ ಕೊಡಹತ್ತಿತು. ಮಾರನೇ ದಿವಸವೇ ನಾನು ಲವೇಟರ ಪುಸ್ತಕವನ್ನು ಕೊಂಡುಕೊಂಡೆ. ಶೆಮೆಲ್ ಪೆನಿಕ್‌ರವರ ಪುಸ್ತಕವು ಅಂಗಡಿಯಲ್ಲಿ ಸಿಗಲಿಲ್ಲ. ಲವೇಟರರ ಪುಸ್ತಕವನ್ನು ನಾನು ಓದಿದೆನು. ಈ ಪುಸ್ತಕವು ಸ್ನೆಲ್‌ರವರ "ಎಥಿಕ್ಸ" ಗಿಂತ ಕಠಿಣವಿತ್ತು. ಅದರಲ್ಲಿ ಚಿತ್ತಾಕರ್ಷಕತ್ವವೂ ಇಲ್ಲ. ಈ ಪುಸ್ತಕದೊಳಗಿನ ಶೇಕ್ಸ್‌ಪಿಯರರವರ ಮುಖಚರ್ಯೆಯ ವರ್ಣನೆಯನ್ನು ಅಭ್ಯಾಸ ಮಾಡಿದೆ. ಆದರೆ, ಅದರ ಮೇಲಿಂದ ಲಂಡನದೊಳಗಿನ ಬೀದಿಗಳಲ್ಲಿ ಅಚೆ ಈಚೆ ಅಡ್ಡಾಡುವ ಕವಿಗಳ ಗುರುತು ಹಚ್ಚುವ ಜ್ಞಾನವು ನನಗೆ ದೊರಕಲಿಲ್ಲ.

ಲವೇಟರರವರ ಪುಸ್ತಕದಿಂದ ಜ್ಞಾನಸಂಗ್ರಹವೇನು ಬೆಳೆಯಲಿಲ್ಲ. ಮಿ| ಪಿಂಕಟರವರ ಉಪದೇಶದಿಂದ ಪ್ರತ್ಯಕ್ಷ ಸಹಾಯವೇನೂ ಆಗದಿದ್ದರೂ, ಅವರ ಸ್ನೇಹಭಾವದಿಂದ ನನಗೆ ಬಹಳ ಲಾಭವಾಯಿತು. ಅವರ ನಗುಮೋರೆಯು ಯಾವಾಗಲೂ ನನ್ನ ಸ್ಮರಣಶಕ್ತಿಯಲ್ಲುಳಿಯಿತು. ಫಿರೋಜಶಾ ಮೇಹ್ತಾರವರ ಸೂಕ್ಷ್ಮಬುದ್ಧಿಯಾಗಲಿ, ಸ್ಮರಣಶಕ್ತಿಯಾಗಲಿ, ಚಾತುರ್ಯವಾಗಲಿ ವಕೀಲಿಯ ಉದ್ಯೋಗಕ್ಕೆ ಮೂಲಪೀಠಿಕೆಯಾಗಿರುವದಿಲ್ಲೆಂಬ ಅವರ ಮಾತು ಶಾಶ್ವತವಾಗಿ ಉಳಿಯಿತು. ಪ್ರಾಮಾಣಿಕತನವು, ಉದ್ಯೋಗಬುದ್ಧಿಯೂ ವಕೀಲಿಯ ಉದ್ಯೋಗಕ್ಕೆ ಸಾಕೆಂಬ ಮಾತಿನಿಂದ ನನಗೆ ಸ್ವಲ್ಪ ಧೈರ್ಯವುಂಟಾಯಿತು. ಇವೆರಡೂ ನನ್ನಲ್ಲಿದ್ದದರಿಂದ ನಿರಾಶೆಯಾಗುವ ಕಾರಣವಿಲ್ಲೆಂದು ನನಗನಿಸಿತು.

ಕೇ ಹಾಗು ಮೆಲಿಸನ್‌ರವರ ಪುಸ್ತಕಗಳನ್ನು ಇಂಗ್ಲಂಡದಲ್ಲಿ ನನ್ನಿಂದ ಓದಲಾಗಲಿಲ್ಲ. ಅವನ್ನು ಪ್ರಸಂಗ ಬಿದ್ದಾಗ ತಪ್ಪದೆ ಓದಬೇಕೆಂದು ನಾನು ನಿಶ್ಚಯ ಮಾಡಿದ್ದೆ. ದಕ್ಷಿಣ ಆಫ್ರಿಕೆಯಲ್ಲಿ ಅವನ್ನು ಓದಿದೆನು.

ಹೀಗೆ ನಿರಾಶೆಯಲ್ಲಿ ಆಶೆಗೊಳ್ಳುತ್ತ ನಾನು 'ಆಸಾಮ್' ಬೋಟ ಹತ್ತಿ ಮುಂಬಯಿಗೆ ಬಂದಿಳಿದೆನು. ಬಂದರು ಸಮೀಪ ಕಡಲು ಪ್ರಕ್ಷುಬ್ಧವಾಗಿದ್ದರಿಂದ ಲಾಂಚಿನಲ್ಲಿ ಇಳಿದು ದಂಡೆಗೆ ಬಂದು ಮುಟ್ಟಿದೆನು.

Wanted

by the Sirsi Municipality an experienced Graduate to teach English and Sanskrit in the Sirsi Marikamba High School Sirsi. Those who have passed B. T. or S. T. C. will be preferred. The Selected Candidate will be taken as Second Assistant on Rs 70 - P. M. with future prospects. Suitable candidates need apply within the 1st of June 1926.

Municipal Office, Sirsi, 18th May 1926

P. N. Pandit,
Chairman,
School Board, Sirsi

"ಸರಸ್ವತೀ"

ಇದು ಕರ್ನಾಟಕದಲ್ಲಿ ಸ್ತ್ರೀಯರಿಂದ ಸ್ತ್ರೀಯರಿಗಾಗಿ ಪ್ರಕಟಿಸಲ್ಪಡುವ ಉತ್ಕೃಷ್ಟವಾದ ತಿಂಗಳ ಮಾಸಪತ್ರಿಕೆ ಇದೊಂದೇ.

ಈ ಪತ್ರಿಕೆಯ ವರ್ಷಾರಂಭವು ಮೇ ತಿಂಗಳಿನಿಂದ. ಓದತಕ್ಕ ವಿಷಯಗಳು ಮಾತ್ರ 40 ಪುಟಗಳಿವೆ. ಇದರಲ್ಲಿ ಸಾಮಾಜಿಕ, ನೈತಿಕ, ಐತಿಹಾಸಿಕ ವಿಷಯಗಳಿಗೆ ಸಂಬಂಧಪಟ್ಟ ಲೇಖನಗಳೂ, "ಸುಖಲತಾ" ಎಂಬ ಕಾದಂಬರಿಯೂ, 'ಶಹಾಜಹಾನ' ಎನ್ನುವ ನಾಟಕವೂ, ಸಾಹಿತ್ಯಸರೋಜ-ಕನ್ಯಾಕೈಪಿಡಿ-ಮುತ್ತಿನ ಸರ-ಚಾರಿತ್ರಾವಳಿ-ಗೃಹವಿಜ್ಞಾನ-ವನಿತಾವಿನೋದ ಮೊದಲಾದ ಲೇಖನಗಳೂ, ಬಾಲಕ-ಬಾಲಿಕೆಯರಿಗೂ, ಸ್ತ್ರೀಯರಿಗೂ ತಿಳಿಯುವಂತಹ ಸುಲಭವಾದ ಶೈಲಿಯಲ್ಲಿ ಪ್ರಕಟಿಸಲ್ಪಡುವವು. ಚಂದಾದಾರರಿಗೆ "ಶಾರದಾ ಗ್ರಂಥಮಾಲೆ"ಯಲ್ಲಿ ಇದುವರೆಗೆ ಪ್ರಕಟವಾಗಿರುವ 'ಇಂದಿರೆ-ನಿರ್ಮಲೆ-ಸ್ನೇಹಲತೆ-ಪ್ರಿಯಂವದೆ-ಹಿಂದು ಭಾಗ್ಯೋದಯ-ರಣಕೇಸರಿ' ಮೊದಲಾದ ಗ್ರಂಥಗಳೂ ಮುಂದೆ ಪ್ರಕಟವಾಗುವ ಗ್ರಂಥಗಳೂ ಕಡಿಮೆ ಬೆಲೆಗೆ ಕೊಡಲ್ಪಡುವವು. ಕರ್ನಾಟಕದಲ್ಲೆಲ್ಲ ಪ್ರಚಾರವಾಗುತ್ತಿರುವದರಿಂದ ಪ್ರಕಟಣೆಗೆ ಅತ್ಯುತ್ತಮವಾದ ಪತ್ರಿಕೆ. ವಾರ್ಷಿಕ ಚಂದಾ ರೂ 8-0-0 ಮಾತ್ರ. ವಿದ್ಯಾರ್ಥಿಗಳಿಗೂ, ವಾಚನ ಶಾಲೆಗಳಿಗೂ ರೂ 2-0-0 ಮಾತ್ರ.

ವಿಳಾಸ:— "ಸರಸ್ವತೀ" ಕಾರ್ಯಾಲಯ,
ಚಾಮರಾಜಪೇಟೆ, ಬೆಂಗಳೂರು ಸಿ

ಬೆಸ್ಟ ಅಲಾರಂ ಟೈಂಪೀಸು.



ಈ ಗಡಿಯಾರುಗಳು ಜರ್ಮನ್ ದೇಶದಲ್ಲಿ ತಯಾರಿಸಿದ್ದು ಮೇಲುಗಡೆ ಎಂದೂ ಕೆಟ್ಟುಹೋಗದಂಥ ನಿಕ್ಕಲ್ ಪಾಲಿಷಿನವುಗಳಿರುವವು. ಇದಕ್ಕೆ ಒಂದಾವರ್ತಿ ಬೀಗ ಕೊಟ್ಟರೆ, ೩೦ ಗಂಟೆಯ ಕಾಲ ನಡೆಯುವವು ಮತ್ತು ಖರಾರು ಗಂಟೆಯನ್ನು ತೋರಿಸುವವು. ಗಡಿಯಾರದ ಎತ್ತರ ೭ ಅಂಗುಲ ವಿರುವದ ಗಂಟೆ ತೋರಿಸ ಮುಳ್ಳು ೪ ಅಂಗುಲವಿರುವವು. ಇವರಲ್ಲಿ ಯಾರೇ ಗಳಿ, ಏಳಬೇಕೆನ ಗಂಟೆಯನ್ನು ಗುರುತು ಹಿಡಿಯುವ. ಇದು ಅಂಗಡಿ, ಸಾಲಿ, ಮನೆ, ರೀಡಿಂಗ ರೂಂ, ಗುಡಿ ಮುಂತಾದವುಗಳಲ್ಲಿ ಇಡಲು ಬಹು ಉಪಯೋಗವು. ಇವಕ್ಕೆ ಖಾತ್ರಿಯಾದ ೫ ವರ್ಷದ ಗ್ಯಾರಂಟಿ ಇರುವದು. ಕ್ರಯ ಒಂದಕ್ಕೆ ರೂ. ೫-೪-೦ ಅಲಾರಂ ಇಲ್ಲದ್ದು ಒಂದಕ್ಕೆ ರೂ. ४-४-೦.

ಪರ್ಸ ಇಮಿಟೇಶನ್ ರೇಶ್ಮೆಸೀರೆಗಳು.



ಈ ಸೀರೆಗಳನ್ನು ಹೆಸರಾದ ಕೊಂಪನಿಯವರು ತಯಾರಿಸಿದ್ದು ೧೮ ಮೊಳ ಉದ್ದವು, ೨॥ ಮೊಳ ಅಗಲವೂ ಇರುವದು. ಇವನ್ನು ಲಂಡನ್ ಪಟ್ಟಣದ ಹಸನ ಗಟ್ಟಿಯಾದ ಸಣ್ಣ ನೂಲಿನಿಂದಲೂ ಪೈಯಿಂದಲೂ ತಯಾರಿಸಿದೆ. ಅಂದವಾದ ಅಂಚೂ, ಸುಂದರವಾದ ಸೆರಗೂ ಇರುವದು. ನೂಲು ಬಾಳಿಕೆಯಾದ್ದರಿಂದ ಎಲ್ಲ ಋತುಗಳಲ್ಲಿಯೂ ಸಿಕ್ಕುವವು. ಮತ್ತು ಎಲ್ಲ ಮತಸ್ಥರಿಗೂ ಉಪಯುಕ್ತ. ಕ್ರಯ ನಂ. ೧ಕ್ಕೆ ರೂ. ೮-೦-೦ ಎರಡಕ್ಕೆ ರೂ. ೧೫-೦-೦ ನಾಲ್ಕು ಸೀರೆ ಒಂದಕ್ಕೆ ರೂ. ೧೩-೮-೦

ಪತ್ತೆ.— ಎಂ. ಬೆನ್ಸನ್ ಎಂಡ್ ಕೋ., ೫೨೧, ಮಾರ್ಕೆಟ್ಟೌನ, ಮದರಾಸು

ಸುಗಂಧಿ ತಾಂಬೂಲೀ ಜರ್ದಾ!

ಈ ಜರ್ದಾ ತಿನ್ನಲಿಕ್ಕೆ ಕಡಕವಿದ್ದು, ಸುವಾಸಿಕವಿದ್ದು ಇದರ ಸೇವನದಿಂದ ಬಾಯಿಯು ಹೊಲಸು, ವೇದನೆ ಹುಳ ಇವು ನಾಶವಾಗಿ ಹಲ್ಲುಗಳು ಗಟ್ಟಿಯಾಗುತ್ತವೆ. ಇದರ ಸೇವನದಿಂದ ಕಫ ವ. ಎಂತಾದ ವಿಕಾರಗಳುಂಟಾಗುವ ಭೀತಿಯಿಲ್ಲ ಕಾರಣ, ಶಿಂಬಾಕು ಸೇವಿಸುವರು ಅವಶ್ಯವಾಗಿ ಅನುಭವ ಕೊಳಬೇಕು. ೧ ಡಬ್ಬಿ ಕಿಂ. ರೂ. ೦-೦-೩, ೨ ಡಬ್ಬಿ ಕಿಂ. ರೂ. ೦-೯-೦, ೨೦ ಕಿಂ. ರೂ. ೩-೦-೦; ೫೦೦ ಪುಡಿಗಳ ಕಿಂ. ೬-೦-೦; ೧೦೦೦ ೧೭-೦-೦, ವಿ. ಪಿ. ಖರ್ಚು ಗ್ರಾಹಕರ ಪ್ರತ್ಯೇಕ.

ಸುಗಂಧಿ ನಶ್ಯ.—ಈ ನಶ್ಯವು ಒಳ್ಳೇ ತಂಬಾಕಿನಿಂದ ಮಾಡಿದ್ದು, ಇದರಿಂದ ಶೈತ್ಯ, ಥಂಡಿ, ತಲೆನೋವು ಮುಂತಾದವುಗಳು ಕೂಡಲೆ ನಾಶವಾಗಿ ತಲೆಯು ಭಾರವಾಗಿದ್ದರೂ ಹಗುರವಾಗಿ ಜ್ಞಾಪಕಶಕ್ತಿಗೆ ಚಪಲತೆಯು ಪ್ರಾಪ್ತವಾಗುವದು. ಯಾವದೇ ಕೆಲಸವನ್ನು ಕೈಕೊಳ್ಳಲಿಕ್ಕೆ ಸಹಾಯವಾಗುತ್ತದೆ. ಒಮ್ಮೆ ಪರೀಕ್ಷಿಸಿ ಖಾತ್ರಿಮಾಡಿಕೊಳ್ಳಿರಿ. ೧ ಡಬ್ಬಿ ಕಿಂ ರೂ. ೦-೪-೦; ೧ ದೊಡ್ಡ ಡಬ್ಬಿ ಕಿಂ. ರೂ. ೫-೦-೦, ವಿ. ಪೋ. ಖರ್ಚು ಬೇರೆ.

ಉತ್ತಮ ಬೀಡಿಗಳು:—ಅತ್ಯುತ್ತಮ ಪ್ರತಿ ತಂಬಾಕಿನಿಂದ ಕೈನಿಂದ ಕಟ್ಟಿದ ಬೀಡಿಗಳು ನಮ್ಮಲ್ಲಿ ತಯಾರಿರುತ್ತವೆ. ಇವುಗಳ ವಿಷಯಕ್ಕೆ ತಮ್ಮ ಪರವಾಗಿ ನೋಡಿ ಖಾತ್ರಿ ಮಾಡಿಕೊಳ್ಳಬೇಕು. ಇದರ ಹೊರತು, ನಮ್ಮಲ್ಲಿಯ ಬಾಜಾರದಲ್ಲಿ ಎಲ್ಲಾ ಪ್ರಕಾರಗಳ ತಂಬಾಕು ಬರುತ್ತದೆ. ಬೇರೆ ನಮೂನೆಯು ತಂಬಾಕನ್ನು ಯೋಗ್ಯ ದರದಲ್ಲಿ ಒಂದು ಬರೇದಿ ಮಾಡಿಕೊಳ್ಳುವವು. ವಿಶೇಷ ಮಾಹಿತಿ ಬಗ್ಗೆ ಪತ್ರವ್ಯವಹಾರ ಮಾಡಿದರೆ, ಕೂಡಲೆ ಉತ್ತರ ಬರೆಯುವೆವು.

ಪತ್ತೆ:— ಎಸ್. ಬಿ. ಕದಂ, ನಶ್ಯ ಮತ್ತು ತಂಬಾಕು ಜರ್ದಾ ದುಕಾನ, ಮು: ಪೋ. ನಿಪ್ಪಾಣಿ, ಜಿ. ಬೆಳಗಾಂವ

ಪ್ರಕಟನೆ.

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂಪನಿ, ಬೆಂಗಳೂರ.

ಈ ಕಂಪನಿಯು ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೩೬ನೆಯ ಇಸ್ವಿ ಜನೇವರಿ ೩೧ನೆಯ ತಾರೀಖಿನ ದಿವಸ ಸಾಯಂಕಾಲ ೫-೩೦ ಘಂಟೆಗೆ ಈ ಕಂಪನಿಯ ಹೆಡ್ ಆಫೀಸಿನಲ್ಲಿ ಸಾರ್ವಜನಿಕವಾಗಿ ಆ ನಾಯಿಸಲ್ಪಟ್ಟ ಬೋರ್ಡ ಆಫ್ ಡಾಯರೆಕ್ಟರ್ಸ ಚೇರಮನ್ನರಾದ ರಾವಸಾಹೇಬ ಡಾ| ಕೆ. ಎಸ್. ಬ್ರ್ಯಾಸ್ಕರ L.R.C.P. M.R.C.S. ಅವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ಒಟ್ಟು ಮತ್ತು ದತ್ತೆ ಇಲ್ಲದ ೧೦೦೦ ರೂಪಾಯಿಗಳ ಸಾಲವು ದೊರೆಯ ಬೇಕೆಂದು ನಿರ್ಣಯವಾಯಿತು.

(೧)	ಬಾಂಡ ನಂಬರ ೯೩೧೦	ವಿ. ವಿಠ್ಠಲ ಬಾಕ್ಯಾಜಿ ಸೇಟ್ ಕಲಾವ್ ಆಲಿಬಾಗ ಮುಂಬೈ	...	೧೦೦೦
(೨)	ಬಾಂಡ ನಂ| ೯೩೬೦೭	ವಿ. ರಂಗಪ್ಪ ಶ್ಯಾನಭೋಗ ಮಲಿಕಟ್ಟೆ, ಪೋಸ್ಟ ಸಿರಾ. ತಾಲೂಕ ಸಿರಾ, ಜಿಲ್ಲಾ ತುಮಕೂರ.	...	೧೦
(೩)	ಬಾಂಡ ನಂ| ೯೪೯೪೭	ಮಿ| ವೆಂಕಟರಮಣ ವೆಂಕಟರಾಮ ೫ ಹೆಗಡೆ, ಶಿರಸಿ, ತಾಲೂಕ, ಹೊನ್ನಾವರ ಪೋ| (ನಾರ್ಥ ಕ್ಯಾನರಾ) ಜಿಲ್ಲಾ.	...	೧೦೧೦
(೪)	L. B. C. "	೧೮೭೩೩ ವಿ| ಜಿ. ವೆಂಕಟಪ್ಪ ಪಾಟೀಲ ಮತ್ತು ಜಮೀನದಾರ. ಮು ಸವೇಟಿ, ಬಳ್ಳಾರಿ.		೧೦೦೦
(೫)	"	೩೫೦ ಮಿ| ರೂಪ ಚಂದ್ರ ವಾಮನ್ ಕಾಂಡೇಕರ c/o ಕಾಲೂಸ್ಕರ ವಾಡಾ, ಸ್ಟೇಶನ ರೋಡ, (ಒರೋಸಾ.)		೧೦೦೦
(೬)	"	೧೮೪೦ ವಿ| ಆರ್. ಎಚ್. ವಾಲಿ ಕರ್, ಮಾಸ್ತರ, ಗವರ್ನಮೆಂಟ ಹೈ ಸ್ಕೂಲ, ಹೈದರಾಬಾದ (ದಕ್ಷಿನ.)		೧೦೦೦

ಬಿ. ಎನ್. ಆರಾಧ್ಯ,
ಕಂಪನಿಯ ಇನಸ್ಪೆಕ್ಟರ, ಚೀಫ್ ಏಜಂಟ, ಹುಬ್ಬಳ್ಳಿ.

ಅತ್ಯದ್ಭುತ! ಅಮೇರಿಕಾ ಖಂಡದ ಅತ್ಯದ್ಭುತ!

ಪ್ರಸಿದ್ಧ ಡಾಕ್ಟರನೊಬ್ಬನು ಕಂಡು ಹಿಡಿದ ಸಿದ್ಧೌಷಧ.

ಸರ್ವರೋಗ ನಿವಾರಣೆಯಾಗುವ ಸಂಜೀವನೌಷಧವನ್ನು ಕಂಡು ಹಿಡಿಯುವದಕ್ಕಾಗಿ ಅಮೇರಿಕಾ ಖಂಡದ ಪ್ರಖ್ಯಾತ ಡಾಕ್ಟರನೊಬ್ಬನು ಅನೇಕ ವರ್ಷಗಳಿಂದ ಬಹು ಧನ ವೆಚ್ಚ ಮಾಡಿಕೊಂಡು ಪರಿಶೋಧನೆಗಳನ್ನು ಮಾಡುತ್ತಿರುವಾಗ ಕೊನೆಯಲ್ಲಿ

ಎಲೆಕ್ಸಿರ್ ಆಫ್ ಲೈಫ್

ಅಥವಾ

ಜೀವನಾಧಾರ

ಎಂಬ ಔಷಧವನ್ನು ಸಿದ್ಧಿಗೊಳಿಸಿರುವನು. ಅನುಭವದಿಂದ ಅನೇಕ ರೋಗಗಳಿಗೆ, ಎಂದರೆ ಅಗ್ನಿಮಾಂದ್ಯ, ಅಜೀರ್ಣ, ಹೊಟ್ಟೆ ಅಥವಾ ತಲೆ ಭಾರವಾಗಿರುವದು, ಅತಿಸಾರ, ವಾಂತಿ, ಭೇದಿ ಅಥವಾ ಶೂಲೆ, ತಲೆನೋವು ನೆಗಡಿ, ಚಳಿಯೊಡನೆ ಜ್ವರ, ಇತರ ವಿವಿಧವಾದ ಜ್ವರಗಳು, ಮಾನಸಿಕ ದೌರ್ಬಲ್ಯ, ಕಣ್ಣು ಮತ್ತು ಕಿವಿ ನೋವು, ಮಲಬದ್ಧತೆ, ನಾಯಿಕೆಮ್ಮು, ಸ್ತ್ರೀಯರ ಮುಂತಾದ ಎಲ್ಲಾ ಬಗೆಯ ಸಾಂಕ್ರಾಮಿಕ ರೋಗಗಳಿಗೆ, (ಇನ್‌ಫ್ಲ್ಯುಯೆಂಜಾ, ಪ್ಲೇಗ,) ಹಾವು, ಚೇಳು, ಮುಂತಾದ ವಿಷ ಜಂತುಗಳ ಕಡಿತಕ್ಕೆ ಬಾಲಗ್ರಹ ಅನೇ ಮುಂತಾದವುಗಳಿಗೆ ಈ ಜೀವನಾಧಾರವನ್ನು ಕೊಟ್ಟು ಗುಣಪಡಿಸಿರುತ್ತಾನೆ. ಊರಲ್ಲಿ ಸಾಂಕ್ರಾಮಿಕ ರೋಗವಿರುವಾಗ ಇದನು ಅಲ್ಪ ಪ್ರಮಾಣದಲ್ಲಿ ಉಪಯೋಗಿಸುತ್ತಿದ್ದರೆ ಯಾವ ರೋಗವೂ ಅಂಟುವದಿಲ್ಲ. ಈ ಜೀವನಾಧಾರವೆಂಬ

ಸಂಜೀವನೌಷಧ

ಒಂದು ಶೀಸೆಯು ಪ್ರತಿ ಮನೆಯಲ್ಲಿ ಅಥವಾ ಪ್ರತಿ ಒಬ್ಬನ ಜೇಬಿನಲ್ಲಿದ್ದರೆ ಅನುಭವಸ್ಥನಾದ ಡಾಕ್ಟರನೊಬ್ಬನು ಹತ್ತರವಿದ್ದಂತೆಯೇ. ಡಾಕ್ಟರರಿಗೆ ಕೊಡಬೇಕಾದ ಫೀಜುಗಳನ್ನು ಈ "ಜೀವನಾಧಾರ"ವೆಂಬ ಡಾಕ್ಟರರಿಗೆ ಕೊಡ ಬೇಕಾದ್ದಿಲ್ಲ. ಶೀಸೆ ಒಂದಕ್ಕೆ ರೂ ೧-೮-೦ ಟಪಾಲು. ಚಾರ್ಜು ಪ್ರತ್ಯೇಕ ಅಲ್ಲಿಯಿದಾ ಬಿಳುವುದು.

ಜೀವನಾಧಾರ ಡಿಪೋ, ಮೈಸೂರು.

ಬ್ರ್ಯಾಂಚ:- ಜೀವನಾಧಾರ ಡಿಪೋ, ಹುಬ್ಬಳ್ಳಿ



ವಿಜಂಟರು ಬೇಕು! ಏಜಂಟರು ಬೇಕು!!

ನಮ್ಮಲ್ಲಿ

ಅತಿ ಮನೋಹರವಾದ

ಶೀಶೆ ಕಟ್ಟಿಗೆಯ

ದೇವರ ಮಂಟಪಗಳೂ,

ಹೆಂಗಸರ ಸೌಭಾಗ್ಯವತಿ ಪೆಟ್ಟಿಗೆಗಳೂ, ಡಿಕ್ಷನೇರಿ ಪೆಟ್ಟಿಗೆಗಳೂ, ಆಫೀಸ ಬಾಕ್ಸಗಳೂ, ಡ್ರೆಸಿಂಗ ಟೇಬಲಗಳೂ ಇವೂ ಯಾವತ್ತೂ ಕರದ ಮನೋಸಾಮಾನು ಸಿಗುತ್ತದೆ.

ನಮ್ಮ ವಿಳಾಸ: —

ದಿ ನೋರ್ಥಕೆನರಾ ಟ್ರೇಡಿಂಗ ಕಂಪನಿ,
ಶಾಂತಿ ಭುವನ,
ಕಾರವಾರ

ಚವರಲೆಟ್
ಮೋಟಾರಕಾರ್ ಏಜನ್ಸಿ, ಕನರಾ



ನಾವು ಹೊಸ ಚವರಲೆಟ್ ಮೋಟಾರ ಗಾಡಿಗಳನ್ನು ಗಿರಾಕಿಗಳಿಗೆ ಅನುಕೂಲವಾಗುವಂತೆ ತರಿಸಿಕೊಡುತ್ತೇವೆ. ಅಪೇಕ್ಷೆಯುಳ್ಳವರು ಸಮಕ್ಷಮ ಅಥವಾ ಪತ್ರದ್ವಾರಾ ಮಾಹಿತಿ ತಿಳಕೊಳ್ಳಬಹುದು.

ಸೋಲಏಜಂಟ:— **ಎಸ್. ಎಲ್. ಧಾಕಪ್ಪ ಮತ್ತು ಬ್ರದರ್ಸ, ಶಿರ್ಸಿ**

ಕುಮಟಾ ಏಜಂಟ:— **ಜಿ. ಡಿ. ಮಳಗಿಕರ ಎಂಡ್ ಕೋ,**

ಜಿ. ಓ. ಸಿ. ಪೆಟ್ರೋಲ ನಮ್ಮಲ್ಲಿ ಬೇಕಾದಷ್ಟು ಸಿಗುತ್ತದೆ; ಡನ್‌ಲಪ್ ಹಾಗು ಮಿಚಲಿನ ಮೋಟಾರ ಹಾಗು ಸಾಯಿಕಲ್ ಟಾಯರ-ಟ್ಯೂಬ ಇತ್ಯಾದಿ ಸಾಮಗ್ರಿಗಳ ಯೋಗ್ಯ ದರದಲ್ಲಿ ದೊರೆಯುತ್ತವೆ.

ಸೂಚನೆ:— ನಮ್ಮಲ್ಲಿ ವ್ಯಾಕ್ಸ್ಯುಮ ಆಯಿಲ ಕಂಪನಿಯ ಉತ್ತಮವಾಗಿಯೂ, ವ್ಯಾಪಾರ ರೀತಿಯಿಂದ ಮಾರಿಕೊಡಲ್ಪಡುತ್ತದೆ. ಅದಲ್ಲದೆ, ನಮ್ಮಲ್ಲಿಂದ ಮಂಗಳೂರಿನ ಪ್ರಸಿದ್ಧ ರೇಗೋ ಕಂಪನಿಯ ಉತ್ತಮ ಹಂಚುಗಳ ಪೂರೈಸಲ್ಪಡುತ್ತವೆ. ಅಗತ್ಯವಿದ್ದವರು ಸಮಕ್ಷಮ ಅಥವ ಪತ್ರದ್ವಾರಾ ಮಾಹಿತಿ ತಿಳಕೊಳ್ಳಬಹುದು.

G. D. Malgikar & Co,
KUMTA

ಪ್ರಯಾಣಿಕರಿಗೆ
ವಿಶೇಷ ಅನುಕೂಲ

ನೇಮಿಸಿದ ಹೊತ್ತಿಗೆ ಮೋಟಾರಿನ ವ್ಯವಸ್ಥೆ ಮಾಗ.

ಅಡಿಗೆ, ಊಟ, ವಸತಿ ಎಲ್ಲ ರೀತಿಯ ವ್ಯವಸ್ಥೆ ಈ ಕೆಳಗಿನಂತೆ ಮೋಟಾರ ವ್ಯವಸ್ಥೆಯಿದೆ.—
ಗೋಕರ್ಣದಿಂದ ಕುಮಟಾ, ಹೊನ್ನಾವರ, ಭಟ್ಕಳ; ಗೋಕರ್ಣದಿಂದ ಕಮಟಾ, ಶಿರಸಿ, ಹುಬ್ಬಳ್ಳಿ; ಗೋಕರ್ಣದಿಂದ ಅಂಕೋಲಾ, ಕಾರವಾರ

ಟಿಪ್ಪು:— ಟಿಕೇಟು ಮುಂದಾಗಿ ಪಡಕೊಳ್ಳಬೇಕಾದವರು ಈ ಕೆಳಗಿನ ಪತ್ತೆಗೆ ಪತ್ರವ್ಯವಹಾರ ಮಾಡತಕ್ಕದ್ದು

ಅನಂತ ಸುಬ್ರಾಯ ಹಿತ್ತಲ,
ಮೋಟರ ಏಜಂಟ,
ಗೋಕರ್ಣ (ಉತ್ತರ ಕನ್ನಡ)

ಸುಲಭ ಕ್ರಯ! ಸುಲಭ ಕ್ರಯ!!

ಡಾಕ್ಟರ ಜೀ. ಟೀ ಯವರ

ಸುಗಂಧಿ ನಶ್ಯದ ಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪಿನಸಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲಾ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸಿಸೆ ಪುಕ್ಕಟೆ ಕಳಿಸಲಾದೀತು.

ಒಂದು ಡಬ್ಬಿಗೆ ಕ್ರಯ ರೂ ೦-೪-೦, ವ್ಹಿ. ಪಿ ೪ ಆಣೆ ಡಜನ್ ೧ ಕ್ಕೆ ರೂ. ೩-೮-೦. ವ್ಹಿ. ಪಿ. ೦-೮-೦ ದಯಮಾಡಿ ನಿಮ್ಮ ಹೆಸರನ್ನೂ ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ—ಗುರುಬಸವ ಅಂಡ ಕಂಪನಿ ಲಿಮಿಟೆಡ್ ಪೋ. ಬಾ. ೫೧೦, ಮೌಂಟರೋಡ, ಮದರಾಸ



ಸರಕಾರದಿಂದ ಪೇಟಂಟ ಪಡೆದ
ಮುದ್ದಾರ ಕಪ್ಪಲಿ.

ತೋಟಿಗರಿಗೆ ಬಹು ಅನುಕೂಲವಾಗಿರುವದು

ಇದು **mild steel**ವೆಂಬ ಜಾತಿಯ ಕಬ್ಬಿಣ ತಗಡಿನಿಂದ ಮಾಡಲ್ಪಟ್ಟಿರುವದು. ಎತ್ತುಗಳಿಗೆ ಬಹಳೇ ಹಗರು ಹೋಗುತ್ತದೆ. ಇದರೊಳಗಿನ ಒಂದು ಹನಿ ಸಹ ನೀರು ಕೆಳಗೆ ಬೀಳದಂತೆ ಏರ್ಪಾಡು ಮಾಡಲ್ಪಟ್ಟಿರುವದು. ಕಪ್ಪಲಿ ಬಾಯಿಂದ ನೀರು ದೋಣಿಯಲ್ಲಿ ಬೀಳುವ ಕಾಲಕ್ಕೆ ಎತ್ತುಗಳಿಗೆ ಭಾರವಾಗದಂತೆ ರಚನೆಯಲ್ಲಿ ಸುಧಾರಣೆಯನ್ನು ಮಾಡಿರುತ್ತೇವೆ.

ಬೆಲೆಯ ಬಗ್ಗೆ ಬರೆದು ತಿಳಿದುಕೊಳ್ಳಿರಿ.

ಕಿರ್ಲೋಸ್ಕರ ವಾರ್ತೆ — ಉತ್ಸಾಹ, ಉದ್ಯೋಗ, ಉನ್ನತಿಯ ಕನ್ನಡ ಮಾಸಪತ್ರಿಕೆ.

ಸಂಪಾದಕ— ಶ್ರೀ॥ ಬಾಗಲ ಲಕ್ಷ್ಮಣರಾವ ಯವರು, ವಾಙ್ಮಯ ವಿಶಾರದ

ಮಾದರಿ ಸಂಚಿಕೆ ಪುಕ್ಕಟೆ ದೊರೆಯುವದು. ವಾರ್ಷಿಕ ಚಂದಾ ರೂ. ೧-೮-೦

ಕಿರ್ಲೋಸ್ಕರ ಬಂಧು ಲಿಮಿಟೆಡ್; { ಕಿರ್ಲೋಸ್ಕರವಾಡಿ, ಜಿಲ್ಲಾ ಸಾತಾರಾ.

S. U. Narayanacharya & CO.
Chaukamba, BENARES CITY.

ನಮ್ಮಲ್ಲಿ ಎಲ್ಲ ತರದ ದೇವ್ರ ಚಿತ್ರಗಳು, ಜರಿ ಕಾ ಜರಿ ಸೀರೆ, ಕಾಶ್ಮೀರ ಶಾಲು, ಶಿವ ರುದ್ರಾಕ್ಷಿ, ಕಸ್ತೂರಿ ಲಿಂಗಗಳೂ ಶಿಲ್ಪ ವೊದಲಾದವುಗಳು ಸಿಗುತ್ತವೆ ಕ್ಯಾಟಲಾಗ ಕೋರುವವರಿಗೆ ಉಚಿತವಾಗಿ ಕಳಿಸಲಾದೀತು.

ವಿಳಾಸ – ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪನಿ, ಚೌಕಂಬಾ, ಕಾಶೀಕ್ಷೇತ್ರ.

ಅಮೃತಾಂಜನ.

ಅದರ ಉಪಯೋಗದಿಂದ, ವಾತವೇದನೆ, ಉಳುಕು ಇತ್ಯಾದಿ ವ್ಯಾಧಿಗಳಮೇಲೆ, ರಾಮಬಾಣದಂತಾಗಿರುವದು, ಕಳೆದ ೨೫ ವರ್ಷಗಳಿಂದ ಅದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗುತದೆ, ಲಕ್ಷಗಟ್ಟಲೆ ಕುಟುಂಬಗಳು ಅಮೃತಾಂಜನವನ್ನು ಉಪಯೋಗಿಸುತ್ತಿರುವವು ಆದದರಿಂದ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಬೀಗು, ಸಂಧಿವಾತ ಮೊದಲಾದ ಎಷ್ಟೋ ವ್ಯಾಧಿಗಳಮೇಲೆ ಇದು ಗುಣಕಾರಿಯೆಂದು ಅರಿಯುವವರು ಇದು ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು. ಕಿಮ್ಮತ್ತು ೧೦ ಆಣೆ ವ್ಹಿ. ಪಿ. ಖರ್ಚು ಬೇರೆ.

ಅಮೃತಾಂಜನ ಡಿಪೋ. ಫೋರ್ಟ. ಮುಂಬಯಿ

Printed and Published by Krishnarao Keshav Shenvi (Editor) at his Star of Kanara Press Kumta

Reg. No. B. 1270

Monday May 31st, 1926.

ವರ್ಷ ೧೦.

ಕಾನಡಾವೃತ್ತ.

THE KANRA NEWS.

ಸಂಚಿಕೆ ೩೪.

ಪತ್ರದ ವರ್ಗಣಿ.

ಕುಮಟೆಯಲ್ಲಿ ಅಗಾವು
ರೂಪಾಯಿ 2-4-0.
ಕುನೆಯತಾರ್ತರಿಯಿಂದ
ರೂ. 3-0-0.
, ಅಂಚೆವೆಚ್ಚ ಸೇರಿ
ರೂಪಾಯಿ 3-2-0.
ಬಿಡಿ ಸಂಚಿಕೆಗೆ 0-1-0

परपीडहितकर्ता श्रेष्ठतां याति लोकानपवादहितकर्ता लभ्यते पार्थिवेन्द्रैः।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು

ಜಾಹಿರಾತುಗಳ ದರ

ಕನ್ನಡ, ಇಂಗ್ಲಿಷ ಪ್ಯಾಕಾ ಟ್ಯಾಯಿಪ (೧೫ ಎಮ್ ಉದ್ದ) ೮ ಸಾಲುಗಳವರೆಗೆ ರೂ. 1-0-
೮ ನಂತ್ರ ಪ್ರತಿಸಾಲಿಗೆ 0-2-0.
ಹೆಚ್ಚಿಂಗದ ಸಾಲು ಎಷ್ಟು ದೊಡ್ಡದಿರುವದೋ ಆ ಮಾಪ ದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.
ಬೇರೆ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು.

(ಕುಮಟಾ—ಕಾನಡಾವೃತ್ತ ಸೋಮವಾರ, ತಾರೀಖು ೩೧ ನೆಯದೆ ಮೇ ಸನ್ ೧೯೨೬ ನೇ ಇಸವಿ.)

हिंदुस्थानांतील रहिवाशांस ज्याप्रमाणें हिंदुस्थानची हवा त्याप्रमाणेंच हें औषध हिंदुस्थानांतील लोकांस ज्यास्त फायदेशीर आहे.

द्राक्षासव-

दीड रतलची किंमत २ रुपये;

रामबाण औषधें

सर्दी घालविणारें,
भूक वाढविणारें,
शौच्यास साफ करणारें,
झोंप आणणारें,
शक्ति देणारें,
तेजस्वीपणा आणणारें,

पिण्यास रुचिकर

क्याटलाग मागवा,

पंडुफार्मास्युटिकल वर्क्स लिमिटेड,

मुंबई नं: १३

एजंट— मेसर्स पंडित आणी कंपनी,
तीर्थहळ्ळी.

ಎಲ್ಲಾ ನೋವುಗಳಿಗೆ ದಿವ್ಯೌಷಧವು

ವಾತಹಾರಿ ತೈಲ.

ಕ್ರಯ ೫ ತೋಲಿ ಬಾಟ್ಲಿ ೧ ಕ್ಕೆ ೦—೧೨—೦. ಅಂಜಿ ಸುವಾಸಿಕ ಕಾಬೂಲಿ ಹಿಂಗು ೧೦ ತೋಲಿ ಡಬ್ಬಿ ೧ ಕ್ಕೆ ೧—೮—೦. ಹಿಂಗಿನ ಅರ್ಕ .ii. ತೊಲೆಯ ಬಾಟ್ಲಿ ೧ ಕ್ಕೆ ೦—೮—೦. ರಕ್ತಶುದ್ಧಿಕಾರಕ ಧಾತು ಪೌಷ್ಟಿಕ, ಶಕ್ತಿವರ್ಧಕ ಕಲವಾ ೩೦ ತೋಲಿಯ ಡಬ್ಬಿ ೧ ಕ್ಕೆ ೧—೪—೦. ೧ ತೊಲೆಯ ಹಿಂಗಿನ ಡಬ್ಬಿಗಳು ಡಜನ್ ೧ ಕ್ಕೆ —೬೦—೦. ತಲೆಗೆ ಹಾಕುವ ಸುವಾಸಿಕ ಕುಸಕರಾಜ ತೈಲ ೫ ತೋಲಿಯ ಬಾಟ್ಲಿ ೧ ಕ್ಕೆ ೦—೧೨—೦. ಹುರಿದ ಪೊಹು ತೋಲಿ ೧ ಕ್ಕೆ ೦—೮—. ಇದಲ್ಲದೆ, ನೀಲಗಿರಿ ತೈಲ, ಎಲ್ಲಾ ತರದ ಊಜಿ ಊದಬತ್ತಿಗಳು ಯೋಗ್ಯ ಕಿಂಮತಿಗೆ ಸಿಗುವವು. ಟಪಾಲ ಖರ್ಚು ಪ್ರತ್ಯೇಕ.

ಕೆರೇಕರ ಕಾಬೂಲೀ ಹಿಂಗಿನ ದುಕಾನ,
ಜವಳಿಬಾಜಾರ, ಕುಮಟಾ.

ಬೇಕಾದ ಚಿನ್ನಾಭರಣಗಳು ನಮಗೆ ಆರ್ಡರ
ಕೊಟ್ಟಲ್ಲಿ ಯೋಗ್ಯ ಮುದ್ದತ್ತಿನಲ್ಲಿ ಕೊಡುವೆವು.

R. S. KASARGOD, *B. A.*

Jewellers, KUMTA.

ಆರ್. ಎಸ್. ಕಾಸರಗೋಡ, ಬಿ. ಎ.
ರತ್ನಾಭರಣ ವ್ಯಾಪಾರಿ, ಕುಮಟಾ.

ಯಾವರೇ { ಆಕಾರದ / ನಕ್ಷೆಯ / ನಂಬರಿನ } ಗಡಿಯಾರವನ್ನು

ಬರೇ ೭ ರೂಪಾಯಿಗಳಿಗೆ ಕೊಡುತ್ತೇವೆ

ಮೂಲ ಬೆಲೆ ರೂಪಾಯಿ ೧೪; ಅರ್ಧ ಬೆಲೆ ರೂಪಾಯಿ ೭;



ಬರೇ ಒಂದು ತಿಂಗಳ ಬಗ್ಗೆ. ನಾವು ಈ ದರವನ್ನು ಹೊಸ ವರ್ಷದಲ್ಲಿ ಮಾತ್ರ ಕೊಡುತ್ತೇವೆ. ಎಲ್ಲಾ ಗಡಿಯಾರಗಳನ್ನು ಅರ್ಧ ಬೆಲೆಗೆ ಮಾರುತ್ತೇವೆ. ಆಶ್ಚರ್ಯಕರ ಚಲನೆ! ನಿರ್ದೋಷ ಯಂತ್ರರಚನೆ !! ಧರಿಸುವದಕ್ಕೆ ಯೋಗ್ಯ ಹಾಗು ರಮ್ಯ!!! ಎಲ್ಲಾ ಗಡಿಯಾರಗಳಿಗೆ ಗ್ಯಾರಂಟಿ ಇರುತ್ತವೆ. ಯಾವುದೇ ಆಕಾರದ, ನಕ್ಷೆಯ, ನಂಬರಿನ ಕೈ ಗಡಿಯಾರವನ್ನು ಉತ್ಕೃಷ್ಟ ಲೆದರ ಪಟ್ಟಿಯ ಸಹಿತ ಉಚಿತವಾಗಿ ಕೊಡುತ್ತೇವೆ. ಬೆಲೆ ರೂಪಾಯಿ ೭ ಮಾತ್ರ!

ಅಲ್ಪವೇ ಇವೆ; ಈಗಲೇ ಬರೆಯಿರಿ.

ಪತ್ತೆ:— **Swan House: P B 503 P T Madras**

ಆಶ್ಚರ್ಯವಿದೆ!

ಕೇವಲ

ಉಚಿತ



ಉಚಿತ

ಉಚಿತ

ಕೇವಲ

ಉಚಿತ

ತಾರಾ" ಲೀವರ ರಿಜಿಸ್ಟರ್ಡ ಪೊಕೆಟ್ ವಾಚು ೧೮ ಕರೆಟ್ ರೋಲ್ಡ ಗೋಲ್ಡಿನದು. ಮುಚ್ಚಳಿಲ್ಲಿಯ ಮೇಲೆ ೫ ವರ್ಷದ ಗ್ಯಾರಂಟಿ ಇರುವದೆಂದು ಗಡಿಯಾರತಯಾರಕರು ಅಚ್ಚು ಹೊಡೆದಿರುವರು. ಈ ಗಡಿಯಾರವನ್ನು ಕೊಂಡುಕೊಳ್ಳುವವರಿಗೆ ನಾವು ನಮ್ಮ "ಸಿ" ರಿಜಿಸ್ಟರ್ಡ ಟ್ಯಾಂಪೀಸನ್ನು ಉಚಿತವಾಗಿ ಕೊಡುತ್ತೇವೆ. ಇದೊಂದು ಅಪೂರ್ವ ಕಾಣಿಕೆ. ಕೆಲವೇ ಗಡಿಯಾರಗಳಿವೆ. ಒಮ್ಮೆ ಕೊಂಡು ನೋಡಿರಿ! ಉಚಿತವಾಗಿ ಸಿಗುವ ಹಾಗು "ತಾರಾ" ಲೀವರ ರಿಜಿಸ್ಟರ್ಡ ೧೮ ಕರೆಟ್ ರೋಲ್ಡ ಗೋಲ್ಡಿನ ಪೊಕೆಟ್‌ವಾಚ್ ಗಡಿಯಾರಗಳಿಗೆ ಕೂಡಿ ಬರೇ ರೂಪಾಯಿ ೫.

CAPTAIN WATCH CO. P. B 345, MADRAS

ಗಾಂಧೀಜಯಂತಿಯಿಂದ ೪ನೇ ವರ್ಷ ಪ್ರಾರಂಭ

ಸಚಿತ್ರ | ಜಯಕರ್ನಾಟಕ (ಮಾಸಪತ್ರಿಕೆ

ಸಂಪಾದಕ— ಆಲೂರ ವೆಂಕಟರಾಯರು

ಇದರಲ್ಲಿ ವಾಙ್ಮಯಾತ್ಮಕ ಸಾಹಿತ್ಯ, ಧಾರ್ಮಿಕ ಸಾಮಾಜಿಕ ಐತಿಹಾಸಿಕ ಆರ್ಥಿಕ ಇತ್ಯಾದಿ ವಿಷಯಗಳು ಬರುವವು. ಪ್ರಪಂಚ-ವಿಚಾರ, ಜೀವನಚರಿತ್ರೆ, ನಾಟಕಾದಿಗಳು ಕೊಡಲ್ಪಡುವವು. ಪ್ರತಿ ಸಂಚಿಕೆಯಲ್ಲಿ ಮೂರು ಸುಂದರ ಚಿತ್ರಗಳೂ ಬರುತ್ತವೆ. ಡೆಮಿ ಆಕ್ಟೇವ್ ಆಕಾರದ ೮೦ ಪುಟಗಳು. ವರ್ಗಣಿ. ರೂ. ೫-೮-೦

ಕಾರ್ಯದರ್ಶಿ ಜಯಕರ್ನಾಟಕ, ಧಾರವಾಡ.

ರೋಗದಿಂದ ನರಳಬೇಡಿರಿ.

ನಮ್ಮಲ್ಲಿ ಜಂತು ಹುಳಾಬು, ಪಿತ ಜ್ವರಾಬು, ಎಲ್ಲ ತರದ ಜ್ವರ, ಸ್ವರಗಳ್ಳಿ, ಬಿಳಿಜ್ವರ, ಕಾಮಿಲೆ, ದಮ್ಮು, ಕೆಮ್ಮು, ಕಫ, ಅಗ್ನಿಮಾಂದ್ಯ, ಮೂಲವ್ಯಾಧಿ, ನರ, ವಾತ, ಶಕ್ತಿನಾಶ, ಪ್ರದರ, ಗರ್ಭಾಶಯದ ಎಲ್ಲ ರೋಗ, ಪ್ರಮೇಹ, ಉಪದಂಶ ಗರ್ಮಿ) ಬಾಲಗ್ರಹ, ಖುಜ್ಜಿ, ಗಜಕರ್ಣಗಳಿಗೆ ಖಾತ್ರಿ ಗುಣ ಬರುವ ಜರ್ಮನ, ಅಮೇರಿಕನ, ಫ್ರೆಂಚ ಇಂಗ್ಲಿಷ ಮತ್ತು ದೇಶಿ ಪೇಟಂಟ ಔಷಧಗಳು ಬಹಳ ಅಗ್ಗವಾಗಿ ಸಿಗುವವು.

ಇದರಂತೆ ಎಲ್ಲ ತರದ ಸ್ಟೇಶನರಿ, ಪರಫ್ಯೂಮರಿ ಸ್ಪೋರ್ಟ್ಸ ಸಾಮಾನು, ಓಟ್ಟ ಸ್ಕೋ ಬ್ಯಾಲ, ಸುಪರಲೆಟ, ಮೋರಿಸ ಮೋಟಾರ ಬಂಡಿಗಳು, ಸಕಲಶಿನ ಪದ ದಿನ ಸಿಗುವವು. ನಮ್ಮಲ್ಲಿದ್ದ ನಿಮಗೆ ಅವಶ್ಯವಿರುವ ಸಾಮಾನು ಬೇರೆ ದೇಶದಿಂದ ತರಿಸಿಕೊಡಲಾಗುವದು.

ಎಸ್ ಎಲ್ ಧಾಕಪ್ಪ ಮತ್ತು ಬ್ರದರ,

ಶಿರಶಿ.

ರಾಗದ ಪೆಟ್ಟಿಗೆಗಳು.

ತಬಲೆ ಜೋಡಿ ಇತ್ಯಾದಿ ಗಾಯನ ಸಾಮಾನು.



೧. ರಾಗದ ಕೈಪೆಟ್ಟಿಗೆ ಕಿಂ. ೩೦, ೪೦, ೬೦, ೭೫ ೧೦೦.

೨. ಕಾಲು ಪೆಟ್ಟಿಗೆ ಕಿಂ. ೬೫, ೭೫, ೧೩೦, ೧೫೦.

೩. ತಬಲೆ ಜೋಡಿ ಕಿಂ. ೧೬, ೧೮, ೨೦, ೨೫.

೪. ಹಾರ್ಮೋನಿಯಮ ಗ್ಯಾಜ ಮರಾಠಿ ಕಿಂ ೧॥ ತಬಲೆ ಗ್ಯಾಜ ಕಿಂ. ೧॥ ೮.

ವಿಶೇಷ ಮಾಹಿತಿಬಗ್ಗೆ ನಮ್ಮ ಮರಾಠಿ ಕ್ಯಾಟಲಾಗ ಫುಕಟ ಕೊಡುವೆವು.

ಪತ್ರವ್ಯವಹಾರ ಮರಾಠಿಯಿಂದ ಇಲ್ಲವೆ ಇಂಗ್ರಜಿಯಿಂದ ಮಾಡಬೇಕು.

ಪತ್ತೆ:— ಗೋಪಾಳ ಶಿವರಾಮ ಮತ್ತು ಕಂಪನಿ, ವಿಠ್ಠಲವಾಡಿ ಎದುರಿಗೆ ೩೬೩ ಕಾಳಬಾದೇವಿ ಮುಂಬಯಿ

ಟಿ. ಎಸ್. ಮೋಟರ ಸರ್ವಿಸ, ಶಿವಮೊಗ್ಗಾ.

ಗೇರಸಪ್ಪಾ ಜೋಗಿಗೆ ರೆಗ್ಯೂಲರ್ ಸರ್ವಿಸ್

ಶಿವರಾತ್ರಿಯ ಸಮಯದಲ್ಲಿ ಗೋಕರ್ಣಕ್ಕೆ ಸ್ಪೆಶಲ್ ಲಾರಿಗಳು

(೧) ಹುಬ್ಬಳ್ಳಿ- ಯಲ್ಲಾಪುರ- ಅಂಕೋಲಾ- ಕಾರವಾರ (೨) ಹುಬ್ಬಳ್ಳಿ- ಮುಂಡಗೋಡ ಶಿರ್ಸಿ ಕುಮಟಾ- ಹೊನ್ನಾವರ ಭಟ್ಕಳ (೩) ಕುಮಟಾ- ಶಿರ್ಸಿ ಸಿದ್ದಾಪುರ- ಗೆರಸಪ್ಪಾ- ಜೋಗ (Gersappa Falls) ಸಾಗರ ಶಿಮೊಗ್ಗಾ— ಈ ಸ್ಥಳಗಳಲ್ಲಿ ರೆಗ್ಯೂಲರ್ ಸರ್ವಿಸ ನಡೆಯುತ್ತದೆ. ಪ್ರಯಾಣಕರಿಗೆ ಅನುಕೂಲವಾಗಲಿಕ್ಕೆ ಎಲ್ಲಾ ಸ್ಥಳಗಳಲ್ಲೂ ಏಜಂಟ್ ವ್ಯವಸ್ಥೆ ಮಾಡಿದೆ ಹೆಚ್ಚಿನ ಮಾಹಿತಿಯನ್ನು ಆಫೀಸಿನಲ್ಲಿ ತಿಳಿದುಕೊಳ್ಳಬಹುದು

M Manjappa
Proprietor

अगदीं फुकट.

वैद्यविद्य.

आरोग्यसंपत्ति आणि श्री सुखाचा सरळ रस्ता दाखविणारें "वैद्यविद्य" नावाचा मोठा आयुर्वेदीक पुस्तकाची नवीनआवृत्ति बाहेर पडली आहे. हें पुस्तक कीमत व पोष्ट खर्च घेतल्या शिवाय अगदीं फुकट पाठविण्यात येते. तरी हे पुस्तक आजच मागवा.

प्रमेहावर रामबाण औषध.

मेहमर्दनचूर्ण.

हें चूर्ण फक्त तीन दिवस लागोपाठ घेतल्याने लघवीस होणारी आग, लघवी थांबून थांबून होणे व्याधि या औषधाच्या सेवनानें एकदम बरे होतात.

कि. १० तोळ्याच्या डब्यास रु. १.

राजवैद्य नारायणजी केशवजी, जामनगर (काठेवाड).

कुमटा एजन्ट— माधव सांतप्पा शणवी, वेलकेरी.

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕೇಟಗಳು ಮತ್ತು ಸುವರ್ಣಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು.

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ

ಈ ಮಧುವು ಮಹೌಷಧಿಯಾಗಿದ್ದು ಬಹಳ ಸೀಹಾಗಿಯೂ ರುಚಿಕರವಾಗಿಯೂ ಇರುತ್ತದೆ. ಈ ಮಧುವಿನ ಸೇವನದಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ವಿಕೃತಿಯಿಂದಾದ ಬೇನೆಯು ಹೋಗುವದು. ೬೦ ೭೦ ವರ್ಷದ ಮುದುಕರ ಶರೀರ ಕೂಡ ತರುಣರಂತೆ ಪ್ರವರ್ಧಮಾನವಾಗುವದು. ನಿಜವಾಗಿ ಒಂದೇ ಸಪ್ತಾಹದಲ್ಲಿ ಅನುಭವಕ್ಕೆ ಬರುವದು. ಜನನೇಂದ್ರಿಯದೊಳಗಿನ ಶಕ್ತಿಯು ಹೋಗಿ ಸ್ವಪ್ನದಾಷ ವಪ್ರಸಂಗಸ್ವಪ್ನ ಇಲ್ಲದಂತಾಗುವದು. ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ ಧಾತು ಉಂಟಾಗುವದು — ದಿಡವು ಹಾಗೂ ಕಾಸಿಂದ ಹೊಟ್ಟೆಬಾದ ಕಲೆಶದ ಸಿದ್ದೋಷಮಾಗುವದು. ಮೂರು ದಿವಸದಲ್ಲಿಗುಣಬರುವದು. ತರುಣ ಸ್ತ್ರೀಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಆದರೊಳಗಿನ ಗುಣ ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ, ಉದರರೋಗ ದಮ್ಮು ಇವುಗಳು ನಾಶವಾಗುವವು ದಿವಸದಲ್ಲಿ ಮೂರುವತಿ ಊಟಮಾಡಿದರೂ ಅನ್ನ ಪಚನವಾಗಿ ಹಸಿವೆ ಚನ್ನಾಗಿ ಆಗುತ್ತದೆ ಇದರ ಅನುಭವವು ಮೊದಲನೇ ದಿವಸವೇ ಬರುವದು. ಶೌಚ ಸಾಫ ಆಗುವದು. ಮೈಯಲ್ಲಿ ಎಷ್ಟೇ ದಿವಸದ ಕಾವು ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ಔಷಧಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ. ಹೊಸಬೇನೆ ಇದ್ದರೆ ೧೦ ದಿವಸ ಸಾಲುವ ಒಂದು ಬಾಟಲಿಯಿಂದ ಗುಣಬರುವದು. ಹಳೇ ರೋಗವಿದ್ದರೆ ೩ ಬಾಟಲಿಯಿಂದ ಗುಣಬರುವದು. ಒಂದು ಬಾಟ್ಲಿಯ ಕಿಮ್ಮತು ೧॥ ರೂಪಾಯಿ ಮೂರು ಬಾಟಲಿಯ ಕಿಮ್ಮತು ೪—೦ ಮೂರು ಬಾಟಲಿಗಳನ್ನು ಒಂದೇ ಪಾರ್ಸಲಿನಲ್ಲಿ ಕಳಿಸುವೆವು. ಅಂದರೆ ಟಪಾಲಖರ್ಚು ಹೆಚ್ಚು ಬೀಳುವದಿಲ್ಲ. ದವನ ಬಾಟಲಿಗಳ ಕಿಮ್ಮತ್ತು ೧೩—೦—೦ ಮತ್ತು ೧ ಬಾಟಲಿ ಪುಕ್ಕಟ ಸಿಗುವದು. ಟಪಾಲ ಖರ್ಚು ಬೇರೆ ಬೀಳುವದು. ವಿಹಿಂಟರ ಕಡೆಯಿಂದ ೧ ಬಾಟ್ಲಿಗೆ ೧—೦—೦ ೩ ಬಾಟ್ಲಿಗೆ ೩—೦—೦ ಹನ್ನೆರಡಕ್ಕೆ ೧೩—೦—೦

ಮ್ಯಾನೇಜರ— ದ್ರಾಕ್ಷಾರ್ಕಮಧು ಆಫೀಸ, ಪ್ರೊ. ನಿಪ್ಪಾಣಿ. ಜಿ ಬೆಳಗಾಂವ

ಸತ್ಯಾಗ್ರಹಾಶ್ರಮ.

(ಪ್ರವಾಸಿಕ:— ಗಾಂಧಿಭಕ್ತ)

ಸಾಬರಮತಿಯೊಳಗಿನ ಸತ್ಯಾಗ್ರಹಾಶ್ರಮದ ದರ್ಶನವನ್ನು ಕಾರವಾರದ ವಕೀಲರಾದ ಡಾ|| ಪಾಂಡುರಂಗ ಮಂಜುನಾಥ ಶ್ಯಾನಭಾಗ, ಎಮ್. ಎ., ಎಲ್. ಎಲ್. ಬಿ., ಇವರು ಉಡುಪಿಯಲ್ಲಿ ಹೊರಡುವ ಕೊಂಕಣಿ ಭಾಷೆಯ 'ಸಾರಸ್ವತ' ಪತ್ರಿಕೆಯ ಮೇ ತಿಂಗಳ ಸಂಚಿಕೆಯಲ್ಲಿ ವರ್ಣಿಸಿರುವರು. ಸತ್ಯಾಗ್ರಹಾಶ್ರಮವು ಮಹಾತ್ಮರ ನಿವಾಸಸ್ಥಾನವಾಗಿದ್ದು, ಮಹಾತ್ಮರ ಚಳವಳಿಯ ಕೇಂದ್ರಸ್ಥಾನವಾದುದು. ಇಂಥ ಆಶ್ರಮದ ಹಕೀಕತನ್ನು ಭಾರತೀಯರೆಲ್ಲರೂ ತಿಳಕೊಳ್ಳುವದು ಅವಶ್ಯವು.

ಮೊಟ್ಟಮೊದಲು, ಡಾ|| ಶ್ಯಾನಭಾಗರು, ಡಾ|| ಕಾಲೇಲಕರರಿಗೆ ಪತ್ರ ಬರೆದು ಅಲ್ಲಿಯ ಹಕೀಕತನ್ನು ತಿಳಕೊಂಡರು. ಏಪ್ರಿಲ್-ಮೇ ತಿಂಗಳುಗಳಲ್ಲಿ ಅಲ್ಲಿ ಅಸಹ್ಯ ಸೆಕೆ ಇರುತ್ತದೆ. ಆದದರಿಂದ ಅಲ್ಲಿ ಆ ಸಮಯ ಹೋಗುವದು ಅಷ್ಟು ಅನುಕೂಲ್ಯವಲ್ಲಾಗಿತ್ತು. ಆದರೆ, ಕೋರ್ಟಿಗೆ ರಜೆ ಇರುವಾಗಲೇ ಅಲ್ಲಿ ಹೋಗುವದು ಸಾಧ್ಯವಿದ್ದದರಿಂದ ಆ ಸಮಯ ಅಲ್ಲಿ ಹೋಗಬೇಕೆಂದು ಡಾ|| ಶ್ಯಾನಭಾಗರು ನಿಶ್ಚಯಿಸಿದರು.

ತಾ. ೨೪-೧೯೨೮ ನೇಗೆ ಉಗಿಹಡಗಿನಿಂದ ಹೊರಟು, ಅದೇ ಮೂರನೇ ದಿನ ಮುಂಬಯಿಗೆ ಮುಟ್ಟಿದರು. ೨೭ ನೇ ತಾರೀಖಿನ ಬೆಳಗಿನ ೮-೩೦ ರ ಉಗಿಬಂಡಿಯಿಂದ ಹೊರಟು ಅದೇ ದಿನ ರಾತ್ರಿ ೮-೩೦ಕ್ಕೆ ಸಾಬರಮತಿ ಸ್ಟೇಶನದಲ್ಲಿ ಅವರು ಇಳಕೊಂಡರು. ಅಲ್ಲಿಂದ ಆಶ್ರಮವು ೨-೨|| ಮೈಲು ದೂರವಿದೆ. ಹಾದಿಯ ಮೇಲೆ ಸಾಬರಮತಿ ಜೈಲು ಹತ್ತುತ್ತದೆ. ಜೈಲಿನ ಬಳಿ ಮುಟ್ಟಿದ ಕೂಡಲೆ ಅಲ್ಲಿಯ ಶಿಪಾಯಿಯು "ಹು ಕಮ್ಸ್ ದೇರ್," "ಯಾರಲ್ಲಿ" ಎಂದು ಪ್ರಶ್ನಿಸುತ್ತಾನೆ. ಇವರು ಒಬ್ಬ ಕೂಲಿಯವನನ್ನು ಜೊತೆಗೆ ಕರಕೊಂಡು ಹೋಗುತ್ತಿದ್ದರು. "ಫ್ರೆಂಡ" ಅಂದರೆ "ಮಿತ್ರನು" ಎಂದು ಆ ಕೂಲಿ ಆಳು ಹೇಳಿದನು. ಇಲ್ಲಿ "ಫ್ರೆಂಡ" ಅಥವಾ ಮಿತ್ರರಾದವರು "ಶತ್ರು" ಅಂದರೆ ಮುಂದೆ ಹೋಗಗೊಡುತ್ತಾರೆ. ಸಿದ್ದಾಪುರದ ಶ್ರೀ| ತಿಮ್ಮಪ್ಪ ನಾಯಕರು ಅಲ್ಲಿದ್ದರು. ಅವರು ಡಾ|| ಶ್ಯಾನಭಾಗರಿಗೆ ಬಿಟ್ಟಿಯಾಗಿ ಊಟ-ಉಳಕೊಳ್ಳುವ ವ್ಯವಸ್ಥೆ ಮಾಡಿದರು. ಈ ದಿನಗಳಲ್ಲಿ ತೀರ ಸೆಕೆ; ಶಾಖ ಕಾವಳಿಗೆಯು ೬೪ ಕೂತಕೊಂಡಾಗ ಹಗಲಿಗೆ ೧೩೦ರಿಂದ ೫೦ ವರೆಗೆ ನನಗನಿಸಿತು. ಈ ತಾಪವು ರಾತ್ರಿ ೯—೧೦ ಘಂಟೆಯ ವರೆಗೆ ಉಳಿಯುತ್ತದೆ. ಆದರೆ ಈ ಸಮಯದ ಗಾಳಿ ಬೀಸುತ್ತಿದ್ದದರಿಂದ ತಾಪವು ಅಷ್ಟು ಅನಿಸ ಹದಿಲ್ಲ. ಶ್ರೀ| ಕಾಲೇಲಕರರ ಹೇಳಿಕೆಯಂತೆ ಶ್ರೀ| ಮಗನಲಾಲ ಗಾಂಧಿಯವರು ನನ್ನ ಶಿಕ್ಷಣದ ವ್ಯವಸ್ಥೆ ಮಾಡಿದರು. ಬೆಳಿಗ್ಗೆ ಹತ್ತಿ ಹಿಂಜುವದು ಮಧ್ಯಾನ್ಹಕ್ಕೆ ನೂಲುವದು. ಇದನ್ನೆಲ್ಲ ಅಲ್ಲಿಯ ಶಿಕ್ಷಕರಾದ ಶ್ರೀ| ಭೊಂಸಲೇರವರು ಕಲಿಸಿದರು. ಮೊದಲು ದೊಡ್ಡ ಬಿಲ್ಲಿನಿಂದ, ೪—೫ ದಿವಸಗಳ ನಂತರ ಮಧ್ಯಮ ಬಿಲ್ಲಿನಿಂದ, ಬಳಿಕ ಕೈಯಲ್ಲಿ ಹಿಡಿಯುವ ಸಣ್ಣ ಬಿಲ್ಲಿನಿಂದ ಹೀಗೆ ಹತ್ತಿ ಹಿಂಜೋಣವನ್ನು ಕಲಿಸಲಾಯಿತು. ಬಿಲ್ಲು ಸಣ್ಣದಾದ ಹಾಗೆ ಕೆಲಸವು ಚೊಕ್ಕವಾಗುತ್ತದೆ. ಡಾ|| ಶ್ಯಾನಭಾಗರು ಬೆಳಗಿನ ೩ ತಾಸು ಹತ್ತಿ ಹಿಂಜುತ್ತಿದ್ದರು; ಮಧ್ಯಾನ್ಹಕ್ಕೆ ನೂಲುತ್ತಿದ್ದರು. ಬಳಿಕ ಬಣ್ಣದ ಕೆಲಸವನ್ನು ಪ್ರಾರಂಭಿಸಿದರು. ಶ್ರೀ| ಗಜಾನನ ಸದಾಶಿವ ಗಾಸ್ಕರ ಎಂಬುವರು ಬಣ್ಣದ ಶಿಕ್ಷಕರು. ಇವರು ಸುಶೀಲ ಸ್ವಭಾವದವರಿದ್ದು, ಬಣ್ಣದ ಮಾಹಿತಿಯನ್ನು ಶೀಘ್ರವಾಗಿ ಮಾಡಿಕೊಟ್ಟರು. ಡಾ|| ಪ್ರಫುಲ್ಲಚಂದ್ರ ರೊಯರ "ದೇಶೀ ರಂಗ" ಹಾಗು ಶ್ರೀ| ಬಸ್ಸಿಕವರ "ದೇಶೀ ರಂಗಾಯಿಯ ಭಮಾಯು" ಎಂಬ ಎರಡು ಪುಸ್ತಕಗಳ ಆಧಾರದಿಂದ ಶಿಕ್ಷಣ ನಡಿಸುತ್ತಾರೆ.

ಡಾ|| ಶ್ಯಾನಭಾಗರು ಅಲ್ಲಿ ಹೋದ ಸಮಯ ಶಾಲೆಗೆ ರಜೆ ಇತ್ತು. ಶಿಕ್ಷಕರೂ ವಿದ್ಯಾರ್ಥಿಗಳೂ ಮನೆಗೆ ಹೋಗಿದ್ದರು. ಆದದರಿಂದ ಅರ್ಧದಷ್ಟು ಆಶ್ರಮವು ಬರಿದಾಗಿತ್ತು. ಈ ಆಶ್ರಮವು ಸಾಬರಮತಿ ನದಿಯ ಪಶ್ಚಿಮ ದಂಡೆಯ ಮೇಲಿನ ಬೈಲು ಪ್ರದೇಶದ ಮೇಲಿದೆ. ೧ ಫರ್ಲಾಂಗು ಉದ್ದ, ೧ ಫರ್ಲಾಂಗು ಅಗಲವಾಗಿ ಮಧ್ಯದಲ್ಲಿ ದಾರಿಗಳಿವೆ. ಆಶ್ರಮದಲ್ಲಿ ೧೬—೧೭ ಕಟ್ಟಡಗಳಿವೆ. ವಿದ್ಯಾರ್ಥಿಗಳ ವಸತಿಗೃಹವು ದೊಡ್ಡ ಉಪ್ಪರಿಗೆಯದು. ದೊಡ್ಡ ಗುಜರಾಥಿ ಗೃಹಸ್ಥರೊಬ್ಬರು ಇದನ್ನು ಕಟ್ಟಿಸಿ ಕೊಟ್ಟಿರುವರು. ೧೨೦ ಕೋಣೆಗಳಿವೆ. ಕೆಲವು ಕೋಣೆಗಳಲ್ಲಿ ವಿದ್ಯಾರ್ಥಿಗಳ ವರ್ಗಗಳಿವೆ; ಕೆಲವುಗಳಲ್ಲಿ ಆಫೀಸುಗಳಿವೆ. ಉಳಿದವುಗಳಲ್ಲಿ ವಿದ್ಯಾರ್ಥಿಗಳು ಉಳಿಯುತ್ತಾರೆ. ೧೬—೧೭ ಶಿಕ್ಷಕರಿರುವರು. ಶಿಕ್ಷಕರಿಗಾಗಿ ಚಿಕ್ಕ ಬೇರೆ ಮನೆಗಳಿವೆ. ಮಹಾತ್ಮರೂ, ಶ್ರೀ| ಮಗನಲಾಲ ಗಾಂಧಿಯವರೂ ಸ್ವತಂತ್ರ ಬಂಗಲೆಗಳಲ್ಲಿ

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ.

ಕಾಮಿನಿಯಾ ತೈಲ. ರಿಜಿಸ್ಟರ್ಡ

ಮದುವಾದ ಗುಂಗುರು ಗುಂಗುರಾಗಿರುವ ನೀಲಿಮೆಯಿಂದ ನಿಬಿಡವಾದ ಕೇಶಪಾಶವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು? ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿಕೊಡತಕ್ಕ ಉಪಕರಣವಾವದೋ.

ಕಾಮಿನಿಯಾ ಆಯಿಲ್ ರಿಜಿಸ್ಟರ್ಡ

ಈ ಆಯಿಲ್ ಸ್ತ್ರೀಯರಿಗೆ, ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತದೆಯೋ ಹಾಗೆಯೇ ಮಾನಸಿಕ ಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅತ್ಯಂತ ಅಗತ್ಯದ ಸಹಕಾರಿಯಾಗಿರುತ್ತದೆ. ಈ ಆಯಿಲ್ ಹಚ್ಚಿಕೊಳ್ಳುವದರಿಂದ ಮಸ್ತಕದ ಬೇನೆಯು ಶಮನವಾಗಿ ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ಹಚ್ಚಿಯ ತರುವಾಗಿನ ಬಳಿಕ ಎಂದಿಗೂ ಉದುರಿ ಬಿದ್ದು ಹೋಗಲಾರವು, ಆದರೆ, ಅವು ದಟ್ಟವಾಗಿ ಬೆಳೆದು ನವಿರಾಗುವವು. ಇದರ ಸುಗಂಧವಾದರೋ ಮಧುರವೂ ಮನೋಹರವೂ ಆಗಿರುವದು.

ಕೀಳು ತರದ ಎಣ್ಣೆಗಳನ್ನು ಕೊಂಡುಕೊಂಡು ತಮ್ಮ ಹಣವನ್ನೂ ಕೂದಲನ್ನೂ ಹಾಳುಮಾಡಿಕೊಳ್ಳುವದಕ್ಕಿಂತ ಒಂದೇ ಒಂದು ಬಾರಿ "ಕಾಮಿನಿಯಾ ಆಯಿಲ್" ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ನಮಗೆ ವೆಂಬ್ಲಿ ಪ್ರದರ್ಶನದಲ್ಲಿ "ಸರ್ಟಿಫಿಕೇಟ ಆಫ್ ಮೆರಿಟ" ಅಥವಾ ಯೋಗ್ಯತಾಪತ್ರವೂ ಅಲ್ಲದೆ ಸಾವಿರಾರು ಗೃಹಸ್ಥರು ಉಪಯೋಗಮಾಡಿ, ಮಾನಪತ್ರಗಳೂ ದೊರೆತಿವೆ.

ಕ್ರಯ:— ಸೀಸೆಗೆ ರೂಪಾಯಿ 1-0-0, ಸೀಸೆ 3ಕ್ಕೆ ರೂಪಾಯಿ 2-10 0 ವಿ.ಪಿ. ಖರ್ಚು 0-14-0.

ಅತಿ ಮನೋಹರವಾದ ಸುರಭಿಯು!

ಒಟ್ಟೋ-ದಿಲ್ ಬಹಾರ್!! ರಿಜಿಸ್ಟರ್ಡ

ಈ ಸುಗಂಧದ್ರವ್ಯವು ಮಧುರ, ಕೋಮಲ, ಚಿರಸ್ಥಾಯಿ ಮತ್ತು ಅತ್ಯುತ್ತಮವು ಅನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧಮಾಡುತ್ತ ಇದರಲ್ಲಿ ಮದಿರೆಯ (ಆಲ್ಕೊಹೋಲ) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈ ಚೀಲದಲ್ಲಿ ಅಥವಾ ಅಂಗಿಯಲ್ಲಿ ಈ ದ್ರವ್ಯದ ಕೆಲವು ಹನಿಗಳನ್ನು ಚಿಮುಕಿಸಿದರೆ ನಿಮ್ಮ ಸುತ್ತಲು ಸ್ವಾಭಾವಿಕವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ, ಒಟ್ಟೋ-ದಿಲ್-ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ ಮನಸ್ಸನ್ನು ತನ್ನ ಶಕ್ತಿಯಿಂದ ಸೆಳಕೊಳ್ಳುವದು. ಒಂದೇ ಒಂದು ಸೀಸೆಯನ್ನು ಖರೀದಿಸಿರಿ.

ಸಣ್ಣ ಸೀಸೆ 1 ಕ್ಕೆ 0 8 0; 1 ಡ್ರಾಮಿನ ಮಿಡಿಯಂ ಸೀಸೆ 1 ಕ್ಕೆ 0 12 0; ½ ಔನ್ಸಿನ ದೊಡ್ಡ ಸೀಸೆ 1 ಕ್ಕೆ 2 0 0. ಅಂಚೆಯ ವೆಚ್ಚ ಬೇರೆ 0 4 0

ಒಟ್ಟೋ-ದಿಲ್ ಬಹಾರ್ ಪರಿಮಳ ಕಾರ್ಡುಗಳು ಡಜನ್ 1 ಕ್ಕೆ 0 12 0

Address: **The Anglo Indian Drug & Chemical Co**

16, Market, **BOMBAY 2**

ಉಳಿಯುತ್ತಾರೆ ವೇ| ತಿಮ್ಮನಲಾಲ ಜಜಾಜರವರು ಇಲ್ಲಿ ಬಿಡಾರು ಮಾಡಿಕೊಂಡು ಉಳಿದಿರುವರು. ಗೋಶಾಲೆ ಕಟ್ಟಡವೂ ದೊಡ್ಡದಿದೆ ೪೦—೫೦ ಆಕಳುಗಳಿವೆ. ಎಮ್ಮೆ, ಕುರಿ, ಆಡ ಗಳಿವೆ. ಆಶ್ರಮಕ್ಕೆಲ್ಲ ಹಾಲು ಇಲ್ಲಿಂದಲೇ ಪೂರೈಕೆ ಆಗುತ್ತದೆ ಇದರ ಬಳಿ ಒಂದು ಅಂಗಡಿ ಇದೆ. ಆಶ್ರಮದೊಳಗಿನವರಿಗೆ ಬೇಕಾದ ಸಾಮಾನು ಇಲ್ಲಿ ಸಿಗುತ್ತದೆ ವಾಚನಾಲಯಕ್ಕಾಗಿ ಪ್ರತ್ಯೇಕ ಕಟ್ಟಡ ಒಂದಿದೆ. ಇಲ್ಲಿ ಆಶ್ರಮದ ಕಾರಖಾನೆಗಳಲ್ಲಿ ಕೆಲಸ ಮಾಡುವವರೂ ಸಹ ಕುಟುಂಬ ಉಳಕೊಳ್ಳುತ್ತಾರೆ. ಇಲ್ಲಿ ಸುಮಾರು ೧೦೦ ೧೫೦ ಮಂದಿಗಳಿರುವರು

ಈ ಆಶ್ರಮದಲ್ಲಿ ೫೦—೬೦ ವಿದ್ಯಾರ್ಥಿಗಳು ಜ್ಞಾನಾರ್ಜನ ಮಾಡುತ್ತಾರೆ. ಸ್ವಾವಲಂಬನವು ವಿದ್ಯಾಭ್ಯಾಸವಾಗುತ್ತದೆ ಗುಜರಾಥಿಯಂಥ ವಿಷಯಗಳನ್ನು ಕಲಿಸುತ್ತಾರೆ. ಹಿಂದೀ ಭಾಷೆಯನ್ನು ಕಲಿಸುತ್ತಾರೆ. ಇಂಗ್ಲಿಷ ಭಾಷೆಗೆ ಅಷ್ಟು ಪ್ರಾಧಾನ್ಯವಿಲ್ಲ. ವಿದ್ಯಾರ್ಥಿಗಳಿಗೆಲ್ಲ ಹತ್ತಿ ಹಿಂಜೋಣ, ನೂಲೋಣ, ನೇಯ್ಗೆಯನ್ನು ಚರಕೋ ಕಲಿಸುತ್ತಾರೆ. ಇದರಿಂದ ಇಲ್ಲಿ ಕಲಿತವರಿಗೆ ಉಪಜೀವಿಕೆ ಮಾಡುವ ಬಗೆ ಯಾತಕದೆಂದು ಚಿಂತಿಸುವ ಕಾರಣವಿಲ್ಲ

ಇದಲ್ಲದೆ ಖಾದಿ ಟೋರ್ಜನ ವಿದ್ಯಾರ್ಥಿ ಅಥವಾ ಬೇರೆಯವರ್‍ಯಾರೂ ಕಲಿಯಲಿಚ್ಛಿಸುವವರು ಇಲ್ಲಿ ಇದ್ದು ಕಲಿವರು. ಶ್ರೀ| ಶಿವಪ್ಪ ಸಾಹುಕಾರ ಮುಂಬಯಿ ವಿಶ್ವವಿದ್ಯಾಲಯದ ಬಿ ಎ ಪರೀಕ್ಷೆಯಲ್ಲಿ ಉತ್ತೀರ್ಣರಾದವರು ಆವರು ೫೯ ರಾಷ್ಟ್ರೀಯ ಶಾಲೆಯ ಮುಖ್ಯಾಧ್ಯಾಪಕರಿದ್ದರು. ಅವರು ೩ ವರ್ಷದ ಕೆಳಗಿನ ಮೇಲೆ ಖಾದಿ ಟೋರ್ಜನ ವಿದ್ಯಾರ್ಥಿಗಳಾಗಿದ್ದರು. ಹತ್ತಿ ಹಿಂಜುವ ಕಲಲ್ಲಿಯೂ ನೂಲುವದರಲ್ಲಿಯೂ ಪ್ರಾವೀಣ್ಯವನ್ನು ಅವರು ಸಂಪಾದಿಸಿ, ರಾ| ಶಾಸ್ತ್ರಭಾಗರು ಹೋದಾಗ ನೇಯ್ಗೆಯನ್ನು ಕಲಿಯುತ್ತಿದ್ದರು. ಅಂಧ್ರ ದೇಶದ ಕೂಮರ್ಯ್ ಎಂಬ ೩೦ ವರ್ಷ ಪ್ರಾಯದ ಅಸ್ಪೃಶ್ಯ ಜಾತಿಯ ಹುಡುಗನು ೧೯-೪-೩೫ರಿಂದ ೩-೫-೩೫ರ ವರೆಗೆ ಅಲ್ಲಿ ನಿಂತ ಹತ್ತಿ ಹಿಂಜುವದನ್ನು ಕಲಿತುಕೊಂಡನು ಪಂಚಾಬ ಪ್ರಾಂತದ ವಿವೇಕವರು ಇವನಿಗೆ ಸಹಾಯ ಮಾಡಿದರು. ಮುಲತಾನದ ವಕೀಲರಾದ ರಾ| ಕೃಷ್ಣ ಶರ್ಮಾ ಎಂಬುವರು ೩ ತಿಂಗಳು ನಿಂತು, ಹಿಂಜೋಣ ಹಾಗು ನೂಲೋಣಗಳನ್ನು ಕಲಿತು, ತಾ ೩೦-೪-೩೫ ನೇಗೆ ಹೋದರ. ರಾ| ಅಪ್ಪಯ್ಯರು ಮದ್ರಾಸಿನ ಬಿ. ಎಲ್ ಪರೀಕ್ಷೆಯಲ್ಲಿ ಉತ್ತೀರ್ಣರಾದ ಗೃಹಸ್ಥರು. ಮಂಗಳೂರಿನ ರಾ| ಯು| ರಾಮರಾವರು ಗುಜರಾಥಿ ಹಾಗು ಹಿಂದೀ ಭಾಷೆಗಳನ್ನು ಕಲಿಯುವದಕ್ಕೋಸ್ಕರ ಅಲ್ಲಿ ಹೋಗಿ ಉಳಕೊಂಡಿದ್ದರು. ಮೈಸೂರಿನವರೊಬ್ಬರು ೩ ಅಲ್ಲಿ ಹೋಗಿ ಹಿಂಜೋಣ ಮುಂತಾದವುಗಳನ್ನು ಕಲಿಯುತ್ತಿದ್ದರು ಅವರಲ್ಲದೆ ಯೆಂದ ಒಬ್ಬರು ಬಂದು ೩ ತಿಂಗಳು ಉಳಕೊಂಡು ಎಲ್ಲ ಕೆಲಸ ಕಲಿತುಕೊಂಡು ಮರಳಿದರು.

ಇಲ್ಲಿಯ ವಿದ್ಯಾರ್ಥಿಗಳೆಲ್ಲರೂ ತಮ್ಮ ಕೆಲಸವನ್ನು ಸ್ವತಃ ಮಾಡುತ್ತಾರೆ ಕೋಣೆಗಳನ್ನು ಗುಡಿಸುವದು, ಅರಿವೆಗಳನ್ನು ಒಗೆಯುವದು, ಪಾತ್ರೆಗಳನ್ನು ತೊಳೆಯುವದು, ಅಡಿಗೆ ಮಾಡುವದು ಮುಂತಾದ ಕೆಲಸಗಳನ್ನೆಲ್ಲ ವಿದ್ಯಾರ್ಥಿಗಳೇ ಮಾಡುತ್ತಾರೆ. ೧೨—೧೫ ಮಗ್ಗಗಳಿವೆ ಕೆಲವು ಮಗ್ಗಗಳ ಮೇಲೆ ಕೂಲಿ ಪಡೆದು ಕೆಲಸ ಮಾಡುವ ಜನರಿರುವರು. ಉಳಿದ ಕೆಲವುಗಳ ಮೇಲೆ ವಿದ್ಯಾರ್ಥಿಗಳಿದ್ದಾರೆ. ೫—೬ ಮಂದಿ ವಿಧವೆಯರು ಇಲ್ಲಿ ನೇಯ್ಗೆ ಕಲಿತು, ಸಂಬಳ ಪಡೆದು ಕೆಲಸ ಮಾಡುತ್ತಾರೆ ಕಟುಂಬ, ಕೋಟುಗಳಿಗೆ ತಗಲುವ ಯೋಗ್ಯವಾದ ಅರಿವೆಯು ಇಲ್ಲಿ ತಯಾರಾಗುತ್ತದೆ. ಮೇಜುವರೆಗೆಯು ಸಜ್ಜೆಗಳು, ಆಸನಗಳು ಇಲ್ಲಿ ತಯಾರಾಗುತ್ತವೆ ಕೆಲಸವು ೭ರಿಂದ ೧೦ ಘಂಟೆ ವರೆಗೆ ನಡೆಯುತ್ತದೆ ೧೦ ರಿಂದ ೧೨ ಘಂಟೆ ವರೆಗೆ ಊಟ ನಡೆಯುತ್ತದೆ. ೧೨ ರಿಂದ ೪|| ವರೆಗೆ ಪುನಃ ಕೆಲಸ. ೬ ಘಂಟೆಯೊಳಗೆ ರಾತ್ರಿ ಊಟವಾಗುತ್ತದೆ ಇಲ್ಲಿಯ ಆಹಾರವೆಲ್ಲ ತೀರ ಸಾತ್ವಿಕ, ಮೆಣಸು ಯಾರೂ ತಿನ್ನುವದಿಲ್ಲ ಕೆಲವರು ಉಪ್ಪು ತಿನ್ನುವದಿಲ್ಲ ಸ್ತ್ರೀ-ಪುರುಷರೆಲ್ಲರೂ ದಿನಾ ಎರಡಾವರ್ತಿ ಸೇರಿ, ಪ್ರಾರ್ಥನೆ ಮಾಡುತ್ತಾರೆ ಬೆಳಗಿನ ೪ ಘಂಟೆಗೆ ಹಾಗು ಸಾಯಂಕಾಲ ೬|| ಘಂಟೆಗೆ ಪ್ರಾರ್ಥನೆಯಾಗುತ್ತದೆ. ಕೆಲಸವಿಲ್ಲದಾಗ ಆಶ್ರಮವಾಸಿಗಳು ಸಮಾಚಾರ ಪತ್ರಿಕೆಗಳನ್ನಾಗಲೀ ಗ್ರಂಥಗಳನ್ನಾಗಲೀ ಓದುತ್ತಾರೆ ಎಲ್ಲರೂ ಚರಕವನ್ನು ಹಿಡಿಯುತ್ತಾರೆ. ಬೇಕಷ್ಟೇ ಅರಿವೆಯನ್ನು ಉಪಯೋಗಿಸುತ್ತಾರೆ ಹೆಣ್ಣಿಗಾಗಿ ಅರಿವೆಯನ್ನು ಅಪವ್ಯಯ ಮಾಡುವದಿಲ್ಲ ಬೆಳಗಿನ ಪ್ರಾರ್ಥನೆಯು ಮಹಾತ್ಮರ ಮನೆಯ ಸಮೀಪದ ಬೈಲಲ್ಲಿ ನಡೆಯುತ್ತಿತ್ತು. ಪ್ರಾರ್ಥನೆಯಾದ ಬಳಿಕ ತ ಗೀತಾಧ್ಯಾಯದೊಳಗಿನ ಕೆಲ ಭಾಗವನ್ನು ಓದಿ, ಮಹಾತ್ಮರು ಅರ್ಥ ಹೇಳುತ್ತಿದ್ದರು.

ಇಲ್ಲಿಯ ಶೌಚಕೂಪದ ವ್ಯವಸ್ಥೆಯು ಬಹಳ ಅನುಕರಣೀಯವಿದೆ ಪ್ರತಿಯೊಂದು ಶೌಚಕೂಪದಲ್ಲಿ ೨ ಬಾಲ್ದಿಗಳನ್ನಿಡುತ್ತಾರೆ ಒಂದು ಬಾಲ್ದಿಯಲ್ಲಿ ಮಲವಿಸರ್ಜನ ಮಾಡುವದು, ಎರಡನೇ ಬಾಲ್ದಿಯಲ್ಲಿ ಮೂತ್ರವಿಸರ್ಜನ ಹಾಗು ಗುದಪ್ರಕ್ಷಾಲನ ಮಾಡುವದು. ಒಳಿಯಲ್ಲಿ ಮಣ್ಣು ನರಾಶಿರುತ್ತದೆ, ಮಣ್ಣನ್ನು ಮಲದ ಮೇಲೆ ಹಾಕಿ ಮುಂಬೇಕು. ದಿನಾ ಮಲದ ಬಾಲ್ದಿಯನ್ನು ೧| ಅಡಿ ಆಳವಾದ ಕುಳಿಯಲ್ಲಿ ಒಡೆದು ಮಾಡುತ್ತಾರೆ ಮತ್ತು ಆ ಕುಳಿಯನ್ನು ಅಲ್ಲಿಯೇ ಇದ್ದ ಮಣ್ಣಿನಿಂದ ತುಂಬುತ್ತಾರೆ ಬಾಲ್ದಿಯನ್ನು ಸ್ವಚ್ಛವಾಗಿ ತೊಳೆದು ಪುನಃ ಶೌಚಕೂಪದಲ್ಲಿಡುತ್ತಾರೆ. ಮಲ ಹುಗಿದ ಸ್ಥಳದಲ್ಲಿ ೨-೩ ತಿಂಗಳಾದ ಬಳಿಕ ಹತ್ತಿಯ ಬೀಜ ನೆಡುತ್ತಾರೆ ಇದರಿಂದ ೪ ಪಟ್ಟು ಬೆಳೆ ಸಿಗುತ್ತದೆ. ಕೆಲವು ಶೌಚಕೂಪಗಳನ್ನು ವಿದ್ಯಾರ್ಥಿಗಳೇ ಸ್ವಚ್ಛ ಮಾಡುತ್ತಾರೆ, ಉಳಿದವುಗಳನ್ನು ಭಂಗಿಗಳು ಮಾಡುತ್ತಾರೆ ಈ ತರದ ವ್ಯವಸ್ಥೆಯು ಹಿಂದುಸ್ಥಾನದಲ್ಲಿ ಬೇರೆ ಕಡೆಯಲ್ಲಿಯೂ ಇಲ್ಲ ಮ್ಯುನಿಸಿಪಾಲಿಟಿಯವರು ಈ ಕುರಿತು ತಕ್ಕ ಉಪಯೋಜನೆ ಮಾಡಿ, ಮಲಮೂತ್ರಗಳ ಯೋಗ್ಯ ಉಪಯೋಗ ಮಾಡಬೇಕೆಂದು ರಾ| ಜ್ಞಾನಭಾಗರು ಈ ಕುರಿತ ವಿಸ್ತಾರವಾಗಿ ಬರೆದಿರುವರು.

ಮತ್ತೊಂದು ಮಾತು ಇಲ್ಲಿಯ ಜನರೆಲ್ಲರೂ ಉದ್ಯೋಗಪ್ರಿಯರು ಸ್ತ್ರೀ-ಪುರುಷರೂ ಬಾಲ-ಬಾಲಿಕೆಯರೂ ಹೊತ್ತು ಸಿಕ್ಕಿದಾಗ ಹತ್ತಿಯನ್ನು ಹಿಂಜಿ ಹೀಲು ಮಾಡಿಟ್ಟು ನೂಲುತ್ತಾರೆ. ಎಲ್ಲರ ಜೀವನಕ್ರಮವು ಸಾಮಾನ್ಯ ಪ್ರಕಾರದ್ದು ಚಹಾ, ಕಾಫೀ ಮೊದಲಾದ ಆಧುನಿಕ ವ್ಯಸನಗಳಿಗೆ ಇಲ್ಲಿ ಎಡೆ ಇರುವದಿಲ್ಲ ಐದರಾಭೂತವಾದ ಆಶ್ರಮವನ್ನು ಎಲ್ಲರೂ ಸಂದರ್ಶಿಸಿದರೆ ಬಹಳವಾದ ಲಾಭವಾಗುವದು

ಕೆಳೆಯು ಪಾತಕ್ಯಮಾದ್ದರಿಂದ ರಾ| ಜ್ಞಾನಭಾಗರು ತಾ. ೮-೫-೩೫ನೇಗೆ ಅಲ್ಲಿಂದ ಹೊರಟು, ಮರಳಿ ಕಾರವಾರಕ್ಕೆ ಬಂದರು.

BATLIBOI'S
Accountancy Training Institute
Recognised by
The G. D. A. Board
Offers best training in Accounting, Banking, Company Management and Secretarial Work and Theory and Practice of Commerce.
Best staff, Individual attention, fee moderate, and payable by instalments.
Send for Prospectus at Yusuf Buildings, Churchgate street Fort, Bombay.
You are invited to make thorough enquiry before joining.
TUITION BY POST
IS OUR SPECIALITY.

ವಿವಿಧ ಸಂಗ್ರ.

ಮಳೆಯ ಅನುಮಾನ

ಈ ವರ್ಷ ವೈಶಾಖ ವದ್ಯ ೧೦ ಶನಿವಾರಕ್ಕೆ ರವಿ-ಬುಧ ಯುತಿ ಇದೆ. ಅಂದಿನಿಂದಲೇ ಮಳೆಗೆ ಪ್ರಾರಂಭವಾಗುವದು. ವದ್ಯ ೧೩ರಿಯಿಂದ ಜ್ಯೇಷ್ಠ ಶುಕ್ಲ ಪಾಡ್ಯದ ವರೇಗೆ ಮೇಘರಾಜನು ಭರದಿಂದ ಸುರಿಯುವನು. ಶು. ೧೧ರಿಯಿಂದ ವದ್ಯ ೫ಮಿ ವರೇಗೆ ಬಹುತರವಾಗಿ ಎಲ್ಲ ಕಡೆಯಲ್ಲಿ ಮಳೆ ಬೀಳುವದು. ವದ್ಯ ೬ಷ್ಠಿಗೆ ಚಲೀ ಮಳೆ ಬೀಳ ಯೋಗವಿದೆ. ವದ್ಯ ೧೧ರಿಯಿಂದ ಆಷಾಢ ಶು| ೫ವರೇಗಿನ ಅವಧಿಯಲ್ಲಿಯೂ ಮೇಘರಾಜನ ಅನುಗ್ರಹವಾಗುವದು. ಶು| ೧೦ಮಿಯಿಂದ ವದ್ಯ ೩ ವರೆಗೆ ಸಾಮಾನ್ಯ ಮಳೆ.

ಆಷಾಢ ವದ್ಯ ೧೨ರಿಗೆ ಶುಕ್ರಾಸ್ತ ಶುಕ್ರಯು ೧೪ರಿಗೆ ಪುನಃ ರವಿ-ಬುಧಯುತಿ, ಶ್ರಾವಣ ಶು| ಪಾಡ್ಯಕ್ಕೆ ಚಂದ್ರ ನೇಪಚೂನ ಯುತಿ ಹೀಗೆ ಮಳೆಯ ಯೋಗಗಳು ಬಂದರ ಹಿಂದೊಂದಕೂಡಿ ಬಂದಿವೆ. ಈ ಮೂಲಕ ವದ್ಯ ೧೩ರಿಯಿಂದ ಶ್ರಾವಣ ಶುದ್ಧ ೩ಗೆ ವರೇಗೆ ಜಲರಾಶಿಯಾಗುವದು. ಶ್ರಾವಣ ಶು ೯ ಮಿಯಿಂದ ವದ್ಯ ಪಾಡ್ಯದ ವರೇಗೂ ಮಳೆಯ ಸಾಮಾನ್ಯ ಯೋಗಗಳಿರುವದರಿಂದ ಈ ಅವಧಿಯಲ್ಲಿಯೂ ಸಾಮಾನ್ಯವಾಗಿ ಮಳೆಯಾಗುವದು.

ಇಲ್ಲಿಂದ ಸಾಧಾರಣ ಒಂದು ತಿಂಗಳವರೇಗೆ ಮಳೆಯ ಯೋಗಗಳು ವಿಶೇಷ ಕಂಡುಬರುವದಿಲ್ಲ. ಆದರೂ, ಶ್ರಾವಣ ವದ್ಯ ೧೩ರಿಯಿಂದ ಭಾದ್ರಪದ ಶುದ್ಧ ಪಾಡ್ಯದ ವರೆಗೂ ಭಾದ್ರಪದ ಶುದ್ಧ ೩ಷ್ಠಿಯಿಂದ ೯ಮಿ ವರೇಗೂ ಸಾಧಾರಣ ಮಳೆ ಬೀಳಬಹುದು. ಶು| ೧೨ರಿಗೆ ಪುನಃ ರವಿ-ಬುಧಯುತಿಯಿದೆ. ಚಿಕ್ಕ ಪುಟ್ಟ ಮಳೆಯ ಯೋಗಗಳೂ ಇದೇ ಸಮಯ ಕೂಡಿ ಬಂದಿವೆ. ಅಂದಿನಿಂದ ಹತ್ತು ದಿನಗಳ ವರೇಗೆ ಕೆಲವೆಡೆಗಳಲ್ಲಿ ಯೋಗಬಂದಂತೆ ಮಳೆಯಾಗಬಹುದು.

ಭಾದ್ರಪದ ವದ್ಯ ೮ ಮಿ ಬುಧವಾರಕ್ಕೆ ಸಿಂಹ ರಾಶಿಯೊಳಗಣ ಮಂಗಳನು ವಕ್ರವಾಗುತ್ತಾನೆ. ಒಂದು ಪಕ್ಷದ ವರೇಗೆ ಮಳೆಯಿಲ್ಲದೆ ಜನರು ಗೋಳಿಡಬೇಕಾಗುವದು. ಆಶ್ವಿನ ಶುದ್ಧ ೮ ಮಿಗೆ ಗುರುವು ಸರಿ ಮಾರ್ಗ ಕ್ರಮಣ ಮಾಡತೊಡಗಿದ ತರುವಾಯ ಶು| ೧ ದ್ವ ಮತ್ತು ೨ಗೆಗೆ ಸಾಧಾರಣ ಮಳೆ ಸುರಿಯುವದು. ೭-೮-೯ ಮಿ ಈ ಮೂರು ದಿನವೂ ಸಾಧಾರಣ ಮಳೆ ಬೀಳುವ ಲಕ್ಷಣಗಳಿವೆ. ೩೦ ಸ್ಯೆಯಿಂದ ಕಾರ್ತಿಕ ಶುದ್ಧ ೩ರಿ, ೫ಮಿಯಿಂದ ೧೫ ಮಿ ವರೇಗೆ ಹಾಗು ವದ್ಯ ೪ ಥಿಯಿಂದ ೧೦ ಮಿ ವರೇಗೆ, ಈ ಮೂರು ಅವಧಿಗಳಲ್ಲಿ ಮಳೆ ಬೀಳುವ ಚಲೀ ಯೋಗಗಳಿವೆ. ಮಾರ್ಗಶೀರ್ಷ ಶು| ೨ಗೆಗೆ ಮಂಗಳನು ಸರಿ ಮಾರ್ಗಕ್ಕೆ ಬರುತ್ತಾನೆ. ಆ ಬಳಿಕ, ೧೧ರಿ ವದ್ಯ ೧ದೆ, ೫ಮಿ, ಹಾಗು ೧೨ರಿ ಈ ನಾಲ್ಕು ದಿನ ಮಳೆ ಬೀಳುವ ಯೋಗಗಳಿವೆ. ತಾತ್ಪರ್ಯವೇನಂದರೆ, ಜ್ಯೇಷ್ಠ ಮಾಸದಲ್ಲಿ ಮೇಘರಾಜನ ಪ್ರತಾಪವು ವಿಶೇಷವಾಗುವದು ; ಆಷಾಢ-ಶ್ರಾವಣದಲ್ಲಿ ಸಾಮಾನ್ಯ ಮಳೆ ಬೀಳುವದು ; ಭಾದ್ರಪದದಲ್ಲಿ ಮಳೆ ಬೀಳುವ ಲಕ್ಷಣಗಳು ತೀರ ಕಡಿಮೆ. ಕಾರ್ತಿಕ ಮಾರ್ಗಶೀರ್ಷಗಳಲ್ಲಿ ವರ್ಷಕ್ಕಿಂತ ಹೆಚ್ಚು ಮಳೆ

ಬೀಳುವ ಹಾಗೆ ತೋರುತ್ತದೆ.(ಕೇಸರಿ ಆಧಾರದಿಂದ)

* *

ಮಿರ್ಜಾನ ಕೋಟೆ.

ಮಿರ್ಜಾನ ಕೋಟೆಯು ಇಲ್ಲಿಂದ ಐದು ಮೈಲಿನ ಮೇಲಿದೆ. ಈ ಕೋಟೆಯನ್ನು ಸರ್ವಮಲ್ಲಿಕನೆಂಬ ಚಿಕ್ಕ ಸಂಸ್ಥಾನಿಕನು ಕಟ್ಟಿಸಿದ್ದನೆಂದು ಹೇಳುತ್ತಾರೆ. ಕೋಟೆಯು ಸಾಮಾನ್ಯವಾಗಿ ೪೦೦-೫೦೦ ವರ್ಷಗಳ ಹಿಂದಿನದಿರಬೇಕು. ಗೋ-ಬ್ರಾಹ್ಮಣ ಪ್ರತಿಪಾಲಕನಾದ ಶ್ರೀ ಶಿವಾಜಿ ಮಹಾರಾಜನ ಮೂಲ ಬಖರಿಗಳಲ್ಲಿ ಮಿರ್ಜಾನ ಕೋಟೆಯ ಉಲ್ಲೇಖವು ಕಾಣುತ್ತದೆ. ಅಷ್ಟು ಪುರಾತನವು ಕೋಟೆಯಿದು. ಈ ಕೋಟೆಯ ಹೊರಮಗ್ಗಲಿನ ಗೋಡೆಗಳು ಬಹಳ ಭದ್ರವಿವೆ. ಕೋಟೆಯ ಕಟ್ಟೋಣ, ಹೆಬ್ಬಾಗಿಲಿನ ಕಮಾನುಗಳು, ಕಂಬಗಳು ಇವುಗಳನ್ನು ನೋಡಿದರೆ, ನಮ್ಮ ಪುರಾತನ ಕಾಲದ ಇಂಜಿನಿಯರಿಂಗ ಯಾನೆ ಶಿಲ್ಪಶಾಸ್ತ್ರದ ನೈಪುಣ್ಯದ ಕಲ್ಪನೆ ಬಂದು, ಚಿತ್ತವು ಚಕಿತವಾಗುತ್ತದೆ. ಕೋಟೆಯ ರಕ್ಷಣಕ್ಕಾಗಿ ಸೈನಿಕರನ್ನಿಡುವ ವ್ಯವಸ್ಥೆ, ಕೋಟೆಯ ಹೊರಬದಿಯಿಂದ ಸಾಗಿಬರುವ ಶತ್ರುಗಳನ್ನು ನಾಶಮಾಡುವದಕ್ಕಾಗಿ ಗೋಡೆಗಳಲ್ಲಿ ರಚಿಸಿದ ಚಿಕ್ಕ ಚಿಕ್ಕ ಕಣ್ಣುಗಳೆಲ್ಲ ಸರ್ವಮಲ್ಲಿಕನ ಕಾಲದೊಳಗಣ ಮನುಷ್ಯರ ಬುದ್ಧಿಚಾತುರ್ಯವನ್ನು ಪ್ರದರ್ಶಿಸುತ್ತವೆ. ಸರ್ವಮಲ್ಲಿಕನ ರಾಜಸಭೆಯು ಈಗ ಬಹಳ ಜೀರ್ಣವಾಗಿದೆ. ಆದರೂ ಶಿಲ್ಪಕಲೆಯು ಮಾತ್ರ ಸ್ಪಷ್ಟವಾಗಿ ಕಾಣಿಸುತ್ತದೆ. ಶ್ರೀ ದೇವರ ಮೂರ್ತಿಗಳನ್ನಿಡಲು ಸಭೆಯ ಗೋಡೆಗಳಲ್ಲಿ ಚಿಕ್ಕ ಚಿಕ್ಕ ಗೋಪುರಗಳು ರಚಿಸಲ್ಪಟ್ಟಿವೆ. ಹೆಬ್ಬಾಗಿಲಿನಲ್ಲಿಯೂ ಶ್ರೀ ರಾಮನ ಬಂಟನಾದ ಹನುಮಂತನು ಅಧಿಷ್ಠಿತನಾಗಿದ್ದನು. ಈಗ ಈ ಮೂರ್ತಿಯು ಮೂರೂರಿಯ ಕ್ಷತ್ರಿಯರ ಮಠದ ಗುಡಿಯ ಬಳಿ ಪ್ರಾಣಪ್ರತಿಷ್ಠೆಯಾಗಿದೆ. ಪರಮಾತ್ಮನ ಸನ್ನಿಧಾನದಲ್ಲಿ ಪರಮಾತ್ಮನ ಸಾಕ್ಷಿಯಾಗಿ ಸರ್ವಮಲ್ಲಿಕನು ರಾಜ್ಯದಾಡಳಿತೆಯನ್ನು ನಡಿಸುತ್ತಿದ್ದನು. ರಾಜಸಭೆಯನ್ನು ದಾಟಿಹೋದ ಕೂಡಲೆ, ಅದ್ಭುತವಾದ ಬಾವಿಯನ್ನು ಕಾಣಬಹುದು. ಈ ಬಾವಿಗೆ ಇಳಿಯಲು ೧೦-೧೫ ಮಾರು ದೂರ ಒಂದು ಗವಿಯೋಪಾದಿಯಲ್ಲಿ ಮೆಟ್ಟಲುಗಳು ರಚಿಸಲ್ಪಟ್ಟಿವೆ. ಒಳಗೆ ಕಮಾನುಗಳಿವೆ. ಇವನ್ನು ನೋಡಿ ಕೆಲ ಹೊತ್ತು ಮತಿಯು ಕುಂಠಿತವಾಗುತ್ತದೆ. ಈ ಬಾವಿಯನ್ನು ಕುದುರೆಗಳಿಗೆ ನೀರು ಕುಡಿಸಲು ಉಪಯೋಗಿಸುತ್ತಿದ್ದರೆಂದು ಹೇಳುತ್ತಾರೆ. ಹಾಗೆಯೇ ಒಳಸೇರಿದರೆ, ಒಳ ಜನರಿಗೆ ಉಪಯೋಗಿಸುವ ನೀರಿನ ಬಾವಿಯಿದೆ. ಅದರ ಕಟ್ಟೋಣವೂ ಹೊರಬಾವಿಯಂತಿದ್ದು, ಬಹಳ ಭದ್ರವಾಗಿದೆ. ದೊಡ್ಡ ದೊಡ್ಡ ಮರಗಳು ಬಾವಿಯ ಪ್ರಾಕಾರದ ಮೇಲೆ ಬೆಳೆದರೂ, ಪ್ರಾಕಾರವು ಇನ್ನೂ ಕುಸಿಯುವದಿಲ್ಲ. ಎರಡೂ ಬಾವಿಗಳ ಒಂದೂ ಕಲ್ಲು ಸ್ಥಾನಭ್ರಷ್ಟವಾಗಲಿಲ್ಲ. ರಾಜಕೋಶಗಳನ್ನಿಡುವ ಒಂದೆರಡು ಚಿಕ್ಕ ಚಿಕ್ಕ ಗವಿಗಳಿವೆ. ಅಲ್ಲಿ ಕೆಲ ಕಾಲದ ಹಿಂದೆ ವ್ಯಾಘ್ರರಾಜನು ಮನೆಮಾಡಿಕೊಂಡಿದ್ದನು; ಈಗ ಮುಳ್ಳುಗಂಟಿಗಳು ತುಂಬಿಕೊಂಡಿವೆ. ಮೇಲ್ಬದಿಗೆ ಅಂತಃಪುರಗಳಿರುವವಂತೆ! ಆದರೆ ಅಲ್ಲಿ ಗಿಡಗಂಟಿಗಳು ವಿಪುಲವಾಗಿ ಬೆಳೆದು ಅಲ್ಲಿ ಸೇರಿ ನೋಡಲಿಕ್ಕಾಗುವದಿಲ್ಲ. ಕೋಟೆಯ ಒಳಗೂ, ಗೋಡೆಯ ಮೇಲೂ ದಟ್ಟ ಕಾಡು ಬೆಳೆದದೆ. ಇದನ್ನು ಸರಕಾರವು ಕಡಿಸಿ ಪರಿಪಾಲಿಸಿದರೆ ಜನರಿಗೆ ಸಂಪೂರ್ಣ ಕೋಟೆಯ ನೋಟವು ಸಾಧ್ಯವಾಗುವದು. ಕೋಟೆಯ ಹೊರಮೈಗೆ ಎರಡು ನೋಡತಕ್ಕಂಥ ಗವಿಗಳಿವೆ. ಈ ಗವಿಗಳೊಳಗಿಂದ ಮಿತ್ರ ಸೈನಿಕರನ್ನು ಒಳಕೊಳ್ಳಲಿಕ್ಕೂ, ಒಳಗಿನವರಿಗೆ ಗುಪ್ತವಾಗಿ ಹೊರಹೋಗಲಿಕ್ಕೂ ಬಹಳ ಅನುಕೂಲವಾಗುತ್ತಿತ್ತು. ಒಂದು ಗುಹೆಯು ತೀರ ಹೊಸದಿದೆ. ವರ್ಷ, ಎರಡು ವರ್ಷಗಳ ಹಿಂದೆ ಕಟ್ಟಿಸಿದ್ದಂತೆ ತೋರುತ್ತದೆ. ಮೆಟ್ಟಲುಗಳು, ಹೊರಮೈಗೆ ತೆಗೆದ ಸುಣ್ಣವು ಅಷ್ಟು ಚೊಕ್ಕವಾಗಿದೆ. ಎರಡನೇ ಗವಿಯಲ್ಲಿ ಮಾತ್ರ ಪೊರೆಯು ತುಂಬಿ ಹೋಗಿದೆ. ವೈಭವ ಕಾಲದಲ್ಲಿ ಈ ಕೋಟೆಯ ಮೇಲೆ ದೃಷ್ಟಿಕ್ಷೇಪ ಮಾಡುವನು ಕಠಿಣ ಕೆಲಸವಾಗಿತ್ತು. ಈಗಲಾದರೋ ಇದನ್ನು ನೋಡುವವರಿಲ್ಲ. ಹುಲಿ, ಹಂದಿ ಮೊದಲಾದ ಕಾಡು ಪ್ರಾಣಿಗಳು ಇಲ್ಲಿ ಮನೆ ಮಾಡಿಕೊಳ್ಳಬಹುದು. ಬಾವುಲಿಗಳು ಕೋಟೆಯ ಹೊರಮಗ್ಗಲಿನ ಗವಿಯೊಳಗೆ ಕಾಲು ಮೇಲೆ ಮಾಡಿಕೊಂಡು ತೂಗಾಡುತ್ತಿವೆ; ಇವೆಲ್ಲ ಕೋಟೆಗೆ ಒದಗಿದ ವಿಪರೀತ ಗ್ರಹಗತಿಯನ್ನು ಚಿತ್ರಿಸುತ್ತವೆ. ಕೋಟೆಗೆ ವೈಭವಶಿಖರದ ಮೇಲೆ ಏರಿಸಿದವನೂ ಕಾಲನೇ! ಅಧೋಗತಿಗೆ ಇಳಿಸಿದವನೂ ಕಾಲನೇ !! ಕಾಲಚಕ್ರದಲ್ಲಿ ಸಿಕ್ಕ ಹಾಗೆ ತಿರುಗಿಸುವ ಸಾಮರ್ಥ್ಯವಂತನಾದ ಕಾಲನೇ, ನಿನಗೆ ಸಾಷ್ಟಾಂಗವೆರಗುವೆನೆಂದು ಪ್ರೇಕ್ಷಕರು ಉದ್ಗರಿಸುವರು. ಕಾಲನು ಬಗೆದರೆ, ಪಾತಾಳದಿಂದ ದೇವಲೋಕಕ್ಕೆ ಹೋಗಬಹುದು; ಆತನೇ ವಿಪರೀತ ಬಗೆದರೆ, ದೇವಲೋಕದಿಂದ ಥಟ್ಟನೇ ಪಾತಾಳವನ್ನು ಸೇರಿ ನಿರ್ನಾಮವಾಗಬಹುದು. ಅದ್ಭುತ ಕಾಲ ಸಾಮರ್ಥ್ಯ !

* * *

ಸೃಷ್ಟಿದೇವಿಯ ಕೋಪ.

ಜಪಾನದ ಮೇಲೆ ಸೃಷ್ಟಿದೇವಿಯು ಬಹಳ ಪ್ರಕ್ಷುಬ್ಧವಾಗಿದೆಂದು ತೋರುತ್ತಿದೆ. ಹೊಕೆಯಡೊ ಎಂಬಲ್ಲಿ ಜ್ವಾಲಾಮುಖಿಯು ಉದ್ಭವ ಹೊಂದಿದೆ. ಮೊಟ್ಟಮೊದಲು, ಚಿಕ್ಕ ಚಿಕ್ಕ ಸ್ಫೋಟಗಳಾಗಿ, ಬಳಿಕ, ಬೆಟ್ಟದ ಮೇಲಿರುವ ಒಂದು ದೊಡ್ಡ ಕೆರೆಯು ಕುಸಿದುಹೋಯಿತು. ಮೂವತ್ತು ಅತಿ ಎತ್ತರವಾದ ಕೆರೆಯ ದಂಡೆಗಳೆಲ್ಲ ಬಿದ್ದು ನೆರೆಹೊರೆಯಲ್ಲೆಲ್ಲ ನೀರೇ ನೀರು. ಅನೇಕ ಬೇಸಾಯಗಾರರು ಜಲರಾಶಿಯೊಳಗಿಂದ ಪಾರಾಗಲಿಕ್ಕೆ ಯತ್ನಿಸುತ್ತಿರಲ್ಲೇ, ಎರಡು ಬಾಯೊಳಗಿಂದ ಕಾದ ಲಾವಾ ರಸವು ಹರಿದು ಬಂದು ಬೇಸಾಯಗಾರರನ್ನೆಲ್ಲ ನಾಶ ಮಾಡಿಬಿಟ್ಟಿತು. ಹಗಲಿಗೆ ಅಪಘಾತವು ಒದಗಿದ್ದರಿಂದ ಮನೆಬಿಟ್ಟು ಹೊರಹೋಗಿದ್ದವರಷ್ಟು ಪಾರಾದರು. ಆದರೆ, ಅವರ ಮನೆಯೂ, ಹೆಂಡರು-ಮಕ್ಕಳೂ, ಹೊಲಗಳೂ ಸಂಪೂರ್ಣವಾಗಿ ನಾಶಹೊಂದಿದವು. ಇದರಿಂದ ಪಾರಾದವರಿಗೆ ಬುದ್ಧಿಭ್ರಂಶವಾಗಹತ್ತಿದೆ. ಹಿಕೆಟೋ ಪರ್ವತದ ಬಳಿಯಲ್ಲಿದ್ದ ಮಿಕ್ಸಿಯಾಮಾ, ಸಪ್ಪಿ ಹಳ್ಳಿಗಳು ಸಮೂಲ ನಾಶ ಹೊಂದಿದವು. ಭಯಾನಕ ನದಿಗೆ ನೆರೆ ಕಟ್ಟಿದೆ. ಆದರಿಂದ ಆ ನದಿಯ ದಂಡೆಗುಂಟ ಇದ್ದ ಜನರ ಗೋಳು, ನದಿ ತುಂಬ ಜನರ ಶವಗಳು ತೇಲಿ ಹೋಗುತ್ತವೆ. ಸಾವಿರಕ್ಕೆ ಮಿಕ್ಕಿ ಮಂದಿಗಳು ಕಾಣೆಯಾಗಿರುವರು. ಎಷ್ಟೋ ಜನರು ಸುಡಿಸಿರುವರು. ಲಾವಾ ರಸದಿಂದ ಬಂಡೆಗಲ್ಲುಗಳೂ, ಗಿಡಗಂಟಿಗಳೂ, ಕೆಸರ ಮಣ್ಣುಗಳೂ ಭಯಾನಕ ನದಿಯ ಪ್ರವಾಹದಲ್ಲಿ ಸಿಲುಕಿ ನೆರೆ ಏರುತ್ತಿದೆ. ಜ್ವಾಲಾಮುಖಿಯು ೨೫ನೇ ಮಂಗಳವಾರಕ್ಕೆ ಜಾಗ್ರತವಾಯಿತು. ಆಗ ಪರ್ವತದಲ್ಲುಂಟಾದ ಸಪ್ಪಳವು ೩೦ ಮೈಲು ದೂರದ ವರೆಗೆ ಕೇಳಿತು. ೧೦೦ ಹೆಣಗಳು ಸಿಕ್ಕಿವೆ. ೩೦೦ ಮಂದಿಗಳಿಗೆ ಲಾವಾ ರಸದಿಂದ ಗಾಯಗಳಾಗಿವೆ. ಮಾರನೇ ದಿನ ಅಂದರೆ ತಾ. ೨೬ನೇಗೆ ಕಿಟೋರಾ ಪಟ್ಟಣದೊಳಗಿನ ಮಾಯಾವಗ್ನಿ ಹಾವು ಹಿಡಿದು ದೊಡ್ಡದೊಂದು ಅನರ್ಥ. ಟಪಾಲ ಆಫೀಸು, ಬ್ಯಾಂಕು, ನಾಟಕಗೃಹ ಮುಂತಾದ ೧೪೪ ಕಟ್ಟೋಣಗಳು ಬೆಂದು ಹೋದವು! ಏನು ಅನರ್ಥವಿದು! ನಮ್ಮ ಕಲಕತ್ತೆಯಲ್ಲಿ ಕಳೆದ ಸೋಮವಾರ ಸಾಯಂಕಾಲಕ್ಕೆ ಬಿರುಗಾಳಿ ಬೀಸಿ ೫ ಹಡಗಗಳು ಜಲಸಮಾಧಿಯನ್ನು ಹೊಂದಿದವು. ೮ ಮಂದಿಗಳು ಸತ್ತಿದರೆಂದು ಹೇಳುತ್ತಾರೆ. ನೆರೆಹೊರೆಯಲ್ಲಿ ಮನೆಗಳೂ, ಗಿಡಮರಗಳೂ ನೆಲಸಮವಾದವು. ಬಂದರದಲ್ಲಿ ಲಂಗರು ಹಾಕಿದ ೮ ಉಗಿಹಡಗಗಳು ಸ್ಥಾನಭ್ರಷ್ಟವಾದವು. ಸುದೈವದಿಂದ ಅನರ್ಥವೇನೂ ಆಗಲಿಲ್ಲ. ವಾಯುದೇವನು ಘಂಟೆಗೆ ೬೦ ಮೈಲಿನಂತೆ ಒಂದು ಮಿನಿಟು ಬೀಸಿದ ಫಲವಿದು! ೫ ಮಿನಿಟುಗಳ ವರೆಗೆ ೩೦ ಮೈಲಿನಂತೆ ಬೀಸಿದನಂತೆ. ಪಂಚಮಹಾಭೂತಗಳ ಅದ್ಭುತ ಸಾಮರ್ಥ್ಯ ನೋಡಿರಿ. ಪುಣೆಯಲ್ಲಿ ಅಗ್ನಿನಾರಾಯಣನ ಸಣ್ಣ ಚೇಷ್ಟೆ. ತಾರೀಖು ೨೫ನೇ ಮಂಗಳವಾರ ಅಪರಾಹ್ನಕ್ಕೆ ಭಾರತ ಸೇವಕ ಸಮಾಜದ ಆರ್ಯಭೂಷಣ ಹಾಗೂ ಜ್ಞಾನಪ್ರಕಾಶ ಛಾಪಖಾನೆಗಳಿಗೆ ಅನಪೇಕ್ಷಿತವಾಗಿ ಬೆಂಕಿ ತಗಲಿ, ಎರಡೂ ಛಾಪಖಾನೆಗಳು ಸುಟ್ಟು ಬೂದಿಯಾದವು. ಬೆಂಕಿಯನ್ನು ನಂದಿಸಲಿಕ್ಕೆ ಪುಣೆಯೊಳಗಿದ್ದ ಸಮಸ್ತ ಇಂಜಿನುಗಳನ್ನು ತಂದರೂ ಅಗ್ನಿನಾರಾಯಣನು ತನ್ನ ಕಾರ್ಯವನ್ನು ನೆರವೇರಿಸಿ ಬಿಟ್ಟನು. ಮಂದಿರದಲ್ಲಿದ್ದ ಅನೇಕ ಕಾಗದಪತ್ರಗಳೂ, ನಾಲ್ಕು ಲಕ್ಷ ರೂಪಾಯಿಗಳ ಸಾಮಗ್ರಿಯೂ ನಷ್ಟವಾದವು. ನೆರೆಹೊರೆಯಲ್ಲಿದ್ದ ಅಂಗಡಿಗಳೂ ಸುಟ್ಟು ಹೋದವು. ಇದರಿಂದ ಭಾರತ ಸೇವಕ ಸಮಾಜದ ತರ್ಫೆಯಿಂದ ಹೊರಡುವ ಜ್ಞಾನಪ್ರಕಾಶ ಹಾಗೂ ಸರ್ವಂಟ ಒಫ್ ಇಂಡಿಯಾ ಪತ್ರಿಕೆಗಳು ಕೆಲ ಸಮಯ ಹೊರಡಲಿಕ್ಕಿಲ್ಲ.

* * *

ಒಂದು ಬಸಲಲ್ಲಿ ೪ ಮಕ್ಕಳು !

ಬಿಹಾರ ಪ್ರಾಂತದ ಲಾಹರಿಯಾ ಸರೈ ಎಂಬಲ್ಲಿ ಒಬ್ಬ ಹೆಂಗಸು ಪ್ರಸೂತಳಾಗಿ ೪ ಶಿಶುಗಳನ್ನು ಹಡೆದಿದೆ. ಶಿಶುಗಳೆಲ್ಲ ಜೀವಂತವಿದ್ದವೆಂದು ದಿಲ್ಲಿಯ "ಹಿಂದೂ ಸಂಸಾರ" ಪತ್ರಿಕೆಯಲ್ಲಿ ಪ್ರಕಟವಾಗಿದೆ.

* * *

ಅದ್ಭುತ ಫಕೀರನು !

ಮುಂಬಯಿಯ ರನ್ ಎಲ್ ಗನಿ ಎಂಬ ಫಕೀರರೊಬ್ಬರು ಪ್ಯಾರಿಸ್ ಪಟ್ಟಣಕ್ಕೆ ಹೋಗಿರುವರು. ಅವರು ಅಲ್ಲಿ ಅದ್ಭುತ ಪ್ರಯೋಗಗಳನ್ನು ಮಾಡಿ ತೋರಿಸಿದರು. ಕುದಿಯುವ ಕಾಚಿನ ರಸವನ್ನು ಕುಡಿದರು; ಮೂಗಿನ ಸೊಳ್ಳೆಯಲ್ಲಿ ಮೊಳೆ ಸೇರಿಸಿಕೊಂಡರು; ಕುದಿಯುವ ಸರಾಯಿಯನ್ನು ಕುಡಿದರು; ಉರಿಯುವ ಬೆಂಕಿಯೊಳಗಿಂದ ಪಾರಾದರು, ಕೂದಲು ಕೂಡ ಬಾಡಲಿಲ್ಲ. ಈ ಪ್ರಯೋಗಗಳನ್ನು ಅಲ್ಲಿಯ ದೊಡ್ಡ ದೊಡ್ಡ ಡಾಕ್ಟರರೂ, ರಸಾಯನ ಶಾಸ್ತ್ರಜ್ಞರೂ, ವೃತ್ತಪತ್ರಗಳ ಸುದ್ದಿಗಾರರೂ ಕಣ್ಣಾರೆ ಕಂಡು ಚಕಿತರಾದರು. ಫಕೀರರು ಯಾವದೇ ಪ್ರಕಾರದಿಂದ ಠಕ್ಕುತನವನ್ನಾಚರಿಸುವದಿಲ್ಲೆಂದು ಎಚ್ಚರ ಹೇಳಿಕೆ ಇದೆ. ಇದು ಹೇಗೆ ಸಾಧ್ಯವೆಂಬುದೇ ಗೂಢ !

ಕಾನಡಾವೃತ್ತ.

ಮಿತಿ ಕ್ಷಯ ಸಂ॥ ವೈಶಾಖ ಬ॥ ೪ ಧಿ, ಸೋಮವಾರ.

ಬ್ರಿಟಿಶ ರಾಜ್ಯ.

ಬ್ರಿಟಿಶ ರಾಜ್ಯದಿಂದ ನಮ್ಮೀ ಭರತ ಭೂಮಿಯ ಪರಿಪರಿಯ ಕಲ್ಯಾಣವುಂಟಾಯಿತೆಂದು ಡಂಗುರ ಸಾರಲ್ಪಡುತ್ತದೆ. ಬ್ರಿಟಿಶ ರಾಜ್ಯದಿಂದ ಭಾರತೀಯರು ಸುಧಾರಿಸಿದರು: ಟಪಾಲಾಫೀಸು, ತಾರಾಯಂತ್ರ, ಉಗಿಹಡಗ, ಉಗಿಬಂಡಿ ಮುಂತಾದ ಯಾಂತ್ರಿಕ ಸಾಮುಗ್ರಿಗಳ ಪ್ರಾಪ್ತಿಕೆಯಾಯಿತು, ಕಚ್ಚೆಯುಟ್ಟು ದಿಗಂಬರೋಪಾದಿಯಲ್ಲಿ ಹುಲ್ಲುಗುಡಿಸಲುಗಳಲ್ಲಿ ಕಾಲಹರಣ ಮಾಡುವ ಕಾಡು ಗ್ರಾಮಣಿಗಳು ಬ್ರಿಟಿಶ ರಾಜ್ಯದಲ್ಲಿ ಚಣ್ಣ, ಬೂಟು, ನಿಲುವಂಗಿ, ಬಗಲಂಗಿ, ಪೇಟ ಮುಂತಾದ ಪರಿವಾರದಿಂದ ಯುಕ್ತರಾಗಿ ಮೇಲುಪ್ಪರಿಗೆಯ ಮನೆಗಳನ್ನು ಕಟ್ಟಿಕೊಂಡು ಉಳಕೊಳ್ಳುವ ಸಭ್ಯ ಪುರುಷರಾದರು; ಬ್ರಿಟಿಶ ರಾಜ್ಯಾಧಿಕಾರಿಗಳು ಔದಾರ್ಯದಿಂದ ಹಳ್ಳಿ ಪಳ್ಳಿಗಳಲ್ಲಿಟ್ಟ ಸರಸ್ವತೀ ಮಂದಿರಗಳಿಂದ ವಿದ್ಯೆಗಳಿತ್ತು ಭಾರತೀಯರು ಸಂಪನ್ನರಾದರು, ಬೇಸಾಯ ಬೆಳೆಯಿತು; ಪ್ರಜೆಗಳು ದಿನೇ ದಿನೇ ಅಭಿವೃದ್ಧಿಗೈದರು; ಇತ್ಯಾದಿ ಸ್ತೋತ್ರಪಾಠಗಳನ್ನು ಬ್ರಿಟಿಶ ರಾಜ್ಯದ ಭಟ್ಟಂಗಿಗಳು ಮನದಣಿ ಹಾಡುತ್ತಾರೆ. ಇದೇ ಸಮಯ ಭಾರತೀಯ ಸ್ಥಿತಿಯನ್ನು ಪರ್ಯಾಲೋಚಿಸಿ, ಬ್ರಿಟಿಶರ ದೇಶಬಾಂಧವರಾದ “ಇಂಡಿಪೆಂಡಂಟ ಲೇಬರ ಪಾರ್ಟಿ” ಯೆಂಬ ಸ್ವತಂತ್ರ ಕೂಲಿಕಾರ ಪಕ್ಷದವರು ಪ್ರಕಟಿಸಿದ ವರದಿಯೊಳಗಿನ ಕೆಲವು ಮುಖ್ಯಾಂಶಗಳನ್ನು ನಾವು ನಿವೇದಿಸುವೆವು. ಅವನ್ನು ಸಾಮ್ರಾಜ್ಯದ ಚಾಲಕರಾದ ಅಳರಸರೂ, ಸಾಮ್ರಾಜ್ಯದ ಅಂಧ ಭಕ್ತರಾದ ನಮ್ಮಲ್ಲಿಯ ದೇಶಬಾಂಧವರೂ ಮನವಿಟ್ಟು ವಿಚಾರಿಸಬೇಕು.

ಹಳ್ಳಿ ಪಳ್ಳಿಗಳಲ್ಲಿ ಶಾಲೆಗಳನ್ನೇರ್ಪಡಿಸಿ, ಅಕ್ಷರಶತ್ರುಗಳಾದ ಭಾರತೀಯರನ್ನು ಸುಸಂಸ್ಕೃತ ಮಾಡಿಗೆವೆಂದು ಬ್ರಿಟಿಶರು ಬಡಿವಾರ ಬಡಿಯುತ್ತಿರಲ್ಲವೇ ? ಅದಕ್ಕೆ ಕೇಳಿರಿ ; “ಬ್ರಿಟಿಶ ರಾಜ್ಯವಾಗಿ ೧೫೦ ವರುಷಗಳಾದವು. ಈ ಅವಧಿಯಲ್ಲಿ ೧೦೦೦ಕ್ಕೆ ೭೨ರಷ್ಟು ಮಂದಿಗಳಿಗೆ ಮಾತ್ರ ಓದು-ಬರಹ ಬರುತ್ತಿದೆ. ಬ್ರಿಟಿಶ ದೇಶದಲ್ಲಿ ೧೮೭೦ ಹಾಗು ೧೮೮೦ರ ಮಧ್ಯದಲ್ಲಿ ಉಚಿತವಾಗಿ ಶಿಕ್ಷಣ ಕೊಡಬೇಕೆಂದು ಸಾರ್ವತ್ರಿಕ ಯೋಜನೆಯಾಯಿತು. ಆಗ ೧೦೦೦ಕ್ಕೆ ೪೩೩ ಮಂದಿಗಳು ಶಿಕ್ಷಣ ಹೊಂದುತ್ತಿದ್ದರು. ೧೫ ವರ್ಷಗಳಲ್ಲಿ ಶಾಲೆಯಲ್ಲಿ ಹೋಗತಕ್ಕ ಸಮಸ್ತ ವಿದ್ಯಾರ್ಥಿಗಳೂ ಶಾಲೆಗೆ ಹೋಗಹತ್ತಿದರು. ೧೮೭೫ ನೇ ಇಸ್ವಿಯ ಮುಂಚೆ ಜರ್ಮನ ದೇಶದಲ್ಲಿ ಶಾಲೆಗೆ ಹೋಗುವ ಪ್ರಾಯದ ಹುಡುಗರಲ್ಲಿ ೧೦೦ಕ್ಕೆ ೫೮ರಷ್ಟು ಹುಡುಗರು ಶಾಲೆಗೆ ಹೋಗುತ್ತಿದ್ದರು. ೫೪ ವರ್ಷಗಳಲ್ಲಿ ಈ ಪ್ರಮಾಣವು ೯೬ಕ್ಕೆ ಬೆಳೆಯಿತು; ಇನ್ನು ೪ ವರ್ಷಗಳಲ್ಲಿ ೧೦೦ಕ್ಕೆ ೧೦೦ ವಿದ್ಯಾರ್ಥಿಗಳು ಶಾಲೆಗೆ ಹೋಗಹತ್ತಿದರು. ಬಡೋದೆಯಲ್ಲಿ ಶಿಕ್ಷಣವು ಉಚಿತವಾಗಿ ಕೊಡಲ್ಪಡುತ್ತಿದೆ. ೧೦೦ಕ್ಕೆ ೯೧ರಷ್ಟು ಹುಡುಗರು ಶಾಲೆಗೆ ಹೋಗುತ್ತಾರೆ. ತ್ರಾವಣಕೋರದಲ್ಲಿ ೧೦೦೦ಕ್ಕೆ ೮೧೧ ಹುಡುಗರು ಹಾಗು ೧೦೦೦ಕ್ಕೆ ೬೩೫ ಹುಡುಗಿಯರು ಶಾಲೆಗೆ ಹೋಗುತ್ತಾರೆ. ಮೈಸೂರಿನಲ್ಲಿ ಹುಡುಗ-ಹುಡುಗಿಯರ ಪ್ರಮಾಣವು ಅನುಕ್ರಮವಾಗಿ ೧೦೦೦ಕ್ಕೆ ೪೫೮ ಹಾಗು ೯೭ ಹೀಗೆ ಇರುತ್ತದೆ. ಬಡೋದೆ ಸಂಸ್ಥಾನವು ತಲೆಗೆ ೬। ಆಣೆಯಂತೆ ಖರ್ಚು ಮಾಡಿದರೆ, ಬ್ರಿಟಿಶ ಹಿಂದುಸ್ಥಾನವು ೩ ಆಣೆಯಂತೆ ಖರ್ಚು ಮಾಡುತ್ತದೆ. ಬ್ರಿಟಿಶ ಹಿಂದುಸ್ಥಾನದಲ್ಲಿ ಶಿಕ್ಷಣ ಖಾತೆಯಾಗಿ ೫೯ ವರ್ಷಗಳಾದವು. ಶಾಲೆಗೆ ಹೋಗುವ ಪ್ರಾಯದ ಹುಡುಗರಲ್ಲಿ ೧೦೦೦ಕ್ಕೆ ೫೦೪ ಮಕ್ಕಳು ಮಾತ್ರ ಶಾಲೆಗೆ ಹೋಗುತ್ತಾರೆ. ೧೯೨೪ ನೇ ಇಸ್ವಿಯಲ್ಲಿ ಶಿಕ್ಷಣ ಪಡೆಯಬಹುದಾದ ಹುಡುಗಿಯರ ಸಂಖ್ಯೆಯು ೧೦೦ಕ್ಕೆ ೨ರಂತೆ ಪ್ರಮಾಣ ಬೀಳುತ್ತದೆ.”

ಶಿಕ್ಷಣದಲ್ಲಿ ಕೊರತೆಯಾದರೇನಾಯಿತು ? ಬ್ರಿಟಿಶ ರಾಜ್ಯದಿಂದ ದೇಶದ ಅಭಿವೃದ್ಧಿಯಾಗಲಿಲ್ಲವೇ ? ಎಂದು ಬ್ರಿಟಿಶ ಪಕ್ಷಪಾತಿಗಳು ಕೇಳಬಹುದು. ಅದಕ್ಕೆ ಕೂಲಿಕಾರ ಪಕ್ಷದವರು ನುಡಿಯುವದೇನಂದರೆ:— “ನಗರವಾಸಿಗಳ ಕಡೆಗೆ ನೋಡಿರಿ, ಅಥವಾ ಹಳ್ಳಿಗರ ಕಡೆಗೆ ನೋಡಿರಿ; ಎಲ್ಲಿ ನೋಡಿದಲ್ಲಿ ಭಯಂಕರವಾದ ದಾರಿದ್ರ್ಯವು ಬೇರೂರಿಕೊಂಡಿದೆ. ಸರ್ ವಿಲಿಯಮ್ ಹಂಟರ ಎಂಬೊಬ್ಬ ದೊಡ್ಡ ಎಂಗ್ಲೋ ಇಂಡಿಯನ್‌ರವರ ಹೇಳಿಕೆಯಂತೆ ೪ ಕೋಟಿ ಜನರು ದಿನಾ ಒಪ್ಪೊತ್ತು ಉಂಡು ಕಾಲಹರಣ ಮಾಡುತ್ತಿರುವರು. ಸರ್ ಚಾರ್ಲ್ಸ ಈಲಿಯಟ್ ಎಂಬ ಇನ್ನೊಬ್ಬ ದೊಡ್ಡವರ ಲೆಕ್ಕದಂತೆ ಸರಿ ಅರ್ಧ ಪಾಲು ಬೇಸಾಯಗಾರರು ಇಡೀ ವರ್ಷದಲ್ಲಿ ಒಂದು ದಿನ ಸಹ ಹೊಟ್ಟೆತುಂಬ ಊಟ ಸಿಗದೇ ಆಯುಷ್ಯ ಕಳೆಯುತ್ತಾರೆ. ಸರ್ ಚಾರ್ಲ್‌ಸ್ ಈಲಿಯಟ್‌ರವರ ಲೆಕ್ಕದಂತೆ ಹೊಟ್ಟೆತುಂಬ ಊಟವೆಂದರೆ ಸೆರೆಮನೆಗಳಲ್ಲಿ ಸೆರೆಯಾಳುಗಳಿಗೆ ಕೊಡುವ ಅನ್ನದ ಪರಿಮಾಣವು. ಶ್ರೀ ಗೋಪಾಲಕೃಷ್ಣ ಗೋಖಲೆಯವರ ಲೆಕ್ಕದಂತೆ ೭ ಕೋಟಿ ಬೇಸಾಯಗಾರರಿರುವರು. ಪ್ರೊ। ಜೆಲ್‌ಬರ್ಟ ಸ್ಲೇಟರರವರು, ಹಿಂದುಸ್ಥಾನ ಹಾಗು ವಿಲಾಯತಿಯೊಳಗಿನ ಕೂಲಿಕಾರರ ಸ್ಥಿತಿಯನ್ನು ಅಭ್ಯಾಸಮಾಡಿರುವರು. ಅವರು ಹೇಳುವದೇನಂದರೆ:— ಈಗ ತಲೆಗೆ ದಿನಾ ೪॥ ಆಣೆ ಉತ್ಪನ್ನ ಸಿಗುತ್ತದೆ. ಬಡವರ, ದೊಡ್ಡವರ ಸರಾಸರಿ ಹಿಡಿದು ಲೆಕ್ಕ ಮಾಡಿದರೆ, ಅದರಲ್ಲಿ ೩ ಪಾಲಿನಷ್ಟು ರಕಮು ಊಟದ ಸಾಮುಗ್ರಿಯಾದ ಕಾಳು-ಕಡಿಗಳಾಗಿ ಖರ್ಚಾಗುತ್ತದೆ. ಅಂದರೆ ಸಾಮಾನ್ಯವಾಗಿ ಒಂದು ಮುಕ್ಕಾಲು ಆಣೆ ಕಾಳುಕಡಿಯಿಂದ ಜನರು ನಿರ್ವಾಹ ಮಾಡುತ್ತಾರೆ. ಇದರ ಮೇಲಿಂದ ಬಡ ಜನರ ಸ್ಥಿತಿಯು ಅರಿವಾಗುವಂತಿದೆ. ಮದ್ರಾಸದೊಳಗಿನ ಅಸ್ಪೃಶ್ಯ ಕೇರಿಯೊಳಗಿನ ಮನೆತನಗಳ ವಿಚಾರ ಮಾಡಿದರೆ, ಲೆಕ್ಕಗೆ ೫। ಆಣೆ ಕೂಲಿ ಬೀಳುತ್ತದೆ; ಅಂದರೆ ಕಾಳು-ಕಡಿ ಕೊಂಡ ಬಳಿಕ ಅರ್ಧಾಣೆ ಉಳಿದರೆ, ಹೆಚ್ಚಾಯಿತು. ಗೋದಾವರಿ ನದಿಯ ಪ್ರದೇಶದಲ್ಲಿ ಮಾಡಿ ಪರ್ಯಾಲೋಚನದಿಂದ ತಲೆಗೆ ೧ ಆಣೆ ಉತ್ಪನ್ನ ಬೀಳುತ್ತದೆಂದು ಲೆಕ್ಕವಾಗಿದೆ. ಈ ಜನರು ದಕ್ಷಿಣ ಹಿಂದುಸ್ಥಾನದಲ್ಲಿ ಭತ್ತದ ಪೈರು ಬೆಳೆಸುತ್ತಾರೆ. ಇವರಿಗೆ ಕಾಳು-ಕಡಿಯಿಂದಲೂ, ನಾಣ್ಯದಿಂದಲೂ ಕೂಲಿ ಕೊಡುತ್ತಾರೆ. ಆದರೆ ಇದರಿಂದ ಅವರ ಮನೆಗಳೊಳಗಿನ ಹೆಂಡರು-ಮಕ್ಕಳ ಸಂಸಾರ ಮಾಡುವದು ಕಠಿಣವಾಗುತ್ತದೆ; ಈ ಕಾರಣದಿಂದ ಮಕ್ಕಳು ಸಾಯುತ್ತಾರೆ ; ಅವರು ಅನೇಕಾವರ್ತಿ ಉಪವಾಸ ಬೀಳುತ್ತಾರೆ; ಕೆಲಸವಿಲ್ಲದಾಗ ಗುಡಿಸಲು ಕಟ್ಟಿಕೊಳ್ಳುತ್ತಾರೆ; ಉರುವಲ ಕಟ್ಟಿಗೆಯನ್ನು ಸಂಗ್ರಹಿಸಿ ಕೊಳ್ಳುತ್ತಾರೆ; ಉಡಿಗೆ-ತೊಡಿಗೆಗಳು ಅವರಿಗೆ ಬೇಡ; ಯಾವಾಗಲೂ ಬಿಸಿಲಿನಲ್ಲಿಯೇ ಇರುತ್ತಾರೆ; ಈ ಮೂಲಕವಾಗಿಯೇ ಅವರು ಬದುಕಿಕೊಂಡಿರುವರು.”

ಬೇಸಾಯ ಖಾತೆಯವರು ಬೇಸಾಯೋದ್ಧಾರಕ್ಕಾಗಿ ಕೈಕೊಂಡ ಉಪಾಯಗಳಿಂದ ಬೇಸಾಯದ ಏಳ್ಗೆಯಾಯಿತೆಂದು ಬೇಸಾಯ ಪ್ರಯೋಗ ಹೊಲದವರು ವಾದಿಸಬಹುದು. ಬೇಸಾಯದ ಸ್ಥಿತಿ ಕೇಳಿರಿ. “ಮಿ। ಡಬ್ಲ್ಯೂ. ಎಚ್. ಥೋಮಸನ ಎಂಬವರು ನಮ್ಮ ಒಬ್ಬ ಅಳರಸರಿದ್ದರು. ೧೯೩೧ನೇ ಇಸ್ವಿಯಲ್ಲಿ ಆದ ಖಾನೇಸುಮಾರಿಯಂತೆ ಮನೆಗೆ ಸಾಮಾನ್ಯವಾಗಿ ೨ ಎಕ್ರೆ ೬ ಗುಂಟೆ ಹೊಲ ಬರುತ್ತದೆ. ಈ ಹೊಲದಲ್ಲಿ ಕುಟುಂಬದೊಳಗಿನ ಅನೇಕ ಪಾಲುಗಾರರಿರುವರೆಂಬದನ್ನು ಲಕ್ಷದಲ್ಲಿ ಡತಕ್ಕದ್ದು. ಇವರಿಗ ಬೇರೆ ಹೊಲಗಳಿಲ್ಲ. ವರ್ಷಕ್ಕೆ ೬ ತಿಂಗಳು ಜನರಿಗೆ ಕೆಲಸವಿಲ್ಲ. ಬಂಗಾಲದಲ್ಲಂತೂ ಹೊಲಗಳು ಸಣ್ಣನೂರಾಗಿವೆ. ಬೇಸಾಯಗಾರರಿಗೆ ತುಂಬ ಕೆಲಸವಿಲ್ಲ. ಬೇಸಾಯವನ್ನು ಸಾಗಿಸಿ ಬೇರೆ ಕೆಲಸ ಮಾಡಬೇಕೆಂದರೆ ಬೇರೆ ಕೆಲಸವೂ ಇಲ್ಲ. ಮದ್ರಾಸದಲ್ಲಿ ಬೇಸಾಯಗಾರರು ಸರಾಸರಿಯಿಂದ ೧೫೦ ದಿನದ ಕೆಲಸ

ವನ್ನು ವರ್ಷ ತಿಂಬ ಮಾಡುತ್ತಿರಲಿಲ್ಲ. ಪಿ। ಕಲ್ಬರ್ಟರವರು ಲೆಕ್ಕ ಮಾಡಿರುವರು.

ಬ್ರಿಟಿಶರು ಸುಧಾರಿಸಿದ ರಾಜ್ಯಭಾರವನ್ನು ೫೦ ವರ್ಷಗಳ ವರೆಗೆ ನಡಿಸಿ, ಸಾಧಿಸಿದ ಪ್ರಜಾಕಲ್ಯಾಣದ ಕಥೆಯನ್ನು ಆಳರಸರಿಗೆ ಮಾನ್ಯ ಮಾಡಬೇಕಾದ ಅಧಿಕಾರಿಗಳ ಲೆಖ್ಖದಂತೆ ಕೂಲಿಕಾರ ಪಕ್ಷದವರು ಸ್ವತಂತ್ರವಾಗಿ ಪ್ರಕಟಿಸಿದ ವರದಿಯೊಳಗಿನ ತಥ್ಯಾಂಶಗಳಿವು. ಇನ್ನೂ ಅನೇಕ ಪ್ರತಿಯ ಮಾಹಿತಿಯು ಆ ವರದಿಯಲ್ಲಿ ಸಿಗಬಹುದು. ಪ್ರಜೆಗಳ ಉನ್ನತಿಯ ಧೋರಣವನ್ನು ತಿಳಿಯಲಿಕ್ಕೆ ನಾವು ಮೇಲೆ ಉಲ್ಲೇಖಿಸಿದ ಈ ಮುಖ್ಯಾಂಶಗಳೇ ಸಾಕು. ಇದರ ಮೇಲಿಂದ ಆಳರಸರ ರಾಜ್ಯಭಾರವು ಪ್ರಜಾಕಲ್ಯಾಣದ ಗುರಿತಪ್ಪಿ ಮಾರ್ಗಕ್ರಮಣ ಮಾಡುತ್ತದೆಂದು ಸ್ಪಷ್ಟವಾಗಿ ಹೇಳಬಹುದು. ವರದಿಯಲ್ಲಿ ಹಿಂದುಸ್ಥಾನ ಸರಕಾರಕ್ಕೆ ತೆರಿಗೆಯನ್ನು ಬಿಟ್ಟು ಹಾಕುವ ಯಂತ್ರವೆಂದು ಸಂಬೋಧಿಸಲಾಗಿದೆ; ಸೈನ್ಯಯಂತ್ರವೆಂದೂ ಉಲ್ಲೇಖಿಸಲಾಗಿದೆ. ಈ ಎರಡು ನಿರ್ದೇಶಗಳಿಂದ ನಮ್ಮ ಹಿಂದುಸ್ಥಾನ ಸರಕಾರವು ನಡಿಸುವ ವ್ಯಾಪಾರದ ದಿಕ್ಕು ತೋರಿಸಲ್ಪಡುತ್ತದೆ. ಒಂದು ಬದಿಯಿಂದ ತೆರಿಗೆಗಳನ್ನು ಸಂಗ್ರಹಿಸಿ, ಅದನ್ನು ಸೈನ್ಯಕ್ಕೆ ಮನದಣಿ ಖರ್ಚು ಮಾಡುವದೇ ನಮ್ಮ ಬ್ರಿಟಿಶ ಆಳರಸರ ಕಾರಭಾರದ ಪ್ರಮುಖ ವ್ಯಾಪಾರವು. ಇಂಥ ಧೋರಣದಿಂದ ಪ್ರಜೆಗಳು ಅಭಿವೃದ್ಧಿಯಾಗುವದಾಗಲೀ, ಸುಸಂಪನ್ನರಾಗುವದಾಗಲೀ ಶಕ್ಯವಿರುವದೇನು !

ಸ್ಫುಟ ಸೂಚನೆಗಳು.

೧. ನಮ್ಮ ಮುಂಬಯಿ ಪ್ರಾಂತಾಧಿಪರ ಬದ್ಲಿ ನೋಡುತ್ತಿದ್ದ ವಿಲ್ಸನ್ನರವರಿಗೂ, ಮಹಾತ್ಮರಿಗೂ ಸದ್ಯಕ್ಕೆ ಮಹಾಬಲೇಶ್ವರದಲ್ಲಿ ಮಾತುಕಥೆಯಾಯಿತೆಂಬ ಸುದ್ದಿಯನ್ನು ವಾಚಕರು ಅರಿತಿರುವರು. ಈ ಮಾತುಕಥೆಯಲ್ಲೇನು ನಡೆಯಿತು? ಎಂಬುವನ್ನು ಮಹಾತ್ಮರು ತಮ್ಮ 'ಯಂಗ ಇಂಡಿಯಾ' ಪತ್ರಿಕೆಯಲ್ಲಿ ಪ್ರಕಟಿಸಿರುವರು. ಬೇಸಾಯದ ಕಮೀಶನ್ನಿನ ಕುರಿತು ಪ್ರಾಂತಾಧಿಪರಿಗೂ, ಮಹಾತ್ಮರಿಗೂ ಸಂಭಾಷಣವಾಯಿತು. "ನಾನು ಇನ್ನೂ ಅಸಹಯೋಗಿಯಿದ್ದೇನೆ. ಅಸಹಯೋಗದ ಧೋರಣವನ್ನು ಇನ್ನೂ ನಾನು ಪುರಸ್ಕರಿಸುತ್ತಿದ್ದೇನೆ. ಕಮೀಶನ್ನಿನಲ್ಲಿ ನನ್ನ ವಿಶ್ವಾಸವಿಲ್ಲ," ಇತ್ಯಾದಿ ಮಹಾತ್ಮರು ಅಭಿಪ್ರಾಯಪಟ್ಟಾಗ್ಯೂ, ಪ್ರಾಂತಾಧಿಪರು ಮಹಾತ್ಮರ ಪ್ರತ್ಯಕ್ಷ ಭೆಟ್ಟಿಯನ್ನೇ ಬಯಸಿದ್ದರಿಂದ, ಮಹಾತ್ಮರು ಮಹಾಬಲೇಶ್ವರಕ್ಕೆ ಹೋದರು. ಅಲ್ಲಿ ಮಹಾತ್ಮರಿಗೂ, ಪ್ರಾಂತಾಧಿಪರಿಗೂ ಎರಡು ದಿನಗಳ ವರೆಗೆ ಸಂಭಾಷಣ ನಡೆಯಿತು. ಮಹಾತ್ಮರು ಖೈರಾಟಿಯನ್ನೂ, ಗೋರಕ್ಷಣವನ್ನೂ ಪ್ರತಿಪಾದಿಸಿ, ಬೇಸಾಯ ಕಮೀಶನ್ನಿನ ಕಾರ್ಯವನ್ನೂ ನಿರ್ದೇಶಿಸಿದರಂತೆ. ಪ್ರಾಂತಾಧಿಪರೊಡನೆ ಎರಡು ದಿವಸಗಳ ವರೆಗೆ ನಡೆದ ಸಂಭಾಷಣವನ್ನು ಮಹಾತ್ಮರು ಒಂದೆರಡು ವಾಕ್ಯಗಳಲ್ಲಿ ಹೇಳಿಬಿಟ್ಟಿರುವರು. ಖೈರಾಟಿಯ ಬಗ್ಗೆ ಪ್ರಾಂತಾಧಿಪರ ಅಂಬೋಣವೇನು? ಗೋರಕ್ಷಣಕ್ಕಾಗಿ ಯಾವ ಉಪಾಯಯೋಜನೆ ಮಾಡಲು ಮಹಾತ್ಮರು ಸೂಚಿಸಿದರು? ಪ್ರಾಂತಾಧಿಪರಿಗೆ ಯಾವದು ಮಾನ್ಯವಾಯಿತು? ಮುಂತಾದ ಹಕೀಕತನ್ನು ಅರಿತುಕೊಳ್ಳಲು ಪ್ರಜೆಗಳು ಕುತೂಹಲಪಡುತ್ತಿರುವದು ಸಹಜವು.

---

೨. ಪ್ರಾಂತಾಧಿಪರು ಆಳರಸರ ವಾಟಕರಿದ್ದಾರೆ. ಮಹಾತ್ಮರಂತೂ ಅಸಹಯೋಗದ ಅಧಿಪತಿಗಳು. ಹೀಗಿದ್ದು, ಮಹಾತ್ಮರು ಅವರ ದರ್ಶನಕ್ಕೆ ಹೋಗುವದು ಅಸಹಯೋಗದ ದುರ್ದೈವವಲ್ಲವೇ? ಮುಂತಾಗಿ ಆಕ್ಷೇಪಗಳನ್ನು ಪುಣೆಯೊಳಗಿನ ಕೆಲ ಅಸಹಯೋಗಿ ಪಕ್ಷದವರು ಮಹಾತ್ಮರೊಡನೆ ಪ್ರದರ್ಶಿಸಿ, ಅವರಿಗೆ ಇದರ ಸ್ಪಷ್ಟೀಕರಣ ಮಾಡಹೇಳಿದರು. ಆಗ ಮಹಾತ್ಮರು ಅಹಿಂಸಾ-ಪ್ರಧಾನ ಅಸಹಯೋಗದ ಮರ್ಮವನ್ನು ಬಲು ವಿಶದವಾಗಿ ಬಣ್ಣಿಸಿರುವರು. ಅಹಿಂಸಾಪ್ರಧಾನ ಅಸಹಯೋಗವನ್ನು ಪುರಸ್ಕರಿಸುವವರು ಅಸಹಯೋಗ ಮಾಡುವ ಸಂಸ್ಥೆಯಿಂದ ಯಾವದೇ ಪ್ರಕಾರದ ಕಲ್ಯಾಣವನ್ನು ಮಾಡಿಕೊಳ್ಳಲಾಗದು. ಅಂದರೆ, ಅಸಹಯೋಗಿಗಳು ಶಾಲೆಗಳನ್ನು ತ್ಯಜಿಸುತ್ತಾರೆ; ಕೋರ್ಟುಗಳನ್ನು ಬಹಿಷ್ಕರಿಸುತ್ತಾರೆ; ಕಿತಾಬುಗಳನ್ನು ತ್ಯಜಿಸುತ್ತಾರೆ; ಕಾಯಿದೆ ಕೌನ್ಸಿಲುಗಳನ್ನು ಪ್ರವೇಶಿಸುವದಿಲ್ಲ; ಅಧಿಕಾರಸ್ಥಾನಗಳನ್ನು ಸ್ವೀಕರಿಸುವದಿಲ್ಲ. ಅಸಹಯೋಗ ಮಾಡುವ ರಾಜ್ಯಪದ್ಧತಿಯಿಂದ ಏರ್ಪಡಿಸಿದ ಕಲ್ಯಾಣ ಮಾರ್ಗಗಳನ್ನೆಲ್ಲ ತ್ಯಜಿಸಲು ಅಸಹಯೋಗಿಗಳು ಬದ್ಧರಾಗಿರುವರು. ಸದ್ಯಕ್ಕೆ ನಮಗೆ ದಿನೇ ದಿನೇ ಎಸಗುತ್ತಿರುವ ಪರದೇಶಿ ಜರಿಪೆಯನ್ನು ಬಹಿಷ್ಕರಿಸಲು ಅಸಹಯೋಗಿಗಳು ಟೊಂಕ ಕಟ್ಟಿರುವರು. ಇನ್ನೂ ಅನೇಕ ಪ್ರಕಾರಗಳಿಂದ ಅಸಹಯೋಗಿಗಳು ಅಸಹಯೋಗ ಮಾಡಬಹುದು. ನಮ್ಮಲ್ಲಿ ಸಾಮರ್ಥ್ಯವಿಲ್ಲದ್ದರಿಂದ ನಮ್ಮ ಅಸಹಯೋಗದ ಕಕ್ಷೆಯು ಇಷ್ಟಕ್ಕೇ ನಿಯಂತ್ರಿಸಲಾಗಿದೆ. ಮೇಲೆ ನಮೂದಿಸಿದ ಪ್ರಯೋಜನಗಳನ್ನು ಪಡಕೊಳ್ಳಲು ನಾನು ಅಧಿಕಾರಿಯ ಸಹವಾಸವನ್ನು ಬಗೆದರೆ, ನಾನು ಸಹಕಾರಿಯಾದೆನೆಂದು ಹೇಳಬಹುದು. ಆದರೆ, ಖಾದಿಯ ಪುರಸ್ಕಾರಾರ್ಥವಾಗಿ, ಸರಕಾರಿ ನೌಕರಿಯ ತ್ಯಾಗಾರ್ಥವಾಗಿ ಅಥವಾ ಸರಕಾರಿ ಶಾಲೆಗಳೊಳಗಿಂದ ಹುಡುಗರನ್ನು ಹೊರತೆಗೆಯುವದಕ್ಕಾಗಿ ನಾನು ಅಧಿಕಾರಿಯ ಬಳಿ ಹೋದಲ್ಲಿ ಅಸಹಯೋಗವನ್ನೇ ನಾನು ಆಚರಿಸುತ್ತೇನೆ; ಹೊರತು ನಾನು ಸಹಕಾರಿಯಾಗುವದಿಲ್ಲ. ಮಹಾತ್ಮರು ಅಸಹಯೋಗದ ಅರ್ಥವನ್ನು ಚಿತ್ತವೇಧಕವಾಗಿ ಸ್ಫುಟಮಾಡಿರುವರು. ಅಧಿಕಾರಿಯ ದರ್ಶನಮಾತ್ರದಿಂದ ಯಾರೂ ಸಹಕಾರಿಯಾಗುವದಿಲ್ಲ. ಅಧಿಕಾರಿಯ ದರ್ಶನ ಕೇವಲವು ಅಸಹಯೋಗದ ಪ್ರಸಾರವಾಗಿದ್ದರೆ, ಆ ಭೆಟ್ಟಿಯಿಂದ ಅಸಹಯೋಗಿಯು ಅಸಹಯೋಗನೇ ಪ್ರಾಮುಖ್ಯವಾಗಿ ಸಿದ್ಧವಾಗುತ್ತದೆ. ಮಹಾತ್ಮರ ಮೇಲೆ ಆಕ್ಷೇಪವನ್ನೆತ್ತುವವರಿಗೂ, ಅಸಹಯೋಗದ ಮರ್ಮ ತಿಳಿಯದವರಿಗೂ ಇದರಿಂದ ಬೋಧವಾಗುವಂತಿದೆ.

---

೩. ರಾಷ್ಟ್ರೀಯ ಮಹಾ ಕಾಂಗ್ರೆಸಿನ ಸಭಾಸದರು ಯಾರು? ಎಂಬ ಪ್ರಶ್ನವನ್ನು ಮಹಾತ್ಮರು ನಿರ್ದೇಶಿಸಿರುವರು? "ನಾನು ರಾಷ್ಟ್ರೀಯನಿದ್ದೇನೆ," ಎಂದು ಡಂಗುರ ಸಾರುವವರೆಲ್ಲರೂ ರಾಷ್ಟ್ರೀಯರಲ್ಲ. "ರಾಷ್ಟ್ರೀಯ ಸಭೆಯ ನಿರ್ಧಾರವನ್ನು ಆಚರಿಸುವವರು ಮಾತ್ರ 'ರಾಷ್ಟ್ರೀಯ' ಎಂಬ ಅಭಿಧಾನಕ್ಕೆ ಅರ್ಹರು." ಮಹಾತ್ಮರ ವ್ಯಾಖ್ಯೆಯನ್ನು ರಾಷ್ಟ್ರೀಯರೆಂದು ಮೆರೆಯುವವರೆಲ್ಲರೂ ಚನ್ನಾಗಿ ಲಕ್ಷ್ಯದಲ್ಲಿಡತಕ್ಕದ್ದು. ಶುಭ್ರ ಟೊಪ್ಪಿಗೆಯನ್ನೊಂದು ಧರಿಸಿ ಕೃಷ್ಣಕಾರಸ್ಥಾನಗಳನ್ನು ನಡಿಸಿ ಆಳರಸರ ಬಯಕೆಯನ್ನು ಪೂರ್ಣ ಮಾಡುವವರು ಅಸಹಯೋಗಿಗಳಲ್ಲ. ನಖಶಿಖಾಂತ ಶುಭ್ರ ಖಾದಿಯನ್ನು ಧರಿಸಿದರೂ, ಇವರು ಅಸಹಯೋಗಿಗಳಾಗುವದಿಲ್ಲ. ನಮ್ಮ ಸ್ಕೂಲ ಬೋರ್ಡಿನ ಇಲೆಕ್ಷನಿನಲ್ಲಿ ಸರಕಾರಿ ಪೆನ್ಶನರರಿಗೆ ಬೆಂಬಲ ಕೊಟ್ಟ ಹೊನ್ನಾವರದ ಶ್ರೀ॥ ಶಿವರಾವ ಶಾಸ್ತ್ರೀ, ಸಿದ್ಧಾಪುರದ ಶ್ರೀ॥ ಗೋಪಾಲರಾವ ದೇವ, ಬಡಗಣಿಯ ಶ್ರೀ॥ ರಾಮ ಹೆಗಡೆ ಮೊದಲಾದವರೇ ಮಹಾತ್ಮರ ವ್ಯಾಖ್ಯೆಯಂತೆ ಅಸಹಯೋಗಿಗಳಲ್ಲವೆಂಬುದು ಸಿದ್ಧವಾಗುತ್ತದೆ. ಇವರ ಅಸಹಯೋಗವು ಬರೇ ಬಾಯುಡಿಕೆಯೆಂಬುದೂ ತಿಳಿದು ಬರುವ ಹಾಗಿದೆ. ಶ್ರೀ॥ ಶಾಸ್ತ್ರೀ ಮೊದಲಾದ 'ಅಸಹಯೋಗಿ'ಗಳು ತಮ್ಮ ಈ ಕೃತ್ಯವನ್ನು ಹೇಗೆ ಸಮರ್ಥಿಸುತ್ತಾರೆಂದು ನಮಗೊಂದು ಖುಲಾಸೆ ಕಳಿಸಿದರೆ, ನಾವು ಆನಂದದಿಂದ ಪ್ರಕಟಿಸುವೆವು.

---

೪. ಮುಂಬಯಿ ಸರಕಾರವು ಹಾಲಿನಲ್ಲಿ ನೀರು ಬೆರಿಸಿ ಮಾರುವವರಿಗೆ ರೂಪಾಯಿ ೧೦೦ ರಿಂದ ೫೦೦ ರ ವರೆಗೆ ಶಾಸನವಾಗುವದೆಂದು ಜಾಹೀರಪಡಿಸಿರುವದು. ಈ ಹುಕುಮಿನಿಂದ ಪ್ರಜಾಹಿತವಾಗುವದೆಂದು ನಮಗನಿಸುವದಿಲ್ಲ. ಆದಾಗಿ ವಿಚಾರ ಮಾಡಿದರೆ, ಇದರಿಂದ ಪ್ರಜೆಗಳಿಗೆ ಹಾನಿಯಾಗುವ ಸಂಭವವು ವಿಶೇಷವಿದೆ. ದನಕರುಗಳ ಸಂಖ್ಯೆಯು ಅತ್ಯಲ್ಪವಿದ್ದು, ಅವುಗಳಿಂದ ಪ್ರಜೆಗಳಿಗೆ ಎಂದೂ ಸಾಕಷ್ಟು ಹಾಲು ಪ್ರಾಪ್ತಿಯಾಗುವ ಹಾಗಿಲ್ಲ. ಗೋವುಗಳಂತೂ ದಿನೇ ದಿನೇ ತಗ್ಗುತ್ತಿರುವವು. ಸಾವಿರಾರು ದನಕರುಗಳು ದೇಶಾಂತರಕ್ಕೆ ರವಾನಾಗುತ್ತಿವೆ. ಲಕ್ಷಾವಧಿ ದನಗಳ ಕೊಲೆಯಾಗುತ್ತಿದೆ. ಆ ಕುರಿತು ಕಾಯಿದೆಯ ಪ್ರತಿಬಂಧವಿಲ್ಲ. ಗೋರಕ್ಷಣದ ಬಗ್ಗೆ ಕಾಯಿದೆ ಮಾಡದೆ ಹಾಲಿನಲ್ಲಿ ನೀರು ಬೆರಿಸಿದರೆ ಶಾಸನ ಮಾಡುವದರಿಂದ ಹಾಲು ಹೆಚ್ಚಾಗಿ ಸಿಕ್ಕೀತೇನು? ಕಾಯಿದೆಯಂತೆ ಗೌಳಿಗರು ಹೆದರಿ ಹಾಲಿನಲ್ಲಿ ನೀರು ಬೆರಿಸದಿದ್ದರೆ, ನಾವು ಮನೆಯಲ್ಲಿ ನೀರು ಹಾಕಿ ಕುಡಿಯಬೇಕಾಗುವದು. ಹಾಲಿನ ಪರಿಣಾಮವೇನು ಮಿಗಿಲಾಗುವದಿಲ್ಲ. ಇದೊಂದು ವಿಚಾರವಾಯಿತು.

---

೫. ಈ ಶಾಸನದಿಂದ ಹಾಲಿನ ಗುಣವಾದರೂ ಮಿಗಿಲಾಗುವದೆಂದು ನಮಗೆ ತೋರುವದಿಲ್ಲ. ಹಾಲಿನ ಪೂರೈಕೆಯು ಕಡಿಮೆ ಇದ್ದು, ಬೇಡಿಕೆಯು ಹೆಚ್ಚಿದ್ದಾಗ ಗೌಳಿಗರಿಗೆ ನೀರು ಬೆರಿಸುವದು ಸಹಜ ಪ್ರವೃತ್ತಿಯು. ಬೆಂಕಿಯ ಮುಂದೆ ಇಟ್ಟ ಬೆಣ್ಣೆಯನ್ನು ಕರಗದಂತೆ ಉಪಾಯಯೋಜನೆ ಮಾಡುವದು ಸಹಜಸಾಧ್ಯವೇ? ಇದರಿಂದ ಈ ಹುಕುಮನ್ನು ಅಮಲಬಜಾವಣಿ ಮಾಡುವ ಅಮಲದಾರರಿಗೆ ಚಲೋ ಕಾಲ ಸಿಗಲಿಕ್ಕದೆ ಇಲ್ಲ. ಹಾಲಿನ ವ್ಯಾಪಾರದ ಮೇಲೆ ಕೊಸರು ಹೇರೆ ಬಂದು ಹಾಲು ತುಟ್ಟಿಯಾಗುವದು. ಕಾಯಿದೆಯಂತೆ ಹಾಲಿನಲ್ಲಿ ನೀರು ಇಲ್ಲವೆಂದು ಸಿದ್ಧಾಂತವಿರುವದರಿಂದ ಹಾಲಿನ ದರವನ್ನೇರಿಸಲಿಕ್ಕೆ ಕಾಯಿದೆಯಿಂದ ಸುಲಭವಾಗಿದೆ. ನಮ್ಮ ಆಳರಸರು

ಕೈಕೊಳ್ಳುವ ಪ್ರಜಾಕಲ್ಯಾಣದ ಉಪಾಯ ಯೋಜನೆಯು ಇದೊಂದು ಉದಾಹರಣೆ. ಅದನ್ನು ಬೇಗ ಇದನ್ನು ಕಾರ್ಯಗತಿಸಿ ಗೋರಕ್ಷಣಕ್ಕಾಗಿ ಅವಶ್ಯವಿರುವ ಕಾಯಿದೆಯನ್ನು ಸರಕಾರವು ಕೈಕೊಳ್ಳಬೇಕಾಗಿ ನಾವು ಆಗ್ರಹದಿಂದ ಸೂಚಿಸುತ್ತೇವೆ. ಹಾಲಿನ ಗುಣವನ್ನು ಹೆಚ್ಚಿಸುವ ಉಪಾಯವು ಗೋರಕ್ಷಣವೇ. ದನಕರುಗಳು ಪುಷ್ಟವಾದರೆ, ದಷ್ಟ, ನಿರ್ಮಲ ಹಾಲು ದೊರಕದಿದ್ದರೆ ಹಾಲಿನಲ್ಲಿ ಯಾರಾದರೂ ನೀರನ್ನು ಬೆರೆಸುವರೆ!

ಸ್ಥಾನಿಕ ವೃತ್ತಾಂತ.

ಕುಮಟಾ—ಬಿಸಿಲು ಕಾಯುತ್ತದೆ. ಬಾವಿಗಳಲ್ಲಿ ಬತ್ತಿಕೊಂಡವು, ಅಕ್ಕಿಯ ದರ ಏರಿತು. ಹುಲ್ಲಿನ ದರವು ಮಿತಿಮೀರಿ ಏರಿದೆ.

ಶನಿವಾರ ತಾ. ೧೯ನೇಗೆ ಬ್ರಹ್ಮಚಾರಿ ಆಶ್ರಮದ ಪಟ್ಟ ಬ್ರಹ್ಮಚಾರಿಗಳು ಹೆಗಡೆಯ ಶ್ರೀ ಶಾಂತಿಕಾ ಪರಮೇಶ್ವರಿ ದೇವಸ್ಥಾನದಲ್ಲಿ ಕೀರ್ತನ ಮಾಡಿದರು. ದಾಸಬೋಧ ಗ್ರಂಥದ ಮಾರಾಟವೂ ಆಯಿತು. ಊರಲ್ಲಿ ಸುಮಾರು ೩೦ ರೂಪಾಯಿಗಳು ದಾಸಬೋಧ ಕಾರ್ಯಕ್ಕೆ ದೊರೆತವು. ಇತ್ಯಾದಿ ಹಕೀಕತ್ತನ್ನು ಹೆಗಡೆಯವರೊಬ್ಬರು ತಿಳಿಸುತ್ತಾರೆ.

ಇಲ್ಲಿಯ ಅರ್ಬನ್ ಬೇಂಕಿನ ಸಭಾಸದರ ಸಾಧಾರಣ ಸಭೆಯು ಇಲ್ಲಿಯ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ನಿನ್ನೆ ನೆರೆಯಿತು. ಕಳೆದ ಸಾಲಿನ ರಿಪೋರ್ಟು ಮಂಜೂರಾಯಿತು. ಕಳೆದ ವರ್ಷದ ಕಾರ್ಯಕಾರಿ ಮಂಡಳದಲ್ಲಿ ರಾ। ಎನ್ ಎಸ್. ಪೈರವರ ಬದಲು ರಾ। ಜೇ. ಪಿ. ಗಾವಸ್ಕರ ಹಾಗು ಕ್ವಾ। ಶ್ರೀ। ಶಾನಭಾಗ ರ ಬದಲು ವಿ। ಸಿದ್ದೀಕ ಆಬ್ದುಲ್ಲ ಹಸನ ವಲ್ಲದ ಹಾಗೂ ಸನಟ ಹೀಗೆ ಸ್ವಯಣಾ(?)ಯಾಗಿ ಕಾರ್ಯಕಾರಿ ಮಂಡಳದ ರಚನೆಯಾಯಿತು. ಹಾಲಿ ಗಾರರಿಗೆ ಶೇಕಡಾ ೬ ರಂತೆ ಲಾಭ ಹಂಚಬೇಕೆಂದು ಗೊತ್ತಾಗಿದೆ.

ನೆಲ್ಲೀಕೇರಿಯಲ್ಲಿ ಕಾಲರಾ ಪ್ರಾರಂಭವಾಗಿ ೩ ಮರಣಗಳು ಸಂಭವಿಸಿದವು. ಊರಲ್ಲಿ ವಾಂತಿ, ಜ್ವರ, ಭೇದಿ ಮುಂತಾದ ರೋಗಗಳು ಉಂಟಾಗಿವೆ.

ಸಾಭಾರ ಸ್ವೀಕಾರ.

ನಂದಿನೀ:—(ಮಾಸಪತ್ರಿಕೆ) ವೈಶಾಖ ಸಂಚಿಕೆ. ಸಂಪಾದಕ:- ಶ್ರೀ। ನಾರಾಯಣ ಶಾಸ್ತ್ರೀ ಭಟ್ಟ. ಪ್ರಕಾಶಕ:- ಶ್ರೀ। ರಾಮಾ ಶಿರಸಿ ಭಟ್ಟ ಸಿದ್ದೇಶ್ವರ. ವಾರ್ಷಿಕ ವರ್ಗಣಿ ರೂಪಾಯಿ ೩೦೦ ಮಾತ್ರ.

ವೀರಶೈವ ಧರ್ಮಪ್ರಕಾಶಿಕೆ:— ಧಾರ್ಮಿಕ ಮತ್ತು ಸಾಮಾಜಿಕ ಮಾಸಿಕ ಪತ್ರಿಕೆಯ ಜ್ಯೇಷ್ಠ-ಆಗಸ್ಟ ತಿಂಗಳ ಸಂಚಿಕೆ. ಸಂಪಾದಕ ಮತ್ತು ಪ್ರಕಾಶಕ:- ಶ್ರೀ। ತೆಲಗಿ ಹರಪನಹಳ್ಳಿ ಮಠದ ಬ್ರ॥ ಶ್ರೀ। ಸಿದ್ಧಲಿಂಗ ತೋಳೆಬಸವ ಶಾಸ್ತ್ರಿಗಳು, ಹರಪನಹಳ್ಳಿ ಜಿಲ್ಲಾ ಬಳ್ಳಾರಿ. ಶ್ರೀ। ಶಿವಾನಂದ ಗ್ರಂಥಾಲಯ, ಹರಪನಹಳ್ಳಿ ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ರೂ. ೨॥

ರಿಪೋರ್ಟ— ಮುದ್ದೇಬಿಹಾಳದ ಶ್ರೀ ಬಸವೇಶ್ವರ ಸಂಸ್ಥೆಯ ೫ ನೇ ವರ್ಷದ ರಿಪೋರ್ಟ. ಪ್ರಕಾಶಕ:- ಶ್ರೀ। ಸಂಗಪ್ಪಾ ಗುರುಲಿಂಗಪ್ಪಾ ಮೋಟಗಿ, ಸಕ್ರೆಟರಿ, ಶ್ರೀ। ಬಸವೇಶ್ವರ ಸಂಸ್ಥೆ ಮುದ್ದೇಬಿಹಾಳ.

ಲೋಕರಹಸ್ಯ— ಎಪ್ರಿಲ್ ತಿಂಗಳ ಸಂಚಿಕೆ. ಸಂಪಾದಕ ಮತ್ತು ಪ್ರಕಾಶಕ.- ಶ್ರೀ। ಶೇಷಗಿರಿರಾವ, ಪೀರ್‌ರಾಜೇ ಬ್ರಿಜ್ ಬಿ. ಕೊತ್ತಗುಡ. ವಾರ್ಷಿಕ ಚಂದಾ ರೂಪಾಯಿ ೨-೫೦

ಶಿರಸಿ—ಇಲ್ಲಿಯ ಅರ್ಬನ್ ಕೋ ಆಪರೇಟಿವ್ ಬೇಂಕಿನ ೧೯ನೇ ಸಾಧಾರಣ ಸಭೆಯು ಪಂಡಿತ ಜವರಲಾಲ್ ಲಾಯಬ್ರರಿಯಲ್ಲಿ ೨೦ನೇ ಗುರುವಾರಕ್ಕೆ ನೆರೆಯಿತು. ವಾರ್ಷಿಕ ರಿಪೋರ್ಟು ಓದಿ ಮಂಜೂರು ಮಾಡಲ್ಪಟ್ಟಿತು. ಬೇಂಕಿನೊಳಗೆ ಈ ವರುಷ ಲೇವಿನ ರಕಮು ೧೫೨೭೭೭ ದಷ್ಟು ಇರುವದಕ್ಕೆ ಬೆಳೆಯಿತು. ಮತ್ತು ಶೇರು ಭಾಂಡವಲು ೨೦೦೦ ರಿಂದ ೫೯೨೦ಕ್ಕೆ ಬೆಳೆದಿದೆ. ಮುಕ್ತಿಯ ಭಾಂಡವಲು ೯೨೪೫ ಇರಲಾಗಿ ೨೨,೦೯೭ ದಷ್ಟು ಕಳೆದ ವರ್ಷ ಸಂಗ್ರಹಿಸಲಾಗಿದೆ. ನಿಕ್ಕಿ ಲಾಭವು ೬೩೪೮... ರೂ। ಶೇರ್‌ಹೋಲ್ಡರರಿಗೆ ಸೂಚನೆಯಂತೆ ಹಾಲಿ ಗಾರರಿಗೆ ೧೦೦ಕ್ಕೆ ೧೦ ರಂತೆ ಲಾಭ ಕೊಡಬೇಕೆಂದು ಗೊತ್ತಾಯಿತು. ರಿಸ್ಕು ವರ್ಷ ದ ಈಗ ೧೬ ೨೦ ಆಗಿದೆ. ಕಟ್ಟೋಣ ನಿಧಿಗೆ ೩ ಸಾವಿರ ರೂಪಾಯಿ ಜಮೆ ಇರುತ್ತದೆ. ಸ್ಥಳದ ಗವರ್ನ್ಮೆಂಟ್ ಬಗ್ಗೆ ೫೫೦೦ ರೂಪಾಯಿ ಸಂಚಯ ಮಾಡಲಾಗಿದೆ. ಕಾರ್ಯಕಾರಿ ಮಂಡಳದ ನೇಮಣೂಕಿಯಾದ ಬಳಿಕ ನಿಯಮಗಳ ತಿದ್ದುಪಡಿಯ ಸೂಚನೆಯಾಗಿತ್ತು. ಅಭಾರ ಮನ್ನಣೆಯಾದ ಬಳಿಕ ಸಭೆಯು ವಿಸರ್ಜನಗೊಂಡಿತು.

ಅಂಕೋಲಾ— ಬ್ರಹ್ಮಚಾರಿ ಆಶ್ರಮದ ಶ್ರೀ ನಿಜಾನಂದ ಸ್ವಾಮಿಗಳು ಸಂಚಾರಕರನ್ನು ೫ ದಿನಗಳ ವರೆಗೆ ಇಲ್ಲಿ ಸತ್ಸಂಗವು ಮಾಡಿಸಿದರು. ನಿತ್ಯವೂ ಶ್ರೀವಾಸ ನಾರಾಯಣನ ಮತ್ತು ಶ್ರೀ ಭೂಮಿ ದೇವತೆಯ ದೇವಸ್ಥಾನದಲ್ಲಿ ಪ್ರವಚನಗಳ ನಡೆಯುತ್ತಿದ್ದವು. ಬೆಳಗಿನ ಸಮಸ್ಯದ ಸಮಯ ಸ್ಥಳದ ಬಾಲಕ ಬಾಲಿಕೆಯರು ಬಂದು ನಮಸ್ಕಾರ ಹಾಕುತ್ತಿದ್ದರು. ದಾಸಬೋಧ ಗ್ರಂಥ ಪ್ರಕಟಣೆಗೆ ಇಲ್ಲಿ ೧೧೨ ರೂಪಾಯಿಗಳು ದೊರಕಿದವು. ಶ್ರೀ। ನಾರಾಯಣ ಬಾಲಕೃಷ್ಣ ಮಹಾಮಂಡಳರವರು ರೂಪಾಯಿ ೫೦ನ್ನು ಅರ್ಪಿಸಿದರು. ರಾಮನಾಥ ಟಿ ಶಾನಭಾಗರಾವ ನಾಡಕರ್ಣಿಯವರು ಸಮಸ್ಕಾರ ಹಾಕಲು ಉತ್ಸ್ಯಕರಾಗಿದ್ದರು. ರಾಮಚಂದ್ರ ಕೇಣಿ ಮತ್ತು ಕರಿಯಪ್ಪಾ ಗಣ್ಣೂರ ನಮಸ್ಕಾರದ ವ್ರತವನ್ನು ಅಂಗೀಕರಿಸಿದ್ದ ಹಲೆಯರಲ್ಲಿ ಗಣ್ಯರಾಗಿರುವರು.

ವೃತ್ತಸಾರ

— ಬೆಂಗಾಲದ ಪ್ರಾಂತಿಕ ಪರಿಷತ್ತಿನ ಅಧಿವೇಶನವು ಕೃಷ್ಣನಗರದಲ್ಲಿ ಕಳೆದ ವಾರದಲ್ಲಿ ನೆರೆಯಿತು. ಅಧ್ಯಕ್ಷರಾದ ಶ್ರೀ। ಬಿ ಎನ್. ಸಾಸಮಾಲರವರ ಭಾಷಣದ ಕೆಲವಂಶವು ಪ್ರತಿನಿಧಿಗಳಿಗೆ ಮಾನ್ಯವಾಗಲಿಲ್ಲ. ಇದರಿಂದ ಸಭೆಯಲ್ಲಿ ಕಲ್ಲೋಲವಾಯಿತು. ಅಧ್ಯಕ್ಷರು ತಮ್ಮ ಸ್ಥಾನವನ್ನು ಬಿಟ್ಟರು. ಸೌ। ಸರೋಜಿನೀದೇವಿಯವರು ಪ್ರತಿನಿಧಿಗಳಿಗೆ ಸಮಾಧಾನಪಡಿಸಿದ ಬಳಿಕ ಸಭಾಕಾರ್ಯ ಮುಂದರಿಯಿತು. ಮುಂದೆ ಹಂಗಾಮಿ ಅಧ್ಯಕ್ಷರಿಗೂ ಪ್ರತಿನಿಧಿಗಳಿಗೂ ಭೇದವುಂಟಾಯಿತು. ಹಂಗಾಮಿ ಅಧ್ಯಕ್ಷರು ಸಭಾಪತಿಸ್ಥಾನವನ್ನು ತೊರೆದರು. ಹೀಗೆ ಸಭೆಯು ಮಧ್ಯದಲ್ಲಿಯೇ ಮುರಿದು ಹೋಯಿತು!

— ರಿಫ್ ಪ್ರದೇಶದ ಅಧಿಪತಿಗಳಾದ ಅಬ್ದುಲ ಕರೀಮರವರು ಸೋತರು. ಕಳೆದ ವಾರದಲ್ಲಿ ಅವರು ಫ್ರೆಂಚರ ಸ್ವಾಧೀನರಾದರು. ಕರೀಮರ ಪಂಗಡದವರೂ ಫ್ರೆಂಚರಿಗೆ ಶರಣಾಗತರಾದರು.

— ಜೋಧಪುರದ ಮಹಾರಾಜರು, ತಮ್ಮ ಸಹೋದರರಾದ ಅಜೀತಸಿಂಗರೊಡನೆ ಊಟಕ್ಕೆ ಕುಳಿತ(?) ಬೆಟ್ಟದಲ್ಲಿ

ಬೇಟೆಯಾಡ ಹೋದಾಗ ಥಕ್ಕನೆ ಕಾಡಾನೆಯು ನುಗ್ಗಿ... ತು. ಆ ಮಹಾರಾಜರವರು ಗುಂಡು ಹೊಡೆದರು. ಘಳಿಗೆ... ಳಗೆ ಆನೆಯು ಹಾರಿ ಬಂತು. ಸುದೈವದಿಂದ ಮಹಾರಾಜರು ಆನೆಯ ಕಾಲೊಳಗೆ ಸಿಲುಕಿದ್ದರಿಂದ ಸುರಕ್ಷಿತ... ಪರಿವಾರದವರು ಆನೆಯನ್ನು ಕೊಂದರು.

— ರಂಗೂನಿನಲ್ಲಿ ಚೀಟಿ ಹಿಂದೂಸ್ಥಾನರವರ ಬೆಂಕಿ ಬಿದ್ದ... ಕಾರಣ... ೧॥ ಲಕ್ಷ ರೂಪಾಯಿ... ಆ ಸಾವಿರ ರೂಪಾಯಿಗಳ ಕಟ್ಟಡವು ಸುಟ್ಟು ಹೋ...

— ಕರಾಚಿ ಮುನಿಸಿಪಾಲಿಟಿಯು ಆರೋಗ್ಯ ಮಂಡಳ... ವರು ಶಾರೀರಿಕ ಬೆಳವಣಿಗೆಗಾಗಿ ಒಂದು ಯೋಜನೆ... ನ್ನು ಮುನಿಸಿಪಾಲಿಟಿಯ ಮಂಜೂರಿಗಾಗಿ ಸಾದರಪಡಿ... ಸಿರುವರು.

— ಕಾಶೀ ಕ್ಷೇತ್ರದ ಮುನಿಸಿಪಾಲಿಟಿಯವರು ಹಾರಿ... ಆವ ದಿನ ಮೇಲೆ ತೆರಿಗೆ ಹೇರಬಾರದೆಂದು ನಿರ್ಧರಿಸಿ... ವರು.

— ಬೇಝವಾಡಾ ಮುನಿಸಿಪಾಲಿಟಿಯವರು ಹಿಂದೀ... ಕ ಅಧ್ಯಾಪಕರನ್ನು ಕಡಿಮೆ ಮಾಡಬೇಕಾಗಿ ಮದ್ರಾ... ಸರಕಾರದ ಫರಮಾನ. ಹಿಂದೀ ಶಿಕ್ಷಣ ಕೊಟ್ಟರೆ ಪ್ರಾ... ತಿಕ ಗವರ್ನಮೆಂಟು ಖರ್ಚು ಕೊಡುತ್ತದೆ

— ಬಳ್ಳಾರಿಯ ನಗರಭವನ... ತಾ. ೨೩ನೇಗೆ ಗ್ರ... ಪರಿಷತ್ತು ಹಾಗು ಸಾಹಿತ್ಯ ಸಮ್ಮೇಲನಗಳು ಜರಗಿದವು

ರಾವಲಪಿಂಡಿಯಲ್ಲಿ ಹಿಂದೂ ವೀರಸ್ತ್ರೀಯು ಪ್ರಕಟಿ... ಸಾಹಸವನ್ನು ಕೊಂಡಾಡಿರುವಷ್ಟು ಕಡಿಮೆ ' ಕಳೆದ ... ವಾರ ತಾರೀಖು ೨೩ ನೇ ರಾತ್ರೆ ೭॥ ಘಂಟೆ ದಾರೋಡೆ... ಮನೆಯ ಮೇಲೆ ನುಗ್ಗಿಬಂದರು. ವಿಧವೆಯು ಖಡ್ಗ... ಖಡ್ಗವನ್ನು ಧರಿಸಿ ದರೋಡೆಗಾರರಿಗೆ ಇದಿರಾದಳು. ಕಡೆ... ಕಾಲದ ವರೆಗೆ ವೀರಸ್ತ್ರೀಯು ಪ್ರದರ್ಶಿಸಿದ ಸಾಹಸ... ನ್ನು ನೋಡಿದವರು ಧನ್ಯರು! ಇಷ್ಟಾದರೂ ಮನೆ... ಹಾನಿ ಕಡಲಿಲ್ಲ '

ಈಜಿಪ್ತದಲ್ಲಿ ಇಲೆಕ್ಷನು ಮುಗಿಯಿತು. ಸ್ವಾತಂತ್ರ್ಯ... ದ ಪ್ರೀಮಿಯರ ರಾದ ಝಗಲೂಲ ಪಾಶಾರವರ ಪಕ್ಷ... ಭಯಂಕರ ವಿಜಯವಾಗಿದೆ'

ಬಿಕಾನೇರ ... ಮಂಡಳದವರು ... ರಾಜ್ಯ ಪಕ್ಷದ ತರ್ಫೆನಿಂದ ಕೌನ್ಸಿಲು ಪ್ರವೇ... ಮಾಡುವರು..

— ಬಂಗಾಲ ಪ್ರಾಂತದ ಬಾರಿಸಾಲದಲ್ಲಿ ತಂದೆಯು... ಇಬ್ಬರು ... ಗಳಿಂದಿಗೆ ಮದುವೆಯನ್ನು ನಿಶ್ಚಯಿಸಿದ... ಹಿರೀ ಮಗಳಿಗೆ ಮದುವೆ ಮಾಡಿಕೊಳ್ಳುವ ಮನಸ್ಸಿ... ಅವಳು ಬಹಳವಾಗಿ ತಂದೆಗೆ ಹೇಳಿಕೊಂಡಳು. ... ಯು ಅದಕ್ಕೆ ಕಿವಿಗೊಡಲಿಲ್ಲ. ಬಳಿಕ ಅವಳು ಆಫೀ... ತಿ ದ ... ಮದುವೆಯು ... ಹೋಮಕ್ಕೆ ಪ್ರಾಣ ಕೊಟ್ಟ...

— ಮಾಗಿಲೊಳಗಣ 'ಅಪೋಲೋನಿಯ' ವೆಂಬ ಗಣಿ... ಪ್ರಥಕ್ಕರಣ ಮಾಡಿ, ಅದರಿಂದ ದಿನಾ ೧೦೦ ಟನ್ ... ನಿಯಮ ಸಲ್ಫೇಟ ಎಂಬ ಗೊಬ್ಬರ ಮಾಡುವ ಕಾರಖಾ... ಳು ಸ್ಟ್ಯಾಕ್ಸ್ ಎಂಬಲ್ಲಿ ಸ್ಥಾಪಿತವಾಗಿವೆ

... ದಾವಣಗೆರೆಯ ಪ್ರಾಂತಿಕ ಸಂಘದ ಪ್ರಸ್ತಾ... ಪರ್ಯಾಲೋಚನದಿಂದ ವಿಜಾಪುರದ ಗೋರಕ್ಷ... ಬಹಳ ಜಾಗೃತಿಯಾಗಿದೆ. ಅಲ್ಲಿ ಒಂದು ಪ್ರಾಂತಿಕ... ಕ ಸಭೆ ಸ್ಥಾಪಿಸಲ್ಪಟ್ಟಿದೆ. ೧೫ ಜನರು ಜೀವನ ಪ... ರೆಯನ್ನು ಸೇವಿಸಲಿಕ್ಕಿಲ್ಲೆಂದು ಪ್ರತಿಜ್ಞೆ ಮಾಡಿರುವರು.

— ಫ್ರಾನ್ಸದೊಳಗಿನ ಪಾರಿಸ ದೇಶದ ಒಬ್ಬ ವೇಶ್ಯೆಯ... ಭವ ನೋಡಿ! ದಿನಾ ಇವಳು ಹಾಲಿನಿಂದ ಅಭಿಷೇಕ... ಮಾಡಿಕೊಳ್ಳುವಳು. ೨೦ ಗೇಲನ್ (೬ ಬಾಟ್ಲು = ೧ ಗೆಲ... ಹಾಲು ತಗಲುತ್ತದೆ

— ಮಲಯಾ ದ್ವೀಪಕಲ್ಪದಲ್ಲಿ ಈಶ್ವರ, ಗಂಗಾ... ಹಾಗು ಕಾರ್ತಿಕೇಯ ದೇವರ ಮೂರ್ತಿಗಳನ್ನು ... ಡಚ್ ಶೋಧಕರು ಗೊತ್ತುಹಿಡಿದಿರುವರು. ಇವು ಸು... ರು ೧೧೦೦೦ ಸಾವಿರ ವರ್ಷ ಪುರಾತನವಿದ್ದವೆ.

— ಬೆಳಗಾವಿಯ ಜಿಲ್ಹಾ ಲೋಕಲ್ಬೋರ್ಡಿಗೆ ... ಅಧ್ಯ...

ಪ್ರಾರಂಭಿಸಲು ಮಂಗಳವಾರಕ್ಕೆ ಸಭೆ ಸೇರಿಸಿತ್ತು. ಒಬ್ಬ ಸ ಭಾಸದರಿಗೆ ನೋಟೀಸು ಕೊಡದ ಮೂಲಕ ಹಳೇ ಬೋರ್ಡಿ ನ ಅಧ್ಯಕ್ಷರಾದ ರಾ| ಪ-ಡಿತಪ್ಪ ಚಿಕ್ಕೋಡಿಯವರು ಸಭೆ ಯನ್ನು ವಿಸರ್ಜಿಸಿ ನಡೆದರು. ಒಳಿಕ ಉಳಿದ ಸಭಾಸದ ರು ರಾ| ಅಂಗಡಿಯವರನ್ನು ಅಧ್ಯಕ್ಷರಾಗಿ ಆರಿಸಿದರು. ರಾ| ಪಂಡಿತಪ್ಪನವರು ತಾನ್ನೇ ಅಧ್ಯಕ್ಷರಿದ್ದೇನೆಂದು ಒಂ ದು ಹೇಳಿಕೆ; ರಾ| ಅಂಗಡಿಯವರು ಅಧ್ಯಕ್ಷರೆಂದು ಇ ನ್ನೊಂದು ಹೇಳಿಕೆ. ಅಂತು ಒಂದು ದೊಡ್ಡ ವಾದ! ಬೋ ರ್ಡಿನ ಆಫೀಸು ಯಾರ ಸ್ವಾಧೀನವಾಯಿತೆಂದು ತಿಳಿ ಯಲಿಲ್ಲ.

— ರಂಗೂನಿನಲ್ಲಿ ಶನಿವಾರ ತಾರೀಖು ೨೩ ನೇಗೆ ದೊಡ್ಡ ಬಿರುಗಾಳಿ ಬೀಸಿ ಹೇರಳ ನಷ್ಟ. ಅನೇಕ ಸರಕಾರಿ ಕಟ್ಟ ಡಗಳು ನಷ್ಟವಾದವು

— ಪಂಡಿತ ಮೋತಿಲಾಲರು ವಿಶ್ರಾಂತಿಗಾಗಿ ಮುಸ್ಸೂರಿಗೆ ಹೋಗುವರು.

— ಕಲಕತ್ತೆಯೊಳಗಣ ಹಿಂದೂ-ಮುಸಲ್ಮಾನರ ದೊಂಬಿ ಯ ಮೂಲಕ ೧೦೦ ಜನರು ಮಡಿದರು; ೯೦೦ ಮಂದಿ ಗಳು ಘಾಯಹೊಂದಿದರು. ೮೦೦ ಮಂದಿಗಳಿಗೆ ಸೆರೆಹಿಡಿ ಯೋಣಾಗಿದೆ; ೧೩ ದೇವಾಲಯಗಳು ಧ್ವಂಸ ಹೊಂದಿ ದವು, ೧ಕೋಟಿ ರೂಪಾಯಿಗಳಿಗೆ ಮಿಕ್ಕಿ ನಷ್ಟವಾಗಿದೆ.

— ಪಂಜಾಬಿನ ನಗರಭವನವನ್ನು ಕಟ್ಟಿಸುವ ಅಧಿಕಾರ ವು ಒಬ್ಬ ಯುರೋಪಿಯನ್‌ನಿಗೆ ವಹಿಸಿದುದರ ಪರಿಣಾಮ ದಿಂದ ಗ್ರಿ ಹಂದು ಮಂದಿರವು ಕಟ್ಟೋಣಾಯಿತು. ದೇಶೀ ಉದ್ಯೋಗಗಳಿಗೆ ಆಳರಸರು ಕೊಡುವ ಉತ್ತೇಜನವಿದು!

— ಚೀನಾ ದೇಶದಲ್ಲಿ ಹೆಂಗಳೆಯರ ಸಂಘ! ಒಂದು ಗ್ರಾಮದೊಳಗಿನ ದಂಪತಿಯು ರಾಜಕೀಯ ಸಭೆಗೆ ಹೋ ದುದಕ್ಕಾಗಿ ಗಂಡನು ಹೆಂಡತಿಗೆ ಚೆನ್ನಾಗಿ ಏಟು ಕೊಟ್ಟ ನು ಆವಳು ಚಂಡಿ ಅವತಾರವನ್ನು ಧರಿಸಿ, ಗ್ರಾಮದ ಹೆಂಗಳೆಯರನ್ನು ಕೂಡಿಸಿ, ಗಂಡಸರು ಹೆಂಗಸರನ್ನು ಪೀಡಿಸದೆ ನಡಿಸಿಕೊಳ್ಳುವ ಕರಾರು ಬರೆಕೊಟ್ಟು ಹೊರ ತು, ಗೃಹಿಣಿಗಳಾಗಲು ಒಪ್ಪಲಿಲ್ಲ. ಆಬಲೆಯರು ಸಹಜ ಸ್ನೇಹಭಾವದಿಂದ ತಮಗೆ ಕರುಣೆ ಬರುವದೆಂದು ದೃಢವಾ ಗಿ ಗ್ರಹಿಸಿಯಿತ್ತು. ಆದರೆ, ಅಬಲೆಯರು ನಿರ್ಧಾರ ಮಾಡಿದ್ದರಿಂದ ನಿರುಪಾಯವಾಗಿ ಗಂಡಸರೇ ಹೆಂಗಸರಿಗೆ ಶರಣು ಹೋದರು ಗೃಹಿಣಿಗಳಿಲ್ಲದೆ ಗೃಹಸ್ಥ ಲವಕಾಲ ನಡೆಯುತ್ತಿಲ್ಲದೇನು?

— ನಾಗಪುರದ ಧ್ವಜ ಸಂಗ್ರಾಮದಲ್ಲಿ ಶಿಕ್ಷೆಯಾದ ಬೆಂ ಗಳೂರಿನ ಒಬ್ಬ ಸತ್ಯಾಗ್ರಹಿಗೆ ಮದುವೆ ಆಗುವದಿತ್ತು. ಸತ್ಯಾಗ್ರಹ ಸಂಗ್ರಾಮದಲ್ಲಿ ಆದ ಶಿಕ್ಷೆಯ ಮೂಲಕ ಆತನ ಸಾಮಾಜಿಕ ದರ್ಜೆಗೆ ಹಾನಿ ಒಟ್ಟಿತೆಂಬ ಆಕ್ಷೇ ಪದ ಮೇಲಿಂದ ಹೆಣ್ಣಿನ ಕಡೆಯವರು ಹೆಣ್ಣು ಕೊಡಲು ಸಂತೋಷಪಡಲಿಲ್ಲ. ಈ ಕುರಿತು ಬೆಂಗಳೂರಿನ ಜಿಲ್ಲಾ ಕೋರ್ಟಿನಲ್ಲಿ ದಾವೆಯಾಗಲು, ಈ ಶಿಕ್ಷೆಯಿಂದ ಮನು ಷ್ಯನು ಕಲಂಕಿತನಾಗಲಿಲ್ಲೆಂದು ನ್ಯಾಯಾಧೀಶರುಗಳು ಅಭಿಪ್ರಾಯ ಕೊಟ್ಟಿರುವರು.

— ದಿಲ್ಲಿ ಮ್ಯುನಿಸಿಪಾಲಿಟಿಯವರು ತಮ್ಮ ಶಾಲೆಗಳಲ್ಲಿ ಅಸ್ಪೃಶ್ಯರಿಗೆ ಪ್ರವೇಶ ಕೊಟ್ಟಿರುವರು. ಇಲ್ಲಿಯ ಜಿಲ್ಲಾ ಬೋರ್ಡಿನವರು ಅಂಗಡಿಕಾರ, ಚಿನಿವಾಲ ಮುಂತಾದ ಉದ್ಯೋಗಸ್ಥರ ಮೇಲೆ ತೆರಿಗೆ ಆಕರಿಸಿ ಉತ್ಪನ್ನವನ್ನು ಹೆಚ್ಚಿಸುತ್ತಿರುವರು. ಇಂಗಳನ್ನು ಹೇರಿಕೊಂಡು ಭಾರತೀ ಯರು ದಣಿದರೂ, ಇನ್ನೂ ಹೊಸ ಹೊಸ ಕರಗಳು ಜನ್ಮ ವನ್ನೆತ್ತುತ್ತಿವೆ. ಸ್ಥಾನಿಕ ಸ್ವರಾಜ್ಯವಾದಿಗಳ ಆತ್ಯುತ್ಸಾಹ!

— ಸಿಂಹಲ ದ್ವೀಪದಲ್ಲಿ ಜೋರಿನ ಮಳೆ ಉಗಿಬಂಡಿಯ ದಾರಿಯು ಒಳದು ಹೋಯಿತು.

— ಭೋಪಾಳದ ಬೇಗಮ ಸಾಹೇಬರು ಪಾಪಪ್ಯಸ್ಥಾನ ವನ್ನು ತ್ಯಜಿಸಿರುವರು. ಬೇಗಮರವರು ತಮ್ಮ ಮಗನಾದ ಸಾಹೇಬ ಜಾದಾ ಹಮೀದ-ಲ್ಲಾ ಖಾನರವರಿಗೆ ಪಟ್ಟ ಕಟ್ಟಿದರು!

— ಮದ್ರಾಸ ಪ್ರಾಂತದಲ್ಲಿ ಬ್ರಾಹ್ಮಣೇತರರಿಗೆ ದೊಡ್ಡ ಪೆಂಪು. ದೊಡ್ಡ ದೊಡ್ಡ ಬ್ರಾಹ್ಮಣೇತರರು ಸ್ವರಾಜ್ಯಪಕ್ಷ ಕ್ಕೆ ಸೇರಿರುವರು. ಕೆಲವರು ಸಂಯುಕ್ತ ರಾಷ್ಟ್ರೀಯ ಪಕ್ಷಕ್ಕೆ ಸೇರಿರುವರು. ಬ್ರಾಹ್ಮಣೇತರರ ಪಕ್ಷದ ಕಡೆ ಯಿಂದ ಕೌನ್ಸಿಲಿಗೆ ಸೇರಲು ಉಮೇದ್ವಾರರೇ ಇರುವದಿಲ್ಲ! ರಾಷ್ಟ್ರೀಯ ಸಭೆಯ ಪ್ರತಿಷ್ಠೆಯು ಬೆಳೆಯಿತು.

— ಪೋರ್ಚುಗಾಲಿನಲ್ಲಿ ದೊಡ್ಡದೊಂದು ಗಲಭೆ! ಅಲ್ಲಿ ಯ ಸರಕಾರವು ಹೊಗೆಸೊಪ್ಪನ್ನು ತನ್ನ ಕೈಯಲ್ಲಿಟ್ಟು ಕೊಂಡ ಒಕ್ಕ್ಯ ಮಾಡುವ ನಿರ್ಧಾರ ಮಾಡಿದೆ. ಪ್ರಮು ಖರಲ್ಲಿ ಇತ್ತೀಚಗೆ ಆಗಿವ ಕೆಲವು ಸೈನಿಕರು ದೊಂಬಿಯ ನ್ನೆಬ್ಬಿಸಿದರು. ರಾಜ್ಯಕ್ರಾಂತಿಯಾಗುವ ಸಂಭವವಿದೆಂದು ಹೇಳುತ್ತಾರೆ. ಹೊಗೆಸೊಪ್ಪಿನ ವ್ಯಸನದ ಬಲ ನೋಡಿರಿ!

— ಉಜ್ಜಯಿನಿ ಪಟ್ಟಣದಲ್ಲಿ ಬೆಂಕಿ ತಗಲಿ ೩೦೦ ಮನೆ ಗಳು ಸುಟ್ಟು ಹೋದವು ೨೦ ಲಕ್ಷ ನಷ್ಟ

— ಜಪಾನ ದೇಶದ ಒಸ್ತೋರಿಯಾ ಪ್ರಾಂತದ ಹಾಕಲಾ ಕ ಗ್ರಾಮದಲ್ಲಿ ಮರ್ದಿನ ಉಗ್ರಾಣಕ್ಕೆ ಬೆಂಕಿ ತಗಲಿ ಭಯಂಕರ ಸ್ಫೋಟವಾಯಿತು. ಕಟ್ಟಡದ ಕಲ್ಲುಗಳೂ, ಕೆಲಸಗಾರರ ಹೆಣಗಳೂ ಪಕ್ಷಿಗಳಂತೆ ಹಾರುತ್ತಿದ್ದವು. ಒಹಳ ದೊಡ್ಡ ಅನರ್ಥ

ಕರ್ನಾಟಕ ಪ್ರಾಂತಿಕ ಪರಿಷತ್ತಿನ ಬಳ್ಳಾರಿಯ ಅಧಿವೇಶನದಲ್ಲಿ ಪಾಸಾದ ಠರಾವುಗಳು:—

೧ ದಕ್ಷಿಣ ಆಫ್ರಿಕೆಯ ಪಾರ್ಲಿಮೆಂಟಿನವರು ಗಾಂಧಿ ಸ್ಮಟ್ಸವರ ಗಲಿಲ್ಲದ ಹಿಂದಿನ ನಿರ್ಬಂಧನೆಯ ನ್ನು ಮುರಿದು, ರೌಂಡಟೇಬಲ ಕಾನ್ಫರನ್ಸ ಕೂಡಿಸು ವ ಹೊತ್ತಿಗೆ ವರ್ಣಭೇದದ ಕಟ್ಟಳೆಯನ್ನು ಮಾಡಿದ್ದ ಕ್ಕಾಗಿ ಈ ಪರಿಷತ್ತು ವಿರೋಧಿಸುತ್ತದೆ.

೨. ಕಲಕತ್ತೆಯಲ್ಲಾದ ದೊಂಬಿಗಳ ಬಗ್ಗೆ ಈ ಪರಿ ಷತ್ತಿಗೆ ಬಹು ದುಃಖವಾಗುತ್ತದೆ. ಪರಸ್ಪರ ತಾಳ್ಮೆ ಯಿಂದ ಇಂಥ ದೊಂಬಿಗಳಾಗದಂತೆ ಪ್ರತಿಬಂಧಿಸ ಬೇಕು.

೩. ಕಾನಪೂರ ಕಾಂಗ್ರೆಸಿನಲ್ಲಾದ ನಾಲ್ಕನೇ ಸಂ ಖ್ಯೆಯ ಗೊತ್ತುವಳಿಯನ್ನೂ, ದಿಲ್ಲಿಯ ಅಖಿಲ ಭಾರತ ಮಂಡಲದಲ್ಲಾದ ನಾಲ್ಕನೇ ಗೊತ್ತುವಳಿಯನ್ನೂ ಈ ಪರಿಷತ್ತು ಒಪ್ಪುವದಲ್ಲದೆ, ಕರ್ನಾಟಕದಿಂದ ಕಾಂಗ್ರೆಸಪರವಾಗಿ ಕಾನೂನು ಮಂಡಲಗಳಿಗೆ ಹುರಿಯಾಳಾಗಿ ನಿಲ್ಲುವವರು ಸ್ವತಃ ಖಾದಿಯನ್ನೇ ಧರಿಸುವದು, ಕರ್ನಾಟಕ ಏಕೀಕರಣ, ಕುಡಿತ ಹಾಗೂ ಔಷಧಗಳ ನಿಷೇಧ, ಖಾದಿ ಹಾಗೂ ಸ್ವದೇ ಶಿಯ ಪದಾರ್ಥಗಳಿಗೆ ಉತ್ತೇಜನ, ಸ್ವತಂತ್ರ ವಿಚಾ ರ ನಡಿಸಿ, ಬೆಳೆಯ ಅಳತೆ ಮಾಡಿ ಬೆಳೆಯ ವಿಷಯ ದಲ್ಲಾಗುವ ಅನ್ಯಾಯ ನಿಲ್ಲಿಸುವದು, ಕಾಡಿನ ಖಾ ತೆಯವರಿಂದ ರೈತರುಗಳಿಗೆ ಒದಗುವ ಗೋಳನ್ನು ಬಿಡಿಸಿ ಅವರ ಹಿತ ಸಾಧಿಸುವದು, ಮದ್ರಾಸ ಇಲಾ ಖೆಯಲ್ಲಿ ದೇವಾದಾಯ ಹಣದ ಬಗ್ಗೆ ಆದ ಕಟ್ಟಳೆಯ ನ್ನು ಪೂರ್ಣ ರದ್ದ ಪಡಿಸಲು ಅಥವಾ ತಿದ್ದಲು ಪ್ರ ಯತ್ನಿಸುವದು,

೪, ಬರುವ ಬರುವ ಕೌನ್ಸಿಲು ಚುನಾವಣೆಯಲ್ಲಿ ಕರ್ನಾಟಕದ ಮತದಾರರೆಲ್ಲರೂ ರಾಷ್ಟ್ರೀಯ ಸಭೆಯ ಪ್ರತಿನಿಧಿಗಳಿಗೇ ಮತಕೊಡತಕ್ಕದ್ದೆ ಜಾತಿ ಸಂಗತ ಗಳನ್ನು ಈ ಪ್ರಸಕ್ತಿಯಲ್ಲಿ ಲಕ್ಷಿಸಕೂಡದೆಂಬ ಗೊತ್ತು ವಳಿಯು ಅಧ್ಯಕ್ಷರಿಂದಲೇ ಸೂಚಿತವಾಗಿ ಅಂಗೀಕೃ ತವಾಯಿತು. ಆ ವೇಳೆ ರಟಿ ಹಾಗು ಖಾದಿಗೆ ಸಂ ಬಂಧಿಸಿದ ೩ ನೇ ಠರಾವನ್ನು ಶ್ರೀ| ಹನುಮಂತರಾವ ಕೌಜಲಗಿಯವರು ಸೂಚಿಸಿದರು. ಅದರ ಸಾರಾಂಶ ವೇನಂದರೆ—

೫. ನೂಲುವದು, ಹಾಗೂ ಖಾದಿ ನೇಯುವದು, ಇವೆರಡರಿಂದ ತನ್ನಾರೆ ಪರದೇಶದ ಬಟ್ಟೆಯನ್ನು ಬಹಿಷ್ಕ ರಿಸಿದಂತಾಗಿ, ಬಡವರಿಗೆ ಅನ್ನ ಕೊಟ್ಟಂತಾಗುವದ ರಿಂದ ಎಲ್ಲರೂ ಖಾದಿಯನ್ನು ಹೆಚ್ಚಾಗಿ ಹುಟ್ಟಿಸಿ, ಬ ಳಸುವರೆಂದು ಸಂಬಿಗೆ.

೬ ಕಾಂಗ್ರೆಸ ಸಭೆಗಳೆಲ್ಲವೂ ಕರ್ನಾಟಕ ಏಕೀಕ ರಣ ಕಾರ್ಯಕ್ಕಾಗಿ ಒಂದಾಗಿ ಪ್ರಯತ್ನಿಸುವದು.

೭. ಬಳ್ಳಾರಿಯನ್ನು ಆಂಧ್ರದಿಂದ ಬೇರ್ಪಡಿಸಬೇ ಕೆಂದು ಕೇಳಲಿಕ್ಕೆ ಮದ್ರಾಸ ನ್ಯಾಯವಿಧಾಯಕ ಸ ಭೆಯಲ್ಲಿರುವ ಸದಸ್ಯರು ಕರ್ನಾಟಕದಿಂದ ಹೋದ ಶಿಷ್ಟಮಂಡಲಿಯರಿಗೆ ತಮ್ಮ ಬೆಂಬಲ ಕೊಟ್ಟದ್ದಕ್ಕಾ ಗಿ ಕೃತಜ್ಞವಾಗಿರುವದು.

೮. ಶುದ್ಧ ಕನ್ನಡ ನಾಡಾದ ಬಳ್ಳಾರಿ ಜಿಲ್ಲೆಯ ಮೇಲೆ ಆಂಧ್ರ ವಿದ್ಯಾಪೀಠದವರು ತಮ್ಮ ಯುನಿವ್ಹ ರ್ಸಿಟಿ ಕಟ್ಟಳೆಯನ್ನು ಹೇರಹೋಗಿದ್ದಕ್ಕಾಗಿ ಮದ್ರಾಸ ಕಾನೂನುಮಂಡಲದವರ ಕೃತಿಗೆ ವಿರೋಧಿಸುವದು.

೯. ಕರ್ನಾಟಕ ಪ್ರಾಂತದಲ್ಲಿ ಭಗಿನೀ ಮಂಡಲದ ಶಾಖೆಗಳನ್ನು ಸ್ಥಾಪಿಸಬೇಕು. ಅವುಗಳಿಗೆ ಸಾಧ್ಯವಾ ದ ಸಹಾಯ ಕೊಡಬೇಕು.

೧೦. ಸ್ವಯಂಸೇವಕ ಪರಿಷತ್ತಿನವರು ಬರುವ ಸಪ್ಟಂಬರದೊಳಗಾಗಿ ೧೦ ಸಾವಿರ ಕಾಂಗ್ರೆಸ ಸಭಾಸ ದರನ್ನು ಮಾಡುವೆವೆಂದು ಮುಂದೆ ಬಂದುದಕ್ಕಾಗಿ ಅವರ ಅಭಿನಂದನ.

೧೧. ದೇಶೀಯ ಸಂಸ್ಥಾನದ ಅಂತಃಕಾರ್ಯಗಳಲ್ಲಿ ಕಾಂಗ್ರೆಸನವರು ಕೈಹಾಕಬಾರದೆಂದು ಕಾಂಗ್ರೆಸದ ವರು ಮಾಡಿದ ಗೊತ್ತುವಳಿಯನ್ನು ತೆಗೆದು ಹಾಕ ಬೇಕೆಂದು ಕಾಂಗ್ರೆಸಕ್ಕೆ ಶಿಫಾರಸ ಮಾಡುವದು.

ಗೋರಕ್ಷಣ ಪರಿಷತ್ತು.

ಗೋರಕ್ಷಣ ಪರಿಷತ್ತಿನ ಕಾರ್ಯವು ೨೫ನೇ ತಾರೀಖಿನ ದಿನ ಬೆಳಗಿನ ೯ ಘಂಟೆಗೆ ಮೊದಲಾಯಿತು. ಸ್ವಾಗತ ಕಮಿ ಟಿಯ ವಕೀಲರಾದ ಶ್ರೀ| ಬಾಳಾಜೀಯವರು ಸ್ವಾಗತ ಮಂ ಡಲದ ಅಧ್ಯಕ್ಷರು ತಮ್ಮ ಭಾಷಣದೊಳಗೆ ಅವರು ಪ್ರತಿ ನಿಧಿಗಳಿಗೆ ಸ್ವಾಗತವಿತ್ತು, ಧಾರ್ಮಿಕ, ಆರ್ಥಿಕ, ವಿದ್ಯೋ ಗಿಕ ದೃಷ್ಟಿಗಳಿಂದ ಗೋರಕ್ಷಣೆಯ ಭಾವನೆಯನ್ನು ಕುರಿ ತು ಚರ್ಚಿಸಿದರು. ಪರಿಷತ್ತಿನ ಅಧ್ಯಕ್ಷರಾದ ಶ್ರೀ| ಕರ್ಪೂ ರಶ್ರೀನಿವಾಸರಾಯರು ತಮ್ಮ ಭಾಷಣದೊಳಗೆ ಗೋರಕ್ಷ ಣೆಯ ಮಹತ್ವವನ್ನು ಕುರಿತು ಮಾತನಾಡಿದರು. ಮೈಸೂ ರ ಸೀಮೆಯಲ್ಲಿ ಗೋರಕ್ಷಣೆಯ ಪ್ರಯತ್ನವು ನಡೆದ ಸ್ವಲ್ಪ ಕಾಲದೊಳಗೆ ಪ್ರತಿನಿಧಿಗಳ ಸಭೆ, ನ್ಯಾಯವಿಧಾಯಕ ಸಭೆಗಳಲ್ಲಿ ಅದರ ಚರ್ಚೆ ನಡೆದು, ಅದು ಬಹು ಪುರೋ ಗತಿಗೆ ಬರುತ್ತಿದೆಂಬುದನ್ನು ವಿಸ್ತರಿಸಿ ಹೇಳಿದರು. ಪ್ರೊ. ಮು.ಬೀ ಸಾಹೇಬ ಜಾಫರಸಾಹೇಬ ಅವರಂಥ ಬಳ್ಳಾರಿಯ ಮಹಮ್ಮದೀಯರು ಗೋರಕ್ಷಣೆಯ ಗೊತ್ತುವಳಿಯಾಗಬೇ ಕೆಂದೂ ಬೆಂಬಲಗೊಟ್ಟು, ಹಿಂದುಸ್ಥಾನ ಸರಕಾರದವರಿಗೆ ಗೋರಕ್ಷಣೆಯ ಬಗ್ಗೆ ಕಟ್ಟಳೆ ಮಾಡಬೇಕಾಗಿ ಮನವಿ ಮಾ ಡಿಕೊಳ್ಳಬೇಕಾಗಿ ಗೊತ್ತುವಳಿ ಆಯಿತು. ರಾಮದುರ್ಗ ದ ಚನ್ನಪ್ಪನವರು,(ಕೊಡಗು ಮತ್ತು ನೀಲಗಿರಿ ಜಿಲ್ಹೆಗಳ ರಿಟಾಯರ್ಡ ಜಡ್ಜರು)ಶ್ರೀ| ಹೊಸಕೊಪ್ಪ ಕೃಷ್ಣರಾಯರು ಶ್ರೀ| ಕೌಜಲಗಿ ಶ್ರೀನಿವಾಸರಾಯ ಗೋರಕ್ಷಣೆಯನ್ನು ಕು ರಿತು ಜನರಿಗೆ ತಿಳಿಯುವಂತೆಯೂ, ಈಗಿನ ಕಾಲಕ್ಕೆ ಗೋರಕ್ಷಣೆಯಿಂದ ನಮ್ಮ ದೇಶಕ್ಕೆ ಯಾವ ಬಗೆಯ ಲಾಭ ಗಳಾಗುವವು ಎಂಬುದನ್ನು ತಿಳಿಸಿ ಹೇಳಿದರು. ತಾಲೂಕು ಜಿಲ್ಹೆಗಳಲ್ಲಿ ಗೋರಕ್ಷಣೆಯ ಸಭೆಗಳನ್ನು ಸ್ಥಾಪಿಸಬೇಕೆಂ ದಲೂ, ಮೈಸೂರ ಸಂಸ್ಥಾನದೊಳಗೆ ಮೈಸೂರ ಮಹಾರಾ ಜರು ಗೋವಧ ನಿಲ್ಲಿಸಬೇಕೆಂದು ಮನವಿ ಮಾಡಿಕೊಳ್ಳು ವದೂ ಅವೇ ಮುಂತಾದ ಗೊತ್ತುವಳಿಗಳಾದವು: ಶ್ರೀ| ಗುಂಡೂರಾಯ ಶಾಸ್ತ್ರಿಯವರು ಪರಿಷತ್ತನ್ನು ಯಶಸ್ವಿಯಾ ಗಿ ನಡೆಯಿಸಿ ಕೊಟ್ಟುದಕ್ಕಾಗಿ ಎಲ್ಲರಿಗೆ ವಂದನೆಗಳ ನ್ನು ಸಲ್ಲಿಸಿದ ನಂತರ ಸಭೆ ಮುಗಿಯಿತು. -ಕ ಕೃ)

ಮಹಾತ್ಮರ ಆತ್ಮಚರಿತ್ರ

ಎರಡನೇ ಸರ್ಗ.

(೨೪) ರಾಯಚಂದಭಾಯಿಯವರು

ಮುಂಬಯಿ ಬಂದರದಲ್ಲಿ ಕಡಲಿಳಿದುದನ್ನು ಮೊದಲಿನ ಅಧ್ಯಾಯದಲ್ಲಿಯೇ ನಾನು ನಮೂದಿಸಿರುವೆನು. ಜೂನ ಹಾಗೂ ಜುಲೈ ತಿಂಗಳುಗಳಲ್ಲಿ ಅರಬೀ ಸಮುದ್ರದ ಅವಸ್ಥೆಯು ಸಾಧಾರಣವಾಗಿ ಇದೇ. ಏಡನದಿಂದ ಮುಂಬಯಿ ವರೆಗೆ ಸಾಮಾನ್ಯವಾಗಿ ಇದೇ ಸಮುದ್ರವು ಬಿರುಗಾಳಿಯಿತ್ತು. ಹಡಗದ ವೇಗದ ಪ್ರತಿಯೊಬ್ಬ ಪ್ರಯಾಣಿಕನಿಗೂ ಮಾಕರಿಕೆ ಬರುತ್ತಿತ್ತು; ನನಗೆ ಮಾತ್ರ ಸ್ವಾಸ್ಥ್ಯವಿತ್ತು. ಹಡಗದ ಮೇಲೆ ನಿಂತುಕೊಂಡು ಬಿರುಗಾಳಿಯಲ್ಲಿ ಎದ್ದೇಳುವ ತೆರೆಗಳನ್ನು ನಾನು ನೋಡುತ್ತಿದ್ದೆ. ಒಮ್ಮೊಮ್ಮೆ ತೆರೆಗಳು ನನ್ನ ಮೈಮೇಲೆ ಸಿಂಚನ ಮಾಡುತ್ತಿದ್ದವು. ಬೆಳಗಿನ ಊಟದ ಸಮಯಕ್ಕೆ ನಾನು ಹಾಗು ಇನ್ನೊಬ್ಬ ಯಾ ಇನ್ನಿಬ್ಬರು ಕೂಡಿಕೊಂಡು ತೋಕಗೊಳದಿಯ ಪದಾರ್ಥವನ್ನು ಹರಿವಾಣದಲ್ಲಿ ಹಾಕಿಕೊಂಡು ಉಣ್ಣುತ್ತಿದ್ದೆವು. ಪದಾರ್ಥವು ಬಿದ್ದು ಹೋಗುವದೆಂಬ ಭಯದಿಂದ ನಮ್ಮ ನಮ್ಮ ಹರಿವಾಣಗಳನ್ನು ನಾವು ಗಟ್ಟಿಯಾಗಿ ಹಿಡಿದುಕೊಳ್ಳುತ್ತಿದ್ದೆವು.

ಹೊರಗಿನ ಬಿರುಗಾಳಿಯು ಒಳಅಂತಃಕರಣದಲ್ಲಿ ನಡೆಯುವ ಕಲ್ಲೋಲದ ದ್ಯೋತಕವಾಗಿತ್ತು. ಬಿರುಗಾಳಿಯಿಂದ ನನಗೇನು ಬಾಧೆ ತಟ್ಟಲಿಲ್ಲ; ಹಾಗೆಯೇ ಒಳಗಿನ ಕಲ್ಲೋಲದಿಂದಲೂ ನಾನು ಸುರಕ್ಷಿತನಿದ್ದೆ. ನಮ್ಮ ಜಾತಿಯಲ್ಲಿ ನನಗೆ ತೊಡಕುಗಳುಂಟಾಗುವ ಹಾಗಿತ್ತು. ನನ್ನ ಉದ್ಯೋಗವನ್ನು ನಡಿಸಲು ನನಗುಂಟಾದ ಗೊಂದಲವನ್ನು ನಾನು ಈ ಮೊದಲೇ ಸೂಚಿಸಿರುವೆನು. ನಾನು ಸುಧಾರಕನಾಗಿದ್ದೆ. ಕೆಲವು ಸುಧಾರಣೆಗಳನ್ನು ಪ್ರಾರಂಭಿಸುವ ಬಗ್ಗೆ ಯೋಚಿಸಿದೆನೆಂದು ನಾನು ಆಲೋಚಿಸುತ್ತಿದ್ದೆ. ಆದರೆ, ಬಹಳ ಪ್ರಕಾರದ ಸುಧಾರಣೆಗಳು ನನ್ನಿಂದ ಆಗುವವಿದ್ದವು. ಆಗ ಮಾತ್ರ ಇವುಗಳ ಕಲ್ಪನೆಯಾಗಲಿಲ್ಲ.

ನನ್ನ ಅಣ್ಣನು ನನಗೆ ಕರೆಯಲು ಮುಂಬಯಿ ಬಂದರದ ಮೇಲೆ ಬಂದಿದ್ದನು. ಅವನಿಗೆ ಡಾ|| ಮೇಥಾ ಹಾಗು ಅವರ ಅಣ್ಣಂದಿರ ಪರಿಚಯವಿತ್ತು. ಡಾ|| ಮೇಥಾರವರ ಆಗ್ರಹದ ಮೇಲೆ ನಾವು ಅವರಲ್ಲಿಗೆ ಹೋದೆವು. ಹೀಗೆ ವಿಲಾಯತಿಯೊಳಗಿನ ಸ್ನೇಹಭಾವವು ಹಿಂದುಸ್ಥಾನದಲ್ಲಿಯೂ ನಡೆದು ನಮ್ಮ ಎರಡೂ ಮನೆತನಗಳಲ್ಲಿ ಶಾಶ್ವತವಾದ ಗೆಳೆತನವು ನೆಲೆಗೊಂಡಿತು.

ನಾನು ತಾಯಿಯನ್ನು ನೋಡಲು ಆತುರಗೊಂಡಿದ್ದೆ. ನನಗೆ ಮುಟ್ಟುವ ಅವಳ ದೇಹವು ನಷ್ಟವಾಗಿ ಇತ್ತೆಂದು ನಾನರಿಯದ ಸಂಗತಿ. ಈ ಶೋಕವಾರ್ತೆಯು ಈಗ ನನಗೆ ಹೇಳಲಾಯಿತು. ನಾಡಿಕೆಯ ವಿಧಿಗಳನ್ನು ನಾನು ಕೈಕೊಂಡೆ. ನಾನು ವಿಲಾಯತಿಯಲ್ಲಿದ್ದಾಗ ಅವಳು ತೀರಿದ್ದಳು. ಪರದೇಶದಲ್ಲಿ ಇಂಥ ಸುದ್ದಿಗಳಿಂದ ಉಂಟಾಗುವ ಆಘಾತವನ್ನು ತಪ್ಪಿಸಲಿಕ್ಕಾಗಿ ನನ್ನ ಅಣ್ಣನು ಆ ಸುದ್ದಿಯನ್ನು ತಿಳಿಸಿದ್ದಿಲ್ಲ; ಆದರೂ, ಈ ಸುದ್ದಿ ತಿಳಿದು ನನಗೆ ಬಹಳ ದುಃಖವಾಯಿತು. ಈ ಕುರಿತು ವಿಸ್ತಾರವನ್ನು ನಾನು ಕೊಡಲಾರೆನು. ತಂದೆಯ ನಿಧನದ ಕಾಲಕ್ಕೆ ಉಂಟಾದ ಶೋಕಕ್ಕಿಂತ ಇದರಿಂದ ಹೆಚ್ಚು ಶೋಕವಾಯಿತು. ಮನಸ್ಸಿನಲ್ಲಿ ಮಾಡಿದ ಅನೇಕ ಕಲ್ಪನೆಗಳಿಗೆ ಸಿಡಿಲು ಬಡಿದಂತಾಯಿತು. ಆದರೆ, ಆ ಸಮಯ ಅತ್ಯಂತ ಪ್ರಕಾರದಿಂದ ದುಃಖವನ್ನು ನಾನು ಸ್ಫುಟ ಮಾಡಲಿಲ್ಲವಾಗಿ ನನ್ನ ಜ್ಞಾಪಕದಲ್ಲಿದೆ. ಕಣ್ಣೀರುಗಳನ್ನು ಸಹ ನಾನು ನಿಯಂತ್ರಿಸಿದೆ. ಮತ್ತು ವಿಶೇಷವೇನೂ ಒದಗಲಿಲ್ಲೆಂಬಂತೆ ದಿನಚರಿಯ ಕ್ರಮವನ್ನು ಕೈಕೊಂಡೆ.

ಡಾ|| ಮೇಥಾರವರು ಅನೇಕ ಗೆಳೆಯರ ಪರಿಚಯ ಮಾಡಿಕೊಟ್ಟರು. ಅವರ ತಮ್ಮನಾದ ಶ್ರೀ|| ರೇವಾಶಂಕರ ಜಗಜೀವನರವರ ಪರಿಚಯವನ್ನೂ ಅವರೇ ಮಾಡಿಕೊಟ್ಟರು. ಶ್ರೀ|| ರೇವಾಶಂಕರರವರಿಗೂ, ನನಗೂ ಈ ವರೆಗೆ ಶಾಶ್ವತವಾದ ಗೆಳೆತನವು ಬೆಳೆದಿದೆ. ಆದರೆ, ಕವಿಗಳು ದ ರಾಯಚಂದ ಯಾನೆ ರಾಜಚಂದ್ರರವರೊಡನೆ ಉಂಟಾದ ಪರಿಚಯವನ್ನು ನಾನು ಪ್ರಾಮುಖ್ಯವಾಗಿ ಹೇಳಬೇಕಾಗಿದೆ. ರಾಮಚಂದರವರು ಡಾ|| ಮೇಥಾರವರ ಅಣ್ಣಂದಿರ ಅಳಿಯಂದಿರು; ಹಾಗೂ ರೇವಾಶಂಕರ ಜಗಜೀವನರವರ ಹೆಸರಿನಿಂದ ನಡೆಯುವ ರತ್ನಾದಿ ವರ್ತಕರ ಕಂಪನಿಯೊಳಗಿನ ಪಾಲುಗಾರರೊಬ್ಬರು. ಆ ಸಮಯ ಅವರ ವಯಸ್ಸು ೨೫ ವರ್ಷಕ್ಕೆ ಮಿಕ್ಕಿದ್ದಿಲ್ಲ. ಆದರೆ, ಅವರನ್ನು ಕಂಡೊಡನೆ ಅವರೊಬ್ಬರು ಶೀಲವಂತ ಹಾಗು ವಿದ್ವಾಂಸ ಪುರುಷರೆಂದು ನನ್ನ ಮನಸ್ಸಿನ ಮೇಲೆ ಬಿಂಬಿತು. ರಾಯಚಂದರು ಶತಾವಧಾನಿಗಳೆಂದು ಖ್ಯಾತಿ. ಒಂದೇ ಸಮಯ ನೂರು ಕಡೆಗೆ ಲಕ್ಷ ಕೊಟ್ಟು ಆ ಸಂಗತಿಗಳನ್ನೆಲ್ಲ ಅವರು ಜ್ಞಾಪಕದಲ್ಲಿಡುತ್ತಿದ್ದರು. ಡಾ|| ಮೇಥಾರವರು ರಾಯಚಂದರವರ ಸ್ಮರಣಶಕ್ತಿಯನ್ನು ಪರೀಕ್ಷಿಸಲು ನನಗೆ ಹೇಳಿದರು. ನನಗೆ ತಿಳಿಯುತ್ತಿದ್ದ ಯುರೋಪ ಖಂಡದ ಭಾಷೆಯೊಳಗಿನ ಶಬ್ದಕೋಶವನ್ನೆಲ್ಲ ಶೋಧಿಸಿ ಶಬ್ದಗಳನ್ನು ಹೇಳಿದೆನು. ಮತ್ತು ಅವುಗಳನ್ನು ಪಾಠ ಹೇಳಲು ಕವಿಗಳಿಗೆ ಹೇಳಿದೆನು. ನಾನು ಉಚ್ಚರಿಸಿದ ಅನುಕ್ರಮದಿಂದಲೇ ಕವಿಗಳು ಅವನ್ನು ಉಚ್ಚರಿಸಿದರು. ಈ ಶಕ್ತಿಯನ್ನು ನೋಡಿ ನಾನು ಬೆರಗಾದೆ. ಆದರೆ, ನಾನು ಅವರಿಗೆ ಮರುಳಾಗಲಿಲ್ಲ. ತರುವಾಯ ಅವರ ಅದ್ಭುತ ಶಕ್ತಿಯ ಕಾರಣವು ನನಗೆ ಗೊತ್ತಾಯಿತು: ರಾಯಚಂದರವರು ಧರ್ಮಶಾಸ್ತ್ರಗಳನ್ನು ಕಲಿತಿದ್ದರು; ಸ್ಫಟಿಕದಂತೆ ಅವರ ಸ್ವಭಾವವು ನಿಷ್ಕಲಂಕವಿತ್ತು; ಆತ್ಮಸಾಕ್ಷಾತ್ಕಾರಕ್ಕಾಗಿ ಅವರು ಬಹಳವಾಗಿ ಹೆಣಗಾಡುತ್ತಿದ್ದರು; ಆತ್ಮಸಾಕ್ಷಾತ್ಕಾರಕ್ಕಾಗಿಯೇ ಅವರು ಬಾಳ್ವೆ ಮಾಡಿಕೊಂಡಿರುವರೆಂದು ಆ ಬಳಿಕ ನನಗೆ ತಿಳಿಯಿತು. ಮುಕ್ತಾನಂದ ಕವಿಗಳ ಈ ಕೆಳಗಿನ ಅರ್ಥದ ವಚನವನ್ನು ಅವರು ಯಾವಾಗಲೂ ಹಾಡುತ್ತಿದ್ದರು. ಮುಕ್ತಾನಂದ ಕವಿಗಳ ಈ ವಚನವು ರಾಯಚಂದರವರ ಅಂತಃಪಟಲದ ಮೇಲೆ ಬರೆದಾಗಿತ್ತು. "ನನ್ನ ದಿನಚರಿ ಕೃತ್ಯಗಳಲ್ಲೆಲ್ಲ ಪರಮಾತ್ಮನ ಸಾಕ್ಷಾತ್ಕಾರವಾಗಹತ್ತಿದಾಗಲೇ ನಾನು ಕೃತಕೃತ್ಯನಾಗುವೆನು. ಮುಕ್ತಾನಂದನ ಜೀವನದ ಎಳೆಯು ಪರಮಾತ್ಮನೇ."

ರಾಯಚಂದಭಾಯಿಯವರು ಲಕ್ಷಾವಧಿ ರೂಪಾಯಿಗಳ ವ್ಯವಹಾರ ಮಾಡುತ್ತಿದ್ದರು. ಮುತ್ತು ಹಾಗು ವಜ್ರಗಳ ಪರೀಕ್ಷೆ ಮಾಡುವದರಲ್ಲಿ ಅವರ ಕೈಹಿಡಿಯುವವರಾರಿದ್ದಿಲ್ಲ. ವ್ಯವಹಾರದ ಎಂಥ ಕಠಿಣ ಪ್ರಶ್ನೆಯನ್ನಾದರೂ ಅವರು ಸಹಜವಾಗಿ ಬಿಡಿಸುತ್ತಿದ್ದರು. ಅಷ್ಟಾಗಿ ಅವರು ವ್ಯವಹಾರದಲ್ಲಿ ಮಗ್ನರಾಗಿದ್ದಿಲ್ಲ. ಪರಮಾತ್ಮನ ಸಾಕ್ಷಾತ್ಕಾರಕ್ಕಾಗಿಯೇ ಅವರು ತಲ್ಲಣಿಸುತ್ತಿದ್ದರು. ಅವರ ಮೇಜಿನ ಮೇಲೆ ವ್ಯವಹಾರದ ಗ್ರಂಥಗಳೊಡನೆ ಒಂದು ಧರ್ಮಗ್ರಂಥ ಹಾಗು ಡೈರಿ ಯಾನೆ ದಿನವಹಿಗಳಿರುತ್ತಿದ್ದವು. ವ್ಯಾಪಾರ ಮುಗಿದ ಕೂಡಲೆ ಧರ್ಮಗ್ರಂಥಗಳನ್ನು ಓದುತ್ತಿದ್ದರು. ಅಥವಾ ದಿನವಹಿಯನ್ನು ಬರೆಯುತ್ತಿದ್ದರು. ಈ ದಿನವಹಿಯಲ್ಲಿ ಬರೆದ ಅನೇಕ ಲೇಖಗಳು ಪ್ರಕಟಿಸಲ್ಪಟ್ಟಿವೆ. ದೊಡ್ಡ ದೊಡ್ಡ ವ್ಯಾಪಾರ ಮಾಡಿ ಮುಗಿಸಿದ ಕೂಡಲೆ ಸಂಬಂಧದ ಗೂಢ ಪ್ರಶ್ನೆಗಳನ್ನು ನಿರೂಪಿಸುವ ಪುರುಷನು ಎಂದಿಗೂ ವ್ಯವಹಾರಿಕ ಪುರುಷನಲ್ಲ; ಆತನು ಸತ್ಯಾನ್ವೇಷಕನು. ವ್ಯಾಪಾರದ ಭರದಲ್ಲಿದ್ದಾಗ ಅವರು ಪಾರಮಾರ್ಥಿಕ ವಿಷಯಗಳಲ್ಲಿ ನಿಮಗ್ನರಾಗಿ ಉಳಕೊಂಡದನ್ನು ಅನೇಕ ಸರ್ತಿ ನಾನು ನೋಡಿರುವೆನು. ಅವರಿಗೆಂದೂ ಚಿತ್ತಪ್ರಕೋಪವಾಗುತ್ತಿದ್ದಿಲ್ಲ. ನನ್ನೇನು ವರ್ತಕನಲ್ಲ. ಅಥವಾ ನನ್ನ ಸಹವಾಸದಿಂದ ಅವರಿಗೆ ಯಾವದೇ ಪ್ರಕಾರದ ಸ್ವಾರ್ಥಪ್ರಾಪ್ತಿಯಿದ್ದಿಲ್ಲ. ಆದರೂ ಅವರು ನನ್ನೊಡನೆ ಆತ್ಮೀಯ ಗೆಳೆತನದಿಂದ ನಡೆಕೊಳ್ಳುತ್ತಿದ್ದರು. ಆ ಕಾಲಕ್ಕೆ ಬ್ಯಾರಿಸ್ಟರನಾದ ನನಗೆ ಕೆಲಸವೂ ಇದ್ದಿಲ್ಲ. ಆದರೂ, ನನ್ನ ಭೆಟ್ಟಿಯಾದೊಡನೆ ಅವರು ನನ್ನ ಕೂಡ ಗಹನವಾದ ಧರ್ಮಚರ್ಚೆಯನ್ನು ಮಾಡುತ್ತಿದ್ದರು. ನಾನು ಬರೇ ಅಜ್ಞನು. ಧರ್ಮಚರ್ಚೆಯಲ್ಲಿ ವಿಶೇಷ ಆತುರತೆ ನನಗಿತ್ತೆಂದು ನಾನು ಹೇಳಲಾರೆ. ಹೀಗಿದ್ದರೂ ಅವರೊಡನೆ ನಡಿಸಿದ ಚರ್ಚೆಯಿಂದ ಮನಸ್ಸು ಉಲ್ಲಸಿತವಾಗುತ್ತಿತ್ತು. ಆ ಬಳಿಕ, ನಾನು ಅನೇಕ ಧರ್ಮಾಚಾರ್ಯರನ್ನೂ ಧರ್ಮಪ್ರಮುಖರನ್ನೂ ಕಂಡಿದ್ದೇನೆ. ಅನೇಕ ಸಂಪ್ರದಾಯಗಳ ಮಠಾಧಿಕಾರಿಗಳ ಭೆಟ್ಟಿಯನ್ನೂ ನಾನು ಪಡೆದಿರುವೆ. ಆದರೆ, ರಾಯಚಂದಭಾಯಿಯವರಷ್ಟು ಪರಿಣಾಮವನ್ನು ನನ್ನ ಮೇಲೆ ಯಾರೂ ಮಾಡಲಿಲ್ಲ. ರಾಯಚಂದಭಾಯಿಯವರ ಶಬ್ದಗಳು ನೆಟ್ಟಗೆ ಅಂತಃಕರಣವನ್ನೇ ಭೇದಿಸುತ್ತಿದ್ದವು. ಅವರ ಬುದ್ಧಿವೈಭವವನ್ನು ನೋಡಿ, ನಾನು ಭಕ್ತಿಭಾವದಿಂದ ಪ್ರೇರಿತನಾದೆ. ಅದರಂತೆಯೇ ನೀತಿವೈಭವಕ್ಕೂ ನಾನು ಎರಗಿದೆನು. ಅವರು ಬುದ್ಧ್ಯಾ ನನಗೆಂದೂ ಅಡ್ಡ ಹಾದಿ ಹಿಡಿಸಲಿಕ್ಕಿಲ್ಲವೆಂದೂ, ಅವರಿಗೆ ತೋರಿದ್ದ ವಿಚಾರಗಳನ್ನು ಯಾವಾಗಲೂ ಅವರು ನನಗೆ ಹೇಳದಿರಲಾರರೆಂದೂ ನನ್ನ ಮನೋನಿಶ್ಚಯವಾಗಿತ್ತು. ಪಾರಮಾರ್ಥಿಕ ಕಾರ್ಯಕಾರ್ಯವಿಚಾರದಿಂದ ನನ್ನ ಮತಿಯು ಕುಂಠಿತವಾದಾಗ ಅವರೇ ನನಗೆ ಆಶ್ರಯವನ್ನಿತ್ತು ಸಲಹಿದರು.

ರಾಯಚಂದಭಾಯಿಯವರ ಕುರಿತು ಇಷ್ಟು ಪೂಜ್ಯಭಾವವು ನನ್ನಲ್ಲಿದ್ದಾಗ್ಯೂ, ಅವರು ನನ್ನ ಗುರುಗಳ ಆಸನದಲ್ಲಿ ಅಧಿಷ್ಠಿತರಾಗಲಿಲ್ಲ. ನನ್ನ ಗುರುಗಳ ಆಸನವನ್ನು ಹಾಗೆಯೇ ಬರಿದು ಬಿಟ್ಟಿದೆ. ಗುರುಗಳಿಗಾಗಿ ನಾನು ಇನ್ನೂ ಶೋಧಿಸುತ್ತಿದ್ದೇನೆ.

ಸನಾತನಿಗಳ ಗುರುಕಲ್ಪನೆಯನ್ನು ನಾನು ನಂಬುತ್ತಿದ್ದೇನೆ. ಪರಮಾತ್ಮನ ಸಾಕ್ಷಾತ್ಕಾರಕ್ಕಾಗಿ ಗುರುಗಳು ಅವಶ್ಯರೆಂದೂ ನನ್ನ ಭಾವನೆಯಿದೆ. ಗುರುವನ್ನು ಹೊರತು ಪಡಿಸಿ, ಜ್ಞಾನಾರ್ಜನ ಮಾಡುವದು ಅಶಕ್ಯವೆಂಬ ಸಿದ್ಧಾಂತದಲ್ಲಿ ಬಹಳ ತಥ್ಯವಿದೆ. ಪ್ರಾಪಂಚಿಕ ವಿಷಯದಲ್ಲಿ ಅಪೂರ್ಣ ಗುರುವಿನಿಂದ ಕೆಲಸ ಸಾಗಬಹುದು. ಆದರೆ, ಇಂಥವರು ಪಾರಮಾರ್ಥಿಕ ಮಾರ್ಗದಲ್ಲಿ ನಿರರ್ಥಕರು. ಸಂಪೂರ್ಣರಾಗಲು ನಾವು ಹಗಲಿರುಳು ಎಡೆಬಿಡದೆ ದುಡಿಯಬೇಕು. ಯಾಕೆ? ಪುರುಷನ ಪಾತ್ರತೆಯಂತೆ ಅವನಿಗೆ ಗುರುವು ಪ್ರಾಪ್ತನಾಗುತ್ತಾನೆ. ಸಂಪೂರ್ಣನಾಗಲು ಎಡೆಬಿಡದೆ ದುಡಿಯುವದೇ ಜೀವಾತ್ಮನ ಅಧಿಕಾರವು. ಅದೇ ಅವನಿಗೆ ಪ್ರತಿಫಲವು. ಅದಕ್ಕೆ ಮುಂದಿನದು ಪರಮಾತ್ಮನ ಕೈಯಲ್ಲಿ ಇರುವದು.

ರಾಯಚಂದಭಾಯಿಯವರಿಗೆ ನನ್ನಿಂದ ಗುರುಸ್ಥಾನವನ್ನರ್ಪಿಸಲಾಗದಿದ್ದರೂ, ಅನೇಕ ಪ್ರಸಂಗಗಳಲ್ಲಿ ಅವರು ನನಗೆ ಮಾರ್ಗದರ್ಶಕರಾದ ಹಕೀಕತು ಮುಂದೆ ಹೇಳಲ್ಪಡುವದು. ಆಧುನಿಕ ಯುಗದೊಳಗಿನ ಮೂವರಿಗೆ ನಾನು ಮೋಹಪಟ್ಟಿರುವೆನು. ರಾಯಚಂದಭಾಯಿಯವರಿಗೆ ಅವರ ಸಹವಾಸದಿಂದ; "ದಿ ಕಿಂಗಡಮ್ ಆಫ್ ಗಾಡ್ ಈಜ ವಿದಿನ್ ಯು." ಅಂದರೆ, ಪರಮಾತ್ಮನ ರಾಜ್ಯವು ನಿನ್ನಲ್ಲಿದೆ, ಎಂಬ ಗ್ರಂಥದಿಂದ ಟೋಲ್‍ಸ್ಟೊಯ್‍ರವರು; "ಅಂಟು ದಿಸ್ ಲಾಸ್ಟ" ಎಂಬ ಗ್ರಂಥದಿಂದ ರಸ್ಕಿನ್‍ರವರು. ಆದರೆ, ಈ ಕುರಿತು ಮುಂದೆ ಯಥಾಕಾಲದಲ್ಲಿ ಬರೆಯುವೆನು.

Wanted

by the Sirsi Municipality an experienced Graduate to teach English and Sanskrit in the Sirsi Marikamba High School Sirsi. Those who have passed B. T or S. T. C. will be preferred. The Selected Candidate will be taken as Second Assistant on Rs. 70/- P. M. with future prospects. Suitable candidates need apply within the 1st of June 1926.

Municipal Office, Sirsi, 18th May 1926. (Sd/-) **P. N. Pandit**, *Chairman*, *School Board*, Sirsi.

— ಪಶ್ಚಿಮ ಖಾನದೇಶದ ಜಿಲ್ಹಾ ಬೋರ್ಡಿನವರು ಪ್ರಾಥಮಿಕ ಶಾಲೆಗಳಲ್ಲಿ ಬಾಲವೀರ ಪಥಕಗಳನ್ನು ತಯಾರಿಸಲು ೧೬೦೦ ರೂ ಗಳನ್ನು ಮಂಜೂರ ಮಾಡಿರುವರು.

— ಶೇಠ ಭಾಗೋಜಿ ಬಾಳೋಜಿ ಕೀರ ಇವರು ಪಾಯದ್ಯ ಗೋವರ್ಧನ ಸಂಸ್ಥೆಯವರಿಗೆ ಗೋಶಾಲೆಯನ್ನೊಂದು ಕಟ್ಟಿಸಿ ಕೊಡುವವರಿದ್ದಾರೆ. ಪ್ರವಾಹಾಸ್ಮಾರಕ ತಾರೀಖು ೩೦ ನೇ ಗುರುವಾರಕ್ಕೆ ಕಂಕುಸ್ಥಾಪನೆ ಮಾಡಿ ದರು.

— ಮುಂಬಯಿ ಸರಕಾರವು ಕರಾಚಿಯಲ್ಲಿ ಒಂದು ಪ್ರಯೋಗಶಾಲೆಯನ್ನು ತೆರೆದಿದೆ. ಈ ಶಾಲೆಯಲ್ಲಿ ಆರಿವಗ ... ಹಾಕುವ ಕೆಲಸವನ್ನು ಕಲಿಸುತ್ತಾರೆ.

— ಮದ್ರಾಸ ಮ್ಯುನಿಸಿಪಾಲಿಟಿಯವರು ಭಿಕ್ಷುಕರಿಗಾಗಿ ಅನಾಥಗೃಹವನ್ನು ತೆರೆದಿರುವರು.

— ಮಲಬಾರ-ಕೋಯಿಮುತ್ತೂರ ಪ್ರದೇಶದಲ್ಲಿ ಭಯಂಕರ ಬರಗಾಲ ಬಿದ್ದುದರಿಂದ ನಿತ್ಯವೂ ಅನೇಕ ಜನರು ಹಸಿವೆಯಿಂದ ಹೊರಟುಹೋಗುತ್ತಿರುವರು

— ಶ್ರೀ ಸಂತೃಪ್ತ ಭಾರತಿಯವರು ರಚಿಸಿದ ರಾಷ್ಟ್ರೀಯ ಗೀತಗಳನ್ನು ಮ್ಯುನಿಸಿಪಾಲಿಟಿಯ ಶಾಲೆಗಳಲ್ಲಿ ಕಲಿಸಬೇಕೆಂದು ತ್ರಿಚನಾಪಳ್ಳಿಯ ಮ್ಯುನಿಸಿಪಾಲಿಟಿಯವರು ನಿರ್ಧರಿಸಿದರು.

— ರುಮಾನಿಯಾ ದೇಶದ ಬಾಕು ಪಟ್ಟಣದಲ್ಲಿ ಬೆಂಕಿ ಬಿದ್ದು ೧೦೦೦ ಮನೆಗಳು ಸುಟ್ಟು ಹೋದವು. ಅನೇಕರು ಬಂದರು; ಅನೇಕರು ನಿಧನ ಹೊಂದಿದರು. ಸುಮಾರು ೩೦ ಕೋಟಿಗೆ ಮಿಕ್ಕ ನಷ್ಟವಾಗಿದೆ.

— ಲಂಡನದಲ್ಲಿ ಜಪಾನೀ ರಾಜಪುತ್ರಿಯ ಉತ್ಸವವನ್ನು ಅಲ್ಲಿಯ ಜೈನ ಸಮಾಜದವರು ವಿಜೃಂಭಣೆಯಿಂದ ನೆರವೇರಿಸಿದರು.

— ಮುಂಬಯಿ ಕಾಯದೆ ಕೌನ್ಸಿಲಿನ ಅಧಿವೇಶನವು ಪುಣೆಯೊಳಗಿನ ನಗರ ಭವನದಲ್ಲಿ ಜುಲೈ ತಾರೀಖು ೨೬ ನೇಗೆ ಸೇರುವದಿದೆ.

ಉತ್ತಮ ವಸ್ತುಲು! ಉತ್ತಮ ವಸ್ತುಲು!!

ಮಂಗಳೂರ ಹಂಚು!

ನಮ್ಮಲ್ಲಿ ಮಂಗಳೂರ ಹೊರ್ಟ ಟೈಲ ಪಕ್ಕೀನ ಉತ್ತಮ ಪ್ರಕಿಯ ಮಂಗಳೂರ ಹಂಚುಗಳು ಮಾರಾಟಕ್ಕೆ ಸಿದ್ಧವಾಗಿವೆ. ಬಾಳಿಕೆಯಲ್ಲಿ ಇವಕ್ಕಿಂತ ಉತ್ತಮ ಹಂಚುಗಳಿಲ್ಲ! ಬೇಕಾದವರು ವಸ್ತುಲು ನೋಡಿ ದರಪತ್ರ ತಿಳಕೊಳ್ಳಬಹುದು. ದರಪತ್ರ ಸವಲತ್ತಿಯದಿರುವವು. ಒಮ್ಮೆ ಪರೀಕ್ಷಿಸಿ ನೋಡಿರಿ!

ಪತ್ತೆ:— ಕಾಪಿ ಅಬ್ದುಲ್ ಕಾದರ,

ಮುನಸೀಫ ಕೋರ್ಟ ಸಮೀಪ, ಕುಮಟಾ.

ಜಾಹೀರಾತು.

ಪ್ರಸಿದ್ಧ ಕೇರಳ ಜ್ಯೋತಿಷ್ಯ ಶಾಸ್ತ್ರಜ್ಞರಾದ

ಕೇ. ಸಿ. ನಾರಾಯಣ ಶಾಸ್ತ್ರಿಗಳು

ಶಿರ್ಸಿಯಲ್ಲಿ ಮುಕ್ಕಾಂ ಮಾಡಿರುವರು.

ಸುಪ್ರಸಿದ್ಧ ಕವಿ, ಕೇರಳ-ಜ್ಯೋತಿಷ್ಯದ ಸಂ ಹೆಸರಾದ ಕೇ. ಸಿ. ನಾರಾಯಣ ಶಾಸ್ತ್ರಿಗಳು ತಮ್ಮ ದೇಶಸಂಚಾರವನ್ನು ಮುಗಿಸಿ, ಗೆಳೆಯರ ಸೂಚನೆ ಮೇರೆಗೆ ಶಿರ್ಸಿಯಲ್ಲಿ ಮುಕ್ಕಾಂ ಮಾಡಿರುವರು. ಜಾತಕ, ಪ್ರಶ್ನೆ ಮೊದಲಾದವುಗಳನ್ನು ತಿಳಿಯಬೇಕೆಂದಿರುವವರು ನಾರಾಯಣ ಶಾಸ್ತ್ರಿಗಳವರಿಗೆ ಭೆಟ್ಟಿಯಾಗಿ ಲಾಭ ಹೊಂದಬೇಕು.

ಪತ್ತೆ:— ಕೇ. ಸಿ. ನಾರಾಯಣ ಶಾಸ್ತ್ರೀ,

ಕೇರಳ ಜ್ಯೋತಿಷಿ, ಶಿರ್ಸಿ, (ಉತ್ತರ ಕನ್ನಡ)

“ಸರಸ್ವತೀ”

ಇಡೀ ಕರ್ನಾಟಕದಲ್ಲಿ ಸ್ತ್ರೀಯರಿಂದ ಸ್ತ್ರೀಯರಿಗಾಗಿ ಪ್ರಕಟಿಸಲ್ಪಡುವ ಉತ್ಕೃಷ್ಟವಾದ ತಿಂಗಳಿನ ಮಾಸಪತ್ರಿಕೆ ಇದೊಂದೇ.

ಈ ಪತ್ರಿಕೆಯ ವರ್ಷಾರಂಭವು ಮೇ ತಿಂಗಳಿನಿಂದ. ಒದಕಲ್ಕ ವಿಷಯಗಳು ಮಾತ್ರ 40 ಪುಟಗಳಿವೆ. ಇದರಲ್ಲಿ ಸಾಮಾಜಿಕ, ನೈತಿಕ, ಐತಿಹಾಸಿಕ ವಿಷಯಗಳಿಗೆ ಸಂಬಂಧಪಟ್ಟ ಲೇಖನಗಳೂ, “ಸುಶೀಲಾ” ಎನ್ನುವ ಕಾದಂಬರಿಯೂ, ‘ಶಹಾಜಹಾನ’ ಎನ್ನುವ ನಾಟಕವೂ ಸಾಹಿತ್ಯ-ಸರೋಜ-ಕನ್ಯಾಕೈಪಿಡಿ-ಮುತ್ತಿನ ಸರ-ಚಾರು ಚರಿತಾವಳಿ-ಗೃಹವಿಜ್ಞಾನ-ವನಿತಾವಿನೋದ ಮೊದಲಾದ ಲೇಖನಗಳೂ, ಬಾಲಕ-ಬಾಲಕಿಯರಿಗೂ, ಸ್ತ್ರೀಯರಿಗೂ ತಿಳಿಯುವಂತಹ ಸುಲಭವಾದ ಶೈಲಿಯಲ್ಲಿ ಪ್ರಕಟಿಸಲ್ಪಡುವವು. ಚಂದಾದಾರರಿಗೆ “ಶಾರದಾ ಗ್ರಂಥಮಾಲೆ”ಯಲ್ಲಿ ಇದು ವರೆಗೆ ಪ್ರಕಟವಾಗಿರುವ ‘ಇಂದಿರೆ-ನಿರ್ಮಲೆ-ಸ್ನೇಹಲತೆ-ಪ್ರಿಯಂವದೆ-ಹಿಂದೂ ಭಾಗ್ಯೋದಯ-ರಣಕೇಸರಿ’ ಮೊದಲಾದ ಗ್ರಂಥಗಳೂ ಮುಂದೆ ಪ್ರಕಟವಾಗುವ ಗ್ರಂಥಗಳೂ ಕಡಿಮೆ ಬೆಲೆಗೆ ಕೊಡಲಾಗುವವು. ಕರ್ನಾಟಕದಲ್ಲೆಲ್ಲ ಪ್ರಚಾರವಾಗುತ್ತಿರುವದರಿಂದ ಪ್ರಕಟಣೆಗೆ ಅತ್ಯುತ್ತಮವಾದ ಪತ್ರಿಕೆ. ವಾರ್ಷಿಕ ಚಂದಾ ರೂ. 3-0-0 ಮಾತ್ರ. ವಿದ್ಯಾರ್ಥಿಗಳಿಗೂ, ವಾಚನ ಶಾಲೆಗಳಿಗೂ ರೂ. 2-0-0 ಮಾತ್ರ

ವಿಳಾಸ:— “ಸರಸ್ವತೀ” ಕಾರ್ಯಾಲಯ,

ಬಾಲಾಜಿಪೇಟೆ, ಬೆಂಗಳೂರು ಸಿಟಿ.

ಸುಗಂಧಿ ತಾಂಬೂಲೀ ಜರ್ದಾ!

ಈ ಜರ್ದಾ ತಿನ್ನಲಿಕ್ಕೆ ರುಚಿಕರವಿದ್ದು, ಸುವಾಸಿಕವಿರುತ್ತದೆ. ಇದರ ಸೇವನದಿಂದ ಬಾಯಿಯ ಹೊಲಸು, ವೇದನೆ, ಹುಳ ಇವು ನಾಶವಾಗಿ ಹಲ್ಲುಗಳು ಒಳ್ಳೇ ಘಟ್ಟಿಯಾಗುತ್ತವೆ. ಇದರ ಸೇವನದಿಂದ ದಮ್ಮು, ಕಫ ಮುಂತಾದ ವಿಕಾರಗಳುಂಟಾಗುವ ಸ್ವಲ್ಪವೂ ಭೀತಿಯಿಲ್ಲ. ಕಾರಣ, ತಂಬಾಕು ಸೇವಿಸುವವರು ಅವಶ್ಯವಾಗಿ ಅನುಭವ ಕೊಳ್ಳಬೇಕು. ೧ ಪುಡಿ ಕಿಂ. ರೂ. ೦-೦-೬, ೨೫ರ ಕಿಂ ರೂ. ೦-೯-೦, ೧೦೦ರ ಕಿಂ ರೂ. ೨-೦-೦; ೫೦೦ ಪುಡಿಗಳ ಕಿಂ. ರೂ ೯-೦-೦; ೧೦೦೦ ೧೭-೦-೦, ಟ. ಪೆ ಖರ್ಚ ವಗೈರೆ ಪ್ರತ್ಯೇಕ.

ಸುಗಂಧಿ ನಶ್ಯ:—ಈ ನಶ್ಯವು ಒಳ್ಳೇ ತಂಬಾಕಿನಿಂದ ಮಾಡಿದ್ದುದು, ಇದರಿಂದ ಶೀತ, ಥಂಡಿ, ಅರೆತಲೆನೋವು ಮುಂತಾದವುಗಳು ಕೂಡಲೆ ಮಾಯವಾಗಿ ತಲೆಯು ಭಾರವಾಗಿದ್ದರೂ ಹಗುರವಾಗಿ ವಿಚಾರಶಕ್ತಿಗೆ ಚಪಲತೆಯು ಪ್ರಾಪ್ತವಾಗುವದರಿಂದ ಯಾವದೇ ಕೆಲಸವನ್ನು ಕೈಕೊಳ್ಳಲಿಕ್ಕೆ ಸ್ಫೂರ್ತಿಯುಂಟಾಗುತ್ತದೆ. ಒಮ್ಮೆ ಪರೀಕ್ಷಿಸಿ ಖಾತ್ರಿಮಾಡಿಕೊಳ್ಳಿರಿ. ೧ ಡಬ್ಬಿ ಕಿಂ. ರೂ ೦-೪-೦; ೧ ಡಜನ್ ಡಬ್ಬಿ ಕಿಂ ರೂ ೩-೦-೦. ವಿ. ಪೋ. ಖರ್ಚ ಬೇರೆ.

ಉತ್ತಮ ಬೀಡಿಗಳು:—ಅತ್ಯುತ್ತಮ ಪ್ರತಿಯ ತಂಬಾಕಿನಿಂದ ತಯಾರಿಸಿದ ಬೀಡಿಗಳು ನಮ್ಮಲ್ಲಿ ತಯಾರಿಸುತ್ತವೆ. ಕಿಮ್ಮತ್ತಿನ ವಿಷಯಕ್ಕೆ ಬರೆದ ಪುರವಣಿ ನೋಡಿ ಮಾಲಿಗೆ ಆರ್ಡರ ಕೊಡಬಹುದು. ಇದಲ್ಲದೆ ಹೊರತು, ನಮ್ಮಲ್ಲಿಯ ಬಾಜಾರದಲ್ಲಿ ಎಲ್ಲ ಪ್ರಕಾರಗಳ ತಂಬಾಕು ... ಬೇಕಾದ ನಮೂನೆಯ ತಂಬಾಕನ್ನು ಯೋಗ್ಯ ದಲಾಲಿ ಕೊಂಡು ಖರೇದಿ ಮಾಡಿಕೊಡುವವು. ವಿಶೇಷ ಮಾಹಿತಿ ಬಗ್ಗೆ ಪತ್ರವ್ಯವಹಾರ ಮಾಡಿದವರ ಕೂಡಲೆ ಉತ್ತರ ಬರೆಯುವೆವು

ಪತ್ತೆ:— ಎಸ್. ಬಿ. ಕದಂ,

ಬೀಡಿ ಮತ್ತು ತಂಬಾಕು ಜರ್ದಾ ದುಕಾನ,

ಮು. ಪೋ. ನಿಪ್ಪಾಣಿ, ಜಿ. ಬೆಳಗಾಂವ

ಅತ್ಯದ್ಭುತ! ಅತ್ಯದ್ಭುತ!!

ಜೀವನಾಧಾರ

ಅಮೇರಿಕಾ ಖಂಡದ ಪ್ರಸಿದ್ಧ ಡಾಕ್ಟರನೊಬ್ಬನು ಕಂಡುಹಿಡಿದ ಸಿದ್ಧೌಷಧ

ಎಲಿಕ್ಝಿರ್ ಆಫ್ ಲೈಫ್

ಅಂದರೆ, ಸರ್ವರೋಗನಾಶಕ, ಸರ್ವಾರೋಗ್ಯದಾಯಕ. ಅಜೀರ್ಣ ತಲೆನೋವು. ವಾಂತಿ, ಅತಿಸಾರ, ಜ್ವರ, ಕಾಲರಾ, ಜ್ವರ, ಕಿವಿನೋವು, ಸ್ತ್ರೀವ್ಯಾಧಿಗಳನು ಇವೆಲ್ಲವುಗಳನ್ನು ಹೊಡೆದು ಚಲ್ಲುವ ಒಂದೇ ರಾಮಬಾಣವಿದು! ಎಲ್ಲ ರೋಗಗಳ ಮೇಲೆ ಬ್ರಹ್ಮಾಸ್ತ್ರ!! ಒಂದು ಸೀಸೆಯಿದ್ದರೆ, ಒಬ್ಬ ಡಾಕ್ಟರನಿದ್ದಂತೆಯೇ!!!

ಒಂದು ಸೀಸೆಗೆ ರೂ. ೧-೮-೦. ಸಣ್ಣ ಸೀಸೆಗೆ ರೂ. ೦ ೮-೦. ಟಪಾಲ ಖರ್ಚ ಬೇರೆ.

ಜೀವನಾಧಾರ ಡಿಪೋ, ಮೈಸೂರು.

ಬ್ರಾಂಚ:— ಜೀವನಾಧಾರ ಡಿಪೋ, ಹುಬ್ಬಳ್ಳಿ

ಏಜಂಟರು ಬೇಕು! ಏಜಂಟರು ಬೇಕು!!

ನಮ್ಮಲ್ಲಿ

ಅತಿ ಮನೋಹರವಾದ

ಶೀಶೆ ಕಟ್ಟಿಗೆಯ

ದೇವರ ಮಂಟಪಗಳೂ,

ಹೆಂಗಸರ ಸೌಭಾಗ್ಯವತಿ ಪೆಟ್ಟಿಗೆಗಳೂ, ಡ್ರೆಸ್ಸಿಂಗ್ ಪೆಟ್ಟಿಗೆಗಳೂ, ಆಫೀಸ ಬಾಕ್ಸಗಳೂ, ರೋಕಿಂಗ ಖುರ್ಚಿಗಳೂ ಹಾಗೂ ಯಾವತ್ತು ತರದ ಮನೋಹರವಾದವು ಸಿಗುತ್ತವೆ.

ನಮ್ಮ ವಿಳಾಸ:—

ದಿ ನೋರ್ಥ ಕೆನರಾ ಟ್ರೇಡಿಂಗ ಕಂಪನಿ,

ಶಾಂತಿ ಭುವನ,

ಕಾರವಾರ.

ಚವರಲೆಟ್

ಮೋಟಾರಕಾರ್ ಏಜನ್ಸಿ, ಕೆನರಾ

ನಾವು ಹೊಸ ಚವರಲೆಟ್ ಮೋಟಾರ ಕಾರು ಗಳನ್ನು ಗಿರಾಕಿಗಳಿಗೆ ಅನುಕೂಲವಾಗುವಂತೆ ಕಡಿಸಿ ಕೊಡುತ್ತೇವೆ ಅವಶ್ಯವುಳ್ಳವರು ಸಹ ಪತ್ರದ್ವಾರಾ ಮಾಹಿತಿ ತಿಳಕೊಳ್ಳಬಹುದು

ಶೀರ್ಸಿ ಏಜಂಟ—ಎಸ್. ಎಲ್ ಥಾಕಪ್ಪ

ಮಾತ್ತು ಬ್ರದರ್ಸ, ಶಿರ್ಶಿ

ಕುಮಟಾ ಏಜಂಟ ಜಿ ಡಿ. ಮಾಳಗಿಕರ

ಎಂಡ್ ಕೋ.,

ಡಿ. ಪಿ ಸಿ ಪೆಟ್ರೋಲ ನಮ್ಮಲ್ಲಿ ದೊರೆಯುತ್ತದೆ, ಡನ್‌ಲೊಪ್ ಹಾಗು ಇತರ ಟೈರು ಹಾಗು ಸಾಯಕಲ್ ಮಾಟರ ಬಿಡಿ ಸಾಮಾನುಗಳು ಯೋಗ್ಯ ದರದಲ್ಲಿ ದೊರೆಯುತ್ತವೆ

ಸೂಚನೆ:— ನಮ್ಮಲ್ಲಿ ಟ್ರಾನ್ಸ್‌ಪೋರ್ಟ [illegible] ಉತ್ತಮವಾಗಿಯೂ ಮಾಡಿ ಕೊಡಲ್ಪಡುತ್ತದೆ ಅದಲ್ಲದೆ ನಮ್ಮಲ್ಲಿಂದ [illegible] ಇನ್ಸ್ಯೂರನ್ಸ ಕಂಪನಿಯ [illegible] ಸಹ ಪತ್ರದ್ವಾರಾ ಮಾಹಿತಿ ತಿಳಕೊಳ್ಳಬಹುದು

G. D. Malgikar & Co,

KUMTA

ಪ್ರಯಾಣಿಕರಿಗೆ

ವಿಶೇಷ ಅನುಕೂಲ

ನೇಮಿಸಿದ ಹೊತ್ತಿಗೆ ಮೋಟಾರಿನ ವ್ಯವಸ್ಥೆ ಹಾಗೂ

ಅಡಿಗೆ, ಊಟ, ವಸತಿ ಮುಂತಾದ ವ್ಯವಸ್ಥೆ ಈ ಕೆಳಗಿನಂತೆ ಮೋಟಾರ ವ್ಯವಸ್ಥೆಯಿದೆ— ಗೋಕರ್ಣದಿಂದ ಕುಮಟಾ, ಹೊನ್ನಾವರ ಭಟ್ಕಳ, ಗೋಕರ್ಣದಿಂದ ಕುಮಟಾ, ಶಿರ್ಸಿ ಹುಬ್ಬಳ್ಳಿ ಗೋಕರ್ಣದಿಂದ ಅಂಕೋಲಾ ಕಾರವಾರ

ಟಿಪ್ಪ — ಟಿಕೆಟ ಮುಂದಾಗಿ ಪಡಕೊಳ್ಳಲಿಚ್ಛಿಸುವವರು ಈ ಕೆಳಗಿನ ಪತ್ತೆಗೆ ಪತ್ರವ್ಯವಹಾರ ಮಾಡತಕ್ಕದ್ದು

ಅನಂತ ಮಂಗೇಶರಾವ ಚಿತ್ರೆ

ಮೋಟರ ಏಜಂಟ

ಗೋಕರ್ಣ (ಉತ್ತರ ಕನ್ನಡ)

S. U Narayanacharya & CO

Chaukamba, BENARES CITY



ನಮ್ಮಲ್ಲಿ ಎಲ್ಲಾ ತರದ ದೇವರ ಮೂರ್ತಿಗಳು ಕರಿ ಕಲ್ಲಿನ ಶಿವಲಿಂಗ ಸ್ಫಟಿಕ ಮೂರ್ತಿಗಳು ರುದ್ರಾಕ್ಷಿ [illegible] ಲಿಂಗಗಳು [illegible] ಮೊದಲಾದವು ಸಿಗುತ್ತವೆ [illegible]

ಕೋರುವವರಿಗೆ ಉಚಿತವಾಗಿ ಕಳಿಸಲಾಗುವುದು

ವಿಳಾಸ—ಶಿರೋಮಣಿ ನಾರಾಯಣಾಚಾರ್ಯರು

ಮುತ್ತು, ಕಂಪನಿ, ಚೌಕಂಬಾ, ಕಾಶಿಕ್ಷೇತ್ರ

ಸುಲಭ ಕ್ರಯ! ಸುಲಭ ಕ್ರಯ!

ಡಾಕ್ಟರ ಜೀ. ಟೀ ಯವರ

ಸುಗಂಧಿ ನಶ್ಯದ ಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟ ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗದ ವ್ಯಾಧಿಗಳು ಯಾವವೆಂದರೆ— ಪೀನಸಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಸೇರಲ್ಪಟ್ಟ ೧೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತ್ತದೆ, ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ ಪಡಿದರಿ ಸಿ ಪ್ರಕಟಿ ಕಳಿಸಲಾಗುವುದು

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ ೦ ೧೦ ೦ ವಿ ಪಿ ಆಗಿ ಡಜನ್ ೧ಕ್ಕೆ ರೂ ೭-೮-೦. ವ್ಹಿ. ಪಿ. ೦ ೮-೦ ದಯವಿಟ್ಟು ನಮ್ಮ ಹೆಸರನ್ನೂ ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ

ದತ್ತ — ರಾಮಬಸವ ಅಂಡ್ ಕಂಪನಿ ಲಿಮಿಟೆಡ್ ಪ್ರೋ ಬಾ ೫೧೦, ಮೌಂಟರೋಡ್, ಮದರಾಸ



ಸರಕಾರದಿಂದ ಪೇಟಂಟ ಪಡೆದ

ಮುಲ್ಲಾರ ಕಪ್ಪಲಿ.

ತೋಟಿಗರಿಗೆ ಬಹು

ಅನುಕೂಲವಾಗಿರುವದು

ಇದು mild steel ಎಂಬ ಜಾತಿಯ ಕಬ್ಬಿಣ ತಗಡಿನಿಂದ ಮಾಡಲ್ಪಟ್ಟಿರುವದು ಎತ್ತುಗಳಿಗೆ ಬಹಳ ಹಗುರ ಹೋಗುತ್ತದೆ ಇದರೊಳಗಿನ ಒಂದು ಹನಿ ಸಹ ಸೋರಿ ಕೆಳಗೆ ಬೀಳದಂತೆ ನಿರ್ಮಾಣ ಮಾಡಲ್ಪಟ್ಟಿರುವದು ಕಪ್ಪಲಿ ಬಾಯಿಂದ ನೀರು ದೋಣಿಯಲ್ಲಿ ಬೀಳುವ ಕಾಲಕ್ಕೆ ಎತ್ತುಗಳಿಗೆ ಭಾರವಾಗದಂತೆ ರಚನೆಯಲ್ಲಿ ಸುಧಾರಣೆಯನ್ನು ಮಾಡಿರತ್ತೇವೆ

ಬೆಲೆಯ ಬಗ್ಗೆ ಬರೆದು ತಿಳಿದುಕೊಳ್ಳಿರಿ

ಕಿರ್ಲೋಸ್ಕರ ವಾರ್ತೆ — ಉತ್ಸಾಹ, ಉದ್ಯೋಗ, ಉನ್ನತಿಯ ಕನ್ನಡ ಮಾಸಪತ್ರಿಕೆ

ಸಂಪಾದಕ— ಶ್ರೀ ಬಾಗಲ ಲಕ್ಷ್ಮಣರಾಯರು, ವಾಙ್ಮಯ ವಿಶಾರದ

ಮಾದರಿ ಸಂಚಿಕೆ ಪುಕ್ಕಟೆ ದೊರೆವದು ವಾರ್ಷಿಕ ಚಂದಾ ರೂ ೧-೪-೦

ಕಿರ್ಲೋಸ್ಕರ ಬಂಧು ಲಿಮಿಟೆಡ್; { ಕಿರ್ಲೋಸ್ಕರವಾಡಿ ಜಿಲ್ಲಾ ಸಾತಾರಾ

ಅಮೃತಾಂಜನ.



ಇದರ ಉಪಯೋಗದಿಂದ, ಸಾಕವೇದನೆ, ಉಳುಕು ಇತ್ಯಾದಿ ವ್ಯಾಧಿಗಳ ಮೇಲೆ, ರಾಮಬಾಣದಂತಾಗಿರುವದು. ಕಳೆದ ೩೫ ವರ್ಷಗಳಿಂದ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗುತದೆ. ಲಕ್ಷಗಟ್ಟಲೆ ಕುಟುಂಬಗಳು ಅಮೃತಾಂಜನವನ್ನು ಉಪಯೋಗಿಸುತ್ತಿವೆ ಅದರಿಂದ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಬೀಗು, ಸಂಧಿವಾತ ಮೊದಲಾದ ಎಷ್ಟೋ ವ್ಯಾಧಿಗಳ ಮೇಲೆ ಇದು ಗುಣಕಾರಿಯೆಂದು ಅರಿಯುವದು ಇದು ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು ಕಿಮ್ಮತ್ತು ೧೦ ಆಣೆ ವ್ಹಿ ಪಿ ಖರ್ಚು ಬೇರೆ

ಅಮೃತಾಂಜನ ಡಿಪೋ, ಫೋರ್ಟ. ಮುಂಬಯಿ

Printed and Published by Krishnarao Keshav Shenvi (Editor) at his Star of Kanara Press Kumta